ಆದಿಲಶಾಹಿ ಸಾಹಿತ್ಯ ಸಂಪುಟ : ೪

ಮುಹಮ್ಮದ ಕಾಸೀಮ ಫರಿಶ್ತಾ ವಿರಚಿತ

ತಾರೀಖ-ಎ-ಫರಿಶ್ತಾ : ಭಾಗ-೪

ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ. ಸಂಸ್ಥೆ, ವಿಜಾಪುರ

ಆದಿಲಶಾಹಿ ಸಾಹಿತ್ಯ ಸಂಪುಟ : ೪

ಮುಹಮ್ಮದ ಕಾಸೀಮ ಫರಿಶ್ತಾ
ವಿರಚಿತ

ತಾರೀಖ-ಎ-ಫರಿಶ್ತಾ

(ಭಾಗ - ೪)

ಆದಿಲಶಾಹಿ ಸಾಹಿತ್ಯ ಸಂಪುಟ : ೪

ಮುಹಮ್ಮದ ಕಾಸೀಮ ಫರಿಶ್ತಾ

ವಿರಚಿತ

ತಾರೀಖ-ಎ-ಫರಿಶ್ತಾ

(ಭಾಗ – ೪)

ಅನುವಾದಕರು

ಡಾ. ಅಬ್ದುಲ್ ಹಮೀದ್

ಡಾ. ಬಿ. ರಘೋತ್ತಮರಾವ್ ದೇಸಾಯಿ

ವಚನಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ

ಬಿ.ಎಲ್.ಡಿ.ಇ. ಸಂಸ್ಥೆ, ಬಿಜಾಪುರ

Taarikh-e-Farishta (Part-4) : Persian work by Md. Kasim Farishta
Kannada translation by Dr. Abdul Hamid, Dr. B. Ragottamrao Desai.

Published by : **Dr. P.G.Halakatti Research Centre,**
B.L.D.E. Association, Bijapur, Karnataka

Edition : **2014**

Pages : **xxiv + 664 = 688**

Copies : **1000**

Price : **Rs. 350.00**

Typeset : **Dr. P. G. Halakatti Research Centre,** Bijapur

Printed : **Print Point,** Bengaluru. Ph : 97390 67359

ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆರ್ಥಿಕ ಅನುದಾನದ ನೆರವಿನಿಂದ ಈ ಪುಸ್ತಕ ಪ್ರಕಟವಾಗಿದೆ.

ತಾರೀಖ–ಎ–ಫರಿಶ್ತಾ (ಭಾಗ–೪) : ಮುಹಮ್ಮದ ಕಾಸೀಮ ಫರಿಶ್ತಾ ವಿರಚಿತ ಪರ್ಶಿಯನ್ ಕೃತಿ.
ಅನುವಾದಕರು : **ಡಾ. ಅಬ್ದುಲ್ ಹಮೀದ್, ಡಾ. ಬಿ. ರಘೋತ್ತಮರಾವ್ ದೇಸಾಯಿ**

ಪ್ರಕಾಶಕರು : **ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ,**
ಬಿ.ಎಲ್.ಡಿ.ಇ. ಸಂಸ್ಥೆ, ಬಿಜಾಪುರ

ಹಕ್ಕುಗಳು : ಪ್ರಕಾಶಕರು

ಆವೃತ್ತಿ : ಪ್ರಥಮ ೨೦೧೪

ಪುಟಗಳು : **xxiv + ೬೬೪ = ೬೮೮**

ಪ್ರತಿಗಳು : ೧೦೦೦

ಬೆಲೆ : ರೂ. ೩೫೦.೦೦

ಡಿ.ಟಿ.ಪಿ. : ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ, ಬಿಜಾಪುರ

ಮುದ್ರಣ : ಪ್ರಿಂಟ್ ಪಾಯಿಂಟ್, ಬೆಂಗಳೂರು. ಮೊ : ೯೭೩೯೦ ೬೭೩೫೯

*

ಆದಿಲ್‌ಶಾಹಿ ಸಾಹಿತ್ಯ ಅನುವಾದ ಸಮಿತಿ

ಅಧ್ಯಕ್ಷರು

ಡಾ. ಎಂ.ಎಂ. ಕಲಬುರ್ಗಿ

ನಿರ್ದೇಶಕರು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಸದಸ್ಯರು

ಡಾ. ಬಿ.ಜಿ. ಮೂಲಿಮನಿ

ಡಾ. ರಹಮತ್ ತರೀಕೆರೆ

ಶ್ರೀ ರಂಜಾನ್ ದರ್ಗಾ

ಡಾ. ಎಚ್. ಜಿ. ದಡ್ಡಿ

ವಿಶೇಷ ಆಮಂತ್ರಿತ ಸದಸ್ಯರು

ಶ್ರೀ ಶಿವಯೋಗಿ ಎಸ್. ತಂಬಾಕೆ

ಡಾ. ಎಂ. ಎಸ್. ಮದಭಾವಿ

ಮೌಲಾನಾ ಮಹಬೂಬುರ್ ರಹಮಾನ ಮದನಿ

ಪದನಿಮಿತ್ತ ಸದಸ್ಯರು

ಜಿಲ್ಲಾಧಿಕಾರಿಗಳು, ಬಿಜಾಪುರ

ಸಹಾಯಕ ನಿರ್ದೇಶಕರು,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬಿಜಾಪುರ

*

ಅಧ್ಯಕ್ಷರ ಮಾತು

ಎಂ. ಎಂ. ಕಲಬುರ್ಗಿ

ವಿಜಾಪುರದ ಬಿ.ಎಲ್.ಡಿ. ಶಿಕ್ಷಣಸಂಸ್ಥೆ ಇತ್ತೀಚಿನ ದಿನಗಳಲ್ಲಿ ಸಾಂಸ್ಕೃತಿಕ ಸಂಸ್ಥೆಯಾಗಿಯೂ ಬೆಳೆಯುತ್ತಲಿದೆ. ಈ ಸಂಸ್ಥೆಯ ಭಾಗವಾಗಿರುವ 'ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ'ಯ ಇಂದಿನ ಕಾರ್ಯ ಮತ್ತು ಕಾರ್ಯಕ್ರಮಗಳು ಇದಕ್ಕೆ ಉದಾಹರಣೆಯೆನಿಸಿವೆ.

ಡಾ॥ ಫ.ಗು. ಹಳಕಟ್ಟಿಯವರದು ಕೇವಲ ವ್ಯಕ್ತಿಕಲ್ಯಾಣಕೇಂದ್ರಿತ ವ್ಯಕ್ತಿತ್ವವಲ್ಲ, ಸಮಾಜಕಲ್ಯಾಣ ಕೇಂದ್ರಿತ ವ್ಯಕ್ತಿತ್ವ. ಇದಕ್ಕೆ ತಕ್ಕಂತೆ ಅವರ ಹೆಸರಿನ ಈ ಸಂಸ್ಥೆ ಎಲ್ಲ ಸಮಾಜಗಳನ್ನು–ಸಾಮಾಜಿಕರನ್ನು 'ಇವ ನಮ್ಮವ, ಇವ ನಮ್ಮವ, ಇವ ನಮ್ಮವ' ಎಂಬ ಆದರ್ಶದಲ್ಲಿ ಬೆಳೆಯುತ್ತಲಿದೆ. ಇದಕ್ಕೆ ಸಾಕ್ಷಿಯಾಗಿದೆ, ಈ ಸಂಸ್ಥೆ ಕೈಗೆತ್ತಿಕೊಂಡಿರುವ 'ಆದಿಲ್‌ಶಾಹಿ ಸಾಹಿತ್ಯ ಅನುವಾದ ಯೋಜನೆ'.

ಮಧ್ಯಕಾಲೀನ ಭಾರತೀಯ ಇತಿಹಾಸದಲ್ಲಿ ವಿಜಾಪುರದ ಆದಿಲ್‌ಶಾಹಿಗಳ ಹೆಸರು ಪ್ರಸಿದ್ಧವಾದುದು, ಸುಪ್ರಸಿದ್ಧವಾದುದು. ಏಕಕಾಲಕ್ಕೆ ಉತ್ತರದ ಮೊಗಲರೊಂದಿಗೆ, ದಕ್ಷಿಣದ ವಿಜಯನಗರದವರೊಂದಿಗೆ ಸಂಘರ್ಷ–ಸಮನ್ವಯದಿಂದ ೧೪೮೯–೧೬೮೬ರ ವರೆಗೆ ರಾಜ್ಯಭಾರಮಾಡಿದ ರಾಜಮನೆತನವಿದು. 'ದಿನೇ ಇಲಾಹಿ' ಖ್ಯಾತಿಯ ಮೊಗಲ್ ಮನೆತನದ ಅಕಬರನಂತೆ 'ದಾದೇ ಇಲಾಹಿ' ಖ್ಯಾತಿಯ ಆದಿಲ್‌ಶಾಹಿ ಮನೆತನದ ಜಗದ್ಗುರು ೨ನೆಯ ಇಬ್ರಾಹಿಮ್ ಬಾದಶಹನು ಸಮನ್ವಯಸಮಾಜ ಸ್ಥಾಪಿಸಲು ನಿರತನಾದುದು ಗಮನಾರ್ಹವೆನಿಸಿದೆ.

ಈ ಮನೆತನದ ಎಂಟು ಜನ ಅರಸರು ಸಾಹಿತಿಗಳು–ಸಾಹಿತ್ಯಪ್ರೇಮಿಗಳು. ಈ ಸಾಹಿತ್ಯ ಲೌಕಿಕ–ಧಾರ್ಮಿಕ ಎರಡೂ ಆಯಾಮಗಳಲ್ಲಿ ಬಿಚ್ಚಿ ಬೆಳೆದಿದೆ. ಹಿಂದೂಗಳದು ಪುರಾಣಪ್ರಜ್ಞೆಯಾದರೆ, ಮುಸಲ್ಮಾನರದು ಇತಿಹಾಸಪ್ರಜ್ಞೆ. ಈ ಪ್ರಜ್ಞೆಗೆ ಅನುಗುಣವಾಗಿ ಇವರ ಆಸ್ಥಾನದಲ್ಲಿ–ಇವರ ರಾಜ್ಯದಲ್ಲಿ ಸುಮಾರು ೨೦ ಕೃತಿಗಳು ಹುಟ್ಟಿಕೊಂಡಿವೆ.

ಸಮಕಾಲೀನ ರಾಜಕೀಯದೊಂದಿಗೆ ಜೀವನದ ಇತರ ಕ್ಷೇತ್ರಗಳನ್ನೂ ಚಿತ್ರಿಸಿದ ಈ ಸಾಹಿತ್ಯದ ಬಹುಭಾಗ ಪ್ರಕಟವಾಗದೆ, ಕನ್ನಡಕ್ಕೆ ಅನುವಾದವಾಗದೆ ಉಳಿದಿದ್ದಿತು. ಈ ದೊಡ್ಡ ಆಕರವನ್ನು ಕೈಬಿಟ್ಟು ಈವರೆಗೆ ಇತಿಹಾಸ ಬರೆದುದು ವಿಷಾದದ ಸಂಗತಿಯಾಗಿದೆ. ಇದಕ್ಕೆ ಕಾರಣ, ಈ ಸಾಹಿತ್ಯ ಪರ್ಶಿಯನ್, ದಖನಿ–ಉರ್ದು ಭಾಷೆಯಲ್ಲಿರುವುದು ಮತ್ತು ಈ ಅರಸರು ಅನ್ಯರೆಂದು ಭಾವಿಸಿರುವುದು. 'ವಚನಪಿತಾಮಹ ಡಾ॥ ಫ. ಗು. ಹಳಕಟ್ಟಿ ಸಂಶೋಧನ ಸಂಸ್ಥೆ' ಈ ಯಾವುದೇ ಭಿನ್ನತೆ ಪರಿಗಣಿಸದೆ ಪ್ರಸ್ತುತ ಯೋಜನೆಯನ್ನು ಕೈಗೆತ್ತಿಕೊಂಡಿದೆ.

ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆರ್ಥಿಕ ಅನುದಾನದ ನೆರವಿನಿಂದ ಈ ಯೋಜನೆ ಅಸ್ತಿತ್ವಕ್ಕೆ ಬಂದಿದೆ. ಇದನ್ನು ಒದಗಿಸುವಲ್ಲಿ ತೀವ್ರ ಆಸಕ್ತಿ ವಹಿಸಿದವರು ಈ ಹಿಂದೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾಗಿದ್ದ ಶ್ರೀ ಗೋವಿಂದ ಕಾರಜೋಳ ಅವರು. ಈ ಆಸಕ್ತಿಯನ್ನು ಮುಂದುವರಿಸುತ್ತಲಿರುವವರು ಇಂದು ಸಚಿವರಾಗಿರುವ ಶ್ರೀಮತಿ ಉಮಾಶ್ರೀ ಅವರು. ಸಹಕರಿಸಿದವರು ಈ ಇಲಾಖೆಯ ಅಧಿಕಾರಿಗಳು. ಇವರಿಗೆ ನಾವು ಕೃತಜ್ಞರಾಗಿದ್ದೇವೆ.

ಬಿ.ಎಲ್.ಡಿ ಶಿಕ್ಷಣ ಸಂಸ್ಥೆ ನಮಗೆಲ್ಲ ಹೆಮ್ಮೆಯ ಮಾದರಿ. ಈ ರೀತಿಯಲ್ಲಿ ಇದನ್ನು ಬೆಳೆಸುತ್ತಲಿರುವವರು ಅಧ್ಯಕ್ಷರಾದ ಶ್ರೀ ಎಂ.ಬಿ. ಪಾಟೀಲರು. ಈ ಸಂಸ್ಥೆಯ ಅಂಗವಾಗಿರುವ 'ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ'ಗಾಗಿ ತ್ರಿಕರಣಪೂರ್ವಕ ದುಡಿಯುತ್ತಲಿರುವವರು ಇದರ ಅಧ್ಯಕ್ಷರಾದ ಶ್ರೀ ಶಿವಯೋಗಿ ತಂಬಾಕೆಯವರು. ಇವರಿಬ್ಬರ ಪ್ರೋತ್ಸಾಹ–ನೆರವುಗಳಿಗೆ, ಈ ಯೋಜನೆಯ ಸಲಹಾಮಂಡಳಿಯ ಸದಸ್ಯರ ಮಾರ್ಗದರ್ಶನಕ್ಕೆ, ಅನುವಾದ ಕಾರ್ಯದಲ್ಲಿ ವಿದ್ವಾಂಸರು ನೀಡಿದ ಸಹಕಾರಕ್ಕೆ ಅಭಿನಂದನೆಗಳು.

ಸರಕಾರ ರೂಪಿಸಿದ ಸಲಹಾಮಂಡಳಿಯ ನಿರ್ದೇಶನದಂತೆ ಈ ಯೋಜನೆಗಾಗಿ ಡಾ॥ ಫ.ಗು. ಹಳಕಟ್ಟಿ ಭವನದಲ್ಲಿ ಒಂದು ಸ್ವತಂತ್ರ ಕಾರ್ಯಾಲಯವನ್ನು, ಅಗತ್ಯ ಸಿಬ್ಬಂದಿವರ್ಗವನ್ನು ಅಸ್ತಿತ್ವಕ್ಕೆ ತರಲಾಯಿತು. ಈ ಮಣಿಹಕ್ಕೆ ಡಾ॥ ಕೃಷ್ಣ ಕೊಲ್ಹಾರಕುಲಕರ್ಣಿ ಅವರು ನಿರ್ದೇಶಕರಾಗಿ ಲಭಿಸಿರುವುದು ಒಂದು ಸುಯೋಗವೆಂದೇ ಭಾವಿಸುತ್ತೇವೆ. ಮೊದಲಿನಿಂದಲೂ ಆದಿಲ್‌ಶಾಹಿ ಸಾಹಿತ್ಯ–ಸಂಸ್ಕೃತಿಗಳ ಅಧ್ಯಯನದಲ್ಲಿ ನಿಮಗ್ನರಾದ ಇವರು ಈ ಯೋಜನೆಗಾಗಿ ದುಡಿದ ರೀತಿ ಅನನ್ಯವಾದುದು. ಹಸ್ತಪ್ರತಿ–ಮುದ್ರಿತಪ್ರತಿಗಳ ಸಂಗ್ರಹ, ಸೂಕ್ತ ಅನುವಾದಕರ ಆಯ್ಕೆ, ಅವರಿಂದ ಕೆಲಸಮಾಡಿಸಿಕೊಳ್ಳುವ ರೀತಿ, ಅನುವಾದಗಳ ಪರಿಷ್ಕರಣ–ಪ್ರಕಟಣೆ ಇತ್ಯಾದಿಗಳಿಗಾಗಿ ಇವರು ತ್ರಿವಿಕ್ರಮಪ್ರಜ್ಞೆಯಿಂದ ಶ್ರಮಿಸಿದ್ದಾರೆ. ಇವರೊಂದಿಗೆ ಫಗು. ಹಳಕಟ್ಟಿ ಸಂಶೋಧನ ಸಂಸ್ಥೆಯ ಕಾರ್ಯದರ್ಶಿಗಳಾದ ಡಾ॥ ಎಂ.ಎಸ್. ಮದಭಾವಿ ಅವರು ನಿರಪೇಕ್ಷ ಭಾವದಿಂದ ಹಗಲಿರುಳು ದುಡಿದಿದ್ದಾರೆ. ಇವರೊಂದಿಗೆ ಮಿಕ್ಕ ಸಿಬ್ಬಂದಿವರ್ಗದವರು ಸಹಕರಿಸಿದ ರೀತಿಯೂ ಸ್ಮರಣೀಯವಾಗಿದೆ. ಇವರೆಲ್ಲರಿಗೂ ಕೃತಜ್ಞತೆಗಳು.

■

*

ಪ್ರಸ್ತಾವನೆ

ಸಮಿತಿ ಸದಸ್ಯರು

ಮಧ್ಯಯುಗೀನ ಭಾರತದ ಚರಿತ್ರೆಯಲ್ಲಿ ಬಿಜಾಪುರದ ಆದಿಲಶಾಹಿಗಳ ಪಾತ್ರ ಬಹು ಮುಖ್ಯವಾಗಿದೆ. ದಕ್ಷಿಣ ಭಾರತದ ಬಹುಪಾಲು ಪ್ರದೇಶವನ್ನು ಅವರು ಬಿಜಾಪುರ ಕೇಂದ್ರದಿಂದ ಆಳಿದರು. ಇಂದಿನ ಅಖಂಡ ಕರ್ನಾಟಕವನ್ನು ಅವರು ಸುಮಾರು ಒಂದು ಶತಮಾನದಷ್ಟು ಕಾಲ ತಮ್ಮ ಅಂಕಿತದಲ್ಲಿ ಇಟ್ಟುಕೊಂಡಿದ್ದರು. ಹೀಗಾಗಿ ಆದಿಲಶಾಹಿಗಳ ಚರಿತ್ರೆಯನ್ನು ಅಭ್ಯಸಿಸದೆ ಕರ್ನಾಟಕದ ಚರಿತ್ರೆ ಪೂರ್ಣಗೊಳ್ಳುವುದಿಲ್ಲ.

ಈ ಆದಿಲಶಾಹಿಗಳ ರಾಜ್ಯವು ಕ್ರಿ.ಶ. ೧೪೮೯ರಿಂದ ೧೬೮೬ರ ವರೆಗೆ ಅಸ್ತಿತ್ವದಲ್ಲಿದ್ದಿತು. ೮ ಜನ ಬಾದಶಹರು ಆಳಿದರು. ಈ ಬಾದಶಹರುಗಳ ವ್ಯಕ್ತಿತ್ವ ವರ್ಣಮಯವಾಗಿದ್ದಿತು. ಸಾಹಿತ್ಯ, ಸಂಗೀತ, ಕಲೆ, ವಾಸ್ತುಶಿಲ್ಪ, ಧರ್ಮ ಜೊತೆಗೆ ರಾಜಕಾರಣ ಇವುಗಳಲ್ಲೆಲ್ಲ ಇವರು ತಮ್ಮದೇ ಆದ ಮುದ್ರೆಯನ್ನು ಒತ್ತಿ ಹೋಗಿದ್ದಾರೆ.

ಇಂದು ಜಗತ್ತಿನಲ್ಲೆಲ್ಲ ಓದುತ್ತಿರುವ ಭಾರತೀಯ ಮುಸಲ್ಮಾನರ ಚರಿತ್ರೆಯಾಗಿರುವ 'ತಾರೀಖೆ ಫರಿಶ್ತಾ' [ಪರ್ಶಿಯನ್] ಕೃತಿಯ ಕರ್ತೃ ಮುಹಮ್ಮದ್ ಕಾಸಿಮ ಫರಿಶ್ತಾ, ಎರಡನೆಯ ಇಬ್ರಾಹಿಮ ಆದಿಲಶಾಹ (ಕ್ರಿ.ಶ.೧೫೮೦–೧೬೨೭)ನ ಅಸ್ಥಾನದಲ್ಲಿದ್ದುಕೊಂಡು ಈ ಗ್ರಂಥವನ್ನು ಬರೆದನು. ಅದರಂತೆ ಇನ್ನೂ ಹಲವಾರು ಜನ ಇತಿಹಾಸಕಾರರು, ಕವಿಗಳು ಆದಿಲಶಾಹಿ ಆಸ್ಥಾನದಲ್ಲಿ ಇದ್ದುಕೊಂಡು ಕೃತಿಗಳನ್ನು ರಚಿಸಿದ್ದಾರೆ. ಅವುಗಳೆಲ್ಲ ಅಂದು ಪ್ರಚಲಿತದಲ್ಲಿದ್ದ ಪರ್ಶಿಯನ್ ಇಲ್ಲವೆ ದಖನಿ–ಉರ್ದು ಭಾಷೆಗಳಲ್ಲಿ ರಚಿತವಾಗಿವೆ.

ನಾಡಿನ ವಿಶ್ವವಿದ್ಯಾಲಯಗಳು, ಭಾರತೀಯ ಇತಿಹಾಸ ಅನುಸಂಧಾನ ಇತ್ಯಾದಿ ಸಂಸ್ಥೆಗಳು ಇತಿಹಾಸದ ಕೆಲಸ ಮಾಡುತ್ತಿದ್ದರೂ ಆದಿಲಶಾಹಿಗಳ ವಿಷಯದಲ್ಲಿ ಆಗಬೇಕಾದಷ್ಟು ಆಗಲಿಲ್ಲ. ಅದಕ್ಕೆ ಕಾರಣ, ಬಹುಶಃ ಅಧ್ಯಯನಕ್ಕೆ ಬೇಕಾಗುವ ಮೂಲ ಆಕರಗಳು ವಿಶ್ವದಾದ್ಯಂತ ಚದರಿ ಹೋಗಿರುವುದು ಮತ್ತು ಅವು ಪರ್ಶಿಯನ್, ದಖನಿ–ಉರ್ದು

ಭಾಷೆಗಳಲ್ಲಿರುವುದು. ಈ ಕೊರತೆಯನ್ನು ಗಮನಿಸಿ ಬಿಜಾಪುರ ಆದಿಲಶಾಹಿ ಕಾಲದ ಸಾಹಿತ್ಯವನ್ನು ಕನ್ನಡದಲ್ಲಿ ಪ್ರಕಟಿಸುವ ಪ್ರಯತ್ನವಾಗಿದೆ 'ಆದಿಲಶಾಹಿ ಸಾಹಿತ್ಯ ಅನುವಾದ ಯೋಜನೆ'.

ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಸಂಲಗ್ನವಾಗಿರುವ ಬಿಜಾಪುರ ಬಿ.ಎಲ್.ಡಿ.ಇ. ಸಂಸ್ಥೆಯ ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರವು ಕಳೆದ ದಶಕದಿಂದ ಸಂಶೋಧನಕ್ಷೇತ್ರದಲ್ಲಿ ಅಪರೂಪದ ಕೆಲಸವನ್ನು ಮಾಡುತ್ತಿದೆ. ಡಾ. ಫ.ಗು. ಹಳಕಟ್ಟಿ ಅವರ ಸಮಗ್ರಸಾಹಿತ್ಯವನ್ನು ೧೫ ಸಂಪುಟಗಳಲ್ಲಿ ಸಂಪಾದಿಸಿ ಪ್ರಕಟಿಸಿದೆ. ೮ ವಿದ್ಯಾರ್ಥಿಗಳು ವಿವಿಧ ವಿಷಯಗಳಲ್ಲಿ ಪಿಎಚ್.ಡಿ ಪದವಿಗಳನ್ನು ಪಡೆದಿದ್ದಾರೆ. ಇನ್ನೂ ಹಲವರು ಪದವಿ ಪಡೆಯುವ ದಾರಿಯಲ್ಲಿದ್ದಾರೆ. ಇದಕ್ಕೆಲ್ಲ ಬಿ.ಎಲ್.ಡಿ.ಇ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಂ.ಬಿ.ಪಾಟೀಲ ಅವರ ನಿರಂತರ ಬೆಂಬಲವೇ ಕಾರಣವಾಗಿದೆ. ಅವರ ಆಸಕ್ತಿಯಂತೆ ಸಂಶೋಧನ ಕೇಂದ್ರವು 'ಆದಿಲಶಾಹಿ ಸಾಹಿತ್ಯ ಅನುವಾದ ಯೋಜನೆ'ಯನ್ನು ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಳಿಸಿತು. ಯೋಜನೆಯ ಮಹತ್ವವನ್ನು ಗುರುತಿಸಿ ಕರ್ನಾಟಕ ಸರಕಾರವು, ಡಾ. ಎಂ.ಎಂ. ಕಲಬುರ್ಗಿ ಅವರ ಅಧ್ಯಕ್ಷತೆಯಲ್ಲಿ ಡಾ. ಬಿ.ಜಿ.ಮೂಲಿಮನಿ, ಡಾ. ರಹಮತ್ ತರೀಕೆರೆ. ಶ್ರೀ ರಂಜಾನ್ ದರ್ಗಾ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಮತ್ತು ಡಾ. ಎಚ್.ಜಿ.ದಡ್ಡಿ– ಸದಸ್ಯರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಿ ಇದಕ್ಕೆ ಅನುಮತಿ ನೀಡಿತು.

ದಿನಾಂಕ ೧೨–೩–೨೦೧೩ರಂದು ನಡೆದ ಸಮಿತಿಯ ಪ್ರಥಮ ಸಭೆಯಲ್ಲಿ ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ಈ ಯೋಜನೆಯ ನಿರ್ದೇಶಕರಾಗಿರಬೇಕೆಂದು, ಸಂಶೋಧನಕೇಂದ್ರದ ಅಧ್ಯಕ್ಷರಾದ ಶ್ರೀ ಶಿವಯೋಗಿ ತಂಬಾಕೆ ಮತ್ತು ಕಾಯದರ್ಶಿ ಡಾ. ಎಂ.ಎಸ್.ಮದಭಾವಿ ಅವರು ಸಮಿತಿಯ ಪದನಿಮಿತ್ತ ಸದಸ್ಯರಾಗಬೇಕೆಂದು ನಿರ್ಣಯಿಸಲಾಯಿತು.

ದಿನಾಂಕ ೧೫–೬–೨೦೧೩ರಂದು ನಡೆದ ಸಮಿತಿಯ ಎರಡನೆಯ ಸಭೆಯಲ್ಲಿ ಪರ್ಶಿಯನ್, ಅರೇಬಿಕ್, ದಖನಿ–ಉರ್ದು ಭಾಷೆಗಳಲ್ಲಿ ವಿದ್ವಾಂಸರಾದ ಮೌಲಾನಾ ಮಹಬೂಬುರ್ ರಹಮಾನ ಮದನಿ ಅವರನ್ನು ವಿಶೇಷ ಆಮಂತ್ರಿತ ಸದಸ್ಯರೆಂದು ತೀರ್ಮಾನಿಸಲಾಯಿತು.

ಇದು ಭಾರತದಲ್ಲಿಯೇ ಒಂದು ಅಪರೂಪದ ಯೋಜನೆ. ಮಧ್ಯಯುಗೀನ ಆದಿಲಶಾಹಿಗಳ ಕಾಲದಲ್ಲಿ ರಚಿತಗೊಂಡ ಎಲ್ಲ ಸಾಹಿತ್ಯವನ್ನು ಕನ್ನಡಕ್ಕೆ ತರುವುದು ಯೋಜನೆಯ ಮುಖ್ಯ ಉದ್ದೇಶ.

ಪ್ರಾರಂಭದಲ್ಲಿ ಆದಿಲಶಾಹಿ ಚರಿತ್ರೆಗೆ ಸಂಭಂಧಪಟ್ಟ ಈ ಕೆಳಗಿನ ಸಮಕಾಲೀನ ಕೆಲವು ಚರಿತ್ರ ಗ್ರಂಥಗಳ ಪಟ್ಟಿಯನ್ನು ಮಾಡಲಾಯಿತು. ಅವು ದೊರೆಯುವ ಸಂಭಾವ್ಯ ಸ್ಥಳಗಳನ್ನೂ ಹೀಗೆ ಗುರುತಿಸಲಾಯಿತು.

೧. **ಮುಹಮ್ಮದ ಕಾಸಿಮ ಫರಿಶ್ತಾ** : ತಾರೀಖೆ ಫರಿಶ್ತಾ [ಪರ್ಶಿಯನ್].
ಇಂಗ್ಲಿಷ್‌ಗೆ ಅನುವಾದ ಕ್ಯಾಪ್ಟನ್ ಬ್ರಿಗ್ಸ [ಕ್ರಿ.ಶ. ೧೮೯೯], ಮೂಲ ಪರ್ಶಿಯನ್ ಹಸ್ತಪ್ರತಿ ಮುಂಬಯಿ ಅರ್ಕೀವ್ಸ, ಸಾಲಾರ ಜಂಗ ವಸ್ತುಸಂಗ್ರಹಾಲಯ ಹೈದರಾಬಾದ ಇತ್ಯಾದಿಗಳಲ್ಲಿ ಲಭ್ಯ.

೨. **ಅಬ್ದುಲ್ಲಾ ದೆಹಲವಿ** : ಇಬ್ರಾಹಿಮನಾಮಾ [ದಖನಿ].
ಪ್ರಕಟವಾಗಿದೆ. ಮೂಲ ದಖನಿ ಹಸ್ತಪ್ರತಿ ಮುಂಬಯಿ ಅರ್ಕೀವ್ಸ ಮತ್ತು ಸಾತಾರಾದ ಔಂಧ ಅರ್ಕೀವ್ಸದಲ್ಲಿವೆ.

೩. **ಅಸದಬೇಗ** : ವಾಕಿಯಾತೆ ಅಸದಬೇಗ [ಪರ್ಶಿಯನ್].
ಚಾಪ್‌ಮನ್‌ನಿಂದ ಅನುವಾದವಾಗಿದೆ [೧೮ನೆ ಶತ]. ನಂತರ ಪಿ.ಎಂ.ಜೋಶಿ ಅವರಿಂದಲೂ, ಜೊತೆಗೆ ಇಲಿಯಟ್ ಮತ್ತು ಡೌಸನ್ ಸಂಪುಟ ೬ರಲ್ಲಿಯೂ ಭಾಗಶಃ ಅನುವಾದ. ಇದರ ಹಸ್ತಪ್ರತಿಯು ಆಂಧ್ರಪ್ರದೇಶ ಪ್ರಾಚೀನ ಹಸ್ತಪ್ರತಿಗಳ ಸಂಗ್ರಹ ಹೈದರಾಬಾದಿನಲ್ಲಿ ಲಭ್ಯ.

೪. **ಕಾಜಿ ನೂರುಲ್ಲಾ** : ತಾರೀಖೆ ಅಲಿ ಆದಿಲಶಹ [ದಖನಿ].
ಮೂಲ ಹಸ್ತಪ್ರತಿಗಳು ಮುಂಬಯಿ ಅರ್ಕೀವ್ಸ, ಇಂಡಿಯಾ ಆಫೀಸ ಲಾಯಬ್ರರಿ ಲಂಡನ್ ಮತ್ತು ಬ್ರಿಟಿಶ್ ಮ್ಯುಜಿಯಮ್ ಲಾಯಬ್ರರಿ ಲಂಡನ್, ಸಾಲಾರಜಂಗ ವಸ್ತುಸಂಗ್ರಹಾಲಯ(ಹೈದರಾಬಾದ್)ಗಳಲ್ಲಿ ಲಭ್ಯ.

೫. **ಜುಹೂರ್ ಬಿನ್ ಜುಹೂರಿ** : ಮುಹಮ್ಮದನಾಮಾ [ಪರ್ಶಿಯನ್].
ಹಸ್ತಪ್ರತಿಯು ಪ್ರಾಚ್ಯ ವಸ್ತುಸಂಗ್ರಹಾಲಯ ಬಿಜಾಪುರದಲ್ಲಿ ಲಭ್ಯ ಭಾಗಶಃ ಬಿ.ಡಿ. ವರ್ಮಾರಿಂದ ಇಂಗ್ಲಿಷನಲ್ಲಿ ಅನುವಾದ.

೬. **ನುಸ್ರತಿ** : ಅಲಿನಾಮಾ [ದಖನಿ].
ಪ್ರಕಟವಾಗಿದೆ. ಪ್ರತಿ ದುರ್ಲಭ.

೭. **ಮೌಲ್ವಿ ಬಶೀರುದ್ದೀನ ಅಹ್ಮದ** : ವಾಕಿಯಾತೆ ಮಮಲಿಕತ್ ಬಿಜಾಪುರ [ಉರ್ದು].
ಕರ್ನಾಟಕ ಉರ್ದು ಅಕಡೆಮಿಯಿಂದ ಪ್ರಕಟ. ಮೂಲಪ್ರತಿ ಸಾಲಾರಜಂಗ ಮ್ಯುಜಿಯಮ್ ಹೈದರಾಬಾದದಲ್ಲಿ ಲಭ್ಯ.

೮. **ಮುಹಮ್ಮದ ಹಾಶಿಮ ಫುಜೂನಿ**: ಫುತುಹತೆ ಆದಿಲಶಾಹಿ [ಪರ್ಶಿಯನ್].
ಮುಂಬಯಿ ಅರ್ಕೀವ್ಸ ಬ್ರಿಟಿಶ್ ಇಂಡಿಯಾ ಲಾಯಬ್ರರಿ ಲಂಡನ್‌ಗಳಲ್ಲಿ ಹಸ್ತಪ್ರತಿಗಳಿವೆ.

೯. **ಮೀರ್ ರಫೀಯುದ್ದೀನ ಶಿರಾಜಿ** : ತಜ್ಕಿರತುಲ್ ಮುಲೂಕ [ಪರ್ಶಿಯನ್].
ಸಾಲಾರಜಂಗ ವಸ್ತುಸಂಗ್ರಹಾಲಯ ಹೈದರಾಬಾದದಲ್ಲಿ ಹಸ್ತಪ್ರತಿ ಲಭ್ಯ.

೧೦. **ಶೇಖ್ ಜೈನುದ್ದೀನ ಅಲ್ ಮಾಬಾರಿ** : ತೊಹಫತುಲ್ ಮುಜಾಹಿದೀನ [ಅರೇಬಿಕ್].
ಇಂಗ್ಲಿಷ್ ಅನುವಾದ ಪ್ರಕಟವಾಗಿದೆ.

೧೧. **ಸೈಯದ ಅಲಿ ಬಿಲಗ್ರಾಮಿ** : ತಾರೀಖೆ ದಖನ್ ೪ ಸಂಪುಟಗಳು [ಉರ್ದು].

೧೨. **ಸಯ್ಯದ ಮೊಹಿಯುದ್ದೀನ ಪೀರಜಾದಾ**: ಅಹವಾಲೆ ಸಲಾತೀನ ಬಿಜಾಪುರ[ಪರ್ಶಿಯನ್].
ಬ್ರಿಟಿಶ್ ವಸ್ತುಸಂಗ್ರಹಾಲಯ ಲಂಡನ್, ಹಸ್ತಪ್ರತಿ ಸಂಖ್ಯೆ ೨೬೨೭೦.

೧೩. **ಫಿತೂರಖಾನ ವಲ್ಲದ ಅಸದಖಾನ ಲ್ಯಾರಿ** : ತಾರೀಖೆ ಹಪ್ತಕುರ್ಸಿ [ಪರ್ಶಿಯನ್].
ಸಾಲಾರಜಂಗ ವಸ್ತು ಸಂಗ್ರಹಾಲಯ, ಹೈದರಾಬಾದ. ಇಂಡಿಯಾ ಆಫೀಸ ಲಾಯಬ್ರರಿ ಲಂಡನ್‌ಗಳಲ್ಲಿ ಹಸ್ತಪ್ರತಿ ಲಭ್ಯ.

೧೪. **೨ನೆಯ ಇಬ್ರಾಹಿಮ ಆದಿಲಶಹ** : ಕಿತಾಬೆ ನವರಸ [ದಖನಿ].
ಪ್ರಕಟವಾಗಿದೆ.

೧೫. **ಮುಹಮ್ಮದ್ ಇಬ್ರಾಹಿಮ್ ಜುಬೇರಿ** : ರೌಜತುಲ್ ಔಲಿಯಾ ಎ ಬಿಜಾಪುರ [ಪರ್ಶಿಯನ್].
ಆಂಧ್ರಪ್ರದೇಶ ಪ್ರಾಚ್ಯ ಹಸ್ತಪ್ರತಿ ಸಂಗ್ರಹ ಹೈದರಾಬಾದದಲ್ಲಿ ಹಸ್ತಪ್ರತಿ ಲಭ್ಯ. ಸಂಖ್ಯೆ ೧೪೮೧೩.

೧೬. **ಮುಹಮ್ಮದ್ ಇಬ್ರಾಹಿಮ್ ಜುಬೇರಿ** : ಬಸಾತೀನೆ ಸಲಾತೀನ [ಪರ್ಶಿಯನ್].
ಮರಾಠೀ ಅನುವಾದದಿಂದ ಕನ್ನಡಕ್ಕೆ ಅನುವಾದ ಆಗಿದೆ. ಪರ್ಶಿಯನ್ ಹಸ್ತಪ್ರತಿ ಸಾಲಾರಜಂಗ ವಸ್ತುಸಂಗ್ರಹಾಲಯ ಹೈದರಾಬಾದದಲ್ಲಿ ಲಭ್ಯ.

೧೭. **ಮೀರ ಅಹಮದ ಅಲಿಖಾನ** : ಗುಲದಸ್ತಾ ಎ ಬಿಜಾಪುರ [ದಖನಿ].
ಆಂಧ್ರಪ್ರದೇಶ ಆರ್ಕೀವ್ಸದಲ್ಲಿ ಹಸ್ತಪ್ರತಿ ಲಭ್ಯ. ಸಂಖ್ಯೆ ೧೯೩.

೧೮. **ಅಬುಲ ಹಸನ ಕಾದಿರಿ** : ಶಾಹಿಪತ್ ಇ ಹುದಾ [ಪರ್ಶಿಯನ್].
ಸಾಲಾರಜಂಗ ವಸ್ತುಸಂಗ್ರಹಾಲಯ ಹೈದರಾಬಾದದಲ್ಲಿ ಹಸ್ತಪ್ರತಿ ಲಭ್ಯ.

೧೯. **ಆದಿಲಶಾಹಿಕಾಲದ ಫರ್ಮಾನುಗಳು ಮತ್ತು ಸನದುಗಳು** : ಭಾರತ ಇತಿಹಾಸ ಸಂಶೋಧಕ ಮಂಡಳ ಪುಣೆ, ಬಿಜಾಪುರ ವಸ್ತುಸಂಗ್ರಹಾಲಯ ಮತ್ತು ಇತರ ಸ್ಥಳಗಳಲ್ಲಿ ಲಭ್ಯ.

ಹೀಗೆ ಪಟ್ಟಿಮಾಡಿ, ಹಸ್ತಪ್ರತಿಗಳ ಶೋಧಕ್ಕೆ ತೊಡಗಲಾಯಿತು. ಸಾಲಾರಜಂಗ ವಸ್ತುಸಂಗ್ರಹಾಲಯ, ಆಂಧ್ರಪ್ರದೇಶ ಆರ್ಕೀವ್ಸ ಹೈದರಾಬಾದ, ಭಾರತೀಯ ಪುರಾತತ್ವ ಇಲಾಖೆ ವಸ್ತುಸಂಗ್ರಹಾಲಯ, ಗೋಳಗುಮ್ಮಟ ಬಿಜಾಪುರ– ಈ ಕೇಂದ್ರಗಳಿಂದ ಕೆಳಗಿನ ಹಸ್ತಪ್ರತಿಗಳು ದೊರೆತವು.

೧. ಕಾಜಿ ನೂರುಲ್ಲಾ : ತಾರೀಖೆ ಅಲಿ ಆದಿಲಶಹ [ದಖನಿ]

೨. ಮೀರ್ ರಫೀಯುದ್ದೀನ ಶಿರಾಜಿ : ತಜ್ಕಿರತುಲ್ ಮುಲೂಕ [ಪರ್ಶಿಯನ್]
೩. ಫಿತೂರಖಾನ ವಲ್ಲದ ಅಸದಖಾನ ಲ್ಯಾರಿ : ತಾರೀಖೆ ಹಪ್ತಕುರ್ಸೀ [ಪರ್ಶಿಯನ್]
೪. ಮೀರ ಅಹಮದ ಅಲಿಖಾನ : ಗುಲದಸ್ತಾ ಎ ಬಿಜಾಪುರ [ದಖನಿ]
೫. ಜುಹೂರ್ ಬಿನ್ ಜುಹೂರಿ : ಮುಹಮ್ಮದನಾಮಾ [ಪರ್ಶಿಯನ್]

ಹಸ್ತಪ್ರತಿಗಳನ್ನು ಒದಗಿಸಿದ ಮೇಲೆ ಕಾಣಿಸಿದ ಎಲ್ಲ ಸಂಸ್ಥೆಗಳ ಮುಖ್ಯಸ್ಥರಿಗೆ ನಮ್ಮ ಕೃತಜ್ಞತೆಗಳು. ಇದಲ್ಲದೆ, ಫರಿಶ್ತಾನ ತಾರೀಖೆ ಫರಿಶ್ತಾದ ಇಂಗ್ಲಿಷ್ ಮತ್ತು ಉರ್ದು ಅನುವಾದಗಳು, ಅಬ್ದುಲ್ಲಾ ದೇಹಲವಿಯ ಇಬ್ರಾಹೀಮನಾಮಾದ ಹಿಂದಿ ಮತ್ತು ಉರ್ದು ಅನುವಾದಗಳು, ಕವಿ ನುಸ್ರತಿಯ ಅಲಿನಾಮಾ, ಈಶ್ವರದಾಸ ನಗರ್‌ನ ಫುತೂಹತ್ ಅಲಂಗೀರ ಕೃತಿಯ ಇಂಗ್ಲಿಷ್ ಅನುವಾದ ಮತ್ತು ನೂರಾರು ಪರ್ಶಿಯನ್ ಮೂಲ ಮತ್ತು ಮರಾಠಿ ಅನುವಾದದ ಆದಿಲಶಾಹಿ ಫರ್ಮಾನುಗಳು ದೊರೆತವು. ಉಳಿದ ಹಸ್ತಪ್ರತಿಗಳನ್ನು ದೊರಕಿಸಬೇಕಾಗಿದೆ.

ಹೀಗೆ ಸಾಮಗ್ರಿಯನ್ನು ಸಂಗ್ರಹಿಸಿ ಅನುವಾದ ಕೆಲಸ ಪ್ರಾರಂಭ ಮಾಡಲಾಯಿತು. ಪರ್ಶಿಯನ್, ದಖನಿ ಮತ್ತು ಉರ್ದು ಭಾಷೆಗಳ ಈ ವಿದ್ವಾಂಸರನ್ನು ಕನ್ನಡ ಅನುವಾದ ಕಾರ್ಯದಲ್ಲಿ ತೊಡಗಿಸಿಕೊಳ್ಳಲಾಯಿತು.

೧. ಮೌಲಾನಾ ಮಹಬೂಬುರ್ ರಹಮಾನ ಮದನಿ, ಬಿಜಾಪುರ.
೨. ಶ್ರೀ ಬಿ. ಜಯಾಚಾರ್ಯ, ಯಾದಗಿರಿ.
೩. ಶ್ರೀಮತಿ ಬಾನು ಮುಷ್ತಾಕ್, ಹಾಸನ.
೪. ಡಾ. ಅಬ್ದುಲ್ ಹಮೀದ, ತಿಪಟೂರು.
೫. ಶ್ರೀ ಎಂ.ಎನ್ ನದಾಫ, ಬಿಜಾಪುರ
೬. ಪ್ರೊ. ವಸಂತ ಕುಷ್ಟಗಿ, ಗುಲಬರ್ಗಾ.
೭. ಶ್ರೀಮತಿ ರತ್ನಾ ಮಣ್ಣೂರ, ಗುಲಬರ್ಗಾ.
೮. ಡಾ. ಅಮೀರುದ್ದೀನ್ ಖಾಜಿ, ಬಿಜಾಪುರ.
೯. ಶ್ರೀ ಹಸನ ನಯೀಮ ಸುರಕೋಡ, ರಾಮದುರ್ಗ.
೧೦. ಡಾ. ಬಿ ರಘೋತ್ತಮರಾವ ದೇಸಾಯಿ, ಬೆಂಗಳೂರು.
೧೧. ಶ್ರೀಮತಿ ವಿದ್ಯಾ ಗುಮಾಸ್ತೆ, ಬಿಜಾಪುರ
೧೨. ಡಾ. ಆರ್.ಕೆ. ಕುಲಕರ್ಣಿ, ಬಿಜಾಪುರ

ಇವರ ಸಹಕಾರದಿಂದ ಮೊದಲ ಹಂತವಾಗಿ ೬ ಅನುವಾದ ಸಂಪುಟಗಳು ಈಗ ಪ್ರಕಟವಾಗುತ್ತಿವೆ.

೧. ತಾರೀಖೆ ಫರಿಶ್ತಾ: ೪ ಸಂಪುಟಗಳು.

೨. ಬಸಾತೀನೆ ಸಲಾತೀನ: ೫ನೆಯ ಸಂಪುಟ.

೩. ಇಬ್ರಾಹೀಮ ನಾಮಾ [ದಖನಿ], ಗುಲದಸ್ತಾಯೆ ಬಿಜಾಪುರ [ದಖನಿ], ತಾರೀಖೆ ಹಪ್ತಕುರ್ಸಿ [ಪರ್ಶಿಯನ್], ಫುತುಹತೆ ಅಲಂಗೀರ (ಭಾಗಶಃ) [ಪರ್ಶಿಯನ್]– ಇವೆಲ್ಲ ಸೇರಿ ೬ನೆಯ ಸಂಪುಟ.

ಹೀಗೆ ೬ ಸಂಪುಟಗಳಲ್ಲಿ ಸುಮಾರು ನಾಲ್ಕು ಸಾವಿರ ಪುಟಗಳ ಸಾಹಿತ್ಯ ಈಗ ಪ್ರಕಟವಾಗುತ್ತಿದ್ದು, ಉಳಿದವುಗಳ ಅನುವಾದಕಾರ್ಯ ಹಾಗೂ ಹಸ್ತಪ್ರತಿಗಳ ಶೋಧಕಾರ್ಯ ಮುನ್ನಡೆದಿದೆ. ಈ ೬ ಸಂಪುಟಗಳನ್ನು ಅನುವಾದಿಸಿದ ಎಲ್ಲ ಅನುವಾದಕರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

'ಆದಿಲಶಾಹಿ ಸಾಹಿತ್ಯ ಅನುವಾದ ಯೋಜನೆ'ಗೆ ಅನುದಾನ ನೀಡಿದ ಕರ್ನಾಟಕ ಸರಕಾರಕ್ಕೆ, ಯೋಜನೆಯನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸುವಲ್ಲಿ ಸಹಕರಿಸುತ್ತಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಅಧಿಕಾರಿಗಳಿಗೆ ಮತ್ತು ಈ ದಿಶೆಯಲ್ಲಿ ನಿರಂತರ ಸಹಾಯಹಸ್ತ ನೀಡುತ್ತಿರುವ ಬಿ.ಎಲ್.ಡಿ.ಇ. ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಂ.ಬಿ. ಪಾಟೀಲ ಅವರಿಗೆ ಕೃತಜ್ಞತೆಗಳು.

ಸಂಪುಟಗಳು ಪ್ರಕಟವಾಗುವ ಪ್ರತಿ ಹಂತದಲ್ಲಿ ಸಹಕಾರ ನೀಡಿದ, ಬಿಜಾಪುರ ಜಿಲ್ಲೆಯ ಅಂದಿನ ಜಿಲ್ಲಾಧಿಕಾರಿಗಳಾಗಿದ್ದ ಶ್ರೀ ಶಿವಯೋಗಿ ಕಳಸದ, ಇಂದಿನ ಜಿಲ್ಲಾಧಿಕಾರಿಗಳಾದ ಶ್ರೀ ರಿತ್ವಿಕ್ ರಂಜನ್ ಪಾಂಡೆ ಅವರನ್ನು, ಈ ಯೋಜನೆಯ ಸಲಹಾ ಸಮಿತಿ ಸದಸ್ಯರ ಮಾರ್ಗದರ್ಶನವನ್ನು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ. ಸೋಮಶೇಖರ ವಾಲಿ, ಬಿ.ಎಲ್.ಡಿ.ಇ. ಸಂಸ್ಥೆಯ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಸಂಯೋಜನಾಧಿಕಾರಿಗಳಾದ ಡಾ. ಎಂ.ಎಸ್.ಮದಭಾವಿ ಹಾಗೂ ಪ್ರಸ್ತುತ ಸಂಪುಟವನ್ನು ಪರಿಶೀಲಿಸಿದ ಶ್ರೀ ರಂಜಾನ್ ದರ್ಗಾ ಅವರ ಶ್ರಮವನ್ನು ಪ್ರೀತಿಯಿಂದ ಸ್ಮರಿಸುತ್ತೇವೆ.

ಮುಖಪುಟ ವಿನ್ಯಾಸಗೊಳಿಸಿದ ಶ್ರೀ ಕೆ.ಕೆ. ಮಕಾಳಿ ಹಾಗೂ ಅಂದವಾಗಿ ಮುದ್ರಿಸಿದ ಬೆಂಗಳೂರಿನ ಪ್ರಿಂಟ್ ಪಾಯಿಂಟ್‌ನ ಶ್ರೀ ಬಿ.ಸಿ. ಪಾಟೀಲ (ಹೆಬ್ಬಾಳ) ಮತ್ತು ಅವರ ಸಿಬ್ಬಂದಿಯನ್ನು ನೆನೆಯುತ್ತೇವೆ.

■

*

ನಿರ್ದೇಶಕರ ಮಾತು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

'ತಾರೀಖ–ಎ–ಫರಿಶ್ತಾ', 'ಗುಲ್ಶನ್–ಎ–ಇಬ್ರಾಹಿಮಿ', 'ನವರಸನಾಮಾ' ಇತ್ಯಾದಿ ಹೆಸರುಗಳಿಂದ ಕರೆಯಿಸಿಕೊಳ್ಳುವ ಈ ಇತಿಹಾಸ ಗ್ರಂಥವನ್ನು ಬರೆದವನು, ಮುಲ್ಲಾ ಮುಹಮ್ಮದ ಕಾಸೀಮ ಹಿಂದುಶಾಹ ಫರಿಶ್ತಾ. ಫರಿಶ್ತಾ ಎಂಬುದು ಅವನ ಕಾವ್ಯನಾಮ, ಹಿಂದುಶಾಹ ಎಂದರೇನು? ಎಂಬುದು ಸ್ಪಷ್ಟವಾಗಿ ಗುರುತಿಸಲಾಗಿಲ್ಲ. ಅವನು ಕಾಸ್ಪಿಯನ್ ಸಮುದ್ರ ತೀರದ ಅಸ್ತರಾಬಾದನಲ್ಲಿ ಕ್ರಿ. ಶ. ಸು. ೧೫೭೦ರಲ್ಲಿ ಹುಟ್ಟಿದನೆಂದು ಹೇಳಲಾಗುತ್ತದೆ. ತಂದೆಯ ಹೆಸರು ಗುಲಾಮ್ ಅಲಿ ಹಿಂದುಶಾಹ. ಅವನ ಹಿನ್ನೆಲೆಯ ಬಗ್ಗೆ ಚೆನ್ನಾಗಿ ಗೊತ್ತಿಲ್ಲ. ತನ್ನ ತಂದೆ ಪ್ರಸಿದ್ಧ ಕವಿಯಾಗಿದ್ದನೆಂದು ಫರಿಶ್ತಾನೇ ಒಂದೆಡೆ ಹೇಳಿದ್ದಾನೆ. ಅವನು ತನ್ನ ದೇಶವನ್ನು ಬಿಟ್ಟು ಮಗನೊಂದಿಗೆ ಭಾರತಕ್ಕೆ ಬಂದು, ಅಹಮದನಗರದ ಮುರ್ತುಜಾ ನಿಜಾಮಶಾಹನ ಆಸ್ಥಾನದಲ್ಲಿದ್ದನು. ರಾಜಕುಮಾರ ಮೀರಾನ್ ಹುಸೇನನಿಗೆ ಪಾಠ ಹೇಳುತ್ತಿದ್ದನು. ಚಿಕ್ಕ ಫರಿಶ್ತಾ ಅಲ್ಲಿಯ ರಾಜಪುತ್ರರೊಂದಿಗೆ ಬೆಳೆದನು.

ಫರಿಶ್ತಾ ಚಿಕ್ಕವನಿದ್ದಾಗಲೇ ತಂದೆಯನ್ನು ಕಳೆದುಕೊಂಡನು. ಏಕಾಂಗಿಯಾದ ಅವನು ಎಳವೆಯಲ್ಲಿಯೇ ನಿಜಾಮನ ಆಸ್ಥಾನದಲ್ಲಿ ಅಧಿಕಾರ ಪಡೆದುಕೊಳ್ಳುವಲ್ಲಿ ಸಮರ್ಥನಾದನು. ಆತನು ಕೆಲವು ದಿನಗಳ ವರೆಗೆ ಮುರ್ತುಜಾ ನಿಜಾಮಶಾಹನ ರಹಸ್ಯ ಸಲಹೆಗಾರನಾದನಲ್ಲದೆ, ಗುಪ್ತಚಾರ ದಳದ ಹಾಗೂ ಅಂಗರಕ್ಷಕರ ಮುಖ್ಯಸ್ಥನೂ ಆಗಿದ್ದನು. ರಾಜಕುಮಾರ ಮೀರಾನ್ ಹುಸೇನನ ಕೊಲೆಯಾದ ನಂತರ ಫರಿಶ್ತಾ ಅಹಮದನಗರವನ್ನು ಬಿಟ್ಟು ಕ್ರಿ.ಶ. ಸು. ೧೫೮೯ರಲ್ಲಿ ಬಿಜಾಪುರಕ್ಕೆ ಬಂದನು. ಬಿಜಾಪುರದಲ್ಲಿ ಅದು ಎರಡನೆಯ ಇಬ್ರಾಹಿಮ ಆದಿಲಶಹನ ಕಾಲವಾಗಿತ್ತು. ಇಬ್ರಾಹಿಮನು ಚಿಕ್ಕವನಾಗಿದ್ದುದರಿಂದ ದಿಲಾವರಖಾನನು ಆಡಳಿತ ನಡೆಸುತ್ತಿದ್ದನು.

ಬಾದಶಹನ ಸಮವಯಸ್ಕನಾಗಿದ್ದ ಫರಿಶ್ತಾನನ್ನು ಆಸ್ಥಾನದಲಿಟ್ಟುಕೊಂಡು ದಿಲಾವರಖಾನನು ಇಬ್ರಾಹಿಮನಿಗೆ ಪರಿಚಯಿಸಿದನು. ಶಾಹದುರ್ಗ ಯುದ್ಧದಲ್ಲಿ ಬಿಜಾಪುರದ ಪರವಾಗಿ ಫರಿಶ್ತಾ ಹೋರಾಡಿದನು. ಅನಂತರದ ದಿನಗಳಲ್ಲಿ ಅಲ್ಲಿಯೇ ದಿಲಾವರಖಾನನನ್ನು ಆಡಳಿತದಿಂದ ಕಿತ್ತೊಗೆದಾಗ ಫರಿಶ್ತಾ ಸೇನಾಪತಿ ಜಮಾಲಖಾನನ ಕೈಯಲ್ಲಿ ಸೆರೆಸಿಕ್ಕು, ಅಹಮದನಗರದ ಜೈಲಿನಲ್ಲಿರಬೇಕಾಯಿತು. ತುಸು ದಿನಗಳಲ್ಲಿ ಅಲ್ಲಿಂದ ಹೇಗೋ ಪಾರಾಗಿ ಶಿರಾಜದ ಇನಾಯತಖಾನನ ಮುಖಾಂತರ ಕ್ರಿ.ಶ. ಸು. ೧೫೯೩ರಲ್ಲಿ ಮತ್ತೆ ಇಬ್ರಾಹಿಮನ ಆಸ್ಥಾನಕ್ಕೆ ಬಂದನು.

ಫರಿಶ್ತಾ ಬರೆದ ಮೊದಲ ಪುಸ್ತಕ 'ಇಖ್ತಿಯಾರಾತೆ ಕಾಸಿಮಿ' [ಕಾಸೀಮನ ಸಂಗ್ರಹ] ಎಂಬ ವೈದ್ಯಕೀಯ ಗ್ರಂಥವೆಂದು ಹೇಳಲಾಗುತ್ತದೆ. ಆದುದರಿಂದ ಅವನು ಮೂಲತಃ ವೈದ್ಯಕೀಯ ವಿಷಯದಲ್ಲಿ ಪರಿಣತನಾದ ಒಬ್ಬ ವೈದ್ಯನಾಗಿರಬೇಕು. ಅದರೊಂದಿಗೆ ಅವನು ರಾಜ್ಯದ ರಾಜಕೀಯದಲ್ಲೂ ತೊಡಗಿಸಿಕೊಂಡಿದ್ದನು. ಜೊತೆಗೆ ದೇಶದಲ್ಲಿಯ ರಾಜಕೀಯದ ಆಗುಹೋಗುಗಳಲ್ಲೂ ಆಸಕ್ತಿ ವಹಿಸುತ್ತಿದ್ದನು.

ಎರಡನೆಯ ಇಬ್ರಾಹಿಮ ಆದಿಲಶಹನು ಸ್ವತಃ ವಿದ್ವಾಂಸನಿದ್ದನು. ಮತ್ತು ವಿದ್ವಾಂಸರನ್ನು ಗುರುತಿಸುತ್ತಿದ್ದನು. ಫರಿಶ್ತಾನ ಯೋಗ್ಯತೆಯ ಬಗ್ಗೆ ಗೊತ್ತಾದಾಗ ಅವನನ್ನು ಕರೆದು, 'ರೈದತ್-ಅಲ್-ಸಫಾ' ಎಂಬ ಇತಿಹಾಸ ಗ್ರಂಥವನ್ನು ಕೊಟ್ಟು, "ಭಾರತದಲ್ಲಿಯ ಮುಸ್ಲಿಮರ ಇತಿಹಾಸವನ್ನು ಈ ವರೆಗೆ ಯಾರೂ ಚೆನ್ನಾಗಿ ಬರೆದಿಲ್ಲವೆಂದು" ಹೇಳಿದನು. ನಿಜಾಮುದ್ದೀನನು ಬರೆದಿರುವ ಇದು ತುಂಬ ಸಂಕ್ಷಿಪ್ತವಾಗಿದೆ. ಇದರಲ್ಲಿ ದಕ್ಷಿಣ ಭಾರತದ ಮುಸ್ಲಿಮರ ಇತಿಹಾಸವು ತಪ್ಪುಗಳಿಂದ ಕೂಡಿದೆ –ಎಂದು ಹೇಳಿದನು. ಆದ್ದರಿಂದ ಭಾರತದಲ್ಲಿ ಮುಸ್ಲಿಮರು ಬಂದು ರಾಜ್ಯ ಸ್ಥಾಪನೆಮಾಡಿದಂದಿನಿಂದ ಇಂದಿನ ವರೆಗಿನ ಅವರ ಚರಿತ್ರೆಯನ್ನು ಬರೆಯಲು ಆದೇಶಿಸಿದನು. ಭಾರತದಲ್ಲಿ ಮೊಟ್ಟ ಮೊದಲು ಕಾಲಿಟ್ಟ ಮುಸ್ಲಿಮನಿಂದ ಹಿಡಿದು ಇಂದಿನ ವರೆಗಿನ [ತನ್ನ ಕಾಲದ ವರೆಗಿನ] ಚರಿತ್ರೆಯನ್ನು ಅದರಲ್ಲಿ ದಾಖಲಿಸಲು ಹೇಳಿದನು. ಅದರಲ್ಲಿ ದಕ್ಷಿಣ ಭಾರತದ ಮುಸ್ಲಿಮರ ಸವಿವರ ಚರಿತ್ರೆ ಬರಬೇಕೆಂದೂ ಅಲ್ಲಿಯ ಚರಿತ್ರೆಗೆ ಆಧಾರಗಳಿರಬೇಕೆಂದೂ ನಡೆದ ಘಟನೆಗಳನ್ನು ಯಥಾವತ್ತಾಗಿ ಚಿತ್ರಿಸಬೇಕಲ್ಲದೆ ವರ್ಣನೆಗಳಿಂದ ಅದು ಮುಕ್ತವಾಗಿರಬೇಕೆಂದೂ ಆದೇಶಿಸಿದನು. ಅದರಂತೆ ಫರಿಶ್ತಾ ಚರಿತ್ರೆಯನ್ನು ಬರೆಯಲು ಪ್ರಾರಂಭಿಸಿದನು.

ಈ ಮಧ್ಯ ಆತನು ಕ್ರಿ.ಶ. ೧೫೯೪ರಲ್ಲಿ ರಾಜಕುಮಾರ ಡ್ಯಾನಿಯಲ್ ಮಿರ್ಜಾನ ಮದುವೆಯ ನಿಶ್ಚಯಕಾರ್ಯಕ್ಕೆ ವಧು ಬೇಗಂ ಸುಲ್ತಾನಾಳನ್ನು ಬಿಜಾಪುರದಿಂದ ಅಹ್ಮದನಗರದ ವರೆಗೆ ಕರೆದುಕೊಂಡು ಹೋದನು. ಮುಂಗಿ ಪೈಠಣದಲ್ಲಿ ಜರುಗಿದ ನಿಶ್ಚಯದಲ್ಲೂ ಅವನು ಭಾಗವಹಿಸಿದ್ದನು. ಬಳಿಕ ಬುರ್ಹಾಣಪುರದ ವರೆಗೂ ಅವಳೊಂದಿಗೆ ಹೋಗಿದ್ದನು. ಕ್ರಿ.ಶ. ೧೬೦೬ರಲ್ಲಿ ಮೊಗಲ ಬಾದಶಹ ಜಹಾಂಗೀರನ

ಆಸ್ಥಾನಕ್ಕೂ ಬಿಜಾಪುರದ ಪರವಾಗಿ ಹೋಗಿದ್ದನು, ಲಾಹೋರದ ಹತ್ತಿರ ಜಹಾಂಗೀರನನ್ನು ಕಂಡಿದ್ದನು.

ಫರಿಶ್ತಾ, ಕ್ರಿ.ಶ. ೧೬೧೨ರ ವರೆಗೆ ಇತಿಹಾಸ ಬರೆದಿದ್ದರೂ ಬಿಜಾಪುರ ಇತಿಹಾಸದ ಘಟನೆಗಳ ವಿವರ ಮಾತ್ರ ಕ್ರಿ.ಶ. ೧೫೯೬ರ ವರೆಗೆ ಬಂದಿದೆ. ಫರಿಶ್ತಾ ಕ್ರಿ.ಶ. ೧೬೧೨ರಲ್ಲಿ ಸತ್ತಿರಬಹುದೆಂದು, ಅವನ ಗ್ರಂಥವನ್ನು ಇಂಗ್ಲಿಷ್‌ಗೆ ಅನುವಾದಿಸಿದ ಕ್ಯಾಪ್ಟನ್ ಬ್ರಿಗ್ಸ ಊಹಿಸಿದ್ದಾನೆ. ಇನ್ನೊಬ್ಬ ವಿದ್ವಾಂಸ ಎಂ.ಜಿ.ಮೊಹಲ್ ಎಂಬವನು ಫರಿಶ್ತಾ ಕ್ರಿ.ಶ. ೧೬೨೩ರ ಮೊದಲು ಸತ್ತಿರಲಿಕ್ಕಿಲ್ಲ ಎನ್ನುತ್ತಾನೆ.

ಪ್ರಾರಂಭದಲ್ಲಿ ಫರಿಶ್ತಾ, ತನ್ನ ಗ್ರಂಥಕ್ಕೆ 'ಗುಲ್ಶನ್-ಎ-ಇಬ್ರಾಹಿಮಿ' ಎಂಬ ಹೆಸರನ್ನಿಟ್ಟಿದ್ದನು. ಅನಂತರ ಕೆಲವು ಬದಲಾವಣೆಗಳನ್ನು ಮಾಡಿ ಅದಕ್ಕೆ 'ನವರಸ ನಾಮಾ' ಎಂದು ಕರೆದನು. ಮೊದಲನೆಯದು ತನ್ನ ಆಶ್ರಯದಾತ ಎರಡನೆಯ ಇಬ್ರಾಹೀಮನ ಹೆಸರಿನಲ್ಲಿದ್ದರೆ, ಅನಂತರದ್ದು ಇಬ್ರಾಹೀಮನ ಪ್ರಿಯವಿಷಯವಾದ 'ನವರಸ'ಗಳಿಗೆ ಸಂಬಂಧಿಸಿದ್ದಾಗಿದೆ. ಆದರೆ ಫರಿಶ್ತಾನ ಈ ಕೃತಿಯನ್ನು 'ತಾರೀಖ-ಎ-ಫರಿಶ್ತಾ' ಎಂದೇ ವಿಶ್ವದಾದ್ಯಂತ ಗುರುತಿಸಲಾಗಿದೆ. ಈ ಗ್ರಂಥದ ಮೊದಲ ಪ್ರತಿಯನ್ನು ಕ್ರಿ.ಶ.೧೬೦೬ರಲ್ಲಿ ತನ್ನ ಆಶ್ರಯದಾತ ಎರಡನೆಯ ಇಬ್ರಾಹಿಮನಿಗೆ ಸಮರ್ಪಿಸಿದನಾದರೂ, ಸಾಯುವ ವರೆಗೆ ಆತನು ತನ್ನ ಗ್ರಂಥವನ್ನು ತಿದ್ದುತ್ತಲೇ ಇದ್ದನೆಂದು ಹೇಳಲಾಗುತ್ತದೆ.

'ತಾರೀಖ-ಎ-ಫರಿಶ್ತಾ' ಗ್ರಂಥವು ಪ್ರಸ್ತಾವನೆ ಹಾಗೂ ಸಮಾರೋಪಗಳನ್ನಲ್ಲದೆ ೧೨ ಅಧ್ಯಾಯಗಳನ್ನೊಳಗೊಂಡಿದೆ. ಭಾರತೀಯರ ಹಿಂದೂ ಭಾವನೆಗಳನ್ನು, ಚರಿತ್ರೆ ಪುರಾಣಗಳನ್ನು ಉಲ್ಲೇಖಿಸುತ್ತ, ಭಾರತದಲ್ಲಿ ಮುಸ್ಲಿಮರ ಆಗಮನದ ವಿವರಗಳೊಂದಿಗೆ ತನ್ನ ಇತಿಹಾಸವನ್ನು ಪ್ರಾರಂಭಿಸುತ್ತಾನೆ. ತಾನು ಬರೆಯುತ್ತಿರುವ ಈ ಚರಿತ್ರೆಗೆ ಉಪಲಬ್ಧವಿದ್ದ ಸುಮಾರು ೨೫ ವಿವಿಧ ಇತಿಹಾಸ ಗ್ರಂಥಗಳನ್ನು ಆಕರವಾಗಿ ಬಳಸಿಕೊಂಡಿದ್ದೇನೆಂದು ಆತನೇ ಪ್ರಾರಂಭದಲ್ಲಿ ಹೇಳಿಕೊಂಡಿದ್ದಾನೆ. ಭಾರತದಲ್ಲಿಯ ಮುಸ್ಲೀಮರ ಚರಿತ್ರೆಯಾದ ಇದರಲ್ಲಿ ಚಿಕ್ಕ ಪುಟ್ಟ ಸಂಸ್ಥಾನಗಳ ಯಾವ ವಿವರಗಳನ್ನೂ ಅವನು ಬಿಟ್ಟಿಲ್ಲ. ಅವುಗಳಲ್ಲಿ ಕೆಲವನ್ನು ವಿವರವಾಗಿ ವರ್ಣಿಸಿದ್ದಾನೆ.

ಮಧ್ಯಯುಗೀನ ದಕ್ಷಿಣ ಭಾರತ ಇತಿಹಾಸವನ್ನು, ಅದರಲ್ಲಿಯೂ ಬಿಜಾಪುರದಲ್ಲಿ ನಡೆದ ಪ್ರತಿಯೊಂದು ಘಟನೆಗಳನ್ನು ಅವನು ದಾಖಲಿಸಿದ್ದಾನೆ. ಯೂಸುಫ ಆದಿಲಶಾಹ, ಇಸ್ಮಾಯಿಲ್, ಮಲ್ಲೂ, ಮೊದಲ ಇಬ್ರಾಹೀಮ, ಮೊದಲ ಅಲಿ, ಹಾಗೂ ಎರಡನೆಯ ಇಬ್ರಾಹೀಮ ಆದಿಲಶಹನ ಕಾಲದಲ್ಲಿ ಜರುಗಿದ ತಪಶೀಲನ್ನು ವಿವರವಾಗಿ ಕೊಟ್ಟಿದ್ದಾನೆ. ವರುಷಗಳನ್ನು ನಮೂದಿಸುವಾಗ ಅಲ್ಲಲ್ಲಿ ತುಸು ಹಿಂದು ಮುಂದಾಗಿರಬಹುದಾದರೂ, ಬಿಜಾಪುರದ ಆದಿಲಶಾಹಿಗಳ ಪ್ರಾರಂಭದ ಇತಿಹಾಸವನ್ನು ಫರಿಶ್ತಾನಷ್ಟು ಖಚಿತವಾಗಿ ಯಾರೂ ಹೇಳಿಲ್ಲ. ಅವನು ಬಿಜಾಪುರ ಮತ್ತು ಅಹ್ಮದನಗರ ಆಸ್ಥಾನಗಳಲ್ಲಿ

ಇದ್ದವನಾದ್ದರಿಂದ ಮತ್ತು ಮೊಗಲ ಸಾಮ್ರಾಟ ಜಹಾಂಗೀರನನ್ನು ಮುಖತಃ ಕಂಡವನಾದ್ದರಿಂದ ಕ್ರಿ. ಶ. ೧೫೭೦ರಿಂದ ೧೬೧೨ರ ವರೆಗೆ ದಾಖಲಿಸಿದ ಘಟನೆಗಳನ್ನು ಆತ ಕಣ್ಣಾರೆ ಕಂಡವನಾಗಿದ್ದಾನೆ.

ಫರಿಶ್ತಾನೇ ಹೇಳಿಕೊಂಡಿರುವಂತೆ ಅವನ ಗ್ರಂಥದ ಭಾಷೆ ಸರಳ ಹಾಗೂ ವರ್ಣನಾರಹಿತ ಪರ್ಶಿಯನ್ ಭಾಷೆ ಆಗಿದೆ. ಅದು ಪೂರ್ವಗ್ರಹದೋಷ ಹಾಗೂ ಪಕ್ಷಪಾತದಿಂದ ಮುಕ್ತವಾಗಿದೆ ಎಂದಿದ್ದಾನೆ. ಆತ ತನ್ನ ಆಶ್ರಯದಾತನ್ನು ಕೂಡ ಅತಿರಂಜಿತವಾಗಿ ಬಣ್ಣಿಸುವುದಿಲ್ಲ. ಅಷ್ಟೇ ಅಲ್ಲ, ಆತನ ಕುರಿತಾಗಿ ಬರುವ ಕೆಲವು ಅಸಂತೋಷಕರ ಘಟನೆಗಳನ್ನು ಕೂಡ ಬರೆದಿದ್ದಾನೆ. ತಾನು ಮುಸ್ಲಿಮನಾಗಿದ್ದರೂ ಇತರ ಮತಗಳನ್ನು ಕುರಿತು ಹೇಳುವಾಗ ಉಳಿದ ಮುಸ್ಲಿಮ ಇತಿಹಾಸಕಾರರಿಗಿಂತ ಸಂಯಮದಿಂದ ವರ್ತಿಸಿದ್ದಾನೆ. ತನ್ನ ಹಿಂದಿನವರ ಇತಿಹಾಸ ಗ್ರಂಥಗಳಿಂದ ಘಟನೆಗಳನ್ನು ಹೆಕ್ಕಿ ತೆಗೆವಲ್ಲಿಯೂ ಅಪರೂಪದ ಜಾಣ್ಮೆಯನ್ನು ತೋರಿದ್ದಾನೆ, ಪ್ರಮುಖ ಘಟನೆಗಳನ್ನು ದಾಖಲಿಸಿದ್ದಾನೆ.

ಪ್ರಸ್ತುತ ಅನುವಾದ

'ತಾರೀಖಿ-ಎ-ಫರಿಶ್ತಾ' ಇತಿಹಾಸ ಗ್ರಂಥವನ್ನು ಅನುವಾದಿಸಲು ಕೈಗೆತ್ತಿಗೊಂಡಾಗ ನಮ್ಮ ಎದುರಿಗೆ ೩ ಪ್ರತಿಗಳು ಇದ್ದುವು. ೧. ಸಾಲಾರಜಂಗ ವಸ್ತುಸಂಗ್ರಹಾಲಯದ ಪರ್ಶಿಯನ್ ಹಸ್ತಪ್ರತಿ ೨. ಕ್ರಿ ಶ. ೧೮೨೯ರಲ್ಲಿ ಕ್ಯಾಪ್ಟನ್ ಬ್ರಿಗ್ಸ್‌ನಿಂದ ಇಂಗ್ಲಿಷ್‌ಗೆ ಅನುವಾದವಾಗಿ ಪುನರ್ಮುದ್ರಣಗೊಂಡ ಎರಡು ಸಂಪುಟಗಳು, ೩. ಅಬ್ದುಲ್ ಹೈ ಖ್ವಾಜಾ ಅವರಿಂದ ಉರ್ದು ಭಾಷೆಗೆ ಅನುವಾದಗೊಂಡು ಉತ್ತರಪ್ರದೇಶದ ಬಂಡಾದಿಂದ ಪ್ರಕಟವಾದ ಎರಡು ಬೃಹತ್ ಸಂಪುಟಗಳು. ಇವುಗಳಲ್ಲಿ ಸಹಜ ಮತ್ತು ಶೀಘ್ರವಾಗಿ ಕನ್ನಡಕ್ಕೆ ಅನುವಾದಗೊಳ್ಳಬಹುದಾದ ಪ್ರತಿಗಳೆಂದರೆ ಇಂಗ್ಲಿಷ್‌ನ ಎರಡು ಸಂಪುಟಗಳು. ಕ್ಯಾಪ್ಟನ್ ಬ್ರಿಗ್ಸ್‌ನ ಅನುವಾದವೇನೋ ಸರಿಯಾಗಿದೆ. ಆದರೆ ಅವನು ಅಲ್ಲಲ್ಲಿ ಬಿಟ್ಟಿದ್ದಾನೆಂಬ ದೂರು ಇದೆ. ಹೀಗಾಗಿ ಇದನ್ನು ಬಿಟ್ಟು ಸಾಲಾರಜಂಗ ವಸ್ತುಸಂಗ್ರಹಾಲಯದ ಹಸ್ತಪ್ರತಿಯಿಂದಲೇ ಅನುವಾದಿಸಬೇಕೆಂದು ಯೋಚಿಸಿದಾಗ, ಸುಮಾರು ೨೦೦೦ ಪುಟಗಳಷ್ಟು ಬೃಹತ್ತಾದ, ಅದರಲ್ಲಿಯೂ ಪರ್ಶಿಯನ್ ಭಾಷೆಯ ಈ ಹಸ್ತಪ್ರತಿಯನ್ನು ಸಕಾಲದಲ್ಲಿ ಕನ್ನಡಕ್ಕೆ ಅನುವಾದ ಮಾಡಿಕೊಡುವವರು ಸಿಗುವುದು ಕಷ್ಟವೆನಿಸಿತು. ಹೀಗಾಗಿ ಉರ್ದು ಭಾಷೆಯಿಂದ ಅನುವಾದಿಸಲು ವಿದ್ವಾಂಸರು ದೊರೆತ ಕಾರಣ ಅಬ್ದುಲ್ ಹೈ ಖ್ವಾಜಾ ಅವರ ಉರ್ದು ಅನುವಾದವನ್ನು ಆಯ್ಕೆ ಮಾಡಿಕೊಂಡೆವು. ನಾಡಿನ ಸುಮಾರು ಒಂಬತ್ತು ಜನ ವಿದ್ವಾಂಸರಿಗೆ ಈ ಕೆಲಸವನ್ನು ಹೀಗೆ ಹಂಚಿ ಕೊಡಲಾಯಿತು:

ಸಂಪುಟ ೧. ಶ್ರೀ ಬಿ ಜಯಾಚಾರ್ಯ. ನ್ಯಾಯವಾದಿಗಳು, ಯಾದಗಿರಿ ಮತ್ತು ಶ್ರೀಮತಿ ಬಾನು ಮುಷ್ತಾಕ್. ನ್ಯಾಯವಾದಿಗಳು, ಹಾಸನ.

ಸಂಪುಟ ೨. ಡಾ. ಅಬ್ದುಲ್ ಹಮೀದ, ತಿಪಟೂರು ಮತ್ತು ಶ್ರೀ ಎಂ.ಎಸ್. ನದಾಫ, ಬಿಜಾಪುರ.

ಸಂಪುಟ ೩. ಪ್ರೊ. ವಸಂತ ಕುಷ್ಟಗಿ, ಶ್ರೀಮತಿ ರತ್ನಾ ಮಣ್ಣೂರ, ಗುಲಬರ್ಗಾ ಮತ್ತು ಡಾ. ಅಮೀರುದ್ದೀನ್ ಖಾಜಿ, ಬಿಜಾಪುರ.

ಸಂಪುಟ ೪. ಶ್ರೀ ಹಸನ ನಯೀಮ ಸುರಕೋಡ, ರಾಮದುರ್ಗ ಮತ್ತು ಡಾ. ರಘೋತ್ತಮರಾವ ದೇಸಾಯಿ, ಐಎಫ್ಎಸ್ [ನಿವೃತ್ತ], ಬೆಂಗಳೂರು.

ಇವರಿಂದ ಅನುವಾದವಾಗಿ ಬಂದ ಹಸ್ತಪ್ರತಿಗಳನ್ನು ಮೊದಲು ಇಂಗ್ಲಿಷ್ ಅನುವಾದದೊಂದಿಗೆ, ಅನಂತರ ಪರ್ಶಿಯನ್ ಹಸ್ತಪ್ರತಿಯೊಂದಿಗೆ ತುಲನೆ ಮಾಡಿ ಕೊನೆಗೆ ಮೇಲಿನಂತೆ ೪ ಸಂಪುಟಗಳಲ್ಲಿ ಪ್ರಕಟಿಸುವುದೆಂದು ನಿರ್ಧರಿಸಲಾಯಿತು.

ಹೀಗೆ ೮ ಜನರಿಂದ ಬಂದ ಹಸ್ತಪ್ರತಿಗಳಲ್ಲಿ ಭಾಷೆಯ ದೃಷ್ಟಿಯಿಂದ ಕೆಲವನ್ನು ಪರಿಷ್ಕರಿಸುವ ಅಗತ್ಯ ಕಂಡುಬಂದಿತು. ಈ ಕೆಲಸದಲ್ಲಿ, ಡಾ. ಎಂ.ಎಸ್.ಮದಭಾವಿ, ಬಿಜಾಪುರ, ಡಾ. ಎಸ್.ಕೆ. ಕೊಪ್ಪ, ಇಂಡಿ ಮತ್ತು ಶ್ರೀಮತಿ ರತ್ನಾ ಮಣ್ಣೂರ, ಗುಲ್ಬರ್ಗಾ ಅವರು ತುಂಬ ಸಹಾಯ ಮಾಡಿದರು. ಕನ್ನಡ ಅನುವಾದವನ್ನು ಪರ್ಶಿಯನ್ ಹಸ್ತಪ್ರತಿಯೊಂದಿಗೆ ಪರಿಶೀಲಿಸಿದವರು ಮೌಲಾನಾ ಮಹಿಬೂಬುರ್ ರಹಮಾನ ಮದನಿ. ಹೀಗೆ ಸಿದ್ಧವಾದ ನಾಲ್ಕೂ ಸಂಪುಟಗಳನ್ನು ಮುದ್ರಣಕ್ಕೆ ಯೋಗ್ಯವಾಗುವಂತೆ ಪರಿಷ್ಕರಿಸಿದವರು ಶ್ರೀ ರಂಜಾನ್ ದರ್ಗಾ. ಹೀಗೆ ನೆರವಾದ ಮೇಲಿನ ಎಲ್ಲ ವಿದ್ವಾಂಸರಿಗೆ ಕೃತಜ್ಞತೆಗಳು.

ಈ ಯೋಜನೆಯನ್ನು ರೂಪಿಸುವಲ್ಲಿ, ಮುನ್ನಡೆಸುವಲ್ಲಿ ಉದ್ದಕ್ಕೂ ಮಾರ್ಗದರ್ಶನ ಮಾಡಿದ ಸಮಿತಿಯ ಅಧ್ಯಕ್ಷರಾದ ಡಾ. ಎಂ.ಎಂ. ಕಲಬುರ್ಗಿ ಅವರಿಗೆ, ಸಹಕಾರ ನೀಡಿದ ಸಮಿತಿಯ ಸದಸ್ಯರಿಗೆ ಕೃತಜ್ಞತೆಗಳು.

■

*

ಪರಿವಿಡಿ

೧. ಗುಜರಾತಿನ ಸುಲ್ತಾನರು ೧–೨೪೨

೨. ಮಾಳವ ಮತ್ತು ಮಾಂಡುವಿನ ಬಾದಶಹರುಗಳು ೨೪೩–೨೮೬

೩. ಖಿಲ್ಜಿಸುಲ್ತಾನರು ೨೮೭–೪೦೮

೪. ಖಿಲ್ಜಿ ಸುಲ್ತಾನರ ಸಂತತಿಯ ನಂತರ
ಮಾಳವ ದೇಶದ ಪರಿಸ್ಥಿತಿ ೪೦೯–೪೩೪

೫. ಬುರ್ಹಾನ್‌ಪುರದ ಫಾರೂಖಿ ಸುಲ್ತಾನರು ೪೩೫–೪೯೬

೬. ಪೂರ್ಬಿಯಾ ಸುಲ್ತಾನರು ೪೯೭–೫೫೪

೭. ಸಲಾತೀನ ಷರ್ಖಿಯಾ ೫೫೫–೫೭೨

೮. ಸಿಂಧಸುಲ್ತಾನರು ಮತ್ತು ಠಠ್ಠ ಸುಲ್ತಾನರು ೫೭೩–೫೮೪

೯. ಜಾಮವಂಶದ ಶಾಹರು ೫೮೫–೫೯೪

೧೦. ಸಿಂಧದ ಬುಡಕಟ್ಟಿನ ಅರಸರು ೫೯೫–೬೦೬

೧೧. ಅರ್ಗನೂ ಸುಲ್ತಾನರು ೬೦೭–೬೨೦

೧೨. ಮುಲ್ತಾನದ ಸುಲ್ತಾನರು ೬೨೧–೬೪೬

೧೩. ಕಾಶ್ಮೀರದ ಸುಲ್ತಾನರು ೬೪೭–೬೬೪

■

I. ಗುಜರಾತಿನ ಸುಲ್ತಾನರು

*

೧. ಫರ್‌ಹತ್-ಉಲ್-ಮುಲ್ಕ್

ಫರ್‌ಹತ್-ಉಲ್-ಮುಲ್ಕ್‌ನ ಸೈನ್ಯಾಧಿಪತ್ಯ :

ಮುಬಾರಕ್ ಶಾಹಿ ಇತಿಹಾಸ ಮತ್ತು ಅದೇ ತೆರನಾದ ಕೆಲವು ಗ್ರಂಥಗಳಿಂದ ನಮಗೆ ತಿಳಿದುಬರುವುದೇನೆಂದರೆ, ದೆಹಲಿಯ ಬಾದಶಹನಾದ ಸುಲ್ತಾನ್ ಫಿರೋಜ್‌ಶಾಹನು ಫರ್‌ಹತುಲ್‌ಮುಲ್ಕ್ (ಮಗ್ರಹ್)ನನ್ನು ಗುಜರಾತಿನ ಶಾಸಕನನ್ನಾಗಿ ಹಾಗೂ ಸೇನಾಧಿಪತಿ (ಪ್ರಧಾನ ದಂಡನಾಯಕ)ನಾಗಿ ನೇಮಿಸಿದ್ದನು. ಸುಲ್ತಾನ್ ಫಿರೋಜ್‌ಶಾಹನ ಮರಣಾನಂತರ ಆತನ ಮಗನಾದ ಸುಲ್ತಾನ್ ಮಹಮ್ಮದ್ ಶಾಹನೂ ಸಹ ಫರ್‌ಹತ್-ಉಲ್-ಮುಲ್ಕನನ್ನೇ ತನ್ನ ಸ್ಥಾನದಲ್ಲಿ ಮುಂದುವರಿಯುವಂತೆ ಆಜ್ಞಾಪಿಸಿದ್ದನು.

ಮುಸ್ಲಿಮೇತರರ ಪಕ್ಷಪಾತಿ :

ಮೂಲತಃ ಫರ್‌ಹತ್-ಉಲ್‌ಮುಲ್ಕ್‌ನ ದೃಢ ನಿಶ್ಚಯವೇನಾಗಿತ್ತೆಂದರೆ, ದೆಹಲಿಯ ಬಾದಷಹರನ್ನು ವಿರೋಧಿಸುವುದು ಇದರಿಂದಾಗಿ ಗುಜರಾತಿನ ಜಮೀನ್ದಾರರನ್ನು ಮತ್ತು ಮುಸ್ಲಿಮೇತರ(ಹಿಂದು)ರನ್ನು ಓಲೈಸುವುದು. ಅವರೊಂದಿಗೆ ಉತ್ತಮ ಹಾಗೂ ಪ್ರೇಮಪೂರ್ವಕ ವ್ಯವಹಾರವನ್ನು ಬೆಳೆಸಿದನು. ಅವರನ್ನು ತನ್ನ ಆಪ್ತರನ್ನಾಗಿಸಿಕೊಂಡನು. ಆ ಜನರನ್ನು ಸಂತೋಷಪಡಿಸಲಿಕ್ಕಾಗಿ ಎಂತಹ ರೀತಿ-ನೀತಿ, ನಿಯಮಗಳನ್ನು ಸೃಷ್ಟಿಸಿದನೆಂದರೆ, ಇಸ್ಲಾಂ ಧರ್ಮದ ರೀತಿ ನೀತಿಗಳಿಗೆ ಅವು ವಿರುದ್ಧವೇ ಆಗಿದ್ದುವು.

ಉಲೇಮಾಗಳ ವಿರೋಧ :

ಫರ್‌ಹತ್-ಉಲ್-ಮುಲ್ಕ್‌ನ ಈ ನೀತಿಗಳಿಂದಾಗಿ ಗುಜರಾತಿನ ಎಲ್ಲಾ ಇಸ್ಲಾಂ ಧರ್ಮದ ವಿದ್ವಾಂಸರು (ಉಲೇಮಾ)ಗಳು ಆತನನ್ನು ವಿರೋಧಿಸತೊಡಗಿದರು. ಅವರುಗಳು ಹಿಜರಿ ಶಕೆ ೭೯೩ರಲ್ಲಿ ದೆಹಲಿಯ ಸುಲ್ತಾನ್ ಮಹಮ್ಮದಶಾಹನ ಹತ್ತಿರ ಒಂದು ಅರ್ಜಿಯನ್ನು ಸಲ್ಲಿಸಿದರು. ಅದರ ವಿಷಯ ಹೀಗಿತ್ತು. -"ಫರ್‌ಹತ್-

ಉಲ್-ಮುಲ್ಕ್‌ನು ಇಂದಿನ ದಿನಗಳಲ್ಲಿ ದುರಾಶೆಯಲ್ಲಿ ಬಿದ್ದಿದ್ದು, ಅಹಂಕಾರ ಹಾಗೂ ಆತ್ಮಪ್ರಶಂಸೆಯಲ್ಲಿ ಮುಳುಗಿದ್ದಾನೆ. ಆತನು ಎಷ್ಟರ ಮಟ್ಟಿಗೆ ಹಿಂದೂ ಧರ್ಮೀಯರ ಪಕ್ಷಪಾತಿಯಾಗಿದ್ದಾನೆಂದರೆ ಸೋಮನಾಥ ಮಂದಿರದ ಮೂರ್ತಿಪೂಜಕರ ಮುಖಂಡತ್ವವನ್ನು ತಾನೇ ವಹಿಸಿಕೊಂಡಿದ್ದಾನೆ. ಇಸ್ಲಾಂ ಧರ್ಮದ ನಿಯಮಗಳು ಹಾಗೂ ಸಂಸ್ಕಾರಗಳು ಜನರಿಂದ ದಿನೇ ದಿನೇ ಕಡಿಮೆಯಾಗುತ್ತಾ ಹೋಗುತ್ತಿವೆ. ಮಸೀದಿಗಳಲ್ಲಿ ಎಲ್ಲಿಯೂ ನಮಾಜ್ ಪಾರ್ಥನೆಯನ್ನು ಸಲ್ಲಿಸುವವರು ಕಾಣುತ್ತಿಲ್ಲ. ಇಮಾಮರುಗಳು ಮಸೀದಿಯ ಮಿಂಬರ್(ಗದ್ದುಗೆ)ಗಳನ್ನು ನೋಡಲು ಆಗದಂತಹ ಪರಿಸ್ಥಿತಿಯುಂಟಾಗಿದೆ. ಈ ಪರಿಸ್ಥಿತಿಗಳ ಕಾರಣದಿಂದಾಗಿ ಹುಜೂರರಲ್ಲಿ ಪ್ರಾರ್ಥಿಸುವುದೇನೆಂದರೆ-ಇಸ್ಲಾಮಿನ ಉನ್ನತಿ ಹಾಗೂ ಷರೀಯತ್‌ನ ನಿಯಮಗಳ ಪಾಲನೆಗೋಸ್ಕರ ಸಾಧ್ಯವಾದಷ್ಟು ಬೇಗ ಯಾವುದಾದರೊಂದು ದಿಟ್ಟ ಹೆಜ್ಜೆಯನ್ನು ತಾವು ಇಡಬೇಕಾಗಿದೆ. ಇಲ್ಲದಿದ್ದರೆ ಕಾಲ ಮಿಂಚಿ ಹೋಗುವ ಸಾಧ್ಯತೆಗಳಿವೆ".

ಆಜಂ ಹುಮಾಯೂನನು ಗುಜರಾತಿನ ಶಾಸಕನಾಗುವುದು :

ಇಸ್ಲಾಮೀ ವಿದ್ವಾಂಸರುಗಳ ಅರ್ಜಿಯನ್ನು ಓದಿದ ಬಾದಶಹನು ಬಹಳ ದುಃಖಿತನಾದನು. ಗುಜರಾತಿನಲ್ಲಿ "ದೀನ್-ಎ-ಇಸ್ಲಾಂ"ನ್ನು ಮರು ಸ್ಥಾಪಿಸುವ ಉಪಾಯಗಳನ್ನು ಯೋಚಿಸತೊಡಗಿದನು.ಬಹಳ ಚಿಂತನ-ಮಂಥನಗಳ ನಂತರ ಬಾದಶಹನು ಗುಜರಾತಿನ ಆಡಳಿತವನ್ನು ತನ್ನ ಒಬ್ಬ ಅಮೀರನಾದ ಆಜಂ-ಹುಮಾಯೂನ್ ಜಫರ್‌ಖಾನ್ ಬಿನ್ ವಜೀಹುಲ್ ಮುಲ್ಕ್‌ನಿಗೆ ಹಸ್ತಾಂತರಿಸಿದನು. ಇಸ್ಲಾಮಿ ಹಿಜರಿ ಶಕೆ ರಬೀವುಸ್ಸಾನಿ ತಿಂಗಳ ಮೂರನೇ ದಿನಾಂಕ ೭೯೩ ಹಿಜರಿಯಲ್ಲಿ ಆಜಂ ಹುಮಾಯೂನನಿಗೆ ದೆಹಲಿ ಬಾದಶಹರಿಂದ ಗುಜರಾತಿನ ಶಾಸಕತ್ವದ ವಿಶೇಷ ಬಿರುದು-ಬಾವಲಿಗಳು ದೊರೆತವು. ಬಾದಶಹರುಗಳಿಗೆ ಲಭಿಸುವ ಶ್ವೇತಛತ್ರ-ಚಾಮರಗಳು, ಕೆಂಪು ನಿಶಾನೆಗಳು ಬಹಳ ಗೌರವಾದರಗಳಿಂದ ದಯಪಾಲಿಸಲ್ಪಟ್ಟವು. ಮೊದಲಿನ ಶಾಸಕನಿಗಿಂತ ಹೆಚ್ಚಿನ ಗೌರವಾದರಗಳು ಈತನಿಗೆ ಲಭಿಸಿದ್ದುದು ವಿಶೇಷವಾಗಿತ್ತು.

ಆಜಂ ಹುಮಾಯೂನನ ಬೀಳ್ಕೊಡಿಗೆ :

ಆಜಂ ಹುಮಾಯೂನನು ಅಂದಿನಿಂದಲೇ ಬಾದಶಹರ ಅಪ್ಪಣೆಯನ್ನು ಪಡೆದು, ತಾನು ನೆಲೆಸಿದ್ದ ಹೌಸ್-ಎ-ಖಾಸ್-ಸ್ಥಾನಕ್ಕೆ ಬಂದು ತನ್ನ ಎಲ್ಲ ಸಾಮಾನು ಸರಂಜಾಮುಗಳನ್ನು ಸಂಗ್ರಹಿಸಿಕೊಂಡು ಮಾರನೇ ದಿನವೇ ಹೊರಡಲು ಸಿದ್ಧನಾದನು. ಸ್ವತಃ ದೆಹಲಿಯ ಬಾದಶಹರಿಂದ ಬೀಳ್ಕೊಡಿಗೆಯನ್ನು ಪಡೆದನು. ಬಾದಶಹರು ವಿಶೇಷವಾಗಿ ಕೆಲವು ಸಲಹೆ ಸೂಚನೆಗಳನ್ನಿತ್ತು ಅಲ್ಲಿಂದ ಹೊರಡಲು ಆಜ್ಞೆಯನ್ನಿತ್ತರು.

■

*

೨. ಸುಲ್ತಾನ್ ಮುಜಫರ್ ಗುಜರಾತಿ

ಜನ್ಮ :

ಸುಲ್ತಾನ್ ಮುಜಫರ್‌ಶಾಹನ ಜನ್ಮ ಹಿಜರಿ ಶಕೆ ೭೪೩– ಮೊಹರಂ ತಿಂಗಳ ೨೫ನೇ ತಾರೀಖಿನಂದು ದೆಹಲಿಯಲ್ಲಿ ಆಗಿತ್ತು. ಆತನ ತಂದೆ ದೆಹಲಿಯ ಬಾದಶಹನಾದ ಸುಲ್ತಾನ್ ಫಿರೋಜ್‌ಶಾಹನು ಶರಾಬ್(ಮದ್ಯದ)ನ ಸೇವಕನಾಗಿದ್ದನು. ಆ ಹುದ್ದೆಯಿಂದ ಏಳಿಗೆಯನ್ನು ಪಡೆಯುತ್ತಾ ರಾಜ–ಮಹಾರಾಜನ ದರ್ಜೆಗೇರಿದನು. ಸುಲ್ತಾನ್‌ರ ಮಕ್ಕಳ ಪ್ರೀತಿಗೂ ಪಾತ್ರನಾದನು.

ಗುಜರಾತಿನ ಸುಬೇದಾರನ ಹುದ್ದೆ :

ದೆಹಲಿಯ ಸುಲ್ತಾನ್ ಮಹಮ್ಮದ್‌ಶಾಹನ ಶಾಸನ ಕಾಲದಲ್ಲಿ ಜಫರ್‌ಖಾನನು ತನ್ನ ಉತ್ತಮ ಗುಣಗಳಿಂದಾಗಿ ಒಳ್ಳೆಯ ಹೆಸರನ್ನು ಗಳಿಸಿಕೊಂಡಿದ್ದನು. ಆತನು ರಾಜಕಾರಣಗಳಲ್ಲೂ ಹೆಚ್ಚು ಬುದ್ಧಿವಂತಿಕೆಯನ್ನು ಪ್ರದರ್ಶಿಸುತ್ತಿದ್ದನು. ಅಷ್ಟು ಹೊತ್ತಿಗೆ ಗುಜರಾತಿನ ಇಸ್ಲಾಮಿ ವಿದ್ವಾಂಸರ (ಉಲೇಮಾಗಳ) ಅರ್ಜಿ ಸಹ ಸುಲ್ತಾನ್ ಮಹಮ್ಮದಶಾಹನ ಕೈಸೇರಿತ್ತು. ಹಿಂದೆ ಹೇಳಿದಂತೆ ಜಫರ್‌ಖಾನನಿಗೆ ಗುಜರಾತಿನ ಸುಬೇದಾರನ ಹುದ್ದೆಯು ಸಿಕ್ಕಿತು.

ಬಿರುದುಗಳು ಹಾಗೂ ಸನ್ಮಾನ :

ದೆಹಲಿಯ ಬಾದಶಹನ ಆಜ್ಞಾನುಸಾರವಾಗಿ ಆತನ ಮಂತ್ರಿಗಳು (ವಜೀರರು) ಜಫರ್‌ಖಾನನ ಹುದ್ದೆಯನ್ನು ಮಾತ್ರ ಸೃಷ್ಟಿಸಿ ಆತನ ಬಿರುದು–ಬಾವಲಿಗಳ ಹಾಗೂ ಸನ್ಮಾನಗಳ ವಿವರವನ್ನು ಕೈಬಿಟ್ಟಿದ್ದರು. ಬಾದಶಹನು ಸ್ವತಃ ತನ್ನ ಕೈಯಿಂದಲೇ ವಜೀರರು ಸೃಷ್ಟಿಸಿದ್ದ ನೇಮಕದ ಉಳಿದ ಜಾಗದಲ್ಲಿ ಈ ಶಬ್ದಗಳಿಂದ ಸನ್ಮಾನಿಸುತ್ತಾ "ಬಿರಾದರಂ ಮಜ್ಲುಸ್ ಆಲಿಖಾನ್, ಮುಆಜಂ ಆದಿಲ್ ಯಾಜಿಲ್–ಎ–ಮುಜಾಹಿದ್, ಸಯೀದುಲ್ ಮಿಲ್ಲತ್‌ವಾಲಿದೀನ್ ಜಹೀರುಲ್ಲಾ ಇಸ್ಲಾಂ ವಲ್ ಮುಸ್ಲಿಮೀನ್,

ಅಜದುಸ್ಸಲ್ತನತ್, ಐನುಲ್‌ಮುಲ್ಕ್, ಖಾಮಿಯಲ್ ಕುಫ್ರತಲ್ ಮುಶ್ರಿಕೀನ್, ಖಿತ್ಬಸ್ಸಮಾ ಅಲ್‌ಮ ಆಲಿ, ನಜ್ಮಫಲಿಕ್ ಅಲ್‌ಆಲಿ, ಸಹಫ್ದರ್ ರೋಜ್ ವಗಾತಹಮ್ತನ್, ಖಿಲಾಕುಶಾವ ಕಶೂರ್‌ಗೀರ್, ವ ಅಸಫ್ ತಮೀಜ್, ಜಾಬ್ತಾ ಅಮೂರ್ ನಾಜಿಮ್, ಮುಸಾಲಹ್‌ಜಮ್ಹೂರ್ ಜಿಲ್ ಮುಬಾಮನ್, ವಸ್ಸ ಆದತ್, ಸಾಹೆಬೆ ಅಮರಾಯಿ, ವಲ್‌ಕಿಫಾಯಾತ್ ನಾಸಿರುಲ್ ಅದಲ್, ವಲ್ ಎಹ್‌ಸಾನ್ ದಸ್ತೂತಿಸಾಹೆಬ್, ಅಲ್ ಖಿರಾನ್ ಅಲ್‌ಖತಲಖ್ ಅಜೀಂ ಹುಮಾಯೂನ್ ಜಫರ್‌ಖಾನ್" ಎಂಬ ಬಿರುದುಗಳನ್ನು ಫಾರಸಿ ಭಾಷೆಯ ಶಬ್ಧಗಳಲ್ಲಿ ಹೊಗಳಿ ಆಜ್ಞಾ ಪತ್ರವನ್ನು ಹೊರಡಿಸಿದ್ದನು.

ಸಂತೋಷ ಕೂಟ :

ಜಫರ್‌ಖಾನನು ದೆಹಲಿಯಿಂದ ಪ್ರಯಾಣದ ಮಜಲುಗಳನ್ನು ಪಾರುಮಾಡುತ್ತಾ ಗುಜರಾತ್ ತಲುಪಿದನು. ದಾರಿ ಮಧ್ಯದಲ್ಲಿದ್ದಾಗ ಆತನಿಗೊಂದು ಶುಭ ಸಮಾಚಾರ ಸಿಕ್ಕಿತು. ದೆಹಲಿ ಬಾದಶಹರ ವಜೀರ (ಮಂತ್ರಿ) ತಾತಾರ್‌ಖಾನ್-ಬಿನ್ ಜಫರಖಾನ್‌ನ ಮನೆಯಲ್ಲಿ ಒಂದು ಗಂಡುಮಗುವಿನ ಜನನವಾಗಿತ್ತು. ಜಫರ್‌ಖಾನನು ಆ ಶುಭ ಸಂದೇಶದ ಸವಿನೆನಪಿಗಾಗಿ ಒಂದು ಬೃಹತ್ ಸಂತೋಷ ಕೂಟವನ್ನೇರ್ಪಡಿಸಿದನು. ಜಫರ್‌ಖಾನನು ಈ ಸಂತೋಷದ ಕುರುಹಾಗಿ ತನ್ನ ಎಲ್ಲ ಅಮೀರರಿಗೂ ದೊಡ್ಡ-ದೊಡ್ಡ ಬಹುಮಾನಗಳನ್ನು ನೀಡಿ ಸತ್ಕರಿಸಿದನು.

ನಿಜಾಮ್ ಮುಫರ್‍ರ್‍ರಹಾನಿಗೊಂದು ಜಫರ್‌ಖಾನನ ಪತ್ರ :

ಜಫರ್‌ಖಾನನು ನಾಗ್ವಾರ್ ತಲುಪಿದಾಗ ಕಂಪಾಯತ್‌ನ ಸಾಮಂತ ರಾಜರುಗಳು ನಿಜಾಮ ಮುಫರ್‍ರಹ್‌ನ ವಿರುದ್ಧ ಆತನ ದುರಾಡಳಿತದ ಬಗ್ಗೆ ದೂರುಗಳನ್ನು ಅರ್ಪಿಸಿದರು. ಜಫರಖಾನನು ಅದರಲ್ಲಿ ಧೈರ್ಯ ಸ್ಥೈರ್ಯಗಳನ್ನು ತುಂಬಿ, ಸಮಾಧಾನ ಪಡಿಸಿ ನಿಜಾಮ ಮುಫರ್‍ರಹನಿಗೊಂದು ಪತ್ರವನ್ನು ಬರೆದನು. ಪತ್ರದ ವಿಷಯ-ದೆಹಲಿಯ ಬಾದಶಹರಾದ ಸುಲ್ತಾನ್ ಮಹ್ಮದಶಾಹರವರಿಗೆ ನಿನ್ನ ಬಗ್ಗೆ ವಿಷಯ ತಿಳಿದಿರುವುದೇನೆಂದರೆ- ನೀನು ಕೆಲವು ವರ್ಷಗಳಿಂದ ಪ್ರಜೆಗಳಿಂದ ವಸೂಲಾದ ಕಂದಾಯ ಹಣವನ್ನು ಸರ್ಕಾರಿ ಖಜಾನೆಗೆ ಜಮಾ ಮಾಡದೆ ನಿನ್ನ ಸ್ವಂತ ಖರ್ಚಿಗಾಗಿ ಬಳಸಿಕೊಂಡಿದ್ದೀಯೆ ಇದು ಅಲ್ಲದೆ ಬಹಳ ದಿನಗಳಿಂದ ಪ್ರಜೆಗಳನ್ನು ಹಿಂಸಿಸಿದ್ದೀಯೆ. ನಿನ್ನ ಹಿಂಸೆಗಳಿಗೆ ಒಳಗಾದ ಪ್ರಜೆಗಳು ದೆಹಲಿ ಬಾದಶಹರಲ್ಲಿ ತಮ್ಮ ಅಹವಾಲುಗಳನ್ನು ಹೇಳಿಕೊಂಡಿದ್ದಾರೆ. ಈಗ ಬಾದಶಹರು ಈ ಪ್ರದೇಶದ ಆಡಳಿತ ಜವಾಬ್ದಾರಿಯನ್ನು, ವ್ಯವಸ್ಥೆಯನ್ನು ನನ್ನ ವಶಕ್ಕೆ ಕೊಟ್ಟಿರುತ್ತಾರೆ. ಆದ್ದರಿಂದ ಇಲ್ಲಿಯ ತನಕ ಪ್ರಜೆಗಳಿಂದ ವಸೂಲು ಮಾಡಿರುವ ಕಂದಾಯ ಹಣವನ್ನು ತಕ್ಷಣ ದೆಹಲಿ ಖಜಾನೆಗೆ ರವಾನಿಸಬೇಕು. ಮತ್ತು ನೀನು ಸಹ ದೆಹಲಿ ಬಾದಶಹರ ದರ್ಬಾರಿನಲ್ಲಿ ಹಾಜರಾಗುವುದು ಸೂಕ್ತ.

ನಿಜಾಮ್ ಮುಘರ್ರಹ್‌ನ ಉತ್ತರ :

ಮೇಲಿನ ಪತ್ರಕ್ಕೆ ನಿಜಾಮ ಮುಘರ್ರಹನು ಜಫರಖಾನನಿಗೆ ಉತ್ತರಿಸುತ್ತಾ- ನೀವು ಈಗ ಎಲ್ಲಿಯವರೆಗೆ ಪ್ರಯಾಣಿಸಿದ್ದಿರೋ ಅಷ್ಟು ಮಾತ್ರ ಸಾಕಾಗಿದೆ. ಇಲ್ಲಿಂದ ಮುಂದಕ್ಕೆ ಒಂದು ಹೆಜ್ಜೆಯನ್ನು ಮುಂದುವರಿಸಬಾರದು. ನಾನು ಸ್ವತಃ ದೆಹಲಿಗೆ ಬಂದು ನನ್ನ ಎಲ್ಲಾ ಲೆಕ್ಕವನ್ನು ವಿಷಯವನ್ನು ಬಾದಶಹರ ಎದುರು ನಿನ್ನ ಹಾಜರಿಯಲ್ಲಿಯೇ ಸಾದರಪಡಿಸುತ್ತೇನೆ. ಆದರೆ ಒಂದು ಷರತ್ತಿದೆ. ಅದೇನೆಂದರೆ ನನ್ನನ್ನು ಶಾಹಿ ವಕೀಲರ ಸುಬರ್ದು ವಹಿಸಿಕೊಡಬೇಕು. ಈ ಉತ್ತರ ಓದಿದ ಜಫರಖಾನನು ತೀರ್ಮಾನಿಸಿದ್ದೇನೆಂದರೆ, ಮುಘರ್ರಹನು ನನ್ನ ವಿರುದ್ಧ ದಂಗೆ ಏಳಲು ತೀರ್ಮಾನಿಸಿದ್ದಾನೆಂದು ನಿಶ್ಚಯಿಸಿ, ಅಲ್ಲಿಂದ ಬಾಸಾದಲ್ ಎಂದರೆ ಇಂದಿನ ಅಹಮದಾಬಾದ್ ನಗರದತ್ತ ಪ್ರಯಾಣವನ್ನು ಬೆಳೆಸಿದನು.

ನಿಜಾಮ್ ಮುಘರ್ರಹ್‌ನಿಗೆ ಸಂದೇಶ :

ಇಷ್ಟು ಹೊತ್ತಿಗೆ ನಿಜಾಮ ಮುಘರ್ರಹನು ಗುಜರಾತಿ ಜನರನ್ನು ಮತ್ತು ಮುಸ್ಲಿಮೇತರರನ್ನು ಒಗ್ಗೂಡಿಸಿಕೊಂಡು ಸುಮಾರು ಹನ್ನೆರಡು ಸಾವಿರದಷ್ಟು ಸೈನ್ಯವನ್ನು ಸಿದ್ಧಗೊಳಿಸಿಕೊಂಡಿದ್ದನು. ಯುದ್ಧಕ್ಕೆ ಎಲ್ಲ ರೀತಿಯಲ್ಲಿಯೂ ತಯಾರಾಗಿದ್ದನು. ಈ ಸಮಾಚಾರವನ್ನು ಅರಿತ ಜಫರ್‌ಖಾನನು ಯುದ್ಧಕ್ಕೆ ಮೊದಲು ಒಬ್ಬ ದೂತನನ್ನು ನಹರವಾಲಾ (ಇಂದಿನ ಪಟಣ) ಸ್ಥಳಕ್ಕೆ ಕಳುಹಿಸಿ ಹೀಗೆ ಬರೆದಿದ್ದನು. "ನೀನು ನಿನ್ನ ದುಷ್ಟಶಕ್ತಿಯ ಅಹಂಕಾರಕ್ಕೆ ಒಳಗಾಗಿ ನಿನ್ನ ಬಾದಶಹರಿಗೆ ದ್ರೋಹ ಬಗೆಯುತ್ತಿದ್ದೀಯೆ ಇದು ನಿನಗೆ ಸರಿಯಲ್ಲ. ಮುಸ್ಲಿಮೇತರರು ಮತ್ತು ಗುಜರಾತಿಗಳು ನಂಬಿಕೆಗೆ ಅರ್ಹರಲ್ಲ. ಇವರು ನಮ್ಮಂತಹ ವೀರರ ಮುಂದೆ ನಿಲ್ಲಲಾರರು. ಈಗ ನಿನ್ನ ಮುಂದೆ ಕೇವಲ ಎರಡು ಮಾರ್ಗಗಳು ಮಾತ್ರ ಇವೆ. ಅವುಗಳೆಂದರೆ ಒಂದು ಇಲ್ಲಿಂದಲೇ ನೀನು ತಕ್ಷಣ ದೆಹಲಿಗೆ ಹೋಗುವುದು. ಅಥವಾ ನನ್ನ ಬಳಿಗೆ ಬಂದು ನನ್ನ ಅಮೀರರ (ಮಂತ್ರಿಗಳ) ಗುಂಪಿನಲ್ಲಿ ಸೇರಿಕೊಳ್ಳುವುದು. ಇವೆರಡರಲ್ಲಿ ಯಾವುದಾದರೊಂದು ದಾರಿಯನ್ನು ಸ್ವೀಕರಿಸದೆ ಅಡ್ಡದಾರಿ ಹಿಡಿದಿದ್ದೇಯಾದರೆ, ಮುಂದೆ ಆಗುವ ಆಗುಹೋಗುಗಳಿಗೆ ನೀನೇ ಜವಾಬ್ದಾರನಾಗ ಬೇಕಾಗುತ್ತದೆ-ಎಚ್ಚರಿಕೆ.

ನಿಜಾಮ ಮುಘರ್ರಹ್‌ನ ಅಸಭ್ಯತೆ :

ನಿಜಾಮ ಮುಘರ್ರಹನು ತಾನು ಯೋಚಿಸಿದಷ್ಟು ಶಕ್ತನಾಗಿರಲಿಲ್ಲ. ಅವನ ಭಾಗ್ಯದ ಬಾಗಿಲುಗಳು ಮುಚ್ಚಿಕೊಂಡಿದ್ದುವು. ಅವನ ತಲೆಯ ಮೇಲೆ ಕಾರ್ಮೋಡಗಳು ಕವಿದಿದ್ದುವು. ತಾನು ಸ್ವತಂತ್ರ ಸುಬೇದಾರನಾಗಬೇಕೆಂಬ ದುಸ್ವಪ್ನಗಳ ಮದದಲ್ಲಿ ಜಫರಖಾನನ್ನು ಹೀಯಾಳಿಸಿ ಕೆಟ್ಟ ಮಾತುಗಳಿಂದ ತನ್ನ ಅಹಂಕಾರವನ್ನು ತೋರಿದನು.

ಯುದ್ಧದ ಸಿದ್ಧತೆ :

ನಿಜಾಮ ಮುಘರ್ರಹನು ದಾರಿಗೆ ಬರುವುದಿಲ್ಲವೆಂಬ ವಿಷಯವನ್ನು ಅರಿತ ಜಫರಖಾನನು ವಿವಶನಾಗಿ ತನ್ನ ಸೈನ್ಯವನ್ನು ಯುದ್ಧಕ್ಕೆ ಅಣಿಗೊಳಿಸಿದನು. ವೀರ-ಧೀರ ಬಹಾದ್ದೂರ ಸೈನಿಕರೊಂದಿಗೆ ವಿದ್ಯುತ್ ವೇಗದಲ್ಲಿ ಗುಜರಾತಿನ ನಹರವಾಲಾದತ್ತ ಸಾಗಿದನು. ನಿಜಾಮ ಮುಫರ್ರಹನು ಸಹ ತನ್ನ ಹತ್ತು ಹನ್ನೆರಡು ಸಾವಿರ ಸೈನಿಕರೊಡಗೂಡಿ ನಹರ್‌ವಾಲಾ ಬಿಟ್ಟು ದೂರದಲ್ಲಿಯೇ ಎದುರುಗೊಳ್ಳಲು ಹೊರಟನು. ಪಟ್ಟಣಕ್ಕೆ ಸುಮಾರು ಹನ್ನೆರಡು ಮೈಲಿದೂರದ ಕಾಂಥೋ ಎಂಬ ಸ್ಥಳದಲ್ಲಿ ಎರಡೂ ಸೈನಿಕರ ನಡುವೆ ಘೋರ ಯುದ್ಧ ನಡೆಯಿತು. ಈ ಯುದ್ಧದಲ್ಲಿ ಜಫರಖಾನನಿಗೆ ಗೆಲುವು ಲಭಿಸಿತು. ನಿಜಾಮ ಮುಫರ್ರಹನು ಸೋತು ನಹರವಾಲ ಕೋಟೆಯಲ್ಲಿ ಆಶ್ರಯವನ್ನು ಪಡೆಯಲು ಓಡಿ ಹೋದನು. ಜಫರಖಾನನು ಗೆದ್ದ ಸಂಭ್ರಮದಲ್ಲಿ ನಹರ್‌ವಾಲ ಪಟ್ಟಣದಲ್ಲಿ ಪ್ರವೇಶಿಸಿದನು. ಅಲ್ಲಿನ ಪ್ರಜೆಗಳಿಗೆ ಉತ್ತಮ ಆಡಳಿತವನ್ನು ನ್ಯಾಯ ಸಮ್ಮತವಾಗಿ ನೀಡಲಾರಂಭಿಸಿದನು.

ಕಂಪಾಯತದತ್ತ ಪ್ರಯಾಣ :

ಹಿಜರಿ ಶಕೆ ೭೯೫ರಲ್ಲಿ ಜಫರಖಾನನು ಕಂಪಾಯಕ್ಕೆ ಹೋದನು. ಆ ಪಟ್ಟಣದಲ್ಲಿ ವ್ಯಾಪಾರಿಗಳು ಮತ್ತು ಹೊರ ದೇಶಗಳ ಪ್ರಯಾಣಿಕರು ಹೆಚ್ಚಾಗಿ ವಾಸಿಸುತ್ತಿದ್ದರು. ಜಫರಖಾನನು ಅಲ್ಲಿನ ಪ್ರಜೆಗಳ ಕಷ್ಟಗಳನ್ನು ವಿಚಾರಿಸಿ, ಅವರ ತೊಂದರೆಗಳನ್ನು ನಿವಾರಿಸಿ, ಅಲ್ಲಿ ನ್ಯಾಯವಾದಿಗಳನ್ನು, ಆಡಳಿತಗಾರರನ್ನು ನೇಮಿಸಿ ನಹರ್‌ವಾಲಕ್ಕೆ ಹಿಂತಿರುಗಿದನು.

ಹಿಂದೂ ರಾಜನಿಗೆ ಎಚ್ಚರಿಕೆ :

ಗುಜರಾತಿನ ಒಬ್ಬ ಹಿಂದೂ ರಾಜನು ಇಲ್ಲಿಯ ತನಕ ಜಫರಖಾನನ ಅಧೀನತೆಯನ್ನು ಒಪ್ಪಿಕೊಂಡು ಬರುತ್ತಿದ್ದನು. ಇತ್ತೀಚೆಗೆ ಆತನು ಜಫರಖಾನನ ವಿರುದ್ಧ ಬಂಡೇಳುವ ಸೂಚನೆಗಳು ಕಂಡುಬರುತ್ತಿದ್ದವು. ಹಿಜರಿ ಶಕೆ ೭೯೬ರಲ್ಲಿ ಈ ವಿಷಯವು ಜಫರಖಾನನಿಗೆ ತಿಳಿಯಿತು. ಈ ರಾಜನು ಬಡಪಾಯಿ ಮುಸಲ್ಮಾನರನ್ನು ಜಾತಿ ದ್ವೇಷದೊಂದಿಗೆ ಹಿಂಸಿಸುತ್ತಿದ್ದನು. ಇದನ್ನರಿತ ಖಾನನು ಒಂದು ಸುಶಿಕ್ಷಿತ ಸೈನ್ಯದೊಂದಿಗೆ ರಾಜನನ್ನು ಸೋಲಿಸಲು ಹಾಗೂ ಅವನಿಗೆ ಬುದ್ಧಿಯನ್ನು ಕಲಿಸಲು ಹೊರಟನು. ಆ ರಾಜನು ಕೋಟೆಯನ್ನು ಮುತ್ತಿದ. ಆ ಕೋಟೆಯ ಹೆಸರು 'ಏದರ್' ಎಂದಿತ್ತು. ಇಬ್ಬರಿಗೂ ಅನೇಕ ಕಡೆ ಯುದ್ಧಗಳಾದವು. ಇವುಗಳಲ್ಲಿ ರಾಜನಿಗೆ ಎಲ್ಲ ಕಡೆಗಳಲ್ಲೂ ಸೋಲುಂಟಾಯಿತು.

ಕೊಲೆ–ಸುಲಿಗೆ ಮತ್ತು ಭೀಕರ ಬರಗಾಲ :

ಜಫರ್‌ಖಾನನು ಹಿಂದು ರಾಜನ ಕೋಟೆಗಳನ್ನು ಸುತ್ತುವರಿದು ತುಂಬಾ ಅಡೆತಡೆಗಳನ್ನುಂಟು ಮಾಡಿದನು. ಏದರ್ ಕೋಟೆಯ ಸುತ್ತ–ಮುತ್ತ ಇದ್ದ ಎಲ್ಲ ಕೋಟೆ–ಕೊತ್ತಲುಗಳನ್ನು ವಶಪಡಿಸಿಕೊಂಡನು. ಸಾಕಷ್ಟು ಕೊಲೆ ಸುಲಿಗೆಗಳಾದವು. ಮಂದಿರಗಳು ನೆಲಸಮವಾದವು. ಹಿಂದು ಯುವಕ ಯುವತಿಯರನ್ನು ಸೆರೆ ಹಿಡಿಯಲಾಯಿತು. ಇದೇ ಕಾಲದಲ್ಲಿ ಆ ಪ್ರದೇಶದಲ್ಲಿ ಭೀಕರ ಬರಗಾಲವೂ ಕಾಣಿಸಿತು. ಜನರು ಆಹಾರದ ಅಭಾವದಲ್ಲಿ ನಾಯಿ ಬೆಕ್ಕುಗಳನ್ನು ತಿನ್ನಲಾರಂಭಿಸಿದರು.

ಹಿಂದು ರಾಜನ ಮನಃಪರಿವರ್ತನೆ–ವಿಶ್ವಾಸ :

ರಾಜನು ತನ್ನ ಸೋಲಿನಿಂದಾಗಿ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ತನ್ನ ಮನಸ್ಸು ಬದಲಿಸಿದನು. ತಾನು ಮಾಡಿದ ಕುಕರ್ಮಗಳಿಗೆ ಪಶ್ಚಾತ್ತಾಪವನ್ನು ವ್ಯಕ್ತ ಪಡಿಸುತ್ತ ಜಫರಖಾನನ ಅಧೀನತೆಯನ್ನು ಸ್ವೀಕರಿಸಲು ಮುಂದಾದನು. ರಾಜನು ತನ್ನ ಹಿರಿಯ ಮಗನೊಂದಿಗೆ ತನ್ನ ದರ್ಬಾರಿನ ಹಿರಿಯ ಅನುಭವಿ ಮಂತ್ರಿಗಳ ಜೊತೆಯಲ್ಲಿ ಬಹು ಮೌಲ್ಯ ವಸ್ತುಗಳನ್ನು ಜಫರಖಾನನಿಗೆ ಕಾಣಿಕೆಗಳನ್ನು ಕೊಟ್ಟು ಕೋಟೆಯ ಹೊರಗೆ ಕಳುಹಿಸಿ ಕೊಟ್ಟನು. ಅವರ ಜೊತೆಯಲ್ಲಿ ಈ ಸಂದೇಶವನ್ನು ಸಹ ಕಳುಹಿಸಿದ್ದನು. "ನಾನು ಕೋಟೆಯ ಬೀಗದಕೈಯನ್ನು ಕಳುಹಿಸಲು ತಡಮಾಡಿದುದರ ಉದ್ದೇಶವೇನೆಂದರೆ ನನ್ನ ಮರ್ಯಾದೆಯನ್ನು ಉಳಿಸಿಕೊಳ್ಳುವ ಮತ್ತು ನನ್ನ ರಾಜ್ಯ ಸಂಪತ್ತನ್ನು ರಕ್ಷಿಸಿಕೊಳ್ಳುವುದು ಬಿಟ್ಟರೆ ಮತ್ತಾವ ದುರುದ್ದೇಶವೂ ಇರಲಿಲ್ಲ. ಏಕೆಂದರೆ ನನ್ನ ಆಪ್ತರ ಮುಂದೆ ನಾಚಿಕೆಗೇಡಾಗಬಾರದೆಂಬುದೇ ಆಗಿತ್ತು. ತಾವುಗಳು ನನ್ನ ಹಿಂದಿನ ತಪ್ಪುಗಳನ್ನು ಕ್ಷಮಿಸಬೇಕೆಂದು ಪ್ರಾರ್ಥನೆ. ಮುಂದೆ ಇಂತಹ ತಪ್ಪುಗಳು ನನ್ನಿಂದ ಆಗುವುದಿಲ್ಲವೆಂಬ ಭರವಸೆಯನ್ನು ನಾನು ತಮಗೆ ನೀಡುತ್ತೇನೆ. ಅಷ್ಟೇ ಅಲ್ಲ ಮುಂದಿನ ದಿನಗಳಲ್ಲಿ ತಮ್ಮ ಇಚ್ಛೆಗೆ ವಿರುದ್ಧವಾಗಿ ನಡೆದುಕೊಳ್ಳುವುದಿಲ್ಲವೆಂದು ದೃಢಪಡಿಸುತ್ತೇನೆ".

ಮಲಿಕ್ ರಾಜನ ಪಿತೂರಿ :

ಜಫರಖಾನನು ಹಿಂದು ರಾಜನ ಪ್ರಾರ್ಥನೆಯನ್ನು ಮನ್ನಿಸಿ ಆತನ ತಪ್ಪುಗಳನ್ನು ಕ್ಷಮಿಸಿದನು. ರಾಜನಿಂದ ಕಳುಹಿಸಿದ್ದ ಅಮೂಲ್ಯ ಕಪ್ಪ–ಕಾಣಿಕೆಗಳನ್ನು ಸ್ವೀಕರಿಸಿ ರಾಜನ ಕೋಟೆಯ ಸುತ್ತ ಇದ್ದ ಸೈನಿಕರ ಮುತ್ತಿಗೆಯನ್ನು ಅಲ್ಲಿಂದ ತೆಗೆಸಿದನು. ನಂತರ ಜಫರಖಾನನು ಸೋಮನಾಥದ ಮೇಲೆ ಮುತ್ತಿಗೆ ಹಾಕಲು ಇಚ್ಛಿಸಿದನು. ಆದರೆ ಅಷ್ಟರಲ್ಲಿ ಆತನಿಗೆ ಬೇರೊಬ್ಬರ ಪಿತೂರಿಯ ಸಮಾಚಾರವು ಸಿಕ್ಕಿತು. ಫಾರೂಖಿಯ ಸಲ್ತನತ್ (ಸಾಮ್ರಾಜ್ಯ)ನ ಜುದಾ ಅಲಿಉಲ್‌ಮಲಿಕ ರಾಜ ಅಲ್ ಮುಖಾತಿಬ್–ಬ–ಆದಿಲ್‌ಖಾನ್‌ನು ಆ ದಿನಗಳಲ್ಲಿ ಬಹಳ ಶಕ್ತಿಶಾಲಿ ರಾಜನಾಗಿ ಹೊರಹೊಮ್ಮಿದ್ದಾನೆಂದು

ತನ್ನ ಜಾಗೀರಿಯ ಎಲ್ಲೆಗಳನ್ನು ಮೀರಿ ಹೊರಬಂದು ಕೆಲವು ಕೋಟೆಗಳನ್ನು ವಶಪಡಿಸಿಕೊಳ್ಳುತ್ತಿದ್ದಾನೆಂದು ತಿಳಿಯಿತು. ಖಾನ ದೇಶವನ್ನು ವಶಪಡಿಸಿಕೊಂಡಿರುವ ವಿಷಯವೂ ತಿಳಿಯಿತು. ಮಲಿಕ ಆದಿಲನು ಇನ್ನೂ ಕೆಲವು ಫರಗಣಗಳಾದ ಸುಲ್ತಾನ್‌ಪುರ ಮತ್ತು ನದರ್‌ಬಾರ್ ಕೋಟೆಗಳನ್ನು ವಶಪಡಿಸಿಕೊಳ್ಳುವ ಹುನ್ನಾರದಲ್ಲಿದ್ದಾನೆಂಬುದು ತಿಳಿಯಿತು.

ಮಲಿಕರಾಜನು ಕೋಟೆಯಲ್ಲಿ ಆಶ್ರಯ ಪಡೆದನು :

ಜಫರಖಾನನು ಮಲಿಕ ರಾಜನ ಪಿತೂರಿಯನ್ನು ದಮನ ಮಾಡಲೇಬೇಕೆಂದು ತಿರ್ಮಾನಿಸಿದ್ದನು. ಸೋಮನಾಥಕ್ಕೆ ಮುತ್ತಿಗೆ ಹಾಕುವುದನ್ನು ಕೈ ಬಿಟ್ಟು ಇತ್ತ ಗಮನ ಹರಿಸಲು ನಿರ್ಧರಿಸಿದನು. ಮಲಿಕ ರಾಜನು ಬಹಳ ಬುದ್ಧಿವಂತನೂ ಆಡಳಿತದಲ್ಲಿ ಚಾಣಾಕ್ಷ್ಯನಾಗಿರುವುದನ್ನೂ ಅರಿತಿದ್ದನು. ಆದರೂ ಆತನನ್ನು ಸೋಲಿಸುವ ಶಕ್ತಿ ಸಾಮರ್ಥ್ಯಗಳು ತನ್ನಲ್ಲಿವೆ ಎಂಬ ಧೈರ್ಯವೂ ಇತ್ತು. ಆದರೆ ಮಲಿಕನು ಸ್ವಲ್ಪ ದಿನ ಸ್ಥಬ್ಧನಾಗಿ ಕೋಟೆಯಲ್ಲಿ ಸೇರಿಕೊಂಡನು.

ಮಲಿಕ ರಾಜನು ಜಫರಖಾನನೊಂದಿಗೆ ಸಂಧಿ :

ಮಲಿಕರಾಜನು ಅನುಭವಿ ವಿದ್ವಾಂಸರ, ಬುದ್ಧಿವಂತರ ಸಲಹೆಯ ಮೇರೆಗೆ ಜಫರಖಾನನೊಂದಿಗೆ ಸ್ನೇಹವನ್ನು ಬೆಳೆಸಿಕೊಳ್ಳುವ ನಿರ್ಧಾರಕ್ಕೆ ಬಂದನು. ತನ್ನ ದರ್ಬಾರಿನ ವಿದ್ವಾಂಸರ ಒಂದು ಗುಂಪನ್ನು (ನಿಯೋಗವನ್ನು) ಜಫರಖಾನನ ಹತ್ತಿರಕ್ಕೆ ಕಳುಹಿಸಿ, ಸಂಧಿ ಮಾಡಿಕೊಳ್ಳುವ ಇಚ್ಛೆಯನ್ನು ವ್ಯಕ್ತಪಡಿಸಿದನು. ಜಫರಖಾನನು ವಿದ್ವಾಂಸನಾಗಿದ್ದ. ಪರಿಸ್ಥಿತಿಗಳನ್ನು ಅರ್ಥಮಾಡಿಕೊಳ್ಳುವ ಚತುರನಾಗಿದ್ದ. ಸಂಪೂರ್ಣ ಗುಜರಾತನ್ನು ತನ್ನ ಹಿಡಿತಕ್ಕೆ ಸೆಳೆದು ಆಳಬೇಕೆಂಬ ಮಹದಾಶೆ ಅವನಲ್ಲಿತ್ತು. ತನ್ನಲ್ಲಿಗೆ ಬಂದ ಆ ಮಲಿಕರಾಜನ ವಿದ್ವಾಂಸರನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದ. ಅವರಿಗೆ ಗೌರವಾದರಗಳನ್ನು ನೀಡಿದ. ಮಲಿಕ ರಾಜನ ಇಚ್ಛೆಯಂತೆ ಸಂಧಿ ಮಾಡಿಕೊಳ್ಳಲು ಇಚ್ಛಿಸಿದ. ಪರಸ್ಪರ ಕಾಣಿಕೆಗಳ ವಿನಿಮಯವೂ ನಡೆಯಿತು. ಅಲ್ಲಿಂದ ಜಫರಖಾನನು ನಹರ್‌ವಾಲ ಎಂಬ ತನ್ನ ನೆಲೆಗೆ ವಾಪಸ್ಸಾದನು. ಅಂದಿನಿಂದ ಗುಜರಾತಿಗಳ ಮತ್ತು ಬುರ್‌ಹಾನ ಪುರದ ಸಂಬಂಧಗಳು ಸ್ನೇಹಪೂರ್ಣವಾಗಿ ನಡೆಯಲಾರಂಭಿಸಿದವು.

ಮಲಿಕರಾಜನ ಗೌರವ ಪೂರ್ಣ ವ್ಯವಹಾರ :

ಮಲಿಕರಾಜನು ತಾನು ಫಾರೂಖಿಯ ವಂಶದವನೆಂಬ ವಿಚಾರದಲ್ಲಿ ಯಾವತ್ತೂ ಹೆಮ್ಮೆ ಪಡುತ್ತಿದ್ದನು. ಈ ವಿಷಯ ಜಫರಖಾನನಿಗೂ ಗೊತ್ತಿತ್ತು. ಇಬ್ಬರಲ್ಲೂ ಪರಸ್ಪರ ಗೌರವ ಪೂರ್ಣ ಪತ್ರವ್ಯವಹಾರಗಳು ನಡೆಯುತ್ತಿದ್ದುವು. ಅನೇಕ ಬಿರುದಾಂಕಿತಗಳಿಂದ ಸಂಬಂಧಗಳನ್ನು ಸುಧಾರಿಸಿಕೊಂಡಿದ್ದರು.

ಜರಂದ ರಾಜನ ಮೇಲೆ ಆಕ್ರಮಣ :

ಹಿಜರಿ ಶಕೆ ೭೭೭ರಲ್ಲಿ ಜಫರ್‌ಖಾನನು ಪಶ್ಚಿಮ ದಿಕ್ಕಿನ ಪಟನ್‌ದ ಹತ್ತಿರವಿದ್ದ ಜರಂದ್ ರಾಜನ ಮೇಲೆ ದಂಡೆತ್ತಿ ಹೋದನು. ಈ ಪ್ರದೇಶದ ಮುಸ್ಲಿಮೇತರರು ತುಂಬಾ ಕೆಟ್ಟ ವರ್ತನೆಗಳಲ್ಲಿ ಮುಳುಗಿದ್ದರು. ಇವರ ಹಿಂಸೆಯಿಂದ ಸಾಮಾನ್ಯ ಪ್ರಜೆಗಳು ತತ್ತರಿಸಿದ್ದರು. ಈ ಜನರ ಉಪಟಳವನ್ನು ಅಡಗಿಸಲು ಅನೇಕ ತಿಂಗಳುಗಳೇ ಕಳೆದವು. ಇವರನ್ನು ಅಡಗಿಸಿ ಅವರಿಂದ ಸಾಕಷ್ಟು ಸಂಪತ್ತನ್ನು ಸಂಗ್ರಹಿಸಿದ. ಅದು ಅಲ್ಲದೇ ಅಲ್ಲಿಂದ ಸುಂದರ ಯುವಕರನ್ನು ಸೆರೆಹಿಡಿದ. ಕೊನೆಗೆ ಜರಂದ್‌ನ ರಾಜನು ವಿಧಿವಶನಾಗಿ ಜಫರಖಾನನಿಗೆ ಶರಣಾದ. ಅನೇಕ ವಿಧದ ಕಪ್ಪ-ಕಾಣಿಕೆಗಳನ್ನು ಜಫರಖಾನನಿಗೆ ನೀಡಿ ಆಧೀನತೆಯನ್ನು ಸ್ವೀಕರಿಸಿದ.

ಸೋಮನಾಥದ ಮೇಲೆ ಆಕ್ರಮಣ :

ಜರಂದ ಕೋಟೆಯನ್ನು ವಶಪಡಿಸಿಕೊಂಡ ನಂತರ ಜಫರಖಾನನು ಸೋಮನಾಥದತ್ತ ತನ್ನ ಸೈನ್ಯದೊಂದಿಗೆ ಪ್ರಯಾಣವನ್ನು ಬೆಳೆಸಿ ಮುತ್ತಿಗೆ ಹಾಕಿದನು. ಅಲ್ಲಿನ ದೇವಸ್ಥಾನದಲ್ಲಿದ್ದ ಮೂರ್ತಿಗಳನ್ನು ನಾಶಪಡಿಸಿ, ಮೂರ್ತಿಪೂಜಕರನ್ನು ಸೆರೆಹಿಡಿದನು. ಅನೇಕ ಕೊಲೆ ಸುಲಿಗೆಯ ನಂತರ ಸೋಮನಾಥದಲ್ಲಿ ಒಂದು ಜುಮ್ಮಾ ಮಸೀದಿಯನ್ನು ಕಟ್ಟಿಸಿದನು. ಷರೀಯತ್‌ವಾದಿಗಳಿಗೆ ಹುದ್ದೆಗಳನ್ನು ನೀಡಿದನು. ಆರಕ್ಷಕ ಠಾಣೆಗಳನ್ನು ಕಟ್ಟಿಸಿ ಅಧಿಕಾರಿಗಳನ್ನು ನೇಮಿಸಿದನು. ನಂತರ ಅಲ್ಲಿಂದ ಪಟನ ನಗರಕ್ಕೆ ಮರಳಿದನು.

ಮಂದಲ್‌ಗೋರ್‌ನ ರಾಜಪೂತರ ಷಡ್ಯಂತ್ರ :

ಹಿಜರಿ ೭೯೮ರಲ್ಲಿ ಮಂದಲಗೋರನ ಮುಸಲ್ಮಾನರು ಜಫರಖಾನನಿಗೆ ಒಂದು ಅರ್ಜಿಯನ್ನು ಹೀಗೆ ಬರೆದರು. –ಇಲ್ಲಿನ ರಾಜಪೂತರು ನಮ್ಮನ್ನು ತುಂಬಾ ಹಿಂಸಿಸುತ್ತಿದ್ದಾರೆ. ಇಲ್ಲಿನ ಮುಸಲ್ಮಾನರು ತಮ್ಮ ಜೀವನದಿಂದಲೇ ಬೇಸತ್ತಿದ್ದಾರೆ. ಅನೇಕರು ತಮ್ಮ ಮನೆ ಮಠ-ಆಸ್ತಿ-ಪಾಸ್ತಿಗಳನ್ನು ಬಿಟ್ಟು ಬೇರೆ ಕಡೆಗೆ ಹೋಗಲು ವಿವಶರಾಗಿದ್ದಾರೆ. ಇಲ್ಲಿನ ಅಧಿಕಾರಿಗಳಿಗೆ ಯಾವ ಕಂದಾಯವನ್ನು ನೀಡದೆ ದೌರ್ಜನ್ಯವೆಸಗುತ್ತಿದ್ದಾರೆ. ತಾವು ಇತ್ತ ಕಡೆಗೆ ಗಮನವನ್ನು ನೀಡಬೇಕೆಂದು ತಿಳಿಸಿದರು.

ರಾಜಪೂತರ ಕೋಟೆಯ ಮೇಲೆ ಆಕ್ರಮಣ :

ಈ ವಿಚಾರವನ್ನು ತಿಳಿದ ಕೂಡಲೇ ಜಫರಖಾನನು ತಕ್ಷಣ ಅತ್ತ ಕಡೆ ಸೈನ್ಯದೊಡನೆ ಪ್ರಯಾಣವನ್ನು ಬೆಳೆಸಿ ಮಂದಲ್‌ಗೋರ್ ತಲುಪಿದನು. ಅಲ್ಲಿನ ಮುಸ್ಲಿಮೇತರ ರಾಜನು ಮುಸಲ್ಮಾನರ ಸೈನ್ಯದೊಂದಿಗೆ ಯುದ್ಧವನ್ನು ಮಾಡಲು ಶಕ್ತನಾಗಿರಲಿಲ್ಲ. ಆ ಕಾರಣದಿಂದಾಗಿ ಅವನು ತನ್ನ ಕೋಟೆಯ ಬಾಗಿಲನ್ನು ಭದ್ರಪಡಿಸಿಕೊಂಡು

ಒಳಹೊಕ್ಕಿದ್ದನು. ಜಫರಖಾನನು ತನ್ನ ಯುದ್ಧ ಕೌಶಲ್ಯದ ಪರಿಣಾಮವಾಗಿ ಕೋಟೆಯ ಒಳಗೆ ಬೀಳುವಂತೆ ಕಲ್ಲಿನಮಳೆ ಸುರಿಸಿದನು. ಆದರೆ ಕೋಟೆ ಬಹಳ ಭದ್ರ ಹಾಗೂ ದೃಢವಾಗಿತ್ತು. ಮೆಂಜನೀಖ್ ಪದ್ಧತಿಯಿಂದ ಯಾವ ಪ್ರಯೋಜನವೂ ಕಾಣದ ಜಫರ್‌ಖಾನನು "ಸಾಬಾತ್"ನ ಪದ್ಧತಿಯನ್ನು ಅನುಸರಿಸಿ ನೋಡಿದ. ಅದರಿಂದ ಯಾವ ಉಪಯೋಗವೂ ಕಾಣಲಿಲ್ಲ.

ಮುಸಲ್ಮಾನರ ವಿಜಯ :

ಮುತ್ತಿಗೆಯು ಬಹಳ ಕಾಲದವರೆಗೆ ನಡೆದ ಕಾರಣ ಜಫರಖಾನನು ತುಂಬಾ ಚಿಂತಿತನಾದ. ಇಷ್ಟರಲ್ಲಿ ಆತನಿಗೆ ಒಂದು ಅಲೌಕಿಕ ಶಕ್ತಿಯ ಸಹಾಯ ದೊರೆತಂತೆ ಭಾಸವಾಯಿತು. ಕೋಟೆಯ ಒಳಗೆ ಪ್ಲೇಗರೋಗವು ಹರಡಿ ಸಾವಿನ ಕೂಗು ಕೇಳಲಾಗದಷ್ಟು ಉಲ್ಬಣಗೊಂಡಿತು. ರಾಜಪೂತ ರಾಜನು ಈ ಪರಿಸ್ಥಿತಿಯನ್ನು ನೋಡಿ ತನ್ನ ಆಪ್ತರನ್ನು ಜಫರಖಾನನ ಹತ್ತಿರಕ್ಕೆ ಪರಿಸ್ಥಿತಿಯನ್ನು ವಿವರಿಸಿ ಹೇಳಲು ಕಳುಹಿಸಿದನು. ಅನೇಕ ಸ್ತ್ರೀಯರು ಮಕ್ಕಳು, ಕೋಟೆಯ ಮೇಲೇರಿ ಅಳುತ್ತಾ ಶಾಂತಿಯನ್ನು ನೆಲೆಸಲು ಕೇಳಿಕೊಂಡರು. ಜಫರಖಾನನು ಪರಿಸ್ಥಿತಿಯನ್ನು ಗಮನಿಸಿ ತಕ್ಷಣ ಅವರ ಪ್ರಾರ್ಥನೆಯನ್ನು ಮನ್ನಿಸಿ ಮುತ್ತಿಗೆಯನ್ನು ತೆರವು ಮಾಡಲು ಒಪ್ಪಿಕೊಂಡನು. ಮುತ್ತಿಗೆಯನ್ನು ತೆರವು ಮಾಡಿದರೆ ಕಪ್ಪ-ಕಾಣಿಕೆಗಳನ್ನು ಕೊಡಲು ಮತ್ತು ಅಧೀನತೆಯನ್ನು ಒಪ್ಪಿಕೊಳ್ಳಲು ರಾಜಪೂತ ರಾಜನು ಒಪ್ಪಿಕೊಂಡಿದ್ದನು. ಅದರ ಪ್ರಕಾರ ಕಾಣಿಕೆಗಳನ್ನು ಪಡೆದ ಜಫರಖಾನನು ಅಜ್ಮೀರಿನ ಹಜ್ರತ್‌ಖ್ವಾಜಾ ಮೊಯಿನುದ್ದೀನ್ ಚಿಶ್ತಿ ಔಲಿಯಾ (ಸಂತರು)ರ ಮಜಾರ್ (ದರ್ಗಾಹ್) ದತ್ತ ಪ್ರಯಾಣವನ್ನು ಬೆಳೆಸಿ ಅವರಲ್ಲಿ ಮುಸಲ್ಮಾನರಿಗೆ ಒಳಿತಾಗಲೆಂದು ಪ್ರಾರ್ಥಿಸಿದ.

ಮುಸ್ಲಿಮೇತರೊಂದಿಗೆ ಸತತ ಯುದ್ಧ ಘೋಷಣೆ :

ಜಫರಖಾನನು ಮುಸ್ಲಿಂ ಜನಾಂಗವನ್ನು ಹಿಂಸಿಸುವ ಮುಸ್ಲಿಮೇತರ ರಾಜರೊಂದಿಗೆ ಸತತವಾಗಿ ಯುದ್ಧಗಳನ್ನು ನಡೆಸುತ್ತಿರಬೇಕೆಂಬ ದೃಢ ನಿಲುವನ್ನು ತಾಳಿದ್ದನು. ಆತನು ಅಜ್ಮೀರಿನಿಂದ ಜಲ್ವಾರಹ್ ಮತ್ತು ಬಲ್ವಾರಹ್ ಕಡೆಗೆ ಪ್ರಯಾಣವನ್ನು ಬೆಳೆಸಿದನು. ಆ ಪಟ್ಟಣಗಳಲ್ಲಿ ಹಿಂದು ರಾಜರ ಆಳ್ವಿಕೆ ಇತ್ತು. ಅವರು ಮೂರ್ತಿ ಪೂಜಕರಾಗಿದ್ದರು. ಜಫರಖಾನನು ಅವರನ್ನು ಸೋಲಿಸಿ ಅವರ ಸಂಪತ್ತು, ಆಸ್ತಿ-ಪಾಸ್ತಿಗಳನ್ನು ತನ್ನ ವಶಕ್ಕೆ ತೆಗೆದುಕೊಂಡನು. ಅಲ್ಲಿನ ದೇವಸ್ಥಾನಗಳನ್ನು ಕೆಡವಿದನು. ಅಲ್ಲಿನ ಸುತ್ತಮುತ್ತಲ ಕೋಟೆಗಳನ್ನು ವಶಪಡಿಸಿಕೊಂಡು ತನ್ನ ಅಮೀರರ ವಶಕ್ಕೆ ಬಿಟ್ಟು ಬಂದನು.

ಸ್ವತಂತ್ರ ಸುಲ್ತಾನನಾಗಿ ಘೋಷಣೆ :

ಜಫರಖಾನನು ದೆಹಲಿಯಿಂದ ಇತ್ತಕಡೆ ಸುಬೇದಾರನಾಗಿ ಬಂದ ಮೂರು

ವರ್ಷಗಳ ತನಕ ತನ್ನ ಜೀವನವನ್ನು ಯುದ್ಧಗಳಲ್ಲೇ ಕಳೆದು ಬಹುತೇಕ ಗುಜರಾತಿನಲ್ಲಿ ಗೆಲುವುಗಳನ್ನು ಪಡೆದಿದ್ದನು. ಮುಸ್ಲಿಮೇತರರೊಂದಿಗೆ ಹೆಚ್ಚು ಯುದ್ಧಗಳಲ್ಲಿ ಗೆದ್ದಿದ್ದನು. ಇದಾದನಂತರ "ಪಟನ್" ಪಟ್ಟಣಕ್ಕೆ ವಾಪಾಸಾದನು. "ತಾರೀಖಿಲ್‌ಗೀ" ಗ್ರಂಥದಲ್ಲಿ ವ್ಯಕ್ತವಾಗಿರುವಂತೆ ಆ ಪ್ರಯಾಣಗಳಿಂದ ಹಿಂತಿರುಗಿದ ನಂತರ ಜಫರಖಾನನು ತನ್ನ ಇಚ್ಛಾನುಸಾರ ಸ್ವತಂತ್ರ ಸುಲ್ತಾನನೆಂದು ಘೋಷಿಸಿಕೊಂಡು ಆಡಳಿತವನ್ನು ನಡೆಸಲಾರಂಭಿಸಿದನು. ತನ್ನ ಹೆಸರಿನ ಆದೇಶ (ಖುತ್ಬಾ) ಕೊಡುತ್ತಿದ್ದನು. ನಾಣ್ಯ ಚಲಾವಣೆಯೊಂದಿಗೆ ತನ್ನನ್ನು "ಮುಜಫರ್‌ಷಾಹ" ಎಂಬ ಹೆಸರಿನಲ್ಲಿ ಕರೆಯಿಸಿಕೊಂಡನು.

ತಾತಾರ್‌ಖಾನ್ ಬಿನ್ ಮುಜಾಫರ್‌ಷಾಹ್ :

ಮುಜಫರಷಾಹನ ಮಗನು ದೆಹಲಿಯ ಸುಲ್ತಾನ್ ಮಹಮ್ಮದಷಾಹನ ವಜೀರನಾಗಿದ್ದನು. ಹಿಜರಿ ೭೯೯ರಲ್ಲಿ ನಾಸಿರುದ್ದೀನನ ಆಡಳಿತ ಕಾಲದಲ್ಲಿ ಸಾರಂಗಖಾನನು ಆತನನ್ನು ಯುದ್ಧದಲ್ಲಿ ಸೋಲಿಸಿ ಮುಲ್ತಾನಿನತ್ತ ಓಡಿಸಿದ್ದ. (ಈ ವಿಚಾರವು "ಸಲಾತೀನ್-ಎ-ದೆಹಲಿ" ಗ್ರಂಥದಲ್ಲಿ ಸವಿಸ್ತಾರವಾಗಿ ಪ್ರಕಟವಾಗಿದೆ) ತಾತರ್ ಖಾನನ ಅಭಿಪ್ರಾಯದಲ್ಲಿ ಆತನು ದೆಹಲಿಯ ಶಾಸನವನ್ನು ತನ್ನ ವಶಕ್ಕೆ ತೆಗದುಕೊಳ್ಳಬೇಕೆಂಬ ಮಹತ್ವಾಕಾಂಕ್ಷೆಯನ್ನು ಹೊಂದಿದ್ದನೆಂದು ತಿಳಿದು ಬರುತ್ತದೆ. ಮಹಮೂದ್‌ಷಾಹ್‌ನ ಆಪ್ತ ವಕೀಲ ಮಲು ಇಕ್ಬಾಲನು ತಾತರ್‌ಖಾನನನ್ನು ನಾಶಗೊಳಿಸಲು ಪಾಣಿಪತ್ತನತ್ತ ಪ್ರಯಾಣವನ್ನು ಬೆಳೆಸಿದನು.

ತಾತಾರ್ ಖಾನ್ ಗುಜರಾತಿನಲ್ಲಿ :

ತಾತರ್ ಖಾನನು ಮಲ್ಲೂ-ಇಕ್ಬಾಲನೊಂದಿಗೆ ಯುದ್ಧ ಮಾಡಲು ಸಿದ್ಧನಿರಲಿಲ್ಲ. ಬೇರೆ ದಾರಿಯಲ್ಲಿ ಸಾಗುತ್ತಾ ದೆಹಲಿಗೆ ತಲುಪಿದನು. ಈತನು ದೆಹಲಿಯ ಕೋಟೆಯನ್ನು ಮುತ್ತಿ ವಶಪಡಿಸಿಕೊಳ್ಳುವ ಹವಣಿಕೆಯಲ್ಲಿದ್ದನು. ಆದರೆ ತಾತರ್ ಖಾನನು ಸಿಗದ ಕಾರಣ ಮಲ್ಲೂ ಇಕ್ಬಾಲನು ಪಾಣಿಪತ್ ನಗರವನ್ನು ವಶಪಡಿಸಿಕೊಂಡು ಬಹಳ ವಿಜೃಂಭಣೆಯಿಂದ ದೆಹಲಿಯತ್ತ ಪ್ರಯಾಣ ಬೆಳೆಸಿದನು. ಈ ಸಲವೂ ತಾತರ್ ಖಾನನು ಮಲ್ಲೂ ಇಕ್ಬಾಲನೊಂದಿಗೆ ಯುದ್ಧವನ್ನು ಮಾಡಲು ಇಷ್ಟಪಡಲಿಲ್ಲ. ಹಿಜರಿ ೮೦೦ರಲ್ಲಿ ತಾತರಖಾನನು ಗುಜರಾತಿನತ್ತ ಪ್ರಯಾಣವನ್ನು ಬೆಳೆಸಿದನು. ಅಲ್ಲಿ ತನ್ನ ತಂದೆಯಾದ ಮುಜಫರಷಾಹನೊಂದಿಗೆ ಸೇರಿಕೊಂಡನು.

ಮುಜಫರಷಾಹನಿಗೆ ದೆಹಲಿಯನ್ನು ಆಳುವ ಆಸೆ :

ಮಗನಾದ ತಾತರಖಾನನು ತನ್ನ ತಂದೆಗೆ ದೆಹಲಿಯ ಸಿಂಹಾಸನವನ್ನು ವಶಪಡಿಸಿಕೊಳ್ಳಲು ಉತ್ತೇಜಿಸಿದನು. ಮುಜಫರಶಾಹನು ಮಗನ ಮಾತಿಗೆ ಬಲಿಯಾಗಿ

ಆ ಉದ್ದೇಶವನ್ನು ಸಫಲಗೊಳಿಸಲು ಸೇನೆಯನ್ನು ಹೆಚ್ಚಿಸಲು ಉದ್ಯುಕ್ತನಾದನು. ಇದೇ ಸಂದರ್ಭದಲ್ಲಿ ತಿಳಿದು ಬಂದಿದ್ದೇನೆಂದರೆ ಅಮೀರ್ ತೈಮೂರನ ಮಗಳ ಮಗನಾದ ಮಿರ್ಜಾ ಪೀರ ಮಹಮ್ಮದನು ಹಿಂದೂಸ್ತಾನದಲ್ಲಿ ಪ್ರವೇಶಿಸಿ ಮುಲ್ತಾನ ನಗರವನ್ನು ತನ್ನ ವಶಕ್ಕೆ ಪಡೆದಿದ್ದಾನೆಂದು ತಿಳಿಯಿತು. ಮಿರ್ಜಾ ಪೀರಮಹಮ್ಮದ್‌ನು ಹಿಂದುಸ್ಥಾನಕ್ಕೆ ಪ್ರವೇಶಿಸಿರುವ ಉದ್ದೇಶ ತೈಮೂರನ ಆಗಮನದ ಸಂಕೇತವೆಂದು ಮುಜಫರಶಾಹನು ತನ್ನ ಬುದ್ಧಿವಂತಿಕೆಯ ಬಲದಿಂದ ಅರಿತುಕೊಂಡನು. ಈ ದೃಷ್ಟಿಯಿಂದ ಈಗ ತಾನು ದೆಹಲಿಯತ್ತ ಹೋಗುವುದು ಸರಿಯಲ್ಲವೆಂದು ತೀರ್ಮಾನಿಸಿ ತನ್ನ ದೆಹಲಿಯನ್ನು ಆಳುವ ಆಸೆಯನ್ನು ಕೈಬಿಟ್ಟನು.

ಏದರ ಕೋಟೆಯ ಮೇಲೆ ಆಕ್ರಮಣ :

ಹಿಜರಿ ೮೦೧ರಲ್ಲಿ ಮುಜಫರಶಾಹನು ತನ್ನ ಮಗ ತಾತಾರ್ ಖಾನನ ಜೊತೆಗೂಡಿ ಏದರ್ ಕೋಟೆಯನ್ನು ಮುತ್ತಿದನು. ಕೊಲೆ-ಸುಲಿಗೆಯನ್ನು ಮಾಡುತ್ತ ಕೋಟೆಯನ್ನು ವಶಪಡಿಸಿಕೊಳ್ಳುವ ಎಲ್ಲ ಪ್ರಯತ್ನಗಳನ್ನು ಮಾಡತೊಡಗಿದನು. ಆದರೆ ಏದರ ಕೋಟೆಯ ರಾಜನಾದ ರಣಮಲ್ಲನು ಮುಜಫರಶಾಹನೊಂದಿಗೆ ಯುದ್ಧ ಮಾಡಲು ಸಿದ್ಧನಾಗಲಿಲ್ಲ. ಈತನು ಬಹಳ ವಿನಯಪೂರ್ವಕವಾಗಿ ವರ್ತಿಸುತ್ತ ತನ್ನ ದೂತನನ್ನು ಸಂಧಿ ಮಾಡಿಕೊಳ್ಳಲು ಮುಜಫರಖಾನನ ಬಳಿಗೆ ಕಳುಹಿಸಿದ. ಸಂಧಿ ಮಾಡಿಕೊಳ್ಳುವುದೇ ಸೂಕ್ತವೆಂದು ತಿಳಿದ ಮುಜಫರಖಾನನು ಒಪ್ಪಿಕೊಂಡನು. ಕಾರಣ ಆ ದಿನಗಳಲ್ಲಿ ದೆಹಲಿಯಲ್ಲಿ ಪಿತೂರಿ, ಷಡ್ಯಂತ್ರಗಳು ಹೆಚ್ಚಾದುದರಿಂದ ಹಿಜರಿ ಶಕೆ ೮೦೧ರ ರಂಜಾನ ತಿಂಗಳಲ್ಲಿ ತನ್ನ ನೆಲೆಯಾಗಿದ್ದ ಪಟನ್‌ಕ್ಕೆ ವಾಪಸ್ಸಾದನು.

ಸೋಮನಾಥದತ್ತ ಸೈನ್ಯ :

ಹಿಜರಿ ೮೦೪ರಲ್ಲಿ ಮುಜಾಫರಶಾಹನಿಗೆ ಸಮಾಚಾರ ಸಿಕ್ಕಿದ್ದೇನೆಂದರೆ-ಅಲ್ಲಿನ ಮುಸ್ಲಿಮೇತರರು ಹಿಂಸೆ, ದೌರ್ಜನ್ಯಗಳನ್ನು ಹೆಚ್ಚಿಸಿ ಮುಸಲ್ಮಾನರನ್ನು ಹಿಂಸಿಸುತ್ತಿದ್ದಾರೆಂದು ಅವರ ಠಾಣೆಗಳನ್ನು ನಾಶಪಡಿಸಿದ್ದಾರೆಂದು ತಿಳಿಯಿತು. ಮಾಮೂಲಿನಂತೆ ತಮ್ಮ ತಮ್ಮ ಮಂದಿರಗಳಲ್ಲಿ ಮೂರ್ತಿ ಪೂಜೆಗಳನ್ನು ಪುನಃ ಸ್ಥಾಪಿಸಿಕೊಂಡಿದ್ದಾರೆಂದು ತಿಳಿಯಿತು. ಈ ಸಮಾಚಾರವು ಮುಜಫರಶಾಹನಿಗೆ ಮುಟ್ಟಿದ ಕೂಡಲೇ ಒಂದು ವಿಶಾಲ ಸೈನ್ಯವನ್ನು ಸೋಮನಾಥದತ್ತ ರವಾನಿಸಿದ್ದೇ ಅಲ್ಲದೆ, ತನ್ನ ನೇತೃತ್ವದಲ್ಲೂ ಸೈನ್ಯವನ್ನು ತೆಗೆದುಕೊಂಡು ಹೊರಟನು. ಯಾವ ದಿನದಂದು ಹಿಂದು ರಾಜರು-ಸೈನಿಕರು ಮುಜಫರಶಾಹನ ಸೈನಿಕರೊಂದಿಗೆ ಯುದ್ಧವನ್ನು ಆರಂಭಿಸಿದ್ದರೋ ಅಂದೇ ಈತನು ಅಲ್ಲಿಗೆ ತಲುಪಿದ್ದನು. ಯುದ್ಧವು ಒಂದು ನದಿಯ ದಂಡೆಯಲ್ಲಿ ಆರಂಭವಾಗಿತ್ತು.

ದೇಬ್ ಕೋಟೆಯ ಮೇಲೆ ವಿಜಯ :

ಇಬ್ಬರಲ್ಲೂ ಘೋರ ಯುದ್ಧವೇ ನಡೆಯಿತು. ಸುತ್ತಲೂ ಎಲ್ಲೆಲ್ಲೂ ರಕ್ತದ ಕೋಡಿಗಳು ಹರಿದವು. ಹಿಂದು ರಾಜರಲ್ಲಿ ಮುಸಲ್ಮಾನ ಸೈನಿಕರನ್ನು ಎದುರಿಸುವಷ್ಟು ಸಾಮರ್ಥ್ಯ ಉಳಿದಿರಲಿಲ್ಲ. ಅವರೆಲ್ಲರೂ ರಾಜನ ಸಮೇತ ದೇಬ್ ಕೋಟೆಯಲ್ಲಿ ಅಡಗಿಕೊಂಡರು. ಮುಜಫರಶಾಹನು ದೇಬ್ ಕೋಟೆಯ ಸುತ್ತಲೂ ಮುತ್ತಿಗೆಯನ್ನು ಬಿಗಿಗೊಳಿಸಿದನು. ಮುಸಲ್ಮಾನರ ತೋಫುಗಳಿಂದ ಕೋಟೆ ತತ್ತರಿಸಿತು. ಒಂದೇ ದಿನದಲ್ಲಿ ದೇಬ್ ಕೋಟೆಯು ಮುಸಲ್ಮಾನರ ವಶವಾಯಿತು. ಮುಜಫರಶಾಹನು ಸೆರೆಸಿಕ್ಕ ರಾಜರನ್ನು ಸಂಹರಿಸಿದನು. ಅನೇಕ ರಾಜರುಗಳನ್ನು ಆನೆಯ ಕಾಲಿನಿಂದ ತುಳಿಸಿ ಸಾಯಿಸಿದನು. ಮುಸಲ್ಮಾನ ಸೈನಿಕರು ಹಿಂದು ರಾಜ ಪರಿವಾರದವರನ್ನು ಸೆರೆಹಿಡಿದರು. ಅವರ ಎಲ್ಲಾ ಸಂಪತ್ತನ್ನು ತಮ್ಮ ವಶಕ್ಕೆ ತೆಗೆದುಕೊಂಡರು.

ಸಿಜ್ದ ಶುಕ್ರಾನ (ವಿಜಯದ ನಿಮಿತ್ತ ಅಲ್ಲಾನ ಪ್ರಾರ್ಥನೆ) :

ಈ ಮಹಾ ಗೆಲುವಿನ ನಂತರ ಸುಲ್ತಾನ್ ಮುಜಫರಶಾಹನು ಸಂತೋಷಕ್ಕೋಸ್ಕರ ಅಲ್ಲಾನಲ್ಲಿ ಪ್ರಾರ್ಥನೆಯನ್ನು ಸಲ್ಲಿಸಿದನು. ಒಂದು ದೇವಸ್ಥಾನವನ್ನು ಕೆಡವಿ ಆ ಜಾಗದಲ್ಲಿ ಒಂದು ಭವ್ಯ ಮಸೀದಿಯ ನಿರ್ಮಾಣವನ್ನು ಮಾಡಿಸಿದನು. ಆ ಪ್ರದೇಶದ ಆಡಳಿತ ವ್ಯವಸ್ಥೆಯನ್ನು ತನ್ನ ಒಬ್ಬ ಅಮೀರನಿಗೆ ವಹಿಸಿ ಯುದ್ಧದಲ್ಲಿ ತನಗೆ ವಶವಾದ ಅಪಾರ ಸಂಪತ್ತಿನೊಂದಿಗೆ 'ಪಟನ್' ವಾಪಸ್ಸಾದನು.

ದೆಹಲಿ ಕೋಟೆಯ ಆಕ್ರಮಣದ ಇಚ್ಛೆ :

ಏದರ್ ಕೋಟೆಯನ್ನು ಗೆದ್ದ ನಂತರ ಮುಜಫರಶಾಹನ ಶಕ್ತಿ ನೂರ್ಮಡಿಯಾಗಿತ್ತು. ಈ ಉತ್ಸಾಹದಲ್ಲಿ ದೆಹಲಿ ರಾಜಧಾನಿಯನ್ನು ತನ್ನ ವಶಕ್ಕೆ ತೆಗೆದುಕೊಳ್ಳಬೇಕೆಂಬ ಮಹತ್ವಾಕಾಂಕ್ಷೆ ಹೆಚ್ಚಿತು. ಅದರ ಜೊತೆಯಲ್ಲಿಯೇ ತನ್ನ ಮಗನಾದ ತಾತಾರ್‌ಖಾನನಿಗೆ **"ಗಿಯಾಸುದೌಲಾ–ವದ್ದೀನ್–ಎ–ಸುಲ್ತಾನ್ ಮಹಮ್ಮದಶಾಹ"** ಎಂಬ ಬಿರುದಿನಿಂದ ಗೌರವಿಸಿದ.

ತಾತಾರ್‌ಖಾನನ ಮರಣ :

ತಾತಾರ್‌ಖಾನನು 'ಅಸಾವಲ್' ಸ್ಥಾನದಿಂದ ಹೊರಟು ಒಂದು ಕಸಬಾ ಹೋಬಳಿ ಸ್ಥಳವಾದ 'ಸುನೂರ್' ಎಂಬಲ್ಲಿಗೆ ತಲುಪಿದನು. ಅಲ್ಲಿ ಅವನು ಕಾಯಿಲೆ ಬಿದ್ದನು. ಬಹಳ ಔಷಧೋಪಚಾರಗಳು ನಡೆದವು. ಆದರೆ ಯಾವುದೇ ಫಲ ಕಾಣಲಿಲ್ಲ. ಕಾಯಿಲೇ ಹೆಚ್ಚಾಗುತ್ತಲೇ ಹೋಯಿತು. ಕೊನೆಗೂ ಈತನು ಕೊನೆ ಉಸಿರೆಳೆದನು. ಮಗನ ಮರಣದ ಸುದ್ದಿಯನ್ನು ತಿಳಿದ ಮುಜಫರಶಾಹ ಬಹಳ ದುಃಖಿತನಾಗಿ ದೆಹಲಿ ಆಕ್ರಮಣದ ಚಿಂತೆಯನ್ನು ಕೈಬಿಟ್ಟನು. ಅಸಾವಲ್ ನಗರಕ್ಕೆ ವಾಪಸ್ಸಾದನು.

ತಾತಾರ್‌ಖಾನನ ಮರಣದ ನೈಜ ವೃತ್ತಾಂತ :

ತಾತಾರಖಾನನ ಮರಣದ ನೈಜ ಕಥೆಯೇ ವಿಚಿತ್ರವಾಗಿದೆ. ಆತನು ತನ್ನ ತಂದೆ ಮುಜಫರಶಾಹನ ವಿರುದ್ಧ ಬಂಡೆದ್ದಿದ್ದನು. ಆ ಕಾಲದಲ್ಲಿ ಮುಜಪರಖಾನನು ಮುದುಕನಾಗಿದ್ದನು. ತಾತಾರಖಾನನು ಈ ಕಾರಣದಿಂದಾಗಿ ತಂದೆಯನ್ನು ಒಂದು ಕೋಟೆಯಲ್ಲಿ ಬಂಧಿಸಿಟ್ಟಿದ್ದನು. ತಂದೆಯ ಸಾಮ್ರಾಜ್ಯಕ್ಕೆ ತನ್ನ ಚಿಕ್ಕಪ್ಪನಾದ ಶಮ್ಸ್‌ಖಾನನಿಗೆ "ವಕೀಲ ಸಲ್ತನತ್" ಆಡಳಿತಾಧಿಕಾರಿಯಾಗಿ ನೇಮಿಸಿದ್ದನು. ತಾನು ಸ್ವತಃ ಸುಲ್ತಾನ್ ನಾಸಿರುದ್ದೀನ್ ಮಹಮ್ಮದಶಾಹ ಎಂಬ ಬಿರುದಿನೊಂದಿಗೆ ಸಿಂಹಾಸನದ ಮೇಲೆ ಕುಳಿತನು. ಈತನು ತನ್ನ ಹೆಸರಿನ ಮುದ್ರೆ ಮತ್ತು ನಾಣ್ಯಗಳಲ್ಲದೆ ತನ್ನದೇ ಆದ ಖಿತ್ಬಾ (ಸಂದೇಶ)ವನ್ನು ಪ್ರಚುರಪಡಿಸಿದ್ದನು.

ಮುಜಫರಶಾಹನ ಬಂಧನ :

ನಂತರ ತಾತಾರಖಾನನು ದೆಹಲಿ ಕೋಟೆಯನ್ನು ಗೆಲ್ಲುವ ಪ್ರಯತ್ನವನ್ನು ಮಾಡಿದನು. ತಂದೆ ಮುಜಫರಶಾಹನು ಮಗನ ಹಿಂಸೆಗಳನ್ನು ಸಹಿಸಲಾರದೆ ತನ್ನ ಯೋಗ್ಯ ಆಪ್ತ ಅಮೀರನನ್ನು ತನ್ನ ತಮ್ಮನಾದ ಶಮ್ಸ್‌ಖಾನನ ಬಳಿಗೆ ಕಳುಹಿಸಿ ಮಗನ ಹಿಂಸಾತ್ಮಕ ಎಲ್ಲ ವಿಚಾರಗಳನ್ನು ತಿಳಿಹೇಳಿ ತನಗೆ ಸಹಾಯ ಮಾಡುವಂತೆ ತಿಳಿಸಿದನು. ಅಷ್ಟೇ ಅಲ್ಲದೇ ತನ್ನನ್ನು ಬಂಧನದಿಂದ ಬಿಡಿಸುವಂತೆಯೂ ಮಹಮ್ಮದ್‌ಶಾಹನನ್ನು ಕೊಲೆ ಮಾಡುವಂತೆಯೂ ಹೇಳಿ ಕಳುಹಿಸಿದನು.

ಶಮ್ಸ್‌ಖಾನನ ಅಭಿಪ್ರಾಯ :

ಶಮ್ಸ್‌ಖಾನನು ಮುಜಫರಖಾನನಿಗೆ ಬರೆದ ಉತ್ತರ ಹೀಗಿತ್ತು– ಮಹಮ್ಮದಶಾಹನು ನಿಮ್ಮ ಮಗನಾಗಿದ್ದಾನೆ. ನೀವು ಆತನನ್ನು ಬಹಳವಾಗಿ ಪ್ರೀತಿಸುತ್ತೀರಿ. ಒಂದು ವೇಳೆ ನಾನು ಆತನನ್ನು ಕೊಲೆ ಮಾಡುವ ಪ್ರಯತ್ನ ಪಟ್ಟಿದ್ದೆ ಆದರೆ ಒಂದು ವೇಳೆ ಆ ಕೆಲಸದಲ್ಲಿ ಸಫಲನಾದದ್ದೇ ಆದರೆ ನೀವು ಮಗನ ಚಿಂತೆಯಲ್ಲಿ ನನ್ನ ವಿರುದ್ಧ ತಿರುಗಿ ಬಿದ್ದರೆ ಏನು ಮಾಡುವುದು? ನೀವು ನನಗೆ ಹಿಂಸೆಯನ್ನು ಕೊಡಬಹುದು ಈ ವಿಚಾರದಲ್ಲಿ ದುಡುಕಿ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕಿಂತ ಮತ್ತೊಮ್ಮೆ ದೀರ್ಘವಾಗಿ ಯೋಚಿಸಿ ಒಂದು ಸರಿಯಾದ ನಿರ್ಧಾರಕ್ಕೆ ಬರುವುದು ಒಳ್ಳೆಯದೆಂದು ತಿಳಿಸಿದನು.

ಮುಜಫರಖಾನನ ಉತ್ತರ :

ನಿನ್ನ ಉತ್ತರದಿಂದ ನನಗೆ ಎಳ್ಳಷ್ಟು ಒಪ್ಪಿಗೆ ಇಲ್ಲವೆಂದು ಮುಜಫರಖಾನನು ಉತ್ತರಿಸುತ್ತಾ ಮಹಮ್ಮದ್‌ಶಾಹನು ನನ್ನೊಂದಿಗೆ ವರ್ತಿಸಿರುವುದು ಯಾವೊಬ್ಬ ಮಗನಿಗೂ ಶೋಭೆ ತರುವಂತಹದಲ್ಲ. ಇಂತಹ ನೀಚನಾದ ಮಗನು ಅವನು

ಮಾಡಿರುವ ಕಾರ್ಯಕ್ಕೆ ತಾನೇ ನಾಶವಾಗುವುದರಲ್ಲಿ ಸಂದೇಹವಿಲ್ಲ. ತಂದೆ ಮಕ್ಕಳ ಆತ್ಮೀಯತೆ ತಾನಾಗಿಯೇ ಅಂತ್ಯವಾಗುತ್ತದೆ. ಈ ಸಂದರ್ಭದಲ್ಲಿ ನನ್ನ ಮುಪ್ಪಿನ ಮೇಲೆ ನೀನು ಕೃಪೆಯನ್ನು ತೋರಲೇಬೇಕಾಗುತ್ತದೆ. ನೀನು ಮಾತ್ರ ಮಹಮ್ಮದಶಾಹನಂತಹ ನೀಚ ಮಗನಿಗೆ ಕಠಿಣವಾದ ಶಿಕ್ಷೆಯನ್ನು ಕೊಡಲೇಬೇಕು. ನನ್ನ ಕಡೆಯಿಂದ ನೀನು ಯಾವ ಚಿಂತೆಯನ್ನು ಮಾಡಬೇಡ. ನಂತರದಲ್ಲಿ ನಾನು ನಿನ್ನ ವಿರುದ್ಧ ಯಾವುದೇ ರೀತಿಯ ಕೆಟ್ಟ ವರ್ತನೆಗಳನ್ನು ಮಾಡುವುದಿಲ್ಲ.

ಮುಜಫರಶಾಹನ ಎರಡನೇ ಸಲದ ಪಟ್ಟಾಭಿಷೇಕ :

ಶಮ್ಸ್‌ಖಾನನಿಗೆ ತನ್ನ ಅಣ್ಣನ ಮೇಲೆ ದಯೆ ಹುಟ್ಟಿತು. ಅಣ್ಣನ ಸ್ಥಿತಿಯನ್ನು ಕಂಡು ತುಂಬಾ ಮರುಗಿದನು. ಆತನು ಮಹಮ್ಮದಶಾಹನಿಗೆ "ಸೂರಖ್" ಎಂಬ ಹಳ್ಳಿಗೆ ಕಳುಹಿಸಿದನು. ಅದು ದೆಹಲಿಗೆ ಹತ್ತಿರವಾದ ಒಂದು ಕಸಬಾ ಹಳ್ಳಿಯಾಗಿತ್ತು. ಅಲ್ಲಿ ಆತನಿಗೆ ವಿಷವನ್ನು ತಿನ್ನಿಸಿ ಕೊಂದನು. ಮುಜಫರಶಾಹನನ್ನು ತಕ್ಷಣ ಬಂಧನದಿಂದ ಬಿಡಿಸಿ ಶಾಹಿ ಸಮೂಹದಲ್ಲಿ ಗೌರವದಿಂದ ಕರೆ ತಂದು ಸಿಂಹಾಸನದ ಮೇಲೆ ಕುಳ್ಳಿರಿಸಲಾಯಿತು. ಎಲ್ಲ ಶಾಹಿ ಅಧಿಕಾರಿಗಳು ಮಹಮ್ಮದಶಾಹನಿಂದ (ಮಗನಿಂದ) ಬೇಸತ್ತಿದ್ದರು. ಈಗ ತಮ್ಮ ಹಿರಿಯ ಶಾಹರನ್ನು ಸಿಂಹಾಸನಾರೂಢರಾದುದನ್ನು ಕಂಡು ಸಂತೋಷಪಟ್ಟರು.

ಮುಜಫರಶಾಹನ ಇಚ್ಛೆ ಹಸನಾಬಾದಿನತ್ತ :

ಇದೇ ಸಂದರ್ಭದಲ್ಲಿ ಮಾಳವ ದೇಶದ ಶಾಸಕನಾದ ದಿಲಾವರಖಾನನ ಮರಣವಾಯಿತು. ಆತನ ಸ್ಥಾನದಲ್ಲಿ ಹೋಷಂಗ್‌ಶಾಹ ಎಂಬವನು ಸಿಂಹಾಸನವನ್ನೇರಿದನು. ಹೋಷಂಗಶಾಹನು ಸಿಂಹಾಸನವನ್ನೇರಲು ತನ್ನ ತಂದೆಗೆ ವಿಷವನ್ನು ನೀಡಿ ಪಟ್ಟಕ್ಕೆ ಬಂದ ಸಮಾಚಾರವು ಎಲ್ಲೆಲ್ಲೂ ಪ್ರಚಾರವಾಯಿತು. ಮುಜಫರಶಾಹನಿಗೂ ಈ ಸಮಾಚಾರವು ಮುಟ್ಟಿತ್ತು. ಹಿಜರಿಶಕೆ ೮೧೦ರಲ್ಲಿ ಮುಜಫರಶಾಹನು ಮಾಳವದ ಧಾರ್ ನಗರದತ್ತ ಅಪಾರ ಸಾಮಾನು ಸರಂಜಾಮಿನೊಂದಿಗೆ ಪ್ರಯಾಣವನ್ನು ಬೆಳೆಸಿದನು.

ಮಾಳವ ದೇಶದ ವಶ :

ಮಾಳವ ಶಾಸಕ ಹೋಶಂಗನು ಯುವಕನಾಗಿದ್ದನು. ಉತ್ಸಾಹಶಾಲಿಯೂ ಆಗಿದ್ದನು. ಆದರೆ ಯುದ್ಧ ನೀತಿಗಳಲ್ಲಿ ಬುದ್ಧಿವಂತನಾಗಿರಲಿಲ್ಲ. ಗುಜರಾತಿನ ಮುಜಫರಶಾಹನೊಂದಿಗೆ ದುಡುಕಿ ಯುದ್ಧವನ್ನು ಒಪ್ಪಿದ. ಇಬ್ಬರಲ್ಲೂ ಭಯಂಕರ ಹೊಡೆದಾಟವು ನಡೆಯಿತು. ಹೋಶಂಗನು ಸೋತು ಸೆರೆಹಿಡಿಯಲ್ಪಟ್ಟನು. ಮುಜಫರಶಾಹನು ಮಾಳವ ದೇಶದಲ್ಲೂ ತನ್ನ ನಾಣ್ಯ, ಮುದ್ರೆ ಮತ್ತು ತನ್ನ ಹೆಸರಿನ ಖುತ್ಬಾ ಚಲಾವಣೆಗೆ ತಂದನು. ಅಲ್ಲಿಯ ಆಡಳಿತವನ್ನು ತನ್ನ ತಮ್ಮನಾದ ನುಸ್ರತ್‌ಖಾನನಿಗೆ ವಹಿಸಿ ತಾನು 'ಅಸಾವಲ್'ನೆಲೆಗೆ ವಾಪಾಸಾದನು.

ಹೋಶಂಗನ ಸೆರೆ :

ಮುಜಫರಶಾಹನು ಹೋಷಂಗನನ್ನು ತನ್ನ ತಮ್ಮನ ಮಗನಾದ ಅಹಮದ್‌ಶಾಹನ ವಶಕ್ಕೆ ಕೊಟ್ಟು ಆತನನ್ನು ಯಾವುದಾದರೊಂದು ಭದ್ರವಾದ ಕೋಟೆಯ ನೆಲಮಾಳಿಗೆಯಲ್ಲಿ ಬಂಧಿಸಿ ಇಡಲು ಆಜ್ಞಾಪಿಸಿದನು. ಅಹಮದ್‌ಶಾಹನು ಆಜ್ಞೆಯನ್ನು ಪಾಲಿಸಿದನು. ಕೆಲವು ತಿಂಗಳುಗಳು ಕಳೆದ ನಂತರ ಹೋಷಂಗನು ಮುಜಫರಶಾಹನಿಗೆ ಒಂದು ಪತ್ರವನ್ನು ಬರೆದಿದ್ದನು. ಬಹಳ ವಿನಯ ಪೂರ್ವಕವಾಗಿ ತನ್ನ ತಪ್ಪುಗಳನ್ನು ಕ್ಷಮಿಸಿ ತನ್ನನ್ನು ಬಿಡುಗಡೆ ಮಾಡಬೇಕೆಂದು ಕೇಳಿಕೊಂಡಿದ್ದನು. ಅಹಮದಶಾಹನು ಸಹ ಇವನ ಬಿಡುಗಡೆಗೆ ಶಿಫಾರಸ್ಸು ಮಾಡಿದ್ದನು. ಇದರ ಪ್ರಕಾರ ಮುಜಫರನು ಕ್ಷಮಿಸಿದ್ದನು.

ಬಿಡುಗಡೆ ಮತ್ತು ತನ್ನ ಸ್ಥಾನವನ್ನು ಪಡೆದದ್ದು :

ಈ ಮಧ್ಯ ಮಾಳವದಲ್ಲಿ ಜನರು ದಂಗೆ ಎದ್ದು ನುಸ್ರತ್‌ಖಾನನನ್ನು ಧಾರ ನಗರದಿಂದ ಓಡಿಸಿದ್ದಾರೆಂಬ ಸುದ್ದಿ ಮುಜಫರಖಾನನಿಗೆ ತಲುಪಿತು. ಅಹಮದಶಾಹನು ಸಿಫಾರಸ್ಸು ಮತ್ತು ಪರಿಸ್ಥಿತಿಯ ಸೂಕ್ಷ್ಮತೆಯನ್ನು ಅರಿತ ಮುಜಫರಶಾಹನು ಹೋಶಂಗನನ್ನು ಬಿಡುಗಡೆಗೊಳಿಸಲು ಆಜ್ಞಾಪಿಸಿದನು. ಆತನಿಗೆ ಶ್ವೇತ ಪತ್ರ-ಚಾಮರಗಳು, ಪಲ್ಲಕ್ಕಿ, ಕೆಂಪು ನಿಶಾನೆಗಳನ್ನು ಗೌರವ ಪೂರ್ವಕವಾಗಿ ನೀಡಿ ಮಾಳವ ಮತ್ತು ಮುಂದದ್‌ಗಳ ಶಾಸಕನನ್ನಾಗಿ ನೇಮಿಸಿದನು. ಹೋಷಂಗನು ಅಹಮದಶಾಹನ ಜೊತೆಯಲ್ಲಿ ಮಾಳವ ದೇಶಕ್ಕೆ ಪ್ರಯಾಣವನ್ನು ಬೆಳೆಸಿದನು. ಅಹಮದಶಾಹನು ಹೋಷಂಗನನ್ನು ಶಾಂತಿಪೂರ್ವಕವಾಗಿ ಗೌರವಾದರಗಳೊಂದಿಗೆ ಮಾಳವ ಸಿಂಹಾಸನದ ಮೇಲೆ ಕೂರಿಸಿದನು. ತಾನು ಗುಜರಾತಿಗೆ ವಾಪಸ್ಸಾದನು.

ಮುಜಫರಶಾಹನ ಮರಣ :

ಮುಜಫರಶಾಹನು ಹಿಜರಿ ಶಕೆ ೮೧೪-ಸಫರ ತಿಂಗಳಲ್ಲಿ ಕಾಯಿಲೆ ಬಿದ್ದನು. ಅದೇ ವರ್ಷದ ರಬೀವುಸ್ಸಾನಿ ತಿಂಗಳಲ್ಲಿ ಮರಣ ಹೊಂದಿದನು. ಸಾಯುವುದಕ್ಕೆ ಮೊದಲೇ ತನ್ನ ತಮ್ಮನ ಮಗ ಅಹಮದಷಾನನ್ನು ತನ್ನ "ಜಾನ್‌ನಶೀನ್" ಅಂದರೆ ತನ್ನ ಸ್ಥಾನದ ಉತ್ತರಾಧಿಕಾರಿ ಎಂದು ಘೋಷಿಸಿದನು. ಏಕೆಂದರೆ ಆತನು ತನ್ನ ಸ್ವಂತ ಮಕ್ಕಳಿಗಿಂತ ಹೆಚ್ಚು ಬುದ್ಧಿವಂತನು ಮತ್ತು ಚತುರ ಆಡಳಿತಗಾರನೆಂಬ ವಿಚಾರವನ್ನು ತಿಳಿದಿದ್ದನು. ಮರಣದ ಸಮಯಕ್ಕೆ ಆತನಿಗೆ ೭೧ ವರ್ಷಗಳು ತುಂಬಿದ್ದವು. ಸುಮಾರು ೨೦ ವರ್ಷಗಳ ಕಾಲ ಆಡಳಿತವನ್ನು ನಡೆಸಿದ್ದನು. ಮರಣಾನಂತರ ಜನರು ಆತನನ್ನು "ಖುದಾ-ಎ-ಗಾನೆಕಬೀರ್" ಹೆಸರಿನಿಂದ ನೆನೆಯುತ್ತಿದ್ದರು.

■

*

೩. ಬಾದಶಹ ಜಮ್‌ಜಾಹ್ ಸುಲ್ತಾನ್ ಅಹಮದ್ ಗುಜರಾತಿ

ಅಹಮದಾಬಾದ ಗುಜರಾತಿನ ತಳಹದಿ :

ಅಹಮದಶಾಹನು ತನ್ನ ದೊಡ್ಡಪ್ಪನ ಉಪದೇಶಕ್ಕನುಸಾರವಾಗಿ ಗುಜರಾತಿನ ಶಾಸಕನಾಗಿದ್ದ. ಆತನು ಬಹಳ ಪ್ರಾಮಾಣಿಕ ಹಾಗೂ ನ್ಯಾಯ-ನೀತಿ ಸಮ್ಮತ ಆಡಳಿತವನ್ನು ಜನರಿಗೆ ನೀಡುತ್ತಿದ್ದನು. ಈ ನೀತಿಯಿಂದಾಗಿ ಸಂಪೂರ್ಣ ಗುಜರಾತಿನ ಪ್ರಜೆಗಳ ಮನಸ್ಸನ್ನು ಗೆಲ್ಲುವವುದರಲ್ಲಿ ಸಫಲನಾಗಿದ್ದನು. ಅಹಮ್ಮದಶಾಹನು ಹುಟ್ಟಿದ ದಿನದಂದು ಇವನ ಜನ್ಮ ಕುಂಡಲಿಯನ್ನು ನೋಡಿದ ಜೋತಿಷಿಗಳ ಪ್ರಕಾರ ಅವರ ಭವಿಷ್ಯ ಹೀಗಿತ್ತು. ಈ ಬಾಲಕನು ಒಬ್ಬ ಶ್ರೇಷ್ಠ ಗುಣಾಢ್ಯವುಳ್ಳವನಾಗುವವನು. ಈ ಕಾರಣದಿಂದಾಗಿ ಈತನ ಹೆಸರು ಪ್ರಪಂಚದಲ್ಲಿ ಶಾಶ್ವತವಾಗಿ ನಿಲ್ಲುವುದು. "ರಾಖಿಮುಲ್‌ಹುರೂಫ್" ಗ್ರಂಥಕರ್ತನಾದ "ಫರಿಶ್ತಾ"ನ ಅಭಿಪ್ರಾಯದಲ್ಲಿ ಇಂದಿನ ಗುಜರಾತಿನ ರಾಜಧಾನಿಯಾದ 'ಅಹಮದಾಬಾದ'ಎಂಬ ಪ್ರಸಿದ್ಧ ನಗರವನ್ನು ಸ್ಥಾಪಿಸಿದ ಕೀರ್ತಿ ಅಹಮದಶಾಹನಿಗೆ ಸಲ್ಲುತ್ತದೆ ಎಂದಿದ್ದಾನೆ.

ಫೈರೋಜ್‌ಖಾನನ ಪಿತೂರಿ :

ಹಿಜರಿ ೮೧೫ರಲ್ಲಿ ಸುಲ್ತಾನ್ ಮುಜಫರಶಾಹನ ಮಗನಾದ ಫೈರೋಜ್‌ಖಾನನಿಗೆ ಅಹಮದಶಾಹನ ಪಟ್ಟಾಭಿಷೇಕದ ಸಮಾಚಾರ ಸಿಕ್ಕಿದ ಕೂಡಲೇ ಆತನ ವಿರುದ್ಧ ಬಂಡಾಯ ಬಾವುಟವನ್ನು ಹಾರಿಸಿದನು. ಈತನ ತಂದೆಯ ಹತ್ತಿರ ಸೇವೆ ಸಲ್ಲಿಸಿದ ಅನೇಕ ಪ್ರಮುಖ ವ್ಯಕ್ತಿಗಳಾದ ಅಮೀರರು, ಹಿಸಾಮುಲ್ ಮುಲ್ಕ ಮುಲ್ಕ್‌ಶೇರ್, ಮುಲ್ಕ್ ಕರೀಂ ಖುಸ್ರೋ, ಜೀವನದೇವ್ ಮತ್ತು ಬಯಾಗದಾಸ್ ಮುಂತಾದವರು ಫೈರೋಜಖಾನನ ನೆರವಿಗೆ ನಿಂತರು. ಇವರೆಲ್ಲರ ಸಲಹೆಯಂತೆ ಸೈನ್ಯ ಸಂಗ್ರಹ ಅದಕ್ಕೆ ಬೇಕಾದ ಎಲ್ಲ ಸಾಮಾನು, ಸಲಕರಣೆ ಕೂಡಿಸುವ ಪ್ರಯತ್ನಗಳಲ್ಲಿ ಮಗ್ನರಾದರು.

ಅಹಮದಶಾಹನ ವಿರೋಧಿಗಳ ಒಕ್ಕೂಟ :

ಅಹಮದಶಾಹನ ಎಲ್ಲ ವಿರೋಧಿಗಳು ಕಂಪಾಯತದ ಶಾಸಕ ಅಮೀರ್ ಮಹಮೂದ್ ತುರ್ಕನನ್ನು ತಮ್ಮ ಒಕ್ಕೂಟದತ್ತ ಸೆಳೆದುಕೊಂಡರು. ಇವನ ನಂತರ ಸುಲ್ತಾನ್ ಮುಜಫರಶಾಹನ ಎರಡನೇ ಮಗನಾದ ಹೀಬತ್‌ಖಾನನು ಸಹ ತನ್ನ ಸೈನ್ಯದೊಂದಿಗೆ ಗುಜರಾತಿನ ಸೂರತ್ ನಗರಕ್ಕೆ ಬಂದಿಳಿದನು. ಹೀಬತ್‌ಖಾನನ ಆಹ್ವಾನದ ಮೇರೆಗೆ ಸಾದತ್‌ಖಾನನು, ಶೇರ್‌ಖಾನನೂ ಬಹಳ ಬೇಗ ಕಂಪಾಯತ್ ನಗರಕ್ಕೆ ಬಂದು ತಲುಪಿದರು. ಅಹಮದಶಾಹನ ಎಲ್ಲ ವಿರೋಧಿಗಳು ನರ್ಮದಾ ನದಿಯ ದಡದಲ್ಲಿ ಬಂದು ಇಳಿದರು. ಎಲ್ಲರೂ ಯುದ್ಧ ಸಂಬಂಧದ ವಿಚಾರ ವಿನಿಮಯದಲ್ಲಿ ತೊಡಗಿದರು. ಈ ಎಲ್ಲಾ ವಿರೋಧಿಗಳು ಸುಮಾರು ಏಳೆಂಟು ಸಾವಿರ ಸವಾರರುಗಳು ಬರೂಜ್ ನಗರದತ್ತ ಹೊರಟರು.

ಸುಲ್ತಾನ್ ಹೋಷಂಗನಲ್ಲಿ ಸಹಾಯಕ್ಕೆ ಪ್ರಾರ್ಥನೆ :

ಫೈರೋಜಖಾನನು ತನ್ನ ವೈಭವವನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ ತನ್ನ ತಲೆಯ ಮೇಲೆ ಶ್ವೇತ ಕೆಂಪು ನಿಶಾನೆಗಳ ಚಾಮರ ಮುಂತಾದ ವೈಭವಗಳನ್ನು ಮೊದಲಿಗಿಂತಲೂ ನೂರ್ಮಡಿಗೊಳಿಸಿದನು. ಇವೆಲ್ಲಾ ಸಿದ್ಧತೆಗಳ ನಂತರ ಸುಲ್ತಾನ್ ಹೂಷೆಂಗನಿಗೊಂದು ಪತ್ರವನ್ನು ಬರೆದನು. ಅದರಲ್ಲಿ ತನಗೆ ನಿಮ್ಮ ಸಹಾಯ ಸಹಕಾರಗಳು ಬೇಕೆಂದು ಕೇಳಿಕೊಂಡಿದ್ದನು. ಆದರೆ ಹೋಷಂಗನು ಒಂದು ಷರತ್ತಿನೊಂದಿಗೆ ಸಹಾಯಕ್ಕೆ ಒಪ್ಪಿದನು. ಆ ಷರತ್ತು ಹೀಗಿತ್ತು.-ಯುದ್ಧದಲ್ಲಿ ನೀನು ಗೆದ್ದರೆ ನಾನು ಬರುವ ಪ್ರತಿಯೊಂದು ಹಂತಕ್ಕೂ ಒಂದು ಕೋಟಿ ತಿನ್‌ಗೆ (ಚಿನ್ನದ ನಾಣ್ಯಗಳು) ಕೊಡಬೇಕೆಂದು ಕೇಳಿದನು.

ಜಮೀನ್ದಾರರಿಗೆ ಬಹುಮಾನಗಳು ಮತ್ತು ಕುದುರೆಗಳ ಕೊಡುಗೆ :

ಬ್ಯಾಗದಾಸ್ ಮತ್ತು ಜೀವನದೇವ ಎಂಬವರು ಫೈರೋಜಖಾನನ ಆಪ್ತ ಸಲಹೆಗಾರರಾಗಿದ್ದರು. ಇವರ ಸಲಹೆಯ ಪ್ರಕಾರ ಶ್ರೀಮಂತ ಜಮೀನ್ದಾರರುಗಳನ್ನು ಸಂತೋಷಪಡಿಸಿಕೊಂಡು ಸಹಾಯ ಸಹಕಾರಗಳನ್ನು ಪಡೆಯುವ ಸಲುವಾಗಿ ಅವರಿಗೆ ಬಹುಮಾನಗಳನ್ನು, ಕುದುರೆಗಳನ್ನು ಕೊಡುಗೆಗಳ ರೂಪದಲ್ಲಿ ಕೊಡಲಾಯಿತು.

ಅಹಮದಶಾಹನ ದೂರದರ್ಶಿತ್ವ :

ಸುಲ್ತಾನ್ ಅಹಮದಶಾಹನು ಯುವಕನು, ಅನನುಭವಿಯಾಗಿದ್ದರೂ ಫೈರೋಜಖಾನನ ಯುದ್ಧ ಬೆದರಿಕೆಯಿಂದ ವಿಚಲಿತನಾಗದೆ ಬಹಳ ಬುದ್ಧಿವಂತಿಕೆಯಿಂದ ವ್ಯವಹರಿಸಲು ನಿಶ್ಚಯಿಸಿದನು. ಯುದ್ಧ ಮಾಡುವುದರಲ್ಲಿ ಅವಸರಪಡಲಿಲ್ಲ. ಆತನು ತನ್ನ ಕೆಲವು ವಿಶೇಷ ಅನುಭವಿ ಅಮೀರರುಗಳ ಸಲಹೆಯಂತೆ

ಫೈರೋಜಖಾನನಿಗೊಂದು ಉಪದೇಶಾತ್ಮಕ ಪತ್ರವನ್ನು ಬರೆದು ಕಳುಹಿಸಿದನು. ಆದರೆ ಫೈರೋಖಾನನ ಆಪ್ತರಾದ ಬ್ಯಾಗ್‌ದಾಸ ಮತ್ತು ಜೀವನ ದೇವರ ಪಿತೂರಿಯಿಂದಾಗಿ ಆ ಪತ್ರದಿಂದ ಯಾವ ಪ್ರಯೋಜನವೂ ಆಗಲಿಲ್ಲ.

ಬಯಾಗ್‌ದಾಸನ ಅಹಂಕಾರ :

ಅಹಮದಶಾಹನಿಗೆ ಯುದ್ಧದ ಹೊರತು ಬೇರೆ ದಾರಿಯೇ ಇರಲಿಲ್ಲ. ಆತನು ಅದಂಭಕರ್ ಎಂಬುವನ ನೇತೃತ್ವದಲ್ಲಿ ತನ್ನ ಸೈನ್ಯವನ್ನು ಫೈರೋಜಖಾನನ ವಿರುದ್ಧ ಯುದ್ಧಕ್ಕೆ ಕಳುಹಿಸಿದನು. ಭಯಂಕರ ಯುದ್ಧ ನಡೆದು ಅದಂಭಕರನಿಗೆ ಸೋಲುಂಟಾಯಿತು. ಫೈರೋಜಖಾನನು ಈ ವಿಜಯದ ಕೀರ್ತಿ ಪತಾಕೆಯನ್ನು ಬಯಾಗ್‌ದಾಸನ ತಲೆಗೆ ಕಟ್ಟಿದನು. ಅದರಿಂದಾಗಿ ಬಯಾಗ್‌ದಾಸನು ತುಂಬಾ ಅಹಂಕಾರಿಯಾಗಿ ಬಿಟ್ಟನು. ತನ್ನ ಸಮಾನ ಮತ್ತಾರೂ ಇಲ್ಲವೆಂಬ ಅಹಂಕಾರದಲ್ಲಿ ಮೆರೆಯತೊಡಗಿದನು. ಈ ವರ್ತನೆಯನ್ನು ಕಂಡ ಇತರೆ ಅಮೀರರುಗಳು ಈತನ ಕೊಲೆ ಮಾಡುವ ಸಂಚಿನಲ್ಲಿದ್ದರು.

ಅಹಮದಶಾಹನ ಸಂದೇಶ ಫೈರೋಜಖಾನನಿಗೆ :

ಈ ಸಂದರ್ಭದಲ್ಲಿ ಫೈರೋಜಖಾನನ ಕೆಲವು ಅಮೀರರುಗಳು ಅವನಿಂದ ಬೇರ್ಪಟ್ಟು ಅಹಮದಶಾಹನೊಂದಿಗೆ ಸೇರಿಕೊಂಡರು. ಅಹಮದಶಾಹನು ಭರೂಜ್‌ದತ್ತ ಪ್ರಯಾಣವನ್ನು ಬೆಳೆಸಿದನು. ಶತ್ರುವಿನ ಹತ್ತಿರದ ಪ್ರದೇಶಕ್ಕೆ ತಲುಪಿ ಫೈರೋಜಖಾನನ ಹತ್ತಿರಕ್ಕೆ ಒಬ್ಬ ದೂತನನ್ನು ಕಳುಹಿಸಿ ಈ ಸಂದೇಶವನ್ನು ತಿಳಿಸಿದನು. "ಸುಲ್ತಾನ್ ಮುಜಫರಶಾಹನು ಈ ಪ್ರದೇಶದ ಆಡಳಿತವನ್ನು ನನ್ನ ವಶಕ್ಕೆ ಕೊಟ್ಟು ಹೋಗಿರುತ್ತಾನೆ. ಅಲ್ಲಾನ ಕೃಪೆಯಿಂದ ಈ ಪ್ರದೇಶದ ಆಡಳಿತವು ಸಮರ್ಥವಾಗಿಯೂ, ದೃಢವಾದ ಬುನಾದಿಗಳ ಆಧಾರದ ಮೇಲೆ ನಿಂತಿದೆ. ಇಲ್ಲಿನ ಪ್ರಜೆಗಳು ನನ್ನ ಆಡಳಿತದಲ್ಲಿ ಸುಖವಾಗಿದ್ದು ನನ್ನ ಆಜ್ಞೆಗೆ ಒಳಪಟ್ಟಿದ್ದಾರೆ. ನಿನ್ನ ಸುತ್ತಮುತ್ತ ಇರುವವರೆಲ್ಲರೂ ದುಷ್ಟರು, ಕುಯುಕ್ತಿಉಳ್ಳವರು ನಿನ್ನನ್ನು ಸುತ್ತುವರಿದಿದ್ದಾರೆ. ನೀನು ಅವರ ಶಕ್ತಿಯನ್ನು ಅವಲಂಬಿಸುವುದು ಸೂಕ್ತವಲ್ಲ. ನಿನ್ನ ದುಷ್ಟ ಚಟುವಟಿಕೆಗಳಿಗೆ ನೀನು ಕ್ಷಮೆ ಯಾಚಿಸುವುದು ಒಳ್ಳೆಯದು. ಬಂಡಾಯದ ಪರಿಣಾಮ ಕೆಟ್ಟದಾಗುತ್ತದೆ ಎಂಬುದನ್ನು ನೀನು ಅರಿತುಕೊಳ್ಳಬೇಕು. ಸುಲ್ತಾನ್ ಮುಜಫರಶಾಹನು ನಿನಗೇನು ಜಾಹಗೀರುಗಳನ್ನು ಬಿಟ್ಟು ಕೊಟ್ಟಿದ್ದಾನೋ ಅಷ್ಟರಲ್ಲಿ ತೃಪ್ತನಾಗುವುದು ಶ್ರೇಯಸ್ಕರ.

ಅಪರಾಧಿಗಳ ಕ್ಷಮೆ ಯಾಚನೆ :

ಫೈರೋಜಖಾನನು ತನ್ನ ಒಕ್ಕೂಟದ ಎಲ್ಲ ಸದಸ್ಯರೊಂದಿಗೆ ಭರೊಜ್ ಕೋಟೆಯಲ್ಲಿ ಆಶ್ರಯವನ್ನು ಪಡೆದಿದ್ದನು. ಆತನು ಹಾಗೂ ಆತನ ಸಹೋದರರು ಅಹಮದಶಾಹನ

ಸಂದೇಶವನ್ನು ಕೇಳಿದರು. ಫೈರೋಜಖಾನನು ಏನನ್ನೂ ಹೇಳದೇ ಸುಮ್ಮನಿದ್ದನು. ಆದರೆ ಆತನ ಇತರೆ ಸಹೋದರರಿಗೆ ತಮ್ಮ ಅಪರಾಧಗಳ ಪಶ್ಚಾತ್ತಾಪ ಉಂಟಾಯಿತು. ಅವರೆಲ್ಲರೂ ಸೇರಿ ಕ್ಷಮಾ ಪ್ರಾರ್ಥನೆಗೆ ಒಪ್ಪಿಸಲು ಅಹಮದಶಾಹನ ಹತ್ತಿರ ಹೀಬತ್‌ಖಾನನನ್ನು ಕಳುಹಿಸಿದರು. ಅಹಮದ್‌ಶಾಹನು ಇದೇ ಸಂದರ್ಭಕ್ಕೆ ಕಾಯುತ್ತಿದ್ದನು. ಹೀಬತ್‌ಖಾನನನ್ನು ಬಹಳ ಗೌರವದಿಂದ ಬರಮಾಡಿಕೊಂಡು ಆತನಿಗೆ ಶಾಹಿ ಉಡುಗೊರೆಗಳಿಂದ ಗೌರವಿಸಿದನು. ನಂತರ ಎಲ್ಲರನ್ನು ಕ್ಷಮಿಸಲು ಒಪ್ಪಿಕೊಂಡನು. ಈ ಸಮಾಚಾರವನ್ನು ಹೊತ್ತ ಹೀಬತ್‌ಖಾನನು ಭರೋಜ ಕೋಟೆಯ ಒಳಗೆ ಪ್ರವೇಶಿಸಿದನು. ಅಲ್ಲಿದ್ದ ಫೈರೋಜಖಾನ್, ಶೇರ್‌ಖಾನ್ ಮತ್ತು ಸಾದತ್‌ಖಾನರನ್ನು ತನ್ನೊಂದಿಗೆ ಕರೆದುಕೊಂಡು ಅಹಮದ್‌ಶಾಹನ ಬಿಡಾರಕ್ಕೆ ಬಂದನು. ಅಹಮದ್‌ಶಾಹನು ಅವರೆಲ್ಲರನ್ನು ಬಹಳ ಗೌರವಾದರಗಳೊಂದಿಗೆ ಬರಮಾಡಿಕೊಂಡು ಬಹುಮೌಲ್ಯ ವಸ್ತುಗಳಿಂದ ಬಹುಮಾನಗಳನ್ನು ನೀಡಿ, ಎಲ್ಲರನ್ನು ಕ್ಷಮಿಸಿ ತಮ್ಮ-ತಮ್ಮ ಜಾಹಗೀರಗಳಿಗೆ ಹೋಗಲು ಅನುಮತಿ ಇತ್ತನು.

ಸುಲ್ತಾನ್ ಹೋಷಂಗನ ಆಗಮನ ಮತ್ತು ನಿರ್ಗಮನ :

ಫೈರೋಜಖಾನನ ಒಕ್ಕೂಟಕ್ಕೆ ಸಹಾಯಮಾಡಲು ಷರತ್ತಿನೊಂದಿಗೆ ಒಪ್ಪಿದ ಹೋಷಂಗನು ಗುಜರಾತಿನತ್ತ ಬರುತ್ತಿರುವ ಸಮಾಚಾರವು ಭರೋಜನಲ್ಲಿದ್ದ ಅಹಮ್ಮದಶಾಹನಿಗೆ ಸಿಕ್ಕಿತು. ಅಹಮದಶಾಹನು ತನ್ನ ನೆಲೆ 'ಪಟನ್'ದತ್ತ ಪ್ರಯಾಣವನ್ನು ಬೆಳೆಸಲು ಇಚ್ಛಿಸಿದ್ದನು. ಹೋಷಂಗನ ಸೈನ್ಯವನ್ನು ತಡೆಗಟ್ಟಿ ಹಿಮ್ಮೆಟ್ಟಿಸಲು ಅಹಮ್ಮದಶಾಹನು ಮೊದಲು ಅಮಾದುಲ್ ಮುಲ್ಕನ ಮುಖಂಡತ್ವದಲ್ಲಿ ಒಂದು ಸೈನ್ಯದ ತುಕಡಿಯನ್ನು ಕೊಟ್ಟು ಯುದ್ಧಕ್ಕೆ ಕಳುಹಿಸಿದನು. ನಂತರ ತಾನು ಉಳಿದ ಸೈನ್ಯದೊಂದಿಗೆ ಅಮಾದುಲ್ ಮುಲ್ಕನ ಹಿಂದೆಯೇ ಆತನ ಸಹಾಯಕ್ಕೆ ಅನುಭವಿ ವೀರರನ್ನು ಕರೆದುಕೊಂಡು ಹೊರಟನು. ಪ್ರಯಾಣದ ಅನೇಕ ಮಜಲು(ಹಂತ)ಗಳನ್ನು ಕ್ರಮಿಸುತ್ತಾ ಹೋಷಂಗನಿದ್ದ ಜಾಗದ ಹತ್ತಿರಕ್ಕೆ ತಲುಪಿದನು. ಈ ಸಮಾಚಾರ ತಿಳಿಯುತ್ತಲೇ ತಾನು ಬಂದದ್ದೇ ತಪ್ಪೆಂದು ಭಾವಿಸಿ ವಾಪಸ್ ತನ್ನ ಪ್ರದೇಶಕ್ಕೆ ಅಲ್ಲಿಂದ ಕಾಲ್ಕಿತ್ತನು. ಸುಲ್ತಾನ್ ಅಹಮ್ಮದಶಾಹನೂ ಹಿಂತಿರುಗಿ ತನ್ನ ನಗರ ಅಸಾವಲ್‌ನಲ್ಲಿ ಪ್ರವೇಶಿಸಿದನು.

ಅಹಮದಾಬಾದ ನಗರ ನಿರ್ಮಾಣ :

ಹಿಜರಿ ೮೧೫ರಲ್ಲಿ ಸುಲ್ತಾನ್ ಅಹಮ್ಮದಶಾಹನು ಅಲ್ಲಿನ ಒಬ್ಬ ಪ್ರಸಿದ್ಧ ಸೂಫಿ ಸಂತ. ಹಜ್ರತ್‌ಶೇಖ್ ಅಹ್ಮದ್ ಕಂಭೂರ್ ರಹಮತುಲ್ಲಾರವರ ಸಲಹೆಯಂತೆ ಸಬರಮತಿ ನದಿಯ ದಡದಲ್ಲಿ ಒಂದು ಹೊಸ ನಗರದ ನಿರ್ಮಾಣವನ್ನು ಕೈಗೆತ್ತಿಕೊಂಡನು. ಆ ಸಂತರು ಈ ಹೊಸ ನಗರಕ್ಕೆ "ಅಹಮದಾಬಾದ" ಎಂದು ಹೆಸರಿಟ್ಟರು. ಕೆಲವೇ

ವರ್ಷಗಳೊಳಗಾಗಿ ಈ ಹೊಸ ನಗರ ಒಂದು ದೊಡ್ಡ ಪಟ್ಟಣವಾಗಿ ಬೆಳೆಯಿತು. ಸುಲ್ತಾನ್‌ನು ಈ ನಗರವನ್ನೇ ತನ್ನ ಅಧಿಕೃತ ನೆಲೆಯಾಗಿಸಿಕೊಂಡು ರಾಜಧಾನಿಯನ್ನಾಗಿ ಮಾಡಿಕೊಂಡನು. ಇದಕ್ಕೆ ಹಿಂದಿನ ನಗರ "ಅಸಾವಲ್" ತನ್ನ ನೆಲೆಯಾಗಿದ್ದುದು ಈಗ ಕಸಬಾ ಪ್ರದೇಶವೆನಿಸಿತು.

ಬೃಹತ್ ಕಟ್ಟಡಗಳು ಮತ್ತು ಪೇಟೆ :

ಅಹಮದಾಬಾದ ನಗರವು ಬಾದಶಹರು ವಾಸಿಸುವಂತಹ ಬೃಹತ್ ಅರಮನೆಗಳು, ಅಮೀರ ವಾಸಯೋಗ್ಯ ಬೃಹತ್ ಕಟ್ಟಡಗಳು ಕಟ್ಟಲ್ಪಟ್ಟಿವೆಯಾದರೂ ಸಾಮಾನ್ಯ ಪ್ರಜೆಗಳ ವಾಸಸ್ಥಾನಗಳು ಮಾತ್ರ ಕಚ್ಚಾಮಣ್ಣಿನ ಮನೆಗಳೇ ಆಗಿವೆ. ಅರಮನೆಗಳ ದರ್ಬಾರ್ ಶಾಹಿ ಕಟ್ಟಡಗಳು ಇರುವ ಭಾಗದಲ್ಲಿ ಮೂರು ಶಾಹಿ ಐವಾನ್ ಕಟ್ಟಡಗಳಿಗೆ ಬಹಳ ದೃಢವಾದ ಬುನಾದಿಗಳಿವೆ. ಅವುಗಳನ್ನು ಸುಣ್ಣದ ಗಾರೆಗಚ್ಚುಗಳಿಂದ ಕಟ್ಟಲಾಗಿದೆ. ಆ ಕಟ್ಟಡಗಳಿಗೆ "ತ್ರಿಪೋಲಿಯ" ಎಂದು ಹೆಸರಿಡಲಾಗಿದೆ. ಆ ಪಟ್ಟಣದ ಮಾರಾಟ ವ್ಯವಸ್ಥೆಯ ಸಂತೆ ಪೇಟೆಯು ಬಹಳ ವಿಶಾಲ ಜಾಗದಲ್ಲಿ ವಿಸ್ತರಿಸಿದೆ. ಆ ಪೇಟೆಯ ವಿಸ್ತಾರವು ಒಂದರ ಪಕ್ಕದಲ್ಲಿ ಮತ್ತೊಂದು ಚಕ್ಕಡಿ (ಎತ್ತಿನಗಾಡಿ)ಗಳು ಒಂದೇ ಬಾರಿಗೆ ೧೦ ಗಾಡಿಗಳು ಕ್ರಮಿಸಬಹುದಾಗಿದೆ. ಅಲ್ಲಿನ ಅಂಗಡಿ ಕಟ್ಟಡಗಳು ದೃಢ ಹಾಗೂ ಭದ್ರವಾಗಿವೆ.

ಜಗತ್ತಿನ ಸುಂದರ ಹಾಗೂ ಭವ್ಯ ನಗರ :

ನಗರದಲ್ಲಿ ಸುತ್ತಲೂ ಒಂದು ಭವ್ಯವಾದ ಕೋಟೆ ಮತ್ತು ಜಾಮಿಯಾ ಮಸೀದಿಯೂ ಇವೆ. ಪಟ್ಟಣದ ಹೊರಭಾಗದಲ್ಲಿ ೩೦೭ ಬಡಾವಣೆಗಳಿವೆ. ಪ್ರತಿಯೊಂದು ಬಡಾವಣೆಯಲ್ಲಿಯೂ ಒಂದೊಂದು ಮಸೀದಿ ಮತ್ತು ವ್ಯಾಪಾರಿ ಪೇಟೆಗಳು ನಿರ್ಮಿಸಲ್ಪಟ್ಟಿವೆ. ಅಹಮದಾಬಾದ ನಗರವನ್ನು ಬೇರೆ ಬೇರೆ ವಿಶೇಷತೆಗಳ ಆಧಾರದಲ್ಲಿ ಒಟ್ಟಾರೆಯಾಗಿ ಜಗತ್ತಿನ ಒಂದು ಸುಂದರವಾದ ಪಟ್ಟಣವೆಂದು ಕರೆಯುತ್ತಾರೆ.

ಫೈರೋಜಖಾನನ ಒಂದು ಹೊಸ ಪಿತೂರಿ :

ಫೈರೋಜಖಾನ ಬಿನ್ ಮುಜಫರಶಾಹ ಮತ್ತು ಆತನ ಒಕ್ಕೂಟದ ಸದಸ್ಯರು. ಸೋದರರು ತಮ್ಮ ತಮ್ಮ ಜಾಗೀರುಗಳುಗೆ ಹಿಂತಿರುಗಿ ಹೋದ ನಂತರ ಹಿಜರಿ ೮೧೫ರಲ್ಲಿ ಮತ್ತೊಮ್ಮೆ ಪಿತೂರಿ ಷಡ್ಯಂತ್ರಗಳನ್ನು ರಚಿಸಲಾರಂಭಿಸಿದರು. ಮಲಕ್ ಅಲಾಯಿಬದರ್ ಎಂಬ ಹೆಸರಿನ ಒಬ್ಬ ಅಮೀರನು ಸುಲ್ತಾನ್ ಮುಜಫರಶಾಹನಿಗೆ ಅತ್ಯಂತ ಆಪ್ತನಾಗಿದ್ದವನು. ಈ ಹೊಸ ಪಿತೂರಿಯ ಮುಖಂಡನಾಗಿದ್ದನು. ಪುನಃ ಇವರೆಲ್ಲರೂ ಸೇರಿಕೊಂಡು ಏದರ್ ಕೋಟೆಯ ರಾಜ ರಣಮಲ್ಲನಿಗೆ ಆ ಕೋಟೆಯ ಪೂರ್ಣ ಅಧಿಕಾರ ಮತ್ತು ಸ್ವತಂತ್ರ ರಾಜನನ್ನಾಗಿ ಘೋಷಿಸುತ್ತೇವೆಂಬ ಆಮಿಷವನ್ನು

ತೋರಿ ತಮ್ಮ ಸ್ನೇಹಿತನನ್ನಾಗಿಸಿಕೊಂಡರು. ರಾಜರಣಮಲ್ಲನು ೫ ಸಾವಿರ ಸವಾರರ ಸೈನ್ಯದ ಒಡೆಯನಾಗಿದ್ದನು.

ಅಹಮದಶಾಹನ ಇಚ್ಛೆ ಮಹರಾಸಾ :

ಮಹರಾಸಾದ ಜಾಗೀರ್‌ದಾರ ಸಯ್ಯದ ಇಬ್ರಾಹಿಮುಲ್ ಮುಖಾತಿಬ್-ಬ-ರುಕ್ನಖಾನ್‌ನನು ಸಹ ಫೈರೋಜಖಾನನಿಗೆ ಸಹಾಯ ಹಸ್ತವನ್ನು ನೀಡಲು ಮುಂದಾದನು. ಇದರಿಂದಾಗಿ ಫೈರೋಜಖಾನನ ಹತ್ತಿರ ಒಂದು ಒಳ್ಳೆಯ ಬಲಶಾಲಿ ಸೈನ್ಯದ ಒಕ್ಕೂಟ ಕೂಡಿತು. ಅಹಮದಶಾಹನಿಗೆ ಈ ಸಮಾಚಾರವೂ ತಿಳಿಯಿತು. ತಕ್ಷಣ ಆತನು ತನ್ನ ಸೇನೆಯನ್ನು ತೆಗೆದುಕೊಂಡು ಮಹರಾಸಾದತ್ತ ಹೊರಟನು. ದಾರಿಯಲ್ಲಿದ್ದ ಫತಹ್‌ಖಾನ ಸಹ ರುಕ್ನಖಾನನ ಪ್ರಚೋದನೆಯಿಂದ ಅಹಮದಶಾಹನಿಗೆ ಸಹಾಯ ಮಾಡಲು ನಿರಾಕರಿಸಿದ. ತಾನೂ ಫೈರೋಜ್‌ಖಾನನೊಂದಿಗೆ ಸೇರಿಕೊಂಡನು. ಫೈರೋಜಖಾನನು ಮುಲ್ಕ ಅಲಾಯಿ ಬದರ್‌ನನ್ನೂ ರುಕ್ನಖಾನ್‌ನನ್ನು ಅಹಮದಶಾಹನ ಸೈನ್ಯವನ್ನು ತಡೆಗಟ್ಟಲು ಮಹರಾಸದಲ್ಲಿ ನೇಮಿಸಿ, ತಾನು ರಾಜ ರಣಮಲ್ಲನ ಜೊತೆಯಲ್ಲಿ ಮಹರಾಸದಿಂದ ಐದು ಮೈಲಿ ದೂರದಲ್ಲಿದ್ದ ರಂಗ್‌ಪುರದ ಹತ್ತಿರ ಸೈನ್ಯವನ್ನು ಜಮಾಯಿಸಿ ನಿಂತನು.

ಯುದ್ಧ ಸಿದ್ಧತೆಗಳು :

ಸುಲ್ತಾನ್ ಅಹಮದಶಾಹನು ತನ್ನ ಹಿಂದಿನ ನೀತಿಯನ್ನೇ ಅನುಸರಿಸಿದ. ಬಂಡಾಯವೆದ್ದ ಶತೃಗಳ ಬಳಿಗೆ ತನ್ನ ವಿದ್ವಾಂಸರು, ಬುದ್ಧಿವಂತರನ್ನು ಮುಲ್ಕ ಅಲಾಯಿ ಬದರ್ ಮತ್ತು ರುಕ್ನಖಾನ್‌ರ ಹತ್ತಿರ ಕಳುಹಿಸಿದ. ಸಂಧಾನಕಾರರು ಯುದ್ಧದಿಂದಾಗುವ ದುರಂತ ಪರಿಣಾಮಗಳ ಬಗ್ಗೆ ಹಾಗೂ ನಷ್ಟಗಳ ವಿವರವಾಗಿ ತಿಳಿಸಲೆತ್ನಿಸಿದರು. ಇದನ್ನು ಬಿಟ್ಟು ಮೊದಲಿನಂತೆಯೇ ಶಾಂತಿ-ಸೌಹಾರ್ದಗಳಿಂದ ಬಾಳಲು ತಿಳಿಸಿದರು. ಆದರೆ ಬಂಡಾಯಿಗಳು ವಿದ್ವಾಂಸರ ಮಾತನ್ನು ಒಪ್ಪಲಿಲ್ಲ. ಹಠವನ್ನೇ ಹಿಡಿದು ಯುದ್ಧವನ್ನು ತ್ಯಜಿಸಲು ನಿರಾಕರಿಸಿದರು. ಇವೆಲ್ಲಾ ನಡೆಯುವುದರೊಳಗೆ ಅಹಮದ್‌ಶಾಹನು ತನ್ನ ಸೈನಿಕ ಕಾರ್ಯಾಚರಣೆಗಳನ್ನು ಪೂರ್ಣಗೊಳಿಸಿಕೊಂಡ. ಶತೃ ಕೋಟೆಯತ್ತ ಸೈನ್ಯದೊಂದಿಗೆ ಧಾವಿಸಿದ. ಫೈರೋಜಖಾನನು ಸಹ ತನ್ನ ಆಯ್ದ ಯುದ್ಧ ವೀರರೊಂದಿಗೆ ಮುಲ್ಕ್‌ಅಲಾಯಿಬದರ್‌ನ ಸಹಾಯಕ್ಕೆಂದು ಕೋಟೆಯತ್ತ ನಡೆದ. ಅಲ್ಲಿಗೆ ತಲುಪಿದ ತಕ್ಷಣ ಯುದ್ಧ ಮಾಡಲು ಆತನನ್ನು ಪ್ರೋತ್ಸಾಹಿಸಿದನು.

ಅಹಮದಶಾಹನ ರೋಷ :

ಮುಲ್ಕ್‌ಅಲಾಯಿಬದರ್, ರುಕ್ನಖಾನ್, ಸೈಫಖಾನ್, ಆಂಕಸ್‌ಖಾನ್‌ರೆಲ್ಲರೂ

ತಮ್ಮ ತಮ್ಮ ಸೈನಿಕರಿಗೆ ಯುದ್ಧ ಸಿದ್ಧರಾಗುವ ಆಜ್ಞೆಗಳನ್ನು ಮಾಡಿದರು. ಎಲ್ಲರು ಕೋಟೆಯಿಂದ ಹೊರನಡೆದರು. ಇನ್ನೂ ಯಾವ ರಕ್ತಪಾತವೂ ನಡೆದಿರಲಿಲ್ಲ. ಕೋಟೆಯಿಂದ ಹೊರಬಂದ ಶತ್ರುಸೈನಿಕರ ಮೇಲೆ ಅಹಮದಶಾಹನ ರೋಷಪೂರ್ಣ ಘೋಷಣೆ ಕೇಳಿದ ಕೂಡಲೇ ಎಲ್ಲ ಶತ್ರುಸೈನಿಕರು ಬೆದರಿ ಕೋಟೆಯ ಒಳಹೊಕ್ಕಿದರು. ಕೋಟೆಯ ಬಾಗಿಲನ್ನು ಭದ್ರಪಡಿಸಿಕೊಂಡರು.

ಬಂಡಾಯಿಗಳ ಮೋಸ :

ಶತ್ರು ಸೈನಿಕರೆಲ್ಲರೂ ಕೋಟೆಯ ಒಳಗೆ ರಕ್ಷಣೆಯನ್ನು ಪಡೆದ ತಕ್ಷಣ ಅಹಮದಶಾಹನು ಕೋಟೆಯನ್ನು ಸುತ್ತುವರಿದು ಮುತ್ತಿಗೆ ಹಾಕಿದನು. ಮತ್ತೆ ತನ್ನ ರಾಜದೂತರನ್ನು ಅವರಿಗೆ ಸಂಧಾನಕ್ಕೆ ಆಹ್ವಾನಿಸಿದನು. ಮುಲ್ಕ್ ಅಲಾಯಿ ಬದರ್ ಮತ್ತು ಆಂಕಸ್‌ಖಾನ್‌ನರು ಕಪಟ ನಾಟಕವನ್ನು ರಚಿಸಿ, ಅಹಮದಶಾಹನ ಪ್ರಮುಖ ವೀರರು ಕೋಟೆಯ ಹತ್ತಿರ ಬಂದಾಗ ಮಾತ್ರ ನಾವು ಅವರ ಮಾತಿಗೆ ಒಪ್ಪಿಕೊಳ್ಳುತ್ತೇವೆಂದು ಹೇಳಿಕಳುಹಿಸಿದರು. ಸುಲ್ತಾನ್ ಅಹಮದಶಾಹನು ಅವರ ಮೋಸವನ್ನರಿಯದೆ ಅವರ ಕಪಟ ನಾಟಕಕ್ಕೆ ಬಲಿಯಾದನು. ಆದರೂ ಎಚ್ಚರಿಕೆಯಿಂದ ತನ್ನ ಆಪ್ತ ವೀರರು, ಚತುರರೂ ಆದ ಉಮ್ರಾಖಾನ್, ಆಜಂ, ಅಷದರ್‌ಖಾನ್, ಮುಲ್ಕ್ ಆಶ್ರಫ್, ಅಜೀಜುಲ್ ಮುಲ್ಕ್, ನೂರ್‌ಬೇಗ್, ಬಲಭಾಗದಲ್ಲಿ ನಿಜಾಂ ಉಲ್ ಮುಲ್ಕ್ ಮತ್ತು ಸಾದುಲ್ ಮುಲ್ಕ್, ನೂರ್‌ಬೇಗ್ ಎಡಭಾಗದಲ್ಲಿ ಮುಂತಾದವರನ್ನು ಕೋಟೆಯ ಹತ್ತಿರಕ್ಕೆ ಮಾತ್ರ ಹೋಗಬೇಕೆಂದು ಮುಲ್ಕ್‌ಬದರ್‌ನ ಮೋಸಕ್ಕೆ ಬೀಳಬಾರದೆಂದೂ ಯಾವುದೇ ಕಾರಣಕ್ಕೂ ಕೋಟೆಯ ಒಳಗೆ ಮಾತ್ರ ಪ್ರವೇಶಿಸಕೂಡದೆಂದು ಕಟ್ಟೆಚ್ಚರಪಡಿಸಿ ಕಳುಹಿಸಿ ಕೊಟ್ಟನು.

ಸಂಧಾನದ ಮಾತುಕತೆ :

ಸುಲ್ತಾನ್ ಅಹಮದಶಾಹನ ನಿಯೋಗವು ಕೋಟೆಯ ಹತ್ತಿರಕ್ಕೆ ಬಂದಿತು. ಮುಲ್ಕ್‌ಬದರ್ ಮತ್ತು ಆಂಕಸ್‌ಖಾನರು ಕೋಟೆಯ ಮೇಲಿನಿಂದಲೇ ಮುಂದೆ ಬಂದು ಫೈರೋಜ್‌ಖಾನನ ಕಡೆಯಿಂದ ತಂದಿರುವ ಸಂದೇಶದೊಂದಿಗೆ ಮಾತುಕತೆಯನ್ನು ಪ್ರಾರಂಭಿಸಿದರು. ಬಂಡಾಯಿಗಳು ಬಹಳ ಶಾಂತಚಿತ್ತತೆಯಿಂದ ನಮ್ರರಾಗಿಯೇ ಮಾತನಾಡಲಾರಂಭಿಸಿದರು. ಅಹಮದಶಾಹನ ಕಡೆಯಿಂದ ಬಂದಿರುವ ನಿಯೋಗದವರನ್ನು ಸೆರೆ ಹಿಡಿಯುವುದು ಕಷ್ಟವೆಂಬ ಪರಿಸ್ಥಿತಿಯನ್ನು ಅರಿತರು. ತಕ್ಷಣ ಕೋಟೆಯಿಂದ ಇಳಿದು ಕುದುರೆಗಳ ಮೇಲೇರಿಯೇ ನಿಯೋಗದತ್ತ ಬಂದರು. ಅಹಮದಶಾಹನ ನಿಯೋಗದ ಸದಸ್ಯವೀರರೆಲ್ಲರೂ ಕುದುರೆಗಳನ್ನೇರಿಯೇ ಬಂದಿದ್ದರು. ಎರಡೂ ಕಡೆಯವರಲ್ಲಿ ಮಾತುಕತೆಗಳು ನಡೆದವು.

ಅಹಮದಶಾಹನ ಕಡೆಯ ನಿಜಾಮ-ಉಲ್-ಮುಲ್ಕ ಮತ್ತು ಸಾದುಲ್-ಮುಲ್ಕ್‌ರ ಬಂಧನ:

ಬಂಡಾಯಿಗಳ ಕಡೆಯವರು ಅಲ್ಲಿಯೇ ಕಾಣದಂತೆ ಬಚ್ಚಿಟ್ಟುಕೊಂಡಿದ್ದ ಕೆಲವು ಸೈನಿಕರು ಹಠಾತ್ತರಾಗಿ ನಿಯೋಗದಲ್ಲಿದ್ದವರ ಮೇಲೆರಗಿದರು. ನಿಯೋಗದ ಅರ್‌ಶದ್‌ಖಾನ ಮತ್ತು ಅಜೀಜುಲ್‌ಮುಲ್ಕ್‌ರು ಶತ್ರುಗಳಿಗೆ ಸಿಗದಂತೆ ತಕ್ಷಣ ತಮ್ಮ ಕುದುರೆಗಳನ್ನು ವೇಗವಾಗಿ ಓಡಿಸಿಕೊಂಡು ಹೋಗಿ ಅಹಮದಶಾಹನಿಗೆ ಸುದ್ದಿ ತಿಳಿಸಿದರು. ಆದರೆ ನಿಜಾಂ-ಉಲ್-ಮುಲ್ಕ್ ಮತ್ತು ಸಾದುಲ್ ಮುಲ್ಕರು ತಪ್ಪಿಸಿಕೊಂಡು ಓಡಲು ವಿಫಲರಾದರು. ಬಂಡಾಯಿಗಳು ಅವರನ್ನು ಸೆರೆಹಿಡಿದು ಕೋಟೆಯ ಒಳಗೆ ಕರೆದೊಯ್ದರು. ಇವರಿಬ್ಬರು ಕೋಟೆಯ ಒಳಗೆ ಹೋಗುತ್ತಿದ್ದಾಗ ಜೋರಾಗಿ ಕೂಗಿ ಹೇಳಿದ ಮಾತುಗಳು ಹೀಗಿದ್ದವು.- “ನಾವಿಬ್ಬರೂ ಶತ್ರುಗಳ ಮೋಸಕ್ಕೆ ಸಿಕ್ಕಿಬಿದ್ದಿದ್ದೇವೆ. ಬಾದಶಹ ಅಹಮದಶಾಹರವರು ನಮ್ಮ ಚಿಂತೆಯನ್ನು ಮಾಡುವುದು ಬಿಟ್ಟು, ತಕ್ಷಣ ಕೋಟೆಯ ಮೇಲೆ ಯುದ್ಧ ಸಾರುವಂತೆ ಹೇಳಿ, ನಮಗೆ ಅವರು ಖಂಡಿತ ಗೆಲ್ಲುವರೆಂಬ ಭರವಸೆ ಇದೆ. ಈ ಕೋಟೆಯನ್ನು ಗೆಲ್ಲುವುದು ನಮಗೆ ಅತ್ಯವಶ್ಯಕವಾಗಿದೆ. ಖಂಡಿತ ಗೆಲುವು ನಮ್ಮದಾಗುತ್ತದೆ”.

ಮಹಾರಾಸಾ ಕೋಟೆಯ ವಿಜಯ :

ಅಹಮದಶಾಹ ತಕ್ಷಣ ಮಹರಾಸಾ ಕೋಟೆಯ ಮೇಲೆ ಯುದ್ಧಕ್ಕೆ ಆಜ್ಞಾಪಿಸಿದನು. ಒಂದೇ ದಿನದಲ್ಲಿ ಕೋಟೆಯನ್ನು ವಶಪಡಿಸಿಕೊಂಡನೆಂದು ತಿಳಿದು ಬರುತ್ತದೆ. ಮತ್ತೊಂದು ಇತಿಹಾಸಕಾರನ ದಾಖಲೆಯಂತೆ ಆ ಕೋಟೆಯನ್ನು ವಶಪಡಿಸಿಕೊಳ್ಳಲು ಮೂರು ದಿನಗಳು ಬೇಕಾದುವೆಂದು ಹೇಳುತ್ತಾನೆ. ಮುಲ್ಕ್‌ಬದರ್ ಮತ್ತು ಆಂಕಸ್‌ಖಾನರು ಯುದ್ಧದಲ್ಲಿ ಮಡಿದರು. ಸೆರೆಸಿಕ್ಕಿದ್ದ ನಿಜಾಂ-ಉಲ್-ಮುಲ್ಕ್ ಮತ್ತು ಸಾದುಲ್ ಮುಲ್ಕ್‌ರು ಸುರಕ್ಷಿತವಾಗಿ ಅಹಮದಶಾಹನ ಹತ್ತಿರಕ್ಕೆ ಬಂದರು. ಈ ಕೋಟೆಯ ಯುದ್ಧದ ಬಗ್ಗೆ ಇನ್ನೂ ಅನೇಕ ದಂತಕಥೆಗಳಿದ್ದರೂ ಅವುಗಳನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತವಲ್ಲವೆಂದು ಕೈಬಿಡಲಾಗಿದೆ.

ಫೈರೋಜಖಾನನ ಕೊಲೆ :

ಒಕ್ಕೂಟದ ರಾಜ ರಣಮಲ್ಲನಿಗೂ ಫೈರೋಜ್‌ಖಾನನಿಗೂ ದ್ವೇಷ ಬೆಳೆಯಿತು. ರಾಜ ರಣಮಲ್ಲನು ಫೈರೋಜ್‌ಖಾನನ ಎಲ್ಲ ಆನೆ-ಕುದುರೆ ಮತ್ತು ಇತರೆ ಯುದ್ಧ ಸಂಬಂಧಿ ಸಾಮಾನುಗಳನ್ನು ತನ್ನ ವಶಪಡಿಸಿಕೊಂಡು ಅವೆಲ್ಲವನ್ನು ಸುಲ್ತಾನ್ ಅಹಮದಶಾಹನನ್ನು ಮೆಚ್ಚಿಸಲು ಅವನ ವಶಕ್ಕೆ ಕಳುಹಿಸಿ ಕೊಟ್ಟನು. ಫೈರೋಜಖಾನನು ನಾಗೋರ ಕಡೆ ಪಲಾಯನ ಮಾಡಿದನು. ನಾಗೋರ ಶಾಸಕನು ಆತನನ್ನು ಹಿಡಿದು ಕೊಂದು ಹಾಕಿದನು.

ಜಲ್ವಾರ ಕೋಟೆಯ ಮೇಲೆ ಆಕ್ರಮಣ ಮತ್ತು ಕೆಲ ಅಮೀರರ ಬಂಡಾಯ :

ಹಿಜರಿ ೮೧೬ರಲ್ಲಿ ಅಹಮದಶಾಹನು ರಾಜ ಜಲ್ವಾರನ ಮೇಲೆ ಆಕ್ರಮಣ ಮಾಡಿದನು. ರಾಜನು ಸುಲ್ತಾನ್ ಹೋಷಂಗನ ಸಹಾಯವನ್ನು ಬೇಡಿದನು. ಅಹಮದ ಸರಗಂಜಿ, ಮತ್ತು ಮುಲ್ಕ್ ಶಮ್ಸಬಿನ್ ಶೇಖ್‌ಮುಲ್ಕರು ಮುಜಫರಶಾಹನ ಹೆಸರಾಂತ ಅಮೀರರೆನಿಸಿ ಸೇವೆ ಮಾಡಿದ್ದರು. ಇವರು ಅಹಮದಶಾಹನ ಆಧೀನತೆಯಲ್ಲಿದ್ದರೂ ಆತನನ್ನು ದ್ವೇಷಿಸುತ್ತಿದ್ದರು. ಅಹಮದಶಾಹನು ಜಲ್ವಾರ ರಾಜನ ಮೇಲೆ ಯುದ್ಧವನ್ನು ಸಾರಿದ ವಿಷಯ ತಿಳಿದ ಸರಗಂಜಿ ಮತ್ತಿತರರಿಗೆ ಈತನ ವಿರುದ್ಧ ಆಟವಾಡಲು ಅವಕಾಶ ದೊರೆಯಿತು. ಅವರು ಬಂಡಾಯದ ಬಾವುಟವನ್ನು ಹಾರಿಸಿದರು. ಇವರೆಲ್ಲರೂ ಸೇರಿ ಸಂಬಂಧವಿಲ್ಲದ ಗುಜರಾತಿನ ಅನೇಕ ನಗರಗಳನ್ನು ಹಾಳು ಮಾಡಿದರು.

ಹೋಷಂಗನ ಇಚ್ಛೆ ಗುಜರಾತಿನತ್ತ :

ಹೋಷಂಗನಿಗೆ ರಾಜ ಜಲ್ವಾರನ ಆಹ್ವಾನ ಸಿಕ್ಕಿತ್ತು. ಆತನಿಗೆ ಗುಜರಾತಿನಲ್ಲಿ ನಡೆಯುತ್ತಿರುವ ದಂಗೆಗಳ ಬಗ್ಗೆಯೂ ತಿಳಿಯಿತು. ಆತನು ಇದೊಂದು ಉತ್ತಮ ಅವಕಾಶವೆಂದು ತಿಳಿದನು. ಇದಕ್ಕೂ ಹಿಂದೆ ಅಹಮದಶಾಹನು ಆತನಿಗೆ ಮಾಡಿದ್ದ ಎಲ್ಲ ಉಪಕಾರಗಳನ್ನು ಮರೆತನು. ಒಂದು ವಿಶಾಲ ಸೈನ್ಯದೊಂದಿಗೆ ಹೋಷಂಗನು ಗುಜರಾತಿನತ್ತ ಪ್ರಯಾಣವನ್ನು ಬೆಳೆಸಿದನು. ಪಟ್ಟಣವನ್ನು ತಲುಪಿ ಲೂಟಿ-ಕೊಲೆ-ಸುಲಿಗೆಗಳನ್ನು ಮಾಡಲು ಪ್ರಾರಂಭಿಸಿದನು.

ಅಹಮದಶಾಹನ ನಡೆ :

ಸುಲ್ತಾನ್ ಅಹಮದಶಾಹನಿಗೆ ಹೋಷಂಗನ ಪಿತೂರಿ ಮತ್ತು ದಂಗೆಗಳ ಸಮಾಚಾರ ಸಿಕ್ಕಿದ ತಕ್ಷಣ ಆತನು ಜಲ್ವಾರದ ಮುತ್ತಿಗೆಯನ್ನು ತೆಗೆಯಿಸಿ ಬಹಳ ಸಂಭ್ರಮದಿಂದ ವಾಪಸ್ಸಾದನು. ಆತನು ಸ್ವತಃ 'ಚನಿಯ' ಎಂಬಲ್ಲಿ ತನ್ನ ಬಿಡಾರವನ್ನು ಹೂಡಿದನು. ಅಮಾದುಲ್ ಮುಲ್ಕ್ ಸಮರ್ ಖಂದಿ ಎಂಬುವನಿಗೆ ಒಂದು ವಿಶಾಲ ಸೈನ್ಯವನ್ನು ಕೊಟ್ಟು ಹೋಷಂಗನ ದಾಳಿಗಳನ್ನು ತಡೆಯಲು ಕಳುಹಿಸಿಕೊಟ್ಟನು. ನಂತರ ತನ್ನ ಕಿರಿಯ ಸಹೋದರನಾದ ಲತೀಫಖಾನನ ವಶಕ್ಕೆ ಸೈನ್ಯವನ್ನು ಕೊಟ್ಟು ನಿಜಾಂ-ಉಲ್-ಮುಲ್ಕ್‌ನನ್ನು ಸೋಲಿಸಲು ಮತ್ತು ಅಹಮದ ಸರ್ಗಂಜಿ ಹಾಗೂ ಇತರೆ ಬಂಡಾಯಿ ಅಮೀರರನ್ನು ಸದೆಬಡೆಯಲು ಕಳುಹಿಸಿಕೊಟ್ಟನು.

ಹೋಷಂಗನು ಪರಾರಿಯಾದನು :

ಹೋಷಂಗನು ಗುಜರಾತಿಗಳ ಯುದ್ಧದ ಕಲೆ-ನೀತಿಗಳನ್ನು ಚೆನ್ನಾಗಿ ಬಲ್ಲವನಾಗಿದ್ದನು. ಮುಜಫರಶಾಹರ ಕಾಲದಲ್ಲಿಯೇ ಆತನು ಒಮ್ಮೆ ತನ್ನ ಶಕ್ತಿ

ಪರೀಕ್ಷೆಯನ್ನು ಅವರೊಂದಿಗೆ ಮಾಡಿನೋಡಿದ್ದನು. ಅಮಾದುಲ್-ಮುಲ್ಕನು ತನ್ನ ವಿರುದ್ಧ ಸೈನ್ಯದೊಂದಿಗೆ ಬರುತ್ತಿದ್ದಾನೆಂಬ ವಿಷಯ ತಿಳಿದ ತಕ್ಷಣ ಹಿಂದಿರುಗಿ ಓಡುತ್ತಾ "ಧಾರ್" ನಗರವನ್ನು ತಲುಪಿದನು.

ದಂಗೆಕೋರರ ಸೋಲು :

ಷಹಜಾದ ಲತೀಫನು ಮಲಿಕಶಾಹ ಮತ್ತು ಅಹಮದ ಸರ್ಗಂಜಿಯವರ ವಿರುದ್ಧ ಯುದ್ಧವನ್ನು ಬಹಳ ಶೌರ್ಯದಿಂದ ನಡೆಸಿದ ಕಾರಣ ಅವರಿಬ್ಬರೂ ಯುದ್ಧ ಮೈದಾನದಿಂದ ಓಡಿ ಹೋದರು. ಲತೀಫನು ಮತ್ತು ನಿಜಾಂ-ಉಲ್-ಮುಲ್ಕ್ ಇಬ್ಬರೂ ಅವರನ್ನು ಹಿಂಬಾಲಿಸಿ ಬಹಳ ಹತ್ತಿರದಲ್ಲೇ ಅವರನ್ನು ಹಿಡಿದು ಅವರ ಎಲ್ಲ ಸಾಮಾನು ಸರಂಜಾಮುಗಳನ್ನು ತಮ್ಮ ವಶಕ್ಕೆ ಪಡೆದರು.

ಮತ್ತೊಂದು ಕಥೆ :

ಮೇಲಿನ ಈ ಸಂಬಂಧದಲ್ಲಿ ಬೇರೊಂದು ಅಭಿಪ್ರಾಯವು ಹೀಗಿದೆ. ಮಲಿಕಶಾಹ ಇಬ್ಬರನ್ನು ಹಿಂಬಾಲಿಸಿದಾಗ ಅವರಿಬ್ಬರಿಂದ ತುಂಬಾ ತೊಂದರೆಗೀಡಾದರು. ಅಷ್ಟು ಸುಲಭವಾಗಿ ಸಾಮಾನು ಸರಂಜಾಮುಗಳನ್ನು ಲತೀಫರ ಪಕ್ಷಕ್ಕೆ ಸಿಗಲಿಲ್ಲವೆಂದು ಶತ್ರುಪಕ್ಷದವರ ಮೇಲೆ ರಾತ್ರಿ ಹೊತ್ತು ಅಕಸ್ಮಾತಾಗಿ ಅವರ ಮೇಲೆ ಆಕ್ರಮಣವನ್ನು ನಡೆಸಿದಾಗಲೂ ಯಾವುದೇ ಲಾಭವಾಗಲಿಲ್ಲ. ನಂತರ ಶತ್ರುಗಳು ಪರಾರಿಯಾದರು. ಕೊನೆಗೆ ರಾಜಾ ಕರ್ನಾಲ್‌ನ ಕೋಟೆಯಲ್ಲಿ ಆಶ್ರಯವನ್ನು ಪಡೆದರು ಎಂದು ತಿಳಿದು ಬರುತ್ತದೆ.

ಅಹಮದಶಾಹನ ಇಚ್ಛೆ ಕರ್ನಾಲ್ ಬೆಟ್ಟಗಳತ್ತ :

ಸುಲ್ತಾನ್ ಅಹಮದಶಾಹನು ಕರ್ನಾಲ ಬೆಟ್ಟಗಳ ಪ್ರಶಂಸೆಯನ್ನು ಅನೇಕ ಸಲ ಕೇಳಿದ್ದ. ಇಲ್ಲಿನ ಒಬ್ಬ ಶಾಸಕ ಮುಸ್ಲಿಮೇತರನಾಗಿದ್ದ. ಈತನು ಯಾವತ್ತೂ ಮುಸ್ಲಿಮರ ಶತ್ರುವೇ ಆಗಿದ್ದ. ಸುಲ್ತಾನ್‌ರು ಪ್ರವಾಸದ ನೆಪದಲ್ಲಿ ಸೈನ್ಯವನ್ನೆಲ್ಲ ಸರಿಪಡಿಸಿಕೊಂಡು ಕರ್ನಾಲ್‌ದತ್ತ ಪ್ರಯಾಣವನ್ನು ಬೆಳೆಸಿದ. ಕರ್ನಾಲ ತಲುಪುವುದಕ್ಕೆ ಮೊದಲೇ ಇಲ್ಲಿನ ರಾಜನು ಸುಲ್ತಾನ್‌ನಿಗೆ ಅನೇಕ ಕಡೆ ತಡೆದು ಅಡ್ಡಿಪಡಿಸಿದ ಆದರೆ ಪ್ರತಿಯೊಂದು ಜಾಗದಲ್ಲೂ ರಾಜನಿಗೆ ಸೋಲುಂಟಾಗಿ ಕೊನೆ ಯುದ್ಧದಲ್ಲಿ ಸೋತು ಯುದ್ಧ ಮೈದಾನದಿಂದ ಪರಾರಿಯಾದನು.

ಕರ್ನಾಲ ರಾಜನು ಅಹಮದಶಾಹನ ಅಧೀನತೆಯನ್ನು ಒಪ್ಪಿದ :

ಕೊನೆಗೆ ನಡೆದ ಯುದ್ಧದಲ್ಲಿ ಸೋತ ಕರ್ನಾಲ ರಾಜನು ಜುನಾಗಢ ಕೋಟೆಯಲ್ಲಿ ಆಶ್ರಯವನ್ನು ಪಡೆದಿದ್ದನು. ಅಹಮದಶಾಹನ ಸೈನ್ಯವು ಜುನಾಗಢ ಕೋಟೆಯನ್ನು

ಮುತ್ತಿ ಅದರ ಕೆಳಭಾಗವನ್ನು ವಶಕ್ಕೆ ಪಡೆದರು. ಸುತ್ತಲೂ ಸೈನಿಕರ ಮುತ್ತಿಗೆಯಿಂದ ವಿವಶರಾದ ರಾಜನ ಕಡೆಯವರು ಅಹಮದಶಾಹನಿಗೆ ಪ್ರತಿವರ್ಷ ಕಪ್ಪಕಾಣಿಕೆಗಳನ್ನು ತಪ್ಪದೇ ಸಲ್ಲಿಸಲು ಒಪ್ಪಿಕೊಂಡರು. ಇಬ್ಬರಲ್ಲೂ ಸಂಧಾನದ ಕರಾರು ನಡೆಯಿತು. ಅಹಮದಶಾಹನು ತನ್ನ ತ್ವಂತ ತಮ್ಮಂದಿರಾದ ಹಾಗೂ ಅಮೀರರೆನಿಸಿದ್ದ ಸಯ್ಯದ ಅಬುಲ್ ಖೈರ್ ಮತ್ತು ಸಯ್ಯದ ಅಬುಲ್ ಖಾಸಿಂರನ್ನು ಕಪ್ಪ ಕಾಣಿಕೆಗಳನ್ನು ವಸೂಲು ಮಾಡಲು ಅಲ್ಲಿಯೇ ಅವರನ್ನು ಬಿಟ್ಟು ತಾನು ತನ್ನ ರಾಜಧಾನಿಯಾದ ಅಹಮದಾಬಾದಿಗೆ ಹೊಂತಿರುಗಿದನು.

ಸಯ್ಯದಪುರದ ಮಂದಿರದ ನಾಶ :

ಕರ್ನಾಲಿನಿಂದ ವಾಪಸ್ಸಾಗುವ ಸಂದಂರ್ಭದಲ್ಲಿ ದಾರಿಯಲ್ಲಿ ಸಯ್ಯದಪುರವೆಂಬ ನಗರವಿತ್ತು. ಆ ನಗರದಲ್ಲಿ ಒಂದು ಮಂದಿರವಿತ್ತು. ಆ ಮಂದಿರವನ್ನು ನಾಶ ಪಡಿಸಿ ಅದರಲ್ಲಿದ್ದ ಅಪಾರ ಸಂಪತ್ತು ಮತ್ತು ಚಿನ್ನದ ಒಡವೆಗಳನ್ನು ತನ್ನ ವಶಕ್ಕೆ ಪಡೆದುಕೊಂಡನು. ರಾಜಧಾನಿಗೆ ತಲುಪಿ ಸಂಪತ್ತನ್ನು ಬಡಬಗ್ಗರಿಗೆ ದಾನ ಮಾಡಿದನು.

ನವಾಹ್-ಎ-ಗುಜರಾತಿನ ಮುಸ್ಲಿಮೇತರರ ಪಿತೂರಿ :

ಆಗ ತಾನೆ ಅಹಮದಶಾಹನ ಒಬ್ಬ ಅಮೀರನನ್ನು "ತಾಜುಲ್ ಮುಲ್ಕ್"ನ ಬಿರುದಿನಿಂದ ಸನ್ಮಾನಿಸಲ್ಪಟ್ಟಿದ್ದನು. ಗುಜರಾತಿನ ಕೆಲವು ರಾಜರುಗಳು ಪಿತೂರಿಗಳನ್ನು ನಡೆಸುತ್ತಿರುವರೆಂದು ತಿಳಿದು ಅವರನ್ನು ಅಡಗಿಸಲು ಸೈನ್ಯವನ್ನು ತಾಜುಲ್ ಮುಲ್ಕನ ಜೊತೆಯಲ್ಲಿ ಕಳುಹಿಸಿದ್ದನು. ಆತನು ಬಹಳ ಮುತುವರ್ಜಿಯಿಂದ, ಶ್ರದ್ಧೆಯಿಂದ ಬಂಡಾಯಿಗಳನ್ನು ಅಡಗಿಸಿದ್ದೇ ಅಲ್ಲದೆ ಅವರ ಮೇಲೆ ಪುಂಡುಗಂದಾಯ (ಜಜಿಯಾ)ವನ್ನು ವಿಧಿಸಿದನು. ಅನೇಕ ಪುಂಡರು ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು.

ಮುಸ್ಲಿಮೇತರರೊಡನೆ ಯುದ್ಧ :

ಸುಲ್ತಾನ್‌ನು ಮುಸ್ಲಿಮೇತರೊಡನೆ 'ಜಹಾದ್' ಯುದ್ಧವನ್ನು ನಡೆಸಲು ಹಿಜರಿ ೮೨೯ರಲ್ಲಿ ನಾಗೋರ ನಗರದವರೆಗೆ ಪ್ರಯಾಣವನ್ನು ಬೆಳೆಸಿದ್ದನು. ಪ್ರಯಾಣದ ಸಂದರ್ಭದಲ್ಲಿ ಮುಸ್ಲಿಮೇತರ ಮಂದಿರಗಳು ಎಲ್ಲೆಲ್ಲಿ ಇವೆ ಎಂಬ ಸಮಾಚಾರವನ್ನು ಸಂಗ್ರಹಿಸುತ್ತಿದ್ದನು. ಅಪಾರ ಸಂಪತ್ತಿರುವ ದೇವಸ್ಥಾನದ ವಿಷಯ ತಿಳಿಯುತ್ತಿದ್ದಂತೆ ತಕ್ಷಣ ಅಲ್ಲಿಗೆ ಹೋಗಿ ಅದನ್ನು ಕೆಡವಿ ಅಲ್ಲಿನ ಎಲ್ಲ ಸಂಪತ್ತನ್ನು ಲೂಟಿಮಾಡಿ ತನ್ನ ವಶಕ್ಕೆ ಪಡೆಯುತ್ತಿದ್ದನು.

ನಾಗೋರ್ ಕೋಟೆ ಮುತ್ತಿಗೆ :

ಸುಲ್ತಾನ್ ಅಹಮದಶಾಹನು ನಾಗೋರ ತಲುಪಿ ಆ ಪಟ್ಟಣಕ್ಕೆ ಮುತ್ತಿಗೆಯನ್ನು

ಹಾಕಿದನು. ಪಟ್ಟಣವನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿದನು. ದೆಹಲಿಯ ಸುಲ್ತಾನ್ ಹಾಕಮ್ ನುಸ್ರತ್‌ಖಾನನು ಸಹ ನಾಗೋರಿನತ್ತ ಪ್ರಯಾಣವನ್ನು ಬೆಳೆಸಿದುದನ್ನು ಕಂಡ ಸುಲ್ತಾನ್ ಅಹಮದಶಾಹನು ಮುತ್ತಿಗೆಯನ್ನು ತೆರವುಗೊಳಿಸಿ ಮಾಳವದೇಶದ ಕಡೆಯಿಂದ ಅಹಮ್ಮದ ನಗರಕ್ಕೆ ವಾಪಸ್ ಬಂದುಬಿಟ್ಟನು.

ಸುಲ್ತಾನ್ ಅಹಮದಶಾಹನ ಇಚ್ಛೆ ನದರ್‌ಬಾರ್‌ನತ್ತ :

'ಅಸೀರ್'ನ ಶಾಸಕ ಮಲಿಕನಸೀರ್ ಮತ್ತು ಮಾಳವದ ಶಾಸಕ ಸುಲ್ತಾನ್ ಹೋಷಂಗ ಇಬ್ಬರೂ ಅಹಮದಶಾಹನ ಶತ್ರುತ್ವದ ಕಾರಣ ಸುಲ್ತಾನ್‌ಪುರ ಮತ್ತು ನದರ್‌ಬಾರ್‌ಗಳನ್ನು ನಾಶಪಡಿಸುವ ಕಾರ್ಯ ಆಗಿಂದಾಗ್ಗೆ ನಡೆಯುತ್ತಲೇ ಇತ್ತು. ಮತ್ತು ಇಲ್ಲಿನ ಪ್ರಜೆಗಳಿಗೆ ಚಿತ್ರಹಿಂಸೆಯನ್ನು ನೀಡುತ್ತಲಿದ್ದರು. ಇವರನ್ನು ಅನೇಕ ಕಷ್ಟಗಳಲ್ಲಿ ಮುಳುಗಿಸುತ್ತಿದ್ದರು. ಇದನ್ನು ಕಂಡಿದ್ದ ಸುಲ್ತಾನ್ ಅಹಮದಶಾಹನು ಈ ಕಷ್ಟಗಳನ್ನು ನಿವಾರಿಸಲು ಹಿಜರಿ ೮೨೧ರಲ್ಲಿ ನದರ್‌ಬಾರ್‌ನತ್ತ ತನ್ನ ಸೈನ್ಯವನ್ನು ರವಾನಿಸಿದನು.

ಮಲಿಕ ನಸೀರನ ಪಲಾಯನ :

ಸುಲ್ತಾನ್ ಅಹಮದಶಾಹನು ನದರ್‌ಬಾರ್ ತಲುಪುವುದಕ್ಕೆ ಮುಂಚೆಯೇ ಒಂದು ವಿಶಾಲ ಸೈನ್ಯದೊಂದಿಗೆ ತಂಬೋಲ್ ಕೋಟೆಯ ಮೇಲೆ ಮುತ್ತಿಗೆಯನ್ನು ಹಾಕಿದನು. ಇದು ಗುಜರಾತಿನ ದಕ್ಷಿಣದ ಖಾನ ದೇಶದ ಹತ್ತಿರವಿತ್ತು. ಬಾದಶಹನು ನದರ್‌ಬಾರ್‌ನ ಹತ್ತಿರ ತಲುಪಿದಾಗ ಮಲಿಕನಸೀರನು ಹೆದರಿ ಅಸೀರಿನತ್ತ ಪಲಾಯನ ಮಾಡಿದನು. ಈತನ ಸೈನ್ಯ ಈಗ ತಂಬೋಲನ ಹತ್ತಿರ ನೆಲೆಯೂರಿತ್ತು. ಅಲ್ಲಿನ ರಾಜನಿಗೆ ಸಮಾಧಾನ ಪಡಿಸಿ ಒಪ್ಪಿಸಿಕೊಂಡು ಆತನನ್ನು ತನ್ನೊಡನೆ ಕರೆದುಕೊಂಡು ಅಹಮದಶಾಹನ ಹತ್ತಿರ ಬಂದರು.

ಹೋಶಂಗನು ಗುಜರಾತಿನ ಮೇಲೆ ಆಕ್ರಮಣವನ್ನು ಮಾಡಲು ಆಹ್ವಾನ :

ಅಷ್ಟು ಹೊತ್ತಿಗೆ ಮಳೆಗಾಲವು ಪ್ರಾರಂಭವಾದ ಕಾರಣ ಬಾದಶಹನು ಅಹಮದಾಬಾದಿಗೆ ವಾಪಸು ಬರಲು ತೀರ್ಮಾನಿಸಿದನು. ಈ ಮಧ್ಯೆ ಸುದ್ದಿಗಾರರು ಸಮಾಚಾರವನ್ನು ತಂದಿದ್ದೇನೆಂದರೆ-ರಾಜ ಚೇನಾನೇಜ್ ಮಂದಲ್ ಮತ್ತು ನಾವದತ್ತರಿಬ್ಬರೂ ಹೋಷಂಗನನ್ನು ಗುಜರಾತಿನ ಮೇಲೆ ಯುದ್ಧಕ್ಕೆ ಆಹ್ವಾನಿಸಿದ್ದಾರೆಂದು ತಿಳಿಯಿತು. ಇದರೊಂದಿಗೆ ಒಬ್ಬ ಒಂಟೆಯ ಸವಾರನು ನದರ್‌ಬಾರಿಗೆ ಬಂದಿಳಿದನು. ಆತನು ಫೈರೋಜ್‌ಖಾನ ಬಿನ್ ಶಮ್ಸ್‌ಖಾನ್ ದಂದಾನಿಯ ಅರ್ಜಿಯನ್ನು ಬಾದಶಹನಿಗೆ ಕೊಟ್ಟನು. ಈ ಅರ್ಜಿಯ ವಿಷಯ ಹೀಗಿತ್ತು.

ಫೈರೋಜಖಾನ ಬಿನ್ ಶಮ್ಸ್‌ಖಾನನ ಅರ್ಜಿ :

ಸುಲ್ತಾನ್ ಹೋಶಂಗನು ತಾವು ಈಗ ಗುಜರಾತಿನಿಂದ ಬಹಳ ದೂರವಿರುವುದನ್ನು ಕಂಡು ಗುಜರಾತನ್ನು ವಶಪಡಿಸಿಕೊಳ್ಳುವ ಹುನ್ನಾರದಲ್ಲಿದ್ದಾನೆ. ಈ ಉದ್ದೇಶದಿಂದ ಆತನು ಈ ದಿಕ್ಕಿನತ್ತ ಹೊರಟಿದ್ದಾನೆ. ಆತನು ತಮ್ಮ ಆಧೀನತೆಯನ್ನು ಸ್ವೀಕರಿಸಲು ನಿರಾಕರಿಸಿರುವನು. ಆತನು ಈ ವಿಷಯವನ್ನೊಳ ಗೊಂಡ ಒಂದು ಪತ್ರವನ್ನು ಹೀಗೆ ಬರೆದಿದ್ದಾನೆ. ಗುಜರಾತಿನ ಜಮೀನ್ದಾರರೆಲ್ಲರೂ ಸೇರಿ, ಗುಜರಾತನ್ನು ವಶಪಡಿಸಿಕೊಳ್ಳಲು ಹೋಷಂಗನಿಗೆ ನಾವು ಸಹಾಯ ಮಾಡಲು ಸಿದ್ಧರಿದ್ದೇವೆ. ನೀವು ಇತ್ತ ಪ್ರಯಾಣವನ್ನು ಬೆಳೆಸಬೇಕು ಎಂದು ನನಗೆ ಪತ್ರ ಬಂದಿದೆ ಎಂದು ತಿಳಿಸಲಾಯಿತು. ಪತ್ರದ ಒಕ್ಕಣೆಯ ಪ್ರಕಾರ ಆತನು ಸ್ವತಃ ಸೈನ್ಯದೊಡನೆ ಪ್ರಯಾಣಕ್ಕೆ ಸಿದ್ಧನಾಗಿದ್ದಾನೆ. ಹಾಗೂ ನನಗೆ ಎಚ್ಚರಿಕೆಯಿಂದಿರಲು ಸೂಚಿಸಿದ್ದಾನೆ. ನನ್ನ ಸಹಾಯವನ್ನು ಕೇಳಿದ್ದಾನೆ. ಪತ್ರದಲ್ಲಿ ಈ ಆಶ್ವಾಸನೆಯು ನೀಡಿರುವುದೇನೆಂದರೆ,– ಗುಜರಾತನ್ನು ಗೆದ್ದ ನಂತರ ನಹರ್‌ವಾಲಾದ ಆಡಳಿತವನ್ನು ನನ್ನ ವಶಕ್ಕೆ ನೀಡಲಿದ್ದಾನೆ. ತಾವು ಬಾದಶಹರಾಗಿದ್ದು ನಾನು ತಮ್ಮ ವಿರುದ್ಧ ಯಾವ ಪಿತೂರಿಯನ್ನು ಮಾಡಲಾರೆ. ಇದ್ದ ಸಂಗತಿಯನ್ನು ತಮಗೆ ಮುಂದಿನ ಸರಿಯಾದ ಕ್ರಮಕ್ಕಾಗಿ ಪೂರ್ಣವಾಗಿ ತಿಳಿಸಿರುತ್ತೇನೆ.

ಹೋಶಂಗನ ಪಿತೂರಿಯ ದಮನ :

ಸುಲ್ತಾ ಹಮದಶಾಹನು ಮಳೆಗಾಲದ ಕಷ್ಟಗಳನ್ನು ಲೆಕ್ಕಿಸದೆ ಆ ಪ್ರದೇಶದತ್ತ ಪ್ರಯಾಣವನ್ನು ಬೆಳೆಸಲು ಸಿದ್ಧನಾದನು. ನರ್ಮದಾ ನದಿಯನ್ನು ದಾಟಿ ಮೆಹಂದರಿ ಎಂಬಲ್ಲಿ ತನ್ನ ಸೈನ್ಯದ ಜೊತೆ ನೆಲೆಸಿದನು. ಅಹಮದಶಾಹನು ತನ್ನ ಸೈನ್ಯವನ್ನು ಎರಡು ಭಾಗ ಮಾಡಿ ತನ್ನೊಂದಿಗೆ ಒಂದು ಭಾಗವನ್ನು ತೆಗೆದುಕೊಂಡು ಮುಂದಿನ ಆಕ್ರಮಣದಲ್ಲಿ ಭಾಗವಹಿಸಿದನು. ಒಂದು ವಾರದೊಳಗಾಗಿ ಮಹರಾಸ ತಲುಪಿದನು. ಈತನ ಆಕ್ರಮಣದ ಸುದ್ದಿಯನ್ನು ಕೇಳಿದ ಹೋಷಂಗನು ಚಿಂತಾಕ್ರಾಂತನಾಗಿ ತನ್ನ ದೇಶಕ್ಕೆ ಓಡಿದನು. ಸುಲ್ತಾನ್ ಅಹಮದಶಾಹನು ತನ್ನ ಸೈನ್ಯವನ್ನು ಬಲಪಡಿಸಿಕೊಳ್ಳಲು ಮಹರಾಸದಲ್ಲಿ ಕೆಲವು ದಿನಗಳ ತನಕ ಅಲ್ಲಿಯೇ ತಂಗಬೇಕಾಯಿತು.

ಹೋಶಂಗ ಮತ್ತು ಮಲಿಕನಸೀರರು ಸೇರಿ ಬಂಡು :

ಈ ಮಧ್ಯೆ ಸೂರತ್‌ನ ಹಿಂದೂ ರಾಜನು ಅಹಮದಶಾಹನ ಅಧೀನತೆಯನ್ನು ತಿರಸ್ಕರಿಸಿ ಆತನಿಗೆ ಕೊಡಬೇಕಾದ ಕಪ್ಪ–ಕಾಣಿಕೆಗಳನ್ನು ನಿಲ್ಲಿಸಿದನು. ಅಷ್ಟೇ ಅಲ್ಲದೇ ತನ್ನ ರಾಜ್ಯದ ಗಡಿಯನ್ನು ದಾಟಿ ದಂಗೆ ಎದ್ದಿದ್ದನು. ಈ ಅವಕಾಶವನ್ನೇ ಕಾಯುತ್ತಿದ್ದ ಮಲಿಕ ನಸೀರನು ಲೇಜ್ ಎಂಬ ಕೋಟೆಯನ್ನು ತನ್ನ ತಮ್ಮನಿಂದ ಕಿತ್ತುಕೊಳ್ಳುವ ಹುನ್ನಾರವನ್ನು ರಚಿಸಿದನು. ಈ ಸಂಬಂಧದಲ್ಲಿ ಹೋಷಂಗನು ಸಹ ತನ್ನ ಮಗನಾದ

ಫಜ್ಜೈನಖಾನನೊಂದಿಗೆ ಒಂದು ಸೈನ್ಯವನ್ನು ಕೊಟ್ಟು ಮಲಿಕ ನಸೀರನ ಸಹಾಯಕ್ಕೆ ಸುಲ್ತಾನ್‌ಪುರಕ್ಕೆ ಕಳುಹಿಸಿಕೊಟ್ಟನು. ಫಜ್ಜೈನಖಾನನು ಸುಲ್ತಾನ್‌ಪುರದ ಶಾಸಕರನ್ನು ಹಿಂಸೆಗೆ ಒಳಪಡಿಸಿದನು. ಸುಲ್ತಾನ್‌ಪುರದ ಶಾಸಕನು ತನ್ನ ಕೋಟೆಯೊಳಗೆ ಸೇರಿಕೊಂಡು ಇವರ ಹಿಂಸೆಯ ವಿಚಾರವನ್ನು ಪತ್ರದ ಮೂಲಕ ಸುಲ್ತಾನ್ ಅಹಮದಶಾಹನ ಹತ್ತಿರಕ್ಕೆ ಕಳುಹಿಸಿಕೊಟ್ಟನು.

ಕಪ್ಪ-ಕಾಣಿಕೆಗಳ ವಸೂಲಿ :

ಸುಲ್ತಾನ್ ಅಹಮದಶಾಹನು ಮಹರಾಸಾದಿಂದ ಸೂರತ್ತಿನ ರಾಜನ ಚಟುವಟಿಕೆಗಳನ್ನು ದಮನ ಮಾಡಲು ಮತ್ತು ಕಪ್ಪಕಾಣಿಕೆಗಳನ್ನು ವಸೂಲಿ ಮಾಡಲು ಮಲಿಕ ಮಹಮೂದ್‌ನ ಮುಂದಾಳತ್ವದಲ್ಲಿ ಒಂದು ವಿಶಾಲ ಸೈನ್ಯವನ್ನು ಕಳುಹಿಸಿಕೊಟ್ಟನು. ಅಷ್ಟೇ ಅಲ್ಲದೇ ಮಲಿಕ ನಸೀರನ ಮತ್ತು ಫಜ್ಜೈನಖಾನನ ಆಕ್ರಮಣ ಹಿಂಸೆಗಳನ್ನು ದಮನ ಮಾಡಲು ಮುಖ್‌ಲಿಸುಲ್ ಮುಲ್ಕ್ ಮತ್ತು ಇನ್ನೂ ಇತರೆ ಅಮೀರರೊಂದಿಗೆ ಸೈನ್ಯವನ್ನು ಕಳುಹಿಸಿಕೊಟ್ಟನು. ಈ ಅಮೀರರು ಪ್ರಯಾಣದ ಸಂದರ್ಭದಲ್ಲಿ ನಾವದತ್ತನ ಮೇಲೆ ಆಕ್ರಮಣವನ್ನು ಮಾಡಿ ಆತನಿಂದ ಕಪ್ಪ-ಕಾಣಿಕೆಗಳನ್ನು ವಸೂಲು ಮಾಡಿಕೊಂಡರು. ಅಲ್ಲದೆ ಅಹಮದಶಾಹನ ಅಧೀನತೆಯಲ್ಲಿರಲು ಒಪ್ಪಿಸಿದರು.

ಮಲಿಕನಸೀರನ ತಪ್ಪಿನ ಕ್ಷಮೆ :

ಅಮೀರರು ಸುಲ್ತಾನ್‌ಪುರವನ್ನು ತಲುಪಿದಾಗ ಮಲಿಕನಸೀರನು ಥಾಲೈಜ್ ಕೋಟೆಯಲ್ಲಿ ಅಡಗಿಕೊಂಡಿದ್ದನು. ಫಜ್ಜೈನಖಾನನು ಮಲಿಕನಸೀರನನ್ನು ವಿರೋಧಿಸತೊಡಗಿದನು. ಇದರಿಂದ ಬೇಸತ್ತ ಮಲಿಕ ನಸೀರನು ಕೆಲವು ಆಪ್ತರನ್ನು ಸುಲ್ತಾನ್ ಅಹಮದಶಾಹನ ಹತ್ತಿರ ತನ್ನನ್ನು ಫಜ್ಜ್ಯನಖಾನನ ತೊಂದರೆಗಳಿಂದ ತಪ್ಪಿಸುವಂತೆ ಕೇಳಿಕೊಳ್ಳಲು ಕಳುಹಿಸಿಕೊಟ್ಟನು. ಆಪ್ತರು ಅನೇಕ ಬಾರಿ ಸುಲ್ತಾನ್‌ನ ಹತ್ತಿರಕ್ಕೆ ಬಂದು ಕೇಳಿಕೊಂಡಿದ್ದರು. ಕೊನೆಗೆ ಬಾದಶಹನು ಮಲಿಕನಸೀರನ ತಪ್ಪುಗಳನ್ನು ಕ್ಷಮಿಸಿ, ಆತನಿಗೆ "ನಸೀರಖಾನ್" ಎಂಬ ಬಿರುದಿನೊಂದಿಗೆ ಸನ್ಮಾನಿಸಿ ತಾನು ಅಹಮದಾಬಾದಿಗೆ ವಾಪಸ್ಸಾದನು.

ಸುಲ್ತಾನ್ ಅಹಮದಶಾಹನ ಮನಸ್ಸು ಮಾಳವದತ್ತ :

ಸುಲ್ತಾನ್ ಅಹಮದಶಾಹನು ಹಿಜರಿ ಶಕೆ ೮೨೨ರಲ್ಲಿ ಗುಜರಾತಿನ ಶಾಸಕನಾಗಿ ನಿಜಾಮುಲ್‌ಮುಲ್ಕನನ್ನು ನೇಮಿಸಿ, ರಾಜಮಂದಲ್ ಎಂಬುವನ ಪಿತೂರಿಗಳನ್ನು ಅಡಗಿಸಲು ಅಧಿಕಾರವನ್ನು ನೀಡಿ ತಾನು ಮಹರಾಸಾದಿಂದ ಮಾಳವ ದೇಶದತ್ತ ಪ್ರಯಾಣವನ್ನು ಬೆಳೆಸಿದನು. ಮತ್ತೊಂದು ಕಡೆಯಿಂದ ಹೋಷಂಗನು ತನ್ನ

ಸೈನ್ಯದೊಂದಿಗೆ ಬಂದಿದ್ದನು. ಆತನು 'ಕಾಲಬ' ಎಂಬಲ್ಲಿ ಬೀಡು ಬಿಟ್ಟಿದ್ದನು. ತನ್ನ ಹಿಂಭಾಗದ ಪ್ರದೇಶಕ್ಕೆ ಒಂದು ಗೋಡೆಯನ್ನು ಎಬ್ಬಿಸಿಕೊಂಡು ಮುಂಭಾಗದ ದೊಡ್ಡ ದೊಡ್ಡ ಮರಗಳನ್ನು ಕಡಿಸಿ ಯಾರಿಗೂ ಕಾಣದಂತೆ ಮರೆಮಾಡಿಕೊಂಡು ಅಹಮದಶಾಹನು ಕುಳಿತ್ತಿದ್ದನು.

ಸುಲ್ತಾನ್ ಹೋಶಂಗನ ಸೋಲು :

ಸುಲ್ತಾನ್ ಅಹಮದಶಾಹನು ಒಂದು ವಿಶಾಲ ಕಾಡಿನಲ್ಲಿ ಅಡಗಿಕೊಂಡು ತನ್ನ ಸೈನ್ಯಕ್ಕೆ ಉತ್ತಮ ಯುದ್ಧ ತರಬೇತಿಯಲ್ಲಿ ತೊಡಗಿಸಿಕೊಂಡಿದ್ದನು. ಸುಲ್ತಾನ್‌ನು ಮೆಯ್ಯಾ ಎಂಬ ಪ್ರದೇಶಕ್ಕೆ ಅಹಮದ ತುರ್ಕ ಎಂಬುವನಿಗೂ 'ಮೇಸ್ರಾ' ಎಂಬ ಪ್ರದೇಶಕ್ಕೆ ಮಲಿಕ್ ಫರೀದನಿಗೂ ಮತ್ತು ಇಮಾದುಲ್‌ಮುಲ್ಕ ಸಮರ್‌ಖಂದಿ ಎಂಬುವನಿಗೂ ಒಪ್ಪಿಸಿದನು. ಈ ಕಾರಣದಿಂದಾಗಿ ಇಬ್ಬರು ಸುಲ್ತಾನರಲ್ಲಿ ಘೋರ ಯುದ್ಧವು ನಡೆಯಿತು. ಎರಡೂ ಕಡೆ ಸಿಪಾಯಿಗಳು ವೀರೋತ್ಸಾಹದಲ್ಲಿ ಹೋರಾಡಿದರು. ಸುಲ್ತಾನ್ ಹೋಶಂಗನು ಯುದ್ಧ ಮೈದಾನದಿಂದ ಕಾಲು ಕಿತ್ತನು, ಆತನು ಮಾಂಡು ಕಡೆಗೆ ಓಡಿ ಹೋದನು.

ಸುಲ್ತಾನ್ ಅಹಮದಶಾಹನ ಸಾಮರ್ಥ್ಯ :

ಸುಲ್ತಾನ್ ಅಹಮದಶಾಹನು ಬಹಳ ಯೋಗ್ಯತೆ ಮತ್ತು ಸಾಮರ್ಥ್ಯದಿಂದ ಶತ್ರುವಿನ ಸೈನ್ಯವನ್ನು ಎದುರಿಸಿದ್ದನು. ಇದರಿಂದಾಗಿ ಹೋಷಂಗನು ಬೆದರಿ ಓಡಿದನು. ಆತನ ಬಹಳಷ್ಟು ಯುದ್ಧ ಸಾಮಾನು, ಸಾಮಗ್ರಿಗಳು ಗುಜರಾತಿನವರೆಗೆ ಲಭ್ಯವಾದವು. ಇದರಿಂದ ಗುಜರಾತಿನ ಎಲ್ಲ ಜನರು ಶ್ರೀಮಂತರಾದರು. ಮಾಂಡುವಿನ ಸುತ್ತಮುತ್ತ ಅನೇಕ ಬೆಲೆಬಾಳುವ ಮರಗಿಡಗಳಿದ್ದವು. ಗುಜರಾತಿಗಳು ಅವುಗಳೆಲ್ಲವನ್ನು ನಾಶಪಡಿಸಿದರು. ಸಾಕಷ್ಟು ತಮ್ಮ ವಶಕ್ಕೆ ಪಡೆದರು.

ಅಹಮದಾಬಾದಿಗೆ ವಾಪಸ್ಸಾಗಿ ವಿಜಯೋತ್ಸಾಹ :

ಅಷ್ಟು ಹೊತ್ತಿಗಾಗಲೇ ಮಳೆಗಾಲ ಪ್ರಾರಂಭವಾಗಿತ್ತು. ಆದ್ದರಿಂದ ಅಹಮದಶಾಹನು ಅಹಮದಾಬಾದಿನತ್ತ ಹಿಂತಿರುಗಿದ್ದನು. ಬರುವ ದಾರಿಯಲ್ಲಿದ್ದ ದಂಗೆಕೋರ ನಾವದತ್ತ ಮುಂತಾದ ಸಣ್ಣ ಪುಟ್ಟ ಪಾಳೇಯಗಾರರನ್ನು ಅಡಗಿಸಿ, ವಿಜಯೋತ್ಸಾಹದಲ್ಲಿ ತನ್ನ ರಾಜಧಾನಿ ಅಹಮದಾಬಾದನ್ನು ತಲುಪಿದನು. ಇಲ್ಲಿಗೆ ಬಂದ ಮೇಲೆ ಬಹಳ ವೈಭವೋಪೇತ, ವಿಜೃಂಭಣೆಯಿಂದ ಕೂಡಿದ ವಿಜಯೋತ್ಸಾಹದ ಸಮಾರಂಭವನ್ನು ಆಯೋಜಿಸಿದನು. ಆ ಸಮಾರಂಭದಲ್ಲಿ ಅಮೀರರಿಗೆ ಸೈನಿಕರಿಗೆ, ಬಡಬಗ್ಗರಿಗೆ, ಸಜ್ಜನರೆಲ್ಲರಿಗೂ ತನ್ನ ಸಂಪತ್ತಿನ ಬಹುಪಾಲನ್ನು ನೀಡಿ ಗೌರವಿಸಿದನು. ಯುದ್ಧ ವೀರರಿಗೆ ವಿಶೇಷ ಸನ್ಮಾನಗಳನ್ನಿತ್ತನು.

ಮಾಳವ ದೇಶದ ನಾಶ :

ಇದೇ ವರ್ಷದ ಕೊನೆಯ ದಿನಗಳಲ್ಲಿ ಸುಲ್ತಾನ್ ಅಹಮದಶಾಹನು 'ಸಮಾಂಗ್ರ' ಕೋಟೆಯ ನಿರ್ಮಾಣವನ್ನು ಮಾಡಿ ಪ್ರಮಾಣಗೊಳಿಸಿದನು. ಆ ಕೋಟೆಯಲ್ಲಿ ಒಂದು ಭವ್ಯ ಮಸೀದಿಯನ್ನೂ ಕಟ್ಟಿಸಿದನು. ಇದಾದ ನಂತರ ಸುಲ್ತಾನನು 'ಅಂದ್ರವಾನ್'ನತ್ತ ಪ್ರಯಾಣವನ್ನು ಬೆಳೆಸಿದನು. ಅಲ್ಲಿಗೆ ಬಂದು ಮಾಳವ ನಗರವನ್ನು ನಾಶಪಡಿಸಲು ಆಜ್ಞಾಪಿಸಿದನು. ಸುಲ್ತಾನ್ ಹೋಷಂಗನು ತನ್ನ ಆಪ್ತರನ್ನು ಸುಲ್ತಾನ್ ಅಹಮ್ಮದಶಾಹನ ಹತ್ತಿರ ಕಳುಹಿಸಿ ಯುದ್ಧ ಸಂಧಿ ಮಾಡಿಕೊಳ್ಳಲು ಪ್ರಾರ್ಥಿಸಿದನು. ಸುಲ್ತಾನ್‌ನು ಈ ಪ್ರಸ್ತಾಪವನ್ನು ಒಪ್ಪಿಕೊಂಡು ತನ್ನ ರಾಜಧಾನಿ ಅಹಮದಾಬಾದಿನತ್ತ ಹಿಂತಿರುಗಿದನು. ದಾರಿಯಲ್ಲಿ ಸಿಕ್ಕಿದ 'ಚನಾನೀರ್' ಕೋಟೆಯನ್ನು ನಾಶಪಡಿಸಿದನು.

ಚನಾನೀರ್‌ನ ಮೇಲೆ ಸೈನಿಕ ಆಕ್ರಮಣ :

ಹಿಜರಿ ಶಕೆ ೮೨೩ರಲ್ಲಿ ಅಹಮದಶಾಹನು ಚನಾನೀರ್ ಕೋಟೆಯನ್ನು ವಶಪಡಿಸಿಕೊಳ್ಳಲು ಅಹಮದಾಬಾದನ್ನು ಬಿಟ್ಟು ಹೊರಟನು. ಅಲ್ಲಿಗೆ ತಲುಪಿ ಕೋಟೆಗೆ ಮುತ್ತಿಗೆ ಹಾಕಿದನು. ಮುತ್ತಿಗೆಯ ಕಾಲ ಬಹಳ ದಿನಗಳಾದ್ದರಿಂದ ಚನಾನೀರ್‌ನ ರಾಜನು ಬಹಳ ತೊಂದರೆಗಳಿಗೊಳಗಾದನು. ಆತನಲ್ಲಿ ಯುದ್ಧ ಮಾಡಿ ಗೆಲ್ಲುವ ಸಾಮರ್ಥ್ಯವಿಲ್ಲದ ಕಾರಣ ಸುಲ್ತಾನನ ಅಧೀನತೆಯನ್ನು ಸ್ವೀಕರಿಸಿ ಪ್ರತಿವರ್ಷ ಕಪ್ಪ-ಕಾಣಿಕೆಗಳನ್ನು ತಪ್ಪದೆ ಸಲ್ಲಿಸಲು ಒಪ್ಪಿಕೊಂಡನು. ಇದಾದನಂತರ ಬಾದಶಹನು ಅಹಮದಾಬಾದಿಗೆ ಹಿಂತಿರುಗಿದನು.

ಮಾಂಡುವಿನ ಮೇಲೆ ಸುಲ್ತಾನ್ ಅಹಮದಶಾಹನ ಆಕ್ರಮಣ :

ಸುಲ್ತಾನ್ ಹೋಷಂಗನು ಸುಲ್ತಾನ್ ಅಹಮದಶಾಹನಿಗೆ ಕೊಟ್ಟ ವಚನದಂತೆ ನಡೆದುಕೊಳ್ಳಲಿಲ್ಲ. ಇದರಿಂದ ಕೋಪಗೊಂಡ ಸುಲ್ತಾನ್ ಅಹಮದಶಾಹನು ಒಂದು ದೊಡ್ಡ ಸೈನ್ಯವನ್ನು ತಯಾರುಮಾಡಿ ಹಿಜರಿ ಶಕೆ ೮೨೮ರಲ್ಲಿ ಮಾಳ್ವಾ ದೇಶದ ಮೇಲೆ ಯುದ್ಧಕ್ಕೆ ಹೊರಟನು. ಮಾಂಡು ಕೋಟೆಯ ಕೆಳಭಾಗಕ್ಕೆ ತಲುಪಿ, ಸಾರಂಗಪುರದ ಬಾಗಿಲಿನ ಹತ್ತಿರ ತನ್ನ ಸೈನ್ಯವನ್ನು ಜಮಾಯಿಸಿದ. ಸುಲ್ತಾನ್ ಅಹಮದಶಾಹನು ತನ್ನೆಲ್ಲ ಶಕ್ತಿಯಿಂದ ಕೋಟೆಯನ್ನು ಮುತ್ತಿದನು. ತನ್ನ ವೀರ ಅಮೀರರಿಗೆ ಯುದ್ಧದ ಭಾಗಗಳನ್ನು ಹಂಚಿಕೊಟ್ಟನು. ಸುಲ್ತಾನ್ ಹೋಷಂಗನು ತನ್ನ ಕೋಟೆಯ ಸುಭದ್ರತೆಯ ಬಗ್ಗೆ ಚೆನ್ನಾಗಿ ಅರಿತಿದ್ದವನಾಗಿದ್ದು, ಬೇಗ ವಶವಾಗದೆ ಏನಾದರೊಂದು ಚಮತ್ಕಾರವನ್ನು ತೋರುವ ಹುನ್ನಾರದಲ್ಲಿ ಒಳಗೆ ಅವಿತಿದ್ದನು.

ಹೋಷಂಗನ 'ಜಾಜ್' ನಗರದತ್ತ ಪ್ರಯಾಣ ಮತ್ತು ವಾಪಸ್ಸಾಗುವುದು :

ಸುಲ್ತಾನ್ ಹೋಷಂಗನು ತನ್ನ ಆಡಳಿತಾಧಿಕಾರವನ್ನು ಒಬ್ಬ ಆಪ್ತ ಮತ್ತು

ಬುದ್ದಿವಂತ ಅಮೀರ ಸುಪರ್ದಿಗೆ ವಹಿಸಿ ತಾನು ತನ್ನ ಆರು ಸಾವಿರ ಯೋಗ್ಯ ಸಿಪಾಯಿಗಳೊಂದಿಗೆ ಪತ್ತೆಯಿಲ್ಲದಂತೆ ನಾಗೋರಿ ಬಾಗಿಲಿನಿಂದ ಕೋಟೆಯ ಹೊರಬಂದು ಉತ್ತಮ ಆನೆಗಳನ್ನು ಹಿಡಿಯಲು ಜಾಜ್ ನಗರದತ್ತ ಹೊರಟನು. ಆರು ತಿಂಗಳ ನಂತರ ಉತ್ತಮ ಶಕ್ತಿಶಾಲಿ ಆನೆಗಳ ಹಿಂಡಿನೊಂದಿಗೆ ಮಾಂಡು ನಗರಕ್ಕೆ ಹಿಂತಿರುಗಿದನು. ಈ ವಿಷಯವು ಮುಂದಿನ ಪುಟಗಳಲ್ಲಿ ವಿವರವಾಗಿ ವರ್ಣಿಸಲಾಗಿದೆ.

ಮಾಂಡುಕೋಟೆಯ ಕೈವಶ :

ಸುಲ್ತಾನ್ ಹೋಷಂಗನು ಮಾಂಡು ಕೋಟೆಗೆ ವಾಪಸ್ಸಾದ ತಕ್ಷಣ ಕೋಟೆಯ ಬತೇರಿ (ಬುರ್ಜ್)ಗಳನ್ನೇರಿ ಅವುಗಳ ಮೇಲೆ ತನ್ನ ಬಾವುಟಗಳನ್ನು ಹಾರಿಸಿದನು. ಸಂತೋಷದ ನಗಾರಿಗಳನ್ನು ಬಾರಿಸಿದನು. ಇದರ ಅರ್ಥವೇನೆಂಬುದು ಸುಲ್ತಾನ್ ಅಹಮದಶಾಹನು ಅರಿಯದೆ ಇದರ ಕಾರಣವನ್ನು ತಿಳಿಯಬಯಸಿದನು. ಒಬ್ಬ ಗುಜರಾತಿ ನೌಕರನು ಇದರ ಅರ್ಥವನ್ನು ಪರಿಶೀಲಿಸಿ ತಿಳಿಸಿದಾಗ ಸುಲ್ತಾನ್ ಅಹಮದಶಾಹನು ಈ ಕೋಟೆಯನ್ನು ಗೆಲ್ಲುವುದು ಬಹಳ ಕಷ್ಟವೆಂದು ಹೇಳುತ್ತಾ ಬಹಳ ಆಶ್ಚರ್ಯಪಟ್ಟನು. ನನ್ನ ಸೈನ್ಯವು ಇದನ್ನು ಮುತ್ತಿದ್ದರೂ ಕೋಟೆಯ ರಕ್ಷಣೆ ಚಮತ್ಕಾರ ಯುಕ್ತವಾಗಿದೆಯೆಂದು ಆಶ್ಚರ್ಯಪಟ್ಟನು. ಆರು ತಿಂಗಳತನಕ ಈ ಕೋಟೆಯ ಸುಲ್ತಾನ್‌ನು ಹೊರಹೋಗಿ ಪುನಃ ಒಳನುಸುಳಿ ಆಡಳಿತವನ್ನು ನಡೆಸುತ್ತಿರುವುದು ವಿಚಿತ್ರವೇ ಸರಿಯೆಂದು ಚಿಂತನೆಯಲ್ಲಿ ಮುಳುಗಿದನು.

ಕೊಲೆ ಮತ್ತು ನಾಶ :

ಇದಾದ ನಂತರ ಸುಲ್ತಾನ್ ಅಹಮದಶಾಹನು ಕೋಟೆಯ ಮುತ್ತಿಗೆ ವ್ಯರ್ಥವೆಂದರಿತು, ಅಲ್ಲಿಂದ ತನ್ನ ಸೈನ್ಯವನ್ನು ಮಾಳವದ ಒಳ ಪ್ರದೇಶಗಳಿಗೆ ನುಗ್ಗಿಸಿ ಅಲ್ಲಿ ಸಿಕ್ಕ ಸಿಕ್ಕವರನ್ನು ಕೊಂದು ಲೂಟಿ, ದರೋಡೆಗಳನ್ನು ಮಾಡಿಸಿದನು. ಈ ಸಂದರ್ಭದಲ್ಲಿ ಅಲ್ಲಲ್ಲಿ ಹೋಷಂಗನ ಸೈನ್ಯಕ್ಕೂ ಸುಲ್ತಾನನ ಸೈನ್ಯಕ್ಕೂ ಹೊಡೆದಾಟಗಳು ಯುದ್ಧಗಳು ಸಂಭವಿಸಿದವು. ಪ್ರತಿಯೊಂದು ಯುದ್ಧದಲ್ಲೂ ಸುಲ್ತಾನ್ ಅಹಮದಶಾಹನಿಗೆ ಗೆಲುವು ದೊರೆಯುತ್ತಿತ್ತು. ಈ ಯುದ್ಧಗಳ ನಂತರ ಅಹಮ್ಮದಶಾಹನು ತನ್ನ ರಾಜಧಾನಿಯತ್ತ ವಾಪಸ್ಸಾದನು.

ಮುಲ್ಲಾ ಅಹಮದನ ವಿಚಾರ :

"ತಾರೀಖಿಲ್ ಘೀ" (ಘೀ ಎಂಬುವನ ಚರಿತ್ರೆ)ಯಲ್ಲಿ ನಮ್ಮ ಗುರುಗಳಾದ ಮುಲ್ಲಾ ಅಹಮದರವರು ಈ ಯುದ್ಧಗಳನ್ನು ಹೀಗೆ ವಿವರಿಸಿದ್ದಾರೆ. –ಹಿಜರಿ ೮೨೬ರಲ್ಲಿ ಸುಲ್ತಾನ್ ಹೋಷಂಗನು ವ್ಯಾಪಾರಿಯ ವೇಷದಲ್ಲಿ 'ಜಾಜ'ನಗರಕ್ಕೆ

ಪ್ರಯಾಣವನ್ನು ಬೆಳೆಸಿದನು. ಬಹಳ ದಿನಗಳಿಂದ ಹೋಷಂಗನು ಮಾಳವದ ಹೊರಗಿದ್ದಾನೆಂದು ಆತನ ಅಮೀರರು, ಸರದಾರರು ಮಾಳವವನ್ನು ತಮ್ಮಲ್ಲಿ ಹರಿದು ಹಂಚಿಕೊಂಡಿದ್ದಾರೆಂದು ಸುಲ್ತಾನ್ ಅಹಮದಶಾಹನಿಗೆ ಸಮಾಚಾರವು ಸಿಕ್ಕಿತು. ತಕ್ಷಣ ಸುಲ್ತಾನ್ ಅಹಮದಶಾಹನು ತನ್ನ ಸೈನ್ಯದೊಂದಿಗೆ ಮಾಂಡುವನ್ನು ಗೆಲ್ಲಲು ಅಲ್ಲಿಗೆ ಧಾವಿಸಿದನು.

ವಿನಾಶ ಮತ್ತು ಸಾರ್ವತ್ರಿಕ ಕೊಲೆ :

ಮಾಂಡುವಿನ ಅಮೀರರು ಸುಲ್ತಾನ್ ಅಹಮದಶಾಹನ ಸೈನ್ಯವನ್ನು ಎದುರಿಸಿ ನಿಂತರು. ಸುಲ್ತಾನ್‌ನು ಮಾಂಡು ಕೋಟೆಯನ್ನು ಸುತ್ತುವರಿದನು. ತನ್ನ ಸೈನ್ಯದ ಒಂದು ಭಾಗವನ್ನು ಮಾಳವ ದೇಶದ ಪ್ರಮುಖ ನಗರಗಳನ್ನು ನಾಶಪಡಿಸಿ ಲೂಟಿ ಮಾಡಲು ಕಳುಹಿಸಿದನು. ಗುಜರಾತಿಗಳು ಮಾಳವ ಪ್ರದೇಶಗಳನ್ನು ಸರ್ವನಾಶಗೊಳಿಸಿದರು.

ಅಜೀನ್‌ನತ್ತ ಪ್ರಯಾಣ :

ಈ ಮಧ್ಯೆ ಮಳೆಗಾಲದ ಆರ್ಭಟ ಹೆಚ್ಚಾಯಿತು. ಮಾಂಡು ಕೋಟೆಯನ್ನು ಸುಲಭವಾಗಿ ವಶಪಡಿಸಿಕೊಳ್ಳುವುದು ಸಾಧ್ಯವಿಲ್ಲವೆಂದು ತಿಳಿದ ಸುಲ್ತಾನ್‌ನು ಕೋಟೆಯ ಮುತ್ತಿಗೆಯನ್ನು ತೆರವುಗೊಳಿಸಿ 'ಅಜೀನ್'ನಗರದತ್ತ ಪ್ರಯಾಣವನ್ನು ಬೆಳೆಸಿದನು. ಸುಲ್ತಾನ್‌ನು ತನ್ನ ಸೈನ್ಯವನ್ನು ಅಮೀರರಿಗೆ ಹಂಚಿದನು. ತನ್ನ ರಾಜ್ಯ ಗುಜರಾತಿನಿಂದ ಕೋಟೆಗಳನ್ನು ಒಡೆಯುವ ಫಿರಂಗಿ ಮತ್ತಿತರ ಸಾಮಾನುಗಳನ್ನು ತರಲು ಆಜ್ಞಾಪಿಸಿದನು. ಅಹಮದಾಬಾದಿನ ರಕ್ಷಣೆಯಲ್ಲಿ ತೊಡಗಿದ್ದ ಕೊತ್ವಾಲ ಮಲಿಕ ಮಹಬೂಬ್ ಎಂಬುವನು ಅಗತ್ಯ ಸಾಮಾನುಗಳೊಂದಿಗೆ ಸುಲ್ತಾನ್ ಅಹಮದಶಾಹನಿದ್ದ ಜಾಗಕ್ಕೆ ತಲುಪಿದನು.

ಮಾಂಡು ಕೋಟೆಯ ಎರಡನೇ ಸಲದ ಮುತ್ತಿಗೆ :

ಸುಲ್ತಾನ್ ಅಹಮದಶಾಹನು ಪುನಃ ಮಾಂಡುಕೋಟೆಯನ್ನು ಮುತ್ತಿದನು. ಮಲಿಕ್ ಮಹಿಬೂಬನನ್ನು ತಾರಾಪುರದ ಹಾದಿಯಲ್ಲಿ ನೇಮಿಸಿದನು. ಈ ಮಧ್ಯೆ ಹೋಷಂಗನು ಜಾಜ್ ನಗರದಿಂದ ವಾಪಸ್ಸು ಬಂದಿರುವನೆಂಬ ಸುದ್ದಿ ತಿಳಿಯಿತು. ಅಹಮದಶಾಹನು ತನ್ನೆಲ್ಲಾ ಅಮೀರರನ್ನು ಕರೆಯಿಸಿಕೊಂಡು ಒಂದು ಸಭೆಯನ್ನು ನಡೆಸಿ ಪರಿಸ್ಥಿತಿಯನ್ನು ವಿಮರ್ಶಿಸಿದನು. ಹೋಷಂಗನನ್ನು ಮಾಳವಕ್ಕೆ ಪ್ರವೇಶಿಸದಂತೆ ಎಲ್ಲಾ ಮಾರ್ಗಗಳನ್ನು ಮುಚ್ಚುವಂತೆ ಆಜ್ಞಾಪಿಸಿದನು.

ಸಾರಂಗಪುರದತ್ತ ಪ್ರಯಾಣದ ಇಂಗಿತ :

ಇದಾದ ನಂತರ ಅಹಮದಶಾಹನು ಸ್ವತಃ ಸಾರಂಗಪುರದತ್ತ ಪ್ರಯಾಣವನ್ನು

ಬೆಳೆಸಿದನು. ಹೋಷಂಗನಿಗೆ ಈ ಸಮಾಚಾರವು ಗೊತ್ತಾದ ತಕ್ಷಣ ಆತನೂ ಕೂಡ ಬೇರೆ ಮಾರ್ಗವನ್ನು ಹಿಡಿದು ಸಾರಂಗಪುರದತ್ತ ಚಲಿಸಿದನು. ಹೋಷಂಗನು ತನ್ನ ಆಪ್ತಮಿತ್ರರನ್ನು ಸುಲ್ತಾನ್ ಅಹಮದಶಾಹನ ಹತ್ತಿರ ಕಳುಹಿಸಿ ಸ್ನೇಹ ಹಸ್ತವನ್ನು ಚಾಚಿದ್ದನು. ಇದೊಂದು ಆತನ ಕಪಟ ನಾಟಕವಾಗಿತ್ತು. ಈ ಮೋಸಕ್ಕೆ ಬಿದ್ದ ಸುಲ್ತಾನ್ ಅಹಮದಶಾಹನು ತನ್ನೆಲ್ಲ ರಕ್ಷಣೆಯನ್ನು, ಸೈನ್ಯವನ್ನು ಸಡಿಲಗೊಳಿಸಿ ಕೊಂಡನು.

ಗುಜರಾತಿನ ಸೈನ್ಯದ ಮೇಲೆ ರಾತ್ರಿಯ ದಾಳಿ :

ಹಿಜರಿ ೮೨೬ರ ಮೊಹರಂ ತಿಂಗಳ ಒಂದು ರಾತ್ರಿಯಲ್ಲಿ ಸುಲ್ತಾನ್ ಅಹಮದಶಾಹನ ಸೈನ್ಯದ ಮೇಲೆ ಹೋಷಂಗನು ದಾಳಿಯನ್ನು ನಡೆಸಿದನು. ಅಸಂಖ್ಯಾತ ಸೈನಿಕರು ಶತ್ರುಸೈನಿಕರ ದಾಳಿಗೆ ಸಿಕ್ಕಿ ಮರಣ ಹೊಂದಿದರು. ಹೋಷಂಗನ ಕಪಟಕ್ಕೆ ಬಲಿಯಾದರು. ಕೆಲ ಸೈನಿಕರು ತಪ್ಪಿಸಿಕೊಂಡು ಅತ್ತಿತ್ತ ಓಡಿದರು. ಸುಲ್ತಾನ್ ಅಹಮದಶಾಹನು ಮೈಮರೆತು ನಿದ್ದೆಯಲ್ಲಿದ್ದವನು ಎಚ್ಚರಗೊಂಡು ನೋಡಲು ತನ್ನ ಡೇರೆಯ ಕಾವಲುಗಾರರ ಮಲಿಕ್ ಜೋನಾರ್‌ನ ಹೊರತು ಅಲ್ಲಿ ಯಾರೂ ಇರಲಿಲ್ಲ. ಅದೃಷ್ಟವಶಾತ್ ಅಲ್ಲಿ ಎರಡು ಕುದುರೆಗಳು ನಿಂತಿದ್ದವು. ಒಂದರ ಮೇಲೆ ಸುಲ್ತಾನ್ ಅಹಮ್ಮದನು, ಮತ್ತೊಂದರ ಮೇಲೆ ಮಲಿಕ್ ಜೋನಾರನು ಕುಳಿತು ಕಾಡಿನತ್ತ ಓಡಿದರು.

ಸುಲ್ತಾನ್ ಅಹಮದಶಾಹನಿಗೆ ಕಾಡಿನ ಆಶ್ರಯ :

ಕಾಡಿನಲ್ಲಿ ಆಶ್ರಯವನ್ನು ಪಡೆದ ಅಹಮದಶಾಹನು ಒಂದು ಪೊದೆಯಲ್ಲಿ ಅವಿತುಕೊಂಡು ತನ್ನೊಂದಿಗೆ ಬಂದಿದ್ದ ಮಲಿಕ್ ಜೋನಾರನನ್ನು ಸೈನ್ಯವು ಬೀಡು ಬಿಟ್ಟಿದ್ದ ಜಾಗಕ್ಕೆ ಅಲ್ಲಿನ ಪರಿಸ್ಥಿತಿಯನ್ನರಿಯಲು ಕಳುಹಿಸಿಕೊಟ್ಟನು. ಜೋನಾರನು ಸೈನ್ಯವಿದ್ದೆಡೆಗೆ ತಲುಪಿದನು. ಆತನು ಕಂಡಿದ್ದೇನೆಂದರೆ–ಮಲಿಕ್ ಮುಖ್ರಾಬ್ ಮತ್ತು ಮಲಿಕ್ ಫರೀದರು ತಮ್ಮ ತಮ್ಮ ಸೈನ್ಯದ ತುಕಡಿಗಳೊಂದಿಗೆ ಸುಲ್ತಾನ್ ಅಹಮದಶಾಹನನ್ನು ಹುಡುಕಲು ಬರುತ್ತಿದ್ದರು. ದಾರಿಯಲ್ಲಿ ಇವರಿಬ್ಬರು ಮಲಿಕ್ ಜೋನಾರನನ್ನು ಕಂಡರು. ಬಾದಶಹರ ಸ್ಥಿತಿಯನ್ನು ವಿಚಾರಿಸಿದರು. ಮಲಿಕ ಜೋನಾರನು ಎಲ್ಲ ಸಮಾಚಾರವನ್ನು ತಿಳಿಸಿದನು. ಆ ಇಬ್ಬರು ಅಮೀರರನ್ನು ತನ್ನೊಡನೆ ಕರೆದುಕೊಂಡು ಬಾದಶಹರು ಅಡಗಿ ಕುಳಿತಿದ್ದ ಜಾಗಕ್ಕೆ ಬಂದರು.

ಲೂಟಿ–ಕೊಲೆ :

ಆ ಸಂದರ್ಭದಲ್ಲಿ ಸುಲ್ತಾನ್ ಅಹಮದಶಾಹನು ಸ್ನಾನ ಮಾಡುತ್ತಿದ್ದನು. ಅವಸರದಲ್ಲಿ ಓಡಲು ಹೊರಟು ತನ್ನ ಶರೀರದ ಮೇಲೆ ಯಾವುದೇ ಉಡುಪು

ಇಲ್ಲದ ಕಾರಣ ಯಾವ ಆಯುಧವನ್ನು ಸಿಕ್ಕಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಮಲಿಕ್ ಮುಖ್ರಬನು ತಕ್ಷಣ ಬಾದಶಹರಿಗೆ ಆಯುಧಗಳನ್ನು, ಉಡುಪುಗಳನ್ನು ನೀಡಿ ಯುದ್ಧಕ್ಕೆ ಅನುಮತಿಯನ್ನು ಕೇಳಿದನು. ಬಾದಶಹನು ಈಗ ಯುದ್ಧಕ್ಕಿಂತ ಬೆಳಗಾಗುವದನ್ನು ನಿರೀಕ್ಷಿಸಬೇಕಾಗಿದೆ. ರಾತ್ರಿ ಕಳೆಯಲಿ ನಂತರ ಯಾವುದಾದರೊಂದು ಉಪಾಯವನ್ನು ಮಾಡೋಣವೆಂದು ತಿಳಿಸಿದನು. ಬಾದಶಹನು ಮಲಿಕ ಜೋನಾರನನ್ನು ಸೈನ್ಯ ಬೀಡು ಬಿಟ್ಟ ಜಾಗಕ್ಕೆ ಅಲ್ಲಿನ ಸ್ಥಿತಿಗತಿಯನ್ನು ತಿಳಿದು ಬರಲು ಕಳುಹಿಸಿದನು. ಹೋಷಂಗನು ಅಲ್ಲಿ ಏನು ಮಾಡುತ್ತಿದ್ದಾನೆ? ಆತನ ಸೈನ್ಯವು ಎಲ್ಲಿ ಬೀಡು ಬಿಟ್ಟಿದೆ? ಎಂದು ತಿಳಿದು ಬಂದ ಜೋನಾರ ಹೀಗೆ ಹೇಳಿದನು. –ಸುಲ್ತಾನ್‌ರೇ ಹೋಷಂಗನ ಸೈನ್ಯವು ನಮ್ಮ ಶಿಬಿರದ ಎಲ್ಲರನ್ನೂ ಲೂಟಿ ಮಾಡುತ್ತಿದ್ದಾನೆ. ಸುಲ್ತಾನ್ ಹೋಷಂಗನು ಅಲ್ಲಿಯೇ ಒಂದು ಕಡೆ ತನ್ನ ಕುದುರೆಗಳು ಮತ್ತು ಆನೆಗಳ ಹತ್ತಿರ ನಿಂತು ಕೊಳ್ಳೆ ಹೊಡೆಯುತ್ತಿರುವುದನ್ನು ನೋಡುತ್ತಿದ್ದಾನೆ.

ಯುದ್ಧದ ಘೋಷಣೆ :

ಬೆಳಗಾಗುತ್ತಲೇ ಸುಲ್ತಾನ್ ಅಹಮದಶಾಹನು ಒಂದು ಸಾವಿರ ಕುದುರೆ ಸವಾರರ ಗುಂಪನ್ನು ತೆಗೆದುಕೊಂಡು ಹೋಷಂಗನ ಮೇಲೆ ಆಕ್ರಮಣವನ್ನು ಮಾಡಿದನು. ಇಬ್ಬರಲ್ಲೂ ಭಯಾನಕ ಘೋರ ಯುದ್ಧವು ನಡೆಯಿತು. ಸ್ವತಃ ಇಬ್ಬರು ಸುಲ್ತಾನ್‌ರು ಸಹ ಸಾಮಾನ್ಯ ಸಿಪಾಯಿಗಳಂತೆ ಸೆಣಸಾಡಿದರು. ಇಬ್ಬರಿಗೂ ಗಾಯಗಳಾದವು. ಈ ಮಧ್ಯ ಗುಜರಾತಿನ ಆನೆಯ ಸವಾರರು ತನ್ನ ಬಾದಶಹರು ಯುದ್ದವಾಡುತ್ತಿರುವುದನ್ನು ಕಂಡು ಉತ್ಸಾಹಭರಿತರಾಗಿ ಹಿಂದೆ ಮುಂದೆ ನೋಡದೆ ಶತ್ರುಸೈನ್ಯದ ಮೇಲೆ ಆನೆಗಳನ್ನು ನುಗ್ಗಿಸಿ ಆಕ್ರಮಣವನ್ನು ಮಾಡಿದರು.

ಸುಲ್ತಾನ್ ಹೋಷಂಗನು ಪರಾರಿ :

ಸುಲ್ತಾನ್ ಹೋಷಂಗನು ಅಹಮದಶಾಹನ ಆಕ್ರಮಣದ ಸಾಮರ್ಥ್ಯವನ್ನು ತಡೆದುಕೊಳ್ಳಲಾರದೆ ಯುದ್ಧ ಮೈದಾನದಿಂದ ಪರಾರಿಯಾದನು. ಸಾರಂಗಪುರದ ಕೋಟೆಯಲ್ಲಿ ಆಶ್ರಯವನ್ನು ಪಡೆದು ಅವಿತನು. ಗುಜರಾತಿ ಸೈನಿಕರು ತಮ್ಮನ್ನು ಲೂಟಿ ಮಾಡಿದ್ದ ಎಲ್ಲ ಸಾಮಾನುಗಳನ್ನು ಶತ್ರು ಸೈನಿಕರಿಂದ ವಾಪಸ್ ಪಡೆದುಕೊಂಡರು. ಅಷ್ಟೇ ಅಲ್ಲ ಶತ್ರು ಸೈನಿಕರ ಸಾಮಾನುಗಳನ್ನು ಪಡೆದುಕೊಂಡರು. ಸುಲ್ತಾನ್ ಅಹಮದಶಾಹನು ಹೋಶಂಗನನ್ನು ಹಿಂಬಾಲಿಸಿ ಆತನ ಶಕ್ತಿಶಾಲಿ ಆನೆಗಳ ಸಮೇತ ಹೋಷಂಗನನ್ನು ಸೆರೆ ಹಿಡಿದನು.

ಮತ್ತೊಂದು ಯುದ್ಧದ ಚಟುವಟಿಕೆಗಳು :

ಸುಲ್ತಾನ್ ಅಹಮದಶಾಹನು ಸಾರಂಗಪುರದ ಮುತ್ತಿಗೆಯು ಬಹಳ ಕಾಲ

ಹಿಡಿದಿದ್ದರಿಂದ ಸ್ವಲ್ಪ ಚಿಂತೆಗೆ ಒಳಗಾದನು. ಕೊನೆಗೆ ತನ್ನ ರಾಜಧಾನಿಯತ್ತ ಹೊರಡಲು ಸಿದ್ಧನಾದನು. ಈ ಅವಕಾಶದ ಲಾಭವನ್ನು ಪಡೆಯಲು ಉದ್ದೇಶಿಸಿದ ಹೋಶಂಗನು ಕೋಟೆಯಿಂದ ಹೊರಬಂದು ಸುಲ್ತಾನ್ ಅಹಮದಶಾಹನೊಂದಿಗೆ ಯುದ್ಧಕ್ಕೆ ಸಿದ್ಧನಾದನು. ಇಬ್ಬರಲ್ಲೂ ಮತ್ತೊಮ್ಮೆ ಘೋರ ಯುದ್ಧವೇ ನಡೆಯಿತು. ಈ ಯುದ್ಧದಲ್ಲೂ ಅಹಮದಶಾಹನಿಗೆ ಜಯವು ಲಭಿಸಿತು. ಜಾಜ್ ನಗರದಿಂದ ತಂದ ಶಕ್ತಿಶಾಲಿ ಆನೆಗಳೂ ಸುಲ್ತಾನ್ ಅಹಮದನ ವಶವಾದುವು.

ಅಹಮದಾಬಾದಿಗೆ ವಾಪಸ್ಸ ಬಂದನು :

ಯುದ್ಧಗಳಲ್ಲಿ ಗೆದ್ದ ಸಂತೋಷದಿಂದ ಸುಲ್ತಾನ್ ಅಹಮದಶಾಹನು ಅಹಮದಾಬಾದಿಗೆ ಹಿಂತಿರುಗಿದನು. ಪ್ರಸಿದ್ಧ ಸೂಫಿ ಸಂತ ಹಜರತ್ ಶೇಖ್ ಕೀನೂ ಅವರಿಗೆ ತುಂಬಾ ಶ್ರದ್ಧೆಯಿಂದ ಸನ್ಮಾನಿಸಿದನು. ಈ ಸಂತರು ಆತನ ಗೆಲುವಿನ ಭವಿಷ್ಯ ವಾಣಿಯನ್ನು ಮಾಡಿ ಆಶೀರ್ವದಿಸಿದ್ದರು. ಆನ್-ಗುಂಬತ್ ಗುಜರಾತಿ ಶೇಖ್ ಸಾಹೇಬರ ದರ್ಗಾಕ್ಕೂ ಭೇಟಿ ನೀಡಿದ್ದನು. ಹಿಂದಿನ ಪ್ರಯಾಣದಲ್ಲಿ ಗುಜರಾತಿ ಸೈನಿಕರು ಬಹಳ ಕಷ್ಟಪಟ್ಟು ತೊಂದರೆಗಳನ್ನು ಅನುಭವಿಸಿ ಗೆಲುವನ್ನು ಸಾಧಿಸಿದ್ದರು. ಇದರಿಂದ ಬೇಸತ್ತ ಸುಲ್ತಾನ್‌ನು ಕೆಲವು ವರ್ಷಗಳವರೆಗೆ ಶಾಂತಿಯಿಂದ ಕಾಲವನ್ನು ಕಳೆಯಲು ನಿರ್ಧರಿಸಿದನು.

ಅಹಮದನಗರದ ಪಟ್ಟಣವನ್ನು ಸ್ಥಾಪಿಸುವುದು :

ಹಿಜರಿ ೮೨೯ರಲ್ಲಿ ಸುಲ್ತಾನ್ ಅಹಮ್ಮದಶಾಹನು ಐದರ ಕೋಟೆಯತ್ತ ಪ್ರಯಾಣವನ್ನು ಬೆಳೆಸಿದನು. ಸಾಬರಮತಿ ನದಿಯ ದಡದಲ್ಲಿ ಬೀಡು ಬಿಟ್ಟು ಒಂದು ಹೊಸ ನಗರವನ್ನು ನಿರ್ಮಿಸಿದನು. ಅದರ ಹೆಸರು "ಅಹಮದ್ ನಗರ"ವೆಂದು ಕರೆದನು. ಈ ಪಟ್ಟಣದ ಪಕ್ಕದಲ್ಲಿಯೇ ಒಂದು ಕೋಟೆಯನ್ನು ನಿರ್ಮಿಸಿ ಈ ಪ್ರದೇಶದ ಅನೇಕ ನಗರಗಳಲ್ಲಿ ತನ್ನ ಸೈನ್ಯವನ್ನು ಇಟ್ಟಿದ್ದನು. ಆಗಾಗ್ಗೆ ಆ ಪ್ರದೇಶದ ಸುತ್ತಮುತ್ತಲಿನ ಶಾಸಕರನ್ನು ಸೋಲಿಸಿ, ವಿನಾಶದ ಲೂಟಿಗಳನ್ನು ನಡೆಸುತ್ತಿದ್ದನು. ಲೂಟಿಯಲ್ಲಿ ದೊರೆತ ಸಂಪತ್ತನ್ನು ತನ್ನ ರಾಜಧಾನಿಗೆ ತರಿಸುತ್ತಿದ್ದನು. ಅಹಮದನಗರದ ಕೋಟೆಯ ನಿರ್ಮಾಣದ ನಂತರ ಅಹಮದಶಾಹನು ಐದರ್ ನಗರಕ್ಕೆ ಪ್ರಯಾಣವನ್ನು ಬೆಳೆಸಿದನು.

ಐದರ ಕೋಟೆಯ ಕೈವಶ :

ಹಿಂದೆ ಸುಲ್ತಾನ್ ಮುಜಫರ್‌ಶಾಹನೂ ಒಮ್ಮೆ ಗೆದಿದ್ದ ಐದರ್ ಕೋಟೆಯನ್ನು ಅಹಮದಶಾಹನು ಒಂದೇ ದಿನದಲ್ಲಿ ಗೆದ್ದು ತನ್ನ ವಶಕ್ಕೆ ತೆಗೆದುಕೊಂಡನು. ಇದಾದ ನಂತರ ಮತ್ತೆ ಮೂರು ಕೋಟೆಗಳನ್ನು ವಶಪಡಿಸಿ ಕೊಂಡನು. ರಾಜ ಐದರನು

ಓಡಿ ಹೋಗಿ ಬೀಜಾ ನಗರದ ಕಾಡುಗಳಲ್ಲಿ ವಾಸ ಮಾಡಲಾರಂಭಿಸಿದನು. ಅಹಮದಶಾಹನು ಗೆಲುವಿನ ಸಂತೋಷದಲ್ಲಿ ಹಿಂತಿರುಗಿದನು.

ಐದರ ಕೋಟೆಯ ಮೇಲೆ ಮತ್ತೊಮ್ಮೆ ಆಕ್ರಮಣ :

ಹಿಜರಿ ೮೩೦ರಲ್ಲಿ ಅಹಮದನಗರ ಮತ್ತು ಅದರ ಕೋಟೆಗಳ ನಿರ್ಮಾಣ ಕಾರ್ಯವು ಪೂರ್ಣಗೊಂಡಿತ್ತು. ಸುಲ್ತಾನ್‌ನು ಮತ್ತೊಮ್ಮೆ ಐದರ ಕೋಟೆಯತ್ತ ನಡೆದನು. ಅಲ್ಲಿನ ರಾಜ ಪೂಂಜಾರಾಯನು ತನ್ನ ಪೂರ್ವಿಕ ಹಿರಿಯರು ಕೂಡಿಸಿದ್ದ ಅಪಾರ ಸಂಪತ್ತನ್ನು ಹೇರಳವಾಗಿ ಖರ್ಚು ಮಾಡಿ ತನ್ನ ಸೈನ್ಯ ಶಕ್ತಿಯನ್ನು ವೃದ್ಧಿಸಿಕೊಂಡಿದ್ದನು. ಈ ಸೈನ್ಯದಿಂದ ಅಹಮದಶಾಹನನ್ನು ಸೋಲಿಸುವ ಯತ್ನದಲ್ಲಿದ್ದನು. ಆದರೆ ಆತನ ಪ್ರಯತ್ನವು ಫಲಿಸಲಿಲ್ಲ. ಕೊನೆಗೆ ಸೋತು ವಿವಶನಾಗಿ ತನ್ನ ದೇಶದ ಗಡಿಯನ್ನೇ ಬಿಟ್ಟು ಹೋಗಿ ಅತ್ತಿತ್ತ ತಿರುಗಲು ಪ್ರಾರಂಭಿಸಿದನು. ರಾಜ ಪೂಂಜಾ ಎಂಬುವವನು ಹಿಜರಿ ೮೩೧ರಲ್ಲಿ ಗುಜರಾತಿಗಳ ಮೇಲೆ ಹಲ್ಲೆ ಮಾಡಲು ಬಂದು ಆಕ್ರಮಣವನ್ನು ಮಾಡಿಯೇ ಬಿಟ್ಟನು. ಆದರೆ ಅವನು ಹೀನಾಯ ಸೋಲನ್ನನುಭವಿಸಿ ಓಡಿ ಹೊದನು. ಆತನಿಗೆ ಎಷ್ಟು ಲಾಭವಾಗಿತ್ತೆಂದರೆ ಗುಜರಾತಿಗಳ ಒಂದು ಹೆಸರಾಂತ ಆನೆಯನ್ನು ಮೋಸದಿಂದ ಸೆರೆಹಿಡಿದು ತನ್ನೊಂದಿಗೆ ಎಳೆದೊಯ್ದಿದ್ದನು.

ರಾಜನ ಮರಣ :

ರಾಜ ಪೂಂಜಾನ ಈ ಅನಗತ್ಯ ಆಕ್ರಮಣದ ವಿಚಾರ ಗುಜರಾತಿಗಳಿಗೆ ತಿಳಿದ ಕೂಡಲೇ ಆತನನ್ನು ಹಿಂಬಾಲಿಸಿ ಆತನ ಮೇಲೆ ಯುದ್ಧವನ್ನು ಸಾರಿದರು. ಬೆಟ್ಟಗುಡ್ಡಗಳ ಒಂದು ಇಕ್ಕಟ್ಟಾದ ಕಣಿವೆಯ ದಾರಿಯಲ್ಲಿ ಆತನನ್ನು ಸಿಕ್ಕಿಸಿಕೊಂಡು ಎರಡೂ ಕಡೆಗಳಲ್ಲಿ ಸ್ವಲ್ಪ ಹೋರಾಟವು ನಡೆಯಿತು. ರಾಜನು ಗುಜರಾತಿಗಳ ಒಂದು ಆನೆಯನ್ನು ತೆಗೆದುಕೊಂಡು ಓಡಿದ್ದನು. ಆ ಆನೆಯ ಮಾವುತನು ಬಹಳ ಚತುರನೂ, ಆನೆಯ ಮಿತ್ರನೂ ಆಗಿದ್ದನು. ಮಾವುತನು ಸಮಯವನ್ನು ನೋಡಿ ಆನೆಗೆ ತನ್ನ ಸನ್ನೆಯನ್ನು ಮಾಡಿದ ತಕ್ಷಣ ಆನೆಯು ರಾಜನ ಕುದುರೆಯ ಮೇಲೆ ಬಲವಾಗಿ ನುಗ್ಗಿತು. ರಾಜನ ಕುದುರೆಯು ಕೆಳಗೆ ಬಿದ್ದ ತಕ್ಷಣ ಬೆಟ್ಟದ ಕಣಿವೆಯಲ್ಲಿ ಉರುಳಿದ ಕುದುರೆ ಮತ್ತು ರಾಜನ ಸಮೇತ ಇಬ್ಬರೂ ಸತ್ತುಹೋದರು. ಆನೆ ತನ್ನ ಮಾವುತನ ಹತ್ತಿರ ಓಡಿ ಬಂದಿತು. ರಾಜನ ಸೈನ್ಯವು ದಿಕ್ಕೆಟ್ಟು ಓಡಿತು. ಯಾರೂ ರಾಜನ ಶವವನ್ನು ತೆಗೆದುಕೊಳ್ಳಲು ಬರಲಿಲ್ಲ.

ರಾಜನ ತಲೆ ದೇಹದಿಂದ ಬೇರ್ಪಟ್ಟು ಸಿಕ್ಕಿತು :

ಒಂದು ದಿನ ಒಬ್ಬ ವ್ಯಕ್ತಿ ಅದೇ ಕಣಿವೆಯ ಮಾರ್ಗದಿಂದ ಹೋಗುತ್ತಿದ್ದಾಗ

ರಾಜನ ಶವವನ್ನು ಗುರುತಿಸಿದ. ಆತನ ತಲೆಯನ್ನು ಶರೀರದಿಂದ ಬೇರ್ಪಡಿಸಿಕೊಂಡು ಸುಲ್ತಾನ್ ಅಹಮದಶಾಹನ ಹತ್ತಿರ ತಂದನು. ಬಾದಶಹನು ಕೆಲವು ಬುದ್ಧಿವಂತರನ್ನು ಕರೆಯಿಸಿ ಆ ತಲೆಯು ಪೂಂಜಾ ರಾಜನ ತಲೆಯೇ ಆಗಿದೆ ಎಂದು ಗುರುತಿಸಲು ಆಜ್ಞಾಪಿಸಿದನು. ಆದರೆ ಯಾರೂ ಇದು ರಾಜನ ತಲೆಯೇ ಹೌದು ಎಂದು ಗುರುತಿಸಲಾರದೇ ಹೋದರು. ಕೊನೆಗೊಮ್ಮೆ ಒಬ್ಬ ವ್ಯಕ್ತಿಯು ಅಲ್ಲಿಗೆ ಬಂದನು. ಆತನು ಹಿಂದೆ ಅದೇ ರಾಜನ ಆಸ್ಥಾನದಲ್ಲಿ ಆತನ ಗುಲಾಮನಾಗಿ ಸೇವೆ ಸಲ್ಲಿಸಿದ್ದನು. ಆತನು ಆ ತಲೆಯನ್ನು ಕಂಡ ತಕ್ಷಣ ಬಹಳ ಗೌರವ ಪೂರ್ವಕವಾಗಿ ನಮಸ್ಕರಿಸಿದನು. ನಂತರ ಸುಲ್ತಾನ್‌ರತ್ತ ತಿರುಗಿ ಹೌದು ಇದು ಐದರ ರಾಜನ ತಲೆಯಾಗಿದೆ ಎಂದನು. ಈತನ ನಡತೆ, ದೃಢತೆಯನ್ನು ಕಂಡ ಸುಲ್ತಾನನು ಆತನಿಗೆ ಬಹಳವಾಗಿ ಸನ್ಮಾನಿಸಿದನು.

ವಪೇರಾವ್‌ನೊಂದಿಗೆ ಸಂಧಿ :

ಮಾರನೇ ದಿನವೇ ಸುಲ್ತಾನ ಅಹಮದಶಾಹನು ಐದರಕೋಟೆಯತ್ತ ನಡೆದನು. ಬೇಲ ನಗರದತ್ತ ಒಂದು ವಿಶಾಲ ಸೈನ್ಯವನ್ನು ಕಳುಹಿಸಿ ಅದರ ಸುತ್ತಮುತ್ತ ವಿನಾಶಕಾರಿ ದಾಳಿಯನ್ನು ಪ್ರಾರಂಭಿಸಿದನು. ತಂದೆ ಪೂಂಜಾನ ಮರಣದ ನಂತರ ಆತನ ಮಗ ವಪೇರಾವ್ ಎಂಬುವವನು ಸಿಂಹಾಸನವನ್ನೇರಿದ್ದನು. ಸುಲ್ತಾನ್ ಅಹಮದಶಾಹನನ್ನು ಎದುರಿಸುವ ಶಕ್ತಿ ಅವನಲ್ಲಿರಲಿಲ್ಲ. ಸುಲ್ತಾನನಿಗೆ ಶರಣಾಗಿ, ವಿನಯಪೂರ್ವಕವಾಗಿ ಅಧೀನತೆಯನ್ನು ಒಪ್ಪಿಕೊಂಡನು. ಇದರೊಂದಿಗೆ ಪ್ರತಿವರ್ಷ ಮೂರು ಲಕ್ಷ ಚಿನ್ನದ ನಾಣ್ಯಗಳನ್ನು ಅಹಮದಶಾಹನ ಖಜಾನೆಗೆ ರವಾನೆ ಮಾಡಲು ಒಪ್ಪಿಕೊಂಡನು. ಸುಲ್ತಾನನು ಅಲ್ಲಿಂದ ಅಹಮದ ನಗರಕ್ಕೆ ಬಂದು ಅಲ್ಲಿನ ಶಾಸಕನನ್ನು ಬದಲಾಯಿಸಿ ಸಫರ್‌ಉಲ್-ಮುಲ್ಕ ಎಂಬುವವನನ್ನು ನೇಮಿಸಿದನು. ದಾರಿಯಲ್ಲೆ ಇದ್ದ ವಿಲಾಯತ್ ಗಂಗ್ವಾರ ನಗರವನ್ನು ನಾಶಪಡಿಸಿ ಅಹಮದಾಬಾದಿಗೆ ವಾಪಸ್ಸಾದನು.

ಐದರ್ ಕೋಟೆಯ ಮೇಲೆ ಮತ್ತೊಂದು ಆಕ್ರಮಣ :

ಹಿಜರಿ ಶಕೆ ೮೩೨ರಲ್ಲಿ ಸುಲ್ತಾನ್ ಅಹಮದಶಾಹನು ಮತ್ತೊಮ್ಮೆ ಐದರ್ ನಗರವನ್ನು ಮುತ್ತಿದನು. ಸಫರ್ ತಿಂಗಳ ೨೬ನೇ ತಾರೀಖಿನಂದು ಅಲ್ಲಿನ ಒಂದು ಪ್ರಸಿದ್ಧ ಕೋಟೆಯನ್ನು ಗೆದ್ದು ಹಿಸ್ಸಾರ್ ಎಂಬ ನಗರದಲ್ಲಿ ಪ್ರವೇಶಿಸಿದನು. ಅಲ್ಲಿ ಒಂದು ಮಸೀದಿಯನ್ನು ಕಟ್ಟಿಸಿದನು. ಈ ಗೆಲುವುಗಳಿಗೆ ಅಲ್ಲಾನ ಕೃಪೆಯೆಂದು ಪ್ರಾರ್ಥಿಸಿದನು. ನಂತರ ಬಾದಶಹನು ಅಹಮದಾಬಾದಿಗೆ ವಾಪಸ್ಸಾದನು.

ಜಾಲೂದ ಶಾಸಕ ಬುರ್ಹಾನ್‌ಪುರದಲ್ಲಿ :

ಹಿಜರಿ ೮೩೩ರಲ್ಲಿ ಜಾಲೂದ ನಗರದ ಶಾಸಕನಾದ ಕಾನ್ಹಾರಾಯನಿಗೆ

ಗೊತ್ತಾದುದೇನೆಂದರೆ–ಸುಲ್ತಾನ್ ಅಹಮದಶಾಹನು ಐದರ್ ನಗರದ ಎಲ್ಲಸಮಸ್ಯೆಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ ನಂತರ ಅಲ್ಲಿನ ಜಮೀನ್ದಾರರ ಸಮಸ್ಯೆಗಳತ್ತ ಗಮನ ಹರಿಸಲು ಹೊರಟಿದ್ದಾನೆಂದು ತಿಳಿದ ಕೂಡಲೇ ರಾಜ ಕಕಾನ್ಹಾರಾಯನು ತನ್ನಲ್ಲಿದ್ದ ಎಲ್ಲಾ ಸಂಪತ್ತು ಸಾಮಾನು ಸರಂಜಾಮುಗಳನ್ನು ಹೊತ್ತು ಜಾಲೂದ ನಗರವನ್ನು ಬಿಟ್ಟು ಹೊರ ಹೊರಟನು. ಈ ವಿಷಯವು ಸುಲ್ತಾನ್ ಅಹಮದಶಾಹನಿಗೆ ತಿಳಿದ ಕೂಡಲೇ ಒಂದು ಸೈನ್ಯವನ್ನು ಕಳುಹಿಸಿ ರಾಜ ಕಾನ್ಹಾರಾಯನನ್ನು ಹಿಡಿಯಲು ಆಜ್ಞಾಪಿಸಿದನು. ಬಹಳ ಕಷ್ಟಗಳನ್ನು ಸಹಿಸುತ್ತ ಕಾನ್ಹಾರಾಯನು ಬುರ್ಹಾನ್‌ಪುರದ ಕೋಟೆಯನ್ನು ತಲುಪಿದನು. ಕಾನ್ಹಾರಾಯನು ಅಲ್ಲಿನ ಶಾಸಕನಾದ ನಸೀರ್‌ಖಾನನಿಗೆ ಬಹುಮಾನದ ರೂಪದಲ್ಲಿ ತನ್ನ ಎರಡು ಆನೆಗಳನ್ನು ಅರ್ಪಿಸಿದ. ಬುರ್ಹಾನಪುರದ ಶಾಸಕನು ದಕ್ಷಿಣದ ಸುಲ್ತಾನರ ಸ್ನೇಹದಿಂದ ಅತಿಯಾದ ಅಹಂಕಾರದಲ್ಲಿ ಮುಳುಗಿದ್ದನು. ಆತನು ಸುಲ್ತಾನ್ ಅಹಮದಶಾಹನ ಉಪಕಾರಗಳನ್ನು ಮರೆತು, ರಾಜ ಕಾನ್ಹಾರಾಯನಿಗೆ ಆಶ್ರಯವನ್ನು ತನ್ನ ರಾಜ್ಯದಲ್ಲಿ ನೀಡಿದ್ದನು.

ರಾಜ ಕಾನ್ಹರಾಯನು ಬಹುಮನಿ ದರ್ಬಾರಿನಲ್ಲಿ :

ಕೆಲವು ದಿನಗಳ ನಂತರ ರಾಜ ಕನ್ಹಾರಾಯನು ನಸೀರ್‌ಖಾನನ ಸಲಹೆಯಮೇರೆಗೆ ಆತನ ಶಿಫಾರಸ್ಸು ಪತ್ರವನ್ನು ಪಡೆದು ಸುಲ್ತಾನ್ ಅಹಮದಶಾಹ ಬಹುಮನಿ ದಖನಿಯ ದರ್ಬಾರಿನಲ್ಲಿ ಹಾಜರಾದನು. ಆತನ ಸಹಾಯವನ್ನು ಬೇಡಿದನು. ದಕ್ಷಿಣದ ಸುಲ್ತಾನನನ್ನು ರಾಜ ಕನ್ಹಾರಾಯನಿಗೆ ಒಂದು ಸೈನ್ಯದ ತುಕಡಿಯನ್ನು ಕೊಟ್ಟು ಈ ಸೈನ್ಯವು ಸುಲ್ತಾನ್‌ಪುರದಿಂದ ನದರ್‌ಬಾರ್ ಪ್ರದೇಶಗಳಲ್ಲಿ ವಿನಾಶ ದಾಳಿಗಳನ್ನು ಮಾಡಬಹುದೆಂದು ಆಜ್ಞಾಪಿಸಿದನು.

ದಕ್ಷಿಣದ ಸೈನಿಕ ಕಾರ್ಯಾಚರಣೆಯ ಸೈನಿಕರಿಗೆ ಸೋಲು :

ಸುಲ್ತಾನ್ ಅಹಮ್ಮದಶಾಹನು ಈ ಸೈನಿಕ ಕಾರ್ಯಾಚರಣೆಗಳನ್ನು ಹತ್ತಿಕ್ಕಲು ತನ್ನ ಮಗನಾದ ಮಹಮ್ಮದಶಾಹನನ್ನು ಇತ್ತ ಕಳುಹಿಸಲು ತಿರ್ಮಾನಿಸಿದನು. ದಂಡನಾಯಕ ಮುಖಿರ್‍ರಬುಲ್‌ಮುಲ್ಕನ ಜೊತೆಯಲ್ಲಿ ಇತರೆ ಸೈನ್ಯದ ಸರದಾರರಾದ ಸೈಯದ್ ಅಬ್ದುಲ್‌ಖೈರ, ಸಯ್ಯದ್‌ಅಬ್ದುಲ್ ಖಾಸಿಂ, ಸಯ್ಯದ್ ಆಲಂ ಮತ್ತು ಇಫ್ತೆಖಾರುಲ್‌ಮುಲ್ಕ್‌ನಂತಹ ಶೂರ–ವೀರರನ್ನು ತನ್ನ ಮಗ ಮಹಮ್ಮದಶಾಹನ ಅಧೀನಕ್ಕೆ ಕೊಟ್ಟು ದಕ್ಷಿಣದತ್ತ ಕಳುಹಿಸಿದನು. ಎರಡೂ ಕಡೆಗಳಲ್ಲಿ ಘೋರ ಯುದ್ಧಗಳು ನಡೆದವು. ಇವುಗಳ ಪರಿಣಾಮವೆಂದರೆ ಗುಜರಾತಿ ಸೈನಿಕರಿಗೆ ಎಲ್ಲ ಕಡೆಗಳಲ್ಲೂ ಜಯ ಲಭಿಸಿತು. ಅಸಂಖ್ಯಾತ ದಕ್ಷಿಣದ ಸೈನಿಕರು ಗುಜರಾತಿ ಕತ್ತಿಗಳಿಗೆ ಬಲಿಯಾದರು. ಉಳಿದ ಜೀವಗಳು ದೌಲತಾಬಾದಿನಲ್ಲಿ ಆಶ್ರಯವನ್ನು ಪಡೆದರು.

ದಕ್ಷಿಣದ ಹೊಸ ಸೈನ್ಯ :

ಸುಲ್ತಾನ್ ಅಹಮ್ಮದಶಾಹ ಬಹಮನಿಗೆ ತನ್ನ ಸೈನಿಕರ ಸೋಲಿನ ಸಮಾಚಾರ ಸಿಕ್ಕಿದ ಕೂಡಲೇ ಆತನು ತನ್ನ ಮಕ್ಕಳಾದ ಅಲ್ಲಾವುದ್ದೀನ್ ಮತ್ತು ಖಾನೆಜಹಾನ್‌ರನ್ನು ಗುಜರಾತಿ ಸೈನ್ಯವನ್ನೆದುರಿಸಲು ಕಳುಹಿಸಿಕೊಟ್ಟನು. ಅಷ್ಟೇ ಅಲ್ಲ ಮತ್ತೊಂದು ಸೈನ್ಯವನ್ನು 'ಜರಾರ' ಎಂಬುವವನ ನೇತೃತ್ವದಲ್ಲಿ ಪ್ರಸಿದ್ಧ ಅಮೀರನಾದ ಖದರಖಾನ ದಕ್ಕನಿ ಎಂಬುವವನನ್ನು ತನ್ನ ಮಗನ ಸಹಾಯಕ್ಕೆಂದು ಕಳುಹಿಸಿದನು. ಮಗ ಅಲ್ಲಾವುದ್ದೀನನು ಖದರ್‌ಖಾನ ದಖನಿಯ ಸಲಹೆಯಂತೆ ವೇಗವಾಗಿ ದೌಲತಾಬಾದಿನ ಗಡಿಯಲ್ಲಿ ಪ್ರವೇಶಿಸಿದರು. ಅಲ್ಲಿನ ನಸೀರಖಾನನ ಮಗ ಖುಸರ್‌ನ ಆಡಳಿತವಿತ್ತು. ಬುರ್ಹಾನಪುರದ ಶಾಸಕನು ರಾಜ ಕಾನ್ಹಾರಾಯನನ್ನು ಜೊತೆ ಕರೆದುಕೊಂಡು ದೌಲತಾಬಾದಿಗೆ ತಲುಪಿದನು.

ದಕ್ಷಿಣದ ಸೈನ್ಯಕ್ಕೂ ಗುಜರಾತಿನ ಸೈನ್ಯಕ್ಕೂ ಯುದ್ಧ :

ದಕ್ಷಿಣದ ಸೈನಿಕರಿಗೆ ಈ ಹೊಸ ಸೈನಿಕ ಶಕ್ತಿಯಿಂದಾಗಿ ಅವರಲ್ಲಿ ಒಂದು ಹೊಸ ಉತ್ಸಾಹ ಮೂಡಿತು. ಶತ್ರುಗಳ ಮೇಲಿನ ಸೇಡು ತೀರಿಸಿಕೊಳ್ಳಲು ಮುಂದಾದರು. ಪ್ರಯಾಣದ ಕೆಲವು ಮಜಲುಗಳನ್ನು ಪಾರು ಮಾಡಿದ ನಂತರ ಮಾಂಕ್‌ಪೂಂಚ್ ಕಣಿವೆಯ ಹತ್ತಿರ ಗುಜರಾತಿ ಸೈನ್ಯದ ಮುಖಂಡ ಮಹಮ್ಮದಶಾಹನೊಂದಿಗೆ ಯುದ್ಧವನ್ನು ಆರಂಭಿಸಿದನು. ಇಬ್ಬರಲ್ಲೂ ಘೋರ ರಕ್ತಪಾತದ ಯುದ್ಧವು ನಡೆಯಿತು. ಈ ಯುದ್ಧದ ಪರಿಣಾಮವೆಂದರೆ ಗುಜರಾತಿ ದಂಡನಾಯಕನ ಕೈ ಮೇಲಾಯಿತು. ದಕ್ಷಿಣದ ಖದರಖಾನನು ಯುದ್ಧದಲ್ಲಿ ಸತ್ತನು.

ದಕ್ಷಿಣ ಸೈನ್ಯದ ಎರಡನೇ ಸೋಲು :

ಇಫ್ತೆಖಾರುಲ್ ಮುಲ್ಕನು ರಾಜಕುಮಾರ ಅಲ್ಲಾವುದ್ದೀನನ ಸೈನ್ಯದ ಮೇಲೆ ಆಕ್ರಮಣವನ್ನು ಮಾಡಿ ಆತನ ಕೆಲವು ಆನೆಗಳನ್ನು ಸೆರೆಹಿಡಿದನು. ಮತ್ತು ಆತನ ಸೈನ್ಯವನ್ನು ಸೋಲಿಸಿದನು. ಇದರಿಂದಾಗಿ ದಕ್ಷಿಣದ ಸೈನ್ಯವು ಗುಜರಾತಿ ಸೈನ್ಯದ ಎದುರು ನಿಲ್ಲಲಾರದಾದವು. ಅವರು ಓಡಲು ಪ್ರಾರಂಭಿಸಿದರು. ಅಲ್ಲಾವುದ್ದೀನನು ದೌಲತಾಬಾದಿನ ಕೋಟೆಯಲ್ಲಿ ಆಶ್ರಯವನ್ನು ಪಡೆದನು. ರಾಜ ಕಾನ್ಹಾರಾಯನು, ನಸೀರ ಫಾರೂಖಿಯರಿಬ್ಬರೂ ಖಾನದೇಶದತ್ತ ಪರಾರಿಯಾದರು. ರಾಜಕುಮಾರ ಮಹಮ್ಮದಶಾಹನು ತನ್ನ ದೇಶಕ್ಕೆ ವಾಪಸ್ಸಾದನು.

ಮಹಾಯಂ ದ್ವೀಪವು ದಕ್ಷಿಣದವರ ಕೈವಶ :

ಇದೇ ವರ್ಷದಲ್ಲಿ ಖುತುಬ್ ಎಂಬ ಒಬ್ಬ ಅಮೀರ ಗುಜರಾತಿನವನಾಗಿದ್ದು,

ಮಹಾಯಂ ದ್ವೀಪದ ಶಾಸಕನಾಗಿದ್ದನು. ಈತನು ತನ್ನ ವಿಶೇಷ ಕಾರಣಗಳಿಂದಾಗಿ ಈ ದ್ವೀಪವನ್ನು ಸಂಪೂರ್ಣವಾಗಿ ತ್ಯಜಿಸಿ ಹೋದನು. ಈ ಪರಿಸ್ಥಿತಿಯ ಲಾಭವನ್ನು ಪಡೆಯಲು ದಕ್ಷಿಣದ ಅಹಮ್ಮದಶಾಹ ಬಹುಮನಿಯು ಈ ಹಿಂದಿನ ಶತೃಗಳ ಸೇಡನ್ನು ತೀರಿಸಿಕೊಳ್ಳಲು ತನ್ನ ಒಬ್ಬ ಪ್ರಸಿದ್ಧ ಅಮೀರನಾದ ಮಲಿಕುಲ್‌ತಿಜಾರ್ ಎಂಬುವವನ್ನು ಮಹಾಯಂ ದ್ವೀಪವನ್ನು ವಶಪಡಿಸಿಕೊಳ್ಳಲು ಕಳುಹಿಸಿದನು. ಆತನು ತನ್ನ ಬುದ್ಧಿಶಕ್ತಿಯಿಂದ ಮಹಾಯಂ ದ್ವೀಪವನ್ನು ವಶಪಡಿಸಿಕೊಂಡ ನಂತರ ಅಲ್ಲಿ ದಕ್ಷಿಣದವರ ಆಡಳಿತ ನೆಲೆಗೊಂಡಿತು.

ರಾಜಕುಮಾರ ಜಫರ್‌ಖಾನನ ಆಸೆ ಮಹಾಯಂ ದ್ವೀಪದ ಮೇಲೆ ;

ಸುಲ್ತಾನ್ ಅಹಮ್ಮದಶಾಹ ಗುಜರಾತಿಗೆ ಕಳೆದುಕೊಂಡಿದ್ದ ಮಹಾಯಂ ದ್ವೀಪವನ್ನು ಮರಳಿ ಪಡೆದುಕೊಳ್ಳುವ ಇಚ್ಛೆ ಅಧಿಕವಾಯಿತು. ಈ ಉದ್ದೇಶಕ್ಕಾಗಿಯೇ ತನ್ನ ಕಿರಿಯ ಮಗನಾದ ಜಫರಖಾನನನ್ನು ಇಫ್ತೆಖಾರುಲ್ ಮುಲ್ಕನ ರಕ್ಷಣೆಯಲ್ಲಿ ಮಹಾಯಂನತ್ತ ಕಳುಹಿಸಿದನು. ತನ್ನ ಆಧೀನದಲ್ಲಿದ್ದ ಬಂದರ್‌ದೇವ್ ಕೊತ್ವಾಲ ಮುಖ್ಲಿಸುಲ್ ಮುಲ್ಕನಿಗೊಂದು ಈ ಆದೇಶದ ಪತ್ರವನ್ನು ಕಳುಹಿಸಿದ. ಆದೇಶ ಹೀಗಿತ್ತು–"ನನ್ನ ಆಧೀನದಲ್ಲಿರುವ ಸಮುದ್ರದಡದ ಪ್ರದೇಶದಲ್ಲಿರುವ ಎಲ್ಲ ಹಡಗುಗಳನ್ನು ಯುದ್ಧ ಸಿದ್ಧತೆಯಲ್ಲಿ ತಯಾರುಮಾಡಿ ನನ್ನ ಮಗನಾದ ಜಫರಖಾನನ ಸೇವೆಯಲ್ಲಿ ಹಾಜರಾಗತಕ್ಕದ್ದು" ಎಂದು ಆಜ್ಞಾಪಿಸಲಾಗಿತ್ತು.

ದಕ್ಷಿಣ ಶಿಬಿರದ ಮೇಲೆ ಮುತ್ತಿಗೆ :

ಕೊತ್ವಾಲ ಮುಖ್ಲಿಸುಲ್‌ಮುಲ್ಕನು ಶಾಹಿ ಆಜ್ಞೆಯುನ್ನು ಬಹಳ ಬೇಗ ಕಾರ್ಯಗತಗೊಳಿಸಲು ಸನ್ನದ್ಧನಾದನು. ದೇಬ್, ಖೋಕಹಾ ಮತ್ತು ಕಂಪಾಯತ್ ಬಂದರುಗಳಲ್ಲಿದ್ದ ಹದಿನೇಳು ಹಡಗುಗಳನ್ನು ಸಂಗ್ರಹಿಸಿಕೊಂಡು ಮಹಾಯಂ ದ್ವೀಪದ ಹತ್ತಿರಕ್ಕೆ ಶಹಜಾದ ಜಫರಖಾನನ ಸೇವೆಗೆ ಹಾಜರಾದ. ಜಫರಖಾನನು ತನ್ನ ಅಮೀರ ಸಲಹೆಯಂತೆ ಹಡಗುಗಳನ್ನು ಬೇರೆಡೆಗೆ ಕಳುಹಿಸಿ ತಾನು ಭೂಮಾರ್ಗವಾಗಿ ಮುಂದುವರಿದನು. ಗುಜರಾತಿಗಳು ದಕ್ಷಿಣದ ಶಿಬಿರದ ಮೇಲೆ ಮುತ್ತಿಗೆ ಹಾಕಿದರು. ಷಹಜಾದ ಜಫರಖಾನನು ದಂಡನಾಯಕ ಇಫ್ತೆಖಾರುಲ್‌ಮುಲ್ಕನನ್ನು ಸೊಹ್ರಾಬ್ ಸುಲ್ತಾನಿಯ ಜೊತೆಯಲ್ಲಿ ತನಗಿಂತ ಮೊದಲೇ ಕಳುಹಿಸಿದ್ದ. ಬುಲ್ಡಥಾನ ಜಾಗದ ಕೊತ್ವಾಲನು ಗುಜರಾತಿ ಸೈನಿಕರನ್ನು ಎದುರಿಸಲಾರದೆ ಕೋಟೆಯ ಬಾಗಿಲನ್ನು ಮುಚ್ಚಿಕೊಂಡು ಒಳಗೆ ಸೇರಿಕೊಂಡನು. ಗುಜರಾತಿ ಸೈನಿಕರು ಕೋಟೆಯನ್ನು ಮುತ್ತಿದರು. ಇಷ್ಟಾಗುವುದರೊಳಗಾಗಿ ಗುಜರಾತಿ ಹಡಗುಗಳು ಅಲ್ಲಿಗೆ ತಲುಪಿದವು. ಇದರಿಂದಾಗಿ ದಕ್ಷಿಣದ ಸೈನಿಕರಿಗೆ ಎಲ್ಲ ಮಾರ್ಗಗಳು ಮುಚ್ಚಿದಂತಾದವು.

ಠಾಣೆಯ ಮೇಲೆ ಗುಜರಾತಿ ಸೈನಿಕರ ಕೈವಶ :

ಎರಡು ಮೂರು ದಿನಗಳ ತನಕ ಇಬ್ಬರಲ್ಲೂ ಘರ್ಷಣೆಗಳು ನಡೆದವು. ಜಫರ್‌ಖಾನನು ಆ ಜಾಗಕ್ಕೆ ಬಂದ ತಕ್ಷಣ ಠಾಣೆಯ ಶಾಸಕನು ಕೋಟೆಯ ಹೊರಬಂದು ಶತ್ರುಗಳೊಂದಿಗೆ ಬಹಳ ವೀರಾವೇಶದಿಂದ ಯುದ್ಧವನ್ನು ಮಾಡಿದರು. ಠಾಣೆಯ ಶಾಸಕನಿಗೆ ಬೇರೆ ಯಾವ ಕಡೆಯಿಂದಲೂ ಸಹಾಯ ದೊರಕಲಿಲ್ಲ. ಈ ಕಾರಣದಿಂದಾಗಿ ಆತನು ಯುದ್ಧ ಮೈದಾನದಿಂದ ಓಡಿದನು. ಜಫರಖಾನನು ಠಾಣೆಯನ್ನು ತನ್ನ ವಶಕ್ಕೆ ತೆಗೆದುಕೊಂಡನು. ತನ್ನ ಕೆಲವು ಆಪ್ತ ಸಿಪಾಯಿಗಳನ್ನು ಅದರ ರಕ್ಷಣೆಗೆಂದು ನೇಮಿಸಿ ತಾನು ಮಹಾಯಂ ದ್ವೀಪದತ್ತ ಪ್ರಯಾಣವನ್ನು ಬೆಳೆಸಿದನು.

ಜಫರ್‌ಖಾನನ ಗೆಲುವು :

ಮಲಿಕುಲ್‌ತುಜ್ಜಾರನು ದೊಡ್ಡ ಮರಗಳನ್ನು ಕಡಿದು ದೋಣಿಗಳ ನಿಲುವಿಗೆ ಬಂದ ಮಾಡಿದ್ದನು. ಗುಜರಾತಿಗಳ ಸೈನ್ಯವು ದೋಣಿಗಳಲ್ಲಿ ಹೊರಟು ಮೈದಾನ ಪ್ರದೇಶದಲ್ಲಿಳಿಯಲು ದಾರಿಯೇ ಇರದಂತಾಗಿತ್ತು. ಆದರೂ ಅವರು ಧೈರ್ಯಗೆಡದೆ ಬಹಳ ಪ್ರಯತ್ನಗಳಿಂದಾಗಿ ಮೈದಾನ ಪ್ರದೇಶಗಳಲ್ಲಿ ಪ್ರವೇಶಿಸಿದರು. ಇಬ್ಬರಲ್ಲೂ ಘೋರ ಯುದ್ಧಗಳು ನಡೆದವು. ಬೆಳಗಿನಿಂದ ಸಾಯಂಕಾಲದವರೆಗೂ ಶಕ್ತಿಗಳಿಂದ ಕಡಿದಾಡುತ್ತಲೇ ಇದ್ದರು. ಇಬ್ಬರಲ್ಲೂ ಶೂರ ವೀರರಿದ್ದರೂ ಕೊನೆಗೆ ಗೆಲುವು ಜಫರಖಾನನಿಗೆ ಒಲಿಯಿತು.

ಬಹಮನಿ ಸುಲ್ತಾನ್‌ನ ಕಡೆಯಿಂದ ಮಲಿಕುತ್ತುಜ್ಜಾರನಿಗೆ ಸಹಾಯ :

ಯುದ್ಧದಲ್ಲಿ ಸೋತ ಮಲಿಕುಲ್‌ತುಜ್ಜಾರನು ಓಡಿ ಹೋಗಿ ಒಂದು ದ್ವೀಪದಲ್ಲಿ ಆಶ್ರಯವನ್ನು ಪಡೆದಿದ್ದನು. ಗುಜರಾತಿಗಳ ಹಡಗುಗಳು ಸಪ ತಮ್ಮ-ತಮ್ಮ ನೆಲೆಗಳಲ್ಲಿ ಸೇರಿದ್ದವು. ಮೈದಾನ ಪ್ರದೇಶ ಮತ್ತು ಸಮುದ್ರದ ಒಡೆತನ ಗುಜರಾತಿಯವರ ವಶವಾಗಿದ್ದವು. ಮಲಿಕುಲ್‌ತುಜ್ಜಾರನು ಅಹಮದಶಾಹ ಬಹಮನಿಯಲ್ಲಿ ಸಹಾಯ ಹಸ್ತವನ್ನು ಚಾಚಿದನು. ಅಹಮದಶಾಹ ಬಹಮನಿಯು ತನ್ನ ಕಿರಿಯ ಮಗನಾದ ಮಹಮ್ಮದಖಾನನ ಆಧೀನದಲ್ಲಿ ಹತ್ತು ಸಾವಿರ ಕುದುರೆ ಸವಾರ ಸೈನಿಕರನ್ನೂ, ಅರವತ್ತು ಆನೆಗಳ ಶಕ್ತಿಯನ್ನು ಜೊತೆಗೂಡಿಸಿ ಕಳುಹಿಸಿಕೊಟ್ಟನು. ಈ ಸೈನಿಕರ ದಂಡನಾಯಕನನ್ನಾಗಿ ಖ್ವಾಜಾಜಹಾನ ಎಂಬುವನ ನೇತೃತ್ವದಲ್ಲಿ ಕಳುಹಿಸಿದನು.

ದಖನಿಗಳ ಮತ್ತೊಂದು ಸೋಲು :

ದಖನಿಗಳ ಸೈನ್ಯವು ಮಹಾಯಂ ದ್ವೀಪಕ್ಕೆ ತಲುಪಿತು. ಮಲಿಕುಲ್ ತಿಜ್ಜಾರನು ಆಕ್ರಮಣದ ಕಷ್ಟಗಳಿಂದ ಬಿಡುಗಡೆಯನ್ನು ಪಡೆದು ಷಹಜಾದ ಮಹಮದಖಾನನ

ಸೇವೆಯಲ್ಲಿ ಸೇರಿಕೊಂಡನು. ದಕ್ಷಿಣದ ಸೈನ್ಯವು ಮೊದಲು ಠಾಣೆಯನ್ನು ವಶಪಡಿಸಿಕೊಳ್ಳಲು ಅತ್ತ ಹೊರಟರು. ಷಹಜಾದ ಜಫರಖಾನನು ತನ್ನ ಸೈನ್ಯವನ್ನು ಠಾಣೆಯತ್ತ ತೆಗೆದುಕೊಂಡು ಹೊರಟನು. ಇಬ್ಬರಲ್ಲೂ ಘೋರಯುದ್ಧವೇ ಆಯಿತು. ಕೊನೆಗೆ ಗುಜರಾತಿಗಳಿಗೆ ಗೆಲುವು ದೊರೆಯಿತು. ಮಲಿಕುಲ್ ತಿಜ್ಜಾರನು ಜಾಲ್ನಾ ಕಡೆಗೆ ಓಡಿಹೋದನು. ಮಹಮದಖಾನನು ದೌಲತಾಬಾದಿನತ್ತ ಓಡಿಹೋದನು.

ಮಹಾಯಂನ ಮೇಲೆ ಜಯ :

ಜಫರಖಾನನು ಗೆಲುವಿನ ಸಂತೋಷದಲ್ಲಿ ಮಹಾಯಂ ತಲುಪಿದನು. ದಖನಿ ವೀರರು ಓಡಿಹೋಗಿದ್ದರು. ಅವರನ್ನು ಹಡಗುಗಳ ಸಹಾಯದಿಂದ ಸೆರೆ ಹಿಡಿಯಲಾಯಿತು. ಷಹಜಾದ ಜಫರಖಾನನು ಯುದ್ಧ ಮೈದಾನದಲ್ಲಿ ಸಿಕ್ಕ ಅಪಾರ ಸಂಪತ್ತನ್ನು ಹಡಗುಗಳಲ್ಲಿ ಹೇರಿಕೊಂಡು ಗುಜರಾತಿನ ಅಹಮದಾಬಾದಿಗೆ ತಲುಪಿಸುವಲ್ಲಿ ಯಶಸ್ವಿಯಾದನು. ತಂದೆ ಸುಲ್ತಾನ್ ಅಹಮದಶಾಹನು ಬಹಳ ಸಂತೋಷಪಟ್ಟನು.

ಫತಹ್‌ಖಾನ ಬಿನ್ ಮುಜಾಫರಶಾಹ ಗುಜರಾತಿಯ ಮರಣ :

ಷಹಾಜಾದ್ ಜಫರಖಾನನು ಮಹಾಯಂನ ಎಲ್ಲ ಪ್ರದೇಶಗಳನ್ನು ವಶಪಡಿಸಿಕೊಂಡು ಆ ಪ್ರದೇಶದ ಭಾಗಗಳನ್ನು ತನ್ನ ಅಮೀರರ, ಸರದಾರರಿಗೆ ಹಂಚಿಕೊಟ್ಟಿದ್ದನು. ಅದೇ ವರ್ಷದಲ್ಲಿ ಸುಲ್ತಾನ್ ಮುಜಫರಶಾಹ ಗುಜರಾತಿಯವರ ಮಗನಾದ ಫತಹ್‌ಖಾನನು ಅಮೀರಶೇಕ ಅಲಿ ಕಾಬಿಲನೊಂದಿಗೆ ಯುದ್ಧದಲ್ಲಿ ಹೋರಾಡುತ್ತಾ ಮರಣ ಹೊಂದಿದನು ಎಂಬ ಸುದ್ದಿ ಬಂದಿತು. ಇವನು ಸುಲ್ತಾನ್ ಮುಬಾರಕಶಾಹ ದೆಹಲ್ವಿಯವರ ಮಗನಾಗಿದ್ದನು. ಈ ವಿಷಯವನ್ನು ತಿಳಿದ ಸುಲ್ತಾನ್ ಅಹಮದಶಾಹನು ಆತನಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿ ಆತನಿಗೆ ಸ್ವರ್ಗ ಸಿಗಲೆಂದು ಅಲ್ಲಾನಲ್ಲಿ ಪ್ರಾರ್ಥನೆಯ ಸಮಾರಂಭವನ್ನು ಏರ್ಪಡಿಸಿದನು. ಬಡಬಗ್ಗರಿಗೆ ಅನ್ನದಾನ ಹಾಗೂ ಹಣವನ್ನು ವಿತರಿಸಿದನು.

ಬಕ್ಲಾನಾ ಕೋಟೆಯ ಮೇಲೆ ಅಹಮದಶಾಹ ದಖನಿಯ ಆಕ್ರಮಣ :

ಸುಲ್ತಾನ್ ಅಹಮದಶಾಹ ಗುಜರಾತಿಯು ಹಿಜರಿ ೮೨೫ರಲ್ಲಿ ತನ್ನ ಮಗ ಮಹಮದಶಾಹನನ್ನು ಗುಜರಾತಿನ ಗಡಿ ಪ್ರದೇಶಗಳ ರಕ್ಷಣೆಯ ಜವಾಬ್ದಾರಿಯನ್ನು ಆ ಪ್ರದೇಶಗಳಿಗೆ ಶಾಸಕನನ್ನಾಗಿ ನೇಮಿಸಿ ತಾನು ಚೈನಾ ದೇಶದತ್ತ ಪ್ರಯಾಣವನ್ನು ಬೆಳೆಸಿದನು. ಈ ಸಂದರ್ಭದ ಲಾಭವನ್ನು ಪಡೆಯಲು ಸುಲ್ತಾನ್ ಅಹಮದಶಾಹ ದಖನಿಯು ತನ್ನ ಸೈನ್ಯವನ್ನೆತ್ತಿ ಬಕ್ಲಾನ ಪ್ರದೇಶದತ್ತ ಹೊರಟನು. ಬಕ್ಲಾನದ ರಾಜನು ಗುಜರಾತಿನ ಆಧೀನತೆಯಲ್ಲಿ ಇದ್ದವನು. ಈತನಿಗೆ ದಖನಿ ಕಾನೂನುಗಳು ಹಿಡಿಸಲಿಲ್ಲ. ಆತನು ಕೋಟೆಯಲ್ಲಿಯೇ ಅಡಗಿಕೊಂಡನು. ಅಹಮದಶಾಹ ದಖನಿ ಆ ಪ್ರದೇಶದ ಎಲ್ಲ ನಗರಗಳನ್ನು ನಾಶಪಡಿಸಿದನು.

ಶಾಹಜಾದ ಮಹಮ್ಮದಖಾನನ ಪತ್ರ :

ಸುಲ್ತಾನ್ ಅಹಮದಶಾಹ ಗುಜರಾತಿಯ ಮಗ ಮಹಮದಖಾನನು ತನ್ನ ತಂದೆಯವರಿಗೆ ಒಂದು ಪತ್ರವನ್ನು ಗುಜರಾತಿಗೆ ಕಳುಹಿಸಿದನು. ಅದರ ವಿಷಯ ಹೀಗಿತ್ತು.– "ತಮ್ಮ ಈ ಸೇವಕ ಅನೇಕ ವರ್ಷಗಳಿಂದ ತಮ್ಮ ಸೇವೆಯಿಂದ ವಂಚಿತನಾಗಿದ್ದಾನೆ. ಪ್ರಯಾಣದ ನಿರ್ಬಂಧದಿಂದ ಎಲ್ಲ ಅಮೀರರೂ, ಸರದಾರರೂ ತಮ್ಮ ತಮ್ಮ ಸೈನ್ಯದೊಂದಿಗೆ ತಮ್ಮ ಜಾಗೀರುಗಳಲ್ಲಿ ನೆಲೆಸಿದ್ದಾರೆ. ಸುಲ್ತಾನ್ ಅಹಮದಶಾಹ ಬಹುಮನಿಯು ಬಕ್ಲಾನದ ಮೇಲೆ ಆಕ್ರಮಣವನ್ನು ನಡೆಸಿ, ಆ ಪ್ರದೇಶಗಳನ್ನು ಲೂಟಿಮಾಡಿ ನಾಶಗೊಳಿಸಿದ್ದಾನೆ. ಹಾಗೂ ಈಗ ಅವನು ನನ್ನತ್ತ ಬರಲಿದ್ದಾನೆಂಬ ಸುದ್ದಿ ಬಂದಿದೆ. ನನ್ನ ಹತ್ತಿರ ಅವನನ್ನು ಸೋಲಿಸುವಷ್ಟು ಸೈನ್ಯವು ಇಲ್ಲ ಆದ್ದರಿಂದ ಹುಜೂರರಲ್ಲಿ ಪ್ರಾರ್ಥಿಸುವುದೇನೆಂದರೆ ಈ ಸಂಬಂಧದಲ್ಲಿ ನನಗೆ ಸಹಾಯವನ್ನು ತಾವು ತುರ್ತಾಗಿ ಮಾಡಬೇಕೆಂದು ಮನವಿ".

ಅಹಮದಶಾಹ ಗುಜರಾತಿ ನದರ್‌ಬಾರಿನಲ್ಲಿ :

ಸುಲ್ತಾನ್ ಅಹಮದಶಾಹ ಗುಜರಾತಿಗೆ ಮಗ ಮಹಮದಖಾನನ ಪತ್ರ ಸಿಗುತ್ತಿದ್ದಂತೆಯೇ ಆತನು ಚೈನಾ ಪ್ರದೇಶದ ಆಕ್ರಮಣವನ್ನು ತೆರವುಗೊಳಿಸಿ ನಾವದತ್ತದ ಕಡೆ ಪ್ರಯಾಣವನ್ನು ಬೆಳೆಸಿದನು. ಈ ಪ್ರದೇಶವನ್ನು ವಿನಾಶಗೊಳಿಸುತ್ತ ಬಹಳಬೇಗ ಬಾದಶಹನು ನದರ್‌ಬಾರ ತಲುಪಿದನು. ಮಗ ಮಹಮ್ಮದಖಾನನು ಗಡಿ ಪ್ರದೇಶದ ಅಮೀರರೂ ಬಾದಶಹನ ಸೇವೆಗೆ ಕಟ್ಟಿಬದ್ಧರಾಗಿ ಬಂದು ನಿಂತರು. ಸಂತೋಷದ ನಗಾರಿವಾದ್ಯಗಳು ಬಾರಿಸಲ್ಪಟ್ಟವು. ಅಹಮದಶಾಹ ಬಹಮನಿ ಯುದ್ಧ ಮಾಡಲು ತಂಬೋಲ್‌ನ ಹತ್ತಿರ ಬೀಡು ಬಿಟ್ಟಿದ್ದಾನೆಂಬ ಸುದ್ದಿ ತಿಳಿಯಿತು. ಆದರೆ ಬಾದಶಹನು ಇತ್ತ ಬಂದಿರುವರೆಂಬ ಸುದ್ದಿ ತಿಳಿದು ತನ್ನ ದೇಶಕ್ಕೆ ಹಿಂತಿರುಗಿದನು.

ಅಹಮದಶಾಹ ಬಹಮನಿ ತಂಬೋಲಿನಲ್ಲಿ :

ಈ ಸಮಾಚಾರವನ್ನು ತಿಳಿದ ಅಹಮದಶಾಹ ಗುಜರಾತಿಯು ಬಹಳ ಸಂತೋಷಪಟ್ಟನು. ಈಗ ಸದ್ಯಕ್ಕೆ ದಖನಿಯವರೊಂದಿಗೆ ಯುದ್ಧ ಮಾಡಲು ಸಿದ್ಧನಿರಲಿಲ್ಲ. ಅಲ್ಲಿಂದ ಬಾದಶಹನು ತನ್ನ ರಾಜಧಾನಿ ಅಹಮದಾಬಾದಿನತ್ತ ಪ್ರಯಾಣವನ್ನು ಬೆಳೆಸಿದ. ಆತನು ಇನ್ನು ತಪತಿ ನದಿಯನ್ನು ದಾಟಿರಲೇ ಇಲ್ಲ. ಸಮಾಚಾರ ಸಿಕ್ಕಿದ್ದೇನೆಂದರೆ– ಸುಲ್ತಾನ್ ಅಹಮದಶಾಹ ಬಹಮನಿಯು ತನ್ನ ರಾಜ್ಯಕ್ಕೆ ಹೋಗದೇ ಹಿಂದಕ್ಕೆ ಬಂದು ಮತ್ತೊಮ್ಮೆ ತಂಬೋಲ್ ಕೋಟೆಗೆ ಮುತ್ತಿಗೆಯನ್ನು ಹಾಕಿದ್ದಾನೆಂಬ ವಿಷಯವು ತಿಳಿಯಿತು. ತಂಬೋಲ ಕೋಟೆಯ ಶಾಸಕನಾಗಿದ್ದ ಸಾದತ್‌ಖಾನ್ ಸುಲ್ತಾನಿ ಎಂಬುವನು ಬಹಳ ವೀರಾವೇಶದಿಂದ ಶತ್ರುಸೈನ್ಯದೊಡನೆ ಕಾದಾಡುತ್ತಿದ್ದನು.

ಅಹಮದಶಾಹ ಗುಜರಾತಿನ ಆದೇಶ ಅಹಮ್ಮದಶಾಹ ಬಹಮನಿಯ ಹೆಸರಿನಲ್ಲಿ :

ಅಹಮದಶಾಹ ಗುಜರಾತಿಯು ದಖನಿ ಶಾಸಕನ ಹತ್ತಿರಕ್ಕೆ ತನ್ನ ಒಬ್ಬ ರಾಜದೂತನನ್ನು ಕಳುಹಿಸಿ ಹೀಗೆ ಸಮಾಚಾರವನ್ನು ತಿಳಿಸಿದ್ದನು. ಒಂದು ವೇಳೆ ನೀವು ತಂಬೋಲ್ ಕೋಟೆಯ ಮುತ್ತಿಗೆಯನ್ನು ತೆರವು ಮಾಡಿ, ಅಲ್ಲಿನ ಜನರ ಹಿಂಸೆ ಮಾಡದಿದ್ದರೆ, ಹಾಗೂ ನೀವು ನಿಮ್ಮ ದೇಶಕ್ಕೆ ಹೋದರೆ, ನಮ್ಮ-ನಿಮ್ಮಲ್ಲಿ ಯಾವತ್ತು ಸ್ನೇಹ, ಪ್ರೀತಿಗಳು ಹೆಚ್ಚಾಗಿ ನಾವು ಶಾಂತಿಯಿಂದ ಬದುಕಬಹುದಾಗಿದೆ.

ಅಮೀರರಲ್ಲಿ ವಿಚಾರ ವಿಮರ್ಶೆ :

ಸುಲ್ತಾನ್ ಅಹಮದಶಾಹ ಬಹಮನಿಯು ರಾಜದೂತನಿಂದ ಬಂದಿದ್ದ ಸಮಾಚಾರದ ಬಗ್ಗೆ ಚರ್ಚೆ ನಡೆಸಿದ. ತನ್ನ ಮಾಮೂಲಿ ನಡತೆಯಂತೆ ರಾಜದೂತನಿಗೆ ಹೀಗೆ ತಿಳಿಸಿದ. "ಕೋಟೆಯಲ್ಲಿ ಆಹಾರ ಮತ್ತು ಇತರೆ ಸಾಮಾನುಗಳು ಕಡಿಮೆ ಇದ್ದು ನಾವು ಕೋಟೆಗೆ ಸಹಾಯ ಸಿಕ್ಕುವ ಮೊದಲೇ ನಮ್ಮ ವಶಕ್ಕೆ ತೆಗೆದುಕೊಂಡು ಬಿಡುತ್ತೇವೆ, ಇಂತಹ ಪರಿಸ್ಥಿತಿಯಲ್ಲಿ ಮುತ್ತಿಗೆಯನ್ನು ತೆರವುಗೊಳಿಸಲು ಸಾಧ್ಯವಿಲ್ಲವೆಂದು ನುಡಿದನು.

ಅಹಮದಶಾಹ ಗುಜರಾತಿಯ ತಂಬೋಲ್ ಪ್ರದೇಶ :

ಗುಜರಾತಿ ರಾಜದೂತನು ದಕ್ಷಿಣದ ಸುಲ್ತಾನ್‌ನ ಸಂದೇಶವನ್ನು ಹೊತ್ತು ತನ್ನ ಬಾದಶಹನ ಹತ್ತಿರ ಬಂದು ತಲುಪಿದನು. ಎಲ್ಲ ಸಮಾಚಾರವನ್ನೂ ತಿಳಿಸಿದನು. ಅಹಮದಶಾಹ ಗುಜರಾತಿಯು ತಪತಿ ನದಿಯನ್ನು ಪಾರುಮಾಡಿರಲೇ ಇಲ್ಲ. ಅಲ್ಲಿಂದ ಹಿಂತಿರುಗಿ ಪ್ರಯಾಣವನ್ನು ಬದಲಿಸಿದ, ಸಾಧ್ಯವಾದಷ್ಟೂ ಬೇಗ ಪ್ರಯಾಣಿಸುತ್ತಾ ತಂಬೋಲ್ ಸಮೀಪಿಸಿದ.

ದಖನಿ ಬಹಾದ್ದೂರರು ಕೋಟೆಯ ಒಳಗೆ ನುಸುಳಿದರು :

ಅಹಮದಶಾಹ ಬಹಮನಿಯು ಒಂದು ಉಪಾಯವನ್ನು ಯೋಚಿಸಿದನು. ಕೋಟೆ ರಕ್ಷಕರನ್ನು ಹತ್ತಿರ ಕರೆದು ಹೀಗೆಂದನು. ಕಾವಲುಗಾರರೇ ಈ ರಾತ್ರಿಯಲ್ಲಿ ನೀವುಗಳು ಒಂದು ಕಾರ್ಯವನ್ನು ಮಾಡಬೇಕು. ಅದೇನೆಂದರೆ ನೀವು ರಾತ್ರಿವೇಳೆ ಏನಾದರೂ ಮಾಡಿ ಕೋಟೆಯ ಬಾಗಿಲನ್ನು ತೆರೆದು ಬಿಡಿ. ನಾನು ನಿಮಗೆ ಅಪಾರ ಸಂಪತ್ತಿನಿಂದ ಸನ್ಮಾನಿಸುತ್ತೇನೆಂದನು. ಇದಕ್ಕೆ ಒಪ್ಪಿದ ರಕ್ಷಕರ ಒಂದು ಗುಂಪು ಕೋಟೆಯ ಗೋಡೆಯ ಹತ್ತಿರಕ್ಕೆ ಬಂದು ಕೋಟೆಯ ಮೇಲೆ ಹತ್ತಿ ಕೋಟೆಯ ಒಳಭಾಗಕ್ಕೆ ಇಳಿದರು. ಒಳಗಿನಿಂದ ಕೋಟೆಯ ಬಾಗಿಲನ್ನು ತೆರೆದು ಬಿಟ್ಟರು. ದಖನಿ ಸಿಪಾಯಿಗಳು ಕೋಟೆಯ ಒಳಗೆ ಪ್ರವೇಶಿಸಿದರು.

ಮಲಿಕ್ ಸಾದತನ ಶೌರ್ಯ :

ಕೋಟೆಯ ಮಾಲಿಕನಾದ ಸಾದತ್ ಸುಲ್ತಾನಿಯವನಿಗೆ ಕೋಟೆಯ ಬಾಗಿಲು ತೆರೆದಿರುವ ಸಮಾಚಾರ ತಿಳಿಯುತ್ತಿದ್ದಂತೆಯೇ ಅವನು ಕಾವಲುಗಾರರನ್ನು ಕೊಲ್ಲಲು ಪ್ರಾರಂಭಿಸಿದನು. ಕೋಟೆಯೊಳಗೆ ಪ್ರವೇಶಿಸಿದ್ದವರನ್ನೂ ಹಿಡಿದು ಕೊಂದನು. ಕೆಲವರು ಕೋಟೆಯ ಮೇಲಿದ್ದವರನ್ನು ಕೆಡವಿ ಸಾಯಿಸಿದನು. ಇಷ್ಟು ಎಚ್ಚರವಹಿಸಿದ್ದರೂ ಕೋಟೆಯ ಬಾಗಿಲು ತೆರೆದಿತ್ತು. ಬಹಳ ಶೌರ್ಯದಿಂದ ಶತ್ರುಗಳ ಮೇಲೆ ರಾತ್ರಿಯಲ್ಲಿ ಮಲಗಿದ್ದವರ ಮೇಲೆ ಅನಿರೀಕ್ಷಿತ ಆಕ್ರಮಣವನ್ನು ಮಾಡಿದನು. ಈ ಮುತ್ತಿಗೆಯಲ್ಲಿ ಎಲ್ಲ ಶತ್ರು ಸಿಪಾಯಿಗಳು ಮೈ ಮರೆತು ಮಲಗಿದ್ದರು. ಆದ ಕಾರಣ ಬಹಳಷ್ಟು ಸಿಪಾಯಿಗಳು ಸತ್ತರು, ಕೆಲವರು ಗಾಯಗೊಂಡು ಓಡಿದರು.

ದಕ್ಷಿಣದ ಸುಲ್ತಾನನ ಅಮೀರರಲ್ಲಿ ಚರ್ಚೆ :

ಇಷ್ಟು ಹೊತ್ತಿಗೆ ಸುಲ್ತಾನ್ ಅಹಮದಶಾಹನು ಅಲ್ಲಿಗೆ ಬಂದು ಬಿಟ್ಟನು. ಅಹಮ್ಮದಶಾಹ ಬಹಮನಿಯು ತನ್ನ ಅಮೀರರನ್ನು ಕರೆದು ಹೀಗೆಂದನು. ವೀರರೇ ಗುಜರಾತಿಗಳು ನಮ್ಮನ್ನು ಅನೇಕ ಸಲ ಸೋಲಿಸಿದ್ದಾರೆ. ಮಹಾಯಂ ದ್ವೀಪವನ್ನು ಗೆದ್ದಿದ್ದಾರೆ. ಈ ಸಲವೂ ಗುಜರಾತಿಗಳು ನಮ್ಮನ್ನು ಸೋಲಿಸಿದ್ದೇ ಆದರೆ ದಕ್ಷಿಣದ ಎಲ್ಲ ರಾಜ್ಯಗಳು ಅವರ ವಶವಾಗುವುದರಲ್ಲಿ ಸಂದೇಹವೇ ಇಲ್ಲ. ಆದ್ದರಿಂದ ಈಗ ನಾವು ಸರಿಯಾಗಿ ಯೋಚಿಸಿ ಹೆಜ್ಜೆಯನ್ನಿಡಬೇಕಾಗಿದೆ ಎಂದನು.

ಅಜದರಖಾನನ ಸೆರೆ :

ಅಹಮದಶಾಹ ದಖನಿಯು ಯುದ್ಧಕ್ಕೋಸ್ಕರ ತನ್ನ ಸೈನಿಕರನ್ನು ಹುರಿದುಂಬಿಸಿದನು. ಅತ್ತಕಡೆ ಅಹಮದಶಾಹ ಗುಜರಾತಿಯು ಯುದ್ಧ ತಯಾರಿಯನ್ನು ನಡೆಸಿದ್ದನು. ದಖನಿ ಸೈನ್ಯದ ಕಡೆಯಿಂದ ಒಬ್ಬ ಪ್ರಸಿದ್ಧ ವೀರ ಅಮೀರ ಅರ್ಶದಖಾನ ಎಂಬುವನು ಮೈದಾನಕ್ಕಿಳಿದ. ಗುಜರಾತಿಯವರ ಕಡೆಯಿಂದ ಅಸ್ಥಲ್‌ಮುಲ್ಕ ಎಂಬುವನು ಮೈದಾನಕ್ಕೆ ಬಂದನು. ಇಬ್ಬರೂ ಯುದ್ಧವನ್ನು ಪ್ರಾರಂಭಿಸಿದರು. ಅಸ್ಥಲ್ ಮುಲ್ಕನು ಶತ್ರುವನ್ನು ಸೋಲಿಸಿ ಅರ್ಶದಖಾನನನ್ನು ಸೆರೆಹಿಡಿದನು.

ಯುದ್ಧ ಭೀಕರತೆ :

ಇದಾದ ನಂತರ ಯುದ್ಧವು ಭಯಾನಕ ಸ್ವರೂಪವನ್ನು ಪಡೆಯಿತು. ಎರಡೂ ಕಡೆ ವೀರರು ಬೆಳಗಿನಿಂದ ಸಾಯಂಕಾಲದವರೆಗೂ ಹೊಡೆದಾಡಿದರು. ಸಾಯಂಕಾಲದಲ್ಲಿ ಯುದ್ಧ ನಿಲುಗಡೆಯ ವಾದ್ಯಗಳು ಮೊಳಗಿದವು. ಎರಡೂ ಕಡೆ ಸೈನಿಕರು ತಮ್ಮ ತಮ್ಮ ಬಿಡಾರಗಳತ್ತ ನಡೆದರು. ಅಂದಿನ ಯುದ್ಧದಲ್ಲಿ ದಖನಿಗಳು

ಅಸಂಖ್ಯಾತ ಲೆಕ್ಕದಲ್ಲಿ ಸತ್ತಿದ್ದರು. ಅಹಮದಶಾಹ ದಖನಿ ಈಗ ಯುದ್ಧ ಮಾಡುವುದು ವ್ಯರ್ಥವೆಂದು ಬಗೆದು ತನ್ನ ದೇಶಕ್ಕೆ ವಾಪಸ್ಸಾದನು.

ತಾನೇಸರ್ ಮತ್ತು ನಾವದತ್ತದ ಕಡೆಗೆ ಪ್ರಯಾಣ :

ಸುಲ್ತಾನ್ ಅಹಮದಶಾಹ ಗುಜರಾತಿ ತಂಬೋಲ್ ಕೋಟೆಯೊಳಗೆ ಪ್ರವೇಶಿಸಿದನು, ಆ ಕೋಟೆಯ ಶಾಸಕನಾಗಿದ್ದ ಮಲಿಕ್ ಸಾದಾತ್ ಸುಲ್ತಾನಿಯ ಶೌರ್ಯಕ್ಕೆ ಮೆಚ್ಚಿ ಅನೇಕ ಬಹುಮಾನಗಳನ್ನು, ಸಂಪತ್ತನ್ನು ನೀಡಿ ಗೌರವಿಸಿದನು. ಇದಾದ ನಂತರ ಅಹಮದಶಾಹನು ಕೋಟೆಯ ಜವಾಬ್ದಾರಿಯನ್ನು ತನ್ನ ಕೆಲವು ಆಪ್ತ ಬಹದ್ದೂರರ ವಶಕ್ಕೆ ಬಿಟ್ಟು ತಾನು ಸ್ಥಾನೇಶ್ವರ (ತಾನೇಸರ)ದತ್ತ ಪ್ರಯಾಣವನ್ನು ಬೆಳೆಸಿದನು. ಈ ಪ್ರದೇಶಗಳಲ್ಲೂ ಸಾಕಷ್ಟು ಲೂಟಿ, ವಿನಾಶಗಳನ್ನು ಮಾಡುತ್ತಾ ತನ್ನ ಅಮೀರ ಐನುಲ್‌ಮುಲ್ಕ ಎಂಬುವನಿಗೆ ಆ ಪ್ರದೇಶದ ಶಾಸಕನನ್ನಾಗಿ ನೇಮಿಸಿ, ಬಾದಶಹನು ಪುರಂದರಬಾರ ಮಾರ್ಗವಾಗಿ ಅಹಮ್ಮದಬಾದಿಗೆ ವಾಪಸ್ಸಾದನು. ಕೆಲವು ದಿನಗಳ ನಂತರ ಅಹಮ್ಮದಶಾಹನು ಮಹಾಯಂ ರಾಜನ ಮಗಳೊಂದಿಗೆ ಫತಹ್‌ಖಾನ್ ಮದುವೆಯನ್ನು ನೆರವೇರಿಸಿದನು.

ದಖನಿ ಇತಿಹಾಸಕಾರರ ತಪ್ಪು ವರ್ಣನೆ :

'ಸಿರಾಜುತ್ತವಾರೀಖ್ ದಖನ್'ಎಂಬ ಗ್ರಂಥದಲ್ಲಿ ಮೇಲಿನ ಯುದ್ಧಗಳ ವರ್ಣನೆಯನ್ನು ತಪ್ಪು-ತಪ್ಪಾಗಿ ವರ್ಣಿಸಲಾಗಿದೆ ಎಂದು ತಿಳಿದು ಬರುತ್ತದೆ. **ಆದರೆ ಫರಿಶ್ತಾ ಎಂಬ ಪ್ರಸಿದ್ಧ ಇತಿಹಾಸಕಾರನ** ವರ್ಣನೆ "ರಾಖಿಮುಲ್-ಹುರೂಫ್" ಎಂಬುದರಲ್ಲಿ ಹೇಳಿರುವಂತೆ ದಕ್ಷಿಣದ ಲೇಖಕರ ವರ್ಣನೆ ತೀರಾ ಕೀಳುಮಟ್ಟಾದ್ದಾಗಿರುವುದಲ್ಲದೇ ತಪ್ಪಾಗಿ ವರ್ಣಿಸಲಾಗಿದೆ. ಈ ಯುದ್ಧಗಳ ಬಗ್ಗೆ ಗುಜರಾತಿನ ಲೇಖಕರ ವರ್ಣನೆಗಳೇ ಸರಿಯಾಗಿವೆಯೆಂದು ತಿಳಿಯಬೇಕು.

ಮೇವಾಡ್ ಮತ್ತು ನಾಗೋರಗಳತ್ತ ಪ್ರಯಾಣ :

ಅಹಮದಶಾಹ ಗುಜರಾತಿ ಹಿಜರಿ ೮೩೬ರಲ್ಲಿ ಮೇವಾತ್(ಡ್) ಮತ್ತು ನಾಗೋರ್ ಕಡೆಗಳಲ್ಲಿ ಪ್ರಯಾಣವನ್ನು ಬೆಳೆಸಿದನು. ಬಾದಶಹನು 'ದೂಂಗರ್' ಎಂಬಲ್ಲಿಗೆ ತಲುಪಿ ಅಲ್ಲಿನ ಜಮೀನ್ದಾರರಿಂದ ಕಪ್ಪನ್ನು ವಸೂಲಿ ಮಾಡಿಕೊಂಡನು. ನಂತರ ಕೆಲ್ವಾರ ಮತ್ತು ದಿಲ್ವಾರ ಪ್ರದೇಶಗಳಲ್ಲಿ ಪ್ರಯಾಣವನ್ನು ಮಾಡಿದನು. ಅಲ್ಲಿಯ ಜನಾಂಗಗಳೆಂದರೆ-ಕೋಲಿ ಮತ್ತು ಭೇಲಿ ಜನರು ವಾಸಿಸುತ್ತಿದ್ದರು. ಈ ಜನರು ಚಿತ್ತೂರ ಕೋಟೆಯ ರಾಜ ರಾಮಮೋಕಲ್ ಎಂಬುವನ ಆಳ್ವಿಕೆಗೆ ಸೇರಿದವರಾಗಿದ್ದರು. ಬಾದಶಹನು ಆ ಪ್ರದೇಶಗಳಲ್ಲೂ ಲೂಟಿಯನ್ನು ಮಾಡಿದನು.

ಫೈರೋಜ್‌ಖಾನ :

ಇದಾದ ನಂತರ ಬಾದಶಹನು ಮೇವಾಡ್ ಪ್ರದೇಶದ ಗಡಿಗಳಲ್ಲಿ ಪ್ರವೇಶಿಸಿ, ಅಲ್ಲಿನ ಕೋಟ, ಬೊಂದಿ ಮತ್ತು ನೊಯಲೆ ರಾಜ್ಯಗಳಲ್ಲಿ ಸೈನ್ಯದೊಂದಿಗೆ ಹೋಗಿ ಅಲ್ಲಿನ ರಾಜರುಗಳಿಂದ ಕಪ್ಪ-ಕಾಣಿಕೆಗಳನ್ನು ವಸೂಲ ಮಾಡಿದನು. ಇದೇ ಸಂದರ್ಭದಲ್ಲಿ ಬಾದಶಹನ ತಮ್ಮನ ಮಗನಾದ ಫೈರೋಜಖಾನನು ಬಾದಶಹನ ಸೇವೆಯಲ್ಲಿ ಹಾಜರಾದನು. ಈತನು ನಾಗೋರನ ಶಾಸಕನಾಗಿದ್ದನು. ಈತನು ತನ್ನಲ್ಲಿ ಸಂಗ್ರಹವಾಗಿದ್ದ ಅಪಾರ ಸಂಪತ್ತನ್ನು ಬಾದಶಹನಿಗೆ ಅರ್ಪಿಸಿದನು. ಆದರೆ ಬಾದಶಹನು ಈತನು ಕೊಟ್ಟ ಹಣವನ್ನು ಆತನಿಗೆ ವಾಪಸ್ಸು ಕೊಟ್ಟಿದ್ದೇ ಅಲ್ಲದೇ ತನ್ನಲ್ಲಿದ್ದ ಸಂಪತ್ತನ್ನು ಕೊಟ್ಟು ಗುಜುರಾತಿಗೆ ವಾಪಸ್ಸಾದನು. ಅಹಮದಾಬಾದಿಗೆ ಬಂದ ನಂತರ ಬಾದಶಹನು ತಾನು ತಂದಿದ್ದ ಸಂಪತ್ತಿನಲ್ಲಿ ಅಪಾರ ಪ್ರಮಾಣದ ಹಣವನ್ನು ಬಡಬಗ್ಗರಲ್ಲಿ ಹಂಚಿದನು.

ದಖನಿ ಮತ್ತು ಗುಜರಾತಿಗಳಲ್ಲಿ ಯುದ್ಧ :

ಅಹಮದಶಾಹನು ಮಾಂಡು ಕೋಟೆಯನ್ನು ಮುತ್ತಿದನು. ಕೋಟೆಯ ಒಂದು ಗುಂಪು ಹೊರ ಬಂದು ಶತ್ರುಗಳೊಂದಿಗೆ ಕಾದಾಡಿ ಒಳಹೋಗುತ್ತಿದ್ದರು. ಸುಲ್ತಾನ್ ಮಹಮದನು ರಾತ್ರಿಯಲ್ಲಿ ಶತ್ರುಗಳು ಮಲಗಿದಾಗ ದಾಳಿ ಮಾಡಬೇಕೆಂದು ತೀರ್ಮಾನಿಸಿಕೊಂಡನು. ಕೋಟೆಯ ಶಾಸಕರು ತಕ್ಷಣ ಅಹಮದಶಾಹನಿಗೆ ಈ ಸಮಾಚಾರವನ್ನು ತಿಳಿಸಿದರು. ಸುಲ್ತಾನ್ ಮಹಮೂದ್‌ನು ಏನೂ ಗೊತ್ತಿಲ್ಲದವನಂತೆ ಸುಮ್ಮನಾಗಿ ಬಿಟ್ಟ. ಆತನು ಕೋಟೆಯ ಹೊರಗೆ ಬಂದು ನೋಡಿದಾಗ ಗುಜರಾತಿನವರು ಯುದ್ಧಕ್ಕೆ ಸಿದ್ಧರಾದಂತೆ ಕಂಡಿತು. ಇಬ್ಬರಲ್ಲೂ ಘೋರ ಯುದ್ಧವೇ ನಡೆಯಿತು. ಎರಡೂ ಕಡೆಯ ಅಸಂಖ್ಯಾತ ಸೈನಿಕರು ಹತರಾದರು. ಬೆಳಗಾಗುವುದರೊಳಗೆ ಸುಲ್ತಾನ್ ಮಹಮೂದ್‌ನು ಕೋಟೆಯಲ್ಲಿ ಅಡಗಿಕೊಂಡನು. ಅಹಮದಶಾಹನು ತನ್ನ ಮಗನೊಂದಿಗೆ ಐದು ಸಾವಿರ ಕುದುರೆ ಸವಾರರ ಸೈನ್ಯವನ್ನು ಕೊಟ್ಟು ಸಾರಂಗಪುರಕ್ಕೆ ಕಳುಹಿಸಿ ಆ ನಗರವನ್ನು ಮಹಮದಖಾನನು ವಶಪಡಿಸಿಕೊಂಡನು.

ಅಹಮ್ಮದಶಾಹ ಗುಜರಾತಿ ಮಾಳವ ದೇಶದ ಕಡೆಗೆ :

ಸುಲ್ತಾನ್ ಮಹಮೂದ್ ಖಿಲ್ಜಿಯೆಂಬುವನು ಸುಲ್ತಾನ್ ಹೋಷಂಗನ ಸೇವೆಯಲ್ಲಿದ್ದನು. ಹಿಜರಿ ೮೩೯ರಲ್ಲಿ ಈತನು ಮಾಳವ ದೇಶವನ್ನು ತನ್ನ ವಶಕ್ಕೆ ತೆಗೆದುಕೊಂಡಿದ್ದನು. ಮಹಮೂದ್‌ಶಾಹ ಗುಜರಾತಿಯ ಮಗನಾದ ಮಸೂದಖಾನನು ಗುಜರಾತಿನಲ್ಲಿ ಆಶ್ರಯುವನ್ನು ಪಡೆದಿದ್ದನು. ಅಹಮ್ಮದಶಾಹ ಗುಜರಾತಿ ಮಸೂದಖಾನನಿಗೆ ಸಹಾಯ ಮಾಡಲು ತೀರ್ಮಾನಿಸಿದನು. ಈ ರಾಜಕುಮಾರನನ್ನು ಮಾಳವದ ಶಾಸಕನನ್ನಾಗಿ ಮಾಡಲು ಮಾಳವ ದೇಶದತ್ತ ಅಹಮದಶಾಹನು ಹೊರಟನು. ಬಾದಶಹನು ಹೌಸ್‌ಜಕಂಕಮರವನ್ನು ತಲುಪಿ ಒಂದು ವಿಶಾಲ ಸೈನ್ಯವನ್ನು

ಖಾನ ಜಹಾನನ ವಿರುದ್ಧ ಸೆಣಸಲು ಕಳುಹಿಸಿ ಕೊಟ್ಟನು. ಖಾನಜಹಾನನು ಚಂದೇರಿ ನಗರದಿಂದ ಮಾಂಡು ಕಡೆ ಹೋಗುತ್ತಿದ್ದನು. ಈ ವಿಚಾರವನ್ನು ತಿಳಿದ ಕೂಡಲೆ ಬಹಳ ಬೇಗ ಆತನು ಮಹಮ್ಮದ್‌ಶಾಹನ ಹತ್ತಿರ ತಲುಪಿದನು.

ಸುಲ್ತಾನ್ ಮಹಮೂದ್‌ನ ದಕ್ಷತೆ :

ಆ ದಿನಗಳಲ್ಲಿ ಸುಲ್ತಾನ್ ಹೋಷಂಗನ ಮಗನಾದ ಉಮರಖಾನನು ಚಂದೇರಿ ನಗರಕ್ಕೆ ಹೋಗಿದ್ದನು. ಆತನು ಅಲ್ಲಿಗೆ ಹೋಗಿ ತನ್ನ ಸುತ್ತ ಒಳ್ಳೆಯ ಪ್ರಾಮಾಣಿಕ ವ್ಯಕ್ತಿಗಳನ್ನು ಬೆಳೆಸಿಕೊಂಡಿದ್ದನು. ಈ ಪರಿಸ್ಥಿತಿಯಲ್ಲಿ ಸುಲ್ತಾನ್ ಮಹಮೂದ್‌ನು ಚಿಂತನೆಗೆ ಒಳಗಾಗದೇ ತನ್ನ ದಕ್ಷತೆ ಮತ್ತು ಶೌರ್ಯವನ್ನು ಜನರಲ್ಲಿ ಪ್ರದರ್ಶಿಸಿದನು. ಚಂದೇರಿ ಕೋಟೆಯನ್ನು ಭದ್ರಪಡಿಸಿಕೊಂಡನು. ತನ್ನ ಕೋಟೆಯಲ್ಲಿ ಯಾವ ವಸ್ತುಗಳಿಗೂ ಕೊರತೆ ಇಲ್ಲದಂತೆ ನೋಡಿಕೊಂಡನು. ಆಹಾರ ಸಾಮಗ್ರಿಗಳನ್ನು ಯಥೇಚ್ಛವಾಗಿ ಸಂಗ್ರಹಿಸಿಕೊಂಡನು.

ಬರಗಾಲ :

ಸುಲ್ತಾನ್ ಅಹಮ್ಮದಶಾಹನ ಸೈನ್ಯದಲ್ಲಿ ಆಹಾರದ ಕೊರತೆಯು ಬರಗಾಲದ ಕಾರಣ ಕಾಣಿಸಿಕೊಂಡಿತು. ಮನುಷ್ಯರು, ಪ್ರಾಣಿಗಳು ಆಹಾರವು ಸಿಗದೆ ಸತ್ತು ಹೋದವು. ಇದನ್ನು ಕಂಡ ಸುಲ್ತಾನ್ ಮಹಮೂದ್ ಖಿಲ್ಜಿಯು ಕೈ ಕಟ್ಟಿ ಕುಳಿತುಕೊಳ್ಳುವುದು ಸರಿಯಲ್ಲವೆಂದು ತೀರ್ಮಾನಿಸಿ ತನ್ನ ತಂದೆ ಖಾನಜಹಾನನ್ನು ಕೋಟೆಯಲ್ಲಿ ಬಿಟ್ಟು ತಾನು ತಾರಾಪೂರ್ ಬಾಗಿಲಿನಿಂದ ಕೆಳಗಿಳಿದು ಸಾರಂಗಪುರದತ್ತ ಹೊರಟನು.

ಹಾಜಿ ಅಲಿ ಗುಜರಾತಿಯ ಸೋಲು :

ದಾರಿಯಲ್ಲಿ 'ಕುನೇಲ್' ಕೋಟೆಯ ಶಾಸಕನಾದ ಹಾಜಿ ಗುಜರಾತಿಯು ಮಹಮೂದ್ ಖಿಲ್ಜಿಯನ್ನು ತಡೆದು ತೊಂದರೆಗಳನ್ನು ಕೊಟ್ಟನು. ಇಬ್ಬರಲ್ಲೂ ಹೊಡೆದಾಟವಾಯಿತು. ಮಹಮೂದ್ ಖಿಲ್ಜಿಯ ಕೈ ಮೇಲಾಯಿತು. ಹಾಜಿ ಅಲಿ ಗುಜರಾತಿಗೆ ಸೋಲಾಯಿತು. ಸೋತು ಯುದ್ಧ ಮೈದಾನದಿಂದ ಓಡಿದನು. ಅಲ್ಲಿದ್ದ ಸುಲ್ತಾನ್ ಅಹಮದಶಾಹನ ಹತ್ತಿರ ತಲುಪಿದನು. ಮಹಮೂದ್ ಖಿಲ್ಜಿಯು ಸಾರಂಗಪುರದತ್ತ ಹೋಗುತ್ತಿದ್ದಾನೆಂದೂ ತಿಳಿಸಿದನು.

ಪ್ಲೇಗ್ ಕಾಯಿಲೆಯು ಹರಡಿತು :

ಸುಲ್ತಾನ್ ಅಹಮದಶಾಹನು ತನ್ನ ಮಗನನ್ನು ಸಾರಂಗಪುರದಿಂದ ತನ್ನಲ್ಲಿಗೆ ಕರೆಯಿಸಿಕೊಂಡನು. ಮಹಮೂದ್ ಖಿಲ್ಜಿಯು ಉಮರ್‌ಖಾನನೊಂದಿಗೆ ಯುದ್ಧ

ಮಾಡಿ ಆತನನ್ನು ಯುದ್ಧದಲ್ಲಿ ಕೊಂದನು. ಇದೇ ಕಾಲದಲ್ಲಿ ಭಾರತದಾದ್ಯಂತ ಪ್ಲೇಗ ಕಾಯಿಲೆಯು ಬಹಳವಾಗಿ ಹರಡಿತು. ಗುಜರಾತಿಗಳ ಸೈನ್ಯದ ಬಿಡಾರಕ್ಕೂ ಪ್ಲೇಗ ಕಾಯಿಲೆ ಕಾಲಿಟ್ಟಿತು. ಅಸಂಖ್ಯಾತ ಗುಜರಾತಿಗಳು ಕಾಯಿಲೆಗೆ ತುತ್ತಾಗಿ ಸತ್ತರು. ಸತ್ತವರನ್ನು ಹೂಳುವುದೂ ಕಷ್ಟವಾಗಿ ಪರಿಣಮಿಸಿತು.

ಅಹಮದಶಾಹನು ಹಿಂತಿರುಗಿದನು :

ಈ ಪರಿಸ್ಥಿತಿಯನ್ನು ಕಂಡ ಸುಲ್ತಾನ್ ಅಹಮದಶಾಹನು ಒಂದು ತೀರ್ಮಾನಕ್ಕೆ ಬಂದನು. ಮಹಮೂದ್ ಖಿಲ್ಜಿಯ ಅದೃಷ್ಟ ಈಗ ಚೆನ್ನಾಗಿದೆ. ಆತನನ್ನು ಸೋಲಿಸುವುದು ಕಷ್ಟವಾಗಿದೆ. ಎಂದು ತಿಳಿದು ಯುದ್ಧದ ಚಟುವಟಿಕೆಗಳನ್ನು ಸಂಪೂರ್ಣವಾಗಿ ನಿಲ್ಲಿಸಿ ತನ್ನ ದೇಶಕ್ಕೆ ವಾಪಸ್ಸಾದನು.

ಸುಲ್ತಾನ್ ಅಹಮದಶಾಹನ ಮರಣ :

ತನ್ನ ರಾಜಧಾನಿಗೆ ವಾಪಸ್ಸು ಬರುತ್ತಿದ್ದ ದಾರಿಯಲ್ಲಿಯೇ ಸುಲ್ತಾನ್ ಅಹಮದಶಾಹನ ಮೇಲೆ ಯಮರಾಜನ ಆಕ್ರಮಣವಾಯಿತು. ಕಾಯಿಲೆಯು ತೀವ್ರ ಸ್ವರೂಪದಲ್ಲಿತ್ತು. ರಾಜಧಾನಿ ಅಹಮದಾಬಾದನ್ನು ತಲುಪಿದಾಗ ಉಳಿಯುವ ಆಸೆ ತೋರಲಿಲ್ಲ. ಹಿಜರಿ ಶಕೆ–೮೪೬, ರಬೀವುಲ್ ಆಖರ್ ತಿಂಗಳ ನಾಲ್ಕನೇ ತಾರೀಖಿನಂದು ಮಹಾಶೂರ ಸುಲ್ತಾನ್ ಅಹಮದಶಾಹನು ಇಹಲೋಕವನ್ನು ತ್ಯಜಿಸಿದನು. ಆತನನ್ನು ಜನರು ಮರಣಾನಂತರ "ಖುದಾಯಗಾನೆಮಗಘೂರ" ಬಿರುದಿನಿಂದ ಸ್ಮರಿಸಿದರು.

ಆತನ ಪಾತ್ರ (ಚಾರಿತ್ರ್ಯ) :

ಸುಲ್ತಾನ್ ಅಹಮ್ಮದಶಾಹ ಗುಜರಾತಿಯು ೩೬ವರ್ಷ, ೬ ತಿಂಗಳು, ೨೦ ದಿನಗಳ ದೀರ್ಘಕಾಲದ ಆಡಳಿತವನ್ನು ಮಾಡಿದ ಬಾದಶಹನಾಗಿದ್ದನು. ಈತನಲ್ಲಿ ಅತ್ಯುನ್ನತ ಮಟ್ಟದ ಶೌರ್ಯ–ಸಾಹಸಗಳು ವಿಶೇಷ ಬುದ್ಧಿವಂತಿಕೆಗಳು ಇದ್ದುವು. ಈತನ ಆಡಳಿತ ಹೇಗಿತ್ತೆಂದರೆ–ಶತ್ರುಗಳ ಮೇಲೆ ಚಂಗೇಸ್‌ಖಾನನಂತೆ ಹೋರಾಡುತ್ತಿದ್ದನು. ಹಿಂಸೆಗೊಳಗಾದ ಜನರನ್ನು ನೌಶೇರ್‌ವಾನ್ ಆದಿಲ್‌ರಾಜನಂತೆ ಪ್ರೀತಿಯಿಂದ ಸಂತೈಸುತ್ತಿದ್ದನು. ಬಹಳ ಮೇಧಾವಿ, ಪ್ರೇಮ, ಸೌಹಾರ್ದ, ದಾನ ಮಾಡುವುದರಲ್ಲಿ ಎತ್ತಿದಕೈ ಮತ್ತು ಮಹಾಧೈರ್ಯಶಾಲಿಯಾಗಿದ್ದನು.

■

*

೪. ಸುಲ್ತಾನ್ ಮಹಮ್ಮದ ಶಾಹ ಬಿನ್ ಅಹಮದಶಾಹ ಗುಜರಾತಿ

ಐದರ್ ಕೋಟೆಯ ಮೇಲೆ ಆಕ್ರಮಣ :

ಸುಲ್ತಾನ್ ಅಹಮದಶಾಹ ಗುಜರಾತಿಯು ಮರಣಾನಂತರ ಆತನ ಹಿರಿಯಮಗನು ಬಾದಶಹನ ಸಿಂಹಾಸನವನ್ನೇರಿದನು. ನವ ಯುವಕನಾದ ಬಾದಶಹನು ತನ್ನ ಪ್ರಜೆಗಳ ಮನಸ್ಸನ್ನು ಗೆಲ್ಲಲು ಸಾವಿರಾರು ಜನರಿಗೆ ಬಹುಮಾನಗಳನ್ನು, ಬಿರುದುಗಳನ್ನು ಬಡಬಗ್ಗರಿಗೆ ದಾನಗಳನ್ನು ನೀಡಿ ಅವರನ್ನು ತನ್ನತ್ತ ಸೆಳೆದನು. ಬಾದಶಹ ಮಹಮ್ಮದಶಾಹನು ಆಡಳಿತದ ಅಧಿಕಾರವನ್ನು ಹಿಡಿದ ತಕ್ಷಣ ಮೊದಲ ವರ್ಷದಲ್ಲೇ ಐದರ ಕೋಟೆಯ ಮೇಲೆ ಆಕ್ರಮಣವನ್ನು ನಡೆಸಿದನು. ರಾಹತ್-ಅಲ್-ಮುಲ್ಕನು ಮಹಮ್ಮದಶಾಹನ ಆಡಳಿತಾತ್ಮಕ ಹಿರಿಮೆಯನ್ನು ಕಂಡು ತನ್ನ ಮಗಳನ್ನು ಆತನಿಗೆ ಕೊಟ್ಟು ಮದುವೆಯನ್ನು ಮಾಡಿದನು. ತನ್ನ ಹೆಂಡತಿಯ ಸಿಫಾರಸ್ಸಿನ ಮೇರೆಗೆ ತನ್ನ ಮಾವನಾದ ರಾಹತುಲ್‌ಮುಲ್ಕನಿಗೆ ಇನ್ನೂ ಅನೇಕ ಪ್ರದೇಶಗಳನ್ನು ಬಿಟ್ಟು ಕೊಟ್ಟನು.

ಐದರ ಕೋಟೆಯನ್ನು ಗೆದ್ದನಂತರ ಮಹಮ್ಮದಶಾಹನು ಡೊಂಗರ್‌ಪುರದತ್ತ ಹೊರಟನು. ಇಲ್ಲಿನ ಶಾಸಕನು ಬಹಳ ಬೇಗ ಅಧೀನತೆಯನ್ನು ಒಪ್ಪಿಕೊಂಡನು. ಬಾದಶಹನಿಗೆ ಕಪ್ಪಕಾಣಿಕೆಗಳನ್ನು ಅರ್ಪಿಸಿ ತನ್ನ ರಾಜ್ಯದ ಅಧಿಕಾರವನ್ನು ಉಳಿಸಿಕೊಂಡನು. ತದನಂತರ ಮಹಮ್ಮದಶಾಹನು ಅಹಮದಾಬಾದಿಗೆ ವಾಪಸ್ಸಾದನು. ಅಂದಿನಿಂದ ಹಿಜರಿ ೮೫೩ರ ವರೆಗೆ ತನ್ನ ರಾಜಧಾನಿಯನ್ನು ಬಿಟ್ಟು ಎಲ್ಲಿಯೂ ಹೊರ ಹೋಗಲಿಲ್ಲ.

ಚನಿಯಾ ಕೋಟೆಯ ಮೇಲೆ ಆಕ್ರಮಣ :

ಹಿಜರಿ ೮೫೪ರಲ್ಲಿ ಮಹಮ್ಮದಶಾಹನು ಚನಿಯಾ ಕೋಟೆಯ ಮೇಲೆ

ಆಕ್ರಮಣವನ್ನು ಮಾಡಿದನು. ಇಲ್ಲಿನ ರಾಜ ಕಂಕದಾಸನು ಮಹಮ್ಮದಶಾಹನೊಡನೆ ಯುದ್ಧಕ್ಕೆ ನಿಂತನು. ಯುದ್ಧದಲ್ಲಿ ಸೋತು ತನ್ನ ಕೋಟೆಯಲ್ಲಿ ಅಡಗಿಕೊಂಡನು. ಬಾದಶಹನು ಕೋಟೆಯನ್ನು ಮುತ್ತಿದನು. ಬಹಳ ದಿನಗಳ ತನಕ ಮುತ್ತಿಗೆಯನ್ನು ತೆರವುಗೊಳಿಸಲೇ ಇಲ್ಲ. ಮುತ್ತಿಗೆಯಿಂದ ತೊಂದರೆಗೀಡಾದ ಕಂಕದಾಸನು ಸುಲ್ತಾನ್ ಮಹಮ್ಮದ ಖಿಲ್ಜಿಯ ಹತ್ತಿರ ತನಗೆ ಸಹಾಯವನ್ನು ನೀಡುವಂತೆ ಕೋರಿ, ತನ್ನ ರಾಜದೂತನನ್ನು ಅಟ್ಟಿದನು. ತನಗೆ ಸಹಾಯವನ್ನು ಮಾಡಿದರೆ ಪ್ರಯಾಣದ ಪ್ರತಿಯೊಂದು ಮಜಲಿಗೂ ಒಂದು ಲಕ್ಷ "ತಿನ್‌ಗಾ" ಚಿನ್ನದ ನಾಣ್ಯಗಳನ್ನು ನೀಡಲು ಒಪ್ಪಿದ್ದನು.

ಅಹಮದಾಬಾದಿಗೆ ವಾಪಸ್ಸು :

ಸುಲ್ತಾನ್ ಮಹಮೂದ್ ಖಿಲ್ಜಿಯು ಚಿನ್ನದ ನಾಣ್ಯಗಳ ದುರಾಸೆಗೆ ಬಿದ್ದು ಹಾಗೂ ಹಿಂದಿನ ಸೇಡನ್ನು ತೀರಿಸಿಕೊಳ್ಳಲು ರಾಜ ಕಂಕದಾಸನ ಕೋರಿಕೆಯನ್ನು ಒಪ್ಪಿಕೊಂಡನು. ತಕ್ಷಣ ಅದೇ ವರ್ಷದ ಅಂತ್ಯದಲ್ಲಿ ಆ ಪ್ರದೇಶದತ್ತ ಪ್ರಯಾಣವನ್ನು ಬೆಳೆಸಲು ಸಮ್ಮತಿಸಿದನು. ಸುಲ್ತಾನ್ ಮಹಮ್ಮದಶಾಹನ ಸೈನ್ಯದ ಸಾಮಾನುಗಳನ್ನು ಹೊರುವ ಪ್ರಾಣಿಗಳು ಯಾವುದೇ ಕಾಯಿಲೆಗೆ ತುತ್ತಾಗಿ ಸಾಯಲಾರಂಭಿಸಿದವು. ಇದರ ಜೊತೆಗೆ ಸುಲ್ತಾನ್ ಮಹಮ್ಮದಖಿಲ್ಜಿಯು ಸಹ ಕಂಕದಾಸನ ನೆರವಿಗೆ ಬರುತ್ತಿದ್ದಾನೆಂಬ ಸುದ್ದಿಯು ತಿಳಿಯಿತು. ಈ ಪರಿಸ್ಥಿತಿಗಳನ್ನು ಗಮನಿಸಿದ ಮಹಮ್ಮದಶಾಹನು ಬಹಳ ಚಿಂತಿತನಾಗಿ ತನ್ನ ಬಿಡಾರದ ಅನೇಕ ಸಾಮಾನುಗಳಿಗೆ ಬೆಂಕಿ ಇಡಿಸಿದನು. ಯುದ್ಧದಿಂದ ಹಿಮ್ಮೆಟ್ಟಲು ತಿರ್ಮಾನಿಸಿದನು. ಆತನ ಅನೇಕ ಅಮೀರರು ಯುದ್ಧವನ್ನು ಮುಂದುವರಿಸಲು ಸಲಹೆಯನ್ನು ನೀಡಿದರೂ ಒಪ್ಪಲಿಲ್ಲ. ಸಾಧ್ಯವಾದಷ್ಟು ಬೇಗ ಅಲ್ಲಿಂದ ಹೊರಟು ತನ್ನ ರಾಜಧಾನಿ ಅಹಮದಾಬಾದಿಗೆ ಬಂದುಬಿಟ್ಟನು.

ದೇಬ್‌ನತ್ತ ಪಲಾಯನ :

ಮಾಳವ ದೇಶದ ಸುಲ್ತಾನ್‌ನು ಎರಡನೇ ಸಲ ಒಂದು ಲಕ್ಷ ಮಾಳವೀ ಸೈನ್ಯ ಮತ್ತು ಮಾಂಡವಿ ಸೈನ್ಯದೊಡನೆ ಜರ್‍ರಾರ್‌ನ ನೇತೃತ್ವದಲ್ಲಿ ಗುಜರಾತಿನ ಮೇಲೆ ಆಕ್ರಮಣವನ್ನು ಮಾಡಿದರು. ಗುಜರಾತಿನ ಎಲ್ಲ ಸರದಾರರು ಅಮೀರರು ಅವರೊಂದಿಗೆ ಯುದ್ಧ ಮಾಡೋಣವೆಂದು ಎಷ್ಟು ಹೇಳಿದರೂ ಅವರ ಮಾತನ್ನು ಒಪ್ಪಲಿಲ್ಲ. ಮಹಮ್ಮದಶಾಹನು ದೇಬ್ ನಗರದತ್ತ ಓಡಿ ಹೋದನು. ಈ ಪರಿಸ್ಥಿತಿಯನ್ನು ಕಂಡ ಎಲ್ಲ ಗುಜರಾತಿ ಸರದಾರರು, ಅಮೀರರು ಬಹಳ ಚಿಂತಾಕ್ರಾಂತರಾದರು. ಅವರೆಲ್ಲರೂ ಬಾದಶಹನ ಬೇಗಂನ ಹತ್ತಿರ ಬಂದು ತಮ್ಮ ಚಿಂತೆಯನ್ನು ವ್ಯಕ್ತಪಡಿಸಿದರು. ಬೇಗಂಳು ಆ ಕಾಲದ ಒಬ್ಬ ಪ್ರಸಿದ್ಧ ಮಹಿಳೆ ಎನಿಸಿದ್ದಳು.

ಅಮೀರರು ಆಕೆಯನ್ನು ಕುರಿತು ಹೇಳಿದರು.– "ನಿಮಗೆ ನಿಮ್ಮ ಗಂಡ ಬಾದಶಹರು ಹೆಚ್ಚು ಇಷ್ಟವೋ ಅಥವಾ ಗುಜರಾತಿನ ಸಿಂಹಾಸನ ಹೆಚ್ಚು ಇಷ್ಟವೋ"? ಎಂದು ಕೇಳಿದರು. ಈ ರಾಜ ಸಿಂಹಾಸನ ನಿಮ್ಮ ವಂಶದಲ್ಲೇ ಸ್ಥಿರವಾಗಿ ನಿಲ್ಲಬೇಕಾಗಿದೆ ಎಂದರು. ಈ ಪ್ರಶ್ನೆಗಳನ್ನು ಕೇಳಿದ ಬೇಗಂಳು ತನಗೆ ಅರ್ಥವಾಗದಿರುವುದರಿಂದ ಅಮೀರರನ್ನು ಕುರಿತು–ನೀವು ಹೇಳುತ್ತಿರುವುದು ನನಗೆ ಅರ್ಥವಾಗುತ್ತಿಲ್ಲ. ನೇರವಾದ ಶಬ್ದಗಳಲ್ಲಿ ವಿಷಯವನ್ನು ತಿಳಿಸಿ ಎಂದಳು. ಆಗ ಅಮೀರರು ಹೀಗೆಂದರು–ನಿಮ್ಮ ಯಜಮಾನರು ಸುಲ್ತಾನ್ ಮಹಮ್ಮದ ಖಿಲ್ಜಿಯೊಂದಿಗೆ ಯುದ್ಧ ಮಾಡಲು ಹಿಂಜರಿಯುತ್ತಿದ್ದಾರೆ. ಗುಜರಾತಿನ ರಾಜ್ಯ ಬೇರೆಯವರ ವಶವಾಗುವ ಕಾಲ ಸನ್ನಿಹಿತವಾಗಿದೆ. ನೀವು ನಮ್ಮ ಮಾತನ್ನು ಕೇಳಿ ನಾವು ಹೇಳುವಂತೆ ಯಾವುದಕ್ಕೂ ಅಡ್ಡಿಪಡಿಸದಂತೆ ನಡೆದರೆ ಎಲ್ಲವೂ ಸರಿಯಾಗುವುದರಲ್ಲಿ ಅನುಮಾನವಿಲ್ಲ. ನಮ್ಮ ಅಭಿಪ್ರಾಯವೆಸೆಂದರೆ – ತಮ್ಮ ಯಜಮಾನರನ್ನು ಪದಚ್ಯುತಿಗೊಳಿಸಿ ತಮ್ಮ ಮಗನಾದ ಖುತುಬ್‌ಖಾನ್‌ನನ್ನು ಬಾದಶಹನೆಂದು ಘೋಷಿಸಲು ಅನುಮತಿಯನ್ನು ಕೊಡಬೇಕೆಂಬುದಾಗಿದೆ. ನಿಮ್ಮ ಮಗನು ಈಗ ಯುವಕನು ೩೦ ವರ್ಷಗಳ ಧೀರನೂ ಆಗಿದ್ದಾನೆ.

ಮಹಮ್ಮದಶಾಹನ ಮರಣ :

ಬೇಗಂಳು ಬಹಳ ದೀರ್ಘವಾಗಿ ಯೋಚಿಸಿ, ಅಮೀರರ, ಸರದಾರರ ಮಾತಿಗೆ ಒಪ್ಪಿಗೆಯನ್ನು ಸೂಚಿಸಿದಳು. ಕೊನೆಗೊಂದು ದಿನ ಅಮೀರ ಗುಂಪಿನವರು ಹಿಜರಿ ೮೫೫ ಮೊಹರಂ ತಿಂಗಳ ಏಳನೇ ತಾರೀಖಿನಂದು ಮಹಮ್ಮದಶಾಹನಿಗೆ ವಿಷವನ್ನು ಕೊಟ್ಟು ಸಾಯಿಸಿದರು. ಈತನು ೮ ವರ್ಷ ೯ ತಿಂಗಳು ೧೪ ದಿನಗಳ ತನಕ ತನ್ನ ಆಡಳಿತವನ್ನು ನಡೆಸಿದ್ದನು.

ಈತನು ಸತ್ತ ನಂತರ ಮಹಮ್ಮದ್‌ಶಾಹನನ್ನು "ಖುದಾಯೆಗಾನೆಕರೀಂ" ಎಂದು ಸ್ಮರಿಸುತ್ತಿದ್ದರು.

■

*

೫. ಸುಲ್ತಾನ್ ಖುತುಬುದ್ದೀನ್ ಬಿನ್ ಮಹಮ್ಮದಶಾಹ ಗುಜರಾತಿ

ಪಟ್ಟಾಭಿಷೇಕ :

ಸುಲ್ತಾನ್ ಖುತುಬುದ್ದೀನನು ನದರ್‌ಬಾರಿನಲ್ಲಿ ಹಿಜರಿ ಶಕೆ-೮೨೫, ಜಮಾದಿಸ್ಸಾನಿ ತಿಂಗಳ ಎಂಟನೇ ತಾರೀಖ ಸೋಮವಾರದಂದು ಹುಟ್ಟಿದ್ದನು. ತನ್ನ ತಂದೆಯ ಮರಣಾನಂತರ ಪಟ್ಟಕ್ಕೇರಿದನು. ಸುಲ್ತಾನ್ ಮಹಮೂದ್ ಖಿಲ್ಜಿಯು ತನ್ನ ಜಾಗಕ್ಕೆ ಮಲಿಕ್ ಗುಲಾಂ ಸೊಹ್ರಾಬ್‌ತುರ್ಕನನ್ನು ತಾತ್ಕಾಲಿಕ ಆಡಳಿತವನ್ನು ನೋಡಿಕೊಳ್ಳಲು ನೇಮಿಸಿ, ಬಹಳ ವೇಗವಾಗಿ ಅಹಮದಾಬಾದಿನತ್ತ ಧಾವಿಸಿದ.

ಸುಲ್ತಾನ್ ಮಹಮೂದ್ ಖಿಲ್ಜಿಯ ಆಕ್ರಮಣ :

ಸುಲ್ತಾನ್ ಖುತುಬುದ್ದೀನನು ಸುಲ್ತಾನ್ ಮಹಮೂದ್‌ಖಿಲ್ಜಿಯ ವೈಭವ, ಶಕ್ತಿ, ಸಾಮರ್ಥ್ಯಗಳ ಬಗ್ಗೆ ತನ್ನ ಮನಸ್ಸಿನಲ್ಲಿ ಚೆನ್ನಾಗಿ ತಿಳಿದುಕೊಂಡಿದ್ದನು. ಈತನು ತನಗೆ ಹೆಚ್ಚು ಆತ್ಮೀಯನೂ, ಪ್ರೀತಿ ಪಾತ್ರನೂ ಆದ ಒಬ್ಬ ಹಿಂದು ಮಿತ್ರನೊಂದಿಗೆ ಚರ್ಚಿಸಿದ. ಮಿತ್ರನ ಸಲಹೆ ಹೀಗಿತ್ತು. ಬಾದಶಹರೆ-ನೀವು ಈಗಿನ ಪರಿಸ್ಥಿತಿಗನುಸಾರವಾಗಿ ಸೂರತ್ತಿನ ಕೋಟೆಯಲ್ಲಿ ಅಡಗಿಕೊಳ್ಳುವುದು ಒಳ್ಳೆಯದು. ಸುಲ್ತಾನ್ ಮಹಮೂದ್ ಖಿಲ್ಜಿಯು ಯುದ್ಧವಿಲ್ಲದೆ ಗುಜರಾತಿನಲ್ಲಿ ತನ್ನ ಸೈನ್ಯವನ್ನು ಬಿಟ್ಟು ಮಾಂಡುಕಡೆಗೆ ಹೋಗಿಬಿಡುತ್ತಾನೆ. ಆಗ ನೀವು ರಾಜಧಾನಿಗೆ ಬಂದು ಶತ್ರುಗಳ ಮೇಲೆ ನೀವು ಬಿದ್ದು ಅವರನ್ನು ಸುಲಭವಾಗಿ ಸೋಲಿಸಿ ಓಡಿಸಬಹುದು ಎಂದನು. ಖುತುಬುದ್ದೀನನಿಗೆ ಮಿತ್ರನ ಮಾತನ್ನು ಕೇಳಿ ನಾಚಿಕೆಯಾಯಿತು. ಸುಲ್ತಾನ್ ಮಹಮೂದ್‌ನನ್ನು ಎದುರಿಸಲು ಸಿದ್ಧನಾಗಿ ಕೋಟೆಯ ಹೊರಗೆ ಬಂದನು.

ಮಲಿಕ ಅಲಾಯಿ ಸೊಹ್ರಾಬ್‌ನ ಆಗಮನ :

ಮಲಿಕ್ ಅಲಾಯಿ ಸೊಹ್ರಾಬನು ಪರಿಸ್ಥಿತಿಯ ಲಾಭವನ್ನು ಮಾಡಿಕೊಳ್ಳಲು ಮಾಳವ ಸೈನ್ಯದ ಸಹವಾಸದಿಂದ ದೂರ ಉಳಿದನು. ತನ್ನ ಮಾಲಿಕನತ್ತ ಬಂದು ಬಿಟ್ಟನು. ಖಿತುಬ್ಬುದ್ದೀನನು ಮಲಿಕ್ ಅಲಾಯಿಯ ಈ ವರ್ತನೆಯಿಂದ ಬಹಳ ಸಂತೋಷ ಪಟ್ಟನು. ಆತನಿಗೆ ಒಂದು ಸಮಾರಂಭದಲ್ಲಿ ಏಳು ಬಿರುದು ಬಾವಲಿಗಳೊಂದಿಗೆ ಬಹುಮಾನಗಳನ್ನು ನೀಡಿ ಗೌರವಿಸಿದನು. ಮತ್ತು "ಅಲಾ-ಅಲ್-ಮುಲ್ಕ್"ನ ಉಪಾಧಿಯನ್ನು ನೀಡಿದನು. ಮಲಿಕ್ ಅಲಾಯಿಯ ಆಗಮನದಿಂದಾಗಿ ಗಜರಾತಿನ ಆಬಾಲವೃದ್ಧರಾದಿಯಾಗಿ ಎಲ್ಲರಲ್ಲೂ ಸಂತೋಷವುಂಟಾಗಿತ್ತು. ಈ ಆಗಮನದ ಅಂಗವಾಗಿ ಸಂತೋಷದ ನಗಾರಿಗಳನ್ನು ಬಾರಿಸಿದರು.

ಕವಿತೆಯ ಉತ್ತರ ಕವಿತೆಯಲ್ಲಿ :

ಮಾಳವ ದೇಶದ ಸೈನ್ಯಕ್ಕೂ ಗುಜರಾತಿನ ಸೈನ್ಯಕ್ಕೂ ಕೇವಲ ಮೂರು ಮೈಲಿಗಳ ಅಂತರವಿದ್ದಾಗ ಸುಲ್ತಾನ್ ಮಹಮೂದ್ ಖಿಲ್ಜಿಯು ಒಂದು ಕವಿತೆಯನ್ನು ಬರೆದು ಕುತುಬಶಾಹನಿಗೆ ಕಳುಹಿಸಿದ್ದನು. ಕವಿತೆಯ ತಾತ್ಪರ್ಯ ಹೀಗಿತ್ತು-"ನೀನು ಒಬ್ಬ ಗಂಡಸಾಗಿದ್ದರೆ ಯುದ್ಧ ಮೈದಾನದಲ್ಲಿ ನನ್ನ ಎದುರಿಗೆ ಬಂದು ನಿಲ್ಲು" ಇದನ್ನು ಓದಿದ ಖಿತುಬುದ್ದೀನನು, ತನ್ನ ಕಡೆಯ ಸದರ್‌ಜಹಾನ್‌ನಿಗೆ ಆ ಕವಿತೆಗೆ ಉತ್ತರವನ್ನು ಬರೆಯಲು ಆಜ್ಞಾಪಿಸಿದನು. ಸದರ್‌ಜಹಾನನೂ ಕಾವ್ಯದ ಶೈಲಿಯಲ್ಲಿಯೇ ಉತ್ತರಿಸಿದನು. ಅದರ ತಾತ್ಪರ್ಯವೂ ಹಿಗಿತ್ತು-"ನಾವು ಯುದ್ಧ ಮೈದಾನದ ಗಂಡುಗಲಿಗಳಾಗಿದ್ದೇವೆ. ಶತ್ರುಗಳ ತಲೆಗಳನ್ನು ಹಾರಿಸುವುದೇ ನಮ್ಮ ಆಶಯ ಆದರೆ ತಮ್ಮ ನಮ್ಮ ಸೆರೆಯಾಳುಗಳೊಂದಿಗೆ ವರ್ತನೆಯನ್ನು ಮಾಡುವುದು ನಾಚಿಕೆಯ ವಿಷಯವಾಗಿದೆ". ಕವಿ ಸದರ್ ಜಹಾನನು ತನ್ನ ಬುದ್ಧಿ ಶಕ್ತಿಯಿಂದ ಹಿಂದಿನ ಒಂದು ಘಟನೆಯನ್ನು ಜ್ಞಾಪಿಸಿ ಅವರಿಗೆ ನಾಚಿಕೆಯಾಗುವಂತೆ ಅರ್ಥೈಸಿದ್ದನು. ಹಿಂದಿನ ನಾಚಿಕೆಯಾಗುವಂತಹ ಘಟನೆ ಹೀಗಿತ್ತು - ಸುಲ್ತಾನ್ ಮಹಮೂದ್‌ನು ಸುಲ್ತಾನ್ ಹೋಷಂಗನನ್ನು ಸೆರೆಹಿಡಿದು, ಸಂತೋಷದ ಕುರುಹಾಗಿ ಆತನನ್ನು ಸೆರೆಯಿಂದ ಬಿಡಿಸಿ ಮಾಳವ ದೇಶದ ಆಡಳಿತವನ್ನು ಅವನಿಗೆ ಒಪ್ಪಿಸಿದ್ದನು. ಈ ಕಾರ್ಯವು ಬಹಳ ಅಪಮಾನ ಜನಕವಾಗಿದ್ದ ವಿಚಾರವನ್ನು ಬಹಳ ಮಾರ್ಮಿಕವಾಗಿ ಕವಿತೆಯಲ್ಲಿ ರಚಿಸಲಾಗಿತ್ತು.

ಸುಲ್ತಾನ್ ಮಹಮೂದನ ಅಡ್ಡದಾರಿ :

ಸಫರ್ ತಿಂಗಳ ಒಂದನೇ ತಾರೀಖು ಸುಲ್ತಾನ್‌ನು ಗುಜರಾತಿಗಳ ಮೇಲೆ ರಾತ್ರಿವೇಳೆ ಎಲ್ಲರೂ ಮಲಗಿದಾಗ ಇದ್ದಕ್ಕಿದ್ದಂತೆ ಆಕ್ರಮಣವನ್ನು ಮಾಡಲು ನಿಶ್ಚಯಿಸಿದ್ದನು. ಆ ಜಾಗಕ್ಕೆ ಆತನು ಹೊಸಬನಾಗಿದ್ದ ಕಾರಣ ದಾರಿಯನ್ನು ಮರೆತು

ಕಳ್ಳಿಗಿಡಗಳ ಮಧ್ಯ ಸಿಕ್ಕಿಹಾಕಿಕೊಂಡನು. ಆತನಿಗೆ ದಾರಿಯೇ ತೋಚದೆ ರಾತ್ರಿವೇಳೆ ಮಲಗಿದ್ದ ಸಂದರ್ಭದಲ್ಲಿ ಆಕ್ರಮಣ ಮಾಡಲು ಸಾಧ್ಯವೇ ಆಗಲಿಲ್ಲ. ರಾತ್ರಿಯೆಲ್ಲ ತನ್ನ ಕುದುರೆಯ ಮೇಲೆಯೇ ಇರಬೇಕಾಯಿತು.

ಯುದ್ಧದ ಪ್ರಾರಂಭ :

ಸುಲ್ತಾನ್ ಖುತುಬುದ್ದೀನನಿಗೆ ದಾರಿ ತಪ್ಪಿದ ಸಮಾಚಾರ ತಿಳಿದ ತಕ್ಷಣ ತನ್ನ ಸೈನ್ಯವನ್ನು ತರಬೇತಿಗೊಳಿಸಿ ಸಿದ್ಧರಾಗಿ ಖಿಲ್ಜಿಯ ಸೈನ್ಯದೆದುರು ನಿಲ್ಲಿಸಿದನು. ಗುಜರಾತಿನ ಸೇನಾಧಿಕಾರಿಯು ಯುದ್ಧದಲ್ಲಿ ಸೋತು ಅಹಮದಾಬಾದಿನತ್ತ ಓಡಿದನು. ಆದರೆ ಮೆಮೀನ ಎಂಬುವವನು ಮಾಳವ ಸೈನ್ಯವನ್ನು ಸೋಲಿಸಿದನು. ಮಾಳವ ಸೈನಿಕರು ತಮ್ಮ ದೇಶದತ್ತ ದಿಕ್ಕಾಪಾಲರಾಗಿ ಓಡಿದರು. ಆದರೆ ಇಬ್ಬರೂ ಸುಲ್ತಾನರು ಮಾತ್ರ ಯುದ್ಧವನ್ನು ನಿಲ್ಲಿಸಲಿಲ್ಲ. ಹೋರಾಡುತ್ತಲೇ ಇದ್ದರು. ಮಾಳವ ಸೈನಿಕರು ಪ್ರಾರಂಭದಲ್ಲಿ ಗುಜರಾತಿನ ಸೈನ್ಯವನ್ನು ಸೋಲಿಸಿದ್ದರಿಂದ ನಾವು ಗೆದ್ದಿದ್ದೇವೆಂಬ ಭಾವನೆಯಲ್ಲಿದ್ದರು. ಗುಜರಾತಿ ಸೈನಿಕರನ್ನು ಹಿಮ್ಮೆಟ್ಟಿಸುತ್ತಲೇ ಇದ್ದರು. ಆದರೆ ಖುತುಬುದ್ದೀನನ ಸೈನಿಕರ ಒಂದು ಗುಂಪು ಖಿಲ್ಜಿ ಸೈನಿಕರನ್ನು ಸೋಲಿಸಿ ಶತ್ರುಗಳನ್ನು ತುಂಬಾ ಕಷ್ಟಕ್ಕೀಡು ಮಾಡಿದರು.

ಸುಲ್ತಾನ್ ಮಹಮೂದನು ಪರಾರಿ :

ಸುಲ್ತಾನ್ ಮಹಮೂದನು ಯುದ್ಧದಲ್ಲಿ ಎಷ್ಟರ ಮಟ್ಟಿಗೆ ತಲ್ಲೀನನಾಗಿದ್ದನೆಂದರೆ ತಾನೇನು ಮಾಡುತ್ತಿರುವೆನೆಂಬ ಅರಿವೇ ಆತನಿಗಿರಲಿಲ್ಲ. ಶತ್ರುಗಳೊಂದಿಗೆ ಘೋರ ಯುದ್ಧದಲ್ಲಿ ತೊಡಗಿದ್ದ ಕೊನೆಗೆ ಆತನ ಹತ್ತಿರ ಯಾವ ಸೈನಿಕನೂ ಆತನ ರಕ್ಷಣೆಗೆ ಇಲ್ಲವಾಗಿದ್ದರು. ಆತನ ಬತ್ತಳಿಕೆಯಲ್ಲಿ ಯಾವ ಬಾಣವೂ ಇಲ್ಲದ ಸ್ಥಿತಿ ಒದಗಿತ್ತು. ವಿವಶನಾಗಿ ಯುದ್ಧ ಮೈದಾನದಿಂದ ಓಡಿ ಹೋದನು. ಆತನಿಗೆ ತಾನು ಎಲ್ಲಿ ಹೋಗುತ್ತಿದ್ದೇನೆಂಬ ಅರಿವೂ ಇಲ್ಲದಂತಾಗಿ ಗುಜರಾತಿ ಸುಲ್ತಾನ್‌ನ ಸ್ತ್ರೀಯರ ಪರದೆಗಳ ಹಿಂದೆ ಅಡಗಿಕೊಳ್ಳಲು ಪ್ರಾರಂಭಿಸಿದ. ಅಲ್ಲಿ ಕೆಲವು ಬೆಲೆಬಾಳುವ ವಸ್ತುಗಳನ್ನು ಸಂಗ್ರಹಿಸಿಕೊಂಡನೆಂದು ಹೇಳುತ್ತಾರೆ. ಆತನ ಹಿಂದೆ ಮಾಳವೀ ಸೈನಿಕರು ಇದ್ದರು. ಎಲ್ಲರೂ ಸೇರಿ ಯುದ್ಧ ಮೈದಾನದಿಂದ ಪರಾರಿಯಾದರು.

ಸುಲ್ತಾನ್ ಮಹಮೂದನು ಮಾಳವಕ್ಕೆ ವಾಪಸ್ಸು :

ಸುಲ್ತಾನ್ ಮಹಮೂದನು ಅಂದು ರಾತ್ರಿ ಅಲ್ಲಿಯೇ ತಂಗಿದ್ದನೆಂದು ಅಂದು ರಾತ್ರಿ ಗುಜರಾತಿಗಳ ಮೇಲೆ ಆಕಸ್ಮಿಕ ದಾಳಿ ಮಾಡುವನೆಂಬ ಸುದ್ದಿ ಹರಡಿಸಲಾಯಿತು. ಗುಜರಾತಿ ಸೈನಿಕರಲ್ಲಿ ಒಂದು ರೀತಿಯ ಆತಂಕವೇರ್ಪಟ್ಟು ಅವರೆಲ್ಲರೂ ತಮ್ಮ-ತಮ್ಮ ಕುದುರೆಗಳ ಮೇಲೆಯೇ ರಾತ್ರಿಯನ್ನು ಕಳೆದಿದ್ದರು. ಅರ್ಧ ರಾತ್ರಿಯ ನಂತರ

ಸುಲ್ತಾನ್ ಮಹಮೂದ್‌ನು ಮಾಳವದತ್ತ ಪ್ರಯಾಣಿಸಲು ನಿರ್ಧರಿಸಿದನು. ಬೆಳಗಾಗುವುದರೊಳಗೆ ತನ್ನ ಶತ್ರುವಿನ ಭಯವಿಲ್ಲದಷ್ಟು ಬಹುದೂರ ಸಾಗಿಹೋಗಿದ್ದನು.

ಸುಲ್ತಾನ್‌ಪುರ ಕೋಟೆಯನ್ನು ಮತ್ತೊಮ್ಮೆ ವಶಪಡಿಸಿಕೊಂಡನು :

ಈ ಆಕಸ್ಮಿಕ ವಿಜಯದಿಂದಾಗಿ ಸುಲ್ತಾನ್ ಖುತುಬುದ್ದೀನನು ಬಹಳ ಸಂತೋಷಪಟ್ಟನು. ಇದು ಅಲ್ಲಾನ ಕೃಪೆಯೆಂದು ತಿಳಿದನು. ೮೦ ಆನೆಗಳು, ಬಹಳಷ್ಟು ಯುದ್ಧ ಸಂಬಂಧಿ ಸಾಮಾನುಗಳೊಂದಿಗೆ ಆತನು ತನ್ನ ರಾಜಧಾನಿಯತ್ತ ವಾಪಸ್ ಬಂದನು. ಒಂದು ವೈಭವಪೂರ್ಣ ಸಮಾರಂಭವನ್ನೇರ್ಪಡಿಸಿ, ಯುದ್ಧದಲ್ಲಿ ಭಾಗವಹಿಸಿದವರೆಲ್ಲರಿಗೂ, ಬಡ–ಬಗ್ಗರಿಗೂ ಅಪಾರ ಸಂಪತ್ತನ್ನು ನೀಡಿದನು. ನಂತರ ಒಂದು ವಿಶಾಲ ಸೈನ್ಯವನ್ನು ಸುಲ್ತಾನ್‌ಪುರ ಕೋಟೆಯನ್ನು ತನ್ನ ವಶಪಡಿಸಿಕೊಳ್ಳಲು ಕಳುಹಿಸಿದನು. ಆ ಕೋಟೆಯ ರಾಜನನ್ನು ಓಡಿಸಿ ಅದರ ಮೇಲೆ ತನ್ನ ಆಧಿಪತ್ಯವನ್ನು ಸ್ಥಾಪಿಸಿದನು.

ಮಹಮೂದ್ ಖಿಲ್ಜಿ ಮತ್ತು ಖುತುಬುದ್ದೀನರಲ್ಲಿ ಸಂಧಿ :

ಈ ಕೋಟೆಯನ್ನು ವಶಪಡಿಸಿಕೊಂಡ ನಂತರ ಸುಲ್ತಾನ್ ಖುತುಬುದ್ದೀನನು ಮತ್ತು ಮಹಮೂದ್ ಖಿಲ್ಜಿಯವರಲ್ಲಿ ಒಂದು ಕರಾರು ನಡೆಯಿತು. ಅದೇನೆಂದರೆ ಮುಸ್ಲಿಮೇತರ ರಾಜರನ್ನು ಯಾವ ಬಾದಶಹನು ಸೋಲಿಸಿ ಆ ರಾಜ್ಯವನ್ನು ತನ್ನ ವಶಕ್ಕೆ ಪಡೆಯುತ್ತಾನೋ, ಆ ರಾಜ್ಯವನ್ನು ಗೆಲ್ಲಲು ಯಾವ ಬಾದಶಹನು ಮನಸ್ಸು ಮಾಡಬಾರದು. ಹಿಂದು ರಾಜರನ್ನು ತನ್ನ ಜೊತೆ ಸೇರಿಸಿಕೊಂಡು ಯಾವ ಮುಸ್ಲಿಂ ಸುಲ್ತಾನ್‌ನು ಯಾವ ಮುಸ್ಲಿಂ ಸುಲ್ತಾನ್‌ನ ಮೇಲೆ ಯುದ್ಧಕ್ಕೆ ಹೋಗಬಾರದು. ಈ ಷರತ್ತುಗಳನ್ನು ಇಬ್ಬರು ಪಾಲಿಸಬೇಕೆಂಬುದಕ್ಕೆ ತಮ್ಮ ಭದ್ರತೆಯನ್ನು ಇಬ್ಬರು ಕೋರಿದರು. ಏಕೆಂದರೆ ಹಿಂದು ರಾಜರುಗಳು ಬಹಳ ಅಹಂಕಾರಿಗಳು ಹಾಗೂ ಮಾತಿನ ಮೇಲೆ ನಡೆಯುವವರಲ್ಲದವರಾಗಿದ್ದಾರೆ.

ನಾಗೋರ ಶಾಸಕ, ಫೈರೋಜ್‌ಖಾನನ ಮರಣ :

ಹಿಜರಿ ೮೬೦ರಲ್ಲಿ ನಾಗೋರಿನ ಶಾಸಕನಾದ ಫೈರೋಜಖಾನ್ ದಂದಾನಿಯ ಮರಣದ ಸುದ್ದಿ ತಿಳಿಯಿತು. ಫೈರೋಜ್‌ಖಾನನ ತಮ್ಮನಾದ ಮುಜಾಹಿದಖಾನನು ಬಲಿಷ್ಠನಾಗಿ ಫೈರೋಜಖಾನನ ಮಗನಾದ ಶಮ್ಸಖಾನನಿಗೆ ಅಧಿಕಾರವನ್ನು ವಹಿಸದೇ ತಾನು ಶಾಸಕನೆಂದು ಘೋಷಿಸಿಕೊಂಡಿದ್ದಾನೆಂಬ ಸುದ್ದಿಯೂ ತಿಳಿಯಿತು. ಶಮ್ಸ್‌ಖಾನನು ತನ್ನ ಚಿಕ್ಕಪ್ಪನ ಹಿಂಸೆಗೆ ಹೆದರಿ ಚಿತ್ತೋರನ ರಾಜ ಕಂಭೋರ್‌ನ ಆಶ್ರಯದಲ್ಲಿದ್ದಾನೆಂದು ತಿಳಿಯಿತು. ನಾಗೋರಿನ ಜಮೀನ್ದಾರರಿಗೂ, ರಾಜ ಕಂಭೋರನಿಗೂ ಬಹಳ ದಿನಗಳಿಂದ ಶತ್ರುತ್ವವಿತ್ತು. ಈ ಸಂದರ್ಭವನ್ನು ಬಳಸಿಕೊಂಡು

ರಾಣಾಕಂಭೋರ್‌ನು ಶಮ್ಸ್‌ಖಾನನ ಪಕ್ಷವಹಿಸಿ ಆತನ ತಂದೆಯ ಜಾಗದಲ್ಲಿ ಶಾಸಕನನ್ನಾಗಿ ಮಾಡಲು ಒಪ್ಪಿ ನಾಗೋರಿನ ಮೇಲೆ ಯುದ್ಧವನ್ನು ಹೂಡಲು ಸಿದ್ಧನಾದನು. ಈ ಯುದ್ಧದಲ್ಲಿ ನಾನು ವಿಜಯವನ್ನು ಪಡೆದರೆ ನೀನು ನಿನ್ನ ಕೋಟೆಯ ಮೂರು ಬತೇರಿಗಳನ್ನು ಕೆಡವಿಸಬೇಕೆಂಬ ವಿಚಿತ್ರ ಷರತ್ತನ್ನು ಮುಂದಿಟ್ಟನು. ಈ ಷರತ್ತಿನ ಅರ್ಥ ಹೀಗಿತ್ತು. –ರಾಜ ಕಂಭೋರನ ತಂದೆ ನಾಗೋರನನ್ನು ವಶಪಡಿಸಿಕೊಳ್ಳಲು ಅನೇಕ ಸಲ ಪ್ರಯತ್ನಪಟ್ಟಿದ್ದನು. ಯುದ್ಧದಲ್ಲಿ ಸೋತು ಹಿಂತಿರುಗಿದ್ದನು. ತನ್ನ ಮೂರು ಜನ ಮಹಾಶೂರ ಸಿಪಾಯಿಗಳು ಪ್ರಾಣವನ್ನು ಕಳೆದುಕೊಂಡಿದ್ದರು. ಈಗ ನಾನು ಗೆದ್ದರೆ ಅವರ ನೆನಪಿಗಾಗಿ ನೀನು ಮೂರು ಬತೇರಿಗಳನ್ನು ನೆಲಸಮ ಮಾಡಿದರೆ ನನ್ನ ಮನಸ್ಸಿಗೆ ಶಾಂತಿಯಾಗುತ್ತದೆ ಎಂದು ತಿಳಿಸಿದನು.

ಶಮ್ಸ್‌ಖಾನನ ಗೆಲುವು, ನಾಗೋರ್ ಕೈವಶ :

ಶಮ್ಸ್‌ಖಾನನು ರಾಣಾ ಕಂಭೋರನ ಷರತ್ತನ್ನು ಒಪ್ಪಿಕೊಂಡನು. ಆತನನ್ನು ತನ್ನ ಜೊತೆಯಲ್ಲಿ ಕರೆದುಕೊಂಡು ನಾಗೋರಿನ ಮೇಲೆ ಆಕ್ರಮಣವನ್ನು ಮಾಡಿದನು. ಚಿಕ್ಕಪ್ಪ ಮುಜಾಹಿದ್‌ಖಾನನು ಈ ಇಬ್ಬರ ಆಕ್ರಮಣವನ್ನು ಎದುರಿಸಲಾರದೆ ಓಡಿ ಹೋಗಿ ಗುಜರಾತಿನಲ್ಲಿ ಆಶ್ರಯವನ್ನು ಪಡೆದನು. ಶಮ್ಸ್‌ಖಾನನು ತಾನು ಒಪ್ಪಿದ್ದ ಷರತ್ತಿನ ಪ್ರಕಾರ ಕೋಟೆಯ ಬತೇರಿಗಳನ್ನು ಕೆಡವಲು ಇಚ್ಛಿಸಿದನು. ಆದರೆ ನಾಗೋರಿನ ಜನತೆ ಈ ವಿಚಾರವನ್ನು ಕೇಳಿ ಬಹಳ ದುಃಖಿತರಾದರು, ಅವರ ಬಾಯಲ್ಲಿ ಈ ಮಾತುಗಳು ಬರಲಾರಂಭಿಸಿದವು. "ಅಯ್ ಅಲ್ಲಾ, ಶಮ್ಸ್‌ಖಾನ ಮಗನ ಜಾಗದಲ್ಲಿ ಫೈರೋಜಖಾನನ ಮನೆಯಲ್ಲಿ ಒಬ್ಬ ಹೆಣ್ಣುಮಗಳು ಹುಟ್ಟಿದ್ದಿದ್ದರೆ ಚೆನ್ನಾಗಿತ್ತು. ಆ ಹೆಣ್ಣುಮಗಳು ತನ್ನ ವಂಶದ, ರಾಜ್ಯದ ಮರ್ಯಾದೆಯನ್ನು ಉಳಿಸಿಕೊಳ್ಳುತ್ತಿದ್ದಳು. ಕೋಟೆಯ ಬತೇರಿಗಳನ್ನು ಕೆಡವಲು ಆಕೆ ಇಷ್ಟಪಡುತ್ತಿರಲಿಲ್ಲ."

ರಾಣಾ ಕಂಭೋನ ಅಸಫಲ ಇಚ್ಛೆ :

ಈ ತೆರನಾದ ಜನರ ಮಾತುಗಳಿಂದ ಶಮ್ಸ್‌ಖಾನನು ತನ್ನನ್ನು ತಾನೇ ತೆಗಳಿಕೊಳ್ಳಲಾರಂಭಿಸಿದ. ಆತನು ಕೋಟೆಯನ್ನು ಕೆಡವಿಸುವ ಬದಲಾಗಿ ಇನ್ನೂ ಬಲಪಡಿಸಿದನು. ರಾಣಾ ಕಂಭೋನ ಹತ್ತಿರಕ್ಕೆ ತನ್ನ ಅಭಿಮತವನ್ನು ಹೀಗೆ ಹೇಳಿಕೊಂಡನು. ತಾವು ನನಗೆ ಅಪಾರ ಸಹಾಯವನ್ನು ಮಾಡಿರುತ್ತೀರಿ. ಇದಕ್ಕೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ಆದರೆ ನನಗೆ ತುಂಬಾ ದುಃಖವಾಗುತ್ತಿರುವ ವಿಷಯವೆಂದರೆ– ನಾನು ನಿಮಗೆ ಕೊಟ್ಟ ವಚನವನ್ನು ನಿಭಾಯಿಸಲು ಸಾಧ್ಯವಾಗುತ್ತಿಲ್ಲ. ಕೋಟೆಯ ಬತೇರಿಗಳನ್ನು ಕೆಡವಿಸುವುದು ನನ್ನ ಶಕ್ತಿಗೆ ಮೀರಿದ ಕೆಲಸವಾಗಿದೆ. ಒಂದು ವೇಳೆ ನಾನೇದರೂ ಆ ಕೆಲಸವನ್ನು ಮಾಡಿದ್ದೇ ಆದರೆ ಜನರು ನನ್ನನ್ನು

ಪ್ರಾಣಸಹಿತ ಉಳಿಸಲಾರರು. ಈಗ ತಿರ್ಮಾನ ನಿಮ್ಮ ಕೈಯಲ್ಲೇ ಇದೆ. ತಾವು ತಮ್ಮ ರಾಜ್ಯಕ್ಕೆ ಹಿಂತಿರುಗಲುಬಹುದು ಅಥವಾ ನನ್ನ ಜೊತೆ ಯುದ್ಧವನ್ನಾದರೂ ಮಾಡಬಹುದು. ಈ ಮಾತನ್ನು ಕೇಳಿದ ರಾಣಾ ಕಂಭೋನು ದುಃಖಿತ ಮನಸ್ಕನಾಗಿ ತನ್ನ ರಾಜಧಾನಿಗೆ ಹಿಂತಿರುಗಿದನು.

ರಾಣಾ ಕಂಭೋನ ನಾಗೋರಿನ ಮೇಲೆ ಆಕ್ರಮಣ :

ಚಿತ್ತೋರಿಗೆ ವಾಪಸ್ಸಾದ ರಾಣಾ ಕಂಭೋ ಒಂದು ವಿಶಾಲ ಸೈನ್ಯವನ್ನು ಕೂಡಿಸಿಕೊಂಡನು. ಚಿತ್ತೂರಿನ ಮೇಲೆ ಆಕ್ರಮಣವನ್ನು ಮಾಡಿದನು. ಶಮ್ಸ್‌ಖಾನನು ತಕ್ಷಣ ತನ್ನ ಸೈನಿಕ ಸರದಾರರಿಗೆ ನಾಗೋರಿನ ರಕ್ಷಣೆಯ ಜವಾಬ್ದಾರಿಯನ್ನು ಹೊರಿಸಿ, ಸಹಾಯಕ್ಕೋಸ್ಕರ ಅಹಮದಾಬಾದಿಗೆ ಓಡಿಬಂದ ಸುಲ್ತಾನ್ ಖಿತುಬುದ್ದೀನನು ಶಮ್ಸ್‌ಖಾನನಿಗೆ ಬಹಳ ಗೌರವಾದರಗಳಿಂದ ಸನ್ಮಾನಿಸಿದನು. ಶಮ್ಸ್‌ಖಾನನ ಮಗಳೊಂದಿಗೆ ಮದುವೆಯೂ ಮಾಡಿಕೊಂಡನು. ಬಾದಶಹನು ಶಮ್ಸ್‌ಖಾನನನ್ನು ತನ್ನ ದರಬಾರಿನಲ್ಲಿಯೇ ಉಳಿಸಿಕೊಂಡು ತನ್ನ ಶ್ರೇಷ್ಠ ಅಮೀರರೆನಿಸಿದ್ದ ರಾಯರಾಮಚಂದ ಮತ್ತು ಮಲಿಕಗದಾರಂತಹ ವೀರರನ್ನು ನಾಗೋರಿನ ರಕ್ಷಣೆಗೆ ಕಳುಹಿಸಿಕೊಟ್ಟನು.

ಖಿತುಬುದ್ದೀನನಿಗೆ ನಾಗೋರಿನ ಆಸೆ :

ಗುಜರಾತಿ ಅಮೀರರು ನಾಗೋರಿಗೆ ತಲುಪಿ ರಾಣಾ ಕಂಭೋನೊಂದಿಗೆ ಯುದ್ಧಮಾಡಿ ಸೋತರು. ಸಾಕಷ್ಟು ನಷ್ಟವಾಯಿತು. ಅಮೀರರು ಮೈದಾನದಿಂದ ಓಡಿ ಹೋದರು. ಈ ಸ್ಥಿತಿಯನ್ನು ಕಂಡ ಖಿತುಬುದ್ದೀನನು ಬಹಳ ಸಿಟ್ಟಿಗೆದ್ದು ಸೈನ್ಯದೊಂದಿಗೆ ನಾಗೋರಿನತ್ತ ಹೊರಟ. ನಾಗೋರ ಕೋಟೆಯನ್ನು ತಲುಪಿ ತನ್ನ ಆಪ್ತ ಅಮಾದುಲ್‌ಮುಲ್ಕನನ್ನು ಶತ್ರುವನ್ನು ಸೋಲಿಸಲು ಸೈನ್ಯದೊಂದಿಗೆ ಕಳುಹಿಸಿಕೊಟ್ಟನು.

ಸರ್‌ವಹಿಗೆ ಪ್ರಯಾಣ :

ಇಮಾದುಲಮುಲ್ಕನು ಸೋತು ಅಪಾರ ನಷ್ಟವನ್ನು ಅನುಭವಿಸಿದನು. ತನ್ನ ಸೈನ್ಯದೊಂದಿಗೆ ತನ್ನ ದೇಶಕ್ಕೆ ಹೊರಟು ಹೋದನು. ಈ ಸೋಲಿನ ನಂತರ ಖಿತುಬುದ್ದೀನನು ತನ್ನ ಪ್ರಯಾಣದ ದಿಕ್ಕನ್ನು ಬದಲಿಸಿ ಚಿತ್ತೋಡಿನ ಮೇಲೆ ಯುದ್ಧವಾಡದೆ ಸರ್‌ವಹಿ ಕೋಟೆಯ ಮೇಲೆ ಆಕ್ರಮಣವನ್ನು ಮಾಡಿದನು. ಸರ್‌ವಹಿಯ ರಾಜನು ರಾಣಾ ಕಂಭೋನ ಹತ್ತಿರದ ಸಂಬಂಧಿಯಾಗಿದ್ದನು. ಖಿತುಬುದ್ದೀನನು ಸರ್‌ವಹಿ ರಾಜಪುತ್ರರೊಂದಿಗೆ ಯುದ್ಧವನ್ನು ಮಾಡಿದನು. ಅವರನ್ನು ಸೋಲಿಸಲು ನಬಲ್‌ಮೇರ್ ಎಂಬ ಜಾಗಕ್ಕೆ ತಲುಪಿದನು. ಬಾದಶಹನು ಆ ಪ್ರದೇಶವನ್ನು

ಸಂಪೂರ್ಣವಾಗಿ ಹಾಳುಗೆಡವಿದನು. ಮತ್ತು ಅನೇಕ ಮುಸ್ಲಿಮೇತರರನ್ನು ಸೆರೆಹಿಡಿದು ಕೋಟೆಯನ್ನು ಮುತ್ತಿದನು.

ಯುದ್ಧ ಮತ್ತು ಸಂಧಿ :

ಇಬ್ಬರೂ ಬಹಳವಾಗಿ ಕಾದಾಡಿದರು. ಪ್ರತಿಸಲವೂ ರಾಜಪುತ್ರ ರಾಣಾನಿಗೆ ಸೋಲಾಯಿತು. ರಾಣಾನ ಸೈನ್ಯದ ಅಪಾರ ಸೈನಿಕರು ಸತ್ತರು. ಅಂತ್ಯದಲ್ಲಿ ರಾಣಾನು ಕೋಟೆಯಿಂದ ಹೊರಬಂದು ಶತ್ರುವನ್ನು ಸೋಲಿಸಲು ಪ್ರಯತ್ನಿಸಿದನು. ಆದರೆ ತಾನೇ ಸೋತು ಕೋಟೆಯ ಒಳಹೊಕ್ಕನು. ತಾನು ಈಗ ಯಾವುದೇ ಪ್ರಯತ್ನದಿಂದಲೂ ಖುತುಬುದ್ದೀನನನ್ನು ಗೆಲ್ಲಲಾಗುವುದಿಲ್ಲವೆಂಬ ತಿರ್ಮಾನಕ್ಕೆ ಬಂದು ಸಂಧಿ ಮಾಡಿಕೊಳ್ಳಲು ಬಾದಶಹನ ಹತ್ತಿರ ದೂತರನ್ನು ಕಳುಹಿಸಿದನು. ಬಾದಶಹನು ಒಪ್ಪಿದನು. ರಾಣಾನಿಂದ ಅಪಾರ ಸಂಪತ್ತನ್ನು ಪಡೆದು ಅಹಮದಾಬಾದಿಗೆ ಮರಳಿದನು.

ಮಹಮೂದ್‌ಖಿಲ್ಜಿಯ ರಾಜದೂತ ಗುಜರಾತಿನಲ್ಲಿ :

ಅದೇ ದಿನಗಳಲ್ಲಿ ಮಹಮೂದ್ ಖಿಲ್ಜಿಯ ರಾಜದೂತನಾದ ತಾಜ್‌ಖಾನ ಎಂಬುವವನು ಗುಜರಾತಿಗೆ ಬಂದನು. ಖಿಲ್ಜಿಯ ಸಂದೇಶವೇನೆಂದರೆ–ಹಿಂದಿನ ದಿನಗಳಲ್ಲಿ ನಮ್ಮಲ್ಲಿ ನಡೆದಿರುವ ಕಹಿ ಘಟನೆಗಳನ್ನು ಈಗ ಮರೆತು ನಾವಿಬ್ಬರೂ ಸ್ನೇಹಿತರಾಗಿ ರಾಣಾನನ್ನು ಸೋಲಿಸಲೇಬೇಕಾಗಿದೆ. ಈ ಉದ್ದೇಶವನ್ನು ಹೇಗೆ ಸಫಲಗೊಳಿಸಬೇಕೆಂದರೆ ತಮ್ಮ ಸೈನ್ಯವು ಗುಜರಾತಿಗೆ ಸೇರಿದ ಪ್ರದೇಶಗಳ ಮೇಲೆ ವಿಜಯವನ್ನು ಪಡೆಯಬೇಕು. ನನ್ನ ಸೈನ್ಯವು ಮೇವಾಡ ಮತ್ತು ಅಹೇಡ್‌ವಾಡಗಳನ್ನು ಗೆಲ್ಲಬೇಕು. ಈ ಮಧ್ಯೆ ಯಾರಿಗಾದರೂ ಸಹಾಯ ಬೇಕಿದ್ದರೆ ಒಬ್ಬರಿಗೊಬ್ಬರು ಸಹಾಯವನ್ನು ತಕ್ಷಣ ನೀಡಬೇಕು. ಎಂಬ ಸಂದೇಶವನ್ನು ಹೊತ್ತು ಬಂದಿದ್ದನು. ಈ ವಿಚಾರಗಳ ವಿಮರ್ಶೆ, ಚರ್ಚೆಗಳನ್ನು ನಡೆಸಿ, ಒಂದು ತೀರ್ಮಾನಕ್ಕೆ ಬರಲು ಎರಡು ಕಡೆ ಬುದ್ಧಿವಂತರು, ಯುದ್ಧ ಚತುರರೂ ಸೇರಿ ಸಲಹೆಗಳಿಗೆ ಒಪ್ಪಿಗೆಯನ್ನು ಸೂಚಿಸಿದರು.

ಚಿತ್ತೋಡಿನ ಮೇಲೆ ಸೈನಿಕ ಕಾರ್ಯಾಚರಣೆ :

ಸುಲ್ತಾನ್ ಖುತುಬುದ್ದೀನನು ಹಿಜರಿ ೮೬೧ರಲ್ಲಿ ಒಂದು ವಿಶಾಲ ಸೈನ್ಯವನ್ನು ಸಿದ್ಧಪಡಿಸಿಕೊಂಡು ರಾಣಾನ ಕೋಟೆಯತ್ತ ನಡೆದನು. ದಾರಿಯಲ್ಲಿ ಸಿಕ್ಕ ದೇಬ್ ಕೋಟೆಯನ್ನು ಗೆದ್ದು ತನ್ನ ಒಬ್ಬ ಯೋಗ್ಯ ಅಮೀರನ ಸುಪರ್ದಿಗೆ ವಹಿಸಿದನು. ತಾನು ಮುಂದುವರಿಯುವುದರೊಳಗೆ ಮತ್ತೊಂದು ಕಡೆಯಿಂದ ಮಹಮೂದ್ ಖಿಲ್ಜಿಯ ಸೈನ್ಯವು ಆಕ್ರಮಿಸಿತು. ರಾಣಾನು ಮೊದಲು ಮಹಮೂದ್ ಖಿಲ್ಜಿಯೊಂದಿಗೆ ಯುದ್ಧವನ್ನು ಮಾಡಲು ಸನ್ನದ್ಧನಾದನು. ಆದರೆ ಖುತುಬುದ್ದೀನನ ಸೈನ್ಯವು

ಸರ್‌ವಹಿಯ ಕಡೆಯಿಂದ ಕಂಪಾಯತನತ್ತ ಬರುತ್ತಿದ್ದಾನೆಂಬ ಸುದ್ದಿಯನ್ನು ತಿಳಿದ ಕೂಡಲೇ ಖಿಲ್ಜಿಯೊಂದಿಗೆ ಯುದ್ಧವನ್ನು ಮಾಡದೇ ಗುಜರಾತಿಯವರೊಡನೆ ಯುದ್ಧಕ್ಕೆ ಹೊರಟನು. ಇಬ್ಬರಲ್ಲೂ ಘೋರ ಯುದ್ಧವು ನಡೆಯಿತು. ಯುದ್ಧದಲ್ಲಿ ರಾಣಾನು ಸೋತು ತನ್ನ ರಾಜ್ಯದಲ್ಲೇ ಇದ್ದ ಹಾಗೂ ಚಿತ್ತೋಡ ಕೋಟೆಗೆ ಸಮೀಪದಲ್ಲೇ ಇದ್ದ ಒಂದು ಗುಪ್ತಜಾಗಕ್ಕೆ ಹೋಗಿ ಅಡಗಿಕೊಂಡನು.

ರಾಣಾನ ಸೋಲು :

ಸುಲ್ತಾನ್ ಖುತುಬುದ್ದೀನನು ರಾಣಾನನ್ನು ಬಿಡದಂತೆ ಹಿಂಬಾಲಿಸಿದನು. ಅವನು ಅಡಗಿ ಕುಳಿತಿದ್ದ ಜಾಗಕ್ಕೂ ತನ್ನ ಸೈನ್ಯದೊಂದಿಗೆ ತಲುಪಿದನು. ಇಲ್ಲಿಯೂ ಇಬ್ಬರಲ್ಲಿ ಘೋರ ಯುದ್ಧವೇ ನಡೆಯಿತು. ಸಾಯಂಕಾಲದವರೆಗೂ ಇಬ್ಬರೂ ಹೋರಾಡುತ್ತಲೇ ಇದ್ದರು. ಸೋಲು ಗೆಲುವಿನ ಯಾವುದೇ ಪರಿಣಾಮವಾಗದೇ ಇಬ್ಬರೂ ತಮ್ಮ ತಮ್ಮ ಬಿಡಾರಗಳಿಗೆ ವಾಪಸ್ಸಾದರು. ಮೂರನೇ ದಿನ ಇಬ್ಬರಲ್ಲೂ ಪುನಃ ಯುದ್ಧವು ಪ್ರಾರಂಭವಾಯಿತು. ಸುಲ್ತಾನ್ ಖುತುಬುದ್ದೀನನು ಬಹಳ ವೀರಾವೇಶದಿಂದ ನುಗ್ಗಿ ಶತ್ರುಗಳನ್ನು ಸಂಹಾರ ಮಾಡಿದನು. ಇವನ ಶೌರ್ಯವನ್ನು ಶತ್ರುಗಳು ಕೊಂಡಾಡತೊಡಗಿದರು. ಈ ಯುದ್ಧದಲ್ಲೂ ರಾಣಾನಿಗೆ ಸೋಲುಂಟಾಯಿತು. ಯುದ್ಧ ಮೈದಾನದಿಂದ ಪ್ರಾಣವನ್ನುಳಿಸಿಕೊಂಡು ಬೆಟ್ಟಗುಡ್ಡಗಳಲ್ಲಿ ಹೋಗಿ ಅವಿತನು.

ಸಂಧಿ :

ವಿವಶನಾದ ಚಿತ್ತೋರಿನ ರಾಣಾನು ತನ್ನ ದೂತನೊಬ್ಬನನ್ನು ಖುತುಬುದ್ದೀನನ ಹತ್ತಿರಕ್ಕೆ ಸಂಧಿ ಮಾಡಿಕೊಳ್ಳುವ ಉದ್ದೇಶದಿಂದ ಕಳುಹಿಸಿಕೊಟ್ಟನು. ಇದಕ್ಕೆ ಬಾದಶಹನು ಒಪ್ಪಿಗೆಯನ್ನು ಕೊಟ್ಟನು. ಅದರ ಪ್ರಕಾರ ರಾಣಾನು ಹದಿನಾಲ್ಕು ಮಣ ಚಿನ್ನ, ಎರಡು ದೊಡ್ಡ ದೊಡ್ಡ ಆನೆಗಳಲ್ಲದೇ ಇನ್ನಿತರೆ ಬೆಲೆಬಾಳುವ ವಸ್ತುಗಳನ್ನು ಬಹುಮಾನವಾಗಿ ಕೊಡಲು ಒಪ್ಪಿ ಸಂಧಿ ಮಾಡಿಕೊಂಡನು. ಇದಕ್ಕೆ ಬದಲಾಗಿ ಖುತುಬುದ್ದೀನನು ಮುಂದೆಂದೂ ಚಿತ್ತೋರಿನ ಮೇಲೆ ಆಕ್ರಮಣವನ್ನು ಮಾಡುವುದಿಲ್ಲವೆಂದೂ ಕರಾರನ್ನು ಮಾಡಿಕೊಂಡನು.

ಮಹಮೂದ್‌ಖಿಲ್ಜಿ ಮತ್ತು ಖುತುಬುದ್ದೀನನ ಸಂಬಂಧಗಳು :

ಸುಲ್ತಾನ್ ಮಹಮೂದ್ ಖಿಲ್ಜಿ ಸಹ ರಾಣನ ಪ್ರದೇಶಗಳಲ್ಲಿ ನುಗ್ಗಿದ್ದನು. ಈ ಪ್ರದೇಶಗಳಲ್ಲಿ ಬಂದಿರುವ ಸಮಾಚಾರದಿಂದ ಖುತುಬುದ್ದೀನನಿಗೆ ಬೇಸರವುಂಟಾಯಿತು. ಈ ಕಾರಣದಿಂದಾಗಿ ಖುತುಬುದ್ದೀನನು ತನ್ನ ರಾಜಧಾನಿಗೆ ಬಂದು ಬಿಟ್ಟನು. ಮುಂದಿನ ದಿನಗಳಲ್ಲಿ ಇವರಿಬ್ಬರ ಸಂಬಂಧಗಳು ಹೇಗೆ ನಡೆದುವು ಮತ್ತು ಪರಿಸ್ಥಿತಿಗಳು ಹೇಗೆ ಬದಲಿಸಿದುವು ಎಂಬುದನ್ನು ಸುಲ್ತಾನ್ ಮಹಮೂದ್‌ಖಿಲ್ಜಿಯ ವಿಷಯಗಳಲ್ಲಿ ತಿಳಿದು ಬರುತ್ತದೆ.

ರಾಣಾನ ನಾಗೋರಿನ ಆಕ್ರಮಣ :

ಹಿಜರಿ ಶಕೆ ೮೮೨ರಲ್ಲಿ ರಾಣಾನು ಸಂಧಿಯ ಮಾತನ್ನು ಮೀರಿದನು. ೫೦ ಸಾವಿರ ಸೈನ್ಯದೊಂದಿಗೆ ನಾಗೋರಿನ ಮೇಲೆ ಆಕ್ರಮಣವನ್ನು ಮಾಡಿಯೇ ಬಿಟ್ಟನು. ಕೋಟೆಯ ಶಾಸಕನು ತಕ್ಷಣ ಒಂದು ಪತ್ರವನ್ನು ಬರೆದು ಸುಲ್ತಾನ್ ಖುತುಬುದ್ದೀನನಿಗೆ ಎಲ್ಲ ಸಮಾಚಾರವನ್ನು ತಿಳಿಸಿದನು. ಪತ್ರವನ್ನು ತಂದಾಗ ಸುಲ್ತಾನನು ಒಂದು ಸಮಾರಂಭದಲ್ಲಿ ಪಾನಮತ್ತನಾಗಿದ್ದನು. ಈ ಸಂದರ್ಭದಲ್ಲಿ ಪತ್ರವನ್ನು ಸುಲ್ತಾನ್‌ನಿಗೆ ಕೊಡಬಾರದೆಂದು ತೀರ್ಮಾನಿಸಿದ ದೂತನು ಅಮಾದುಲ್‌ಮುಲ್ಕನ ಹತ್ತಿರ ಹೋದನು. ಅಮಾದುಲ್‌ಮುಲ್ಕನು ಬಹಳ ಬುದ್ಧಿವಂತನು ಯೋಗ್ಯ ವ್ಯಕ್ತಿಯಾಗಿದ್ದನು. ಆತನು ಪತ್ರವನ್ನು ಓದಿದ ತಕ್ಷಣ ಬಾದಶಹನ ಹತ್ತಿರಕ್ಕೆ ಬಂದಾಗಲೂ ಆತನು ಇನ್ನೂ ಪಾನಮತ್ತ ಸ್ಥಿತಿಯಲ್ಲಿಯೇ ಇದ್ದನು. ಅಮಾದುಲ್‌ಮುಲ್ಕನು ತಡಮಾಡದೆ ಬಾದಶಹನನ್ನು ಅರಮನೆಯಿಂದ ಹೊರಕ್ಕೆ ಕರೆದುಕೊಂಡು ಬಂದನು.

ರಾಣಾನು ಓಡಿ ಹೋದನು :

ಮಾರನೇ ದಿನ ಬಾದಶಹನು ಪ್ರಯಾಣವನ್ನು ನಾಗೋರಿನತ್ತ ಸಾಗಿಸಿದನು. ಇನ್ನೂ ಹೆಚ್ಚಿನ ಸೈನ್ಯವನ್ನು ಸಂಗ್ರಹಿಸಲು ಪ್ರಯತ್ನಿಸಿದನು. ನಾಗೋರಿನತ್ತ ಸ್ವಲ್ಪ ದೂರದಲ್ಲಿಯೇ ಕುತುಬುದ್ದೀನನ ಬಿಡಾರ ಹಾಕಿ ಒಂದು ತಿಂಗಳ ತನಕ ಅಲ್ಲಿಯೇ ನಿಂತನು. ಬಾದಶಹನು ನಾಗೋರಿಗೆ ಯುದ್ಧಕ್ಕೆ ಬರುತ್ತಿದ್ದಾನೆಂಬ ಸುದ್ದಿ ರಾಣಾನಿಗೆ ತಿಳಿಯಿತು. ಈ ಸಮಾಚಾರದಿಂದ ಬೆದರಿದ ರಾಣಾನು ತನ್ನ ಸೈನ್ಯದೊಂದಿಗೆ ತನ್ನ ರಾಜಧಾನಿಯತ್ತ ಓಡಿದನು. ಆತನು ಪರಾರಿಯಾದ ಸುದ್ದಿಯನ್ನು ಕೇಳಿ ಖುತುಬುದ್ದೀನನು ಪುನಃ ತನ್ನ ರಾಜಧಾನಿಯತ್ತ ಪ್ರಯಾಣವನ್ನು ಬೆಳೆಸಿ ಸುಖಲೋಲುಪನಾಗಿ ಕಾಲ ಕಳೆಯಲಾರಂಭಿಸಿದನು.

ಸರ್ ವಹಿ ಕೋಟೆಯ ಮೇಲೆ ಸೈನಿಕ ಕಾರ್ಯಾಚರಣೆ :

ಅದೇ ವರ್ಷ ಸುಲ್ತಾನ್ ಖುತುಬುದ್ದೀನನು ಸರ್‌ವಹಿ ಕೋಟೆಯ ಮೇಲೆ ಆಕ್ರಮಣವನ್ನು ನಡೆಸಿದನು. ಆ ದೇಶದ ರಾಜನು ಚಿತ್ತೂರಿನ ರಾಣಾನ ಸಂಬಂಧಿಯಾಗಿದ್ದನು. ಆತನು ಅಲ್ಲಿಂದ ಪರಾರಿಯಾಗಿ ಹೀಸ್ತಾನ್ ಕಂಪಲಿನಲ್ಲಿ ಆಶ್ರಯವನ್ನು ಪಡೆದನು. ಗುಜರಾತಿಗಳು ಆ ಪ್ರದೇಶವನ್ನು ಚೆನ್ನಾಗಿ ಲೂಟಿ ಮಾಡಿ ಹಿಂತಿರುಗಿದರು.

ರಾಣಾನನ್ನು ಹಿಂಬಾಲಿಸಿದನು :

ಅದೇ ದಿನಗಳಲ್ಲಿ ಸುಲ್ತಾನ್ ಮಹಮೂದ್ ಖಿಲ್ಜಿಯು ಸಹ ಚಿತ್ತೋಡ್ ಕೋಟೆಯ ಮೇಲೆ ಆಕ್ರಮಣವನ್ನು ಮಾಡಿದನು. ಈ ಸಂದರ್ಭದ ಲಾಭವನ್ನು ಪಡೆಯಲು

ಹವಣಿಸುತ್ತಿದ್ದ ಖುತುಬುದ್ದೀನನು ಸಹ ರಾಣಾನನ್ನು ಹಿಂಬಾಲಿಸಿ ಅತ್ತಿತ್ತ ಓಡಾಡಿಸುತ್ತಿದ್ದ. ಇದರಿಂದಾಗಿ ರಾಣಾನು ಕಂಪಲ್ ಕೋಟೆಯಲ್ಲಿ ಅಡಗಿಕೊಂಡನು. ಬಾದಶಹನು ಆ ಕೋಟೆಯನ್ನು ಮುತ್ತಿದನು. ಮುತ್ತಿಗೆಯಿಂದ ಯಾವುದೇ ಲಾಭವಿಲ್ಲವೆಂದು ಅರಿತು ಮುತ್ತಿಗೆಯನ್ನು ತೆರವುಗೊಳಿಸಿಕೊಂಡು ಅಲ್ಲಿಂದ ಕೆಲವು ಪ್ರದೇಶಗಳಲ್ಲಿ ಲೂಟಿಮಾಡುತ್ತಾ ಬಹಳಷ್ಟು ಸಂಪತ್ತನ್ನು ಸಂಗ್ರಹಿಸಿಕೊಂಡು ತನ್ನ ರಾಜಧಾನಿಯತ್ತ ಪ್ರಯಾಣವನ್ನು ಬೆಳೆಸಿದನು.

ಹಜ್ರತ್ ಸಯ್ಯದ್‌ಕುತುಬಆಲಂ ಸೂಫಿಯವರ ದರ್ಗಾದಲ್ಲಿ :

ಕೆಲವು ತಿಂಗಳು ಕಳೆದ ನಂತರ ಸುಲ್ತಾನ್ ಖುತುಬುದ್ದೀನನು ಹಜ್ರತ್ ಸಯ್ಯದ್ ಖುತ್ಬೆ ಆಲಂರವರ ಹತ್ತಿರ ಹೋದನು. ಆ ಸಂದರ್ಭದಲ್ಲಿ ಬಾದಶಹನ ಮನಸ್ಸಿನಲ್ಲಿ ಒಂದು ಯೋಚನೆಯು ಹೊಳೆಯಿತು. ಅಲ್ಲಾನ ಕೃಪೆಯಿಂದ ಈ ಸೂಫಿ ಸಂತರ ಪ್ರಾರ್ಥನೆಯಿಂದ ನನಗೊಬ್ಬ ಮಗನನ್ನು ಕರುಣಿಸಲಿ ಎಂದು ಅಂದುಕೊಂಡನು. ಸಂತರು ತಮ್ಮ ದಿವ್ಯ ಜ್ಞಾನದಿಂದ ಈತನ ಮನದಾಳವನ್ನು ಅರ್ಥ ಮಾಡಿಕೊಂಡು ಹೀಗೆಂದನು. ನಿಮ್ಮ ಕಿರಿಯ ತಮ್ಮನು ನಿಮ್ಮ ಮಗನಂತೆಯೇ ಇದ್ದಾನೆ. ಆ ವ್ಯಕ್ತಿಯೇ ನಿಮ್ಮ ವಂಶದ ಕೀರ್ತಿಯನ್ನು ಬೆಳಗಲಿದ್ದಾನೆ. ನೀನು ಮಾತ್ರ ನಿನಗೆ ಯಾರು ಇಲ್ಲವೆಂದು ಚಿಂತಿಸಬೇಡ. ಈ ಮಾತುಗಳನ್ನು ಕೇಳಿದ ಖುತುಬುದ್ದೀನನು ನಿರಾಶನಾಗಿ ಅಲ್ಲಿಂದ ಹೊರಟು ಬಿಟ್ಟನು.

ಕುತುಬುದ್ದೀನನ ಮರಣ :

ಇದೇ ದಿನಗಳಲ್ಲಿ ಬಾದಶಹನು ಕಾಯಿಲೆ ಬಿದ್ದನು. ಕಾಯಿಲೆಯು ಬೇಗ ಗುಣವಾಗಲಿಲ್ಲ. ಬಹಳ ಔಷಧೋಪಚಾರಗಳು ನಡೆದುವು. ಕೊನೆಗೆ ಅವನ ಅಂತ್ಯ ಕಾಲವು ಸಮೀಪಿಸಿತು. ಖುತುಬುದ್ದೀನನು ಹಿಜರಿ ೮೬೩ರಲ್ಲಿ ರಜಬ್ ತಿಂಗಳ ಮೂರನೇ ದಿನಾಂಕದಂದು ಇಹಲೋಕವನ್ನು ತ್ಯಜಿಸಿದ. ಆತನನ್ನು ಸುಲ್ತಾನ್ ಮಹಮೂದ್‌ನ ಗೋರಿಯ ಪಕ್ಕದಲ್ಲೇ ಸಮಾಧಿಯನ್ನು ಮಾಡಲಾಯಿತು. ಮರಣಾನಂತರ ಆ ಶಾಸಕನನ್ನು "ಸುಲ್ತಾನ್ ಘಾಜಿ"ಯ ಬಿರುದಿನೊಂದಿಗೆ ಸ್ಮರಿಸುತ್ತಾರೆ.

ಶಮ್ಸ್‌ಖಾನನ ಕೊಲೆ :

ಫೈರೋಜಖಾನನ ಮಗ ಶಮ್ಸ್‌ಖಾನನು ತನ್ನ ಮಗಳನ್ನು ಖುತುಬುದ್ದೀನನಿಗೆ ಕೊಟ್ಟು ಮದುವೆ ಮಾಡಿದಾಗಿನಿಂದ ಅಹಮದಾಬಾದಿನಲ್ಲೇ ಉಳಿದುಕೊಂಡಿದ್ದನು. ಈತನ ಮೇಲೆ ಒಂದು ಅಪವಾದವನ್ನು ಹೊರಿಸಿದ್ದೇನೆಂದರೆ–ಮಾವನೇ ಅಳಿಯನಿಗೆ ವಿಷವನ್ನು ಕೊಟ್ಟು ಸಾಯಿಸಿದ್ದಾನೆಂದು. ಎಲ್ಲ ಅಮೀರರು, ಮಂತ್ರಿಗಳು ಒಟ್ಟಿಗೆ ಸೇರಿ ಈ ಅಪರಾಧಕ್ಕೆ ಆತನನ್ನು ಮರಣದಂಡನೆಗೆ ಗುರಿಪಡಿಸಿ, ಆತನನ್ನು ಕೊಲ್ಲಿಸಿದರು.

ಶಮ್ಸ್‌ಖಾನನ ಮಗಳನ್ನು ಕೊಲ್ಲಿಸಿದರು :

ಸುಲ್ತಾನ್ ಖುತುಬುದ್ದೀನನು ಶಮ್ಸ್‌ಖಾನನ ಮಗಳನ್ನು ಮದುವೆಯಾಗಿದ್ದನೆಂಬ ವಿಚಾರ ನಾವು ಹಿಂದಿನ ಪುಟಗಳಲ್ಲಿ ತಿಳಿದಿದ್ದೇವೆ. ಅರಮನೆಯಲ್ಲಿ ಗಂಡ ಸತ್ತ ನಂತರ ಆಕೆಯ ಮೇಲೆ ಅನೇಕ ಹಿಂಸಾಚಾರಗಳು ನಡೆಯಲಾರಂಭಿಸಿದವು. ಬಾದಶಹನ ತಾಯಿಯು ಈ ಸೊಸೆಗೆ ಕೊಡಬಾರದ ಹಿಂಸೆಗಳನ್ನು ಕೊಟ್ಟಳು. ಕೊನೆಗೆ ಅರಮನೆಯ ನೌಕರಾನಿಗಳಿಂದ ಈಕೆಯನ್ನು ತುಂಡು ತುಂಡು ಮಾಡಿ ಕೊಲ್ಲಿಸಿದರು.

ಸುಲ್ತಾನ್ ಕುತುಬುದ್ದೀನನ ವ್ಯಕ್ತಿತ್ವ ಮತ್ತು ಚಾರಿತ್ರ್ಯ :

ಲೇಖಕರ ಅಭಿಪ್ರಾಯದಲ್ಲಿ ಸುಲ್ತಾನ್ ಕುತುಬುದ್ದೀನನು ಮಹಾ ಕೋಪಿಷ್ಠನಾಗಿದ್ದನು. ಸಣ್ಣ ಸಣ್ಣ ವಿಚಾರಕ್ಕೂ ಬೆಂಕಿಯನ್ನು ಉಗುಳುತ್ತಿದ್ದನು. ಆತನ ಮದ್ಯಪಾನದ ದುಶ್ಚಟಗಳೇ ಆತನ ಶಾರೀರಿಕ ದೌರ್ಬಲ್ಯಕ್ಕೆ ಮೂಲ ಕಾರಣಗಳಾಗಿದ್ದುವು. ಸುಖಲೋಲುಪನಾಗಿದ್ದುದರಿಂದ ಅನೇಕ ಅತ್ಯಾಚಾರಗಳಿಗೂ ತುತ್ತಾಗುತ್ತಿದ್ದನು. ಕರುಣೆ-ದಯೆಯಂತಹ ಗುಣಗಳು ಅವನಲ್ಲಿ ಕಂಡುಬರುತ್ತಲೇ ಇರಲಿಲ್ಲ. ಸಣ್ಣ-ಪುಟ್ಟ ಅಪರಾಧಗಳಿಗೂ ಕ್ರೋಧಿತನಾಗಿ ಅಪರಾಧಿಗಳನ್ನು ಕೊಂದುಬಿಡುತ್ತಿದ್ದ. ಆತನು ಏಳುವರ್ಷ ಏಳು ತಿಂಗಳುಗಳ ತನಕ ಶಾಸನವನ್ನು ಮಾಡಿದನು. ಈ ಸಮಯದಲ್ಲಿ ಹೆಚ್ಚಾಗಿ ಮದ್ಯಪಾನದಲ್ಲಿಯೇ ಕಳೆಯುತ್ತಿದ್ದನು. ಇದರಿಂದಲೇ ಈತನು ತನ್ನ ಅಂತ್ಯವನ್ನು ತಂದುಕೊಂಡನು.

■

*

೬. ಸುಲ್ತಾನ್ ದಾವೂದ್‌ಶಾಹ್ ಬಿನ್ ಅಹಮ್ಮದಶಾಹ ಗುಜರಾತಿ

ದುಷ್ಟ ವ್ಯಕ್ತಿತ್ವ ಮತ್ತು ಕೆಟ್ಟ ನಡತೆ :

ಸುಲ್ತಾನ್ ಖುತುಬುದ್ದೀನನ ಮರಣಾನಂತರ ಇಮಾದುಲ್ ಮುಲ್ಕ ಮತ್ತು ಇತರೆ ಅಮೀರರುಗಳು ಸಾಕಷ್ಟು ಚರ್ಚಿಸಿ ಮರಣ ಹೊಂದಿದ ಬಾದಶಹನ ಚಿಕ್ಕಪ್ಪನಾದ ದಾವೂದ್‌ಶಾಹ ಬಿನ್ ಅಹಮ್ಮದಶಾಹ ಗುಜರಾತಿ ಎಂಬುವವನನ್ನು ಪಟ್ಟಕ್ಕೇರಿಸಿದರು. ಆತನು ಸಿಂಹಾಸನಕ್ಕೇರಿದ ತಕ್ಷಣ ಕೆಟ್ಟ ನಡೆ, ದುಷ್ಟ ಆಚರಣೆಗಳನ್ನೇ ಹೆಚ್ಚು ಮಾಡಿದನು. ಇಮಾದುಲ್ ಮುಲ್ಕನಂತಹ ಬುದ್ಧಿವಂತ ಮಂತ್ರಿಯನ್ನು ದೂರಮಾಡಿ ಕೆಟ್ಟ ಕೆಲಸಗಳಿಗೆ ಸಹಾಯ ಮಾಡುವಂತಹ ಒಬ್ಬ ದುಷ್ಟ ವ್ಯಕ್ತಿಯನ್ನು ತನ್ನ ಹತ್ತಿರದ ಸಲಹೆಗಾರನನ್ನಾಗಿ ನೇಮಿಸಿಕೊಂಡನು. ಈತನ ಯಾವುದೇ ಶಾಸನಗಳು ಯಾರಿಗೂ ಮಾನ್ಯವಾಗುತ್ತಿರಲಿಲ್ಲ.

ಪದಚ್ಯುತಿ :

ಈ ಪರಿಸ್ಥಿತಿಯನ್ನು ಕಂಡ ಇಮಾದುಲ್ ಮುಲ್ಕನಂತಹ ಇತರೆ ಮಂತ್ರಿಗಳು, ಅಮೀರರುಗಳು ಈತನನ್ನು ಸಿಂಹಾಸನದಿಂದ ಕೆಳಗಿಳಿಸಿದರು. ಆ ಜಾಗದಲ್ಲಿ ಸುಲ್ತಾನ್ ಖುತುಬುದ್ದೀನನ ಕಿರಿಯ ತಮ್ಮನೂ ರಾಜಕುಮಾರನು ಆಗಿದ್ದ ಮಹಮೂದ್‌ನನ್ನು ಪಟ್ಟಕ್ಕೆ ಕುಳ್ಳಿರಿಸಿದರು. ಆತನ ವಯಸ್ಸು ಆಗ ಕೇವಲ ಹದಿನಾಲ್ಕು ವರ್ಷಗಳು ತುಂಬಿದ್ದುವು. ಪಟ್ಟಾಭಿಷೇಕದಂದು ಅಪಾರ ಜನಸಂಖ್ಯೆಗೆ ಬಹುಮಾನಗಳನ್ನು ನೀಡಿ ಸಂತೃಪ್ತಿಯನ್ನು ಪಡಿಸಿದ್ದರು. ಸೈನಿಕರಿಗೆ ಅರಬ್ಬಿ, ತುರ್ಕಿ ಕುದುರೆಗಳನ್ನು ಹಂಚಲಾಯಿತು. ಅನೇಕರಿಗೆ ಬಿರುದುಗಳನ್ನು, ಜರಿವಸ್ತ್ರಗಳನ್ನು ಹಂಚಲಾಯಿತು. ಕತ್ತಿಗಳನ್ನು, ಸೊಂಟಪಟ್ಟಿಗಳನ್ನು ಕೊಟ್ಟರು. ವಿದ್ಯಾವಂತರಿಗೆ ಸಜ್ಜನರಿಗೆ ಒಂದೊಂದು ಕೋಟಿ ಚಿನ್ನದ "ತಿನಗೆ"ಗಳನ್ನು ಕೊಡಲಾಯಿತು.

■

*

೭. ಸುಲ್ತಾನ್ ಮಹಮ್ಮದಶಾಹ್ ಗುಜರಾತಿ ಅಲ್-ಮಶ್‌ಹೂಬ ಸುಲ್ತಾನ್ ಮಹಮೂದ್ ಬೇಗ್ರ

ಇಮಾದುಲ್ ಮುಲ್ಕನ ಅಧಿಕಾರ :

ಇತಿಹಾಸಕಾರರ ಅಭಿಪ್ರಾಯದಂತೆ ಸುಲ್ತಾನ್ ಮಹಮೂದನ ಪಟ್ಟಾಭಿಷೇಕದ ನಂತರ ಸಾಮ್ರಾಜ್ಯದ ಎಲ್ಲ ಅಧಿಕಾರಗಳು ಇಮಾದುಲ್ ಮುಲ್ಕನಿಗೆ ವಹಿಸಲಾದವು. ಇದರಿಂದಾಗಿ ಆಡಳಿತದಲ್ಲಿ ಒಂದು ಹೊಸ ಉತ್ಸಾಹ ಹುಟ್ಟಿತು. ರಾಜ್ಯದ ಎಲ್ಲ ಸಾಮಂತರಲ್ಲೂ ಒಂದು ರೀತಿಯ ಸಂತೋಷವೇ ಪ್ರಕಟವಾಯಿತು. ಯಾವ ಅಡ್ಡಿ ಆತಂಕಗಳು ಇಲ್ಲದೆ ಮಹಮೂದ್‌ಶಾಹನನ್ನು ತಮ್ಮ ಬಾದಶಹನೆಂದು ಸ್ವೀಕರಿಸಿದ್ದರು.

ಇಮಾದುಲ್ ಮುಲ್ಕನ ವಿರೋಧ :

ಎಷ್ಟೇ ಒಳ್ಳೆಯವರೆನಿಸಿಕೊಂಡವರಿಗೂ ಶತ್ರುಗಳಿದ್ದೇ ಇರುತ್ತಾರೆಂಬುದಕ್ಕೆ ಕೆಲ ಸಾಮಂತ ಜಾಗೀರುದಾರರಾದ ಅಸ್ದಲ್‌ಮುಲ್ಕ, ಸಫೀವುಲ್‌ಮುಲ್ಕ ಮತ್ತು ಹಿಸಾಮುಲ್‌ಮುಲ್ಕರಂತಹ ಅಮೀರರು ಗುಜರಾತಿನ ಉತ್ತಮ ಜಾಗೀರಿಗಳಲ್ಲಿ ಆಡಳಿತವನ್ನು ನಡೆಸುತ್ತಿದ್ದವರು, ಇಮಾದುಲ್ ಮುಲ್ಕ್‌ನ ಆಡಳಿತದ ವಿರೋಧಿಗಳಾಗಿದ್ದರು. ಆತನನ್ನು ಅವರು ಏನಾದರೂ ಮಾಡಿ ನಾಶಪಡಿಸಬೇಕೆಂಬ ಹುನ್ನಾರವನ್ನು ಯೋಚಿಸುತ್ತಿದ್ದರು. ಈ ಅಮೀರರೆಲ್ಲರೂ ಮಹಮೂದ್‌ಶಾಹನ ಪಟ್ಟಾಭಿಷೇಕದ ನಂತರದ ಕೆಲವು ತಿಂಗಳುಗಳಲ್ಲಿ ಒಂದು ಕಡೆ ಸೇರಿದರು. ಒಂದು ವೇಳೆ ಬಾದಶಹರು ಇಮಾದುಲಮುಲ್ಕನನ್ನು ಅಧಿಕಾರದಿಂದ ಕೆಳಗಿಳಿಸದಿದ್ದರೆ ನಾವೆಲ್ಲರೂ ಸೇರಿ ಬಾದಶಹರನ್ನೇ ಕೆಳಗಿಳಿಸಿ ಅವರ ತಮ್ಮನಾದ ಹುಸ್ನಖಾನನನ್ನು ಬಾದಶಹರೆಂದು ಘೋಷಿಸಿ ಪಟ್ಟಕ್ಕೇರಿಸಬೇಕೆಂದು ತೀರ್ಮಾನಿಸಕೊಂಡರು.

ವಿರೋಧಿ ಅಮೀರರು ಬಾದಶಹರಲ್ಲಿ ದೂರು :

ಲೇಖಕ ನಿಜಾಮಮುದ್ದೀನ ಹುಸ್ನನ ಅಭಿಪ್ರಾಯದಲ್ಲಿ ವಿರೋಧಿ ಅಮೀರರೆಲ್ಲರೂ

ಬಾದಶಹರ ಹತ್ತಿರ ಹೋಗಿ ನಿವೇದಿಸಿಕೊಂಡಿದ್ದೇನೆಂದರೆ-ಹುಜೂರರೆ-ನಮಗೆ ತಿಳಿದಿರುವಂತೆ ಇಮಾದುಲ್‌ಮುಲ್ಕನು ತನ್ನ ಮಗ ಷಹಾಬುದ್ದೀನನನ್ನು ತಮ್ಮ ಜಾಗದಲ್ಲಿ ಬಾದಶಹನನ್ನಾಗಿ ಮಾಡಲು ಯೋಚಿಸುತ್ತಿದ್ದಾನೆ. ಅವನು ಮಾಳವ ದೇಶದಲ್ಲಿ ಅರಾಜಕತೆ ಉಂಟಾಗಿರುವಂತೆಯೇ ಗುಜರಾತಿನಲ್ಲೂ ಶಾಹಿ ವಂಶದವರನ್ನು ದೂರ ಮಾಡಿ ತನ್ನ ವಂಶಕ್ಕೆ ರಾಜ್ಯಭಾರ ಸಿಗುವಂತಾಗಲು ಪ್ರಯತ್ನಿಸುತ್ತಿದ್ದಾನೆ. ಮುಜಫರಶಾಹಿ ವಂಶವನ್ನು ಹಾಳುಮಾಡಿ ಅಮೂದಶಾಹಿ ವಂಶವನ್ನು ಗುಜರಾತಿನಲ್ಲಿ ಸ್ಥಾಪಿಸುವ ಉದ್ದೇಶವನ್ನು ಹೊಂದಿದ್ದಾನೆಂದು ಈತನ ಹುನ್ನಾರ ಬಹಳ ಅಪಾಯಕಾರಿಯಾಗಿದೆ ಎಂದೂ, ತಮ್ಮ ವಂಶವೇ ಹಾಳಾಗುವುದೆಂದೂ ಇಲ್ಲದ ಸಲ್ಲದ ಅಪರಾಧಗಳನ್ನು ಆತನ ಮೇಲೆ ಹೊರಿಸಿದರು. ತಕ್ಷಣ ಆತನನ್ನು ಅಧಿಕಾರದಿಂದ ಕೆಳಗಿಳಿಸಬೇಕೆಂದು ಪ್ರಾರ್ಥಿಸಿಕೊಂಡರು.

ಬಾದಶಹನ ಬುದ್ಧಿವಂತಿಕೆ :

ಬಾದಶಹ ಮಹಮೂದ್‌ನು ಅಮೀರರುಗಳ ಎಲ್ಲ ದೂರುಗಳನ್ನು ಶಾಂತಚಿತ್ತನಾಗಿ ಆಲಿಸಿದ. ಬಾದಶಹನು ಬಾಲಕನಾಗಿದ್ದರೂ ಅನನುಭವಿಯಾಗಿದ್ದರೂ, ಆಡಳಿತದಲ್ಲಿ ಅನೇಕ ಬುದ್ಧಿವಂತರೊಡನಾಟದಿಂದ ಜ್ಞಾನವನ್ನೂ, ಚಿಂತನ ಶೀಲತೆಯನ್ನೂ ಪಡೆದುಕೊಂಡಿದ್ದನು. ಆ ಕಾರಣದಿಂದಾಗಿ ಆತನು ಅಮೀರರ ದುಷ್ಟನೀತಿಯನ್ನು ಅರ್ಥಮಾಡಿಕೊಂಡನು. ಅಮಾದುಲ್‌ಮುಲ್ಕ್‌ನ ಮೇಲೆ ಹೊರಿಸಿರುವ ಅಪವಾದಗಳು ಆಧಾರರಹಿತವೆಂಬುದನ್ನೂ ಅರ್ಥ ಮಾಡಿಕೊಂಡನು. ನಾನೇನಾದರೂ ಇವರ ಮಾತುಗಳನ್ನು ಒಪ್ಪಿದರೆ ನನಗೆ ಮುಂದೆ ಬಹಳ ಕಷ್ಟಗಳನ್ನು ಅನುಭವಿಸ ಬೇಕಾಗುತ್ತದೆಂಬುದನ್ನು ತಿಳಿದುಕೊಳ್ಳಲು ತಡ ಮಾಡಲಿಲ್ಲ.

ಅಮೀರರುಗಳಿಗೆ ಉತ್ತರ :

ಅವರ ಮಾತುಗಳೆಲ್ಲವನ್ನೂ ಸಾವಧಾನ ಚಿತ್ತದಿಂದ ಕೇಳಿದ ಬಾದಶಹನು ಅಮೀರರನ್ನು ಕುರಿತು ಈ ರೀತಿ ಉತ್ತರಿಸಿದನು. ನೀವೆಲ್ಲರೂ ಹೇಳಿದ ಮಾತುಗಳಂತೆ ನಾನು ಸಹ ಅವರ ವರ್ತನೆಗಳನ್ನು ಗಮನಿಸುತ್ತಿದ್ದೇನೆ. ಅವನಲ್ಲಿ ನನ್ನ ವಿರುದ್ಧ ದಂಗೆ ಏಳುವ ವರ್ತನೆಗಳು ನನಗೂ ಕಂಡುಬರುತ್ತಿವೆ. ನಾನು ಏಕೆ ಆತನಿಗೆ ಶಿಕ್ಷೆ ಕೊಡಲಿಲ್ಲವೆಂದರೆ- ನೀವೆಲ್ಲರೂ ನನ್ನನ್ನು ನಿಷ್ಕರುಣಿ ಎಂದು ಎಲ್ಲಿ ದೂರುವರೋ ಎಂದು ಸುಮ್ಮನಿದ್ದೆ. ಇಲ್ಲದಿದ್ದರೆ ನಾನು ಆತನನ್ನು ಎಂದೋ ಶಿಕ್ಷಿಸುತ್ತಿದ್ದೆ. ಅಲ್ಲಾನ ದಯೆಯಿಂದ ಆತನು ಕೆಟ್ಟವನೆಂದು ನಿಮ್ಮ ಬಾಯಿಗಳಲ್ಲಿ ಬರುತ್ತಿರುವುದು ಒಳ್ಳೆಯದೇ ಆಗಿದೆ. ಈಗ ನಾನು ಆತನನ್ನು ಸೆರೆಹಿಡಿದರೆ ಜನರು ನನ್ನನ್ನು ದೂಷಿಸಲಾರರು. ನೀವೆಲ್ಲರೂ ನಿಮಗೆ ಹೇಗೆ ತೋಚುತ್ತದೋ ಹಾಗೆ ಕ್ರಮವನ್ನು ತೆಗೆದುಕೊಳ್ಳಿರಿ.

ಇಮಾದುಲ್‌ಮುಲ್ಕನ ಸೆರೆ :

ಅಮೀರರೆಲ್ಲರೂ ಬಾದಶಹನಿಗೆ ಇಮಾದುಲಮುಲ್ಕ್‌ನನ್ನು ಭಾರವಾದ ಸರಪಳಿಗಳನ್ನು ತೊಡಿಸಿ, ಸೆರೆಮನೆಗೆ ದೂಡುವಂತೆ ಸಲಹೆಯನ್ನು ಕೊಟ್ಟು ಅಲ್ಲಿಂದ ಹೊರಟು ಹೋದರು. ಬಾದಶಹನು ಅವರು ಹೇಳಿದಂತೆಯೇ ಮಾಡಿದನು. ಅಹಮದಾಬಾದಿನ ಕೋಟೆಯಲ್ಲಿ ಆತನನ್ನು ಕಣ್ಮರೆಯಾಗಿಸಿದನು. ಬಾದಶಹನು ದುಷ್ಟ ಅಮೀರರ ಮಾತಿನಂತೆ ನಡೆದುಕೊಂಡು ತನ್ನ ಪ್ರಾಣವನ್ನು ಉಳಿಸಿಕೊಂಡನು. ಆದರೆ ಅಮಾದುಲ್‌ಮುಲ್ಕ್‌ನನ್ನು ಹೇಗೆ ಉಳಿಸಿಕೊಳ್ಳಬೇಕೆಂಬ ಉಪಾಯವನ್ನು ಯೋಚಿಸ ತೊಡಗಿದನು.

ಬಾದಶಹನ ವರ್ತನೆ:

ತನ್ನ ಸೈನ್ಯದ ಎಲ್ಲ ಸರದಾರರೂ, ಅಮೀರರೂ ದುಷ್ಟ ಗುಂಪಿನ ಅಮೀರರ ಕೈಯಲ್ಲಿದ್ದಾರೆಂಬುದು ಬಾದಶಹನಿಗೆ ಚೆನ್ನಾಗಿ ಗೊತ್ತಿತ್ತು. ಆತನು ಯಾರನ್ನೂ ತನ್ನ ಹತ್ತಿರ ಹೆಚ್ಚಾಗಿ ಸೇರಿಸಿಕೊಳ್ಳುತ್ತಿರಲಿಲ್ಲ. ಬಾದಶಹನು ತನ್ನ ಮನಸ್ಸಿನಲ್ಲಿದ್ದ ಗುಟ್ಟನ್ನು ಯಾರಿಗೂ ಬಿಟ್ಟುಕೊಡದಂತೆ ಅಮಾದುಲ್‌ಮುಲ್ಕ್‌ನ ವಿರುದ್ಧ ತನ್ನ ವರ್ತನೆಯನ್ನು ಎಲ್ಲರ ಮುಂದೆಯೂ ಪ್ರಕಟಿಸುತ್ತಿದ್ದನು. ಅಮಾದುಲ್‌ಮುಲ್ಕ್‌ನು ತನ್ನ ಪ್ರಾಣದ ಶತ್ರುವಾಗಿದ್ದಾನೆ. ಆತನನ್ನು ನಾನು ಜೀವಂತವಾಗಿಡಲು ಇಷ್ಟಪಡುವುದಿಲ್ಲ. ನಾನು ಆತನನ್ನು ಸ್ವತಃ ನಾನೇ ಕತ್ತಿಯಿಂದ ಆತನ ತಲೆಯನ್ನು ಹಾರಿಸಬೇಕೆಂದಿದ್ದೇನೆ. ಆತನ ಪಕ್ಷ ವಹಿಸಿ ಯಾರೂ ಮಾತನಾಡಬಾರದು ಎಂಬ ಮಾತುಗಳನ್ನು ಕೇಳಿದ ದುಷ್ಟಕೂಟದವರು ಬಹಳ ಸಂತೋಷವನ್ನು ಪಡುತ್ತಿದ್ದರು. ಇನ್ನು ಅಮಾದುಲ್‌ಮುಲ್ಕ್‌ನ ಪಕ್ಷ ವಹಿಸುವವರು ಯಾರು ಇರಲಿಲ್ಲ.

ಎಚ್ಚರದಲ್ಲೇ ಕಳೆದ ಒಂದು ರಾತ್ರಿ :

ಬಾದಶಹನು ಒಂದು ರಾತ್ರಿ ಯಾವ-ಯಾವುದೋ ವಿಚಾರಗಳಿಂದಾಗಿ ಸಂಪೂರ್ಣ ರಾತ್ರಿಯನ್ನು ಯೋಚಿಸುತ್ತಲೇ ಕಳೆದನು. ಬೆಳಗಿನ ಜಾವದಲ್ಲಿ ಅರಮನೆಯಲ್ಲಿ ಪ್ರತಿನಿತ್ಯ ಬಾರಿಸುತ್ತಿದ್ದ (ನೌಬತ್ ಸುಲ್ತಾನಿ) ವಾದ್ಯಗಳು ಮೊಳಗಿದುವು. ಬಾದಶಹನು ತನ್ನ ಹಾಸಿಗೆಯಿಂದೆದ್ದು ಕಿಟಕಿಯ ಬಳಿ ಕುಳಿತು ಹೊರ ಸೌಂದರ್ಯವನ್ನು ವೀಕ್ಷಿಸಿ ಸಂತೋಷಿಸುತ್ತಿದ್ದ. ಬೆಳಗಿನ ಜಾವದ ಪ್ರಕೃತಿ ಸೌಂದರ್ಯವು ಆತನ ಮನಸ್ಸನ್ನು ಆಕರ್ಷಿಸಿತ್ತು. ಅಕಸ್ಮಾತಾಗಿ ಬಾದಶಹನ ದೃಷ್ಟಿ ಆನೆಗಳ ಗುಮಾಸ್ತನಾಗಿದ್ದ ಅಬ್ದುಲ್ಲಾನ ಮೇಲೆ ಬಿತ್ತು. ಗುಮಾಸ್ತನು ಅರಮನೆಯ ಪ್ರಾಂಗಣದಲ್ಲಿ ಬಾದಶಹರಿಂದ ಏನನ್ನೋ ಹೇಳುವ ಆಸೆಯಿಂದ ಬಹಳ ವಿನಮ್ರ, ಭಕ್ತಿಭಾವಗಳನ್ನು ಹೊಂದಿರುವ ಭಂಗಿಯಲ್ಲಿ ನಿಂತಿದ್ದನು. ಬಾದಶಹನು ಆತನ ಮನದಾಳವನ್ನು ಅರ್ಥಮಾಡಿಕೊಂಡು ಅಬ್ದುಲ್ಲಾನನ್ನು

ಕುರಿತು ನೀನೇನನ್ನು ಹೇಳಬೇಕೆಂದಿರುವೆಯೋ ಅದನ್ನು ಧೈರ್ಯವಾಗಿ ಹೇಳು ಎಂದನು.

ಅಬ್ದುಲ್ಲಾನ ಪ್ರಾರ್ಥನೆ :

ಬಾದಶಹರು ಈಗ ಯಾರಿಂದಲೂ ಸುತ್ತುವರಿಯದೆ ಒಂಟಿಯಾಗಿರುವ ಅವಕಾಶವನ್ನು ಪಡೆದು ಪ್ರಾರ್ಥಿಸಿದ.-"ಹುಜೂರರೆ-ಅಮಾದುಲ್‌ಮುಲ್ಕರಂತಹ ಜ್ಞಾನಿ, ಪ್ರೇಮಮಯಿ ಈ ದೇಶದಲ್ಲೇ ಇಲ್ಲ. ಅಮೀರರುಗಳೆಲ್ಲರೂ ಅವರ ವಿರುದ್ಧ ಪಿತೂರಿ ನಡೆಸಿ ತಮಗೆ ಹೇಳಿರುವುದೆಲ್ಲ ಅಪ್ಪಟ ಸುಳ್ಳು, ಆಧಾರ ರಹಿತ ಅಪರಾಧಗಳಾಗಿವೆ. ಈ ಅಪರಾಧಗಳೆಲ್ಲವೂ ಅವರ ಸ್ವಾರ್ಥವನ್ನು ಸಾಧಿಸಿಕೊಳ್ಳಲು ಹೆಣೆದಿರುವ ಜಾಲವಾಗಿದೆ. ತಮ್ಮನ್ನು ಸಿಂಹಾಸನದಿಂದ ಇಳಿಸಿ ರಾಜಕುಮಾರ ಹುಸ್ನಖಾನನನ್ನು ಪಟ್ಟಕ್ಕೇರಿಸಬೇಕೆಂಬ ದುಷ್ಟ ಹುನ್ನಾರ ಇದಾಗಿದೆ ಎಂದು ಬಾದಶಹರಲ್ಲಿ ವಿನಂತಿಸಿಕೊಂಡನು.

ಬಾದಶಹರ ಉತ್ತರ :

ಬಾದಶಹನು ಅಬ್ದುಲ್ಲಾನ ಬಾಯಿಯಿಂದ ಮೇಲಿನ ಮಾತುಗಳನ್ನು ಕೇಳಿ ಗುಮಾಸ್ತನನ್ನು ಬಹಳವಾಗಿ ಹೊಗಳಿದನು. ನೀನು ನನಗೆ ಸತ್ಯದ ಸಮಾಚಾರವನ್ನು ತಿಳಿಸಿದ್ದೀಯೆ. ಇಲ್ಲದಿದ್ದರೆ ನಾನು ಈ ದಿನ ಅಮಾದುಲಮುಲ್ಕನನ್ನು ನನ್ನ ಕತ್ತಿಗೆ ಆಹುತಿಯನ್ನಾಗಿಸುತ್ತಿದ್ದೆ. ಈಗ ನೀನು ಒಂದು ಮಹತ್ತರವಾದ ಕೆಲಸವನ್ನು ಮಾಡಬೇಕಾಗಿದೆ. ನನ್ನ-ನಿನ್ನಲ್ಲಿ ನಡೆದ ಮಾತುಕಥೆಯನ್ನು ನೀನು ಯಾರ ಬಳಿಯೂ ಬಹಿರಂಗ ಪಡಿಸಬಾರದು. ಮತ್ತೊಂದು ಕೆಲಸವೆಂದರೆ ನಾಳೆ ಬೆಳಿಗ್ಗೆ ಎಲ್ಲ ಆನೆಗಳನ್ನು ತಯಾರುಮಾಡಿ ಶಾಹಿ ದರ್ಬಾರಿಗೆ ಕಳುಹಿಸಿ ಕೊಡತಕ್ಕದ್ದು.

ಅಮೀರರೊಡನೆ ಮಾತುಕತೆ :

ಪೂರ್ವ ದಿಕ್ಕಿನಲ್ಲಿ ಸೂರ್ಯನು ಮೂಡುತ್ತಿದ್ದಂತೆಯೇ ಬಾದಶಹನ ಹತ್ತಿರಕ್ಕೆ ಅಮೀರರಾದ ಮಲಿಕ್ ಶರ್ಫುದ್ದೀನ್, ಮಲಿಕ್‌ಹಾಜಿ, ಮಲಿಕ್ ಬಹಾಉದ್ದೀನ್, ಮಲಿಕ್ ಕಾಪೂರ ಮತ್ತು ಮಲಿಕ್ ಐನುದ್ದೀನ್ ಮುಂತಾದವರೆಲ್ಲರೂ ಬಂದರು. ಸುಲ್ತಾನ್ ಮಹಮೂದ್‌ಶಾಹನು ಮಲಿಕ್ ಶರ್ಫನನ್ನು ಕುರಿತು ಹೀಗೆಂದನು-ಅಮಾದುಲ್‌ಮುಲ್ಕ್‌ನ ವಿಚಾರವು ನನಗೆ ಎಷ್ಟು ತಲೆನೋವಾಗಿದೆಯೆಂದರೆ,-ರಾತ್ರಿ ಸಂಪೂರ್ಣವಾಗಿ ನನಗೆ ನಿದ್ದೆ ಬರಲಿಲ್ಲ. ನೀವೆಲ್ಲರೂ ಸೇರಿ ಆತನನ್ನು ನನ್ನ ಮುಂದೆ ಎಳೆದು ತಂದು ನಿಲ್ಲಿಸಿರಿ. ನಾನು ಆತನ ಶಿರಚ್ಛೇದನವನ್ನು ತಕ್ಷಣ ಮಾಡಬೇಕಾಗಿದೆ. ಈ ಮಾತನ್ನು ಕೇಳಿದ ಮಲಿಕ್ ಶರ್ಫ್‌ನು ತಕ್ಷಣ ಅಲ್ಲಿಂದ ಎದ್ದು ಅಮಾದುಲಮುಲ್ಕ್‌ನನ್ನು ಎಳೆದು ತರಲು ಹೊರಟನು. ಕೈದಿ ಖಾನೆಯ

(ಸೆರೆಮನೆ) ರಕ್ಷಕರು ಅಮಾದುಲ್‌ಮುಲ್ಕ್‌ನನ್ನು ಶರ್ಫುದ್ದೀನನ ಸುಪರ್ದಿಗೆ ವಹಿಸಲು ನಿರಾಕರಿಸಿದರು. ಏಕೆಂದರೆ–ಅಸದುಲ್‌ಮುಲ್ಕ್‌ನ ಆಜ್ಞೆಯಿಲ್ಲದೆ ಅಪರಾಧಿಯನ್ನು ಯಾರ ಕೈಗೂ ಒಪ್ಪಿಸಲಾರೆವು ಎಂದರು. ಈ ಸಮಾಚಾರವನ್ನು ಮಲಿಕ್ ಶರ್ಫ್‌ನು ಬಾದಶಹರ ಬಳಿ ಬಂದು ತಿಳಿಸಿದನು.

ಇಮಾದುಲ್ ಮುಲ್ಕ್‌ನ ಬಿಡುಗಡೆ :

ಈ ಮಾತನ್ನು ಕೇಳಿದ ಬಾದಶಹನು ಸ್ವತಃ ತಾನೆ ಅಲ್ಲಿಂದ ಎದ್ದು ಬಂದು ಬುರ್ಜಿನ ಮೇಲೇರಿ ಆತನು ಬಹಳ ಜೋರಾಗಿ ಸೆರೆಮನೆಯ ರಕ್ಷಕರೇ–ಅಪರಾಧಿಯನ್ನು ಬಹಳ ಬೇಗ ನನ್ನ ಬಳಿ ತಂದು ನಿಲ್ಲಿಸಿ. ನಾನು ಆತನನ್ನು ಆನೆಗಳ ಕಾಲಿನಿಂದ ತುಳಿಸಿ ಸಾಯಿಸಿಬೇಕೆಂದಿದ್ದೇನೆ. ಇನ್ನು ಸೆರೆಮನೆ ರಕ್ಷಕರಿಗೆ ಬೇರೆ ದಾರಿಯೇ ಇರಲಿಲ್ಲ. ರಕ್ಷಕರು ತಕ್ಷಣ ಅಮಾದುಲ್‌ಮುಲ್ಕ್‌ನನ್ನು ಕರೆ ತಂದು ಬಾದಶಹನ ಎದುರಿನಲ್ಲಿ ನಿಲ್ಲಿಸಿದರು. ಬಾದಶಹನು ಆತನನ್ನು ನೋಡುತ್ತಲೇ ಸ್ವತಂತ್ರಗೊಳಿಸಿದನು.

ಭಯಾನಕ ಸ್ಥಿತಿ ಎದುರಾಯಿತು :

ಎಲ್ಲರೂ ಈ ಪರಿಸ್ಥಿತಿಯನ್ನು ಕಂಡು ಭಯಭೀತರಾದರು. ವಿರೋಧಿ ಅಮೀರರೂ ಅಮಾದುಲ್‌ಮುಲ್ಕನ ಬಗ್ಗೆ ಬಹಳ ಚಿಂತಿತರಾದರು. ಅವರಲ್ಲಿ ಕೆಲವರು ಭಯಭೀತರಾದರೆ ಮತ್ತೆ ಕೆಲವರು ತಮ್ಮ ಆತ್ಮ ಹತ್ಯೆಮಾಡಿ ಕೊಳ್ಳುತ್ತಿರುವರೇನೋ ಎಂಬ ಸ್ಥಿತಿಯಲ್ಲಿದರೆ, ಕೆಲವರು ಆಕಾಶದತ್ತ ತಲೆಯೆತ್ತಿ ಅಲ್ಲಾನಲ್ಲಿ ಏನನ್ನೋ ಪ್ರಾರ್ಥಿಸುವಂತಿದ್ದರು.

ದುಷ್ಟಕೂಟದ ಅಮೀರರು ಯುದ್ಧ ಸನ್ನದ್ಧರಾದರು :

ಬೆಳಗಾದ ಮೇಲೆ ಪ್ರತಿದಿನದ ಪದ್ಧತಿಯಂತೆ ಬಾದಶಹರು ತನ್ನ ದರ್ಬಾರು ಮಂಟಪಕ್ಕೆ ಬಂದರು. ಎಲ್ಲ ಅಮೀರರು ಮುಜುರೆ, ಸಲಾಂ ಮಾಡಲು ಬಂದರು. ಸುಲ್ತಾನ್ ಮಹಮೂದ್‌ನು ಅಮಾದುಲ್‌ಮುಲ್ಕ್‌ನನ್ನು ತನ್ನ ಪಕ್ಕದಲ್ಲಿ ನಿಲ್ಲಿಸಿಕೊಂಡನು. ತನ್ನ ರುಮಾಲನ್ನು ಆತನಿಗೆ ಕೊಟ್ಟು ಮೈ ಒರೆಸಲು ಹೇಳಿದನು. ದುಷ್ಟಕೂಟದ ಅಮೀರರು ಇದನ್ನು ಕಂಡು ಬಹಳ ಕುಹಕದಿಂದ ಚಿಂತಿತರಾದರು. ಅವರ ಎದೆಗಳ ಮೇಲೆ ಹಾವು ಚೇಳುಗಳು ಹರಿದಾಡಿದಂತಾಯಿತು. ಹಾಜಿ ಮಹಮ್ಮದ್ ಕಂದಹಾರಿಯ ವರದಿಯಂತೆ ಮೂರು ಸಾವಿರ ಕುದುರೆ ಸವಾರರ ಸೈನ್ಯ ಮತ್ತು ಕಾಲಾಳುಗಳ ಸೈನ್ಯದೊಂದಿಗೆ ಅರಮನೆಯತ್ತ ಯುದ್ಧಕ್ಕೆ ಓಡೋಡಿ ಬಂದರು.

ಬಾದಶಹನ ಗುಂಪಿನವರ ಚಿಂತೆ :

ದುಷ್ಟಕೂಟದ ಅಮೀರರೆಲ್ಲರೂ ಯುದ್ಧ ನಗಾರಿಗಳನ್ನು ಜೋರಾಗಿ ಬಾರಿಸುತ್ತಾ

ಯುದ್ಧ ನಿರತರಾಗಿಬಿಟ್ಟರು. ಬಾದಶಹನ ಹತ್ತಿರ ಆಗ ಕೇವಲ ಮುನ್ನೂರು ಸೈನಿಕರು ಮಾತ್ರ ಇದ್ದರು. ಅವರು ಬಹಳ ಚಿಂತಾಕ್ರಾಂತರಾದರು. ಅವರಲ್ಲಿ ಒಬ್ಬನು ಹೀಗೆಂದನು– ಅರಮನೆಯಲ್ಲಿ ಆಶ್ರಯವನ್ನು ಪಡೆದು, ಬಾಗಿಲುಗಳನ್ನು ಒಳಗಿನಿಂದ ಭದ್ರಪಡಿಸಿಕೊಂಡು ಕುಳಿತುಕೊಳ್ಳುವುದೇ ಸೂಕ್ತವೆಂದು ಹೇಳಿದನು. ಮತ್ತೊಬ್ಬನ ಅಭಿಪ್ರಾಯದಲ್ಲಿ–ಖಜಾನೆಯ ಸಂಪತ್ತಿನೊಂದಿಗೆ ಇಲ್ಲಿಂದ ದೂರ ಓಡಿ ಹೊಗುವುದೇ ಲೇಸೆಂದನು.

ಬಾದಶಹನಿಗೆ ಯುದ್ಧದ ಆಸೆ :

ಮೇಲೆ ಮಾತನಾಡಿದವರ ಯಾರ ಸಲಹೆಯೂ ಉಚಿತವೆನಿಸಲಿಲ್ಲ. ದೀರ್ಘವಾಗಿ ಯೋಚಿಸಿದ ನಂತರ ದುಷ್ಟಕೂಟದವರ ಮೇಲೆ ಯುದ್ಧ ಮಾಡುವುದೇ ಲೇಸೆಂದು ಬಗೆದನು. ನಂತರ ಆಯುಧಗಳನ್ನು ಹಿಡಿದು ಕೇವಲ ಮುನ್ನೂರು ಸಿಪಾಯಿಗಳು, ೨೦೦ ಆನೆಗಳ ಹಿಂಡನ್ನು ಕರೆದುಕೊಂಡು ದುಷ್ಟರ ಮೇಲೆ ಬೀಳಲು ಅರಮನೆಯಿಂದ ಇಳಿದು ಬಂದನು. ಬಾದಶಹನ ಈ ಧೈರ್ಯ ನಿಜಕ್ಕೂ ಪ್ರಶಂಸಾರ್ಹವಾಗಿತ್ತು. ಯಾರ ಅದೃಷ್ಟದಲ್ಲಿ ಶಾಸನವನ್ನು ಮಾಡುವ ಶಕ್ತಿ ಇದೆಯೋ ಅವರು ಶತ್ರು ಸೈನ್ಯದ ಹೆಚ್ಚು ಅಥವಾ ಕಡಿಮೆಯನ್ನು ಲೆಕ್ಕಿಸುವುದಿಲ್ಲ.

ಸೇನಾ ಸರದಾರರ ಸಮಯೋಚಿತ ನಿರ್ಧಾರ :

ಯಾವಾಗ ಬಾದಶಹರು ಯುದ್ಧಕ್ಕೆ ಕುದುರೆಯನ್ನೇರಿದರೋ ಮತ್ತು ಅಮಾದುಲ್‌ಮುಲ್ಕ್‌ನನ್ನು ತನ್ನ ಆಪ್ತರಾಗಿಸಿಕೊಂಡರೋ, ಎಲ್ಲ ಸೈನಿಕ ಸರದಾರರು, ಆನೆಗಳ ಸರದಾರರೆಲ್ಲರೂ ದುಷ್ಟಕೂಟದವರ ಸ್ನೇಹವನ್ನು ತೊರೆದರು. ಅವರಲ್ಲಿ ಕೆಲವರು ಕಣ್ಣಿಗೆ ಕಾಣದಂತೆ ಅಡಗಿಕೊಂಡರು. ಮತ್ತೆ ಕೆಲವರು ಬಾದಶಹನ ಸೈನ್ಯದೊಡನೆ ಸೇರಿಕೊಂಡರು. ಅಹಮದಾಬಾದಿನಲ್ಲಿ ಎಂದೂ ಇಲ್ಲದ ವಿಚಿತ್ರ ಸಂದರ್ಭವುಂಟಾಯಿತು. ದುಷ್ಟಕೂಟದ ಎಲ್ಲ ಶತ್ರುಗಳೂ ನಾಶವಾದರು.

ದುಷ್ಟಕೂಟದವರ ಪಲಾಯನ :

ಬಾದಶಹನ ಶೌರ್ಯ–ಸಾಹಸದ ವರ್ತನೆ ಸಾಕಷ್ಟು ಕೆಲಸ ಮಾಡಿತ್ತು. ಯಾವ ರಕ್ತಪಾತವೂ ಇಲ್ಲದೆ ಸಂಕಷ್ಟವೂ ಪರಿಹಾರವನ್ನು ಕಂಡಿತ್ತು. ದುಷ್ಟಕೂಟದವರು ನಿರ್ವೀರ್ಯರಾಗಿ ತಮ್ಮಷ್ಟಕ್ಕೆ ತಾವೇ ಓಡಲು ಪ್ರಾರಂಭಿಸಿದರು.

ಬುರ್ಹಾನುಲ್‌ಮುಲ್ಕ್‌ನ ಮರಣ :

ಬುರ್ಹಾನುಲ್‌ಮುಲ್ಕ್‌ನು ಬಹಳ ಧಡೂತಿ ಶರೀರದವನಾಗಿದ್ದನು. ಆತನಲ್ಲಿ ಓಡಿ ಹೋಗುವ ಶಕ್ತಿ ಇರಲಿಲ್ಲ. ಸ್ವಲ್ಪ ದೂರ ನಡೆದು ಹೋದದ್ದರಿಂದ ಅವನಿಗೆ

ಉಸಿರುಗಟ್ಟಿದಂತಾಯಿತು. ಆತನು ಅಲ್ಲಿಯೇ ಇದ್ದು ಒಂದು ಹಳ್ಳಿಯ ಹತ್ತಿರ ಸಬರಮತಿ ನದಿಯ ಮೇಲಿನ ಮುರಿದ ಸೇತುವೆಯ ಒಳಗೆ ಕೊಳಕು ಹಳ್ಳದಲ್ಲಿ ಅಡಗಿ ಕುಳಿತನು. ಆಕಸ್ಮಿಕವಾಗಿ ಅಲ್ಲಿ ಒಂದು ಜನರ ಗುಂಪು, ಖ್ವಾಜಾ ಸರಾ ಹಜ್ರತ್‌ಶೇಖ್ ಕಂಬೋರವರ ದರ್ಗಾದಲ್ಲಿ ಪ್ರಾರ್ಥನೆಯನ್ನು ಸಲ್ಲಿಸಲು ಹೋಗುತ್ತಿತ್ತು. ಅವರು ತಮ್ಮ ಬಾದಶಹರ ಶತ್ರುವೂ ಆದ ಬುರ್ಹಾನನನ್ನು ಗುರುತಿಸಿ ಆತನನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಅಲ್ಲಿಂದ ಅವನನ್ನು ಬಾದಶಹನ ಹತ್ತಿರಕ್ಕೆ ತಂದು ಒಪ್ಪಿಸಿದರು. ಬಾದಶಹನು ಆತನನ್ನು ಆನೆಯಿಂದ ತುಳಿಸಿ ಸಾಯಿಸಿದನು.

ಅಸದಲ್‌ಮುಲ್ಕ್‌ನ ಕೊಲೆ :

ಅಸದಲ್ ಮುಲ್ಕ್ ಓಡಿಹೋಗಿ ತನ್ನ ಸೇವಕರ ಒಂದು ಗುಂಪಿನ ಮಧ್ಯ ಅಡಗಿಕೊಂಡಿದ್ದನು. ಆತನು ತನ್ನ ಆಡಳಿತ ಕಾಲದಲ್ಲಿ ತನ್ನ ಅನೇಕ ನಿರಪರಾಧಿ ಸೇವಕರನ್ನು ಕೊಲ್ಲಿಸಿದ್ದನು. ಆದ್ದರಿಂದ ಬಾದಶಹನು ಕೊಲೆಗಡುಕರಿಗೆ ಆತನನ್ನು ಕೊಲೆಮಾಡಿ ಆತನ ತಲೆಯನ್ನು ಕಡಿದು ತಂದು ನನಗೆ ತೋರಿಸಬೇಕೆಂದು ಆಜ್ಞಾಪಿಸಿದ್ದನು. ಇದರಂತೆಯೇ ಆಯಿತು.

ಉಳಿದ ವಿದ್ರೋಹಿಗಳ ಪರಿಣಾಮ :

ಹಿಸಾಮುಲ್ ಮುಲ್ಕ್‌ನು ತನ್ನ ಸಹೋದರನಾದ ರುಕ್ನುದ್ದೀನ್ ಕೊತ್ವಾಲನ ಹತ್ತಿರ ಓಡಿ ಹೋಗಿದ್ದನು. ಅಲ್ಲಿಂದ ಇಬ್ಬರೂ ಸೇರಿ ಮಾಳವ ದೇಶದತ್ತ ಓಡಿದರು. ಸಫಿವುಲ್‌ಮುಲ್ಕ್‌ನನ್ನು ಸೆರೆಹಿಡಿಯುಲಾಯಿತು. ಆತನ ತಪ್ಪುಗಳು ಹೆಚ್ಚಾಗಿರಲಿಲ್ಲವಾದಕಾರಣ ಆತನನ್ನು ಮರಣದಂಡನೆಗೆ ಬದಲಾಗಿ ಕೋಟೆ ದೇಬ್ ಎಂಬಲ್ಲಿ ಆಜೀವ ಸೆರೆವಾಸದಲ್ಲಿ ತಳ್ಳಲಾಯಿತು.

ಇಮಾದುಲ್‌ಮುಲ್ಕ್‌ನ ಸನ್ಯಾಸ :

ಈ ಗೆಲುವಿನ ನಂತರ ಅಮಾದುಲ್‌ಮುಲ್ಕ್‌ನ ಮನಸ್ಸು ರಾಜಕೀಯದಿಂದ ದೂರ ಉಳಿಯಬೇಕೆಂದೆನಿಸಿತು. ಈ ಜಗತ್ತು ಬಹಳ ಅಪ್ರಾಮಾಣಿಕವಾದದ್ದು ಇದರಲ್ಲಿ ನ್ಯಾಯಕ್ಕೆ ಸತ್ಯಕ್ಕೆ ಬೆಲೆ ಇಲ್ಲವೆಂದು ಗೊತ್ತಾಯಿತು. ಒಂದು ದಿನ ಬಾದಶಹನಲ್ಲಿ ಬೇಡಿದ್ದೇನೆಂದರೆ–ಬಾದಶಹರೇ ನನ್ನನ್ನು ತಮ್ಮ ಸೇವೆಯಿಂದ ಬಿಡುಗಡೆ ಮಾಡಿರಿ. ನಾನು ಇನ್ನುಳಿದ ಜೀವಿತ ಕಾಲವನ್ನು ಅಲ್ಲಾನ ಸೇವೆಯಲ್ಲಿ, ಪ್ರಾರ್ಥನೆಯಲ್ಲಿ ಕಳೆಯಬೇಕೆಂದಿದ್ದೇನೆ ಎಂದನು. ಬಾದಶಹನು ಆತನ ಪ್ರಾರ್ಥನೆಯನ್ನು ಮಂಜೂರು ಮಾಡಿದನು. ಅಮಾದುಲ್ ಮುಲ್ಕ್‌ನನ್ನು ಮಂತ್ರಿಪದವಿಯಿಂದ ತೆರವುಗೊಳಿಸಿದನು. ಅಮಾದುಲ್ ಮುಲ್ಕ್‌ನ ಮಗನಾದ ಷಹಾಬುದ್ದೀನ್ ಅಹಮದನನ್ನು "ಮುಲ್ಕ್–ಎ–ಅಶರಫ್" ಎಂಬ ಬಿರುದಿನಿಂದ ಸನ್ಮಾನಿಸಿ ತನ್ನ ಮಂತ್ರಿ ಮಂಡಲದಲ್ಲಿ ಉನ್ನತ ಸ್ಥಾನವನ್ನು ನೀಡಿ ಸೇರಿಸಿಕೊಂಡನು.

ನಿಜಾಂಶಾಹ ಬಹಮನಿಯ ಪತ್ರ :

ನಿಜಾಂಶಾಹ ಬಹಮನಿ ಅಹಮದಾಬಾದ್ ಬೀದರ್ ಶಾಸಕ ಹಿಜರಿ ೮೬೬ರಲ್ಲಿ ಸುಲ್ತಾನ್ ಮಹಮ್ಮದಶಾಹನ ಹೆಸರಿಗೊಂದು ಪತ್ರವನ್ನು ಬರೆದು ಕಳುಹಿಸಿದನು. ಇದರ ಒಕ್ಕಣೆ ಹೀಗಿತ್ತು.– ಸುಲ್ತಾನ್ ಮಹಮೂದ್ ಖಿಲ್ಜಿಯ ಸಾಮಂತ ಶಾಸಕನು ಅನೇಕ ರೀತಿಯ ಪಿತೂರಿ ತೊಂದರೆಗಳನ್ನು ಸೃಷ್ಟಿಸಿ ಹಿಂಸಿಸುತ್ತಿದ್ದಾನೆ. ಆತನು ದಕ್ಷಿಣದ ರಾಜರುಗಳನ್ನು, ಪ್ರಜೆಗಳನ್ನೂ ತುಂಬಾ ತೊಂದರೆಗಳಿಗೆ ಸಿಕ್ಕಿಸಿದ್ದಾನೆ. ತಮ್ಮ ಕೀರ್ತಿ ಮತ್ತು ಧೈರ್ಯ ಸಾಹಸಗಳ ಪ್ರಶಂಸೆ ಸಾಕಷ್ಟು ಕೇಳಿದ್ದೇವೆ. ತಾವು ದಖನಿಗಳ ರಕ್ಷಣೆಯಲ್ಲಿ ಸಹಾಯ ಹಸ್ತವನ್ನು ನೀಡುವಿರೆಂದು ನಾವು ನಂಬಿರುತ್ತೇವೆ.

ಅಮೀರರಲ್ಲಿ ಚರ್ಚೆ :

ಈ ಪತ್ರವನ್ನು ಓದಿ ತನ್ನ ಅಮೀರರಲ್ಲಿ ಚರ್ಚೆ ನಡೆಸಿ ಸುಲ್ತಾನ್ ಮಹಮೂದ್ ಗುಜರಾತಿಯು ಸೈನ್ಯದೊಂದಿಗೆ ಪ್ರಯಾಣವನ್ನು ಮಾಡಲು ಆಜ್ಞಾಪಿಸಿದನು. ಆದರೆ ಕೆಲವು ಅಮೀರರು ಬಾದಶಹನನ್ನು ಕುರಿತು ಹೀಗೆಂದರು–ಈಗಿನ ನಮ್ಮ ಪರಿಸ್ಥಿತಿಗಳು ತುಂಬಾ ನಾಜೂಕಾಗಿವೆ. ದಾವೂದಷಾಹನು ಇನ್ನೂ ಪಟ್ಟಕ್ಕೇರಿ ಒಂದು ವಾರ ಮಾತ್ರ ಆಗಿದೆ. ಆತನು ನಮ್ಮ ಮೇಲೆ ಸೇಡು ತೀರಿಸಿಕೊಳ್ಳುವ ಹವಣಿಕೆಯಲ್ಲಿ ಕಾಯುತ್ತಿದ್ದಾನೆ. ಎರಡನೇ ಸಮಸ್ಯೆ ಏನೆಂದರೆ–ತಮ್ಮ ರಾಜ್ಯದ ಎಲ್ಲಾ ಸಾಮಂತರು ನಮ್ಮ ಅಧೀನತೆಯನ್ನು ಪೂರ್ಣವಾಗಿ ಒಪ್ಪಿಕೊಂಡಿರುವಂತೆ ಕಂಡುಬರುತ್ತಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಯಾರೋ ಪರರ ಸಹಾಯಕ್ಕೆ ತಮ್ಮ ರಾಜಧಾನಿಯನ್ನು ಬಿಟ್ಟು ಬಹಳ ದೂರದ ಅಧಿಕ ಸಮಯದ ಪ್ರಯಾಣವನ್ನು ಕೈಗೊಳ್ಳುವುದು ಎಷ್ಟು ಉಚಿತ ಎಂದು ಪ್ರಶ್ನಿಸಿದರು.

ಬಾದಶಹನ ಉತ್ತರ :

ಇದನ್ನು ಕೇಳಿದ ನವ ಯುವಕ, ಉತ್ಸಾಹಿ ಬಾದಶಹನು ಉತ್ತರಿಸಿದ್ದು ಹೀಗೆ– ಒಂದು ವೇಳೆ ಈ ಸೃಷ್ಟಿಚಕ್ರದ ಗ್ರಹಗಳಲ್ಲಿ ಒಂದಕ್ಕೊಂದು ಹೊಂದಾಣಿಕೆ ಇಲ್ಲದಿದ್ದರೆ ನೀರು, ಭೂಮಿ, ಬೆಂಕಿಯಂತಹ ಪಂಚಭೂತಗಳ ವ್ಯತ್ಯಾಸದಿಂದಾಗಿ ಈ ಜಗತ್ತೇ ನಾಶವಾಗಿ ಬಿಡುತ್ತದೆ. ಅದರಂತೆಯೇ ಈ ಜಗತ್ತಿನ ಎಲ್ಲ ಮಾನವರಲ್ಲಿ ಒಗಟ್ಟು, ಹೊಂದಾಣಿಕೆಗಳು ಬರದಿದ್ದಲ್ಲಿ ಪ್ರಪಂಚದ ಎಲ್ಲ ಕೆಲಸಗಳು ನಿಂತು ಹೋಗಿಬಿಡುವವು. ನಾನು ಒಂದು ಒಳ್ಳೆಯ ಮನಸ್ಸಿನಿಂದ ದಕ್ಷಿಣ ದೇಶದ ಜನರ ಸಹಾಯಕ್ಕೆಂದು ಪ್ರಯಾಣವನ್ನು ಬೆಳಸಲಿದ್ದೇನೆ. ನನಗೆ ಅಲ್ಲಾನ ಕೃಪೆ ನನ್ನ ಮೇಲೆ ಇರುವುದೆಂದು ಪೂರ್ಣ ಭರವಸೆ ಇದೆ. ನನಗೆ ಯಾವುದೇ ನಷ್ಟ ಸಂಭವಿಸುವುದಿಲ್ಲ. ನನ್ನ ರಾಜ್ಯವು ಎಲ್ಲ ಆಪತ್ತುಗಳಿಂದ ಸುರಕ್ಷಿತವಾಗಿರುವುದರಲ್ಲಿ ಯಾವುದೇ ಸಂದೇಹವೂ ನನಗಿಲ್ಲ.

ಅಮೀರರ ಎರಡನೇ ವಿಮರ್ಶೆ :

ಮೇಲಿನ ಮಾತುಗಳನ್ನು ಕೇಳಿದ ಅಮೀರರು ಒಂದು ವೇಳೆ ನೀವು ದಕ್ಷಿಣ ದೇಶದ ರಾಜರುಗಳಿಗೆ ಸಹಾಯ ಮಾಡಲೇಬೇಕೆನ್ನುವುದಾದರೆ ಒಂದು ವಿಶಾಲ ಸೈನ್ಯವನ್ನು ಮಾಳವ ದೇಶದತ್ತ ಕಳುಹಿಸಿದರೆ ಈ ಕಾರ್ಯಾಚರಣೆಯಿಂದಾಗಿ ಮಹಮೂದ್ ಖಿಲ್ಜಿಯು ಹೆದರಿ ದಕ್ಷಿಣ ರಾಜ್ಯಗಳಿಗೆ ತೊಂದರೆಗಳನ್ನು ಕೊಡದೆ ತನ್ನ ದೇಶದತ್ತ ಬಂದು ಬಿಡುವನು ಎಂದು ಸಲಹೆಯನ್ನು ನೀಡಿದರು.

ಸುಲ್ತಾನ್ ಮಹಮೂದ್ ಗುಜರಾತಿಯ ಪ್ರಯಾಣ :

ಬಾದಶಹನಿಗೆ ಈ ಸಲಹೆಯು ಹಿಡಿಸಲಿಲ್ಲ. ಅವರ ಮಾತಿಗೆ ಬೆಲೆಯನ್ನು ಕೊಡದೆ ತನ್ನ ಸೈನ್ಯದೊಂದಿಗೆ ೫೦೦ ಶಕ್ತಿಶಾಲಿ ಆನೆಗಳನ್ನು ತೆಗೆದುಕೊಂಡು ದಕ್ಷಿಣದತ್ತ ಹೊರಟೇ ಬಿಟ್ಟನು. ಬಾದಶಹನು ಬಹಳ ವೇಗವಾಗಿ ಪ್ರಯಾಣವನ್ನು ಮಾಡುತ್ತಾ ನದರ್‌ಬಾರ್ ತಲುಪಿದನು. ದಕ್ಷಿಣದ ಪ್ರಸಿದ್ಧ ಅಮೀರನಾದ ಖ್ವಾಜಾ ಗವಾನ್ ಎಂಬುವನು ಆ ಜಾಗದಲ್ಲಿ ಬಾದಶಹನನನ್ನು ಕಾಣಲು ಬಂದನು. ಬಾದಶಹನಿಂದ ಸಹಾಯವನ್ನು ಪಡೆದು ಸುಲ್ತಾನ್ ಮಹಮೂದ್‌ಖಿಲ್ಜಿಯನ್ನು ಹಿಮ್ಮೆಟ್ಟಿಸಲು ಹೊರಟನು.

ಮಹಮೂದ್ ಖಿಲ್ಜಿಯ ಬಿಕ್ಕಟ್ಟು :

ಸುಲ್ತಾನ್ ಮಹಮೂದ್ ಖಿಲ್ಜಿಯು ಹೆದರಿಕೆಯಿಂದ ಬೀದರ ಕಡೆಗೆ ಹೊರಟನು. ದೌಲತಾಬಾದಿನ ಕಡೆಯಿಂದ ತನ್ನ ದೇಶಕ್ಕೆ ಮರಳಲು ಇಚ್ಛಿಸಿದನು. ಆದರೆ ಈ ದಾರಿಯನ್ನು ಗುಜರಾತಿನ ಸೈನ್ಯವು ಮುಚ್ಚಿದ್ದರು. ಈ ವಿಷಯವನ್ನು ತಿಳಿದ ಖಿಲ್ಜಿಯು ಬರಾರ್ ಮಾರ್ಗವಾಗಿ ತೆರಳಲು ಮನಸ್ಸು ಮಾಡಿದನು. ಎಲಿಚ್‌ಪುರದ ಮಾರ್ಗವಾಗಿ ಕಾಡುಮೇಡುಗಳಲ್ಲಿ ಸಂಚರಿಸುತ್ತಾ ಮಾಳವ ದೇಶವನ್ನು ತಲುಪಿದನು. ಇದಾದ ನಂತರ ನಿಜಾಂಶಾಹ ಬಹಮನಿಯು ಒಬ್ಬ ರಾಜದೂತನನ್ನು ಮಹಮೂದ್‌ಶಾಹ ಗುಜರಾತಿಯವನ ಹತ್ತಿರ ಕಳುಹಿಸಿ ತನ್ನ ಧನ್ಯವಾದಗಳನ್ನು ಉಪಕಾರ ಸ್ಮರಣೆಯೊಂದಿಗೆ ಅರ್ಪಿಸಿದನು. ಬಾದಶಹನು ಗುಜರಾತಿನ ರಾಜಧಾನಿಗೆ ಹಿಂತಿರುಗಿದನು.

ಸುಲ್ತಾನ್ ಮಹಮೂದ್ ಗುಜರಾತಿಯ ಆಸೆ ದಕ್ಷಿಣದತ್ತ :

ಸುಲ್ತಾನ್ ಮಹಮೂದ್ ಖಿಲ್ಜಿಯು ೮೬೭ನೇ ಹಿಜರಿಯಲ್ಲಿ ಮತ್ತೊಮ್ಮೆ ತನ್ನ ಸೈನ್ಯದೊಂದಿಗೆ ದಕ್ಷಿಣದ ಕಡೆ ದಂಡೆತ್ತಿ ಬಂದನು. ಈ ಸಂದರ್ಭದಲ್ಲೂ ಬಹುಮನಿ ಶಾಸಕನು ಗುಜರಾತಿ ಬಾದಶಹನ ಸಹಾಯ ಹಸ್ತವನ್ನು ಕೋರಿದನು. ಬಾದಶಹನು ಇವನ ಕೋರಿಕೆಯನ್ನು ಸ್ವೀಕರಿಸಿದನು. ಈ ಸಮಾಚಾರವನ್ನು ಕೇಳಿದ ಸುಲ್ತಾನ್

ಖಿಲ್ಜಿಯು ಕೇವಲ ದೌಲತಾಬಾದಿನ ತನಕ ಬಂದು ಲೂಟಿಮಾಡಿಕೊಂಡು ತನ್ನ ರಾಜ್ಯಕ್ಕೆ ಹಿಂತಿರುಗಿದನು.

ಮಹಮೂದ್ ಗುಜರಾತಿಯ ಪತ್ರ ಮಹಮೂದ್ ಖಿಲ್ಜಿಯ ಹೆಸರಿನಲ್ಲಿ :

ಈ ಘಟನೆಯ ನಂತರ ಗುಜರಾತಿ ಬಾದಶಹನು ಬಹಮನಿ ಶಾಸಕನಿಂದ ಕೊಡಲ್ಪಟ್ಟ ಬಹುಮಾನಗಳನ್ನು, ಯುದ್ಧಕ್ಕೆ ಕೊಡಲ್ಪಟ್ಟ ಖರ್ಚುವೆಚ್ಚಗಳನ್ನು ಪಡೆದುಕೊಂಡು ತನ್ನ ದೇಶ ಗುಜರಾತಿನತ್ತ ಪ್ರಯಾಣ ಮಾಡಿದನು. ಅಲ್ಲಿಗೆ ಹೋಗಿ ಬಾದಶಹನು ಮಹಮೂದ್ ಖಿಲ್ಜಿಯ ಹೆಸರಿಗೊಂದು ಪತ್ರವನ್ನು ಬರೆದು ಕಳುಹಿಸಿದನು. ಪತ್ರದ ವಿಷಯ–"ಯಾವುದೇ ತಪ್ಪು ಮಾಡದ ಮುಸಲ್ಮಾನ ಶಾಸಕರ ರಾಜ್ಯಗಳನ್ನು ವಿನಾಶಗೊಳಿಸುವುದು, ಲೂಟಿ ಮಾಡುವುದು ಇಸ್ಲಾಂಧರ್ಮದ ನಿಯಮಗಳಿಗೆ ವಿರುದ್ಧವಾಗಿದೆ. ಇಸ್ಲಾಂ ಧರ್ಮ ಮತ್ತು ಬೌದ್ಧಿಕತೆಯನ್ನು ಕಡೆಗಣಿಸಿ ಯುದ್ಧ ಮೈದಾನದಿಂದ ಯುದ್ಧವಾಡದೆ ಓಡಿ ಹೋಗುವುದೂ ವೀರ ಲಕ್ಷಣ ಅಲ್ಲ.

ಮಹಮೂದ್ ಖಿಲ್ಜಿಯ ಉತ್ತರ :

ಬಾದಶಹ ಗುಜರಾತಿಯ ಪತ್ರಕ್ಕೆ ಉತ್ತರವಾಗಿ ಮಹಮೂದ್ ಖಿಲ್ಜಿಯು ಹೀಗೆ ಉತ್ತರಿಸಿದನು.– ಒಂದು ವೇಳೆ ತಾವು ಸಂಪೂರ್ಣ ದಕ್ಷಿಣ ದೇಶದ ರಾಜ್ಯಗಳಿಗೆ ಸಹಾಯವನ್ನು ಮಾಡಲು ಇಷ್ಟಪಡುವುದಾದರೆ ಇನ್ನು ಮುಂದೆ ನಾನು ದಕ್ಷಿಣ ರಾಜ್ಯಗಳಲ್ಲಿ ಸೈನಿಕ ಕಾರ್ಯಾಚರಣೆಯನ್ನು ಮಾಡುವುದಿಲ್ಲವೆಂದು ವಾಗ್ದಾನ ಮಾಡುತ್ತೇನೆ ಎಂದು ಬರೆದನು.

ಬಾವರ್ ಕೋಟೆ ಮತ್ತು ಬಂದರಿನ ಮೇಲೆ ಆಕ್ರಮಣ :

ಸುಲ್ತಾನ್ ಮಹಮೂದ್ ಗುಜರಾತಿಯು ಹಿಜರಿ ೮೭೯ರಲ್ಲಿ ಇದು ಗುಜರಾತ ಮತ್ತು ಮಾಳವ ದೇಶಗಳ ಮಧ್ಯ ಭಾಗದಲ್ಲಿರುವ ಬಾವರ್ ಕೋಟೆ ಮತ್ತು ಬಂದರಿನ ಮೇಲೆ ಆಕ್ರಮಣವನ್ನು ಮಾಡಿದನು. ಕೋಟೆಯ ಶಾಸಕನು ಒಂದು ಸಲ ಬಾದಶಹನ ಮೇಲೆ ಯುದ್ಧವನ್ನು ಮಾಡಿದನು. ಆದರೆ ಆತನಿಗೆ ಸೋಲುಂಟಾಯಿತು. ಕೊನೆಗೆ ಕೋಟೆಯ ಶಾಸಕನು ಯುದ್ಧವನ್ನು ನಿಲ್ಲಿಸಿ ಶಾಂತಿಯ ಮಾತುಕತೆಗೆ ಆಹ್ವಾನಿಸಿದನು. ಬಾದಶಹನು ಆತನ ತಪ್ಪುಗಳನ್ನು ಕ್ಷಮಿಸಿದನು. ಶಾಸಕನು ಕೋಟೆಯನ್ನು ಬಾದಶಹನಿಗೆ ಹಸ್ತಾಂತರಿಸಿದನು.

ಬಾವರ್ ಕೋಟೆಯ ಬಲಿಷ್ಠತೆ :

ಇಡೀ ಭಾರತದಲ್ಲಿ ಬಾವರ್ ಕೋಟೆಯ ಭದ್ರತೆ, ಬಲಿಷ್ಠತೆಗೆ ಬಹಳ ಹೆಸರುವಾಸಿಯಾಗಿದೆ. ಎತ್ತರದಲ್ಲಿ ಆಕಾಶವನ್ನು ಮುಟ್ಟುತ್ತದೆ ಎಂಬ ಕೀರ್ತಿ ಇದೆ.

ಕಟ್ಟಡದ ನಿರ್ಮಾಣ ಕಾರ್ಯದಲ್ಲಿ ಇದನ್ನು ಮೀರಿಸುವ ಶಕ್ತಿಶಾಲಿ ಕೋಟೆ ಮತ್ತಾವುದು ಭಾರತದಲ್ಲಿ ಇಲ್ಲವೆಂಬ ಪ್ರತೀತಿ ಇದೆ. ಸುಲ್ತಾನ್ ಮಹಮೂದ್ ಗುಜರಾತಿಯ ಆಕ್ರಮಣದ ಕಾರಣ ಈ ಕೋಟೆಯು ಮುಸಲ್ಮಾನರ ಆಳ್ವಿಕೆಗೆ ಸೇರಿತ್ತು. ಮಲಿಕ್ ದೋನ್‌ನ ರಾಜನು ಈ ಕೋಟೆಯ ವಿಚಾರದಲ್ಲಿ ಬಹಳ ಗರ್ವದಿಂದ ಹೇಳಿಕೊಳ್ಳುತ್ತಿದ್ದನು. ದೊಡ್ಡ ದೊಡ್ಡ ಬಲಶಾಲಿ ಸೈನ್ಯದ ಸುಲ್ತಾನರು ಈ ಕೋಟೆಯನ್ನು ಗೆಲ್ಲಲಾರರು ಎಂದು ಹೇಳಿಕೊಳ್ಳುತ್ತಿದ್ದನು. ಈ ಕೋಟೆಯಲ್ಲಿ ಆ ರಾಜನು ಪ್ರಸಿದ್ಧ ಕಳ್ಳರನ್ನು, ಲೂಟಿಕೋರರನ್ನು ರಕ್ಷಿಸಿಕೊಂಡು ಅಲ್ಲಲ್ಲಿ ಇವರನ್ನು ನೇಮಿಸುತ್ತಿದ್ದನು. ಈ ಕಳ್ಳರು ದಾರಿ ಹೋಕರನ್ನು ತಡೆದು ಅವರನ್ನು ಲೂಟಿ ಮಾಡಿ ಈ ಕೋಟೆಗೆ ಬಂದು ಅಡಗಿಕೊಳ್ಳುತ್ತಿದ್ದರು.

ಅಪಾರ ಸಂಪತ್ತಿನ ಕೈವಶ :

ಸುಲ್ತಾನ್ ಮಹಮೂದ್ ಗುಜರಾತಿಯು ಬಾವರ್ ಕೋಟೆಯನ್ನು ಗೆದ್ದು ಅದರೊಳಗೆ ಅಡಗಿಸಿದ್ದ ಅಪಾರ ಖಜಾನೆಗಳಲ್ಲಿದ್ದ ಸಂಪತ್ತನ್ನು ವಶಮಾಡಿಕೊಂಡನು. ರಾಜನಿಗೆ ಬುದ್ಧಿ ಹೇಳಿ ಮುಂದಿನ ದಿನಗಳಲ್ಲಿ ಜನರನ್ನು ಹಿಂಸಿಸಬಾರದೆಂದು ಹೇಳಿ ಅವನ ರಾಜ್ಯವನ್ನು ಅವನಿಗೆ ಬಿಟ್ಟು ಅಪಾರ ಸಂಪತ್ತಿನೊಂದಿಗೆ ಗುಜರಾತಿನ ಅಹಮದಾಬಾದಿಗೆ ಹಿಂತಿರುಗಿದನು. ರಾಜಧಾನಿಯನ್ನು ತಲುಪಿ ಜನೋಪಯೋಗಿ ಕಾರ್ಯಗಳಲ್ಲಿ ಮಗ್ನನಾದನು. ರಾಜಧಾನಿಯಲ್ಲಿ ಅನೇಕ ಭವ್ಯ ಕಟ್ಟಡಗಳನ್ನು ಕಟ್ಟಿಸಿ, ರಾಜಧಾನಿಯ ಜನಸಂಖ್ಯೆಯು ಹೆಚ್ಚಿಸಲು ಶ್ರಮಿಸಿದನು.

ಒಬ್ಬ ಸಿಲೇದಾರನ ಕೊಲೆ :

ಹಿಜರಿ ೮೭೦ರಲ್ಲಿ ಬಾದಶಹನು ಬೇಟೆಯಾಡಲು ಅಹಮದಾನಗರದತ್ತ ಹೊರಟನು. ದಾರಿಯಲ್ಲಿ ಬಹಾಉಲ್‌ಮುಲ್ಕ್ ಬಿನ್ ಅಲಿಫ್‌ಖಾನನು ಯಾವ ಅಪರಾಧವನ್ನು ಮಾಡದ ಒಬ್ಬ ಸಿಲೇದಾರನ ಕೊಲೆಯನ್ನು ಮಾಡಿ ಅಪರಾಧದ ಭಯದಿಂದ ಐದರ್ ಕೋಟೆಯತ್ತ ಓಡಿ ಹೋದನು. ಬಾದಶಹನಿಗೆ ಈ ವಿಚಾರವು ತಿಳಿಯಿತು. ಆತನು ಮಲಿಕ್‌ಹಾಜಿ ಮತ್ತು ಅಸದ್-ಉಲ್‌ಮುಲ್ಕ್‌ರಿಗೆ ಆತನನ್ನು ಹಿಂಬಾಲಿಸಿ ಹಿಡಿದು ತರಲು ನೇಮಿಸಿದನು. ಅವರಿಬ್ಬರೂ ಬಹಾಉಲ್‌ಮುಲ್ಕ್‌ನನ್ನು ಉಳಿಸಲು ಒಂದು ಉಪಾಯವನ್ನು ಮಾಡಿದರು. ಬಹಾಉಲ್‌ಮುಲ್ಕ್‌ನ ಇಬ್ಬರು ಸೇವಕರಿಗೆ ಅಪಾರ ಹಣವನ್ನು ಕೊಟ್ಟು ಆ ಕೊಲೆಯ ಅಪರಾಧಿಗಳು ನಾವುಗಳೆಂದು ಒಪ್ಪಿಕೊಳ್ಳುವಂತೆ ಮಾಡಿದರು.

ನಿರಪರಾಧಿಗಳಿಗೆ ಶಿಕ್ಷೆ :

ಆ ಅಮೀರರು ನಿರಪರಾಧಿ ಸೇವಕರಿಗೆ ತಪ್ಪು ದಾರಿಯನ್ನು ತಿಳಿಸಿದ್ದರು.

ಬಾದಶಹರು ಬಹಳ ದಯಾಳು ಆಗಿದ್ದಾರೆ. ನಿಮ್ಮನ್ನು ಹೆಚ್ಚಿಗೆ ಏನನ್ನು ವಿಚಾರಿಸದೇ ಕ್ಷಮಿಸಿ ಬಿಡುತ್ತಾರೆಂದು ಹೇಳಿದ್ದರು. ಅಮೀರರಿಬ್ಬರೂ ನಾವೂ ನಿಮಗೆ ಸಿಫಾರಸ್ಸು ಮಾಡಿ ಬಿಡಿಸಿ ಬಿಡುತ್ತೇವೆಂದು ಹೇಳಿದ್ದರು. ಈ ಕಾರಣದಿಂದಾಗಿ ನಿರಪರಾಧಿ ಸೇವಕರು ಅಮೀರರು ಹೇಳಿಕೊಟ್ಟಂತೆ ಒಪ್ಪಿಕೊಂಡರು. ಬಾದಶಹನು ಕೊಲೆಗೆ ತಕ್ಕ ಶಿಕ್ಷೆ ಏನೆಂದರೆ ಅವರನ್ನೂ ಕೊಲ್ಲಿಸಬೇಕೆಂದು ಆಜ್ಞೆಮಾಡಿ ಅವರನ್ನು ಕೊಲ್ಲಲಾಯಿತು.

ಇಮಾಸದುಲ್‌ಮುಲ್ಕ್ ಮತ್ತು ಬಹಾಉಲ್‌ಮುಲ್ಕ್‌ರ ಕೊಲೆ :

ಬೇಟೆಯಾಡಿದ ನಂತರ ಬಾದಶಹನು ತನ್ನ ದೇಶಕ್ಕೆ ವಾಪಸ್ಸಾದ ನಂತರ ಸಿಲೇದಾರನ ನೈಜ ಕೊಲೆಗಡುಕರು ಯಾರು ಎಂಬುದು ತಿಳಿಯಿತು. ಈ ವಿಚಾರದಿಂದ ಸುಲ್ತಾನನು ಬಹಳ ಕೋಪಗೊಂಡನು. ಸುಲ್ತಾನ ಮಹಮೂದ್ ಗುಜರಾತಿಯು

ಸ್ವಪ್ನದಲ್ಲಿ ಹಜ್ರತ್ ಮಹಮ್ಮದ್ ಪೈಗಂಬರರ ದರ್ಶನ :

ಹಿಜರಿ ಶಕೆ ೮೭೨ರಲ್ಲಿ ಒಂದು ರಾತ್ರಿಯ ಸ್ವಪ್ನದಲ್ಲಿ ಹಜ್ರತ್ ಮಹಮ್ಮದ ಪೈಗಂಬರರ ಸೇವೆಯಲ್ಲಿ ನಿರತನಾದಂತೆ ಕಂಡಿತು. ಹಜ್ರತ್ ಮಹಮ್ಮದ ಪೈಗಂಬರರು ಬಾದಶಹನಿಗೆ ಎರಡು ತಟ್ಟೆ ತುಂಬ ಬೆಲಬಾಳುವ ವಸ್ತುಗಳನ್ನು ಕರುಣಿಸಿದಂತಾಯಿತು. ಬಾದಶಹನು ನಿದ್ದೆಯಿಂದೆದ್ದು ತನ್ನ ಅಮೀರರಿಗೆ ಸ್ವಪ್ನವನ್ನು ವಿವರಿಸಿದನು. ಅದರ ಫಲ ಹೀಗೆ ನಿರ್ಣಯಿಸಿದರು. ಬಹಳ ಬೇಗ ಬಾದಶಹರಿಗೆ ಎರಡು ಶ್ರೇಷ್ಠ ಪ್ರಸಾದಗಳು ದೊರೆಯುವವು ಎಂದು ನಿರ್ಣಯಿಸಿದರು. ಹಾಗೆಯೇ ಆಯಿತು. ಬಾದಶಹನಿಗೆ 'ದೋನ್ ಮತ್ತು ಕರ್ನಾಲ್' ಕೋಟೆಗಳ ಮೇಲೆ ಗೆಲುವು ಸಿಕ್ಕಿತು.

ಕರ್ನಾಲ್ ಕೋಟೆ :

ಕರ್ನಾಲ್ ಕೋಟೆಯು ಒಂದು ಬೆಟ್ಟದ ಮೇಲೆ ನಿರ್ಮಾಣಗೊಂಡಿತ್ತು. ಅದು ಬಹಳ ಎತ್ತರದಲ್ಲಿತ್ತು. ದೆಹಲಿಯ ಎಲ್ಲ ಬಾದಶಹರುಗಳು ಹಾಗೂ ಹಿಂದೂಸ್ಥಾನದ ಎಲ್ಲ ರಾಜರುಗಳು ಆ ಕೋಟೆಯನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿದ್ದರು. ಯಾರಿಗೂ ಸಫಲತೆಯು ಸಿಕ್ಕಿರಲಿಲ್ಲ. ಅಲ್ಲಾಹನು ತನ್ನ ಕೃಪೆಯನ್ನು ಸುಲ್ತಾನ್ ಮಹಮೂದ್‌ಶಾಹ್ ಗುಜರಾತಿಯವನ ಮೇಲೆ ತೋರಿದ್ದನು. ಆತನೊಬ್ಬನು ಮಾತ್ರ ಈ ಕೋಟೆಯನ್ನು ಗೆದ್ದು ಸಫಲತೆಯನ್ನು ಕಂಡಿದ್ದನು.

ಅರಮನೆಯಂತಹ ನೋಟ :

ಯಾವ ಬೆಟ್ಟದ ಮೇಲೆ ಕರ್ನಾಲ ಕೋಟೆಯು ಸ್ಥಿತವಾಗಿದೆಯೋ ಆ ಬೆಟ್ಟದ ಸುತ್ತಮುತ್ತಲು ಇನ್ನೂ ಅನೇಕ ಬೆಟ್ಟಗಳಿವೆ. ಅವೆಲ್ಲ ಕೋಟೆಗಳನ್ನು ಸ್ವಾಭಾವಿಕ ಕೋಟೆಗಳಂತೆಯೇ ರಕ್ಷಿಸಿ ಒಂದು ಬೃಹತ್ ಅರಮನೆಯಂತೆ ಸುಂದರವಾಗಿ ಕಂಡವು.

೧೨ ಬೆಟ್ಟಗಳಲ್ಲಿ ಅಸಂಖ್ಯಾತ ಕಣಿವೆಗಳಿವೆ. ಪ್ರತಿಯೊಂದು ಕಣಿವೆಯೂ ಒಂದಲ್ಲ ಒಂದು ಹೆಸರಿನಿಂದ ಕರೆಯಲ್ಪಡುತ್ತವೆ. ಆ ಕಣಿವೆಗಳಲ್ಲಿ ಒಂದರ ಹೆಸರು. "ದರ್‍ರ–ಎ–ಮೋಜರಿ" ಎಂದಿದೆ. ಅದರ ಮುಂದೆಯೇ ಆ ಮಹತ್ತರವಾದ ಸುಭದ್ರ ಕೋಟೆಯು ಕಟ್ಟಲ್ಪಟ್ಟಿದೆ. ಅದಕ್ಕೆ ಇಂದಿನ ದಿನಗಳಲ್ಲಿ ಇತಿಹಾಸ ಪ್ರಸಿದ್ಧ 'ಜುನಾಗಢ' ಎಂದು ಕರೆಯುವರು. ಅಲ್ಲಿಯೇ ಮತ್ತೊಂದು ಕಣಿವೆಯೂ ಇದೆ. ಅದಕ್ಕೆ "ದರ್‍ರ–ಎ–ಮಹಾಬಲ" ಎನ್ನುತ್ತಾರೆ. ಈ ದೇಶವನ್ನು ರಾಜ ಮಂದಲಕ್ ಮತ್ತು ಅವರ ಪೂರ್ವಜರು ಆಳುತ್ತಿದ್ದರು. ಸುಲ್ತಾನ್ ಮಹಮ್ಮದ ತುಘಲಕನು ಮತ್ತು ಸುಲ್ತಾನ್ ಮಹಮ್ಮದಶಾಹ ಗುಜರಾತಿಗಳು ಮಾತ್ರ ಸೈನಿಕ ಕಾರ್ಯಾಚರಣೆಯನ್ನು ನಡೆಸಿದವರಲ್ಲಿ ಪ್ರಥಮರಾಗಿದ್ದರು.

ಕರ್ನಾಲ್ ಕೋಟೆಯ ಮೇಲೆ ಸೈನಿಕ ಆಚರಣೆ :

ಸುಲ್ತಾನ್ ಮಹಮೂದ್‌ಶಾಹನು ಅಲ್ಲಾಹನ ಮೇಲೆ ಭರವಸೆ ಮತ್ತು ಹಜ್ರತ್ ಪೈಗಂಬರರ ಪ್ರಸಾದದ ಮೇಲೆ ತೃಪ್ತಿಪಟ್ಟು ಕರ್ನಾಲ್‌ದತ್ತ ದಂಡೆತ್ತಿ ಹೊರಟನು. ಕರ್ನಾಲ್ ಕೋಟೆಯನ್ನು ತಲುಪಲು ಇನ್ನು ೪೦ ಮೈಲಿ ದೂರವಿದ್ದಂತೆಯೇ ಬಾದಶಹನ ಚಿಕ್ಕಪ್ಪನ ಸಲಹೆಯ ಪ್ರಕಾರ ಆತನ ಸೈನ್ಯದ ೧೭೦೦ ಜನ ಸಿಪಾಯಿಗಳನ್ನೂ ನೇಮಿಸಿಕೊಂಡನು. ಅಂತೆಯೇ ಅರಬೀ, ಇರಾಕೀ ಮತ್ತು ತುರ್ಕೀ ಕುದುರೆ ಸವಾರರೊಂದಿಗೆ ಬಾದಶಹನು ಮಹಾಬಲ ಕಣಿವೆಗೆ ತಲುಪಿದನು.

ಮಹಾಬಲ ಕಣಿವೆಯಲ್ಲಿ ಪ್ರವೇಶ :

ರಾಜಪೂತರ ಒಂದು ಗುಂಪು; ಬಿರಾದರಾನ್, ಹೆಸರಿನಿಂದ ಕರೆಯಲ್ಪಡುತ್ತಿತ್ತು. ಈ ಗುಂಪು ಆ ಕಣಿವೆಯನ್ನು ರಕ್ಷಿಸುತ್ತಿತ್ತು. ಅವರು ಬಾದಶಹನನನ್ನು ಎದುರಿಸಿ ನಿಂತರು. ಅವರಿಗೆ ಈ ಆಕ್ರಮಣದ ಸುದ್ದಿ ತಿಳಿದಿರಲಿಲ್ಲ. ಆದರೂ ವೀರಾವೇಶದಿಂದ ಬಾದಶಹನ ಆಕ್ರಮಣವನ್ನು ತಡೆದರು. ರಾಜಪೂತರು ಸುಲ್ತಾನ್ ಮಹಮೂದ್‌ನ ಸೈನ್ಯದೊಡನೆ ಬಹಳವಾಗಿ ಹೋರಾಡಿದರು. ಆದರೆ ರಾಜಪೂತರು ಯುದ್ಧಕ್ಕೆ ಸಿದ್ಧರಿರಲಿಲ್ಲದ್ದರಿಂದ ಗುಜರಾತಿಗಳಿಗೆ ಮಹಾಬಲ ಕಣಿವೆಯನ್ನು ಬಿಟ್ಟುಕೊಡಬೇಕಾಯಿತು.

ರಾಜ ಕರ್ನಾಲನೊಂದಿಗೆ ಯುದ್ಧ :

ಬಾದಶಹನು ಮಹಾಬಲ ಕಣಿವೆಯನ್ನು ವಶಪಡಿಸಿಕೊಂಡನೆಂಬ ಸುದ್ದಿಯನ್ನು ತಿಳಿದ ಕೂಡಲೇ ರಾಜನು ತನ್ನ ಸೈನ್ಯದೊಂದಿಗೆ ಬೇಟೆಯಾಡುವ ನೆಪದಲ್ಲಿ ಕೋಟೆಯಿಂದ ಕೆಳಗಿಳಿದನು. ಮಹಾಬಲ ಕಣಿವೆಯತ್ತ ಸಾಗಿದನು. ಮುಸಲ್ಮಾನ ಸೈನ್ಯ ಬಹಳ ಕಡಿಮೆ ಇದೆಯೆಂದು ತಿಳಿದ ರಾಜಪೂತರು ನಮ್ಮ ಗೆಲುವು ನಿಶ್ಚಿತವೆಂದು

ತಿಳಿದು ಯುದ್ಧವನ್ನು ಪ್ರಾರಂಭಿಸಿದರು. ಅವರ ಎಣಿಕೆ ತಪ್ಪಾಗಿತ್ತು. ಸ್ವಲ್ಪಕಾಲದಲ್ಲಿ ಮುಸಲ್ಮಾನರ ಸೈನ್ಯ ಹೆಚ್ಚಾಗತೊಡಗಿತು. ಇದರ ಪರಿಣಾಮವಾಗಿ ಅಸಂಖ್ಯಾತ ರಾಜಪೂತರು ಯುದ್ಧದಲ್ಲಿ ಮಡಿದರು.

ಮಂದಿರಗಳ ಸಂಪತ್ತಿನ ಮೇಲೆ ಆಕ್ರಮಣ :

ರಾಜ ಮಂದಲಕನ ಸ್ಥಿತಿ ತುಂಬಾ ಬಿಗಡಾಯಿಸಿತು. ಆತನು ಚಿಂತಾಕ್ರಾಂತನಾಗಿ ಕೋಟೆಯಲ್ಲಿ ಅಡಗಿಕೊಂಡನು. ಮುಸಲ್ಮಾನ ಸೈನಿಕರು ಮಹಾಬಲ ಕಣಿವೆಯಲ್ಲಿನ ಅನೇಕರನ್ನು ಸೆರೆಹಿಡಿದು ಅಲ್ಲಿಂದ ಕರ್ನಾಲ ಕೋಟೆಯ ದೇವಸ್ಥಾನಗಳತ್ತ ಹೊರಟರು. ಬ್ರಾಹ್ಮಣರು ಮತ್ತು ರಾಜಪೂತರು ಆ ಮಂದಿರದ ರಕ್ಷಕರಾಗಿದ್ದರು. ಅವರು ಮುಸಲ್ಮಾನರ ವಿರುದ್ಧ ಹೊರಾಡಿದರು. ಆದರೆ ಆ ಹೋರಾಟದಲ್ಲಿ ಮುಸಲ್ಮಾನರಿಗೆ ಗೆಲುವಾಯಿತು. ನಂತರ ದೇವಸ್ಥಾನಗಳಲ್ಲಿಟ್ಟಿದ್ದ ಎಲ್ಲ ಸಂಪತ್ತನ್ನೂ ಮುಸಲ್ಮಾನರು ದೋಚಿದರು.

ರಾಯ್ ಮಂದಲಕನನ್ನು ಬಾದಶಹನೆದುರು ಹಾಜರು :

ಸುಲ್ತಾನ್ ಮಹಮೂದ್‌ಶಾಹನು ಕರ್ನಾಲ್ ಕೋಟೆಯ ಸುತ್ತ ಮುತ್ತಲ ಪ್ರಾಂತ್ಯಗಳನ್ನು ಗೆಲ್ಲಲು ಇಚ್ಛಿಸಿದನು. ಆದರೆ ರಾಯ್ ಮಂದಲಕನು ಬಾದಶಹನೊಂದಿಗೆ ಸಂಧಿ ಮಾಡಿಕೊಂಡು ಶಾಂತಿಯನ್ನು ಸ್ಥಾಪಿಸಲು ಆಶಿಸಿದನು. ಬಾದಶಹನು ತುಂಬಾ ಯೋಚಿಸಿದನು. ಈಗ ನಮ್ಮ ಸೈನ್ಯ ಸಾಕಷ್ಟು ಸಂಪತ್ತನ್ನು ಸಂಗ್ರಹಿಸಿಕೊಂಡಿದೆ. ಇದಲ್ಲದೆ ಬೇಸಿಗೆ ಬಹಳ ಪ್ರಖರವಾಗಿ ಸೈನಿಕರಿಗೆ ತುಂಬಾ ಕಷ್ಟವಾಗಿರುವುದನ್ನು ಕಂಡು, ತನ್ನ ಆಕ್ರಮಣವನ್ನು ಇಷ್ಟಕ್ಕೆ ನಿಲ್ಲಿಸಿದನು. ಅಲ್ಲಿಂದ ತನ್ನ ಸೈನ್ಯದೊಂದಿಗೆ ಅಹಮದಾಬಾದಿನತ್ತ ಹಿಂತಿರುಗಿದನು.

ರಾಯ್ ಮಂದಲಕನ ಕೋಟೆಯ ಮೇಲೆ ಸೈನಿಕ ಆಕ್ರಮಣ :

ಸುಲ್ತಾನ್ ಮಹಮೂದ್‌ನು ಮಂದಲಕನ ಮೇಲೆ ಮತ್ತೊಮ್ಮೆ ಆಕ್ರಮಣವನ್ನು ಮಾಡಲು ನೆಪಗಳನ್ನು ಹುಡುಕುತ್ತಲಿದ್ದನು. ಹಿಜರಿ ಶಕೆ ೮೭೨ರಲ್ಲಿ ಆತನಿಗೆ ಸುದ್ದಿ ತಿಳಿದಿದ್ದು ಏನೆಂದರೆ – ರಾಜನು ತಾನು ಒಬ್ಬ ಸ್ವತಂತ್ರ ಚರ್ಕವರ್ತಿಯೆಂದು ತಿಳಿದಿರುವುದು. ಆತನು ಬಾದಶಹರುಗಳಂತೆ ತಲೆಯ ಮೇಲೆ ರತ್ನ ಖಚಿತ ಕೀರೀಟವನ್ನು ಧರಿಸುತ್ತಿದ್ದಾನೆ. ಸಿಂಹಾಸನದ ಮೇಲೆ ಕುಳಿತು ದರ್ಬಾರ ನಡೆಸುತ್ತಿದ್ದಾನೆ. ಬಾದಶಹರುಗಳು ಉಪಯೋಗಿಸುವಂತಹ ಬಿಳಿಛತ್ರಿ, ಚಾಮರ, ಕೆಂಪು ನಿಶಾನೆಗಳ ಪ್ರದರ್ಶನಗಳು ನಡೆಸುತ್ತಿರುವುದು ಇವೆಲ್ಲವು ಬಾದಶಹನು ಕೇಳಿ ಸಿಟ್ಟಿಗೆದ್ದನು. ಒಬ್ಬ ಸಾಮಂತ ಕೋಟೆಯ ಶಾಸಕನಿಗೆ ಇಷ್ಟೊಂದು ವೈಭವವು ಹೇಗೆ ಸಾಧ್ಯ ಎಂಬ ಪ್ರಶ್ನೆ ಬಾದಶಹನನ್ನು ಕಾಡತೊಡಗಿತು. ಬಾದಶಹನು ತಕ್ಷಣ ೪೦,೦೦೦ (ನಲವತ್ತು ಸಾವಿರ) ಸಿಪಾಯಿಗಳಿದ್ದ ಒಂದು ಸೈನ್ಯವನ್ನು ಮಂದಲಕ ರಾಜನತ್ತ ಕಳುಹಿಸಿದನು.

ರಾಜನು ಬಾದಶಹರು ಉಪಯೋಗಿಸುವ ವೈಭವಪೂರ್ಣ ಸಲಕರಣೆಗಳಂತಹ ರತ್ನ ಖಚಿತ ಕಿರೀಟ ಸಿಂಹಾಸನ ಮುಂತಾದವುಗಳನ್ನು ನಮ್ಮ ವಶಕ್ಕೆ ಒಪ್ಪಿಸಿದರೆ ಯುದ್ಧ ಮಾಡುವುದು ಬೇಡವೆಂದೂ, ಕೊಡದಿದ್ದರೆ ಯುದ್ಧ ಅನಿವಾರ್ಯವೆಂದು ಆಜ್ಞಾಪಿಸಿ ಕಳುಹಿಸಿದನು.

ರಾಜನ ಶಾಂತಿ ಪ್ರಸ್ತಾಪ :

ರಾಜನಿಗೆ ಮುಸಲ್ಮಾನರ ಬೃಹತ್ ಪ್ರಮಾಣದ ಸೈನ್ಯದ ಆಗಮನವನ್ನು ತಿಳಿದು ಚಿಂತೆಯಾಯಿತು. ಆತನಲ್ಲಿ ಅಷ್ಟು ದೊಡ್ಡ ಸೈನ್ಯವನ್ನು ಎದುರಿಸುವ ಶಕ್ತಿ ಇರಲಿಲ್ಲ. ಆದ್ದರಿಂದ ಆತನು ಬಾದಶಹನ ಸೈನ್ಯದೆದುರು ಶಾಂತಿಪ್ರಸ್ತಾಪವನ್ನು ಮುಂದು ಮಾಡಿದನು. ಬಾದಶಹನ ಅಧೀನತೆಯನ್ನು ಸ್ವೀಕರಿಸಲು ಒಪ್ಪಿಕೊಂಡು ಮರು ಮಾತನಾಡದೆ ಬಾದಶಹನ ಬೇಡಿಕೆಗಳನ್ನು ಇಡೇರಿಸಲು ಒಪ್ಪಿದನು. ಅದರಂತೆ ರತ್ನ ಖಚಿತ ಕಿರೀಟ, ಬಿರುದು ಬಾವಲಿಗಳು, ಛತ್ರ-ಚಾಮರಗಳು, ನಿಶಾನೆಗಳೆಲ್ಲವನ್ನು ಸೈನಿಕರಿಗೆ ಒಪ್ಪಿಸಿ ತನ್ನ ಪ್ರಾಣ ಮಾನಗಳನ್ನು ಉಳಿಸಿಕೊಂಡನು. ನಿಜಾಮುದ್ದೀನ ಅಹಮದ ಎಂಬ ಇತಿಹಾಸ ಲೇಖಕನು ಹೀಗೆ ಬರೆದುಕೊಂಡಿದ್ದಾನೆ. ಬಾದಶಹನು ಮಂದಲಕ ರಾಜನಿಂದ ಪಡೆದುಕೊಂಡಿದ್ದ ಎಲ್ಲ ಸಂಪತ್ತನ್ನು ಒಂದು ಸಂತೋಷ ಸಮಾರಂಭವನ್ನೇರ್ಪಡಿಸಿ ತನ್ನ ರಾಜಧಾನಿಯ ಎಲ್ಲ ಪ್ರಜೆಗಳಲ್ಲೂ ಹಂಚಿ ಸಂತೋಷಿಸಿದನೆಂದು ತಿಳಿದುಬರುತ್ತದೆ.

ತನ್ನ ರಾಜ್ಯದ ಬೆಳವಣಿಗೆ :

ತಾನು ಲೂಟಿ ಮಾಡಿ ತಂದ ಸಂಪತ್ತನ್ನು ತನ್ನ ರಾಜ್ಯದ ಪ್ರಜೆಗಳಿಗೆ ಉದಾರವಾಗಿ ಹಂಚುತ್ತಿದ್ದುದರ ಪರಿಣಾಮವೆಂದರೆ- ಎಲ್ಲರೂ ಸುಖವಾಗಿ, ಶಾಂತಿಯಿಂದ ಬಾಳುತ್ತಿದ್ದರು. ಇದನ್ನು ನೋಡಲು ಹಿಜರಿ ೮೭೩ರಲ್ಲಿ ಒಮ್ಮೆ ಬೇಟೆಯ ನೆಪದಲ್ಲಿ ರಾಜ್ಯದೊಳಗೆ ಪ್ರವಾಸವನ್ನು ಕೈಗೊಂಡನು. ಅನೇಕ ನಗರಗಳ ಸಂದರ್ಶನವನ್ನು ಮಾಡಿದನು. ವಿಶೇಷವಾಗಿ ಬಾದಶಹನು ತನ್ನ ಆಡಳಿತಾಧಿಕಾರಿಗಳಿಗೆ ಆದೇಶಿಸಿದ್ದೇನೆಂದರೆ-ನನ್ನ ರಾಜ್ಯದ ಯಾವ ಹಳ್ಳಿ, ನಗರಗಳೂ ಖಾಲಿಯಾಗಬಾರದು. ಎಲ್ಲ ಸುಖದಿಂದ ಬಾಳುತ್ತಿರುವಂತೆ ನೋಡಿಕೊಳ್ಳಲು ಆಜ್ಞಾಪಿಸಿದನು. ಈ ಕಾರಣದಿಂದಾಗಿ ಸಂಪೂರ್ಣ ರಾಜ್ಯ ಸುಖದಿಂದ ತುಂಬಿ ತುಳುಕುತ್ತಿತ್ತು.

ಒಂದು ಆನೆಯ ಹುಚ್ಚಾಟ :

ಹಿಜರಿ ೮೭೪ರಲ್ಲಿ ಒಂದು ಘಟನೆಯು ನಡೆಯಿತು. ಸುಲ್ತಾನ್ ಮಹಮೂದ್‌ಶಾಹನು ಒಂದು ಆನೆಯ ಮೇಲೇರಿ ಒಂದು ಸುಂದರ ತೋಟದತ್ತ ನಡೆದಿದ್ದನು. ದಾರಿಯಲ್ಲಿ ಮತ್ತೊಂದು ಆನೆಗೆ ಮದವೇರಿ, ಸಂಕೋಲೆಗಳಿಂದ ಬಿಡಿಸಿಕೊಂಡು ಓಡಿ ಬಂದಿತು.

ಇದನ್ನು ನೋಡಿದ ಇತರೆ ಆನೆಗಳು ಸರಪಳಿಗಳನ್ನು ಕಿತ್ತು ಓಡತೊಡಗಿದವು. ಮದವೇರಿದ ಆನೆಯು ಬಾದಶಹನ ಆನೆಯ ಮುಂಭಾಗಕ್ಕೆ ಬಂದು ಎರಡು-ಮೂರು ಸಲ ಡಿಕ್ಕಿ ಹೊಡೆಯಿತು. ಇದರಿಂದ ಬಾದಶಹನ ಆನೆಯು ಬೆದರಿ ಓಡಲಾರಂಭಿಸಿತು. ಮದವೇರಿದ ಗಜವು ಬಾದಶಹನ ಆನೆಯನ್ನು ಹಿಂಬಾಲಿಸಿ ಮತ್ತೊಂದು ಸಲ ಡಿಕ್ಕಿ ಹೊಡೆಯಿತು. ಈ ಸಲದ ಡಿಕ್ಕಿಯಲ್ಲಿ ಬಾದಶಹನ ಕಾಲಿನಲ್ಲಿ ರಕ್ತ ಸುರಿಯಲಾರಂಭಿಸಿತು.

ಬಾದಶಹನ ಶೌರ್ಯ :

ಬಾದಶಹನು ತನಗಾದ ಗಾಯವನ್ನು ಲೆಕ್ಕಿಸದೆ ತನ್ನ ಸ್ವಾಭಾವಿಕ ಶೌರ್ಯದಿಂದ ಆನೆಯ ಹಣೆಯ ಮೇಲೆ ತನ್ನ ಕತ್ತಿಯಿಂದ ಹೊಡೆದನು. ಇದರಿಂದಾಗಿ ಆನೆ ಗಾಯಗೊಂಡಿತು. ಗಾಯದಿಂದಾಗಿ ಮತ್ತೊಂದು ಡಿಕ್ಕಿ ಹೊಡೆಯಿತು. ಎರಡನೇ ಸಲವು ಬಾದಶಹನು ಅದರ ಹಣೆಯ ಮೇಲೆ ಕತ್ತಿಯಿಂದ ತಿವಿದನು. ಆನೆ ಬೆದರದೆ ಮೂರನೇ ಸಲವೂ ಬಾದಶಹನ ಆನೆಗೆ ಡಿಕ್ಕಿ ಹೊಡೆಯಿತು. ಈ ಸಲ ಬಾದಶಹನು ಆನೆಯ ಮೇಲೆ ಬಲವಾಗಿ ಕತ್ತಿಯಿಂದ ಹೊಡೆದನು. ಈ ಏಟಿನಿಂದಾಗಿ ಆನೆಯು ಅಲ್ಲಿಂದ ಓಡ ತೊಡಗಿತು. ಬಾದಶಹನು ತನ್ನ ಪ್ರಾಣ ಉಳಿಯಿತೆಂದು ಅಲ್ಲಾಹನ ಕೃಪೆಗೆ ಪ್ರಾರ್ಥನೆಯನ್ನು ಸಲ್ಲಿಸಿದನು. ದಾನ-ಧರ್ಮಗಳನ್ನು ಮಾಡಿದನು.

ಕರ್ನಾಲ ಮತ್ತು ಜುನಾಗಡದ ಆಕ್ರಮಣಕ್ಕೆ ಸಿದ್ಧತೆಗಳು :

ಈ ಘಟನೆಯ ನಂತರ ಬಾದಶಹನು ತನ್ನ ಅಮೀರರೆಲ್ಲರನ್ನು ಸಭೆ ಸೇರಿಸಿ, ಅವರನ್ನು ಕರ್ನಾಲ್ ಮತ್ತು ಜುನಾಗಡದ ಕೋಟೆಗಳನ್ನು ಗೆದ್ದು ವಶಪಡಿಸಿಕೊಳ್ಳಲು ಆದೇಶಿಸಿದನು. ಈ ಉದ್ದೇಶಕ್ಕಾಗಿ ಬಾದಶಹನು ಒಂದು ದಿನ ಮತ್ತು ಒಂದು ರಾತ್ರಿಯೊಳಗಾಗಿ ಒಂದು ಕೋಟಿ ಚಿನ್ನದ ರೂಪಾಯಿಗಳನ್ನು ಸೈನಿಕರಿಗೆ ಹಂಚಿದನು. ಇದಲ್ಲದೆ (೨೫೦೦) ಎರಡುವರೆ ಸಾವಿರ ಅರಬ್ಬಿ ಕುದುರೆಗಳನ್ನು ಸಿಪಾಯಿಗಳಿಗೆ ವಿತರಿಸಿದನು. (೫೦೦೦) ಐದು ಸಾವಿರ ಕತ್ತಿಗಳು, (೭೦೦) ಏಳುನೂರು ಸೊಂಟಪಟ್ಟಿಗಳು, (೧೭೦೦) ಸಾವಿರದ ಏಳುನೂರು ಚಿನ್ನದ ಹಿಡಿಗಳುಳ್ಳ ಚಾಕುಗಳೂ ವಿತರಿಸಲ್ಪಟ್ಟವು.

ರಾಯ್ ಮಂದಲಕನ ಪ್ರಾರ್ಥನೆ :

ಮೇಲೆ ಹೇಳಿದ ಎಲ್ಲ ಸಲಕರಣೆಗಳನ್ನು ವಿತರಿಸಿದ ನಂತರ ಬಾದಶಹನು ಪ್ರಯಾಣವನ್ನು ಬೆಳೆಸಿದನು. ಅನೇಕ ಮಜಲುಗಳನ್ನು ಪಾರು ಮಾಡುತ್ತಾ ಕರ್ನಾಲ ಹತ್ತಿರದ ಸೂರತ್ ನಗರದ ಹತ್ತಿರ ತಲುಪಿದನು. ಈ ಸಮಾಚಾರವನ್ನು ತಿಳಿದ ರಾಯ್ ಮಂದಲಕನು ಬಾದಶಹನನ್ನು ಕುರಿತು-ನಾನು ನನ್ನ ಜೀವಮಾನವೆಲ್ಲವನ್ನೂ

ಬಾದಶಹರ ಅಧೀನದಲ್ಲಿದ್ದು ತಮ್ಮ ಆಜ್ಞಾಪಾಲಕನಾಗಿ ವರ್ತಿಸಿದ್ದೇನೆ. ತಮ್ಮ ಇಷ್ಟಕ್ಕೆ ವಿರುದ್ಧವಾಗಿ ಎಂದೂ ನಡೆದುಕೊಂಡಿಲ್ಲ. ಈಗಲೂ ತಾವು ಏನನ್ನು ಇಷ್ಟಪಡುವಿರೋ ಅದನ್ನು ತಮ್ಮ ಸೇವೆಯಲ್ಲಿ ಅರ್ಪಿಸಲು ಸಿದ್ಧನಿದ್ದೇನೆ. ತಾವು ದಯಮಾಡಿ ತಿಳಿಸಬೇಕೆಂದು ಪ್ರಾರ್ಥಿಸುತ್ತೇನೆ.

ರಾಯ್ ಮಂದಲಕನು ಜುನಾಗಡ ಕೋಟೆಯಲ್ಲಿ :

ಬಾದಶಹನು ಆತನ ಪ್ರಾರ್ಥನೆಗೆ ಹೀಗೆ ಉತ್ತರಿಸಿದನು. ಈಗ ನನಗೆ ನಿನ್ನಿಂದ ಯಾವ ಸಂಪತ್ತು ಬೇಡ. ನಾನು ಈ ಪ್ರದೇಶದಲ್ಲಿ ಗೆಲುವನ್ನು ಸಾಧಿಸಿ ಇಸ್ಲಾಂ ಧರ್ಮವನ್ನು ಪ್ರಚಾರ ಮಾಡಬೇಕೆಂದಿದ್ದೇನೆ ಎಂದನು. ಈ ಉತ್ತರವನ್ನು ಪಡೆದ ರಾಜನು ಮುಸಲ್ಮಾನರ ಸೈನ್ಯದ ಆಧಿಕ್ಯವನ್ನು ಕಂಡು ಯುದ್ಧದ ವಿಚಾರವನ್ನು ಕೈಬಿಟ್ಟನು. ರಾತ್ರೋ ರಾತ್ರಿ ಮಂದಲಕ ಅಲ್ಲಿಂದ ಓಡಹತ್ತಿದನು. ದಾರಿಯಲ್ಲೇ ಸಿಕ್ಕಿದ ಜುನಾಗಡ ಕೋಟೆಯಲ್ಲಿ ಅವಿತುಕೊಂಡನು.

ರಾಜಪೂತರೊಂದಿಗೆ ಯುದ್ಧಗಳು :

ಮಾರನೇ ದಿನವೇ ಅಲ್ಲಿಂದ ಪ್ರಯಾಣವನ್ನು ಬೆಳೆಸಿದ ಬಾದಶಹನು ಜುನಾಗಡ ಪ್ರದೇಶದ ಸುತ್ತಮುತ್ತಲ ಪ್ರಾಂತ್ಯಗಳಲ್ಲಿ ಬೀಡು ಬಿಟ್ಟನು. ಬಾದಶಹನು ತನ್ನ ಸೈನ್ಯದ ಒಂದು ಭಾಗವನ್ನು ಜುನಾಗಡ ಕೋಟೆಯನ್ನು ಮುತ್ತಲು ಕಳುಹಿಸಿದನು. ರಾಜಪೂತರು ಕೋಟೆಯಿಂದ ಹೊರ ಬಂದು ಮುಸಲ್ಮಾನರೊಂದಿಗೆ ಕಾದಾಡಿದರು. ಆದರೆ ಯುದ್ಧದಲ್ಲಿ ಸೋತು ಕೋಟೆಯ ಒಳಗೆ ಸೇರಿಕೊಂಡರು. ಮಾರನೇ ದಿನವೂ ಯುದ್ಧವು ಪ್ರಾರಂಭವಾಯಿತು. ಅದರಲ್ಲೂ ರಾಜಪೂತರಿಗೆ ಸೋಲುಂಟಾಯಿತು.

ಕೋಟೆಯನ್ನು ವಶಪಡಿಸುವ ಯತ್ನದಲ್ಲಿ :

ಮೂರನೇ ದಿನದಲ್ಲಿ ಸ್ವತಃ ಬಾದಶಹನೇ ಬೆಳಗಿನಿಂದ ಸಾಯಂಕಾಲದವರೆಗೂ ಯುದ್ಧ ಮಾಡಿ ಕೋಟೆಯನ್ನು ವಶಪಡಿಸಿಕೊಳ್ಳುವ ಪ್ರಯತ್ನವನ್ನು ಮಾಡಿದನು. ನಾಲ್ಕನೇ ದಿನ ಕೋಟೆಯ ಸಮೀಪಕ್ಕೆ ತಲುಪಿ ವಶಪಡಿಸಿಕೊಳ್ಳುವ ಎಲ್ಲ ಸಾಮಾನುಗಳನ್ನು ಸಿದ್ಧಪಡಿಸಿಕೊಂಡರು. ರಾಜಪೂತರು ಮುಸಲ್ಮಾನರೊಡನೆ ಯುದ್ಧ ಮಾಡಲು ಒಳಗಿನಿಂದ ಅನೇಕ ಸಲ ಹೊರಬಂದು ಕಾದಾಡುತ್ತಿದ್ದರು. ಮತ್ತೆ ಒಳಗೆ ಸೇರಿ ಬಿಡುತ್ತಿದ್ದರು. ಒಂದು ದಿನದ ಯುದ್ಧದಲ್ಲಿ ರಾಜಪೂತರೆಲ್ಲರೂ ಒಟ್ಟಾಗಿ ಆಲಂಖಾನನ ಸೈನ್ಯವಿದ್ದೆಡೆಗೆ ನುಗ್ಗಿ ಆಲಂಖಾನ್ ಫಾರೂಖಿಯನ್ನು ಕೊಂದುಬಿಟ್ಟರು.

ಜುನಾಗಡ ಕೋಟೆಯ ಗೆಲುವು :

ಈ ಮುತ್ತಿಗೆ ಆ ವರ್ಷದ ಕೊನೆಯವರೆಗೂ ಮುಂದುವರಿಯಿತು. ಈ

ಕಾರಣದಿಂದಾಗಿ ರಾಯ್ ಮಂದಲಕನು ಬಹಳ ಚಿಂತಾಕ್ರಾಂತನಾದನು. ಕಷ್ಟಗಳಿಂದ ವಿವಶನಾದ ರಾಜ ಮಂದಲಕನು ವಿನೀತನಾಗಿ ಬಾದಶಹನೊಂದಿಗೆ ಸಂಧಿ ಮಾಡಿಕೊಳ್ಳಲು ಪ್ರಯತ್ನಿಸಿದನು. ಬಾದಶಹನು ಸಂಧಿ ಮಾಡಿಕೊಳ್ಳಲು ಒಪ್ಪಲಿಲ್ಲ. ಹಿಜರಿ ೮೭೫ರ ಪ್ರಾರಂಭದಲ್ಲಿ ರಾಜನು ಬಾದಶಹನಿಂದ ಶಾಂತಿ ಪಾಲನೆಯನ್ನು ಬಯಸಿ ಜುನಾಗಡ ಕೋಟೆಯನ್ನು ಬಾದಶಹನ ಸುಪರ್ದಿದಿಗೆ ವಹಿಸಿ ಕರ್ನಾಲ್ ಕೋಟೆಯಲ್ಲಿ ಸೇರಿಕೊಂಡನು.

ಬಾದಶಹನ ಆಸೆ ಕರ್ನಾಲಿನ ಮೇಲೆ :

ಈ ಯುದ್ಧದ ನಂತರ ರಾಜಪೂತರು ಬಾದಶಹನ ಸೈನ್ಯಕ್ಕೆ ಬೇರೆ ಬೇರೆ ರೀತಿಯಲ್ಲಿ ತೊಂದರೆಗಳನ್ನು ಕೊಡಲು ಪ್ರಾರಂಭಿಸಿದರು. ಕಳ್ಳತನ, ಡಕಾಯಿತತನದಲ್ಲಿ ಮುಂದಾದರು. ಈ ರೀತಿಯ ಚಟುವಟಿಕೆಗಳನ್ನು ಕಂಡ ಬಾದಶಹನು ಕೋಪಗೊಂಡನು. ಬಾದಶಹನು ಒಂದು ಭಾಗದಷ್ಟು ಸೈನ್ಯವನ್ನು ಜುನಾಗಡದ ವ್ಯವಸ್ಥೆಗೆ ಬಿಟ್ಟು, ಉಳಿದ ಸೈನ್ಯದೊಡನೆ ಕರ್ನಾಲಿನತ್ತ ಸಾಗಿದನು.

ಕರ್ನಾಲ್ ಕೋಟೆಯ ಕೈವಶ :

ಕರ್ನಾಲ್ ತಲುಪಿದ ತಕ್ಷಣ ಬಾದಶಹನು ಯುದ್ಧವನ್ನು ಪ್ರಾರಂಭಿಸಿದನು. ಈ ಸಲವೂ ರಾಜ ಮಂದಲಕನು ತೊಂದರೆಗಳಿಗೀಡಾಗಿ, ಕರ್ನಾಲ್ ಕೋಟೆಯನ್ನು ಬಾದಶಹನಿಗೆ ಒಪ್ಪಿಸಿ ಬಿಟ್ಟನು. ಇದರ ಇತಿಹಾಸವನ್ನು ಸಂಕ್ಷಿಪ್ತವಾಗಿ ಹೇಳುವುದಾದರೆ ಈ ಕೋಟೆಯು ೧೦೦೯ ಒಂದು ಸಾವಿರದ ಒಂಬತ್ತು ವರ್ಷಗಳ ದೀರ್ಘ ಕಾಲದಿಂದ ಮಂದಲಕನ ಪೂರ್ವಜರ ವಂಶದವರಿಂದಲೇ ಆಳಲ್ಪಡುತ್ತಿದ್ದ ಕೋಟೆಯು ಇಂದು ಸುಲ್ತಾನ್ ಮಹಮೂದ್‌ನ ವಶಕ್ಕೆ ಬಂದಿತ್ತು.

ರಾಯ್ ಮಂದಲಕನ ಪ್ರಾರ್ಥನೆ :

ಬಾದಶಹನು ಕೋಟೆಯನ್ನು ವಶಪಡಿಸಿಕೊಂಡ ತಕ್ಷಣ ತನ್ನ ಫರ್‌ಮಾನನನ್ನು ಹೊರಡಿಸಿದ. ಅಲ್ಲಿದ್ದ ಅಸಂಖ್ಯಾತ ದೇವ ಮಂದಿರಗಳನ್ನು ಕೆಡವಲು ಆದೇಶಿಸಿದ. ಮುಜಾಹಿದನ ಬಿರುದನ್ನು ಘೋಷಿಸಿಕೊಂಡನು. ಈ ಘಟನೆಗಳ ನಂತರ ಮಂದಲಕನು ಶಾಸಕತ್ವವನ್ನು ತೊರೆದನು. ತನಗೆ ಸಂಬಂಧಪಟ್ಟ ಎಲ್ಲರನ್ನು ಕರೆದುಕೊಂಡು ಬಂದು ಬಾದಶಹನ ಹತ್ತಿರ ಯಾವುದಾದರೂ ನೌಕರಿಗಳನ್ನು ಬೇಡಿ ಪಡೆದುಕೊಂಡನು.

ಇಸ್ಲಾಂ ಧರ್ಮದ ಸ್ವೀಕಾರ :

ರಾಯ್ ಮಂದಲಕನು ಬಾದಶಹನ ಉತ್ತಮ ನಡತೆಗಳಿಂದ ಪ್ರಭಾವಿತನಾಗಿದ್ದನು. ರಾಜನು ತಾನು ಪಂಜಾಬಿನ ಬಹಳ ಪ್ರಸಿದ್ಧ ಹಜ್ರತ್ ಶೇಖ ಶಮ್ಸುದ್ದೀನ್ ದರವೇಶರ

ಪ್ರೀತಿಗೆ ಪಾತ್ರನಾಗಿದ್ದು, ಅವರ ಪ್ರೇಮ, ಪ್ರಿತಿಗಳಿಗೆ ಮೆಚ್ಚಿ ನನ್ನ ಮನಸ್ಸಿನಲ್ಲಿ ಇಸ್ಲಾಂ ಧರ್ಮವನ್ನು ಸ್ವೀಕರಿಸಬೇಕೆಂದಿದ್ದೇನೆ. ಈ ಮಾತುಗಳನ್ನು ಕೇಳಿದ ಬಾದಶಹನು ಬಹಳ ಸಂತೋಷಪಟ್ಟನು. ಆತನು ರಾಜ ಮಂದಲಕನಿಗೆ ಇಸ್ಲಾಂನ ಏಕೇಶ್ವರವಾದದ "ಕಲ್ಮ-ಯೆ-ಶಹಾದತ್" ಹೇಳಿಕೊಟ್ಟನು. ಇಸ್ಲಾಂ ಧರ್ಮದಲ್ಲಿ ವಿಧಿಯುಕ್ತವಾಗಿ ಸೇರಿಸಿಕೊಂಡನು.

ರಾಯ್ ಮಂದಲಕನ ಇಸ್ಲಾಂ ಸ್ವೀಕಾರದ ಮತ್ತೊಂದು ವರದಿ :

ಬಾದಶಹನು ರಾಯ್ ಮಂದಲಕನನ್ನು "ಖಾನೆಜಹಾನ" ಎಂಬ ಮುಸಲ್ಮಾನರ ಗುಂಪಿನಲ್ಲಿ ಸೇರಿಸಿಕೊಂಡನು. ಆತನ ಮುಂದಿನ ಸಂತಾನದ ಸದಸ್ಯರೆಲ್ಲರೂ ಬಾದಶಹನ ಉನ್ನತ ಹುದ್ದೆಗಳಲ್ಲಿ ನೇಮಿಸಲ್ಪಡುತ್ತಿದ್ದರು. ಗುಜರಾತಿನ ಇತಿಹಾಸದ ಲೇಖಕನಾದ ಶೇಖ್ ಸಿಕಂದರನ ಪ್ರಕಾರ ರಾಜನು ಇಸ್ಲಾಂ ಧರ್ಮವನ್ನು ಸ್ವೀಕರಿಸಿದ ನಂತರ ಬಾದಶಹನು ರಾಜನನ್ನು ಯಾವಾಗಲೂ ತನ್ನ ಹತ್ತಿರ ಉನ್ನತ ಹುದ್ದೆಯಲ್ಲಿ ಕೂರಿಸಿ ಇಟ್ಟುಕೊಳ್ಳುತ್ತಿದ್ದನೆಂದು ವರ್ಣಿಸಿದ್ದಾನೆ. ಅಹಮದಾಬಾದಿಗೆ ಬರುವ ದಾರಿಯಲ್ಲಿ ಸಿಗುತ್ತಿದ್ದ ಬಾದಶಹ ಹಜ್ರತ್ ಷಾಹೆ ಆಲಂರ ದರ್ಗಾ-ರಸೂಲ್ ಆಬಾದ್‌ಗೆ ಭೇಟಿ ಕೊಟ್ಟನೆಂದು ತಿಳಿದುಬರುತ್ತದೆ.

ಹಜ್ರತ್ ಶಾಹ್-ಎ-ಆಲಂ :

ಹಜ್ರತ್ ಶಾಹೆ ಆಲಂರವರ ದರ್ಗಾದಲ್ಲಿ ಅಸಂಖ್ಯಾತ ಜನರಿದ್ದರು. ರಾಜನು ಅಲ್ಲಿಗೆ ಬಂದಾಗ ಈ ಜನರ ಗುಂಪನ್ನು ಕಂಡು ಕೇಳಿದನು. "ಇದು ಯಾವ ಅಮೀರನ ದರ್ಗಾ"? ಎಂದು. ಇದಕ್ಕೆ ಉತ್ತರವಾಗಿ ಅಲ್ಲಿಯ ಜನರು "ಇದು ಯಾವ ಅಮೀರನ ಸಮಾಧಿಯಲ್ಲ, ಇದು ಶಾಹೆ ಆಲಂರ ಆಶ್ರಮವಾಗಿದೆ ಎಂದರು. ರಾಜನು ಮತ್ತೆ ಪ್ರಶ್ನಿಸಿದನು. ಈ ವೃದ್ಧ ಗುರುಗಳು ಯಾವ ಬಾದಶಹರ ಸೇವಕರಾಗಿದ್ದರು? ಯಾರ ಶಾಸನದ ಅಧೀನತೆಯನ್ನು ಸ್ವೀಕರಿಸಿದ್ದರು? ಎಂದನು. ಇದಕ್ಕೆ ಅಲ್ಲಿಯ ಮುಸಲ್ಮಾನರು-ಈ ವೃದ್ಧ ಗುರುಗಳು, ಹಜ್ರತ್ ಶಾಹೆ ಆಲಂರವರು ಈ ಜಗತ್ತಿನ ಯಾವ ಬಾದಶಹನಿಗೂ ಸಂಬಂಧಿಸಿರುವುದಿಲ್ಲ. ಅವರು ಇಡೀ ವಿಶ್ವವನ್ನು ಕಾಯುತ್ತಿರುವ ಅಲ್ಲಾಹನನ್ನು ಮಾತ್ರ ಬಾದಶಹರೆಂದು ನಂಬಿರುತ್ತಾರೆ. ಅವನನ್ನು ಮಾತ್ರ ಸೇವಿಸುವವರಾಗಿದ್ದಾರೆ. ಈ ಮಾತನ್ನು ಕೇಳಿದ ರಾಜನು ಅವರ ಸೇವೆಯಲ್ಲಿ ನಿರತರಾಗಲು ಬಯಸಿದನು.

ಹಜ್ರತ್ ಶಾಹೆ ಆಲಂ ಕೃಪೆ :

ಬಾದಶಹನು ರಾಜನ ಜೊತೆಯಲ್ಲಿ ಆ ಕ್ಷೇತ್ರದಲ್ಲಿದ್ದುಕೊಂಡು ಹಜ್ರತ್ ಶಾಹೆ ಆಲಂರ ಸೇವೆಯಲ್ಲಿ ನಿರತನಾದನು. ಆ ವಯೋವೃದ್ಧ ಗುರುಗಳನ್ನು ಕಂಡ ತಕ್ಷಣ

ರಾಜ ಮಂದಲಕನ ಹೃದಯದಲ್ಲಿ ಇಸ್ಲಾಂ ಸ್ವೀಕರಿಸಬೇಕೆಂಬ ಪ್ರಬಲ ಇಚ್ಛೆ ಮೂಡಿತು. ತಕ್ಷಣ ಹಜ್ರತ್ ಶೇಖ ಸಾಹೇಬರ ಹಸ್ತದಲ್ಲಿ ಹಸ್ತವಿಟ್ಟು ದಿಕ್ಷೆ, ಪ್ರಮಾಣಗಳನ್ನು ಸ್ವೀಕರಿಸಿ ತಾನೂ ಅಲ್ಲಿನ ಮುರೀದ (ಭಕ್ತ)ರ ಜೊತೆಯಲ್ಲಿ ಸೇರಿಕೊಂಡನೆಂದು ತಿಳಿದುಬರುತ್ತದೆ.

ಮುಸ್ತಫಾ ಆಬಾದ್ ನಗರಕ್ಕೆ ಶಿಲಾನ್ಯಾಸ :

ಸುಲ್ತಾನ್ ಮಹಮೂದ್‌ಶಾಹನು ಈ ಪ್ರದೇಶದಲ್ಲಿ ಇಸ್ಲಾಂ ಧರ್ಮದ ಕುರುಹಾಗಿ, ಮುಸ್ತಾಫಾ ಆಬಾದ ಎಂಬ ನಗರಕ್ಕೆ ಶಿಲಾನ್ಯಾಸ ನಡೆಸಿ ಪಟ್ಟಣವನ್ನು ನಿರ್ಮಿಸಿದನು. ಈ ನಗರದಲ್ಲಿ ಅತಿ ಎತ್ತರದ ಕಟ್ಟಡಗಳನ್ನು, ಮಸೀದಿಯನ್ನು ನಿರ್ಮಿಸಿದನು. ತನ್ನ ಅನೇಕ ಅಮೀರರಿಗೂ ಆದೇಶಿಸಿದ್ದೇನೆಂದರೆ–ತಾವು ತಮಗೆ ಬೇಕಾದ ಜಾಗಗಳಲ್ಲಿ ಉನ್ನತ ಅರಮನೆಗಳನ್ನು ಕಟ್ಟಿಸಿಕೊಂಡು ಅಲ್ಲಿಯೇ ನೆಲಸಬೇಕೆಂದನು. ಆ ಆದೇಶದ ಪ್ರಕಾರ ಮನೆಗಳು ಕಟ್ಟಲ್ಪಟ್ಟವು. ಒಂದು ಸುಂದರ ನಗರ ನಿರ್ಮಾಣವಾಗಿ ಜನನಿಬಿಡ ಕೇಂದ್ರವಾಯಿತು.

ಅಹಮದಾಬಾದಿನ ಸುತ್ತ–ಮುತ್ತ ದುಷ್ಟರ ಕಾಟ :

ಬಾದಶಹನು ಮತ್ತು ಆತನ ಅಮೀರರು ಹೊಸ ನಗರ ಮುಸ್ತಫಾಬಾದನ್ನು ನಿರ್ಮಿಸಿಕೊಂಡು ಅಲ್ಲಿಯೇ ನೆಲೆಸತೊಡಗಿದರು. ಇತ್ತ ಅಹಮದಾಬಾದಿನ ಸುತ್ತ ಮುತ್ತಲ ಪ್ರದೇಶಗಳಲ್ಲಿ ಕಳ್ಳರ ದರೋಡೆ ಹೆಚ್ಚಾದವು. ಪ್ರಜೆಗಳನ್ನು ಲೂಟಿ ಮಾಡಲು, ಹಿಂಸೆ ಕೊಡಲು ಪ್ರಾರಂಭಿಸಿದರು. ದಾರಿಯಲ್ಲಿ ತಿರುಗಾಡುವುದೇ ಕಷ್ಟವಾಗಿತ್ತು. ಬಾದಶಹರಿಗೆ ಈ ವಿಷಯವು ತಿಳಿದ ತಕ್ಷಣ ಆತನು ರಾಜಧಾನಿಯ ಸೈನ್ಯದ ಕೊತ್ವಾಲ (ದಂಡನಾಯಕ) ಮತ್ತು ಅಲ್ಲಿನ ಪ್ರಮುಖನಾದ ಮಲಿಕ್ ಜಮಾಲುದ್ದೀನ್ ಬಿನ್ ಶೇಖ್ ಮಲಿಕ್‌ನಿಗೆ "ಮುಹಾಫಿಜ್‌ಖಾನ್"ನ ದರ್ಜೆಗೇರಿಸಿ ಅಹಮದಾಬಾದಿನ ದಂಡನಾಯಕನೆಂದು ಘೋಷಿಸಿದನು.

ಮುಹಾಫಿಜ್‌ಖಾನನ ಬಡ್ತಿ :

"ಮುಹಾಫಿಜ್‌ಖಾನ" ಎಂಬ ಬಡ್ತಿ ಸಿಕ್ಕಿದ ತಕ್ಷಣ ಕೆಲವೇ ದಿನಗಳೊಳಗಾಗಿ ಈ ಪ್ರದೇಶದಲ್ಲಿ ನಡೆಯುತ್ತಿದ್ದ ಕಳ್ಳರ ಭೀತಿಯನ್ನು ಅಡಗಿಸಿ, ರಾಜ್ಯದಲ್ಲಿ ಶಾಂತಿಯನ್ನು ನೆಲೆಸಿದನು. ಬಾದಶಹನು ಮುಹಾಫಿಜಖಾನನ ಈ ಶೌರ್ಯವನ್ನು ಕೇಳಿ ಬಹಳ ಸಂತೋಷಪಟ್ಟನು. ಆತನನ್ನು ಬಹಳವಾಗಿ ಹೊಗಳಿ ಗೌರವಿಸಿ ದಂಡನಾಯಕ (ಕೊತ್ವಾಲ)ನ ಸ್ಥಾನದ ಜೊತೆಗೆ ಅಹಮದಾಬಾದ ನಗರದ ಸದರ ಕೊತವಾಲಿ ಪಟ್ಟವನ್ನು ಆತನಿಗೆ ನೀಡಿದನು. ಈ ಅಮೀರನು ಬಹಳ ವೇಗವಾಗಿ ತನ್ನ ಏಳಿಗೆಯನ್ನು ಕಂಡನು. ಈತನ ಪ್ರಗತಿ ಎಷ್ಟಾಯಿತೆಂದರೆ–ಆತನ ಕುದುರೆ ಲಾಯದಲ್ಲಿ ಒಂದು

ಸಾವಿರದ ಏಳುನೂರು (೧೭೦೦) ಕುದುರೆಗಳು ಕಟ್ಟಲ್ಪಡುತ್ತಿದ್ದವು. ಆತನ ಮಗನಾದ ಮಲಿಕ್-ಖಿಜರ್‌ನು ರಾಜ ಸರ್‌ವಹಿ ಮತ್ತು ಸುತ್ತಮುತ್ತಲ ರಾಜರುಗಳನ್ನು ಬೆದರಿಸಿ ಕಪ್ಪ-ಕಾಣಿಕೆಗಳನ್ನು ವಸೂಲು ಮಾಡುವಷ್ಟು ಸಾಮರ್ಥ್ಯವನ್ನು ಪಡೆದುಕೊಂಡನು.

ಕಚ್ಛ್‌ನ ನಾವಿಕರ ಪಿತೂರಿ :

ಯಾವ ಸಂದರ್ಭದಲ್ಲಿ ಬಾದಶಹನು ಮುಸ್ತಫಾಬಾದಿನಲ್ಲಿ ನೆಲೆಸಿದ್ದನೋ ಆಗ ಸಿಂಧ್ ಪ್ರದೇಶದ ಕಚ್ಛ್‌ನ ಮೀನುಗಾರರ ಒಂದು ಗುಂಪು ಅಲ್ಲಿ ನೆಲೆಸಿದ್ದಿತು. ಅವರೆಲ್ಲರೂ ಕಡಲ್ಗಳ್ಳತನವನ್ನು ತಮ್ಮ ಕಸುಬನ್ನಾಗಿ ಅಲ್ಲಿನ ಸುತ್ತ ಮುತ್ತಲ ಜನರಿಗೆ ತುಂಬಾ ಹಿಂಸಿಸುತ್ತಿರುವರೆಂದು ಬಾದಶಹನಿಗೆ ತಿಳಿಯಿತು. ಹಿಜರಿ ೮೭೯ರಲ್ಲಿ ಅವರನ್ನು ಅಡಗಿಸಲು ಆಕ್ರಮಣ ಮಾಡುತ್ತಾ "ಶೋರ್‌ನಾಮಿ" ಎಂಬ ಸ್ಥಳಕ್ಕೆ ಆಗಮಿಸಿದನು.

ಕಾಫಿರರ ಚಿಂತೆ :

ಸುಲ್ತಾನ್ ಮಹಮೂದ್‌ನು ಒಂದು ದಿನ ಮತ್ತು ಒಂದೇ ರಾತ್ರಿಯ ಪ್ರಯಾಣದಲ್ಲಿ ೬೦ ಮೈಲಿಗಳಷ್ಟು ದೂರವನ್ನು ಕ್ರಮಿಸಿದ್ದನು. ತನ್ನ ಜೊತೆಯಲ್ಲಿ ೬೦೦ ಸವಾರರನ್ನು ಕರೆದೊಯ್ದಿದ್ದನು. ಕಚ್ಛ್‌ನ ಮೀನುಗಾರರು ಬಾದಶಹನನ್ನು ಎದುರಿಸಲು (೪೦೨೦) ನಾಲ್ಕು ಸಾವಿರದ ಇಪ್ಪತ್ತು ಜನರು ಬಿಲ್ಲುಬಾಣಗಳೊಂದಿಗೆ ಬಾದಶಹನ ಎದುರಿಗೆ ನಿಂತರು. ಬಾದಶಹನು ಆಕ್ರಮಣದ ತಯಾರಿ ನಡೆಸಿದನು. ಮುಸಲ್ಮಾನರು ಕೇವಲ ೬೦೦ ಜನರಿದ್ದರು. ಮೀನುಗಾರರಲ್ಲಿ ಭಯಾನಕ ಪರಿಸ್ಥಿತಿ ಉಂಟಾಯಿತು. ಅವರೆಲ್ಲರೂ ಮುಸಲ್ಮಾನರನ್ನು ಎದುರಿಸಲಾದೆ ಯುದ್ಧವನ್ನು ನಿಲ್ಲಿಸಿ ಬಿಟ್ಟರು. ಕಾಫಿರ ಮುಖಂಡನು ಬಾದಶಹನ ಹತ್ತಿರ ಬಂದು ತಮ್ಮ ತಪ್ಪಿಗೆ ಕ್ಷಮೆಯನ್ನು ಯಾಚಿಸಿದನು. ಆತನು ಬಾದಶಹನಲ್ಲಿ ಪ್ರಾರ್ಥಿಸಿದುದೇನೆಂದರೆ, ನಾವು ಇನ್ನು ಮುಂದೆ ಇಂತಹ ತಪ್ಪುಗಳನ್ನು ಮಾಡುವುದಿಲ್ಲವೆಂದು ಪ್ರಮಾಣವನ್ನು ಮಾಡಿದರು.

'ಕಚ್ಛ್' ಜನರ ವಿಶ್ವಾಸ :

ಬಾದಶಹನು ಈ ಜನರನ್ನು ಕ್ಷಮಿಸಿದನು. ಮತ್ತು ನೀವು ಯಾವ ಧರ್ಮಕ್ಕೆ ಸೇರಿದ್ದಿರೆಂದು ವಿಚಾರಿಸಿದನು. ಆಗ ಆ ಜನರ ಸರದಾರರು ನಾವು ಮರುಳುಗಾಡಿನ ಜನರು 'ಖಾನಬದೋಶ್' ಸಂಚಾರಿ ಬುಡಕಟ್ಟಿನ ಜನಾಂಗದವರೆಂದು ಹೇಳಿದರು. ನಮಗೆ ಊಟ ಮಾಡುವುದು ಮತ್ತು ಮಲಗುವುದನ್ನು ಬಿಟ್ಟರೆ, ನಮ್ಮಲ್ಲಿ ಮತ್ತಾವ ವಿಚಾರವೂ ಇಲ್ಲವೆಂದರು. ಈಗ ನಮ್ಮ ಅದೃಷ್ಟವೆಂದರೆ, ತಮ್ಮ ಸೇವೆ ಮಾಡುವ ಭಾಗ್ಯವು ನಮಗೆ ದೊರೆತಿರುವುದು. ತಮ್ಮ ಕೃಪೆಯಿಂದ ನಮ್ಮ ನಿಜವಾದ ಮಾಲಿಕನು ಯಾರು ಎಂದು ತಿಳಿದರೆ ಸಾಕು ಎಂದರು. ಬಾದಶಹನು ಮುಗ್ಧ ಜನರ ತಪ್ಪುಗಳನ್ನು ಮನ್ನಿಸಿ ಅವರಲ್ಲಿ ಕೆಲವರನ್ನು ಅಹಮದಾಬಾದಿಗೆ ಕರೆತಂದನು.

ಸಿಂಧ್ ಪ್ರದೇಶ :

ಅಹಮದಾಬಾದನ್ನು ತಲುಪಿದ ಬಾದಶಹನು ಕಚ್ಛ್‌ನಿಂದ ಕರೆತಂದಿದ್ದ ಕೆಲಸಗಾರರನ್ನು ಮುಸಲ್ಮಾನ ವಿದ್ವಾಂಸರ ವಶಕ್ಕೆ ಒಪ್ಪಿಸಿ ಅವರಿಗೆ ಆದೇಶಿಸಿದ್ದೇನೆಂದರೆ, ಈ ಸರದಾರರುಗಳಿಗೆ "ಹನಫಿ" ಪಂಥದ ಇಸ್ಲಾಂ ಧರ್ಮದ ಬೋಧನೆ ವಿದ್ಯೆಯನ್ನು ಕಲಿಸಬೇಕೆಂದನು. ಈ ಸರದಾರರ ಕಾರಣದಿಂದಾಗಿ ಅವರ ಕೋಮಿನ ಜನರು ಆಗಾಗ್ಗೆ ಮುಸ್ತಫಾಬಾದಿಗೆ ಬಂದು ಹೋಗುತ್ತಿದ್ದರು. ಅದೇ ಜನರಿಂದ ಬಾದಶಹನಿಗೆ ಗೊತ್ತಾದುದ್ದೇನೆಂದರೆ–'ಮುಲ್ಕ್‌ಶೋರ್'ನ ಪಕ್ಕದಲ್ಲೇ ಮತ್ತೊಂದು ಪ್ರದೇಶದಲ್ಲಿ ಜನರು ನೆಲೆಸಿದ್ದಾರೆಂದು ಅದಕ್ಕೆ "ಸಿಂಧಿಯಾ" ಎಂದು ಕರೆಯಲಾಗುತ್ತದೆಂದು ತಿಳಿಯಿತು. ಅಲ್ಲಿ ಸುಮಾರು ನಾಲ್ಕು ಸಾವಿರ ಮನೆಗಳಲ್ಲಿ ಜನರು ನೆಲೆಸಿದ್ದಾರೆಂದು ಗೊತ್ತಾಯಿತು. ಇವರೆಲ್ಲರೂ "ಬಲೂಚಿ"ಗಳೆಂದು ಕರೆಯಲ್ಪಡುವರೆಂಬ ವಿಷಯವು ತಿಳಿಯಿತು. ಈ ಜನರು ಬಿಲ್ಲುಗಾರಿಕೆಯಲ್ಲಿ ಬಹಳ ಪ್ರವೀಣರಾಗಿ ಬೇರೆ ಜನರನ್ನು ಬಹಳ ಹಿಂಸಿಸುವರೆಂದೂ ತಿಳಿಯಿತು.

ಸಿಂಧಿಯಾದ ಬಲೂಚಿಗಳು :

ಶೋರ್ ಪ್ರದೇಶದ ಜನರಿಂದ ಈ ವಿಚಾರದಿಂದ ತಿಳಿಯಿತೇನೆಂದರೆ–ಬಲೂಚಿಗಳು ಇಮಾಮಿಯಾ ಧರ್ಮದಲ್ಲಿ ನಂಬಿಕೆ ಇಟ್ಟಿರುವರೆಂದು ಅವರ ಬೋಧನೆಯಂತೆ ಮೀನುಗಾರರೂ ಅಮಾನಿಯಾ ಧರ್ಮದಲ್ಲಿ ವಿಶ್ವಾಸವನ್ನಿಟ್ಟು ಕೊಂಡು ಕಳ್ಳತನದಲ್ಲಿಯೇ ಅವರ ಜೀವನ ನಿರ್ವಾಹವಾಗಬೇಕಿದೆಯೆಂದು ತಿಳಿಸಿದರು.

ಬಲೂಚಿಗಳ ಮೇಲೆ ಸೈನಿಕ ಕಾರ್ಯಾಚರಣೆ :

ಹಿಜರಿ ೮೮೦ರಲ್ಲಿ ಸುಲ್ತಾನ್ ಮಹಮೂದ್‌ನು ಆ ಕಳ್ಳರನ್ನು ಸರ್ವನಾಶಗೊಳಿಸಲು ಸಿಂಧಿಯಾದತ್ತ ಪ್ರಯಾಣವನ್ನು ಬೆಳೆಸಿದನು. ಅಕಸ್ಮಾತಾಗಿ ಕೆಲವು ಬಲೂಚಿಗಳು ತಮ್ಮ ಒಂಟೆಗಳನ್ನು ಮೇಯಿಸಲು ಕಾಡಿನಲ್ಲಿ ಬಂದಿದ್ದರು. ಅವರಿಗೆ ಸುಲ್ತಾನ್ ಮಹಮೂದ್‌ನು ಅವರತ್ತ ಬರುತ್ತಿದ್ದಾನೆಂಬ ಸುದ್ದಿ ತಿಳಿದು ಅವರಲ್ಲೊಬ್ಬ ಒಂಟೆ ಸವಾರನು ತಮ್ಮ ಜನಾಂಗದವರಿಗೆ ಬಾದಶಹನ ಆಗಮನದ ಸುದ್ದಿಯನ್ನು ತಿಳಿಸಿದನು. ಬಾದಶಹನ ಹೆಸರನ್ನು ಕೇಳಿದ ತಕ್ಷಣ ಈ ಜನರು ತಮ್ಮ ಮನೆಗಳಿಂದ ಹೊರ ಬಂದು ಬೆಟ್ಟ–ಗುಡ್ಡಗಳ ಗುಹೆ–ಗಹ್ವಾರಗಳಲ್ಲಿ ಅಡಗಿಕೊಂಡರು.

ಬಲೂಚಿಗಳ ಕೊಲೆ :

ಈ ಘಟನೆಯ ಮಾರನೇ ದಿನವೇ ಬಾದಶಹನು ಬಲೂಚಿಗಳ ಮನೆಗಳ ಮೇಲೆ ಆಕ್ರಮಣವನ್ನು ಮಾಡಿದನು. ಆದರೆ ಅಲ್ಲಿ ಯಾವೊಬ್ಬ ಮನುಷ್ಯನು ಸಿಗಲಿಲ್ಲ. ಆಕಸ್ಮಿಕವಾಗಿ ಕೆಲ ಬಲೂಚಿಗಳು ಮುಸಲ್ಮಾನ ಸೈನಿಕರಿಗೆ ಸಿಕ್ಕಿ ಬಿದ್ದರು. ಅವರಿಂದ

ಬಲೂಚಿಗಳು ಎಲ್ಲಿ ಅಡಗಿ ಕುಳಿತಿರುವರೆಂಬ ವಿಷಯವನ್ನು ಬಾದಶಹನು ಅರಿತುಕೊಂಡನು. ಅವರಿದ್ದ ಜಾಗಕ್ಕೆ ತೆರಳಿ ಅವರನ್ನೆಲ್ಲ ಹಿಡಿದು ಕೊಲೆ ಮಾಡಿ ಅವರ ಆಸ್ತಿ-ಪಾಸ್ತಿ, ಸಂಪತ್ತೆಲ್ಲವನ್ನೂ ಸಂಗ್ರಹಿಸಿಕೊಂಡು ಬಂದನು.

ಸಿಂಧಿಯಾ ಮೇಲೆ ಪೂರ್ಣ ಪ್ರಮಾಣದ ಅಧಿಕಾರಕ್ಕೆ ಪ್ರಯತ್ನ :

ಬಾದಶಹನು ಹಿಂತಿರುಗಲು ಪ್ರಯತ್ನಿಸಿದಾಗ ಕೆಲವು ಅಮೀರರು, ನಾವು ಬಹಳ ಶ್ರಮಪಟ್ಟು ಈ ದೇಶವನ್ನು ಗೆದ್ದು ವಶಕ್ಕೆ ಪಡೆದಿದ್ದೇವೆ. ಆದ್ದರಿಂದ ಇಲ್ಲಿನ ಪ್ರದೇಶಕ್ಕೆ ನಮ್ಮ ಕಡೆಯಿಂದ ಒಬ್ಬ ಶಾಸಕ ಮತ್ತು ಅಮೀರನನ್ನು ನೇಮಿಸಬೇಕಾದ ಅವಶ್ಯಕತೆ ಇದೆ. ಈ ಕೆಲಸವಾದ ನಂತರ ವಾಪಸ್ಸಾಗೋಣ ಎಂದರು. ಇದಕ್ಕೆ ಬಾದಶಹನು ಹೀಗೆಂದನು- ಮಖ್‌ದೂಮಜಹಾಂ ಎಂಬುವನು ಸಿಂಧಿಯಾ ಬಾದಶಹರ ವಂಶಸ್ಥರಿದ್ದ ಆಳ್ವಿಕೆಯು ಈ ಪ್ರದೇಶದಲ್ಲಿ ನಡೆಯುತ್ತಿದೆ. ಈ ಬಗ್ಗೆ ನಾನು ಸ್ವಲ್ಪ ಚಿಂತಿಸಿ ಯೋಚಿಸಿ ಕೆಲಸವನ್ನು ಮಾಡಬೇಕಾಗಿದೆ. ಈ ದೇಶದ ಮೇಲೆ ನನ್ನ ಹಕ್ಕನ್ನು ಸ್ಥಾಪಿಸುವುದು ನನಗೆ ಶೋಭೆ ತರುವಂತಹದ್ದಲ್ಲ. ನಾನು ಆ ಕೆಲಸವನ್ನು ಮಾಡುವುದೂ ಇಲ್ಲ. ಹೀಗೆ ಹೇಳಿ ಬಾದಶಹನು ಮುಸ್ತಫಾಬಾದಿಗೆ ತೆರಳಿದನು.

ಜಗತ್ ಬಂದರಿನವರ ಪಿತೂರಿ :

ಕೆಲವು ದಿನಗಳ ನಂತರ ಬಾದಶಹನಿಗೆ ತಿಳಿದು ಬಂದದ್ದೇನೆಂದರೆ-ಜಗತ್ ಬಂದರಿನಲ್ಲಿ ಬಹಳಷ್ಟು ಮೂರ್ತಿ ಪೂಜಕರು ವಾಸಿಸುತ್ತಿದ್ದಾರೆ. ಆ ದೇಶದವರೆಲ್ಲ ರಾಜರೂಗಳೂ ವಿಶೇಷವಾಗಿ ಬ್ರಾಹ್ಮಣರು ಅಪಾರವಾಗಿ ವಾಸಿಸುತ್ತಿರುವರೆಂದು ತಿಳಿಯಿತು. ಅವರು ಬಹಳ ಜಾತಿವಾದಿಗಳೆಂದು ತಿಳಿಯಿತು. ಬಾದಶಹನು ಆ ಪ್ರದೇಶವನ್ನು ಗೆಲ್ಲಬೇಕೆಂಬ ಹವಣಿಕೆಯಲ್ಲಿರುವಾಗಲೇ ಆತನಿಗೆ ಮತ್ತೊಂದು ಕೆಟ್ಟ ಸುದ್ಧಿಯು ತಲುಪಿತು. ಆ ಕಾಲದಲ್ಲಿ ಮೌಲಾನಾ ಮುಹಮ್ಮದಸಮರಕಂದಿ ಎಂಬುವರು ತಮ್ಮ ಕಾಲದ ಪ್ರಸಿದ್ಧ ವಿದ್ವಾಂಸರೆನಿಸಿ ಬಹಮನಿ ದರ್ಬಾರಿನಲ್ಲಿ ಬಹಳ ದಿನಗಳ ತನಕ ಸೇವೆಯನ್ನು ಸಲ್ಲಿಸಿದ್ದ ಅಪಾರ ಕೀರ್ತಿ ಇತ್ತು. ವಯಸ್ಸಾದ ಕಾರಣ ತಮ್ಮೆಲ್ಲ ಸಂಪತ್ತು ಸಾಮಾನುಗಳೊಂದಿಗೆ ತಮ್ಮ ದೇಶ 'ಹರ್‌ಮೊಜ್' ಎಂಬಲ್ಲಿಗೆ ಹೊರಟರು. ಮೌಲಾನಾರವರು ದೋಣಿ 'ಜಗತ್' ಬಂದರಿಗೆ ಬಂದು ತಲುಪಿತು. ಇದನ್ನು ಕಂಡ ಅಲ್ಲಿನ ಬ್ರಾಹ್ಮಣರು ತಮ್ಮ ಸರದಾರನಿಗೆ ಒಬ್ಬ ಮುಸಲ್ಮಾನನ ದೋಣಿ ಬಂದಿದೆ ಎಂದು ತಿಳಿಸಿದರು. ಆ ದೋಣಿಯನ್ನು ಲೂಟಿ ಮಾಡಿ ಎಲ್ಲ ಸಾಮಾನುಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡರು.

ಮೌಲಾನಾ ಮಹಮ್ಮದ್ ಸಮರಕಂದಿಯವರ ವರದಿ :

ಮೌಲಾನ ಮಹಮ್ಮದ್ ಸಮರ್ ಕಂದಿಯವರು ಬಹಳ ಕೆಟ್ಟ ಸ್ಥಿತಿಯಲ್ಲಿ ತನ್ನ

ಇಬ್ಬರು ಗಂಡುಮಕ್ಕಳ ಜೊತೆಯಲ್ಲಿ ಮುಸ್ತಫಾಬಾದಿಗೆ ಬಂದರು. ಅವರು ಶಾಹಿದ ಬಾರಿಗೆ ಬಂದು ಹೇಳಿದರು.-ನಾನು ನನ್ನ ವಸ್ತುಗಳೊಂದಿಗೆ ಸಮರಕಂದ ದೇಶಕ್ಕೆ ಪ್ರಯಾಣ ಹೊರಟಿದ್ದೆ. ನನ್ನ ಜೊತೆಯಲ್ಲಿ ನನ್ನ ಸಂಬಂಧಿಕರಾದ ಇತರೆ ಕೆಲವು ಮುಸಲ್ಮಾನರೂ ಪ್ರಯಾಣಿಸುತ್ತಿದ್ದರು. ನನ್ನ ದೋಣಿ ಜಗತ್ ಬಂದರಿಗೆ ಬಂದು ತಲುಪಿದಾಗ ಅಲ್ಲಿನ ಒಬ್ಬ ಹಿಂದು ರಾಜನು ಅಲ್ಲಿನ ಬ್ರಾಹ್ಮಣರ ಪ್ರೇರಣೆಯಿಂದ ನಮ್ಮನ್ನು ಲೂಟಿ ಮಾಡಲು ಹಿಂದು ಜನರ ಗುಂಪನ್ನು ರಾಜಭೀರ್‌ನು ಕಳುಹಿಸಿದನು. ಅವರು ನಮ್ಮ ಮೇಲೆ ಆಕ್ರಮಣವನ್ನು ಮಾಡಿ ಕೆಲವೇ ನಿಮಿಷಗಳಲ್ಲಿ ನಮ್ಮ ಎಲ್ಲಾ ವಸ್ತುಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡು ಬಿಟ್ಟರು. ಮುಸಲ್ಮಾನರ ಹೆಂಡತಿ-ಮಕ್ಕಳನ್ನು ಸೆರೆಹಿಡಿದರು. ನನ್ನ ಜೊತೆಯಲ್ಲಿದ್ದ ಚಿಕ್ಕ ಮಕ್ಕಳ ತಾಯಿಯನ್ನು ಹಿಂದುಗಳು ತಮ್ಮ ವಶದಲ್ಲಿಟ್ಟುಕೊಂಡಿದ್ದಾರೆ. ತಮ್ಮಂತಹ ದಕ್ಷ ಬಾದಶಹರ ರಾಜ್ಯದಲ್ಲಿ ಇಂತಹ ಜಾತಿವಾದದ ಅನ್ಯಾಯ ಸರಿಯೆ? ಇದು ಬಹಳ ದುಃಖದ ಸಮಾಚಾರವಾಗಿದೆ.

ಅಮೀರರಲ್ಲಿ ಚರ್ಚೆ :

ಈ ಸಮಾಚಾರವನ್ನು ಕೇಳಿದ ಬಾದಶಹನು ಮೌಲಾನಾರವರಿಗೆ ಅಹಮದಾಬಾದಿಗೆ ಕಳುಹಿಸಿಕೊಟ್ಟನು. ತಕ್ಷಣ ತನ್ನ ದರ್ಬಾರಿಗಳನ್ನೆಲ್ಲಾ ಆಮಂತ್ರಿಸಿದನು. ಎಲ್ಲರನ್ನೂ ಸಂಬೋಧಿಸುತ್ತಾ ಒಬ್ಬ ಮುಸಲ್ಮಾನ ಬಾದಶಹನ ರಾಜ್ಯದಲ್ಲಿ ಕಠಿಣ ಹೃದಯಿ ಹಿಂಸಾತ್ಮಕ ಬುದ್ಧಿಯುಳ್ಳ ಜನರು ಮುಸಲ್ಮಾನರ ಮೇಲೆ ಹಿಂಸೆಯನ್ನು ನಡೆಸುತ್ತಿರುವುದನ್ನು ಕಂಡ ಅಲ್ಲಾಹನು ಅಂತಿಮ ವಿಚಾರಣೆಯ ದಿನದಂದು ನನ್ನನ್ನು ಕೇಳಿದರೆ ನಾನು ಅಲ್ಲಾಹನಿಗೆ ಏನು ಉತ್ತರವನ್ನು ಕೊಡಲಿ? ನೀನು ಬಾದಶಹನಾಗಿ ನಿನ್ನ ರಾಜ್ಯದ ಮುಸಲ್ಮಾನರನ್ನು ಹಿಂಸೆಯಿಂದ ರಕ್ಷಿಸಲಾರದೆ ಹೋದೆಯಾ? ಎಂದರೆ ನನ್ನಲ್ಲಿ ಯಾವ ಉತ್ತರವಿದೆ?

ಜಗತ್ ಬಂದರಿನ ಮೇಲೆ ಸೈನಿಕ ಆಕ್ರಮಣ :

ಇದಾದ ನಂತರ ಬಾದಶಹನು ಜಗತ್ ಬಂದರಿನತ್ತ ಪ್ರಯಾಣವನ್ನು ಬೆಳೆಸಿದನು. "ಅಲ್ಲಾಹುಅಕ್ಬರ್" ಎಂಬ ಘೋಷಣೆಗಳನ್ನು ಮುಸಲ್ಮಾನ ಸೈನಿಕರು ಕೂಗಲಾರಂಭಿಸಿದರು. ಬಾದಶಹನು ಜಗತ್ ಬಂದರಿನಲ್ಲೇ ಬೀಡು ಬಿಟ್ಟು ಹಿಂದೂಗಳ ಮೇಲೆ ಸೇಡು ತೀರಿಸಿಕೊಳ್ಳಲು ಪ್ರಯತ್ನಗಳನ್ನು ಮಾಡಲಾರಂಭಿಸಿದನು.

ಹಾವು ಚೇಳುಗಳ ಕೊಲೆ :

ಬಾದಶಹನು ಬೀಡುಬಿಟ್ಟ ಜಾಗದಲ್ಲಿ ವಿಷಕಾರಿ ಹಾವು-ಚೇಳುಗಳು ಬಹಳವಾಗಿ ಹರಿದಾಡುತ್ತಿದ್ದುವು. ದುಷ್ಟ ಕ್ರೂರಮೃಗಗಳು ಅಲ್ಲಿ ಸಂಚರಿಸುತ್ತಿದ್ದುವು. ಅವುಗಳನ್ನೆಲ್ಲಾ ಸೈನಿಕರು ಹಿಡಿದು ಕೊಂದರು. ಬಾದಶಹನು ಇಳಿದುಕೊಂಡಿದ್ದ ಬಿಡಾರದ ಹತ್ತಿರ

ಒಂದೇ ದಿನದಲ್ಲಿ (೭೦೦) ಏಳು ನೂರು ಹಾವುಗಳನ್ನು ಹಿಡಿದು ಕೊಂದಿದ್ದರು. ಇತರೆ ಪ್ರಾಣಿಗಳೂ ಸತ್ತವು.

ಮುಸ್ಲಿಮೇತರರ ಕೊಲೆ :

ಬಾದಶಹನು ಜಗತ್ ಬಂದರಿನ ಎಲ್ಲಾ ದೇವಸ್ಥಾನಗಳನ್ನೂ ನೆಲಸಮ ಮಾಡಿಸಿ, ಆ ಜಾಗಗಳಲ್ಲಿ ಸುಂದರ ಮಸೀದಿಗಳನ್ನು ನಿರ್ಮಿಸಿದನು. ತಾನು ಆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನೆಲೆಸಿದನು. ಈ ಸಂದರ್ಭದಲ್ಲಿ ಬಹಳ ದೋಣಿಗಳನ್ನು ತಯಾರು ಮಾಡಿಸಿದನು. ಈ ದೋಣಿಗಳ ಸಹಾಯದಿಂದ ಸೈನಿಕ ಸಾಮಾನುಗಳನ್ನು ಹೇರಿಕೊಂಡು! 'ತಬತ್' ದ್ವೀಪದತ್ತ ಪ್ರಯಾಣವನ್ನು ಬೆಳೆಸಿದ. ಅಲ್ಲಿ ಗುಜರಾತಿಗಳು ಹಾಗೂ ಮುಸ್ಲಿಮೇತರಲ್ಲಿ ೨೨ ಸಲ ಯುದ್ಧಗಳಾದವು. ಕೊನೆಗೆ ಆ ದ್ವೀಪದ ಬಂದರಿನಲ್ಲಿ ಮುಸಲ್ಮಾನರ ಹಡಗುಗಳು ಲಂಗರನ್ನು ಹಾಕಿದವು. ದ್ವೀಪದಲ್ಲಿ ಪ್ರವೇಶಿಸಿ ಅಲ್ಲಿನ ಹಿಂದೂಗಳನ್ನು ಸೋಲಿಸಿದರು.

ರಾಜನ ಸೆರೆ ಮತ್ತು ಬಾದಶಹನ ವಾಪಸ್ಸು :

ಸುಲ್ತಾನ್ ಮಹಮೂದ್‌ಶಾಹನು ತನ್ನ ಒಬ್ಬ ಪ್ರಸಿದ್ಧ ಅಮೀರನಾದ ಫರ್‌ಹತುಲ್‌ಮುಲ್ಕನನ್ನು 'ತಬತ್' ದ್ವೀಪದ ಶಾಸಕನನ್ನಾಗಿ ನೇಮಿಸಿದನು. ಅಲ್ಲಿನ ರಾಜನನ್ನು ಸೆರೆಹಿಡಿದು ಬಾದಶಹನ ಎದುರು ತರಲಾಯಿತು. ಈ ಗೆಲುವಿನ ಕುರುಹಾಗಿ ಬಾದಶಹನು ಅಲ್ಲಾಹನಲ್ಲಿ ವಿಶೇಷ ಪ್ರಾರ್ಥನೆಯನ್ನು ಸಲ್ಲಿಸಿದನು. ನಂತರ ಅಲ್ಲಿಂದ ಮುಸ್ತಫಾಬಾದಿಗೆ ವಾಪಸ್ಸಾದನು.

ರಾಜನ ಪರಿಣಾಮ :

ಮುಸ್ತಾಫಾಆಬಾದ್‌ನ್ನು ತಲುಪಿದ ಬಾದಶಹನು ಒಂದು ಆದೇಶವನ್ನು ಹೊರಡಿಸಿ, ಮೌಲಾನಾ ಸಮರಕಂದಿಯವರನ್ನು ಅಹಮದಾಬಾದಿನಿಂದ ಮುಸ್ತಫಾಬಾದಿಗೆ ಬರಲು ಆಜ್ಞಾಪಿಸಿದನು. ಅವರ ಹೆಂಗಸರನ್ನು ಮತ್ತು ರಾಜನನ್ನು ಮೌಲಾನಾರವರ ಸುಪರ್ದಿಗೆ ಕೊಟ್ಟು ರಾಜನಿಗೆ ನೀವೇ ಏನು ಬೇಕಾದರೂ ಶಿಕ್ಷೆ ಕೊಡಬಹುದೆಂದು ಹೇಳಿದನು. ಮೌಲಾನಾರ ಜೊತೆ ಮತ್ತು ಅವರ ಹೆಂಗಸರ ಜೊತೆಯಲ್ಲಿ ರಾಜನು ಬಹಳ ಕೆಟ್ಟದಾಗಿ ವರ್ತಿಸಿದ್ದ ಕಾರಣ ಮೌಲಾನಾರವರು ತುಂಬಾ ದುಃಖಿತರಾಗಿದ್ದರು. ಇದರ ಶಿಕ್ಷೆಯಾಗಿ ಮುಹಾಫಿಜ್‌ಖಾನನಿಗೆ ರಾಜನನ್ನು ಕೊಟ್ಟು ಹೀಗೆ ಹೇಳಿದರು. ಈತನನ್ನು ನಗರದಲ್ಲಿ ಮೆರವಣಿಗೆ ಮಾಡಿ ಕೊಲೆ ಮಾಡುವಂತೆ ಆಜ್ಞಾಪಿಸಿದರು. ಹಾಗೆಯೇ ಆಯಿತು.

ಕರ್ನಾಲ್ ಕೋಟೆಯ ವಿಚಾರದಲ್ಲಿ ಅಂತಿಮ ವ್ಯವಸ್ಥೆ :

ಯಾವ ದಿನಗಳಲ್ಲಿ ಬಾದಶಹನು ಮುಸ್ತಫಾಬಾದ್ ನಗರ ನಿರ್ಮಾಣದಲ್ಲಿ

ವ್ಯಸ್ತನಾಗಿದ್ದನೋ ಅಂದಿನ ದಿನಗಳಲ್ಲಿ ಗುಜರಾತಿಗಳು ತುಂಬಾ ಚಿಂತಿತರಾಗಿದ್ದರು. ಏಕೆಂದರೆ ಪ್ರತಿವರ್ಷವೂ ಅವರಿಗೆ ಒಂದಲ್ಲ ಒಂದು ಜಾಗಕ್ಕೆ ಯುದ್ಧದಲ್ಲಿ ಭಾಗವಹಿಸಲೇ ಬೇಕಾಗುತ್ತಿತ್ತು. ಅಹಮದಾಬಾದಿನಿಂದ ದೂರವಿರಬೇಕಾಗುತ್ತಿತ್ತು. ಪ್ರತಿಯೊಬ್ಬ ಹಿರಿಯ-ಕಿರಿಯರು ಬೇಸರದಿಂದ ಜೀವಿಸುತ್ತಿದ್ದರು. ಈ ವಿಷಯವು ಬಾದಶಹನಿಗೆ ತಿಳಿಯಿತು. ತಕ್ಷಣ ಆತನು ಮುಸ್ತಫಾಬಾದಿನ ಕೆಲಸ ಕಾರ್ಯಗಳನ್ನು ತನ್ನ ದಕ್ಷ ಅಮೀರರಿಗೆ ವಹಿಸಿ ಕರ್ನಾಲದತ್ತ ಪ್ರಯಾಣವನ್ನು ಬೆಳೆಸಿದನು.

ಹೊಸ ನೇಮಕಗಳು :

ಬಾದಶಹನು ಬಹಾವುದ್ದೀನ ಅಮಾದುಲ್‌ಮುಲ್ಕನನ್ನು 'ಸೊಂಖರ್'ನ ಶಾಸಕನಾಗಿ ಫರ್‌ಹತಲ್‌ಮುಲ್ಕನಿಗೆ 'ತಬತ್' ಮತ್ತು 'ಜಗತ್'ಗಳಿಗೆ ನೇಮಿಸಿದನು. ನಿಜಾಮುಲ್‌ಮುಲ್ಕನಿಗೆ ಮಾನೇರ್‌ನ ಶಾಸಕನಾಗಿ ನೇಮಿಸಿದನು. ಹಿರಿಯ ಮಂತ್ರಿ ಖುದಾವಂದಖಾನನನ್ನು ಮತ್ತು ಮುಜಫರ್‌ಖಾನನಿಗೆ ಮಂತ್ರಿ ಪದವಿಗಳನ್ನು ದಯಪಾಲಿಸಿ ಅವರನ್ನು ಅಹಮದಾಬಾದಿನಲ್ಲೇ ಇರುವಂತೆ ನೇಮಿಸಿದನು. ತಾನು ಸ್ವತಃ ಕೆಲವು ಅಮೀರರ ಗುಂಪಿನಲ್ಲಿ ಮುಸ್ತಫಾಬಾದಿಗೆ ಬಂದನು. ಆ ನಗರದಲ್ಲಿ ಬಾದಶಹನು ತೋಟಗಳನ್ನು ಬೆಳೆಸಿದನು. ಮರಗಳನ್ನು ನೆಡೆಸಿದನು.

ಅಮೀರರ ಪಿತೂರಿ :

ಇನ್ನೂ ಕೆಲವು ದಿನಗಳು ಮಾತ್ರ ಕಳೆದಿದ್ದವು. ಅಷ್ಟರಲ್ಲಿ ಅಹಮದಾಬಾದಿನ ಅಮೀರರು ಪಿತೂರಿಗಳನ್ನು ಸೃಷ್ಟಿಸಿದರು. ಇವರುಗಳಲ್ಲಿ ಪ್ರಮುಖರಾದವರೆಂದರೆ, ಖುದಾವಂದಖಾನ್ ಮತ್ತು ರಾಯ್‌ರಾಯ್‌ರು ಅವರ ಅಭಿಪ್ರಾಯದಲ್ಲಿ ಸುಲ್ತಾನ್ ಮಹಮೂದ್‌ಶಾಹನನ್ನು ಕೆಳಗಿಳಿಸಿ ಅವನ ಮಗ ಅಹಮದನನ್ನು ಸಿಂಹಾಸನದ ಮೇಲೆ ಕೂರಿಸಬೇಕೆಂದಿತ್ತು. ಈ ಪಿತೂರಿಕಾರರು ರಂಜಾನ್ ಹಬ್ಬದ ನೆಪದಲ್ಲಿ ಅಮಾದುಲ್‌ಮುಲ್ಕನನ್ನು ಮತ್ತು ಇತರೆ ಅಮೀರರನ್ನು ಅಹಮದ್‌ನಗರಕ್ಕೆ ಆಹ್ವಾನಿಸಲಾಯಿತು. ವಿಷಯುವನ್ನು ಬಹಿರಂಗ ಪಡಿಸಿಬಾರದೆಂದು ಅಮಾದುಲ್‌ಮುಲ್ಕನಿಗೆ ಪ್ರಮಾಣ ಮಾಡಿಸಲಾಯಿತು. ಅಮಾದುಲ್‌ಮುಲ್ಕನ ಸೈನ್ಯ ಆ ದಿನಗಳಲ್ಲಿ ಠಾಣೆಯಲ್ಲಿ ನೆಲೆಸಿತ್ತು. ಆ ಸೈನ್ಯವನ್ನು ಅಹಮದಾಬಾದಿಗೆ ಕರೆಸಲಾಯಿತು. ರಾಜಕುಮಾರ (ಷಹಜಾದ) ಅಹಮದ್‌ನ ಪಟ್ಟಾಭೀಷೆಕವನ್ನು ರಂಜಾನ್ ಹಬ್ಬದ ದಿನ ನೇರವೇರಿಸಬೇಕೆಂದು ತೀರ್ಮಾನಿಸಲಾಯಿತು.

ಇಮಾದುಲ್‌ಮುಲ್ಕನ ಕಾರ್ಯಕ್ರಮ :

ಇಮಾದುಲ್‌ಮುಲ್ಕ್‌ನ ಎಲ್ಲಾ ಸ್ನೇಹಿತರು ಹಬ್ಬಕ್ಕೆ ಮೊದಲೇ ಒಂದೆಡೆ ಸೇರಿಕೊಂಡರು. ಹಬ್ಬದ ದಿನ ಇಮಾದುಲ್‌ಮುಲ್ಕನು ತನ್ನ ಸೈನ್ಯವನ್ನು ಸಿದ್ಧವಾಗಿಡಲು

ಆಜ್ಞಾಪಿಸಿದನು. ಷಹಜಾದನು ದರ್ಬಾರಿನಲ್ಲಿ ಹಾಜರಾದನು. ಹಿಂದಿನ ವಾಡಿಕೆಯಂತೆ ನಮಾಜಿಗೆಂದು ಹೊರಗೆ ಕರೆತರಲಾಯಿತು. ನಮಾಜ್ ಪ್ರಾರ್ಥನೆಯಾದ ನಂತರ ಇಮಾದುಲ್‌ಮುಲ್ಕ್‌ನು ಷಹಜಾದ ಮುಜಫರ್‌ಶಾಹನನ್ನು ಅರಮನೆಯೊಳಗೆ ವಾಪಸ್ಸ ಕರೆತರಲಾಯಿತು. ಖುದಾವಂದಖಾನನು ಇಮಾದುಲ್‌ಮುಲ್ಕನ ರಹಸ್ಯ ಕಾರ್ಯಕ್ರಮಗಳ ಬಗ್ಗೆ ಅನುಮಾನಿಸಿದನು. ಆದರೆ ಯಾರೂ ಅದನ್ನು ಹೇಳಲು ಸಿದ್ಧರಿರಲಿಲ್ಲ.

ಅಮೀರರ ಪರೀಕ್ಷೆ :

ಬಾದಶಹನ ಅತಿ ಸಮೀಪ ವರ್ತಿ ಅಮೀರನಾದ ಖೈಸರ್‌ಖಾನನು ಆ ಪಿತೂರಿಕಾರ ಅಮೀರರ ವರ್ತನೆಗಳೆಲ್ಲವನ್ನು ಬಾದಶಹನಿಗೆ ತಿಳಿಸಿದನು. ಸುಲ್ತಾನ್ ಮಹಮೂದ್‌ಶಾಹನು ಈ ಸುದ್ದಿಯಲ್ಲಿ ಎಷ್ಟು ಸತ್ಯವಿದೆ ಎಂದು ತಿಳಿಯಲು ಹಾಗೂ ಯಾರು ನನ್ನ ಮಿತ್ರರು ಮತ್ತು ಯಾರು ನನ್ನ ಶತ್ರುಗಳೆಂಬ ವಿಷಯವನ್ನು ಪರೀಕ್ಷಿಸಲು ಹೀಗೆಂದನು. ನಾನು ಮೆಕ್ಕಾ ನಗರಕ್ಕೆ ಹಜ್ ಯಾತ್ರೆಗೆ ಹೋಗಲು ಪ್ರಯಾಣವನ್ನು ಬೆಳೆಸಲು ಬಯಸಿದ್ದೇನೆ ಎಂದನು. ಇದರಿಂದ ಯಾವ ಅಮೀರನು ನನ್ನ ಮಾತನ್ನು ಪುಷ್ಟೀಕರಿಸುವನೋ ಅವನೇ ನನ್ನ ಶತ್ರುವೆಂದು ತಿಳಿಯಬಹುದೆಂದು ಈ ಉಪಾಯವನ್ನು ಹೂಡಿದನು. ಈ ಕಾರ್ಯಕ್ಕೆಂದು ಬಾದಶಹನು ಅಮಾಲನನ್ನು ಕರೆದು ಒಂದು ತಿನ್‌ಗೆಗಳನ್ನು ಕೊಟ್ಟು ಪ್ರಯಾಣಕ್ಕೆ ಬೇಕಾದ ಅಗತ್ಯ ವಸ್ತುಗಳನ್ನು ಖರೀದಿಸಲು ಹೇಳಿದನು. ಇದಾದ ನಂತರ ಬಾದಶಹನು ಮುಸ್ತಫಾಬಾದನಿಂದ 'ಕಬೂಕಬಾ'ದತ್ತ ಪ್ರಯಾಣವನ್ನು ಮಾಡಿ ದೋಣಿಯಲ್ಲಿ ಕುಳಿತು 'ಕಂಪಾಯತ್'ಗೆ ರವಾನೆಯಾದ.

ಬಾದಶಹನ ಇಚ್ಛೆ :

ಬಾದಶಹನು ಅಹಮದಾಬಾದಿಗೆ ಬರುತ್ತಿರುವ ಸುದ್ದಿ ಎಲ್ಲೆಲ್ಲೂ ಹರಡಿತು. ಎಲ್ಲ ಅಮೀರರೂ ಶಹಜಾದನ ಜೊತೆಯಲ್ಲಿ ಬಾದಶಹನ ಸೇವೆಯಲ್ಲಿ ಹಾಜರಾದರು. ಎಲ್ಲ ಅಮೀರರೂ, ದರ್ಬಾರಿಗಳೂ ಸೇರಿದ ಒಂದು ದಿನ ಬಾದಶಹನು–ಅಲ್ಲಾಹನ ಕೃಪೆಯಿಂದ ಈಗ ನನ್ನ ಮಗ ಯುವಕನಾಗಿದ್ದಾನೆ. ಪ್ರಪಂಚದ ಅರಿವು ಆತನಿಗಾಗಿದೆ. ಅಮೀರರೂ ಕೂಡ ಆತನ ಸೇವೆಯಲ್ಲಿ ನಿರತರಾಗಲು ಸಿದ್ಧರಿದ್ದಾರೆ. ಆದ್ದರಿಂದ ನನ್ನ ಇಚ್ಛೆ ಏನೆಂದರೆ ಆಡಳಿತದ ಎಲ್ಲ ಜವಾಬ್ದಾರಿಗಳನ್ನು ಷಹಜಾದನಿಗೆ ವಹಿಸಿ ನಾನು ಹಜ್ ಯಾತ್ರೆಗೆ ತೆರಳಲು ಮನಸ್ಸು ಮಾಡಿದ್ದೇನೆಂದು ಹೇಳಿದನು.

ಅಮಾದುಲ್‌ಮುಲ್ಕ್‌ನ ಅಭಿಪ್ರಾಯ :

ಈ ಸಂದರ್ಭದಲ್ಲಿ ಅಮಾದುಲ್‌ಮುಲ್ಕ್‌ನು ಪ್ರಾರ್ಥಿಸಿದನು. ತಾವು ಒಂದು

ಸಲ ಮಾತ್ರ ಅಹಮದಾಬಾದಿಗೆ ದಯಮಾಡಿಸಿ ನಂತರ ನಿಮಗೆ ಏನು ಮಾಡಬೇಕೆನ್ನಿಸುವುದೋ ಅದನ್ನು ಮಾಡುವಿರಂತೆ ಎಂದನು. ಇದನ್ನು ಕೇಳಿದ ಸುಲ್ತಾನ್ ಮಹಮೂದ್‌ನು ಇದರಲ್ಲಿ ಏನೋ ಅರ್ಥವಿದೆಯೆಂದು ಅರಿತು ಅಹಮದಾಬಾದ ನಗರಕ್ಕೆ ತಲುಪಿದನು. ಒಂದು ದಿನ ಎಲ್ಲ ಅಮೀರರನ್ನು ತನ್ನ ಬಳಿ ಕರೆದು, ನೀವೆಲ್ಲರೂ ಎಲ್ಲಿಯವರೆಗೆ ನನಗೆ ಹಜ್‌ಯಾತ್ರೆಗೆ ಹೋಗಲು ಅನುಮತಿಯನ್ನು ಕೊಡುವುದಿಲ್ಲವೋ ಅಲ್ಲಿಯವರೆಗೆ ನಾನು ಊಟಮಾಡುವುದಿಲ್ಲವೆಂದು ತಿಳಿಸಿದನು.

ಬಾದಶಹ ಮತ್ತು ಅಮಾದುಲ್‌ಮುಲ್ಕ್‌ರ ಮಾತು :

ಎಲ್ಲ ಅಮೀರರಿಗೂ ಅನ್ನಿಸಿದ್ದುದೇನೆಂದರೆ ಬಾದಶಹರು ನಮ್ಮನ್ನು ಪರೀಕ್ಷಿಸಲು ಈ ಮಾತನ್ನು ಆಡಿದ್ದಾರೆ ಎಂದು ಇದರಿಂದ ಅವರೆಲ್ಲ ಮೌನವಾಗಿ ಕುಳಿತಿದ್ದರು. ಆಗ ಅಮಾದುಲ್‌ಮುಲ್ಕ್‌ನು ಹೀಗೆ ಹೇಳಿದನು. ತಮ್ಮ ನೌಕರನ ಮಗ ಈಗ ನವಯುವಕನಾಗಿರುತ್ತಾನೆ. ಆತನಿಗೆ ನನ್ನ ಹುದ್ದೆಯನ್ನು ವಹಿಸಿ ಕೊಡಬೇಕು. ನನಗೆ ಈಗ ತಮ್ಮ ಬಳಿಯೇ ತಮ್ಮ ಸೇವೆಯನ್ನು ಮಾಡಲು ಕೃಪೆ ಮಾಡಬೇಕು. ಇದಕ್ಕೆ ಬಾದಶಹನು ಹೀಗೆ ಉತ್ತರಿಸಿದನು. ನಿಮ್ಮ ಈ ಯೋಚನೆ ಉತ್ತಮವಾಗಿದೆ. ನೀವು ನನ್ನ ಜೊತೆ ಖಂಡಿತ ಇರಬೇಕು ನಿಜ ಆದರೆ ರಾಜ್ಯದ ಆಡಳಿತದ ದೃಷ್ಟಿಯಿಂದ ನೀವು ಇಲ್ಲಿಯೇ ಇರಬೇಕಾದುದ್ದು ಅನಿವಾರ್ಯವಿದೆ. ಆದ್ದರಿಂದ ಸದ್ಯಕ್ಕೆ ನೀವು ಇಲ್ಲಿಯೇ ಇರಬೇಕು.

ನಿಜಾಮುಲ್‌ಮುಲ್ಕ್‌ನ ಅಭಿಪ್ರಾಯ :

ಇದಾದ ನಂತರ ಅಮಾದುಲ್‌ಮುಲ್ಕ್‌ನ ಸನ್ನೆಯಂತೆ ನಿಜಾಮುಲ್‌ಮುಲ್ಕ್ ಬಾದಶಹರಿಗೆ ಹೀಗೆಂದನು.–ಹುಜೂರರು ಮೊಟ್ಟಮೊದಲು ಹಜ್‌ಯಾತ್ರೆಯ ಖರ್ಚಿಗೆ ಮತ್ತು ಖಜಾನೆಯನ್ನು ಭರ್ತಿ ಮಾಡಬೇಕಾಗಿರುವುದರಿಂದ ಚನಾನೀರ್ ಕೋಟೆಯನ್ನು ಗೆಲ್ಲಬೇಕಾಗಿದೆ. ಇದಾದ ನಂತರ ತಾವು ಹಜ್ ಯಾತ್ರೆಗೆ ತೆರಳಬಹುದಾಗಿದೆ ಎಂದನು. ಈ ಅಭಿಪ್ರಾಯಕ್ಕೆ ಬಾದಶಹನು–ದೇವರ ಇಚ್ಛೆಯಂತೆ ಹಾಗೆಯೇ ಆಗಲಿ ಎಂದನು. ಇಷ್ಟುಹೊತ್ತಿಗೆ ಊಟದ ಸಮಯವಾಗಿತ್ತು. ಬಾದಶಹನು ಊಟಕ್ಕೆ ತೆರಳಿದನು.

ಗುಟ್ಟು ಬಹಿರಂಗ :

ಬಾದಶಹನು ಉದ್ದೇಶ ಪೂರ್ವಕವಾಗಿಯೇ ಕೆಲವು ದಿನಗಳ ತನಕ ಅಮಾದುಲ್‌ಮುಲ್ಕ್‌ನೊಂದಿಗೆ ಮಾತನಾಡಲಿಲ್ಲ. ಒಂದು ದಿನ ಬಾದಶಹರು ಒಂಟಿಯಾಗಿದ್ದಾಗ ಹೀಗೆ ಕೇಳಿದನು–ನಿಮ್ಮ ವಿಶ್ವಾಸಿ ಸೇವಕನಾದ ನಾನು ನಿರಪರಾಧಿಯಾಗಿದ್ದೇನೆ. ಈ ಹಿಂಸೆ ನನ್ನ ಮೇಲೆ ಏಕೆ? ಬಾದಶಹನು ಎಲ್ಲಿಯವರೆಗೆ

ನೀನು ಎಲ್ಲ ವಿಚಾರಗಳನ್ನು ಬಹಿರಂಗಪಡಿಸುವುದಿಲ್ಲವೋ ಅಲ್ಲಿಯತನಕ ನಾನು ನಿನ್ನಿಂದ ದೂರವಾಗಿಯೇ ಇರುವೆನು ಎಂದನು. ಆಗ ಅಮಾದುಲ್‌ಮುಲ್ಕ್‌ನು ನಾನು ಗುಟ್ಟನ್ನು ಬಹಿರಂಗ ಪಡಿಸುವುದಿಲ್ಲವೆಂದು ಪ್ರಮಾಣ ಮಾಡಿದ್ದೇನೆ. ಆದರೂ ಈಗ ವಿವಶನಾಗಿ ಹೇಳಬೇಕಾಗಿದೆ. ಇದ್ದುದನ್ನು ಸತ್ಯವಾಗಿ ಹೇಳಬೇಕಾದರೆ– ನೀವು ಮುಸ್ತಫಾಬಾದಿನಲ್ಲಿ ಏನು ಕೇಳಿರುವಿರೋ ಅದೇ ಸತ್ಯವಾದದ್ದು ಎಂದನು.

ಖುದಾವಂದಖಾನನಿಗೆ ಪಾರಿವಾಳದ ಹೆಸರು :

ಇಮಾದುಲ್‌ಮುಲ್ಕ್‌ನ ಈ ಮಾತುಗಳನ್ನು ಕೇಳಿದ ಬಾದಶಹನು ಬಹಳ ತಾಳ್ಮೆಯಿಂದ ವರ್ತಿಸಿದನು. ಖುದಾವಂದ್‌ಖಾನನ ಮೇಲೆ ಯಾವ ಕ್ರಮವನ್ನು ತೆಗೆದುಕೊಳ್ಳಲು ಇಚ್ಛಿಸಲಿಲ್ಲ. ತನ್ನ ಒಂದು ಪಾರಿವಾಳಕ್ಕೆ ಖುದಾವಂದಖಾನನೆಂದು ಹೆಸರಿಟ್ಟನು. ಏಕೆಂದರೆ ಖುದಾವಂದಖಾನನ ಮನಸ್ಸು ಬದಲಾಯಿಸಬಹುದು ಎಂದು.

ಬಾದಶಹನ ಇಚ್ಛೆ "ಪಟನ್" ನಗರದತ್ತ :

ಈ ಘಟನೆಯ ನಂತರ ಬಾದಶಹನು ಪಟನ್ ನಗರದತ್ತ ಪ್ರಯಾಣವನ್ನು ಬೆಳೆಸಿದನು. ಅಲ್ಲಿಂದ ಅಮಾದುಲ್‌ಮುಲ್ಕ್ ಮತ್ತು ಖೈಸರ್‌ಖಾನರನ್ನು 'ಜಾಲೋರ್' ಮತ್ತು 'ಸಾಜೋರ್'ಗಳನ್ನು ಗೆಲ್ಲಲು ಕಳುಹಿಸಿಕೊಟ್ಟನು.

ಖೈಸರ್‌ಖಾನನ ಕೊಲೆ:

ಈ ಇಬ್ಬರೂ ಅಮೀರರು ಬಾದಶಹನ ಅಪ್ಪಣೆಯನ್ನು ಪಡೆದು, ಶೇಖ್ ಹಾಜಿ ರಜಬ್‌ರವರ ದರ್ಗಾದ ಹತ್ತಿರ ಹೋಗಿ ಬೀಡು ಬಿಟ್ಟರು. ಅಷ್ಟು ಹೊತ್ತಿಗೆ ಖುದಾವಂದಖಾನನ ಪತನದ ಸಮಯ ಸಮೀಪಿಸಿತ್ತು. ಅವನ ಮಗ ಮುಜಾಹಿದಖಾನನು ತನ್ನ ತಾಯಿಯ ತಂಗಿಯ ಸಂಬಂಧಿ ಸಾಹಬ್‌ಖಾನನ ಜೊತೆಗೂಡಿ ರಾತ್ರಿ ಹೊತ್ತಿನಲ್ಲಿ ಖೈಸರಖಾನನು ಇಳಿದಿರುವ ಬಿಡಾರದ ಹತ್ತಿರ ಬಂದು ಖೈಸರಖಾನನನ್ನು ಕೊಲೆ ಮಾಡಿದನು.

ಖುದಾವಂದನ ಸೆರೆ :

ಬಾದಶಹನು ತಿಳಿದಿದ್ದೇನೆಂದರೆ ಖೈಸರ್‌ಖಾನನನ್ನು ಆತನ ಹಳೆಯ ಶತ್ರು ಅರ್‌ಷದಖಾನನು ಕೊಂದಿದ್ದಾನೆಂದು ಇದರಿಂದಾಗಿ ಅರ್‌ಶದ್‌ಖಾನನನ್ನು ಹಿಡಿದು ಸಂಕೋಲೆಗಳಿಂದ ಬಿಗಿಸಿ ಸೆರೆಮನೆಗೆ ದೂಡಿದ್ದನು. ಇದೇ ಸಂದರ್ಭದಲ್ಲಿ ಸಾಹಿಬ್‌ಖಾನನು, ಮುಜಾಹಿದ್‌ಖಾನನು ಬೆದರಿ ಪರಾರಿಯಾಗಿದ್ದರು. ಈ ಕಾರಣದಿಂದ ನಿರಪರಾಧಿ ಅರ್‌ಶದ್‌ಖಾನನು ಅಪರಾಧವನ್ನು ಮಾಡಿಲ್ಲವೆಂಬುದು ಸಾಬೀತಾಯಿತು. ಬಾದಶಹನು ಅರ್‌ಶದ್‌ಖಾನನನ್ನು ಸೆರೆಯಿಂದ ಬಿಡಿಸಿದ. ಅವನ ಜಾಗದಲ್ಲಿ ಖುದಾವಂದಖಾನನನ್ನು ಸೆರೆಗೆ ಹಾಕಿಸಿ ಬಾದಶಹನು ಅಹಮದಾಬಾದಿಗೆ ವಾಪಸ್ಸಾದನು.

ಇಮಾದುಲ್‌ಮುಲ್ಕ್‌ನ ಮರಣ :

ಅದೇ ದಿನಗಳಲ್ಲಿ ಅಮಾದುಲ್‌ಮುಲ್ಕ್ ಕಾಯಿಲೆ ಬಿದ್ದನು. ಕೆಲವು ದಿನಗಳ ನಂತರ ಆತನು ಮರಣ ಹೊಂದಿದನು. ಬಾದಶಹನು ಮರಣ ಹೊಂದಿದವನ ಮಗನಾದ ಇಖ್ತಿಯಾರ್‌ಉಲ್‌ಮುಲ್ಕ್‌ನನ್ನು ಆತನ ಜಾಗಕ್ಕೆ ನೇಮಿಸಿಕೊಂಡನು. ಇಖ್ತಿಯಾರುಲ್‌ಮುಲ್ಕ್‌ನು ಕೆಲವೇ ಸಮಯದಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಿಕೊಂಡನು. ಬಾದಶಹನ ವಿಶೇಷ ಕೆಲಸಗಳಲ್ಲಿ ಹೆಸರನ್ನು ಗಳಿಸಿಕೊಂಡನು. ಈ ಘಟನೆಗಳ ನಂತರ ಬಾದಶಹನು ಮುಸ್ತಫಾಬಾದಿಗೆ ಬಂದನು. ಇಲ್ಲಿ ಬಹಳ ದಿನಗಳ ತನಕ ತಂಗಿದ್ದನು.

ಜನಾನೇರ್ ಕೋಟೆಯನ್ನು ಗೆಲ್ಲುವ ಇಚ್ಛೆ :

ಹಿಜರಿ ೮೮೭ರ ರಜಬ್ ತಿಂಗಳಲ್ಲಿ ಬಾದಶಹನು ಅಮೀರರ ಒಂದು ಗುಂಪನ್ನು ಅಹಮದಾಬಾದಿನಲ್ಲಿಯೇ ಬಿಟ್ಟು ಸ್ವತಃ ಜನಾನೇರ್‌ನ್ನು ಗೆಲ್ಲಲು ಪ್ರಯಾಣಕ್ಕೆ ಸಿದ್ಧತೆಯನ್ನು ನಡೆಸಿದನು. ಇನ್ನೇನು ಪ್ರಯಾಣವನ್ನು ಮಾಡಬೇಕೆನ್ನುವಷ್ಟರಲ್ಲಿ ಸುದ್ದಿ ತಿಳಿದಿದ್ದೇನೆಂದರೆ–ಮಲಬಾರಿನ ರಾಜರುಗಳು ಬಹಳ ದೋಣಿಗಳನ್ನು ಸಂಗ್ರಹಿಸಿಕೊಂಡು ನದಿಗಳಲ್ಲಿ ಸಂಚರಿಸುವ ಬಾದಶಹರುಗಳನ್ನು ಲೂಟಿ ಮಾಡಬೇಕು ಎಂಬ ಅಭಿಪ್ರಾಯವನ್ನು ಹೊಂದಿದ್ದಾರೆ.

ಮಲಬಾರಿಗಳ ತಲೆಹರಟೆ :

ಈ ಸುದ್ದಿಯನ್ನು ತಿಳಿದ ಬಾದಶಹನು ಸದ್ಯಕ್ಕೆ ಜನಾನೇರ್ ಗೆಲ್ಲಲು ಹೋಗುವದು ಉಚಿತವಲ್ಲವೆಂದು ತೀರ್ಮಾನಿಸಿದನು. ಮಲಬಾರಿಗಳ ಕಾಟವನ್ನು ತಪ್ಪಿಸಲು ಪ್ರಯಾಣಿಸಿದನು. ಸುಲ್ತಾನ್ ಮಹಮೂದ್‌ನು ಕೆಲವು ಹಡಗುಗಳನ್ನು ತೆಗೆದುಕೊಂಡನು. ಅದರಲ್ಲಿ ಯುದ್ಧ ಸಾಮಗ್ರಿಗಳನ್ನು ಹೊತ್ತು ಸೈನ್ಯದೊಂದಿಗೆ ಶತ್ರುಗಳತ್ತ ತಲುಪಿದನು. ಮಲಬಾರಿಗಳಲ್ಲಿ ಬಾದಶಹನನ್ನು ಎದುರಿಸುವಷ್ಟು ಶಕ್ತಿ ಇರಲಿಲ್ಲ. ಅವರು ಓಡಲು ಪ್ರಾರಂಭಿಸಿದರು. ಬಾದಶಹನು ಅವರನ್ನು ಹಿಂಬಾಲಿಸಿ ಅವರ ಕೆಲವು ಹಡಗುಗಳನ್ನು ವಶಪಡಿಸಿಕೊಂಡನು. ಅವುಗಳೊಂದಿಗೆ ಬಾದಶಹನು ಕಂಪಾಯತ್ ಜಾಗಕ್ಕೆ ಬಂದು ಬಿಟ್ಟನು.

ಬರಗಾಲ :

ಸುಲ್ತಾನ್ ಮಹಮೂದ್‌ನು ಗುಜರಾತಿಗೆ ವಾಪಸ್ಸಾದನು. ಅದೇ ವರ್ಷ ತನ್ನ ರಾಜ್ಯದಲ್ಲಿ ಮಳೆ ಬರದೆ ಬರಗಾಲವೂ ಕಾಲಿಟ್ಟಿತ್ತು. ಅಸಂಖ್ಯಾತ ಜನರು ಬರಗಾಲಕ್ಕೆ ತುತ್ತಾಗಿ ಮರಣ ಹೊಂದಿದರು. ಎಲ್ಲೆಲ್ಲೂ ಹಾಹಾಕಾರವೆದ್ದಿತ್ತು.

ಜನಾನೇರ್ ಕೋಟೆ :

ಅದೇ ವರ್ಷ ಜೀಕದ್ ತಿಂಗಳಲ್ಲಿ ಬಾದಶಹನು ಜನಾನೇರ್ ಕೋಟೆಯನ್ನು ವಶಪಡಿಸಿಕೊಳ್ಳಲು ತಯಾರಾದನು. ಈ ಕೋಟೆಯು ಬಹಳ ಸದೃಢವಾಗಿದ್ದು, ಒಂದು ಎತ್ತರವಾದ ಬೆಟ್ಟದ ಮೇಲೆ ಕಟ್ಟಲಾಗಿತ್ತು. ಯಾವ ಬೆಟ್ಟದ ಮೇಲೆ ಈ ಕೋಟೆಯು ಕಟ್ಟಲಾಗಿತ್ತೊ ಅದರ ಪಕ್ಕದಲ್ಲೇ ಮತ್ತೊಂದು ಬೆಟ್ಟವು ಬಹಳ ಎತ್ತರವಾಗಿ ನಿಂತಿತು. ಈ ಎತ್ತರವಾದ ಬೆಟ್ಟದ ಮೇಲೆ ಒಂದು ಬುರ್ಜನ್ನು ಸುಣ್ಣ ಮತ್ತು ಕಲ್ಲುಗಳಿಂದ ಕಟ್ಟಲ್ಪಟ್ಟಿತು. ಈ ಎರಡೂ ಕೋಟೆಗಳ ರಾಜನೂ ಒಬ್ಬನೇ ಆಗಿದ್ದನು. ಈ ರಾಜವಂಶಸ್ಥರು ಬಹಳ ಕಾಲದಿಂದಲೂ ಆಳುತ್ತಾ ಬಂದಿದ್ದರು. ಈ ವಂಶಸ್ಥರ ರಾಜರುಗಳ ಸೇವೆಯಲ್ಲಿ ೬೦ ಸಾವಿರ ರಾಜಪೂತ ಸವಾರರು ಮತ್ತು ಕಾಲಾಳು ಸೈನಿಕರಿದ್ದರು. ಈ ಕಾರಣದಿಂದಾಗಿ ಅಲ್ಲಿನ ರಾಜರು ಬಹಳ ಗರ್ವಿಗಳು ಅಹಂಕಾರಿಗಳಾಗಿ ಮೆರೆಯುತ್ತಿದ್ದರು. ಬೇರೆ ಯಾರ ಅಧೀನತೆಯನ್ನು ಒಪ್ಪುತ್ತಿರಲಿಲ್ಲ.

ಜನಾನೇರ್ ಕೋಟೆಯ ಮೇಲೆ ಆಕ್ರಮಣ :

ರಾಜ ಬನಾಹಿಯ ಕೈಯಲ್ಲಿ ಶಾಸನಾಧಿಕಾರವಿದ್ದಾಗ ಗುಜರಾತಿನ ರಾಜಕ್ಕೆ ಸೇರಿದ ರಸೂಲಾಬಾದನ ಮುಸಲ್ಮಾನರ ಮೇಲೆ ಹಿಂಸೆಯ ಪ್ರವಾಹವೇ ನಡೆದಿತ್ತು. ಸುಲ್ತಾನ್ ಮಹಮೂದ್‌ನು ಜನಾನೇರ್ ಮೇಲೆ ಆಕ್ರಮಣವನ್ನು ನಡೆಸಲು ಬಡೋದ ತಲುಪಿದಾಗ ರಾಜನಿಗೆ ತನ್ನ ತಪ್ಪುಗಳ ಅರಿವಾಗಿ ಬಾದಶಹನ ಹತ್ತಿರ ಒಬ್ಬ ರಾಜದೂತನನ್ನು ರಾಜಿ ಮಾಡಿಕೊಳ್ಳಲು ಕಳುಹಿಸಿದನು. ಹಾಗೂ ಬಾದಶಹನ ಅಧೀನತೆಯನ್ನು ಸ್ವೀಕರಿಸಲು ಸಿದ್ಧನಾಗಿ ಕಪ್ಪಕಾಣಿಕೆಗಳನ್ನು ನೀಡಿ ಒಪ್ಪಿದನು.

ರಾಜಪೂತರೊಂದಿಗೆ ಯುದ್ಧಗಳು :

ಸುಲ್ತಾನ್ ಮಹಮೂದ್‌ನು ರಾಜನ ಮಾತನ್ನು ಒಪ್ಪಲಿಲ್ಲ. ಅಸದಲ್‌ಮುಲ್ಕ ಮತ್ತು ತಾಜ್‌ಖಾನರು ಮುಂದೆ ಮುಂದೆ ನಡೆದರು. ಸಫರ್ ತಿಂಗಳ ಏಳನೆಯ ತಾರೀಖು ಹಿಜರಿ ಶಕೆ ೮೮೮ರಲ್ಲಿ ಬೆಟ್ಟದ ತಪ್ಪಲಿಗೆ ತಲುಪಿ ಬೀಡು ಬಿಟ್ಟರು. ಪ್ರತಿದಿನ ಒಂದೊಂದು ಗುಂಪು ರಾಜಪೂತರ ಸೈನ್ಯವು ಗುಜರಾತಿ ಸೈನ್ಯದೊಂದಿಗೆ ಕೋಟೆಯಿಂದ ಹೊರಬಂದು ಯುದ್ಧ ಮಾಡುತ್ತಿದ್ದರು. ಈ ಮಧ್ಯ ಬಾದಶಹನು ಸಹ ಕಸಬಾ ಬಡೋದದಿಂದ ಹೊರಟು ಬೇಗ–ಬೇಗ ಬಂದು ಜನಾನೇರ್ ಕೋಟೆಯ ಹತ್ತಿರಕ್ಕೆ ತಲುಪಿದನು. ಅಲ್ಲಿಂದ "ಮೋಜ್‌ಕರ್‌ಯಾರ್"ಗೆ ಹೋದನು. ಅದು ಮಾಳವ ರಾಜ್ಯದ ದಾರಿಯಲ್ಲಿಯೇ ಸಿಗುತ್ತದೆ.

ಸಂಧಿ ಮಾಡಿಕೊಳ್ಳಲು ಪ್ರಾರ್ಥನೆ :

ರಾಜ ಬನಾಹಿಯು ಮತ್ತೊಮ್ಮೆ ತನ್ನ ರಾಜದೂತರನ್ನು ಸಂಧಿ ಮಾಡಿಕೊಳ್ಳಲು

ಬಾದಶಹನ ಹತ್ತಿರಕ್ಕೆ ಕಳುಹಿಸಿದನು. ಅನೇಕ ಬಹುಮಾನಗಳೊಂದಿಗೆ ತನ್ನನ್ನು ಕ್ಷಮಿಸಬೇಕೆಂದು ಕೇಳಿ ಕಳುಹಿಸಿದನು. ಈ ಸಲವೂ ಬಾದಶಹನು ರಾಜನ ಕೋರಿಕೆಯನ್ನು ತೀರಸ್ಕರಿಸಿದನು. ವಿವಶನಾದ ರಾಜನು ತನ್ನೆಲ್ಲಾ ಸೈನಿಕರನ್ನು ಒಟ್ಟುಗೂಡಿಸಿಕೊಂಡು ಇತರೆ ರಾಜರಲ್ಲೂ ಸಹಾಯವನ್ನು ಬೇಡಿ ಸುಮಾರು ಅರವತ್ತುಸಾವಿರ ಸೈನಿಕರ ಗುಂಪನ್ನು ತೆಗೆದುಕೊಂಡು ಬೆಟ್ಟದಿಂದ ಕೆಳಗಿಳಿದನು.

ಸೋತ ರಾಜ ಕೋಟೆಯಲ್ಲಿ ಅಡಗಿದ :

ಇಬ್ಬರಲ್ಲೂ ಭಯಾನಕ, ಘೋರ ಯುದ್ಧವಾಯಿತು. ಇದರ ಪರಿಣಾಮವಾಗಿ ರಾಜನಿಗೆ ಹೀನಾಯ ಸೋಲುಂಟಾಯಿತು. ಅವನು ಹತ್ತು-ಹನ್ನೆರಡು ಸಾವಿರ ರಾಜಪೂತರನ್ನು ಕೋಟೆಯೊಳಗೆ ಸೇರಿಸಿಕೊಂಡು ಅಡಗಿಕೊಂಡನು. ಸುಲ್ತಾನ್ ಮಹಮೂದ್‌ನು ಕೋಟೆಯ ಹತ್ತಿರದಲ್ಲೇ ಬಿಡುಬಿಟ್ಟನು. ಕೋಟೆಯ ಗುಟ್ಟು ಮತ್ತು ಇತರೆ ಯುದ್ಧದ ಅನೇಕ ಸಮಾಚಾರಗಳನ್ನು ಕಲೆಹಾಕಲು ಪ್ರಯತ್ನಿಸುತ್ತಿದ್ದನು. ಇತರೆ ಸರದಾರರನ್ನು ಮಹತ್ವಪೂರ್ಣ ಜಾಗಗಳಲ್ಲಿ ಎಚ್ಚರವಾಗಿರಲು ಆದೇಶಿಸಿ ತಾನು ಸ್ವತಃ ಮುಖ್ಯ ಜಾಗಕ್ಕೆ ಬಿಡಾರಕ್ಕೆ ಬಂದನು. ಸಯ್ಯದ ಬದರ್ ಎಂಬುವನಿಗೆ ದಾರಿಯನ್ನು ಕಾಯಲು ನೇಮಿಸಿದನು.

ಸಯ್ಯದ ಬದರ್‌ನ ಕೊಲೆ :

ಸಯ್ಯದ ಬದರನು ಒಂದು ದಿನ ಆಹಾರ ಸಾಮಗ್ರಿಗಳನ್ನು ತೆಗೆದುಕೊಂಡು ಹೋಗುತ್ತಿದ್ದನು. ರಾಜಪೂತರು ಆತನ ಮೇಲೆ ಆಕ್ರಮಣವನ್ನು ಮಾಡಿ ಕೊಲೆಗೈದರು. ಸಯ್ಯದ ಬದರ ಜೊತೆಯಲ್ಲಿದ್ದ ಮುಸಲ್ಮಾನರನ್ನೂ ಕೊಲೆ ಮಾಡಿ ಬಿಟ್ಟರು. ಅವರಲ್ಲಿದ್ದ ಎಲ್ಲ ಸಾಮಾನುಗಳನ್ನು ಲೂಟಿಮಾಡಿಕೊಂಡು ಹೋದರು. ಬಾದಶಹನು ಈ ಸಮಾಚಾರದಿಂದ ತುಂಬಾ ಸಿಟ್ಟಿಗೆದ್ದನು. ಜನಾನೇರ್ ಕೋಟೆಯನ್ನು ತಕ್ಷಣ ಗೆಲ್ಲಲೇಬೇಕೆಂಬ ಹಟಮಾಡಿದನು.

ಕೋಟೆಯ ಮುತ್ತಿಗೆ :

ಇಷ್ಟು ಹೊತ್ತಿಗೆ ಬಾದಶಹನ ಸೈನಿಕ ಸಿದ್ಧತೆ ಮೊದಲಿಗಿಂತ ಹೆಚ್ಚಾಗಿ ಸುಸಜ್ಜಿತವಾಗಿತ್ತು. ಬಾದಶಹನು ಕೋಟೆಯ ಹತ್ತಿರವೇ ನೆಲೆಸಿದ್ದನು. ಇದರಿಂದಾಗಿ ರಾಜ ನಬಾಹಿ ಬಹಳ ಚಿಂತಾಕ್ರಾಂತನಾದನು. ಅವನು ತನ್ನ ಒಬ್ಬ ದೂತನನ್ನು ಸುಲ್ತಾನ್ ಘೀಯಾಸುದ್ದೀನ ಖಿಲ್ಜಿಯ ಹತ್ತಿರಕ್ಕೆ ಸಹಾಯಕ್ಕೆ ಬರಬೇಕೆಂದು ಕೇಳಿಕೊಳ್ಳಲು ಕಳುಹಿಸಿದನು. ಆತನ ಪ್ರತಿಯೊಂದು ಪಯಣದ ಮಜಲಿಗೆ ಒಂದು ಲಕ್ಷ 'ತಿನ್ಗೆ'ನಾಣ್ಯಗಳನ್ನು ನೀಡಲು ಒಪ್ಪಿದ್ದನು.

ಸುಲ್ತಾನ್ ಖಿಲ್ಜಿಯೊಂದಿಗೆ ಯುದ್ಧ :

ಸುಲ್ತಾನ್ ಘೀಯಾಸುದ್ದೀನ ಖಿಲ್ಜಿಯು ತನ್ನ ಸೈನ್ಯವನ್ನು ಜಮಾಯಿಸಿಕೊಂಡನು. ಈ ವಿಷಯವು ಸುಲ್ತಾನ್ ಮಹಮೂದ್‌ನಿಗೆ ತಿಳಿದ ತಕ್ಷಣ ಆತನ ಸೈನ್ಯವು ಬರದಂತೆ ಅಲ್ಲಲ್ಲಿ ತಡೆಯೊಡ್ಡಿ ಯುದ್ಧ ಮಾಡಲು 'ದಬೋರ್' ಎಂಬ ಜಾಗಕ್ಕೆ ತಲುಪಿದನು. ಅಲ್ಲಿಗೆ ಹೋದ ನಂತರ ಸುಲ್ತಾನ್ ಮಹಮೂದ್‌ನಿಗೆ ಸುದ್ದಿ ತಿಳಿದಿದ್ದೇನೆಂದರೆ ಸುಲ್ತಾನ್ ಖಿಲ್ಜಿಯು ತನ್ನ ವಿದ್ವಾಂಸರು, ಖಾಜಿಗಳನ್ನು ಕುರಿತು ಹೀಗೆ ಕೇಳಿದನಂತೆ ಒಂದು ವೇಳೆ ಒಬ್ಬ ಮುಸಲ್ಮಾನ ಬಾದಶಹನು ಯಾರಾದರೂ ಒಬ್ಬ ಹಿಂದೂ ರಾಜನ ಮೇಲೆ ಆಕ್ರಮಣ ಮಾಡಿದಾಗ ಮತ್ತೊಮ್ಮ ಮುಸಲ್ಮಾನ ಬಾದಶಹ ಹಿಂದುರಾಜನನ್ನು ಉಳಿಸಲು ಹೋಗಬಹುದೇ ಎಂದು.

ಸುಲ್ತಾನ್ ಖಿಲ್ಜಿಯ ಹಿಂತಿರುಗುವಿಕೆ :

ಧಾರ್ಮಿಕ ವಿದ್ವಾಂಸರು ಸುಲ್ತಾನ್ ಖಿಲ್ಜಿಗೆ ಹೀಗೆ ಹೇಳಿದರಂತೆ ಈ ತೆರನಾದ ಸಹಾಯ ಮಾಡುವುದು ಧರ್ಮದ ದೃಷ್ಟಿಯಲ್ಲಿ ಸರಿಯಲ್ಲ ಎಂದು. ಸುಲ್ತಾನ್ ಖಿಲ್ಜಿಯು ಧಾರ್ಮಿಕ ಸಲಹೆಯ ದೃಷ್ಟಿಯಿಂದ ಯುದ್ಧದಲ್ಲಿ ನಬಾಹಿ ರಾಜನ ಸಹಾಯವನ್ನು ತಿರಸ್ಕರಿಸಿ ಅರ್ಧ ದಾರಿಯಿಂದ ಹಿಂದಕ್ಕೆ ಸರಿದನಂತೆ.

ಮಸೀದಿಯ ನಿರ್ಮಾಣ :

ಈ ಸಮಾಚಾರವನ್ನು ಕೇಳಿದ ಸುಲ್ತಾನ್ ಮಹಮೂದ್‌ನು ತುಂಬಾ ಸಂತೋಷ ಪಟ್ಟನು. ಪುನಃ ಜನಾನೇರಿಗೆ ವಾಪಸ್ ಬಂದನು. ಕೋಟೆಯನ್ನು ಗೆಲ್ಲುವುದಕ್ಕೆ ಮೊದಲೇ ಅಲ್ಲಿ ಒಂದು ಮಸೀದಿಯ ನಿರ್ಮಾಣವನ್ನು ಮಾಡಿದನು. ಬಾದಶಹನ ಈ ಕಾರ್ಯದಿಂದ ಅರ್ಥವಾದುದೇನೆಂದರೆ-ಬಾದಶಹರು ಕೋಟೆಯನ್ನು ಗೆಲ್ಲದೇ ಇಲ್ಲಿಂದ ವಾಪಸ್ಸು ಹೋಗುವುದಿಲ್ಲವೆಂದು ತಿಳಿದರು.

ಸಾಬಾತಗಳನ್ನು ಕಟ್ಟಲಾರಂಭಿಸಿದರು :

ಸಾಬಾತ್ ಎಂದರೆ ಒಂದು ಕಟ್ಟಡದಿಂದ ಮತ್ತೊಂದು ಕಟ್ಟಡಕ್ಕೆ ಮೇಲ್ಬಾವಣಿಯ ದಾರಿ ಎಂದು ಕರೆಯುತ್ತಾರೆ. ಇದರ ಸಹಾಯದಿಂದ ಕೋಟೆಯ ಒಳಗೆ ಮತ್ತು ಸುತ್ತಮುತ್ತ ಯಾವ ಚಟುವಟಿಕೆಗಳು ನಡೆಯುತ್ತಿವೆ ಎಂಬುದನ್ನು ತಿಳಿಯಬಹುದು. ಈ ಕಾರಣದಿಂದಾಗಿ ಸೈನಿಕರು ಮೊದಲು ಬಾದಶಹನ ಮತ್ತು ಆತನ ಆತ್ಮೀಯ ಗುಲಾಮ ಆಯಾಜ್ ಸುಲ್ತಾನಿ ಎಂಬುವರ ಕಟ್ಟಡಗಳಿಗೆ ಹೊಂದಿಸಿದ್ದ ಮೇಲ್ಬಾವಣಿಗಳ ದಾರಿಯು ಕಟ್ಟಲಾಯಿತು. ಒಂದು ದಿನ ಈ ಮೇಲ್ಬಾವಣಿಯಿಂದ ನೋಡುತ್ತಿರಲು ಗುಜರಾತಿ ಸಿಪಾಯಿಗಳಿಗೆ ಅರಿವಾದದ್ದೇನೆಂದರೆ-ಬೆಳಗಿನ ಹೊತ್ತು ಹಿಂದೂಗಳ ಅಸಂಖ್ಯೆ ಜನ ಸ್ನಾನಮಾಡಲು ಹಲ್ಲುತಿಕ್ಕಲು ಕೋಟೆಯಿಂದ ಹೊರಕ್ಕೆ ಹೋಗುತ್ತಿದ್ದರು.

ಆ ಸಂದರ್ಭದಲ್ಲಿ ಶತ್ರು ಸಿಪಾಯಿಗಳು ಕಾವಲಿನ ಜಾಗದಲ್ಲಿ ಇರುವುದಿಲ್ಲವೆಂಬ ವಿಚಾರ ಗುಜರಾತಿಗಳಿಗೆ ಅರ್ಥವಾಯಿತು.

ಹಿಂದೂಗಳ ಕೊಲೆ :

ಸೈನಿಕರು ಈ ವಿಷಯವನ್ನು ಬಾದಶಹನಿಗೆ ತಿಳಿಸಿದರು. ಇದಕ್ಕೆ ಬಾದಶಹನು ಆಜ್ಞಾಪಿಸಿದುದ್ದೇನೆಂದರೆ–ನಮ್ಮ ಸೈನ್ಯದ ಒಂದು ಭಾಗ ಬೆಳಗಿನ ಹೊತ್ತು ಆ ಜನರಲ್ಲಿ ಸೇರಿಕೊಂಡು ಒಳಗೆ ಪ್ರವೇಶಿಸಬಹುದು. ಈ ಉಪಾಯದಿಂದಲಾದರೂ ಕೋಟೆಯನ್ನು ನಾವು ಗೆಲ್ಲಬಹುದೆಂದು ತೀರ್ಮಾನಿಸಿದರು. ಮುಸಲ್ಮಾನ ಸಿಪಾಯಿಗಳು ಬಾದಶಹನ ಆಜ್ಞೆಯನ್ನು ಪಾಲಿಸಿದರು. ಖವಾಮುಲ್‌ಸರ್ ಜಾನ್‌ದಾರ್ ಎಂಬುವನ ಉಸ್ತುವಾರಿಯಲ್ಲಿ ಸಿಪಾಯಿಗಳು ಕೋಟೆಯಲ್ಲಿ ಪ್ರವೇಶಿಸಿ ಅಲ್ಲಿನ ಬಹಳಷ್ಟು ಸೈನಿಕರ ಕೊಲೆ ಮಾಡಿದರು.

ಯುದ್ಧದ ಆರಂಭ ಮತ್ತು ಹಿಂದೂಗಳಿಗೆ ಸೋಲು :

ರಾಜಪೂತರಿಗೆ ಗುಜರಾತಿಗಳ ಗುಟ್ಟು ಅರ್ಥವಾಯಿತು. ಅವರೆಲ್ಲರೂ ಒಟ್ಟಾಗಿ ಯುದ್ಧ ಮಾಡಲಾರಂಭಿಸಿದರು. ಮುಸಲ್ಮಾನರ ಕೈ ಮೇಲಾಯಿತು. ಅವರು ರಾಜಪೂತರ ಎರಡನೇ ಹಂತದ ರಾಜಪೂತ ಸಿಪಾಯಿಗಳೆಲ್ಲರನ್ನು ಸೋಲಿಸಿದರು.

ಅಯಾಜ್‌ಸುಲ್ತಾನನ ಶೌರ್ಯ :

ಅಕಸ್ಮಾತಾಗಿ ಆ ಘಟನೆಯ ಕೆಲವು ದಿನಗಳ ಮೊದಲು ಹಿಂದೂಗಳು ಒಂದು ಬಹಳ ದೊಡ್ಡ ತೋಪನ್ನು ಕೋಟೆಯ ಪಶ್ಚಿಮದ ಗೋಡೆಯಲ್ಲಿ ಅಡಗಿಸಿಟ್ಟಿದ್ದರು. ಈ ಗೋಡೆಯಲ್ಲಿ ಒಂದು ಬಿರುಕು ಬಿಟ್ಟಿತ್ತು. ಮಲಿಕ್ ಅಯಾಜ್‌ಸುಲ್ತಾನನು ಕೆಲವು ಸಿಪಾಯಿಗಳೊಂದಿಗೆ ಬಿರುಕಿನ ಹತ್ತಿರ ಬಂದು ಆ ಕಿಂಡಿಯು ಎರಡನೇ ಬುರ್ಜಿನಿಂದ ನೇರವಾಗಿ ಕೋಟೆಯ ಬಾಗಿಲ ಒಳಗೆ ಹೋಗುವಂತ್ತಿತ್ತು. ಇದೇ ಸಂದರ್ಭದಲ್ಲಿ ಬಾದಶಹನು ಅಲ್ಲಾಹನಲ್ಲಿ ಕೋಟೆಯ ಗೆಲುವಿಗೆ ಪ್ರಾರ್ಥಿಸುತ್ತಿದ್ದನು. ತನ್ನ ಇತರೆ ಸಿಪಾಯಿಗಳನ್ನು ಅಯಾಜ್ ಸುಲ್ತಾನ್‌ನಿಗೆ ಸಹಾಯವನ್ನು ಮಾಡಲು ಕಳುಹಿಸಿದನು.

ರಾಜಪೂತರ ಚಿಂತೆ :

ರಾಜಪೂತರು ಅಯಾಜ್ ಸುಲ್ತಾನನನ್ನು ಕೋಟೆಯ ಎತ್ತರವಾದ ಹಿಸಾರಿನಲ್ಲಿ ನಿಂತಿರುವುದನ್ನು ಕಂಡು ಹೈರಾಣಾದರು. ಮದ್ದಿನ ಚೆಂಡನ್ನು ಆತನ ಕಡೆಗೆ ಎಸೆದರು. ಆ ಚಂಡು ಅಯಾಜನಿಗೆ ಮುಟ್ಟದೇ ರಾಜನು ಮಲಗುವ ಕೋಣೆಯ ಮೇಲೆಯೇ ಬಿತ್ತು. ಈಗ ಸೋಲು ನಿಶ್ಚಿತವೆಂದರಿತ ರಾಜಪೂತರು ಚಿತೆಗಳನ್ನು ಉರಿಸಿದರು. ತಮ್ಮ ಪರಂಪರೆಗನುಸಾರವಾಗಿ ತಮ್ಮ–ತಮ್ಮ ಹೆಂಡಿರು ಮಕ್ಕಳನ್ನು

ಬೆಂಕಿಗೆ ನೂಕಿದರು. ರಾಜಪೂತರೆಲ್ಲರೂ ತಮ್ಮ ಆಯುಧಗಳೆಲ್ಲವನ್ನು ತೆಗೆದುಕೊಂಡು ಯುದ್ಧವಾಡಿ ಸಾಯಲು, ಸಾಯಿಸಲು ಸಿದ್ಧರಾಗಿ ಬಂದರು.

ಹಿಂದೂಗಳ ಸೋಲು :

ಎರಡನೇ ತಾರೀಖು, ಜೀಖದ್ ತಿಂಗಳು, ಹಿಜರಿ ಶಕೆ ೬೯೯ರ ಬೆಳಿಗ್ಗೆ ಮುಸಲ್ಮಾನ ಸೈನಿಕರೆಲ್ಲರೂ ರಾಜಪೂತರ ಮೇಲೆ ಸಿಂಹಗಳಂತೆ ಎರಗಿದರು. ಹಿಂದುಗಳನ್ನು ಸಂಪೂರ್ಣವಾಗಿ ಸೋಲಿಸಿದರು. ಮುಸಲ್ಮಾನರು ಕೋಟೆಯ ದೊಡ್ಡ ಬಾಗಿಲನ್ನು ಮುರಿದು ಒಳಗೆ ಪ್ರವೇಶಿಸಿದರು. ಒಳಗೆ ಮತ್ತೊಮ್ಮೆ ಘೋರ ಯುದ್ಧವೇ ನಡೆಯಿತು. ಮುಸಲ್ಮಾನರು ಅಸಂಖ್ಯಾತ ರಾಜಪೂತರನ್ನು ಕೊಲೆ ಮಾಡಿದರು. ಸುಲ್ತಾನ್ ಮಹಮೂದ್‌ನು ಸಹ ಕೋಟೆಯ ಹೆಬ್ಬಾಗಿಲಿನ ಹತ್ತಿರ ತಲುಪಿದನು. ತನ್ನ ಶಾಹಿ ಬಾವುಟವನ್ನು ಕೋಟೆಯ ಮೇಲೆ ಹಾರಿಸಿದನು. ಅಳಿದುಳಿದ ರಾಜಪೂತರು ಕೋಟೆಯೊಳಗಿನ ನೀರಿನ ಕೊಳದ ಹತ್ತಿರ ಸೇರಿದರು. ಸ್ನಾನ ಮಾಡಿದ ನಂತರ ಕತ್ತಿ-ಗುರಾಣಿಗಳನ್ನು ತೆಗೆದುಕೊಂಡು ಪುನಃ ಯುದ್ಧವನ್ನು ಪ್ರಾರಂಭಿಸಿದರು. ಮುಸಲ್ಮಾನರ ಸೈನ್ಯದ ಒಂದು ಭಾಗವು ಇವರೊಂದಿಗೆ ಯುದ್ಧವಾಡಿದರು. ಘೋರ ಯುದ್ಧವೇ ನಡೆಯಿತು. ಎರಡೂ ಕಡೆಗಳಲ್ಲಿ ಅಪಾರ ಸಾವು ನೋವುಗಳುಂಟಾದವು. ಕೊನೆಯಲ್ಲಿ ರಾಜಪೂತರು ಸಂಪೂರ್ಣವಾಗಿ ಸೋತರು.

ರಾಜನ ಸೆರೆ :

ರಾಜ ಬನಾಹಿ ಮತ್ತು ಆತನ ಮುಖ್ಯಮಂತ್ರಿ 'ದೊಂಕರ್ಸಿ' ಎಂಬುವರಿಬ್ಬರೂ ಜೀವಂತವಾಗಿ ಸೆರೆಹಿಡಿಯಲ್ಪಟ್ಟರು. ಅವರನ್ನು ಬಾದಶಹನ ಎದುರು ತರಲಾಯಿತು. ಮೊಟ್ಟಮೊದಲು ಬಾದಶಹನು ಈ ಗೆಲುವಿನಿಂದಾಗಿ ಸಂತೋಷದಿಂದ ಅಲ್ಲಾಹನ ಕೃಪೆಯನ್ನು ಪ್ರಶಂಸಿಸಿ, 'ಸಿಜ್ದಹ್' ಮಾಡಿದ. ನಂತರ ರಾಜ ಬನಾಹಿಯನ್ನು ಕುರಿತು ಈ ಪ್ರಶ್ನೆಯನ್ನು ಕೇಳಿದ. ನೀನು ನಮ್ಮ ಎದುರಿನಲ್ಲಿ ನಿಂತು ಈ ತೆರನಾದ ಪ್ರಾಣದಾಸೆಯನ್ನು ಬಿಟ್ಟು ಯುದ್ಧವನ್ನೇಕೆ ಮಾಡಿದೆ?

ರಾಜನ ನಾಚಿಕೆಯುಕ್ತ ಉತ್ತರ :

ಈ ರಾಜ್ಯವು ನನಗೆ ತಲೆತಲಾಂತರದ ಪೂರ್ವಜರ ಬಳುವಳಿಯಲ್ಲಿ ಸಿಕ್ಕಿರುವುದು. ಯುದ್ಧ ಮಾಡದಿದ್ದರೆ ನನಗೆ ನಾಚಿಕೆಯಾಗುತ್ತಿತ್ತು. ನನ್ನ ಪೂರ್ವಜರ ಕೊಡುಗೆಯನ್ನು ಸುಲಭವಾಗಿ ಇನ್ನೊಬ್ಬರಿಗೆ ಹೇಗೆ ಹಸ್ತಾಂತರಿಸಲಿ? ಹಾಗೆ ಸುಲಭವಾಗಿ ಬೇರೆಯವರಿಗೆ ಬಿಟ್ಟುಕೊಡುವುದು ಒಬ್ಬ ಷಂಡನ ಕೆಲಸವಾಗುತ್ತಿತ್ತು. ಈ ಮಾತನ್ನು ಕೇಳಿ ಬಾದಶಹನು ಬಹಳ ಸಂತೋಷಪಟ್ಟು ರಾಜನನ್ನು ತನ್ನ ಪಕ್ಕದಲ್ಲಿ ಕುಳ್ಳಿರಿಸಿಕೊಂಡನು.

ಮಹಮ್ಮದ್‌ಆಬಾದಿನ ನಿರ್ಮಾಣ :

ಸುಲ್ತಾನ್ ಮಹಮೂದ್‌ನು ಕೋಟೆಯ ತಳಭಾಗದಲ್ಲಿ ಹಜ್ರತ್ ಮಹಮ್ಮದ ಪೈಗಂಬರರ ಹೆಸರಿನಲ್ಲಿ "ಮಹಮ್ಮದಾಬಾದ್" ನಗರ ನಿರ್ಮಾಣವನ್ನು ಮಾಡಿದನು. ಮುಸ್ತಫಾಬಾದಿನ ಆಡಳಿತವನ್ನು ತನ್ನ ಕಿರಿಯ ಮಗನಾದ ಖಲೀಲ್‌ಖಾನನಿಗೆ ವಹಿಸಿ ಸ್ವತಃ ತಾನು ಮಹಮ್ಮದಾಬಾದ ನಗರದ ನಿರ್ಮಾಣ ಕಾರ್ಯದಲ್ಲಿ ತೊಡಗಿದನು. ಈ ನಗರದಲ್ಲಿ ಬಾದಶಹನು ಒಂದು ಜಾಮಿಯಾ ಮಸೀದಿಯನ್ನು, ಇನ್ನೂ ಕೋಟೆಯನ್ನು ಗೆಲ್ಲುವುದಕ್ಕೆ ಮೊದಲೇ ನಿರ್ಮಿಸಿದ್ದನು. ಈ ಮಸೀದಿಗೆ ನೂರಾರು ಕಂಬಗಳಿದ್ದವು. ಬಹಳವಾಗಿ ಶೃಂಗರಿಸಿದ್ದನು. ಹಿಜರಿ ೯೧೪ರಲ್ಲಿ ಈ ಮಸೀದಿಯಲ್ಲಿ ಒಂದು ವೈಭವಪೂರ್ಣ ಮಿಂಬರ್(ಗದ್ದುಗೆ)ಯನ್ನು ಕಟ್ಟಿಸಿದ್ದನು.

ರಾಜ ನಬಾಹಿಯನಿಗೆ ಗಲ್ಲುಶಿಕ್ಷೆ :

ಬಾದಶಹನೊಂದಿಗೆ ಯುದ್ಧ ಮಾಡುವ ಸಂದರ್ಭದಲ್ಲಿ ರಾಜ ನಬಾಹಿಯು ಬಹಳವಾಗಿ ಗಾಯಗೊಂಡಿದ್ದನು. ಈ ಗಾಯಗಳಿಂದ ರಾಜನು ಚೇತರಿಸಿ ಕೊಂಡಿದ್ದನು. ಸುಲ್ತಾನ್ ಮಹಮೂದ್‌ನು ರಾಜನೊಂದಿಗೆ ಆತನ ಮಂತ್ರಿ ದೊಂಕರ್ಸಿಯರಿಬ್ಬರಿಗೂ ಇಸ್ಲಾಂ ಧರ್ಮವನ್ನು ಸ್ವೀಕರಿಸಲು ಆಹ್ವಾನಿಸಿದನು. ಆದರೆ ಆ ಆಹ್ವಾನವನ್ನು ಇಬ್ಬರೂ ತಿರಸ್ಕರಿಸಿದರು. ವಿದ್ವಾಂಸರು ಅವರನ್ನು ಸೆರೆಯಲ್ಲಿಡಲು ಸಲಹೆ ಮಾಡಿದರು. ಅಲ್ಲಿಂದ ಐದು ತಿಂಗಳ ತನಕ ಅವರನ್ನು ಸೆರೆಯಲ್ಲಿಡಲಾಯಿತು. ಈ ಮಧ್ಯೆ ಅವರನ್ನು ಇಸ್ಲಾಂ ಸ್ವೀಕರಿಸಲು ಒತ್ತಾಯಿಸಲಾಗುತ್ತಿತ್ತು. ಆದರೆ ಅವರು ಇಸ್ಲಾಂ ಧರ್ಮವನ್ನು ಸ್ವೀಕರಿಸಲಿಲ್ಲ. ಕೊನೆಗೆ ವಿದ್ವಾಂಸರ ಸಲಹೆಯಂತೆ ಇವರಿಬ್ಬರನ್ನೂ ಗಲ್ಲು ಶಿಕ್ಷೆಗೆ ಗುರಿಪಡಿಸಲಾಯಿತು.

ಅಹಮದಾಬಾದ್ ಕೋಟೆಗಳ ಕಟ್ಟಡ ನಿರ್ಮಾಣ :

ಈ ವರ್ಷದಲ್ಲೇ ಸುಲ್ತಾನ್ ಮಹಮೂದ್‌ನು ತನ್ನ ಒಬ್ಬ ಆಪ್ತ ಹಾಗೂ ಪ್ರಸಿದ್ಧ ಅಮೀರನನ್ನು ಅಹಮದಾಬಾದ ನಗರಕ್ಕೆ ಕಳುಹಿಸಿದನು. ಅಲ್ಲಿ ಕೋಟೆಯ ಮೇಲಿನ ಗೋಡೆಗಳನ್ನು ಎತ್ತರಿಸುವ, ಸುತ್ತಲೂ ಕೋಟೆಗಳನ್ನು ಕಟ್ಟುವ ಬುರ್ಜುಗಳನ್ನು ನಿರ್ಮಿಸುವ ಕಾರ್ಯಗಳನ್ನು ಆತನಿಗೆ ವಹಿಸಲಾಯಿತು. ಎಲ್ಲ ಶಾಸಕರು, ಅಮೀರರೂ ಮನಃಪೂರ್ವಕವಾಗಿ ಶಾಹಿ ಆಜ್ಞೆಯನ್ನು ಪಾಲಿಸಿದರು. ಕೋಟೆಗಳನ್ನು ನಿರ್ಮಿಸಲಾಯಿತು.

ಅಬೂ ಕೋಟೆಯ ರಾಜನ ಆಕ್ರಮ :

ಹಿಜರಿ ೮೭೬ರಲ್ಲಿ ಕೆಲವು ವ್ಯಾಪಾರಿಗಳು ಮಹಮ್ಮದಾಬಾದಿಗೆ ಬಂದು, ಅಬೂ ಕೋಟೆಯ ರಾಜನ ದುಷ್ಟಕಾರ್ಯದ ಬಗ್ಗೆ ದೂರು ನೀಡಿದರು. ಏನೆಂದರೆ–ನಾವು

(೪೦೦) ನಾಲ್ಕುನೂರು ಕುದುರೆಗಳನ್ನು ತೆಗೆದುಕೊಂಡು ಬರುತ್ತಿದ್ದೆವು. ಇವುಗಳನ್ನು ಕಂಡ ರಾಜನು ನಮ್ಮ ಎಲ್ಲ ಕುದುರೆಗಳನ್ನು ನಮ್ಮಿಂದ ಕಿತ್ತುಕೊಂಡದ್ದೇ ಅಲ್ಲದೆ ನಮ್ಮಲ್ಲಿದ್ದ ಎಲ್ಲ ಸಾಮಾನುಗಳನ್ನು ದೋಚಿದ್ದಾನೆ. ಈ ವಿಷಯವನ್ನು ಕೇಳಿದ ಬಾದಶಹನು ತುಂಬಾ ವಿಷಾದವನ್ನು ವ್ಯಕ್ತಪಡಿಸಿ ಆಜ್ಞೆಯನ್ನು ಕೊಟ್ಟಿದ್ದೇನೆಂದರೆ, ನಮ್ಮ ಖಜಾನೆಯಿಂದ ಈ ವ್ಯಾಪಾರಿಗಳಿಗೆ ಎಷ್ಟು ನಷ್ಟವಾಗಿದೆಯೋ ಅಷ್ಟೆಲ್ಲವನ್ನು ಕೊಡಬೇಕೆಂದು ತಿಳಿಸಿದನು.

ರಾಜ ಅಬೂ ಎಂಬುವನಿಗೆ ಎಚ್ಚರಿಕೆ :

ಇದಾದನಂತರ ಬಾದಶಹನು ಪ್ರಯಾಣದ ಸಿದ್ಧತೆಯನ್ನು ಮಾಡಿಕೊಂಡು ಅಬೂ ರಾಜನ ಕಡೆ ಪ್ರಯಾಣವನ್ನು ಬೆಳೆಸಿದನು. ಬಾದಶಹನು ಎರಡನೇ ಹಂತದ ಪ್ರಯಾಣದಲ್ಲಿದ್ದಾಗ ಅಬೂ ರಾಜನಿಗೊಂದು ಪತ್ರವನ್ನು ಬರೆದನು. ಅದರ ವಿಷಯವೇನೆಂದರೆ–ನನಗೆ ತಿಳಿದಿರುವುದೇನೆಂದರೆ–ನೀನು ನಮಗೋಸ್ಕರ ತರಲಾಗುತ್ತಿದ್ದ ಕುದುರೆಗಳನ್ನು ಅವರ ಸಾಮಾನುಗಳನ್ನು ವ್ಯಾಪಾರಿಗಳಿಂದ ಕಿತ್ತುಕೊಂಡಿದ್ದೀಯೆ ಈಗ ನನ್ನ ಕರ್ತವ್ಯವೇನೆಂದರೆ ಈ ಆಜ್ಞಾಪತ್ರವನ್ನು ಕಂಡ ಕೂಡಲೆ, ಆ ಎಲ್ಲ ಸಾಮಾನುಗಳು ಮತ್ತು ಕುದುರೆಗಳನ್ನು ನಮ್ಮ ಆಸ್ಥಾನಕ್ಕೆ ತಂದು ಒಪ್ಪಿಸಬೇಕು. ಇಲ್ಲದಿದ್ದರೆ ಅದರಿಂದುಂಟಾಗತಕ್ಕ ಎಲ್ಲ ಪರಿಣಾಮಗಳಿಗೂ ನೀನೇ ಜವಾಬ್ದಾರನಾಗಬೇಕಾಗುತ್ತದೆ. ಅಷ್ಟೇ ಅಲ್ಲದೆ ನಿನಗೆ ಅನೇಕ ಕಷ್ಟಗಳು ಒದಗಬಹುದಾಗಿದೆ.

ಅಬೂ ರಾಜನ ಒಪ್ಪಿಗೆ:

ಬಾದಶಹನು ಈ ಆಜ್ಞಾಪತ್ರವನ್ನು ಕೆಲವು ವ್ಯಾಪಾರಿಗಳ ಗುಂಪಿಗೆ ಕೊಟ್ಟು, ರಾಜನಿಗೆ ತಲುಪಿಸಲು ಹೇಳಿದನು. ರಾಜನು ಆ ಆಜ್ಞಾಪತ್ರವನ್ನು ನೋಡಿ ವ್ಯಾಪಾರಿಗಳೊಂದಿಗೆ ಬಹಳ ಪ್ರೇಮದಿಂದ ವರ್ತಿಸಿದನು. ಆತನು ೩೭೦ ಕುದುರೆಗಳು ಹಾಗೂ ಅವರ ಸಾಮಾನುಗಳನ್ನು ಹೇಗೆ ಇಟ್ಟಿದ್ದನೋ ಹಾಗೆಯೇ ವಾಪಸ್ಸು ಕೊಟ್ಟನು. ಉಳಿದ ಕುದುರೆಗಳ ಹಾಗೂ ಸಾಮಾನುಗಳಲ್ಲಿ ಕೆಲವು ನಷ್ಟವಾಗಿದ್ದುವು. ಅವುಗಳ ಬೆಲೆಯನ್ನು ನಿರ್ಧರಿಸಿ ಕೊಟ್ಟು ಕಳುಹಿಸಿದ್ದುದೇ ಅಲ್ಲದೇ ತನ್ನ ಒಬ್ಬ ದೂತನನ್ನು ಬಾದಶಹನ ಹತ್ತಿರಕ್ಕೆ ಕಳುಹಿಸಿ ನಾನು ನಿಮ್ಮ ಅಧೀನತೆಯನ್ನು ಸ್ವೀಕರಿಸಲು ಸಿದ್ಧನಿದ್ದೇನೆ ಎಂದು ನಿವೇದಿಸಿಕೊಂಡನು.

ಇದಾದ ನಂತರ ಸುಲ್ತಾನ್ ಮಹಮೂದ್‌ನು ಮಹಮ್ಮದಾಬಾದ್‌ನ ಜನಾನೇರ್ ನಗರಕ್ಕೆ ವಾಪಸ್ಸಾದನು. ಆ ನಗರದ ಸುತ್ತಲೂ ಕೋಟೆಯನ್ನು ಬುರ್ಜುಗಳ ನಿರ್ಮಾಣ ಕಾರ್ಯದಲ್ಲಿ ತನ್ನನ್ನು ತೊಡಗಿಸಿಕೊಂಡನು. ಬಹಳ ಶ್ರದ್ಧೆ ಮತ್ತು ಮುತುವರ್ಜಿಯನ್ನು ವಹಿಸಿಕೊಂಡು ಪೂರ್ಣಗೊಳಿಸಿದನು.

ಬಹಾದುರ್ ಗೀಲಾನಿಯ ಪಿತೂರಿ :

ಹಿಜರಿ–೯೦೦ರಲ್ಲಿ ಸುಲ್ತಾನ್ ಮಹಮೂದ್ ಬಹಮನಿಯ ಒಬ್ಬ ಪ್ರಸಿದ್ಧ ಅಮೀರನಾದ ಬಹಾದುರ್ ಗೀಲಾನಿ ಎಂಬುವನು ದಂಗೆ ಎದ್ದು ಬಂಡಾಯದ ಬಾವುಟವನ್ನು ಹಾರಿಸಿದನು. ಬಂದರು 'ಕೂದಹ' ದಾಯಲ್‌ನ ಸಮೇತ ದಕ್ಷಿಣದ ಅನೇಕ ಪ್ರದೇಶಗಳನ್ನು ತನ್ನ ವಶಕ್ಕೆ ಪಡೆದುಕೊಂಡನು. ಆತನು ಸುಮಾರು ಹನ್ನೆರಡು ಸಾವಿರ ಸಿಪಾಯಿಗಳನ್ನು ಸಂಗ್ರಹಿಸಿಕೊಂಡು ಅಸಂಖ್ಯಾತ ಸಿಪಾಯಿಗಳನ್ನು ಹಡಗುಗಳ ಮೂಲಕ ಗುಜರಾತಿನತ್ತ ಕಳುಹಿಸಿದನು. ಆ ಪ್ರದೇಶದ ಸಾಮಂತ ರಾಜರುಗಳಿಗೆ ತುಂಬಾ ನಷ್ಟವನ್ನುಂಟು ಮಾಡಿದನು.

ಗೀಲಾನಿಯ ವಿರುದ್ಧ ಕಾರ್ಯಾಚರಣೆ :

ಬಹಾದುರ್ ಗೀಲಾನಿಯು ಸುಲ್ತಾನ್ ಮಹಮೂದ್ ಗುಜರಾತಿಯ ಕೆಲವು ವಿಶೇಷ ಹಡಗುಗಳನ್ನು ವಶಪಡಿಸಿಕೊಂಡನು. ಮಹಾಯಂ ಬಂದರನ್ನು ವಶಪಡಿಸಿಕೊಂಡು ಅಲ್ಲಿ ಲೂಟಿ ಮಾಡುತ್ತಾ ಅನೇಕ ಕಟ್ಟಡಗಳಿಗೆ ಬೆಂಕಿಯನ್ನು ಹಚ್ಚಿ ಬಿಟ್ಟನು. ಈ ನಗರವನ್ನು ಸಂಪೂರ್ಣವಾಗಿ ತನ್ನ ವಶಕ್ಕೆ ತೆಗೆದುಕೊಳ್ಳುವ ಪ್ರಯತ್ನವನ್ನು ಮಾಡಿದನು. ಇದನ್ನು ಅರಿತ ಸುಲ್ತಾನ್ ಮಹಮೂದನು ಸಫ್ದರ್ ಉಲ್‌ಮುಲ್ಕ್‌ನ ಆಧೀನದಲ್ಲಿ ಒಂದು ವಿಶಾಲ ಸೈನ್ಯವನ್ನು ಬಹಾದುರ್ ಗೀಲಾನಿಯ ವಿರುದ್ಧ ಕಳುಹಿಸಿದನು. ಇದರ ಜೊತೆಗೆ ಆನೆಗಳ ಸೈನ್ಯದ ಮುಖಂಡನಾದ ಖವಾಮುಲ್‌ಮುಲ್ಕನನ್ನು ಕಾಡಿನ ದಾರಿಯ ಮೂಲಕ ಮಹಾಯಂ ಬಂದರಿನತ್ತ ಕಳುಹಿಸಿದನು.

ಸಮುದ್ರದಲ್ಲಿ ಬಿರುಗಾಳಿ :

ಸಫ್ದರ್‌ಜಂಗ್‌ನ ಹತ್ತಿರವಿದ್ದ ಎಲ್ಲ ಹಡಗುಗಳು ಕ್ಷೇಮದಿಂದ ಮಹಾಯಂ ಬಂದರಿಗೇನೋ ತಲುಪಿದುವು. ಆದರೆ ವೈರುಧ್ಯ ಉಂಟಾದುದೇನೆಂದರೆ, ಹಡಗುಗಳು ಚಲಿಸಲು ಸಾಧ್ಯವಾಗದಂತೆ ಸಮುದ್ರದಲ್ಲಿ ಬಿರುಗಾಳಿಯು ಎದ್ದಿತು. ಹಡಗುಗಳು ಸಮತೋಲನವನ್ನು ಕಳೆದುಕೊಂಡು ಅತ್ತಿತ್ತ ಚಲಿಸಲಾರಂಭಿಸಿದವು. ನಾವಿಕರು ಚಿಂತಾಕ್ರಾಂತರಾಗಿ ಬಹಾದ್ದೂರ್ ಗಿಲಾನಿಯ ಸೇವಕರ ಸಹಾಯವನ್ನೇ ಕೇಳಬೇಕಾಯಿತು. ಶತ್ರುಗಳತ್ತ ಇವರೂ ಚಲಿಸಬೇಕಾಯಿತು. ದಡಕ್ಕೆ ಬಂದು ಪರಿಸ್ಥಿತಿಯನ್ನು ನೋಡಿದಾಗ ಇವರು ಯುದ್ಧ ಮಾಡಲು ಹವಣಿಸುತ್ತಿದ್ದರು. ಈಗ ಗುಜರಾತಿ ಸೈನಿಕರು ಗೀಲಾನಿ ಸೈನಿಕರೊಂದಿಗೆ ಯುದ್ಧ ಮಾಡಲು ವಿವಶರಾಗಬೇಕಾಯಿತು. ಇಬ್ಬರಲ್ಲೂ ಭಯಂಕರ ಯುದ್ಧವಾಯಿತು. ಈ ಪರಿಣಾಮವೆಂದರೆ ಗುಜರಾತಿಯವರ ಕೈ ಮೇಲಾಯಿತು.

ಸಫ್ದರ್ ಉಲ್‌ಮುಲ್ಕನ ಸೆರೆ :

ಸಫ್ದರ್‌ಉಲ್‌ಮುಲ್ಕ್‌ನೊಂದಿಗೆ ಇನ್ನೂ ಕೆಲವು ಪ್ರಸಿದ್ಧ ವೀರರನ್ನು ಬಹಾದೂರ್ ಗೀಲಾನಿಯ ಸೈನಿಕರು ಸೆರೆಹಿಡಿದರು. ಇದರ ಪರಿಣಾಮವಾಗಿ ಗುಜರಾತಿನ ಎಲ್ಲ ಹಡಗುಗಳು ಬಹಾದೂರ್ ಗೀಲಾನಿಯ ವಶವಾದವು. ಆನೆಗಳ ಸರದಾರ ಖವಾಮುಲ್‌ಮುಲ್ಕ್‌ನು ಮಹಾಯಂ ತಲುಪುವುದರೊಳಗೆ ಬಹಾದುರ್ ಗೀಲಾನಿಯ ಸೈನಿಕರು ಗುಜರಾತಿಯವರನ್ನು ಸೆರೆ ಹಿಡಿದುಕೊಂಡು ತಮ್ಮ ಮಾಲೀಕನ ಹತ್ತಿರಕ್ಕೆ ಹೋಗಿ ಬಿಟ್ಟಿದ್ದರು.

ಖವಾಮುಲ್‌ಮುಲ್ಕನ ಅರ್ಜಿ :

ಖವಾಮುಲ್‌ಮುಲ್ಕನು ಮಹಾಯಂನಲ್ಲಿ ಬಿಡಾರವನ್ನು ಹೂಡಿದನು.ಸುಲ್ತಾನ್ ಮಹಮೂದ್‌ನಿಗೊಂದು ಅರ್ಜಿಯನ್ನು ಹೀಗೆ ಬರೆದನು. ತಮ್ಮ ಈ ಸೇವಕನು ನಿವೇದಿಸಿಕೊಳ್ಳುವುದೇನೆಂದರೆ, ನನ್ನ ಅಭಿಪ್ರಾಯದಲ್ಲಿ ಬಹಾದೂರ್ ಗೀಲಾನಿಯ ಮೇಲೆ ನಾವು ಸೇಡು ತೀರಿಸಿಕೊಳ್ಳಬೇಕಾಗಿದ್ದರೆ ನಾನು ಈಗ ಆತನ ಹತ್ತಿರದಲ್ಲಿ ಇಲ್ಲ. ದಕ್ಷಿಣ ದೇಶದ ಆತನ ಹಿಡಿತದಲ್ಲಿ ಇರುವ ಕೆಲವು ಪ್ರದೇಶಗಳನ್ನು ನಾಶಪಡಿಸಿ ಲೂಟಿ ಮಾಡಬೇಕೆಂದಿದ್ದೇನೆ. ಇದಕ್ಕೆ ತಮ್ಮ ಅನುಮತಿಯನ್ನು ಕೋರುತ್ತಿದ್ದೇನೆ. ತಾವು ಅನುಮತಿಯನ್ನು ಕಳುಹಿಸುವವರೆಗೂ ನಾನು ಕಾಯುತ್ತೇನೆ.

ದಖನಿ ಶಾಸಕನ ಕ್ರಮ :

ಖವಾಮುಲ್‌ಮುಲ್ಕನ ಪತ್ರವು ಸುಲ್ತಾನ್ ಮಹಮೂದ್‌ನಿಗೆ ತಲುಪಿದ ತಕ್ಷಣ ಆತನು ದಕ್ಷಿಣ ಸುಲ್ತಾನ್‌ನಿಗೊಂದು ಪತ್ರವನ್ನು ಬರೆದು ಕಳುಹಿಸಿದನು. ದಕ್ಷಿಣದ ಸುಲ್ತಾನನು ಗುಜರಾತಿ ಸುಲ್ತಾನನ ಪತ್ರವನ್ನು ಓದಿದ ತಕ್ಷಣ ಸೈನ್ಯವನ್ನು ಸಿದ್ಧಗೊಳಿಸಿ ಬಹಾದುರ್ ಗೀಲಾನಿಯ ವಿರುದ್ಧ ಆಕ್ರಮಣವನ್ನು ಮಾಡಿದನು. ಆತನನ್ನು ಯುದ್ದದಲ್ಲಿ ಸಾಯಿಸಿ, ಸಫ್ದರ್‌ಉಲ್‌ಮುಲ್ಕ್‌ನಿಗೂ ಆತನ ಎಲ್ಲ ಗುಜರಾತಿ ಹಡಗುಗಳೊಂದಿಗೆ ಬಿಡಿಸಿದ್ದೇ ಅಲ್ಲದೆ ಅನೇಕ ಗೌರವಪೂರ್ಣ ಬಹುಮಾನಗಳೊಂದಿಗೆ ಗುಜರಾತ ತಲುಪುವಂತೆ ವ್ಯವಸ್ಥೆ ಮಾಡಿಸಿದನು. ದಕ್ಷಿಣದ ಬಾದಶಹನು ಬಹಾದೂರ್ ಗೀಲಾನಿಯಂತಹ ಇನ್ನೂ ಕೆಲ ಶಾಸಕರ ತೊಂದರೆಗಳಿಗೆ ಗುಜರಾತಿ ಬಾದಶಹನ ಸಹಾಯವನ್ನು ಕೇಳಿದನು. ಗುಜರಾತಿ ಬಾದಶಹನು ಈ ವಿಚಾರದಲ್ಲಿ ಪ್ರವೇಶಿಸುವುದು ಸರಿಯಲ್ಲವೆಂದು ತೀರ್ಮಾನಿಸಿದನು.

ಐದರ್ ರಾಜನ ಅಧೀನತೆಯ ಸ್ವೀಕಾರ :

ಹಿಜರಿ ೯೦೧ರಲ್ಲಿ ಸುಲ್ತಾನ್ ಮಹಮೂದ್‌ನು 'ಬಾಕರಿ' ಮಾರ್ಗವಾಗಿ ಐದರ್‌ಕೋಟೆಯತ್ತ ಪ್ರಯಾಣವನ್ನು ಬೆಳೆಸಿದನು. ಬಾದಶಹನು ಆ ನಗರದ ಹತ್ತಿರ

ಹೋದಾಗ ಅಲ್ಲಿನ ರಾಜನು ಯಾವ ಅಡ್ಡಿ ಆತಂಕಗಳಿಗೆ ಒಳಗಾಗದೇ ಬಾದಶಹನ ಸೇವೆಯಲ್ಲಿ ಹಾಜರಾಗಿ ರಾಜನು (೪೦೦) ನಾಲ್ಕುನೂರು ಕುದುರೆಗಳು, ನಾಲ್ಕು ಲಕ್ಷ ರೂಪಾಯಿಗಳು ಹಾಗೂ ಸುಂದರ ಉಡುಗೊರೆ ಬಹುಮಾನಗಳನ್ನು ನೀಡಿದನು. ಇದಲ್ಲದೆ ಜಿಜಿಯಾ ಕಂದಾಯವನ್ನು ನೀಡಲು ಒಪ್ಪಿಕೊಂಡನು. ಹೀಗೆ ರಾಜನು ಬಾದಶಹನಿಂದ ಆಕ್ರಮಣವನ್ನು ತಪ್ಪಿಸಿಕೊಂಡನು. ಸುಲ್ತಾನ್ ಮಹಮೂದ್‌ನು ಅಪಾರ ಸಂಪತ್ತಿನೊಂದಿಗೆ ಮಹಮ್ಮದಾಬಾದಿಗೆ ಬಂದನು.

ನ್ಯಾಯ ನಿಷ್ಠುರತೆಯ ಪ್ರದರ್ಶನ :

ಹಿಜರಿ-೯೦೩ರಲ್ಲಿ ಸುಲ್ತಾನ್ ಮಹಮೂದ್‌ನು ತನ್ನ ಸಾಮ್ರಾಜ್ಯದ ಪ್ರಜೆಗಳ ಸ್ಥಿತಿ-ಗತಿಗಳನ್ನು ಸ್ವತಃ ತಿಳಿದುಕೊಳ್ಳಲು ಪ್ರಯಾಣ ಹೊರಟನು. ಪ್ರಜೆಗಳ ಕಷ್ಟ ಕಾರ್ಪಣ್ಯಗಳನ್ನು ವಿಚಾರಿಸಿ, ಸ್ಥಳದಲ್ಲೇ ಅವರ ಕಷ್ಟಗಳನ್ನು ನ್ಯಾಯಯುತವಾಗಿ ನಿವಾರಿಸುತ್ತಿದ್ದನು. ಈ ವಿಚಾರದಲ್ಲಿ ಇತಿಹಾಸ ಪ್ರಸಿದ್ಧ 'ನೌಶೇರ್‌ವಾನ್' ಬಾದಶಹನಿಗೂ ಮೀರಿದ ನ್ಯಾಯ ನಿಷ್ಠುರತೆಯನ್ನು ಪ್ರದರ್ಶಿಸಿದನು.

ಅಲಿಫಖಾನನ ಷಡ್ಯಂತ್ರ :

ಹಿಜರಿ ೯೦೪ರಲ್ಲಿ ಶಾಹಿವಂಶದವನೇ ಆದ ಒಬ್ಬ ಗುಲಾಮ ಅಲಿಫಖಾನನೆಂಬುವನು ಬಂಡಾಯದ ಬಾವುಟವನ್ನು ಹಾರಿಸಿದ. ಈ ಪಿತೂರಿಯನ್ನು ದಮನ ಮಾಡಲು ಬಾದಶಹನು ಖಾಜಿಬೀರ್‌ಬರ್ ಎಂಬುವನನ್ನು ನೇಮಿಸಿದನು. ಈತನು ಒಬ್ಬ ಪ್ರಸಿದ್ಧ ಬಹಮನಿ ಅಮೀರನಾಗಿದ್ದನು. ಆ ಸಂದರ್ಭದಲ್ಲಿ ಖಾಜಿ ಬೀರ್‌ಬರ್‌ನು ಗುಜರಾತಿನಲ್ಲಿ ವಾಸವಾಗಿದ್ದು, ದೊಡ್ಡ ಅಧಿಕಾರದಲ್ಲಿದ್ದನು. ಖಾಜೀಬೀರ್‌ಬರ್‌ನು ಅಲಿಫ್‌ಖಾನನನ್ನು ಹಿಂಬಾಲಿಸಿ ಹೊರಟನು. ಆತನನ್ನು ಕಾಡು-ಮೇಡುಗಳಲ್ಲೂ ಬಿಡದೆ ಓಡಾಡಿಸತೊಡಗಿದನು. ಕೊನೆಗೆ ಅಲಿಫಖಾನನು ಸುಲ್ತಾನ್‌ಪುರದ ದಾರಿಯಿಂದ ಮಾಳವ ದೇಶದ ಕಡೆಗೆ ಓಡಿ ಹೋದನು. ಈ ಸಂದರ್ಭದಲ್ಲಿ ಆತನು ವಿಷದ ಪ್ರಭಾವಕ್ಕೆ ಒಳಗಾಗಿ ಮರಣ ಹೊಂದಿದನು.

ಆದಿಲ್‌ಖಾನ್ ಫಾರೂಖಿಯ ಕೀಟಲೆ :

ಅದೇ ದಿನಗಳಲ್ಲಿ ಆದಿಲ್‌ಖಾನ್ ಬಿನ್ ಮುಬಾರಕ್ ಖಾನ್ ಫಾರೂಖಿಯು ಕಪ್ಪ-ಕಾಣಿಕೆಗಳನ್ನು ಕೊಡುವುದರಲ್ಲಿ ಕೀಟಲೆಗಳನ್ನು ಪ್ರಾರಂಭಿಸಿ, ಸುಳ್ಳು ಕಾರಣಗಳನ್ನು ಹೇಳಲಾರಂಭಿಸಿದನು. ಬಾದಶಹನು ಹಿಜರಿ ೯೦೫ರಲ್ಲಿ ಖಾಜಿಬೀರ್‌ಬರನೊಂದಿಗೆ ಕೆಲವು ಹೆಸರಾಂತ ಅಮೀರರು ಹಾಗೂ ಸೈನ್ಯವನ್ನು ಕೊಟ್ಟು ಆದಿಲ್‌ಖಾನನಿಗೆ ಬುದ್ಧಿ ಕಲಿಸಲು ಕಳುಹಿಸಿಕೊಟ್ಟನು. ಖಾಜಿಬೀರ್‌ಬರನು ಖಾಂದೇಶದಲ್ಲಿ ಪ್ರವೇಶಿಸಿ ಲೂಟಿ, ನಾಶಗಳನ್ನು ಪ್ರಾರಂಭಿಸಿದನು. ಆದಿಲ್‌ಖಾನ ಫಾರೂಖಿಗೆ ಸುಲ್ತಾನ್‌ನ

ಸೈನ್ಯದೆದುರು ಯುದ್ಧ ಮಾಡುವಷ್ಟು ಶಕ್ತಿ ಇರಲಿಲ್ಲ. ಆಗ ಅವನು ಬರಾರ್‌ನ ಶಾಸಕ ಅಮಾದುಲ್‌ಮುಲ್ಕನ ಸಹಾಯವನ್ನು ಕೇಳಿದನು.

ಆದಿಲ್‌ಖಾನನ ಅಧೀನತೆ :

ಅವಮಾದುಲ್‌ಮುಲ್ಕನು ಆದಿಲ್‌ಖಾನನಿಗೆ ಸಹಾಯುವನ್ನು ವೂಡಲು ತಿರಸ್ಕರಿಸಿದನು. ಈಗ ಆದಿಲ್‌ಖಾನನ ಹತ್ತಿರ ಸುಲ್ತಾನ್‌ನ ಅಧೀನತೆಯ ಸ್ವೀಕಾರವನ್ನು ಬಿಟ್ಟರೆ ಬೇರೆ ದಾರಿಯೇ ಇರಲಿಲ್ಲ. ಆದ್ದರಿಂದ ಆತನು ಕೆಲವು ವರ್ಷಗಳಿಂದ ಬಾಕಿ ಇದ್ದ ಕಪ್ಪಕಾಣಿಕೆಗಳ ಹಣವನ್ನು ಹೊತ್ತು ಬಾದಶಹನ ಸೇವೆಯಲ್ಲಿ ಜನಾನೇರ್‌ನ ಹತ್ತಿರದ ಮಹಮ್ಮದಾಬಾದ ತಲುಪಿದನು.

ಆದಿಲ್‌ಖಾನನ ಬಗ್ಗೆ ಮತ್ತೊಂದು ವರದಿ :

ಈ ವಿಚಾರದಲ್ಲಿ ಮತ್ತೊಂದು ವರದಿ ಹೀಗಿದೆ. ಸುಲ್ತಾನ್ ಮಹಮೂದನು ಸ್ವತಃ ಆದಿಲ್‌ಖಾನನ ಪಿತೂರಿಯನ್ನು ಅಡಗಿಸಲು ಸೈನ್ಯದೊಂದಿಗೆ 'ಪಟನ' ನಗರಕ್ಕೆ ತಲುಪುವುದರೊಳಗೆ ಆದಿಲ್‌ಖಾನನು ತನ್ನ ಬಾಕಿ ಇದ್ದ ಕಪ್ಪ-ಕಾಣಿಕೆಗಳನ್ನು ತೆಗೆದುಕೊಂಡು ಹೋಗಿ ಅರ್ಪಿಸಿ ತನ್ನ ತಪ್ಪಿಗೆ ಕ್ಷಮೆಯನ್ನು ಯಾಚಿಸಿದನು. ಬಾದಶಹನಿಗೆ ಆದಿಲ್‌ಖಾನನು ಒಂದು ಸಂಬಂಧದಲ್ಲಿ ಅಳಿಯನೇ ಆಗಬೇಕಾಗಿದ್ದರಿಂದ ಅವನ ತಪ್ಪುಗಳನ್ನು ಮನ್ನಿಸಿದನೆಂದೂ ತಿಳಿದುಬರುತ್ತದೆ.

ಮಲಿಕ್‌ವಜೀಹ ಮತ್ತು ಮಲಿಕ್ ಆಶ್ರಫ್‌ರ ಅರ್ಜಿ :

ಅದೇ ದಿನಗಳಲ್ಲಿ ದೌಲತಾಬಾದಿನ ಠಾಣೇದಾರ ಮತ್ತು ಕೊತ್ವಾಲರಾಗಿದ್ದ ಮಲಿಕ್‌ವಜೀಹ ಮತ್ತು ಮಲಿಕ್‌ಅಶ್ರಫ್ ಎಂಬುವರು ಬಾದಶಹನ ಹೆಸರಿಗೆ ಒಂದು ಪತ್ರವನ್ನು ಹೀಗೆ ಬರೆದರು. ಈ ಕೋಟೆಯು ನಮ್ಮ ವಂಶಸ್ಥರ ಶಾಹಿ ದರ್ಬಾರಿಗೆ ಸೇರಿದ್ದಾಗಿದೆ. ಸುಲ್ತಾನ್ ಬೀದರಿನ ಅಮೀರ್ ಬುರೇದ್‌ಪುರಿ ಎಂಬುವನು ಆ ವಿಷಯವನ್ನು ಬಚ್ಚಿಟ್ಟು ತಪ್ಪು ಮಾಹಿತಿಯನ್ನು ಕೊಡುತ್ತಿದ್ದಾನೆ. ಈ ಮಾತಿಗೆ ನಂಬಿ ಅಹಮದ್ ನಿಜಾಮುಲ್‌ಮುಲ್ಕನು ತನ್ನ ವಶಕ್ಕೆ ತೆಗೆದುಕೊಳ್ಳಲು ಪ್ರಯತ್ನಿಸುತ್ತಿದ್ದಾನೆ. ಪ್ರತಿವರ್ಷವೂ ನಮ್ಮ ಮೇಲೆ ಆಕ್ರಮಣವನ್ನು ಮಾಡಿ ನಮಗೆ ನಷ್ಟವನ್ನು ಉಂಟುಮಾಡುತ್ತಿದ್ದಾನೆ. ಈಗಲೂ ದೌಲತಾಬಾದನ್ನು ಮುತ್ತಿದ್ದಾನೆ. ಒಂದು ವೇಳೆ ಹುಜೂರರು ಇತ್ತ ಗಮನವನ್ನು ಹರಿಸಿ ಕೋಟೆಯನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದೇ ಆದರೆ, ನಾವು ತಮ್ಮ ಅಧೀನತೆಯನ್ನು ಸ್ವೀಕರಿಸಿ, ತಮ್ಮ ಸೇವೆಯಲ್ಲಿ ಅಪಾರ ಸಂಪತ್ತನ್ನು ನೀಡಲು ಸಿದ್ಧರಿದ್ದೇವೆ.

ಅಹಮದ್‌ನಿಜಾಮಲ್‌ಮುಲ್ಕನ ಪರಾರಿ :

ಸುಲ್ತಾನ್ ಮಹಮೂದ್‌ನಿಗೆ ಮೇಲಿನ ಪತ್ರ ತಲುಪಿದ ತಕ್ಷಣ ತನ್ನ ಸೈನ್ಯದ

ಒಂದು ಭಾಗವನ್ನು ದಕ್ಷಿಣದತ್ತ ರವಾನಿಸಿದನು. ಸ್ವತಃ ತಾನೂ ಸಹ ಮೂರು ಪಯಣವನ್ನು ಮಾಡಿದನು. ಅರ್ಧ ದಾರಿಯಲ್ಲಿ ಬೀಡು ಬಿಟ್ಟನು. ಅಹಮದ್ ನಿಜಾಮಲ್ ಮುಲ್ಕನಿಗೆ ಬಾದಶಹ ಗುಜರಾತಿಯು ಸೈನ್ಯದೊಂದಿಗೆ ಬರುತ್ತಿದ್ದಾನೆಂಬ ಸುದ್ದಿ ತಿಳಿದ ತಕ್ಷಣ ದೌಲತಾಬಾದಿನಿಂದ ಪರಾರಿಯಾದನು. ಆಗ ದೌಲತಾಬಾದಿನ ಶಾಸಕರು ಬಾದಶಹನ ಸೇವೆಯಲ್ಲಿ ಅಪಾರ ಸಂಪತ್ತನ್ನು ಅರ್ಪಿಸಲು ಬಾದಶಹನು ಬೀಡು ಬಿಟ್ಟಿದ್ದ ಜಾಗಕ್ಕೆ ಬಂದರು.

ರಫಿವುದ್ದೀನ್ ಮಹಮ್ಮದನ ಆಗಮನ :

ಸುಲ್ತಾನ್ ಮಹಮೂದನು ಒಂದೇ ಪ್ರಯಾಣದಲ್ಲಿ ಎರಡು ಕಾರ್ಯಗಳನ್ನು ಸಾಧಿಸಿದನು. ನಂತರ ಜನೇರ್‌ನ ಮಹಮ್ಮದಾಬಾದ ತಲುಪಿದನು. ಇದೇ ಕಾಲದಲ್ಲಿ ರಫೀವುದ್ದೀನ್ ಮಹಮ್ಮದ್‌ಬಿನ್ ಮುರ್‌ಷದುದ್ದೀನ್ ಎಂಬ ಒಬ್ಬ ಸೂಫಿ ಸಂತರು ತಮ್ಮ ಸಾಧನೆ ಮತ್ತು ವಿದ್ಯೆಯಲ್ಲಿ ಬಹಳ ಹೆಸರುವಾಸಿಯಾಗಿದ್ದವರು ತಮ್ಮ ತಂದೆಯವರ ನಿವಾಸ ಸ್ಥಾನವೆಂಬ ಕಾರಣಕ್ಕೆ ಗುಜರಾತಿಗೆ ಬಂದು ಮಹಮ್ಮದಾಬಾದನಲ್ಲಿ ನೆಲೆಸಿದರು. ಈ ಕಾಲದಲ್ಲಿ ಬಹಮನಿ ಶಾಸಕರು ತಮ್ಮ ತಮ್ಮಲ್ಲಿ ಒಡೆದು ಸಣ್ಣ-ಸಣ್ಣ ಗುಂಪುಗಳಲ್ಲಿ ವಿಭಜಿತರಾಗಿದ್ದರು. ಒಂದು ರೀತಿಯ ಭಯಾನಕ ಪರಿಸ್ಥಿತಿಯು ಒದಗಿ ಅಶಾಂತ ವಾತಾವರಣವು ಎಲ್ಲೆಲ್ಲೂ ಹರಡಿತ್ತು. ಎಲ್ಲ ಅಮೀರರೂ ತಮ್ಮ ಮಾಲಿಕನಿಂದ ದ್ವೇಷವನ್ನು ಕಟ್ಟಿಕೊಂಡು ಸ್ವತಂತ್ರರೆಂದು ಘೋಷಿಸಿಕೊಳ್ಳುತ್ತಿದ್ದರು. ಈ ಪರಿಸ್ಥಿತಿಯಿಂದಾಗಿ ದಕ್ಷಿಣದ ಸುಲ್ತಾನ್ ಮಹಮೂದನಿಗೂ ತನ್ನ ಅಮೀರರಿಂದ ಅಪಾಯವಿತ್ತು.

ಗುಜರಾತಿ ಅಮೀರರ ಕೊಲೆ :

ಸುಲ್ತಾನ್ ಮಹಮೂದನು ಹಿಜರಿ ಶಕೆ ೯೦೯ರಲ್ಲಿ ಮಹಮ್ಮದಾಬಾದಿಗೆ ಪ್ರಯಾಣವನ್ನು ಬೆಳೆಸಿದನು. ಅಲ್ಲಿಗೆ ತಲುಪಿ ತನ್ನನ್ನು ದ್ವೇಷಿಸುತ್ತಿದ್ದ ಅನೇಕ ಅಮೀರರನ್ನು ಕೊಲೆ ಮಾಡಿದನು. ಈ ಅಮೀರರ ಜಾಗದಲ್ಲಿ ಬೇರೆಯವರನ್ನು ಅಮೀರರನ್ನಾಗಿ ನೇಮಿಸಿದನು. ಈ ಕಾರ್ಯಕ್ರಮದ ಕಾರಣವೆಂದರೆ, ಬಂಡಾಯ ಅಮೀರರು ಮುಂದಿನ ದಿನಗಳಲ್ಲಿ ಬಲಿತು, ತನ್ನ ಮತ್ತು ತನ್ನ ಮಕ್ಕಳ ಶತ್ರುಗಳಾಗಬಾರದೆಂಬುದೇ ಆಗಿತ್ತು.

ಫಿರಂಗಿ ಕಾಫಿರರು :

ಹಿಜರಿ ೯೧೩ರಲ್ಲಿ ಬಾದಶಹನು ಪುನಃ ಜನಾನೇರ್ ಮುಹಮ್ಮದಾಬಾದನ್ನು ನೋಡುವ ಮನಸ್ಸು ಮಾಡಿದನು. ಈ ಘಟನೆಯು ನಡೆದು ಇನ್ನೂ ಎರಡು ಮೂರು ತಿಂಗಳುಗಳೂ ಕಳೆದಿರಲಿಲ್ಲ. ಬಾದಶಹನಿಗೆ ಸುದ್ದಿ ತಿಳಿದಿದ್ದೇನೆಂದರೆ- ಫಿರಂಗಿ ಕಾಫಿರರು ಸಮುದ್ರದ ದಡದಲ್ಲಿ ಜಮಾಯಿಸಿದ್ದಾರೆ. ಅವರ ಉದ್ದೇಶವೆಂದರೆ

ಸಮುದ್ರದ ದಡಗಳಲ್ಲಿ ಕೋಟೆಗಳನ್ನು ಕಟ್ಟಿಕೊಂಡು ನೆಲೆಸಬೇಕೆಂಬುದಾಗಿತ್ತು. ಅಲ್ಲಿಂದ ಈ ಸುದ್ದಿಯು ತಿಳಿಯಿತು. ರೋಮ ನಗರದ ಚಕ್ರವರ್ತಿಯು ಯುವ ಫಿರಂಗಿಗಳ ಶತ್ರುವಾಗಿರುವನೆಂದು ಗೊತ್ತಾಯಿತು. ತನ್ನ ಅಸಂಖ್ಯಾತ ಹಡಗುಗಳನ್ನು ಆ ಯುವಕರನ್ನು ನಾಶಪಡಿಸಲು ಕಳುಹಿಸಿದ್ದಾನೆಂದು ಗೊತ್ತಾಯಿತು. ಸುಲ್ತಾನ್ ಮಹಮೂದನೂ ಈ ಫಿರಂಗಿಗಳೊಡನೆ ಯುದ್ಧ ಮಾಡಲು, ದೇಬ್, ದಮನ ಮತ್ತು ಮಹಾಯಮ್‌ಗಳತ್ತ ಪ್ರಯಾಣವನ್ನು ಬೆಳೆಸಿದನು.

ಫಿರಂಗಿಗಳೊಂದಿಗೆ ಯುದ್ಧ ಸಿದ್ಧತೆ :

ಸುಲ್ತಾನ್ ಮಹಮೂದ್‌ನು ದಮನ್ ದ್ವೀಪವನ್ನು ತಲುಪಿ ತನ್ನ ಆತ್ಮೀಯ ಗುಲಾಮ ಅಯಾಜ್ ಸುಲ್ತಾನಿಯನ್ನು ಅಮೀರನೆನಿಸಿದ್ದವನಿಗೆ ಸೇನಾದಂಡ ನಾಯಕನ ಪಟ್ಟವನ್ನು ಕೊಟ್ಟು ಗೌರವಿಸಿದ್ದನು. 'ದೇಬ್' ಬಂದರಿನಿಂದ ಕೆಲವು ವಿಶೇಷ ಹಡಗುಗಳಲ್ಲಿ ಬಹಾದೂರ ಸಿಪಾಯಿಗಳನ್ನು ಯುದ್ಧ ಸಾಮಗ್ರಿಗಳನ್ನು ಹೊತ್ತು ಫಿರಂಗಿಗಳನ್ನು ಸೋಲಿಸಲು ರವಾನಿಸಿದನು. ರೋಮ್ ದೇಶದಿಂದ ಹತ್ತು ದೊಡ್ಡ-ದೊಡ್ಡ ಹಡಗುಗಳು ಫಿರಂಗಿಯವರನ್ನು ನಾಶ ಪಡಿಸಲು ಬಂದಿದ್ದುವು. ಇವರೂ ಸಹ ಅಯಾಜ್ ಸುಲ್ತಾನಿಯ ಜೊತೆ ಫಿರಂಗಿಗಳತ್ತ ನಡೆದರು.

ಅಯಾಜ್ ಸುಲ್ತಾನನಿಗೆ ಗೆಲುವು :

ಅಯಾಜ್ ಸುಲ್ತಾನಿಯ ಸೈನಿಕರು ಚಿಯಾಲ್ ಬಂದರಿನವರೆಗೂ ಈ ಸಿಪಾಯಿಗಳನ್ನು ಬೆನ್ನಟ್ಟಿ ಯುದ್ಧವನ್ನು ಮಾಡಿದರು. ಫಿರಂಗಿಗಳ ಒಂದು ದೊಡ್ಡ ಹಡಗು ಒಂದು ಕೋಟಿ ಬೆಲೆ ಬಾಳುತ್ತಿತ್ತು. ಮುಸಲ್ಮಾನರು ಅದನ್ನು ಸುತ್ತುವರಿದು ಚಿಂದಿ, ಚಿಂದಿಯಾಗಿ ಉಡಾಯಿಸಿದರು. ಅದು ಸಮುದ್ರದಲ್ಲಿ ಮುಳುಗಿ ಹೋಯಿತು. ಅನೇಕ ಫಿರಂಗಿಗಳನ್ನು ಕೊಂದ ಅಯಾಜನಿಗೆ ಗೆಲುವು ಸಿಕ್ಕಿತ್ತು. ಈ ಯುದ್ಧದಲ್ಲಿ ರೋಮ್ ನಗರದ ಸೈನಿಕರು ನಾಲ್ಕನೂರು ಜನರು ಸತ್ತಿದ್ದರು. ಅವರೂ ಎರಡು ಮೂರು ಸಾವಿರ ಫಿರಂಗಿಗಳನ್ನು ಕೊಂದು ಗೆಲುವನ್ನು ಸಾಧಿಸಿದ್ದರು. ಸುಲ್ತಾನ್ ಮಹಮೂದ್‌ನು 'ಬನಾವರ್'ನ ಎಲ್ಲ ವಿಚಾರಗಳಿಂದ ತೃಪ್ತನಾಗಿ ಮಹಮ್ಮದಬಾದಿಗೆ ವಾಪಸ್ಸು ಬಂದನು.

ಅಸೀರ್ ಎಂಬಲ್ಲಿ ಬಂಡಾಯ :

ಇದೇ ಸಂದರ್ಭದಲ್ಲಿ ದಾವೂದ್‌ಶಾಹ ಫಾರುಖಿ ಎಂಬುವನು ಅಸೀರನಲ್ಲಿ ಮರಣ ಹೊಂದಿದನು. ರಾಜ್ಯದಲ್ಲಿ ಎಲ್ಲೆಲ್ಲೂ ಒಂದು ರೀತಿಯ ಬಂಡಾಯವೆದ್ದಿತ್ತು. ಆದಿಲ್‌ಖಾನ ಬಿನ್ ಹುಸ್ನಖಾನನೆಂಬುವನು ಸುಲ್ತಾನ್ ಮಹಮೂದ್ ಗುಜರಾತಿಯ

ಮಗಳ ಮಗನಾಗಿದ್ದನು. ಆತನು ತನ್ನ ಆಪ್ತರನ್ನು ಸುಲ್ತಾನ್ ಗುಜರಾತಿಯವರ ದರ್ಬಾರಿಗೆ ಕಳುಹಿಸಿ, ತನಗೆ ಸಹಾಯವನ್ನು ಮಾಡಲು ವಿನಂತಿಸಿಕೊಂಡನು.

ಸುಲ್ತಾನ್ ಮಹಮೂದನು ಆದಿಲಖಾನನ ಸಹಾಯಕ್ಕೆ ಹೊರಟದ್ದು :

ಹಿಜರಿ ಶಕೆ-೯೧೩ರ ಷಾಬಾನ್ ತಿಂಗಳಲ್ಲಿ ಸ್ವಲ್ಪ ಸೈನ್ಯದೊಂದಿಗೆ ಸುಲ್ತಾನ್ ಮಹಮೂದನು 'ಅಸೀರ್' ನಗರಕ್ಕೆ ಬಂದನು. ಆ ವರ್ಷದ ರಂಜಾನ ತಿಂಗಳ ಪ್ರಾರ್ಥನೆಯನ್ನು ನರ್ಮದಾ ನದಿಯ ದಡದಲ್ಲೇ ಸಲ್ಲಿಸಿದನು. ಶವ್ವಾಲ್ ತಿಂಗಳನ್ನು ನದರ್‌ಬಾರ್ ಕಡೆ ಪ್ರಯಾಣಿಸಿ ಕಳೆದನು. ಅಲ್ಲಿಗೆ ತಲುಪಿದಾಗ ಆತನಿಗೆ ತಿಳಿದ್ದಿದೇನೆಂದರೆ-ಮಲಿಕ್ ಹಿಸಾಮುದ್ದೀನ್ ಮೊಗಲನು ನಿಜಾಮುಲ್‌ಮುಲ್ಕ್ ಬಹರಿ ಮತ್ತು ಅಮಾದುಲ್‌ಮುಲ್ಕ್‌ರವರ ಆಕಸ್ಮಿಕ ಅನುಮತಿಯೊಂದಿಗೆ ಆಲಂಖಾನನನ್ನು ಸಿಂಹಾಸನಕ್ಕೆ ಕೂರಿಸಿದ್ದಾರೆಂದು ತಿಳಿಯಿತು. ನಿಜಾಂ-ಉಲ್-ಮುಲ್ಕ್ ಈಗಲೂ ಬುರ್‌ಹಾನ್‌ಪುರದಲ್ಲಿದ್ದಾನೆಂದು ತಿಳಿಯಿತು.

ನಿಜಾಮುಲ್‌ಮುಲ್ಕ್ ಮತ್ತಿತರರ ಮೇಲೆ ಆಕ್ರಮಣ :

ಈ ಸುದ್ದಿಯನ್ನು ತಿಳಿದ ಸುಲ್ತಾನ್ ಮಹಮೂದನು ಥಾನೇರ್ ಕಡೆಗೆ ಪ್ರಯಾಣವನ್ನು ಬೆಳೆಸಿದನು. ಆ ದಿನಗಳಲ್ಲಿ ಬಾದಶಹನಿಗೆ ಶಾರೀರಿಕ ದೌರ್ಬಲ್ಯದ ಅನುಭವವಾಯಿತು. ಈ ಕಾರಣದಿಂದಾಗಿ ಆತನು ಸ್ವಲ್ಪ ದಿನಗಳ ತನಕ ಥಾನೇರ್‌ನಲ್ಲಿ ತಂಗಬೇಕಾಯಿತು. ಬಾದಶಹನು ಆಸಿಫಖಾನ್ ಮತ್ತು ಅಜೀಜುಲ್ ಮುಲ್ಕ್‌ನೊಂದಿಗೆ ಒಂದು ವಿಶಾಲ ಸೈನ್ಯವನ್ನು ಕೊಟ್ಟು, ಹಿಸಾಮುಲ್‌ಮುಲ್ಕ್ ಮತ್ತು ಆಲಂಖಾನರ ತಲೆಹರಟೆ, ಕೀಟಲೆಗಳನ್ನು ಅಡಗಿಸಲು ಕಳುಹಿಸಿಕೊಟ್ಟನು.

ಮಲಿಕ್‌ಲಾವನ್ ಮತ್ತು ಮಲಿಕ್‌ಹಿಸಾಮ್‌ರ ಪಶ್ಚಾತ್ತಾಪ :

ನಿಜಾಮುಲ್‌ಮುಲ್ಕ್‌ನು ಸ್ವಲ್ಪ ಸೈನ್ಯದೊಂದಿಗೆ ಆಲಂಖಾನನ ಸಹಾಯಕ್ಕೆ ಹೋದನು. ತಾನು ಸ್ವತಃ ಕಾವೇಲಿಯತ್ತ ಹೊರಟನು. ಲಾವನ್‌ಖಾನನು ಆಸಫ್‌ಖಾನ್‌ನನ್ನು ಸ್ವಾಗತಿಸಿ ಆತನನ್ನು ಭೇಟಿಯಾದನು. ಆಸಿಫ್‌ಖಾನನು ಲಾವನ್‌ಖಾನನನ್ನು ಸುಲ್ತಾನ್ ಮಹಮೂದ್ ಗುಜರಾತಿಯ ಹತ್ತಿರ ಕಳುಹಿಸಿದನು. ಕೆಲವು ದಿನಗಳ ನಂತರ ಹಿಸಾಮುದ್ದೀನನು ತಾನು ಮಾಡಿದ ಕೆಲಸಗಳ ಬಗ್ಗೆ ಅವನಿಗೆ ನಾಚಿಕೆಯಾಗಿ ಪಶ್ಚಾತಾಪಟ್ಟನು. ಸುಲ್ತಾನ್ ಮಹಮೂದನ ಬಳಿಗೆ ಬಂದನು. ಸುಲ್ತಾನ್ ಗುಜರಾತಿಯು ಲಾವನ್‌ಖಾನನನ್ನು ಮತ್ತು ಮಲಿಕ್‌ಹಿಸಾಮರನ್ನು ಕ್ಷಮಿಸಿ ಪ್ರೇಮದಿಂದ ಬರಮಾಡಿಕೊಂಡನು.

ಆದಿಲ್‌ಖಾನನು ಆಡಳಿತದ ಜವಾಬ್ದಾರಿಯನ್ನು ನಿರ್ವಹಿಸಿದನು.

ಈ ದುಜಹಾ (ಬಕ್ರೀದ್ ಹಬ್ಬದ) ನಂತರ ಸುಲ್ತಾನ್ ಮಹಮೂದನು

ಆದಿಲಖಾನನಿಗೆ "ಆಜಂಹುಮಾಯೂನ" ಎಂಬ ಬಿರುದನ್ನು ದಯಪಾಲಿಸಿದನು. ಅದರ ಜೊತೆಯಲ್ಲಿ ನಾಲ್ಕು ಆನೆಗಳನ್ನು ಖರ್ಚಿಗೆಂದು ನಾಲ್ಕು ಲಕ್ಷ ಹಣವನ್ನು ಕೊಟ್ಟನು. ಹಾಗೂ 'ಅಸೀರ್' ಮತ್ತು ಬುರ್ಹಾನ್‌ಪುರಗಳ ಆಡಳಿತಾಧಿಕಾರವನ್ನು ಕೊಟ್ಟನು. ಮಲಿಕ್ ಲಾವನನಿಗೂ ಬಾದಶಹನು ಬಿರುದನ್ನು ಕೊಟ್ಟು ಮೋಜ್‌ಬನಾಸ್ ಪ್ರದೇಶವನ್ನು ಜಾಗೀರಿಯಾಗಿ ಬಿಟ್ಟನು. ಅಮಾದುಲ್‌ಮುಲ್ಕ್‌ನ ಮಗ "ಮಾಲ್ಹಾ" ಎಂಬವನಿಗೆ ಘಾಜಿಖಾನನೆಂದೂ, ಥಾನೇರ್‌ನ ಕೆಥಾನೆದಾರನಿಗೆ "ಖುತುಬ್‌ಖಾನ್" ಎಂದೂ, ಮಲಿಕ್ ಹಾಫಿಜನಿಗೆ "ಮುಹಾಫಿಜ್‌ಖಾನ್" ಎಂದೂ, ಅವನ ತಮ್ಮನಾದ ಮಲಿಕ್‌ಯೂಸುಫ್‌ನಿಗೆ ಯೂಸುಫಖಾನನೆಂದು ಬಿರುದುಗಳನ್ನು ಕೊಟ್ಟು ಈ ಅಮೀರರುಗಳೆಲ್ಲರನ್ನೂ ಆಜಂ ಹುಮಾಯೂನನ ಯಜಮಾನಿಕೆಯಲ್ಲಿ ಇರಬೇಕು ಎಂದು ಆದೇಶಿಸಿದನು.

ಹಿಸಾಮುಲ್‌ಮುಲ್ಕ್‌ನಿಗೆ ಗೌರವಪೂರ್ವಕ ಸನ್ಮಾನ :

ಸುಲ್ತಾನ್ ಮಹಮೂದ್‌ನು ತನ್ನ ಅಮೀರರುಗಳಲ್ಲಿದ್ದ ಮತ್ತೆ ಕೆಲವರನ್ನು ಅಂದರೆ ಮಲಿಕ್ ನುಸ್ರತ್‌ಮುಲ್ಕ ಮತ್ತು ಮುಜಾಹಿದತಲ್‌ಮುಲ್ಕ್ ಗುಜರಾತಿಯವರಿಗೆ ಆದಿಲ್‌ಖಾನ್‌ಫಾರೂಖಿ, 'ಅಲ್‌ಮುಖಾತಿಬ್' ಆಜಂ ಹುಮಾಯೂನ್‌ಗಳ ಬಿರುದುಗಳಿಂದ ಸನ್ಮಾನಿಸಿದನು. ೧೭ ತಾರೀಖಿನ ಜಿಲ್‌ಹಜ್ ತಿಂಗಳಲ್ಲಿ ಬಾದಶಹನು ತನ್ನ ರಾಜಧಾನಿಯತ್ತ ಹಿಂತಿರುಗಿದನು. ಪ್ರಯಾಣದ ಮೊದಲ ಮಜಲಿನಲ್ಲಿ (ಹಂತದಲ್ಲಿ) ಬಾದಶಹನು ಮಲಿಕ್ ಹಿಸಾಮುದ್ದೀನನಿಗೆ "ಶಹರ್‌ಯಾರ್"ನ ಬಿರುದು ಕೊಟ್ಟು ಸನ್ಮಾನಿಸಿದನು. ಎರಡು ಆನೆಗಳನ್ನು ಕೊಟ್ಟು ಸುಲ್ತಾನನ ಆಡಳಿತಕ್ಕೆ ಸೇರಿದ "ದೇನುರಹ್" ನಗರಕ್ಕೆ ಹೋಗಲು ಆಜ್ಞಾಪಿಸಿದನು. ಬಾದಶಹನು ಬೇಗ ಬೇಗ ಪ್ರಯಾಣದ ಮಜಲುಗಳನ್ನು ಪೂರ್ಣಗೊಳಿಸಲಾರಂಭಿಸಿದನು. ಅದೇ ದಿನಗಳಲ್ಲಿ ಸುಲ್ತಾನ್ ಬಹಾದ್ದೂರನು ಷಹಜಾದ ಮುಜಫ್ಫರ್‌ಬಿನ್‌ಷಹಜಾದ ಬಹಾದ್ದೂರನಿಗೆ ಉತ್ತಮ ಕುದುರೆಗಳನ್ನು ಬಹುಮಾನದ ರೂಪದಲ್ಲಿ ನೀಡಿದನು.

ಮಲಿಕ್ ಹಿಸಾಮುದ್ದೀನನ ಕೊಲೆ :

ಸುಲ್ತಾನ್ ಮಹಮೂದ್‌ನು ಮಹಮ್ಮದಾಬಾದಿನ ಹತ್ತಿರ ತಲುಪಿದನು. ತನ್ನ ಮೊಮ್ಮಗನಾದ ಸುಲ್ತಾನ್ ಬಹಾದುರನನ್ನು ತನ್ನ ಜೊತೆಯಲ್ಲಿ ಕರೆದುಕೊಂಡನು. ಸುಲ್ತಾನ್ ಮುಜಫರನನ್ನು ಬಡೋದೆಗೆ ಹೋಗಲು ಆಜ್ಞಾಪಿಸಿದನು. ಆತನು ಮುಜಫರನ ಜಹಾಗೀರಿಯಲ್ಲಿ ನೆಲೆಸಿದ್ದನು. ಸುಲ್ತಾನ್‌ನ ಎದುರಿನಲ್ಲೇ ಆಜಂ ಹುಮಾಯೂನನು ಮಲಿಕ್ ಹಿಸಾಮುದ್ದೀನ್ ಶಹರ್‌ಯಾರನನ್ನು ಕೊಲೆ ಮಾಡಿದನು. ಅಷ್ಟೇ ಅಲ್ಲದೆ ಆತನ ಸಂಬಂಧಿಕರೆಲ್ಲರ ಕೊಲೆಗೂ ಆಜ್ಞಾಪಿಸಿದನು. ರಬೀವುಲ್ ಅವ್ವಲ್ ತಿಂಗಳ ೯೧೪ರ ಹಿಜರಿಯಲ್ಲಿ ಈ ಸುದ್ದಿಯು ಸುಲ್ತಾನ್ ಮಹಮೂದ್‌ನಿಗೆ

ತಿಳಿಯಿತು. ಸುಲ್ತಾನ್‌ನ ಬಾಯಿಂದ ಬಂದ ಮಾತೆಂದರೆ ಯಾರು ಉಪ್ಪು ತಿಂದ ಮನೆಗೆ ಎರಡು ಬಗೆಯುತ್ತಾರೋ ಅವರ ಅಂತ್ಯ ಹೀಗೆಯೇ ಎಂದನು.

ಆಜಂ ಹುಮಾಯೂನನ ಪತ್ರ ಸುಲ್ತಾನ್ ಮಹಮೂದ್‌ನಿಗೆ :

ಈ ಮಧ್ಯ ಬುರ್ಹಾನ್‌ಪುರ ಮತ್ತು ಅಸೀರಿನಿಂದ ಆಜಂ ಹುಮಾಯೂನನ ಒಂದು ಪತ್ರ ಸುಲ್ತಾನ್ ಮಹಮೂದ್‌ನಿಗೆ ತಲುಪಿತು. ಅದರಲ್ಲಿ ಹೀಗೆ ಬರೆದಿತ್ತು. ಶೇರ್‌ಖಾನ್ ಮತ್ತು ಸೈಫ್‌ಖಾನರಿಬ್ಬರೂ ಅಸೀರ್ ಕೋಟೆಯನ್ನು ವಶಪಡಿಸಿಕೊಂಡಿರುವರು. ಅವರಿಬ್ಬರೂ ಒಟ್ಟಾಗಿ ಸೇರಿ ನಿಜಾಮುಲ್ ಮುಲ್ಕ್‌ನಿಗೊಂದು ಪತ್ರವನ್ನು ಬರೆದಿದ್ದಾರೆ. ಈ ಪತ್ರದ ಉತ್ತರದಲ್ಲಿ ನಿಜಾಮುಲ್ ಮುಲ್ಕ್ ಆಲಂಖಾನ ಮತ್ತು ರಾಜ ಕಾಲೆನಾರನನ್ನು ಜೊತೆಯಲ್ಲಿ ಕರೆದುಕೊಂಡು ತನ್ನ ಗಡಿ ಪ್ರದೇಶದಲ್ಲಿ ಬೀಡು ಬಿಟ್ಟಿರುವರು. ಒಂದು ವೇಳೆ ನಿಜಾಮುಲ್ ಮುಲ್ಕ್‌ನು ತನ್ನ ಗಡಿಯನ್ನು ದಾಟಿ ಮುಂದೆ ಹೆಜ್ಜೆ ಇಟ್ಟರೆ ನಾನು ಅವನ ಮೇಲೆ ಯುದ್ಧವನ್ನು ಸಾರುವೆನು ಎಂದು ಬರೆದಿತ್ತು.

ಪತ್ರಕ್ಕೆ ಉತ್ತರ :

ಈ ಪತ್ರವನ್ನು ಓದಿದ ತಕ್ಷಣ ಸುಲ್ತಾನ್‌ನು ೫ ಲಕ್ಷ ತಿನ್ಗೆ ಎಂಬ ಚಿನ್ನದ ನಾಣ್ಯಗಳನ್ನು ಆಜಂ ಹುಮಾಯೂನನಿಗೆ ಕಳುಹಿಸಿಕೊಟ್ಟನು. ನಂತರ ತನ್ನ ಹೆಸರಾಂತ ಅಮೀರರಾದ ದಿಲಾವರ್‌ಖಾನ್, ಖದರ್‌ಖಾನ್ ಮತ್ತು ಸಫ್ದರ್‌ಖಾನ್‌ರನ್ನು ಆತನ ಸಹಾಯಕ್ಕೆ ನೇಮಿಸಿದನು. ಬಾದಶಹನು ಆಜಂ ಹುಮಾಯೂನನ ಪತ್ರಕ್ಕೆ ಉತ್ತರವನ್ನು ಹೀಗೆ ಬರೆದನು.–ಎಲೈ ಪ್ರೀತಿಯ ಮಗನೆ ನೀನು ಯಾವ ರೀತಿಯ ಚಿಂತೆಯನ್ನೂ ಮಾಡಬೇಡ. ಒಂದು ವೇಳೆ ಅವಶ್ಯಕತೆ ಬಿದ್ದರೆ ನಾನೇ ಸ್ವತಃ ನಿನ್ನ ಸಹಾಯಕ್ಕೆ ಬರಲಿದ್ದೇನೆ. ದಕ್ಷಿಣದ ಸುಲ್ತಾನ್ ಗುಲಾಂ ನಿಜಾಮುಲ್‌ಮುಲ್ಕ್‌ನ ಹತ್ತಿರ ನಿನ್ನನ್ನು ಸೋಲಿಸುವಷ್ಟು ಶಕ್ತಿ ಅವನಲ್ಲಿಲ್ಲ. ಗುಜರಾತಿ ಅಮೀರರು ನಗರದ ಹೊರವಲಯಗಳಲ್ಲಿದ್ದರು. ಷಹಜಾದ ಮುಜಫರ್‌ಖಾನನ ಬಗ್ಗೆ ಮುಂದಿನ ಪುಟಗಳಲ್ಲಿ ವರ್ಣಿಸಲಾಗುವುದು.

ನಿಜಾಮುಲ್‌ಮುಲ್ಕ್‌ನ ಪತ್ರ :

ಕೆಲವು ದಿನಗಳ ನಂತರ ನಿಜಾಮುಲ್‌ಮುಲ್ಕ್ ಬಹರಿಯ ದೂತನು ಮಹಮ್ಮದಾಬಾದಿಗೆ ಬಂದನು. ಸುಲ್ತಾನ್ ಮಹಮೂದ್‌ನಿಗೆ ಪತ್ರವನ್ನು ತಲುಪಿಸಿದನು. ಪತ್ರದ ವಿಷಯ ಖಾನ್‌ಜಾದ ಆಲಂಖಾನನು ನನಗೆ ಕೇಳಿರುವುದೇನೆಂದರೆ ತಾವು ಅವನಿಗೆ ಬುರ್‌ಹಾನಪುರ ಮತ್ತು ಅಸೀರ್‌ನ ಕೆಲವು ಪ್ರದೇಶಗಳನ್ನು ಕೃಪೆ ಮಾಡಿ ಕೊಡಬೇಕೆಂದು ಪ್ರಾರ್ಥಿಸಿದ್ದಾನೆ. ಈ ಪತ್ರವನ್ನು ಓದಿದ ಬಾದಶಹನು ತುಂಬಾ ಕೋಪಗೊಂಡು ಉತ್ತರದಲ್ಲಿ ಒಬ್ಬ ಗುಲಾಮನ ವಂಶದವನಿಗೆ ಇಷ್ಟೊಂದು ಧೈರ್ಯವೇ?

ಬಾದಶಹರುಗಳಿಗೆ ಪತ್ರವನ್ನು ಬರೆಯುವಷ್ಟು ಧೈರ್ಯ ಬಂದಿತೆ? ಎಂದು ಹೇಳುತ್ತಾ ಒಂದು ವೇಳೆ ಆತನು ತನ್ನ ಗಡಿಯ ಆಚೆ ಒಂದು ಹೆಜ್ಜೆ ಏನಾದರೂ ಕ್ರಮಿಸಿದರೆ ಆತನಿಗೆ ಈಗ ಕೊಟ್ಟಿರುವುದನ್ನು ಹಿಂದಕ್ಕೆ ಪಡೆಯಲಾಗುವುದು.

ಸೈಫ್‌ಖಾನ್ ಮತ್ತು ಶೇರ್‌ಖಾನರು ಶಾಂತಿಗೋಸ್ಕರ ಪ್ರಾರ್ಥನೆ :

ಈ ಉತ್ತರವು ನಿಜಾಮುಲ್ ಮುಲ್ಕ್‌ನಿಗೆ ಸಿಕ್ಕಿದಾಗ ಆತನು ಅಹಮದನಗರಕ್ಕೆ ವಾಪಸ್ಸ ಹೋದನು. ಗುಜರಾತಿ ಅಮೀರರು ನದರ್‌ಬಾರಿಗೆ ತಲುಪಿದರು. ಅದನ್ನು ತಮ್ಮ ವಶಕ್ಕೆ ಪಡೆದರು. ಶೇರ್‌ಖಾನ ಮತ್ತು ಸೈಫ್‌ಖಾನನು ಹೆದರಿ ಶಾಂತರಾಗಬೇಕೆಂದು ಪ್ರಾರ್ಥಿಸಿದರು. ಹಾಗೂ ದಕ್ಷಿಣದತ್ತ ಹೊರಟು ಹೋದರು. ಆಲಂಖಾನನಿಗೆ ಗುಜರಾತಿ ಸೈನ್ಯವು ಇತ್ತ ಬಂದಿದೆ ಎಂದು ಗೊತ್ತಾದ ತಕ್ಷಣ ಆತನು 'ಕಾಲೊಲ್' ಪ್ರದೇಶದಲ್ಲಿ ಲೂಟಿಯನ್ನು ಪ್ರಾರಂಭಿಸಿದನು. ಇಲ್ಲಿನ ರಾಜನು ಹೆದರಿ ಕಪ್ಪ ಕಾಣಿಕೆಗಳನ್ನು ಒಪ್ಪಿಸಿದನು. ಕ್ಷಮೆಯನ್ನು ಕೇಳಿದನು. ಆದಿಲ್‌ಖಾನನು ಅಸೀರ್‌ನಲ್ಲಿ ಪ್ರವೇಶಿಸಿ ಅಲ್ಲಿನ ದಿಲಾವರ್‌ಖಾನನನ್ನು ಸನ್ಮಾನಿಸಿ ಗುಜರಾತಿಗೆ ಹೊರಟು ಹೋದನು.

ಬಾದಶಹನಿಗೆ ದೆಹಲಿಯವನಿಂದ ಬಹುಮಾನ :

ಸುಲ್ತಾನ್ ಸಿಕಂದರ್ ಲೋಧಿ ಬಾದಶಹ ದೆಹಲಿಯವನ ಕಡೆಯಿಂದ ಹಿಜರಿ ೯೧೬ರಲ್ಲಿ ಸುಲ್ತಾನ್ ಮಹಮೂದ್ ಗುಜರಾತಿಗೆ ಸಂತೋಷದ ಕುರುಹಾಗಿ ಬಹುಮೌಲ್ಯ ಬಹುಮಾನಗಳನ್ನು ಕಳುಹಿಸಿಕೊಟ್ಟನು. ಒಬ್ಬ ದೆಹಲಿ ಸುಲ್ತಾನನು ಗುಜರಾತಿ ಸುಲ್ತಾನನಿಗೆ ಬಹುಮೌಲ್ಯ ಬಹುಮಾನಗಳನ್ನು ಕಳುಹಿಸಿರುವುದು ಇದೇ ಮೊದಲ ಸಲವಾಗಿತ್ತು.

ನಹರ್‌ವಾಲಾದತ್ತ ಪ್ರಯಾಣ :

ಈ ವರ್ಷದಲ್ಲಿ ಸುಲ್ತಾನ್‌ನು ನಹರ್‌ವಾಲಾದ ಕಡೆಗೆ ಪ್ರಯಾಣವನ್ನು ಮಾಡಲು ಇಚ್ಛಿಸಿದನು. ಈ ಪ್ರದೇಶದ ಎಲ್ಲ ವಿದ್ವಾಂಸರು ಹಾಗೂ ಹಿರಿಯರನ್ನು ಸನ್ಮಾನಿಸಿದನು. ಹಾಗೂ ತಾನು ಈ ಪ್ರದೇಶಕ್ಕೆ ಬಂದಿರುವ ಕಾರಣ ನಾನು ತಮ್ಮೆಲ್ಲರ ಅಂತಿಮ ದರ್ಶನವನ್ನು ಪಡೆಯಲು ಬಂದಿದ್ದೇನೆಂದು ತಿಳಿಸಿದನು. ಬಹುಶಃ ನನ್ನ ಮರಣವು ನನಗೆ ಇತ್ತ ಕಡೆ ಪುನಃ ಬರಲು ಅನುಮತಿಸುತ್ತದೋ ಇಲ್ಲವೋ ಗೊತ್ತಿಲ್ಲವೆಂದು ತಿಳಿಸಿದನು. ಆಗ ಅಲ್ಲಿನ ಸನ್ಮಾನಿತ ವ್ಯಕ್ತಿಗಳು, ವಿದ್ವಾಂಸರುಗಳೂ ಬಾದಶಹನ ಬಗ್ಗೆ ಅಲ್ಲಾಹನಲ್ಲಿ ಆತನ ಶ್ರೇಯಸ್ಸಿಗೆ, ಆರೋಗ್ಯಕ್ಕೆ ಪ್ರಾರ್ಥಿಸಿದರು. ಈ ಪಯಣದ ನಂತರ ಬಾದಶಹನು ಪಟನ್ ಸೂಫಿ ಸಂತರ ದರ್ಗಾಗಳಿಗೆ ಭೇಟಿ ನೀಡಲು ಹೊರಟನು. ಮತ್ತೆ ಅಲ್ಲಿಂದ ಅಹಮದಾಬಾದಿಗೆ ವಾಪಸ್ಸಾದನು. "ಶೇಖ್ ಅಹಮ್ಮದ ಕಟ್ಟೂ"ರವರ ದರ್ಗಾಗೂ ಭೇಟಿ ನೀಡಿ, ಬಾದಶಹನು ಮಹಮ್ಮದಾಬಾದಿಗೆ ವಾಪಸ್ಸಾದನು.

ಬಾದಶಹನ ಶಾರೀರಿಕ ದುರ್ಬಲತೆ :

ಆ ದಿನಗಳಲ್ಲಿ ಬಾದಶಹನ ಶರೀರದಲ್ಲಿ ಅನೇಕ ಕಾಯಿಲೆಗಳ ಚಿನ್ಹೆಗಳು ಗೋಚರಿಸಿದವು. ಈ ಸ್ಥಿತಿಯನ್ನು ಕಂಡ ಬಾದಶಹನು ಷಹಜಾದ ಮುಜಫರ್‌ನನ್ನು ಬಡೋದ್ರದಿಂದ ಕರೆಯಿಸಿಕೊಂಡನು. ಆತನಿಗೆ ಸಾಮ್ರಾಜ್ಯದ ಆಡಳಿತದ ಉನ್ನತ ಮಟ್ಟದ ಜ್ಞಾನವನ್ನು ನೀಡಿದನು. ಮೂರು-ನಾಲ್ಕು ದಿನಗಳ ನಂತರ ಬಾದಶಹನ ಆರೋಗ್ಯ ಸ್ಥಿತಿಯು ಸ್ವಲ್ಪಮಟ್ಟಿಗೆ ಸುದಾರಿಸಿತು. ಇದರಿಂದಾಗಿ ಮಗನನ್ನು ಬಡೋದ್ರಕ್ಕೆ ವಾಪಸ್ಸ ಕಳಿಸಿದನು. ಕೆಲವು ದಿನಗಳ ನಂತರ ಬಾದಶಹನ ಆರೋಗ್ಯವು ಕೆಟ್ಟಿತು. ಹಿಂದಿನ ಕಾಯಿಲೆಯು ಮರುಕಳಿಸಿತು. ಇದರಿಂದಾಗಿ ಬಾದಶಹನ ಶಾರೀರಿಕ ಸ್ಥಿತಿ ತುಂಬಾ ದುರ್ಬಲವಾಯಿತು. ಪುನಃ ಬಡೋದ್ರದಿಂದ ಮಗ ಮುಜಫರನನ್ನು ತನ್ನ ಬಳಿಗೆ ಕರೆಯಿಸಿಕೊಂಡನು.

ಸುಲ್ತಾನ್ ಮಹಮೂದನ ಮರಣ :

ಈ ಮಧ್ಯೆ ಫರ್‌ಹತಲ್‌ಮುಲ್ಕ್‌ನು ಒಂದು ಅರ್ಜಿಯಲ್ಲಿ ತಿಳಿಸಿದ್ದೇನೆಂದರೆ- ಇರಾನ್ ದೇಶದ ಬಾದಶಹನಾದ ಷಾಹೆ-ಇಸ್ಮಾಯಿಲಸೂಫಿ ಎಂಬುವನು ಯಾದ್‌ಗಾರ್ ಬೇಗ ಎಂಬುವನ ಒಂದು ಗುಂಪಿನೊಂದಿಗೆ ಅತ್ಯುನ್ನತ ಮಟ್ಟದ ಬಹುಮೌಲ್ಯ ಬಹುಮಾನಗಳನ್ನು ಬಾದಶಹ ಮಹಮೂದ್ ಗುಜರಾತಿಯವರಿಗೆ ಕಳುಹಿಸಿದ್ದಾನೆ. ಆ ಗುಂಪಿನವರಿಗೆ "ಖಿಜ್‌ಲಬಾಶ್" ಎಂದು ಕರೆಯುತ್ತಾರೆಂದು ತಿಳಿಸಿದನು. ಈ ಸಮಾಚಾರವನ್ನು ತಿಳಿದ ಬಾದಶಹನು ಹೀಗೆಂದನು.- "ಅಲ್ಲಾನು ಖಿಜ್‌ಲಬಾಶರನ್ನು ತೋರಿಸುವ ಘಳಿಗೆ ಬಾರದಿರಲಿ" ಎಂದನು. ಏಕೆಂದರೆ ಅವರು ಹಿಂಸೆಕೋರರು, ದಂಗೆಕೋರರು ಆಗಿರುತ್ತಾರೆ. ಬಾದಶಹನ ಇಚ್ಛೆಯಂತೆಯೇ ಆಯಿತು. ಖಿಜ್‌ಲಿಬಾಶರು ಬಾದಶಹನ ಹತ್ತಿರ ತಲುಪಿರಲೇ ಇಲ್ಲ. ರಂಜಾನ್ ತಿಂಗಳ ಎರಡನೇ ತಾರೀಖು ಹಿಜರಿ ೯೧೭ರಲ್ಲಿ ಬಾದಶಹನು ಈ ಲೋಕವನ್ನು ಬಿಟ್ಟು ತೆರಳಿದನು. ಅಂದು ಸೋಮವಾರವಾಗಿತ್ತು.

"ಬೇಗ್ರ" ಎಂಬ ಬಿರುದು ಇಡಲು ಕಾರಣ :

ಸುಲ್ತಾನ್ ಮಹಮೂದ್‌ನು (೬೧) ಅರವತ್ತೊಂದು ವರ್ಷಗಳಿಗೆ ಒಂದು ತಿಂಗಳು ಕಡಿಮೆ ಅವಧಿಯ ಆಯುಷ್ಯವನ್ನು ಪಡೆದಿದ್ದನು. ಇಷ್ಟು ವರ್ಷಗಳಲ್ಲಿ ಆತನ ಶಾಸನದ ಕಾಲವೆಂದರೆ (೫೫) ಐವತ್ತೈದು ವರ್ಷ ಒಂದು ತಿಂಗಳ ದೀರ್ಘ ಹಾಗೂ ದಕ್ಷ ಆಡಳಿತಗಾರನೆಂದು ಹೆಸರು ಪಡೆದಿದ್ದನು. ಆದರೆ ಈತನ ಶಾಸನ ಕಾಲದ ಅವಧಿಯ ಬಗ್ಗೆ ಅನುಮಾನವಿದೆ. ಆಡಳಿತದ ಬಗ್ಗೆ ಬರಹಗಾರರು ಈತನನ್ನು "ಖುದಾಯೆಗಾನ್‌ಹಲೀಂ" ಎಂಬ ಬಿರುದಿನಿಂದ ಸ್ಮರಿಸುತ್ತಾರೆ. ಈತನನ್ನು "ಬೇಗ್ರ" ಎಂದೂ ಕರೆಯುತ್ತಾರೆ. ಬೇಗ್ರ ಎಂದರೆ 'ಹಸು' ಎಂದರ್ಥ. ಆದರೆ ಆ

ಹಸುವಿನ ಕೋಡು ಮೇಲುಮುಖವಾಗಿ ಚೂಪಾಗಿರುವುದಕ್ಕೆ ಕರೆಯುವರು. ಸುಲ್ತಾನ್ ಮಹಮೂದ್‌ನ ಮೀಸೆಗಳು ಮೇಲ್ಮುಖವಾಗಿದ್ದ ಕಾರಣ ಆತನನ್ನು "ಬೇಗ್ರ" ಎನ್ನುತ್ತಿದ್ದರು.

ಶಾಹ ಜಮಾಲುದ್ದೀನರ ವರದಿ :

ಷಾಹ ಜಮಾಲುದ್ದೀನ್ ಅಂಜುನ ಪ್ರಕಾರ ಸುಲ್ತಾನ್ ಮಹಮೂದನು ಬಹಳ ಪ್ರಮುಖ ಹಾಗೂ ಪ್ರಸಿದ್ಧವಾದ ಎರಡು ಕೋಟೆಗಳೆಂದರೆ–'ಕರ್ನಾಲ' ಮತ್ತು 'ಜನಾನೇರ್' ಕೋಟೆಗಳನ್ನು ಗೆದ್ದಿದ್ದನು. ಜನರು ಅವುಗಳ ಸಂಕೇತಕ್ಕೂ ಬೇಗ್ರ ಎಂದು ಕರೆಯುತ್ತಿದ್ದರೆಂದು ತಿಳಿದು ಬರುತ್ತದೆ.

ಬಾದಶಹನ ಪಾತ್ರ :

ಸುಲ್ತಾನ್ ಮಹಮೂದ್‌ನ ಚಾರಿತ್ರ್ಯ ವರ್ಣನೆಯಲ್ಲಿ ಆತನು ಒಬ್ಬ ಧಾರ್ಮಿಕ ಶುದ್ಧ ನಡತೆಯುಳ್ಳವನಾಗಿದ್ದನು. ಶೌರ್ಯದಲ್ಲಿ, ಬೌದ್ಧಿಕತೆಯಲ್ಲಿ, ಆಡಳಿತದಲ್ಲಿ ಮಾನವೀಯ ಗುಣಗಳಲ್ಲಿ ಉದಾರತೆಯಲ್ಲಿ ಇತರೆ ಗುಜರಾತಿ ಸುಲ್ತಾನರಿಗಿಂತ ಹೆಚ್ಚು ಪ್ರಸಿದ್ಧಿಯನ್ನು ಪಡೆದಿದ್ದನು. ಸುಳ್ಳು ಹೇಳುವ ಕೇಳುವವರನ್ನು ಕಂಡರೆ ಬಹಳ ಕಠಿಣವಾಗಿ ವರ್ತಿಸುತ್ತಿದ್ದನು. ಆತನ ಬಾಯಿಂದ ಎಂದೂ ಸಂಸ್ಕಾರಬದ್ಧವಲ್ಲದ ಮಾತುಗಳು ಹೊರಡುತ್ತಿರಲಿಲ್ಲ. ಆತನು ಸುಸಂಸ್ಕೃತನಾಗಿದ್ದನು. ಇಸ್ಲಾಂ ಧರ್ಮದ ನಿಯಮಗಳನ್ನು ತಪ್ಪದೇ ಪಾಲಿಸುತ್ತಿದ್ದನು. ಬಿಲ್ಲುಗಾರಿಕೆಯಲ್ಲಿ ಪ್ರವೀಣನಾಗಿದ್ದನು. ಆಗಾಗ್ಗೆ ಬೇಟೆಗೆ ಹೋಗುತ್ತಿದ್ದನು. ನಾಚಿಕೆ ಸ್ವಭಾವವೂ ಇತ್ತು. ಸ್ತ್ರೀಯರನ್ನು ಬಹಳವಾಗಿ ಗೌರವಿಸುತ್ತಿದ್ದನು.

ಶೌರ್ಯ ಮತ್ತು ಸಾಹಸಿ :

"ತಬ್ವಾತ್–ಎ–ಮಹಮೂದ್‌ಶಾಹಿ" ಎಂಬ ಗ್ರಂಥದ ಲೇಖಕನ ವರದಿಯ ಪ್ರಕಾರ–ಸುಲ್ತಾನ್ ಮಹಮೂದ್‌ನ ಶಾರೀರಿಕ ಆಕಾರ ಸ್ವಲ್ಪ ದುರ್ಬಲವಾಗಿ ಕಂಡರೂ, ತನ್ನ ಬಾಲ್ಯದಿಂದ ಹಿಡಿದು ಅಂತ್ಯ ಕಾಲದವರೆಗೆ ಪ್ರಯಾಣದಲ್ಲೇ ಅಗಲಿ, ಯುದ್ಧದಲ್ಲೇ ಆಗಲಿ ಆತನ ಉತ್ಸಾಹ, ಶೌರ್ಯ, ಸಾಹಸಗಳ ಎದುರು ದೊಡ್ಡ–ದೊಡ್ಡ ವೀರರೂ ನಿಲ್ಲುತ್ತಿರಲಿಲ್ಲ. ಆತನು ತನ್ನ ಬತ್ತಳಿಕೆಯಲ್ಲಿ ಒಮ್ಮೆಗೆ (೧೬೦) ಒಂದು ನೂರ ಅರವತ್ತು ಬಾಣಗಳನ್ನು ಇಟ್ಟಿರುತ್ತಿದ್ದನು. ಕತ್ತಿ ಮತ್ತು ಗುರಾಣಿಗಳನ್ನು–ಬಾಕುಗಳನ್ನೂ ಯಾವಾಗಲೂ ಇಟ್ಟುಕೊಂಡಿರುತ್ತಿದ್ದನು.

■

*

೮. ಸುಲ್ತಾನ್ ಮುಜಾಫರ್‌ಶಾಹ ಬಿನ್, ಸುಲ್ತಾನ್ ಮಹಮೂದ್ ಗುಜರಾತಿ

ಪಟ್ಟಾಭಿಷೇಕ :

ಸುಲ್ತಾನ್ ಮಹಮ್ಮದ್‌ಶಾಹ ಬಿನ್ ಸುಲ್ತಾನ್ ಮಹಮೂದ್‌ನ ಮರಣಾನಂತರ ಷಹಜಾದ (ರಾಜಕುಮಾರ) ಮುಜಫರ್‌ನು ಪಟ್ಟಕ್ಕೇರಿದನು. ತನ್ನ ತಂದೆಯ ಮರಣಾನಂತರ ಬಡೋದ್ರಾದಿಂದ ಮಹಮ್ಮದಾಬಾದಿಗೆ ಬಂದನು. ರಂಜಾನ್ ತಿಂಗಳ ಮೂರನೇ ತಾರೀಖಿನ ಮಂಗಳವಾರದಂದು ಪಟ್ಟಾಭಿಷೇಕವಾಯಿತು. ಎಲ್ಲ ಅಮೀರರೂ, ಶಾಸಕರೂ, ಸುಲ್ತಾನ್‌ರ ಸೇವೆಯನ್ನು ಪ್ರಾಮಾಣಿಕವಾಗಿ ಮಾಡಲು ಬದ್ಧರಾಗಿದ್ದೇವೆಂದು ಒಕ್ಕೊರಲಿನಿಂದ ಪ್ರಮಾಣವನ್ನು ಮಾಡಿದರು. ಅಂದೇ ರಾತ್ರಿ ಮುಜಫರನು ತನ್ನ ತಂದೆಯವರ ಶವವನ್ನು ಶೇಖ್ ಕಟ್ಟೋರವರ ಸಮಾಧಿಯತ್ತ ರವಾನಿಸಿದನು. ಅಜೀಜುಲ್ ಮುಲ್ಕನಿಗೆ ಹತ್ತು ಲಕ್ಷ ತಿನ್ಗೆ ನಾಣ್ಯಗಳನ್ನು ಕೊಟ್ಟು ಸರ್‌ಕಚ್ಚ್ ಕಸಬಾ ಪ್ರದೇಶದ ಬಡವರಲ್ಲಿ ವಿತರಿಸಲು ಆಜ್ಞಾಪಿಸಿದನು.

ರಷೀದುಲ್‌ಮುಲ್ಕ್ ಮತ್ತು ಖುಶ್‌ಕದಮ್‌ರ ನೇಮಕ :

ಇದಾದ ನಂತರ ಮುಜಫರ್‌ಶಾಹನು ಅಮೀರರುಗಳಿಗೆ ಬಹುಮಾನಗಳನ್ನು, ಬಿರುದುಗಳನ್ನು ನೀಡಿ ಸನ್ಮಾನಿಸಿದನು. ಅದೇ ದಿನ ಮುಜಫರ್‌ಶಾಹನ ಪ್ರಶಂಸಾತ್ಮಕ ಖುತ್ಬ (ಪ್ರವಚನ)ವು ಓದಲಾಯಿತು. ಮುಜಫರನ ಹುಟ್ಟಿದ ದಿನಾಂಕ– ಹಿಜರಿ ೮೭೫, ಶವ್ವಾಲ್ ತಿಂಗಳ ಇಪ್ಪತ್ತನೇ ದಿನವಾಗಿತ್ತು. ಆತನು ತನ್ನ ಆಡಳಿತದ ಪ್ರಾರಂಭಿಕ ದಿನಗಳಲ್ಲಿ ತನ್ನ ಸೈನ್ಯದ ವಿಶೇಷ ಸರದಾರರಾದ ಮಲಿಕ್ ಖುಶ್‌ಕದಂ ಮತ್ತು ರಷೀದುಲ್‌ಮುಲ್ಕ್‌ನಿಗೂ ಆಡಳಿತದ ಲಗಾಮನ್ನು ವಹಿಸಿದನು.

ಇರಾನ್ ದೇಶದ ದೂತನ ಆಗಮನ :

ಶವ್ವಾಲ್ ತಿಂಗಳಲ್ಲಿ ಅದೇ ವರ್ಷ ಇರಾನ್ ದೇಶದ ಬಾದಶಹನ ಒಬ್ಬ ದೂತ

ಯಾದ್‌ಗಾರ್‌ಬೇಗ್ ಎಂಬುವನು ಮಹಮ್ಮದಾಬಾದಿನ ಹತ್ತಿರಕ್ಕೆ ಬಂದನು. ಸುಲ್ತಾನ್ ಮುಜಫರನು ಯಾದ್‌ಗಾರ್‌ಬೇಗ್‌ನನ್ನು ಸ್ವಾಗತಿಸಲು ತನ್ನ ಶಾಸಕರನ್ನು, ಅಮೀರರನ್ನು ಕಳುಹಿಸಿದನು. ಬಾದಶಹನು ಇರಾನ ರಾಜನನ್ನು ಬಹಳ ಗೌರವಪೂರ್ವಕವಾಗಿ, ಪ್ರೇಮದಿಂದ ಸ್ವಾಗತಿಸಿದನು. ಯಾದ್‌ಗಾರ್‌ಬೇಗನೂ ಸಹ ಮುಜಾಫರ್‌ನಿಗೆ ಬಹುಮೌಲ್ಯ ವಸ್ತುಗಳನ್ನೂ ಬಹುಮಾನಗಳನ್ನು ಅರ್ಪಿಸಿದನು. ಬಾದಶಹ ಮುಜಫರನು ಯಾದ್‌ಗಾರ್‌ಬೇಗ್‌ನಿಗೆ ಮತ್ತು ಆತನೊಂದಿಗೆ ಬಂದಿದ್ದ ಗಣ್ಯ ವ್ಯಕ್ತಿಗಳಿಗೂ ಬಹುಮಾನಗಳನ್ನು ನೀಡಿ ಗೌರವಿಸಿದನು. ಮತ್ತು ಅಲ್ಲಿ ಇರುವ ತನಕ ಅವರಿಗೆ ಉತ್ತಮ ವಸತಿಯ ವ್ಯವಸ್ಥೆಯನ್ನು ಮಾಡಿದನು.

ಬಡೋದ್ರದತ್ತ ಪ್ರಯಾಣ :

ಕೆಲವು ದಿನಗಳ ನಂತರ ಸುಲ್ತಾನ್ ಮುಜಫರನು ಕಸಬಾ ಬಡೋದ್ರ ಕಡೆ ಪ್ರಯಾಣವನ್ನು ಬೆಳೆಸಿದನು. ಆ ಪ್ರದೇಶಕ್ಕೆ "ದೌಲತಾಬಾದ" ಎಂದು ಹೆಸರಿಟ್ಟನು. ಅದೇ ದಿನ ಶಾದಿ-ಆಬಾದ್ 'ಮಾಂಡು' ಸುಲ್ತಾನನ ಮಗನಾದ ಸಾಹಿಬ್‌ಖಾನನು ತನ್ನ ಸಹೋದರನ ಭಯದಿಂದ ಓಡಿ ಬಡೋದ್ರಕ್ಕೆ ಬಂದಿದ್ದನು. ಬಾದಶಹನು ತನ್ನ ಅಮೀರರನ್ನು ಸಾಹಿಬ್‌ಖಾನನನ್ನು ಸ್ವಾಗತಿಸಲು ಕಳುಹಿಸಿದನು. ಕೆಲವು ದಿನಗಳ ತನಕ ಬಾದಶಹನು ಸಾಹಿಬ್‌ಖಾನನ ಅತಿಥಿ ಸತ್ಕಾರದಲ್ಲಿ ತನ್ನನ್ನು ತೊಡಗಿಸಿಕೊಂಡನು. ನಂತರ ಮಹಮ್ಮದಾಬಾದಿಗೆ ವಾಪಸ್ಸಾದನು. ನಂತರ ಬಾದಶಹನು ಖೈಸರ್‌ಖಾನನನ್ನು ಕಸಬಾ 'ದಹೋರ್'ನತ್ತ ಕಳುಹಿಸಿದನು. ಅಲ್ಲಿಗೆ ಹೋಗಿ ಸುಲ್ತಾನ್ ಮಹಮೂದ್ ಖಿಲ್ಜಿ ಮತ್ತು ಮಾಳವ ದೇಶದ ಅಮೀರರ ಬಗ್ಗೆ ವಿವರವಾಗಿ ತಿಳಿದುಕೊಂಡು ಬರಲು ಆಜ್ಞಾಪಿಸಿದನು.

ಸಾಹಿಬ್‌ಖಾನ್‌ನ ಸಂದೇಶ :

ಒಂದು ದಿನ ಸಾಹಿಬ್‌ಖಾನನು ಸುಲ್ತಾನ್ ಮುಜಫರ್‌ನಿಗೊಂದು ಸಂದೇಶವನ್ನು ಹೀಗೆ ಕಳುಹಿಸಿದನು. ನಾನು ಈ ಪ್ರದೇಶಕ್ಕೆ ಬಂದು ಸುದೀರ್ಘ ಕಾಲವಾಗಿದೆ. ಆದರೂ ನನ್ನ ಉದ್ದೇಶವು ಇಲ್ಲಿಯವರೆಗೂ ಪೂರ್ಣವಾಗಿಲ್ಲ. "ಸುಲ್ತಾನ್ ಮುಜಫರ್‌ನು ಈ ಸಂದೇಶಕ್ಕೆ ಉತ್ತರವಾಗಿ-ಇತ್ತೀಚಿನ ದಿನಗಳು ಮಳೆಗಾಲವಾಗಿದ್ದು, ಏನನ್ನೂ ಮಾಡಲು ಸಾಧ್ಯವಾಗುತ್ತಿಲ್ಲ. ಅಲ್ಲಾನ ಇಚ್ಛೆಯಾದರೆ ಮಳೆಗಾಲದ ನಂತರ ಮಾಳವ ದೇಶದ ಅರ್ಧ ಭಾಗವನ್ನು ಸುಲ್ತಾನ್ ಮಹಮೂದ್ ಖಿಲ್ಜಿಯಿಂದ ಕಿತ್ತು ನಿನ್ನ ವಶಕ್ಕೆ ಬಿಡಿಸುತ್ತೇನೆ.

ಆಕ್ರಮಣ ಮತ್ತು ದುರಾಚಾರ :

ಬಾದಶಹನ ಮಾತನ್ನು ಲೆಕ್ಕಿಸದೆ ಸಾಹಿಬ್‌ಖಾನನ ದುರಾಚಾರದಲ್ಲಿ ವ್ಯತ್ಯಾಸ

ಉಂಟಾಗಲಿಲ್ಲ. ಯಾದ್‌ಗಾರ್‌ಬೇಗ್ ಮತ್ತು ಆತನ ಇತರೆ ಖಿಜ್‌ಲಿಬಾಶ್ ಸ್ನೇಹಿತರು ಗುಜರಾತಿನಲ್ಲಿ "ಕಲಾಹ್‌ಸುರ್ಖ್" ಎಂಬ ಹೆಸರಿನಲ್ಲಿ ಪ್ರಸಿದ್ಧರಾಗಿದ್ದರು. ಇವರು ಗುಜರಾತಿನಲ್ಲಿ ನೆಲೆಯಾಗಿ ನಿಂತಿದ್ದರು. ಒಂದು ದಿನ ಅವರ ನೌಕರರ ಮಧ್ಯೆ ಜಗಳವಾಯಿತು. ಈ ಜಗಳದಲ್ಲಿ ಯಾದ್‌ಗಾರ್‌ಬೇಗ್‌ನ ಮನೆಯನ್ನು ಲೂಟಿ ಮಾಡಿದರು. ಖಿಜ್‌ಲಿಬಾಶರು ಈ ಜಗಳದಲ್ಲಿ ಭಾಗವಹಿಸಿ ಅನೇಕ ನೌಕರರನ್ನು ಕೊಲೆ ಮಾಡಿದರು.

ಸಾಹಿಬ್‌ಖಾನ್‌ಸು 'ಅಸೀರ್'ನ ಕಡೆಗೆ ಪ್ರಯಾಣ :

ಗುಜರಾತಿನ ಸೈನ್ಯದಲ್ಲಿ ಖಿಜ್‌ಲಿಬಾಶರು ಸಾಹಿಬ್‌ಖಾನನನ್ನು ಸೆರೆ ಹಿಡಿದಿದ್ದಾರೆಂಬ ಸುದ್ದಿ ಹರಡಿತು. ಷಹಜಾದನಿಗೂ ಈ ಸುದ್ದಿ ತಿಳಿಯಿತು. ಈ ತೆರನಾದ ಹಿಂಸೆಯ ಸುದ್ದಿಯನ್ನು ಆತನು ಸಹಿಸಲಿಲ್ಲ. ಆತನು ಸುಲ್ತಾನ್ ಮುಜಫರ್‌ನಿಗೂ ಸುದ್ದಿಯನ್ನು ತಿಳಿಸದೆ, 'ಅಸೀರ' ನಗರಕ್ಕೆ ಪ್ರಯಾಣವನ್ನು ಬೆಳೆಸಿದನು. ಬುರ್ಹಾನಪುರದ ಶಾಸಕ ಮತ್ತು ಅಮಾದುಲ್ ಮುಲ್ಕ್‌ರ ಸಹಾಯವನ್ನು ಕೇಳಲು "ಕಾವೇಲ" ನಗರಕ್ಕೆ ಬಂದನು. ಈ ಎಲ್ಲ ವಿವರವಾದ ವಿಚಾರಗಳನ್ನು ಮಾಳವದ ಶಾಸಕರ ವಿಚಾರಗಳು ಬಂದಾಗ ತಿಳಿಸಲಾಗುತ್ತದೆ.

ಶಹಜಾದಾ ಸಾಹಬ್‌ಖಾನನ ಪ್ರಯಾಣದ ನಂತರ ರಾಜಪೂತರ ಗಲಭೆಗಳು, ಸುಲ್ತಾನ್ ಮಹಮೂದ್ ಖಿಲ್ಜಿಯ ಆಕ್ರಮಣಗಳು, ಅವರ ತೊಂದರೆಗಳ ಬಗ್ಗೆ ಸುಲ್ತಾನ್ ಮುಜಫರ್‌ನಿಗೆ ಸಮಾಚಾರಗಳು ಬಂದವು. ಆಗ ಸುಲ್ತಾನ್ ಮುಜಫರ್‌ನು ತನ್ನ ಹಿಂಜರಿಕೆಯನ್ನು ತೊರೆದು ಈ ಗುಂಪುಗಳ ಆಕ್ರಮಣಗಳನ್ನು ಹತ್ತಿಕ್ಕಲು ದೃಢ ಸಂಕಲ್ಪವನ್ನು ಮಾಡಿದನು.

ಮಾಳವದತ್ತ ಪ್ರಯಾಣ :

ಬಾದಶಹನು ಮೊದಲು ಅಹಮದಾಬಾದನತ್ತ ಪ್ರಯಾಣಿಸಲು ತೀರ್ಮಾನಿಸಿದನು. ಏಕೆಂದರೆ ಅಲ್ಲಿನ ಠಾಣೆಗಳ ಬಗ್ಗೆ ಸರಿಯಾದ ಅರಿವು ಪಡೆಯಲೆಂದು ದಾರಿಯಲ್ಲಿ ಅಹಮದಾಬಾದ್ ಪಟ್ಟಣದಲ್ಲಿ ತಂಗಿದನು. ಒಂದು ವಾರದ ತನಕ ಅಲ್ಲಿಯೇ ತಂಗಿದ್ದು, ಅಲ್ಲಿಂದ 'ಕೋಧ್ರಾ' ದತ್ತ ಪ್ರಯಾಣವನ್ನು ಬೆಳೆಸಿದನು. ಕೋಧ್ರಾದಲ್ಲಿ ಆತನು ಸೈನ್ಯವನ್ನು ವೃದ್ಧಿಸಿಕೊಂಡು ಮುಂದೆ ಪ್ರಯಾಣವನ್ನು ಬೆಳೆಸುವುದರೊಳಗೆ ಐದರ್ ಕೋಟೆಯ ರಾಜನಾದ ರಾಯ್‌ಭೀಮನು ಸಂದರ್ಭದ ಲಾಭವನ್ನು ಪಡೆಯಲು ಸಬರಮತಿ ಗಡಿಗಳನ್ನು ಉಲ್ಲಂಘಿಸಿ ಆಕ್ರಮಣವನ್ನು ಮಾಡಿದ್ದಾನೆಂದು ಬಾದಶಹನಿಗೆ ಸುದ್ದಿ ಬಂದಿತು.

ರಾಜ ಐದರ್ ಮತ್ತು ಐನುಲ್‌ಮುಲ್ಕನಲ್ಲಿ ಯುದ್ಧ :

ಈ ಸಮಾಚಾರವನ್ನು ಕೇಳಿದ ಐನುಲ್‌ಮುಲ್ಕನು ತನ್ನ ಗಡಿ ಪ್ರದೇಶಗಳತ್ತ ರಾಜನ ಅತಿಕ್ರಮಣಗಳನ್ನು ಹತ್ತಿಕ್ಕಲು ರವಾನಿಸಿದನು. ನಂತರ ಬಾದಶಹನ ಸೇವೆಯಲ್ಲಿ ಹಾಜರಾದನು. ರಾಜ ಸಹ ತನ್ನ ಸೈನ್ಯದೊಂದಿಗೆ ಐನುಲ್ ಮುಲ್ಕನನ್ನು ಎದುರಿಸಲು ಬಂದನು. ಇಬ್ಬರಲ್ಲೂ ಘೋರ ಯುದ್ಧವು ನಡೆಯಿತು. ಅಬ್ದುಲ್ ಮುಲ್ಕ್ ಎಂಬ ಸೇನಾ ಸರದಾರನೊಂದಿಗೆ ಸುಮಾರು ಎರಡು ನೂರು ಸಿಪಾಯಿಗಳು ಯುದ್ಧದಲ್ಲಿ ಮರಣ ಹೊಂದಿದರು. ಐನುಲ್‌ಮುಲ್ಕನ ಪ್ರೀತಿಯ ಒಂದು ಆನೆಯೂ ಸತ್ತಿತ್ತು. ಈ ಪರಿಸ್ಥಿತಿಯನ್ನು ಕಂಡ ಐನುಲ್‌ಮುಲ್ಕನು ಯುದ್ಧ ಮೈದಾನದಿಂದ ಓಡಿದನು.

ಬಾದಶಹನು ಐದರ್ ಕಡೆ ಪ್ರಯಾಣ :

ಸುಲ್ತಾನ್ ಮುಜಫರ್‌ನು ರಾಯ್‌ಭೀಮನನ್ನು ಸೋಲಿಸಲು ಐದರ್ ಕೋಟೆಯತ್ತ ಪ್ರಯಾಣವನ್ನು ಬೆಳೆಸಲು ಇಚ್ಛಿಸಿದನು. ಬಾದಶಹನು ಕಸಬಾ ಮೆಹರಾಸವನ್ನು ತಲುಪಿ, ತನ್ನ ಸೈನ್ಯದ ಒಂದು ಭಾಗವನ್ನು ಐದರ್ ಕೋಟೆಯ ಮೇಲೆ ಆಕ್ರಮಣವನ್ನು ಮಾಡಲು ಆಜ್ಞಾಪಿಸಿದನು. ರಾಜ ಐದರನು ತಕ್ಷಣ ಕೋಟೆಯನ್ನು ಖಾಲಿಮಾಡಿ ತಾನು ಬೀಜಾ ನಗರದ ಬೆಟ್ಟಗುಡ್ಡಗಳಲ್ಲಿ ಅಡಗಿಕೊಂಡನು. ಬಾದಶಹನು ಐದರ್‌ಕೋಟೆಗೆ ತಲುಪಿ ಅಲ್ಲಿ ಕೇವಲ ಹತ್ತು ಜನ ರಾಜಪೂತರನ್ನು ಕೊಲೆ ಮಾಡಿದನು.

ರಾಜ ಐದರ್‌ನ ಚಿಂತೆ :

ಬಾದಶಹನು ಐದರ್‌ನಲ್ಲಿ ವಿನಾಶ ಲೂಟಿ, ಬೆಂಕಿಯಿಂದ ಇಡೀ ನಗರವನ್ನು ಹಾಳುಗೆಡವಿದನು. ರಾಜ ಭೀಮನು ಚಿಂತಾಕ್ರಾಂತನಾಗಿ ಗೋಪಾಲನೆಂಬ ಒಬ್ಬ ದೂತನನ್ನು ಬಾದಶಹನ ಹತ್ತಿರಕ್ಕೆ ಕಳುಹಿಸಿದನು. ದೂತನು ಈ ಸಂದೇಶವನ್ನು ಹೊತ್ತು ಬಾದಶಹನಿಗೆ ತಂದದ್ದೇನೆಂದರೆ–"ಐನುಲ್‌ಮುಲ್ಕನು ನನ್ನ ಶತ್ರುವಾಗಿದ್ದನು" ಆತನು ನನ್ನ ರಾಜ್ಯವನ್ನು ಹಾಳುಗೆಡವಿದನು. ಆದ್ದರಿಂದ ನಾನು ಆತನನ್ನು ಸೋಲಿಸಬೇಕಾಯಿತು. ಪ್ರಾರಂಭದಲ್ಲಿ ನನ್ನ ತಪ್ಪಿರಲಿಲ್ಲ. ಈಗ ನಾನು ಹುಜೂರರ ಸೇವೆಯಲ್ಲಿ ಇಪ್ಪತ್ತು ಲಕ್ಷ ತಿನ್ಗೆ ಚಿನ್ನದ ನಾಣ್ಯಗಳನ್ನು (ಎರಡು ಸಾವಿರ ತೋಮಾನ್‌ಗಳಿಗೆ ಸಮ) ಒಂದು ನೂರು ಕುದುರೆಗಳನ್ನು ತಮಗೆ ನೀಡಲು ಸಿದ್ಧನಿದ್ದೇನೆ. ತಾವುಗಳು ನನ್ನನ್ನು ಕ್ಷಮಿಸುತ್ತೀರೆಂದು ನಂಬಿರುತ್ತೇನೆ. ನನ್ನ ಕೊಡುಗೆಗಳನ್ನು ಸ್ವೀಕರಿಸಿ, ನನ್ನ ಚಿಂತೆಯನ್ನು ದೂರ ಮಾಡುತ್ತೀರೆಂದು ಪ್ರಾರ್ಥಿಸುತ್ತೇನೆ.

ಮಾಳವ ದೇಶವನ್ನು ಗೆಲ್ಲುವ ಇಚ್ಛೆ :

ಸುಲ್ತಾನ್ ಮುಜಫ್ಫರ್‌ಶಾಹನು ಮಾಳವ ದೇಶವನ್ನು ಗೆಲ್ಲುವ ಆಸೆಯನ್ನು ಹೊಂದಿದ್ದನು. ಆತನು ಭೀಮ ರಾಜನ ಪ್ರಾರ್ಥನೆಯನ್ನು ಸ್ವೀಕರಿಸಿದನು. ಅಲ್ಲಿಂದ

ಕೋಥ್ರಾ ನಗರಕ್ಕೆ ಬಂದನು. ಬಾದಶಹನು ಸೈನ್ಯ ಸಂಗ್ರಹ ಕಾರ್ಯಕ್ಕೆಂದು ಮತ್ತು ಇತರೆ ಸಾಮಾನುಗಳನ್ನು ಖರೀದಿಸಲು ೨೦ ಲಕ್ಷ ತಿನ್ಗೆ ನಾಣ್ಯಗಳನ್ನು ಮತ್ತು ಒಂದು ನೂರು ಕುದುರೆಗಳನ್ನು ಐನುಲ್ ಮುಲ್ಕನಿಗೆ ಕೊಟ್ಟನು. ಸಿಕಂದರ್‌ಶಾಹನಿಗೆ ಕೋದ್ರಾದಲ್ಲಿಯೇ ಮಹಮ್ಮದಾಬಾದಿನ ಆಡಳಿತಾಧಿಕಾರವನ್ನು ಒಪ್ಪಿಸಿದನು. ಆ ಪ್ರದೇಶಗಳತ್ತ ಹೋಗಲು ಆಜ್ಞಾಪಿಸಿದನು.

ಧಾರ್ ನಗರದ ಕಡೆ ಗಮನ :

ಇದಾದ ನಂತರ ಬಾದಶಹನು ಬಡೋದ್ರ ಹೆಸರಿನ ಕಸಬಾಕ್ಕೆ ತಲುಪಿದನು. ಮಹಮೂದ್ ಖಿಲ್ಜಿಯ ವಶದಲ್ಲಿರುವ ದೇವಲಾ ಹೆಸರಿನ ಕಸಬಾ ಹಳ್ಳಿಯನ್ನು ವಶಪಡಿಸಿಕೊಳ್ಳುವಂತೆ ತನ್ನ ಅಮೀರನಾದ ಖೈಸರ್‌ಖಾನನಿಗೆ ಆಜ್ಞಾಪಿಸಿದನು. ಸ್ವತಃ ಬಾದಶಹನು ಧಾರ್ ನಗರದತ್ತ ಹೊರಟನು. ಆ ಪ್ರದೇಶದ ಶಾಸಕರೆಲ್ಲರೂ ಬಾದಶಹನ ಸ್ವಾಗತಕ್ಕಾಗಿ ಬಂದು ತಮ್ಮ ಪ್ರಾಣ ರಕ್ಷಣೆಗೆ ಪ್ರಾರ್ಥಿಸಿದರು. ಸುಲ್ತಾನ್ ಮುಜಫ್ಫರನು ಅವರೆಲ್ಲರ ಪ್ರಾರ್ಥನೆಯನ್ನು ಮನ್ನಿಸಿ ಧಾರ್ ಪ್ರದೇಶದ ಆಡಳಿತವನ್ನು ಖವಾಮುಲ್ ಮುಲ್ಕ ಮತ್ತು ಇಖ್ತಿಯಾರುಲ್ ಮುಲ್ಕ ಬಿನ್ ಅಮಾದುಲ್ ಮುಲ್ಕ್‌ರಿಗೆ ವಹಿಸಿದನು.

ಸುಲ್ತಾನ್ ಮಹಮೂದ್‌ನ ಚಂದೇರಿ ಆಕ್ರಮಣ :

ಅದೇ ದಿನಗಳಲ್ಲಿ ಸುದ್ದಿ ಬಂದದ್ದೇನೆಂದರೆ– ಸುಲ್ತಾನ್ ಮಹಮೂದನು ಚಂದೇರಿ ಪ್ರದೇಶದ ದಂಗೆಕೋರರರನ್ನು ಅಡಗಿಸಲು ಆಕ್ರಮಣವನ್ನು ಮಾಡಿದ್ದಾನೆಂದು ತಿಳಿಯಿತು. ಸುಲ್ತಾನ್ ಮುಜಫ್ಫರನು ತನ್ನ ಅಮೀರರರನ್ನೆಲ್ಲ ತನ್ನ ಬಳಿ ಕರೆಯಿಸಿಕೊಂಡು ನನ್ನ ಈ ಪ್ರಯಾಣದ ಉದ್ದೇಶವೇನು? ಎಂಬುದರ ಬಗ್ಗೆ ಹೀಗೆ ವಿವರಿಸಿದನು. ಏನೆಂದರೆ ನಾನು ಬೋರ್‌ಬಿಯಾದ ಮುಸ್ಲಿಮೇತರರ ಅತ್ಯಾಚರಣೆಗಳ ದಮನ ಮಾಡಬೇಕಿದೆ. ಮತ್ತು ಮಾಳವದೇಶದ ಆಡಳಿತವನ್ನು ಸುಲ್ತಾನ್ ಮಹಮೂದ್ ಖಿಲ್ಜಿ ಮತ್ತು ಸಾಹಿಬ್‌ಖಾನ್ ಬಿನ್ ಸುಲ್ತಾನ್ ನಾಸಿರುದ್ದೀನರ ಮಧ್ಯೆ ಹಂಚಿಕೊಡಬೇಕೆಂದಿದ್ದೇನೆ. ಆದರೆ ಈಗ ಸುಲ್ತಾನ್ ಮಹಮೂದ್ ಖಿಲ್ಜಿಯು ಚಂದೇರಿಯ ಅಮೀರರ ವಿರುದ್ಧ ರಾಜಪೂತರನ್ನು ಜೊತೆಯಲ್ಲಿ ಸೇರಿಸಿರುವುದರಿಂದ ಆ ಪ್ರದೇಶಗಳ ಬಗ್ಗೆ ಪ್ರವೇಶಿಸುವುದು ಸೂಕ್ತವಲ್ಲವೆಂದು ತಿಳಿದಿದ್ದೇನೆ.

ಪ್ರವಾಸ ಮತ್ತು ಬೇಟೆಗೆ ಧಾರ್‌ನತ್ತ ಪ್ರಯಾಣ :

ಈ ಸಂದರ್ಭದಲ್ಲಿ ಖವಾಮುಲ್ ಮುಲ್ಕನು ಸುಲ್ತಾನ್‌ನ ಸೇವೆಯಲ್ಲಿ ಹಾಜರಾದನು. ಈತನು ಬಾದಶಹನಲ್ಲಿ ಧಾರ್‌ನ ಕಾಡುಗಳ ಬಗ್ಗೆ ಬಹಳವಾಗಿ ಹೊಗಳಿದನು. ಇದನ್ನು ಕೇಳಿದ ಬಾದಶಹನು ಪ್ರವಾಸ ಮತ್ತು ಬೇಟೆಯಾಡುವ

ಅತ್ಯುತ್ಸಾಹವನ್ನು ತೋರಿದನು. ಆತನು ಖವಾಮುಲ್ ಮುಲ್ಕನಿಗೆ ತನ್ನ ಸೈನ್ಯದ ಜವಾಬ್ದಾರಿಯನ್ನು ಹೊರಿಸಿ ತಾನು ಸ್ವತಃ ಎರಡು ಸಾವಿರ ಸವಾರರು ಮತ್ತು ೧೫೦ ಆನೆಗಳೊಂದಿಗೆ ಧಾರ್‌ನತ್ತ ರವಾನೆಯಾದನು. ಅದೇ ದಿನ ಬಾದಶಹನು ಮಿರ್ಜಾಶೇಖ್ ಅಬ್ದುಲ್ಲಾ ಚಂಗಾಲ್, ಮತ್ತು ಶೇಖ್ ಕಮಾಲುದ್ದೀನ್ ಮಾಲವಿರವರ ದರ್ಗಾಹಗಳಿಗೆ ಭೇಟಿಯಿತ್ತು. ಪ್ರಾರ್ಥನೆಯನ್ನು ಸಲ್ಲಿಸಿದನು.

ಜನಾನೇರ್ ಕೋಟೆಗೆ ವಾಪಸ್ಸು :

ಶೇಖ್ ಅಬ್ದುಲ್ಲಾ ಚಂಗಾಲ್‌ರವರು ರಾಜಭೋಜ್ ಪಾಂಡಿಯವನ ಮೇಲೆ ಹಾಗೂ ಅವನ ಮಂತ್ರಿಗಳ ಮೇಲೆ ಬಹಳ ಕೃಪೆಯನ್ನಿಟ್ಟಿದ್ದರು. ಒಂದು ವಿಶೇಷ ಕಾರಣದಿಂದಾಗಿ ಅವರೆಲ್ಲರೂ ಇಸ್ಲಾಂ ಧರ್ಮವನ್ನು ಸ್ವೀಕರಿಸಿದ್ದರು. ಭಗವಂತನ ಸೇವೆ ಪ್ರಾರ್ಥನೆ, ಸಾಧನೆಗಳೊಂದಿಗೆ ಅವರು ಅಲೌಕಿಕ ಶಕ್ತಿಯನ್ನು ಪಡೆದಿದ್ದರೆಂದು ತಿಳಿದುಬರುತ್ತದೆ. ನಿಜಾಮುಲ್ ಮುಲ್ಕನು ದಿಲಾವರದಿಂದ ಕಸಬಾ ನಾಲ್ಚ ಪ್ರದೇಶಕ್ಕೆ ಬಂದಾಗ ಹಿಂತಿರುಗುತ್ತಿದ್ದಾಗ ರಾಜಪೂತರ ಒಂದು ಗುಂಪು ಇಸ್ಲಾಮಿ ಸೈನ್ಯದ ಸಾಕಷ್ಟು ನಷ್ಟವನ್ನುಂಟು ಮಾಡಿದರು. ಈ ಸುದ್ದಿಯು ಬಾದಶಹನಿಗೆ ತಿಳಿಯಿತು. ಆತನು ನಿಜಾಮುಲ್ ಮುಲ್ಕನ ಮೇಲೆ ಸಿಟ್ಟಾದನು. ನಂತರ ತಾನು ಜನಾನೇರ್‌ಗೆ ವಾಪಸ್ಸಾದನು.

ಐದರ್‌ನಲ್ಲಿ ಗಲಭೆ :

ಅದೇ ದಿನಗಳಲ್ಲಿ ಐದರ್ ರಾಜನು ಮರಣ ಹೊಂದಿದನು. ಆತನ ಜಾಗದಲ್ಲಿ ಆತನ ಮಗನಾದ ರಾಜ ಬಹಾದುರ್ ಮಲ್ಲನು ಪಟ್ಟಕ್ಕೆ ಕುಳಿತನು. ಆ ಸಂದರ್ಭದಲ್ಲಿ ರಾಣಾಸಾಂಗನು ತನ್ನ ಅಳಿಯನಾದ ರಾಯ್‌ಮಲ್ಲ ಬಿನ್ ಸೂರಜಮಲ್ಲನ ಸಹಾಯಕ್ಕೆ ನಿಂತನು. ಮತ್ತು ಐದರ್ ಪ್ರದೇಶ ಹಾಗೂ ಕೋಟೆಯನ್ನು ಬಹಾದುರ್‌ಮಲ್ಲನ ಹಿಡಿತದಿಂದ ಬಿಡಿಸಿ ರಾಯ್‌ಮಲ್ಲನ ವಶಕ್ಕೆ ಕೊಟ್ಟನು. ಬಹಾದೂರ್‌ಮಲ್ಲನು ಸುಲ್ತಾನ್ ಮುಜಫರನ ಸಹಾಯವನ್ನು ಬೇಡಿದನು.

ಪಟನ್ ನಗರದತ್ತ ಪ್ರವಾಸ :

ಸುಲ್ತಾನ್ ಮುಜಫರನು ಹಿಜರಿ-೯೨೧ ಶವ್ವಾಲ್ ತಿಂಗಳಲ್ಲಿ ನಿಜಾಮುಲ್ ಮುಲ್ಕನನ್ನು ಆದೇಶಿಸಿದ್ದೇನೆಂದರೆ-ಐದರ್ ಪ್ರದೇಶ ಮತ್ತು ಕೋಟೆಯನ್ನು ರಾಯಮಲ್ಲನಿಂದ ಬಿಡಿಸಿ, ಬಹಾರ್‌ಮಲ್ಲನ ವಶಪಡಿಸಬೇಕೆಂದನು. ಹೀಗೆ ಆದೇಶಿಸಿದ ನಂತರ ಬಾದಶಹನು ಅಹಮದ್ ನಗರದತ್ತ ಪ್ರಯಾಣಿಸಿದನು. ದಾರಿಯಲ್ಲಿ ಬಾದಶಹನು ತನ್ನ ಸೈನ್ಯದ ರಕ್ಷಣೆಯನ್ನು ಖುದಾವಂದ್‌ಖಾನನ ಸುಪರ್ದಿಗೆ ವಹಿಸಿ ತಾನು ಪಟನ್ ನಗರದತ್ತ ಹೊರಟನು. ಪಟನ್ ತಲುಪಿ ಬಾದಶಹನು ಅಲ್ಲಿಯ ಶಾಸಕರನ್ನೂ,

ವಿದ್ವಾಂಸರನ್ನು, ಜ್ಞಾನಿಗಳನ್ನೂ, ಸನ್ಮಾನಿಸಿ ಪುನಃ ತನ್ನ ಸೈನಿಕ ಶಿಬಿರದತ್ತ ವಾಪಸ್ ಬಂದನು.

ಐದರ್ ಕೋಟೆಯ ಗೆಲುವು :

ನಿಜಾಮುಲ್‌ಮುಲ್ಕ್‌ನು ತನ್ನ ಬಾದಶಹನ ಆಜ್ಞೆಯನ್ನು ಪಾಲಿಸಿದನು. ಐದರ್ ಕೋಟೆಯಿಂದ ರಾಯಮಲ್ಲನನ್ನು ಓಡಿಸಿ ಬಹಾರ್‌ಮಲ್ಲನ ವಶಕ್ಕೆ ಕೊಟ್ಟನು. ರಾಯಮಲ್ಲನು ಬೀಜಾ ನಗರ ಕಡೆಗೆ ಓಡಿ ಹೋದನು. ಆತನನ್ನು ಹಿಂಬಾಲಿಸಿದ ನಿಜಾಮುಲ್ ಮುಲ್ಕ್‌ನು ಬೀಜಾ ನಗರವನ್ನು ತಲುಪಿದನು. ಅಲ್ಲಿಯೂ ಯುದ್ಧವಾಯಿತು. ಇಬ್ಬರಲ್ಲೂ ಅಸಂಖ್ಯಾತ ಸಿಪಾಯಿಗಳು ಮರಣ ಹೊಂದಿದರು. ಈ ಸುದ್ದಿಯು ಬಾದಶಹನಿಗೆ ಗೊತ್ತಾಗಿ ಆತನು ನಮಗೆ ಐದರ್ ಕೋಟೆ ವಶವಾದ ಮೇಲೆ ಬೀಜಾ ನಗರದ ಮೇಲೆ ಯುದ್ಧವಾಡುವ ಅವಶ್ಯಕತೆ ಏನಿದೆ? ಎಂದು ಹೇಳಿದನು. ಅನವಶ್ಯಕವಾಗಿ ನಮ್ಮ ಸೈನಿಕರ ಪ್ರಾಣಗಳನ್ನು ಏಕೆ ಕಳೆಯಬೇಕೆಂದನು. ಇದರಿಂದ ನೀನು ತಕ್ಷಣ ಅಲ್ಲಿಂದ ಹಿಂದಕ್ಕೆ ಬರುವುದು ಸೂಕ್ತ ಎಂದು ಹೇಳಿ ಕಳುಹಿಸಿದನು. ನಿಜಾಮುಲ್ ಮುಲ್ಕ್‌ನು ತಕ್ಷಣ ಅಲ್ಲಿಂದ ಹಿಂತಿರುಗಿ ಅಹಮದ್ ನಗರಕ್ಕೆ ಬಂದನು. ಸುಲ್ತಾನ್ ಮುಜಫ್ಫರನು ನಿಜಾಮುಲ್‌ಮುಲ್ಕ್‌ನನ್ನು ಅಹಮದ್ ನಗರದಲ್ಲೆ ಉಳಿಯಲು ಹೇಳಿ ತಾನು ಅಹಮದಾಬಾದಿಗೆ ವಾಪಸ್ ಬಂದನು.

ಷಹಜಾದ ಸಿಕಂದರನ ಮದುವೆ :

ಅಹಮದಾಬಾದ ತಲುಪಿದ ಬಾದಶಹನು ರಾಜಕುಮಾರ (ಷಹಜಾದ) ಸಿಕಂದರನ ವೈವಾಹಿಕ ಶಾಸ್ತ್ರ ಸಂಬಂಧದ ಪದ್ಧತಿಗಳಲ್ಲಿ ಭಾಗವಹಿಸತೊಡಗಿದನು. ಈ ಸಂಬಂಧವಾಗಿ ವಿಜೃಂಭಣೆಯಿಂದ ವೈಭವೋಪೇತ ಸಮಾರಂಭವನ್ನೇರ್ಪಡಿಸಿ, ಅದರಲ್ಲಿ ತನ್ನ ದರ್ಬಾರಿನ ಅಮೀರರೂ, ಶಾಸಕರೂ, ಅಧಿಕಾರಿಗಳಿಗೆ ದೊಡ್ಡ ದೊಡ್ಡ ಬಹುಮಾನಗಳಿಂದ ಸನ್ಮಾನಿಸಿದನು. ಹಾಗೂ ಅವರಿಗೆ ಕುದುರೆಗಳನ್ನು ನೀಡಿ ಗೌರವಿಸಿದನು.

ಐದರ್‌ನತ್ತ ಪ್ರಯಾಣ :

ಮಳೆಗಾಲವು ಕಳೆದ ನಂತರ ಸುಲ್ತಾನ್‌ನು ಮತ್ತೊಮ್ಮೆ ಪ್ರವಾಸ ಮತ್ತು ಬೇಟೆಯ ನೆಪದಲ್ಲಿ ಐದರ್‌ನತ್ತ ಪ್ರಯಾಣಿಸಿದನು. ಇದೇ ಕಾಲದಲ್ಲಿ ನಿಜಾಮುಲ್‌ಮುಲ್ಕ್‌ನು ಕಾಯಿಲೆ ಬಿದ್ದನು. ಸುಲ್ತಾನ್‌ನು ಆತನ ಚಿಕಿತ್ಸೆಗೆ ಉತ್ತಮ ವೈದ್ಯರುಗಳನ್ನು ನೇಮಿಸಿದನು.

ರಾಯ್‌ಮಲ್ಲನ ಐದರ್ ಕೋಟೆಯ ಮೇಲೆ ಆಕ್ರಮಣ :

ಹಿಜರಿ ೯೨೩ರ ಪ್ರಾರಂಭದಲ್ಲಿ ಸುಲ್ತಾನ್‌ನು ಜನಾನೇರ್ ಕೋಟೆಯತ್ತ ಪ್ರಯಾಣವನ್ನು ಬೆಳೆಸಿದನು. ಅನಾರೋಗ್ಯದಿಂದ ಚೇತರಿಸಿಕೊಂಡಿದ್ದ ನಿಜಾಮುಲ್

ಮುಲ್ಕ್‌ನನ್ನು ತನ್ನ ಬಳಿ ಕರೆಯಿಸಿಕೊಂಡು ನುಸ್ರತುಲ್‌ಮುಲ್ಕನನ್ನು ಐದರ್ ಕೋಟೆಯತ್ತ ಕಳುಹಿಸಿದ. ನಿಜಾಮುಲ್ ಮುಲ್ಕನು ಬಹಳ ಬುದ್ಧಿವಂತಿಕೆಯಿಂದ ನುಸ್ರತ್‌ಉಲ್ ಮುಲ್ಕನು ತಲುಪುವುದರೊಳಗೆ ಜಹೀರುಲ್ ಮುಲ್ಕನಿಗೆ ಒಂದುನೂರು ಸವಾರರನ್ನು ಕೊಟ್ಟು ಐದರ್ ಕೋಟೆಯಲ್ಲಿ ಬಿಟ್ಟು, ತಾನು ಅಹಮದಾಬಾದ ನಗರದ ಕಡೆ ಹೊರಟನು. ನುಸ್ರತ್-ಉಲ್-ಮುಲ್ಕನು ಇನ್ನು ಅಹಮದ್ ನಗರದ ಗಡಿ ಪ್ರದೇಶದಲ್ಲಿದ್ದಂತೆಯೇ ರಾಯಮಲ್ಲನು ಒಳ್ಳೆಯ ಸಮಯ ಸಿಕ್ಕಿತೆಂದು ತಿಳಿದು ಐದರ್‌ಕೋಟೆಯ ಮೇಲೆ ಆಕ್ರಮಣವನ್ನು ಮಾಡಿದನು.

ಜಹೀರುಲ್ ಮುಲ್ಕನ ಕೊಲೆ :

ಜಹೀರುಲ್ ಮುಲ್ಕನ ಹತ್ತಿರ ಬಹಳ ಕಡಿಮೆ ಸೈನ್ಯವಿದ್ದಿತ್ತು. ಅವನ ವಿರುದ್ಧ ರಾಯಮಲ್ಲನ ಹತ್ತಿರ ಒಂದು ವಿಶಾಲ ಸೈನ್ಯವಿತ್ತು. ಆದರೂ ಜಹೀರುಲ್ ಮುಲ್ಕನು ಬಹಳ ಶೌರ್ಯದಿಂದ ಶತ್ರು ಸೈನ್ಯದೊಡನೆ ಹೋರಾಡಿದನು. ಇದರ ಪರಿಣಾಮವಾಗಿ ೨೭ ಸೈನಿಕರ ಸಮೇತ ಜಹೀರುಲ್ ಮುಲ್ಕನು ಯುದ್ಧದಲ್ಲಿ ಸತ್ತನು. ಈ ಸಮಾಚಾರವನ್ನು ಕೇಳಿದ ಮುಜಫ್ಫರಶಾಹನು ನುಸ್ರತ್-ಉಲ್-ಮುಲ್ಕನಿಗೆ ಹೀಗೆ ಆಜ್ಞಾಪಿಸಿದನು. ಬೀಜಾ ನಗರದ ಪ್ರದೇಶದವರೆಗಿನ ದಂಗೆಕೋರರನ್ನೂ, ಪಿತೂರಿಗರನ್ನೂ ಹಿಡಿದು ಅವರನ್ನು ಶಿಕ್ಷಿಸಬೇಕೆಂದು ಕಟ್ಟಾಜ್ಞೆಯನ್ನು ವಿಧಿಸಿದನು.

ಸುಲ್ತಾನ್ ಮಹಮೂದ್ ಖಿಲ್ಜಿ ಗುಜರಾತಿನಲ್ಲಿ :

ಅದೇ ದಿನಗಳಲ್ಲಿ ಆ ಕಾಲದ ಒಬ್ಬ ದೊಡ್ಡ ಇಸ್ಲಾಮಿ ವಿದ್ವಾಂಸರು, ಗುರುಗಳು ಆಗಿದ್ದ "ಶೇಖ್ ಹಾಮಿದ್" ಎಂಬುವರೊಬ್ಬರಿದ್ದರು. ಹಬೀಬ್‌ಖಾನನ ಗಲಭೆಗಳಿಗೊಳಗಾಗಿ ಮಾಂಡುವಿನಿಂದ ಸುಲ್ತಾನ್ ಮುಜಫ್ಫರನ ಸೇವೆಯಲ್ಲಿ ಹಾಜರಾದರು. ತನ್ನ ಬರುವಿಕೆಯ ಕಾರಣಗಳನ್ನು ತಿಳಿಸಿದರು. ಕೆಲವು ದಿನಗಳ ನಂತರ 'ಧೋರ್' ನಗರದ ಆಡಳಿತಾಧಿಕಾರಿಯಾದ ಖೈಸರಖಾನನು ಬಾದಶಹನ ದರ್ಬಾರಿಗೆ ಬಂದನು. ಸುಲ್ತಾನ್ ಮಹಮೂದ್ ಖಿಲ್ಜಿಯು ಪೂರ್ವ ಪ್ರದೇಶದ ಕಾಫಿರರ ಗಲಭೆಗಳಿಂದ ತತ್ತರಿಸಿ ಚಿಂತಿತನಾಗಿ ಗುಜರಾತಿನ ಪ್ರದೇಶಕ್ಕೆ ಬಂದಿದ್ದಾನೆಂದು ತಿಳಿಸಿದ. ಇವನ ಬರುವಿಕೆಯ ಸಮಾಚಾರವನ್ನು ತಿಳಿದ ಹಳ್ಳಿ ಭಕೋರ್ ಎಂಬಲ್ಲಿಗೆ ತಲುಪಿ ಆತನ ಸೇವೆಯಲ್ಲಿ ಕಾಲ ಕಳೆಯುತ್ತಿದ್ದಾನೆಂದು ತಿಳಿಸಿದ.

ಸುಲ್ತಾನ್ ಮಹಮೂದ್ ಖಿಲ್ಜಿ ಮತ್ತು ಮುಜಫ್ಫರಶಾಹ್‌ರ ಭೇಟಿ :

ಈ ಸಮಾಚಾರವನ್ನು ಕೇಳಿದ ಮುಜಫರ್‌ಶಾಹನು ಬಹಳ ಸಂತೋಷಪಟ್ಟನು. ಸುಲ್ತಾನ್ ಖಿಲ್ಜಿಗೆ ಅವಶ್ಯಕವಾಗಿ ಬೇಕಾಗಿದ್ದ ಎಲ್ಲ ಸಾಮಾನುಗಳನ್ನೂ, ಬಹುಮಾನದ ವಸ್ತುಗಳನ್ನೂ ಖೈಸರ್‌ಖಾನನಿಗೆ ಕೊಟ್ಟು ಇವನ್ನೆಲ್ಲ ಸುಲ್ತಾನ್ ಮಹಮೂದ್ ಖಿಲ್ಜಿಯ

ಹತ್ತಿರ ತಲುಪಿಸಬೇಕೆಂದು ಆದೇಶಿಸಿದನು. ಖೈಸರ್‌ಖಾನನು ರವಾನೆಯಾದ ನಂತರ ಆತನ ಹಿಂದೆಯೇ ಸುಲ್ತಾನ್ ಮುಜಫ್ಫರನು ಸಹ ಸುಲ್ತಾನ್ ಮಹಮೂದ್ ಖಿಲ್ಜಿಯನ್ನು ಸ್ವಾಗತಿಸಲು ಪ್ರಯಾಣವನ್ನು ಬೆಳೆಸಿದನು. ಇಬ್ಬರೂ ಬಾದಶಹರುಗಳು 'ದೇವಾಲ' ಎಂಬಲ್ಲಿ ಪರಸ್ಪರ ಭೇಟಿಯಾದರು.

ಸುಲ್ತಾನ್ ಮುಜಫರನ ಮಾಳವದ ಮೇಲೆ ಆಕ್ರಮಣ :

ಸುಲ್ತಾನ್ ಮುಜಫರನು ಸುಲ್ತಾನ್ ಮಹಮೂದ್ ಖಿಲ್ಜಿಯನ್ನು ಬಹಳ ಪ್ರೀತಿಯಿಂದ ಗೌರವಿಸಿ ಆತನಲ್ಲಿ ಧೈರ್ಯ-ಸ್ಥೈರ್ಯಗಳನ್ನು ತುಂಬಿದನು. "ನಿಮ್ಮ ಅಧಿಕಾರವು ಕಿತ್ತು ಹೋಗಿದೆ ಎಂದು ಎಳ್ಳಷ್ಟೂ ಚಿಂತಿಸಬೇಡಿ. ನಾನು ಬಹಳ ಬೇಗ ಪೂರ್ವ ಪ್ರದೇಶದ ಕಾಫಿರರನ್ನು ಅವರ ಗಲಭೆಗಳ ಸಮೇತ ಅಡಗಿಸಿ, ಮಾಳವ ದೇಶವನ್ನು ಪಿತೂರಿಗಳಿಂದ ಗಲಭೆಗಳಿಂದ ಮುಕ್ತಗೊಳಿಸಿ ತಮ್ಮ ಸಾಮ್ರಾಜ್ಯವನ್ನು ತಮಗೆ ನೀಡುತ್ತೇನೆ" ಎಂದನು. ಇದಾದ ನಂತರ ಸುಲ್ತಾನ್ ಮುಜಫರನು ಒಂದು ವಿಶಾಲ ಸೈನ್ಯವನ್ನು ಸಿದ್ಧಗೊಳಿಸಿ ಕೆಲವೇ ದಿನಗಳಲ್ಲಿ ಒಂದು ದೊಡ್ಡ ಸೈನ್ಯದೊಂದಿಗೆ ಮಾಳವದತ್ತ ರವಾನಿಸಿದ.

ರಾಯ್ "ಮಂದಲಿ"ಯ ಸಿದ್ಧತೆ :

ಸುಲ್ತಾನ್ ಮುಜಫರನು ಒಂದು ವಿಶಾಲ ಸೈನ್ಯದೊಂದಿಗೆ ತಮ್ಮತ್ತ ಬರುತ್ತಿರುವ ಸುದ್ದಿಯನ್ನು ತಿಳಿದ ರಾಯ್ ಮಂದಲಿಯು ರಾಯ್ 'ನಥ್ಥೊ' ಎಂಬುವನಿಗೆ ರಾಜಪೂತರ ಒಂದು ಗುಂಪನ್ನುವಹಿಸಿ, ಕೋಟೆಯ ರಕ್ಷಣೆಯ ಜವಾಬ್ದಾರಿಯನ್ನು ಅವನಿಗೆ ವಹಿಸಿ ತಾನು ಹತ್ತು ಸಾವಿರ ರಾಜಪೂತ ಸವಾರರನ್ನೂ ಅಸಂಖ್ಯಾತ ಆನೆಗಳನ್ನು ತೆಗೆದುಕೊಂಡು ಧಾರ್ ನಗರದತ್ತ ಪ್ರಯಾಣಿಸಿದ ಅಲ್ಲಿಂದ ಪುನಃ ರಾಣಾಸಾಂಗನ ಹತ್ತಿರ ತಲುಪಿದ. ಅಲ್ಲಿಗೆ ಹೋಗಿ ಯುದ್ಧದಲ್ಲಿ ಸಹಾಯವನ್ನು ಮಾಡಲು ಕೇಳಿದನು.

ಮಾಂಡು ಕೋಟೆಯ ಮುತ್ತಿಗೆ :

ಸುಲ್ತಾನ್ ಮುಜಫರನು ಸೈನ್ಯದೊಂದಿಗೆ ಮಾಂಡು ನಗರದ ಹತ್ತಿರ ತಲುಪಿದಾಗ, ರಾಜಪೂತರು ಕೋಟೆಯಿಂದ ಹೊರಬಂದು ಮುಸಲ್ಮಾನರೊಡನೆ ಯುದ್ಧವನ್ನು ಪ್ರಾರಂಭಿಸಿದರು. ರಾಜಪೂತರು ಎಷ್ಟೇ ವೀರಾವೇಶದಿಂದ ಹೋರಾಡಿದರೂ ಮುಸಲ್ಮಾನರ ಮುಂದೆ ಅವರ ದೀಪ ಉರಿಯಲಿಲ್ಲ. ಕೊನೆಗೆ ಕೋಟೆಯ ಒಳಹೊಕ್ಕರು. ಮಾರನೇ ದಿನವೂ ಪುನಃ ಯುದ್ಧವು ಪ್ರಾರಂಭವಾಯಿತು. ಖವಾಮುಲ್ ಮುಲ್ಕನು ಸೈನಿಕರನ್ನು ಹುರಿದುಂಬಿಸಿ ರಾಜಪೂತ ಸೈನಿಕರನ್ನು ತರಿಯಲಾರಂಭಿಸಿದರು. ಸುಲ್ತಾನನೂ ಕೋಟೆಯ ಮುತ್ತಿಗೆಯನ್ನು ಇನ್ನೂ ಬಿಗಿಗೊಳಿಸಿದನು.

ಮೋಸದ ಜಾಲ :

ಈ ಮಧ್ಯೆ ಮಂದಲಿರಾಯನು ರಾಯ್‌ನತ್ಥೋನ ಹೆಸರಿಗೊಂದು ಪತ್ರವನ್ನು ಕಳುಹಿಸಿದನು. ಪತ್ರದ ಸಾರಾಂಶ–ನಾನು ರಾಣಾನ ಹತ್ತಿರ ಹೋಗಿದ್ದೆ. ಮಾರ್ವಾಡದ ಎಲ್ಲಾ ರಾಜಪೂತರ ಸೈನ್ಯದೊಡನೆ ಸಹಾಯಕ್ಕೆ ಬರುತ್ತಿದ್ದೇನೆ. ನೀನು ಏನಾದರೂ ಮಾಡಿ ಸುಲ್ತಾನ್ ಮುಜಫರನನ್ನು ಒಂದು ತಿಂಗಳ ತನಕ ನಿರ್ವಹಿಸಿಕೋ ಎಂದಿತ್ತು. ಈ ಪತ್ರವನ್ನು ಓದಿದ ರಾಯ್‌ನತ್ಥೋನು ಮೋಸದ ಒಂದು ಬಲೆಯನ್ನು ಹರಡಿದನು. ದೂತರನ್ನು ಮುಜಫ್ಫರನ ಹತ್ತಿರ ಕಳುಹಿಸಿ, ಈ ಸಮಾಚಾರವನ್ನು ತಿಳಿಸಿದನು. ಏನೆಂದರೆ–"ಮಾಂಡು ಕೋಟೆಯು ಬಹಳ ಕಾಲದಿಂದಲೂ ರಾಜಪೂತರ ವಶದಲ್ಲಿದೆ. ಅವರ ಸ್ತ್ರೀಯರು, ಮಕ್ಕಳು, ವೃದ್ಧರೆಲ್ಲರೂ ಈ ಜಾಗದಲ್ಲಿ ನೆಲೆಸಿದ್ದಾರೆ. ಆದ್ದರಿಂದ ತಾವುಗಳು ದಯವಿಟ್ಟು ಒಂದು ಪಯಣದಷ್ಟು ಹಿಂದೆ ಸರಿದು ಬೀಡು ಬಿಟ್ಟರೆ ನಾವು ಎಲ್ಲ ಆ ಬಾಲ ವೃದ್ಧರನ್ನು ಹೊರ ತೆಗೆದು ಕೋಟೆಯನ್ನು ಖಾಲಿ ಮಾಡುತ್ತೇವೆ. ಮತ್ತು ಕೋಟೆಯನ್ನು ತಮ್ಮ ವಶಕ್ಕೆ ಬಿಡುತ್ತೇವೆ. ಇದಾದ ನಂತರ ನಾನು ಮಾಮೂಲಿನಂತೆ ತಮ್ಮ ಸೇವೆಯಲ್ಲಿ ಕಪ್ಪ–ಕಾಣಿಕೆಗಳನ್ನು ತಮಗೆ ನೀಡುವವರ ಸಾಲಿನಲ್ಲಿ ನಿಂತು ಅರ್ಪಿಸುತ್ತೇನೆ".

ಸುಲ್ತಾನ್ ಮುಜಫರನು ಇದೊಂದು ಮೋಸದ ಜಾಲಪತ್ರವೆಂದು ಅರಿತುಕೊಂಡನು. ಶತ್ರು ಬೇರೆಯವರ ಸಹಾಯವನ್ನು ನಿರೀಕ್ಷಿಸುತ್ತಿದ್ದಾನೆಂದು, ಸುಲ್ತಾನ್ ಖಿಲ್ಜಿಯ ಪರಿವಾರದ ಸ್ತ್ರೀಯರೂ, ಮಕ್ಕಳು ಇದೇ ಕೋಟೆಯಲ್ಲಿರುವುದನ್ನು ಯೋಚಿಸಿ, ಒಂದೇ ಮೈಲಿ ದೂರ ಹಿಂದೆ ಸರಿಯಲು ಒಪ್ಪಿಕೊಂಡನು. ರಾಯ್‌ನತ್ಥೋನು ಕಪ್ಪ–ಕಾಣಿಕೆಗಳೊಂದಿಗೆ ಕೋಟೆಯ ಹೊರಗೆ ಬರಬಹುದೆಂದೂ ಯೋಚಿಸಿದನು. ಯಾವುದೇ ಯುದ್ಧವಿಲ್ಲದೆ ಸಮಸ್ಯೆ ಬಗೆಹರಿಯುವುದೆಂದು ಬಗೆದಿದ್ದನು.

ರಾಣಾಸಾಂಗನ ವಿರುದ್ಧ ಕ್ರಮ :

ಈ ಘಟನೆಯಾದ ಸುಮಾರು ಇಪ್ಪತ್ತು ದಿನಗಳು ಕಳೆದವು. ಸುಲ್ತಾನ್ ಮುಜಫರನಿಗೆ ರಾಯ್‌ನತ್ಥೋನ ಮೋಸವು ತಿಳಿಯಿತು. ಈ ಮಧ್ಯೆ ಮಂದಲಿ ರಾಯನು ಕೆಲವು ಆನೆಗಳು ಸಾಕಷ್ಟು ಹಣವನ್ನು ರಾಣಾಸಾಂಗನಿಗೆ ಕಳುಹಿಸಿ ಸಹಾಯಕ್ಕೋಸ್ಕರ ಉಜ್ಜೈನ್‌ನ ಪ್ರದೇಶಕ್ಕೆ ಕರೆದಿದ್ದನು. ಈ ತೆರನಾದ ಮೋಸವನ್ನು ಮಾಡಿದ ವಿಷಯವನ್ನು ತಿಳಿದ ಸುಲ್ತಾನ್ ಮುಜಫರ್‌ನು ತುಂಬಾ ಕ್ರೋಧಿತನಾದನು. ಆತನು ಅಸೀರ್, ಬುರ್‌ಹಾನ್ ಪುರದ ಶಾಸಕನಾದ ಆದಿಲ್‌ಖಾನ್ ಫಾರೂಖಿಯು ತನ್ನ ಒಂದು ವಿಶಾಲ ಸೈನ್ಯದೊಂದಿಗೆ ಮೂರು ದಿನ ಮುಂಚೆಯೇ ಅಲ್ಲಿಗೆ ಬಂದಿದ್ದನು. ಆತನ ದಂಡನಾಯಕತ್ವದಲ್ಲಿ ಖವಾಮುಲ್ ಮುಲ್ಕನೊಂದಿಗೆ ರಾಣಾಸಾಂಗನ ವಿರುದ್ಧ ಯುದ್ದಕ್ಕೆ ಕಳುಹಿಸಿದನು.

ಮಾಂಡು ಕೋಟೆಯ ಮೇಲೆ ಆಕ್ರಮಣ :

ಇದಾದ ನಂತರ ಸುಲ್ತಾನ್ ಮುಜಫರನು ಸೈನ್ಯದ ಸರದಾರರನ್ನು ಸೂಕ್ತ ಸ್ಥಳಗಳಲ್ಲಿ ಎಚ್ಚರಿಕೆಯಿಂದಿರಲು ನಿಯೋಜಿಸಿದನು. ತಾನು ಕೋಟೆಯ ಮೇಲೆ ಆಕ್ರಮಣವನ್ನು ಮಾಡಿದನು. ಮುಜಫರನ ಸೈನ್ಯವು ಬಹಳ ವೀರಾವೇಷದಿಂದ ಮುನ್ನುಗ್ಗಿತು. ಸಂಪೂರ್ಣ ಕೋಟೆಯನ್ನು ಮುತ್ತಿ ನಾಲ್ಕು ದಿನಗಳವರೆಗೆ ಅವರನ್ನು ಶಾಂತರಾಗಿ ಕುಳಿತಿರಲು ಬಿಡಲಿಲ್ಲ. ಕೋಟೆಯ ಮೇಲೆ ಒಂದೇ ಸಮನೆ ಆಕ್ರಮಣಗಳು ನಡೆಯುತ್ತಲೇ ಇದ್ದವು. ಐದನೇ ರಾತ್ರಿ ಸುಲ್ತಾನನು ತನ್ನ ಆನೆಗಳನ್ನು ತಡೆದುಕೊಂಡನು. ಇದರಿಂದ ರಾಜಪೂತರಿಗೆ ತಿಳಿದಿದ್ದೇನೆಂದರೆ–ಸುಲ್ತಾನನು ಆಕ್ರಮಣದಿಂದ ಹಿಂದೆ ಸರಿದಿದ್ದಾನೆಂದು ತಿಳಿದ ರಾಜಪೂತರು ಮೈಮರೆತು ಮಲಗಿದರು. ಶತ್ರುಗಳ ಚಟುವಟಿಕೆಗಳು ಏನು ನಡೆಯುತ್ತಿವೆ ಎಂಬುದರ ಕಡೆ ಗಮನ ಹರಿಸಲಿಲ್ಲ. ಮುಸಲ್ಮಾನರು ಈ ಮರೆವಿನ ಲಾಭವನ್ನು ಪಡೆದರು. ಅರ್ಧರಾತ್ರಿ ಸರಿದಾಗ ಮುಸಲ್ಮಾನರ ಒಂದು ಗುಂಪು ಕೋಟೆಯ ತಳಭಾಗಕ್ಕೆ ತಲುಪಿತು. ಕೋಟೆಯಲ್ಲಿನ ಎಲ್ಲರೂ ಮಲಗಿದ್ದರು. ಮುಸಲ್ಮಾನರು ಏಣಿಗಳ ಸಹಾಯದಿಂದ ಕೋಟೆಯ ಮೇಲೆ ತಲುಪಿದರು.

ರಾಜಪೂತರ ಕೊಲೆ :

ಮುಸಲ್ಮಾನ ಸೈನಿಕರು ಕೋಟೆ ಬಾಗಿಲುಗಳನ್ನು ರಕ್ಷಿಸುವವರನ್ನು ಮೊದಲು ಕೊಂದು, ಬಾಗಿಲನ್ನು ತೆರೆದರು. ಬಾಗಿಲು ತೆರೆದ ತಕ್ಷಣ ಅಸಂಖ್ಯಾತ ಸೈನಿಕರು ಕೋಟೆಯ ಒಳಹೊಕ್ಕರು. ಹತೋಟಿ ಮೀರಿದಾಗ ರಾಜಪೂತರು ಎಚ್ಚರವಾದರು. ಕೊನೆಗೆ ಅವರು ತಮ್ಮ ಹಳೆಯ ನಿಯಮಗಳನ್ನು ಅನುಸರಿಸಿ ಚಿತೆಗಳನ್ನು ಉರಿಸಿದರು. ತಮ್ಮ ಸ್ತ್ರೀಯರನ್ನು ಬೆಂಕಿಗೆ ನೂಕಿದರು. ಬೆಲೆ ಬಾಳುವ ವಸ್ತುಗಳನ್ನು ಬೆಂಕಿಗೆ ಆಹುತಿ ಮಾಡಿದರು. ಆಗ ತಮ್ಮ ಪ್ರಾಣಗಳ ಆಸೆಯನ್ನಿಡದೆ ಯುದ್ಧಕ್ಕೆ ನಿಂತರು. ಹಿಜರಿ ೯೨೪ ಸಫರ್ ತಿಂಗಳ ೧೪ನೇ ತಾರೀಖಿನಂದು ಸುಲ್ತಾನ್ ಮುಜಫರನು ಬೆಳಗಾಗುವುದರೊಳಗಾಗಿ ೧೯ ಸಾವಿರ ರಾಜಪೂತರನ್ನು ಕೊಲೆ ಮಾಡಿದ್ದನು. ಅವರ ಉಳಿದ ಹೆಂಗಸರು ಮಕ್ಕಳನ್ನು ಸೆರೆ ಹಿಡಿದಿದ್ದನು.

ಮಹಮೂದ್ ಖಿಲ್ಜಿಯ ಪುನರ್ನೇಮಕ :

ಸುಲ್ತಾನ್ ಮುಜಫರನು ಪೂರ್ವ ದಿಕ್ಕಿನ ರಾಜಪೂತರ ಕೊಲೆ ನಡೆಸಿದ ನಂತರ ಸಂತುಷ್ಟನಾದನು. ಆಗ ಸುಲ್ತಾನ್ ಮಹಮೂದ್ ಖಿಲ್ಜಿಯು ಮುಜಫರ್‌ನ ಹತ್ತಿರಕ್ಕೆ ಬಂದು ಶುಭಾಶಯಗಳನ್ನು ಹೇಳಿದನು. ಈಗ ನನಗೆ ಏನು ಆಜ್ಞಾಪಿಸುವಿರಿ? ಎಂದನು. ಈ ಸಂದರ್ಭದಲ್ಲಿ ಸುಲ್ತಾನ್ ಮುಜಫರನು ಆಡಿದ ಮಾತಿಗೆ ಸಮನಾದ ಮಾತುಗಳು ಇತಿಹಾಸದಲ್ಲೆ ಇರಲಿಲ್ಲ. ಆತನು ಸುಲ್ತಾನ್ ಖಿಲ್ಜಿಯನ್ನು ಕುರಿತು ಹೀಗೆಂದನು.–"ನಾನು ಯಾವ ಶ್ರಮಪಟ್ಟು ಈ ಗೆಲುವನ್ನು ಪಡೆದಿದ್ದೇನೆಯೋ

ಇದು ನನ್ನ ಸ್ವಾರ್ಥಕ್ಕಾಗಿ ಆಗಿರಲಿಲ್ಲ. ಅದು ನಿನ್ನನ್ನು ಸಿಂಹಾಸನದ ಮೇಲೆ ಕೂರಿಸಲು ಮಾತ್ರ ನನ್ನ ಇಚ್ಛೆಯಾಗಿತ್ತು. ಅಲ್ಲಾನ ಕೃಪೆಯಿಂದ ನಾನು ಆ ವಿಚಾರದಲ್ಲಿ ಸಫಲನಾಗಿದ್ದೇನೆ. ಅಲ್ಲಾನು ನಿನಗೆ ಮಾಂಡುವಿನ ಆಡಳಿತವನ್ನು ಕರುಣಿಸಲಿ ಶುಭಾಶಯಗಳು ಎಂದನು. ಮಾರನೇ ದಿನ ಸುಲ್ತಾನನು ತನ್ನ ಸೈನಿಕ ಬಿಡಾರಕ್ಕೆ ಬಂದು ಬಿಟ್ಟನು. ಅಲ್ಲಿಂದ ರಾಣಾಸಾಂಗನ ವಿರುದ್ಧ ಯುದ್ಧ ಮಾಡಲು ಹೊರಟನು.

ರಾಣಾಸಾಂಗನ ಚಿಂತೆ:

ಈ ಸಂದರ್ಭದಲ್ಲಿ ಒಬ್ಬ ಹೆಸರಾಂತ ರಾಜಪೂತನು ಹೇಗೋ ತಪ್ಪಿಸಿಕೊಂಡು ಮಾಂಡು ಕೋಟೆಯಿಂದ ಓಡಿದ್ದನು. ಆ ಸರದಾರನು ರಾಣಾಸಾಂಗನ ಹತ್ತಿರ ತಲುಪಿದ್ದನು. ಆತನು ರಾಣಾಸಾಂಗನಿಗೆ ಮಾಂಡು ಕೋಟೆಯನ್ನು ಮುಜಫರನು ಹೇಗೆ ವಹಿಸಿಕೊಂಡನೆಂಬುದನ್ನು ವಿವರವಾಗಿ ವರ್ಣಿಸಿದನು. ಅಸಂಖ್ಯಾತ ರಾಜಪೂತರನ್ನು ಹೇಗೆ ಕೊಲೆ ಮಾಡಿದನೆಂಬ ವಿಚಾರವನ್ನು ವರ್ಣಿಸುತ್ತಲೇ ಆತನೂ ತನ್ನ ಪ್ರಾಣವನ್ನು ತ್ಯಜಿಸಿದನು. ಈ ಮಾತುಗಳನ್ನು ಕೇಳಿದ ರಾಣಾಸಾಂಗನು ಬಹಳ ಚಿಂತಿತನಾದನು. ರಾಜಪೂತರ ಕೊಲೆಯ ಸಮಾಚಾರವು ಆತನ ಮೇಲೆ ಸಿಡಿಲು ಬಡಿದಂತಾಯಿತು.

ಜಯಪುರಕ್ಕೆ ಪರಾರಿ :

ಸುಲ್ತಾನ್‌ನು ರಾಣಾಸಾಂಗನ ವಿರುದ್ಧ ಯುದ್ಧಕ್ಕೆ ಬರುತ್ತಿದ್ದಾನೆಂಬ ಸುದ್ದಿ ತಿಳಿದ ರಾಣಾ ಸಾಂಗನು ಜಯಪುರದತ್ತ ಓಡಿದನು. ಆದಿಲ್‌ಖಾನನು ಆತನನ್ನು ಹಿಂಬಾಲಿಸಿದನು. ರಾಣಾನ ಜೊತೆಗಾರರನ್ನು ಸಿಕ್ಕಸಿಕ್ಕಲ್ಲಿ ಕೊಲೆಗೈದನು. ಅವರ ಸಾಮಾನುಗಳನ್ನು ತನ್ನ ವಶಕ್ಕೆ ಪಡೆದನು. ಸುಲ್ತಾನ್ ಮುಜಫರನು ಆದಿಲ್‌ಖಾನನ ಹತ್ತಿರಕ್ಕೆ ಒಬ್ಬ ದೂತನನ್ನು ಕಳುಹಿಸಿ ಹಿಂದಕ್ಕೆ ತನ್ನ ಬಳಿಗೆ ಕರೆಯಿಸಿಕೊಂಡನು.

ಸುಲ್ತಾನ್ ಮುಜಫರನ ಮಾಂಡು ಪ್ರಯಾಣ :

ಅದೇ ದಿನ ಸುಲ್ತಾನ್ ಮಹಮೂದ್‌ನೂ ಸಹ ಮಾಂಡುವಿನಿಂದ ಧಾರ್ ನಗರಕ್ಕೆ ಬಂದನು. ಸುಲ್ತಾನ್ ಮುಜಫರನನ್ನು ಕಂಡಾಗ ನಾನು ನಿಮ್ಮನ್ನು ನನ್ನ ತಂದೆ ಮತ್ತು ಚಿಕ್ಕಪ್ಪನಂತೆ ಭಾವಿಸಿದ್ದೇನೆಂದು ಮಹಮೂದ್ ಖಿಲ್ಜಿಯು ಹೇಳಿದನು. ಆದ್ದರಿಂದ ತಾವು ನನ್ನ ಮನೆಗೆ ದಯಮಾಡಿಸಿ ನನ್ನ ಗೌರವವನ್ನು ಹೆಚ್ಚಿಸಬೇಕೆಂದು ಸುಲ್ತಾನ್ ಮುಜಫ್ಫರನನ್ನು ಪ್ರಾರ್ಥಿಸಿಕೊಂಡನು. ಬಾದಶಹನು ಆತನ ಪ್ರಾರ್ಥನೆಯನ್ನು ಸ್ವೀಕರಿಸಿದನು. ತನ್ನೊಂದಿಗೆ ಷಹಜಾದ ಬಹಾದ್ದುರ್‌ಖಾನ, ಲತೀಫ್‌ಖಾನ ಮತ್ತು ಆದಿಲ್‌ಖಾನ್ ಫಾರೂಖಿ ಹಾಗೂ ಅಸೀರ್ ಮತ್ತು ಬುರ್ಹಾನ್‌ಪುರದ ಶಾಸಕರನ್ನೂ ಜೊತೆಯಲ್ಲಿ ಕರೆದುಕೊಂಡು ಮಾಂಡುವಿಗೆ ಹೋದನು.

ಸುಲ್ತಾನ್ ಮಹಮೂದನ ಅತಿಥಿ ಸತ್ಕಾರ :

ಸುಲ್ತಾನ್ ಮುಜಫ್ಫರನು ರಾತ್ರಿ ಸಮಯವನ್ನು 'ನಾಲ್ಚ' ಎಂಬ ಕಸಬಾದಲ್ಲಿ ಕಳೆದು, ಬೆಳಿಗ್ಗೆ ಆನೆಯ ಮೇಲೆ ಸವಾರಿ ಮಾಡುತ್ತಾ ಕೋಟೆಯಲ್ಲಿ ಪ್ರವೇಶಿಸಿದನು. ಸುಲ್ತಾನ್ ಮಹಮೂದ್‌ನ ಅರಮನೆಗೆ ಪ್ರವೇಶಿಸಿದಾಗ ಸುಲ್ತಾನ್‌ನು ಬಹಳ ಪ್ರೇಮದಿಂದ ಸ್ವಾಗತಿಸಿ, ಅತಿಥಿ ಸತ್ಕಾರವನ್ನು ನೀಡಿದನು. ಊಟವಾದ ನಂತರ ಮುಜಫ್ಫರನಿಗೂ ಅವನ ಮಗನಿಗೂ ಕಾಣಿಕೆಗಳನ್ನು ಅರ್ಪಿಸಿದನು. ಸುಲ್ತಾನ್ ಮುಜಫ್ಫರನು ಮಾಂಡುವಿನಲ್ಲಿದ್ದ ಹಳೆಯ ಬಾದಶಹರುಗಳು ಕಟ್ಟಿಸಿದ್ದ ಅರಮನೆಗಳೆಲ್ಲವುಗಳನ್ನು ನೋಡಿದ ಮೇಲೆ 'ಥಾರ್' ನಗರದತ್ತ ವಾಪಸ್ಸಾದನು. ಥಾರ್ ತಲುಪಿದ ನಂತರ ಬಾದಶಹನು ಸುಲ್ತಾನ್ ಮಹಮೂದನನ್ನು ವಾಪಸ್ ಕಳುಹಿಸಿ ಕೊಟ್ಟು ತಾನು ಹಿಂತಿರುಗಿ ಗುಜರಾತಿನತ್ತ ಪ್ರಯಾಣವನ್ನು ಬೆಳೆಸಿದನು.

ಗುಜರಾತಿಗೆ ವಾಪಸ್ :

ಸುಲ್ತಾನ್ ಮುಜಫ್ಫರನು ಕೆಲವು ದಿನಗಳ ತನಕ ಜನಾನೇರ್‌ನ ಮಹಮ್ಮದಾಬಾದ್‌ನಲ್ಲಿ ತಂಗಿದನು. ಗುಜರಾತಿನ ಎಲ್ಲ ಹಿರಿಯ ಮುಖಂಡರುಗಳು ಬಾದಶಹನ ಸೇವೆಯಲ್ಲಿ ಹಾಜರಾದರು. ಹಾಗೂ ಶುಭಾಶಯಗಳನ್ನು ತಿಳಿಸಿದರು. ಅದೇ ದಿನಗಳಲ್ಲಿ ಬಾದಶಹನ ಒಬ್ಬ ವಿಶೇಷ ಪರಿಚಿತ ವ್ಯಕ್ತಿಯು ಒಂದು ಅರ್ಜಿಯನ್ನು ಅರ್ಪಿಸಿದನು. ಅದರ ವಿಷಯ, ಯಾವ ದಿನಗಳಲ್ಲಿ ಹುಜೂರರು ಮಾಳವ ದೇಶವನ್ನು ಗೆಲ್ಲುವ ಇಚ್ಛೆ ಪ್ರಕಟಿಸಿದ್ದರೋ ಆಗ ರಾಯಮಲ್ಲನು ಬೀಜಾನಗರ ಬೆಟ್ಟದಿಂದ ಹೊರಬಂದು "ಪಟನ್" ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಬಹಳ ಕೆಟ್ಟ ರೀತಿಯಲ್ಲಿ ವಿನಾಶಗೊಳಿಸಿ ಲೂಟಿ ಮಾಡಿದನೆಂದು ಬರೆದಿದ್ದನು. ಈ ಸುದ್ಧಿಯನ್ನು ತಿಳಿದ ನುಸ್ರತ್-ಉಲ್-ಮುಲ್ಕ್‌ನು ಆ ದಂಗೆಕೋರ ರಾಜನನ್ನು ಅಡಗಿಸಲು ಹೋಗಿದ್ದನು. ಆದರೆ ರಾಜನು ಪರಾರಿಯಾಗಿ ಬೀಜಾನಗರದ ಬೆಟ್ಟಗುಡ್ಡಗಳ ಗುಹೆಗಳಲ್ಲಿ ಹೋಗಿ ಅಡಗಿದ್ದನು. ಇದಕ್ಕೆ ಸುಲ್ತಾನ್‌ನು "ನನ್ನ ಅಭಿಪ್ರಾಯದಲ್ಲಿ ಮಳೆಗಾಲ ಕಳೆಯಲಿ ನಂತರ ಈ ವಿಚಾರದಲ್ಲಿ ಯಾವುದಾದರೊಂದು ಕಾರ್ಯವನ್ನು ಕೈಗೊಳ್ಳೋಣ" ಎಂದನು.

ಐದರ್ ಕೋಟೆಯತ್ತ ಪ್ರಯಾಣ :

ಹಿಜರಿ ೯೦೫ರಲ್ಲಿ ಸುಲ್ತಾನ್ ಮುಜಫ್ಫರನು ಐದರ್ ಕೋಟೆಯತ್ತ ರಾಯ್‌ಮಲ್ಲ ಮತ್ತು ಕೆಲವು ದಂಗೆಕೋರರ ಕೋಟೆಗಳನ್ನು ವಶಪಡಿಸಿಕೊಳ್ಳಲು ಪ್ರಯಾಣಿಸಿದನು. ಏಕೆಂದರೆ ರಾಜಮಲ್ಲನು ರಾಯಮಲ್ಲನಿಗೆ ಆಶ್ರಯವನ್ನು ಕೊಟ್ಟಿದ್ದನು. ಇದರಿಂದ ಆತನ ರಾಜ್ಯವನ್ನು ನಾಶ ಮಾಡುವುದು ನನ್ನ ಕರ್ತವ್ಯವೆಂದು ಮುಜಫ್ಫರನು

ತಿಳಿದಿದ್ದನು. ಕೆಲವೇ ದಿನಗಳಲ್ಲಿ ಆ ರಾಜ್ಯದ ಎಲ್ಲ ಪ್ರದೇಶಗಳನ್ನು ಸಂಪೂರ್ಣವಾಗಿ ನಾಶಗೊಳಿಸಿದನು. ಕೆಲವು ದಿನಗಳ ತನಕ ಐದರ್ ಕೋಟೆಯಲ್ಲಿ ತಂಗಿದ್ದು ಮಹಮ್ಮದಾಬಾದಿಗೆ ಹಿಂತಿರುಗಿದನು.

ಮಹಮೂದ್ ಖಿಲ್ಜಿ ಮತ್ತು ರಾಣಾಸಾಂಗರಲ್ಲಿ ಯುದ್ಧ :

ಈ ಘಟನೆಯ ನಂತರ ಸುದ್ಧಿ ಬಂದದ್ದೇನೆಂದರೆ– ಸುಲ್ತಾನ್ ಮಹಮೂದ್ ಖಿಲ್ಜಿಯು ಆಸಿಫ್‌ಖಾನನ ಕಡೆಯಿಂದ ರಾಣಾಸಾಂಗ ಮತ್ತು ಮಂದಲಿರಾಯರೊಂದಿಗೆ ಘೋರ ಯುದ್ಧವನ್ನು ಮಾಡಿದರೆಂದೂ, ಯುದ್ಧದಲ್ಲಿ ಮಾಳವದ ಅನೇಕ ಅಮೀರರೂ ಸತ್ತರು. ಸುಲ್ತಾನ್ ಮಹಮೂದ್ ಖಿಲ್ಜಿಯು ಸಹ ಗಾಯಗೊಂಡು ಸೆರೆಹಿಡಿಯಲ್ಪಟ್ಟು ಆತನನ್ನು ಕೊಲೆ ಮಾಡಿಲ್ಲವೆಂದು ಆತನ ಮೇಲೆ ಕೃಪೆತೋರಿ ಸ್ವಲ್ಪ ಸೈನ್ಯವನ್ನು ಕೊಟ್ಟು ಮಾಂಡುವಿನತ್ತ ಓಡಿಸಿದ್ದಾರೆಂಬ ಸುದ್ದಿಗಳು ತಿಳಿದುಬಂದವು. ಈ ಸಮಾಚಾರಗಳನ್ನು ತಿಳಿದ ಮುಜಫ್ಫರ್ ಸುಲ್ತಾನ್‌ನು ಬಹಳ ದುಃಖ ಪಟ್ಟನು. ಆತನು ತನ್ನ ಅನೇಕ ಸರದಾರರನ್ನೊಳಗೊಂಡ ಸೈನ್ಯವನ್ನು ಮಹಮೂದ್‌ಖಿಲ್ಜಿಯ ಸಹಾಯಕ್ಕೆ ಕಳುಹಿಸಿ, ಪ್ರೇಮದಿಂದ ಒಂದು ಪತ್ರವನ್ನು ಬರೆದು ಆತನ ಧೈರ್ಯವನ್ನು ಹೆಚ್ಚಿಸಿದನು. ನಂತರ ಸುಲ್ತಾನ್ ಮುಜಫ್ಫರನು ಐದರ್‌ಕೋಟೆಯತ್ತ ಪ್ರಯಾಣವನ್ನು ಮಾಡಿದನು. ಅಲ್ಲಿ ಆತನು ಅನೇಕ ಕಟ್ಟಡಗಳನ್ನು ನಿರ್ಮಿಸಿದನು. ಐದರ್‌ನ ಶಾಸನಾಧಿಕಾರವನ್ನು ಮುಬಾರಜುಲ್ ಮುಲ್ಕ್‌ನಿಗೆ ವಹಿಸಿದನು.

ಐದರ್ ಕೋಟೆಯ ಮೇಲೆ ರಾಣಾಸಾಂಗನ ಆಕ್ರಮಣ :

ಒಂದು ಸಾರಿ ಒಬ್ಬ ಹೊಗಳು ಭಟ್ಟನು ಮುಬಾರಜುಲ್ ಮುಲ್ಕನ ಮುಂದೆ ರಾಣಾಸಾಂಗನ ಅತಿಯಾದ ಪ್ರಶಂಸೆಯನ್ನು ಮಾಡಿದನು. ಮುಬಾರಜುಲ್‌ಮುಲ್ಕ್ ಆತನ ಹೊಗಳಿಕೆಯ ಉತ್ತರವಾಗಿ ರಾಣಾಸಾಂಗನ ಬಗ್ಗೆ ಅನುಚಿತ ಶಬ್ದಗಳ ಪ್ರಯೋಗವನ್ನು ಮಾಡಿದ. ತನ್ನ ಒಂದು ನಾಯಿಗೆ ರಾಣಾಸಾಂಗನ ಹೆಸರಿಟ್ಟು ಕೋಟೆಯ ಬಾಗಿಲಲ್ಲಿ ಕಟ್ಟಿಸಿದ. ಭಟ್ಟನು ಸುದ್ದಿಯನ್ನು ರಾಣಾಸಾಂಗನಿಗೆ ತಿಳಿಸಿದ. ರಾಣಾನು ಕೋಪಗೊಂಡು ತನ್ನ ಸೈನ್ಯದೊಂದಿಗೆ ಐದರ್ ಕೋಟೆಯ ಮೇಲೆ ಆಕ್ರಮಣವನ್ನು ಮಾಡಿ, ಇಲ್ಲಿ ವಿನಾಶ ಮತ್ತು ಲೂಟಿಯನ್ನು ಮಾಡತೊಡಗಿದ. ಅಲ್ಲಿಂದ ಬಾಕರೋನತ್ತ ಪ್ರಯಾಣಿಸಿದ. 'ಬಾಕರೋ'ನ ರಾಜ ಸುಲ್ತಾನ್ ಮುಜಫ್ಫರನ ಅಧೀನದಲ್ಲಿದ್ದವನಾಗಿದ್ದ. ರಾಣಾಸಾಂಗನು ಆತನನ್ನು ಬೆದರಿಸಿದ್ದುದಕ್ಕೆ ಆತನು ರಾಣಾಸಾಂಗನ ಗುಣಗಾನ ಮಾಡಲಾರಂಭಿಸಿದ. ಹಾಗೂ ರಾಣಾನ ಅಧೀನತೆಯಲ್ಲಿರಲು ಒಪ್ಪಿಕೊಂಡನು. ಮುಬಾರಜುಲ್ ಮುಲ್ಕ್‌ನು ಈ ಎಲ್ಲಾ ವಿಚಾರಗಳನ್ನು ಸುಲ್ತಾನ್ ಮುಜಫ್ಫರನಿಗೆ ತಿಳಿಸಿದನು.

ಬಾದಶಹನ ಅಮೀರರ ಅಭಿಪ್ರಾಯ :

ಸುಲ್ತಾನ್ ಮುಜಫ್ಫರನ ಅಮೀರರು ಮುಬಾರಜುಲ್ ಮುಲ್ಕನ ಮಾತುಗಳನ್ನು ನಂಬುತ್ತಿರಲಿಲ್ಲ. ಅಮೀರರು ಬಾದಶಹನನ್ನು ಕುರಿತು-ಈ ಎಲ್ಲ ಘಟನೆಗಳಿಗೂ ಮುಬಾರಜುಲ್ ಮುಲ್ಕ್‌ನೇ ಜವಾಬ್ದಾರನಾಗಿದ್ದಾನೆ. ರಾಣಾಸಾಂಗನಿಗೆ ಒಂದು ನಾಯಿ ಎಂದು ಕರೆದು, ನಾಯಿಗೆ ಆತನ ಹೆಸರನ್ನಿಟ್ಟು ಕೋಟೆಯ ಬಾಗಿಲಿಗೆ ಕಟ್ಟಿಸಿ, ರಾಣಾನ ಅಪಮಾನ ಮಾಡುವ ಅವಶ್ಯಕತೆ ಏನಿತ್ತು? ಎಂದು ಕೇಳಿದರು. ಆತನು ಅನವಶ್ಯಕವಾದ ತಪ್ಪನ್ನು ಮಾಡಿರುತ್ತಾನೆ. ಈಗ ತಮ್ಮ ಸಹಾಯವನ್ನು ಕೇಳುತ್ತಿದ್ದಾನೆ ಎಂದರು. ಬಾದಶಹನಿಗೆ ಅಮೀರರ ಮಾತಿನ ಮೇಲೆ ವಿಶ್ವಾಸವುಂಟಾಯಿತು. ಮುಬಾರಜುಲ್ ಮುಲ್ಕನ ಸಹಾಯಕ್ಕೆ ಸೈನ್ಯವನ್ನು ಕಳುಹಿಸುವುದರಲ್ಲಿ ವಿಳಂಬ ಮಾಡಿದನು.

ಮುಬಾರಜುಲ್ ಮುಲ್ಕನ ಚಿಂತೆ:

ಐದರ್ ಕೋಟೆಯ ಸಹಾಯಕ್ಕೆಂದು ನಿಯೋಜಿತವಾಗಿದ್ದ ಅನೇಕ ಸೈನಿಕರು ಮತ್ತು ಸವಾರರು ಅಹಮದಾಬಾದ ಮತ್ತು ಇತರ ಕಡೆ ಹೊರಟು ಹೋದರು. ಈಗ ಮುಬಾರಜುಲ್ ಮುಲ್ಕನ ಸೈನ್ಯದಲ್ಲಿ ಕೇವಲ ಕೆಲವೇ ಸೈನಿಕರು ಉಳಿದುಕೊಂಡಿದ್ದರು. ಈ ಪರಿಸ್ಥಿತಿಯಿಂದ ಮುಬಾರಜುಲ್ ಮುಲ್ಕನು ಬಹಳ ಚಿಂತಿತನಾದನು. ಬಾದಶಹನ ಕಡೆಯಿಂದ ಆತನಿಗೆ ಸೈನಿಕ ಸಹಾಯ ದೊರೆತಿರಲಿಲ್ಲ. ರಾಣಾಸಾಂಗನಿಗೆ ಈ ಎಲ್ಲ ವಿಷಯಗಳು ಹೋಗುತ್ತಿದ್ದುವು. ಇದರ ಲಾಭವನ್ನು ಪಡೆಯಲು ಐದರ್‌ನತ್ತ ಹೊರಟನು. ಅಲ್ಲಿನ ರಾಜನ ಹತ್ತಿರ ತಲುಪಿದನು.

ಯುದ್ಧದ ಸಿದ್ಧತೆ:

ಮುಬಾರಜುಲ್ ಮುಲ್ಕನ ಮುಂದೆ ಈಗ ಯುದ್ಧವಾಡದೆ ಬೇರೆ ದಾರಿಯೇ ಇರಲಿಲ್ಲ. ಈ ಕಾರಣದಿಂದಾಗಿ ಆತನು ಬೇರೆ ಸರದಾರರ ಸಹಾಯವನ್ನು ಬೇಡಿ ಸೈನ್ಯವನ್ನು ಸಂಗ್ರಹಿಸಿಕೊಂಡನು. ರಾಣಾಸಾಂಗನನ್ನು ಎದುರಿಸಲು ಮುಂದಾದನು. ಆದರೆ ಕಾರಣಾಂತರಗಳಿಂದಾಗಿ ಇಬ್ಬರ ಸೈನ್ಯಗಳು ಎದುರಾಗಲೇ ಇಲ್ಲ. ಮುಬಾರಜುಲ್‌ಮುಲ್ಕನು ಐದರ್ ಕೋಟೆಗೆ ವಾಪಸ್ ಆದನು.

ಮುಬಾರಜುಲ್‌ಮುಲ್ಕನು ಅಹಮದ್‌ನಗರದಲ್ಲಿ :

ಸೈನ್ಯದ ಸರದಾರರ ಸಲಹೆ ಹೀಗಿತ್ತು-ನಮಗೆ ತಿಳಿದು ಬಂದಿರುವುದೇನೆಂದರೆ- ನಮ್ಮ ಶತ್ರುಗಳ ಸಂಖ್ಯೆ ನಮ್ಮ ಸೈನಿಕರಿಗಿಂತ ಹೆಚ್ಚಾಗಿದೆ. ಈಗ ನಾವು ಇಲ್ಲಿಂದ ಹೊರಡುವುದೇ ಮೇಲು ಎಂದು ಮುಬಾರಜುಲ್ ಮುಲ್ಕನಿಗೆ ತಿಳಿಸಿದರು. ಹಾಗೂ ನಾವು ಈಗ ಅಹಮದನಗರದ ಕೋಟೆಯಲ್ಲಿ ರಕ್ಷಣೆಯನ್ನು ಪಡೆಯುವುದೇ

ಸೂಕ್ತವಾಗಿದೆ. ಎಲ್ಲಿಯವರೆಗೆ ಬಾದಶಹರ ಸಹಾಯ ಸಿಗುವುದಿಲ್ಲವೋ ಅಲ್ಲಿಯವರೆಗೆ ನಾವು ಅಲ್ಲಿಯೇ ಆಶ್ರಯವನ್ನು ಪಡೆಯೋಣ. ಹೀಗೆ ಹೇಳಿ ಮುಬಾರಜುಲ್ ಮುಲ್ಕನನ್ನೂ ಜೊತೆಯಲ್ಲಿ ಕರೆದುಕೊಂಡು ಅಹಮದ್ ನಗರವನ್ನು ತಲುಪಿದರು.

ರಾಣಾಸಾಂಗನು ಐದರ್‌ನಲ್ಲಿ :

ಮುಬಾರಜುಲ್ ಮುಲ್ಕ್‌ನು ಅಹಮದ್‌ನಗರಕ್ಕೆ ಹೋದ ತಕ್ಷಣ, ಮಾರನೇ ದಿನವೇ ರಾಣಾಸಾಂಗನು ಐದರ್‌ಕೋಟೆಗೆ ತಲುಪಿದನು. ಅಲ್ಲಿಗೆ ಬಂದು ಮುಬಾರ್‌ಜುಲ್ ಮುಲ್ಕನ ಬಗ್ಗೆ ಹೆಚ್ಚಿನ ವಿವರಗಳನ್ನು ಸಂಗ್ರಹಿಸಲು ಪ್ರಯತ್ನಿಸಿದನು. ಅಲ್ಲಿ ಕೆಲವರು ಮುಸಲ್ಮಾನರು ಖವಾಮುಲ್ ಮುಲ್ಕ್‌ನ ಸ್ನೇಹವನ್ನು ಬಿಟ್ಟು ರಾಣಾಸಾಂಗನ ಕಡೆ ಸೇರಿಕೊಂಡಿದ್ದರು. ಕೆಲವರು, ಮುಬಾರ್‌ಜುಲ್ ಮುಲ್ಕನು ಶತ್ರುಗಳ ಬೆದರಿಕೆಯಿಂದ ಹೆದರಿ ಓಡುವವನಲ್ಲ ಎಂದರೆ, ಮತ್ತೆ ಕೆಲವರು ಆತನನ್ನು ಕೆಲ ಸೈನಿಕರು ಒತ್ತಾಯ ಪೂರ್ವಕವಾಗಿ ಅಹಮದನಗರಕ್ಕೆ ಕರೆದೊಯ್ದಿದ್ದಾರೆಂದು ತಿಳಿಸಿದರು. ಬಾದಶಹರಿಂದ ಸೈನಿಕ ಸಹಾಯವನ್ನು ಪಡೆಯಲು ಹೋಗಿದ್ದಾನೆಂದೂ ತಿಳಿಯಿತು.

ಮುಬಾರಜುಲ್ ಮುಲ್ಕ್ ಮತ್ತೆ ಒಬ್ಬ ಹೊಗಳು ಭಟ್ಟ :

ಈ ಸಮಾಚಾರವನ್ನು ಕೇಳಿದ ತಕ್ಷಣ ರಾಣಾಸಾಂಗನು ಬಹಳ ಬೇಗ ಐದರ್ ಬಿಟ್ಟು ಅಹಮದ್‌ನಗರದತ್ತ ಪ್ರಯಾಣವನ್ನು ಬೆಳೆಸಿದ. ಆಕಸ್ಮಿಕವಾಗಿ ಹಿಂದಿನ ಪುಟದಲ್ಲಿ ವರ್ಣಿಸಲಾಗಿರುವ ಒಬ್ಬ ಹೊಗಳು ಭಟ್ಟನು ಪುನಃ ಮುಬಾರಜುಲ್ ಮುಲ್ಕನನ್ನು ಭೇಟಿಯಾದನು. ಆತನ ಕಾರಣದಿಂದಾಗಿ ರಾಣಾಸಾಂಗನು ಕೋಪಗೊಂಡು ಮುಬಾರಜುಲ್ ಮುಲ್ಕನ ಮೇಲೆ ಯುದ್ಧವಾಡಿದ್ದನು. ಅದೇ ಭಟ್ಟನು ಪುನಃ ಹೀಗೆಂದನು. ರಾಣಾಸಾಂಗನು ಒಂದು ವಿಶಾಲ ಸೈನ್ಯವನ್ನು ತೆಗೆದುಕೊಂಡು ಇತ್ತ ಬರುತ್ತಿದ್ದಾನೆ. ನನಗೆ ತುಂಬಾ ದುಃಖವಾಗುತ್ತಿರುವುದೇನೆಂದರೆ-ನಿಮ್ಮಂತಹ ಯುವ ಬಹದ್ದೂರನು ವಿನಾ ಕಾರಣ ಸತ್ತು ಹೋಗುತ್ತೀರೆಂದು ಎಂದನು. ನೀವು ಈಗ ಒಂದು ಕೆಲಸ ಮಾಡಿ ಅದೇನೆಂದರೆ ನೀವೆಲ್ಲರೂ ಕೋಟೆಯ ಒಳಗೆ ಅವಿತುಕೊಳ್ಳಿ ರಾಣಾಸಾಂಗನು ಇಲ್ಲಿಗೆ ಬಂದಾಗ ನೀವೆಲ್ಲರೂ ಕೋಟೆಯ ಒಳಗೆ ಅಡಗಿರುವುದನ್ನು ನೋಡಿ ಆತನು ತನ್ನ ಕುದುರೆಗೆ ನೀರನ್ನು ಕುಡಿಸಿಕೊಂಡು ಹಿಂತಿರುಗಿ ಬಿಡುವನು ಎಂದು ಹೀಯಾಳಿಸಿದನು.

ಮುಬಾರಜುಲ್‌ಮುಲ್ಕನ ಧೈರ್ಯ-ಸ್ಥೈರ್ಯಗಳು :

ಭಟ್ಟನ ಈ ಮಾತುಗಳನ್ನು ಕೇಳಿದ ಮುಬಾರಜುಲ್‌ಮುಲ್ಕನು ಮೊದಲು ರಾಣಾಸಾಂಗನು ಇಲ್ಲಿಗೆ ಬರಲಿ ಮತ್ತು ತನ್ನ ಕುದುರೆಗೆ ಇಲ್ಲಿನ ನದಿಯಲ್ಲಿ ನೀರು

ಕುಡಿಸಲಿ ಇದು ಎಂದಿಗೂ ಸಾಧ್ಯವಾಗದ ಮಾತೆಂದನು. ನಂತರ ಅವನು ತನ್ನ ಸೈನ್ಯವನ್ನು ಸಿದ್ಧಮಾಡಿಕೊಂಡನು. ರಾಣಾಸಾಂಗನ ಸೈನ್ಯದ ಹತ್ತನೇ ಒಂದು ಭಾಗದಷ್ಟು ಇಲ್ಲದ ಮುಬಾರಜನು ರಾಣಾನ ಸೈನ್ಯವನ್ನೆದುರಿಸಲು ಮೈದಾನಕ್ಕೆ ಬಂದು ನಿಂತೇ ಬಿಟ್ಟನು.

ಯುದ್ಧ ನಡೆಯಿತು:

ರಾಣಾಸಾಂಗನು ತನ್ನ ಸೈನ್ಯದೊಂದಿಗೆ ಬಂದನು. ಇಬ್ಬರಲ್ಲೂ ಭಯಂಕರ ಯುದ್ಧವಾಯಿತು. ಮುಸಲ್ಮಾನರ ಸೈನ್ಯದ ಒಬ್ಬ ಹೆಸರಾಂತ ಅಮೀರ ಅಸದ್‌ಖಾನನ ಸಮೇತ ಅನೇಕ ಅಮೀರರು ಯುದ್ಧದಲ್ಲಿ ಸತ್ತರು. ಮುಬಾರಜುಲ್ ಮುಲ್ಕ ಮತ್ತು ಸಫ್ದರ್‌ಖಾನರು ಅನೇಕ ಸಲ ರಾಣಾಸಾಂಗನ ಮೇಲೆ ಆಕ್ರಮಣವನ್ನು ನಡೆಸಿದರು. ಗಾಯಗೊಂಡು ತಮ್ಮ ಮೇಲೆ ಬಹಳ ದೊಡ್ಡ ಆಪತ್ತು ಬಂದಿದೆ ಎಂದು ತಿಳಿದ ಮುಬಾರಜುಲ್ ಮುಲ್ಕ ಮತ್ತು ಸಫ್ದರ್‌ಖಾನರು ಮೈದಾನದಿಂದ ಪರಾರಿಯಾಗಿ ಅಹಮದ್‌ನಗರದತ್ತ ಓಡಿದರು.

ರಾಣಾಸಾಂಗನು ಐದರ್ ನಗರದಲ್ಲಿ :

ರಾಣಾನು ಅಹಮದ್ ನಗರದಲ್ಲಿ ವಿನಾಶ ಮತ್ತು ಲೂಟಿಗಳನ್ನು ನಿರಂತಕವಾಗಿ ಮಾಡತೊಡಗಿದನು. ಈ ಪಟ್ಟಣದಲ್ಲಿ ಒಂದು ದಿನ ತಂಗಿದ್ದ ಬಳಿಕ ಐದರ್ ನಗರಕ್ಕೆ ಬಂದು ಬಿಟ್ಟನು. ಆ ಜಾಗದ ಕೆಲ ಶಾಸಕರು ರಾಣಾನ ಹತ್ತಿರ ಬಂದು ಹೀಗೆ ಹೇಳಿದರು. “ನಾವು ಅನೇಕ ಕಾಲದಿಂದಲೂ ಇಲ್ಲಿನ ವಸಾಹತುದಾ ರರಾಗಿದ್ದೇವೆ. ನಿಮ್ಮ ತಂದೆ ತಾತನವರು ನಮ್ಮನ್ನು ಗೌರವಿಸಿಕೊಂಡು ಬರುತ್ತಿದ್ದಾರೆ. ಆದ್ದರಿಂದ ನೀವು ನಮ್ಮ ಮೇಲೆ ಯಾವ ಹಿಂಸೆಯನ್ನೂ ಮಾಡಬಾರದು ಎಂದರು. ರಾಣಾನು ಆ ಜನರ ಪ್ರಾರ್ಥನೆಯನ್ನು ಸ್ವೀಕರಿಸಿ, ಐದರ್ ನಗರದಲ್ಲಿ ಯಾವ ಹಿಂಸಾತ್ಮಕ ಕಾರ್ಯವನ್ನು ನಡೆಸದೆ ಬೇಲ್ ನಗರದತ್ತ ಹೊರಟು ಹೋದನು.

ಮಲಿಕ್ ಹಾತಿಮ್‌ನ ಮರಣ :

ಬೇಲ್ ನಗರದ ಠಾಣೆದಾರ ಮಲಿಕ್ ಹಾತಿಮ್ ಎಂಬುವವನಾಗಿದ್ದನು. ರಾಣಾಸಾಂಗನ ವಿಶಾಲ ಸೈನ್ಯದೊಡನೆ ಯುದ್ಧ ಮಾಡಿ ಗೆಲ್ಲುವುದು ಕಷ್ಟವೆಂದು ಅರಿತಿದ್ದನು. ಸೋಲು ಒಪ್ಪಿಕೊಂಡು ಜೀವಿಸಿರುವುದಕ್ಕಿಂತ ಯುದ್ಧ ಮಾಡಿ ಷಹೀದ್ ಪದವಿಯನ್ನು ಪಡೆಯುವುದೇ ಮೇಲೆಂದು ತಿಳಿದು ಆತನು ತನ್ನ ಅಲ್ಪ ಸೈನ್ಯದೊಂದಿಗೆ ರಾಣಾನೊಡನೆ ಯುದ್ಧ ಮಾಡಿದನು. ಈ ಯುದ್ಧದಲ್ಲಿ ಮಲಿಕ್‌ಹಾತಿಮನು ಹತನಾಗಿ 'ಷಹೀದ್' ಎನಿಸಿಕೊಂಡನು. ನಂತರ ರಾಣಾಸಾಂಗನು ತನ್ನ ರಾಜಧಾನಿಗೆ ಹಿಂತಿರುಗಿದನು.

ಮುಬಾರಜುಲ್ ಮುಲ್ಕ್‌ನು ಪುನಃ ಅಹಮದ್‌ನಗರದಲ್ಲಿ :

ಮಲಿಕ್ ಖವಾಮುದ್ದೀನನು ಮುಬಾರಜುಲ್‌ಮುಲ್ಕ ಮತ್ತು ಸಫ್ಧರ್‌ಖಾನರಿಗೆ ಒಂದು ಸೈನ್ಯವನ್ನು ಕೊಟ್ಟು ಅಹಮದ್ ನಗರದತ್ತ ಕಳುಹಿಸಿದನು. ಈ ಅಮೀರರು ಅಹಮದ್‌ನಗರವನ್ನು ತಲುಪಿ ಸತ್ತವರನ್ನು ಹೂಳುವ ಕೆಲಸವನ್ನು ಕೈಗೊಂಡರು. 'ಕೋಸಿ' ಮತ್ತು "ಕರಾಸ್" ವಂಶಸ್ಥರು ಐದರನ ಪ್ರದೇಶದ ಸುತ್ತಮುತ್ತ ವಾಸಿಸುತ್ತಿದ್ದವರು. ಅಲ್ಲಿನ ಪರಿಸ್ಥಿತಿಗಳ ಲಾಭವನ್ನು ಪಡೆಯಲು ಮುಬಾರಜುಲ್‌ಮುಲ್ಕನ ಸೈನ್ಯವೂ ಕಡಿಮೆ ಇರುವುದನ್ನು ಗಮನಿಸಿ, ಅಹಮದ್ ನಗರದ ಮೇಲೆ ಆಕ್ರಮಣವನ್ನು ನಡೆಸಿದರು. ಮುಬಾರಜುಲ್‌ಮುಲ್ಕನು ಕೋಟೆಯ ಹೊರಬಂದು ಅವರೊಡನೆ ಯುದ್ಧ ಮಾಡಿದನು. ಅವರ ೬೧ ಜನರನ್ನು ಕೊಲೆ ಮಾಡಿ ಗೆಲುವಿನೊಂದಿಗೆ ಕೋಟೆಯೊಳಗೆ ಹೋದನು. ರಾಣಾಸಾಂಗನ ಆಕ್ರಮಣಗಳಿಂದಾಗಿ ಅಹಮದ ನಗರವು ಸಂಪೂರ್ಣವಾಗಿ ನಾಶವಾಗಿತ್ತು. ಆಹಾರ ಸಾಮಗ್ರಿಗಳೊಂದಿಗೆ ಇತರೆ ಯಾವುದೇ ವಸ್ತುಗಳು ಅಲ್ಲಿ ಸಿಗುತ್ತಿರಲಿಲ್ಲ. ಆದ್ದರಿಂದ ಇಲ್ಲಿ ಇರಲು ಸಾಧ್ಯವಿಲ್ಲವೆಂದು ತಿಳಿದ ಮುಬಾರಜುಲ್ ಮುಲ್ಕನು ಸೈನ್ಯದೊಂದಿಗೆ ಹೊರಟು "ಬೀಜ್" ಎಂಬ ಕಸಬಾಕ್ಕೆ ತೆರಳಿದನು.

ಅಮಾದುಲ್ ಮುಲ್ಕ ಮತ್ತು ಖೈಸರ್‌ಖಾನರ ನೇಮಕ :

ಇವೆಲ್ಲಾ ಸಮಾಚಾರಗಳನ್ನು ಸುಲ್ತಾನ್ ಮುಜಫರನು ಕೇಳುತ್ತಲೇ ಇದ್ದನು. ಆತನು ಅಮಾದುಲ್‌ಮುಲ್ಕ್ ಮತ್ತು ಖೈಸರಖಾನರೊಂದಿಗೆ ಒಂದು ವಿಶಾಲ ಸೈನ್ಯವನ್ನು ಕೊಟ್ಟು ರಾಣಾಸಾಂಗನ ಆಕ್ರಮಣಗಳನ್ನು ಅಡಗಿಸಲು ನೇಮಕ ಮಾಡಿದನು. ಈ ಇಬ್ಬರೂ ಅಮೀರರು ತಮ್ಮ-ತಮ್ಮ ಸೈನ್ಯದೊಂದಿಗೆ ಒಂದು ನೂರು ಆನೆಗಳನ್ನು ಜೊತೆಯಲ್ಲಿ ತೆಗೆದುಕೊಂಡು ಅಹಮದಾಬಾದನ್ನು ತಲುಪಿದರು. ಅಲ್ಲಿದ್ದ ಖವಾಮುಲ್ ಮುಲ್ಕನನ್ನು ಜೊತೆಗೂಡಿಸಿಕೊಂಡು ಕಸಬಾ ಸರ್‌ಕಚ್ ಎಂಬಲ್ಲಿಗೆ ಬಂದರು. ಅಲ್ಲಿಗೆ ಬಂದ ಅಮೀರರು ಸುಲ್ತಾನ್ ಮುಜಫರನಿಗೆ ತಿಳಿಸಿದ್ದೇನೆಂದರೆ-ರಾಣಾಸಾಂಗನು ತನ್ನ ನೆಲೆ ಜಯಪುರಕ್ಕೆ ಹೋಗಿದ್ದಾನೆಂದು ಆತನನ್ನು ಹಿಂಬಾಲಿಸಿ ಜಯಪುರದತ್ತ ಹೋಗಲು ಅನುಮತಿಯನ್ನು ಕೊಡಬೇಕೆಂದು ಪ್ರಾರ್ಥಿಸಿದರು.

ರಾಣಾಸಾಂಗನನ್ನು ಅಡಗಿಸುವ ಇಚ್ಛೆ :

ಸುಲ್ತಾನ್ ಮುಜಫರನು ಅವರ ಉತ್ತರವಾಗಿ ಈಗ ನೀವು ಸದ್ಯಕ್ಕೆ ಜಯಪುರದತ್ತ ಹೋಗುವುದು ಸೂಕ್ತವಲ್ಲ. ಏಕೆಂದರೆ ಅತ್ತ ಮಳೆ ಜೋರಾಗಿ ಸುರಿಯುತ್ತಿದೆ. ಇಂತಹ ಸ್ಥಿತಿಯಲ್ಲಿ ಸೈನ್ಯದ ಪ್ರಯಾಣ ಕಠಿಣವಾಗುತ್ತದೆ. ಮಳೆಗಾಲ ನಿಂತ ಮೇಲೆ ಪ್ರಯಾಣವನ್ನು ಮಾಡಿ ಎಂದು ಹೇಳಿದನು. ಅಮೀರರು ಬಾದಶಹನ ಆಜ್ಞೆಯನ್ನು

ಅನುಸರಿಸಿದರು. ಕೆಲವು ದಿನಗಳ ನಂತರ ಸುಲ್ತಾನ್ ಮುಜಫರನು ಸೈನಿಕರೆಲ್ಲರಿಗೂ ಒಂದು ವರ್ಷದ ನಗದು ವೇತನವನ್ನು ಹಂಚಿಸಿದನು. ತಾನು ಅಹಮದಾಬಾದಿಗೆ ಬಂದು ರಾಣಾಸಾಂಗನ ಉಪಟಳವನ್ನು ಅಡಗಿಸಲು ಜಯಪುರದತ್ತ ಹೋಗುವ ಸಿದ್ಧತೆಯಲ್ಲಿ ತೊಡಗಿದನು.

ಮಲಿಕ್ ಅಯಾಜ್‌ನ ಆಗಮನ :

ಅದೇ ಸಮಯದಲ್ಲಿ ಮುಜಫರ್ ಸುಲ್ತಾನ್‌ನ ತಂದೆಯ ಗುಲಾಮನು ಸೂರತ್ ಬಂದರಿನ ಹಾಗೂ ಇತರೇ ಸಮುದ್ರೀ ಜಾಗಗಳ ಜಾಗೀರದಾರನು ಆದ ಮಲಿಕ್ ಅಯಾಜನು ಇಪ್ಪತ್ತು ಸಾವಿರ ಸವಾರರು ಇತರೆ ಕಾಲಾಳುಗಳೊಂದಿಗೆ ಒಂದು ವಿಶಾಲ ಸೈನ್ಯವನ್ನು ತೆಗೆದುಕೊಂಡು ಸುಲ್ತಾನ್ ಮುಜಫರನ ಸಹಾಯಕ್ಕೆ ಬಂದನು. ಆತನು ಬಾದಶಹನಿಗೆ ಹೀಗೆಂದನು. ಜಹಾಂಪನಾಹ್–ತಾವು ಸ್ವತಃ ರಾಣಾಸಾಂಗನಿಗೆ ಅಡಗಿಸಲು ಹೊರಡಿರಿ. ತಾವು ನಮ್ಮ ಜೊತೆಯಲ್ಲಿದ್ದರೆ ಕೆಲವು ಕಷ್ಟಗಳು ತಾನಾಗಿಯೇ ದೂರವಾಗುತ್ತವೆ. ನಾವು ತಮ್ಮ ಸೇವಕರಾಗಿದ್ದು ಎಂತಹ ಕಾಳಗಕ್ಕೂ ಸಿದ್ದರಾಗಿದ್ದೇವೆ. ಈ ಮಾತುಗಳಿಗೆ ಬಾದಶಹನು ಯಾವ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸದೆ ಹಿಜರಿ ೯೨೭ನೇ ಮೊಹರಂ ತಿಂಗಳಲ್ಲಿ ಬಾದಶಹನು ಅಹಮದ್ ನಗರಕ್ಕೆ ಬಂದು ಬಿಟ್ಟನು.

ಮಲಿಕ್ ಅಯಾಜ್‌ನನ್ನು ರಾಣಾಸಾಂಗನ ಮೇಲೆ ಆಕ್ರಮಣಕ್ಕೆ ನೇಮಕ :

ಎಲ್ಲ ಸೈನ್ಯವೂ ಒಂದು ಕಡೆ ಸೇರಿದ ಮೇಲೆ ಮಲಿಕ್ ಅಯಾಜನು ಮತ್ತೊಮ್ಮೆ ಬಾದಶಹನ ಆಜ್ಞೆಯನ್ನು ಕೇಳಿದನು. ಬಾದಶಹನು ಒಂದು ಲಕ್ಷ ಸವಾರರನ್ನು ಒಂದು ನೂರು ಆನೆಗಳನ್ನು ಸೇರಿಸಿ ಒಂದು ವಿಶಾಲ ಸೈನ್ಯವನ್ನು ಕೊಟ್ಟು ರಾಣಾಸಾಂಗನ ಮೇಲೆ ಯುದ್ಧ ಸಾರಲು ಅನುಮತಿಯನ್ನು ಕೊಟ್ಟನು. ಮಲಿಕ್ ಅಯಾಜನು, ಖವಾಮುಲ್ಕನೂ ಇಷ್ಟು ದೊಡ್ಡ ಸೈನ್ಯವನ್ನು ತೆಗೆದುಕೊಂಡು ಹೊರಟು ಮೆಹರಾಸದಲ್ಲಿ ಬೀಡುಬಿಟ್ಟನು. ಸುಲ್ತಾನ್ ಮುಜಫ್ಫರನ ದೂರ ದೃಷ್ಟಿಯ ಪರಿಣಾಮವಾಗಿ ತಾಜ್‌ಖಾನ ಮತ್ತು ನಿಜಾಮುಲ್‌ಮುಲ್ಕ್‌ಶಾಹಿಯವರಿಗೂ ೨೦ ಸಾವಿರ ಸೈನ್ಯದೊಂದಿಗೆ ಮೆಹರಾಸ ಕಡೆಗೆ ಕಳುಹಿಸಿದನು.

ಬಾದಶಹನಿಗೆ ಮಲಿಕ್ ಅಯಾಜನ ಅರ್ಜಿ :

ಮಲಿಕ್ ಅಯಾಜನು ಬಾದಶಹರಿಗೊಂದು ಅರ್ಜಿಯನ್ನು ಬರೆದು ಹೀಗೆ ನಿವೇದಿಸಿಕೊಂಡನು. ಹೂಜೂರರು ರಾಣಾಸಾಂಗನ ವಿನಾಶಕ್ಕೆ ಶ್ರೇಷ್ಠ ಬಹಾದುರರನ್ನು ನೇಮಕ ಮಾಡಿರುವುದು ನಿಮ್ಮ ಘನತೆ ಗೌರವಗಳಿಗೆ ತಕ್ಕ ವಿಷಯವಾಗಿದೆ. ತಾವುಗಳು ನನ್ನ ವಶಕ್ಕೆ ಅಧಿಕ ಸಂಖ್ಯೆಯ ಆನೆಗಳನ್ನು ಕಳುಹಿಸಿದ್ದೀರಿ. ಇಷ್ಟೊಂದು ಆನೆಗಳ ಅವಶ್ಯಕವಿಲ್ಲ. ನಾನು ಈ ಯುದ್ಧವನ್ನು ತಮ್ಮ ಆಸೆ–ಆಕಾಂಕ್ಷೆಗಳಿಗೆ ತಕ್ಕಂತೆ

ನಿರ್ವಹಿಸಲಿದ್ದೇನೆ. ಎಂದು ಬರೆದು ಬಹಳಷ್ಟು ಆನೆಗಳನ್ನು ಮಲಿಕ ಅಯಾಜನು ಹಿಂದಕ್ಕೆ ಕಳುಹಿಸಿದನು. ಮತ್ತು ಸಫ್ದರಖಾನನನ್ನು ರಾಜಪೂತರನ್ನು ಅಡಗಿಸಲು ನೇಮಿಸಿದನು.

ಲಿಖಾರ್ಕರ್ತ್‌ನ ರಾಜಪೂತರ ದಮನ :

ಸಫ್ದರ್‌ಖಾನನು ಲಿಖಾರ್ಕರ್ತ್‌ನಲ್ಲಿ ತಲುಪಿ ಅಲ್ಲಿನ ಅಸಂಖ್ಯಾತ ರಾಜಪೂತರನ್ನು ನಾಶಮಾಡಿ, ಉಳಿದವರನ್ನು ಸೆರೆಹಿಡಿದು ಮಲಿಕ್ ಅಯಾಜನ ಹತ್ತಿರಕ್ಕೆ ತಂದನು. ಮಲಿಕ ಅಯಾಜನು ತನ್ನ ಬಿಡಾರದಿಂದ ಹೊರಟು ಡೊಂಗರ್‌ಪುರ್ ಮತ್ತು ಬಾನ್ಸ್‌ವಾಲ ಸ್ಥಳಗಳಲ್ಲಿ ಸರ್ವನಾಶವನ್ನು ಮಾಡಿ, ಲೂಟಿ ಮಾಡಿಕೊಂಡು ಅಯಾಜನು ಜಯಪುರದತ್ತ ಹೊರಟನು.

ದಾರಿಯ ಅಡ್ಡಗಲ್ಲು :

ಈ ಜಾಗದಲ್ಲಿಯ ಒಬ್ಬ ವ್ಯಕ್ತಿಯು ಅಶಜಲ್‌ಮುಲ್ಕ್ ಮತ್ತು ಸಫ್ದರಖಾನನಿಗೆ ತಿಳಿಸಿದ್ದೇನೆಂದರೆ–“ಓದೇಸಿಂಗ್ ರಾಜಿಮಲ್ಲನು ರಾಣಾಸಾಂಗನ ರಾಜಪೂತರು ಮತ್ತು “ಅಕರ್ಸಿನ್‌ಪೂರ್ಬಿಯಾ”ದ ಜೊತೆಯಲ್ಲಿ ಒಂದು ಬೆಟ್ಟದ ಗುಹೆಯಲ್ಲಿ ಅಡಗಿ ಕುಳಿತಿದ್ದಾರೆಂದು ಗೊತ್ತಾಯಿತು. ಅವರು ನಿಮ್ಮ ಮೇಲೆ ರಾತ್ರಿಹೊತ್ತು ಮಲಗಿದಾಗ ಆಕಸ್ಮಿಕ ಆಕ್ರಮಣವನ್ನು ಮಾಡುವ ಇಚ್ಛೆ ಹೊಂದಿದ್ದಾರೆಂದು ತಿಳಿಯಿತು. ಅಶ್‌ಜಲ್‌ಮುಲ್ಕ್ ಮತ್ತು ಸಫ್ದರ್‌ಖಾನರಿಬ್ಬರು ಮಲಿಕ್ ಅಯಾಜನಿಗೆ ವಿಷಯವನ್ನು ತಿಳಿಸದೆ ೨೦೦ ಸವಾರರನ್ನು ಜೊತೆಯಲ್ಲಿ ತೆಗೆದುಕೊಂಡು ಬಹಳ ಬೇಗ ಶತ್ರುಗಳ ಹತ್ತಿರ ತಲುಪಿದರು. ಇಬ್ಬರಲ್ಲೂ ಘೋರ ಯುದ್ಧವೇ ನಡೆಯಿತು. ಅಕರ್ಸೀನ ಎಂಬುವನು ಗಾಯಗೊಂಡನು. ಎಂಬತ್ತು ಜನ ರಾಜಪೂತರು ಯುದ್ಧದಲ್ಲಿ ಸತ್ತರು. ಉಳಿದವರು ಓಡಿದರು.

ಅಶ್‌ಜಲಲ್‌ಮುಲ್ಕ ಮತ್ತು ಸಫ್ಧರ್‌ಖಾನನ ಸಾಹಸ :

ಇವರಿಬ್ಬರ ಗೆಲುವಿಗಿಂತ ಮೊದಲೇ ಮಲಿಕ್ ಅಯಾಜನು ಅಶ್‌ಜಲಲ್‌ಮುಲ್ಕ ಮತ್ತು ಸಫ್ಧರಖಾನರ ಸಹಾಯಕ್ಕೆಂದು ಒಂದು ಸೈನ್ಯವನ್ನು ತೆಗೆದುಕೊಂಡು ಹಿಂದೆಯೇ ಹೋದನು. ಅಲ್ಲಿಗೆ ಹೋಗಿ ನೋಡುವಷ್ಟರಲ್ಲಿ ಇವರಿಬ್ಬರೂ ಶತ್ರುಗಳೊಂದಿಗೆ ಯುದ್ಧವನ್ನು ಮಾಡಿ ಗೆಲುವನ್ನು ಪಡೆದುಕೊಂಡಿದ್ದರು. ಅಯಾಜನು ಈ ಘಟನೆಯನ್ನು ನೋಡಿ ಆಶ್ಚರ್ಯ ಚಕಿತನಾದನು. ಇಬ್ಬರು ಅಮೀರರ ಸಾಹಸವನ್ನು ಕೇಳಿ ಬಹಳ ಸಂತೋಷಪಟ್ಟನು. ಅವರಿಬ್ಬರಿಗೂ ಬಹಳ ಪ್ರೇಮದಿಂದ ಬರಮಾಡಿಕೊಂಡನು.

ಖಿವಾಮುಲ್‌ಮುಲ್ಕ್‌ನ ಸಾಹಸ :

ಮಾರನೇ ದಿನ ಬೆಳಿಗ್ಗೆ ಖಿವಾಮುಲ್‌ಮುಲ್ಕ್‌ನು ಅಹಂಕಾರಿ ರಾಜಪೂತರ

ಗುಂಪನ್ನು ಪತ್ತೆ ಹಚ್ಚಲು "ಯಾನ್ವಾಲಾ" ಗುಹೆಯ ಹತ್ತಿರ ಹೋದನು. ಅಲ್ಲಿನ ಸುತ್ತಮುತ್ತಲಿನ ಪ್ರದೇಶದಲ್ಲಿ ಸಿಕ್ಕಸಿಕ್ಕವರೆಲ್ಲರನ್ನು ಕೊಲ್ಲುತ್ತಾ ಲೂಟಿಯನ್ನು ಮಾಡತೊಡಗಿದನು. ಬಹಳ ಜನರು ಸತ್ತುಹೋದರು. ಮತ್ತು ಅನೇಕ ಮನೆಗಳು ಬೆಂಕಿಗೆ ಆಹುತಿಯಾದುವು.

ಮಂದ್‌ಸೋರ್‌ನ ಮುತ್ತಿಗೆ :

ಹಿಂದಿನ ಯುದ್ಧದಲ್ಲಿ ಆಕರ್ಸಿಣ್ ಎಂಬುವನು ಗಾಯಗೊಂಡು ಉಳಿದುಕೊಂಡಿದ್ದನೆಂದು ಓದಿದ್ದೇವೆ. ಆತನು ಹೇಗೋ ಮಾಡಿ ರಾಣಾಸಾಂಗನ ಹತ್ತಿರಕ್ಕೆ ತಲುಪಿದ್ದ. ಎಲ್ಲ ಸಮಾಚಾರವನ್ನು ರಾಣಾನಿಗೆ ತಿಳಿಸಿದ್ದನು. ಅದೇ ದಿನಗಳಲ್ಲಿ ಅಯಾಜ್ ಸುಲ್ತಾನಿಯು ಮಂದ್‌ಸೋರ್ ತಲುಪಿ ನಗರದ ಮುತ್ತಿಗೆ ಹಾಕಿದನು. ಅಲ್ಲಿನ ಠಾಣೆದಾರನು ರಾಣಾಸಾಂಗನ ಅಧೀನದಲ್ಲಿದ್ದನು. ಆದ್ದರಿಂದ ರಾಣಾಸಾಂಗನು ಆತನ ಸಹಾಯಕ್ಕೆಂದು ಬಂದನು. ಆದರೆ ಮಂದಸೋರಿಗೆ ೧೨ ಮೈಲಿ ದೂರದಲ್ಲೇ ಬೀಡು ಬಿಟ್ಟಿದ್ದನು.

ರಾಣಾಸಾಂಗನ ಸಂದೇಶ :

ರಾಣಾಸಾಂಗನು ತನ್ನ ದೂತನೊಬ್ಬನನ್ನು ಅಯಾಜ್‌ನ ಹತ್ತಿರ ಕಳುಹಿಸಿ ಈ ಸಂದೇಶವನ್ನು ಕಳುಹಿಸಿದ್ದನು. "ನಾನು ನನ್ನ ರಾಜದೂತರನ್ನು ಸುಲ್ತಾನ್ ಮುಜಫರರ ಹತ್ತಿರ ಶಾಹಿ ಅಧೀನತೆಯನ್ನು ಸ್ವೀಕರಿಸಲು ಸಿದ್ಧನಿದ್ದೇನೆಂದು ಸಂದೇಶವನ್ನು ಈಗಾಗಲೇ ಕಳುಹಿಸಿದ್ದೇನೆ. ಆದ್ದರಿಂದ ನೀನು ಮಂದಸೋರ್ ಕೋಟೆಯ ಮುತ್ತಿಗೆಯನ್ನು ತೆರವು ಮಾಡು ಎಂದು ಹೇಳಿ ಕಳುಹಿಸಿದನು. ಆದರೆ ಮಲಿಕ್ ಅಯಾಜನು ರಾಣಾನ ಮಾತು ಒಪ್ಪಲು ಕೆಲವು ಷರತ್ತುಗಳನ್ನಿಟ್ಟನು. ಇತ್ತಕಡೆ ಕೋಟೆಯನ್ನು ಸುತ್ತುವರಿಯುವುದನ್ನು ಬಿಡಲಿಲ್ಲ. ಹಾಗೂ ಕೋಟೆಯ ಒಳಗೆ ನುಗ್ಗಲು ಸುರಂಗವನ್ನು ತೋಡುವ ಕೆಲಸವನ್ನು ನಿಲ್ಲಿಸಿರಲಿಲ್ಲ. ಬೇಗ ಕೋಟೆಯನ್ನು ವಶಪಡಿಸಿಕೊಳ್ಳುವುದೇ ಆತನ ಉದ್ದೇಶವಾಗಿತ್ತು.

ಸುಲ್ತಾನ್ ಮಹಮೂದ್ ಖಿಲ್ಜಿಯ ಆಗಮನ :

ಈ ಮಧ್ಯೆ ಸುಲ್ತಾನ್ ಮಹಮೂದ್ ಖಿಲ್ಜಿಯ ಕಡೆಯಿಂದಲೂ ಒಬ್ಬ ವ್ಯಕ್ತಿ ಶರ್‌ಜಹ್‌ಖಾನ್ ಶರ್‌ವಾನಿ ಎಂಬವನು ಮಲಿಕ ಅಯಾಜನ ಹತ್ತಿರ ಬಂದು ಈ ಸಂದೇಶವನ್ನು ತಲುಪಿಸಿದನು. "ಒಂದು ವೇಳೆ ನಮ್ಮಿಂದ ಸೈನಿಕ ಸಹಾಯವೇನಾದರೂ ಬೇಕಿದ್ದರೆ ನಾವು ಬರಲು ಸಿದ್ಧರಿದ್ದೇವೆ". ಅಯಾಜನು ಸುಲ್ತಾನ್ ಮಹಮೂದ್ ಖಿಲ್ಜಿಯನ್ನು ಬರಲು ಆಹ್ವಾನಿಸಿದನು. ಹಾಗೂ ಆತನ ಬರುವಿಕೆಗೆ ಕಾದನು. ಏಕೆಂದರೆ ಸುಲ್ತಾನ್ ಮಹಮೂದ್ ಖಿಲ್ಜಿಯ ಮೇಲೆ ಸುಲ್ತಾನ್ ಮುಜಫರನ ಉಪಕಾರಗಳ

ಹೊರೆ ಅಪಾರವಾಗಿತ್ತು. ಖಿಲ್ಜಿಯು ಸಲ್‌ಹದಿಪೂರಬಿಯಾನನ್ನು ಜೊತೆಯಲ್ಲಿ ಕರೆದುಕೊಂಡು ಮಂದ್‌ಸೋರ್ ರವಾನೆಯಾದನು.

ರಾಣಾಸಾಂಗನ ಪ್ರಯತ್ನ ವ್ಯರ್ಥ :

ಸುಲ್ತಾನ್ ಮಹಮೂದ್ ಖಿಲ್ಜಿಯ ಆಗಮನದಿಂದ ರಾಣಾನಿಗೆ ತುಂಬಾ ಚಿಂತೆಯಾಯಿತು. ಆತನು ಮಂದಲಿರಾಯನಿಗೆ ಸಲ್‌ಹದಿಯ ಹತ್ತಿರ ಕಳುಹಿಸಿ "ನನಗೆ ನಿನ್ನ ಸ್ನೇಹ ಮತ್ತು ಪ್ರೇಮದ ಮೇಲೆ ತುಂಬಾ ವಿಶ್ವಾಸವಿದೆ. ಹಿಂದಿನ ನನ್ನ ನಿನ್ನ ಹಕ್ಕುಗಳ ಬಗ್ಗೆ ಯಾವ ರೀತಿಯ ವ್ಯತ್ಯಾಸವನ್ನೂ ಉಂಟುಮಾಡುವುದಿಲ್ಲವೆಂಬ ನಂಬಿಕೆ ಇದೆ. ಒಂದು ವೇಳೆ ಸಲಹೆ ಸಂಧಿಯನ್ನು ಮಾಡಿಸಿ ಯುದ್ಧವನ್ನು ನಿಲ್ಲಿಸಿದರೆ ನಿನ್ನಿಂದ ನನಗೆ ದೊಡ್ಡ ಉಪಕಾರವೇ ಆಗುವುದು" ಎಂದು ಹೇಳಿ ಕಳುಹಿಸಿದನು. ಸಲ್‌ಹದಿಯು ಸಂಧಿ ಮಾಡಿಸಲು ಬಹಳ ಪ್ರಯತ್ನ ಪಟ್ಟನು. ಆದರೂ ಲಾಭವಾಗಲಿಲ್ಲ.

ಮಲಿಕ್ ಅಯಾಜ್‌ನೊಂದಿಗೆ ಅಮೀರರ ಕ್ರೋಧ :

ಕೆಲವು ದಿನಗಳ ನಂತರ ಖವಾಮುಲ್ ಮುಲ್ಕನು ತನ್ನ ಆಕ್ರಮಣವನ್ನು ಮುಂದುವರಿಸಿ ಸೈನ್ಯವನ್ನು ಕರೆದುಕೊಂಡು ಹೋದನು. ಕೋಟೆಯ ಒಳಗೆ ಪ್ರವೇಶಿಸಲು ಸಾಧ್ಯವಿತ್ತು. ಆದರೆ ಮಲಿಕ್ ಅಯಾಜನು ದ್ವೇಷದಿಂದ ಆತನಿಗೆ ಅಂದು ಯುದ್ಧ ಮಾಡಲು ಬಿಡಲಿಲ್ಲ. ಏಕೆಂದರೆ ಗೆಲುವಿನ ಯಶಸ್ಸು ಕೀರ್ತಿ ಖವಾಮುಲ್ಕನಿಗೆ ಸಿಗದಿರಲೆಂದು ತಡೆದನು. ಗುಜರಾತಿ ಅಮೀರರೆಲ್ಲರು ಆತನ ಬಗ್ಗೆ ಕ್ರೋಧಿತರಾದರು.

ಮುಬಾರಜುಲ್ ಮುಲ್ಕ್‌ನ ಇಚ್ಛೆ :

ಮಾರನೇ ದಿನದ ಬೆಳಿಗ್ಗೆ ಮತ್ತೆ ಕೆಲವು ಬೇರೆ ಅಮೀರರು ಮಲಿಕ ಅಯಾಜನ ಅನುಮತಿ ಇಲ್ಲದೆಯೇ ರಾಣಾಸಾಂಗನೊಂದಿಗೆ ಯುದ್ಧ ಮಾಡಲು ಸಿದ್ಧರಾದರು. ಮಲಿಕ್ ತುಘಲಖ್‌ಶಹ ಫೌಲಾದಿಯು ಮುಬಾರಜುಲ್ ಮುಲ್ಕನನ್ನು ಅರ್ಧ ದಾರಿಯಲ್ಲೆ ಯುದ್ಧ ಮಾಡದಂತೆ ತಡೆದನು. ಇವೆಲ್ಲದರ ಅರ್ಥ ಇಷ್ಟೆ – ಅಯಾಜ್‌ನ ಉಪಾಯವು ಫಲಿಸಿ ಸುರಂಗದಿಂದ ಒಳ ನುಗ್ಗಿ ಕೋಟೆಯಲ್ಲಿ ಬೆಂಕಿ ಹಾಕಿ ಗೆಲುವು ಮಾತ್ರ ಅಯಾಜನು ಪಡೆಯುವುದಾಗಿತ್ತು.

ರಾಜಪೂತರ ಎಚ್ಚರ :

ಇವೆಲ್ಲ ಕಾರ್ಯಕ್ರಮಗಳಿಂದ ಅಯಾಜನಿಗೂ ಇತರೆ ಅಮೀರರಿಗೂ ಒಂದು ರೀತಿಯ ದ್ವೇಷ ಭಾವನೆ ಬೆಳೆದರೂ ಅಯಾಜನೇ ಆ ಯುದ್ಧದ ಮುಖ್ಯಸ್ಥನಾಗಿ ಸುಲ್ತಾನನಿಂದ ನೇಮಿಸಲ್ಪಟ್ಟಿದ್ದನು. ಆತನ ಅನುಮತಿ ಇಲ್ಲದೆ ಯಾರೂ ಯುದ್ಧ ಮಾಡುವಂತಿರಲಿಲ್ಲ. ಅಯಾಜನು ಅಮೀರರ ಎಷ್ಟೇ ವಿರೋಧವಿದ್ದರೂ ತನ್ನ

ಕೆಲಸಗಳನ್ನು ನಿಲ್ಲಿಸಿರಲಿಲ್ಲ. ಸುರಂಗವು ಪೂರ್ಣಗೊಂಡು ಬೆಂಕಿಯನ್ನಿಟ್ಟೇ ಬಿಟ್ಟನು. ಇದರಿಂದಾಗಿ ಕೋಟೆಯ ಬುರ್ಜು ಚಿಂದಿ-ಚಿಂದಿಯಾಗಿ ಬಿದ್ದು ಹೋಯಿತು. ಆದರೂ ರಾಜಪೂತರು ಬುರ್ಜಿನ ಪಕ್ಕದಿಂದ ಮತ್ತೊಂದು ಗೋಡೆಯನ್ನು ಒಳಗಿನಿಂದಲೇ ಇಟ್ಟಿದ್ದರು. ರಾಜಪೂತರಿಗೆ ಸುರಂಗ ತೋಡುತ್ತಿದ್ದ ವಿಚಾರ ಗೊತ್ತಾಗಿ ಅವರೂ ಎಚ್ಚರವಾಗಿದ್ದರು.

ರಾಣಾನ ಸಂದೇಶ :

ಮಾರನೇ ದಿನ ರಾಣಾನ ರಾಜದೂತರು ಅಯಾಜ್‌ನ ಹತ್ತಿರ ಬಂದರು. "ನನ್ನ ಉದ್ದೇಶವೇನೆಂದರೆ ನಾನು ಬಾದಶಹರ ಅಧೀನತೆಯನ್ನು ಸ್ವೀಕರಿಸಬೇಕೆಂಬುದು ನಾನು ವಾಗ್ದಾನವನ್ನು ಮಾಡುವುದೇನೆಂದರೆ-ಅಹಮದ್‌ನಗರದಲ್ಲಿ ಯುದ್ಧದಲ್ಲಿ ನಾನು ಯಾವ ಆನೆಗಳನ್ನು ನಿಮ್ಮಿಂದ ಸೆರೆಹಿಡಿದಿದ್ದೇನೋ ಅವುಗಳನ್ನು ಬಾದಶಹರ ಹತ್ತಿರ ಕಳುಹಿಸಲು ಸಿದ್ಧನಿದ್ದೇನೆ. ನಾನು ಬಾದಶಹರ ಅಧೀನತೆಯನ್ನು ಸ್ವೀಕರಿಸಿ ಕಪ್ಪ-ಕಾಣಿಕೆಗಳನ್ನು ಕೊಡಲು ಒಪ್ಪಿದ್ದರೂ ನೀವು ಏಕೆ ಹೀಗೆ ಕಠಿಣವಾಗಿ ವರ್ತಿಸುತ್ತಿದ್ದೀರಿ?" ಎಂದು ಸಂದೇಶವನ್ನು ಕಳುಹಿಸಿದನು.

ವಿರೋಧಿ ಅಮೀರರ ಉದ್ದೇಶ ಯುದ್ಧ ಮಾಡುವುದಾಗಿತ್ತು :

ಖವಾಮುಲ್ ಮುಲ್ಕನು ಅಯಾಜನೊಂದಿಗೆ ದ್ವೇಷ ಭಾವನೆಯನ್ನು ಅಧಿಕಗೊಳಿಸಿಕೊಂಡೇ ಇದ್ದನು. ಈತನು ಸಂಧಿ ಮಾಡಿಕೊಳ್ಳುವುದೇ ಉತ್ತಮವೆಂದು ತಿಳಿದಿದ್ದನು. ಅಯಾಜನು ಸಂಧಿಗೆ ಒಪ್ಪಲು ಸಿದ್ಧನಾಗಿರುವುದನ್ನು ತಿಳಿದ ಇತರೆ ಅಮೀರರು ಸುಲ್ತಾನ್ ಖಿಲ್ಜಿಯ ಹತ್ತಿರ ಬಂದು ಯುದ್ಧ ಮಾಡಲು ಅಯಾಜನಿಗೆ ಒಪ್ಪಿಸಲು ಒತ್ತಾಯಿಸಿದರು. ಅವರೆಲ್ಲರೂ ಬುಧವಾರದ ದಿನ ಯುದ್ಧವನ್ನು ಮಾಡಲೇಬೇಕೆಂದು ನಿಶ್ಚಯಿಸಿದರು. ಇವೆಲ್ಲಾ ತೀರ್ಮಾನಗಳ ವಿಷಯವನ್ನು ಅಮೀರರ ಕಡೆಯ ಒಬ್ಬ ವ್ಯಕ್ತಿಯು ಅಯಾಜನ ಹತ್ತಿರ ಬಂದು ತಿಳಿಸಿದನು.

ಮಲಿಕ್ ಅಯಾಜನ ಸಂದೇಶ ಮಹಮೂದ್ ಖಿಲ್ಜಿಯ ಹೆಸರಿಗೆ :

ಮಲಿಕ್ ಅಯಾಜನು ಆ ತಕ್ಷಣ ಸುಲ್ತಾನ್ ಮಹಮೂದ್ ಖಿಲ್ಜಿಯ ಹತ್ತಿರ ಒಬ್ಬ ದೂತನನ್ನು ಕಳುಹಿಸಿ ಹೀಗೆ ವಿವರಿಸಲು ಹೇಳಿದನು. ಸುಲ್ತಾನ್ ಮುಜಫರರು ಈ ಸೈನ್ಯದ ಪ್ರಧಾನ ದಂಡನಾಯಕನ ಹಕ್ಕುಗಳನ್ನು ನನಗೆ ವಹಿಸಿರುತ್ತಾರೆ. ಹಾಗೂ ನನಗೆ ಆಜ್ಞಾಪಿಸಿರುವುದೇನೆಂದರೆ- ನಾನು ಹೇಗೆ ಯೋಚಿಸುತ್ತಾನೆಯೋ ಹಾಗೆ ಕಾರ್ಯರೂಪಕ್ಕೆ ಬರಬೇಕಾಗಿದೆ. ನನಗೆ ಈಗ ತಿಳಿದು ಬಂದಿರುವುದೇನೆಂದರೆ ಗುಜರಾತಿನ ಅಮೀರರ ಚಿತಾವಣಿಣೆಯಂತೆ ರಾಣಾಸಾಂಗನ ಮೇಲೆ ಯುದ್ಧವಾಡಲು ಸಿದ್ಧರಾಗಿದ್ದೀರಿ, ಆದರೆ ನಾನು ಈ ವಿಚಾರವನ್ನು ಒಪ್ಪಲು ಸಿದ್ಧನಿಲ್ಲ. ನಮ್ಮ-

ನಮ್ಮಲಿನ ಒಡಕು ಅಭಿಪ್ರಾಯಗಳ ಕಾರಣ, ಯುದ್ಧದಿಂದ ನಾವು ಸಫಲರಾಗಲು ಸಾಧ್ಯವಿಲ್ಲವೆಂಬುದೇ ನನ್ನ ಅನಿಸಿಕೆ.

ಮಲಿಕ್ ಅಯಾಜನು ಬಂದರ್‌ದೇವ್‌ಗೆ ಹೋದನು :

ಬುಧವಾರ ದಿನ ಅಮೀರರೆಲ್ಲರೂ ಯುದ್ಧ ಮಾಡಲೇಬೇಕೆಂಬ ತೀರ್ಮಾನಕ್ಕೆ ಬಂದದ್ದು ಸರಿಯಷ್ಟೆ. ಆದರೆ ಮಲಿಕ ಅಯಾಜನು ಮಾತ್ರ ಆ ಜಾಗದಿಂದ ಪ್ರಯಾಣವನ್ನು ಬೆಳೆಸಿದ್ದನು. ಖಿಲ್ಜಿಪುರ (ಪ್ರದೇಶ) ಎಂಬ ಹಳ್ಳಿಯಲ್ಲಿ ತಂಗಿದ್ದನು. ಅಲ್ಲಿ ರಾಣಾಸಾಂಗನ ರಾಜ ದೂತರಿಗೆ ಗೌರವಪೂರ್ವಕ ಬಹುಮಾನಗಳನ್ನು ಕೊಟ್ಟು ಕಳುಹಿಸಿದನು. ಸುಲ್ತಾನ್ ಮಹಮೂದ್ ಖಿಲ್ಜಿಯು ಸಹ ಯುದ್ಧದ ವಿಚಾರವನ್ನು ಕೈಬಿಟ್ಟು ಮಾಂಡುವಿನತ್ತ ಪ್ರಯಾಣವನ್ನು ಬೆಳೆಸಿದನು. ಅಯಾಜನು ಜನಾನೇರ್ ತಲುಪಿ ಸುಲ್ತಾನ್ ಮುಜಫ್ಫರನನ್ನು ಕಂಡನು. ಬಾದಶಹನು ಆತನನ್ನು ಬಂದರ್‌ದೇವ್ ಎಂಬಲ್ಲಿಗೆ ಹೋಗಲು ಆಜ್ಞಾಪಿಸಿದನು. ಅಲ್ಲಿ ಆತನು ತನ್ನೆಲ್ಲ ಸೈನ್ಯದ ವ್ಯವಸ್ಥೆಯನ್ನು ಸರಿಪಡಿಸಬೇಕಾಗಿತ್ತು. ಆ ಎಲ್ಲ ಕೆಲಸವನ್ನು ಪೂರ್ಣಗೊಳಿಸಿ ಮಳೆಗಾಲದ ನಂತರ ಬಂದು ಕಾಣಲು ಹೇಳಿದನು.

ಅಯಾಜನ ಸಂದೇಶ ರಾಣಾಸಾಂಗನಿಗೆ :

ಬೇರೆ ಅಮೀರರು ಬಾದಶಹನ ಹತ್ತಿರಕ್ಕೆ ಬಂದು ಮಾತುಕಥೆ ನಡೆಸಿದರು. ಮಳೆಗಾಲದ ನಂತರ ಸ್ವತಃ ಬಾದಶಹರೇ ರಾಣಾಸಾಂಗನ ಮೇಲೆ ಯುದ್ಧ ಮಾಡಬೇಕೆಂದು ಆ ಸುತ್ತ ಮುತ್ತಲಿನ ಎಲ್ಲ ದಂಗೆ ಕೋರರನ್ನು ಅಡಗಿಸಿಬೇಕೆಂದು ತೀರ್ಮಾನಿಸಲಾಯಿತು. ಮಲಿಕ್ ಅಯಾಜನಿಗೆ ಈ ತೀರ್ಮಾನಗಳ ಬಗ್ಗೆ ಸುದ್ಧಿ ತಿಳಿದು ರಾಣಾಸಾಂಗನಿಗೆ ಒಂದು ಸಂದೇಶವನ್ನು ಕಳುಹಿಸಿದನು. "ನಿಮಗೆ ತಿಳಿದಿರುವಂತೆ ನಮ್ಮಿಬ್ಬರಲ್ಲೂ ಈಗ ಶಾಂತವಾತಾವರಣ ಉಂಟಾಗಿದೆ. ಈಗ ಇಬ್ಬರೂ ಸ್ನೇಹದಿಂದಿರಬೇಕಾದ್ದು ನಮ್ಮ ಆದ್ಯ ಕರ್ತವ್ಯವಾಗಿದೆ. ತಮಗೂ ಗೊತ್ತಿರುವಂತೆ ನಿಮ್ಮ ಮೇಲೆ ಯುದ್ಧಕ್ಕೆ ಬಂದ ಎಲ್ಲ ಅಮೀರರು ಯುದ್ಧವಾಡದೇ ಹಿಂದೆ ಸರಿದಿದ್ದಾರೆ. ವಿಚಾರವು ಬಾದಶಹರಿಗೆ ಒಪ್ಪಿಗೆಯಾಗಿಲ್ಲ. ಆದ್ದರಿಂದ ಬಾದಶಹರ ಇಚ್ಛೆ ಏನೆಂದರೆ– ಅವರು ಸ್ವತಃ ನಿಮ್ಮ ರಾಜ್ಯದ ಮೇಲೆ ಸೈನಿಕ ಕಾರ್ಯಾಚರಣೆಯನ್ನು ನಡೆಯಿಸಿ ತಪ್ಪಿತಸ್ಥರನ್ನು ಮತ್ತು ದಂಗೆಕೋರರನ್ನು ನಾಶಪಡಿಸಬೇಕೆಂಬುದೇ ಆಗಿದೆ. ಈ ದೃಷ್ಟಿಯಿಂದ ತಾವು ತಮ್ಮ ಮಗನೊಂದಿಗೆ ಬಾದಶಹರಿಗೆ ಸಲ್ಲಬೇಕಾಗಿರುವ ಕಪ್ಪ-ಕಾಣಿಕೆಗಳನ್ನು ಸಾಧ್ಯವಾದಷ್ಟು ಬೇಗ ತಲುಪಿಸುವುದು ಸೂಕ್ತವಾಗಿದೆ. ಇದರಿಂದ ಬಾದಶಹರ ಕೋಪ ತಣ್ಣಗಾಗಬಹುದು. ನೀವೂ ಸುರಕ್ಷಿತರಾಗಿರಬಹುದು.

ರಾಣಾಸಾಂಗನ ಕೊಡುಗೆ :

ಹಿಜರಿ-೯೨೮-ಮೊಹರಂ ತಿಂಗಳಲ್ಲಿ ಸುಲ್ತಾನ್ ಮುಜಫ್ಫರನು ಜನಾನೇರ್‌ನಿಂದ ಅಹಮದಾಬಾದಿಗೆ ಬಂದನು. ಜಯಪುರದ ಮೇಲೆ ಆಕ್ರಮಣವನ್ನು ನಡೆಸಲು ಸೈನ್ಯ ಸಂಗ್ರಹದಲ್ಲಿ ತೊಡಗಿದನು. ಅಲ್ಲಿಯೇ ಕೆಲ ಕಾಲ ತಂಗಿದನು. ಪ್ರಯಾಣದ ಎಲ್ಲ ಸಾಮಾನುಗಳನ್ನು ಸರಿಪಡಿಸಿಕೊಂಡನು. ಬಾದಶಹನ ಪ್ರದೇಶದಲ್ಲಿ ಸಾಕಷ್ಟು ಸೈನ್ಯದ ಜಮಾವಣೆಯನ್ನು ಮಾಡಿಕೊಳ್ಳಲು ಮರುದಿನ ನಿಂತನು. ಈ ಮಧ್ಯ ಬಾದಶಹನಿಗೆ ಸುದ್ದಿ ತಿಳಿದಿದ್ದೇನೆಂದರೆ-ರಾಣಾಸಾಂಗನು ತನ್ನ ಮಗನೊಂದಿಗೆ ಬಹಳ ಬೆಲೆ ಬಾಳುವ ಕೊಡುಗೆಗಳು, ಬಹುಮಾನಗಳೊಂದಿಗೆ ಬಾದಶಹನ ಬಳಿಗೆ ಕಳುಹಿಸಿದ್ದಾನೆಂದು ತಿಳಿಯಿತು. ಕೆಲವು ದಿನಗಳ ನಂತರ ರಾಣಾಸಾಂಗನ ಹಿರಿಯ ಮಗನು ಬಾದಶಹನ ಸೇವೆಯಲ್ಲಿ ಹಾಜರಾದನು. ಆತನು ತಾನು ತಂದಿದ್ದ ಎಲ್ಲ ಕೊಡುಗೆಗಳನ್ನು ಬಾದಶಹನಿಗೆ ಅರ್ಪಿಸಿದನು. ಬಾದಶಹನು ರಾಣಾಸಾಂಗನ ತಪ್ಪುಗಳನ್ನು ಕ್ಷಮಿಸಿದನು. ರಾಣಾನ ಮಗನಿಗೆ ಗೌರವ ಪೂರ್ಣ ಉಡುಗೊರೆಗಳನ್ನು ನೀಡಿದನು. ಅವರ ಮೇಲಿನ ಯುದ್ಧದ ಚಿಂತನೆಯನ್ನು ಕೈಬಿಟ್ಟನು.

ಪ್ರವಾಸ ಮತ್ತು ಬೇಟೆ :

ಈ ಎಲ್ಲ ಘಟನೆಗಳ ನಂತರ ಬಾದಶಹನು ಪ್ರವಾಸ ಮತ್ತು ಬೇಟೆಗಳಂತಹ ಮನರಂಜನಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿದನು. ಅಹಮದಾಬಾದಿಗೆ ಬಂದು ಮತ್ತೊಮ್ಮೆ ರಾಣಾಸಾಂಗನ ಮಗನಿಗೆ ಬಹುಮಾನಗಳನ್ನು ನೀಡಿ ಆತನನ್ನು ತನ್ನ ರಾಜಧಾನಿಗೆ ಹೋಗಲು ಅನುಮತಿ ಇತ್ತನು. ತಾನು ಸ್ವತಃ ಸರ್‌ಕಚ್ಛ್ ಪ್ರದೇಶದತ್ತ ಪ್ರಯಾಣವನ್ನು ಬೆಳೆಸಿದನು.

ಅಯಾಜ್‌ಖಾನ್ ಸುಲ್ತಾನಿಯ ಮರಣ :

ಇದೇ ವರ್ಷ ಅಯಾಜಖಾನ ಸುಲ್ತಾನಿ ಎಂಬುವನು ಸುಲ್ತಾನ್ ಮುಜಫರಶಾಹನ ವಿಶೇಷ ವ್ಯಕ್ತಿಗಳಲ್ಲಿ ಒಬ್ಬನಾಗಿದ್ದವನು. ಹಾಗೂ ಬಾದಶಹನ ಅಧೀನತೆಯಲ್ಲಿ ಪ್ರಾಮಾಣಿಕನೆನಿಸಿದ್ದವನ ಮರಣವಾಯಿತು. ಇದರಿಂದ ಬಾದಶಹನು ತುಂಬಾ ದುಃಖಿತನಾದನು. ಅಯಾಜನ ಜಾಗೀರಿಯನ್ನು ಆತನ ಮಗನಿಗೆ ಕೊಟ್ಟು ತಂದೆಯ ಸ್ಥಾನದಲ್ಲಿ ಆತನನ್ನು ನೇಮಕ ಮಾಡಿದನು.

ದಂಗೆಕೋರರ ದಮನ :

ಹಿಜರಿ ೯೩೦ರಲ್ಲಿ ಸುಲ್ತಾನ್ ಮುಜಫ್ಫರನು ದಂಗೆಕೋರರನ್ನು, ಪಿತೂರಿಗಾರರನ್ನು ಅಡಗಿಸಲು ಜನಾನೇರ್‌ನಿಂದ ಪ್ರಯಾಣವನ್ನು ಬೆಳೆಸಿದನು. ಮೆಹರಾಸಾ ಮತ್ತು ಹರ್‌ಸೋಲ್‌ಗಳಲ್ಲಿ ಕೆಲಕಾಲ ತಂಗಿದನು. ಮೆಹರಾಸಾ ಕೋಟೆಯನ್ನು ಬಲಪಡಿಸಿದನು.

ನಂತರ ಅಹಮದಾಬಾದಿಗೆ ಹಿಂತಿರುಗಿದನು. ದಾರಿಯಲ್ಲಿ ಬಾದಶಹನ ಪ್ರೀತಿಪಾತ್ರಳಾದ ಹೆಂಡತಿಯ ಮರಣವಾಯಿತು. ಈ ದಾರುಣ ಪರಿಸ್ಥಿತಿಯಿಂದ ಬಾದಶಹ ಮತ್ತು ಆತನ ಮಕ್ಕಳು ಬಹಳ ದುಃಖಿತರಾದರು. ಸಾಮ್ರಾಜ್ಞಿಯ ಸಮಾಧಿಗೆ ಹೋಗಿ ಅಲ್ಲಿ ನಡೆಸಬೇಕಾಗಿದ್ದ ಶಾಸ್ತ್ರೋಕ್ತ ಕ್ರಿಯೆಗಳನ್ನು ಪೂರ್ಣಗೊಳಿಸಿದರು. ಈ ದುಃಖದೊಂದಿಗೆ ಬಾದಶಹನು ಅಹಮದಾಬಾದಿಗೆ ಬಂದನು.

ಸಾಮ್ರಾಜ್ಞಿಯ ಮರಣ :

ಸಾಮ್ರಾಜ್ಞಿಯ ಮರಣದಿಂದಾಗಿ ಬಾದಶಹನಿಗೆ ತುಂಬಾ ನೋವುಂಟಾಗಿತ್ತು. ಆದರೂ ಸಹನೆಯನ್ನು ಕಳೆದುಕೊಂಡಿರಲಿಲ್ಲ. ಖುದಾವಂದ್‌ಖಾನನು ತನ್ನ ಬುದ್ಧಿವಂತಿಕೆ, ಚತುರತೆಗೆ ಬಹಳ ಹೆಸರನ್ನು ಗಳಿಸಿದ್ದನು. ಈತನು ಬಾದಶಹನ ಸೇವೆಯಲ್ಲಿ ಹಾಜರಾದನು. ಆತನು ಬಾದಶಹನ ಮನಸ್ಸಿಗೆ ಸಮಾಧಾನವನ್ನು ತುಂಬುತ್ತಿದ್ದನು. ಬಹಳ ಮಾರ್ಮಿಕವಾದ ಹೃದಯಸ್ಪರ್ಶಿ ಭಾಷಣವನ್ನು ನೀಡಿದನು. ಈ ಮಾತುಗಳಿಂದಾಗಿ ಬಾದಶಹನ ಹೃದಯವು ಸ್ವಲ್ಪ ಹಗುರವಾಯಿತು.

ಮಹಮ್ಮದಾಬಾದ್ ಜನೇರ್‌ಗಳ ಪ್ರಯಾಣ :

ಆ ದಿನಗಳಲ್ಲಿ ಧಾರಾಕಾರ ಮಳೆಯು ಸುರಿಯುತಿತ್ತು. ಖುದಾವಂದಖಾನನು ಬಾದಶಹನಿಗೆ ಮಹಮ್ಮದಾಬಾದ್ ಮತ್ತು ಜನೇರ್‌ಗಳ ಕಡೆ ಪ್ರಯಾಣ ಮಾಡಿ ಬರಲು ಅನುಮತಿಯನ್ನಿತ್ತನು. ಈ ಸಲಹೆಯ ಮೇರೆಗೆ ಬಾದಶಹನು ಪ್ರವಾಸವನ್ನು ಕೈಗೊಂಡನು.

ಆಲಂ ಖಾನ್‌ಬಿನ್ ಸಿಕಂದರ್ ಲೋಧಿಯ ಪ್ರಾರ್ಥನೆ :

ಒಂದು ದಿನ ದಿಲ್ಲಿಯ ಬಾದಶಹನಾದ ಆಲಂ ಖಾನ ಬಿನ್ ಸಿಕಂದರ ಲೋಧಿಖಾನನು ಸುಲ್ತಾನ್ ಮುಜಫ್ಫರನನ್ನು ಕುರಿತು ಹೀಗೆಂದನು–"ಇಬ್ರಾಹಿಂ ಶಾಹ ಬಿನ್ ಸುಲ್ತಾನ್ ಸಿಕಂದರ ಲೋಧಿಯು ದಿಲ್ಲಿಯಲ್ಲಿ ಹಿಂಸಾತ್ಮಕ ಕಾರ್ಯಾಚರಣೆಗಳನ್ನು ಅತ್ಯಧಿಕವಾಗಿ ನಡೆಸುತ್ತಿದ್ದಾನೆ. ಬಹಳ ದೊಡ್ಡ ದೊಡ್ಡ ವಿದ್ವಾಂಸರನ್ನು, ಅಮೀರರನ್ನೂ ವಿನಾಕಾರಣವಾಗಿ ಕೊಲೆಗೈದಿದ್ದಾನೆ. ಉಳಿದಿರುವವರನ್ನು ಬೆದರಿಸುತ್ತಿದ್ದಾನೆ. ಅವರು ನನಗೆ ಅನೇಕ ಪತ್ರಗಳನ್ನು ಬರೆದು ಸಹಾಯವನ್ನು ಬೇಡುತ್ತಿದ್ದಾರೆ. ನನ್ನನ್ನು ಅವರಲ್ಲಿಗೆ ಕರೆದಿದ್ದಾರೆ. ಈ ವಿಚಾರದಲ್ಲಿ ನಿಮ್ಮ ಆಧಾರವೇ ನನಗೆ ಮುಖ್ಯವಾಗಿದೆ. ನಾನು ಬಹಳ ಕಾಲದಿಂದ ನಿಮ್ಮ ಸೇವೆಯಲ್ಲಿ ನಿರತನಾಗಿರುತ್ತೇನೆ. ಈ ನನ್ನ ಸಹಾಯ ಮಾಡುವ ಕಾಲ ಒದಗಿ ಬಂದಿದೆ. ನನ್ನ ಮೇಲೆ ನಿಮ್ಮ ಕೃಪೆ ಆಗಬೇಕೆಂದು ನಿಮ್ಮಲ್ಲಿ ಪ್ರಾರ್ಥಿಸುತ್ತೇನೆ. ತಾವು ಯಾವುದಾದರೊಂದು ಉಪಾಯವನ್ನು ಮಾಡಿ ನನ್ನ ವಂಶಪಾರಂಪರ್ಯ ಹಕ್ಕು

ನನಗೆ ಸಿಗುವಂತಾಗಬೇಕು. ಸುಲ್ತಾನ್ ಮುಜಫ್ಫರನು ಈತನ ಪ್ರಾರ್ಥನೆಯನ್ನು ಸ್ವೀಕರಿಸಿದನು. ಆತನಿಗೆ ಅಪಾರವಾದ ಸಂಪತ್ತನ್ನು ನೀಡಿ ಇಬ್ರಾಹಿಮಶಾಹನೊಡನೆ ಯುದ್ಧ ಮಾಡಲು ಹೇಳಿ ಕಳುಹಿಸಿದನು. ಆಲಂಖಾನನ ವಿಷಯವನ್ನು ದೆಹಲಿ ಬಾದಶಹರುಗಳ ಪುಟಗಳಲ್ಲಿ ಬರೆಯಲ್ಪಟ್ಟಿವೆ.

ಷಹಜಾದ (ರಾಜಕುಮಾರ) ಬಹಾದೂರ್‌ಖಾನನ ಕ್ರೋಧ :

ಹಿಜರಿ ೯೩೧ರಲ್ಲಿ ಸುಲ್ತಾನ್ ಮುಜಫ್ಫರನು ಜನಾನೇರ್‌ನಿಂದ ಐದರ್‌ಕೋಟೆಗೆ ಬಂದನು. ದಾರಿಯಲ್ಲಿ ಶಹಜಾದ ಬಹದೂರಖಾನನು ಬಾದಶಹನಿಗೆ ತನ್ನ ಆದಾಯದಲ್ಲಿ ಕಡಿಮೆಯಾಗಿರುವುದೂ, ಖರ್ಚಿನಲ್ಲಿ ಹೆಚ್ಚಳವಾಗಿರುವುದನ್ನು ತಿಳಿಸಿದನು. ಅವನ ಉದ್ದೇಶವೇನೆಂದರೆ ಆತನ ಜೇಬಿನ ಖರ್ಚನ್ನು ಆತನ ಅಣ್ಣನಾದ ಸಿಕಂದರನಷ್ಟೆ ಹೆಚ್ಚಿಸಬೇಕೆಂಬುದಾಗಿತ್ತು. ಬಾದಶಹನು ಅವನ ಮಾತನ್ನು ಒಪ್ಪಲಿಲ್ಲ. ಇದರಿಂದಾಗಿ ಬಹಾದೂರಖಾನನು ತುಂಬಾ ದುಃಖಿತನಾದನು. ಆತನು ಬಾದಶಹರಿಗೆ ಏನನ್ನೂ ತಿಳಿಸದೆ ಅಹಮದಾಬಾದಿಗೆ ಬಂದನು. ಅಲ್ಲಿಂದ ರಾಜಾಮಲ್ಲನ ಪ್ರದೇಶಗಳಲ್ಲಿ ಪ್ರವೇಶಿಸಿದನು.

ಷಹಜಾದನು ಚಿತ್ತೋರಿನಲ್ಲಿ :

ರಾಜಮಲ್ಲನು ಷಹಜಾದನು ಬರುವಿಕೆಯನ್ನು ತನ್ನ ಸೌಭಾಗ್ಯವೆಂದೇ ತಿಳಿದನು. ಆತನನ್ನು ಬಹಳ ಗೌರವದಿಂದ ಸ್ವಾಗತಿಸಿದನು. ನಂತರ ಬಹಾದೂರಖಾನನು ಚಿತ್ತೋರಿಗೆ ಬಂದನು. ಇಲ್ಲಿ ರಾಣಾಸಾಂಗನು ಬಹಳ ಗೌರವದಿಂದ ಬರಮಾಡಿಕೊಂಡನು. ಅನೇಕ ಬಹುಮಾನ ಉಡುಗೊರೆಗಳನ್ನು ಕೊಟ್ಟು ಈ ದೇಹ ನಿಮ್ಮ ಸೇವೆಗೆ ಮೀಸಲಾಗಿದೆಯೆಂದು ಹೇಳಿದನು. ಷಹಜಾದನು ರಾಣಾನಿಗೆ ಬಹಳವಾಗಿ ಹೊಗಳಿದನು. ಆದರೆ ತನ್ನ ರಾಜ್ಯಕ್ಕಾಗಿ ಆತನಲ್ಲಿ ಏನನ್ನೂ ಬೇಡಲಿಲ್ಲ.

ದಿಲ್ಲಿಯಲ್ಲಿ :

ನಂತರ ಬಹಾದೂರಖಾನನು ಖ್ವಾಜಾಮೊಯಿನುದ್ದೀನ್ ಹಸನ್ ಸಂಜರಿಯವರ ಸಮಾಧಿಗೆ ಬಂದು ಪ್ರಾರ್ಥನೆಯನ್ನು ಸಲ್ಲಿಸಿ ಅಲ್ಲಿಂದ ಮೇವಾಡ ತಲುಪಿದನು. ಹಸನ್ ಮೇವಾತಿಯು ಆತನನ್ನು ಸ್ವಾಗತಿಸಿದನು. ಮೇವಾಡದಿಂದ ಷಹಜಾದನು ದಿಲ್ಲಿಯತ್ತ ಹೊರಟನು. ಅಕಸ್ಮಾತಾಗಿ ಆ ದಿನಗಳಲ್ಲಿ ಪ್ರಸಿದ್ಧ ಮೊಗಲ ವಂಶದ ಬಾದಶಹ ಹಜೀರುದ್ದೀನಬಾಬರನು ಹಿಂದೂಸ್ಥಾನವನ್ನು ಗೆಲ್ಲಲು ದೆಹಲಿಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬಂದು ನೆಲೆಸಿದ್ದನು. ಇಬ್ರಾಹಿಮಶಾಹನಿಗೆ ಬಹಾದೂರಖಾನನ ಬರುವಿಕೆಯ ಸಮಾಚಾರವು ಸಿಕ್ಕಿ, ಆತನು ಬಹಳ ಸಂತೋಷಪಟ್ಟನು. ಆತನನ್ನು ಬಹಳ ಗೌರವದಿಂದ ಬರಮಾಡಿಕೊಂಡನು.

ಷಹಜಾದನ ಕೀರ್ತಿ :

ಒಂದು ದಿನ ಷಹಜಾದನು ಗುಜರಾತಿ ನವಯುವಕರನ್ನು ಸಂಘಟಿಸಿಕೊಂಡು ಆಫ್‌ಘನ್ನ ಸಹಾಯಕ್ಕೆಂದು ಮೊಗಲರ ವಿರುದ್ಧ ಯುದ್ಧ ಮೈದಾನದಲ್ಲಿ ತನ್ನ ಸಾಹಸವನ್ನು ತೋರಿದನು. ಆಫ್‌ಘಾನಿ ಸರದಾರರು ಇಬ್ರಾಹಿಂಲೋಧಿಯಿಂದ ಬೇಸತ್ತಿದ್ದರು. ಅವರು ಇಬ್ರಾಹಿಮನನ್ನು ಅಧಿಕಾರ ಗದ್ದುಗೆಯಿಂದ ಇಳಿಸಿ ಬಹಾದುರ್‌ಖಾನನಿಗೆ ಅಧಿಕಾರದ ಲಗಾಮನ್ನು ಕೊಡಲು ಸಮ್ಮತಿಸಿದರು. ಇಬ್ರಾಹಿಂ ಲೋಧಿಗೆ ಈ ವಿಚಾರವು ತಿಳಿಯಿತು. ಆತನು ಷಹಜಾದ ಬಹಾದೂರ್‌ಖಾನನನ್ನು ಅಮೀರರ ವಶಕ್ಕೆ ಬಿಟ್ಟು ತಾನು ಸ್ವತಃ ಜೌನ್‌ಪುರಕ್ಕೆ ತೆರಳಿದನು.

ತಂದೆಯ ಪ್ರೇಮ :

ಸುಲ್ತಾನ್ ಮುಜಫರನಿಗೆ ಸುದ್ದಿ ತಿಳಿದಿದ್ದೇನೆಂದರೆ–ಷಹಜಾದ ಬಹದೂರಖಾನನು ದಿಲ್ಲಿಯಲ್ಲಿದ್ದಾನೆಂಬುದು ಜಹೀರುದ್ದೀನ್ ಬಾಬರನು ತನ್ನ ಸೈನ್ಯದೊಂದಿಗೆ ದಿಲ್ಲಿಯ ಪ್ರದೇಶಗಳಲ್ಲಿದ್ದಾನೆಂಬುದೂ ತಿಳಿಯಿತು. ಈ ವಿಚಾರವನ್ನು ಕೇಳಿದ ಮುಜಫರಖಾನನು ಗಾಬರಿಗೊಂಡನು. ಮಗನ ದುಃಖದಲ್ಲಿ ಬಾದಶಹನು ತುಂಬಾ ಚಿಂತಿತನಾಗಿದ್ದನು. ಆತನು ಖುದಾವಂದಖಾನನಿಗೆ ಹೇಳಿದ್ದೇನೆಂದರೆ–ಮಗನಿಗೆ ಪತ್ರಗಳನ್ನು ಬರೆದು ವಾಪಸ್ಸ್ ಗುಜರಾತಿಗೆ ಬರಲು ತಿಳಿಸಿದನು.

ಗುಜರಾತಿನಲ್ಲಿ ಬರಗಾಲ :

ಆ ಕಾಲದಲ್ಲಿ ಗುಜರಾತಿನಲ್ಲಿ ಬಹಳ ದೊಡ್ಡ ಬರಗಾಲ ಕಾಣಿಸಿಕೊಂಡಿತು. ಒಂದೊಂದು ಕಾಳಿಗೂ ಜನ ಬೇಡತೊಡಗಿದರು. ಬಾದಶಹನು ಆ ದಿನಗಳಲ್ಲಿ ಭಗವಂತನಲ್ಲಿ ಪ್ರಾರ್ಥನೆಯನ್ನು ಸಲ್ಲಿಸುತ್ತಾ 'ಕುರಾನ್' ಪಠಣ ಮಾಡಿ ಮುಗಿಸಿದನು. ಅಲ್ಲಾಹನಲ್ಲಿ ಈ ಕಷ್ಟ ದೂರ ಮಾಡಲು ಬೇಡಿಕೊಂಡನು. ಅಲ್ಲಾಹನು ಆತನ ಪ್ರಾರ್ಥನೆಯನ್ನು ಮನ್ನಿಸಿ ಕಷ್ಟವನ್ನು ದೂರ ಮಾಡಿದನು.

ಸುಲ್ತಾನ್ ಮುಜಫ್ಫರನ ಕಾಯಿಲೆ :

ಅದೇ ಕಾಲದಲ್ಲಿ ಸುಲ್ತಾನ್‌ನು ಕಾಯಿಲೆ ಬಿದ್ದನು. ಎಷ್ಟೋ ಚಿಕಿತ್ಸೆ ಮಾಡಿದರೂ ಕಾಯಿಲೆಯೂ ದಿನೇ ದಿನೇ ಹೆಚ್ಚಾಗುತ್ತಲೇ ಇತ್ತು. ಒಂದು ದಿನ ಸುಲ್ತಾನ್ ಮುಜಫ್ಫರನಿಗೆ ತನ್ನ ಮಗ ಬಹಾದೂರಖಾನನನ್ನು ನೆನಪಿಸಿಕೊಂಡು ಬಹಳ ಹೊತ್ತಿನ ತನಕ ಅತ್ತನು. ಅದೇ ಸಮಯದಲ್ಲಿ ಒಬ್ಬ ವ್ಯಕ್ತಿಯು ಬಾದಶಹನ ಹತ್ತಿರ ಬಂದು, ಈ ಸಂದರ್ಭದಲ್ಲಿ ಗುಜರಾತಿ ಸೈನ್ಯವು ಎರಡು ಭಾಗವಾಗಿದೆ. ಒಂದು ಭಾಗ ಷಹಜಾದ ಸಿಕಂದರನ ಪಕ್ಷದಲ್ಲಿದ್ದರೆ ಮತ್ತೊಂದು ಭಾಗ ಷಹಜಾದ ಲತೀಫನ ಪಕ್ಷದಲ್ಲಿದೆ ಎಂದು ತಿಳಿಸಿದನು.

ಬಹಾದೂರ್‌ಖಾನನ ನೆನಪು :

ಈ ವಿಷಯದ ಉತ್ತರವಾಗಿ ಸುಲ್ತಾನ್ ಮುಜಫ್ಫರನು ಆ ವ್ಯಕ್ತಿಗೆ ಕೇಳಿದನು. ಏನು? ಷಹಜಾದ ಬಹದೂರ್‌ಖಾನನಿಂದ ಏನಾದರೂ ಸಮಾಚಾರ ಸಿಕ್ಕಿತೆ? ಈ ಪ್ರಶ್ನೆಯಿಂದ ಎಲ್ಲರೂ ತಿಳಿದಿದ್ದೇನೆಂದರೆ–ಬಾದಶಹರು ಬಹಾದೂರಖಾನನನ್ನು ತನ್ನ ಉತ್ತರಾಧಿಕಾರಿಯನ್ನಾಗಿ ನೇಮಿಸಬೇಕೆಂದಿರುವರು ಎಂದರು.

ಷಹಜಾದ ಸಿಕಂದರನಿಗೆ ಉಪದೇಶ :

ಹಿಜರಿ ೯೩೨ ಜಮಾದಿಲ್‌ಅವ್ವಲ್ ತಿಂಗಳ ಎರಡನೇ ತಾರೀಖಿನಂದು (ಅಂದು ಶುಕ್ರವಾರ) ಬಾದಶಹನು ಷಹಜಾದ ಸಿಕಂದರನನ್ನು ಹತ್ತಿರ ಕರೆದು ಆತನಿಗೆ ತನ್ನ ತಮ್ಮಂದಿರ ಬಗ್ಗೆ ಉಪದೇಶಿಸಿ ಸಿಕಂದರನನ್ನು ಕಳುಹಿಸಿದನು. ತನ್ನ ಕೊಠಡಿಯಲ್ಲಿ ಹೋದನು. ಸ್ವಲ್ಪ ಹೊತ್ತಿನ ನಂತರ ಆಚೆ ಬಂದು ತನ್ನ ಜಾಗದಲ್ಲಿ ಕುಳಿತನು. ಸ್ವಲ್ಪ ಸಮಯದ ನಂತರ ಶುಕ್ರವಾರದ ನಮಾಜಿನ ಅಜಾನ್ ಶಬ್ದವು ಕಿವಿಗೆ ಬಿದ್ದಿತು. ನನಗೆ ಮಸೀದಿಗೆ ಹೋಗಿ ನಮಾಜ್ ಪ್ರಾರ್ಥನೆಯನ್ನು ಸಲ್ಲಿಸುವಷ್ಟು ಶಕ್ತಿ ಈಗ ನನ್ನ ಶರೀರದಲ್ಲಿಲ್ಲ. ನೀವೆಲ್ಲರೂ ಮಸೀದಿಗೆ ಹೋಗಿ ನಮಾಜ್ ಸಲ್ಲಿಸಿರಿ ಎಂದನು.

ಮರಣ :

ಅಲ್ಲಿದ್ದವರೆಲ್ಲರೂ ನಮಾಜ್ ಪ್ರಾರ್ಥನೆಯನ್ನು ಸಲ್ಲಿಸಲು ಮಸೀದಿಗೆ ತೆರಳಿದರು. ಬಾದಶಹನು ಇದ್ದಲ್ಲಿಯೇ ನಮಾಜ್ ಮಾಡಿದನು. ನಂತರ ವಿಶ್ರಾಂತಿಯನ್ನು ಪಡೆಯಲು ಮಲಗಿದನು. ಮಲಗಿ ಸ್ವಲ್ಪ ಕಾಲವೂ ಕಳೆದಿರಲಿಲ್ಲ. ಆತನ ಅಂತ್ಯ ಕಾಲವು ಸಮೀಪಿಸಿತು. ಆತನು ಸತ್ತಾಗ ಆತನ ವಯಸ್ಸು ಕೇವಲ ೪೨ ವರ್ಷಗಳು ಮಾತ್ರ . ಮುಜಫ್ಫರ ಸುಲ್ತಾನ್‌ನ ಆಡಳಿತಾಧಿಕಾರದ ಅವಧಿ ೧೪ ವರ್ಷ ೯ ತಿಂಗಳು ಮಾತ್ರ.

ವ್ಯಕ್ತಿತ್ವ :

ಸುಲ್ತಾನ್ ಮುಜಫ್ಫರನು ಬಹಳ ಪ್ರಾಮಾಣಿಕ ಹಾಗೂ ಧಾರ್ಮಿಕ ಶ್ರದ್ಧೆಉಳ್ಳವನಾಗಿದ್ದನೆಂದು ಹೇಳಲಾಗುತ್ತದೆ. ಇಸ್ಲಾಂನ ಷರೀಯತ್ ನಿಯಮಗಳನ್ನು ತಪ್ಪದೇ ಅನುಸರಿಸುತ್ತಿದ್ದನು. ಖುರಾನಿನ ಜೊತೆಯಲ್ಲಿ ಹದೀಸ್ ಗ್ರಂಥಗಳ ಪಠಣ ಮತ್ತು ಪಾಲನೆಯನ್ನು ಸರಿಯಾಗಿ ನಿರ್ವಹಿಸುತ್ತಿದ್ದನು. ಬರವಣಿಗೆಯಲ್ಲಿ ಚಮತ್ಕಾರವೇ ಇತ್ತು. ಪತ್ರ ವ್ಯವಹಾರದಲ್ಲಿ ಒಳ್ಳೆಯ ಜ್ಞಾನವಿತ್ತು. ಈ ವಿಚಾರದಲ್ಲಿ ಮಹಾ ಪ್ರತಿಭಾಶಾಲಿಯಾಗಿದ್ದನು. ಕುರಾನನ್ನು ಬರೆದು ಹಂಚುವ ಪ್ರತಿಭೆ ಇತ್ತು. ಒಂದು ಖುರಾನ ಗ್ರಂಥವನ್ನು ಬರೆದು ಪೂರೈಸಿದ ನಂತರ ಅದನ್ನು ಮೆಕ್ಕಾ ನಗರಕ್ಕೆ ಕಳುಹಿಸಿ, ಪುನಃ ಬೇರೆ ಕುರಾನ್ ಗ್ರಂಥವನ್ನು ಬರೆಯಲು ಪ್ರಾರಂಭಿಸುತ್ತಿದ್ದನು.

ಇರಾನ, ತೂರಾನ್, ರೋಮ್ ಮತ್ತು ಅರಬ್ ದೇಶಗಳ ಮಹಾಜ್ಞಾನಿಗಳೂ, ವಿದ್ವಾಂಸರು ಈತನ ಶಾಸನ ಕಾಲದಲ್ಲಿ ಗುಜರಾತಿಗೆ ಬಂದಿದ್ದರು. ಸುಲ್ತಾನ್ ಮುಜಫ್ಫರನು ಅ ದೇಶಗಳ ಅತಿಥಿಗಳಿಗೆ ಅಪಾರ ಗೌರವಗಳನ್ನು ಸಲ್ಲಿಸುತ್ತಿದನು. ಪ್ರಸಿದ್ಧ ವಿದ್ವಾಂಸ "ಮಮ್ತಾಜ್‌ಖುಶ್‌ನವೀಸ್, ಮುಲ್ಲಾ ಮುಹಮ್ಮದ್‌ಸಯಾದಿಶ್" ರವರು ಇದೇ ಬಾದಶಹನ ಆಡಳಿತದ ಕಾಲದಲ್ಲಿ "ಶೇರಾಜಿ"ನಿಂದ ಗುಜರಾತಿಗೆ ಬಂದಿದ್ದರು. ಬಹಳ ಗೌರವದಿಂದ ಇವರನ್ನು ಬಾದಶಹನು ಕಂಡಿದ್ದನು.

■

*

೯. ಸುಲ್ತಾನ್ ಸಿಕಂದರ್ ಬಿನ್ ಸುಲ್ತಾನ್ ಮುಜಫ್ಫರ್‌ಶಾಹ್ ಗುಜರಾತಿ

ಸಹೋದರರಲ್ಲಿ ಒಡಕು :

ಸುಲ್ತಾನ್ ಮುಜಫ್ಫರ್‌ಶಾಹ್‌ನ ಕಾಯಿಲೆಯು ಬೇಗ ಗುಣವಾಗದೆ ಬಹಳ ದಿನಗಳ ತನಕ ನರಳಿಸಿತು. ಆ ಸಂದರ್ಭದಲ್ಲಿ ಆತನ ಮಕ್ಕಳು ಸಿಕಂದರ್‌ಖಾನ್ ಮತ್ತು ಲತೀಫ್‌ಖಾನನಲ್ಲಿ ಒಡಕು ಉಂಟಾಯಿತು. ಇದನ್ನು ಕಂಡ ಅಮೀರರಲ್ಲೂ ಎರಡು ಭಾಗವಾಯಿತು. ಒಂದು ಭಾಗ ಸಿಕಂದರನ ಪಕ್ಷ ವಹಿಸಿದರೆ ಮತ್ತೊಂದು ಲತೀಫ್‌ಖಾನನತ್ತ ಹೋಯಿತು. ಸಿಕಂದರನು ಮುಜಾಫರನ ಹಿರಿಯ ಮಗನಾಗಿದ್ದರಿಂದ ಆತನನ್ನು ತನ್ನ ಉತ್ತರಾಧಿಕಾರಿಯೆಂದು ಘೋಷಿಸಿದ್ದನು. ಈ ಕಾರಣದಿಂದಾಗಿ ಎಲ್ಲ ಹಿರಿಯ ಅಮೀರರಾದ ಅಮಾದುಲ್‌ಮುಲ್ಕ, ಖುದಾವಂದಖಾನ ಮತ್ತು ಫತಹ್‌ಖಾನ ಮುಂತಾದವರೆಲ್ಲರೂ ಸಿಕಂದರನ ಪಕ್ಷದಲ್ಲಿದ್ದರು. ಕೊನೆಗೆ ಲತೀಫನಿಗೆ ಇಲ್ಲಿ ಯಾವ ಅವಕಾಶವೂ ಇಲ್ಲದ್ದರಿಂದ ಆತನು ತನ್ನ ಜಾಗೀರಿಯಾದ ನದರ್‌ಬಾರ್ ಸುಲ್ತಾನ್‌ಪುರಕ್ಕೆ ಹೊರಟು ಹೋದನು.

ಸಿಕಂದರನ ಪಟ್ಟಾಭಿಷೇಕ :

ಸುಲ್ತಾನ್ ಮುಜಫರನ ಮರಣಾನಂತರ ಸಿಕಂದರನು ಸಿಂಹಾಸನದ ಮೇಲೆ ಕುಳಿತನು. ಆತನು ತನ್ನ ತಂದೆಯ ಶವವನ್ನು ಸರ್‌ಕಚ್ಚಗೆ ಕಳುಹಿಸಿದನು. ಸ್ವತಃ ಆ ಕೆಲಸದಲ್ಲಿ ತಾನೇ ನಿಂತು ಮೂರು ದಿನಗಳ ತನಕ ಶಾಸ್ತ್ರೋಕ್ತ ಕಾರ್ಯಗಳನ್ನು ಮುಗಿಸಿದನು.

ಶೇಖ್‌ಚನೋನ ವಿರೋಧ :

ಮೂರನೇ ದಿನ ತನ್ನ ತಂದೆಯ ಮರಣೋತ್ತರ ಕ್ರಿಯೆಗಳಿಂದ ಸಂತುಷ್ಟನಾದ ಸಿಕಂದರನು ಮಹಮ್ಮದಾಬಾದಿಗೆ ಬಂದನು. 'ನತ್ಥೊ' ಎಂಬ ಕಸಬಾದಲ್ಲಿ ತಲುಪಿದ

ಸಿಕಂದರನು ಅಲ್ಲಿಯ ಹಿರಿಯರ ಸಮಾಧಿಗಳಿಗೆ ತನ್ನ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸಿದನು. ಇಲ್ಲಿಗೆ ಬಂದಾಗ ಆತನಿಗೆ ಗೊತ್ತಾದುದೇನೆಂದರೆ ಖುತ್ಬೆ-ಆಲಂ ಸಯ್ಯದ್ ಬುರ್‌ಹಾನುದ್ದೀನ್‌ನ ಮಗ ಶೇಖ್ 'ಚನೋ'ನ ಅಭಿಪ್ರಾಯದಲ್ಲಿ ಬಾದಶಹನ ಪಟ್ಟ ದಿಲ್ಲಿಗೆ ಹೋಗಿರುವ ಬಹಾದುರ್‌ಖಾನನಿಗೆ ಸೇರಬೇಕಾಗಿದೆ ಎಂದನು. ಸಿಕಂದರನು ಶೇಖ್ ಸಾಹೇಬರಿಗೆ ಸಿಕ್ಕಾಪಟ್ಟೆ ಬೈದನು.

ಅನವಶ್ಯಕ ರಿಯಾಯ್ತಿಗಳು :

ಇದಾದ ನಂತರ ಬಾದಶಹ ಸಿಕಂದರನು ಜನಾರ್ನೇರ್ ತಲುಪಿದನು. ಆತನು ತನ್ನ ಆಪ್ತ ಸ್ನೇಹಿತರಿಗೆ ಈತನು ಇನ್ನೂ ಪಟ್ಟಕ್ಕೆ ಕುಳಿತಿರಲಿಲ್ಲದ ಕಾಲದ ಸೇವಕರಿಗೆ ಅನೇಕ ರೀತಿಯ ದೊಡ್ಡ ದೊಡ್ಡ ಬಹುಮಾನಗಳನ್ನು ಜೊತೆಗೆ ಅನವಶ್ಯಕ ವ್ಯಕ್ತಿಗಳಿಗೆ ಜಾಗೀರಗಳನ್ನು ನೀಡಿ ಗೌರವಿಸಿದನು. ಅದಕ್ಕೆ ವಿರುದ್ಧವಾಗಿ ಬಹಳ ಕಾಲದಿಂದ ತಾತಮುತ್ತಾರೆಲ್ಲರೂ ಸಾಮ್ರಾಜ್ಯದ ಸೇವೆಯಲ್ಲಿ ತೊಡಗಿದ್ದವರನ್ನೆಲ್ಲಾ ತಿರಸ್ಕರಿಸಿದ್ದ. ಈ ರೀತಿಯಿಂದಾಗಿ ಹಳೆಯ ಅಮೀರರೆಲ್ಲರಿಗೂ ಕ್ರೋಧವುಂಟಾಯಿತು.

ಬಾದಶಹನೊಂದಿಗೆ ಅವಿಶ್ವಾಸ :

ಅಮಾದುಲ್‌ಮುಲ್ಕ್ ಹಬಶಿ ಎಂಬುವನು ಬಾದಶಹ ಮುಜಫ್ಫರನ ದತ್ತು ಮಗನೂ, ಬಾದಶಹನ ತಾಯಿಯ ಗುಲಾಮನೂ ಆಗಿದ್ದನು. ಆತನು ಸಿಕಂದರನ ನೀತಿಯಿಂದಾಗಿ ತುಂಬಾ ನಿರಾಶನಾಗಿದ್ದನು. ಸಿಕಂದರನಿಂದ ನಿರ್ಲಕ್ಷಿತರು ಆತನಿಗೆ ವಿರುದ್ಧವಾದ ಕಾರ್ಯಗಳಲ್ಲಿ ತೊಡಗಿದರು. ಈ ಕಾರಣಗಳಿಂದಾಗಿ ಪ್ರಜೆಗಳೆಲ್ಲರೂ ಹಾಗೂ ಸೈನಿಕರು ಅಲ್ಲಾನಲ್ಲಿ ಪ್ರಾರ್ಥಿಸುತ್ತಿದ್ದುದೇನೆಂದರೆ, "ಬಹಳ ಬೇಗ ಸಿಕಂದರ ಬಾದಶಹನನ್ನು ಸಿಂಹಾಸನದಿಂದ ಕೆಳಗಿಳಿಸು" ಎಂದು ಎಲ್ಲರೂ ಅವಿಶ್ವಾಸದಿಂದ ವರ್ತಿಸುತ್ತಿದ್ದರು.

ತಪ್ಪು ಕಾರ್ಯ :

ಒಂದು ದಿನ ಸುಲ್ತಾನ್ ಸಿಕಂದರನು ತನ್ನ ದರ್ಬಾರನ್ನು ಸೇರಿಸಿದನು. ತನ್ನ ಎಲ್ಲಾ ಅಮೀರರನ್ನೂ, ಶಾಸಕರನ್ನೂ ಒಟ್ಟಿಗೆ ಸೇರಿಸಿ ಅವರೆಲ್ಲರಿಗೂ ಬಹುಮಾನಗಳೊಂದಿಗೆ ಸಾವಿರದ ಏಳುನೂರು ಕುದುರೆಗಳನ್ನು ಹಂಚಿದನು. ಇದು ಅನವಶ್ಯಕ ಕೊಡುಗೆ ಎನಿಸಿತ್ತು. ಇದರಿಂದಾಗಿ ಜನರು ಇನ್ನೂ ರೊಚ್ಚಿಗೆದ್ದರು. ಸಿಕಂದರನ ತಮ್ಮ ಷಹಜಾದ ಬಹಾದೂರಖಾನನು ಬರಲೆಂದು ಆಶಿಸಿದನು. ನೈಜ ಹಾಗೂ ಯೋಗ್ಯ ಹಕ್ಕುದಾರನೆಂದರೆ, ಬಹಾದೂರ್‌ಖಾನನೇ ಆಗಬಲ್ಲನೆಂಬುದು ಎಲ್ಲರ ಆಶಯವಾಗಿತ್ತು. ಸಿಕಂದರನು ಅಯೋಗ್ಯನೆಂದು ಜನರು ತೀರ್ಮಾನಿಸಿದ್ದರು.

ಷಹಜಾದ ಲತೀಫ್‌ನ ವಿರುದ್ಧ ಹೆಜ್ಜೆ :

ತನ್ನ ವಿರುದ್ಧ ಎಲ್ಲರೂ ಮಾತನಾಡುತ್ತಿರುವುದನ್ನು ಗಮನಿಸಿದ ಸುಲ್ತಾನ್ ಸಿಕಂದರನು ತನ್ನ ತಪ್ಪು ಕಾರ್ಯಗಳಿಂದಾಗಿ ತುಂಬಾ ಚಿಂತಿತನಾದನು. ಇದೇ ಸಂದರ್ಭದಲ್ಲಿ ಬಾದಶಹನಿಗೆ ಸುದ್ದಿ ತಿಳಿದಿದ್ದುದೇನೆಂದರೆ ಸುಲ್ತಾನ್‌ಪುರದ ಜಹಾಗೀರದಾರ ಷಹಜಾದ ಲತೀಫ್‌ನು ಸುಲ್ತಾನ್‌ನಾಗಬೇಕೆಂಬ ದಾವೆಯನ್ನು ಹೂಡುತ್ತಿದ್ದಾನೆಂದು ತಿಳಿಯಿತು. ಬಾದಶಹ ಸಿಕಂದರನು ಮಲಿಕ್ ಲತೀಫ್ ಎಂಬುವವನಿಗೆ "ಷರ್‌ಜಹ್‌ಖಾನಿ"ಎಂಬ ಬಿರುದನ್ನು ಕೊಟ್ಟು ಷಹಜಾದ ಲತೀಫ್‌ನ ವಿರುದ್ಧ ಕಳುಹಿಸಿ ಕೊಟ್ಟನು.

ಮಲಿಕ್ ಲತೀಫ್ ಮತ್ತು ಸಿಪಾಯಿಯ ಕೊಲೆ :

ಮಲಿಕ್ ಲತೀಫ್‌ನ ದರಬಾರ ತಲುಪಿದಾಗ ಅವನಿಗೆ ಅರಿವಾದುದೇನೆಂದರೆ ಷಹಜಾದ ಲತೀಫ್‌ಖಾನನು "ಕೋಹ್‌ಸ್ತಾನ್ ಹೋರ್‌ಗಾ"ನಲ್ಲಿದ್ದಾನೆಂದು ತಿಳಿಯಿತು. ಇದು ಜಯಪುರದ ಕಾಡುಗಳಲ್ಲಿರುವ ಒಂದು ಜಾಗ. ಮಲಿಕ್ ಲತೀಫ್‌ನು ತಕ್ಷಣ ಜಯಪುರದ ಕಾಡಿನತ್ತ ಹೋದನು. ಜಯಪುರದ ರಾಜನು ಮಲಿಕ್ ಲತೀಫ್‌ನೊಡನೆ ಯುದ್ಧ ಮಾಡಿದನು. ಘೋರ ಯುದ್ಧದಲ್ಲಿ ಜಯಪುರದ ರಾಜನ ಗೆಲುವಾಯಿತು. ಈ ಯುದ್ಧದಲ್ಲಿ ಮಲಿಕ್ ಲತೀಫ್ ಮತ್ತು ಇತರೆ ಪ್ರಸಿದ್ಧ ಅಮೀರರು ಕೊಲೆಯಾದರು. ಯುದ್ಧ ಮೈದಾನದಿಂದ ಅವರಿಗೆ ಓಡಿ ಹೋಗುವ ಅವಕಾಶವೇ ಸಿಗಲಿಲ್ಲ. ಹಿಂದಿನಿಂದ ಬಂದ ರಾಜಪೂತರ (೧೭೦೦) ಒಂದು ಸಾವಿರದ ಏಳುನೂರು ಮುಸ್ಲಿಂ ಸಿಪಾಯಿಗಳನ್ನು ಕೊಂದರು.

ಸುಲ್ತಾನ್ ಸಿಕಂದರನ ಕೊಲೆಯ ಪಿತೂರಿ :

ಗುಜರಾತಿಗಳು ತೀರ್ಮಾನಿಸಿದ್ದೇನೆಂದರೆ– ಈ ಸೋಲು ಸಿಕಂದರ ಪತನಕ್ಕೆ ಉತ್ತಮ ಕುರುಹಾಗಿದೆ ಎಂದು. ಇದಾದ ನಂತರ ಸಿಕಂದರನು ಖೈಸರ್‌ಖಾನನಿಗೆ ಒಂದು ವಿಶಾಲವಾದ ಸೈನ್ಯವನ್ನು ಕೊಟ್ಟು ಶತ್ರುಗಳನ್ನು ಅಡಗಿಸಲು ಕಳುಹಿಸಿದನು. ಇದೇ ಕಾಲದಲ್ಲಿ ಅಮೀರರ ಒಂದು ಗುಂಪು ಅಮಾದುಲ್‌ಮುಲ್ಕ್‌ನಿಗೆ ತಿಳಿಸಿದ್ದೇನೆಂದರೆ – ಸುಲ್ತಾನ್ ಸಿಕಂದರನು ನಿನಗೆ ಕೊಲೆ ಮಾಡಿಸಲು ಯುದ್ಧಕ್ಕೆ ಕಳುಹಿಸುತ್ತಿದ್ದಾನೆಂದು ತಿಳಿಸಿದರು. ನಾವು ನಿನ್ನ ಆಪ್ತರಾಗಿರುವುದರಿಂದ ಈ ಗುಟ್ಟನ್ನು ನಿನಗೆ ತಿಳಿಸುತ್ತಿದ್ದೇನೆಂದು ಹೇಳಿದರು. ಈ ಸುದ್ದಿಯನ್ನು ತಿಳಿದ ಅಮಾದುಲ್‌ಮುಲ್ಕನು ತೀರ್ಮಾನಿಸಿದ್ದೇನೆಂದರೆ ಏನಾದರೂ ಮಾಡಿ ಸುಲ್ತಾನ್ ಸಿಕಂದರನನ್ನು ಕೊಲೆಗೈದು ಸುಲ್ತಾನ್ ಮುಜಫರನ ಬೇರೆ ಯಾವ ಮಗನನ್ನಾದರೂ ಬಾದಶಹನನ್ನಾಗಿ ನೇಮಿಸಿ ಎಲ್ಲ ಶಾಸನಾಧಿಕಾರವನ್ನು ತನ್ನ ಕೈಯಲ್ಲಿ ತೆಗೆದುಕೊಳ್ಳಬೇಕೆಂದು ತೀರ್ಮಾನಿಸಿ ಕೊಂಡನು.

ಬಾದಶಹನ ಮುಗ್ಧತೆ :

ಒಂದು ದಿನ ಸುಲ್ತಾನ್ ಸಿಕಂದರನು ಪ್ರವಾಸ ಮತ್ತು ಸಂತೋಷ ಕೂಟಕ್ಕೆ

ಹೊರಟನು. ಅಮಾದುಲ್ ಮುಲ್ಕ್‌ನು ಸಹ ತನ್ನ ಸೈನ್ಯವನ್ನು ಸಿದ್ಧಪಡಿಸಿಕೊಂಡನು. ಬಾದಶಹನನ್ನು ಕೊಲ್ಲುವ ಉದ್ದೇಶದಿಂದಲೇ ಆತನ ಹಿಂದೆಯೇ ಪ್ರಯಾಣವನ್ನು ಮಾಡಿದನು. ಆದರೆ ಅದಕ್ಕೆ ತಕ್ಕ ಸಂದರ್ಭವು ಒದಗಲೇ ಇಲ್ಲ. ದಾರಿಯಲ್ಲಿ ಒಬ್ಬ ವ್ಯಕ್ತಿಯು ಸಿಕಂದರನಿಗೆ ಎಲ್ಲಾ ಸಮಾಚಾರವನ್ನು ತಿಳಿಸಿದನು. ಆದರೆ ಬಾದಶಹ ಸಿಕಂದರನಿಗೆ ಆ ವ್ಯಕ್ತಿಯ ಮಾತಿನ ಮೇಲೆ ವಿಶ್ವಾಸ ಉಂಟಾಗಲಿಲ್ಲ. ಇವೆಲ್ಲ ಕೆಟ್ಟ ಜನರಿಂದ ಹರಡಿರುವಂತಹ ಉಹಾಪೋಹವೆಂದು ಉತ್ತರಿಸಿದನು. ಇಂತಹ ಮಾತುಗಳಿಂದ ನಾನು ಅಮೀರರನ್ನು ಹಿಂಸಿಸಲೆಂದು ರಚಿಸಿರುವ ಮಾತುಗಳೆಂದು ತೀರ್ಮಾನಿಸಿಕೊಂಡನು. ಅಮಾದುಲ್‌ಮುಲ್ಕ್‌ನಂತಹ ವಿಶ್ವಾಸಪಾತ್ರ ನಂಬಿಕೆಗೆ ಅರ್ಹ ವ್ಯಕ್ತಿ ನನ್ನನ್ನು ಕೊಲ್ಲುವನೆ ಎಂದು ಪ್ರಶ್ನಿಸಿದನು.

ಚಿಂತೆಯಲ್ಲಿ ಮುಳುಗಿಸುವಂತಹ ಸ್ವಪ್ನ :

ಸಿಕಂದರನು ವ್ಯಕ್ತಿಯ ಮಾತಿಗೆ ಉತ್ತರವನ್ನೇನೋ ಹೀಗೆ ಕೊಟ್ಟರೂ, ತನ್ನ ಮನಸ್ಸಿನಲ್ಲಿ ಕೊಲೆಯ ಅಳುಕು ಇದ್ದೇ ಇತ್ತು. ಆತನು ತನ್ನ ಒಬ್ಬ ಆಪ್ತನೊಂದಿಗೆ ಹೀಗೆ ಹೇಳಿದನು. ಸಾಮಾನ್ಯ ಜನರಲ್ಲಿ ಈ ತೆರನಾದ ಊಹಾಪೋಹಗಳು ಪ್ರಸರಿಸಿದರೆ ಅಂದರೆ ಶಹಜಾದ ಬಹಾದೂರಖಾನನು ಗುಜರಾತನ್ನು ಗೆಲ್ಲಲು ಬರುತ್ತಿದ್ದಾನೆ. ಎಂದಾಗ ನಾನು ಚಿಂತಿತನಾಗಬೇಕೆ? ಎಂದು ಕೇಳಿದನು. ಅಕಸ್ಮಾತಾಗಿ ಅದೇ ದಿನ ರಾತ್ರಿಯಲ್ಲಿ ಆತನಿಗೊಂದು ಸ್ವಪ್ನವಾಯಿತು. ಸ್ವಪ್ನದಲ್ಲಿ "ಸಯ್ಯದ್ ಜಲಾಲ್ ಬುಖಾರಿ, ಷಾಹೆ ಆಲಂ, ಮತ್ತು ಶೇಖ್ ಚನೊರಂತಹ ಪ್ರಸಿದ್ಧ ಸೂಫಿ ಸಂತರನ್ನು ನೋಡಿದನು. ತಂದೆ ಸುಲ್ತಾನ್ ಮುಜಾಫ್ಫರನೂ ಆ ಗುಂಪಿನಲ್ಲಿ ನಿಂತಿರುವಂತೆ ಕಂಡಿತು. ಆತನು– ನನ್ನ ಮಗ ಸುಲ್ತಾನ್ ಸಿಕಂದರನನ್ನು ಸಿಂಹಾಸನದಿಂದ ಕೆಳಗಿಳಿಸಿರಿ ಎಂದನು. ಆಗ ಶೇಖ್‌ಚನೋ ಸಿಕಂದರನಿಗೆ ಹೇಳಿದರು–"ಎದ್ದೇಳು ಇದು ನಿನ್ನ ಜಾಗವಲ್ಲ" ಸಿಂಹಾಸನದ ನೈಜ ಹಕ್ಕುದಾರ ಬಹಾದೂರ್‌ಖಾನ್ ಆಗಿದ್ದಾನೆ" ಎಂದರು.

ಚಿಂತೆಗಳು ಹೆಚ್ಚಾದುವು :

ಬೆಳಗಾಗುತ್ತಲೇ ಸಿಕಂದರನು ನಿದ್ದೆಯಿಂದೆದ್ದು ತನ್ನ ಒಬ್ಬ ಆಪ್ತ ಸ್ನೇಹಿತನನ್ನು ಹತ್ತಿರ ಕರೆದು ರಾತ್ರಿಯ ಕನಸಿನ ಎಲ್ಲಾ ವಿಚಾರವನ್ನು ತಿಳಿಸಿದನು. ಈ ಸ್ವಪ್ನದಿಂದ ಆತನ ಚಿಂತೆ ಇನ್ನೂ ಅಧಿಕವಾಯಿತು. ಆತನ ಹೃದಯದ ಬಡಿತವೂ ಹೆಚ್ಚಾಯಿತು. ಅದನ್ನು ಮರೆಯಲು ಆಟ ಆಡಲು ತೊಡಗಿದನು.

ಅಮಾದುಲ್‌ಮುಲ್ಕ್‌ನು ಸಿಕಂದರನ ಅರಮನೆಯಲ್ಲಿ :

ಬಾದಶಹನ ಈ ಸ್ವಪ್ನದ ಬಗ್ಗೆ ಅನೇಕರು ಅನೇಕ ರೀತಿಯಲ್ಲಿ ಮಾತನಾಡತೊಡಗಿದರು. ಅಂದು ಮಧ್ಯಾಹ್ನದ ಸಮಯ ಸಿಕಂದರನು ತನ್ನ ಅರಮನೆಯ ಪ್ರಾಂಗಣದಲ್ಲಿ

ಊಟವಾದ ನಂತರ ವಿಶ್ರಾಂತಿಯನ್ನು ಪಡೆಯಲು ಹೋದನು. ಎಲ್ಲಾ ಆಪ್ತರು ಅವರವರ ಮನೆಗಳಿಗೆ ಹೋಗಿದ್ದರು. ಹಿಜರಿ ೯೩೨, ಶಾಬಾನ್ ತಿಂಗಳ ೨೯ನೇ ತಾರೀಖು ಅಮಾದುಲ್ ಮುಲ್ಕ್‌ನು ಅರಮನೆಯ ಪ್ರಾಂಗಣಕ್ಕೆ ಬಂದನು. ಆತನೊಂದಿಗೆ ಬಹಾವುಲ್ ಮುಲ್ಕ್‌ದಾವರ್ ಮುಲ್ಕ್, ಸೈಫಖಾನ್, ಒಬ್ಬ ಹಬಶಿ, ಮತ್ತು ಇಬ್ಬರು ತುರ್ಕಿ ಗುಲಾಮರಿದ್ದರು. ಅಮಾದುಲ್ ಮುಲ್ಕ್‌ನು ತನ್ನ ಜೊತೆಯಲ್ಲಿದ್ದವರಿಗೆ ಹೀಗೆಂದನು. "ಈ ಅರಮನೆ ವಿಚಿತ್ರ ಆಶ್ಚರ್ಯಕರವಾದುದ್ದಾಗಿದೆ. ಇದನ್ನು ಸರಿಯಾಗಿ ನೋಡಿ ಎಷ್ಟು ಸುಂದರವಾಗಿ ಈ ಕಟ್ಟಡವು ಕಟ್ಟಲ್ಪಟ್ಟಿದೆ ನೋಡಿ ಎಂದನು.

ನುಸ್ರತಲ್‌ಮುಲ್ಕ್ ಮತ್ತು ಇಬ್ರಾಹಿಂ ಬಿನ್ ಜೌಹರ್‌ರ ಕೊಲೆ :

ಅರಮನೆಯನ್ನು ನೋಡುತ್ತಲೇ ಅಮಾದುಲ್ ಮುಲ್ಕ್ ಮತ್ತು ಅವನೊಡನಿದ್ದ ಸ್ನೇಹಿತರೆಲ್ಲರೂ (ಹೌಸ್) ನೀರಿನ ಕೊಳದ ಹತ್ತಿರ ತಲುಪಿದರು. ಅಲ್ಲಿ ನುಸ್ರತಲ್‌ಮುಲ್ಕ್ ಮತ್ತು ಇಬ್ರಾಹಿಂಬಿನ್ ಜೌಹರ್ ಇಬ್ಬರೂ ಇದ್ದರು. ಅಮಾದುಲ್ ಮುಲ್ಕ್ ಮತ್ತು ಅವನ ಸ್ನೇಹಿತರು ತಮ್ಮ ತಮ್ಮ ಕತ್ತಿಗಳನ್ನು ಹಿರಿದರು. ಮತ್ತು ಅವರನ್ನು ಕೊಲೆ ಮಾಡಲು ಮುಂದಾದರು. ಆ ಇಬ್ಬರೂ ತಮ್ಮ ಪ್ರಾಣಗಳನ್ನು ಉಳಿಸಿಕೊಳ್ಳಲು ಪ್ರಯತ್ನಿಸಿದರು ಪ್ರಯೋಜನವಾಗಲಿಲ್ಲ. ಇಬ್ಬರೂ ಕೊಲೆಯಾದರು.

ಸುಲ್ತಾನ್ ಸಿಕಂದರನ ಕೊಲೆ :

ಇದಾದ ನಂತರ ಅಮಾದುಲ್‌ಮುಲ್ಕ್ ಮತ್ತು ಅವನ ಸ್ನೇಹಿತರು ಬಾದಶಹನು ಮಲಗುವ ಕೋಣೆಗೆ ನುಗ್ಗಿದರು. ಆ ಸಂದರ್ಭದಲ್ಲಿ ಸಯ್ಯದ ಆಲಂ ಉದ್ದೀನ್ ಎಂಬುವನು ಬಾದಶಹನ ಮಂಚದ ಮೇಲೆ ಕುಳಿತಿದ್ದನು. ಅಲೀಂನು ಅಲ್ಲಿಗೆ ಬಂದವರನ್ನು ಕಂಡು ಭಯಭೀತನಾದನು. ಆದರೂ ಆತನು ತನ್ನಲಿದ್ದ ಕತ್ತಿಯನ್ನು ಹಿರಿದು ಬಂದವರ ಮೇಲೆ ಆಕ್ರಮಣವನ್ನು ಮಾಡಿ ಇಬ್ಬರನ್ನು ಗಾಯಗೊಳಿಸಿದನು. ಆದರೂ ಅವನು ಉಳಿಯಲಿಲ್ಲ. ಕೊಲೆಯಾದನು. ಅಮಾದುಲ್ ಮುಲ್ಕ್ ಮತ್ತು ಅವನ ಸಂಗಡಿಗರು ಮಂಚದ ಮೇಲೆ ಮಲಗಿದ್ದ ಬಾದಶಹ ಸಿಕಂದರನನ್ನು ಮೂರು ಕಡೆಯಿಂದ ಗಾಯಗೊಳಿಸಿದರು. ಬಾದಶಹನು ಗಾಬರಿಯಿಂದೆದ್ದು ಮಂಚದಿಂದ ಕೆಳಗೆ ಬಿದ್ದನು. ಆಗ ಅವರಲ್ಲೊಬ್ಬನು ತನ್ನ ಕತ್ತಿಯಿಂದ ಒಂದೇ ಏಟಿಗೆ ಕಡಿದು ಹಾಕಿದನು.

ಸುಲ್ತಾನ್ ಸಿಕಂದರನು ಕೇವಲ ಮೂರು ತಿಂಗಳು ಹದಿನೇಳು ದಿನಗಳು ಮಾತ್ರ ಬಾದಶಹನಾಗಿ ಆಳಿದನು.

■

*

೧೦. ಸುಲ್ತಾನ್ ಮಹಮೂದ್ ಬಿನ್ ಸುಲ್ತಾನ್ ಮುಜಾಫ್ಫರ್‌ಶಾಹ್ ಗುಜರಾತಿ

ಪಟ್ಟಾಭಿಷೇಕ :

ಸುಲ್ತಾನ್ ಸಿಕಂದರಶಾಹ್‌ನ ಕೊಲೆಯ ನಂತರ ಅಮಾದುಲ್ ಮುಲ್ಕ್‌ನು ಬಹಾವುಲ್ ಮುಲ್ಕ್‌ನ ಸಲಹೆಯಂತೆ ನಸೀರ್‌ಖಾನ್ ಎಂಬುವವನನ್ನು ಅಂತಃಪುರದಿಂದ ಹೊರತಂದು "ಮಹಮೂದ್‌ಶಾಹ್" ಎಂಬ ಬಿರುದಿನೊಂದಿಗೆ ಸಿಂಹಾಸನದ ಮೇಲೆ ಕುಳ್ಳಿರಿಸಿದನು. ಸುಲ್ತಾನ್ ಸಿಕಂದರನ ಆಪ್ತರೆಲ್ಲರೂ ಹೆದರಿಕೆಯಿಂದಾಗಿ ಅತ್ತಿತ್ತ ಓಡಿಹೋದರು. ಇವರ ಮನೆಗಳನ್ನು ಲೂಟಿಮಾಡಿ ಬೆಂಕಿ ಹಚ್ಚಲಾಯಿತು, ಸಿಕಂದರಶಾಹನ ಶವವನ್ನು ಜನಾನೇರ್ ಬಳಿಯಲ್ಲಿದ್ದ ಹಾಲೂನ್ ಎಂಬ ಜಾಗದಲ್ಲಿ ಹೂಳಲಾಯಿತು.

ಅಮೀರರನ್ನು ಸಂತುಷ್ಟಪಡಿಸಿದನು :

ಅಮಾದುಲ್‌ಮುಲ್ಕ್‌ನು ಅಮೀರರನ್ನು ಸಂತೋಷ ಪಡಿಸಲು ಅನೇಕ ಬಹುಮಾನ, ಬಿರುದುಗಳನ್ನು ನೀಡಿ ಗೌರವಿಸಿದನು. ಅವರ ಮನಸ್ಸುಗಳನ್ನು ತನ್ನತ್ತ ಸೆಳೆಯಲು ಪ್ರಯತ್ನಿಸಿದನು. ಆತನು ೧೮೦ ಅಮೀರರಿಗೆ ಬಿರುದುಗಳನ್ನು ನೀಡಿದನು. ಆದರೂ ಯಾರ ಸಂಬಳವನ್ನು ಮಾತ್ರ ಹೆಚ್ಚಿಸಲಿಲ್ಲ. ಗುಜರಾತಿನ ಸಾಕಷ್ಟು ಅಮೀರರು ಹಿಂದೆ ನಡೆದ ಘಟನೆಗಳಿಂದ ಬೇಸರ ಪಡುತ್ತಿದ್ದರು. ಅವರೆಲ್ಲರೂ ಬಹಾದೂರಖಾನನನ್ನು ಗುಜರಾತಿನ ಬಾದಶಹನನ್ನಾಗಿ ಮಾಡಲು ಆಶಿಸುತ್ತಿದ್ದರು. ಈ ವಿಚಾರದಲ್ಲಿ ಅವರು ಷಹಜಾದನಿಗೆ ಅನೇಕ ಪತ್ರಗಳನ್ನು ಬರೆದಿದ್ದರು. ಪತ್ರಗಳನ್ನು ಬರೆಯುವವರಲ್ಲಿ ತಾಜ್‌ಖಾನ್ ಮತ್ತು ಖುದಾವಂದಖಾನ್‌ರು ಮೊದಲ ಸ್ಥಾನದಲ್ಲಿದ್ದರು.

ಷಹಜಾದ ಬಹಾದೂರನ ಗುಜರಾತಿಗೆ ಆಗಮನ ಮತ್ತು ಅಮಾದುಲ್‌ಮುಲ್ಕ್‌ನ ಚಿಂತೆ:

ಷಹಜಾದ ಬಹಾದೂರಖಾನನು ಜಾನಿಪುರದಲ್ಲಿದ್ದಾಗ ತನ್ನ ತಂದೆಯ ಮರಣದ

ಸುದ್ದಿ ಆತನಿಗೆ ತಲುಪಿತು. ಈ ಸುದ್ದಿ ತಿಳಿದ ತಕ್ಷಣ ಆತನು ಗುಜರಾತಿನತ್ತ ಪ್ರಯಾಣವನ್ನು ಬೆಳೆಸಿದನು. ಈ ಸುದ್ದಿಯನ್ನು ತಿಳಿದ ಅಮಾದುಲ್ ಮುಲ್ಕ್‌ನು ಬಹಳ ಚಿಂತಾಕ್ರಾಂತನಾದನು. ಆತನು ಬುರ್ಹಾನ್ ನಿಜಾಮುಲ್ ಮುಲ್ಕ್‌ಬಹರಿ ಎಂಬುವನಿಗೆ ಪತ್ರವನ್ನು ಬರೆದು ಅದರ ಜೊತೆಯಲ್ಲಿ ಅಪಾರ ಹಣವನ್ನು ಕೊಟ್ಟು ಆತನನ್ನು ನದರ್‌ಬಾರ್ ಮತ್ತು ಸುಲ್ತಾನ್‌ಪುರದತ್ತ ಗಡಿ ಪ್ರದೇಶಕ್ಕೆ ಬರಲು ಹೇಳಿದನು. ಹಾಗೆಯೇ ಅಮಾದುಲ್ ಮುಲ್ಕ್‌ನು ರಾಜಾ ಮಾಲ್‌ಪೂರನನ್ನು ಜನಾನೇರ್‌ನ ಮಹಮ್ಮದಾಬಾದ ಗಡಿ ಪ್ರದೇಶಕ್ಕೆ ಬರಲು ಹೇಳಿದನು.

ಅಮಾದುಲ್‌ಮುಲ್ಕ್‌ನ ಪತ್ರ ಬಾಬರನಿಗೆ :

ಅಮಾದುಲ್‌ಮುಲ್ಕ್‌ನು ಬಹಳ ದೂರದ ದೃಷ್ಟಿಯಿಂದ ಯೋಚಿಸಿ ಕಾರ್ಯೋನ್ಮುಖನಾದನು. ಜಹೀರುದ್ದೀನ್ ಬಾಬರನ ಹೆಸರಿನಲ್ಲಿ ಒಂದು ಅರ್ಜಿಯನ್ನು ಬರೆದು, ಒಂದು ವೇಳೆ ತಮ್ಮ ಸೈನ್ಯದ ಒಂದು ಭಾಗ ಬಂದರ್‌ದೇವ ಕಡೆಗೆ ಕಳುಹಿಸಿದ್ದೇ ಆದರೆ ನಾನು ತಮ್ಮೆಲ್ಲ ಸೈನಿಕರ ಖರ್ಚಿಗೆ ಒಂದು ಕೋಟಿ "ತಿನ್ಗೆ" ಚಿನ್ನದ ನಾಣ್ಯಗಳನ್ನು ನೀಡಲು ಸಿದ್ಧನಿದ್ದೇನೆಂದು ತಿಳಿಸಿದನು.

ಬುರ್ಹಾನ ನಿಜಾಮಶಾಹ ಬಹರಿಯು ಅಮಾದುಲ್ ಮುಲ್ಕ್‌ನಿಂದ ಕಳುಹಿಸಲ್ಪಟ್ಟ ಉಡುಗೊರೆಗಳನ್ನೇನೋ ಸ್ವೀಕರಿಸಿದನು. ಆದರೆ ಆತನ ಯೋಜನೆಯನ್ನು ಒಪ್ಪಲಿಲ್ಲ. ರಾಜಾ ಮಾಲ್ಪುರನೂ ಆತನ ಯೋಜನೆಯನ್ನು ತಿರಸ್ಕರಿಸಿದ. ಆತನು ಬಾದಶಹನ ಹಕ್ಕಿನ ಅನುಚರನಾಗಿದ್ದನು. ಆದರೂ ಆತನು ಜನಾನೇರ್‌ನ ಸುತ್ತ-ಮುತ್ತಲ ಪ್ರದೇಶದತ್ತ ಹೋದನು.

ಗುಜರಾತಿ ಅಮೀರರ ರಾಜದೂತ ಬಹಾದೂರಖಾನನ ಸೇವೆಯಲ್ಲಿ :

ಬಾಬರನ ಹೆಸರಿಗೆ ಅಮಾದುಲ್ ಮುಲ್ಕ್‌ನು ಬರೆದ ಅರ್ಜಿಯ ವಿಚಾರವು ಡೋಂಗರ್‌ಪುರದ ಠಾಣೆದಾರನಿಗೆ ಗೊತ್ತಾಗಿ ಬಿಟ್ಟಿತ್ತು. ಆತನು ತಾಜ್‌ಖಾನ್ ಮತ್ತು ಖುದಾವಂದಖಾನನಿಗೆ ಎಲ್ಲವನ್ನೂ ತಿಳಿಸಿದನು. ಇದು ತಿಳಿದ ತಕ್ಷಣ ಗುಜರಾತಿ ಅಮೀರರು ಷಹಾಜಾದ ಬಹಾದೂರಖಾನನ ಹತ್ತಿರ ದೆಹಲಿಗೆ ಒಬ್ಬ ವ್ಯಕ್ತಿಯನ್ನು ಕಳುಹಿಸಿ ಸುದ್ದಿ ತಿಳಿಸಿದರು. ಆ ವ್ಯಕ್ತಿಯು ದೂರದ ದೆಹಲಿಗೆ ತಲುಪಲು ಅನೇಕ ಪಯಣದ ಮಜಲುಗಳನ್ನು ಪಾರು ಮಾಡುತ್ತಾ ದೆಹಲಿಯ ಸುತ್ತ ಇದ್ದ ಬಹಾದೂರಖಾನನನ್ನು ಹಿಡಿದನು. ಗುಜರಾತಿ ಅಮೀರರು ಕಳುಹಿಸಿದ್ದ ಸುದ್ದಿಯ ಪತ್ರವನ್ನು ತಲುಪಿಸಿದನು. ಆಕಸ್ಮಿಕವಾಗಿ ಆ ಸಮಯದಲ್ಲಿ ಜೌನಪುರದ ಆಫ್‌ಘನ್‌ರ ಕಡೆಯಿಂದ ಪಾಯಂದ್‌ಖಾನನು ಸಹ ಅಲ್ಲಿಗೆ ಬಂದಿದ್ದನು. ಆತನ ಆಸೆ ಏನೆಂದರೆ ಬಹಾದೂರಖಾನನನ್ನು ತನ್ನ ಜೊತೆಯಲ್ಲಿ ಕರೆದುಕೊಂಡು ಹೋಗಿ ಜೌನಪುರದ ಬಾದಶಹನನ್ನಾಗಿ ಮಾಡಬೇಕೆಂಬುದಾಗಿತ್ತು. ಆದರೆ ಷಹಜಾದನು ಈತನ ಕೋರಿಕೆಗೆ

ಸಮ್ಮತಿಸಲಿಲ್ಲ. ಏಕೆಂದರೆ ಆತನಿಗೆ ತನ್ನ ಹುಟ್ಟೂರು ಗುಜರಾತಿನ ಮೇಲೆ ಹೆಚ್ಚು ಆಸೆಯಾಯಿತು. ಬಹಾದೂರಖಾನನು ಪಾಯಂದ್‌ಖಾನನಿಗೆ ಸಮಾಧಾನ ಪಡಿಸಿ ಕಳುಹಿಸಿಕೊಟ್ಟು, ಅಹಮದಾಬಾದಿನತ್ತ ಹೊರಟನು.

ಬುದ್ಧಿವಂತ ಕುದುರೆ :

ವರ್ಣಿಸಲಾಗಿರುವುದೇನೆಂದರೆ– ಆ ಇಬ್ಬರು ರಾಜದೂತರು ಷಹಜಾದ ಬಹಾದೂರಖಾನನನ್ನು ತಮ್ಮ ತಮ್ಮ ಕಡೆ ಕರೆದುಕೊಂಡು ಹೋಗಲು ಪ್ರಯತ್ನಿಸಿದರು. ಈ ಇಬ್ಬಂದಿ ಒತ್ತಡಕ್ಕೆ ಸಿಲುಕಿ ಬಹಳ ಚಿಂತಿತನಾದನು. ಆತನು ಒಂದು ನಿರ್ಣಯಕ್ಕೆ ಬಂದು ಹೀಗೆಂದನು–ನಾನು ಒಂದು ಕಾಡಿಗೆ ಹೋಗಿ ನನ್ನ ಕುದುರೆಯ ಮೇಲೆ ಕುಳಿತು ಅದರ ಲಗಾಮನ್ನು ಸಡಿಲು ಬಿಡುತ್ತೇನೆ. ಅದು ಯಾವ ದಿಕ್ಕಿನತ್ತ ಚಲಿಸುವುದೋ ಆ ಕಡೆ ಪ್ರಯಾಣವನ್ನು ಮಾಡುತ್ತೇನೆಂದು ಹಾಗೆಯೇ ಮಾಡಿದನು. ಕುದುರೆಯು ತನ್ನ ದಿಕ್ಕನ್ನು ಗುಜರಾತಿನತ್ತ ನಡೆಯಿತು. ಆಗ ಬಹಾದೂರಖಾನನು ಆಫ್‌ಘನ್ ದೂತನಲ್ಲಿ ಕ್ಷಮೆಯಾಚಿಸಿ ಆತನನ್ನು ಕಳುಹಿಸಿಕೊಟ್ಟನು. ತಾನು ತನ್ನಲ್ಲಿಗೆ ಬಂದಿದ್ದ ದೂತನೊಂದಿಗೆ ಗುಜರಾತಿನತ್ತ ಪ್ರಯಾಣವನ್ನು ಬೆಳೆಸಿದನು.

ಬಹಾದುರ್‌ಖಾನನು ಚಿತ್ತೋಡಿನಲ್ಲಿ :

ಪ್ರಯಾಣದ ಮಜಲುಗಳನ್ನು ಸವೆಸುತ್ತಾ ಷಹಜಾದ ಬಹಾದುರ್‌ಖಾನನು ಚಿತ್ತೋರಿಗೆ ತಲುಪಿದನು. ಈ ಮಧ್ಯೆ ಇನ್ನೂ ಹೆಚ್ಚಿನ ಸಮಾಚಾರಗಳನ್ನು ಹೊತ್ತು, ಗುಜರಾತಿನಿಂದ ಅನೇಕ ದೂತರುಗಳು ಬರುತ್ತಲೇ ಇದ್ದರು. ಅದೇ ಜಾಗದಲ್ಲಿ ತನ್ನ ಅಣ್ಣ ಸಿಕಂದರನ ಕೊಲೆಯ ಸುದ್ದಿಯೂ ತಿಳಿಯಿತು. ಷಹಜಾದ್ ಚಾಂದ್‌ಖಾನ್ ಮತ್ತು ಷಹಜಾದ ಇಬ್ರಾಹಿಂ ಬಿನ್ ಮುಜಫ್ಫರ್‌ಶಾಹ್ ರಾಣಾಸಾಂಗನ ಹತ್ತಿರದಲ್ಲಿದ್ದವರು. ಬಹಾದೂರಖಾನನನ್ನು ಭೇಟಿಯಾದರು. ಭೇಟಿಯಿಂದ ಬಹಳ ಸಂತೋಷ ಪಟ್ಟರು. ಚಾಂದ್‌ಖಾನನು ಷಹಜಾದನನ್ನು ಕಂಡ ನಂತರ ಆತನ ಅಪ್ಪಣೆಯನ್ನು ಪಡೆದು, ತಾನಿದ್ದ ಜಾಗಕ್ಕೆ ಹಿಂತಿರುಗಿದನು. ಆದರೆ ಷಹಜಾದ ಇಬ್ರಾಹಿಂನು ಬಹಾದೂರನ ಜೊತೆಯಲ್ಲಿ ಗುಜರಾತಿಗೆ ಬಂದನು.

ಗುಜರಾತಿ ಅಮೀರರಿಗೆ ಬಹಾದೂರಖಾನನ ಆಗಮನದ ಸುದ್ದಿ :

ಕೆಲವು ದಿನಗಳ ನಂತರ ಷಹಜಾದ ಬಹಾದೂರಖಾನನು ಚಿತ್ತೋಡಿನಿಂದ ಪ್ರಯಾಣವನ್ನು ಬೆಳೆಸಿದನು. ಮಾಲ್ಪುರದ ರಾಜ ಒದೇಸಿಂಗ್ ಮತ್ತು ಸುಲ್ತಾನ್ ಸಿಕಂದರನ ಎರಡನೇ ಪಕ್ಷಪಾತಿ ಬಹಾದೂರಖಾನನೊಂದಿಗೆ ಭೇಟಿಯಾದನು. ಬಹಾದೂರಖಾನನು ಬಹಾದರುಲ್ ಮುಲ್ಕ್ ಮತ್ತು ತಾಜುದ್ದೀನನಿಗೆ ತಾಜ್‌ಖಾನ ಮತ್ತು ಇತರೆ ಅಮೀರರುಗಳ ಹತ್ತಿರ ಕಳುಹಿಸಿ ತಾನು ಗುಜರಾತಿಗೆ ಬಂದಿರುವ ಸುದ್ದಿಯನ್ನು ತಿಳಿಸಲು ಹೇಳಿದನು. ತಾಜ್‌ಖಾನನು ಅಮಾದುಲ್‌ಮುಲ್ಕ್‌ನ

ಶತ್ರುವಾಗಿದ್ದನು. ತನ್ನ ಸೈನ್ಯ ಮತ್ತು ಪರಿವಾರದೊಂದಿಗೆ "ದಂದೋಖಾ" ಎಂಬಲ್ಲಿ ವಾಸವಾಗಿದ್ದನು. ಬಹಾದುರ್‌ಖಾನನ ನಿರೀಕ್ಷೆಯಲ್ಲಿದ್ದವನು. 'ದಂದೋಖಾ' ದಲ್ಲಿ ತಾಜ್‌ಖಾನನು ಬಹಳ ಸಾಮಾನುಗಳನ್ನು ಸಂಗ್ರಹಿಸಿಕೊಂಡು ಬಹಳ ಎಚ್ಚರಿಕೆಯಿಂದ ಕಾಪಾಡಿಕೊಂಡು ಬಹಾದೂರ್‌ಖಾನನನ್ನು ಸ್ವಾಗತಿಸಲು ಮುಂದುವರಿದನು.

ಷಹಜಾದ ಲತೀಫನ ಪ್ರಯಾಣ :

ತಾಜಖಾನನ ಜೊತೆಯಲ್ಲಿ ಷಹಜಾದ ಲತೀಫನು ಪ್ರಯಾಣವನ್ನು ಬೆಳೆಸಿದನು. ತಾಜ್‌ನು ಷಹಜಾದನ ಖರ್ಚಿಗೆ ಸ್ವಲ್ಪ ಹಣವನ್ನು ನೀಡಿದನು. ಈಗ ಸಿಂಹಾಸನದ ನೈಜ್ಯ ಹಕ್ಕುದಾರ ಬಂದಿದ್ದಾನೆಂದು ಹೇಳಿ ಷಹಜಾದ ಲತೀಫನನ್ನು ಕಳುಹಿಸಿಕೊಟ್ಟನು. ಹಾಗೂ ನಾನು, ನೀನು ಜೊತೆಯಲ್ಲಿರುವುದು ಸೂಕ್ತವಲ್ಲವೆಂದು ತಿಳಿಸಿದನು. ನೀನು ಇಲ್ಲಿಂದ ಬೇರೆ ಎಲ್ಲಿಗಾದರೂ ಹೋಗುವುದು ಒಳ್ಳೆಯದು ಎಂದಾಗ ಮನಸ್ಸಿಲ್ಲದೆ ಅಲ್ಲಿಂದ ಲತೀಫನು ಹೊರಟು ತನ್ನ ಚಿಕ್ಕಪ್ಪನ ಮಗನ ಹತ್ತಿರ ಹೋದನು.

ಬಹಾದೂರ್‌ಖಾನನು ಡೋಂಗರ್‌ನಲ್ಲಿ :

ಷಹಜಾದ ಬಹಾದೂರ್‌ಖಾನನು ಡೋಂಗಪುರಕ್ಕೆ ತಲುಪಿದಾಗ ಖುರ್ರಮ್‌ಖಾನನು ಮತ್ತು ಆ ದೇಶದ ಇತರೆ ಪ್ರಸಿದ್ಧ ಅಮೀರರು ಆತನನ್ನು ಗೌರವ ಪೂರ್ವಕವಾಗಿ ಸ್ವಾಗತಿಸಿದರು. ಈ ಪರಿಸ್ಥಿತಿಗಳನ್ನು ಕಂಡ ಅಮಾದುಲ್ ಮುಲ್ಕ್‌ನ ಚಿಂತೆ ಎಲ್ಲೆ ಮೀರಿತು. ಮತ್ತು ಸೈನ್ಯವನ್ನು ಹೆಚ್ಚಿಸಲು ಸರಕಾರಿ ಹಣವನ್ನು ಹದ್ದುಮೀರಿ ಖರ್ಚು ಮಾಡತೊಡಗಿದನು.

ಅಮಾದುಲ್ ಮುಲ್ಕ್‌ನ ಕ್ರಮ :

ಅಮಾದುಲ್ ಮುಲ್ಕನು ಕಂಡದ್ದೇನೆಂದರೆ ಜನರು ಬಹಳ ಉತ್ಸಾಹಭರಿತರಾಗಿ ಷಹಜಾದ ಬಹಾದೂರಖಾನನ ಹತ್ತಿರ ಹೋಗುತ್ತಿದ್ದಾರೆ. ಇದರಿಂದ ಕೋಪಗೊಂಡ ಅಮಾದುಲ್‌ಮುಲ್ಕ್‌ನು ಒಂದು ವಿಶಾಲವಾದ ಸೈನ್ಯವನ್ನು ಅದರ ಸಹಾಯಕ್ಕೆ ೫೦ ಆನೆಗಳನ್ನು ಕೊಟ್ಟು ಅಸದಲ್‌ಮುಲ್ಕ್‌ನ ವಶದಲ್ಲಿ ಮೆಹರಾಯ ಕಡೆಗೆ ರವಾನಿಸಿದನು. ಯಾವ ವ್ಯಕ್ತಿಗೂ ಬಹಾದುರ್‌ಖಾನನನ್ನು ಭೇಟಿಯಾಗಲು ಆಗದಂತೆ ದಾರಿಯನ್ನು ಮುಚ್ಚಿಸಿದನು.

ಸುಲ್ತಾನ್ ಬಹಾದೂರನು ಡೋಂಗರ್‌ನಿಂದ ಮಹಮೂದ್‌ಪುರಕ್ಕೆ ತಲುಪಿದನು. ಸುಲ್ತಾನ್ ಸಿಕಂದರನ ಭಯದಿಂದ ಅತ್ತಿತ್ತ ಓಡಿ ಹೋಗಿದ್ದ ಎಲ್ಲ ಅಮೀರರೂ ಕೂಡಿಕೊಂಡು ಬಹಾದೂರ್‌ಖಾನನ ಸೇವೆಯಲ್ಲಿ ಹಾಜರಾದರು. ಅಸದಲ್‌ಮುಲ್ಕನು ಈ ಸ್ಥಿತಿಯನ್ನು ಕಂಡು ಆತನು ಮಹಮ್ಮದಾಬಾದಿಗೆ ಓಡಿಬಂದನು. ಅಲ್ಲಿ ಅಮಾದುಲ್‌ಮುಲ್ಕ್‌ನಿದ್ದನು.

ಬಹಾದೂರ್‌ಖಾನನು ಅಹಮದಾಬಾದಿನಲ್ಲಿ :

ಷಹಜಾದ ಬಹಾದುರ್‌ಖಾನನು ಮೆಹರಾಯ ಕಸಬಾದಲ್ಲಿ ಬಂದಿಳಿದಾಗ, ಅಲ್ಲಿ ತಾಜ್‌ಖಾನ ಛತ್ರ ಚಾಮರಗಳ ಶಾಹಿ ಗೌರವಗಳೊಂದಿಗೆ ಷಹಜಾದನ ಸೇವೆಯಲ್ಲಿ ಹಾಜರಾದನು. ಹಾಗೂ ಹಿಜರಿ ೯೩೨ನೇ ರಂಜಾನ್ ತಿಂಗಳ ೨೬ನೇ ತಾರೀಖಿನಂದು ಷಹಜಾದನು ಮೆಹರ್‌ವಾಲಾ ಪಟನ್ ನಗರದಲ್ಲಿ ಪ್ರವೇಶಿಸಿದನು. ಅಲ್ಲಿಂದ ಅಹಮದಾಬಾದಿನತ್ತ ಪ್ರಯಾಣವನ್ನು ಬೆಳೆಸಿದನು. ಕಸಬಾ ಸರ್‌ಕಚ್ಚ್‌ನಲ್ಲಿರುವ ಸೂಫಿ ಸಂತರ ದರ್ಗಾಗಳಿಗೆ ಬಹಳ ಶ್ರದ್ಧೆಯಿಂದ ಭೇಟಿಕೊಟ್ಟು ನಂತರ ಅಹಮದಾಬಾದಿಗೆ ಬಂದು ತಲುಪಿದನು.

ಮಹಮೂದ್‌ಶಾಹ್‌ನ ಶಾಸನದ ಅಂತ್ಯ :

ಅಮಾದುಲ್‌ಮುಲ್ಕ್‌ನ ಚಿಂತೆ ಇನ್ನೂ ಅಧಿಕವಾಯಿತು. ಆತನು ತನ್ನ ಸೈನಿಕರಿಗೆ ಒಂದು ವರ್ಷದ ಮುಂಗಡ ವೇತನವನ್ನು ಹಂಚಿಸಿದನು. ಒಬ್ಬ ದೂತನನ್ನು ಷಹಜಾದ ಲತೀಫನ ಹತ್ತಿರ ಕಳುಹಿಸಿ ಸಹಾಯವನ್ನು ಬೇಡಿದನು. ಆದರೆ ದೂತನು ತಲುಪುವುದಕ್ಕೆ ಮೊದಲೇ ಲತೀಫನು ಮಹಮ್ಮದಾಬಾದಿಗೆ ತಲುಪಿದ್ದನು. ಬಹಳ ಅಮೀರರು ಅಂದರೆ ಬಹಾಮುಲ್‌ಮುಲ್ಕ್, ದಾವರ್‌ಮುಲ್ಕ್ (ಇವರು ಷಹಜಾದ ಬಹಾದೂರನ ಅಣ್ಣನಾದ ಸಿಕಂದರನನ್ನು ಕೊಲೆಗೈದವರು) ಮುಂತಾದವರೆಲ್ಲರೂ ಅಮಾದುಲ್‌ಮುಲ್ಕ್‌ನನ್ನು ವಿರೋಧಿಸತೊಡಗಿದ್ದವರೆಲ್ಲರೂ ಬಹಾದೂರಖಾನನನ್ನು ಬಂದು ಭೇಟಿ ಮಾಡಿದರು. ಬಹಾದೂರಖಾನನು ವಿವಶನಾಗಿ ಅವರೆಲ್ಲರನ್ನೂ ಪ್ರೇಮದಿಂದಲೇ ಬರಮಾಡಿಕೊಂಡನು. ನಂತರ ಅಮಾದುಲ್‌ಮುಲ್ಕ್‌ನನ್ನು ಸೋಲಿಸಿ, ಮಹಮೂದ್‌ಶಾಹ್‌ನ ಶಾಸನಾಧಿಕಾರವನ್ನು ಕೊನೆಗೊಳಿಸಿದನು. ಮಹಮೂದ್‌ಶಾಹನು ಕೇವಲ ನಾಲ್ಕು ತಿಂಗಳ ಕಾಲ ಸುಲ್ತಾನ್‌ನೆನಿಸಿದ್ದನು.

■

*

೧೧. ಸುಲ್ತಾನ್ ಬಹಾದೂರ್‌ಖಾನ್ ಬಿನ್ ಸುಲ್ತಾನ್ ಮುಜಾಫ್ಫರ್‌ಶಾಹ್ ಗುಜರಾತಿ

ಪಟ್ಟಾಭಿಷೇಕ :

ಜ್ಯೋತಿಷಿಗಳ ಪ್ರಕಾರ ಹಿಜರಿ ೯೩೨ ರಂಜಾನ್ ತಿಂಗಳಲ್ಲಿ ಪಟ್ಟಾಭಿಷೇಕದ ದಿನವು ನಿಗದಿಯಾಗಿತ್ತು. ಆ ದಿನ ಬಹದೂರ್‌ಖಾನನು ಅಹಮದಾಬಾದಿನಲ್ಲಿ ಸಿಂಹಾಸನಾರೂಢನಾಗಿ ಮೆರವಣಿಗೆಯಲ್ಲಿ ಹೊರಟಿದ್ದನು. ಅಂದು ಎಲ್ಲ ಅಮೀರರಿಗೆ ಶಾಸಕರಿಗೆ ಬಹುಮಾನಗಳನ್ನು ಉಡುಗೊರೆಗಳನ್ನು ನೀಡಿ ಗೌರವಿಸಿದನು.

ಮಹಮ್ಮದಾಬಾದ್ ಜನಾನೇರ್‌ನತ್ತ ಪ್ರಯಾಣ :

ಶವ್ವಾಲ್ ತಿಂಗಳ ಪ್ರಾರಂಭದಲ್ಲಿ ಬಾದಶಹನು ಮಹಮ್ಮದಾಬಾದ-ಜನಾನೇರ್‌ಗಳತ್ತ ಪ್ರಯಾಣವನ್ನು ಬೆಳೆಸಿದನು. ಪ್ರಯಾಣದ ಮೊದಲ ಮಜಲಲ್ಲಿ ಮುಆಜಮ್‌ಖಾನನು ತನ್ನ ಸರದಾರರೊಂದಿಗೆ ಬಾದಶಹನ ಹತ್ತಿರ ಬಂದು ಅವನ ಸೇವೆಯಲ್ಲಿ ಹಾಜರಾದನು. ಬಾದಶಹನು ಆತನನ್ನು ಬಹಳ ಪ್ರೇಮದಿಂದ ಬರಮಾಡಿಕೊಂಡನು. ಆತನಿಗೆ ಬಹಳ ಬಹುಮಾನಗಳೊಂದಿಗೆ ಗೌರವಿಸಿದನು. ಬಾದಶಹನು ಆ ಮಜಲಿನಿಂದ ಪ್ರಯಾಣ ಮಾಡಿದ ನಂತರ ಆತನಿಗೆ ತಿಳಿದಿದ್ದೇನೆಂದರೆ-ಬಾತರ್ಕ್ ನದಿಯಲ್ಲಿ ಪ್ರವಾಹವು ಹೆಚ್ಚಾಗಿದೆ ಎಂದು ಇದರಿಂದಾಗಿ ಸೈನ್ಯವು ನದಿಯನ್ನು ದಾಟುವುದು ಕಷ್ಟವೆಂದು ತಿಳಿಯಿತು.

ಕಳ್ಳ ಅಮೀರರು :

ಬಾದಶಹನು ಸೋಲಂಜ್ ಎಂಬ ಕಸಬಾದಲ್ಲಿ ತಂಗಿದನು. ತಾಜ್‌ಖಾನನನ್ನು ನದಿಯ ಹತ್ತಿರ ನೇಮಕ ಮಾಡಿ, ಆತನಿಗೆ ಸೈನ್ಯವನ್ನು ಸುರಕ್ಷಿತವಾಗಿ ಆಚೆಯ ದಡಕ್ಕೆ ತಲುಪಿಸುವ ಕೆಲಸವನ್ನು ನೇಮಿಸಿದನು. ಮಾರನೇ ದಿನ ಕೆಲ ಅಮೀರರು

ಹಿಂದಿನ ಕಾಲ ಅಂದರೆ ಹಿಂದೆ ಅಧಿಕಾರದಲ್ಲಿದ್ದಾಗ ಶಾಹಿ ಖಜಾನೆಯಿಂದ ಹಣವನ್ನು ಕದ್ದಿದ್ದರು. ಅವರೆಲ್ಲರೂ ತಮ್ಮ ತಮ್ಮ ಹಣದೊಂದಿಗೆ ಬಾದಶಹನಿಗೆ ಹಿಂತಿರುಗಿಸಲು ಅವನ ಸೇವೆಯಲ್ಲಿ ಹಾಜರಾದರು. ಸುಲ್ತಾನ್ ಬಹಾದೂರಖಾನನು ತನ್ನ ಸ್ವಾಭಾವಿಕ ಉದಾರ ಗುಣವನ್ನು ತೋರುತ್ತಾ ಅವರಲ್ಲಿದ್ದ ಎಲ್ಲಾ ಹಣವನ್ನು ಅವರವರಿಗೆ ಬಿಟ್ಟು ತೆಗೆದುಕೊಂಡು ಹೋಗಲು ಆಜ್ಞಾಪಿಸಿದನು.

ಪಿತೂರಿಕೋರರ ವ್ಯರ್ಥ ಪ್ರಯತ್ನ :

ಚಾಂದ್‌ಪುರದ ದಾರಿಯಲ್ಲಿ ಬಾದಶಹನು 'ನಹಂದರಿ' ನದಿಯ ದಡಕ್ಕೆ ತಲುಪಿದನು. ಆತನ ಸೈನ್ಯ ನದಿಯನ್ನು ದಾಟಲು ಪ್ರಾರಂಭಿಸಿತು. ಅಮಾದುಲ್‌ಮುಲ್ಕ್ ಮತ್ತು ಅಸದಲ್‌ಮುಲ್ಕ್‌ರಿಬ್ಬರೂ ಮೊದಲೇ ಒಂದು ಸೈನ್ಯವನ್ನು ಬರೋಡಾ ಮತ್ತು ಇತರೆ ಪ್ರದೇಶಗಳಲ್ಲಿ ಬಾದಶಹನು ಅತ್ತ ಕಡೆ ಏನಾದರೂ ಬಂದರೆ ಅವರೊಂದಿಗೆ ಜಗಳವನ್ನು ತೆಗೆದು ಯುದ್ಧ ಮಾಡಿ ಬಾದಶಹನನ್ನು ತನ್ನ ಕಡೆಗೆ ಸೆಳೆದುಕೊಳ್ಳಲು ನೇಮಕ ಮಾಡಿದ್ದನು. ಬಾದಶಹನು ಆ ಪಿತೂರಿಕೋರರ ಬಗ್ಗೆ ಆತಂಕವನ್ನು ಪಡದೆ ಅವರ ಎದುರಿಗೂ ಹೋಗದೇ ನದಿಯನ್ನು ದಾಟಿ ಬೇಗ ಬೇಗ ಜನಾನೇರ್‌ನ ಮಹಮ್ಮದಾಬಾದಿಗೆ ಹೋದನು.

ಅಮಾದುಲ್‌ಮುಲ್ಕ್‌ನನ್ನು ಸೆರೆ ಹಿಡಿಯಲು ಆಜ್ಞೆ:

ಸುಲ್ತಾನ್ ಬಹಾದ್ದೂರ್‌ಖಾನನು ಪಟ್ಟಣದ ಸಮೀಪಕ್ಕೆ ತಲುಪಿದಾಗ ನಸೀರ್‌ಖಾನನ ಮಗ ಜಿಯಾವುಲ್‌ಮುಲ್ಕನು ಬಾದಶಹನ ಸೇವೆಯಲ್ಲಿ ಹಾಜರಾದನು. ಬಾದಶಹನು ಜಿಯಾವುಲ್‌ಮುಲ್ಕ್‌ನಿಗೆ ಆದೇಶಿಸಿದ್ದೇನೆಂದರೆ "ನೀನು ನಿನ್ನ ತಂದೆಯವರ ಸಹಾಯದಿಂದ ಅಮಾದುಲ್‌ಮುಲ್ಕ್‌ನ ಮನೆಗೆ ಮುತ್ತಿಗೆಯನ್ನು ಹಾಕಿ ಆತನನ್ನು ಜೀವಂತ ಸೆರೆ ಹಿಡಿದು ತರಲು ಆಜ್ಞಾಪಿಸಿ, ಮುಂದೆ ಪ್ರಯಾಣಿಸಿದನು.

ಸೆರೆ ಹಿಡಿದ ನಂತರ ಗಲ್ಲು ಶಿಕ್ಷೆ :

ತಾಜ್‌ಖಾನನು ಬಹಳ ಬೇಗ ಅಮಾದುಲ್‌ಮುಲ್ಕ್‌ನ ಮನೆಯ ಮುತ್ತಿಗೆಯನ್ನು ಹಾಕಿದನು. ಇವನು ತನ್ನ ಮನೆಯ ಒಂದು ಗೋಡೆಯ ಪಕ್ಕದಿಂದ ಯಾರಿಗೂ ಕಾಣದಂತೆ ಮನೆಯಿಂದ ಹೊರಟು ಶೇಖ್‌ಚನೋ ಸಿದ್ಧೀಖಿ ಎಂಬುವನ ಮನೆಯಲ್ಲಿ ಅವಿತುಕೊಂಡಿದ್ದನು. ಶೇಖ್‌ಚನೋನ ಮನೆಯನ್ನು ಲೂಟಿ ಮಾಡಲಾಯಿತು. ಆತನ ಮಕ್ಕಳನ್ನು ಸೆರೆಹಿಡಿಯಲಾಯಿತು. ಅಕಸ್ಮಾತಾಗಿ ಬಾದಶಹನು ಖುದಾವಂದನ ಮನೆಯ ಮುಂದೆಯೇ ಬಂದನು. ಖುದಾವಂದನು ಸಹ ಆ ಸಮಯದಲ್ಲಿ ತಪ್ಪಿಸಿಕೊಂಡು ಕಾಣದಂತೆ ಮರೆಯಾಗಿದ್ದನು. ಮನೆಯಿಂದ ಹೊರಬಂದು ಬಾದಶಹನ ಸೇವೆಯಲ್ಲಿ ಹಾಜರಾದನು. ಅದೇ ಸಮಯದಲ್ಲಿ ಖುದಾವಂದ್‌ಖಾನನ ಸೇವಕರು

ಅಮಾದುಲ್‌ಮುಲ್ಕ್‌ನನ್ನು ಸೆರೆ ಹಿಡಿದು ತಂದರು. ಬಾದಶಹನು ಆ ತಕ್ಷಣ ಆಜ್ಞಾಪಿಸಿದ್ದುದೇನೆಂದರೆ ಅಮಾದುಲ್‌ಮುಲ್ಕ್, ಸೈಫುದ್ದೀನ್ ಮತ್ತು ಸಿಕಂದರನ ಕೊಲೆಗಾರರಿಗೂ ಗಲ್ಲು ಶಿಕ್ಷೆ ಕೊಡಬೇಕೆಂದು ಹೇಳಿದನು.

ಅಸದಲ್‌ಮುಲ್ಕ್‌ನನ್ನು ಸೆರೆಹಿಡಿಯಲು ಆಜ್ಞೆ:

ಸುಲ್ತಾನ್ ಬಹಾದೂರನು ಸುಲ್ತಾನ್ ಮುಜಾಫ್ಫರನ ಹೆಸರಾಂತ ಗುಲಾಮ ರಫಿವುಲ್‌ಮುಲ್ಕ್ ಬಿನ್‌ತವಕ್ಕಲ್‌ನಿಗೆ ಅಮಾದುಲ್‌ಮುಲ್ಕ್‌ನ ಬಿರುದನ್ನು ನೀಡಿ ಆರಜುಲ್‌ಮುಲ್ಕ್‌ನ ಹುದ್ದೆಯಲ್ಲಿ ಖಾಯಂಗೊಳಿಸಿದನು. ಅಸಲ್‌ಮುಲ್ಕ್‌ನಿಗೆ ಈ ಸುದ್ದಿ ತಿಳಿದ ಕೂಡಲೆ ಆತನು ಬರೋಡದಿಂದ ಪರಾರಿಯಾದನು. ಬಾದಶಹನು ಶಂಶೀರುಲ್‌ಮುಲ್ಕ್ ಮತ್ತು ನಿಜಾಮುಲ್‌ಮುಲ್ಕ್ ಎಂಬುವರನ್ನು ಏನಾದರೂ ಮಾಡಿ ಅಸದಲ್‌ಮುಲ್ಕ್ ಮತ್ತು ಮುಹಾಫಿಜ್‌ಖಾನರನ್ನು ಸೆರೆ ಹಿಡಿಯಲು ಕಳುಹಿಸಿ ಕೊಟ್ಟನು. ಈ ಇಬ್ಬರೂ ಓಡಿ ಹೋಗಿ ರಾಯ್‌ಸಿಂಗ್‌ನ ಮನೆಯಲ್ಲಿ ಅವಿತುಕೊಂಡಿದ್ದರು. ಬಾದಶಹನ ಸಿಪಾಯಿಗಳು ಅವರಿಬ್ಬರ ಮನೆಗಳನ್ನು ಲೂಟಿ ಮಾಡಿಕೊಂಡು ವಾಪಸ್ಸ ಬಂದರು.

ಸುಲ್ತಾನ್ ಸಿಕಂದರನ ಕೊಲೆಗಾರರಿಗೆ ಮರಣದಂಡನೆ :

ಇದೇ ಸಂದರ್ಭದಲ್ಲಿ ಷಾಹ್‌ಚನೋ ಸಿದ್ದೀಖಿ, ಮತ್ತು ಅಸದಲ್‌ಮುಲ್ಕ್‌ನ ಮಗನಿಗೆ ಸಿಕಂದರ್‌ಖಾನ್‌ನ ಕೊಲೆಗಾರರ ಗುಂಪಿನೊಂದಿಗೆ ಖದರಖಾನನ ಮನೆಯಲ್ಲಿ ಮರಣದಂಡನೆ ವಿಧಿಸಲಾಯಿತು.

ಬಹಾವುಲ್‌ಮುಲ್ಕ್‌ನ ಭಯಾನಕ ಪರಿಣಾಮ :

ಬಹಾವುಲ್‌ಮುಲ್ಕ್‌ನೂ ಸೆರೆ ಹಿಡಿಯಲ್ಪಟ್ಟನು. ಈತನು ಸುಲ್ತಾನ್ ಸಿಕಂದರನನ್ನು ಗಾಯಗೊಳಿಸಿದ್ದನು. ಹಾಗೂ ಸಯ್ಯದ ಅಲಿಂವುದ್ದೀನ್‌ನ ಕೈಯಿಂದ ಗಾಯಗೊಂಡಿದ್ದನು. ಆ ಗಾಯ ಇನ್ನೂ ವಾಸಿಯಾಗಿರಲಿಲ್ಲ. ಈತನ ಚರ್ಮವನ್ನು ಸುಲಿದು ಗಲ್ಲುಗಂಬದ ಮೇಲೆ ನೇಣು ಹಾಕಲು ಬಾದಶಹನು ಆಜ್ಞಾಪಿಸಿದನು. ಸುಲ್ತಾನ್ ಸಿಕಂದರನ ಕೊಲೆಗಾರರಲ್ಲಿ ಇನ್ನೂ ಕೆಲವರು ಸೆರೆಹಿಡಿಯಲ್ಪಟ್ಟರು. ಇವರು ದಕ್ಷಿಣ ದೇಶದತ್ತ ಓಡಿ ಹೋಗಿದ್ದರು. ಬಾದಶಹನ ಆಜ್ಞಾನುಸಾರ ಅವರೆಲ್ಲರನ್ನೂ ತೋಪಿನ ಮುಂದೆ ನಿಲ್ಲಿಸಿ ಉಡಾಯಿಸಲಾಯಿತು. ಕೇವಲ ಕೆಲವೇ ದಿನಗಳಲ್ಲಿ ಬಹಾದೂರ್‌ಖಾನನು ಸಿಕಂದರನ ಕೊಲೆಗಾರರೆಲ್ಲರನ್ನೂ ಅಂತ್ಯಗೊಳಿಸಲಾಯಿತು.

ಷಹಜಾದ ಲತೀಫನ ಚಿಂತೆ :

ಸುಲ್ತಾನ್ ಬಹಾದೂರಖಾನನು ಜನಾನೇರ್ ಮಹಮ್ಮದಾಬಾದಿಗೆ ಬಂದ ದಿನವೇ

ಷಹಜಾದ ಲತೀಫನು ಅಮಾದುಲ್‌ಮುಲ್ಕ ಮತ್ತು ಇತರೆ ಅಮೀರರ ಔತಣ ಕೂಟಕ್ಕೆ ನಗರದಲ್ಲಿ ಹಾಜರಾಗಿದ್ದನು. ಬಹಾದೂರಖಾನನು (ಅಣ್ಣ) ಜನಾನೇರ್‌ಗೆ ಬಂದ ಸುದ್ದಿ ತಿಳಿದು ಎಲ್ಲೊ ಒಂದು ಕಡೆ ಅವಿತುಕೊಂಡನು. ಖೈಸರ್‌ಖಾನ್, ಅಲಖ್‌ಖಾನ್ ಮತ್ತು ಅಮೀರ ಲತೀಫನಿಗೆ ವಿಷಯ ತಿಳಿಸಿದ್ದುದೇನೆಂದರೆ–ಈಗ ನೀವು ಬೇರೆ ಯಾವ ಅಮೀರರನ್ನು ನಿರೀಕ್ಷಿಸದೆ ತಕ್ಷಣ ಎಲ್ಲಿಯಾದರೂ ಹೋಗಿ ಅಡಗಿಕೊಳ್ಳಿ ಎಂದು. ಈ ಮಾತನ್ನು ಕೇಳಿದ ಲತೀಫ್‌ಖಾನನು ಪಾಲನ್‌ಪುರಕ್ಕೆ ಹೊರಟು ಹೋದನು. ಅಸದಲ್‌ಮುಲ್ಕ್ ಮತ್ತು ಮುಹಾಫಿಜ್‌ಖಾನರು ಸಹ ಹೊರ ರಾಜ್ಯವಾದ 'ಮೂಂಗಾ' ಕಡೆ ಓಡಿದರು.

ಪ್ರಜೆಗಳ ಪ್ರಗತಿ ಮತ್ತು ಏಳಿಗೆಯತ್ತ ಗಮನ :

ಈ ಎಲ್ಲಾ ಘಟನೆಗಳ ನಂತರ ಸುಲ್ತಾನ್ ಬಹಾದೂರನು ಶಾಂತಚಿತ್ತನಾಗಿ ಪ್ರಜೆಗಳ ಪ್ರಗತಿ ಮತ್ತು ಅವರ ಏಳಿಗೆಯತ್ತ ಗಮನವನ್ನು ಹರಿಸತೊಡಗಿದನು. ಪ್ರಜೆಗಳಿಗೂ ಬಹುಮಾನ ರೂಪದಲ್ಲಿ ಅನೇಕ ಕೊಡುಗೆಗಳನ್ನು ನೀಡಿದನು. ಸೈನಿಕರ ವೇತನವನ್ನು ಅನೇಕ ಪಟ್ಟು ಹೆಚ್ಚಿಸಿದನು. ಒಂದು ವರ್ಷದ ವೇತನವನ್ನು ಒಟ್ಟಾಗಿ ಮುಂಗಡವಾಗಿ ನೀಡಿದನು. ಸರ್‌ಕಚ್ಛ್, ನತ್ಥೋ, ರಸೂಲಾಬಾದಿನ ಫಕೀರರಿಗೂ ಅಪಾರ ಸಂಪತ್ತಿನಿಂದ ಗೌರವಿಸಿದನು.

ಮಹಮ್ಮದಾಬಾದಿನಲ್ಲಿ ಎರಡನೇ ಸಲ ಪಟ್ಟಾಭಿಷೇಕ :

ಗುಜರಾತ್ ಸಾಮ್ರಾಜ್ಯದ ರಾಜಧಾನಿ ಜನಾನೇರ್‌ನ ಮಹಮ್ಮದಾಬಾದ್ ಆಗಿತ್ತು. ಇದಕ್ಕೆ ಮೊದಲಿನ ಎಲ್ಲಾ ಬಾದಶಹರುಗಳು ಈ ಜಾಗದಲ್ಲಿಯೇ ಪಟ್ಟಕ್ಕೆ ಕುಳಿತು ನಗರದಲ್ಲಿ ಮೆರವಣಿಗೆಯಲ್ಲಿ ಬರುತ್ತಿದ್ದರು. ಬಹಾದೂರ್‌ಖಾನನು ಇದೇ ಕೇಂದ್ರದಲ್ಲಿ ಪಟ್ಟಾಭಿಷೇಕದ ನೀತಿನಿಯಮಗಳನ್ನು ಪೂರ್ಣಗೊಳಿಸಲು ನಿಶ್ಚಯಿಸಿದನು. ಜ್ಯೋತಿಷಿಗಳ ಶುಭ ಸಮಯವನ್ನು ನಿಗದಿಪಡಿಸುವುದರ ಪ್ರಕಾರ ಹಿಜರಿ–೯೩೨ರಲ್ಲಿ ಶುರ್ಕಿ ನದಿಯ ದಡದಲ್ಲಿ ಸಿಂಹಾಸನವನ್ನು ಸ್ಥಾಪಿಸಿ ಎಲ್ಲ ಶಾಸ್ತ್ರೋಕ್ತವಾಗಿ ಪೂರ್ಣಗೊಳಿಸಲಾಯಿತು. ಅಮೀರರ ಸಹೋದರನೇ ಆದ ಒಬ್ಬ ಸೂಫಿ ಸಂತರಿಂದ ಶುಭಾಶೀರ್ವಾದಗಳೊಂದಿಗೆ ಪಟ್ಟಾಭಿಷೇಕವಾಯಿತು. ಅಂದು ಸುಮಾರು ಒಂದು ಸಾವಿರ ದರ್ಬಾರಿಗಳಿಗೆ ಬಹುಮಾನಗಳನ್ನು ನೀಡಲಾಯಿತು.

ಅಸದಲ್‌ಮುಲ್ಕನ ಚಟುವಟಿಕೆಗಳು :

ಎಲ್ಲ ಅಮೀರರಿಗೂ ಗೌರವಾರ್ಪಣೆಗಳ ನಂತರ ಘಾಜಿಖಾನನ ಜಾಗಿರಿ ಪ್ರದೇಶವನ್ನು ಹೆಚ್ಚಿಸಲಾಯಿತು. ಆತನಿಗೆ ನದರ್‌ಬಾರ್–ಸುಲ್ತಾನ್ ಪುರಗಳ ಶಾಸನಾಧಿಕಾರಗಳನ್ನು ಕೊಡಲಾದುವು. ಇದೇ ಸಮಯದಲ್ಲಿ ಸುದ್ದಿ ಬಂದುದೇನೆಂದರೆ,–

ಅಸದಲ್‌ಮುಲ್ಕ್‌ನು ಮುಹಾಫಿಜ್‌ಖಾನನ ಚಿತಾವಣೆಗೆ ಒಳಗಾಗಿ ನದರ್‌ಬಾರ್, ಸುಲ್ತಾನ್‌ಪುರಗಳ ಸುತ್ತಮುತ್ತಲ ಪ್ರದೇಶಗಳಲ್ಲಿ ಹಾಗೂ 'ಕೋಹ್‌ಅದಾಸನ್'ಗಳಲ್ಲಿ ದಂಗೆ ಎದ್ದು ಜನರನ್ನು ಹಿಂಸಿಸುತ್ತಿದ್ದಾನೆಂಬ ವಿಷಯ ತಿಳಿಯಿತು. ಬಾದಶಹನು ಘಾಜಿಖಾನನ ನೇತೃತ್ವದಲ್ಲಿ ಆತನ ಪಿತೂರಿಗಳನ್ನು ಅಡಗಿಸಲು ಸೈನ್ಯವನ್ನು ಕಳುಹಿಸಿದನು.

ಗುಜರಾತಿನಲ್ಲಿ ಬರಗಾಲ :

ಇದೇ ಕಾಲದಲ್ಲಿ ಗುಜರಾತಿನಲ್ಲಿ ಭಯಂಕರ ಕ್ಷಾಮವು ತಲೆದೋರಿತು. ಖಜಾನೆಯ ಮುಖಂಡ ಹೋಶಿಯಾರ್‌ಲ್‌ಮುಲ್ಕ್‌ನನ್ನು ಬಾದಶಹನು ಆಜ್ಞಾಪಿಸಿದ್ದುದೇನೆಂದರೆ– ಸವಾರಿ ಹೊರಟಾಗ ಯಾರಾದರೂ ಬೇಡಿದರೆ ಅವರೆಲ್ಲರಿಗೂ ಒಂದೊಂದು ಮುಜಫ್ಫರಿ ನಾಣ್ಯವನ್ನು ನೀಡಲು ಹೇಳಿದನು.

ಆ ಕಾಲದಲ್ಲಿ ಬಾದಶಹನು ಎರಡು ಸಲ ನಗರದ ನಾಲ್ಕು ದಿಕ್ಕಿನ ಪ್ರವಾಸ ಕಾರ್ಯವನ್ನು ಹಮ್ಮಿಕೊಂಡನು. ಆ ಸಂದರ್ಭದಲ್ಲಿ ಎಷ್ಟು ಜನರು ಕೇಳಿದರೂ ಅವರೆಲ್ಲರಿಗೂ ಒಂದೊಂದು ಮುಜಾಫ್ಫರಿಯನ್ನು ದಾನವಾಗಿ ನೀಡಲಾಯಿತು. ಸುಲ್ತಾನ್ ಬಹಾದೂರನು ಎಲ್ಲ ಹಳ್ಳಿ–ನಗರಗಳಲ್ಲೂ ಅನ್ನಛತ್ರಗಳನ್ನು ಸ್ಥಾಪಿಸಿ ಬಡಬಗ್ಗರಿಗೆ ಅನ್ನದಾನವನ್ನು ಮಾಡಿಸಿದನು. ಪ್ರಜೆಗಳ ಪ್ರಗತಿಯಲ್ಲಿ ಅಪಾರ ಸಂಪತ್ತನ್ನು ವ್ಯಯಿಸಿದನು. ಈ ಕಾರಣಗಳಿಂದಾಗಿ ಗುಜರಾತಿನ ಪ್ರತಿಯೊಂದು ಹಳ್ಳಿಗಳೂ, ಪಟ್ಟಣ–ನಗರಗಳೂ ಪ್ರಗತಿಯನ್ನು ಹಿಂದೆಂದಿಗಿಂತಲೂ ಹೆಚ್ಚಾಗಿ ಹೊಂದಿದವು.

ದಂಗೆಕೋರರ ಚಟುವಟಿಕೆಗಳು :

ಸುಲ್ತಾನ್ ಬಹಾದುರನು ಆಡಳಿತದ ಚುಕ್ಕಾಣಿಯನ್ನು ಹಿಡಿದು ಇನ್ನೂ ಕೆಲವೇ ದಿನಗಳು ಕಳೆದಿದ್ದವು. ದಂಗೆಕೋರರ ಚಟುವಟಿಕೆಗಳು ತಲೆದೋರತೊಡಗಿದವು. ಶುಜಾಉಲ್‌ಮುಲ್ಕ್‌ನು ತಲೆ ತಪ್ಪಿಸಿಕೊಂಡು ಓಡಿ ಹೋಗಿದ್ದನು. ಆತನು ಬಹಾದೂರಖಾನನ ತಮ್ಮನಾದ ಲತೀಫನ ಹತ್ತಿರ ಹೋಗಿ ಸೇರಿಕೊಂಡಿದ್ದನು. ಅಮೀರರಿಗೆ ಈ ಸುದ್ದಿ ತಿಳಿಯಿತು. ಸುಲ್ತಾನ್ ಬಹಾದೂರನು ಅಲಖ್‌ಖಾನನನ್ನು ತನ್ನ ಆಪ್ತನೆಂದು ತಿಳಿದು ಷಹಜಾದ ಲತೀಫನನ್ನು ಅಡಗಿಸಲು ನೇಮಿಸಿದ್ದನು. ಆದರೆ ಸತ್ಯಾಂಶವೇ ಬೇರೆ ಇತ್ತು. ಖೈಸರ್‌ಖಾನನೂ, ಅಲಖ್‌ಖಾನನೂ ಸುಲ್ತಾನ್ ಸಿಕಂದರನ ಕೊಲೆಯ ವಿಚಾರದಲ್ಲಿ ಇವರೂ ಭಾಗಿಯಾಗಿದ್ದವರಾಗಿದ್ದರು. ಈಗಲೂ ಷಹಜಾದ ಲತೀಫನ ಪಕ್ಷಪಾತಿಗಳಾಗಿದ್ದುದರಲ್ಲಿ ಸಂದೇಹವಿರಲಿಲ್ಲ.

ಸೆರೆ ಹಿಡಿಸಿದ :

ಸುಲ್ತಾನ್ ಬಹಾದೂರನು ಈ ಸಮಸ್ಯೆಯ ಬಗ್ಗೆ ಯೋಚಿಸ ತೊಡಗಿದನು. ಈ

ಮಧ್ಯೆ ತಾಜ್‌ಖಾನನು ಪ್ರಯಾಣ ಮಾಡುತ್ತಾ ಬಾದಶಹನಿಗೆ ತಿಳಿಸಿದ್ದುದೇನೆಂದರೆ, ಖೈಸರ್‌ಖಾನ ಮತ್ತು ಅಲಖ್‌ಖಾನರು ಷಹಜಾದ್ ಲತೀಫನಿಗೆ ಒಂದು ತಪ್ಪು ಮಾರ್ಗಕ್ಕಾಗಿ ನಾವದತ್ತ ಎಂಬ ಜಾಗಕ್ಕೆ ಕರೆದಿದ್ದಾರೆ. ಮಾರನೇ ದಿನ ಬೆಳಿಗ್ಗೆ ಎಲ್ಲ ಅಮೀರರು ಬಾದಶಹರಿಗೆ ನಮಸ್ಕರಿಸಲು ಬಂದಾಗ ಬಾದಶಹನು ಖೈಸರ್‌ಖಾನ ಮತ್ತು ಅಲಖ್‌ಖಾನರನ್ನು ಬಂಧಿಸಲು ಆಜ್ಞಾಪಿಸಿದನು. ಅವರೊಂದಿಗೆ ರಾಜಧಾನಿಯ ಮುಖಂಡನನ್ನು ಸೆರೆಹಿಡಿಯಲು ಹೇಳಿದನು. ಖ್ವಾಜಾಬಾಜು ಮತ್ತು ಜಿಯಾವುಲ್‌ಮುಲ್ಕ್‌ರ ಸಂಬಂಧಗಳು ಪಿತೂರಿಕೋರರೊಂದಿಗಿತ್ತು. ಅವರನ್ನು ಬಂಧಿಸಲಾಯಿತು. ಅವರ ಕೈಗಳನ್ನು ಕಟ್ಟಿಸಿ ಬೆತ್ತಲೆ ಕಾಲುಗಳಲ್ಲಿ ಅವರನ್ನೆಲ್ಲಾ ದರಬಾರಿಗೆ ಕರೆತರಲಾಯಿತು. ಜನರು ಅವರ ಮನೆಗಳನ್ನು ಲೂಟಿ ಮಾಡಿದರು. ಜಿಯಾಉಲ್‌ಮುಲ್ಕ್‌ನು ಕೊರಳಲ್ಲಿ ಹಗ್ಗವನ್ನು ಸುತ್ತಿಕೊಂಡು ಬಹಳವಾಗಿ ಅತ್ತನು. ಖ್ವಾಜಾಬಾಜು ಎಂಬುವನು ೫೦ ಲಕ್ಷ ತಿನ್ಗೆ ನಾಣ್ಯಗಳನ್ನು ನೀಡುವೆನೆಂದು ಗೋಳಾಡಿದನು. ಸುಲ್ತಾನ್ ಬಹಾದೂರನು ಇವರಿಬ್ಬರ ಮೇಲೆ ಕೃಪೆಯನ್ನು ತೋರಿ ಬಿಡುಗಡೆಗೊಳಿಸಿದನು. ಇದಾದ ನಂತರ ತನ್ನ ರಾಜ್ಯದಲ್ಲಿ ಎಲ್ಲಿಯೂ ದಂಗೆಕೋರರು ತಲೆ ಎತ್ತಲಿಲ್ಲ. ಶಾಂತಿ ಎಲ್ಲೆಲ್ಲೂ ನೆಲೆಸಿತು.

ಆಯುಧ ತಯಾರಕರ ಗಲಭೆ :

ಹಿಜರಿ ೯೩೩ರಲ್ಲಿ ಅರಮನೆಯಲ್ಲಿನ ಆಯುಧ ತಯಾರಕರು ಸುಮಾರು ಎರಡು ಸಾವಿರ ಮಂದಿ ಜಾಮಾ ಮಸೀದಿಯಲ್ಲಿ ಗಲಭೆಯನ್ನು ಹುಟ್ಟುಹಾಕಿದರು. ಮಸೀದಿಯ ಇಮಾಮರಿಗೆ ಖುತ್ಬಾ ಓದಲು ಬಿಡಲಿಲ್ಲ. ಅವರ ಬೇಡಿಕೆ ಏನೆಂದರೆ ಅವರೆಲ್ಲರಿಗೂ ವೇತನ ಸಿಕ್ಕಿರಲಿಲ್ಲ. ಈ ಆಯುಧ ತಯಾರಕರೆಲ್ಲರೂ ತನ್ನ ತಮ್ಮ ಲತೀಫನ ಪಕ್ಷಪಾತಿಗಳಾಗಿರುವರೆಂಬ ವಿಷಯ ಬಾದಶಹನಿಗೆ ಗೊತ್ತಿತ್ತು. ಇವರೆಲ್ಲರೂ ಆತನ ಬಳಿಗೆ ಹೋಗುವವರಾಗಿದ್ದಾರೆಂದು ಗೊತ್ತಾಗಿತ್ತು. ಆದರೂ ನ್ಯಾಯವಾಗಿ ಅವರಿಗೆ ವೇತನವನ್ನು ನೀಡಬೇಕಾಗಿರುವುದನ್ನು ಅರಿತ ಬಾದಶಹನು ಅವರೆಲ್ಲರಿಗೂ ವೇತನವನ್ನು ಹಂಚುವಂತೆ ಆಜ್ಞಾಪಿಸಿದನು.

ಷಹಜಾದ ಲತೀಫನ ಬಂಧನ :

ಅದೇ ದಿನಗಳಲ್ಲಿ ಘಾಜಿಖಾನನ ಒಂದು ಪತ್ರವು ಬಾದಶಹನಿಗೆ ತಲುಪಿತು. ವಿಷಯ–ಷಹಜಾದ ಲತೀಫನು ಒಂದು ವಿಶಾಲ ಸೈನ್ಯವನ್ನು ಸಂಗ್ರಹಿಸಿಕೊಂಡು ಸುಲ್ತಾನ್‌ಪುರಕ್ಕೆ ಬಂದಿದ್ದಾನೆ. ಪಿತೂರಿ ದಂಗೆಗಳನ್ನು ಪ್ರಾರಂಭಿಸಿದ್ದಾನೆ. ನಾನು ಅವನ ಚಟುವಟಿಕೆಗಳ ಮೇಲೆ ನಿಗಾ ಇಟ್ಟಿದ್ದರಿಂದ ಆತನು ನನ್ನ ಮೇಲೆ ಯುದ್ಧ ಮಾಡಲಿದ್ದಾನೆ ಎಂದು ತಿಳಿಯಿತು. ಆಗ ನಾನು ಸಹ ಸೈನ್ಯವನ್ನು ಸಂಗ್ರಹಿಸಿಕೊಂಡು ಒಂದು ಜಾಗದಲ್ಲಿ ನಮ್ಮಿಬ್ಬರಲ್ಲಿ ಒಂದು ಘೋರ ಯುದ್ಧವೇ ನಡೆಯಿತು.

ಅಸದಲ್‌ಮುಲ್ಕ್ ಮತ್ತು ಮುಹಾಫಿಜ್‌ಖಾನರು ಯುದ್ಧ ಮೈದಾನದಿಂದ ಓಡಿ ಹೋದರು. ರಾಯ್‌ಭೀಮನು ತನ್ನ ಸಹೋದರರೊಂದಿಗೆ ಯುದ್ಧದಲ್ಲಿ ಹತರಾದರು. ಷಹಜಾದ ಲತೀಫನು ಗಾಯಗೊಂಡು ಸೆರೆಸಿಕ್ಕಿದ್ದಾನೆ ಎಂದು ಪತ್ರದಲ್ಲಿ ಬರೆದಿತ್ತು.

ಷಹಜಾದ ಲತೀಫನ ಮರಣ :

ಈ ಪತ್ರವನ್ನು ಓದಿದ ತಕ್ಷಣ ಬಾದಶಹನು ಮುಹಿಬ್ಬುಲ್‌ಮುಲ್ಕ್‌ರ ಜೊತೆಯಲ್ಲಿ ಕೆಲವು ಅಮೀರರ ಗುಂಪನ್ನು ಸುಲ್ತಾನ್‌ಪುರಕ್ಕೆ ಕಳುಹಿಸಿದನು. ತನ್ನ ತಮ್ಮನೊಂದಿಗೆ ಹೆಚ್ಚು ಪ್ರೇಮದ ವರ್ತನೆಯನ್ನು ತೋರಿ, ಆತನ ಗಾಯಗಳನ್ನು ವಾಸಿ ಮಾಡಲು ಆಜ್ಞಾಪಿಸಿದನು. ನಂತರ ಆತನನ್ನು ಬಹಳ ಗೌರವಾದರಗಳೊಂದಿಗೆ ತನ್ನ ದರ್ಬಾರಿಗೆ ಕರೆ ತರಲು ಹೇಳಿದನು. ಬಾದಶಹನ ಆಜ್ಞೆಯನ್ನು ತಪ್ಪದೆ ಪಾಲಿಸಲಾಯಿತು. ಏನೇ ಆದರೂ ಆತನ ಗಾಯಗಳು ವಾಸಿಯಾಗದೆ ಉಲ್ಬಣಗೊಂಡವು. ಕರೆತರುವಾಗ ದಾರಿಯಲ್ಲೇ ಆತನ ಪ್ರಾಣಪಕ್ಷಿ ಹಾರಿಹೋಯಿತು. ಆತನನ್ನು ಜನಾನೇರ್ ಜಿಲ್ಲೆಯ ಬಾಲೂಲ್ ಎಂಬಲ್ಲಿ ಅಂದರೆ ಅಣ್ಣ ಸಿಕಂದರನ ಸಮಾಧಿಯ ಪಕ್ಕದಲ್ಲೇ ದಫನ್ ಮಾಡಲಾಯಿತು.

ನಸೀರ್‌ಖಾನ್ ಮಾರೂಫ್ ಮಹಮೂದ್‌ಶಾಹನ ಮರಣ :

ಅದೇ ವರ್ಷದಲ್ಲಿ ಸುಲ್ತಾನ್ ಸಿಕಂದರನ ಎರಡನೆಯ ಸಹೋದರ ನಸೀರ್‌ಖಾನ (ಸುಲ್ತಾನ್ ಮಹಮೂದ್‌ನ ಹೆಸರಿನಲ್ಲಿ ಪಟ್ಟಕ್ಕೇರಿದ್ದನು)'ಹ ಇಹಲೋಕವನ್ನು ತ್ಯಜಿಸಿದನು. ಬಾದಶಹನು ತನ್ನ ತಮ್ಮಂದಿರ ಸಮಾಧಿಗಳ ಹತ್ತಿರವಿದ್ದು ಬಡಬಗ್ಗರಿಗೆ ಅನ್ನದಾನವನ್ನು ಮಾಡಲು ಜಾಗೀರಿಯನ್ನು ಒಂದು ಗುಂಪಿಗೆ ನೀಡಿದನು.

ರಾಯ್‌ಸಿಂಗನ ಪಿತೂರಿ :

ಅದೇ ವರ್ಷ ಬಾದಶಹನಿಗೆ ಸುದ್ದಿ ತಿಳಿದಿದ್ದೇನೆಂದರೆ ರಾಯ್‌ಸಿಂಗ್ ರಾಜಬಾಲನು ಖೈಸರ್‌ಖಾನನನ್ನು ಕೊಲೆ ಮಾಡಿದ ನಂತರ ದಹೋರ್ ಕಸಾಬಾವನ್ನು ಲೂಟಿಮಾಡಿ ಹಾಳುಗೆಡವಿದನೆಂದು ತಿಳಿಯಿತು. ಅಷ್ಟೇ ಅಲ್ಲದೇ ಖೈಸರಖಾನನ ಮಗನಾದ ಜಿಯಾ ಉಲ್ ಮುಲ್ಕ್‌ನ ಅಪಾರ ಸಂಪತ್ತನ್ನೆಲ್ಲ ಒತ್ತಾಯ ಪೂರ್ವಕವಾಗಿ ಕಿತ್ತುಕೊಂಡು ಹೋಗಿ. ರಾಯಸಿಂಗನು ಪುರೆ ಎಂಬ ಪ್ರದೇಶದಲ್ಲೆಲ್ಲಾ ಲೂಟಿ ವಿನಾಶಗಳಲ್ಲಿ ತೊಡಗಿರುವ ಸುದ್ದಿ ತಿಳಿಯಿತು. ಈ ಸಮಾಚಾರವನ್ನು ಕೇಳಿದ ಬಾದಶಹನು ಬಹಳ ಗಾಬರಿಯಾದನು. ತಾನು ಸ್ವತಃ ಆ ಪ್ರದೇಶಗಳತ್ತ ಪ್ರಯಾಣವನ್ನು ಮಾಡಲು ತೀರ್ಮಾನಿಸಿದನು. ತಾಜ್‌ಖಾನನಿಗೆ ಬಾದಶಹನ ಈ ತೀರ್ಮಾನವು ಗೊತ್ತಾಗಿ ಹೀಗೆ ವಿನಂತಿಸಿದನು.

"ಯಾವುದೇ ಸಾಮ್ರಾಜ್ಯದ ಪ್ರಾರಂಭದ ದಿನಗಳಲ್ಲಿ ಇಂತಹ ಘಟನೆಗಳು

ಸಂಭವಿಸುತ್ತಿರುವುದು ಸಾಮಾನ್ಯ ವಿಷಯ. ಇಷ್ಟಕ್ಕೆಲ್ಲಾ ಹುಜೂರರು ಚಿಂತಿಸಬಾರದು. ಈ ದಂಗೆಕೋರರನ್ನು ಅಡಗಿಸಲು ನನ್ನನ್ನು ನೇಮಿಸಿದ್ದೇ ಆದರೆ ಅವರನ್ನೆಲ್ಲಾ ನಾನೇ ಅಡಗಿಸಬಲ್ಲೆ.

ತಾಜ್‌ಖಾನನ ನೇಮಕ :

ಬಹಾದೂರ್‌ಖಾನನು ತಕ್ಷಣ ತಾಜ್‌ಖಾನನಿಗೆ ಬಿರುದುಗಳನ್ನು ಕೊಟ್ಟು ಅವನೊಂದಿಗೆ ಒಂದು ಲಕ್ಷ ಸವಾರರ ಸೈನ್ಯವನ್ನು ರಾಯ್‌ಸಿಂಗನನ್ನು ಅಡಗಿಸಲು ನೇಮಿಸಿದನು. ತಾಜ್‌ಖಾನನು ಒಂದು ವಿಶಾಲ ಸೈನ್ಯದೊಂದಿಗೆ ಬಾಲ್ ಪ್ರದೇಶದಲ್ಲಿ ತಲುಪಿದನು. ದಾರಿಯಲ್ಲಿ ಸಿಕ್ಕ-ಸಿಕ್ಕ ಊರುಗಳನ್ನು ನಾಶಪಡಿಸುತ್ತಾ, ಲೂಟಿ ಮಾಡುತ್ತಾ ಹೋದನು. ಈ ಪರಿಸ್ಥಿತಿಯನ್ನು ಕಂಡ ರಾಯ್‌ಸಿಂಗನು ಬಹಳ ವಿನೀತನಾಗಿ ಬಾದಶಹನ ಒಬ್ಬ ಪ್ರಸಿದ್ಧ ಅಮೀರ ಶರ್‌ಪುಲ್‌ಮುಲ್ಕ್‌ನ ಹತ್ತಿರ ಕ್ಷಮಾ-ದಯಾ ಭಿಕ್ಷೆಯ ಪತ್ರವನ್ನು ಕಳುಹಿಸಿ, ತನ್ನ ತಪ್ಪುಗಳನ್ನು ಕ್ಷಮಿಸಲು ಪ್ರಾರ್ಥಿಸಿಕೊಂಡನು.

ತಾಜ್‌ಖಾನ ಮತ್ತು ರಾಯ್‌ಸಿಂಗನಲ್ಲಿ ಯುದ್ಧ :

ರಾಯ್‌ಸಿಂಗನ ತಪ್ಪುಗಳು ಕ್ಷಮಾಯೋಗ್ಯವಾಗಿರಲಿಲ್ಲ. ಆದ ಕಾರಣ ತಾಜ್‌ಖಾನನು ಅವನ ರಾಜ್ಯದಲ್ಲಿ ಇನ್ನೂ ಹೆಚ್ಚು ವಿನಾಶಗಳನ್ನು ಕೈಗೊಂಡನು. ರಾಯ್‌ಸಿಂಗನಿಗೆ ಕಠಿಣವಾದ ಶಿಕ್ಷೆಯನ್ನು ಕೊಡುವ ಪ್ರಯತ್ನದಲ್ಲಿದ್ದನು. ರಾಯ್‌ಸಿಂಗನು ಯುದ್ಧವಾಡಲು ವಿವಶನಾದನು. ಆತನು ಒಂದು ಇಕ್ಕಟಾದ ಪ್ರದೇಶವನ್ನು ಯುದ್ಧಕ್ಕೆ ಆರಿಸಿಕೊಂಡನು. ಅದೇ ಜಾಗಕ್ಕೆ ತಾಜ್‌ಖಾನನು ಬಂದನು. ಇಬ್ಬರಲ್ಲೂ ಯುದ್ಧವಾಯಿತು. ರಾಯ್‌ಸಿಂಗನ ಅಸಂಖ್ಯಾತ ಸಿಪಾಯಿಗಳು ಯುದ್ಧದಲ್ಲಿ ಹತರಾದರು. ತಾಜ್‌ಖಾನನ ಸೈನ್ಯದಲ್ಲಿ ಕೇವಲ ಒಬ್ಬನು ಮಾತ್ರ ಸತ್ತನು. ತಾಜ್‌ಖಾನನು ಗೆದ್ದ ನಂತರ ಬಹಳ ದಿನಗಳ ತನಕ ಅಲ್ಲಿಯೇ ಉಳಿದುಕೊಂಡನು. ಕೊನೆಗೆ ಬಾದಶಹನ ಕರೆಗೆ ಓಗೊಟ್ಟು ಅಲ್ಲಿಂದ ಹಿಂತಿರುಗಿದನು.

ಕಂಪಾಯತ್ ಶಾಸಕನ ಪದಚ್ಯುತಿ :

ಅದೇ ವರ್ಷದ ರಬೀವುಲ್ ಅವ್ವಲ್ ತಿಂಗಳಲ್ಲಿ ಸುಲ್ತಾನ್ ಬಹಾದೂರನು ಪ್ರವಾಸ ಮತ್ತು ಬೇಟೆಯಾಡಲು ರಾಜಧಾನಿಯಿಂದ ಹೊರಹೊರಟ. ಕಂಪಾಯತ್ ಬಂದರಿನ ಅನೇಕ ಶಾಸಕರು ಬಾದಶಹನ ಹತ್ತಿರ ಬಂದರು. ಕಂಪಾಯತ್‌ನ (ಅಮಲ್‌ದಾರ) ಶಾಸಕನು ಮಾಡುತ್ತಿರುವ ಹಿಂಸೆ, ತೊಂದರೆಗಳ ಬಗ್ಗೆ ದೂರು ನೀಡಿದರು. ಬಾದಶಹನು ಆ ಕ್ಷಣವೇ ಕಂಪಾಯತ್‌ನ ಆಡಳಿತಾಧಿಕಾರಿಯ ಪದಚ್ಯೂತಿಗೊಳಿಸಿ ಆ ಜಾಗದಲ್ಲಿ ತಾಜ್‌ಖಾನನನ್ನು ನೇಮಿಸಿ ಆಜ್ಞೆಯನ್ನು ಹೊರಡಿಸಿದನು. ಅದೇ ವರ್ಷ ರಾಣಾಸಾಂಗನ ಮಗನು ಬಾದಶಹನ ಸೇವೆಯಲ್ಲಿ ಬಂದನು. ಕೆಲವು ದಿನಗಳಿದ್ದು ನಂತರ ವಾಪಸ್ಸಾದನು.

ಐದರ್ ಮತ್ತು ಬಾಕರ್‌ಗಳ ಗೆಲುವು :

ಸುಲ್ತಾನ್ ಸಿಕಂದರನು ಹಿಜರಿ ೯೩೪ರಲ್ಲಿ ಐದರ್ ಮತ್ತು ಬಾಕರ್‌ಗಳನ್ನು ಗೆಲ್ಲಲು ಹೋದನು. ಬಹಳ ಕಡಿಮೆ ಸಮಯದಲ್ಲಿ ಈ ಕೋಟೆಗಳನ್ನು ಗೆದ್ದು ಜಿನಾನೇರ್‌ಗೆ ವಾಪಸ್ಸಾದನು.

ದೇವ್ ಬಂದರಿನಲ್ಲಿ ಫಿರಂಗಿಗಳ ಬಂಧನ :

ಕೆಲವು ತಿಂಗಳ ನಂತರ ಬಾದಶಹನು ಭರೋಜ್ ಕೋಟೆಯನ್ನು ಗೆಲ್ಲುವ ಮನಸ್ಸು ಮಾಡಿದನು. ಆ ಉದ್ದೇಶಕ್ಕೆಂದು ಕಂಪಾಯತ್ ಪ್ರದೇಶಕ್ಕೆ ಬಂದನು. ಒಂದು ದಿನ ಬಾದಶಹನು ಸಮುದ್ರ ದಡದಲ್ಲಿ ವಾಯು ವಿಹಾರಕ್ಕೆಂದು ಹೊರಟಿದ್ದನು. ದೇವ್ ಬಂದರಿನಿಂದ ಒಂದು ಹಡಗು ಬಂದಿತು. ಹಡಗಿನಲ್ಲಿದ್ದವರು ಬಾದಶಹನಿಗೆ ಹೇಳಿದ್ದೇನೆಂದರೆ–ಗಾಳಿಯ ವಿಪರೀತ ಪರಿಸ್ಥಿತಿಯಿಂದಾಗಿ ಫಿರಂಗಿಯವರ ಒಂದು ಹಡಗು ದೇವ್‌ಬಂದರಿಗೆ ಬಂದು ಬಿಟ್ಟಿದೆ. ಖವಾಮುಲ್‌ಮುಲ್ಕ್‌ನು ಆ ಹಡಗನ್ನು ತನ್ನ ವಶಕ್ಕೆ ತೆಗೆದುಕೊಂಡಿದ್ದಾನೆ. ಹಡಗಿನಲ್ಲಿದ್ದ ಎಲ್ಲ ಫಿರಂಗಿಯವರನ್ನು ತನ್ನ ವಶಕ್ಕೆ ಪಡೆದಿದ್ದಾನೆ. ಸುಲ್ತಾನ್ ಬಹಾದೂರನು ಈ ಸುದ್ದಿಯನ್ನು ತಿಳಿದು ಬಹಳ ಸಂತೋಷಪಟ್ಟನು. ಆತನು ಭೂಮಾರ್ಗವಾಗಿ ದೇವ್‌ಬಂದರವನ್ನು ತಲುಪಿದನು. ಅಲ್ಲಿ ಖವಾಮುಲ್‌ಮುಲ್ಕ್‌ನ ಹತ್ತಿರ ಸಮೀಪಿಸಿದಾಗ ಖವಾಮುಲ್‌ಮುಲ್ಕ್‌ನು ಫಿರಂಗಿಗಳನ್ನು ಬಾದಶಹನ ಮುಂದೆ ಹಾಜರು ಪಡಿಸಿದನು. ಬಾದಶಹನು ಅವರನ್ನೆಲ್ಲಾ ಇಸ್ಲಾಂ ಧರ್ಮಕ್ಕೆ ಪರಿವರ್ತಿಸಿ ವಾಪಸ್ಸಾದನು.

ಮೀರಾನ್ ಮಹಮ್ಮದ್‌ಶಾಹ್‌ನ ಅರ್ಜಿ :

ಅದೇ ವರ್ಷ ಸುಲ್ತಾನ್‌ನ ತಂಗಿಯ ಮಗ (ಅಳಿಯ)ನಾದ ಶಾಸಕ ಅಸೀರ್ ಮೀರಾನ್ ಮಹಮ್ಮದ್‌ಶಾಹನಿಂದ ಒಂದು ಪತ್ರವು ಬಂದಿತು. ಅಲ್ಲಾವುದ್ದೀನ್ ಇಮಾದ್‌ಷಾಹನು ಬಹಳ ವಿನಮ್ರನಾಗಿ ಬರೆದಿರುವುದೇನೆಂದರೆ ಬುರ್‌ಹಾನ ನಿಜಾಂಷಾಹ್ ಬಹರಿ ಮತ್ತು ಖಾಸಿಂ ತುರ್ಕ ಬಿದರಿ ಬರಾರ್ ಪ್ರದೇಶದಲ್ಲಿ ಹಿಂಸಾತ್ಮಕ ಕಾರ್ಯಗಳನ್ನು ನಡೆಸುತ್ತಿದ್ದಾನೆ. ಆದ್ದರಿಂದ ನಾನು ಇಮಾದಶಾಹನಿಗೆ ಸಹಾಯ ಮಾಡಲು ಹೋಗಿದ್ದೆ. ಎರಡೂ ಕಡೆಗಳಲ್ಲಿ ಯುದ್ಧವಾಯಿತು. ನನ್ನ ಎದುರಿಗೂ ಒಂದು ಸೈನ್ಯವು ಬಂದಿತು. ನಾನು ಆ ಸೈನ್ಯವನ್ನು ಸೋಲಿಸಿದೆ. ಇದೇ ಸಂದರ್ಭದಲ್ಲಿ ನಿಜಾಂಶಾಹ ಬಹರಿಯು ಒಂದು ಕಡೆ ಅಡಗಿದ್ದನು. ಆತನು ಅಲ್ಲಾವುದ್ದೀನ್ ಇಮಾದ್‌ಶಾಹನ ಮೇಲೆ ಆಕ್ರಮಣವನ್ನು ಮಾಡಿ ಆತನನ್ನು ಸೋಲಿಸಿ, ನನ್ನ ಕೆಲವು ಆನೆಗಳನ್ನು ತನ್ನೊಂದಿಗೆ ತೆಗೆದುಕೊಂಡು ಹೋದನು. ನಿಜಾಮುಲ್‌ಮುಲ್ಕ್‌ನು ಬರಾರ್ ಪ್ರದೇಶದ ಒಂದು ಸುಂದರ ಭಾಗವಾದ ಮಾಹೋರ್ ಕೋಟೆಯನ್ನು

ತನ್ನ ವಶಕ್ಕೆ ತೆಗೆದುಕೊಂಡಿರುತ್ತಾನೆ. ಈ ಪರಿಸ್ಥಿತಿಗಳ ಬಗ್ಗೆ ತಾವು ಯಾವ ಆಜ್ಞೆಯನ್ನು ನೀಡುತ್ತೀರೋ ಅದರ ಮೇಲೆ ನಡೆದುಕೊಳ್ಳುತ್ತೇವೆ ಎಂಬ ವಿಷಯಗಳು ಪತ್ರದಲ್ಲಿದ್ದವು.

ಬಾದಶಹನ ಉತ್ತರ :

ಬಾದಶಹನು ವೀರಾನ್ ಮಹಮ್ಮದ್‌ಶಾಹನ ಪತ್ರಕ್ಕೆ ಉತ್ತರ ಹೀಗಿತ್ತು. ಹಿಂದಿನ ವರ್ಷದಲ್ಲೂ ಅಲ್ಲಾವುದ್ದೀನನು ಇದೇ ತೆರನಾದ ಅರ್ಜಿಯನ್ನು ಬರೆದಿದ್ದನು. ನಹರ್‌ವಾಲಾದ ಶಾಸಕನು ಅಲ್ಲಿಗೆ ಹೋಗಿ ಇಬ್ಬರಲ್ಲೂ ಸಂಧಿ ಮಾಡಿಸಿದ್ದನು. ಆದರೂ ಜಗಳದ ಪ್ರಾರಂಭ ನಿಜಾಮುಲ್‌ಮುಲ್ಕನ ಕಡೆಯಿಂದ ಆಗಿದೆ. ಆದ್ದರಿಂದ ಹಿಂಸೆಗೊಳಗಾಗಿರುವವರನ್ನು ರಕ್ಷಿಸುವುದು ನಮ್ಮ ಆದ್ಯಕರ್ತವ್ಯವೆಂದು ಭಾವಿಸಬೇಕಾಗಿದೆ.

ದಕ್ಷಿಣದವರ ಮೇಲೆ ಯುದ್ಧದ ಇಚ್ಛೆ :

ಹಿಜರಿ ೯೩೫ ಮೊಹರಂ ತಿಂಗಳಲ್ಲಿ ಸುಲ್ತಾನ್ ಬಹಾದೂರನು ನಿಜಾಂಶಾಹನ ದೇಶವನ್ನು ಗೆಲ್ಲುವ ಆಸೆಯಿಂದ ದಕ್ಷಿಣದತ್ತ ಪ್ರಯಾಣವನ್ನು ಬೆಳೆಸಿದ. ಬಾದಶಹನು ಸಾಮಗ್ರಿಗಳ ಸಂಗ್ರಹಕ್ಕೆಂದು ಬರೋಡದಲ್ಲಿ ಕೆಲಕಾಲ ತಂಗಿದ್ದನು.

ಭಟ್ನ ಶಾಸಕನ ಆಗಮನ :

ಅದೇ ವರ್ಷ ಭಟ್ನದ ಶಾಸಕನಾದ ಫೈರೋಜನು ಮೊಗಲರಿಂದ ತುಂಬಾ ತೊಂದರೆಗಳಿಗೆ ಸಿಲುಕಿ ಅಲ್ಲಿಂದ ಓಡಿ ಬಂದು ಸುಲ್ತಾನ್ ಬಾಹಾದೂರನ ಆಶ್ರಯವನ್ನು ಪಡೆದಿದ್ದನು. ಬಾದಶಹನು ಆತನ ಸ್ಥಿತಿಯನ್ನು ಕಂಡು ಮರುಗಿದನು. ಆತನ ಖರ್ಚಿಗೆಂದು ೧೨ ಸಾವಿರ ತಿನ್ಗೆ ನಾಣ್ಯಗಳನ್ನು ನೀಡಿ ಅವನಿಗೆ ಆಶ್ವಾಸನೆಯನ್ನು ನೀಡಿದ್ದು ಹೀಗೆ–ನಿನ್ನ ವಂಶಪಾರಂಪರ್ಯವಾದ ರಾಜ್ಯವನ್ನು ನಿನಗೆ ಮೊಗಲರ ಹಿಡಿತದಿಂದ ವಾಪಸು ಖಂಡಿತವಾಗಿ ಕೊಡಿಸುತ್ತೇನೆಂದು ವಾಗ್ದಾನವನ್ನು ಮಾಡಿದನು. ಸುಲ್ತಾನ್ ಬಹಾದೂರನ ಕೀರ್ತಿ–ಶೌರ್ಯಗಳು ಬಹಳ ದೂರ–ದೂರದವರೆಗೆ ಹರಡಲಾರಂಭಿಸಿದವು. ಈ ಪ್ರಯಾಣದಲ್ಲಿ ದೂರದ–ಹತ್ತಿರದ ಎಲ್ಲ ರಾಜ–ಮಹಾರಾಜರುಗಳೂ ಬಾದಶಹನ ಸೇವೆಯಲ್ಲಿ ಹಾಜರಾಗಿ ತಮ್ಮ ಅಧೀನತೆಯನ್ನು ಸ್ವೀಕರಿಸಿದರು.

ಸುಲ್ತಾನ್ ಬಹಾದೂರನ ಕೀರ್ತಿ ಪ್ರಸಾರ :

ಪೂರ್ಬಿಯಾದಿಂದ ರಾಜ ಗ್ವಾಲಿಯರನ ತಮ್ಮನ ಮಗನು ತನ್ನೊಂದಿಗೆ ಅನೇಕ ಸರದಾರರನ್ನು ಕರೆದುಕೊಂಡು ಬಾದಶಹನ ಸೇವೆಯಲ್ಲಿ ಹಾಜರಾದನು. ರಾಣಾಸಾಂಗನ ತಮ್ಮನ ಮಗ ಭರೋನ್, ಪೃಥ್ವಿರಾಜನು ಸಹ ಕೆಲವು ರಾಜಪೂತರೊಂದಿಗೆ ಬಾದಶಹನ ಸೇವೆಯಲ್ಲಿ ದಾಖಲಾದರು. ದಕ್ಷಿಣದ ಕೆಲವು ಸರದಾರರೂ ಶಾಹಿ ಸೇವೆಯಲ್ಲಿ

ಸೇರಿಕೊಂಡರು. ಇವರೆಲ್ಲರನ್ನೂ ಬಿರುದು-ಬಹುಮಾನಗಳೊಂದಿಗೆ ಬಾದಶಹನು ಸನ್ಮಾನಿಸಿದನು.

ಅಮಾದ್‌ಶಾಹ್‌ನ ಸಂದೇಶ :

ಸುಲ್ತಾನ್ ಬಹಾದೂರನು ಬಹಳ ಕಾಲದವರೆಗೆ ಜನಾನೇರ್‌ನ ಮಹಮ್ಮದಾಬಾದಿನಲ್ಲೇ ಉಳಿಯ ಬೇಕಾಯಿತು. ಬಾದಶಹರ ಸಹಾಯವನ್ನು ಅಮಾದ್‌ಶಾಹನು ಆದಷ್ಟು ಬೇಗ ಬಯಸುತ್ತಿದ್ದನು. ಆದರೆ ಸುಲ್ತಾನ್‌ನು ಅತ್ತ ಹೋಗದಿದ್ದುದಕ್ಕೆ ತನ್ನ ಮಗನಾದ ಖಜಿರ್‌ಖಾನನನ್ನು ಬಾದಶಹರ ಬಳಿಗೆ ಕಳುಹಿಸಿ ಈ ಸಂದೇಶ-"ಬುರ್‌ಹಾನ್ ನಿಜಾಂಶಾಹ್ ಬಹರಿಯು ಎಷ್ಟು ಗರ್ವದಿಂದ ವರ್ತಿಸುತ್ತಿದ್ದಾನೆಂದರೆ-ಆತನ ಸಮ್ಮುಖದಲ್ಲಿ ಯಾರೂ ನಿಲ್ಲುವಂತಿಲ್ಲ. ನಾನು ಅನೇಕ ಸಲ ಅವನೊಂದಿಗೆ ಸಂಧಿಮಾಡಿಕೊಳ್ಳಲು ಪ್ರಯತ್ನಿಸಿದರೂ ಆತನು ಒಪ್ಪುತ್ತಿಲ್ಲ. ಆದ್ದರಿಂದ ತಾವುಗಳು ದಕ್ಷಿಣದತ್ತ ಪ್ರಯಾಣಿಸಿದರೆ ಈ ನಿಮ್ಮ ಸೇವಕನಿಗೆ ಬಹಳ ಕೃಪೆ ಮಾಡಿದಂತಾಗುತ್ತದೆ ಎಂದು ಹೇಳಿಕಳುಹಿಸಿದನು.

ಸುಲ್ತಾನ್ ಬಹಾದುರ್ ಬುರ್ಹಾನ್‌ಪುರದಲ್ಲಿ :

ಬಾದಶಹನು ಅಮಾದ್‌ಶಾಹನ ಪ್ರಾರ್ಥನೆಯನ್ನು ಒಪ್ಪಿಕೊಂಡನು. ಆತನು ನರ್ಮದಾ ನದಿಯ ದಡಕ್ಕೆ ತಲುಪಿದಾಗ ಆತನ ಸ್ವಾಗತಕ್ಕಾಗಿ ಮೀರಾನ್ ಮಹಮ್ಮುದ್‌ಶಾಹ್ ಫಾರೂಖಿ ಎಂಬುವನು ಬಂದು ಬಾದಶಹನನ್ನು ಬುರ್ಹಾನಪುರದತ್ತ ಕರೆದುಕೊಂಡು ಹೋದನು. ಅಲ್ಲಿ ಸುಲ್ತಾನ್ ಬಹಾದೂರನಿಗೆ ಗೌರವಪೂರ್ಣ ಆತಿಥ್ಯ ದೊರೆಯಿತು. ಇಲ್ಲಿಗೆ ಅಮಾದುಲ್‌ಮುಲ್ಕ್‌ನು ಸಹ ಕಾವೇಲ್ ನದಿಯಿಂದ ಬಂದನು. ಆತನು ಅನೇಕ ಕುದುರೆ ಹಾಗೂ ಬಹುಮಾನಗಳನ್ನು ಬಾದಶಹನಿಗೆ ನೀಡಿದನು.

ಬಾದಶಹನು ಬರಾರ್‌ನಲ್ಲಿ :

ನಂತರ ಬಾದಶಹನು ಬರಾರ್‌ನತ್ತ ಹೊರಟನು. ಅಲ್ಲಿಂದ ಸುಲ್ತಾನ್‌ನು ಜಾಲ್ನ ತಲುಪಿ, ಅಲ್ಲಿ ಸ್ವಲ್ಪ ಕಾಲ ತಂಗಿದನು. ಆ ನಗರವನ್ನು ತನ್ನ ವಶಕ್ಕೆ ಪಡೆಯಲು ಚಿಂತಿಸಿದನು. ಅಮಾದುಲ್‌ಮುಲ್ಕ್‌ನಿಗೆ ಇದು ಇಷ್ಟವಾಗದಿದ್ದರೂ ವಿವಶನಾಗಿ ಬರಾರನಲ್ಲಿ ಬಾದಶಹನ ಹೆಸರಿನಲ್ಲಿ 'ಕುತ್ಬಾ' (ಪ್ರವಚನ) ಓದಿಸಿದನು. ಅಮಾದುಲ್‌ಮುಲ್ಕ್‌ನು ಮೀರಾನ್ ಮಹಮ್ಮದ್‌ಫಾರೂಖಿಯಿಂದ ಶಿಫಾರಸ್ಸು ಮಾಡಿಸಿ ಬರಾರ್‌ನಿಂದ ಮುಂದೆ ಪ್ರಯಾಣವನ್ನು ಮಾಡುವಂತೆ ಪ್ರೇರೇಪಿಸಿದನು. ಬರಾರ್ ಬಿಟ್ಟು ಹೊರಟರು.

ಅಮಾದ್‌ಶಾಹನು ಪರಾರಿ :

ಸುಲ್ತಾನ್ ಬಹಾದೂರನು ಅಹಮದ್ ನಗರವನ್ನು ತಲುಪಿದಾಗ ಅಲ್ಲಿ ಆ ರಾತ್ರಿ ಒಂದು ಭಯಾನಕ ಸ್ವಪ್ನವನ್ನು ಕಂಡನು. ಅಲ್ಲಿಂದ ಆತನು ದೌಲತಾಬಾದಿಗೆ ಹೋದನು. ನಿಜಾಮಶಾಹಿ ಇತಿಹಾಸದಲ್ಲಿ ಬರೆದಿರುವಂತೆ ದೌಲತಾಬಾದಿನಲ್ಲಿ ಸುಲ್ತಾನ್ ಬಹದೂರನು ಕೋಟೆಯ ನೀರಿನ ಕೊಳ(ಹೌಸ್)ದ ಹತ್ತಿರ ಉಳಿದುಕೊಂಡಿದ್ದನು. ಆತನು ಅಮಾದುಲ್‌ಮುಲ್ಕ್‌ನನ್ನು ಅಮೀರರ ಒಂದು ಗುಂಪಿನೊಡನೆ ಕೋಟೆಯ ಮುತ್ತಿಗೆಯನ್ನು ಹಾಕಿಕೊಳ್ಳಲು ನೇಮಿಸಿದನು. ಕೆಲವು ದಿನಗಳ ನಂತರ ಅಲ್ಲಾವುದ್ದೀನ ಅಮಾದಶಾಹನು ದಕ್ಷಿಣ ರಾಜರುಗಳೊಂದಿಗೆ ಪಿತೂರಿಯನ್ನು ರಚಿಸಿದನು. ಆತನನ್ನೂ ಎಲ್ಲರೂ ಚಿಮಾರಿ ಹಾಕತೊಡಗಿದರು. ಸುಲ್ತಾನ್ ಬಹಾದುರನನ್ನು ಅಷ್ಟು ದೂರದಿಂದ ದಕ್ಷಿಣದತ್ತ ಏಕೆ ಕರೆಸಿದ್ದೆ ಎಂದು ಎಲ್ಲರೂ ಬೈಯಲಾರಂಭಿಸಿದರು. ಅಮಾದನು ರಾತ್ರಿ ವೇಳೆಯಲ್ಲಿ ತನ್ನೆಲ್ಲದನ್ನೂ ಬಿಟ್ಟು ಓಡಿಹೋಗಿದ್ದನು.

ಸುಲ್ತಾನ್ ಬಹಾದೂರನ ವಾಪಸ್ಸು :

ದಕ್ಷಿಣದವರು ಗುಜರಾತಿನ ದಾರಿಯನ್ನು ಮುಚ್ಚಿ ಬಿಟ್ಟಿದ್ದರು. ಇದರಿಂದಾಗಿ ಆಹಾರ ಸಾಮಗ್ರಿಗಳು ಮತ್ತು ಇನ್ನೂ ಇತರೆ ಸಾಮಾನುಗಳನ್ನು ಕಳುಹಿಸುವ ವ್ಯವಸ್ಥೆ ಬಂದ ಆಗಿತ್ತು. ಬುರ್‌ಹಾನ ನಿಜಾಮಶಾಹ ಗುಜರಾತಿಯು ಸೈನ್ಯದೊಂದಿಗೆ ಬಂದು ಸ್ವಲ್ಪ ದೂರದ ತನಕ ಪ್ರಯಾಣದಲ್ಲಿ ಸಹಕರಿಸಿದನು. ಬುರ್‌ಹಾನನು ವಚನವನ್ನು ಕೊಟ್ಟಿದ್ದೇನೆಂದರೆ– ನಾನು ಮೀರಾನ್ ಮಹಮ್ಮದ್ ಫಾರೂಖಿಯ ಆನೆಗಳನ್ನು ಆತನಿಗೆ ವಾಪಸ್ಸು ಕೊಟ್ಟು ಬಿಡುತ್ತೇನೆಂದು ಹಾಗೂ ಅಹಮದಾನಗರದಲ್ಲಿ ಸುಲ್ತಾನ್ ಬಹಾದೂರನ ಕುತ್ಬಾ (ಕೀರ್ತಿಯ ಪ್ರವಚನ) ಓದಿಸಲಾಗುವುದು. ಸುಲ್ತಾನ್‌ನು ಈ ಷರತ್ತುಗಳನ್ನು ಒಪ್ಪಿಕೊಂಡನು. ಹಿಜರಿ ೯೩೭ರಲ್ಲಿ ಆತನು ಗುಜರಾತಿಗೆ ವಾಪಸ್ಸ ಬಂದನು. ಮಳೆಗಾಲವನ್ನು ಮಹಮ್ಮದಾಬಾದಿನಲ್ಲಿ ಕಳೆದನು.

ಐದರ್ ಕೋಟೆಯತ್ತ ಪ್ರಯಾಣ :

ಸುಲ್ತಾನ್ ಬಹಾದೂರನು ಹಿಜರಿ ೯೩೭ರಲ್ಲಿ ಐದರ್ ಕೋಟೆಯತ್ತ ಪ್ರಯಾಣವನ್ನು ಬೆಳೆಸಿದನು, ಆತನು ಜಾನಪುರವೆಂಬ ಒಂದು ಹಳ್ಳಿಯಲ್ಲಿನ ಖುದಾವಂದಖಾನ, ರಫೀವುಲ್‌ಮುಲ್ಕಲ್–ಖಿತಾಬ್ ಅಥವಾ ಅಮಾದುಲ್‌ಮುಲ್ಕ್‌ನ ಅಧೀನದಲ್ಲಿ ಒಂದು ವಿಶಾಲ ಸೈನ್ಯ ಹಾಗೂ ಅಸಂಖ್ಯಾತ ಆನೆಗಳನ್ನು ಕೊಟ್ಟು "ಪಾಕರ್ಕಿ"ಯ ಕಡೆಗೆ ಕಳುಹಿಸಿದನು. ತಾನು ಕಂಪಾಯತ್ ಬಂದರಿನತ್ತ ಬಂದನು. ಇಲ್ಲಿ ಒಂದು ರಾತ್ರಿ ತಂಗಿದ್ದು ಹಡಗಿನಲ್ಲಿ ಕುಳಿತು ದೇಬ್ ಬಂದರಿನತ್ತ ಹೊರಟನು. ಅಲ್ಲಿ ತಲುಪಿ ನೋಡಿದಾಗ ದೂರ–ದೂರದ ದೇಶಗಳಿಂದ ಅನೇಕ ಹಡಗುಗಳಲ್ಲಿ ಅನೇಕ ರೀತಿಯ

ಸಾಮಾನುಗಳು ಆಹಾರ ಪದಾರ್ಥಗಳು ತುಂಬಿಕೊಂಡು ಬಂದು ಇಳಿಸಿದ್ದಾರೆ. ಬಾದಶಹನು ಬಹಳ ಸಾಮಾನುಗಳನ್ನು ಖರೀದಿಸಿದ್ದನು. ಅದರಲ್ಲಿ "ಪಿಸ್ತಾ" ೧೬೦೦ ಮಣಗಳಷ್ಟಿತ್ತು.

ಬಾನ್‌ಸೋಲ ಮತ್ತು ಡೊಂಗರ್‌ಪುರದ ನಾಶ :

ಮುಸ್ತಫಾಖಾನ್ ರೂಮಿಯ ಜೊತೆಯಲ್ಲಿ ರೋಮ್ ಜನಗಳ ಒಂದು ಗುಂಪು ಬಾದಶಹನನ್ನು ಕಾಣಲು ಬಂದಿತು. ಬಾದಶಹನು ಸಂತೋಷಪಟ್ಟು ಅವರಿಗೆ ಇಳಿದುಕೊಳ್ಳುವ ವ್ಯವಸ್ಥೆಯನ್ನು ಮಾಡಿದನು. ಬಾದಶಹನು ನಂತರ ಮಲಿಕ್ ಅಯಾಜನಿಗೆ ಅಲ್ಲಿನ ವ್ಯವಸ್ಥೆಯ ಜವಾಬ್ದಾರಿಯನ್ನು ಕೊಟ್ಟು ತಾನು ಬಾನ್‌ಸ್ವಾಲ ಮತ್ತು ಡೋಂಗರ್‌ಪುರದತ್ತ ಹೊರಟನು. ಬಾದಶಹನು ಆ ಪ್ರದೇಶಗಳನ್ನು ಚೆನ್ನಾಗಿ ಲೂಟಿ ಮಾಡಿದನು. ಸಾಕಷ್ಟು ನಾಶ ಪಡಿಸಿದನು. ಇಲ್ಲಿನ ರಾಜರುಗಳಿಂದ ಕಪ್ಪ-ಕಾಣಿಕೆಗಳನ್ನು ವಸೂಲು ಮಾಡಿದನು. ಇದಾದ ನಂತರ ಬಾದಶಹನು ಜನಾನೇರ್‌ನ ಮಹಮ್ಮದಾಬಾದಿಗೆ ಹಿಂತಿರುಗಿದನು.

ಲೋಧಿ ಅಮೀರರ ಆಗಮನ :

ಇದೇ ಸಂದರ್ಭದಲ್ಲಿ ಸುಲ್ತಾನ್ ಇಬ್ರಾಹಿಂ ಲೋಧಿಯ ಅಮೀರರಾದ ಉಮರ್‌ಖಾನ ಮತ್ತು ಖುತುಬ್‌ಖಾನ್ ಮುಂತಾದವರು ಜಹೀರುದ್ದೀನ್ ಬಾಬರನ ಹೆದರಿಕೆಯಿಂದ ಓಡಿ ಬಂದು ಗುಜರಾತಿನಲ್ಲಿ ಆಶ್ರಯವನ್ನು ಪಡೆದಿದ್ದರು. ಸುಲ್ತಾನ್ ಬಹದೂರನು ಮೊದಲ ದಿನವೇ ಅಮೀರರಿಗೆ ೩೦೦ ಜರಿ ಜಡಿತಕೋಟುಗಳನ್ನು, ೫೦ ಕುದುರೆಗಳನ್ನು, ಅನೇಕ ಲಕ್ಷ 'ತಿನ್ಗೆ' ಚಿನ್ನದ ನಾಣ್ಯಗಳನ್ನು ನಗದಾಗಿ ನೀಡಿದನು.

ಮೆಹರಾಬದ ಪ್ರಯಾಣ :

ಆ ಅಮೀರರ ವ್ಯವಸ್ಥೆಯನ್ನು ಮಾಡಿದ ಮೇಲೆ ಬಾದಶಹನು ಮೆಹರಾಬದತ್ತ ರವಾನೆಯಾದನು. ಬಾದಶಹನು ಅಲ್ಲಿಗೆ ಬಂದಾಗ ಖುದಾವಂದ್‌ಖಾನ್ ಮತ್ತು ಇತರೆ ಅಮೀರರು ಬಾದಶಹನ ಸೇವೆಯಲ್ಲಿ ಹಾಜರಾದರು. ಬಾದಶಹನು ಮೆಹರಾಬದಿಂದ 'ಪಾಕರ್' ಎಂಬಲ್ಲಿಗೆ ಬಂದನು. ಈ ಪ್ರದೇಶದಲ್ಲಿನ ಪ್ರಜೆಗಳ ಪ್ರಗತಿಗೆ ಯೋಗ್ಯ ವ್ಯವಸ್ಥೆಗಳನ್ನು ನೆರವೇರಿಸಿದನು. ಎಲ್ಲ ಕಡೆಗಳಲ್ಲೂ ಠಾಣೆದಾರರನ್ನು (ಪೋಲಿಸ ವ್ಯವಸ್ಥೆ) ನೇಮಿಸಿದನು.

ಪಾಕರ್‌ನ ರಾಜನು ಬಾದಶಹನ ಸೇವೆಯಲ್ಲಿ :

ಪಾಕರನ ರಾಜ ಪರಶುರಾಮನು ಬಾದಶಹನ ಸೇವೆಯಲ್ಲಿ ಬಂದನು. ಅವನ ಮಗನು ಬಾದಶಹನ ಎದುರಿನಲ್ಲಿ ಇಸ್ಲಾಂ ಧರ್ಮವನ್ನು ಸ್ವೀಕರಿಸಿದನು. ಇದರಿಂದಾಗಿ ಬಾದಶಹನು ಆತನನ್ನು ತನ್ನ ಆಪ್ತರ ಗುಂಪಿನಲ್ಲಿ ಸೇರಿಸಿಕೊಂಡನು.

ಪರಶುರಾಮನ ಸೋದರನ ಪ್ರಾಣ ಉಳಿಯಿತು :

ಪರಶುರಾಮನ ತಮ್ಮನು ತನ್ನ ಪ್ರಾಣಕ್ಕೆ ಅಪಾಯವಿದೆ ಎಂದು ತಿಳಿದು ಕಾಡುಗಳಲ್ಲಿ ತಿರುಗಾಡುತ್ತಿದ್ದನು. ಕೊನೆಗೆ ರಾಣಾಸಾಂಗನ ಮಗ 'ಬರ್ತನ್‌ಸಿ'ನ ಹತ್ತಿರ ತಲುಪಿದನು. ಆತನ ಕಡೆಯಿಂದ ಸುಲ್ತಾನ್‌ನ ಸೇವೆಯ ಅವಕಾಶಕ್ಕೆ ಪ್ರಯತ್ನಿಸಿದನು. ಆಕಸ್ಮಿಕವಾಗಿ ಆ ದಿನಗಳಲ್ಲಿ ಸುಲ್ತಾನ್ ಬಹಾದೂರನು ಬೇಟೆಯಾಡಲು ಬಾನ್‌ಸ್ವಾಲಂ ಪ್ರದೇಶದತ್ತ ಬಂದಿದ್ದನು. ಬರ್ತನ್‌ಸಿಯು ಬಾದಶಹನ ಹತ್ತಿರ ತನ್ನ ದೂತನನ್ನು ಕಳುಹಿಸಿ ಬಹಳ ವಿನಮ್ರತೆಯಿಂದ ಪರಶುರಾಮನ ತಮ್ಮ 'ಚಕಾ'ನ ತಪ್ಪುಗಳನ್ನು ಮನ್ನಿಸಿ ಅವನ ಪ್ರಾಣವನ್ನು ಉಳಿಸಬೇಕೆಂದು ಪ್ರಾರ್ಥಿಸಿದ್ದನು. ಬಾದಶಹನು ಬರ್ತನ್‌ಸಿಯ ಶಿಫಾರಸ್ಸನ್ನು ಒಪ್ಪಿಕೊಂಡು ಚಕಾನನ್ನು ತನ್ನ ಬಳಿಗೆ ಕರೆಯಿಸಿಕೊಂಡು ಆತನ ತಪ್ಪನ್ನು ಕ್ಷಮಿಸಿದನು.

ಘಾಟ್‌ಕರ್ಜಿಯಲ್ಲಿ ಬಾದಶಹನು ಒಂದು ಸುಂದರವಾದ ಮಸೀದಿಯನ್ನು ಕಟ್ಟಿಸಿ, ಆ ಹಳ್ಳಿಯನ್ನು ಪೃಥ್ವಿರಾಜನ ಜಾಗೀರಿ ಎಂದು ಘೋಷಿಸಿ ಅವನ ವಶಕ್ಕೆ ಕೊಟ್ಟನು. ಪಾಕರ್ ಪ್ರದೇಶದ ಉಳಿದ ಭೂಭಾಗವನ್ನು ಎರಡು ಭಾಗಗಳಾಗಿ ವಿಂಗಡಿಸಿ, ಪೃಥ್ವಿರಾಜನಿಗೂ ಚಕಾಕನಿಗೂ ಹಂಚಿಕೊಟ್ಟನು.

ಚಿತ್ತೋರನ ಕಸಬಾಗಳ ನಾಶ :

ಬಾದಶಹನು ಕೆಲವು ದಿನಗಳ ತನಕ ಪ್ರವಾಸ ಮತ್ತು ಬೇಟೆಯ ಸಲುವಾಗಿ ಅದೇ ಜಾಗದಲ್ಲಿ ತಂಗಿದ್ದನು. ಆ ದಿನಗಳಲ್ಲಿ ಶಾಹಿ ಗುಪ್ತಚರರು ಸುದ್ದಿ ಮುಟ್ಟಿಸಿದ್ದೇನೆಂದರೆ–ಸುಲ್ತಾನ್ ಮಹಮೂದ್ ಖಿಲ್ಜಿಯು ಆತನ ಮೇಲೆ ಸುಲ್ತಾನ್ ಮುಜಾಫ್ಫರರ ಅಪಾರ ಉಪಕಾರಗಳ ಹೊರೆ ಇದ್ದರೂ ಮಾಂಡು ಶಾಸಕ ಶರ್‌ಜಾಹ್‌ಖಾನನಿಗೆ ಹೇಳಿ ಕಳುಹಿಸಿ ಚಿತ್ತೋರಿನ ಅನೇಕ ಕಸಬಾಗಳನ್ನು ನಾಶ ಪಡಿಸಿರುತ್ತಾನೆ. ಈಗ ಶರ್‌ಜಹಖಾನನು ಉಜ್ಜೈನಿಯಲ್ಲಿ ತಂಗಿರುತ್ತಾನೆ. ಈಗ ಸುಲ್ತಾನ್ ಮಹಮೂದ್ ಖಿಲ್ಜಿಯ ಆಜ್ಞೆಯನ್ನು ತಿರಸ್ಕರಿಸುತ್ತಿದ್ದಾನೆ. ದಂಗೆ ಏಳಲು ಸಿದ್ಧನಿದ್ದಾನೆ. ಹಾಗೂ ಆತನ ವಿರುದ್ಧ ಯುದ್ಧ ಸಿದ್ಧತೆಯಲ್ಲಿದ್ದಾನೆಂದು ತಿಳಿಸಿದರು.

ಬರ್ತನ್‌ಸಿಯ ಸಂದೇಶ :

ಅದೇ ದಿನಗಳಲ್ಲಿ ರಾಣಾಸಾಂಗನ ಮಗ ಬರ್ತನ್‌ಸಿಯ ದೂತನು ಸುಲ್ತಾನ್ ಬಹಾದೂರನ ಸೇವೆಯಲ್ಲಿ ಹಾಜರಾದನು. ಆತನು ಬಾದಶಹನಿಂದ ಪ್ರಾರ್ಥಿಸುವುದೇನೆಂದರೆ–ತಾವು ದಯವಿಟ್ಟು ಸುಲ್ತಾನ್ ಮಹಮೂದ್‌ಖಿಲ್ಜಿಗೆ ಸ್ವಲ್ಪ ಬುದ್ಧಿ ಹೇಳಬೇಕಾಗಿರುವುದೇನೆಂದರೆ– ಆತನು ಯಾವ ತಪ್ಪು ಕಾರಣಗಳು ನಮ್ಮಿಂದ ಇಲ್ಲದಿದ್ದರೂ ನಮ್ಮ ಮೇಲೆ ದ್ವೇಷವನ್ನು ಸಾಧಿಸುತ್ತಿದ್ದಾನೆ. ಇದು ಅಲ್ಲದೇ ಸರ್

ಹದರಿಪೂರಬಿಯಾನನ್ನು ಕೊಲೆ ಮಾಡಲು ಉಜ್ಜೈನಿಯಿಂದ ಸಾರಂಗಪುರಕ್ಕೆ ಬಂದಿದ್ದಾನೆ. ಸಲ್‌ಹದರಿಯು ಬಾದಶಹನ ಜೊತೆಯಲ್ಲಿಯೇ ಇದ್ದಾನೆ. ಈತನಿಗೆ ಸುಲ್ತಾನ್ ಮಹಮೂದ್‌ನ ಪಿತೂರಿಯು ಗೊತ್ತಾಯಿತು. ಆದ್ದರಿಂದ ಆತ ಸಹ ಸಿಕಂದರ್‌ಖಾನ ಮೇವಾತಿಯ ಮಗನೊಂದಿಗೆ ಚಿತ್ತೂರಿಗೆ ಹೋದನು. ಮತ್ತು ಆತನು ಬರ್‌ತನ್‌ಸಿಯ ಮೇಲೆ ಆಕ್ರಮಣವನ್ನು ಮಾಡಿರುತ್ತಾನೆ.

ಸಿಕಂದರ್‌ಖಾನ ಮತ್ತು ಭೂಪತಿ :

ಕೆಲವು ದಿನಗಳ ನಂತರ ಸಿಕಂದರ್‌ಖಾನ ಮತ್ತು ಭೂಪತ್‌ಪಿಸರ್ ಸಲಹದಿಯು ಸುಲ್ತಾನ್ ಬಹಾದೂರಖಾನನ ಸೇವೆಯಲ್ಲಿ ಹಾಜರಾದನು. ಬಾದಶಹನು ಅವರಿಗೆ ಏಳುನೂರು ಜರಿ ಜಡಿತ ಬಹುಮಾನಗಳನ್ನು ಮತ್ತು ಎಪ್ಪತ್ತು ಕುದುರೆಗಳನ್ನು ಬಹುಮಾನ ರೂಪದಲ್ಲಿ ನೀಡಿದನು. ಇದೇ ಸಂದರ್ಭದಲ್ಲಿ ಸುಲ್ತಾನ್ ಮಹಮೂದ್ ಖಿಲ್ಜಿಯ ಪತ್ರವೂ ಬಂದಿತು. ಅದರಲ್ಲಿ ಆತನು–ಬಹಳ ದಿನಗಳಿಂದ ತಮ್ಮನ್ನು ಭೇಟಿಯಾಗುವ ಇಚ್ಛೆ ಮನಸ್ಸಿನಲ್ಲಿ ಕಾಡುತ್ತಲೇ ಇತ್ತು. ಕೆಲವು ಅನವಶ್ಯಕ ಕಾರಣಗಳಿಂದಾಗಿ ಕಾಣಲು ಸಾಧ್ಯವಾಗಲೇ ಇಲ್ಲ. ಅಲ್ಲಾನ ಇಚ್ಛೆಯಾದರೆ ಬಹಳ ಬೇಗ ನಾನು ತಮ್ಮನ್ನು ಕಾಣುವ ಪ್ರಯತ್ನ ಮಾಡಲಿದ್ದೇನೆಂದು ಬರೆದಿದ್ದನು.

ಸುಲ್ತಾನ್ ಮಹಮೂದ್‌ನ ಬರುವಿಕೆಯ ಸುದ್ದಿ :

ಸುಲ್ತಾನ್ ಮಹಮೂದ್ ಖಿಲ್ಜಿಯ ಪತ್ರವನ್ನು ಓದಿದ ಬಹಾದೂರಖಾನನು ದೂತನಾದ ದರಿಯಾಖಾನನಿಗೆ ಹೀಗೆ ತಿಳಿಸಿದ–ಸುಲ್ತಾನ್ ಮಹಮೂದ್‌ನ ಆಗಮನದ ಸುದ್ದಿಯು ನನಗೆ ತಿಳಿದಿದೆ. ಒಂದು ವೇಳೆ ಅವರು ಬಂದರೆ ನಾನು ಅವರ ಅಹಂಕಾರಿ ಸೇವಕರಿಗೆ ಆಶ್ರಯ ಕೊಡುವುದಿಲ್ಲ – ಬಾದಶಹನು ಸುಲ್ತಾನ್ ಮಹಮೂದ್‌ನ ದೂತರಿಗೆ ಬಹಳ ಪ್ರೇಮದಿಂದ ಕಂಡನು. ನಂತರ ಅವರನ್ನು ಮರ್ಯಾದೆಯಿಂದ ವಾಪಸ್ಸ ಹೋಗಲು ಅನುಮತಿಯನ್ನಿತ್ತನು. ನಂತರ ಬಾದಶಹನು ಬಾನ್‌ಸ್ವಾಲ ತಲುಪಿದನು.

ಬರ್‌ತನ್‌ಸಿ ಮತ್ತು ಸಲ್‌ಹದಿಯವರ ಆಗಮನ :

ಬಾದಶಹನು ‘ಕರ್ಜಿ’ ನದಿಯ ದಡಕ್ಕೆ ತಲುಪಿದಾಗ ಬರ್‌ತನ್‌ಸಿ ಮತ್ತು ಸಲ್‌ಹದಿಯವರು ಬಾದಶಹನ ಸೇವೆಯಲ್ಲಿ ಹಾಜರಾದರು. ಮೊದಲನೇ ದಿನವೇ ಬಾದಶಹನು ಅವರಿಬ್ಬರಿಗೂ ೩೦ ಆನೆಗಳನ್ನು, ಬಹಳ ಕುದುರೆಗಳನ್ನು, ಜರಿ ಜಡಿತ ೧೫೦೦ ಉಡುಗೊರೆಗಳನ್ನು ಬಹುಮಾನದ ರೂಪದಲ್ಲಿ ಕೊಟ್ಟು ಗೌರವಿಸಿದನು. ಕೆಲವು ದಿನಗಳ ನಂತರ ಬರ್‌ತನ್‌ಸಿಯು ಚಿತ್ತೋರ್‌ಗೆ ವಾಪಸ್ ಹೋಗುವ ಅನುಮತಿಯನ್ನು ಕೇಳಿದನು. ಸಲ್‌ಹದಿಪೂರ್ಬಿಯನು ಬಾದಶಹನ ಹತ್ತಿರದ ಸೇವೆಯಲ್ಲಿರಲು ಇಷ್ಟಪಟ್ಟು ಅಲ್ಲಿಯೇ ಸೇರಿಕೊಂಡನು.

ಸಂಬಲದತ್ತ ಪ್ರಯಾಣ :

ಸುಲ್ತಾನ್ ಬಹಾದೂರನು ಹೀಗೆ ಯೋಚಿಸಿ ಅಂದರೆ ಬಹುಶಃ ಸುಲ್ತಾನ್ ಖಿಲ್ಜಿ ನನ್ನನ್ನು ಭೇಟಿಯಾಗಲು ಬರಬಹುದೆಂದು ಸಂಬಲದತ್ತ ಪ್ರಯಾಣವನ್ನು ಬೆಳೆಸಿದನು. ಏಕೆಂದರೆ ಒಂದು ವೇಳೆ ಮಹಮೂದ್ ಖಿಲ್ಜಿಯು ಬಂದರೆ ಆತನಿಗೆ ಔತಣಕ್ಕೆ ಕರೆದು ಇಬ್ಬರೂ ಸಂತುಷ್ಟರಾದ ನಂತರ ಮಹಮೂದ್‌ನನನ್ನು ಕಳುಹಿಸಿ ಬರಲು ದೇವಾಲಘಾಟ್‌ನವರೆಗೆ ನಾನು ಹೋಗಬಹುದು ಎಂದು ತೀರ್ಮಾನಿಸಿದನು.

ಸುಲ್ತಾನ್ ಮಹಮೂದ್‌ನ ದೂತನ ಆಗಮನ :

ಸಂಬಲ ತಲುಪಿ ಸುಲ್ತಾನ್ ಬಹಾದೂರನು ಮಹಮೂದ್ ಖಿಲ್ಜಿಯನ್ನು ಹತ್ತು ದಿನಗಳವರೆಗೆ ಕಾದು ಕುಳಿತನು. ಆದರೆ ಆತನು ಬರಲೇ ಇಲ್ಲ. ಇದಾದ ನಂತರ ಸುಲ್ತಾನ್ ಮಹಮೂದ್ ಖಿಲ್ಜಿಯ ದೂತನಾದ ದರಿಯಾಖಾನನು ಬಂದು ಸುಲ್ತಾನ್ ಮಹಮೂದ್‌ರು ಬೇಟೆಯಾಡುತ್ತಾ ಕುದುರೆಯಿಂದ ಬಿದ್ದು ಅವರ ಬಲಗೈ ಮುರಿದಿದೆ ಎಂದು ತಿಳಿಸಿದನು. ಇದರಿಂದಾಗಿ ಅವರು ಇಲ್ಲಿಗೆ ಬರಲು ಸಾಧ್ಯವಾಗಲಿಲ್ಲವೆಂದು ತಿಳಿಸಿದನು. ಇದನ್ನು ಕೇಳಿದ ಬಹಾದೂರಖಾನನು ದೂತನನ್ನು ಕುರಿತು–ಸುಲ್ತಾನ್ ಮಹಮೂದ್‌ನು ನನ್ನನ್ನು ಭೇಟಿಯಾಗುತ್ತಾನೆಂದು ಅನೇಕ ಸಲ ಹೇಳಿದ್ದಾನೆ. ಆದರೆ ಇಲ್ಲಿಯವರೆಗೂ ಒಂದು ಸಲವೂ ಭೇಟಿಯಾಗಿಲ್ಲ. ಆತನು ನನ್ನನ್ನು ಭೇಟಿಯಾಗಲು ಇಷ್ಟಪಡದಿದ್ದರೆ, ನಾನು ಆತನ ರಾಜ್ಯದಲ್ಲಿ ಬರಲು ಸಿದ್ಧನಿದ್ದೇನೆ. ಎಂದು ದೂತನಿಗೆ ತಿಳಿಸಿದನು. ಆಗ ದೂತ ದರಿಯಾಖಾನನು ಹೀಗೆಂದನು– ಸುಲ್ತಾನ್ ಮಹಮೂದ್‌ನು ಇಲ್ಲಿಗೆ ಏಕೆ ಬರುತ್ತಿಲ್ಲವೆಂದರೆ ಚಾಂದ್‌ಖಾನ ಬಿನ್ ಮುಜಾಫ್ಫರ್ ಗುಜರಾತಿ ಎಂಬುವನು ಅವರ ದರ್ಬಾರಿನಲ್ಲಿದ್ದಾನೆ. ಸುಲ್ತಾನ್‌ರು ಇಲ್ಲಿಗೆ ಬಂದಾಗ ನೀವು ಅವನನ್ನು ವಾಪಸ್ ಕಳುಹಿಸಲು ಕೋರಿದರೆ, ಬಹಳ ಕಷ್ಟಗಳು ಎದುರಾಗುವವು. ಚಾಂದಖಾನನನ್ನು ತಮ್ಮಲ್ಲಿಗೆ ವಾಪಸ್ ಕಳುಹಿಸಲು ಸಾಧ್ಯವಿಲ್ಲ. ಇಲ್ಲವೇ ಆತನನ್ನು ನಿಮ್ಮಿಂದ ಉಳಿಸಿಕೊಳ್ಳಲು ಸಾಧ್ಯವಿಲ್ಲ ಎಂದನು. ಆಗ ಬಾದಶಹನು ನಾನು ಚಾಂದ್‌ಖಾನನನ್ನು ವಾಪಸ್ ಕಳುಹಿಸಲು ಕೇಳುವುದಿಲ್ಲ. ಬೇಗ ಸುಲ್ತಾನ್ ಮಹಮೂದ್ ಖಿಲ್ಜಿಯನ್ನು ನನಗೆ ಭೇಟಿಯಾಗಲು ಕರೆಯಿಸು ಎಂದನು.

ಸುಲ್ತಾನ್ ಮಹಮೂದ್‌ನ ಇಚ್ಛೆ :

ದೂತನನ್ನು ಅತ್ತ ಕಳುಹಿಸಿದ ಬಾದಶಹ ಸಹ ಪ್ರಯಾಣವನ್ನು ಮುಂದುವರೆಸಿದನು. ಜೊತೆಗೆ ಸುಲ್ತಾನ್ ಮಹಮೂದ್ ಖಿಲ್ಜಿಯ ನಿರೀಕ್ಷೆಯಲ್ಲಿಯೂ ಇದ್ದನು. ಬಾದಶಹನು ದೀವಾನಪುರವನ್ನು ತಲುಪಿದಾಗ ಗೊತ್ತಾದುದ್ದೇನೆಂದರೆ ಸುಲ್ತಾನ್ ಮಹಮೂದ್

ಖಿಲ್ಜಿಯು ತನ್ನ ಹಿರಿಯ ಮಗನಾದ ಸುಲ್ತಾನ್ ಘಿಯಾಸುದ್ದೀನನಿಗೆ ಬಿರುದನ್ನು ನೀಡಿ ಆತನನ್ನು ಮಾಂಡು ಕೋಟೆಯಲ್ಲಿ ನೆಲೆ ನಿಲ್ಲಿಸಬೇಕೆಂದು ತಾನೂ ಕೋಟೆಯಿಂದ ಹೊರಬಂದು ಯಾರಿಗೂ ಕಾಣದಂತೆ ಸುಲ್ತಾನ್ ಬಹಾದೂರರನ್ನು ಕಾಣಲು ಬರಬೇಕೆಂಬ ಆಸೆ ಇದೆಯೆಂದು ತಿಳಿಸಿದನು.

ಅಮೀರರ ಅರ್ಜಿ :

ಅದೇ ಸಂದರ್ಭದಲ್ಲಿ ಕೆಲವು ಅಮೀರರು ಸುಲ್ತಾನ್ ಮಹಮೂದ್ ಖಿಲ್ಜಿಯ ದುರ್ವತನೆಯಿಂದ ತುಂಬಾ ಬೇಸತ್ತಿದ್ದರು. ಸುಲ್ತಾನ್ ಬಹಾದೂರನ ಸೇವೆಯಲ್ಲಿ ಹಾಜರಾದರು. ಅವರು ಪ್ರಾರ್ಥಿಸಿದುದ್ದೇನೆಂದರೆ–ಸುಲ್ತಾನ್ ಮಹಮುದ ಖಿಲ್ಜಿಯು ಬರೀ ಸುಳ್ಳು ಹೇಳಿಕೊಂಡು ಕಾಲಹರಣ ಮಾಡುತ್ತಿದ್ದಾನೆ. ಅನವಶ್ಯಕ ಸುಳ್ಳು ಕಾರಣಗಳನ್ನು ಹೇಳಿಕೊಳ್ಳುತ್ತಾ ತಮ್ಮನ್ನು ಭೇಟಿಯಾಗಲು ಹಿಂಜರಿಯುತ್ತಿದ್ದಾನೆ. ತಾವು ಅವನನ್ನು ಒತ್ತಾಯ ಹಾಗೂ ವಿವಶನನ್ನಾಗಿಸದಿದ್ದರೆ ಆತನು ಎಂದಿಗೂ ನಿಮ್ಮ ಭೇಟಿ ಮಾಡಲಾರ.

ಶಾದಿ ಆಬಾದ್ ಮಾಂಡುವಿನ ಮುತ್ತಿಗೆ :

ಸುಲ್ತಾನ್ ಬಹಾದೂರನು ಪ್ರಯಾಣ ಮಾಡುತ್ತಾ ಮಾಂಡುವಿನ ಶಾದಿಯಾಬಾದ್‌ನತ್ತ ಹೊರಟನು. 'ನಾಲ್ಟೋ' ತಲುಪಿ ಮಾಂಡುವಿನ ಶಾದಿಯಾಬಾದಿನ ಮುತ್ತಿಗೆ ಹಾಕುವಂತೆ ಆಜ್ಞಾಪಿಸಿದನು. ಬಾದಶಹನು ಮಹಮೂದ್‌ಖಾನ ಅಸೀರಿಯನ್ನು ಪಶ್ಚಿಮ ದಿಕ್ಕಿನಲ್ಲಿರಲು ಲುಕ್ಮಾನನ್ನು ಭಲ್‌ಪೋಲ್ ಎಂಬಲ್ಲಿ ನಿಲ್ಲಿಸಿದನು. ಪೂರಬಿ ಗುಂಪನ್ನು ಸಹಲ್‌ವಾನದಲ್ಲಿ ನೇಮಿಸಿ, ಸ್ವತಃ ತಾನು ಮಹಮೂದ್ ಪೋಲ್‌ನಲ್ಲಿ ನಿಂತನು.

ಕೋಟೆಯಲ್ಲಿ ಪ್ರವೇಶ :

ಹಿಜರಿ ೯೩೭ ಷಾಬಾನ್ ತಿಂಗಳ ೨೯ರಲ್ಲಿ ರಾತ್ರಿ ಸುಲ್ತಾನ್ ಬಹಾದೂರನು ತನ್ನ ಆಪ್ತ ವೀರರೊಡನೆ ಇಬ್ಬರು ಮಾಂಡುವಿ ಗುಪ್ತಚರರೊಂದಿಗೆ ಕೋಟೆಯಲ್ಲಿ ಪ್ರವೇಶಿಸಿದನು. ಬಾದಶಹನು ಕೋಟೆಯ ಮೇಲೆ ನಿಂತನು. ತನ್ನ ಎಲ್ಲ ಸೈನ್ಯವು ಕೋಟೆಯೊಳಗೆ ಪ್ರವೇಶಿಸಿತೇ ಇಲ್ಲವೇ ಎಂಬುದನ್ನು ನೋಡುತ್ತಾ ಬಹಳ ಹೊತ್ತು ನಿಂತು ಬಿಟ್ಟನು.

ಮಾಳವರ ಚಿಂತೆ :

ಸುಲ್ತಾನ್ ಬಹಾದೂರನು ಬೆಳಗಿನ ಜಾವದ ನಮಾಜಿನ ವೇಳೆಯವರೆಗೆ ಕಾದು, ಸುಲ್ತಾನ್ ಖಿಲ್ಜಿಯ ಅರಮನೆಯತ್ತ ಸಾಗಿದನು. ಆತನ ಸೈನಿಕರಿಗೆ ತಾನು ಒಳಗೆ

ಬಂದಿದ್ದೇನೆಂಬ ಸೂಚನೆಯನ್ನು ಕೊಟ್ಟನು. ವಾಸ್ತವವಾಗಿ ಹೀಗೇಕೆ ಹೇಳಿದನೆಂದರೆ– ಕೋಟೆಯ ಒಳಗಿನವರ ನಂಬಿಕೆ ಎಂದರೆ ಯಾವ ಭಾಗದಿಂದ ಬಹಾದೂರನು ಕೋಟೆಯ ಒಳಗೆ ಪ್ರವೇಶಿಸಿದನೋ ಆ ಭಾಗದಿಂದ ಯಾರೂ ಕೋಟೆಯ ಒಳಗೆ ಪ್ರವೇಶಿಸಲಾರರು ಎಂದು ತಿಳಿದಿದ್ದರು. ಆದರೆ ಬಾದಶಹನು ಗುಪ್ತಚರರ ಸಹಾಯದಿಂದ ಪ್ರವೇಶಿಸಿದ್ದನು. ಮಾಳ್ವಾರಿಗೆ ಕೋಟೆಯಲ್ಲಿ ಪರ ಸೈನಿಕರು ಪೂರ್ಣವಾಗಿ ಒಳನುಗ್ಗಿ ತುಂಬಿಕೊಂಡಾಗ ಗೊತ್ತಾಯಿತು. ಶತ್ರುಗಳು ಒಳಗೆ ನುಗ್ಗಿದ್ದಾರೆ ಎಂದು. ಮಾಳವರು ಚಿಂತಾಕ್ರಾಂತರಾದರು. ಚಾಂದ್‌ಖಾನ್‌ಬಿನ್ ಸುಲ್ತಾನ್ ಮುಜಾಫ್ಫರನು ಕೋಟೆಯಿಂದ ತಪ್ಪಿಸಿಕೊಂಡು ಪರಾರಿಯಾಗಿದ್ದನು. ಸುಲ್ತಾನ್ ಮಹಮೂದ್ ಖಿಲ್ಜಿಯು ತನ್ನ ಅಲ್ಪ ಸೈನ್ಯದೊಂದಿಗೆ ಸುಲ್ತಾನ್ ಬಹಾದೂರನ ಎದುರು ಬಂದನು. ಆದರೆ ಅಷ್ಟು ದೊಡ್ಡ ಸೈನ್ಯದೊಂದಿಗೆ ಯುದ್ಧವಾಡುವುದು ಸೂಕ್ತವಲ್ಲವೆಂದು ತಿಳಿದು ನಗರದಿಂದ ಆಚೆ ಓಡಿ ಹೋದನು.

ಶಾಹಿ ಅರಮನೆಯ ಮುತ್ತಿಗೆ :

ಸ್ವಲ್ಪ ಹೊತ್ತಿನ ನಂತರ ಸುಲ್ತಾನ್ ಮಹಮೂದ್ ಖಿಲ್ಜಿಯು ತನ್ನ ಅಮೀರರ ಮಾತಿನ ಸಲಹೆಯ ಪ್ರಕಾರ ತನ್ನ ಪರಿವಾರ ಸಂಬಂಧಿಕರ ಸುರಕ್ಷತೆಗೆ ಅರಮನೆ ಕಡೆಗೆ ವಾಪಸ್ ಬಂದನು. ಸುಲ್ತಾನ್ ಬಹಾದೂರನ ಸೈನಿಕರು ಅರಮನೆಯ ಸುತ್ತಲೂ ಕಾವಲು ನಿಂತಿದ್ದರು. ಸುಲ್ತಾನ್ ಬಹಾದೂರನು ಅರಮನೆಯ ಸ್ತ್ರೀಯರ ಮಾನ–ಪ್ರಾಣ, ಸಂಪತ್ತಿಗೆ ಯಾವುದೇ ಧಕ್ಕೆಯಾಗದಂತೆ ನೋಡಿಕೊಳ್ಳಬೇಕೆಂಬ ಕಟ್ಟಾಜ್ಞೆಯನ್ನು ಮಾಡಿದ್ದನು.

ಸುಲ್ತಾನ್ ಮಹಮೂದ್ ಖಿಲ್ಜಿಯ ಬಂಧನ :

ಅದೇ ಸಂದರ್ಭದಲ್ಲಿ ಸುಲ್ತಾನ್ ಬಹಾದೂರನು ಅರಮನೆಯ ಪ್ರಾಂಗಣಕ್ಕೆ ಹೋದನು. ಅಲ್ಲಿಂದ ಒಬ್ಬ ಯೋಗ್ಯ ಮನುಷ್ಯನನ್ನು ಸುಲ್ತಾನ್ ಮಹಮೂದ್ ಖಿಲ್ಜಿಯನ್ನು ಕರೆ ತರಲು ಕಳುಹಿಸಿದನು. ಸುಲ್ತಾನ್ ಖಿಲ್ಜಿಯು ತನ್ನ ಅಮೀರರೊಂದಿಗೆ ಸುಲ್ತಾನ್ ಬಹಾದೂರನ ಮುಂದೆ ಹಾಜರಾದನು. ಆತನು ತನ್ನ ತಪ್ಪುಗಳನ್ನು ಕ್ಷಮಿಸುತ್ತಾನೆಂದು ಬಗೆದಿದ್ದನು. ಆದರೆ ಹಾಗಾಗಲಿಲ್ಲ. ನೀನೇಕೆ ನನ್ನಿಂದ ಮುಖವನ್ನು ಮುಚ್ಚಿಕೊಂಡು ಓಡಾಡುತ್ತಿದ್ದೆ? ಎಂದು ಕೇಳಲು ಮಹಮೂದ್ ಖಿಲ್ಜಿಯು ಬಹಳ ಅಸಭ್ಯವಾಗಿ ಕಠಿಣ ಉತ್ತರವನ್ನು ಕೊಟ್ಟನು. ಅದಕ್ಕೆ ಸುಲ್ತಾನ್ ಬಹಾದೂರನು ಕ್ರೋಧಿತನಾಗಿ ಮಹಮೂದ್‌ನನ್ನು ಆತನ ಗಂಡು ಮಕ್ಕಳ ಸಮೇತ ಬಂಧಿಸಿ ಈ ಬಂದಿಗಳನ್ನು ಆಸಿಫ್ಖಾನನ ವಶಕ್ಕೆ ಕೊಟ್ಟು ಇವರನ್ನು ಜನಾನೇರ್ ಮಹಮ್ಮದಾಬಾದಿಗೆ ಕಳುಹಿಸಿ, ಸೆರೆಮನೆಯಲ್ಲಿಡಲು ಆಜ್ಞಾಪಿಸಿದನು. ತಾನು ಮಾಂಡುವಿನಲ್ಲಿಯೇ ತಂಗಿರಲು ನಿರ್ಧರಿಸಿದನು.

ಅಮೀರರ ಮೇಲೆ ದಯೆ-ಕರುಣೆ ತೋರಿದನು :

ಸುಲ್ತಾನ್ ಬಹಾದೂರನು ಗುಜರಾತಿನ ಅಮೀರರಿಗೆ ಮಾಳವ ದೇಶದಲ್ಲಿ ಮತ್ತು ಮಾಳವಾ ಅಮೀರರಿಗೆ ಗುಜರಾತಿನಲ್ಲಿ ಜಾಗೀರಿಗಳನ್ನು ಘೋಷಿಸಿದನು. ಅಮೀರ ಮಹಮೂದ್‌ಶಾಹನನ್ನು ಬಹಳ ಗೌರವದಿಂದ ಬುರ್ಹಾನಪುರದತ್ತ ಕಳುಹಿಸಿದನು.

ನಿಜಾಂಶಾಹ ಬಹರಿಯ ಸನ್ಮಾನ :

ಹಿಜರಿ ೯೩೮ರಲ್ಲಿ ಮಳೆಗಾಲದ ನಂತರ ಬಾದಶಹನು ಅಸೀರ್ ಮತ್ತು ಬುರ್ಹಾನಪುರದತ್ತ ಪ್ರವಾಸಕ್ಕೆಂದು ತೆರಳಿದನು. ಬುರ್ಹಾನಿನ ನಿಜಾಂಶಾಹ ಬಹರಿಯು ಇಸ್ಮಾಯಿಲ್ ಆದಿಲಶಾಹನ ವಿರೋಧದ ಮಧ್ಯೆ ತಾನು "ಶಾಹ್" ಶಬ್ದವನ್ನು ತನ್ನ ಹೆಸರಿನ ಮುಂದೆ ಸೇರಿಸಿಕೊಂಡಿದ್ದನು. ಇದರಿಂದ ಆತನು (ನಿಜಾಂ) ಮೀರಾನ್ ಮಹಮ್ಮದ್‌ಶಾಹ ಫಾರೂಖಿಯು ಹೇಳಿದ್ದಕ್ಕೆ ಬುರ್ಹಾನಪುರಕ್ಕೆ ಬಂದಿದ್ದನು. ಶಾಹ್‌ತಾಹೇರ್ ಜುನೈದಿಯ ಮುಖಾಂತರ ಸುಲ್ತಾನ್ ಬಹಾದೂರನನ್ನು ಕಂಡನು. ಸುಲ್ತಾನ ಬಹಾದೂರನು ಆತನಿಗೆ ಬಾದಶಹರಿಗೆ ಶೋಭಿಸುವ ಶ್ವೇತಛತ್ರ, ಚಾಮರ, ಕೆಂಪು ನಿಶಾನೆ, ಮುಖದ ಮೇಲೆ ಹಾಕುವಪರದೆ ಇವೆಲ್ಲವನ್ನು ಸುಲ್ತಾನ್ ಖಿಲ್ಜಿಯಿಂದ ಕಸಿದುಕೊಳ್ಳಲಾಗಿದ್ದುವನ್ನು ಆತನಿಗೆ ಕೊಡಲಾಗಿಯಿತು. ನಾನು ನಿನಗೆ ನಿಜಾಂಶಾಹ ಬಹರಿಯ ಬಿರುದನ್ನು ದಯಪಾಲಿಸಲಿದ್ದೇನೆ. ನಾನು ನನ್ನ ಶತ್ರುಗಳನ್ನು ಬಾದಶಹನ ದರ್ಜೆಯಿಂದ ಕೆಳಗಿಳಿಸಿದ್ದೇನೆ. ಹಾಗೂ ನನ್ನ ಮಿತ್ರರನ್ನು ಆ ದರ್ಜೆಗೇರಿಸಿದ್ದೇನೆ.

ಬುರ್ಹಾನ್‌ನಿಜಾಂಶಾಹ್‌ನ ಕೃತಘ್ನತೆ :

ಸುಲ್ತಾನ್ ಬಹಾದೂರನು ಬುರ್ಹಾನನಿಜಾಂಶಾಹನ ಇಷ್ಟೊಂದು ಉಪಕಾರ ಮಾಡಲು ಒಂದು ಕಾರಣ ಬಹಾದೂರನು ಮುಂದಿನ ದಿನಗಳಲ್ಲಿ ದಿಲ್ಲಿ ಬಾದಶಹನೊಂದಿಗೆ ಯುದ್ಧ ಮಾಡುವ ಆಸೆಯನ್ನು ಹೊಂದಿದ್ದನು. ಆ ಸಂದರ್ಭದಲ್ಲಿ ಅಹಮದ್‌ನಗರದ ಮತ್ತು ಬುರ್ಹಾನಪುರದ ಶಾಸಕರು ಆತನಿಗೆ ಯುದ್ಧದಲ್ಲಿ ಸಹಾಯ ಮಾಡಲೆಂಬ ಆಸೆ ಇತ್ತು. ಆದರೆ ಸತ್ಯಾಂಶವೇ ಬೇರೆಯಾಯಿತು. ಬುರ್ಹಾನ ನಿಜಾಂಶಾಹನು ಮೊಘಲರ ನಸೀರುದ್ದೀನ ಹುಮಾಯೂನನ ಕಡೆ ಹೋಗಿ ಸೇರಿಕೊಂಡು ತನ್ನ ಕೃತಘ್ನತೆಯನ್ನೇ ತೋರಿದನು. ತನ್ನ ದೂತನೊಬ್ಬನನ್ನು ಮೊಘಲರ ಸುಲ್ತಾನ್ ಬಳಿಗೆ ಕಳುಹಿಸಿ, ಗುಜರಾತನ್ನು ಗೆಲ್ಲಲು ಕೇಳಿಕೊಂಡನು.

ಶಾಹ್‌ತಾಹೇರ್ ಜುನೈದಿ :

ಸುಲ್ತಾನ್ ಬಹಾದೂರನು ಶಾಹ್ ತಾಹೇರ್ ಜುನೈದಿಯನ್ನು ಬಹಳವಾಗಿ ಗೌರವಿಸುತ್ತಿದ್ದನು. ಏಕೆಂದರೆ ಆತನು ಎಂದೂ ಶಾಹ ಸಾಹೇಬರ ಮುಂದೆ ಸಿಂಹಾಸನದ ಮೇಲೆ ಕುಳಿತುಕೊಳ್ಳುತ್ತಿರಲಿಲ್ಲ. ಒಮ್ಮೊಮ್ಮೆ ಕುಳಿತರೂ ಒಂದು ಬೇರೆ ಕುರ್ಚಿಯನ್ನು

ಹಾಕಿಕೊಂಡು ಕುಳಿತುಕೊಳ್ಳುತ್ತಿದ್ದನು. ಇದರಿಂದ ಅರ್ಥವಾಗುವುದೇನೆಂದರೆ ಸುಲ್ತಾನ್ ಬಹಾದೂರನಿಗೆ ಶಾಹ್ ಸಾಹೇಬರಿಂದ ಎಂತಹ ಗೌರವಿತ್ತೆಂಬುದು.

ಶಾಹ್ ಸಾಹೇಬರ ಕಾರ್ಯ :

ಸುಲ್ತಾನ್ ಬಹಾದ್ದೂರನು ಬುರ್ಹಾನಪುರದಲ್ಲಿ ತಂಗಿದಾಗ ಶಾಹ ತಾಹೇರ್‌ನನ್ನು ನಿಜಾಂಶಾಹನು ಒಪ್ಪಿಕೊಂಡು ತನ್ನ ರಾಜ್ಯದ ವಕೀಲನನ್ನಾಗಿಸಿ ಸ್ವೀಕರಿಸಲೆಂದು ಬಹಳ ಪ್ರಯತ್ನವನ್ನು ಪಟ್ಟಿದ್ದನು. ಆದರೆ ಶಾಹ ಸಾಹೇಬರು ನಾನು ಮೆಕ್ಕಾ-ಮದೀನಾಕಡೆ ಹೋಗಬೇಕಾಗಿರುವುದರಿಂದ ಆ ಹುದ್ದೆ ನನಗೆ ಬೇಡವೆಂದು ತಿರಸ್ಕರಿಸಿದ್ದರು. ಶಾಹ್ ಸಾಹೇಬರು ಅಹಮ್ಮದನಗರವನ್ನು ತಲುಪಿ ಕೆಲವೇ ದಿನಗಳಲ್ಲಿ ಅಲ್ಲಿನ ಮುಸಲ್ಮಾನರನ್ನೆಲ್ಲಾ ಷಿಯಾ ಧರ್ಮದ ಕಡೆ ಸೆಳೆದುಕೊಂಡರು. ಅಲ್ಲಿ ಅವರು ಅದರ ಪ್ರಚಾರವನ್ನು ಚೆನ್ನಾಗಿ ಮಾಡಿದರು. ಛತ್ರ, ಚಾಮರ, ಮುಖಪರದೆಗಳೆಲ್ಲವನ್ನು ಹಸಿರು ಬಣ್ಣದಲ್ಲಿ ಬದಲಾಯಿಸಿದರು. ಈ ಬಣ್ಣದ ಗುರುತು "ಬಾರಾ ಇಮಾಮ್"ರ ಪ್ರತೀಕವೆಂದು ತಿಳಿಸಿದರು. ಈ ಸಂಬಂಧದ ವಿವರಣೆಯನ್ನು ನಿಜಾಂಶಾಹ ವಂಶಸ್ಥರ ವರ್ಣನೆಗಳಲ್ಲಿ ಬರೆಯಲಾಗಿದೆ. ಓದುಗರು ಅಲ್ಲಿ ನೋಡಬಹುದು.

ಸಲ್‌ಹದಿ ಪೂರಬಿಯಾನ ಅನಗತ್ಯ ಕಾರ್ಯ :

ನಿಜಾಮಶಾಹನನ್ನು ಭೇಟಿಯಾಗಿ ಆತನನ್ನು ಅಹಮದನಗರಕ್ಕೆ ಕಳುಹಿಸಿ ಸುಲ್ತಾನ್ ಬಹಾದೂರನು ಬಹಳ ಸಂತೋಷದಿಂದ ಮಾಂಡುವಿನ ಶಾದಿಯಾಬಾದನ್ನು ಬಿಟ್ಟು ಧಾರ್ ನಗರದತ್ತ ಬಂದನು. ಆ ದಿನಗಳಲ್ಲಿ ಬಾದಶಹನಿಗೆ ಸುದ್ದಿ ತಿಳಿದುದೇನೆಂದರೆ ಸಲ್‌ಹದಪೂರಬಿಯಾನು ಸುಲ್ತಾನ್ ಮಹಮೂದ್ ಖಿಲ್ಜಿಯ ಶಾಸನ ಕಾಲದಲ್ಲಿ ಬಹಳ ಮುಸಲ್ಮಾನ ಸ್ತ್ರೀಯರನ್ನು ಅವರಲ್ಲಿ ಕೆಲವು ಸ್ತ್ರೀಯರು ಸುಲ್ತಾನ್ ನಾಸಿರುದ್ದೀನನ ಅರಮನೆಯ ಮಹಿಳೆಯರು ಸೇರಿದ್ದರು. ಅವರನ್ನು ತನ್ನ ಅರಮನೆಯಲ್ಲಿ ಸೇರಿಸಿಕೊಂಡಿದ್ದನು. ಅವರೆಲ್ಲರೂ ಈಗಲೂ ಅವನ ಅರಮನೆಯ ವಶದಲ್ಲಿದ್ದರು. ಈ ಕಾರಣದಿಂದಾಗಿ ಸುಲ್ತಾನ್ ಬಹಾದೂರನ ಎದುರಿಗೆ ಬರಲು ಹಿಂಜರಿಯುತ್ತಿದ್ದನು.

ಸಲ್‌ಹದಿಯನ್ನು ಅಡಗಿಸಲು ಮನಸ್ಸು :

ಈ ಸುದ್ದಿ ತಿಳಿದ ನಂತರ ಸುಲ್ತಾನ್ ಬಹಾದೂರನು ಹೀಗೆಂದನು-ಸಲ್‌ಹದಿಯು ನನ್ನ ಸೇವೆಯಲ್ಲಿ ಹಾಜರಾಗಲಿ, ಬಿಡಲಿ, ಅದರ ಚಿಂತೆ ಈಗ ನನಗಿಲ್ಲ. ಈಗ ನನ್ನ ಆದ್ಯ ಕರ್ತವ್ಯವೆಂದರೆ, ಆ ಮುಸಲ್ಮಾನ ಮಹಿಳೆಯರನ್ನು ಸಲ್‌ಹದಿಯು ತನ್ನ ಅರಮನೆಯಲ್ಲಿ ಬಂಧಿಸಿಟ್ಟು ಅವರನ್ನು ಚಿತ್ರಹಿಂಸೆಗೆ ಗುರಿಪಡಿಸುವನು. ಅವರನ್ನೆಲ್ಲಾ

ತಕ್ಷಣ ಬಿಡಿಸಬೇಕಾಗಿದೆ. ಇಂತಹ ಅಸಭ್ಯ ಕಾರ್ಯಕ್ಕೆ ತಕ್ಕ ಶಿಕ್ಷೆ ಆತನಿಗೆ ನೀಡಲೇಬೇಕಾಗಿದೆಯೆಂದು ದೃಢಮನಸ್ಸು ಮಾಡಿದನು.

ಇಖ್ತಿಯಾರ್‌ಖಾನನ ಆಗಮನ :

ಸುಲ್ತಾನ್ ಬಹಾದ್ದುರನು ಮಕ್ಬಲ್‌ಖಾನನನ್ನು ಜನಾನೇರ್‌ನ ಮಹಮ್ಮದಾಬಾದಿಗೆ ಹೊಗಲು ಆಜ್ಞಾಪಿಸಿ ಅಲ್ಲಿಯ ಕೋಟೆಯ ರಕ್ಷಣೆಯಲ್ಲಿ ತೊಡಗಿರುಗವಂತೆ ಹೇಳಿದನು. ಮಹಮ್ಮದಾಬಾದಿನಿಂದ ಇಖ್ತಿಯಾರ್‌ಖಾನನಿಗೆ ಸೈನ್ಯ, ತೋಪು, ಖಜಾನೆಯೊಂದಿಗೆ ತನ್ನ ಹತ್ತಿರ ಕರೆಯಿಸಿದ. ಮಕ್ಬಲ್‌ಖಾನನು ಮಹಮ್ಮದಾಬಾದ ತಲುಪಿ ಇಖ್ತಿಯಾರ್‌ಖಾನನನ್ನು ಸುಲ್ತಾನ್ ಬಹಾದುರನ ಸೇವೆಯಲ್ಲಿ ಕಳುಹಿಸಿಕೊಟ್ಟನು. ಇಖ್ತಿಯಾರ್‌ಖಾನನು ವಿಶಾಲ ಸೈನ್ಯವನ್ನು ತೆಗೆದುಕೊಂಡು ಹಿಜರಿ–೯೩೮, ರಬೀವುಲ್ ಆಖಿರ್ ತಿಂಗಳ ೨೧ನೇ ತಾರೀಖು ಕಸಬಾ ಧಾರ ನಗರಕ್ಕೆ ಸುಲ್ತಾನ್ ಬಹಾದುರನ ಸೇವೆಯಲ್ಲಿ ಹಾಜರಾದನು.

ಶಾದಿ ಆಬಾದ್‌ನತ್ತ ಮನಸ್ಸು :

ಸುಲ್ತಾನ್ ಬಹಾದೂರನು ಪ್ರಚುರಪಡಿಸಿದ್ದೇನೆಂದರೆ–ತಾನು ಗುಜರಾತಿಗೆ ವಾಪಸ್ ಹೋಗುತ್ತಿದ್ದೇನೆಂದು ಆದರೆ ಅವನು ಹಾಗೆ ಮಾಡದೆ ಬಹಳ ಬೇಗ ಮಾಂಡುವಿನ ಶಾದಿಆಬಾದ್ ತಲುಪಿದ. ಮತ್ತು ಇಲ್ಲಿನ ಆಡಳಿತವನ್ನು ಇಖ್ತಿಯಾರನ ಸುಪರ್ದಿಗೆ ವಹಿಸಿದ. ಜಮಾದಿಲ್–ಅವ್ವಲ್ ತಿಂಗಳ ೨೫ನೇ ತಾರೀಖಿನಂದು ಬಾದಶಹನು ಕಸಬಾ ನಾಲ್ಚ ತಲುಪಿದನು. ಅಲ್ಲಿ ತನ್ನ ಬಿಡಾರವನ್ನು ಹೂಡಿದನು. ಸಲ್‌ಹದಿ ಪೂರಬಿಯನ ಮಗ ಭೂಪತ್ ಎಂಬುವನು ಬಾದಶಹನ ಜೊತೆಯಲ್ಲಿಯೇ ಇದ್ದನು. ಆತನು ಬಾದಶಹನಲ್ಲಿ ಪ್ರಾರ್ಥಿಸಿದ– ಹುಜೂರರು ಗುಜರಾತಿನತ್ತ ರವಾನಿಸಿದರೆ ಆಗ ನನಗೆ ಉಜ್ಜೈನಿಗೆ ಹೋಗಲು ಅನುಮತಿಯನ್ನು ಕೊಟ್ಟರೆ ನಾನು ಸಲ್‌ಹದಿಯನ್ನು ತಮ್ಮ ಸೇವೆಯಲ್ಲಿ ಹಾಜರು ಪಡಿಸಲು ಅನುಕೂಲವಾದೀತು ಎಂದನು.

ಭೂಪತನು ತನ್ನ ತಂದೆಯ ಬಳಿಗೆ ಬಂದನು :

ಬಾದಶಹನು ಬಹಳ ದೂರದೃಷ್ಟಿಯಿಂದ ಯೋಚಿಸಿ ಭೂಪತನನ್ನು ಪ್ರಯಾಣಕ್ಕೆ ಅನುಮತಿಸಿದನು. ತಾನು ಪ್ರಯಾಣವನ್ನು ಮಾಡುತ್ತಾ ಉಜ್ಜೈನಿಯತ್ತ ರವಾನಿಸಿದ. ಕಸಬಾ ಧಾರ್ ತಲುಪಿದ. ನಂತರ ಬಾದಶಹನು ಸೈನ್ಯವನ್ನು ಅಲ್ಲಿಯೇ ಬಿಟ್ಟು ತಾನು ಬೇಟೆಯಾಡಲು ದೀಪಾಲ್‌ಪುರ ಮತ್ತು ಸಾದಲ್‌ಪುರಗಳತ್ತ ಹೋದನು.

ಸಲ್‌ಹದಿ ಪೂರಬಿಯಾನ ಆಗಮನ :

ಸಲ್‌ಹದಿ ಪೂರಬಿಯಾನಿಗೆ ಸುಲ್ತಾನ್ ಬಹದೂರನ ಆಗಮನದ ಸುದ್ದಿಯು

ತಿಳಿಯುತ್ತಿದ್ದಂತೆಯೇ ಆತನು ತನ್ನ ಮಗ ಭೂಪತನನ್ನು ಉಜ್ಜೈನಿಯಲ್ಲಿಯೇ ಬಿಟ್ಟು ತಾನು ಬಾದಶಹನ ಸೇವೆಯಲ್ಲಿ ಹಾಜರಾದನು. ಅಮೀರ ನಸೀರನು ಸಲ್‌ಹದಿಯನ್ನು ಕರೆಯಲು ಹೋಗಿದ್ದವನು, ಬಾದಶಹನಿಗೆ ಏಕಾಂತದಲ್ಲಿ ಹೀಗೆಂದನು– ಸಲ್‌ಹದಿಯ ವರ್ತನೆಯಿಂದ ತಿಳಿಯುವುದೇನೆಂದರೆ, ಆತನು ನಿಮ್ಮ ಅಧೀನತೆಯನ್ನು ಸ್ವೀಕರಿಸಲು ಸಿದ್ಧನಿಲ್ಲವೆಂದನು. ಅಷ್ಟೇ ಅಲ್ಲ ನಾನು ಅವನನ್ನು ಸುಳ್ಳು ಆಶ್ವಾಸನೆ ಎಂದರೆ– ಕಂಪಾಯತ್‌ನ ಪ್ರದೇಶವನ್ನೂ, ಒಂದು ಕೋಟಿ ತಿಸ್ಗೆ ನಗದು ಹಣವನ್ನು ಕೊಡಿಸುತ್ತೇನೆಂದು ಹೇಳಿದುದಕ್ಕೆ ಆತನು ನನ್ನೊಂದಿಗೆ ಬರಲು ಒಪ್ಪಿದನು ಎಂದು ತಿಳಿಸಿದನು. ಆತನನ್ನು ನಾನು ಹಾಗೆ ಹೇಳದೇ ಇದ್ದಿದ್ದರೆ ಆತನು ಕೋಟೆಯನ್ನು ಬಿಟ್ಟು ಮೇವಾಡದ ಕಡೆಗೆ ಹೋಗಲು ಸಿದ್ಧನಾಗಿದ್ದನು. ಈಗ ಅವನನ್ನು ಇಲ್ಲಿಂದ ಹೋಗಲು ಅವಕಾಶವನ್ನೇ ಕೊಡಬಾರದು. ಬಿಟ್ಟರೆ ಆತನು ಪುನಃ ಸಿಕ್ಕುವುದೇ ಇಲ್ಲವೆಂದು ತಿಳಿಸಿದನು.

ಸಲ್‌ಹದಿಯ ಬಂಧನ :

ಸುಲ್ತಾನ್ ಬಹಾದುರನು ಸಾದಲ್‌ಪುರದಿಂದ ಧಾರ್‌ನ ಕಡೆಗೆ ರವಾನೆಯಾದನು. ಆತನು ತನ್ನ ಅಮೀರರನ್ನು, ಆಡಳಿತಗಾರರನ್ನು ಕರೆದು ಸಲ್‌ಹದಿ ಪೂರಬಿಯನನ್ನು ಬಂಧಿಸುವ ಬಗ್ಗೆ ಚರ್ಚಿಸಿದನು. ಸೈನ್ಯಾಗಾರದ ಹತ್ತಿರ ತಲುಪಿದ ಬಾದಶಹನು ತನ್ನ ಸೈನ್ಯವನ್ನು ಅಲ್ಲಿಯೇ ಬಿಟ್ಟು ತಾನು ಸಲ್‌ಹದಿಯ ಜೊತೆಯಲ್ಲಿ ಧಾರ್ ಕೋಟೆಯೊಳಗೆ ಪ್ರವೇಶಿಸಿದನು. ಸುಲ್ತಾನ್ ಬಹಾದೂರನು ಕೋಟೆಯೊಳಗೆ ಪ್ರವೇಶಿಸಿದ ತಕ್ಷಣ ಗುಜರಾತಿ ವ್ಯಕ್ತಿಗಳು ಸಲ್‌ಹದಿಯೊಂದಿಗೆ ಆತನ ಇಬ್ಬರು ಸೇವಕರನ್ನು ಬಂಧಿಸಿದರು.

ಸಲ್‌ಹದಿಯ ಒಬ್ಬ ಸೇವಕನ ಪ್ರಾಮಾಣಿಕತೆ :

ಈ ಮಧ್ಯ ಸಲ್‌ಹದಿ ಪೂರಬಿಯ ಒಬ್ಬ ಆಪ್ತ ಸೇವಕನು ಗಲಾಟೆಯನ್ನು ಮಾಡುತ್ತಾ ಕೈಯಲ್ಲಿ ಕತ್ತಿಯನ್ನು ಹಿಡಿದು ಕಿರುಚಲಾರಂಭಿಸಿದನು. ಸಲ್‌ಹದಿಯು ತನ್ನ ಸೇವಕನಿಗೆ ಪ್ರಶ್ನಿಸಿದನು. ಏನು? ನೀನು ನನ್ನನ್ನು ಕೊಲೆ ಮಾಡಿಸಲು ಬಯಸುತ್ತಿದ್ದೀಯೇ? ಸೇವಕನು ಉತ್ತರಿಸಿದನು– ನಾನು ಹೀಗೆಲ್ಲಾ ಮಾಡುತ್ತಿರುವುದು ನಿಮ್ಮ ಒಳತಿಗೋಸ್ಕರವೇ. ಒಂದು ವೇಳೆ ನನ್ನ ಈ ನಡತೆಯಿಂದ ನಿಮಗೇನಾದರೂ ನಷ್ಟ ಸಂಭವಿಸಿದರೆ, ನಾನು ಇದೇ ಕತ್ತಿಯಿಂದ ನನ್ನ ಅಂತ್ಯಗೊಳಿಸಿಕೊಳ್ಳುತ್ತೇನೆ. ಏಕೆಂದರೆ ನಿಮಗೆ ಆಗುವ ಅಂತ್ಯ ನಾನು ನೋಡಲಾರೆ. ಹೀಗೆ ಹೇಳಿದ್ದೇ ತಡ ತನ್ನ ಕತ್ತಿಯನ್ನು ಹೊಟ್ಟೆಗೆ ಚುಚ್ಚಿ ಆತ್ಮಹತ್ಯೆ ಮಾಡಿಕೊಂಡನು.

ಲೂಟಿ–ಸುಲಿಗೆ :

ಸಲ್‌ಹದಿಯ ಬಂಧನದ ಸುದ್ದಿಯು ಕಾಳ್ಗಿಚ್ಚಿನಂತೆ ನಗರದಲೆಲ್ಲಾ ಹಬ್ಬಿತು.

ಜನರು ಸಲ್‌ಹದಿಯ ಸಾಮಾನುಗಳನ್ನು ಲೂಟಿ ಮಾಡಿದರು. ಆತನ ಅನೇಕ ಜೊತೆಗಾರರನ್ನು ಕೊಂದರು. ಉಳಿದವರು ಓಡಿ ಹೋಗಿ ಸಲ್‌ಹದಿಯ ಮಗ ಭೂಪತನ ಹತ್ತಿರ ತಲುಪಿದರು. ಸಲ್‌ಹದಿಯ ಎಲ್ಲ ಸಾಮಾನುಗಳನ್ನು, ಅವನ ಆನೆಗಳನ್ನು ಬಾದಶಹನು ತನ್ನ ವಶಕ್ಕೆ ಪಡೆದನು.

ಬಾದಶಹನು ಉಜ್ಜೈನಿಯಲ್ಲಿ :

ಬಾದಶಹನು ರಫೀವುಲ್‌ಮುಲ್ಕ್‌ಲ್‌ಮುಖಾತಿಬ್ ಉರುಫ್ ಅಮಾದುಲ್ ಮುಲ್ಕನಿಗೆ ಭೂಪತನನ್ನು ತಡೆಯಲು ನೇಮಕ ಮಾಡಿ ಖುದಾವಂದ್‌ಖಾನನನ್ನು ಸೈನ್ಯ ಸಮೇತ ಕೋಟೆಯಲ್ಲಿ ಬಿಟ್ಟು, ತಾನು ಮಾರನೆ ದಿನ ಉಜ್ಜೈನಿ ಕಡೆಗೆ ರವಾನಿಸಿದನು. ಅಲ್ಲಿಗೆ ತಲುಪಿದ ಸುಲ್ತಾನ್ ಬಹಾದೂರನು ನಗರದ ಆಡಳಿತವನ್ನು ದರಿಯಾಖಾನ ಮಾಳವಿಯನ ಸುಪರ್ದಿಗೆ ವಹಿಸಿದನು. ನಂತರ ಬಾದಶಹನು ಸಾರಂಗಪುರದತ್ತ ರವಾನೆಯಾದನು. ಸಾರಂಗಪುರವನ್ನು ತಲುಪಿ ಆ ನಗರದ ಆಡಳಿತವನ್ನು ಬಾದಶಹನು ಮಲ್ಲೂಖಾನನಿಗೆ ವಹಿಸಿದನು. ಮಲ್ಲೂಖಾನನು ಸುಲ್ತಾನ್ ಮುಜಾಫ್ಫರರ ಆಡಳಿತ ಕಾಲದಲ್ಲಿ ಮಾಂಡುವಿನಿಂದ ಬಂದು ಬಾದಶಹನ ಸೇವೆಯಲ್ಲಿ ನಿರತನಾಗಿದ್ದನು. ಶೇರ್‌ಶಾಹ್‌ಸೂರಿಯ ಶಾಸನ ಕಾಲದಲ್ಲಿ ಆತನು ಖಾದಿರ್‌ಶಾಹ್‌ನ ಬಿರುದಿನೊಂದಿಗೆ ತನ್ನ ಹೆಸರಿನ ಪ್ರಶಂಸಾತ್ಮಕ ಖುತ್ಬಾ (ಭಾಷಣ) ಮತ್ತು ನಾಣ್ಯವನ್ನು ಚಲಾವಣೆಗೆ ತಂದಿದ್ದನು. ಈ ವ್ಯಕ್ತಿಯ ವರ್ಣನೆ ಮುಂದಿನ ಪುಟಗಳಲ್ಲಿ ಸಿಗುತ್ತದೆ.

ಸುಲ್ತಾನ್ ಬಹಾದೂರನು ಭೇಲ್ಸಾದಲ್ಲಿ :

ಸುಲ್ತಾನ್ ಬಹಾದೂರನು 'ಆಶ್ತಾ'ದ ಯಜಮಾನ ಹಬೀಬ್‌ಖಾನನನ್ನು ಆತನ ಊರಿಗೆ ಹೋಗಲು ಅನುಮತಿಯನ್ನಿತ್ತು. ತಾನು ಭೇಲ್ಸಾ ಮತ್ತು 'ರಾಯ್‌ಸೀನ್'ನತ್ತ ರವಾನೆಯಾದನು. ಹಬೀಬ್‌ಖಾನನು ಆಶ್ತಾ ತಲುಪಿ ಬಹಳ ಜನ ಪೂರಬಿಯರನ್ನು ಕೊಲೆ ಮಾಡಿದನು. ನಂತರ ಆಶ್ತಾವನ್ನು ತನ್ನ ವಶಕ್ಕೆ ತೆಗೆದುಕೊಂಡನು. ಸುಲ್ತಾನ್ ಬಹಾದೂರನು ಭೇಲ್ಸಾ ತಲುಪಿದಾಗ ಆತನಿಗೆ ತಿಳಿದುಬಂದದ್ದೇನೆಂದರೆ–ಸುಮಾರು ೧೮ ವರ್ಷಗಳಿಂದ ಆ ಪ್ರದೇಶದಲ್ಲಿ ಧಾರ್ಮಿಕ ಆಚರಣೆಗಳಿಗೆ ಯಾವುದೇ ಅವಕಾಶಗಳಿಲ್ಲದೆ ಇಸ್ಲಾಂ ಧರ್ಮದ ಎಲ್ಲ ಕುರುಹುಗಳನ್ನು ನಾಶಪಡಿಸಿದ್ದಾರೆಂದು ತಿಳಿಯಿತು.

ವಿರೋಧಿಗಳ ಚಟುವಟಿಕೆಗಳು :

ಅಲ್ಲಿಯೇ ಇದ್ದ ಶಾಹಿ ಗುಪ್ತಚರರು ತಿಳಿಸಿದ್ದುದೇನೆಂದರೆ–ಭೂಪತನು ತನ್ನ ತಂದೆಯ ಬಂಧನ ಮತ್ತು ರಫೀವುಲ್‌ಮುಲ್ಕ್‌ನ ಭಾಷಣವನ್ನು ಕೇಳಿ ಚಿತ್ತೋಡದತ್ತ ಹೋಗಿದ್ದಾನೆ. ಹಾಗೂ ಚಿತ್ತೋರಿನ ರಾಜನಿಂದ ಸಹಾಯವನ್ನು ಬೇಡಲು

ಪ್ರಯತ್ನಿಸುತ್ತಿದ್ದಾನೆಂದು ತಿಳಿಯಿತು. ಅಷ್ಟೇ ಅಲ್ಲದೇ ಸಲ್‌ಹದಿಯ ಸಹೋದರ ಲಖನ್ ಎಂಬುವನು ಕೋಟಿ ರಾಯ್‌ಸೀನ್‌ನನ್ನು ವಶಪಡಿಸಿಕೊಂಡು ರಾಜ ಚಿತ್ತೋರಿನ ಸಹಾಯವನ್ನು ನಿರೀಕ್ಷಿಸುತ್ತಿದ್ದಾನೆಂದು ತಿಳಿಯಿತು.

ರಾಯ್‌ಸೀನ್ ಕೋಟೆಯ ಮೇಲೆ ಆಕ್ರಮಣ :

ಸುಲ್ತಾನ್ ಬಹದೂರನು ಭೇಲ್ಸಾದಲ್ಲಿ ಮಸೀದಿಗಳ, ಕಟ್ಟಡಗಳ ನಿರ್ಮಾಣದ ವ್ಯವಸ್ಥೆಗೆಂದು ಎರಡು ಮೂರು ದಿನ ಅಲ್ಲಿಯೇ ಉಳಿದನು. ಜಮಾದಿಲ್ ಅವ್ವಲ್ ತಿಂಗಳಲ್ಲಿ ಅಲ್ಲಿಂದ ಹೊರಟು ರಾಯ್ಸೀನ್ ತಲುಪಿದನು. ಗುಜರಾತಿನ ಸೈನ್ಯವು ಅಲ್ಲಿಗೆ ತಲುಪುವುದಕ್ಕೆ ಮೊದಲೇ ರಾಜಪೂತರು ಎರಡು ಭಾಗಗಳಲ್ಲಿ ಪ್ರತ್ಯೇಕವಾಗಿ ಕೋಟೆಯಿಂದ ಕೆಳಗಿಳಿದು ಬಂದರು. ಸುಲ್ತಾನ್ ಬಹದೂರನು ತನ್ನ ವಿಶಾಲ ಸೈನ್ಯದೊಂದಿಗೆ ಕೋಟೆಯ ಮೇಲೆ ಆಕ್ರಮಣವನ್ನು ಮಾಡಿದನು. ಕೋಟೆಯ ಒಂದಿಬ್ಬರನ್ನು ಕೊಲೆ ಮಾಡಿದನು.

ಶತ್ರುಗಳ ಕೊಲೆ :

ಅದೇ ಸಂದರ್ಭದಲ್ಲಿ ಗುಜರಾತಿ ಸಿಪಾಯಿಗಳು ಹಿಂದಿನಿಂದ ಬಂದು ಅಸಂಖ್ಯಾತ ಶತ್ರುಗಳನ್ನು ಕೊಲೆ ಮಾಡಿದರು. ಈ ಸ್ಥಿತಿಯನ್ನು ಕಂಡ ಪೂರಬಿ ರಾಜಪೂತರು ಓಡುತ್ತಾ ಕೋಟೆಯಲ್ಲಿ ಆಶ್ರಯವನ್ನು ಪಡೆದರು. ಬಾದಶಹನು ಅಂದಿನ ಮಟ್ಟಿಗೆ ಯುದ್ಧವನ್ನು ನಿಲ್ಲಿಸಿ, ಮಾರನೇ ದಿನದ ಯುದ್ಧಕ್ಕೆ ಸಿದ್ಧತೆಗಳಲ್ಲಿ ತೊಡಗಿದನು.

ಸಾಬಾತ್‌ನ ಸಿದ್ಧತೆ :

ಸಾಬಾತ್ ಎಂದರೆ ಕೋಟೆಯ ಮೇಲೇರಲು ಮೇಲ್ಛಾವಣಿಯ ದಾರಿಗಳು. ಮಾರನೇ ದಿನ ಬಾದಶಹನು ಕೋಟೆಯ ಕೇಂದ್ರದ ಬಾಗಿಲನ್ನು ಮುತ್ತಿದನು. ಸೈನಿಕರನ್ನು ವಿಭಜಿಸಿ, ಸಾಬಾತ್ ಕಟ್ಟುವುದಕ್ಕೆ ಸಿದ್ಧತೆಯನ್ನು ಮಾಡಲು ಆಜ್ಞಾಪಿಸಿದನು. ಸ್ವಲ್ಪ ಸಮಯದಲ್ಲಿಯೇ ಕೋಟೆಯ ಗೋಡೆಯ ಪಕ್ಕದಲ್ಲಿ ಏಣಿಯಂತಹ ಮೇಲ್ಛಾವಣಿಯು ತಯಾರಾಯಿತು. ಸುಲ್ತಾನ್ ಬಹಾದೂರನು ರೂಮಿಖಾನನನ್ನು ತೋಪುಗಳೊಂದಿಗೆ ಸಾಬಾತಿನ ಮೇಲೆ ನಿಲ್ಲಿಸಿದನು. ನಂತರ ತಾನು ಸೈನ್ಯಾಗಾರದಲ್ಲಿ ಪ್ರವೇಶಿಸಿದನು. ರೂಮಿಖಾನನು ತೋಪುಗಳನ್ನು ಹಾರಿಸಿ ಎರಡು ಬುರ್ಜುಗಳನ್ನು ಕೆಡವಿದನು. ಮತ್ತೊಂದು ಕಡೆಯಿಂದ ಸುರಂಗಕ್ಕೆ ಬೆಂಕಿ ಇಡಿಸಿದನು. ಇವುಗಳಿಂದಾಗಿ ಕೋಟೆಯ ಗೋಡೆಯು ಕೆಲವು ಗಜಗಳ ಅಗಲ ಪೂರ್ಣವಾಗಿ ಬಿದ್ದು ಹೋಯಿತು.

ಸಲ್‌ಹದಿಯ ಇಸ್ಲಾಂ ಸ್ವೀಕಾರ :

ಸಲ್‌ಹದಿಯ ಕೋಟೆಯ ಈ ಪರಿಸ್ಥಿತಿ ಪೂರಬಿ ರಾಜಪೂತರ ನಾಶ, ಹಾಗೂ ಗುಜರಾತಿ ಸೈನಿಕರ ಉತ್ಸಾಹವನ್ನು ನೋಡಿ ಆತನು ಬಾದಶಹನ ಹತ್ತಿರಕ್ಕೆ ಈ

ಸಂದೇಶವನ್ನು ಕಳುಹಿಸಿದನು. "ಮೊದಲು ನಾನು ಮುಸಲ್ಮಾನನಾಗಲು ಬಯಸಿದ್ದೇನೆ. ನಂತರ ಕೋಟೆಯನ್ನು ಖಾಲಿ ಮಾಡಿ ಹುಜೂರರ ಸೇವಕರ ವಶಪಡಿಸಲು ಸಿದ್ಧನಿದ್ದೇನೆಂದು. ಈ ಸಂದೇಶವನ್ನು ಕೇಳಿದ ಸುಲ್ತಾನ್‌ನು ಬಹಳ ಸಂತೋಷಪಟ್ಟನು. ಅದೇ ತಕ್ಷಣ ಸಲ್‌ಹದಿಯನ್ನು ತನ್ನ ಬಳಿಗೆ ಕರೆಯಿಸಿದನು. ನಂತರ ಇಸ್ಲಾಂನ ಕಲ್ಮವನ್ನು ಹೇಳಿಸಿದನು. ಸಲ್‌ಹದಿಯು ಇಸ್ಲಾಂ ಸ್ವೀಕರಿಸಿದ್ದುದಕ್ಕೆ ಬಾದಶಹನು ಆತನಿಗೆ ಶಾಹಿ ಬಹುಮಾನಗಳಿಂದ ಗೌರವಿಸಿದನು. ಹಾಗೂ ಶಾಹಿ ಅಡಿಗೆಗಳನ್ನು ತರಿಸಿ ತನ್ನೊಂದಿಗೆ ಕೂರಿಸಿಕೊಂಡು ಊಟ ಮಾಡಿದನು. ತನ್ನ ಜೊತೆಯಲ್ಲಿ ಕೋಟೆಯ ಕೆಳಗೆ ಕರೆದುಕೊಂಡು ಹೋದನು.

ಸಲ್‌ಹದಿ ಮತ್ತು ಲಕ್ಷ್ಮಣನ ಪಿತೂರಿ :

ಸಲ್ ಹದಿಯು ತನ್ನ ತಮ್ಮನಾದ ಲಕ್ಷ್ಮಣನನ್ನು ಕರೆದು ಹೀಗೆಂದನು.–ನಾನಂತು ಈಗ ಇಸ್ಲಾಂ ಧರ್ಮವನ್ನು ಸ್ವೀಕರಿಸಿ ಬಿಟ್ಟಿದ್ದೇನೆ. ಇದರಿಂದಾಗಿ ಬಾದಶಹನು ನನಗೆ ಉನ್ನತ ದರ್ಜೆಗಳಿಗೇರಿಸುವುದರಲ್ಲಿ ಅನುಮಾನವಿಲ್ಲ. ಆದ್ದರಿಂದ ನನ್ನ ಅಭಿಲಾಷೆ ಏನೆಂದರೆ–ಕೋಟೆಯನ್ನು ಖಾಲಿ ಮಾಡಿ ಬಾದಶಹನ ಸೇವಕರ ಸುಪರ್ದಿಗೆ ಬಿಡಬೇಕೆಂಬುದಾಗಿದೆ. ಹಾಗೂ ನಾನು ಅವರ ಸೇವೆಯಲ್ಲಿ ಹಾಜರಾಗಬೇಕೆಂದಿದ್ದೇನೆ ಎಂದನು. ಆಗ ಲಕ್ಷ್ಮಣನು ಹೀಗೆಂದನು–ಒಳ್ಳೆಯದೇ ಆಯಿತು. ಇಸ್ಲಾಂನ ಮರೆಯಲ್ಲಿ ಮುಸಲ್ಮಾನರು ನಿನ್ನನ್ನು ಕೊಲೆ ಮಾಡುವುದಿಲ್ಲ. ಇತ್ತ ನಾವೂ ಸಿದ್ಧತೆಯನ್ನು ಮಾಡಿಕೊಂಡಿರುವುದೇನೆಂದರೆ ಭೂಪತನು ರಾಜಾ ಚಿತ್ತೋರಿನ ಸಮೇತ ೪೦ ಸಾವಿರ ಸಿಪಾಯಿಗಳನ್ನು ಕರೆದುಕೊಂಡು ಇಲ್ಲಿಗೆ ಬರಲಿದ್ದಾನೆ. ಈಗ ನೀನೊಂದು ಉಪಾಯವನ್ನು ಮಾಡಬೇಕು ಏನೆಂದರೆ, ಕೆಲವು ದಿನಗಳ ತನಕ ಕೋಟೆಯನ್ನು ಖಾಲಿ ಮಾಡಬೇಡ ಎಂದನು. ಅದಕ್ಕೆ ಸಲ್‌ಹದಿಯು ಒಪ್ಪಿದನು.

ಕೊಟ್ಟ ವಚನದಲ್ಲಿ ತಡ :

ಸಲ್‌ಹದಿಯು ಬಾದಶಹನ ಹತ್ತಿರ ಬಂದು ಕೇಳಿದನು. ಇಂದು ಒಂದು ದಿನಕ್ಕೆ ಮಾತ್ರ ಅವಕಾಶವನ್ನು ಕೊಡಿ ನಾನು ನಾಳೆ ಕೋಟೆಯನ್ನು ಖಾಲಿ ಮಾಡಿ ಶಾಹಿ ಸೇವಕರಿಗೆ ಒಪ್ಪಿಸುತ್ತೇನೆ ಎಂದನು. ಬಾದಶಹನು ಆತನ ಮಾತನ್ನು ಒಪ್ಪಿ ಕೋಟೆಯಿಂದ ತನ್ನ ಸೈನಿಕ ಬಿಡಾರಕ್ಕೆ ಬಂದನು. ಮಾರನೇ ದಿನ ಮಧ್ಯಾಹ್ನದವರೆಗೂ ಸಲ್‌ಹದಿಯ ವಚನದ ನಿರೀಕ್ಷಣೆಯಲ್ಲಿದ್ದನು. ಕಾಲ ಮೀರಿತ್ತು. ಸಲ್‌ಹದಿಯು ಪುನಃ ಬಾದಶಹನ ಹತ್ತಿರಕ್ಕೆ ಬಂದು ಒಂದು ವೇಳೆ ತಾವು ನನಗೆ ಕೋಟೆಯ ಹತ್ತಿರ ಹೋಗಿ ಏನು ನಡೆಯುತ್ತಿದೆ ತಿಳಿದುಕೊಂಡು ಬಾ ಎಂದು ಅನುಮತಿಯನ್ನಿತ್ತರೆ ನಾನು ಅಲ್ಲಿಗೆ ಹೋಗಿ ಅಲ್ಲಿನ ಸರಿಯಾದ ಸಮಾಚಾರವನ್ನು ಪತ್ತೆಹಚ್ಚಿ ಬಂದು ತಮಗೆ ತಿಳಿಸುತ್ತೇನೆಂದನು.

ಸಲ್‌ಹದಿಯ ಮೋಸ :

ಬಾದಶಹನು ಕೆಲವು ನಂಬಿಗಸ್ಥ ಅಮೀರರನ್ನು ಸಲ್‌ಹದಿಯ ಜೊತೆಯಲ್ಲಿ ಕಳುಹಿಸಿದನು. ಇವರೆಲ್ಲರೂ ಕೋಟೆಯ ಬಳಿಗೆ ತಲುಪಿದರು. ಸಲ್‌ಹದಿಯು ಮುರಿದು ಬಿದ್ದಿರುವ ಕೋಟೆಯ ಹತ್ತಿರಕ್ಕೆ ಬಂದನು. ಅವನು ತನ್ನ ಜನಾಂಗದವರನ್ನು ಕರೆದು ಬುದ್ಧಿವಾದವನ್ನು ಹೇಳಿದನು. ಎಲೈ ದುರ್ಭಾಗ್ಯಶಾಲಿಗಳೇ ಮೈ ಮರೆತಿರುವವರೇ, ದುಷ್ಟರೇ, ನೀವು ಮುಸಲ್ಮಾನರಿಂದ ಹೆದರಬೇಕು. ಸುಲ್ತಾನ್ ಬಾದಶಹನು ನಿಮ್ಮನ್ನೆಲ್ಲಾ ಕೊಲೆ ಮಾಡಲು ಮುತ್ತಿಗೆಯನ್ನು ಇನ್ನೂ ತೆರವುಗೊಳಿಸಿಲ್ಲ.

ಈ ಬುದ್ಧಿವಾದದ ಸಲ್‌ಹದಿಯ ಉದ್ದೇಶವೆಂದರೆ–ಈಗ ಕೋಟೆಯಲ್ಲಿರುವವರೆಲ್ಲರೂ ನೈಜ ಸ್ಥಿತಿಯನ್ನು ಅರಿತುಕೊಳ್ಳಲಿ ಎಂದಾಗಿತ್ತು. ಮತ್ತು ತಮ್ಮ ತಮ್ಮ ಪ್ರಾಣರಕ್ಷಣೆಯ ಉಪಾಯಗಳನ್ನು ಹುಡುಕಿಕೊಳ್ಳಲಿ ಎಂದು ಹಾಗೂ ಮುರಿದು ಬಿದ್ದಿರುವ ಬುರ್ಜನ್ನು ಪುನಃ ಕಟ್ಟಿಕೊಳ್ಳಲೆಂಬ ಸೂಚನೆಯೂ ಆ ಮಾತಿನಲ್ಲಿತ್ತು, ಲಕ್ಷ್ಮಣನು ಸಲ್‌ಹದಿಯ ಉಪದೇಶಕ್ಕೆ ಯಾವ ಉತ್ತರವನ್ನು ಕೊಡದೇ ತನ್ನ ಅಣ್ಣನ ಮಾತಿನ ಅರ್ಥವನ್ನು ಗ್ರಹಿಸಿದ.

ಸಲ್‌ಹದಿಯ ಕಿರಿಯಮಗನ ಕೊಲೆ :

ಸಲ್‌ಹದಿಯು ವಾಪಸ್ ಬಂದುಬಿಟ್ಟನು. ಆದರೆ ಲಕ್ಷ್ಮಣನು ಕೋಟೆಯ ಕೆಲಸವನ್ನು ಶೀಘ್ರ ಗತಿಯಲ್ಲಿ ಸರಿಪಡಿಸಲು ನಿಂತನು. ರಾತ್ರಿಯಲ್ಲಿ ಆತನು ಸಲ್‌ಹದಿಯ ಕಿರಿಯ ಮಗನನ್ನು ಕರೆದು ಆತನೊಂದಿಗೆ ಎರಡು ಸಾವಿರ ರಾಜಪೂತರ ಜೊತೆಯಲ್ಲಿ ಭೂಪತನನ್ನು ಕರೆಯಲು ಕಳುಹಿಸಿಕೊಟ್ಟನು. ಸಲ್‌ಹದಿಯ ಮಗನ ಅಂತಿಮ ದಿನ ಬಂದಿತ್ತೆಂದು ತಿಳಿಯುತ್ತದೆ. ಆತನು ಹೊರ ಹೊರಟ ತಕ್ಷಣ ಗುಜರಾತಿ ಸೈನಿಕರು ಆತನನ್ನು ಕಂಡರು. ಸಲ್‌ಹದಿಯ ಮಗನು ಗುಜರಾತಿ ಸೈನಿಕರ ಜೊತೆಯಲ್ಲಿ ಯುದ್ಧಕ್ಕೆ ನಿಂತೆಬಿಟ್ಟನು. ಗುಜರಾತಿಯವರು ತಡಮಾಡಲಿಲ್ಲ. ಅವರು ಅಸಂಖ್ಯಾತ ರಾಜಪೂತರನ್ನು ಕೊಲೆಗೈದರು. ಸಲ್‌ಹದಿಯ ಮಗನು ಯುದ್ಧದಲ್ಲಿ ಸತ್ತನು. ಗುಜರಾತಿ ಸೈನಿಕರು ರಾಜಪೂತರ ಸರದಾರರ ತಲೆಗಳನ್ನು ತಂದು ಬಾದಶಹನ ಮುಂದಿಟ್ಟರು.

ಸಲ್‌ಹದಿಯನ್ನು ಬೇರೆ ಕೋಟೆಗೆ ವರ್ಗಾವಣೆ :

ಸಲ್‌ಹದಿಯು ತನ್ನ ಕಿರಿಯಮಗನ ಕೊಲೆಯ ಸಮಾಚಾರವನ್ನು ಕೇಳಿ ತುಂಬಾ ಚಿಂತಾಕ್ರಾಂತನಾದನು. ತಾನು ತಪ್ಪುಗಳನ್ನು ಮಾಡಿದ್ದೇನೆಂಬ ಅರಿವು ಆತನಿಗುಂಟಾಯಿತು. ಸುಲ್ತಾನ್‌ರಿಗೆ ನನ್ನ ರಹಸ್ಯ ಗೊತ್ತಾಗಿದೆ ಎಂದು ತಿಳಿದನು. ತನ್ನ ಜನಾಂಗದವರಲ್ಲಿ ನಾನು ಸೇರಿಕೊಂಡಿದ್ದೇನೆಂಬುದು ಸುಲ್ತಾನರಿಗೆ ತಿಳಿದಿದೆ ಎಂದುಕೊಂಡನು. ಸುಲ್ತಾನ್‌ರು ತಕ್ಷಣ ಆತನ ಮೋಸವನ್ನು ತಿಳಿದು

ಬುರ್ಹಾನುಲ್‌ಮುಲ್ಕ್‌ನನ್ನು ಕರೆದು ಸಲ್‌ಹದಿಯನ್ನು ಮಾಂಡುವಿನ ಶಾದಿಆಬಾದ ಕೋಟೆಯಲ್ಲಿ ಬಂಧನದಲ್ಲಿಡಬೇಕೆಂದು ಆಜ್ಞಾಪಿಸಿದನು.

ಭೂಪತನ ಬರುವಿಕೆಯ ಸುದ್ದಿ :

ಈ ಮಧ್ಯ ಸುಲ್ತಾನ್ ಬಹಾದೂರನು ಈಗ ಒಂಟಿಯಾಗಿದ್ದಾನೆಂದು ಆತನನ್ನು ಸೋಲಿಸುವುದು ಸುಲಭವೆಂದು ತಿಳಿದು ರಾಣಾಸಾಂಗನನ್ನು ಜೊತೆಯಲ್ಲಿ ಕರೆದುಕೊಂಡು ಭೂಪತನು ಬರುತ್ತಿದ್ದಾನೆಂಬ ಸುದ್ದಿ ತಿಳಿಯಿತು. ಬಾದಶಹನಿಗೆ ಈ ಸುದ್ದಿಯನ್ನು ಕೇಳಿ ತುಂಬಾ ಸಿಟ್ಟು ಬಂದಿತು. ನಾನು ಈಗ ಜಂಟಿಯಾಗಿರುವುದಂತೂ ನಿಜ. ಆದರೆ ಅಲ್ಲಾನ ಆಜ್ಞೆಯಂತೆ ಒಬ್ಬ ಮುಸಲ್ಮಾನ ಹತ್ತು ಜನ ಕಾಫಿರರನ್ನು ಸೋಲಿಸಬಲ್ಲ ಎಂಬುದು ಭೂಪತನಿಗೂ ಗೊತ್ತಾಗುವುದು. ಭೂಪತನು ಎಷ್ಟು ನೀರಿನ ಆಳದಲ್ಲಿರುವನೆಂಬುದು ನನಗೂ ಗೊತ್ತಾಗುವುದರಲ್ಲಿ ಸಂದೇಹವಿಲ್ಲ.

ಭೂಪತನನ್ನು ಅಡಗಿಸಲು ಅಮೀರರ ರವಾನೆ :

ಸುಲ್ತಾನ್ ಬಹಾದೂರನು ತಕ್ಷಣ ಅಮೀರ ಮುಹಮ್ಮದಶಾಹ ಮತ್ತು ರಫೀವುಲ್‌ಮುಲ್ಕ್ ಉರುಫ್ ಅಮಾದುಲ್ ಮುಲ್ಕ್‌ರನ್ನು ಭೂಪತ ಮತ್ತು ರಾಣಾಸಾಂಗರನ್ನು ಅಡಗಿಸಲು ಆಜ್ಞಾಪಿಸಿದನು. ಅವರಿಬ್ಬರೂ ತಮ್ಮ ತಮ್ಮ ಸೈನ್ಯವನ್ನು ಸಜ್ಜುಗೊಳಿಸಿಕೊಂಡು ರವಾನೆಯಾದರು. ಇವರು ಇಬ್ಬರೂ ಅಮೀರರು 'ಖೇರಾರ್'ನ ಹತ್ತಿರ ತಲುಪಿದಾಗ ಸಲ್‌ಹದಿಯ ಮಗ ಪೂರನ್‌ಮಲ್ಲನು ಎರಡು ಸಾವಿರ ಸೈನ್ಯದೊಂದಿಗೆ ಗುಜರಾತಿಯವರ ಸೈನ್ಯಕ್ಕೆ ಎದುರಾದನು.

ಅಮಾದುಲ್‌ಮುಲ್ಕ್‌ನ ಅರ್ಜಿ :

ಮೀರಾನ್ ಮಹಮ್ಮದ್‌ಶಾಹ್‌ಫಾರೂಖಿ ಮತ್ತು ಅಮಾದುಲ್ ಮುಲ್ಕ್‌ರು ಒಂದು ಅರ್ಜಿಯನ್ನು ಹೀಗೆ ಬರೆದರು. ಸಲ್‌ಹದಿಯ ಮಗ ಪೂರನ್‌ಮಲ್ಲನು ರಾಜನೊಂದಿಗೆ ಸಹಕರಿಸಿದ್ದಾನೆ. ರಾಜನೂ ಹತ್ತಿರ ಬಂದಿದ್ದಾನೆ. ಆತನ ಸೈನ್ಯದ ಅಂದಾಜು ಸಿಕ್ಕಿಲ್ಲ. ಆದರೂ ಅಲ್ಲಾನ ಮೇಲೆ ಹಾಗೂ ನಿಮ್ಮ ಕೃಪಾಶೀರ್ವಾದದ ಮೇಲೆ ಪೂರ್ಣ ಭರವಸೆ ಇದೆ. ನಾವು ಯಾವುದೇ ಕಾರಣಕ್ಕೂ ಹಿಂಜರಿಯುವುದಿಲ್ಲ.

ಬಾದಶಹನು ಖೇರಾರ್‌ನಲ್ಲಿ :

ಬಾದಶಹನು ಈ ಅರ್ಜಿಯನ್ನು ಓದಿದ ತಕ್ಷಣ ಇಖ್ತಿಯಾರ್‌ಖಾನ್ ಮತ್ತು ಇತರೆ ಅಮೀರರನ್ನು ಮುತ್ತಿಗೆಯ ಮೋರ್ಚಾದಲ್ಲಿ ಬಿಟ್ಟು, ಸ್ವತಃ ಖೇರಾರ್‌ನತ್ತ ರವಾನಿಸಿದನು. ಬಾದಶಹನು ವಿದ್ಯುತ್ವೇಗದಲ್ಲಿ ತನ್ನ ಪಯಣಗಳನ್ನು ದಾಟುತ್ತಾ ಸುಮಾರು ೭೦ ಮೈಲಿಗಳಷ್ಟು ದಾರಿಯನ್ನು ಸವೆಸಿ, ಖೇರಾರ್ ತಲುಪಿದನು.

ಮೀರಾನ್ ಮಹಮ್ಮದ್‌ಶಾಹ್ ಫಾರೂಖಿಯು ಬಾದಶಹನನ್ನು ಸ್ವಾಗತಿಸಲು ಬಂದು ಅವನನ್ನು ತನ್ನ ಅರಮನೆಗೆ ಕರೆದೊಯ್ದನು.

ರಾಜನ ಚಿಂತೆ :

ರಾಜ ಚಿತ್ತೋರ್‌ನಿಗೂ ಭೂಪತನಿಗೂ ಅವರ ಗುಪ್ತಚರರು ತಿಳಿಸಿದ್ದೇನೆಂದರೆ ಸುಲ್ತಾನ್ ಬಹಾದೂರನು ರಾತ್ರಿಯಲ್ಲಿ ಖೇರಾರಿಗೆ ಆಗಮಿಸಿ, ತನ್ನ ಸೈನಿಕರೊಂದಿಗೆ ಸೇರಿಕೊಂಡಿದ್ದಾನೆ. ಇರುವೆ ಕೀಟಗಳ ಸಾಲಿನಂತೆ ಅಸಂಖ್ಯಾತ ಸೈನಿಕರು ಅವರತ್ತ ಬರುತ್ತಿದ್ದಾರೆ. ರಾಜನು ಒಂದು ಪಯಣದ ದಾರಿಯಷ್ಟು ಹಿಂದೆ ಸರಿದು ಬಚ್ಚಿಟ್ಟುಕೊಂಡನು. ಸುಲ್ತಾನ್‌ನು ಖೇರಾರಿನಿಂದ ಒಂದು ಪಯಣದಷ್ಟು ದಾರಿಯಲ್ಲಿ ಮುಂದೆಹೋದನು.

ರಾಜನ ಸಂದೇಶ :

ಈ ಮಜಲಿನಲ್ಲಿ ರಾಜನ ಇಬ್ಬರು ದೂತರು ಪರಿಸ್ಥಿತಿಯನ್ನು ಅರಿಯಲು ಬಾದಶಹನ ಸೈನಿಕ ಶಿಬಿರದಲ್ಲಿ ಬಂದರು. ರಾಜನ ಸಂದೇಶ –ನಾನು ಹುಜೂರರ ಮುಂದೆ ಒಬ್ಬ ಕನಿಷ್ಠ ಗುಲಾಮನಾಗಿದ್ದೇನೆ. ನಾನು ಇಲ್ಲಿಗೇಕೆ ಬಂದಿದ್ದೇನೆಂದರೆ ಹುಜೂರರಲ್ಲಿ ಸಲ್‌ಹದಿಯ ಪ್ರಾಣಬಿಕ್ಷೆಯನ್ನು ಕೇಳಲು ಮಾತ್ರ ಬಂದಿರುವೆನು ಎಂದಿತ್ತು. ಸುಲ್ತಾನ್‌ನು ಅದಕ್ಕುತ್ತರವಾಗಿ ಈಗ ನಿನ್ನ ಕೀರ್ತಿ ವೈಭವಗಳು ನಮಗಿಂತ ಹೆಚ್ಚಾಗಿವೆ. ಇದಕ್ಕೆ ಮೊದಲೇ ನೀವು ಈ ತರನಾದ ಸಂದೇಶವನ್ನು ಕಳುಹಿಸುತ್ತಿದ್ದರೆ. ಅದನ್ನು ಪರಿಶೀಲಿಸಬಹುದಿತ್ತು. ಆದರೆ ಆಗ ಅದು ಕಷ್ಟಸಾಧ್ಯ.

ಭೂಪತ್ ಮತ್ತು ರಾಜ ಚಿತ್ತೋರ್‌ರವರ ಹೇಡಿತನ :

ಇಬ್ಬರು ದೂತರು ಯಾವ ಲಾಭವೂ ಸಿಗದೇ ಹಿಂದೆ ಹೋದರು. ಅವರು ಸುಲ್ತಾನ್ ಬಹಾದೂರನ ಉತ್ತರವನ್ನು ತಿಳಿಸಿದರು. ರಾಜನ ಹತ್ತಿರ ಅಸಂಖ್ಯಾತ ಸೈನಿಕರಿದ್ದರೂ ವೈಭವ ಕೀರ್ತಿಗಳಿದ್ದರೂ, ಅವರು ಹಿಂಜರಿದುಬಿಟ್ಟರು. ಇಬ್ಬರೂ ಬಾದಶಹನೊಂದಿಗೆ ಯುದ್ಧವಾಡದೆ ಓಡಿ ಹೋದರು.

ರಾಜನನ್ನು ಹಿಂಬಾಲಿಸಿದರು :

ಈ ಮಧ್ಯ ಸುದ್ದಿ ತಿಳಿದಿದ್ದೇನೆಂದರೆ–ಅಲಖ್‌ಖಾನನು ಮೂವತ್ತುಸಾವಿರ ಸವಾರರು, ತೋಪುಗಳು, ಮದ್ದುಗುಂಡುಗಳ ಸಮೇತ ಗುಜರಾತಿನ ಸಮೀಪಕ್ಕೆ ಬಂದಿದ್ದಾನೆ. ಈ ಸಂದರ್ಭದಲ್ಲಿ ಸುಲ್ತಾನ್ ಬಹಾದೂರನು ಬಹಳ ಶೌರ್ಯದ ಪ್ರದರ್ಶನವನ್ನು ತೋರಿದನು. ಅಲಖ್‌ಖಾನನ ಬರುವಿಕೆಯನ್ನು ನೋಡದೆ ತನ್ನಲ್ಲಿದ್ದ ಸೈನಿಕರೊಂದಿಗೆ ೧೭೦ ಮೈಲಿಗಳಷ್ಟು ದೂರ ರಾಜನನ್ನು ಹಿಂಬಾಲಿಸಿ ಅವನನ್ನು

ಓಡಿಸಿಕೊಂಡು ಹೋದನು. ರಾಜನು ಚಿತ್ತೋರಿನ ಕೋಟೆಯಲ್ಲಿ ಅಡಗಿಕೊಂಡನು. ಸುಲ್ತಾನ್‌ನು ಆತನನ್ನು ಅಡಗಿಸುವ ವಿಚಾರವನ್ನು ಸದ್ಯಕ್ಕೆ ಕೈಬಿಟ್ಟನು. ಆ ಕೆಲಸವನ್ನು ಮುಂದಿನ ವರ್ಷಕ್ಕೆ ಇಟ್ಟುಕೊಂಡನು. ಅಲ್ಲಿಂದ ಬಾದಶಹನು ತಕ್ಷಣ ರಾಯ್‌ಸೀನ್‌ಗೆ ಬಂದನು. ಅಲ್ಲಿನ ಕೋಟೆಯ ಮುತ್ತಿಗೆಯನ್ನು ಇನ್ನಷ್ಟು ಬಿಗಿಗೊಳಿಸಿದನು.

ಲಕ್ಷ್ಮಣನ ಚಿಂತೆ :

ಲಕ್ಷ್ಮಣನಿಗೆ ಈಗ ಚನ್ನಾಗಿ ಅರ್ಥವಾದದ್ದೇನೆಂದರೆ ಈಗ ನನಗೆ ಯಾವ ರೀತಿಯಿಂದಲೂ ಸಹಾಯ ಸಿಗುವುದಿಲ್ಲವೆಂದು ಇದರಿಂದಾಗಿ ಆತನು ತುಂಬಾ ಚಿಂತಿತನಾದನು. ಮರಣದ ಒಂದು ಚಿತ್ರ ಆತನ ಕಣ್ಮುಂದೆ ಒಮ್ಮೆ ತೇಲಿ ಹೋಯಿತು. ಕೊನೆಗೆ ತುಂಬಾ ವಿವಶನಾಗಿ ರಂಜಾನ್ ತಿಂಗಳ ಕೊನೆಯ ದಿನಗಳಲ್ಲಿ ಬಹಳ ವಿನಮ್ರ ವಿನೀತ ಭಾವನೆಯಿಂದ ಬಾದಶಹನ ಸೇವೆಯಲ್ಲಿ ಹಾಜರಾಗಿ ತನ್ನ ಬೇಡಿಕೆಯನ್ನಿಟ್ಟನು.

ಲಕ್ಷ್ಮಣನ ಪ್ರಾರ್ಥನೆ :

ಒಂದು ವೇಳೆ ಹುಜೂರರು ಸಲ್‌ಹದಿಯನ್ನು ಕರೆಯಿಸಿ ಆತನ ತಪ್ಪುಗಳನ್ನು ಕ್ಷಮಿಸಿದರೆ ನಾನು ಕೋಟೆಯನ್ನು ಖಾಲಿ ಮಾಡಿ ತಮ್ಮ ಸೇವಕರಿಗೆ ಬಿಟ್ಟು ಬಿಡಲು ತಯಾರಿದ್ದೇನೆ. ಬಾದಶಹನು ತನ್ನದೇ ಆದ ರೀತಿಯಲ್ಲಿ ಚಿಂತಿಸಿದನು. ನಾನು ಇಲ್ಲಿಗೆ ಬಂದಿರುವುದು ಮುಸಲ್ಮಾನ ಹೆಂಗಸರನ್ನು ಬಂಧನದಿಂದ ಹಾಗೂ ಹಿಂಸಕರಿಂದ ಬಿಡಿಸಲು ಒಂದು ವೇಳೆ ನಾನು ಈಗ ಲಕ್ಷ್ಮಣನ ಬೇಡಿಕೆಯನ್ನು ಮಂಜೂರು ಮಾಡದಿದ್ದರೆ ಆ ಚಿತ್ರಹಿಂಸೆಯಲ್ಲಿ ಮುಳುಗಿರುವ ಹೆಂಗಸರನ್ನು ರಾಜಪೂತರು ಕೊಲ್ಲಬಹುದು. ನಾನು ಇಲ್ಲಿಗೆ ಬಂದ ಮುಖ್ಯ ಉದ್ದೇಶವೇ ನಷ್ಟವಾಗಬಹುದು ಎಂದು ಯೋಚಿಸಿದನು. ಹೀಗೆ ಯೋಚಿಸಿದ ಬಾದಶಹನು ಲಕ್ಷ್ಮಣನ ಬೇಡಿಕೆಗಳನ್ನು ಒಪ್ಪಿಕೊಂಡನು. ಸಲ್ಹದಿಯನ್ನು ಮಾಂಡುವಿನ ಶಾದಿಆಬಾದಿನಿಂದ ಕರೆಯಿಸಿಕೊಂಡು ಬುರ್ಹಾನ ಮುಲ್ಕ್‌ನೊಂದಿಗೆ ಸಲ್‌ಹದಿಯು ಬಂದು ಬಾದಶಹನ ಮುಂದೆ ಹಾಜರಾದನು. ಆತನನ್ನು ಪ್ರಾಣ ಸಹಿತ ಬಿಡುಗಡೆ ಮಾಡಿರುವ ಪತ್ರವನ್ನು ಪಡೆದನು. ಆಗ ಲಕ್ಷ್ಮಣನು ಕೋಟೆಯಲ್ಲಿದ್ದ ಎಲ್ಲಾ ರಾಜಪೂತರನ್ನು ಅವರಿಗೆ ಸಂಬಂಧಿಸಿದ ಪರಿವಾರದವರನ್ನು ಕೋಟೆಯ ಕೆಳಭಾಗಕ್ಕೆ ಕರೆತಂದನು. ಆಗ ಲಕ್ಷ್ಮಣನು ಬಾದಶಹರಿಗೆ ಸುಮಾರು ನಾಲ್ಕುನೂರು ಹೆಂಗಸರು ಸಲ್‌ಹದಿಯನಿಗೆ ಸಂಬಂಧಿಸಿರುವವರಾಗಿದ್ದಾರೆಂದು ತಿಳಿಸಿದನು.

ಸಲ್‌ಹದಿಯು ರಾಯ್‌ಸಿಂಹನ ಕೋಟೆಯಲ್ಲಿ :

ರಾಣಿ ದುರ್ಗಾವತಿ ಭೂಪತನ ತಾಯಿ ಸಲ್ಹದಿಯ ಹೆಂಡತಿಯಾಗಿದ್ದು ಬಾದಶಹನಿಗೆ

ಹೇಳಿದ್ದೇನೆಂದರೆ ಈಗ ಸಲ್‌ಹದಿಯು ಬಾದಶಹರ ವಿಶೇಷ ಆಪ್ತ ನೌಕರರಲ್ಲಿ ಸೇರಿಹೋಗಿರುತ್ತಾನೆ. ಒಂದು ವೇಳೆ ಆತನು ಸ್ವತಃ ಕೋಟೆಯೊಳಗೆ ಬಂದು ತನ್ನ ಹೆಂಡತಿ ಮಕ್ಕಳನ್ನು ಹೊರ ಹೊರಡಿಸದಿದ್ದರೆ ಜನರು ಆತನ ಜೀವನ ಪರ್ಯಂತ ಆತನನ್ನು ತೆಗಳುತ್ತಿರುತ್ತಾರೆ. ಸುಲ್ತಾನ್ ಬಹಾದೂರನು ಈ ಮಾತನ್ನು ಕೇಳಿ ಮಲಿಕ್ ಅಲಿಶೇರ್‌ನ ಜೊತೆಯಲ್ಲಿ ಸಲ್ಹದಿಯನ್ನು ಕೋಟೆಯೊಳಗೆ ಕಳುಹಿಸಿಕೊಟ್ಟನು. ಸಲ್ಹದಿಯು ಕೋಟೆಯೊಳಗೆ ತಲುಪಿದಾಗ ಲಕ್ಷ್ಮಣನು ತಾಜಖಾನನ್ನು ಕೇಳಿದ್ದೇನೆಂದರೆ ಬಾದಶಹರು ಇಲ್ಲಿಗೆ ಬಂದು ಕೋಟೆಯನ್ನು ವಶಪಡಿಸಿಕೊಂಡ ಉದ್ದೇಶವೇನು?

ಮತ್ತೆ ಅದೇ ಮೋಸ :

ಸಲ್ಹದಿಯು ಆಪ್ರಶ್ನೆಗೆ ಉತ್ತರವಾಗಿ ಈಗ ಸದ್ಯದಲ್ಲಿ ಬರೋದ್ರದ ಕಸಬಾ ಪ್ರದೇಶವು ನನ್ನ ಜಾಗೀರಿನಲ್ಲಿದೆ. ನನಗೆ ಭರವಸೆ ಏನೆಂದರೆ ಮುಂದಿನ ದಿನಗಳಲ್ಲಿ ಬಾದಶಹರು ನನ್ನ ಮೇಲೆ ಇನ್ನೂ ಹೆಚ್ಚಿನ ಕೃಪೆಯನ್ನು ತೋರಬಹುದು ಎಂದು. ರಾಣಿ ದುರ್ಗಾವತಿ, ಲಕ್ಷ್ಮಣ ಮತ್ತು ತಾಜ್‌ಖಾನರು ಸಲ್‌ಹದಿಯನ್ನು ಕುರಿತು ಇದೇನೋ ಸರಿಯಾಗಿದೆ. ಸುಲ್ತಾನ್ ಬಹಾದೂರರು ನಮ್ಮ ಸ್ಥಿತಿಯನ್ನು ಕಂಡು ನಮ್ಮ ಮೇಲೆ ದಯೆಯನ್ನು ಖಂಡಿತ ತೋರುವರು. ಆದರೆ ನಾವು ಇದನ್ನು ಸ್ವಲ್ಪ ಗಮನಿಸಬೇಕಾಗಿರುವುದೇನೆಂದರೆ– ನಾವು ಈ ನೆಲವನ್ನು ಬಹಳ ಕಾಲದಿಂದ ಆಳುತ್ತಾ ಬಂದಿದ್ದೇವೆ. ಕಾಲದ ಪ್ರಭಾವದಿಂದ ನಾವೆಲ್ಲರೂ ಬೇರ್ಪಟ್ಟಿದ್ದೆವು. ಈಗ ಒಂದುಕಡೆ ಸೇರಿದ್ದೇವೆ. ಈಗ ನಮ್ಮ ಆದ್ಯಕರ್ತವ್ಯವೆಂದರೆ ನಮ್ಮ ಮಕ್ಕಳನ್ನು ನಾವೇ ಕಯ್ಯಾರೆಕೊಂದು ನಾವು ಸಹ ಸಹಗಮನ ಪದ್ಧತಿಯನ್ನು ಅನುಸರಿಸೋಣ. ಇದರಿಂದ ನಮ್ಮ ತ್ಯಾಗದ ನಿಯಮವೂ ಉಳಿಯುತ್ತದೆ. ಜನರಲ್ಲಿ ರಾಜಪೂತರ ಗೌರವವೂ ಸ್ಥಿರವಾಗುತ್ತದೆ.

ಮರಣದ ಇಚ್ಛೆ :

ರಾಣಿ ದುರ್ಗಾವತಿಯ ವೀರೋಚಿತ ಮಾತುಗಳಿಂದ ಪ್ರೇರಿತನಾದ ಸಲ್ಹದಿಯು ಮತ್ತೊಮ್ಮೆ ಬಾದಶಹನ ವಿರುದ್ಧ ದ್ರೋಹಿಯಾದನು. ಅಲಿಶೇರನು ಆತನಿಗೆ ಬಹಳವಾಗಿ ಸಮಾಧಾನ ಪಡಿಸಿದರೂ ಯಾವ ಪ್ರಯೋಜನವೂ ಆಗಲಿಲ್ಲ. ಆತನು ಹೇಳಿದನು– "ನನ್ನ ಅಂತಃಪುರದಲ್ಲಿ ಪ್ರತಿನಿತ್ಯ ಒಂದು ಕೋಟಿ ವೀಳೆದೆಲೆ ಮತ್ತು ಅನೇಕ ಸೇರಿನಷ್ಟು ಕರ್ಪೂರಗಳು ಖರ್ಚಾಗುತ್ತಿವೆ. ಪ್ರತಿನಿತ್ಯ ೩೦೦ ಮಹಿಳೆಯರು ಹೊಸ ಉಡುಪನ್ನು ಧರಿಸುವರು. ನನಗೆ ಈಗ ಯಾವ ಆಸೆಯು ಇಲ್ಲ. ಆ ಭೋಗ ವಿಲಾಸಗಳು ಈಗ ನನಗೆ ಸಿಗಲೆಂದು ಆಶಿಸುವುದಿಲ್ಲ. ಈಗ ನಾನು ಬಹಳ ದೀರ್ಘವಾಗಿ ಆಲೋಚಿಸಿ ಒಂದು ತೀರ್ಮಾನಕ್ಕೆ ಬಂದಿರುವುದೇನೆಂದರೆ ಮರ್ಯಾದೆಯಿಂದ ಸಾಯುವುದೇ ಮೇಲೆಂದು.

ಏಳನೂರು ಸುಂದರ ಮಹಿಳೆಯರು ಜೌಹಾರ್ ಪದ್ಧತಿಯನ್ನನುಸರಿಸಿದರು :

ಇದಾದ ನಂತರ ಕೋಟೆಯಲ್ಲಿ "ಜೌಹಾರ್" ಪದ್ಧತಿಯ ನಿಯಮಗಳು ಪೂರ್ಣಗೊಂಡವು. ರಾಣಿ ದುರ್ಗಾವತಿಯು ಏಳುನೂರು ಮಹಿಳೆಯರೊಂದಿಗೆ ಉರಿಯುತ್ತಿರುವ ಬೆಂಕಿಯಲ್ಲಿ ಹಾರಿದಳು. ಇದರೊಂದಿಗೆ ಮಹಿಳೆಯರೆಲ್ಲರೂ ಉರಿದು ಬೂದಿಯಾದರು. ಇದಾದ ನಂತರ ಲಕ್ಷ್ಮಣ, ತಾಜ್‌ಖಾನ ಮತ್ತು ಸಲ್‌ಹದಿಯರು ತಮ್ಮ ಜೊತೆಗಾರರೊಂದಿಗೆ ಸಂಖ್ಯೆಯಲ್ಲಿ ಕೇವಲ ಒಂದು ನೂರು ಜನರು ಆಯುಧ ಸಮೇತ ಕೋಟೆಯ ಹೊರಗೆ ಬಂದರು. ಕೋಟೆಯ ಮೇಲಿಂದ ಸಿಪಾಯಿಗಳೊಂದಿಗೆ ಯುದ್ಧದಲ್ಲಿ ನಿರತರಾದರು.

ರಾಜಪೂತರ ಕೊಲೆ :

ಈ ಸುದ್ದಿಯನ್ನು ತಿಳಿದ ತಕ್ಷಣ ಸುಲ್ತಾನ್ ಬಹಾದೂರನ ಸೈನ್ಯವು ಕೋಟೆಯತ್ತ ಓಡಿತು. ಭಯಾನಕ ಯುದ್ಧವಾಯಿತು. ಕೆಲವೇ ಸಮಯದಲ್ಲಿ ಮುಸಲ್ಮಾನ ಸೈನಿಕರು ರಾಜಪೂತರೆಲ್ಲರನ್ನೂ ಕೊಂದು ಹಾಕಿದರು. ಈ ಯುದ್ಧದಲ್ಲಿ ಸುಲ್ತಾನ್ ಬಹಾದೂರನ ಕೆಲ ಸೈನಿಕರು ವೀರ ಸ್ವರ್ಗವನ್ನು ಸೇರಿದರು.

ಕಾಲ್ಪಿಯ ಶಾಸಕನ ಆಗಮನ :

ಅದೇ ದಿನಗಳಲ್ಲಿ ಕಾಲ್ಪಿಯ ಶಾಸಕ ಸುಲ್ತಾನ್ ಆಲಂನು ಮೊಗಲ ಬಾದಶಹ ನಸೀರುದ್ದೀನ್ ಹುಮಾಯೂನನಿಂದ ಯುದ್ಧದಲ್ಲಿ ಸೋತು ಸುಲ್ತಾನ್ ಬಹಾದೂರನ ಆಶ್ರಯದಲ್ಲಿ ಬಂದನು. ಸುಲ್ತಾನ್ ಬಹಾದೂರನು ಸುಲ್ತಾನ್ ಆಲಂನಿಗೆ ರಾಯ್ಸೀನ್ ಕೋಟೆ ಮತ್ತು ಚಂದೇರಿ ಕೋಟೆಗಳನ್ನು ನೋಡಿಕೊಳ್ಳಲು ಎಲ್ಲ ವ್ಯವಸ್ಥೆಗಳೊಂದಿಗೆ ನೇಮಿಸಿದನು.

ಕಾಕರೂನ್ ಕೋಟೆಯನ್ನು ವಶಪಡಿಸಿಕೊಳ್ಳಲು ಮನಸ್ಸು :

ಕಾಕರೂನ್‌ನ ಕೋಟೆಯು ಸುಲ್ತಾನ್ ಮಹಮೂದ್ ಖಿಲ್ಜಿಯ ಕಾಲದಿಂದಲೂ ರಾಜನ ವಶದಲ್ಲಿತ್ತು. ಸುಲ್ತಾನ್ ಬಹಾದೂರನು ಮೀರಾನ್ ಮಹಮ್ಮದ್ ಫಾರುಖಿ ಎಂಬುವನಿಗೆ ಅದನ್ನು ವಶಪಡಿಸಿಕೊಳ್ಳಲು ನೇಮಕಮಾಡಿದನು. ತಾನು ಕಾಡಿಗೆ ಹೋಗಿ ಆನೆಗಳ ಬೇಟೆಯಾಡಲು ಹೊರಟನು. ಬಾದಶಹನು 'ಕಾಲು' ಬೆಟ್ಟದ ಕಡೆಯ ವಿದ್ರೋಹಿಗಳನ್ನು ಅಡಗಿಸಿ ಈ ಪ್ರದೇಶವನ್ನು ಅಲಖ್‌ಖಾನ್‌ನ ಸುಪರ್ದಿಗೆ ಕೊಟ್ಟನು. ಇದಾದ ನಂತರ ಬಾದಶಹನು ಇಸ್ಲಾಮಾಬಾದ, ಹೋಷಂಗಾಬಾದ್, ಮತ್ತು ಮಾಳವದ ಎಲ್ಲ ನಗರಗಳತ್ತ ಹೋದನು. ಏಕೆಂದರೆ ಅವೆಲ್ಲವುಗಳನ್ನು ಜಮೀನುದಾರರು ತಮ್ಮ ವಶಕ್ಕೆ ತೆಗೆದುಕೊಂಡು ಬಿಟ್ಟದ್ದರು. ಅವುಗಳೆಲ್ಲವನ್ನೂ ಬಾದಶಹನು ವಶಪಡಿಸಿಕೊಂಡು ತನ್ನ ಆಪ್ತ ಅಮೀರರಿಗೆ ಜಾಗೀರಿಯಾಗಿ ನೀಡಿದನು.

ವಿಜಯೋತ್ಸವ ಸಮಾರಂಭ :

ಕಾಕರೂನ್ ಕೋಟೆಯನ್ನು ವಶಪಡಿಸಿಕೊಳ್ಳಲು ಮೀರಾನ್ ಮಹಮ್ಮದಶಾಹ ಫಾರೂಖಿಯು ಅತ್ತ ಹೋದಾಗ ಸುಲ್ತಾನ್ ಬಹಾದೂರನು ಸಹ ಆ ಕಡೆ ಪ್ರಯಾಣವನ್ನು ಮಾಡಿದನು. ಕಾಕರೂನಿನ ರಾಜನು ರಾಮಜಿ ಎಂಬೊಬ್ಬ ವ್ಯಕ್ತಿಯನ್ನು ಆ ಕೋಟೆಯ ಮಾಲಿಕನನ್ನಾಗಿ ನೇಮಿಸಿದ್ದನು. ಬಾದಶಹನು ಆ ಪ್ರದೇಶಕ್ಕೆ ತಲುಪಿದ ತಕ್ಷಣ ರಾಮಜಿಯು ಆ ಕೋಟೆಯನ್ನು ಖಾಲಿ ಮಾಡಿ ಓಡಿ ಹೋಗಿದ್ದನು. ಬಾದಶಹನು ಈ ಕೋಟೆಯಲ್ಲಿ ನಾಲ್ಕು ದಿನಗಳ ತನಕ ವೈಭವ ಪೂರ್ಣ ಭೋಗ ವಿಲಾಸಗಳೊಂದಿಗೆ ವಿಜಯೋತ್ಸವ ಸಮಾರಂಭಗಳನ್ನು ಏರ್ಪಡಿಸಿದ್ದನು. ಈ ಸಮಾರಂಭಗಳಲ್ಲಿ ತನ್ನ ಎಲ್ಲ ಅಮೀರರಿಗೂ ಆಪ್ತರಿಗೂ ಬಹುಮಾನ, ಉಡುಗೊರೆಗಳನ್ನು ನೀಡಿ ಗೌರವಿಸಿದನು.

ರಸೋರ್‌ಕೋಟೆಯ ಗೆಲುವು :

ಬಾದಶಹನು ತನ್ನ ಯೋಗ್ಯ ವೀರರಾದ ರಫೀವುಲ್‌ಮುಲ್ಕ್ ಉರ್ಫ ಅಮಾದುಲ್‌ಮುಲ್ಕ್ ಮತ್ತು ಇಖ್ತಿಯಾರ್‌ಖಾನನೆಂಬ ಅಮೀರರನ್ನು ರಸೋರ್ ಕೋಟೆಯನ್ನು ಗೆಲ್ಲಲು ಆಜ್ಞಾಪಿಸಿದನು. ತಾನು ಮಾಂಡುವಿನ ಶಾದಿಆಬಾದ ಕಡೆಗೆ ಪ್ರಯಾಣವನ್ನು ಮಾಡಿದನು. ಈ ಕೋಟೆಯ ಮಾಲಿಕ ಸಹ ರಾಜನ ಅಧೀನದಲ್ಲಿದ್ದನು. ಗುಜರಾತಿ ಸೈನ್ಯವು ಕೋಟೆಯನ್ನು ವಶಪಡಿಸಿಕೊಳ್ಳಲು ಬರುತ್ತಿದೆ ಎಂದು ಮಾಲಿಕನಿಗೆ ಗೊತ್ತಾದ ಕೂಡಲೇ ಹೆದರಿ ಕೋಟೆಯನ್ನು ಖಾಲಿಮಾಡಿಕೊಂಡು ಓಡಿ ಹೋದನು. ಕೇವಲ ಒಂದೇ ತಿಂಗಳಲ್ಲಿ ಕಾಕರೂನ್ ಮತ್ತು ರಸೋರ್ ಕೋಟೆಗಳೆರಡು ಬಾದಶಹನ ವಶವಾದುವು.

ಫಿರಂಗಿಯವರ ದಮನ :

ಮಾಂಡುವಿನ ಶಾದಿಆಬಾದನ್ನು ತಲುಪಿದ ಬಾದಶಹನು ಫಿರಂಗಿಯವರನ್ನು ದಮನ ಮಾಡುತ್ತ ತನ್ನ ಗಮನವನ್ನು ಹರಿಸಿದನು. ಈ ಉದ್ದೇಶದಿಂದ ದೇವ ಬಂದರಿನತ್ತ ಹೊರಟ. ಈ ಸುದ್ದಿ ತಿಳಿದ ಫಿರಂಗಿಯವರು ಹೆದರಿ ಅಲ್ಲಿಂದ ಓಡಿಹೋದರು. ಫಿರಂಗಿಯವರ ಒಂದು ದೊಡ್ಡ ತೋಪು ಬಾದಶಹನ ಕೈವಶವಾಯಿತು. ಇಂತಹ ತೋಫು ಹಿಂದೂಸ್ಥಾನದಲ್ಲಿ ಯಾವ ಬಾದಶಹನ ಹತ್ತಿರವು ಇರಲಿಲ್ಲ. ಈ ತೋಪನ್ನು ಸುಲ್ತಾನ್‌ನು ಬಹಳ ಕಷ್ಟಪಟ್ಟು ಗಾಲಿಗಳ ಸಹಾಯದಿಂದ ಜನಾನೇರ್‌ನ ಮಹಮ್ಮದಾಬಾದಿಗೆ ಕಳುಹಿಸಿದನು.

ಚಿತ್ತೋರಿಗೆ ಪ್ರಯಾಣ :

ಚಿತ್ತೋರನ್ನು ಗೆಲ್ಲುವ ಆಸೆಯಿಂದ ಸುಲ್ತಾನ್ ಬಹಾದೂರನು ದೇವ್ ಬಂದರಿನಿಂದ

ಕಂಪಾಯತ್ ತಲುಪಿದನು. ಅಲ್ಲಿನ ಹಿರಿಯರು ಸೂಫಿ ಸಂತರ ಸಮಾಧಿಗಳಲ್ಲಿ ಪ್ರಾರ್ಥನೆಯನ್ನು ಸಲ್ಲಿಸಿ ತನ್ನ ಸೈನ್ಯದ ಸಿದ್ಧತೆಯತ್ತ ಗಮನವನ್ನು ಹರಿಸಿದನು. ಅಸಂಖ್ಯಾತ ಸಿಪಾಯಿಗಳ ಸಂಗ್ರಹ ಮಾಡಿಕೊಂಡು ತೋಪು ಖಾನೆಯೊಂದಿಗೆ ಚಿತ್ತೋರಿನತ್ತ ಪ್ರಯಾಣ ಮಾಡಿದನು.

ಮಹಮ್ಮದ್ ಜಮಾನ ಮೀರ್‌ಜಾರ ಆಗಮನ :

ಮಹಮ್ಮದ್ ಜಮಾನ್ ಮಿರ್ಜಾನು ಬಯಾನ ಕೋಟೆಯಲ್ಲಿ ಬಂಧಿತನಾಗಿದ್ದನು. ಹಿಜರಿ ೯೪೦ರಲ್ಲಿ ಅವನು ನಸೀರುದ್ದೀನ್ ಹುಮಾಯುನನ ಹೆದರಿಕೆಯಿಂದ ಓಡಿ ಬಂದು ಸುಲ್ತಾನ್ ಬಹಾದೂರನ ಆಶ್ರಯದಲ್ಲಿದ್ದನು. ಹುಮಾಯುನನು ಸುಲ್ತಾನ್ ಬಹಾದೂರನ ಹತ್ತಿರ ತನ್ನ ಒಬ್ಬ ದೂತನನ್ನು ಕಳುಹಿಸಿ ಮಹಮ್ಮದ್ ಜಮಾನ ಮಿರ್ಜಾನನ್ನು ನನ್ನ ವಶಕ್ಕೆ ಕಳುಹಿಸಿ ಎಂದು ಕೇಳಿದ್ದನು. ಸುಲ್ತಾನ್ ಬಹಾದೂರನು ಸ್ವಲ್ಪ ಅಹಂಕಾರದಿಂದ ದೂತನಿಗೆ ಯಾವ ಉತ್ತರವನ್ನು ಕೊಡದೆ ವಾಪಸ್ ಕಳುಹಿಸಿಕೊಟ್ಟನು.

ಹುಮಾಯೂನನೊಂದಿಗೆ ಸುಲ್ತಾನ್ ಬಹಾದೂರನ ಅಸಭ್ಯ ವರ್ತನೆ :

ಹುಮಾಯುನನು ಮತ್ತೊಮ್ಮೆ ಈ ಸಮಸ್ಯೆಯತ್ತ ಗಮನವನ್ನು ಹರಿಸಿದನು. ಸುಲ್ತಾನ್ ಬಹಾದೂರನಿಗೊಂದು ಪತ್ರವನ್ನು ಬರೆದು ಒಂದುವೇಳೆ ನೀನು ಮಹಮ್ಮದಜಮಾನ ಮಿರ್ಜಾನನ್ನು ನನ್ನ ಬಳಿಗೆ ಕಳುಹಿಸಲು ಸಿದ್ಧನಿಲ್ಲದಿದ್ದರೆ ಕನಿಷ್ಟ ಪಕ್ಷ ಆತನನ್ನು ನಿನ್ನ ರಾಜ್ಯದಿಂದಲಾದರೂ ಹೊರ ಹಾಕು ಎಂದನು. ಆದರೆ ಸುಲ್ತಾನ್‌ನು ಈ ಸಲವೂ ಹುಮಾಯುನನನ್ನು ನಿರಾಶೆಪಡಿಸಿದನು. ಬಹುಶಃ ಸುಲ್ತಾನ್ ಬಹದೂರನ ಕೆಟ್ಟ ದಿನಗಳು ಬಂದಿರಬಹುದೆಂದು ಊಹಿಸಬಹುದು. ಆದ್ದರಿಂದಲೇ ಆತನು ವಾಸ್ತವ ವಿಷಯದತ್ತ ಗಮನವನ್ನು ಹರಿಸಲೇ ಇಲ್ಲ. ಇದಕ್ಕೆ ಬದಲಾಗಿ ಕೆಲವು ಅಸಭ್ಯ ಮಾತುಗಳನ್ನೆ ಆಡಿ ದೂತನನ್ನು ಅಲ್ಲಿಂದ ಅಟ್ಟಿದನು.

ಚಿತ್ತೋರ ಕೋಟೆಯ ಮುತ್ತಿಗೆ :

ಸುಲ್ತಾನ್ ಬಹಾದೂರನು ಹುಮಾಯುನನ ವಿರುದ್ಧ ಮಹಮ್ಮದಜಮಾನ ಮಿರ್ಜಾರನನ್ನು ಇನ್ನೂ ಹೆಚ್ಚಿನ ಗೌರವಾದರಗಳನ್ನೇ ತೋರಿದನು. ಇದೇ ಕಾರಣವು ಅಂತ್ಯದಲ್ಲಿ ಆತನ ವಿನಾಶಕ್ಕೆ ದಾರಿಯಾಯಿತು. ಅದೇ ದಿನಗಳಲ್ಲಿ ಸುಲ್ತಾನ್ ಬಹಾದೂರನು ಚಿತ್ತೋರನ್ನು ತಲುಪಿದ. ಇದರಿಂದಾಗಿ ರಾಜನು ಕೋಟೆಯ ಬಾಗಿಲನ್ನು ಭದ್ರಪಡಿಸಿಕೊಂಡು ಒಳಗೆ ಸೇರಿಕೊಂಡನು. ಈ ಮುತ್ತಿಗೆ ಸುಮಾರು ಮೂರು ತಿಂಗಳ ಕಾಲ ನಡೆಯಿತು. ಈ ಮಧ್ಯ ಇಬ್ಬರಲ್ಲೂ ಕೆಲವು ಗುಂಪುಗಳಲ್ಲಿ ಜಗಳಗಳು ನಡೆಯುತ್ತಲೇ ಇದ್ದವು. ಈ ಜಗಳಗಳಲ್ಲಿ ಸಾಮಾನ್ಯವಾಗಿ ಗುಜರಾತಿಯವರ ಗೆಲುವೇ ಆಗುತ್ತಿತ್ತು.

ರಾಜನ ವಿನಮ್ರತೆ :

ಕೊನೆಗೆ ರಾಜನು ಬಹಳ ವಿವಶನಾಗಿ ವಿನಮ್ರತೆಯಿಂದ ಬಾದಶಹನ ಅಧೀನತೆಯನ್ನು ಸ್ವೀಕರಿಸಿಕೊಂಡು ಕಪ್ಪ ಕಾಣಿಕೆಗಳಲ್ಲಿ ಒಂದು ಕಿರೀಟ, ಮುತ್ತು ರತ್ನ ಖಚಿತ ಒಡವೆ, ಸೊಂಟಪಟ್ಟಿ ಇವೆಲ್ಲವನ್ನೂ ರಾಜನು ಸುಲ್ತಾನ್ ಮಹಮೂದ್‌ಖಲ್ಜಿಯಿಂದ ಕಿತ್ತುಕೊಂಡಿದ್ದನು. ಅವೆಲ್ಲವನ್ನೂ ಸುಲ್ತಾನ್ ಬಹಾದೂರನಿಗೆ ನೀಡಿದನು. ಇವೇ ಅಲ್ಲದೇ ರಾಜನು ಕೆಲವು ಕುದುರೆಗಳನ್ನು, ಆನೆಗಳನ್ನೂ, ಬಹಳ ಬೆಲೆಬಾಳುವ ಉಡುಗೊರೆಗಳನ್ನು ಕೊಟ್ಟನು. ಇವೆಲ್ಲವನ್ನು ಪಡೆದ ಬಾದಶಹನು ತನ್ನ ದೇಶಕ್ಕೆ ವಾಪಸ್ಸಾದನು.

ದೆಹಲಿಯಲ್ಲಿ ಶಾಸನವನ್ನು ಮಾಡುವ ಮನಸ್ಸು :

ಇವೆಲ್ಲ ಗೆಲವುಗಳಿಂದಾಗಿ ಸುಲ್ತಾನ್ ಬಹಾದೂರನಲ್ಲಿ ಅಹಂಕಾರ ಗರ್ವಗಳು ಇನ್ನೂ ಹೆಚ್ಚಾದವು. ಇದಕ್ಕೆ ಕಾರಣಗಳೆಂದರೆ ಚಿತ್ತೋರಿನ ಗೆಲುವು, ಮಹಮ್ಮದ ಜಮಾನ್‌ಮಿರ್ಜಾನ ಆಗಮನ ಮತ್ತು ಬಹಲೂಲ್‌ಲೋಧಿಯ ಮಕ್ಕಳು ಬಾದಶಹನ ಸೇವೆಯಲ್ಲಿ ಹಾಜರಾದುದು ಈತನಿಗೆ ಅಹಂಕಾರಿಯನ್ನಾಗಿಸಿದವು. ಈ ಅಹಂಕಾರಗಳು ದೆಹಲಿಯನ್ನು ವಶಪಡಿಸಿಕೊಂಡು ಆಳಬೇಕೆಂಬ ಆಸೆಯಾಯಿತು. ಆ ಉದ್ದೇಶದಿಂದ ಹುಮಾಯೂನನ ಮೇಲೆ ಯುದ್ಧ ಮಾಡಲು ಪ್ರಯತ್ನಿಸಿದನು.

ಪ್ರಯತ್ನದಲ್ಲಿ ಮಗ್ನ :

ಸುಲ್ತಾನ್ ಬಹಾದೂರನು ಬಹಲೂಲ್ ಲೋಧಿಯ ಒಬ್ಬ ಮಗನಾದ ಅಲ್ಲಾವುದ್ದೀನನನ್ನು ಬಹಳವಾಗಿ ಗೌರವಿಸಿದನು. ತಾತಾರ್‌ಖಾನ್ ಬಿನ್ ಅಲ್ಲಾವುದ್ದೀನನಿಗೆ ತನ್ನ ಅಮೀರರಲ್ಲಿ ದಾಖಲಿಸಿಕೊಂಡನು. ದೆಹಲಿಯನ್ನು ಗೆಲ್ಲುವ ಪ್ರಯತ್ನದಲ್ಲಿ ತಾತರ್‌ಖಾನನಿಗೆ ಸಹಾಯ ಮಾಡಿದನು. ಏಕೆಂದರೆ ಆತನು ಶೌರ್ಯ-ಸಾಹಸಗಳಲ್ಲಿ ಅಸೀಮ ಹೆಸರನ್ನು ಗಳಿಸಿದ್ದನು. ಅಮೀರ್ ಬುರ್ಹಾನುಲ್‌ಮುಲ್ಕ್‌ನಿಗೆ ಮೂರುಕೋಟಿ ಮುಜಾಫ್ಫರ ನಾಣ್ಯಗಳನ್ನು ಕೊಟ್ಟು ತಾತಾರನ ಜೊತೆಗೂಡಿ ಸೈನ್ಯ ಸಂಗ್ರಹಣೆ ಮಾಡಲು ನೇಮಿಸಿದನು.

ತಾತಾರ್‌ಖಾನನ ಓಡಾಟ :

ಕೆಲವೇ ಸಂದರ್ಭದಲ್ಲಿ ತಾತಾರ್‌ಖಾನನು ೪೦ ಸಾವಿರ ಸವಾರರನ್ನು ಸಿದ್ಧಪಡಿಸಿಕೊಂಡನು. ಈ ಸೈನ್ಯವನ್ನು ತೆಗೆದುಕೊಂಡು ಹುಮಾಯುನನ ಹಿಡಿತದಲ್ಲಿದ್ದ ಪ್ರದೇಶಗಳಲ್ಲಿ ಗಲಭೆ ಲೂಟಿಗಳನ್ನು ಪ್ರಾರಂಭಿಸಿದನು. ಹಿಜರಿ ೯೪೧ರಲ್ಲಿ ತಾತರ್‌ಖಾನನು ಬಯಾನ ಕೋಟೆಯನ್ನು ವಶಪಡಿಸಿಕೊಂಡನು. ಇದು ಆಗ್ರಾ ಪಟ್ಟಣದ ಸಮೀಪದಲ್ಲಿತ್ತು.

ಹಿಂದಾಲನ ಬಯಾನ ಕೋಟೆಗೆ ಆಗಮನ :

ನಸೀರುದ್ದೀನ ಹುಮಾಯುನನು ತಾತಾರ್‌ಖಾನನ ಗಲಭೆಗಳನ್ನು ಹತ್ತಿಕ್ಕಲು ತನ್ನ ಕಿರಿಯ ತಮ್ಮನಾದ ಹಿಂದಾಲ ಮಿರ್ಜಾನನ್ನು ನೇಮಿಸಿದನು. ಹಿಂದಾಲನು ಬಯಾನದತ್ತ ಹೊರಟನು. ಆತನು ಬಯಾನ ಗಡಿಯಲ್ಲಿ ತಲುಪಿದಾಗ ತಾತಾರ್‌ಖಾನನ ಸೈನ್ಯದ ಆಫಘನ್ ಸಿಪಾಯಿಗಳು ಹೆದರಿ ಅತ್ತಿತ್ತ ಓಡಿಹೋದರು. ತಾತಾರ್‌ಖಾನನ ಸೈನ್ಯವೆಲ್ಲಾ ಚೆಲ್ಲಾಪಿಲ್ಲಿಯಾಯಿತು. ಆತನಲ್ಲಿ ಕೇವಲ ಎರಡು ಸಾವಿರ ಸೈನ್ಯ ಮಾತ್ರ ಉಳಿದಿತ್ತು.

ಆಫ್‌ಘನರ ವಿಶ್ವಾಸ ಘಾತುಕತೆ :

ತಾತಾರ್‌ಖಾನನ ಆಫ್‌ಘನ್ ಸಿಪಾಯಿಗಳು ಕೇವಲ ಹಣದ ದುರಾಶೆಯುಳ್ಳವರಾಗಿದ್ದರು. ಅವರಿಗೆ ತಾತಾರನು ಅಪಾರ ಸಂಪತ್ತನ್ನು ನೀಡಿದ್ದನು. ಪರಿಸ್ಥಿತಿಗಳು ಚೆನ್ನಾಗಿರುವವರೆಗೆ ಆತನ ಜೊತೆಯಲ್ಲಿದ್ದರು. ಸಂಕಟ ಎದುರಾದಾಗ ಓಡಿಹೋದರು. ಇವರ ವಿಶ್ವಾಸಘಾತುಕತನದಿಂದಾಗಿ ತಾತಾರನ ಪರಿಸ್ಥಿತಿ ತುಂಬಾ ಸೂಕ್ಷ್ಮವಾಗಿ ಹೋಯಿತು. ಈಗ ಆತನು ಸುಲ್ತಾನ್ ಬಹಾದುರನ ಹತ್ತಿರವೂ ಬರುವಂತಿರಲಿಲ್ಲ. ಹಾಗೂ ಸಹಾಯವನ್ನು ಕೇಳುವಂತಿರಲಿಲ್ಲ. ಕೊನೆಗೆ ವಿವಶನಾದ ತಾತಾರನು ದಾನಿಯಲ್‌ನ ಮೇಲೆ ಯುದ್ಧ ಮಾಡಲು ತಯಾರಾದನು.

ತಾತಾರ್‌ಖಾನನ ಅಂತ್ಯ :

ತಾತಾರ್‌ಖಾನ ಮತ್ತು ದಾನಿಯಲ್‌ನ ಸೈನ್ಯಗಳು ಎದುರುಬದುರಾದುವು. ತಾತಾರನು ಹಿಂದಾಲನ ಸೈನ್ಯದ ಮೇಲೆ ಆಕ್ರಮಣವನ್ನು ಮಾಡಿದನು. ಇಬ್ಬರಲ್ಲೂ ಘೋರಯುದ್ಧವಾಯಿತು. ಇದರ ಪರಿಣಾಮವೆಂದರೆ ತಾತಾರನು ತನ್ನ ಮುನ್ನೂರು ಮಂದಿ ಸಿಪಾಯಿಗಳೊಂದಿಗೆ ಯುದ್ಧದಲ್ಲಿ ಮಡಿದನು. ಹೀಗಾಗಿ ಬಯಾನ ಕೋಟೆಯು ಹಿಂದಾಲನ ವಶಕ್ಕೆ ಬಂದಿತು.

ಗುಜರಾತಿನ ಮೇಲೆ ಹುಮಾಯೂನನ ಆಕ್ರಮಣ :

ಹುಮಾಯೂನನು ಹಿಂದಾಲನ ಗೆಲುವನ್ನು ಶುಭ ಸೂಚನೆ ಎಂದು ಬಗೆದನು. ಇದಾದ ನಂತರ ಸುಲ್ತಾನ್ ಬಹಾದೂರನತ್ತ ಗಮನವನ್ನು ಹರಿಸಿದನು. ಹೂಮಾಯೂನನು ಸುಲ್ತಾನ್ ಬಹಾದೂರನ ಮೇಲೆ ಆಕ್ರಮಣವನ್ನು ಮಾಡಿದಾಗ, ಸುಲ್ತಾನ್ ಬಹಾದೂರನು ರಾಜನ ಮೇಲೆ ಯುದ್ಧಕ್ಕೆ ಹೋಗಿದ್ದನು. ಆತನ ಕೋಟೆಯನ್ನು ಮುತ್ತಿದನು. ಬಹಾದೂರನು ತಾತಾರ್‌ಖಾನನ ಸಾವು ಮತ್ತು ಹುಮಾಯುನನ ಆಕ್ರಮಣದ ಸುದ್ದಿಗಳನ್ನು ಕೇಳಿ ಸಿಡಿ–ಮಿಡಿಗೊಂಡನು. ಈ ಸಂಬಂಧದಲ್ಲಿ ತನ್ನ ಅಮೀರರೊಂದಿಗೆ ಚರ್ಚಿಸಿದನು.

ಅಮೀರರಲ್ಲಿ ವಿಮರ್ಶೆ :

ಕೆಲವು ಅಮೀರರು ಈಗ ಮುತ್ತಿರುವ ಕೋಟೆಯ ಮುತ್ತಿಗೆಯನ್ನು ತೆರವು ಮಾಡಿ ಹುಮಾಯುನನನ್ನು ಎದುರಿಸಲು ಹೋಗುವಂತೆ ಸೂಚಿಸಿದರು. ಅವರಲ್ಲಿ ಒಬ್ಬ ಪ್ರಸಿದ್ಧ ಅಮೀರ ಹೈದರ್‌ಖಾನನೆಂಬುವವನು ಬಾದಶಹನಲ್ಲಿ ಹೀಗೆ ವಿನಂತಿಸಿದನು. ನಾವು ಈಗ ಕಾಫಿರರೊಂದಿಗೆ ಯುದ್ಧದಲ್ಲಿ ನಿರಂತರಾಗಿದ್ದೇವೆ. ನಾವು ಅವರನ್ನು ಮುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ಒಬ್ಬ ಮುಸಲ್ಮಾನ ಬಾದಶಹ ನಮ್ಮ ಮೇಲೆ ಆಕ್ರಮಣ ಮಾಡುತ್ತಿದ್ದಾನೆಂದರೆ ಅದರ ಅರ್ಥ ಆತನು ಕಾಫಿರರಿಗೆ ಸಹಾಯ ಮಾಡಿದಂತಾಗುವುದಿಲ್ಲವೆ? ಇಂತಹ ಆಕ್ರಮಣಕಾರಿ ಮುಸಲ್ಮಾನನನ್ನು ಯಾವತ್ತು ಕೆಟ್ಟ ಶಬ್ದಗಳಲ್ಲಿ ಜ್ಞಾಪಿಸಿಕೊಳ್ಳಬೇಕಾಗುತ್ತದೆ. ಆದ್ದರಿಂದ ನನ್ನಂಥ ಒಬ್ಬ ಕನಿಷ್ಠನ ಅಭಿಪ್ರಾಯವೆಂದರೆ–ನಾವು ಈಗ ಕೋಟೆಯ ಮುತ್ತಿಗೆಯನ್ನು ತೆರವುಗೊಳಿಸಬಾರದು. ಈ ಸಂದರ್ಭದ ಸೂಕ್ಷ್ಮತೆಯನ್ನು ಹುಮಾಯುನನು ತಿಳಿದು ನಮ್ಮ ಮೇಲೆ ಆಕ್ರಮಣವನ್ನು ಮಾಡುವುದಿಲ್ಲವೆಂಬ ಭರವಸೆ ನನಗಿದೆ.

ಹುಮಾಯುನನ ಬುದ್ಧಿವಂತಿಕೆ :

ಹುಮಾಯುನನು ತನ್ನ ಸೈನ್ಯದೊಂದಿಗೆ ಸಾರಂಗಪುರದವರೆಗೂ ಬಂದನು. ಆತನಿಗೆ ಹೈದರ್‌ಖಾನನು ಹೇಳಿದ ಒಂದು ಮಾತು ನೆನಪಿಗೆ ಬಂದಿತು. ಆ ಮಾತು ಹುಮಾಯುನನ ಮನಸ್ಸಿಗೆ ನಾಟಿತು. ಈ ಸಂದರ್ಭದಲ್ಲಿ ನಾನು ಗುಜರಾತಿನ ಮೇಲೆ ಆಕ್ರಮಣವನ್ನು ಮಾಡುವುದು ಸೂಕ್ತವಲ್ಲ. ಏಕೆಂದರೆ ಸುಲ್ತಾನ್ ಬಹಾದೂರನು ಕಾಫಿರರ ಮೇಲೆ ಯುದ್ಧವನ್ನು ಸಾರಿದ್ದಾನೆ. ಈಗ ನಾನು ಆತನ ಮೇಲೆ ಯುದ್ಧಕ್ಕೆ ಹೋದರೆ ಇಸ್ಲಾಮಿನ ನಿಯಮವನ್ನು ಉಲಂಘಿಸಿದಂತಾಗುತ್ತದೆ. ಹೀಗೆ ಯೋಚಿಸಿದ ಹುಮಾಯುನನು ಸಾರಂಗಪುರದಲ್ಲಿಯೇ ಸ್ವಲ್ಪ ದಿನ ತಂಗಿದ್ದು ಸುಲ್ತಾನ್ ಬಹಾದೂರನ ರಾಜ್ಯದಲ್ಲಿ ಯಾವುದೇ ರೀತಿಯ ಆಕ್ರಮಣವನ್ನು ಮಾಡದೆ ಹಿಂತಿರುಗಿದನು. ಇದರಿಂದ ಹುಮಾಯುನನ ಬುದ್ಧಿವಂತಿಕೆಯ ಪರಿಚಯವಾಗುತ್ತದೆ.

ಸುಲ್ತಾನ್ ಬಹಾದೂರನು 'ಸಾಬಾತ್' (ಕೋಟೆಯ ಮೇಲೇರಲು ಕಟ್ಟುವ ಮೇಲ್ಛಾವಣಿ) ಕ್ರಮವನ್ನನುಸರಿಸಿ ಹೇಗೋ ಮಾಡಿ ಕೋಟೆಯನ್ನು ಗೆದ್ದನು. ಈ ಯುದ್ಧದಲ್ಲಿ ಅಸಂಖ್ಯಾತ ರಾಜಪೂತರು ಮಡಿದಿದ್ದರು. ಈ ಆಕ್ರಮಣದ ನಂತರ ಸುಲ್ತಾನ್ ಬಹಾದೂರನು ಹುಮಾಯುನನತ್ತ ಮನಸ್ಸು ಮಾಡಿದನು. ಆತನು ತನ್ನ ಸೈನಿಕರಿಗೆ ಅಪಾರ ಸಂಪತ್ತನ್ನು ವಿತರಿಸಿದನು. ಇದರಿಂದ ಸೈನಿಕರು ವೀರಾವೇಶದಿಂದ ಹೋರಾಡಲು ಸಹಾಯಕವೆಂದು ತಿಳಿದಿದ್ದನು.

ಹುಮಾಯುನ್ ಮತ್ತು ಸುಲ್ತಾನ್ ಬಹಾದೂರರ ಯುದ್ಧ :

ಹುಮಾಯೂನನು ಸಹ ಪೂರ್ಣ ಪ್ರಮಾಣದಲ್ಲಿ ಸಿದ್ಧನಾಗಿ ಬಂದಿದ್ದನು. ಮಂದ್‌ಸೋರ್ ಕೋಟೆಯ ಬಳಿಯಲ್ಲಿ ಇಬ್ಬರೂ ಎದುರುಬದುರಾದರು. ಸುಲ್ತಾನ್ ಬಹಾದೂರನ ಕಡೆಯ ಸೈಯದ್ ಅಲಿಖುರಾಸಾನಿ ಎಂಬುವನು ದ್ರೋಹವನ್ನು ಬಗೆದನು. ಆತನು ಗುಜರಾತಿ ಸೈನ್ಯದಿಂದ ಬೇರ್ಪಟ್ಟು ಹುಮಾಯುನನ ಕಡೆ ಸೇರಿಕೊಂಡನು. ಈ ಘಟನೆಯಿಂದಾಗಿ ಗುಜರಾತಿಗಳಿಗೆ ತುಂಬಾ ಚಿಂತೆಯಾಯಿತು.

ಅಮೀರರಲ್ಲಿ ಚರ್ಚೆ :

ಸುಲ್ತಾನ್ ಬಹಾದೂರನು ತನ್ನ ಅಮೀರರೊಂದಿಗೆ ಚರ್ಚೆಯನ್ನು ನಡೆಸಿದನು. ಹೈದರ್‌ಖಾನನು ನಾಳೆ ನಾವು ಯುದ್ಧ ಮಾಡೋಣವೆಂದನು. ಏಕೆಂದರೆ ಚಿತ್ತೋರಿನಲ್ಲಿ ಗೆದ್ದ ಉತ್ಸಾಹ ನಮ್ಮ ಸೈನಿಕರಲ್ಲಿ ಈಗಲೂ ಇದೆ. ತೋಪುಖಾನೆಯ ಆಫೀಸರ್ ರೋಮಿಖಾನನು ಹೀಗೆ ಹೇಳಿದನು. ನಮ್ಮ ಹತ್ತಿರ ತೋಪುಗಳ ಶಕ್ತಿ ಎಷ್ಟಿದೇ ಎಂದರೆ ನಮ್ಮನ್ನು ಬಿಟ್ಟರೆ ರೋಮ ನಗರದ ರಾಜ ಖೈಸರನೊಬ್ಬನೆ ನಮಗೆ ಸರಿಸಮನಾದವನು. ಮತ್ತಾರಲ್ಲೂ ಈ ಶಕ್ತಿ ಇಲ್ಲವೆಂದನು. ನನ್ನ ಅಭಿಪ್ರಾಯದಲ್ಲಿ ನಮ್ಮ ಸೈನ್ಯ ಸುತ್ತಲೂ ಒಂದು ಕಂದಕ (ಹಳ್ಳ)ವನ್ನು ತೋಡಿಕೊಳ್ಳುವುದು ಸೂಕ್ತ. ಏಕೆಂದರೆ ತೋಪುಗಳಿಂದ ಪ್ರತಿನಿತ್ಯ ಮೊಗಲ ಸೈನಿಕರನ್ನು ನಾಶಪಡಿಸಬಹುದಾಗಿದೆ.

ಸುಲ್ತಾನ್ ಆಲಂನ ಆಗಮನ :

ಈ ಸಲಹೆಯು ಸುಲ್ತಾನ್ ಬಹಾದೂರನಿಗೆ ಹಿಡಿಸಿತು. ಆತನು ತಕ್ಷಣ ಕಂದಕವನ್ನು ಸೈನ್ಯದ ಸೂತ್ತಲೂ ತೋಡಿಸಿದನು. ಈ ಮಧ್ಯ ಸುಲ್ತಾನ್ ಆಲಂನು ತನ್ನ ವಿಶಾಲ ಸೈನ್ಯದೊಂದಿಗೆ ಅಲ್ಲಿಗೆ ಬಂದು ಬಹಾದೂರನ ಸೈನ್ಯದಲ್ಲಿ ಸೇರಿಕೊಂಡನು. ಈತನಿಗೆ ಸುಲ್ತಾನ್ ಬಹಾದೂರನು ರಾಯ್ಸೀನ್ ಮತ್ತು ಚಂದೇರಿ ಕೋಟೆಗಳ ಶಾಸಕನನ್ನಾಗಿ ನೇಮಿಸಿದ್ದ ಉಪಕಾರವನ್ನು ಈತನು ಮರೆತಿರಲಿಲ್ಲ.

ಹುಮಾಯುನನೂ, ಬಹಾದೂರನೂ ಸುಮಾರು ಎರಡು ತಿಂಗಳ ಕಾಲ ಪರಸ್ಪರ ಎದುರಾಗಿ ಯುದ್ಧ ಮೈದಾನದಲ್ಲಿ ಸ್ಥಿರವಾಗಿ ನಿಂತರು. ಆಗಾಗ್ಗೆ ಇಬ್ಬರಲ್ಲೂ ಹೊಡೆದಾಟಗಳು ನಡೆಯುತ್ತಿದ್ದವು. ಹುಮಾಯುನನು ತನ್ನ ಸೈನಿಕರಿಗೆ ತೋಪುಗಳತ್ತ ಹೋಗದಂತೆ ಎಚ್ಚರಿಸಿದ್ದನು.

ಗುಜರಾತಿ ಸೈನ್ಯದಲ್ಲಿ ಬರಗಾಲದ ಚಿಹ್ನೆಗಳು :

ಮೂರು ನಾಲ್ಕು ಸಾವಿರ ಬಿಲ್ಲುಗಾರರು ಗುಜರಾತಿ ಸೈನ್ಯದ ಸುತ್ತಲೂ ಕಾವಲು ನಿಂತು ಎಲ್ಲಿಂದಲೂ ಆಹಾರ ಸರಬರಾಜು ಆಗದಂತೆ ಮೊಗಲ ಸೈನಿಕರು ಎಲ್ಲ

ದಾರಿಗಳನ್ನು ಮುಚ್ಚಿಬಿಟ್ಟರು. ಕೆಲವು ದಿನಗಳು ಹೇಗೋ ಕಳೆದರು. ಗುಜರಾತಿ ಸೈನಿಕ ಪಾಳಯದಲ್ಲಿ ಬರದ ಪರಿಸ್ಥಿತಿ ಭಯಾನಕವಾಗಿ ತಲೆದೋರಿತು. ಮೊಗಲ ಬಿಲ್ಲುಗಾರರು ಬಹಳ ಎಚ್ಚರಿಕೆಯಿಂದ ಗುಜರಾತಿ ಸೈನಿಕರಿಗೆ ಆಹಾರ ಸಾಮಗ್ರಿಗಳು ದೊರೆಯದಂತೆ ಪೂರ್ಣವಾಗಿ ತಡೆದಿದ್ದರು.

ಸುಲ್ತಾನ್ ಬಹಾದೂರನು ಪರಾರಿ :

ಈ ಪರಿಸ್ಥಿತಿಯನ್ನು ಕಂಡ ಸುಲ್ತಾನ್ ಬಹಾದೂರನು ಅರಿತಿದ್ದುದೇನೆಂದರೆ– ಈಗ ನಾನು ಇನ್ನು ಹೆಚ್ಚು ದಿನ ಇಲ್ಲಿ ಉಳಿದಿದ್ದೇ ಆದರೆ, ನನ್ನ ಬಂಧನ ನಿಶ್ಚಿತ ಎಂದು ತೀರ್ಮಾನಿಸಿ ತನ್ನ ಐದು ಜನ ಆಪ್ತ ಅಮೀರರೊಂದಿಗೆ ಪರದೆಯನ್ನು ಹೊದ್ದು ಮಾಂಡುವಿನ ಶಾದಿಆಬಾದಿಗೆ ಓಡಿಹೋದನು. ಅವನ ಜೊತೆಯಲ್ಲಿ ಮಾಳವ ಮತ್ತು ಬುರ್ಹಾನ್‌ಪುರದ ಶಾಸಕರು ಇದ್ದರು.

ಹಿಂಬಾಲಿಸಿದರು :

ಹುಮಾಯುನನು ಮಾಂಡುವಿನ ಶಾದಿಆಬಾದ ಕೋಟೆಯವರೆವಿಗೂ ಹಿಂಬಾಲಿಸಿ ಬಂದನು. ದಾರಿಯಲ್ಲಿ ಸಿಕ್ಕ ಅಸಂಖ್ಯಾತ ಗುಜರಾತಿ ಸೈನಿಕರನ್ನು ಕೊಲ್ಲುತ್ತಾ ನಡೆದನು. ಹೈದರ್‌ಖಾನನು ಒಂದು ವಿಶಾಲ ಸೈನ್ಯವನ್ನು ತೆಗೆದುಕೊಂಡು ತನ್ನ ಬಾದಶಹನ ಹಿಂದೆ ಹಿಂದೆ ಹೋಗುತ್ತಿದ್ದನು. ಇಬ್ಬರಲ್ಲೂ ಘೋರ ಯುದ್ಧವು ನಡೆಯಿತು. ಹೈದರಖಾನನು ಗಾಯಗೊಂಡನು. ಆತನೂ ತಪ್ಪಿಸಿಕೊಂಡು ಓಡಿ ಹೋದನು.

ಮಾಂಡುಕೋಟೆಯಲ್ಲಿ ತಂಗಿದ್ದು ಮತ್ತೆ ಓಡಿದನು :

ಸುಲ್ತಾನ್ ಬಹಾದೂರನು ಮಾಂಡುಕೋಟೆಯಲ್ಲಿ ಆಶ್ರಯವನ್ನು ಪಡೆದಿದ್ದನು. ಮೊಗಲ ಸೈನಿಕರು ಕೋಟೆಯನ್ನು ಸುತ್ತುವರಿದರು. ಸ್ವಲ್ಪ ಸಮಯದಲ್ಲಿಯೇ ಅನೇಕ ಮೊಗಲ ಸಿಪಾಯಿಗಳು, ಅಮೀರರು ಅವರಲ್ಲಿ ನಬ್ಬುಬೇಗ್‌ನೂ ಇದ್ದನು. ಸುಮಾರು ಏಳುನೂರು ಸೈನಿಕರು ಕೋಟೆಯೊಳಗೆ ಪ್ರವೇಶಿಸಿದರು. ಈ ಸಮಯದಲ್ಲಿ ಸುಲ್ತಾನ್ ಬಹಾದೂರನು ನಿದ್ರಿಸುತ್ತಿದ್ದನು. ಗಲಾಟೆಯನ್ನು ಕೇಳಿ ಅವನು ಎಚ್ಚರಗೊಂಡನು. ಗುಜರಾತಿ ಸೈನಿಕರು ಹುಚ್ಚೆದ್ದು ಓಡುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಈ ಕೋಟೆಯಲ್ಲಿ ಇರುವುದು ಸೂಕ್ತವಲ್ಲವೆಂದು ತಿಳಿದು ಆತನೂ ಓಡಲು ಪ್ರಾರಂಭಿಸಿದ. ಆತನು ತನ್ನ ಆಪ್ತ ಐದಾರು ಸವಾರರನ್ನೊಳಗೊಂಡು ಜನಾನೇರ್‌ನ ಮಹಮ್ಮದಾಬಾದಿಗೆ ತಲುಪಿದನು.

ಸುಲ್ತಾನ್ ಆಲಂನ ಕೊಲೆ :

ಹೈದರ್‌ಖಾನ್ ಮತ್ತು ಸುಲ್ತಾನ್ ಆಲಂ ಇಬ್ಬರೂ ಸೋಂಗರ್ ಕೋಟೆಯಲ್ಲಿ

ಆಶ್ರಯವನ್ನು ಪಡೆದರು. ಎರಡು ದಿನಗಳ ನಂತರ ಶಾಂತಿಯನ್ನು ಕೋರಿ ಹುಮಾಯುನನ ಸೇವೆಯಲ್ಲಿ ಹಾಜರಾದರು. ಹೈದರಖಾನನನ್ನು ಆತನು ಗಾಯಗೊಂಡಿದ್ದರಿಂದ ತನ್ನ ನೌಕರರಲ್ಲಿ ಸೇರಿಸಿದನು. ಸುಲ್ತಾನ್ ಆಲಂನನನ್ನು ಕೊಲೆ ಮಾಡಲು ಆಜ್ಞಾಪಿಸಿದನು. ಏಕೆಂದರೆ ಆತನ ನಡತೆ ಸರಿ ಇರಲಿಲ್ಲ. ಅಸಭ್ಯ ವರ್ತನೆಗಳನ್ನು ಅಪಾರವಾಗಿ ಮಾಡಿದ್ದನು.

ಮಹಮ್ಮದಾಬಾದಿನಲ್ಲಿ ವಿನಾಶ, ಲೂಟಿ :

ಸುಲ್ತಾನ್ ಬಹಾದೂರ್‌ನಿಗೆ ಈ ಸುದ್ದಿ ತಿಳಿದ ಕೂಡಲೇ ಅವನು ಜನಾನೇರ್ ಮಹಮ್ಮದಾಬಾದಿನಿಂದ ತನ್ನ ಎಲ್ಲ ಸಂಪತ್ತನ್ನು, ವಜ್ರವೈಡೂರ್ಯ, ರತ್ನಗಳನ್ನು ದೇವಬಂದರಗೆ ರವಾನಿಸಿದನು. ತಾನು ಕಂಪಾಯತ್‌ನತ್ತ ಪ್ರಯಾಣವನ್ನು ಮಾಡಿದನು. ಹುಮಾಯುನನು ಮಾಂಡು ಕೋಟೆಯನ್ನು ತನ್ನ ಅಮೀರರ ಸುಪರ್ದಿಗೆ ಬಿಟ್ಟು, ಸ್ವತಃ ತಾನು ಜನಾನೇರ್‌ನ ಮಹಮ್ಮದಾಬಾದ್‌ನತ್ತ ಪ್ರಯಾಣಿಸಿದ. ಮಹಮ್ಮದಾಬಾದನ್ನು ಚೆನ್ನಾಗಿ ಲೂಟಿ ಮಾಡಿದ. ಮೊಗಲರು ಈ ಲೂಟಿಯಲ್ಲಿ ಅಪಾರ ಸಂಪತ್ತನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಇದಾದ ನಂತರ ಹುಮಾಯುನನು ಬಹಳ ಬೇಗ ಕಂಪಾಯತನತ್ತ ಪ್ರಯಾಣಿಸಿದ. ಸುಲ್ತಾನ್ ಬಹಾದೂರನು ದೇಬ್ ಬಂದರಿನತ್ತ ಓಡಿದನು.

ಮಹಮ್ಮದಾಬಾದ ಕೋಟೆ ಹುಮಾಯೂನನ ವಶ :

ಹುಮಾಯುನನು ಕಂಪಾಯತ್ ತಲುಪಿದಾಗ ಇಲ್ಲಿ ಸುಲ್ತಾನ್ ಬಹಾದೂರನು ಇಲ್ಲವೆಂದು ಗೊತ್ತಾಯಿತು. ಆಗ ಹುಮಾಯೂನನು ಜನಾನೇರ್ ಮಹಮ್ಮದ್‌ಆಬಾದಿಗೆ ವಾಪಸ್ ಬಂದನು. ಹುಮಾಯುನನು ಕೋಟೆಯನ್ನು ಮುತ್ತಿದನು. ಈ ಯುದ್ಧದಲ್ಲಿ ಕೋಟೆಯನ್ನು ತನ್ನ ವಶಕ್ಕೆ ಪಡೆದನು. ಇದರ ಪೂರ್ಣ ವಿವರ ಹುಮಾಯುನನ ಚರಿತ್ರೆಯಲ್ಲಿ ವಿವರವಾಗಿ ವರ್ಣಿಸಲಾಗಿದೆ.

ಇಖ್ತಿಯಾರ್‌ಖಾನನೊಡನೆ ಹುಮಾಯೂನನ ವರ್ತನೆ :

ಜನಾನೇರ್ ಮಹಮ್ಮದಾಬಾದಿನ ಕೋಟೆಯ ಶಾಸಕ ಇಖ್ತಿಯಾರ್‌ಖಾನನು ಓಡಿಹೋಗಿದ್ದನು. ಮೌಲಿಯಾ ಎಂಬ ಹೆಸರಿನ "ಅರ್ಕ್" ಎಂಬ ಕೋಟೆಯಲ್ಲಿ ಅಡಗಿಕೊಂಡಿದ್ದನು. ನಂತರ ಅವನು ಹುಮಾಯೂನನಲ್ಲಿ ಶಾಂತಿಯನ್ನು ಬಯಸಿ ಆತನ ಸೇವೆಯಲ್ಲಿ ಹಾಜರಾದನು. ಇಖ್ತಿಯಾರಖಾನನು ತನ್ನ ವಂಶಸ್ಥರಲ್ಲಿ ಹೆಸರಾಂತ ವಿದ್ವಾಂಸನಾಗಿದ್ದನು. ಗುಜರಾತಿನ ಇತರೆ ಅಮೀರರಿಗಿಂತ ಉನ್ನತ ಸ್ಥಾನವನ್ನು ಗಳಿಸಿಕೊಂಡಿದ್ದನು. ಈ ವಿಷಯವನ್ನು ತಿಳಿದ ಹುಮಾಯೂನನು ಇಖ್ತಿಯಾರ್‌ಖಾನನನ್ನು ತನ್ನ ಅಮೀರರಲ್ಲಿ ದಾಖಲಿಸಿಕೊಂಡನು.

ಗುಜರಾತಿಗಳ ಪತ್ರಗಳು ಸುಲ್ತಾನ್ ಬಹಾದೂರನಿಗೆ :

ಹುಮಾಯೂನನು ಗುಜರಾತಿ ಬಾದಶಹರುಗಳ ಖಜಾನೆಗಳನ್ನು ತನ್ನ ವಶಕ್ಕೆ ತೆಗೆದುಕೊಂಡನು. ಅವುಗಳಲ್ಲಿ ಅನೇಕ ವರ್ಷಗಳಿಂದ ಸಂಗ್ರಹವಾಗಿದ್ದ ಅಪಾರ ಸಂಪತ್ತು ಕ್ರೋಡೀಕೃತವಾಗಿತ್ತು. ಇವೆಲ್ಲವನ್ನೂ ತನ್ನ ಸಿಪಾಯಿಗಳಿಗೆ ಹಂಚಿಸಿದನು. ಹಿಜರಿ-೯೪೩ರಲ್ಲಿ ಹುಮಾಯೂನನು ಮಹಮ್ಮದಾಬಾದಿನಲ್ಲಿದ್ದರೂ ಪ್ರಜೆಗಳು ಇನ್ನೂ ಸುಲ್ತಾನ್ ಬಹಾದೂರನನ್ನೇ ತಮ್ಮ ಬಾದಶಹನೆಂದು ಕರೆಯುತ್ತಿದ್ದರು. ಈ ಕಾರಣದಿಂದಾಗಿ ಬಹಳ ಜನರು, ಶಾಸಕರು ಬಹಾದೂರನಿಗೆ ಪತ್ರಗಳನ್ನು ಬರೆದು ಯಾರನ್ನಾದರೂ ಕಪ್ಪಕಾಣಿಕೆಗಳನ್ನು ವಸೂಲ ಮಾಡಲು ಕಳುಹಿಸಿದರೆ ಸರ್ಕಾರಿ ಖಜಾನೆಗೆ ರವಾನಿಸಲು ಸಿದ್ಧರಿರುವೆವೆಂದು ತಿಳಿಸುತ್ತಿದ್ದರು.

ಕಂದಾಯದ ತಾಲ್ಲೂಕುಗಳ ನಿರ್ಮಾಣ :

ಸುಲ್ತಾನ್ ಬಹದೂರನು ತನ್ನ ಒಬ್ಬ ಆಪ್ತ ಗುಲಾಮನಾದ ಅಮಾದುಲ್ ಮುಲ್ಕ ಎಂಬುವನನ್ನು ಕೆಲವು ತಾಲೂಕುಗಳನ್ನು ನಿರ್ಮಿಸಿ ಕಂದಾಯವನ್ನು ವಸೂಲ ಮಾಡಲು ನೇಮಿಸಿದನು. ಆತನು ಪ್ರಾಮಾಣಿಕತೆಗೆ ಹೆಸರಾಗಿದ್ದನು. ಆತನೊಂದಿಗೆ ಒಂದು ಒಳ್ಳೆಯ ಸೈನ್ಯವನ್ನು ಕೊಟ್ಟು ಕಂದಾಯವನ್ನು ವಸೂಲ ಮಾಡಲು ಕಳುಹಿಸಿದನು. ಅಮಾದುಲ್ ಮುಲ್ಕ್‌ನು ಬಹಳ ದೊಡ್ಡ ಸೈನ್ಯವನ್ನು ಸಂಗ್ರಹಿಸಿದನು. ನಾಲ್ಕು ಸಾವಿರ ಸಿಪಾಯಿಗಳೊಂದಿಗೆ ತನ್ನ ಅನೇಕ ವಿದ್ವಾಂಸರನ್ನು ರಾಜ್ಯದ ಬೇರೆ ಬೇರೆ ಕಡೆಗೆ ಕಳುಹಿಸಿ ಕಂದಾಯವನ್ನು ವಸೂಲ ಮಾಡಲು ಪ್ರಾರಂಭಿಸಿದನು.

ಮಿರ್ಜಾ ಅಸ್ಕರಿ ಮತ್ತು ಅಮಾದುಲ್‌ಮುಲ್ಕರಲ್ಲಿ ಯುದ್ಧ :

ಹುಮಾಯೂನನಿಗೆ ಕೆಲವು ಅಮೀರರಿಂದ ಸುದ್ದಿ ತಿಳಿದ ತಕ್ಷಣ ಆತನು ತನ್ನ ವಶದಲ್ಲಿದ್ದ ಖಜಾನೆಗಳ ರಕ್ಷಣೆಗೆ ತನ್ನ ಆಪ್ತನಾದ ನೇರೆಬೇಗ್‌ಖಾನ್‌ನಿಗೆ ನೇಮಿಸಿದನು. ತಾನು ಸ್ವತಃ ಮಹಮ್ಮದಾಬಾದಿನಿಂದ ಅಹಮದಾಬಾದಿಗೆ ತೆರಳಿದನು. ತನಗಿಂತ ಒಂದು ಪಯಣದಷ್ಟು ಮುಂಚೆಯೇ ಮೀರ್ಜಾ ಅಸ್ಕರಿ, ಯಾದ್ಗಾರ್ ನಾಸಿರ್‌ಹೇರಾಜ್, ನಬ್ಬುಬೇಗ್‌ರವರನ್ನು ಕಳುಹಿಸಿದ್ದನು. ಅಸ್ಕರಿಮಿರ್ಜಾ ಮತ್ತು ಅಮಾದುಲ್‌ಮುಲ್ಕ ಮುಹಮ್ಮದಾಬಾದಿನಲ್ಲಿ ಪರಸ್ಪರ ಎದುರಾದರು. ಮುಹಮ್ಮದಾಬಾದಿಗೂ ಅಹಮ್ಮದಾಬಾದಿಗೂ ಹನ್ನೆರಡು ಮೈಲಿ ದೂರದಲ್ಲಿದೆ. ಅವರಿಬ್ಬರಲ್ಲೂ ಘೋರ ಯುದ್ಧವೇ ಆಯಿತು. ಅಮಾದುಲ್‌ಮುಲ್ಕ್‌ನು ತನ್ನ ಅಸಂಖ್ಯಾತ ಸೈನಿಕರೊಡನೆ ಯುದ್ಧದಲ್ಲಿ ಮರಣ ಹೊಂದಿದನು.

ಆಡಳಿತದ ಜವಾಬ್ದಾರಿಗಳ ಹಂಚಿಕೆ :

ಈ ಘಟನೆಯ ನಂತರ ಹುಮಾಯೂನನು ಅಹಮದಾಬಾದಿಗೆ ಬಂದನು.

ಇಲ್ಲಿನ ಆಡಳಿತವನ್ನು ಮಿರ್ಜಾ ಅಸ್ಕರಿಯ ವಶಕ್ಕೆ ಬಿಟ್ಟನು. ಪಟನ್ ಗುಜರಾತಿನ ಶಾಸಕನನ್ನಾಗಿ ಯಾದ್‌ಗಾರ್ ನಾಸಿರ್‌ಮೀರ್ಜಾನನ್ನು ನೇಮಿಸಿದನು. ಸಿರೂಚ್‌ನ ಶಾಸಕನಾಗಿ ಖಾಸಿಂಹುಸೇನ್ ಮಿರ್ಜಾನು ನೇಮಕವಾದನು. ಜನಾನೇರ್ ಮಹಮ್ಮದಾಬಾದಿನ ಶಾಸಕನಾಗಿ ನೇರ್‌ವೇ ಬೇಗ್‌ಖಾನನನ್ನು ನೇಮಿಸಿದನು. ಅಲ್ಲಿಂದ ಹುಮಾಯುನನು ಬುರ್ಹಾನ ಪುರಕ್ಕೆ ಬಂದನು. ಆತನು ಅಲ್ಲಿ ತಂಗಲು ಇಷ್ಟ ಪಡಲಿಲ್ಲ. ಇಲ್ಲಿಂದ ಮಾಂಡುವಿನ ಶಾದಿಆಬಾದನತ್ತ ಹೋದನು.

ಗುಜರಾತಿ ಅಮೀರರ ಚಟುವಟಿಕೆಗಳು :

ಅದೇ ಸಂದರ್ಭದಲ್ಲಿ ಸುಲ್ತಾನ್ ಬಹಾದೂರನ ಒಬ್ಬ ಅಮೀರನಾದ ಖಾನ ಜಹಾಂಶೇರಾಜಿ ಎಂಬುವನು ಒಂದು ಸೈನ್ಯವನ್ನು ಕಟ್ಟಿಕೊಂಡು ಕಸಬಾ ನೌಸಾರಿ ಎಂಬುದನ್ನು ಗೆದ್ದುಕೊಂಡನು. ರೂಮಿಖಾನನು ಸೂರತ್ ಬಂದರಿನಲ್ಲಿದ್ದ ಆತನೂ ನೌಸಾರಿಗೆ ಬಂದು ಬಿಟ್ಟನು. ಇಬ್ಬರೂ ಅಮೀರರು ಒಟ್ಟಾಗಿ ಸೇರಿ ಭರೋಜ ಕೋಟೆಯ ಮೇಲೆ ಆಕ್ರಮಣವನ್ನು ಮಾಡಿದರು. ಭರೋಜನ ಶಾಸಕ ಖಾಸಿಂ ಹುಸೇನಮಿರ್ಜಾನು ಈ ಇಬ್ಬರ ಮೇಲೆ ಯುದ್ಧ ಮಾಡಲು ಇಚ್ಛಿಸದೆ ನೇರ್ವೆಬೇಗ್‌ಖಾನನ ಹತ್ತಿರ ಜನಾನೇರ್‌ನ ಮಹಮ್ಮದಾಬಾದಿಗೆ ಓಡಿಬಂದನು.

ಮೊಗಲರ ಶಾಸನದಲ್ಲಿ ವ್ಯತ್ಯಯಗಳು :

ಈ ಪರಿಸ್ಥಿತಿಗಳಿಂದಾಗಿ ಗುಜರಾತಿನಲ್ಲೆಲ್ಲಾ ಒಂದು ರೀತಿಯ ಗಾಬರಿ ಚೆಲ್ಲಾಪಿಲ್ಲಿಯಂತಹ ವಾತಾವರಣ ಸೃಷ್ಟಿಯಾಯಿತು. ಮೊಗಲರ ಕಾಲು ಕೀಳುವಂತಾಯಿತು. ಅವರ ಠಾಣೆಗಳು ನಿಲ್ಲದೆ ಹೋದುವು. ಅಸ್ಕರಿ ಮಿರ್ಜಾನ ಒಬ್ಬ ಅಮೀರನು ಓಡಿ ಬಂದು ಸುಲ್ತಾನ್ ಬಹಾದೂರನನ್ನು ಆಶ್ರಯಿಸಿದನು. ಆತನ ಹೆಸರು ಗಜನ್‌ಫರ್‌ಬೇಗ್ ಎಂದಿತ್ತು. ಆತನಿಗೆ ಅಹಮದಾಬಾದಿಗೆ ಬರಲು ಹೇಳಲಾಯಿತು.

ಮೊಗಲ ಅಮೀರರ ತೀರ್ಮಾನ :

ನೇರ್ವೆಬೇಗಖಾನನನ್ನು ಹೊರತುಪಡಿಸಿ ಉಳಿದ ಎಲ್ಲ ಮೊಗಲ ಅಮೀರರು ಅಹಮದಾಬಾದಿನಲ್ಲಿ ಸೇರಿದರು. ಸುಲ್ತಾನ್ ಬಹಾದೂರನು ತನ್ನ ಸೈನ್ಯವನ್ನು ಸಿದ್ಧಗೊಳಿಸಿಕೊಂಡು ಗುಜರಾತಿನತ್ತ ಹೊರಟನು. ಅಸ್ಕರಿಮಿರ್ಜಾ ಮತ್ತು ಮೊಗಲ ಅಮೀರರು ತಮ್ಮ-ತಮ್ಮಲ್ಲೇ ತೀರ್ಮಾನಿಸಿದ್ದೇನೆಂದರೆ-ಸುಲ್ತಾನ್ ಬಹಾದೂರನ ಎದುರು ನಿಲ್ಲುವುದು ಬಹಳ ಕಷ್ಟವಿದೆ. ಹುಮಾಯುನನು ಮಾಂಡುವಿನ ಶಾದಿಆಬಾದಿನಲ್ಲಿದ್ದಾನೆ. ಬಂಗಾಲದಲ್ಲಿ ಶೇರ್‌ಖಾನ್‌ಆಫ್‌ಗಾನನು ಆಪತ್ತುಗಳನ್ನು ಸೃಷ್ಟಿಸಿದ್ದಾನೆ. ಆದ್ದರಿಂದ

ಉಚಿತವೆಂದರೆ-ಜನಾನೇರ್ ಮಹಮ್ಮದಾಬಾದಿನಲ್ಲಿರುವ ಖಜಾನೆಯ ಸಂಪತ್ತನ್ನು ನಮ್ಮೊಂದಿಗೆ ತೆಗೆದುಕೊಂಡು ಆಗ್ರಾ ಕಡೆಗೆ ಹೊರಟು ಹೋಗುವುದೇ ಲೇಸೆಂದು ತಿಳಿದರು. ಆ ಜಾಗದಲ್ಲಿ ನಾವು ಇನ್ನೂ ಕೆಲವು ಪ್ರದೇಶಗಳನ್ನು ಗೆದ್ದು, ಅಸ್ಕರಿಮಿರ್ಜಾನ ಹೆಸರಿನಲ್ಲಿ ಆಳ್ವಿಕೆಯನ್ನು ಪ್ರಾರಂಭಿಸಬಹುದು. ಅಲ್ಲಿ ಮಾಂಡುಬೇಗನನ್ನು ಮುಖ್ಯಮಂತ್ರಿಯನ್ನಾಗಿ ಮಾಡೋಣ ಎಂದು ಒಗ್ಗಟ್ಟಾಗಿ ತೀರ್ಮಾನಿಸಿಕೊಂಡರು.

ಮೀರ್ಜಾಅಸ್ಕರಿಯ ಪಕ್ಷದವರ ಅತಿಯಾದ ದುರ್ಬುದ್ಧಿ :

ಈ ವಿದ್ರೋಹಿ ಅಮೀರರು ಇನ್ನೂ ತೀರ್ಮಾನಿಸಿಕೊಂಡಿದ್ದೇನೆಂದರೆ-ಬಾಕಿ ಮೊಗಲ್ ಅಮೀರರು ಅವರಿಗೆಲ್ಲಿ ಇಷ್ಟವಾಗುತ್ತದೋ ಆ ಪ್ರದೇಶವನ್ನು ಅವರೇ ಆರಿಸಿಕೊಂಡು ಅದನ್ನು ತಮ್ಮ ಜಾಗೀರಿ ಎಂದು ಘೋಷಿಸಿಕೊಂಡು ಶಾಸನವನ್ನು ಮಾಡಲಿ, ಪ್ರಸ್ತುತ ಗುಜರಾತಿನ ಪ್ರದೇಶವನ್ನು ಬಹಳ ಕಷ್ಟಪಟ್ಟು ಗೆದ್ದಿರುವುದರಿಂದ ಅದನ್ನು ಉಳಿಸಿಕೊಳ್ಳಬೇಕೆಂದು ತೀರ್ಮಾನಿಸಿದರು. ಮಿರ್ಜಾ ಅಸ್ಕರಿಯವನ ಪಕ್ಷದಲ್ಲಿರುವವರು ಸಂಪೂರ್ಣ ನಾಶ ಮಾಡಿ ಮಹಮ್ಮದಾಬಾದ ಕಡೆ ಬಂದಿರುತ್ತಾರೆ.

ಮೊಗಲ ಅಮೀರರ ಪ್ರಯಾಣ :

ನೇರ್ವೆಬೇಗ್‌ಖಾನನಿಗೆ ವಿದ್ರೋಹಿ ಅಮೀರರ ತೀರ್ಮಾನಗಳು ಗೊತ್ತಾದುವು. ಆತನು ತನ್ನ ಕೋಟೆಯನ್ನು ಭದ್ರಗೊಳಿಸಲಾರಂಭಿಸಿದನು. ಮೊಗಲ ವಿದ್ರೋಹಿ ಅಮೀರರು ಬಹಳ ಹಿಂಸಾತ್ಮಕ ವರ್ತನೆಗಳೊಂದಿಗೆ ಆಗ್ರಾ ತಲುಪಿದರು. ಗುಜರಾತ ಈಗ ಶತೃಗಳ ಹಿಂಸೆಯಿಂದ ಖಾಲಿಯಾಗಿದೆ ಎಂದು ತಿಳಿದ ಸುಲ್ತಾನ್ ಬಹಾದೂರಖಾನನು ಈಗ ನೇರ್ವೆಬೇಗ್‌ಖಾನನನ್ನು ಸೋಲಿಸಿ ಓಡಿಸಬಹುದೆಂದು ತೀರ್ಮಾನಿಸಿ ಜನಾನೇರ್ ಮಹಮ್ಮದಾಬಾದಿನತ್ತ ಪ್ರಯಾಣಿಸಿದನು.

ಸುಲ್ತಾನ್ ಬಹಾದೂರನು ಜನಾನೇರ್ ಮಹಮ್ಮದಾಬಾದಿನಲ್ಲಿ :

ನೇರ್ವೆಬೇಗ್‌ನಿಗೆ ಸುಲ್ತಾನ್ ಬಹಾದೂರಖಾನನ ಬರುವಿಕೆಯ ಸಮಾಚಾರವು ತಿಳಿದ ತಕ್ಷಣ ಖಜಾನೆಯ ಸಂಪತ್ತನ್ನು ಎಷ್ಟು ಹೊರಲು ಸಾಧ್ಯವೋ ಅಷ್ಟನ್ನು ತೆಗೆದುಕೊಂಡು ಆಗ್ರಾದತ್ತ ಓಡಿದನು. ಸುಲ್ತಾನ್‌ನು ಕೆಲವು ದಿನಗಳ ತನಕ ಅಲ್ಲಿಯೇ ಉಳಿದು ವ್ಯವಸ್ಥೆಗಳನ್ನು ಸರಿಪಡಿಸಿದನು.

ಫಿರಂಗಿಯವರಿಂದ ಅಪಾಯ :

ಗುಜರಾತಿನಲ್ಲಿ ನಡೆಸಿದ ಹುಮಾಯುನನ ಗಲಭೆಗಳ ಕಾಲದಲ್ಲಿ ಸುಲ್ತಾನ್ ಬಹಾದೂರನು ಬಂದರ್‌ಕೋಹ್, ಚಿಯೊಲ್ ಬಂದರು, ಬೇಗ್ ಮತ್ತು ಬಂದಾ ಫಿರಂಗಿಯುವರಿಂದ ಸಹಾಯುವನ್ನು ಪಡೆದಿದ್ದನು. ಈಗ ಸುಲ್ತಾನ್‌ನಿಗೆ

ಅರ್ಥವಾದದ್ದೇನೆಂದರೆ – ಮೊಗಲರಿಂದ ಖಾಲಿಯಾಗಿರುವ ಗುಜರಾತ ಪ್ರದೇಶವನ್ನು ಈ ಫಿರಂಗಿಯವರು ವಶಪಡಿಸಿಕೊಳ್ಳಬಹುದು. ಈ ಹೆದರಿಕೆಯಿಂದ ಸುಲ್ತಾನ್ ಬಹಾದೂರನು ತಕ್ಷಣ ಸೂರತ್ ಮತ್ತು ಜುನಾಗಢ ಪ್ರದೇಶಗಳತ್ತ ಹೋದನು. ಏಕೆಂದರೆ ಫಿರಂಗಿಯವರು ಅತ್ತ ಏನಾದರೂ ಬಂದರೆ ಅವರನ್ನು ಓಡಿಸಬಹುದು ಎಂದು ಕೆಲವು ದಿನಗಳ ತನಕ ಸುಲ್ತಾನ್ ಬಹಾದೂರನು ಆ ಪ್ರದೇಶಗಳಲ್ಲಿ ಪ್ರವಾಸ ಮತ್ತು ಭೇಟಿಯ ನೆಪದಲ್ಲಿ ಓಡಾಡುತ್ತಿದ್ದನು. ಒಂದು ದಿನ ಐದಾರು ಸಾವಿರ ಫಿರಂಗಿಗಳು ತಮ್ಮ ದೋಣಿಗಳ ಸಹಾಯದಿಂದ ದೇವ್‌ಬಂದರಿಗೆ ಬಂದಿಳಿದರು.

ಫಿರಂಗಿಯವರ ದುರ್ನೀತಿ :

ಫಿರಂಗಿಗಳಿಗೆ ಹುಮಾಯುನನ ಮರಳಿ ಬರುವಿಕೆ ಮತ್ತು ಸುಲ್ತಾನ್ ಬಹಾದೂರನ ಇಚ್ಛೆಗಳ ಮರ್ಮವನ್ನು ತಿಳಿಯಲು ತಡವಾಗಲಿಲ್ಲ. ಅವರು ತಮ್ಮಲ್ಲಿ ತೀರ್ಮಾನಿಸಿಕೊಂಡಿದ್ದೇನೆಂದರೆ–ಹೇಗಾದರೂ ಮಾಡಿ ದೇವ್ ಬಂದರವನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಬೇಕು ಎಂದು. ಫಿರಂಗಿಯವರ ಸರದಾರನು ಒಂದು ಕಪಟ ನೀತಿಯನ್ನು ಅನುಸರಿಸಿ ತನ್ನನ್ನು ಕಾಯಿಲೆಯಿಂದ ನರಳುತ್ತಿರುವೆನೆಂದು ಪ್ರಸಾರ ಮಾಡಿಸಿದನು. ಸುಲ್ತಾನ್ ಬಹಾದೂರನು ತನ್ನ ಒಬ್ಬ ದೂತನನ್ನು ಸರದಾರನ ಹತ್ತಿರ ಕಳುಹಿಸಿ, ಆತನನ್ನು ಬರಲು ಆಜ್ಞೆಮಾಡಿದ್ದನು. ಆದರೆ ಸರದಾರನು ತನ್ನ ಅನಾರೋಗ್ಯದ ಕಾರಣ ಬಾದಶಹರ ಹತ್ತಿರ ಬರಲು ಸಾಧ್ಯವಾಗಲಿಲ್ಲವೆಂದು ಹೇಳಿ ಕಳುಹಿಸಿದನು.

ಸುಲ್ತಾನ್ ಬಹಾದೂರನ ಕೊಲೆ :

ಸುಲ್ತಾನ್ ಬಹದೂರನು ಯೋಚಿಸಿದ್ದೇನೆಂದರೆ–ಫಿರಂಗಿಯವರು ನನ್ನನ್ನು ಬಹಳವಾಗಿ ಗೌರವಿಸುತ್ತಿರುವರು. ಅಂದಮೇಲೆ ನಾನೂ ಸಹ ಅವರನ್ನು ಗೌರವಿಸಬೇಕು ಎಂದು ಅಂದುಕೊಂಡು ಫಿರಂಗಿ ಸರದಾರನಿಗೆ ಸ್ವಲ್ಪ ಧೈರ್ಯವನ್ನು ಹೇಳಲು ತನ್ನ ದೋಣಿಯಲ್ಲಿ ಕುಳಿತು ಫಿರಂಗಿಯವರ ದೋಣಿಗಳಿದ್ದ ಕಡೆಗೆ ಹೋದನು. ಬಾದಶಹನು ಫಿರಂಗಿಯವರ ಒಂದು ದೊಡ್ಡ ದೋಣಿಯ ಒಳಗೆ ಪ್ರವೇಶಿಸಿದನು. ಅಲ್ಲಿಗೆ ಹೋದ ಮೇಲೆ ಆತನಿಗೆ ಅನುಮಾನ ಉಂಟಾಯಿತು. ಅವರು ಅವನನ್ನು ಏನಾದರೂ ಮಾಡಬಹುದೆಂದು ತಿಳಿಯಿತು. ಹೀಗೆ ಯೋಚಿಸಿ ತಕ್ಷಣ ಅವರ ದೋಣಿಯಿಂದ ಹೊರಬರಲು ಪ್ರಯತ್ನಿಸಿದ. ತನ್ನ ದೋಣಿಗೆ ಕಾಲಿಡಲು ಪ್ರಯತ್ನಿಸಿದಾಗ ಫಿರಂಗಿಯವರು ಮಧ್ಯದಲ್ಲಿದ್ದ ದೋಣಿಯನ್ನು ತೆಗೆದುಬಿಟ್ಟರು. ಇದರಿಂದ ಬಾದಶಹನು ನೀರಿನಲ್ಲಿ ಬಿದ್ದು ಬಿಟ್ಟನು. ಮುಳುಗಿದರೂ ಬೇಗ ಮೇಲೆದ್ದನು. ಮೇಲಿದ್ದ ಒಬ್ಬ ಫಿರಂಗಿಯು ಬಾದಶಹನ ತಲೆಗೆ ಜೋರಾಗಿ ಬಡಿದನು. ಮುಳುಗಿದ ಬಾದಶಹನು ಮತ್ತೆ ಮೇಲೇಳಲೇ ಇಲ್ಲ.

ದೇವ್ ಬಂದರಿನ ಮೇಲೆ ಫಿರಂಗಿಯರ ಆಧಿಪತ್ಯ :

ಗುಜರಾತಿ ಸೈನಿಕರು ಈ ಸ್ಥಿತಿಯನ್ನು ತಿಳಿದ ಕೂಡಲೆ ಅವರೆಲ್ಲರೂ ಅಹಮದಾಬಾದಿಗೆ ವಾಪಸ್ ಬಂದು ಬಿಟ್ಟರು. ಹಿಜರಿ–೯೪೩ರಲ್ಲಿ ರಂಜಾನ್ ತಿಂಗಳಲ್ಲಿ ದೇವ್ ಬಂದರನ್ನು ಫಿರಂಗಿಗಳು ತಮ್ಮ ವಶಕ್ಕೆ ಪುನಃ ಪಡೆದುಕೊಂಡರು.

ಸುಲ್ತಾನ್ ಬಹಾದೂರನು ೧೫ ವರ್ಷ ಮೂರು ತಿಂಗಳ ಕಾಲ ತನ್ನ ರಾಜ್ಯವನ್ನು ದಕ್ಷತೆಯಿಂದ ಆಳಿದನು. "ತಾರೀಖೆ ಬಹಾದುರಿ" ಎಂಬ ಪುಸ್ತಕದಲ್ಲಿ ಈತನ ಸಂಪೂರ್ಣ ವಿವರ ಇದೆ. ಆದರೆ ಈ ಪುಸ್ತಕದಲ್ಲಿನ ಕೆಲವು ವಿಚಾರಗಳು ಬಹಳ ತಪ್ಪು ತಪ್ಪಾಗಿ ಬರೆಯಲಾಗಿದೆ. ಬಹಾದೂರನ ಚಾರಿತ್ರ್ಯಕ್ಕೆ ಧಕ್ಕೆಯಾಗುವಂತಹ ವಿಚಾರಗಳಿಗೆ ವಿಷಾದವಿದೆ.

■

*

೧೨. ಮೀರಾನ್ ಮಹಮ್ಮದ್‌ಶಾಹ್ ಫಾರೂಖಿ

ಮಹಮ್ಮದ ಜಮಾನ್ ಮಿರ್ಜಾ ಅಹಮ್ಮದಾಬಾದಿನಲ್ಲಿ :

ಸುಲ್ತಾನ್ ಬಹಾದೂರನ ಮರಣದ ನಂತರ ಗುಜರಾತಿನ ಅಮೀರರು, ಸುಲ್ತಾನ್ ಬಹಾದೂರನ ತಾಯಿ ಮಖ್ದೂಮಾ ಜಹಾಂರವರೆಲ್ಲರೂ ದೇವ್ ಬಂದರಿನಿಂದ ವಾಪಸ್ ಬಂದರು. ದಾರಿಯಲ್ಲಿ ಸುದ್ದಿ ಬಂದದ್ದೇನೆಂದರೆ- ಮಹಮ್ಮದ ಜಮಾನ ಮಿರ್ಜಾ ಎಂಬುವನು ಅಹಮದಾಬಾದಿಗೆ ಬಂದಿದ್ದಾನೆಂದು. ಸುಲ್ತಾನ್ ಬಹಾದೂರನು ಮಹಮ್ಮದ ಜಮಾನ್ ಮಿರ್ಜಾನ ಅಧೀನದಲ್ಲಿ ಒಂದು ವಿಶಾಲ ಸೈನ್ಯವನ್ನು ಕೊಟ್ಟು, ಮೊಗಲರನ್ನು ಎದುರಿಸಲು ದಿಲ್ಲಿ ಲಾಹೋರಿನತ್ತ ಕಳುಹಿಸಿದ್ದನೆಂಬುದು ಇಲ್ಲಿ ನೆನಪಿಸಿಕೊಳ್ಳಬೇಕಾಗುತ್ತದೆ.

ಸುಲ್ತಾನ್ ಬಹಾದೂರನ ಶೋಕಾಚರಣೆ :

ಸುಲ್ತಾನ್ ಬಹಾದೂರನ ತಾಯಿಗೆ ಈ ಸುದ್ದಿಯು ತಿಳಿಯಿತು. ಅದೇನೆಂದರೆ- ಮಹಮ್ಮದ್‌ಜಮಾನ ಮಿರ್ಜಾನು ಬಂದ ಉದ್ದೇಶವೇನೆಂದರೆ- ಸುಲ್ತಾನ್ ಬಹಾದೂರನ ಮರಣ ಆತನು ಲಾಹೋರದಲ್ಲಿದ್ದಾಗ ಸುದ್ದಿಯು ತಲುಪಿತು. ಆ ತಕ್ಷಣ ಅಳುತ್ತಾ, ತಲೆ ಜಜ್ಜಿಕೊಳ್ಳುತ್ತಾ ಅಲ್ಲಿಂದ ಓಡಿ ಬಂದನು. ಶೋಕಸೂಚಕ ಉಡುಪನ್ನು ಧರಿಸಿ ಅಹಮದಾಬಾದಿಗೆ ಬಂದನು. ಕೆಲವು ದಿನಗಳ ನಂತರ ಮಹಮ್ಮದ ಜಮಾನನು ತಾಯಿ ಮುಖ್ದೂಮಾಜಹಾಂರ ಸೇವೆಯಲ್ಲಿ ಹಾಜರಾದನು. ಸಾಮ್ರಾಜ್ಞಿಯವರು ಆತನ ಆತಿಥ್ಯಾದರಗಳನ್ನು ಯಥಾ ಸಂಭವ ಮಾಡಿದರು. ಶೋಕ ಸೂಚಕ ಉಡುಪನ್ನು ಬದಲಾಯಿಸಿ, ಅವನನ್ನು ಸಮಾಧಾನ ಪಡಿಸಲು ಪ್ರಯತ್ನಿಸಿದರು.

ಮಹಮ್ಮದ ಜಮಾನ್ ಮಿರ್ಜಾನ ದುರ್ವರ್ತನೆ :

ಮಹಮ್ಮದ ಜಮಾನನು ತಾಯಿ ಮುಖ್ದೂಮಾರವರು ಎಷ್ಟು ಪ್ರೇಮಭಾವದಿಂದ

ವ್ಯವಹರಿಸಿದರೂ ಈತನು ಅವರ ಎಲ್ಲ ಮಾತಿಗೂ ಅಸಹ್ಯ ಉತ್ತರಗಳನ್ನೇ ನೀಡುತ್ತಿದ್ದನು. ಆತನು ತನ್ನ ಸೇವಕರ ಒಂದು ಗುಂಪಿನೊಂದಿಗೆ ಗುಜರಾತಿನ ಖಜಾನೆಗಳ ಮೇಲೆ ಆಕ್ರಮಿಸಿ ಸುಮಾರು ಏಳುನೂರು ಚಿನ್ನದಿಂದ ತುಂಬಿದ ಪೆಟ್ಟಿಗೆಗಳನ್ನು ತನ್ನ ವಶಕ್ಕೆ ಪಡೆದುಕೊಂಡನು. ತಕ್ಷಣ ಅಲ್ಲಿಂದ ಪರಾರಿಯೂ ಆದನು. ಇದಾದ ನಂತರ ಮಹಮ್ಮದ ಜಮಾನನು ೧೨ ಸಾವಿರ ಮೊಗಲರ ಮತ್ತು ಹಿಂದೂಸ್ತಾನಿಯರ ಸಿಪಾಯಿಗಳ ಒಂದು ವಿಶಾಲ ಸೈನ್ಯವನ್ನು ಸಂಗ್ರಹಿಸಿಕೊಂಡು ಗುಜರಾತಿನ ಪ್ರಮುಖ ಬಾದಶಹನಾಗಬೇಕೆಂಬ ಕನಸನ್ನು ಕಾಣತೊಡಗಿದನು.

ಮೀರಾನ್ ಮಹಮ್ಮದಶಾಹನ ಹೆಸರಿನ ಶಾಹೀ ಪ್ರಶಂಸೆ ಮತ್ತು ನಾಣ್ಯಗಳ ಮುದ್ರೆ:

ಗುಜರಾತಿ ಅಮೀರರು ಈ ಹೊಸ ವಿಪ್ಲವದಿಂದಾಗಿ ಬಹಳ ಚಿಂತಿತರಾದರು. ಈಗ ಬಾದಶಹನನ್ನಾಗಿ ಯಾರನ್ನು ನೇಮಿಸಬೇಕೆಂಬ ಚಿಂತೆಯಲ್ಲಿ ಚರ್ಚಿಸತೊಡಗಿದರು. ಮೀರಾನ್ ಮಹಮ್ಮದಶಾಹ್ ಫಾರೂಖಿಯು ಸುಲ್ತಾನ್ ಬಹಾದೂರನ ಸೋದರಳಿಯ (ತಂಗಿಯ ಮಗ)ನಾಗಿದ್ದನು. ಮೊಟ್ಟಮೊದಲ ಹಕ್ಕುದಾರ ಈತನೇ ಎಂಬುದು ಅಮೀರರ ಅಭಿಪ್ರಾಯವಾಗಿತ್ತು.

ಸುಲ್ತಾನ್ ಬಹಾದೂರನ ತಾಯಿ ಮುಖ್ದೂಮಜಹಾನಳು ಮೀರ್‌ಮಹಮ್ಮದಶಾಹನನ್ನು ಬಾದಶಹನನ್ನಾಗಿ ಮಾಡಲು ಪ್ರಯತ್ನಿಸಿದಳು. ಎಲ್ಲ ಅಮೀರರು ಈ ವಿಚಾರವನ್ನು ಒಕ್ಕೊರಲಿನಿಂದ ಅನುಮೋದಿಸಿದರು. ಇದಾದ ನಂತರ ಮೀರಾನ್ ಮಹಮ್ಮದಶಾಹನ ಪ್ರಶಂತಾತ್ಮಕ, ಬಿರುದಾಂಕಿತ (ಖುತ್ಬಾ) ಭಾಷಣವನ್ನು ಓದಿದರು. ಹಾಗೂ ಆತನ ಹೆಸರಿನಲ್ಲಿ ಮುದ್ರೆ ಮತ್ತು ನಾಣ್ಯಗಳನ್ನು ಹೊರಡಿಸಿದರು.

ಗುಜರಾತಿ ಅಮೀರರೆಲ್ಲರೂ ಒಬ್ಬ ವೇಗವಾಗಿ ಪ್ರಯಾಣಿಸುವ ದೂತನನ್ನು ಮೀರಾನ್ ಮಹಮ್ಮದಶಾಹನನ್ನು ಕರೆತರಲು ಅಟ್ಟಿದರು. ನಂತರ ಮಹಮ್ಮದ ಜಮಾನ್ ಮಿರ್ಜಾನನ್ನು ಅಡಗಿಸಲು ಅಮಾದುಲ್‌ಮುಲ್ಕ್‌ನ ಅಧೀನದಲ್ಲಿ ಅಸಂಖ್ಯಾತ ಸೈನಿಕರನ್ನು ಕೊಟ್ಟು ಆತನನ್ನು ನೇಮಿಸಿದರು. ಮಹಮ್ಮದ ಜಮಾನ ಮಿರ್ಜಾನು ಮೂಲತಃ ವ್ಯಾಘ್ರನಲ್ಲದಿದ್ದರೂ ವ್ಯಾಘ್ರಮುಖನಾಗಿದ್ದನು. ಯುದ್ಧವೆಂದರೆ ಆತನಿಗೆ ಇಷ್ಟವಾಗುತ್ತಿರಲಿಲ್ಲ. ಆದರೂ ಅಮಾದುಲ್‌ಮುಲ್ಕನೊಂದಿಗೆ ಅಲ್ಲಲ್ಲಿ ಸ್ವಲ್ಪ ಯುದ್ಧ ಮಾಡಿದರೂ ಕೊನೆಗೆ ಯುದ್ಧ ಮೈದಾನದಿಂದ ಸಿಂಧ್ ಪ್ರಾಂತ್ಯದತ್ತ ಓಡಿಹೋದನು. ಅಲ್ಲಿಂದ ಆತನು ಯಾರೊಂದಿಗೂ ಎಂದೂ ಯುದ್ಧವಾಡಲಿಲ್ಲ.

ಮಹಮ್ಮದಶಾಹ ಫಾರೂಖಿಯ ಮರಣ :

ಮಿರ್ಜಾ ಮಹಮ್ಮದಶಾಹ ಫಾರೂಖಿಯೂ ಆ ದಿನಗಳಲ್ಲಿ ಮಾಳವ

ದೇಶದಲ್ಲಿದ್ದನು. ಆತನನ್ನು ಸುಲ್ತಾನ್ ಬಹಾದೂರನು ಮೊಗಲರ ಸೈನ್ಯವನ್ನು ಓಡಿಸಲು ಅವರನ್ನು ಹಿಂಬಾಲಿಸಲು ಕಳುಹಿಸಿದ್ದನು. ಗುಜರಾತಿನಲ್ಲಿ ಫಾರೂಖಿಯ ಹೆಸರಿನ (ಖುತ್ಬಾ) ಬಿರುದಾಂಕಿತ ಭಾಷಣ ಹಾಗೂ ನಾಣ್ಯ ಚಲಾವಣೆಯಾದ ಒಂದುವರೆ ತಿಂಗಳ ನಂತರ ಆತನು ಶಾರೀರಿಕ ದೌರ್ಬಲ್ಯದ ಕಾರಣದಿಂದಾಗಿ ಮರಣ ಹೊಂದಿದನು. ಈ ನತದೃಷ್ಟನಿಗೆ ಗುಜರಾತಿನ ಬಾದಶಹನಾಗಿ ಆಳುವ ಅವಕಾಶವೇ ದೊರೆಯಲಿಲ್ಲ.

■

*

೧೩. ಸುಲ್ತಾನ್ ಮಹಮಮೂದ್‌ಶಾಹ ಸಾನಿಬಿನ್ ಲತೀಪ್ ಬಿನ್ ಸುಲ್ತಾನ್ ಮುಜಾಫ್ಫರ್ ಗುಜರಾತಿ

ಅದೃಷ್ಟದ ಭಾಗ್ಯ :

ಮೀರಾನ್ ಮುಹಮ್ಮದ್‌ಶಾಹ ಘಾರೂಖಿಯು ಮರಣಾನಂತರ ಮಹಮೂದ್‌ಖಾನನನ್ನು ಬಿಟ್ಟರೆ ಮತ್ತಾರೂ ಸಿಂಹಾಸನಕ್ಕೇರುವಂತಹ ಅಧಿಕೃತ ವ್ಯಕ್ತಿ ಇರಲಿಲ್ಲ. ಮಹಮೂದ್‌ನು ಷಹಜಾದ ಲತೀಫನ ಮಗನಾಗಿದ್ದು, ಸುಲ್ತಾನ್ ಮುಜಾಫ್ಫರನ ಮೊಮ್ಮಗನಾಗಿದ್ದನು. ಸುಲ್ತಾನ್ ಬಹದೂರನ ಶಾಸನ ಕಾಲದಲ್ಲಿ ಮಹಮೂದ್‌ಖಾನನು ಶಾಸಕನಾಗಲು ಪ್ರಯತ್ನಪಟ್ಟಿದ್ದನು. ಆದ್ದರಿಂದ ಆತನನ್ನು ಬುರ್ಹಾನಪುರದಲ್ಲಿ ಮೀರಾನ ಮಹಮ್ಮದಶಾಹನ ಹತ್ತಿರ ಬಂಧನದಲ್ಲಿರಿಸಲಾಗಿತ್ತು. ಮೀರಾನ್ ಮಹಮ್ಮದ್‌ಶಾಹನ ಮರಣದ ನಂತರ ರಾಜ್ಯದ ಅಮೀರರು ಇಖ್ತಿಯಾರ್‌ಖಾನನನ್ನು ಕರೆಯಲು ಕಳುಹಿಸಿದರು.

ಪಟ್ಟಾಭಿಷೇಕ :

ಮೀರಾನ್ ಮಹಮ್ಮದಶಾಹನ ಸಹೋದರ ಮೀರಾನ ಮುಬಾರಕನು ಮಹಮೂದ್‌ಖಾನನನ್ನು ಕಳುಹಿಸಲು ಹಿಂದೇಟು ಹಾಕಿದನು. ಗುಜರಾತಿ ಅಮೀರರಿಗೆ ಆತನ ಅಭಿಪ್ರಾಯ ಗೊತ್ತಾಯಿತು. ಅಮೀರರು ಒಂದು ಸೈನ್ಯವನ್ನು ಸಂಗ್ರಹಿಸಿ ಬುರ್ಹಾನಪುರದ ಮೇಲೆ ಆಕ್ರಮಣವನ್ನು ಮಾಡಲು ಇಚ್ಛಿಸಿದ್ದರು. ಮೀರಾನ್ ಮುಬಾರಕನಿಗೆ ಈ ವಿಷಯ ಗೊತ್ತಾಗಿ ಆತನು ಹೆದರಿ ಮಹಮೂದ್‌ಖಾನನನ್ನು ಗುಜರಾತಿಗೆ ಕಳುಹಿಸಿದನು. ಮಹಮೂದ್‌ಖಾನನು ಗುಜರಾತನ್ನು ತಲುಪಿದಾಗ ಅಮೀರರೆಲ್ಲರೂ ಸೇರಿ ಹಿಜರಿ-೯೪೪ರಲ್ಲಿ ಆತನನ್ನು ಸಿಂಹಾಸನದ ಪಟ್ಟಕ್ಕೆ ಕುಳ್ಳಿರಿಸಿದರು. ಹಾಗೂ ಸುಲ್ತಾನ್ ಮಹಮೂದ್ ಎಂಬ ಬಿರುದಿನಿಂದ ಪ್ರಸಿದ್ಧ ಪಡಿಸಿದರು.

ಇಖ್ತಿಯಾರಖಾನನು ದೇಶದ ರಾಜಕೀಯ ಜವಾಬ್ದಾರಿಯನ್ನು ತನ್ನ ಕೈಯಲ್ಲಿ ಇಟ್ಟುಕೊಂಡನು.

ಅಮೀರರಲ್ಲಿ ಒಳ ಜಗಳಗಳು :

ಸುಲ್ತಾನ್ ಮಹಮೂದ್‌ನ ಪಟ್ಟಾಭಿಷೇಕದ ನಂತರದ ಕೆಲವು ತಿಂಗಳಲ್ಲಿ ಅಂದರೆ ಹಿಜರಿ ೯೪೫ರಲ್ಲಿ ಅಮೀರರೊಳಗೆ ಜಗಳಗಳು ಪ್ರಾರಂಭವಾದವು. ದರಿಯಾಖಾನ್ ಮತ್ತು ಅಮಾದುಲ್ ಮುಲ್ಕರಿಬ್ಬರೂ ಸೇರಿ ಇಖ್ತಿಯಾರಖಾನನನ್ನು ಕೊಲೆಗೈದರು. ಈ ಪರಿಣಾಮವಾಗಿ ದರಿಯಾಖಾನ ವಜೀರನು ಮತ್ತು ಅಮಾದುಲ್ ಮುಲ್ಕನು ಅಮೀರರ ಮುಖಂಡನನ್ನಾಗಿ ನೇಮಿಸಲ್ಪಟ್ಟರು. ಅದೇ ವರ್ಷದ ಕೊನೆಯಲ್ಲಿ ಆ ಇಬ್ಬರೂ ಅಮೀರರಲ್ಲೂ ಒಡಕುಂಟಾಯಿತು.

ಅಮಾದುಲ್‌ಮುಲ್ಕ ಮತ್ತು ದರಿಯಾಖಾನರಲ್ಲಿ ವಿರೋಧ :

ಬೇಟೆಯ ನೆಪದಲ್ಲಿ ದರಿಯಾಖಾನನು ಸುಲ್ತಾನ್ ಮಹಮೂದ್‌ನನ್ನು ತನ್ನ ಜೊತೆಯಲ್ಲಿ ಜನಾನೇರ್‌ನ ಮಹಮ್ಮದಾಬಾದಿನತ್ತ ರವಾನೆಯಾದರು. ಇದಕ್ಕೆ ಉತ್ತರವಾಗಿ ಅವಾದುಲ್‌ಮುಲ್ಕ ಸಹ ಸೈನ್ಯವನ್ನು ಸಂಗ್ರಹಿಸಿಕೊಂಡು ಮಹಮ್ಮದಾಬಾದಿನತ್ತ ಹೊರಟ. ಪ್ರಯಾಣದ ಎರಡು ಮೂರು ಪಯಣಗಳನ್ನು ಪಾರು ಮಾಡಿದ್ದಾಗ, ಗುಜರಾತಿ ಸೈನ್ಯವು ಅಮಾದುಲ್‌ಮುಲ್ಕನಿಂದ ಅಪಾರ ಹಣವನ್ನು ವಸೂಲ ಮಾಡಿದ್ದವರೆಲ್ಲರೂ ಮಾತಿಗೆ ತಪ್ಪಿ ಬಾದಶಹನತ್ತ ಸೇರಿ ಬಿಟ್ಟಿದ್ದರು. ಇದರಿಂದಾಗಿ ಅಮಾದುಲ್ ಮುಲ್ಕನು ಬಹಳ ಚಿಂತಾಕ್ರಾಂತನಾಗಿದ್ದನು. ಆತನು ಈ ಷರತ್ತಿನೊಂದಿಗೆ ಸಂಧಿಯನ್ನು ಮಾಡಿಕೊಂಡಿದ್ದೇನೆಂದರೆ– ಇಲ್ಲವೇ ನಾನು ನನ್ನ ಜಾಗೀರಿಯಾದ ಸರಮ್‌ಗಾಂವ ಮತ್ತು ಸುರತ್ತಿನತ್ತ ಹೋಗುವೆನು. ಅಥವಾ ಬಾದಶಹನು ಅಹಮದಾಬಾದಿಗೆ ಹೋಗಬೇಕು ಎಂದು.

ಯುದ್ಧ ಸಿದ್ಧತೆ :

ಹಿಜರಿ ೯೪೭ರಲ್ಲಿ ದರಿಯಾಖಾನನು ಅವಾದುಲ್ ಮುಲ್ಕನನ್ನು ನಾಶಗೊಳಿಸಿಬಿಡಬೇಕೆಂಬ ದೃಢನಿಶ್ಚಯವನ್ನು ಮಾಡಿಕೊಂಡನು. ಈ ಉದ್ದೇಶದಿಂದ ಬಾದಶಹನನ್ನು ಜೊತೆ ಕರೆದುಕೊಂಡು ಒಂದು ದೊಡ್ಡ ಸೈನ್ಯದೊಡನೆ ಸುರತ್ತಿನತ್ತ ರವಾನೆಯಾದನು. ಅಮಾದುಲ್‌ಮುಲ್ಕನು ಯುದ್ಧಕ್ಕೆ ಬಂದನು. ಇಬ್ಬರಲ್ಲೂ ಯುದ್ಧವಾಯಿತು. ಬಾದಶಹನ ಸೈನ್ಯದ ಕೈ ಮೇಲಾಯಿತು. ಅಮಾದುಲ್‌ಮುಲ್ಕನು ಯುದ್ಧ ಮೈದಾನದಿಂದ ಪರಾರಿಯಾಗಿ ಮೀರಾನ್ ಮುಬಾರಕನ ಅಸೀರ್ ಕೋಟೆಯಲ್ಲಿ ಆಶ್ರಯ ಪಡೆದನು. ಮೀರಾನ್ ಮುಬಾರಕನು ಅಮಾದುಲ್‌ಮುಲ್ಕನಿಗೆ ಸಹಾಯವನ್ನು ಮಾಡಲು ಒಪ್ಪಿ, ಶಾಹಿ ಸೈನ್ಯದೊಂದಿಗೆ ಯುದ್ಧಕ್ಕೆ ಸಿದ್ಧನಾದನು.

ಸುಲ್ತಾನ್ ಮಹಮೂದ್ ಮತ್ತು ಮೀರಾನ್ ಮುಬಾರಕನಲ್ಲಿ ಯುದ್ಧ :

ಮೀರಾನ್ ಮುಬಾರಕನು ಗುಜರಾತಿ ಸೈನ್ಯದೊಡನೆ ಯುದ್ಧವಾಡಿದನು. ಆದರೆ ಯುದ್ಧದಲ್ಲಿ ಸೋತು ವಾಪಸ್ ಅಸೀರ್ ಕೋಟೆಗೆ ವಾಪಸ್ಸಾದನು. ನಂತರ ಅಮಾದುಲ್‌ಮುಲ್ಕ ಮಾಳ್ವಾದ ಶಾಸಕ ಮಲ್ಲೂಖಾನ್ ಉರ್ಫ ಖಾದಿರ್‌ಖಾನ್‌ನ ಬಳಿಗೆ ಬಂದನು. ಸುಲ್ತಾನ್ ಮಹಮೂದನು ಖಾನ ದೇಶದಲ್ಲಿ ಬಂದು ಲೂಟಿ ವಿನಾಶಗಳನ್ನು ಪ್ರಾರಂಭಿಸಿದ. ಈ ಪರಿಸ್ಥಿತಿಯನ್ನು ನೋಡಿದ ಮೀರಾನ ಮುಬಾರಕನು ತನ್ನ ಅಧೀನದಲ್ಲಿದ್ದ ಬಾರ್‌ಸೂಖ್ ಜನರನ್ನು ಮಧ್ಯಸ್ಥಿಕೆಗೆ ಕಳುಹಿಸಿ ಸಂಧಿ ಮಾಡಿಕೊಂಡು ಸುಲ್ತಾನ್ ಮಹಮೂದ್‌ನ ಸೇವಕರಲ್ಲಿ ಸೇರಿಕೊಂಡನು.

ಸುಲ್ತಾನ್ ಮಹಮೂದ್ ಕೇವಲ ಪರರ ಕೈ ಗೊಂಬೆ :

ಅಮಾದುಲ್‌ಮುಲ್ಕನು ಹೋದ ನಂತರ ದರಿಯಾಖಾನನ ಆಡಳಿತದ ಸಂಪೂರ್ಣ ಜವಾಬ್ದಾರಿಯನ್ನು ತನ್ನ ವಶಕ್ಕೆ ತೆಗೆದುಕೊಂಡನು. ಬಾಕಿ ಎಲ್ಲಾ ಅಮೀರರನ್ನು ಶಾಸನದ ವಿಚಾರಗಳಿಂದ ದೂರ ಮಾಡಿದನು. ದಿನೇ ದಿನೆ ಪರಿಸ್ಥಿತಿ ಎಲ್ಲಿಗೆ ಮುಟ್ಟಿತ್ತೆಂದರೆ ಸುಲ್ತಾನ್ ಮಹಮೂದ್‌ನು ಅಸಹಾಯಕನಾಗಿ ದರಿಯಾಖಾನನ ಕೈಗೊಂಬೆಯಾಗಿಬಿಟ್ಟನು. ಎಲ್ಲ ರಾಜಕೀಯ ಶಕ್ತಿಯೂ ದರಿಯಾಖಾನನ ಕೈಯಲ್ಲಿತ್ತು. ನೈಜವಾಗಿ ಹೇಳಬೇಕೆಂದರೆ ದೇಶದ ಶಾಸಕ ಅವನೇ ಆಗಿದ್ದನು.

ಸುಲ್ತಾನ್ ಮಹಮೂದ್ ಮತ್ತು ಆಲಂಖಾನ ಲೋಧಿ ಒಪ್ಪಂದ :

ಒಂದು ರಾತ್ರಿ ಸುಲ್ತಾನ್ ಮಹಮೂದ್‌ನು ಜಾರ್‌ಜಿಯೋ ಎಂಬ ಪಾರಿವಾಳಗಳ ಸ್ಪರ್ಧೆಯಲ್ಲಿ ನಿಪುಣನಾಗಿದ್ದವನ ಜೊತೆಯಲ್ಲಿ ಕೋಟೆಯನ್ನು ಬಿಟ್ಟು ಹೊರಬಂದ. ಆತನ ಪೂರ್ಣ ಹೆಸರು ಆಲಂಖಾನ ಲೋಧಿ ಆಗಿತ್ತು. ಅವನು 'ದೋಲ್‌ಖಾ' ಮತ್ತು 'ದಂದೂಖ'ಗಳ ಜಾಗೀರದಾರನೂ ಆಗಿದ್ದನು. ಆತನೊಂದಿಗೆ ಭೇಟಿಯಾದನು. ಆಲಂಖಾನನು ಬಾದಶಹನನ್ನು ಬಹಳವಾಗಿ ಗೌರವಿಸಿದನು. ಲೋಧಿಯು ತನ್ನ ಸೈನ್ಯವನ್ನು ಕೂಡಿಸಿಕೊಂಡನು. ಸ್ವಲ್ಪ ಸಮಯದಲ್ಲೇ ನಾಲ್ಕು ಸಾವಿರ ಸೈನ್ಯವನ್ನು ಸಂಗ್ರಹಿಸಿಕೊಂಡನು.

ಮುಜಾಫ್ಫರಶಾಹ – ಒಬ್ಬ ಹೊಸ ಬಾದಶಾಹ :

ದರಿಯಾಖಾನನು, ಬಾದಶಹನು ತನ್ನ ಕೈಯಿಂದ ಜಾರುತ್ತಿದ್ದಾನೆ ಎಂದು ತಿಳಿದು ಆತನು ಮಂತ್ರಿ ಮುಖಂಡನನ್ನು ಅಮೀರನನ್ನು ಚರ್ಚೆಗೆ ಒಳಪಡಿಸಿದನು. ಚರ್ಚೆಯಲ್ಲಿ ಒಬ್ಬ ಹುಡುಗ ಆತನ ಹುಟ್ಟು, ವಂಶದ ಬಗ್ಗೆ ಆತನಿಗೇ ಸರಿಯಾಗಿ ಗೊತ್ತಿಲ್ಲ. ಆತನನ್ನು ಮುಜಫ್ಫರಶಾಹನೆಂದು ಕರೆದು ಸಿಂಹಾಸನಕ್ಕೆ ಕೂರಿಸಿದರು. ಎಲ್ಲ ಅಮೀರರು ಆ ಹೊಸ ಬಾದಶಹನಿಂದ ಜಾಗೀರಿಗಳನ್ನು ಪಡೆದುಕೊಂಡರು.

ತಮ್ಮ-ತಮ್ಮ ಇಚ್ಛೆಗೆ ಬಂದಂತೆ ಬಿರುದಾಂಕಿತ ಭಾಷಣ(ಖುತ್ಬಾ)ಗಳನ್ನು ಬರೆಯಿಸಿಕೊಂಡರು.

ದರಿಯಾಖಾನ ಮತ್ತು ಆಲಂಖಾನಲೋಧಿಯಲ್ಲಿ ಯುದ್ಧ :

ಆಲಂಖಾನ ಲೋಧಿಯು ಸುಲ್ತಾನ್ ಮಹಮೂದ್‌ನಿಗೆ ಒಂದು ವಿಶಾಲ ಸೈನ್ಯದೊಂದಿಗೆ ಅಲ್ಲಿಯೇ ಬಿಟ್ಟನು. ತಾನು ಸ್ವತಃ ತನ್ನ ಶತ್ರುವಿನೊಂದಿಗೆ ಯುದ್ಧವಾಡಲು ಮುಂದೆ ಹೋದನು. ದರಿಯಾಖಾನನು ತನ್ನ ಸೈನ್ಯವನ್ನು ತೆಗೆದುಕೊಂಡು ಬಂದನು. ಇಬ್ಬರಲ್ಲೂ ಯುದ್ಧವಾಯಿತು. ಆಲಂಖಾನ ಲೋಧಿ ಅಮೀರನು ಮೊದಲ ಆಕ್ರಮಣದಲ್ಲಿಯೇ ದರಿಯಾಖಾನನನ್ನು ಸೋಲಿಸಿದನು. ಅವನ ಸೈನ್ಯವನ್ನು ಚಲ್ಲಾಪಿಲ್ಲಿಗೊಳಿಸಿದನು. ಈ ಸಂದರ್ಭದಲ್ಲಿ ಲೋಧಿ ಅಮೀರನು ತನ್ನ ಸಾಹಸ, ಶೌರ್ಯಗಳನ್ನು ತುಂಬಾ ಚನ್ನಾಗಿ ಪ್ರದರ್ಶಿಸಿದನು. ಯುದ್ಧ ಮೈದಾನದಿಂದ ಯಾವುದೇ ಅಪಾಯವಿಲ್ಲದೆ ಗೆದ್ದು ಬಂದನು.

ಭರವಸೆ :

ಈ ಯುದ್ಧದ ನಂತರ ಆಲಂಖಾನನ ಜೊತೆಯಲ್ಲಿ ಕೇವಲ ಐದುನೂರು ಸವಾರರು ಬಾಕಿ ಉಳಿದಿದ್ದರು. ಅವನು ತನ್ನ ಆಶಯ ಬಗ್ಗೆ ಗಾಬರಿಯೇ ಆಯಿತು. ಆದರೂ ಆತನಿಗೆ ಹೊಳೆದದ್ದು, ಮೊದಲಿನ ಆಕ್ರಮಣದಲ್ಲಿ ಸೋತ ದರಿಯಾಖಾನನ ಸೈನ್ಯವು ಅಹಮದಾಬಾದಿನತ್ತ ಓಡಿತ್ತು. ಇದರಿಂದ ಪಟ್ಟಣದಲ್ಲೆಲ್ಲಾ ಇವರು ಸೋತು ಬಂದಿದ್ದಾರೆಂಬ ಸುದ್ದಿ ಹರಡಿರಬಹುದು. ಇದನ್ನು ಯೋಚಿಸಿದ ಆಲಂಖಾನ ಲೋಧಿಯು ತನ್ನ ಪಟ್ಟಣಕ್ಕೆ ಹಿಂತಿರುಗಿದನು.

ಆಲಂಖಾನ ನಗರದಲ್ಲಿ :

ಆಲಂಖಾನ ಲೋಧಿಯು ನಗರದಲ್ಲಿ ಪ್ರವೇಶಿಸಿದನು. ಆತನು ತನ್ನನ್ನು ಗೆದ್ದ ವೀರನೆಂದು ಪ್ರದರ್ಶಿಸಿದನು. ನೇರವಾಗಿ ಶಾಹಿ ಅರಮನೆಗೆ ದಾಖಲಾದನು. ಅಹಮದಾಬಾದಿನ ಅಮೀರರು ಸ್ವಲ್ಪ ಹೊತ್ತಿಗೆ ಮೊದಲು ದರಿಯಾಖಾನನ ಸೈನ್ಯದ ಪರಿಸ್ಥಿತಿಗಳಿಂದ ಪರಿಚಿತರಾಗಿದ್ದರು. ಅವರೆಲ್ಲರೂ ಸೋತ ಮುಖಗಳಲ್ಲಿ ನಗರವನ್ನು ಪ್ರವೇಶಿಸಿದ್ದರು. ಅವರು ಮೊದಲೇ ಅರ್ಥವಾಡಿಕೊಂಡಿದ್ದು ಏನೆಂದರೆ, ದರಿಯಾಖಾನನು ಸೋತು ಆಲಂಖಾನನ ಗೆಲುವು ಆಗಿದೆಯೆಂಬುದು.

ದರಿಯಾಖಾನನ ಚಿಂತೆ :

ಇದಾದ ನಂತರ ಆಲಂಖಾನ ಲೋಧಿಯು ದರಿಯಾಖಾನನ ಮನೆಯನ್ನು ಲೂಟಿ ಮಾಡಲು ಹಾಗೂ ಕೋಟೆಯ ಬಾಗಿಲುಗಳ ಅಧಿಕಾರವನ್ನು ತನ್ನ ಹಿಡಿತಕ್ಕೆ

ತೆಗೆದುಕೊಳ್ಳಲು ಆಜ್ಞಾಪಿಸಿದನು. ತಕ್ಷಣ ತನ್ನ ಒಬ್ಬ ಆಪ್ತನನ್ನು ಸುಲ್ತಾನ್ ಮಹಮೂದ್‌ನ ಹತ್ತಿರ ಕಳುಹಿಸಿ, ತನ್ನಲ್ಲಿಗೆ ಸುಲ್ತಾನ್‌ನನ್ನು ಕರೆ ಕಳುಹಿಸಿದನು. ದರಿಯಾಖಾನ ಮತ್ತು ಲೋಧಿಯವರ ಯುದ್ಧದ ನಂತರ ಆಲಂಖಾನನು ಬಾದಶಹನಂತೆ ವರ್ತಿಸುತ್ತಿದ್ದನು. ಅದೇ ಸಂದರ್ಭದಲ್ಲಿ ಅಹಮದಾಬಾದಿನಿಂದ ಗುಪ್ತಚರರು ಬಂದು ನೈಜ ವಿಷಯವನ್ನು ತಿಳಿಸಿದರು. ಇದನ್ನು ಕೇಳಿದ ದರಿಯಾಖಾನನು ನಗರವನ್ನು ಬಿಟ್ಟು ಹೊರಟನು.

ಪರಾರಿ :

ಕೆಲವು ಅಮೀರರ ಪರಿವಾರದ ಹೆಂಡಿರು ಮಕ್ಕಳು ನಗರದಲ್ಲಿದ್ದರು. ಅವರೆಲ್ಲರೂ ಆಲಂಖಾನ ಲೋಧಿಯೊಂದಿಗೆ ಸೇರಿಕೊಳ್ಳುವುದೇ ಲೇಸೆಂದು ಬಗೆದರು. ಅವರೆಲ್ಲರೂ ದರಿಯಾಖಾನನ ಮೈತ್ರಿಯನ್ನು ಬಿಟ್ಟು ಆಲಂಖಾನನ ಹತ್ತಿರ ಹೋದರು. ದರಿಯಾಖಾನನು ನಗರಕ್ಕೆ ತಲುಪಿದ ನಂತರ ಸುಲ್ತಾನ್ ಮಹಮೂದ್‌ನು ಅಲ್ಲಿಗೆ ಬಂದನು. ದರಿಯಾಖಾನನಿಗೆ ಇದು ಗೊತ್ತಾಗಿ ಆತನು ಚಿಂತಾಕ್ರಾಂತನಾದನು. ಅಲ್ಲಿಂದ ಓಡಿದನು. ಆದರೆ ಆತನು ಬುರ್‌ಖಾನಪುರದಲ್ಲಿ ಬಹಳ ಹೊತ್ತು ತಂಗಲಾರದೇ ಹೋದನು. ಅಲ್ಲಿಂದ ಶೇರ್‌ಶಾಹನ ಹತ್ತಿರಕ್ಕೆ ಓಡಿ ಹೋದನು. ಶೇರ್‌ಶಹಾನು ಆತನನ್ನು ತುಂಬಾ ಗೌರವದಿಂದ ಆಶ್ರಯವನ್ನು ಕೊಟ್ಟನು.

ಆಲಂಖಾನನ ಚಿಂತೆ :

ಯುದ್ಧ ಮೈದಾನ ಖಾಲಿಯಾದದ್ದರಿಂದ ಸುಲ್ತಾನ್ ಮಹಮೂದ್‌ನು ಆಲಂಖಾನನನ್ನು ತನ್ನ ಮುಖ್ಯಮಂತ್ರಿಯನ್ನಾಗಿ ನೇಮಿಸಿಕೊಂಡನು. ಆಲಂಖಾನನು ಇಷ್ಟಪಡುತ್ತಿದ್ದುದೇನೆಂದರೆ, ದರಿಯಾಖಾನನಂತೆ ಬಾದಶಹನನ್ನು ತನ್ನ ಕೈಗೊಂಬೆಯನ್ನಾಗಿಸಿಕೊಳ್ಳಬೇಕೆಂದು ಮತ್ತು ರಾಜ್ಯದಲ್ಲೆಲ್ಲಾ ಎಲ್ಲ ವಿಚಾರಗಳಲ್ಲೂ ನನ್ನದೇ ಅಧಿಕಾರ ನಡೆಯಬೇಕೆಂದು ಆದರೆ ಸುಲ್ತಾನ್ ಮಹಮೂದ್‌ನಿಗೆ ಆತನ ಅತಿ ಅಭಿಲಾಷೆಯ ಗುಟ್ಟು ಗೊತ್ತಾಯಿತು. ಇದರಿಂದ ಆತನು ಕೆಲವು ಅಮೀರರನ್ನು ತನ್ನತ್ತ ಸೆಳೆದುಕೊಂಡು ಆಲಂಖಾನನನ್ನು ಬಂಧಿಸುವ ಪ್ರಯತ್ನವನ್ನು ಮಾಡಿದನು. ಇದನ್ನು ಅರಿತ ಆಲಂಖಾನನು ತಪ್ಪಿಸಿಕೊಂಡು ಓಡಿಹೋದ. ದರಿಯಾಖಾನನಂತೆ ಆತನೂ ಶೇರ್‌ಶಹಾನ ಹತ್ತಿರ ಹೋಗಿ ಸೇರಿದ. ಶೇರ್‌ಶಹಾನು ಆತನನ್ನೂ ಬಹಳ ಗೌರವದಿಂದ ಆಹ್ವಾನಿಸಿದನು.

ರಾಜ್ಯದ ಏಳಿಗೆಯಲ್ಲಿ ವ್ಯವಸ್ಥಿತ ಪ್ರಯತ್ನ :

ಸುಲ್ತಾನ್ ಮಹಮೂದ್‌ನು ಒಬ್ಬೊಬ್ಬರಾಗಿ ಎಲ್ಲ ಕೆಟ್ಟ ನೀತಿಯುಳ್ಳವರನ್ನು ದೂರಮಾಡಿ ಪ್ರಜೆಗಳ ಪಾಲನೆಯಲ್ಲಿ ಅವರ ಏಳಿಗೆ ಅವಶ್ಯಕವಾದ ಎಲ್ಲ ನೆರವುಗಳತ್ತ

ತನ್ನ ಧ್ಯಾನವನ್ನು ಕೇಂದ್ರಿಕರಿಸಿದನು. ಪ್ರಜೆಗಳ ಏಳಿಗೆಯಲ್ಲಿ ಮೂಲಭೂತ ಸೌಕರ್ಯಗಳತ್ತ ಮನಸ್ಸು ಮಾಡಿ ಅವುಗಳನ್ನು ಕಾರ್ಯಗತಗೊಳಿಸುವತ್ತ ಒತ್ತಾಯವನ್ನು ಮಾಡಿದನು. ವ್ಯವಸಾಯದ ಕಡೆ ಹೆಚ್ಚಿನ ಗಮನವನ್ನು ಮಾಡಿದನು. ಇದರಿಂದಾಗಿ ಆಹಾರ ಪದಾರ್ಥಗಳು ಹೆಚ್ಚಾದುವು. ಸರಿಯಾದ ಕಾಲಕ್ಕೆ ಸಿಪಾಯಿಗಳಿಗೆ ವೇತನವನ್ನು ನೀಡಿ ಅವರ ಮನಸ್ಸನ್ನು ಗೆದ್ದಿದ್ದನು.

ಮಹಮೂದಾಬಾದಿನ ನಿರ್ಮಾಣ :

ಸುಲ್ತಾನ್ ಮಹಮೂದ್‌ನ ಒಳ್ಳೆಯ ಪ್ರಯತ್ನಗಳಿಂದಾಗಿ ಕೆಲವೇ ದಿನಗಳಲ್ಲಿ ಗುಜರಾತಿನ ಸ್ವರೂಪವೇ ಬದಲಾಯಿಸಿತು. ಸುಲ್ತಾನನು ತನ್ನ ಅಮೀರರು ಶಾಸಕರಲ್ಲಿ, ಹಿರಿಯರಲ್ಲಿ, ಜಮೀನ್ದಾರರಲ್ಲಿ ಸೌಹಾರ್ದ ವಾತಾವರಣವನ್ನು ಸೃಷ್ಟಿಸಿಕೊಂಡು ಅವರೆಲ್ಲರಿಗೂ ಬಹುಮಾನ, ಬಿರುದುಗಳನ್ನು ಸೂಕ್ತ ವ್ಯಕ್ತಿ, ಸೂಕ್ತ ದರ್ಜೆಗಳನ್ನು ನೀಡಿ ಅಹಮದಾಬಾದಿಗೆ ಹನ್ನೆರಡು ಕೋಸ್ ದೂರದಲ್ಲಿ ಒಂದು ಹೊಸ ನಗರದ ನಿರ್ಮಾಣ "ಮಹಮೂಧಾಬಾದ" ಎಂಬ ಹೆಸರಿನಲ್ಲಿ ಕಟ್ಟಿಸಲು ಪ್ರಯತ್ನಿಸಿದನು. ಆದರೆ ಅದು ತನ್ನ ಜೀವ ಮಾನದಲ್ಲಿ ಸಫಲವಾಗಲಿಲ್ಲ.

ಸೂರತ್‌ನಲ್ಲಿ ಒಂದು ಹೊಸ ಕೋಟೆಯ ನಿರ್ಮಾಣ :

ಸುಲ್ತಾನ್ ಮಹಮೂದ್‌ನ ಶಾಸನ ಕಾಲದಲ್ಲಿ ಹಿಜರಿ ೯೪೯ರಲ್ಲಿ 'ಸಜರ್‌ಅಮಾನ್' ಬಂದರಿನಲ್ಲಿ ಒಂದು ಕೋಟೆಯನ್ನು ಕಟ್ಟಿಸಿದನು. ಅದನ್ನು ಗಜನ್‌ಫರ್‌ಆಖಾ ಉರ್ಫ ಖುದಾವಂದ್‌ಖಾನನ ನೇತೃತ್ವದಲ್ಲಿ ಪೂರ್ಣಗೊಂಡಿತು. ಈ ಕೋಟೆಯನ್ನು ಕಟ್ಟುವುದಕ್ಕೆ ಮೊದಲು ಫಿರಂಗಿಯವರು ಅಲ್ಲಿನ ಮುಸಲ್ಮಾನರನ್ನು ಚಿತ್ರಹಿಂಸೆಗೆ ಗುರಿಪಡಿಸುತ್ತಿದ್ದರು. ಇದನ್ನು ಕಂಡ ಸುಲ್ತಾನ್ ಮಹಮೂದನು ಖುದಾವಂದಖಾನನನ್ನು ಅಲ್ಲಿನ ಶಾಸನಾಧಿಕಾರವನ್ನು ನೀಡಿದರು. ಅಲ್ಲಿ ಒಂದು ಕೋಟೆಯನ್ನು ನಿರ್ಮಿಸಲು ಆಜ್ಞಾಪಿಸಿದನು. ಖುದಾವಂದಖಾನನು ಕೋಟೆಯನ್ನು ನಿರ್ಮಿಸಲು ಪ್ರಾರಂಭಿಸಿದ. ಫಿರಂಗಿಯವರು ಅದನ್ನು ತಡೆಯಲು ಆಕ್ರಮಣವನ್ನು ಮಾಡಿದರು. ಆದರೆ ಎರಡನೇ ಸಲವೂ ಫಿರಂಗಿಯವರಿಗೆ ಸೋಲುಂಟಾಯಿತು.

ಸೂರತ್ ಕೋಟೆಯ ಕಟ್ಟಡ :

ಸೂರತ್ತಿನ ಕೋಟೆ ಬಹಳ ಸದೃಢವಾಗಿ ನಿರ್ಮಾಣಗೊಂಡಿತು. ಅದರ ಎರಡು ಕಡೆ ಒಣಭಾಗವಿದ್ದರೆ, ಮತ್ತೆರಡು ಕಡೆ ಕಂದಕವನ್ನು ತೋಡಲಾಗಿದೆ. ಕಂದಕವು ೨೦ ಅಡಿ ಅಗಲವಾಗಿದೆ. ಇದರಲ್ಲಿ ಎರಡೂ ಕಡೆಗಳಿಂದ ನೀರು ತುಂಬಿರುತ್ತದೆ. ಈ ಕಂದಕದ ಗೋಡೆಗಳು ಕಲ್ಲು ಸುಣ್ಣದ ಗಾರೆಗಳಿಂದ ಕಟ್ಟಲ್ಪಟ್ಟಿವೆ. ಈ ಗೋಡೆಗಳ ಅಗಲ ೨೫ ಗಜ ಹಾಗೂ ಎತ್ತರ ೨೦ ಅಡಿಗಳಿವೆ. ಕೋಟೆಯ ಸದೃಢತೆಗೆ ಸಾಕ್ಷಿ

ಎಂದರೆ ಕಲ್ಲು ಬಂಡೆಗಳನ್ನು ಕೊರೆದು ಕಬ್ಬಿಣದ ಸರಳುಗಳಿಂದ ಜೋಡಿಸಿ ಒಂದಕ್ಕೊಂದು ಸೇರಿಸಲಾಗಿದೆ. ಸಂದುಗಳಿಗೆ ಸೀಸವನ್ನು ಕರಗಿಸಿ ಮುಚ್ಚಲಾಗಿದೆ. ಎಲ್ಲಿಯೂ ಸಂದುಗಳು ಕಾಣಿಸುವುದಿಲ್ಲ. ಇವೆಲ್ಲ ಕಾರ್ಯಗಳು ಉನ್ನತ ಮಟ್ಟದ್ದಾಗಿವೆ.

ಈಸಾಯಿ (ಕ್ರೈಸ್ತರ)ಗಳ ಪ್ರಯತ್ನ :

ಈಸಾಯಿಗಳಿಗೆ ತಿಳಿದುಬಂದದ್ದೇನೆಂದರೆ, ಇನ್ನು ಮುಂದೆ ಯುದ್ಧ ಮಾಡುವುದರಿಂದ ಪ್ರಯೋಜನವಿಲ್ಲವೆಂದು, ಉಪಾಯದಿಂದ ಹಾಗೂ ನಮ್ರತೆಯಿಂದ ಕೆಲಸವನ್ನು ಸಾಧಿಸಬೇಕೆಂದು ಅರಿತರು. ಅವರು ಹಾಗೆಯೇ ವರ್ತಿಸತೊಡಗಿದರು. ಕ್ರೈಸ್ತರು ಖುದಾವಂದಖಾನನಿಗೆ ಒಂದು ದೊಡ್ಡ ಮೊತ್ತದ ಲಂಚವನ್ನು ಕೊಡಲು ಪ್ರಯತ್ನಿಸಿದರು. ಆದರೆ ಅವರ ಕಪಟವನ್ನರಿತ ಖುದಾವಂದನು ಅವರ ಬಲೆಗೆ ಬೀಳಲಿಲ್ಲ. ಅವರ ಪ್ರಯತ್ನ ವಿಫಲವಾಯಿತು.

ಲಂಚವನ್ನು ಕೊಡುವ ಪ್ರಯತ್ನ :

ಫಿರಂಗಿಗಳು ಗುಜರಾತಿಗಳಿಗೆ ಹೇಳಿದ್ದೇನೆಂದರೆ–ಒಂದು ವೇಳೆ ನಮ್ಮ ಮಾತು ನೀವು ಒಪ್ಪಲು ಸಿದ್ಧವಿಲ್ಲದಿದ್ದರೆ ಇಷ್ಟಾದರೂ ಒಪ್ಪಿಕೊಳ್ಳಿ ಏನೆಂದರೆ ನೀವು ಕಟ್ಟಿಸುತ್ತಿರುವ ಕೋಟೆಯ ಶೈಲಿಯಲ್ಲಿ ಪೋರ್ಚುಗೀಸರ ಶೈಲಿಯನ್ನು ಉಪಯೋಗಿಸಬಾರದು. ನಾವು ನಿಮಗೆ ಕೋಟೆಯನ್ನು ಕಟ್ಟಿಸಬಾರದೆಂದು ಕೊಟ್ಟಿದ್ದ ಹಣದಂತೆ ಈಗಲೂ ಕೊಡಲು ಸಿದ್ಧರಿದ್ದೇವೆ. ಖುದಾವಂದಖಾನನು ಅವರ ಮಾತಿಗೆ ಹೀಗೆ ಉತ್ತರಿಸಿದನು. "ಅಲ್ಲಾನ ಕೃಪೆಯಿಂದ ಹಾಗೂ ಬಾದಶಹರ ಔದಾರ್ಯದಿಂದ ನನಗೆ ನಿಮ್ಮ ಹಣದ ಅವಶ್ಯಕತೆ ಇಲ್ಲ. ನಾನು "ಚಂದಕಂದಿ"ಯನ್ನು ಮಾಡೇಮಾಡುತ್ತೇನೆ. ಇದಾದ ನಂತರ ಖುದಾವಂದಖಾನನು ಜುನಾಗಢದಿಂದ ಅಸಂಖ್ಯೆ ತೋಪುಗಳನ್ನು ಅದರಲ್ಲಿ ಉಪಯೋಗಿಸುವ ಮದ್ದುಗಳನ್ನು ತರಿಸಿದ್ದನು. ಅಲ್ಲಿ ರೋಮನಗರದವರು ಸಂಗ್ರಹಿಸಿಟ್ಟಿದ್ದರು. ಅದಕ್ಕೆ 'ಸುಲೇಮಾನಿ' ಎಂದೂ ಕರೆಯುತ್ತಾರೆ. ಅವನ್ನು ಸೂರತ್ತಿನ ಕೋಟೆಯಲ್ಲಿ ಅಲ್ಲಲ್ಲಿ ನೆಡಿಸಿದನು. ಇದರಿಂದಾಗಿ ಕೋಟೆಯ ಸದೃಢತೆ ಮತ್ತಷ್ಟು ಹೆಚ್ಚಾಯಿತು.

ಬಾದಶಹನನ್ನು ಕೊಲೆ ಮಾಡುವ ಪ್ರಯತ್ನ :

ಹಿಜರಿ ೯೯೧ರಲ್ಲಿನ ಪ್ರಾರಂಭದಲ್ಲಿ ಸುಲ್ತಾನ್ ಮಹಮೂದ್‌ನು ಬಹಳ ಶಾಂತಿಯಿಂದ ಆಡಳಿತವನ್ನು ನಡೆಸುತ್ತಿದ್ದನು. ಎಲ್ಲಿಯೂ ಆತನ ಶತ್ರುಗಳೇ ಇರಲಿಲ್ಲ. ಇದೇ ವರ್ಷದಲ್ಲಿ ಸುಲ್ತಾನ್‌ನ ಒಬ್ಬ ಬಹಳ ಆಪ್ತನೆನಿಸಿದ್ದ ವ್ಯಕ್ತಿಯ ಹೆಸರು ಬುರ್ಹಾನ್ ಎಂದಿತ್ತು. ಈತನು ಜನರಲ್ಲಿ ಒಬ್ಬ ಧಾರ್ಮಿಕನೆಂದು ಹೆಸರು ಗಳಿಸಿದ್ದನು. ದಿನಕ್ಕೆ ಐದು ಸಲ ನಮಾಜ ಪ್ರಾರ್ಥನೆ ಸಲ್ಲಿಸುತ್ತಿದ್ದನು. ಬೇಟೆಯಲ್ಲಿ ಬಾದಶಹನ

ಜೊತೆಯಲ್ಲಿಯೇ ಇರುತ್ತಿದ್ದನು. ಅಲ್ಲಿನ ನಮಾಜನಲ್ಲಿ ಈತನೇ ಇಮಾಮ್ (ಧರ್ಮಗುರು) ಆಗಿ ನಿಲ್ಲುತ್ತಿದ್ದನು. ಇಂತಹ ಕಪಟಗುರುವೇ ಬಾದಶಹನನ್ನು ಕೊಲ್ಲಲು ಪ್ರಯತ್ನಿಸಿದ್ದನು.

ಬುರ್ಹಾನ್‌ನ ಚರಿತ್ರೆ :

ಒಂದು ಸಲ ಸುಲ್ತಾನ್ ಮಹಮೂದ್‌ನು ಯಾವುದೋ ಒಂದು ತಪ್ಪಿನಿಂದಾಗಿ ಬುರ್ಹಾನನನ್ನು ಗೋಡೆಯಲ್ಲಿ ಜೀವಂತವಾಗಿ ನಿಲ್ಲಿಸಿ ಸಾಯಿಸುವ ಆಜ್ಞೆಯನ್ನು ಮಾಡಿದ್ದನು. ಆತನ ಕುತ್ತಿಗೆವರೆಗೆ ಮಾತ್ರ ಆತನ ಶರೀರವನ್ನು ಗೋಡೆಯಲ್ಲಿ ಮುಚ್ಚಿಸಿ ಮುಖ ಕಾಣುವಂತೆ ಹೂಳಬೇಕೆಂಬ ಆಜ್ಞೆ ಇತ್ತು. ಈ ಘಟನೆಯಾದ ಕೆಲವು ದಿನಗಳ ನಂತರ ಸುಲ್ತಾನ್ ಮಹಮೂದ್‌ನು ಅಲ್ಲಿಂದ ನಡೆದು ಬಂದನು. ಅಲ್ಲಿ ಈತನು ಬುರ್ಹಾನನ ಮುಖವನ್ನು ನೋಡಿದನು. ಬಾದಶಹನು ನೋಡಿದಾಗ ಬುರ್ಹಾನನು ತನ್ನ ಕಣ್ಣು ಸನ್ನೆಯಿಂದಲೇ ಬಾದಶಹನಿಗೆ ನಮಸ್ಕರಿಸಿದನು. ಇದನ್ನು ಕಂಡ ಬಾದಶಹನಿಗೆ ದಯೆ ಬಂದಿತು. ಆತನ ತಪ್ಪನ್ನು ಕ್ಷಮಿಸಿದನು. ಬುರ್ಹಾನನ ಶರೀರ ಕೊಳೆಯಲಾರಂಭಿಸಿತ್ತು. ಬಹಳ ದಿನಗಳ ತನಕ ಆತನ ಚಿಕಿತ್ಸೆ ನಡೆದಿತ್ತು. ಕೊನೆಗೆ ಆತನು ಸಂಪೂರ್ಣವಾಗಿ ಗುಣವಾದನು. ಪುನಃ ಆತನು ಬಾದಶಹನ ಆಪ್ತರಲ್ಲಿ ಸೇರಿಕೊಂಡನು. ಆದರೆ ಆತನ ಮನಸ್ಸಿನಲ್ಲಿ ಬಾದಶಹನ ಬಗ್ಗೆ ವಿಷ ಹೋಗಿರಲಿಲ್ಲ.

ಬುರ್ಹಾನನೊಂದಿಗೆ ದುರ್ವರ್ತನೆ :

ಒಂದು ಸಲ ಬುರ್ಹಾನನು ಬಾದಶಹನ ಜೊತೆಗೆ ಬೇಟೆಗೆ ಹೋದನು. ಅಲ್ಲಿ ಮತ್ತೊಮ್ಮೆ ಒಂದು ತಪ್ಪನ್ನು ಮಾಡಿ ಸಿಕ್ಕಿಬಿದ್ದನು. ಬಾದಶಹನಿಗೆ ಬಹಳ ಕೋಪ ಬಂದಿತು. ಆತನಿಗೆ ಬಹಳವಾಗಿ ಬೈದನು. ಬೇಟೆಯಿಂದ ವಾಪಸ್ ಬಂದು ಬಹಳವಾಗಿ ಮದ್ಯಸೇವನೆಯನ್ನು ಮಾಡಿ, ಹಾಸಿಗೆಯ ಮೇಲೆ ಮಲಗಿದನು.

ದುಷ್ಟಕೂಟದ ಪಿತೂರಿ :

ಸುಲ್ತಾನ್ ಮಹಮೂದ್‌ನ ಬೇಟೆಗಾರರ ಗುಂಪಿನಲ್ಲಿ ೨೦ ಜನರ ಒಂದು ತಂಡಕ್ಕೆ "ಶೇರ್‌ಕಷ್" ಎಂಬ ಬಿರುದಿತ್ತು. ಏಕೆಂದರೆ ಒಮ್ಮೆ ಅವರು ಒಂದು ಹುಲಿಯ ಮೇಲೆ ಆಕ್ರಮಣ ಮಾಡಿ ಅದನ್ನು ಕೊಲೆ ಮಾಡಿದ್ದರು. ಈ ಇಪ್ಪತ್ತು ಜನರು ಬುರ್ಹಾನನ ವಶದಲ್ಲಿದ್ದರು. ಅವನ ಮಾತಿನಂತೆ ನಡೆಯುವವರಾಗಿದ್ದರು. ಬೇಟೆಯ ಸಮಯದಲ್ಲಿ ಬಾದಶಹನನ್ನು ಸೂಕ್ಷ್ಮ ಸ್ಥಳಗಳಲ್ಲಿ ಕರೆದುಕೊಂಡು ಹೋಗುತ್ತಿದ್ದರು. ಬುರ್ಹಾನನು ಈ ಇಪ್ಪತ್ತು ಜನರಿಗೆ ಅನೇಕ ಆಮಿಷಗಳನ್ನು ತೋರಿಸಿದ್ದನು. ಅವರಿಗೆ ಒಳ್ಳೆಯ ಮನೆಗಳನ್ನು ಕಟ್ಟಿಸಿ ಕೊಡುವೆನೆಂದು ದೊಡ್ಡ-

ದೊಡ್ಡ ಹುದ್ದೆಗಳನ್ನು ಕೊಡಿಸುತ್ತೇನೆಂದು ಆಸೆ ತೋರಿಸಿದ್ದನು. ಬಾದಶಹನನ್ನು ಕೊಲೆ ಮಾಡಿಸುವ ಸಂಚಿನಲ್ಲಿದ್ದನು.

ಬಾದಶಹನು ಬೇಟೆಯಿಂದ ಬಂದ ಮೇಲೆ ಮದ್ಯಪಾನ ಮಾಡಿ ಮತ್ತಿನಲ್ಲಿರುತ್ತಿದ್ದ ವಿಷಯ ಚೆನ್ನಾಗಿ ಗೊತ್ತಿತ್ತು. ಬುರ್ಹಾನನು ಈ ಸಂದರ್ಭವನ್ನು ಬಳಸಿಕೊಳ್ಳಲು, ತನ್ನ ತಂಗಿಯ ಮಗನಾದ ದೌಲತ್ ಎಂಬುವವನನ್ನು ಬಳಸಿಕೊಳ್ಳಲು ಪ್ರಯತ್ನಿಸಿದನು. ದೌಲತ ಎಂಬುವನು ಬಾದಶಹನ ಹತ್ತಿರದಲ್ಲಿ ಸೇವೆಯಲ್ಲಿರುತ್ತಿದ್ದನು. ಆತನನ್ನು ಕೊಲೆ ಮಾಡಲು ಪ್ರೇರೇಪಿಸಿದನು.

ಸುಲ್ತಾನ್ ಮಹಮೂದ್‌ನ ಕೊಲೆ :

ದೌಲತನು ಬಾದಶಹನ ತಲೆಯ ಕೂದಲನ್ನು ಒಣಗಿಸುವ ನೆಪದಲ್ಲಿ ಸುಲ್ತಾನ್‌ನ ಸಮೀಪಕ್ಕೆ ಹೋದನು. ಆ ಸಂದರ್ಭದಲ್ಲಿ ಸುಲ್ತಾನ್ ಮಹಮೂದ್‌ನು ಅತಿಯಾದ ಮದ್ಯಪಾನವನ್ನು ಮಾಡಿದ್ದನು. ಆತನಿಗೆ ಮುಂದೆ ಏನಾಗುವುದು ಎಂಬ ಅರಿವೇ ಇರಲಿಲ್ಲ. ಬಾದಶಹನ ಉದ್ದವಾದ ತಲೆಗೂದಲುಗಳನ್ನು ಮಂಚದ ಪಟ್ಟಿಗೆ ಬಿಗಿಯಾಗಿ ಕಟ್ಟಿದನು. ಅಲ್ಲಿಯೇ ಬಾದಶಹನ ಹತ್ತಿರದಲ್ಲಿಯೇ ಇದ್ದ ಕತ್ತಿಯನ್ನು ಒರೆಯಿಂದ ಎಳೆದು, ಕುತ್ತಿಗೆಗೆ ಇಟ್ಟಾಗ ಬಾದಶಹನು ಸ್ವಲ್ಪ ಎಚ್ಚೆತ್ತುಕೊಂಡು ಏನೊ ಅನಾಹುತ ನಡೆಯುತ್ತಿದೆ. ಎಂದು ಭಾಸವಾಗಿ ತನ್ನ ಎರಡು ಕೈಗಳಿಂದ ಕತ್ತಿಯನ್ನು ಹಿಡಿದುಕೊಂಡನು. ಅಷ್ಟರಲ್ಲಿ ದೌಲತನು ಕೈಗಳ ಸಮೇತ ಬಾದಶಹನ ಶರೀರದಿಂದ ರುಂಡಮುಂಡವನ್ನು ಬೇರ್ಪಡಿಸಿಯೇ ಬಿಟ್ಟನು.

ದೌಲತನ ಮೋಸ :

ದೌಲತನು ತನ್ನ ಕಾರ್ಯದಲ್ಲಿ ಸಫಲನಾದನು. ಬುರ್ಹಾನನು ತನ್ನ ಕಪಟ, ದ್ರೋಹಗಳನ್ನು ಇನ್ನೂ ಹೆಚ್ಚು ಮಾಡಿದನು. ಬಾದಶಹನನ್ನು ಕೊಲೆ ಮಾಡುವ ಸಂದರ್ಭದಲ್ಲಿ ಅಲ್ಲಿಯೇ ಬಾಗಿಲ ಬಳಿಗೆ ನಿಂತಿದ್ದನು. ಕೊಲೆಯಾದ ತಕ್ಷಣ ಆತನು ಒಳಗೆ ಪ್ರವೇಶಿಸಿದನು. ಒಂದು ವೇಳೆ ಬಾದಶಹನಂತೆಯೇ ಇತರೆ ಅಮೀರರುಗಳನ್ನು ಒಬ್ಬರನ್ನೆ ಕರೆಯಿಸಿ ಕೊಲೆ ಮಾಡಿಬಿಟ್ಟರೆ ಸುಲಭವಾಗಿ ನಾನು ಬಾದಶಹನ ಸಿಂಹಾಸನಕ್ಕೇರಬಹುದು. ಈ ಸಂದರ್ಭದಲ್ಲಿ ಆತನು ತೆಗೆದುಕೊಂಡ ಮೊದಲನೆ ಕೆಲಸವೆಂದರೆ– ಬಾದಶಹನ ಕೊಠಡಿಯಿಂದ ಹೊರಬಂದು ಸುಳ್ಳು ಸುಳ್ಳೇ ಬಾದಶಹರು ಆಜ್ಞಾಪಿಸಿರುವಂತೆ ಮೊದಲನೆ ಆಜ್ಞೆಯೆಂದರೆ ಹಾಡುಹೇಳುವವರು ಇನ್ನೂ ಜೋರಾಗಿ ಹೇಳಬೇಕು. ಎರಡನೇ ಆಜ್ಞೆ ಎಂದರೆ–ಹತ್ತು ಜನ ಆತನ ಶೇರ್‌ಕಷ್ ಆಪ್ತರು ತಕ್ಷಣ ಇಲ್ಲಿಗೆ ಹಾಜರಾಗಬೇಕೆಂದು ಹೇಳಿದನು.

ಅಮೀರರ ಕೊಲೆ :

ದೌಲತನು ಆ ಶೇರಕಶ ಕಾವಲುದಾರರನ್ನು ಒಳಗೆ ಕರೆದು, ಅವರ ಕೈಗಳಿಗೆ ಆಯುಧಗಳನ್ನು ಕೊಟ್ಟನು. ತಕ್ಷಣ ಅಪಾರ ಹಣವನ್ನು ಕೊಟ್ಟನು. ನಂತರ ಅವರೆಲ್ಲರಿಗೂ ಅವರವರ ಜಾಗೀರಿಗಳ ಪ್ರದೇಶಗಳನ್ನು ಹೇಳಿದನು. ಅವರು ಮಾಡಬೇಕಾದ ಈಗಿನ ಕೆಲಸವನ್ನು ತಿಳಿಸಿದನು. ಅರ್ಧರಾತ್ರಿಯಲ್ಲಿ ಗಜನ್‌ಫರ್‌ಆಖಾ ಉರ್ಫ ಖುದಾವಂದ್‌ಖಾನ್ ಮತ್ತು ಆಸಿಫ್‌ಖಾನರು ಮುಖ್ಯಮಂತ್ರಿಗಳಾಗಿದ್ದರಿಂದ ಬಾದಶಹರನ್ನು ಕಾಣಲು ಬಂದರು. ದೌಲತನು ಬಾದಶಹರ ಗುಪ್ತ ಕೊಠಡಿಯಲ್ಲಿ ಕರೆದುಕೊಂಡು ಹೋದನು. ಅಲ್ಲಿ ಅವರಿಬ್ಬರನ್ನೂ ಕೊಲೆ ಮಾಡಿದನು. ಇದಾದ ನಂತರ ಇನ್ನೂ ಇಬ್ಬರು ಅಮೀರರನ್ನು ಕರೆಯಿಸಿಕೊಂಡು ಅವರನ್ನೂ ಕೊಲೆ ಮಾಡಿದನು.

ಏತೆಮಾದ್‌ಖಾನನ ದೂರದೃಷ್ಟಿ :

ಇದಾದ ನಂತರ ದೌಲತನು ತನ್ನ ದೂತನನ್ನು ಏತಮಾದ್‌ಖಾನನ ಹತ್ತಿರ ಕಳುಹಿಸಿ ಆತನನ್ನೂ ಕರೆಯಿಸಿದನು. ಏತಮಾದನು ಬಾದಶಹನ ನಡೆಯನ್ನು ಚೆನ್ನಾಗಿ ಬಲ್ಲವನಾಗಿದ್ದನು. ಆತನು ಯೋಚಿಸಿದ್ದೇನೆಂದರೆ– ಬಾದಶಹರು ನನ್ನಂತಹ ಒಬ್ಬ ಹಿರಿಯ ಅಮೀರನನ್ನು ತೊಂದರೆ ಕೊಡಲು ಇಷ್ಟೊತ್ತಿನಲ್ಲಿ ಯಾವತ್ತೂ ಕರೆದಿಲ್ಲ. ಏನೋ ಅತಿ ವಿಶೇಷವಾದ ಮಾತಿರಬಹುದೆಂದು ಇನ್ನೂ ಯೋಚಿಸುತ್ತಿರುವಷ್ಟರಲ್ಲಿ ದೌಲತನಿಂದ ಕಳುಹಿಸಲ್ಪಟ್ಟ ಮತ್ತೊಬ್ಬ ದೂತ ಬಂದನು. ಇದರಲ್ಲಿ ಏನೋ ಮೋಸವಿದೆ ಎಂದು ಅರಿತ ಏತಮಾದನು ಇಷ್ಟು ಹೊತ್ತಿನಲ್ಲಿ ನಾನು ಎಲ್ಲಿಗೂ ಬರುವುದಿಲ್ಲವೆಂದು ಹೇಳಿದನು.

ಅಬ್ದುಲ ಸೈಮದ್ ಶೇರಾಜಿಗೆ ಕರೆ :

ಬುರ್ಹಾನನು ಗುಜರಾತಿ ಅಮೀರರೆಲ್ಲರ ಸರದಾರ, ಹೆಸರಾಂತನಾಗಿದ್ದ ಅಬ್ದುಲ್ ಸೈಯದ್ ಉರುಫ್ ಅಫ್‌ಜಖಾನನನ್ನು ಕರೆ ಕಳಿಸಿದನು. ಆತನು ಬಂದಾಗ ಹೀಗೆ ಹೇಳಿದನು. ಬಾದಶಹರು ಖುದಾವಂದಖಾನನಿಂದ ಸಿಟ್ಟಿಗೆದ್ದು ಆತನ ಹುದ್ದೆಯಿಂದ ಕೆಳಗಿಳಿಸಿದ್ದಾರೆ. ಈಗ ಅವರು ಇಷ್ಟಪಡುವುದೇನೆಂದರೆ ಆ ಜಾಗಕ್ಕೆ ನಿನ್ನನ್ನು ನೇಮಿಸುವರೆಂದು ತಿಳಿಸಿದ್ದಾರೆ. ಆದ್ದರಿಂದ ನಿನಗೋಸ್ಕರ ಈ ಬೆಲೆಬಾಳುವ ಉಡುಗೊರೆ ಮತ್ತು ಬಹುಮಾನವನ್ನು ಕಳುಹಿಸಿದ್ದಾರೆ. ಆಗ ಅಬ್ದುಸ್ಸಮದನು ಹೀಗೆ ಉತ್ತರಿಸಿದನು. ಎಲ್ಲಿಯ ತನಕ ನಾನು ಬಾದಶಹರನ್ನು ಕಾಣುವುದಿಲ್ಲವೋ ಅಲ್ಲಿಯ ತನಕ ಈ ಉಡುಗೊರೆಯನ್ನು ತೊಡುವುದಿಲ್ಲವೆಂದನು. ಈ ಖಿಲ್ಲತ್ತನ್ನು ತೊಡಿಸಲು ಬಹಳ ಒತ್ತಾಯಪಡಿಸಿದನು. ಅವನ ಒತ್ತಾಯಕ್ಕೆ ಮಣಿದು ಖಿಲ್ಲತ್(ಅಂಗಿ)ಯ ಒಂದು

ತೋಳಿನಲ್ಲಿ ಕೈಯನ್ನು ತೊಡಿಸಿ ಮತ್ತೊಂದು ಕೈಯನ್ನು ಬಾದಶಹರನ್ನು ಕಂಡ ನಂತರವೇ ತೊಡುತ್ತೇನೆಂದು ಪ್ರಮಾಣ ಮಾಡಿ ನಿರಾಕರಿಸಿದನು.

ಅಬ್ದುಸ್ಸಮದನ ಕೊಲೆ :

ದೌಲತನು ಅಬ್ದುಸ್ಸಮದನನ್ನು ಬಾದಶಹನ ಹೆಣ ಬಿದ್ದಿರುವ ಜಾಗಕ್ಕೆ ಕರೆತಂದನು. ಅಲ್ಲಿ ಆತನು ಹೀಗೆ ಹೇಳಿದನು. ನಾನೇ ಬಾದಶಹನನ್ನು ಹಾಗೂ ಈ ಎಲ್ಲ ಅಮೀರರನ್ನು ಕೊಲೆ ಮಾಡಿರುವೆನು. ಈಗ ನಾನು ನಿನ್ನನ್ನು ನನ್ನ ಮುಖ್ಯಮಂತ್ರಿಯನ್ನಾಗಿ ನೇಮಿಸಿಕೊಳ್ಳಲಿದ್ದೇನೆ ಎಂದನು. ಅಷ್ಟೇ ಅಲ್ಲ ನಿನಗೆ ರಾಜ್ಯದ ಎಲ್ಲ ಅಧಿಕಾರವನ್ನು ನೀಡುತ್ತೇನೆ ಎಂದನು. ಬಾದಶಹನ ಹೆಣವನ್ನು ಕಂಡ ಅಬ್ದುಸ್ಸಮದನು ಗಾಬರಿಯಿಂದ ದೌಲತನಿಗೆ ಬೈದನು. ದೌಲತನು ಅದೇ ವೇಳೆ ಅಬ್ದುಸ್ಸಮದನನ್ನು ಕೊಲೆಗೈದನು. ಅಬ್ದುಸ್ಸಮದನ ವಯಸ್ಸು ಆಗ ಎಪ್ಪತ್ತಾಗಿತ್ತು.

ಬುರ್ಹಾನನ ಪಟ್ಟಾಭಿಷೇಕ :

ದೌಲತ್‌ನು ಅದೇ ರಾತ್ರಿ ಎಲ್ಲ ವಿದ್ರೋಹಿಗಳಿಗೂ; 'ಶೇರ್‌ಕಷ್' ಗುಂಪಿನವರಿಗೂ ಒಂದು ಕಡೆ ಸೇರಿಸಿಕೊಂಡನು. ಅವರೆಲ್ಲರಿಗೂ ಬಿರುದು ಬಾವಲಿಗಳಿಂದ, ಬಹುಮಾನಗಳಿಂದ ಗೌರವಿಸಿದನು. ಅವರೆಲ್ಲರಿಗೂ ಮನೆಗಳನ್ನು ಕಟ್ಟಿಸಿ ಕೊಡುತ್ತೇನೆಂದು ಆಸೆ ತೋರಿಸಿದನು. ತನ್ನ ಸೋದರ ಮಾವನಾದ ಬುರ್ಹಾನನನ್ನು ಕರೆದುಕೊಂಡು ಬಂದು ಸಿಂಹಾಸನಕ್ಕೆ ಕೂರಿಸಿಯೇ ಬಿಟ್ಟನು. ಬುರ್ಹಾನನು ತನ್ನ ಕಡೆಯವರಿಗೆಲ್ಲ ಕುದುರೆಗಳನ್ನು ಹಂಚಿದನು. ಕೆಲವರಿಗೆ ಆನೆಗಳನ್ನು ಕೊಟ್ಟನು. ಸದ್ಯಕ್ಕೆ ತನ್ನ ಶಕ್ತಿಯನ್ನು ಬಲಪಡಿಸಿಕೊಂಡನು.

ಬುರ್ಹಾನನ ಕೊಲೆ :

ಸುಲ್ತಾನ್ ಮಹಮೂದ್ ಕೊಲೆಯ ವಿಚಾರ ಎಲ್ಲರಿಗೂ ತಿಳಿದು ಹೋಯಿತು. ಎಲ್ಲೆಲ್ಲೂ ಹರಡಿತು. ಅಮಾದುಲ್‌ಮುಲ್ಕ್ ತುರ್ಕ, ಪಿದರ್‌ಚಂಗೇಸ್‌ಖಾನ, ಅಲಖ್‌ಖಾನ್‌ಹಬಷಿ ಮತ್ತು ಇತರೆ ಅಮೀರರು ಒಗ್ಗಟ್ಟಾಗಿ ಬುರ್ಹಾನನ ಮೇಲೆ ಆಕ್ರಮಣವನ್ನು ಮಾಡಿದರು. ಬುರ್ಹಾನನು ಬಾದಶಹರ ಯೋಗ್ಯವಾದ ಛತ್ರ–ಚಾಮರ, ಕೆಂಪು ನಿಶಾನೆ, ಶಾಹಿ ಪರದಾಗಳೊಂದಿಗೆ ಅರಮನೆಯಿಂದ ಹೊರಟು ಶಾಹಿ ಸೈನ್ಯದೊಂದಿಗೆ ಅಮೀರರ ಎದುರು ಯುದ್ಧಕ್ಕೆ ಬಂದನು. ಮೊದಲ ಆಕ್ರಮಣಕ್ಕೆ ಆತನ ಸೈನಿಕರು ಹೆದರಿ ಚೆಲ್ಲಾಪಿಲ್ಲಿಯಾಗಿ ಓಡಿದರು. ಶೇರ್‌ವಾನ್‌ಖಾನನೆಂಬುವನು ಬುರ್ಹಾನನ್ನು ಅಲ್ಲಿಯೇ ಕೊಂದನು. ಆತನ ಹೆಣವನ್ನು ಹಗ್ಗದಿಂದ ಕಟ್ಟಿ ನಗರದ ಎಲ್ಲ ಬೀದಿಗಳಲ್ಲೂ ಎಳೆದಾಡಿಸಿದರು.

ಸುಲ್ತಾನ್ ಮಹಮೂದ್‌ನ ಆಡಳಿತ ಕಾಲ :

ಸುಲ್ತಾನ್ ಮಹಮೂದ್‌ನು ೧೮ ವರ್ಷ, ಎರಡು ತಿಂಗಳು, ೧೫ ದಿನಗಳ ತನಕ ಆಡಳಿತವನ್ನು ನಡೆಸಿದನು. ಸಂಯೋಗವೆಂದರೆ–ಅದೇ ಕಾಲದಲ್ಲಿ ಅಂದರೆ ಹಿಜರಿ ೯೬೧ರಲ್ಲಿ ದೆಹಲಿಯ ಸಲಿಂಶಾಹ್ ಬಿನ್ ಶೇರ್‌ಶಾಹ್, ಅಹಮದ್‌ನಗರದ ಶಾಸಕ ನಿಜಾಂ ಅಲ್ ಮುಲ್ಕ್ ಬುಹರಿ ಇವರೆಲ್ಲರೂ ಇಹಲೋಕವನ್ನು ತ್ಯಜಿಸಿದ್ದುದು ವಿಶೇಷ.

ಸುಲ್ತಾನ್ ಮಹಮೂದ್‌ನ ಚಾರಿತ್ರ್ಯ ಮತ್ತು ಪಾತ್ರ :

ಮಹಮೂದ್‌ಸಾನಿಯು ಬಹಳ ಒಳ್ಳೆಯ ನಡತೆಯುಳ್ಳವನಾಗಿದ್ದನು. ಆತನ ಸಮಯ ವಿದ್ವಾಂಸರು, ಜ್ಞಾನಿಗಳು ಹಿರಿಯರೊಂದಿಗೆ ಕಳೆಯುತ್ತಿತ್ತು. ವಿಶೇಷ ದಿನಗಳಲ್ಲಿ ಅಂದರೆ ಹಜ್ರತ್ ಮಹಮ್ಮದ್‌ಪೈಗಂಬರರ ಜನ್ಮದಿನದಂದು ಮತ್ತು ತನ್ನ ವಂಶಸ್ಥರ ಹಿರಿಯರ ನೆನಪಿನ ದಿನಗಳಂದು ಬಡಬಗ್ಗರಿಗೆ ಅನ್ನದಾನವನ್ನು ಮಾಡುತ್ತಿದ್ದನು. ಊಟಕ್ಕೆ ಕುಳಿತಾಗ ಎಲ್ಲರ ಕೈಗಳನ್ನು "ತಷ್ತ್" ಪಾತ್ರೆಯಲ್ಲಿ ತಾನೇ ಸ್ವತಹ ತೊಳೆಸುತ್ತಿದ್ದನು. ಬಟ್ಟೆಗಳನ್ನು ತನಗಾಗಿ ಖರೀದಿಸಿದಾಗ, ಬಡಬಗ್ಗರಿಗೆ 'ದಸ್ತಾರ್' (ಊಟಕ್ಕೆ ಹಾಸುವ ಬಟ್ಟೆ)ಯನ್ನು ಹೊಲಿಸಿ ಕೊಡುತ್ತಿದ್ದನು. ಉಡಲು ಪಾಯಜಾಮ ಅಂಗಿಗಳನ್ನು ಮೊದಲು ಬಡವರಿಗೆ ನೀಡಿ ನಂತರ ತಾನು ಉಡುತ್ತಿದ್ದನು.

(ಜಿಂಕೆಗಳ) ಪ್ರಾಣಿ ಸಂಗ್ರಹಾಲಯ :

ಸುಲ್ತಾನ್ ಮಹಮೂದ್ ಸಾನಿಯು ನದಿಯ ದಡದಲ್ಲಿ ಬಹಳ ಸುಂದರ, ವಿಶಾಲ ಪ್ರಾಣಿ ಸಂಗ್ರಹಾಲಯವನ್ನು ನಿರ್ಮಿಸಿದ್ದನು. ಅದರ ಗೋಡೆ ಏಳು ಮೈಲಿ ದೂರದಷ್ಟು ವಿಶಾಲವಾಗಿತ್ತು. ಅದರೊಳಗಿನ ತೋಟಗಳು ಬಹಳ ಸುಂದರವಾಗಿತ್ತು. ತೋಟದ ಸೌಂದರ್ಯವನ್ನು ಕಾಪಾಡಲು ಅನುಭವಿ ಪುರುಷರನ್ನು ಹಾಗೂ ಸುಂದರ ಯುವತಿಯರನ್ನು ನೇಮಿಸಿದ್ದನು. ಎಲ್ಲ ಪ್ರಾಣಿಗಳನ್ನು ಈ ಸಂಗ್ರಹಾಲಯದಲ್ಲಿ ಸಾಕಿದ್ದನು. ಪ್ರಾಣಿಗಳು ತಮ್ಮ ತಮ್ಮ ಸಂತತಿಗಳನ್ನು ವೃದ್ಧಿಸಿಕೊಳ್ಳುವ ವ್ಯವಸ್ಥೆಯನ್ನು ಮಾಡಿಸಿದ್ದನು. ಇದರಿಂದಾಗಿ ಪ್ರಾಣಿಗಳು ಅಪಾರ ಸಂಖ್ಯೆಯಲ್ಲಿ ಬೆಳದವು. ಸುಲ್ತಾನ್ ಮಹಮೂದ್‌ನ ಜೀವಿತ ಕಾಲದಲ್ಲಿ ಇದೊಂದು ಮಹತ್ತರವಾದ ಕಾರ್ಯವೆನಿಸಿತ್ತು.

ಸ್ತ್ರೀಯರೊಂದಿಗೆ ಆಸಕ್ತಿ :

ಸುಲ್ತಾನ್ ಮಹಮೂದ್‌ಶಾಹನಿಗೆ ಸ್ತ್ರೀಯರ ಸಂಗದಲ್ಲಿರುವ ಆಸಕ್ತಿ ಹೆಚ್ಚಾಗಿತ್ತು. ಬೇಟೆಯ ಸಂದರ್ಭದಲ್ಲಿ ಹಾಗೂ ರಾಜ್ಯದ ನಗರಗಳ ಪ್ರವಾಸ ಕಾಲದಲ್ಲಿ, ತನ್ನ ಅಂತಃಪುರದ ಎಲ್ಲ ಸ್ತ್ರೀಯರನ್ನು ಜೊತೆಯಲ್ಲಿ ಕರೆದೊಯ್ಯುವ ಅಭ್ಯಾಸವಿತ್ತು. ಬೇಟೆಯಾಡಿದ ಸಂಗ್ರಹಾಲಯದಲ್ಲಿ ಒಳಗಿದ್ದ ಮರಗಳಿಗೆ ಅವುಗಳ ಮೇಲೆ ಹಸಿರು–

ಕೆಂಪು ಬಣ್ಣದ ಮಕ್ಮಲ್ ಬಟ್ಟೆಗಳಿಂದ ಅಲಂಕಾರಗಳನ್ನು ವಿವಿಧ ರೀತಿಯಲ್ಲಿ ಮಾಡಿಸಿ, ಶೃಂಗರಿಸಿಡುತ್ತಿದ್ದನು. ಅವುಗಳ ಸೌಂದರ್ಯವನ್ನು ಹೆಚ್ಚಿಸುವ ಕಲೆಯನ್ನು ಬೆಳೆಸಿ ಆನಂದಿಸುತ್ತಿದ್ದನು.

ಏತೆಮಾದ್‌ಖಾನನ ಮೇಲೆ ವಿಶ್ವಾಸ :

ಸುಲ್ತಾನ್ ಮಹಮೂದ್‌ನಿಗೆ ಗಂಡು ಮಕ್ಕಳಿರಲಿಲ್ಲ. ಇವನಿಗೆ ಬರೀ ಹೆಣ್ಣು ಮಕ್ಕಳೇ ಹೆಚ್ಚಾಗಿದ್ದುವು. ಅವನ ಅಂತಃಪುರದ ಮಹಿಳೆಯರು ಯಾರಾದರೂ ಗರ್ಭವನ್ನು ಧರಿಸಿದರೆ ಆಕೆಯ ಗರ್ಭಪಾತ ಮಾಡಿಸಲಾಗುತ್ತಿತ್ತು. ಏತ್‌ಮಾದಖಾನನು ಸುಲ್ತಾನ್ ಮಹಮೂದ್‌ನ ಹಿಂದೂಸ್ತಾನಿ ಗುಲಾಮನಾಗಿದ್ದನು. ಬಾದಶಹನಿಗೆ ಆತನ ಮೇಲೆ ಪೂರ್ಣ ವಿಶ್ವಾಸವಿತ್ತು. ಆತನಿಗೆ ಅಂತಃಪುರದ ಸ್ತ್ರೀಯರೊಂದಿಗೆ ಒಡನಾಟ ಇಟ್ಟುಕೊಳ್ಳಲು ಅನುಮತಿಸಿದ್ದ. ಆತನು ಅರಮನೆಯ ಶೃಂಗಾರ ಕಾರ್ಯಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದ. ಏತ್‌ಮಾದನೇ ಸ್ವತಃ ಬಾದಶಹನಿಗೆ ಯಾವುದೇ ಅನುಮಾನ ಬಾರದಿರಲೆಂದು ಕರ್ಪೂರವನ್ನು ತಿಂದು ತನ್ನ ಗಂಡಸ್ತನವನ್ನು ಕಳೆದುಕೊಂಡಿದ್ದ.

ಸಾಮಾಜಿಕ ಕೆಡಕುಗಳ ತಡೆ :

ಸುಲ್ತಾನ್ ಮಹಮೂದ್‌ನ ಶಾಸನ ಕಾಲದಲ್ಲಿ ಸಮಾಜವು ಚಿತ್ರ–ವಿಚಿತ್ರ ಕೆಡಕುಗಳಲ್ಲಿ ಮೂಢನಂಬಿಕೆಗಳಿಗೆ ತುತ್ತಾಗಿತ್ತು. ಹೆಂಗಸರು ದರ್ಗಾಗಳಲ್ಲಿ ಮತ್ತು ಜ್ಯೋತಿಷಿಗಳ ಮನೆಗಳಲ್ಲಿ ಯಾವಾಗಲೂ ತುಂಬಿರುತ್ತಿದ್ದರು. ಇದರಿಂದಾಗಿ ಕೆಡುಕುಗಳ ಪೇಟೆ ಬಿಸಿಯಾಗಿರುತ್ತಿತ್ತು. ಇಂತಹ ಮೂಢನಂಬಿಕೆಗಳಿಂದಾಗಿ ಸಮಾಜದಲ್ಲಿ ಅನೈತಿಕತೆಗೆ ಹೆಚ್ಚು ಒತ್ತು ಕೊಡಲಾಗುತ್ತಿತ್ತು. ಜನರು ಅನೇಕ ಮಾನಸಿಕ, ಶಾರೀರಿಕ ರೋಗಗಳಿಗೆ ತುತ್ತಾಗಿ ನರಳುತ್ತಿದ್ದರು. ಸುಲ್ತಾನನು ಇಂತಹ ಅನೈತಿಕ ಮೌಢ್ಯ ಪದ್ಧತಿಗಳನ್ನು ಪೋಷಿಸಿರುವವರನ್ನು ಹಿಡಿದು ಕಠಿಣ ಸಜೆಗಳನ್ನು ವಿಧಿಸಿದನು. ಗುಪ್ತ ವರದಿಗಾರರನ್ನು ನೇಮಿಸಿ ದುಷ್ಟ ಪದ್ಧತಿಗಳನ್ನು ನಡೆಸುವವರಿಗೆ ಹಿಡಿಸಿ ದರ್ಬಾರಿಗೆ ಕರಿಸಿ ಶಿಕ್ಷಿಸುತ್ತಿದ್ದನು. ಅಂತವರಿಗೆ ಸರಿಯಾದ ಶಿಕ್ಷಣವನ್ನು ನೀಡಿ ಸರಿ ದಾರಿಗೆ ಬರುವಂತೆ ಒತ್ತಾಯಿಸುತ್ತಾ ಕೆಟ್ಟ ಸಮಾಜವನ್ನು ಸಭ್ಯತೆಯ ಹಾದಿಗೆ ಬರುವಂತೆ ಮಾಡಿದ ಕೀರ್ತಿ ಸುಲ್ತಾನ್ ಮಹಮೂದ್‌ನಿಗೆ ಸಲ್ಲುತ್ತದೆ.

■

*

೧೪. ಎರಡನೇ ಸುಲ್ತಾನ್ ಅಹಮದ್‌ಶಾಹಸಾನಿ

ಸಿಂಹಾಸನಾರೋಹಣ :

ಸುಲ್ತಾನ್ ಮಹಮೂದ್‌ಶಾಹ ಸಾನಿಯ ಕೊಲೆಯಾದಾಗ ಆತನಿಗೆ ಗಂಡು ಮಕ್ಕಳಿರಲಿಲ್ಲವೆಂದು ಹಿಂದಿನ ಪುಟಗಳಲ್ಲಿ ನಾವು ತಿಳಿದಿದ್ದೇವೆ. ಸಿಂಹಾಸನದ ಜಾಗಕ್ಕೆ ಜಗಳಗಳು ಬರದಂತೆ ಏತಮಾದ್‌ಖಾನನು, ಸುಲ್ತಾನ್‌ಶಹಾನ ವಂಶಸ್ಥರಲ್ಲಿ ಕಡಿಮೆ ವಯಸ್ಸಿನ ಒಬ್ಬ ಹುಡುಗನನ್ನು ಸಯ್ಯದ ಮುಬಾರಕ ಬುಖಾರಿ ಮತ್ತಿತರ ಅಮೀರರುಗಳ ಸಲಹೆಯ ಮೇರೆಗೆ ಸಿಂಹಾಸನಕ್ಕೆ ಕೂರಿಸಿದರು. ಆ ಹುಡುಗನ ಹೆಸರು "ರಜೀವುಲ್‌ಮುಲ್ಕ್" ಎಂದಿತ್ತು. ಈತನಿಗೆ ಎರಡನೇ "ಸುಲ್ತಾನ್ ಅಹಮದ್‌ಶಾಹಸಾನಿ" ಎಂಬ ಬಿರುದಿನೊಂದಿಗೆ ಪಟ್ಟಕ್ಕೇರಿಸಿದರು.

ಬಾದಶಹನ ಬಿಕ್ಕಟ್ಟು :

ಏತಮಾದ್‌ಖಾನನು ಶಾಸನದ ಎಲ್ಲ ಅನುಭವಾತ್ಮಕ, ಆಡಳಿತಾತ್ಮಕ, ಸಾಮಾಜಿಕ ಕೆಲಸ ಕಾರ್ಯಗಳನ್ನು ತನ್ನ ಹಿಡಿತದಲ್ಲಿಟ್ಟುಕೊಂಡು ಬಾದಶಹ ಅಹಮದ್‌ಶಾಹಸಾನಿಯನ್ನು ತನ್ನ ಕೈಗೊಂಬೆಯನ್ನಾಗಿಸಿಕೊಂಡನು. ಹೆಸರಿಗೆ ಮಾತ್ರ ಬಾದಶಹನಾಗಿದ್ದನು. ಐದು ವರ್ಷಗಳು ಇದೇ ಪರಿಸ್ಥಿತಿಯಲ್ಲಿ ಕಳೆದವು. ಇದನ್ನು ಬಾದಶಹನು ನೋಡುತ್ತಲೇ ಇದ್ದನು. ನೈಜ ಬಾದಶಹ ಏತಮಾದನೇ ಆಗಿದ್ದನು. ಸುಲ್ತಾನ್‌ನಿಗೆ ಇದು ತಡೆಯಲಾಗಲಿಲ್ಲ. ಆತನು ಸಯ್ಯದ ಮುಬಾರಕ ಬುಖಾರಿಯ ಹತ್ತಿರ ಹೋದನು. ಎಲ್ಲ ವಿಚಾರವನ್ನು ಆತನಿಗೆ ತಿಳಿಸಿದನು. ಸಯ್ಯದ ಮುಬಾರಕ ಬುಖಾರಿಯು ಆತನ ಸಹಾಯಕ್ಕೆ ನಿಲ್ಲುವೆನೆಂದು ಧೈರ್ಯವನ್ನು ತುಂಬಿ ಸಮಾಧಾನ ಮಾಡಿ ಕಳುಹಿಸಿದನು. ಇದೇ ಸಮಯದಲ್ಲಿ ಇತರೆ ಗುಜರಾತಿ ಅಮೀರರುಗಳಾದ ಮುಸಾದಾತ್‌ಖಾನ ಮೂಸಾಖಾನ್‌ಫೌಲಾದಿ ಮತ್ತು ಆಲಂಖಾನ ಲೋಧಿ ಮುಂತಾದವರೆಲ್ಲರೂ ಬಾದಶಹನ ಜೊತೆ ಸೇರಿದರು.

ಏತಮಾದಖಾನನು ಪರಾರಿ :

ಇದೇ ಸಂದರ್ಭದಲ್ಲಿ ಅಮಾದುಲ್‌ಮುಲ್ಕ ಮತ್ತು ತಾತಾರ್‌ಖಾನ ಘೋರಿಯವರು ಏತಮಾದಖಾನನ ಮನೆಯ ಮುತ್ತಿಗೆ ಹಾಕಿದರು. ತೋಪುಗಳಿಂದ ಆತನ ಮನೆಯನ್ನು ಉಡಾಯಿಸಿದರು. ಏತಮಾದನು ಇವರ ಎದುರಿಗೆ ಯುದ್ಧ ಮಾಡಲು ಸಮರ್ಥನಿರಲಿಲ್ಲ. ಜನಾನೇರ್‌ಮಹಮ್ಮದಾಬಾದಿನ ಹತ್ತಿರವಿರುವ "ಪಾಲ್" ಎಂಬ ಜಾಗಕ್ಕೆ ಓಡಿಹೋದನು.

ಏತಮಾದಖಾನನು ವಾಪಸ್ಸಾಗಿ ಅಮೀರರೊಡನೆ ಸಂಧಿ :

ಇದಾದ ನಂತರ ಏತಮಾದ್‌ಖಾನನು ಸೈನ್ಯವನ್ನು ಸಂಗ್ರಹಿಸಿಕೊಂಡನು. ತನ್ನ ಶತ್ರುಗಳೊಂದಿಗೆ ಯುದ್ಧಮಾಡಲು ಬಂದನು. ಇತರೆ ಅಮೀರರುಗಳು ಯುದ್ಧ ಸಿದ್ಧತೆಗಳನ್ನು ಮಾಡಿಕೊಂಡರು. ಆದರೆ ಯುದ್ಧ ಮಾಡದಂತೆ ಕೆಲವು ಹಿರಿಯ ವ್ಯಕ್ತಿಗಳ ಮಧ್ಯಸ್ಥಿಕೆಯಿಂದ ಇಬ್ಬರಲ್ಲೂ ಸಂಧಿ ಮಾಡಿಸಿದರು. ಆಡಳಿತ ಜವಾಬ್ದಾರಿ ಮಾತ್ರ ಏತಮಾದನ ಕೈಯಲ್ಲೇ ನಿಂತಿತು.

ಸುಲ್ತಾನ್ ಅಹಮದ್‌ಶಾಹನ ಜಾಣತನದ ಅಭಾವ :

ಭರೋಚ್, ಜನಾನೇರ್, ಮಹಮ್ಮದಾಬಾದ್, ನಾವದತ್ತ ಮತ್ತು ಇತರೆ ಪರಗಣ ಜಿಲ್ಲೆಗಳು ಮಹಂದರಿ ಮತ್ತು ನರ್ಮದಾ ನದಿಗಳ ಮಧ್ಯ ಇರುವ ಪ್ರದೇಶಗಳನ್ನು ಏತಮಾದನಿಗೆ ಜಾಗೀರಿಯಾಗಿ ಬಿಡಲಾಯಿತು. ಅಹಮದ್‌ಶಾಹ್‌ಸಾನಿಗೂ ವಿಶೇಷ ಜಾಗೀರಗಳನ್ನು ನಿಗದಿಪಡಿಸಲಾಯಿತು. ಸುಲ್ತಾನ್ ಅಹಮದ್‌ಶಾಹ ಸಾನಿಯ ಅಜ್ಞಾನದಿಂದಾಗಿ ಅನೇಕ ವೇಳೆ ತನ್ನ ಜೊತೆಗಾರರೊಂದಿಗೆ ಮಾತನಾಡುವ ಸಂದರ್ಭದಲ್ಲಿ ಏತಮಾದಖಾನನ ಕೊಲೆಯ ವಿಚಾರವನ್ನು ಎಲ್ಲರ ಮುಂದೆಯೂ ಇಡುತ್ತಿದ್ದನು. ಅಷ್ಟೇ ಅಲ್ಲದೆ ಬಾಳೆಯ ಗಿಡಗಳನ್ನು ತನ್ನ ಕತ್ತಿಯಿಂದ ಕಡಿದು ಹೇಳುತ್ತಿದ್ದುದೇನೆಂದರೆ–ನಾನು ಹೀಗೆಯೇ ಏತಮಾದಖಾನನನ್ನು ಕಡಿದು ಹಾಕುತ್ತೇನೆಂದು ಬಹಿರಂಗ ಪಡಿಸುತ್ತಿದ್ದನು.

ಅಹಮದ್‌ಶಾಹನ ಕೊಲೆ :

ಏತಮಾದ್‌ಖಾನನಿಗೆ ಸುಲ್ತಾನ್ ಅಹಮದ್‌ಶಾಹನು ಬಹಿರಂಗವಾಗಿ ಹೇಳುತ್ತಿದ್ದ ಮಾತುಗಳು ತಿಳಿದವು. ಆತನು ಯೋಚಿಸಿದ್ದೇನೆಂದರೆ ಆತನು ತನ್ನ ಮೇಲೆ ಆಕ್ರಮಣವನ್ನು ಮಾಡುವುದಕ್ಕೆ ಮೊದಲೇ ನಾನೇ ಆತನ ಮೇಲೆ ಆಕ್ರಮಣ ಮಾಡಿ ಮುಗಿಸಬೇಕೆಂದು ಏತಮಾದನು ಬಾದಶಹನ ರಕ್ತದಾಹಿಯಾಗಿಬಿಟ್ಟನು. ಆತನನ್ನು ಹೇಗೆ ಕೊಲೆ ಮಾಡಬೇಕೆಂಬ ಉಪಾಯವನ್ನು ಚಿಂತಿಸತೊಡಗಿದನು. ಕೊನೆಗೆ ಆತನು ತನ್ನ ಉಪಾಯಗಳಲ್ಲಿ ಸಫಲನಾದನು. ಒಂದು ರಾತ್ರಿಯಲ್ಲಿ ಬಾದಶಹನ ಕೊಲೆಯಾಯಿತು.

ಕೊಲೆಯ ನಂತರ ಬಾದಶಹನ ಹೆಣವನ್ನು ಏತಮಾದನು ವಜೀಹುಲ್‌ಮುಲ್ಕನ ಮನೆಯ ಮುಂದೆ, ನದಿಯ ಕಡೆಗೆ ಎಸೆಯಲು ಆಜ್ಞಾಪಿಸಿದನು. ಪ್ರಚಾರ ಮಾಡಿದ್ದೇನೆಂದರೆ– ಬಾದಶಹನು ಒಬ್ಬ ವೈಶ್ಯೆಯ ಸಹವಾಸವನ್ನು ಮಾಡಲು ಹೋದಾಗ, ಯಾರೋ ಆತನನ್ನು ಕೊಲೆ ಮಾಡಿದ್ದಾರೆಂದು.

ಸುಲ್ತಾನ್ ಅಹಮದ್‌ಶಾಹ್‌ಸಾನಿಯ ಆಡಳಿತದ ಕಾಲ ಎಂಟು ವರ್ಷಗಳೆಂದು ತಿಳಿದುಬರುತ್ತದೆ.

■

*

೧೫. ಸುಲ್ತಾನ್ ಮುಜಾಫ್ಫರ್‌ಶಾಹ್‌ಸಾನಿ ಗುಜರಾತಿ ಬಿನ್–ಮಹಮೂದ್‌ಶಾಹ್ ಗುಜರಾತಿ

ಏತಮಾದನ ಶಪಥ :

ಹಿಜರಿ ೯೬೯ರ ಕೊನೆಯಲ್ಲಿ ಏತಮಾದಖಾನ ಗುಜರಾತಿಯು ಅಮೀರರ ಸಭೆಯಲ್ಲಿ ಒಬ್ಬ ಹುಡುಗನನ್ನು ಕರೆ ತಂದು ಪ್ರಮಾಣಗಳನ್ನು ಮಾಡುತ್ತಾ ಹೀಗೆಂದನು. ಈ ಹುಡುಗನು ಸುಲ್ತಾನ್ ಮಹಮೂದ್‌ಶಾಹ ಸಾನಿಯ ನಿಜವಾದ ಮಗನಾಗಿದ್ದಾನೆ. ಯಾವ ದಿನಗಳಲ್ಲಿ ಈ ಹುಡುಗನ ತಾಯಿ ಗರ್ಭವತಿಯಾಗಿದ್ದಳೋ ಆಗ ಸುಲ್ತಾನ್ ಮಹಮೂದ್‌ಶಾಹ ಸಾನಿಯು ಈ ಮಹಿಳೆಯನ್ನು ನನ್ನ ಸುಪರ್ದಿಗೆ ಕೊಟ್ಟು ಈಕೆಯ ಗರ್ಭಪಾತವನ್ನು ಮಾಡಿಸು ಎಂದು ಆಜ್ಞಾಪಿಸಿದನು. ಅಷ್ಟು ಹೊತ್ತಿಗಾಗಲೇ ಆಕೆಗೆ ಐದು ತಿಂಗಳ ಗರ್ಭವಿತ್ತು. ನನಗೆ ಆಕೆಯ ಗರ್ಭಪಾತವನ್ನು ಮಾಡಿಸಲು ಮನಸ್ಸು ಒಪ್ಪಲಿಲ್ಲ. ಆತನು ಎಷ್ಟು ಪ್ರಮಾಣಗಳನ್ನು ಮಾಡಿದ್ದನೆಂದರೆ ಅಮೀರರು ಏತಮಾದಖಾನನ ಮಾತುಗಳನ್ನು ಒಪ್ಪುವಂತಾಯಿತು. ನಂತರ ಆ ಹುಡುಗನನ್ನು ಬಾದಶಹನಾಗಿ ಮಾಡಿಯೇ ಬಿಟ್ಟರು. ಈ ಹುಡುಗನೇ ಮುಂದೆ ಸುಲ್ತಾನ್ ಮುಜಾಫರ್‌ಶಾಹ ಸಾನಿ ಎಂಬ ಬಿರುದಿನಿಂದ ಬಾದಶಹನಾದನು.

ರಾಜ್ಯದ ಪಾಲು ಹಂಚಿಕೆ :

ಅಮೀರರೆಲ್ಲರೂ ಸಂಪೂರ್ಣ ಗುಜರಾತ ಸಾಮ್ರಾಜ್ಯವನ್ನು ತಮ್ಮ ತಮ್ಮಲ್ಲಿ ಹಂಚಿಕೊಂಡರು. ಪಟನ್‌ನಿಂದ ಫರಗಣ ಕದಲಿವರೆಗಿನ ಪ್ರದೇಶವನ್ನು ಮೂಸಾಖಾನ ಮತ್ತು ಶೇರ್‌ಖಾನ್ ಫೌಲಾದಿಯರಿಗೆ ಸಿಕ್ಕಿತು. ರಾಧನಪುರ, ತರಾವರಹೋರಚ್‌ಪುರ ಮತ್ತು ಇತರೆ ಪರಗಣ ಜಿಲ್ಲೆಗಳು ಫತಹ್‌ಖಾನ್ ಬಲೋಚ್‌ನ ವಶವಾದುವು. ಸಾಬರಮತಿ ಮತ್ತು ಮಹಂದರಿ ನದಿಗಳ ಮಧ್ಯಪ್ರದೇಶವನ್ನು ಏತಮಾದನಿಗೆ

ಕೊಡಲಾಯಿತು. ಅಮಾದುಲ್ ಮುಲ್ಕ್‌ನ ಮಗ ಚಂಗೇಸ್‌ಖಾನನಿಗೆ 'ನಾವದತ್ತ' ಮತ್ತು ಜನಾನೇರ್‌ನ ಮಹಮ್ಮದಾಬಾದಗಳನ್ನು ಬಿಡಲಾಯಿತು. ಭರೋಚ್ ಚಂಗೇಸ್‌ಖಾನನ ತಂಗಿಯ ಮಗನಿಗೆ ಬಿಟ್ಟರು. ಆತನ ಹೆಸರು ರುಸ್ತುಂಖಾನನೆಂದು. ಆತ ಭರೋಚ್ ಪ್ರದೇಶವನ್ನು ಜಾಗೀರಿಯೆಂದು ಘೋಷಿಸಿಕೊಂಡನು. ಸಯ್ಯದ್ ಮೀರಾನ್ ಬಿನ್ ಸಯ್ಯದ ಬುಖಾಯು ದೋನ್‌ಖಾ ಮತ್ತು ದಂದೂಖಾ ಪ್ರದೇಶವನ್ನು ನಿರ್ವಹಿಸಲು ಒಪ್ಪಿದನು. ಸೂರತ್ ಪ್ರದೇಶವನ್ನು ಅಮೀನ್‌ಖಾನ ಘೋರಿಯು ವಶಪಡಿಸಿಕೊಂಡನು.

ಏತಮಾದ್‌ಖಾನನ ಅಧಿಕಾರ ಸ್ವೀಕಾರ :

ಅಮೀನ್‌ಖಾನ ಘೋರಿಯು ಗುಜರಾತಿ ಅಮೀರರ ಸ್ನೇಹವನ್ನು ತಿರಸ್ಕರಿಸಿದ. ಏತಮಾದಖಾನನು ಸುಲ್ತಾನ್ ಮುಜಾಫ್ಫರನನ್ನು ತನ್ನ ಖೈದಿಯಾಗಿಟ್ಟುಕೊಂಡಿದ್ದನು. ದರ್ಬಾರಿನ ದಿನ ಮಾತ್ರ ನಾಮಮಾತ್ರಕ್ಕೆ ಬಾದಶಹನೆಂದು ಕರೆದು ಸಿಂಹಾಸನದ ಮೇಲೆ ಕೂರಿಸುತ್ತಿದ್ದನು. ಏತಮಾದನು ಸ್ವತಃ ಪಟ್ಟದಲ್ಲಿ ಬಾದಶಹನ ಹಿಂದೆ ಕುಳಿತುಕೊಳ್ಳುತ್ತಿದ್ದನು. ಈ ಸಂದರ್ಭದಲ್ಲಿ ಎಲ್ಲಾ ಅಮೀರರೂ ಬಾದಶಹನಿಗೆ (ಸಲಾಂ) ನಮಸ್ಕಾರ ಮಾಡಲು ಬಂದು ಹೋಗುತ್ತಿದ್ದರು.

ಫತಹ್‌ಖಾನ್ ಮತ್ತು ಶೇರ್‌ಖಾನ್‌ಫೌಲಾದಿಯಲ್ಲಿ ಯುದ್ಧ :

ಕೆಲವು ಕಾಲ ಹೀಗೆಯೇ ಕಳೆದಿತ್ತು. ಚಂಗೇಸ್‌ಖಾನ್ ಮತ್ತು ಶೇರ್‌ಖಾನ್‌ಫೌಲಾದಿ (ಮುಬಾರಕ್‌ಬಾದ್) ಶುಭಾಶಯಗಳನ್ನು ಅರ್ಪಿಸಲು ಅಹಮದಾಬಾದಿಗೆ ಬಂದರು. ಈ ಘಟನೆಯಾದ ಒಂದು ವರ್ಷದ ಬಳಿಕ ಫತಹ್‌ಖಾನ ಮತ್ತು ಶೇರ್‌ಖಾನ್‌ಫೌಲಾದಿಗಳಲ್ಲಿ ಒಳ ಜಗಳಗಳು ಪ್ರಾರಂಭವಾದುವು. ಏಕೆಂದರೆ ಅವರ ಜಾಗೀರುಗಳು ಒಂದರಲ್ಲೊಂದು ಸೇರಿಕೊಂಡಿದ್ದುವು. ಇದರ ಪರಿಣಾಮ ಯುದ್ಧಕ್ಕೆ ನಿಲ್ಲುವಂತಾಯಿತು. ಫತಹ್‌ಖಾನನು ಶೇರ್‌ಖಾನ್‌ಫೌಲಾದಿಯೊಂದಿಗೆ ಯುದ್ಧದಲ್ಲಿ ಸೋತನು. ಸೋತು ಏತಮಾದಖಾನನ ಹತ್ತಿರ ಓಡಿಬಂದನು.

ಫೌಲಾದಿ ಸೈನ್ಯದ ಮೇಲೆ ಆಕ್ರಮಣ :

ಏತಮಾದಖಾನನಿಗೆ ಫೌಲಾದಿಯ ಮೇಲೆ ಅಪಾರ ಕ್ರೋಧವುಂಟಾಯಿತು. ಆತನು ಸೈನ್ಯವನ್ನು ಸಂಗ್ರಹಿಸಿಕೊಂಡು ಫೌಲಾದಿಯವರ ಸೈನ್ಯದ ಮೇಲೆ ಆಕ್ರಮಣವನ್ನು ಮಾಡಿದನು. ಫೌಲಾದಿಯು ಈ ಆಕ್ರಮಣವನ್ನು ಎದುರಿಸಲಾರದೆ ಪಟನ್ ಕೋಟೆಯಲ್ಲಿ ಅಡಗಿಕೊಂಡನು. ಫೌಲಾದಿಯವರು ಸಂಧಿ ಮಾಡಿಕೊಳ್ಳಲು ಏತಮಾದನನ್ನು ಪ್ರಾರ್ಥಿಸಿದರು. ಆದರೆ ಅವರ ಪ್ರಾರ್ಥನೆಯನ್ನು ಮನ್ನಿಸಲಿಲ್ಲ. ಇನ್ನು ಯುದ್ಧ ಮಾಡಲೇಬೇಕಾದ ಪರಿಸ್ಥಿತಿ ಉಂಟಾಯಿತು.

ಯುದ್ಧ ನಡೆಯಿತು :

ಇದಾದ ನಂತರ ಸುಮಾರು ೫೦೦ ಸಿಪಾಯಿಗಳು ಕೋಟೆಯಿಂದ ಹೊರ ಬಂದರು. ಇದನ್ನು ನೋಡಿದ ಮುಸಾಖಾನ್ ಮತ್ತು ಶೇರ್‌ಖಾನ್ ಫೌಲಾದಿಯವರೂ ತಮ್ಮ-ತಮ್ಮ ಸೈನ್ಯದೊಂದಿಗೆ ಅಂದರೆ ಇವರ ಹತ್ತಿರ ಮೂರು ಸಾವಿರ ಸವಾರರಿದ್ದರೂ, ಕೋಟೆಯಿಂದ ಹೊರ ನಡೆದರು. ಏಕಮಾದನು ಆ ಸೈನ್ಯದೊಡನೆ ಯುದ್ಧಕ್ಕೆ ಬಂದನು. ಅವನ ಸೈನ್ಯ ಗುಜರಾತಿ ಸೈನ್ಯಕ್ಕಿಂತ ೩೦ ಸಾವಿರ ಸೈನ್ಯವಿತ್ತು. ಯುದ್ಧವು ಪ್ರಾರಂಭವಾಯಿತು.

ಹಾಜಿಖಾನನು ಏತಮಾದನಿಂದ ಬೇರ್ಪಟ್ಟನು :

ಫೌಲಾದಿಯವರು ಏತಮಾದನ ಹತ್ತಿರವಿದ್ದ ಸೈನ್ಯದೊಡನೆ ಸೆಣಸಾಡಿದರು. ಇವರ ಕೈ ಮೇಲಾಯಿತು. ಇಷ್ಟರಲ್ಲಿ ಹಾಜಿಖಾನನು ಫೌಲಾದಿಯವರೊಂದಿಗೆ ಸೇರಿಕೊಂಡನು. ವಾಸ್ತವವಾಗಿ ಈತನು ಏತಮಾದನ ಸೈನ್ಯದಲ್ಲಿದ್ದವನು. ಸಲೀಂ ಶಾಹ್‌ಬಿನ್‌ಶೇರ್‌ಶಾಹನ ಗುಲಾಮನು ಏತಮಾದನ ಸೈನ್ಯದ ಶ್ರೇಷ್ಠ ಫೌಜಿ ಸರದಾರನಾಗಿದ್ದನು. ಫೌಲಾದಿಯವರು ಏತಮಾದನಿಗೆ ಒಂದು ಸಂದೇಶವನ್ನು ಕಳುಹಿಸಿದರು. ಹಾಜಿಖಾನನು ಈಗ ನಮ್ಮ ಕಡೆ ಬಂದು ಸೇರಿಕೊಂಡಿರುತ್ತಾನೆ. ಆತನ ಜಾಗೀರಿಯನ್ನು ಆತನಿಗೆ ಬಿಟ್ಟುಕೊಡು ಎಂದು ಕೇಳಿದರು. ಆದರೆ ಏತಮಾದನು ಆ ಪ್ರಸ್ತಾಪವನ್ನು ತಿರಸ್ಕರಿಸಿದನು. ಉತ್ತರದಲ್ಲಿ ಹಾಜಿಖಾನನು ನನ್ನ ನೌಕರನಾಗಿದ್ದನು. ಆದ್ದರಿಂದ ಆತನಿಗೆ ಜಾಗೀರಿ ಕೊಡಲಾಗಿತ್ತು. ಆದರೆ ಆತನು ಈಗ ನನ್ನನ್ನು ಬಿಟ್ಟಿರುವುದರಿಂದ ಜಾಗೀರಿ ಕೊಡುವ ಪ್ರಶ್ನೆಯೇ ಇಲ್ಲವೆಂದನು.

ಏತಮಾದನ ಸೋಲು ಮತ್ತು ಪರಾರಿ :

ಮೂಸಾಖಾನ್ ಮತ್ತು ಶೇರ್‌ಖಾನಫೌಲಾದಿಯುವರು ಸೈನ್ಯವನ್ನು ಸಂಗ್ರಹಿಸಿಕೊಂಡರು. ಮತ್ತು ಹಾಜಿಖಾನನ ಜಾಗೀರಿಗೆ ಹೋಗಿ ಅದನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಠಾಣ ಎಂಬಲ್ಲಿ ನೆಲೆನಿಂತರು. ಏತಮಾದಖಾನನು ಸೈನ್ಯವನ್ನು ಸಂಗ್ರಹಿಸಿಕೊಂಡು ಆ ಇಬ್ಬರ ಮೇಲೆ ಪುನಃ ಯುದ್ಧಕ್ಕೆ ಬಂದನು. ಎರಡೂ ಕಡೆ ಸೈನ್ಯವು ಎದುರು ಬದುರು ನಿಂತರು. ಕೊನೆಗೆ ನಾಲ್ಕು ತಿಂಗಳ ನಂತರ ಯುದ್ಧವಾಯಿತು. ಏತಮಾದನಿಗೆ ಈ ಸಲವೂ ಸೋಲಾಯಿತು. ಆತನು ಯುದ್ಧ ಮೈದಾನದಿಂದ ಓಡಿ ಹೋಗಿ ಭರೋಚನ ಚಂಗೇಸ್‌ಖಾನನ ಹತ್ತಿರ ಹೋಗಿ ಆಶ್ರಯವನ್ನು ಪಡೆದನು.

ಏತಮಾದ್‌ಖಾನ ಮತ್ತು ಫೌಲಾದಿಯರಲ್ಲಿ ಸಂಧಿ :

ಭರೋಚ್ ತಲುಪಿದ ಏತಮಾದ್‌ಖಾನನು ಚಂಗೇಸ್‌ಖಾನನನ್ನು ತನಗೆ ಸಹಾಯ ನೀಡುವಂತೆ ಕೇಳಿಕೊಂಡನು. ಆತನನ್ನು ಕರೆದುಕೊಂಡು ಫೌಲಾದಿಯವರ ಮೇಲೆ

ಯುದ್ಧಕ್ಕೆ ಬಂದೇ ಬಿಟ್ಟನು. ಆದರೆ ಫೌಲಾದಿಯವರ ಮೇಲೆ ಯುದ್ಧ ಮಾಡಲು ಆತನ ಮನಸ್ಸು ಒಪ್ಪಲಿಲ್ಲ. ಏಕೆಂದರೆ ಹಿಂದಿನ ಎರಡು ಸಲದ ಯುದ್ಧದಲ್ಲಿ ಸೋತಿದ್ದ ಅನುಭವವಿತ್ತು. ಏತಮಾದನು ಸಂಧಿಯ ಪ್ರಸ್ತಾಪವನ್ನು ಮುಂದಿಟ್ಟನು. ಸಂಧಿಗೆ ಇಬ್ಬರೂ ಒಪ್ಪಿದರು. ಹಾಜಿಖಾನನ ಜಾಗೀರಿಯನ್ನು ಆತನಿಗೆ ಬಿಟ್ಟುಕೊಡಲು ಒಪ್ಪಿ ತಾನು ಅಹಮದಾಬಾದಿಗೆ ನಡೆದನು.

ಚಂಗೇಸ್‌ಖಾನನ ಸಂದೇಶ ಏತಮಾದನಿಗೆ :

ಚಂಗೇಸ್‌ಖಾನನು ಪರಿಸ್ಥಿತಿಗಳನ್ನು ಚನ್ನಾಗಿ ಗಮನಿಸುತ್ತಿದ್ದನು. ಗುಜರಾತಿ ಪರಿಸ್ಥಿತಿಗಳು ಚನ್ನಾಗಿರಲಿಲ್ಲ. ಹಾಗೂ ಏತಮಾದನ ನಡತೆಯ ಬಗ್ಗೆಯೂ ಚಂಗೇಸನಿಗೆ ಹಿಡಿಸಿರಲಿಲ್ಲ. ಆತನು ಚನ್ನಾಗಿ ಯೋಚಿಸಿ ಏತಮಾದನಿಗೊಂದು ಸಂದೇಶವನ್ನು ಕಳುಹಿಸಿದ. ನಾನು ಸಹ ಗುಜರಾತಿನ ಬಾದಶಹರುಗಳ ವಂಶಸ್ಥನಾಗಿದ್ದು, ಸುಲ್ತಾನಿ ಅಂತಃಪುರದ ಎಲ್ಲ ವಿಚಾರಗಳಿಂದಲೂ ಅರಿವನ್ನು ಪಡೆದಿರುವವನಾಗಿದ್ದೇನೆ. ನನಗೆ ಚನ್ನಾಗಿ ಗೊತ್ತಿರುವುದೇನೆಂದರೆ ಸುಲ್ತಾನ್ ಮಹಮೂದ್‌ಸಾನಿಯ ಯಾವುದೇ ಗಂಡು ಸಂತಾನವಿರಲಿಲ್ಲ. ನೀನು ಆ ಹುಡುಗನನ್ನು ಅಂದರೆ ಈಗಿನ ಬಾದಶಹ ಮುಜಾಫರ್‌ಶಾಹ ಸಾನಿಯನ್ನು ಸುಲ್ತಾನ್ ಮಹಮೂದ್‌ನ ಮಗನೆಂದು ಬಿಂಬಿಸಿ ಸಿಂಹಾಸನದ ಮೇಲೆ ಕೂರಿಸಿದ್ದಿಯೇ ಈ ಮಾತು ನನಗೆ ಅರ್ಥವಾಗುತ್ತಿಲ್ಲ ಏನೆಂದರೆ– ನೀನು ಆತನ ಸ್ಥಾನದಲ್ಲಿ ಕುಳಿತುಕೊಂಡು ನಿನ್ನ ನೌಕರರ ರಕ್ಷಣೆಯಲ್ಲಿ ಬಾದಶಹನನ್ನು ರಕ್ಷಿಸಲು ನಿಲ್ಲಿಸುತ್ತೀಯೆ ನೀನು ಬಂದು ಕೂರುವವರೆಗೆ ಬಾದಶಹನಿಗೆ ಯಾರೂ 'ಸಲಾಂ' ಮಾಡಲು ಬರುವಂತಿಲ್ಲ. ಒಂದು ವೇಳೆ ಸುಲ್ತಾನ್ ಮುಜಾಫರ ಸಾನಿಯು ಸುಲ್ತಾನ್ ಮಹಮೂದ್‌ನ ಮಗನೇ ಆಗಿದ್ದರೆ, ನೀನು ಸಹ ಇತರೆ ಅಮೀರರ ಜೊತೆ ಬಂದು ಬಾದಶಹನಿಗೆ ಎಲ್ಲ ಅಮೀರರೊಂದಿಗೆ 'ಸಲಾಂ' ಮಾಡಬೇಕಾಗಿತ್ತು. ಅವರ ಸೇವೆಯಲ್ಲಿ ಇರಬೇಕಾಗಿತ್ತು.

ಏತಮಾದನ ಉತ್ತರ :

ಏತಮಾದನು ಚಂಗೇಸಖಾನನ ಸಮಸ್ಯೆಗಳಿಗೆ ಹೀಗೆ ಉತ್ತರಿಸಿದನು. ನಾನು ಸಿಂಹಾಸನಕ್ಕೆ ಬಾದಶಹನನ್ನು ಕೂರಿಸುವ ದಿನ ಎಲ್ಲ ಹಿರಿಯ ಅಮೀರರ, ಶಾಸಕರ ಎದುರು ಪ್ರಮಾಣವನ್ನು ಮಾಡಿರುವುದೇನೆಂದರೆ–ಸುಲ್ತಾನ್ ಮುಜಾಫರನು ಸುಲ್ತಾನ್ ಮಹಮೂದ್‌ನ ಮಗನೇ ಆಗಿರುತ್ತಾನೆಂದು. ಅವರೆಲ್ಲರೂ ನನ್ನ ಮಾತಿನ ಮೇಲೆ ಭರವಸೆಯನ್ನಿಟ್ಟು ಒಪ್ಪಿಕೊಂಡಿರುತ್ತಾರೆ. ನಾನು ಅವರ ಹಸ್ತದ ಮೇಲೆ ಹಸ್ತವನ್ನಿಟ್ಟು ಕಠಿಣ ಪ್ರಮಾಣವನ್ನು ಮಾಡಿರುತ್ತೇನೆ. ಆಶ್ಚರ್ಯವೆಂದರೆ ನೀನು ಸಾಮಾನ್ಯ ಮನುಷ್ಯನಂತೆ ಪ್ರಶ್ನಿಸುತ್ತಿದ್ದೀಯೆ. ನಿನಗೂ ಗೊತ್ತಿರುವಂತೆ ಸುಲ್ತಾನ್ ಮಹಮೂದ್‌ಶಾಹ ಸಾನಿಯವರ ಕಾಲದಲ್ಲಿ ಬೇರೆ ಅಮೀರರಿಗಿಂತ ನನ್ನ ಮರ್ಯಾದೆ ಹೆಚ್ಚಿತ್ತು. ಆ

ಕಾಲದಲ್ಲಿ ನೀನಿನ್ನೂ ಚಿಕ್ಕಮಗುವಾಗಿದ್ದೆ. ನಿನ್ನ ತಂದೆ ಅಮಾದುಲಮುಲ್ಕನು ಈಗ ಜೀವಂತವಾಗಿರುತ್ತಿದ್ದರೆ. ಆತನು ನಿನಗೆ ಹೇಳುತ್ತಿದ್ದ ಸುಲ್ತಾನ್ ಮಹಮೂದ್‌ರ ದರಬಾರಿನಲ್ಲಿ, ಅಂತಪುರದಲ್ಲಿ ನನ್ನ ಮರ್ಯಾದೆ ಏನಿತ್ತೆಂಬುದು. ಈಗಿನ ಸುಲ್ತಾನ್ ಮುಜಾಫ್ಫರಶಾಹನು ನನಗೂ-ನಿನಗೂ ಇಬ್ಬರಿಗೂ ಬಾದಶಹನೇ ಆಗಿರುತ್ತಾನೆ. ನಿನಗೆ ಈಗ ಶೋಭಿಸುವುದೇನೆಂದರೆ-ನೀನು ಬಾದಶಹನ ಸೇವೆಯಲ್ಲಿ ವಿಧೇಯನಾಗಿದ್ದು, ಕಪ್ಪ ಕಾಣಿಕೆಗಳನ್ನು ಸರಿಯಾಗಿ ಕೊಡೂತ್ತಾ ಈ ಪ್ರಪಂಚದಲ್ಲಿ ಒಳ್ಳೆಯ ಹೆಸರನ್ನು ಗಳಿಸಿಕೋ ಎಂದನು.

ಶೇರ್‌ಖಾನ್ ಫೌಲಾದಿಯ ಪತ್ರ ಚಂಗೇಸಖಾನನಿಗೆ :

ಶೇರ್‌ಖಾನ್ ಫೌಲಾದಿಗೆ ಚಂಗೇಸಖಾನ ಮತ್ತು ಏತಮಾದರಲ್ಲಿ ನಡೆದ ಪತ್ರವ್ಯವಹಾರದ ವಿಚಾರ ಗೊತ್ತಾಯಿತು. ಆತನು ಚಂಗೇಸಖಾನನಿಗೊಂದು ಪತ್ರವನ್ನು ಬರೆದ. ಅದರ ವಿಷಯ – ಈಗಿನ ಪರಿಸ್ಥಿತಿಗಳಿಂದಾಗಿ ನೀನು ಸ್ವಲ್ಪ ದಿನ ಶಾಂತಿಯಿಂದ ಇರುವುದು ಅವಶ್ಯಕವಾಗಿದೆ. ಇತ್ತೀಚಿಗೆ ನಾವು ಆತನೊಂದಿಗೆ ಸಂಧಿ ಮಾಡಿಕೊಂಡಿರುವಂತೆ ನಡೆದುಕೊಳ್ಳೋಣ. ಬಾದಶಹರ ಸಿಂಹಾಸನತ್ವದಿಂದ ಆ ಕಾರಣವಾಗಿ ವಿರೋಧಿಸುವುದು ಬೇಡ ಎಂದು ಬರೆದನು.

ಕಸಬಾ ಬರೋದ್ರದ ಮೇಲೆ ಚಂಗೇಸನ ಕಣ್ಣು :

ಚಂಗೇಸಖಾನನು ಶೇರ್‌ಖಾನನ ಸಲಹೆಯನ್ನು ಒಪ್ಪಲು ಸಿದ್ಧನಿರಲಿಲ್ಲ. ಆತನು ಕಸಬಾ ಬರೋದ್ರಾವನ್ನು ವಶಪಡಿಸಿಕೊಳ್ಳಲು ಹವಣಿಸುತ್ತಿದ್ದನು. ಆದ್ದರಿಂದ ಚಂಗೇಸನು ಏತಮಾದನಿಗೆ ಮತ್ತೊಂದು ಪತ್ರವನ್ನು ಕಳುಹಿಸಿದನು. ಒಂದು ವೇಳೆ ನನ್ನ ಸೈನ್ಯ ಬಹಳ ದೊಡ್ಡದಾಗಿದೆ. ಆದರೂ ಶತ್ರುವನ್ನು ಎದುರಿಸಲು ಧೈರ್ಯವಿಲ್ಲ. ಇದಕ್ಕೆ ನೀವು ನನಗೆ ಏನು ಮಾಡಬೇಕೆಂಬ ಸಲಹೆಯನ್ನು ಕೊಡಬೇಕೆಂದನು.

ಏತಮಾದಖಾನನ ಸಲಹೆ :

ಏತಮಾದನು ಇಷ್ಟಪಡುತ್ತಿದ್ದುದೇನೆಂದರೆ-ಚಂಗೇಸಖಾನನಲ್ಲಿ ಮತ್ತು ಹಕಾಮ್ ಎಂಬುವರಲ್ಲಿ ಒಡಕು ಉಂಟಾದರೆ ಅವರು ಬುರ್ಹಾನ್‌ಪುರದ ಮೇಲೆ ಆಕ್ರಮಣ ಮಾಡಲಾರರು. ಹಾಗೂ ಆ ವಿಚಾರದಿಂದ ದೂರ ಸರಿಯಲೂಬಹುದು. ಈ ವಿಚಾರವನ್ನು ಯೋಚಿಸಿಕೊಂಡು ಪತ್ರದ ಉತ್ತರದಲ್ಲಿ ಏತಮಾದನು. ಚಂಗೇಸನಿಗೆ ಹೀಗೆ ಬರೆದ-ಕಸಬಾ ನದರಬಾರ್ ಪ್ರದೇಶವು ಯಾವತ್ತು ಗುಜರಾತಿ ಅಮೀರರ ವಶದಲ್ಲಿರುತ್ತದೆ. ಯಾವ ಕಾಲದಲ್ಲಿ ಸುಲ್ತಾನ್ ಮಹಮುದ ಸಾನಿಯು ಮೀರಾನ್ ಮುಬಾರಕನ ವಶದಲ್ಲಿದ್ದಾಗ ಅಸೀರ್‌ಕೋಟೆಯಲ್ಲಿ ತಂಗಿದ್ದನು. ಆಗ ಅವನು ಮೀರಾನ್

ಮುಬಾರಕನಿಗೆ ತಿಳಿಸಿದ್ದುದೇನೆಂದರೆ-ಅಲ್ಲಾಹನು ನನಗೆ ಗುಜರಾತಿನ ಬಾದಶಹನನ್ನಾಗಿ ಮಾಡಿದರೆ ಇದರ ಗುರ್ತಿಗಾಗಿ ನಿನಗೆ ಕಸಬಾ ನದರ್‌ಬಾರನ್ನು ಕೊಡುತ್ತೇನೆಂದಿದ್ದರು.

ನದರ್‌ಬಾರ್‌ನ್ನು ಚಂಗೇಸ್‌ಖಾನನು ವಶಪಡಿಸಿಕೊಂಡನು :

ಚಂಗೇಸಖಾನನು ಏತಮಾದನ ಮೋಸದಲ್ಲಿ ಬಿದ್ದನು. ಆತನು ಸೈನ್ಯವನ್ನು ಸಂಗ್ರಹಿಸಿಕೊಂಡನು. ಹಿಜರಿ ೯೭೪ರಲ್ಲಿ ನದರ್‌ಬಾರಿನತ್ತ ಹೊರಟನು. ಚಂಗೇಸಖಾನನು ನದರ್‌ಬಾರನ್ನು ಗೆದ್ದು, ಮುಂದುವರಿದನು. ಥಾನೇಶ್ವರ ತನಕ ಹೋದನು.

ಮಹಮ್ಮದ್‌ಶಾಹ ಮತ್ತು ತಘಾಲ್‌ಖಾನರ ಆಗಮನದ ಸುದ್ದಿ :

ಅಕಸ್ಮಾತಾಗಿ ಆ ದಿನಗಳಲ್ಲಿ ಸುದ್ದಿ ಬಂದದ್ದೇನೆಂದರೆ-ಬರಾರನ ಶಾಸಕ ತಜಾಲಖಾನನು ಮೀರಾನ್‌ಶಾಹನ ಜೊತೆಗೂಡಿ ಯುದ್ಧಕ್ಕೆ ಬರುತ್ತಿದ್ದಾರೆ. ಈ ಸುದ್ದಿಯನ್ನು ತಿಳಿದ ಚಂಗೇಸ್‌ಖಾನನು ತನ್ನ ಸೈನ್ಯದೊಂದಿಗೆ ಒಂದು ಕೆಟ್ಟ ಇಕಟ್ಟಾದ ಜಾಗದಲ್ಲಿ ನಿಂತನು. ಅಲ್ಲಿ ಜಮೀನ್ದಾರರು ಇದ್ದರು. ಚಂಗೇಸನು ತನ್ನ ನೌಕರರಿಗೆ ಸಂಕೋಲೆಗಳಿಂದ ಕಟ್ಟಿ ಹಾಕಿದ್ದನು. ಆ ನೌಕರರು ಗಾಡಿಯಲ್ಲಿ ತೋಪುಗಳನ್ನು ಇಟ್ಟುಕೊಂಡಿದ್ದರು.

ಚಂಗೇಸ್‌ಖಾನನು ಪರಾರಿ :

ಮಹಮ್ಮದಶಾಹ ಮತ್ತು ತಜಾಲ್‌ಖಾನರು ಚಂಗೇಸಖಾನನ ಮೇಲೆ ಯುದ್ಧಕ್ಕೆ ಬಂದು ಸಾಯಂಕಾಲದವರೆಗೆ ತಮ್ಮ ಎದುರಾಳಿಯ ಮುಂದೆ ನಿಂತರು. ಚಂಗೇಸಖಾನನು ತನ್ನ ಜಾಗದಿಂದ ಅಲುಗಾಡಲಿಲ್ಲ. ರಾತ್ರಿಯಾಯಿತು. ಆತನು ತನ್ನೆದುರು ಬಂದಿರುವ ಶತ್ರುಗಳೊಡನೆ ಯುದ್ಧ ಮಾಡಲು ಸಾಧ್ಯವಿಲ್ಲವೆಂದು ತೀರ್ಮಾನಿಸಿದರು. ಯಾರಿಗೂ ಕಾಣದಂತೆ ಅಲ್ಲಿಂದ ಓಡಿ ಹೋದನು. ಭರೋಜ್‌ನಲ್ಲಿ ಆಶ್ರಯವನ್ನು ಪಡೆದನು. ಮಹಮ್ಮದಶಾಹ ಘಾರೂಖಿಯ ಕೈಗೆ ಅಪಾರ ಸಾಮಾನು ಸಿಕ್ಕಿತು. ಚಂಗೇಸಖಾನನನ್ನು ಹಿಂಬಾಲಿಸಿ, ನದರಬಾರನ್ನು ವಶಪಡಿಸಿಕೊಂಡನು.

ಸುಲ್ತಾನ್ ಮಹಮ್ಮದ ಮೀರ್‌ಜಾನ ಮಕ್ಕಳ ಆಗಮನ :

ಅದೇ ದಿನಗಳಲ್ಲಿ ಸುಲ್ತಾನ್ ಮಹಮ್ಮದ್ ಮೀರ್‌ಜಾ ಆರು ಜನ ಗಂಡು ಮಕ್ಕಳಾದ – ೧) ಮಹಮ್ಮದ್ ಹುಸೇನ್ ೨) ಮೀರ್‌ಜಾ ಅಲಖ್ ೩) ಮೀರ್‌ಜಾ ಹುಸೇನ್ ೪) ಮೀರ್‌ಜಾ ಮಸೂದ್ ೫) ಹುಸೇನ್ ಮೀರ್‌ಜಾ ೬) ಶಾಹ್‌ಮೀಜಾ ಇವರುಗಳು ಮೊಗಲ ಬಾದಶಹ ಅಕ್ಬರನ ಹೆದರಿಕೆಯಿಂದ ಓಡಿ ಬಂದು ಸಂಬಲದಿಂದ ಮಾಳವದಲ್ಲಿ ಆಶ್ರಯವನ್ನು ಪಡೆದರು. ಹಿಜರಿ ೯೭೫ರಲ್ಲಿ ಅಕ್ಬರನ ಸೈನ್ಯವು ಮಾಳವಕ್ಕೆ ಬಂದಿತು. ಮೇಲಿನ ಆರೂ ಜನ ಸಹೋದರರು ಚಿಂತಿತರಾಗಿ ಚಂಗೇಸ್‌ಖಾನನ ಹತ್ತಿರ ಹೋಗಿ ಆತನಿಂದ ಆಶ್ರಯವನ್ನು ಕೋರಿದರು.

ಕಸಬಾ ಬರೋದ್ರದ ಮೇಲೆ ಚಂಗೇಸನ ಹಿಡಿತ :

ಚಂಗೇಸಖಾನನು ಈ ರಾಜಕುಮಾರರ ಆಗಮನವನ್ನು ತನ್ನ ಸೌಭಾಗ್ಯವೆಂದೇ ತಿಳಿದ. ಅವರ ಆಗಮನವು ನನ್ನ ಶಕ್ತಿಯ ವೃದ್ಧಿಯೆಂದು ತಿಳಿದು ಆತನು ಅವರನ್ನು ಸುಲ್ತಾನ್ ಮುಜಾಫ್ಫರನ ಅಮೀರರಲ್ಲಿ ಸೇರಿಸಿದ. ಅವನು ತನ್ನ ಜಾಗೀರಿಯ ಕೆಲವು ಜಿಲ್ಲೆಗಳನ್ನು ಅವರಿಗೆ ನೀಡಿದನು. ಅದೇ ವರ್ಷ ಚಂಗೇಸಖಾನನು ಆರು ರಾಜಕುಮಾರರ ನೆರವಿನೊಂದಿಗೆ ಏತಮಾದಖಾನನ ಮೇಲೆ ಆಕ್ರಮಣವನ್ನು ಮಾಡಿದನು. ಯುದ್ಧವಿಲ್ಲದೆಯೇ ಕಸಬಾ ಬರೋದ್ರಾವನ್ನು ವಶಪಡಿಸಿಕೊಂಡನು.

ಏತಮಾದನ ಹೆಸರಿಗೆ ಚಂಗೇಸಖಾನನ ಸಂದೇಶ :

ಇದಾದ ನಂತರ ಚಂಗೇಸಖಾನನು ಮಹಮೂದಾಬಾದಿಗೆ ಬಂದನು. ಇಲ್ಲಿಂದ ಏತಮಾದನಿಗೆ ಒಂದು ಸದೇಶವನ್ನು ಕಳುಹಿಸಿದ. ಜಗತ್ತೆಲ್ಲ ಚೆನ್ನಾಗಿ ಅರಿತಿದ್ದೇನೆಂದರೆ– ನನ್ನ ಥಾನೇಶ್ವರದ ಸೋಲು ನಿನ್ನ ಕಾರಣದಿಂದಾಗಿತ್ತು ಎಂಬುದು. ಒಂದು ವೇಳೆ ನಿನ್ನ ಸೈನ್ಯವನ್ನು ನನ್ನ ಸಹಾಯಕ್ಕೆ ಕಳುಹಿಸುತ್ತಿದ್ದರೆ ನಾನು ಯುದ್ಧ ಮೈದಾನದಿಂದ ಓಡಿ ಹೋಗುತ್ತಿರಲಿಲ್ಲ. ನಾನು ಹೇಡಿ ಎಂಬ ಹೆಸರಿನಿಂದ ಮುಕ್ತನಾಗಿರುತ್ತಿದ್ದೆ. ನಾನು ಈಗ ಬಾದಶಹನಿಗೆ ಶುಭಾಶಯಗಳನ್ನು ತಿಳಿಸಲು ಅಹಮದಾಬಾದಿಗೆ ಬರಲು ಇಚ್ಛಿಸುತ್ತಿದ್ದೆನೆ. ಈ ಸಂದರ್ಭದಲ್ಲಿ ನೀನು ನಗರದಲ್ಲಿದ್ದರೆ ಶತ್ರುತ್ವವು ಹೆಚ್ಚಾಗಬಹುದು. ಆದ್ದರಿಂದ ನೀನು ನಗರವನ್ನು ಬಿಟ್ಟು ಹೊರಗೆ ಹೋಗಿರು. ಬೇರೆ ಅಮೀರರಂತೆ ನೀನು ನಿನ್ನ ಜಾಗೀರಿಯಲ್ಲಿ ಹೋಗಿ ನೆಲೆಸಿರು. ಯಾವಾಗಲೂ ಬಾದಶಹನ ರಕ್ಷಣೆಯಲ್ಲಿರುವುದು ನಿನಗೆ ತರವಲ್ಲ. ಆತನನ್ನು ಸ್ವತಂತ್ರಗೊಳಿಸು ಆತನು ರಾಜ್ಯದ ಕಾರಬಾರಗಳನ್ನು ಸ್ವತಂತ್ರವಾಗಿ ಅರಿಯಲು ಪ್ರಯತ್ನಿಸಲಿ. ಎಂದು ಸಂದೇಶವನ್ನು ಕಳುಹಿಸಿದನು.

ಏತಮಾದಖಾನನ ಸಿದ್ಧತೆ :

ಏತಮಾದಖಾನನು ಚಂಗೇಸಖಾನನ ಸಂದೇಶವು ಬರುವುದಕ್ಕೆ ಮುಂಚೆಯೇ ತನ್ನ ಸೈನ್ಯವನ್ನು ಸಂಗ್ರಹಿಸಿಕೊಂಡಿದ್ದನು. ಈ ಸಂದೇಶ ತಲುಪಿದ ತಕ್ಷಣ ಆ ಸಂದೇಶದ ಹಿಂದೆ ಇರುವ ಅಭಿಪ್ರಾಯವನ್ನು ಅರಿತುಕೊಂಡನು. ಏತಮಾದನು ಸುಲ್ತಾನ್ ಮುಜಾಫ್ಫರನನ್ನು ಛತ್ರ ಚಾಮರಗಳೊಂದಿಗೆ ನಗರದ ಹೊರಗೆ ಕರೆತಂದನು. ಅವನ ಜೊತೆಯಲ್ಲಿ ಸಾದಾತ್‌ಖಾನ್ ಬುಖಾರಿ, ಇಖ್ತಿಯಾರುಲ್‌ಮುಲ್ಕ, ಮಲಿಕ್‌ಶರೀಫ್, ಅಲಖ್‌ಖಾನ, ಜಹಾಜಖಾನ್, ಸೈಫುಲಮುಲ್ಕ ಮುಂತಾದ ಹಿರಿಯ ಅಮೀರರೆಲ್ಲರೂ ಇದ್ದರು.

ಶತ್ರುವಿನೊಂದಿಗೆ ಆಕ್ರಮಣ ಮತ್ತು ಏತಮಾದನ ಪರಾರಿ :

ಮಹಮ್ಮದಾಬಾದಿನಿಂದ ಆರು ಮೈಲಿ ದೂರದ ಒಂದು ಹಳ್ಳಿ ಕಾವೇರಿ ಎಂಬಲ್ಲಿ ಎರಡೂ ಸೈನ್ಯಗಳೂ ಎದುರಾದವು. ಏತಮಾದಖಾನನು ಚಂಗೇಸಖಾನನ ಸೈನ್ಯವನ್ನು ನೋಡುತ್ತಲೆ ಆತನ ಹೃದಯವು ನಡುಗಲಾರಂಭಿಸಿತು. ಏತಮಾದನಿಗೆ ಮೀರ್‌ಜಾ ರಾಜಕುಮಾರರ ಶೌರ್ಯದ ಬಗ್ಗೆ ಅರಿವಿತ್ತು. ಇದರಿಂದಾಗಿ ಚಂಗೇಸಖಾನನೊಡನೆ ಯುದ್ಧವಾಡಲು ಧೈರ್ಯ ಬರಲಿಲ್ಲ. ಯುದ್ಧ ಪ್ರಾರಂಭ ಆಗುವುದಕ್ಕೆ ಮೊದಲೇ ಬೆದರಿ ಏತಮಾದನು ಡೋಂಗರ್‌ಪುರದತ್ತ ಓಡಿದನು.

ಸುಲ್ತಾನ್ ಮುಜಾಫ್ಫರನು ಅಹಮದಾಬಾದಿಗೆ ವಾಪಸ್ :

ಬೇರೆ ಅಮೀರರು ಏತಮಾದನು ಓಡಿದ ಕಡೆಗೆ ಓಡಿದರು. ಸಾದಾತ್‌ಖಾನ ಬುಖಾರಿಯು ದಂದೂಖ, ಇಖ್ತಿಯಾರ್‌ಉಲ್‌ಮುಲ್ಕನು ಮಾಮೂರಾಬಾದ್‌ನ ಕಡೆ ಓಡಿದರು. ಅಲಖ್‌ಖಾನ, ಜಹಾಜಖಾನ ಮತ್ತು ಇತರೆ ಅಮೀರರು ಸುಲ್ತಾನ್ ಮುಜಾಫ್ಫರಶಾಹನನ್ನು ತಮ್ಮ ಜೊತೆಯಲ್ಲಿ ಕರೆದುಕೊಂಡು ಪ್ರಯಾಣವನ್ನು ಬೇಗ ಬೇಗ ಮಾಡಲಾರಂಭಿಸಿದರು. ಅಲ್ಲಿಂದ ಅಹಮದಾಬಾದಿಗೆ ಬಂದು ಸೇರಿದರು.

ಚಂಗೇಸಖಾನನು ಅಹಮದಾಬಾದಿನಲ್ಲಿ :

ಚಂಗೇಸಖಾನನು ತನ್ನ ಅಕಸ್ಮಾತ ವಿಜಯದಿಂದ ಬಹಳ ಸಂತೋಷಪಟ್ಟನು. ಆತನು ಅಂದು ಮೇವಾತ್‌ನಲ್ಲಿ ತಂಗಿದನು. ಇದಾದ ನಂತರ ಚಂಗೇಸಖಾನನು ಅಹಮದಾಬಾದಿಗೆ ಬಂದನು. ಅಲ್ಲಿ ಏತಮಾದಖಾನನ ಮನೆಯಲ್ಲಿಯೇ ಇಳಿದುಕೊಂಡನು. ಶೇರ್‌ಖಾನ್ ಫೌಲಾದಿಗೆ ಈ ವಿಷಯ ಗೊತ್ತಾದಾಗ ಆತನು ಆಗ ಕಸಬಾ ಕರಿ ಎಂಬ ಹಳ್ಳಿ ಸುತ್ತಮುತ್ತಲೇ ಇದ್ದ ಆತನು ಅಲ್ಲಿಂದಲೇ ಚಂಗೇಸ್‌ಖಾನನಿಗೊಂದು ಸಂದೇಶವನ್ನು ಕಳುಹಿಸಿದನು. ನೀನು ಏತಮಾದನ ಜಾಗೀರಿಯ ಮೇಲೆ ಆಕ್ರಮಣವನ್ನು ಮಾಡಿ ಅದನ್ನು ವಶಪಡಿಸಿಕೊಂಡಿದ್ದೀಯೆ ಇದು ಸರಿಯಲ್ಲ. ಈ ಜಾಗೀರಿಯು ಬಾದಶಹನ ಖರ್ಚುವೆಚ್ಚಕ್ಕೆ ಬಿಟ್ಟಿರುವುದು. ಇದು ತುಂಬಾ ಅನ್ಯಾಯದ ಆಕ್ರಮಣವಾಗಿದೆ. ಶೇರ್‌ಖಾನ ಫೌಲಾದಿಯು ಬಹಳ ದೊಡ್ಡ ಸೈನ್ಯದೊಡನೆ ಅಹಮದಾಬಾದಿನತ್ತ ಬಂದನು.

ಚಂಗೇಸಖಾನ್ ಮತ್ತು ಫೌಲಾದಿಯವರಲ್ಲಿ ಸಂಧಿ :

ಚಂಗೇಸಖಾನನು ಈ ಪರಿಸ್ಥಿತಿಯಲ್ಲಿ ಶೇರ್‌ಖಾನನೊಡನೆ ಶತ್ರುತ್ವವನ್ನು ಕಟ್ಟಿಕೊಳ್ಳಲು ಸಿದ್ಧನಿರಲಿಲ್ಲ. ಆದ್ದರಿಂದ ಆತನು ಶೇರ್‌ಖಾನನೊಡನೆ ಸಂಧಿಯ ಮಾತುಗಳನ್ನಾಡಲು ಮುಂದೆ ಬಂದನು. ಇಬ್ಬರಲ್ಲೂ ತೀರ್ಮಾನವಾದುದೆಂದರೆ ಸಾಬರ್‌ಮತಿ ನದಿಯ ಆಚೆಗಿರುವ ಎಲ್ಲಾ ಪ್ರದೇಶಗಳನ್ನು ಶೇರ್‌ಖಾನನ

ವಶದಲ್ಲಿರಬೇಕೆಂದು ಉಳಿದ ಭಾಗಗಳು ಚಂಗೇಸಖಾನನಿಗೆ ಸೇರಬೇಕೆಂದು ತೀರ್ಮಾನಿಸಲಾಯಿತು. ಇದರಿಂದಾಗಿ ಅಹಮ್ಮದಾಬಾದಿನ ಸುತ್ತ ಇದ್ದ ಅನೇಕ ಹಳ್ಳಿಗಳಾದ ಉಸ್ಮಾನ್‌ಪುರ ಮತ್ತು ಖಾನ್‌ಪುರ ಮುಂತಾದವುಗಳು ಶೇರ್‌ಖಾನನ ವಶಕ್ಕೆ ಬಂದವು.

ಮೀರಾನ್ ಮಹಮ್ಮದಶಾಹನ ಆಕ್ರಮಣ ಗುಜರಾತಿನ ಮೇಲೆ :

ಮೀರಾನ್ ಮಹಮ್ಮದಶಾಹ ಬಿನ್ ಮೀರಾನ್ ಮುಬಾರಕಶಾಹನು ತನ್ನ ಮೊದಲ ವಿಜಯದ ಕಾರಣದಿಂದ ತಾನು ಬಹಳ ಶೂರನು ಎಂದು ತಿಳಿದುಕೊಂಡನು. ಗುಜರಾತಿ ಅಮೀರರೆಲ್ಲರೂ ಅಂತಃಕಲಹಗಳಲ್ಲಿ ತೊಡಗಿರುವುದನ್ನು ನೋಡಿ ಗುಜರಾತನ್ನು ಗೆಲ್ಲುವ ಹುಮ್ಮಸ್ಸಿನಲ್ಲಿದ್ದನು. ಈ ಉದ್ದೇಶದಿಂದ ಸೈನ್ಯವನ್ನು ತೆಗೆದುಕೊಂಡು ಹೊರಟನು. ಆತನು ಅಹಮದಾಬಾದಿನವರೆಗೂ ಎಲ್ಲೂ ನಿಲ್ಲದೆ ತಡಮಾಡದಂತೆ ಮುಂದುವರಿದನು.

ಮೀರಾನ್‌ಮಹಮ್ಮದ್‌ಶಾಹನ ಸೋಲು :

ಚಂಗೇಸಖಾನನಿಗೆ ಮೀರಾನ್‌ನ ಆಕ್ರಮಣದ ಸುದ್ದಿ ತಿಳಿದ ತಕ್ಷಣ ಆತನು ಯುದ್ಧ ಸಿದ್ಧತೆಯಲ್ಲಿ ತೊಡಗಿದನು. ಚಂಗೇಸನು ಮೀರ್‌ಜಾ ಸಹೋದರರನ್ನು ಬಹಳವಾಗಿ ಗೌರವಿಸುತ್ತಿದ್ದ. ಅವರನ್ನು ತನ್ನ ಜೊತೆಯಲ್ಲಿ ತೆಗೆದುಕೊಂಡು ನಗರದ ಹೊರಗೆ ಬಂದನು. ಇಬ್ಬರಲ್ಲೂ ಯುದ್ಧವಾಯಿತು. ಮೀರಾನ್ ಮಹಮ್ಮದಶಾಹನ ಸೋಲುಂಟಾಯಿತು. ಆತನ ಅಪಾರ ಸಾಮಾನುಗಳು ಚಂಗೇಸಖಾನನಿಗೆ ದೊರೆತವು. ಮಹಮ್ಮದಶಾಹನು ಯುದ್ಧ ಮೈದಾನದಿಂದ ಓಡಿದನು.

ಮೀರ್‌ಜಾ ಸಹೋದರರಿಗೆ ಬಹುಮಾನ :

ಈ ಗೆಲುವಿನ ಕೀರ್ತಿ ಮೀರ್‌ಜಾ ಸಹೋದರರ ತಲೆಗೆ ಕಟ್ಟಲಾಗಿತ್ತು. ಇದರಿಂದ ಸಂತುಷ್ಟನಾದ ಚಂಗೇಸಖಾನನು ಅವರನ್ನು ಬಹಳವಾಗಿ ಸನ್ಮಾನಿಸಿ ಮಾಮೂರಾಬಾದ ಮತ್ತು ಭರೋಜನ ಕೆಲವು ಫರಗಣ ಜಿಲ್ಲೆಗಳನ್ನು ಕೊಟ್ಟು ಅವರನ್ನು ಅವರವರ ಜಾಗೀರಿಗಳಿಗೆ ಕಳುಹಿಸಿದನು.

ಮೀರ್‌ಜಾಗಳ ಹೆಜ್ಜೆ :

ತಮ್ಮ ತಮ್ಮ ಜಾಗೀರಿಗಳಿಗೆ ಮೀರ್‌ಜಾಗಳು ಬಂದಾಗ ಇವರ ಬಳಿ ಕುಡುಕರು, ಪಿತೂರಿಗಾರರು, ಬಂದು ಸೇರಿಕೊಂಡರು. ಷರ್ಫುದ್ದೀನ್‌ಹುಸೇನ್ ಮಿರ್ಜಾನು ಖ್ವಾಜಾ ಅಬ್ದುಲ್ಲಾ ಏಹ್ರಾರಿಯ ವಂಶಸ್ಥನಾಗಿದ್ದನು. ಮತ್ತು ನಸೀರುದ್ದೀನನು ಹುಮಾಯುನನ ಅಳಿಯನಾಗಿದ್ದವರು, ಅಕ್ಬರಬಾದಶಹನ ಜೊತೆಯನ್ನು ಬಿಟ್ಟು, ಮೀರ್‌ಜಾ ಸಹೋದರರ

ಸ್ನೇಹವನ್ನು ಬೆಳೆಸಿದರು. ಇವರ ಸ್ನೇಹದಿಂದಾಗಿ ಮಿರ್ಜಾ ಸಹೋದರರ ಖರ್ಚುವೆಚ್ಚಗಳು ಹೆಚ್ಚಾದುವು. ಇವರ ಜಾಗೀರಿಗಳಿಂದ ಬರುತ್ತಿದ್ದ ಆದಾಯವು ಇವರ ಖರ್ಚಿಗೆ ಸಾಲದಾಗುತ್ತಿತ್ತು. ಇದರಿಂದಾಗಿ ಮಿರ್‌ಜಾಗಳು ಚಂಗೇಸಖಾನನಿಗೆ ತಿಳಿಸದೇ ಬಹಳ ಪರಗಣಗಳನ್ನು ವಶಪಡಿಸಿಕೊಂಡರು.

ಚಂಗೇಸಖಾನನು ಮೀರ್‌ಜಾಗಳ ಮೇಲೆ ಯುದ್ಧ ಮಾಡಿದನು :

ಚಂಗೇಸಖಾನನಿಗೆ ಮೀರ್‌ಜಾಗಳ ಈ ಅತಿಕ್ರಮಣದ ಸುದ್ದಿ ತಿಳಿದು ಆತನ ಮನಸ್ಸಿಗೆ ತುಂಬಾ ಬೇಸರವಾಯಿತು. ಆತನು ಯೋಚಿಸಿದ್ದೇನೆಂದರೆ–ಈಗ ನಾನು ಅವರನ್ನು ಬಗ್ಗಿಸದಿದ್ದರೆ ಕ್ರಮೇಣ ಅವರು ಬಲಿಷ್ಠರಾಗಿ ಬಿಡುವರು. ಹೀಗೆ ಯೋಚಿಸಿ ಆತನು ಮೂರು ಸಾವಿರ ಹಬರ ಸಿಪಾಯಿಗಳು, ಐದಾರು ಸಾವಿರ ಗುಜರಾತಿ ಸೈನಿಕರನ್ನು ಮೀರ್‌ಜಾಗಳ ಮೇಲೆ ಯುದ್ಧಕ್ಕೆ ಕಳುಹಿಸಿದನು. ಮೀರ್‌ಜಾಗಳೂ ಯುದ್ಧಕ್ಕಿಳಿದರು. ಮೀರ್‌ಜಾಗಳ ಕೈ ಮೇಲಾಯಿತು. ಅವರು ಚಂಗೇಸಿ ಸೈನಿಕರನ್ನು ಅಪಾರ ಸಂಖ್ಯೆಯಲ್ಲಿ ಕೊಂದರು. ಇನ್ನುಳಿದ ಸೋತ ಸೈನಿಕರು ಓಡಿ ಹೋದರು.

ಗುಜರಾತಿ ಖೈದಿಗಳೊಂದಿಗೆ ವರ್ತನೆ :

ಮೀರ್‌ಜಾಗಳು ಗುಜರಾತಿ ಸಿಪಾಯಿಗಳನ್ನು ಸೆರೆಹಿಡಿದು ಈ ಖೈದಿಗಳಲ್ಲಿ ಇನ್ನೂ ಚಿಕ್ಕವರಾಗಿದ್ದವರನ್ನು ತಮ್ಮ ಗುಲಾಮರನ್ನಾಗಿ ಇಟ್ಟುಕೊಂಡರು. ಉಳಿದ ವಯಸ್ಸಾದ ಖೈದಿಗಳನ್ನು ಚಿತ್ರಹಿಂಸೆಗೆ ಗುರಿಪಡಿಸಿದರು.

ಮೀರ್‌ಜಾ ರಾಜಕುಮಾರರು ಮಾಳವ ಮತ್ತು ಬುರ್ಹಾನ್‌ಪುರದಲ್ಲಿ :

ಮೀರ್‌ಜಾಗಳಿಗೆ ಚೆನ್ನಾಗಿ ತಿಳಿದುದ್ದೇನೆಂದರೆ ನಮ್ಮ ಸೈನಿಕರ ವಿಷಯ ಚಂಗೇಸಖಾನನಿಗೆ ತಿಳಿದರೆ ಆತನು ನಮ್ಮ ಮೇಲೆ ಯುದ್ಧಕ್ಕೆ ಬಂದು ಬಿಡುತ್ತಾನೆಂದು ಈ ಕಾರಣದಿಂದಾಗಿ ಅವರು ಬುರ್ಹಾನಪುರದತ್ತ ಹೊರಟರು. ರಾಜ್ಯದಲ್ಲಿ ಪಿತೂರಿ, ಗಲಭೆ, ಲೂಟಿಗಳನ್ನು ಪ್ರಾರಂಭಿಸಿದರು. ನಂತರ ಮಾಳವಕ್ಕೆ ಬಂದರು. ಈ ಪ್ರದೇಶದಲ್ಲಿ ಘಟಿಸಿದ ಎಲ್ಲ ಘಟನೆಗಳ ಪೂರ್ಣ ವಿವರವನ್ನು ಮೊಗಲಬಾದಶಹ ಅಕ್ಬರನ ಚರಿತ್ರೆಯಲ್ಲಿ ವರ್ಣಿಸಲಾಗಿದೆ.

ಸುಲ್ತಾನ್ ಮುಜಾಫ್ಫರನು ಡೋಂಗರ್‌ಪುರದಲ್ಲಿ :

ಅಲಖ್‌ಖಾನ ಮತ್ತು ಜಹಾಜಖಾನ ಮುಂತಾದವರು ಸುಲ್ತಾನ್ ಮುಜಾಫ್ಫರನೊಡನೆ ಮಹಂದರಿ ನದಿಯ ಕಸಬಾ ಬಂದರಲ್ಲಿ ಬಂದಿಳಿದರು. ಏತಮಾದನು ಇತ್ತ ಬರಬಹುದೆಂದು ನಂಬಿದ್ದರು. ಶೇರ್‌ಖಾನ ಫೌಲಾದಿ ತನ್ನ ಮಗನನ್ನು ಕಳುಹಿಸಿ ಬಾದಶಹನನ್ನು ಕರೆಯಿಸಿಕೊಳ್ಳಬಹುದೆಂಬ ವಿಚಾರವಿತ್ತು.

ಅವರಿಬ್ಬರಲ್ಲಿ ಯಾರೂ ಅಲ್ಲಿಗೆ ಬರದಿದ್ದಾಗ ಇಲ್ಲಿ ಬಹಳ ಹೊತ್ತು ನಿಲ್ಲುವುದು ಸರಿಯಲ್ಲವೆಂದು ಬಗೆದು, ಆ ಅಮೀರರೆಲ್ಲರೂ ಬಾದಶಹನನ್ನು ಕರೆದುಕೊಂಡು ಡೋಂಗರ್‌ಪುರಕ್ಕೆ ಬಂದು ಬಾದಶಹನನ್ನು ಏತಮಾದಖಾನನ ವಶಕ್ಕೆ ಬಿಟ್ಟರು.

ಏತಮಾದಖಾನನೊಂದಿಗೆ ಹಬಶಿ ಅಮೀರರ ಸಿಟ್ಟು :

ಈ ಘಟನೆಯ ನಂತರದ ಕೆಲವು ದಿನಗಳಲ್ಲಿ ಅಲಖ್‌ಖಾನನು ಏತಮಾದಖಾನನಿಂದ ಸೈನ್ಯದ ಖರ್ಚಿಗೆಂದು ಹಣವನ್ನು ಕೇಳಿದನು. ಇದಕ್ಕೆ ಉತ್ತರವಾಗಿ– ಹಣ ಜಾಗೀರಿಗಳಿಂದ ಸಿಗುತ್ತಿತ್ತು. ಈಗ ಆ ಪ್ರಶ್ನೆಯೇ ಇಲ್ಲ. ನಾನು ನಿಮಗೆ ಯಾರಿಂದಲಾದರೂ ಸಾಲಪಡೆದು ಕೊಡೋಣವೆಂದರೆ ಇಲ್ಲಿ ಯಾರೂ ಅಂತಹ ವ್ಯಕ್ತಿ ಇಲ್ಲ. ಆದ್ದರಿಂದ ನಾನು ಈಗ ವಿವಶನಾಗಿರುತ್ತೇನೆ ಎಂದನು. ಈ ಉತ್ತರವನ್ನು ಕೇಳಿದ ಎಲ್ಲಾ ಹಬಷಿ ಅಮೀರರು ಮತ್ತು ಅಲಖ್‌ಖಾನನು ತುಂಬಾ ನಿರಾಶರಾದರು.

ಹಬಶಿ ಅಮೀರರು ಅಹಮದಾಬಾದಿಗೆ ಪ್ರಯಾಣ :

ಚಂಗೇಸ್‌ಖಾನನಿಗೆ ಈ ವಿಚಾರಗಳೆಲ್ಲವೂ ತಿಳಿದವು. ಆತನು ಅಲಖ್‌ಖಾನ ಮತ್ತು ಇತರೆ ಹಬಶಿ ಅಮೀರರೊಂದಿಗೆ ಸ್ನೇಹವನ್ನು ತೋರುತ್ತಾ ಪತ್ರಗಳನ್ನು ಬರೆದನು. ಹಾಗೂ ಎಲ್ಲರಿಗೂ ತನ್ನ ಬಳಿ ಬರಲು ಆಹ್ವಾನಿಸಿದನು. ಅಲಖಾನ್, ಜಹಾಜಖಾನ, ಮತ್ತು ಸೈಫುಲ್‌ಮುಲ್ಕ್ ಮುಂತಾದವರು ಏತಮಾದನ ಅಪ್ಪಣೆ ಇಲ್ಲದೆಯೇ ಮಾಮೂರಾಬಾದನತ್ತ ರವಾನೆಯಾದರು. ಅಲ್ಲಿ ತಲುಪಿ ಅವರು ಇಖ್ತಿಯಾರುಲ್‌ಮುಲ್ಕ್ ಗುಜರಾತಿಯೊಂದಿಗೆ ಭೇಟಿಯಾದರು. ಆತನನ್ನು ಜೊತೆಯಲ್ಲಿ ಕರೆದುಕೊಂಡು ಅಹಮದಾಬಾದಿನತ್ತ ಹೊರಟರು. ಅಹಮದಾಬಾದಿನ ಹತ್ತಿರ ನೀರಿನ ಕೊಳದ ಹತ್ತಿರ ತೋಟದಲ್ಲಿ ಬಟ್ಟೆಗಳನ್ನು ಬದಲಾಯಿಸಲು ಪ್ರವೇಶಿಸಿದರು.

ಸ್ವಾಗತ :

ಚಂಗೇಸಖಾನನು ಇವರೆಲ್ಲರನ್ನೂ ಸ್ವಾಗತಿಸಲು ಅಲ್ಲಿಗೆ ಬಂದನು. ಅವರೆಲ್ಲರನ್ನೂ ಬೇಟಿಮಾಡಿ ಬಹಳ ಪ್ರೇಮದಿಂದ ಅವರನ್ನು ಮಾತನಾಡಿಸಿದನು. ನಿಮಗೆ ಈಗ ಒದಗಿರುವ ಸ್ಥಿತಿ ಎಲ್ಲರಿಗೂ ಬರುವಂತಹದ್ದಾಗಿದೆ. ನಾವೆಲ್ಲರೂ ಸುಲ್ತಾನ್ ಮಹಮ್ಮದಸಾನಿಯವರ ಅರಮನೆಯ ಗುಲಾಮರಾಗಿದ್ದೇವೆ. ಆದ್ದರಿಂದ ನಾವೆಲ್ಲರೂ ತಮ್ಮ ತಮ್ಮಲ್ಲಿ ಆಳವಾದ ಸಂಬಂಧವನ್ನಿಟ್ಟುಕೊಂಡವರಾಗಿದ್ದೇವೆ. ಒಂದು ನಮ್ಮಲ್ಲಿ ಯಾರಿಗಾದರು ಆಡಳಿತಾಧಿಕಾರವು ಸಿಕ್ಕಿದರೆ ಆಗಲೂ ನಮ್ಮ ಸಂಬಂಧಕ್ಕೆ ಧಕ್ಕೆ ಇರುವುದಿಲ್ಲ. ನಾವು ನಮ್ಮಲ್ಲಿ ಯಾರನ್ನಾದರೂ ಕಾಣಲು ಹೋದರೆ, ಯಾವ ಅಡ್ಡಿಯೂ ಇರಲಾರದು.

ಅಲಖ್‌ಖಾನ ಮತ್ತು ಜಹಾಜ್‌ಖಾನರ ಕೊಲೆಗೆ ಪಿತೂರಿ :

ಇದಾದ ನಂತರ ಚಂಗೇಸಖಾನನು ಎಲ್ಲ ಅಮೀರರನ್ನು ತನ್ನ ಜೊತೆಯಲ್ಲಿ ಕರೆದುಕೊಂಡು ನಗರದೊಳಕ್ಕೆ ಬಂದು ಕೆಲವು ಮನೆಗಳನ್ನು ಖಾಲಿ ಮಾಡಿಸಿ ಅವರ ವಶಕ್ಕೆ ಬಿಡಿಸಿದನು. ಕೆಲವು ದಿನಗಳ ನಂತರ ಒಬ್ಬ ಗುಪ್ತಚರನು ತಿಳಿಸಿದ್ದೇನೆಂದರೆ ನಾಳೆ ಬೆಳಿಗ್ಗೆ ನಿನ್ನನ್ನು ಮತ್ತು ಜಹಾಜ್‌ಖಾನನನ್ನು ಚೌಗಾನ ಆಟಕ್ಕೆ ಮೈದಾನದಲ್ಲಿ ಕರೆದುಕೊಂಡು ಹೋಗಿ ಜನರು ಬೇರೆ ವಿಚಾರದಲ್ಲಿ ಮುಳುಗಿರುವಾಗ ಕೊಲೆಮಾಡುತ್ತಾನೆ. ಒಂದು ವೇಳೆ ನಾಳೆ ಆತನು ನಿಮ್ಮನ್ನು ತನ್ನ ಜೊತೆಯಲ್ಲಿ ಕಾಡಿನಲ್ಲಿ ಆಡುವ ಆಟಕ್ಕೆ ಕಾಕರಿಯದ ಕೊಳದ ಕಡೆ ಕರೆದುಕೊಂಡು ಹೋದರೆ ಅಷ್ಟೊಂದು ಹೆದರಿಕೆ ನಿಮಗಿರುವುದಿಲ್ಲ. ಆ ಜಾಗದಲ್ಲಿ ಬಹಳ ದೊಡ್ಡ ಕಾಡಿದೆ. ಮನುಷ್ಯ ಅಲ್ಲಿ ಎಲ್ಲಿ ಬೇಕಾದರೂ ಉಳಿದುಕೊಳ್ಳಬಹುದು. ಇಲ್ಲವೆ ನಿಮ್ಮನ್ನೇನಾದರೂ ಭದರ್ ಮೈದಾನದತ್ತ ಕರೆದೊಯ್ದರೆ ಪ್ರಾಣವನ್ನು ಉಳಿಸಿಕೊಳ್ಳುವುದು ಕಷ್ಟ. ಏಕೆಂದರೆ ಆ ಮೈದಾನವು ಕೋಟೆಯ ಒಳಭಾಗದಲ್ಲಿದೆ.

ಚೌಗಾನ್ ಸ್ಪರ್ಧೆಯ ಆಟಕ್ಕೆ ಆಹ್ವಾನ :

ಗುಪ್ತಚರನು ಈ ಸುದ್ಧಿಯನ್ನು ಇನ್ನೂ ಮುಟ್ಟಿಸಿ ಹೋಗಿರಲಿಲ್ಲ. ಅಷ್ಟರಲ್ಲಿ ಅಲಖ್‌ಖಾನನ ಹತ್ತಿರ ಚಂಗೇಸನ ದೂತನು ಬಂದು ಹೇಳಿದ್ದೇನೆಂದರೆ– ಚಂಗೇಸಖಾನರು ನಿಮಗೆ ಸಲಾಂ ಹೇಳಿದ್ದಾರೆ. ಅಷ್ಟೇ ಅಲ್ಲದೆ ನಾನು ನಾಳೆ ಚೌಗಾನ ಸ್ಪರ್ಧೆಗೆ ಬಹದರ್ ಮೈದಾನಕ್ಕೆ ಹೋಗಲಿದ್ದೇನೆ. ತಾವು ಕೂಡ ನನ್ನ ಜೊತೆಯಲ್ಲಿ ಬನ್ನಿ ಈ ಉದ್ದೇಶಕ್ಕೆ ನಾಳೆ ಬೆಳಗಿನ ಜಾವಕ್ಕೆ ನೀವು ನನ್ನ ಹತ್ತಿರ ಬಂದು ತಲುಪಬೇಕೆಂದು ಆಹ್ವಾನಿಸಿದ್ದಾರೆಂದು ಹೇಳಿದನು.

ಹಬಶಿ ಅಮೀರರ ಚರ್ಚೆ :

ಈ ಆಹ್ವಾನವನ್ನು ಕೇಳಿ ಬಹಳ ಚಿಂತೆಯಲ್ಲಿ ಮುಳುಗಿದನು. ಅದೇ ಸಮಯದಲ್ಲಿ ಸೈಫುಲ್‌ಮುಲ್ಕನ ಮನೆಗೆ ಹೋದನು. ಜಹಾಜಖಾನ, ರಷೀದಿಬದರ್‌ಶಾಹಿ, ಮಹಲ್‌ದಾರ್‌ಖಾನ್ ಮತ್ತು ಖುರ್‌ಷೀದ್‌ಖಾನರೆಲ್ಲರಿಗೂ ಅಲ್ಲಿಗೆ ಕರೆಯಿಸಲಾಯಿತು. ಅವರೆಲ್ಲರೂ ಈ ಗಹನವಾದ ವಿಷಯದಲ್ಲಿ ಚರ್ಚಿಸತೊಡಗಿದರು. ಬಹಳವಾಗಿ ಯೋಚಿಸಿದ ನಂತರ ಅವರೆಲ್ಲರೂ ತೀರ್ಮಾನಕ್ಕೆ ಬಂದದ್ದೇನೆಂದರೆ–ಮೊದಲು ಚಂಗೇಸ್‌ಖಾನನು ಕತ್ತಿಯಿಂದ ಹೊಡೆಯಲು ಬಿಡದೆ ನಾವೇ ಕತ್ತಿಯನ್ನು ಬೀಸಿ ಆತನನ್ನೇ ಕಡಿದು ಹಾಕುವುದೆಂದು ಒಮ್ಮತಕ್ಕೆ ಬಂದರು.

ಚಂಗೇಸನ ಕೊಲೆಯ ಪಿತೂರಿ :

ಮಾರನೇ ದಿನ ಬೆಳಗಿನ ಜಾವಕ್ಕೆ ಅಲಖ್‌ಖಾನನು, ಜಹಾಜಖಾನನೂ ತನ್ನ

ಸ್ನೇಹಿತರೊಂದಿಗೆ ಚಂಗೇಸಖಾನನ ದರ್ಬಾರಿಗೆ ಬಂದರು. ಆ ಸಮಯದಲ್ಲಿ ಚಂಗೇಸನ ಸೈನಿಕರು ಇನ್ನೂ ಅಲ್ಲಿಗೆ ಬಂದಿರಲಿಲ್ಲ. ಒಬ್ಬನನ್ನು ಒಳಗೆ ಕಳುಹಿಸಿ ಚಂಗೇಸನ ಆಜ್ಞೆಯಂತೆ ನಾವು ತಮ್ಮಲ್ಲಿಗೆ ಬಂದಿದ್ದೇವೆ ಎಂದು ತಿಳಿಸಲು ಹೇಳಿದರು. ತಾವು ಸಾಧ್ಯವಾದಷ್ಟು ಬೇಗ ಚೌಗಾನ್ ಸ್ಪರ್ಧೆಗೆ ಹೋಗುವುದು ಒಳ್ಳೆಯದು ಎಂದು ಹೇಳಲು ತಿಳಿಸಿದ್ದರು. ಚಂಗೇಸನು ಆ ಸಮಯದಲ್ಲಿಯೂ ಮದ್ಯದ ಅಮಲಿನಲ್ಲಿ ತೇಲಾಡುತ್ತಿದ್ದನು. ಅವನಿಗೆ ಎಚ್ಚರವಿರಲಿಲ್ಲ. ಹಬಷಿ ಅಮೀರರ ಸಂದೇಶ ತಲುಪುತಲೇ ಮನೆಯಿಂದ ಹೊರಬಂದು ಅವರ ಜೊತೆಯಲ್ಲಿ ನಡೆದೇ ಬಿಟ್ಟ.

ಚಂಗೇಸನ ಕೊಲೆ :

ಅಲಖ್‌ಖಾನನು ಚಂಗೇಸಖಾನನ ಬಲ ಭಾಗದಲ್ಲಿದ್ದನು. ಜಹಾಜಖಾನನು ಎಡಭಾಗದಲ್ಲಿದ್ದನು. ಹೀಗೆಯೇ ಇಬ್ಬರೂ ಬಹಳ ದೂರದವರೆಗೆ ನಡೆದರು. ಸ್ವಲ್ಪ ದೂರ ಹೋದ ಮೇಲೆ ಜಹಾಜಖಾನನು ಅಲಖ್‌ಖಾನನ ಸನ್ನೆಯ ಮೇರೆಗೆ ಕತ್ತಿಯನ್ನು ಹಿರಿದು ಚಂಗೇಸಖಾನನ ಮೇಲೆ ಬಲವಾಗಿ ಬೀಸಿದನು. ಚಂಗೇಸ್‌ಖಾನನ ತಲೆ ಮತ್ತು ಒಂದು ಕೈ ಒಂದೇ ಏಟಿಗೆ ಶರೀರದಿಂದ ಬೇರ್ಪಟ್ಟವು.

ಯುದ್ಧ ಸಿದ್ಧತೆಗಳು :

ಇದಾದ ನಂತರ ಈ ಇಬ್ಬರೂ ಅಮೀರರು ತಮ್ಮ ತಮ್ಮ ಮನೆಗಳಿಗೆ ಬಂದು ಸೇರಿದರು. ಹಾಗೂ ಯುದ್ಧಕ್ಕೆ ಸಿದ್ಧತೆಗಳನ್ನು ಮಾಡತೊಡಗಿದರು. ಇಖ್ತಿಯಾರುಲ್‌ಮುಲ್ಕನು ಇವರ ಸಹಾಯಕ್ಕೆ ನಿಂತನು. ಚಂಗೇಸಖಾನನ ತಂಗಿಯ ಮಗನಾದ ರುಸ್ತುಂಖಾನನು ತನ್ನ ಸೈನ್ಯದೊಂದಿಗೆ ನಗರದ ಕಡೆಗೆ ಬರುತ್ತಿದ್ದನು. ದಾರಿಯಲ್ಲಿ ತನ್ನ ಸೋದರ ಮಾವನ ಹೆಣ ಸಿಕ್ಕಿತು. ಆ ಹೆಣವನ್ನು ಒಂದು ಆನೆಯ ಮೇಲೆ ಇಟ್ಟುಕೊಂಡನು. ನಂತರ ಭರೋಚ್ ಕಡೆ ಹೊರಟನು.

ಹಬಶಿ ಅಮೀರರು ಅರ್ಕ ಕೋಟೆಯಲ್ಲಿ :

ನಗರದ ಕುಡುಕರು, ನೀಚ ಮನುಷ್ಯರುಗಳು ಈ ಸಂದರ್ಭವನ್ನು ಬಳಸಿಕೊಂಡು ಚಂಗೇಸಖಾನನ ಮನೆಯನ್ನು ಲೂಟಿ ಮಾಡತೊಡಗಿದರು. ರುಸ್ತುಂಖಾನನು ಭರೋಚನತ್ತ ಹೊರಟಿದ್ದಾನೆಂಬ ಸುದ್ದಿಯನ್ನು ತಿಳಿದ ಹಬಶಿ ಅಮೀರರು ಹಾಗೂ ಅಲಖ್‌ಖಾನ ಮತ್ತು ಜಹಾಜ್‌ಖಾನನು ಅರ್ಕ್ ಎಂಬ ಕೋಟೆಯಲ್ಲಿ ಸೇರಿಕೊಂಡರು. ಅದಕ್ಕೆ ಬಹ್‌ದರ್ ಕೋಟೆಯೆಂದು ಕರೆಯಲಾಗುತ್ತಿತ್ತು.

ಏತಮಾದಖಾನನಿಗೊಂದು ಪತ್ರ :

ಹಬಷಿ ಅಮೀರರು ಏತಮಾದಖಾನನಿಗೆ ಒಂದು ಪತ್ರವನ್ನು ಬರೆದು ಇಲ್ಲಿ

ನಡೆದ ಎಲ್ಲ ವಿಚಾರಗಳನ್ನು ವಿವರವಾಗಿ ತಿಳಿಸಿದರು. ಹಾಗೂ ಅಹಮದಾಬಾದಿಗೆ ಬರಲು ಆಹ್ವಾನಿಸಿದರು. ಅದೇ ದಿನ ಶೇರ್‌ಖಾನ ಫೌಲಾದಿಯ ಮಗ ಬದರ್‌ಖಾನ್ ಮತ್ತು ಮಹಮ್ಮದಖಾನರು ಶುಭಾಶಯಗಳನ್ನು ತಿಳಿಸಲು ನಗರಕ್ಕೆ ಬಂದರು. ಅವರು ಎಲ್ಲ ಅಮೀರರಿಗೂ ಒಂದೊಂದು ಆನೆಯನ್ನು ಬಹುಮಾನವಾಗಿ ಕೊಟ್ಟರು. ಅಲಖ್‌ಖಾನ ಮತ್ತು ಜಹಾಜಖಾನನು ಅದೇ ದಿನ ತಮಗೆ ಬೇಕಾದವರಿಗೆ ಎಲ್ಲ ಜಾಗೀರಿಗಳನ್ನು ಹಂಚಿದರು. ಎಲ್ಲರೂ ತಮ್ಮ ತಮ್ಮ ಮನೆಗಳಿಗೆ ಬಂದರು.

ಬಹದರ್ ಕೋಟೆಯು ಶೇರ್‌ಖಾನನ ವಶ :

ಮಾರನೇದಿನ ಶೇರ್‌ಖಾನ ಫೌಲಾದಿಗೆ ಗುಪ್ತಚರರು ತಿಳಿಸಿದ್ದೆನೆಂದರೆ–ಅಮೀರರ ಯಾವ ನೌಕರನೂ ಬಹದರ್ ಕೋಟೆಯ ರಕ್ಷಣೆಯಲ್ಲಿ ನಿಂತಿಲ್ಲವೆಂದು ಚಂಗೇಸಖಾನನ ಕೊಲೆಯ ಮಾರನೇದಿನ ಶೇರ್‌ಖಾನನು ತನ್ನ ಒಬ್ಬ ಅಮೀರ ಸಾದಾತ್‌ಖಾನ ಎಂಬುವವನ ಅಧೀನದಲ್ಲಿ ಮುನ್ನೂರು ಸಿಪಾಯಿಗಳನ್ನು ಕೊಟ್ಟು ಕಳುಹಿಸಿ ಬಹದರ್ ಕೋಟೆಯನ್ನು ವಶಪಡಿಸಿಕೊಳ್ಳಲು ಆಜ್ಞಾಪಿಸಿದನು. ಸಾದಾತ್‌ಖಾನನು ಖಾನಪುರದ ಕಡೆಯಿಂದ ಕೋಟೆಯ ಗೋಡೆಯನ್ನು ಕೆಡವಿ ವಶಪಡಿಸಿಕೊಂಡನು.

ಸುಲ್ತಾನ್ ಮುಜಾಫ್ಫರ್ ಮತ್ತು ಏತಮಾದಖಾನರು ಅಹಮದಪುರದಲ್ಲಿ :

ಈ ಘಟನೆಗಳ ಕೆಲವು ದಿನಗಳ ನಂತರ ಏತಮಾದಖಾನನು ಸುಲ್ತಾನ್ ಮುಜಾಫ್ಫರನನ್ನು ಕರೆದುಕೊಂಡು ಅಹಮದಾಬಾದಿಗೆ ಬಂದನು. ಬಹದರ್ ಕೋಟೆಯು ಶೇರ್‌ಖಾನ್ ಫೌಲಾದಿಯ ವಶದಲ್ಲಿದ್ದುದರಿಂದ ಬಾದಶಹನನ್ನು ಶೇರ್‌ಖಾನನು ತನ್ನ ಮನೆಯಲ್ಲಿಯೇ ಇಟ್ಟುಕೊಂಡನು. ಮತ್ತು ಕೋಟೆಯನ್ನು ಖಾಲಿ ಮಾಡಿಸಲು ಪ್ರಯತ್ನಿಸಿದನು. ಈ ಸಂದರ್ಭದಲ್ಲಿ ಶೇರ್‌ಖಾನನಿಗೆ ಒಂದು ಪತ್ರವನ್ನು "ಕೋಟೆ ಬಹದರ್ ಬಾದಶಹರುಗಳು ವಾಸಿಸುವದಕ್ಕೆ ಮೀಸಲಾಗಿದೆ. ಬಾದಶಹರು ಇಲ್ಲಿ ಇಲ್ಲದಿದ್ದಾಗ ಅದನ್ನು ರಕ್ಷಿಸುವ ಹೊಣೆ ಅವರ ನೌಕರರಿಗೆ ಸೇರಿದುದಾಗಿದೆ. ಅದರ ಮೇಲೆ ಆಕ್ರಮಣ ಮಾಡಿ ವಶಪಡಿಸಿಕೊಳ್ಳುವುದು ಸರಿಯಾದ ಕ್ರಮವಲ್ಲ. ಈಗ ಸುಲ್ತಾನ್ ಮುಜಾಫ್ಫರಶಾಹನು ನಗರಕ್ಕೆ ಬಂದಿರುತ್ತಾನೆ. ಆದ್ದರಿಂದ ನೀನು ತಕ್ಷಣ ಸಾದಾತ್‌ಖಾನನಿಗೆ ಹೇಳಿ ಕೋಟೆಯನ್ನು ಖಾಲಿ ಮಾಡಿಸು" ಎಂದು ಬರೆದನು.

ಮೀರ್‌ಜಾ ರಾಜಕುಮಾರರು ಭರೋಚ್ ಸೂರತ್ತಿನಲ್ಲಿ :

ಏತಮಾದನ ಮಾತು ಸರಿಯಾಗಿತ್ತು ಎಂದು ತಿಳಿದ ಶೇರ್‌ಖಾನನು ಕೋಟೆಯನ್ನು ಖಾಲಿ ಮಾಡಿಸಿದನು. ಸುಲ್ತಾನ್ ಮುಜಾಫ್ಫರನು ಏತಮಾದನ ಮನೆಯಿಂದ ಹೊರಟು ತನ್ನ ಅರಮನೆಯಲ್ಲಿ ವಾಸಿಸತೊಡಗಿದನು. ಇದೇ ಸಂದರ್ಭದಲ್ಲಿ ಸುದ್ದಿ ತಿಳಿದಿದ್ದೇನೆಂದರೆ – ಮೀರ್‌ಜಾ ರಾಜಕುಮಾರರು ಮಾಳವ ದೇಶದಿಂದ ಓಡಿ

ಬಂದು ಬಿಟ್ಟಿದ್ದಾರೆಂದು, ಅವರಿಗೆ ಚಂಗೇಸ್‌ಖಾನನ ಕೊಲೆ ಸುದ್ದಿ ತಿಳಿದು ಅವರು ಬಹಳ ಸಂತೋಷಪಟ್ಟಿದ್ದಾರೆಂದು ಗೊತ್ತಾಯಿತು. ಈಗ ಆ ಅಮೀರರು ಬರೋಚ್ ಮತ್ತು ಸೂರತನ ಕಡೆ ಆಪ್ರದೇಶಗಳನ್ನು ವಶಪಡಿಸಿಕೊಳ್ಳುವ ಹುನ್ನಾರದಲ್ಲಿದ್ದಾರೆಂದು ತಿಳಿಯಿತು.

ಗುಜರಾತಿ ಅಮೀರರ ಚರ್ಚೆ :

ಇಖ್ತಿಯಾರುಲ್ ಮುಲ್ಕ ಮತ್ತು ಅಲಖ್‌ಖಾನನು ಏತಮಾದನ ಹತ್ತಿರ ಬಂದರು. ಮೀರಜಾ ಸಹೋದರರು ಭರೋಚ್ ಕಡೆ ಬರುತ್ತಿದ್ದಾರೆಂದು ಅಲ್ಲಿ ನಮ್ಮ ಕಡೆಯವರು ಅವರನ್ನು ತಡೆಯುಲು ಯಾರು ಇಲ್ಲವೆಂದು ಅವರು ಭರೋಚ್‌ನ್ನು ವಶಪಡಿಸಿಕೊಳ್ಳುವುದು ಖಚಿತವೆಂದು ಹೇಳಿದರು. ಈ ಪಿತೂರಿಯನ್ನು ತಡೆಯುವ ಒಂದೇ ಮಾರ್ಗವೆಂದರೆ, ನಾವು ಅಲ್ಲಿಗೆ ಬೇಗ ತಲುಪಬೇಕಾಗಿದೆ. ಮೀರಜಾ ಸಹೋದರರನ್ನು ಅಲ್ಲಿಂದ ಓಡಿಸದಿದ್ದರೆ ಅವರೇನಾದರೂ ಭರೋಚನ್ನು ವಶಪಡಿಸಿಕೊಂಡರೆ ನಾವು ಅವರನ್ನು ಅಲ್ಲಿಂದ ಖಾಲಿ ಮಾಡಿಸಲು ಬಹಳ ಕಷ್ಟ ಪಡಬೇಕಾದೀತು. ಎಂದು ವಿಚಾರ ವಿಮರ್ಶೆಯನ್ನು ಮಾಡಿಕೊಂಡರು.

ಭರೋಚ್‌ನತ್ತ ಹೋಗುವ ಸಮಸ್ಯೆ :

ಏತಮಾದಖಾನನು ಒಬ್ಬ ದೂತನನ್ನು ಶೇರ್‌ಖಾನನ ಬಳಿಗೆ ಕಳುಹಿಸಿ ಭರೋಚ್‌ನ ವಿಷಯದಲ್ಲಿ ಆತನ ಅಭಿಪ್ರಾಯವೇನೆಂದು ತಿಳಿಯಲು ಪ್ರಯತ್ನಿಸಿದನು. ಅದಕ್ಕೆ ಶೇರ್‌ಖಾನನು ಭರೋಚ್‌ನತ್ತ ಪ್ರಯಾಣವನ್ನು ಬೆಳೆಸುವುದು ಸೂಕ್ತವೆಂದು ತನ್ನ ಅಭಿಪ್ರಾಯವನ್ನು ತಿಳಿಸಿದನು. ಇದಾದ ನಂತರ ಅಮೀರರೆಲ್ಲರೂ ಒಟ್ಟಿಗೆ ಸೇರಿ ಪ್ರಯಾಣದ ಬಗ್ಗೆ ತೀರ್ಮಾನಿಸಿಕೊಂಡರು.

ಸೈನ್ಯ ರವಾನೆಯ ಕ್ರಮದ ಬಗ್ಗೆ ತೀರ್ಮಾನ :

ಎಲ್ಲರೂ ಸೈನ್ಯವನ್ನು ಮೂರು ಭಾಗಗಳಾಗಿ ವಿಂಗಡಿಕೊಳ್ಳಬೇಕೆಂದು ತೀರ್ಮಾನಿಸಿಕೊಂಡರು. ಮೊದಲನೆ ಭಾಗವು ಅಲಖ್‌ಖಾನ ಮತ್ತು ಹಬಶಿ ಅಮೀರರ ಅಧೀನದಲ್ಲಿರಬೇಕೆಂದು ಈ ಭಾಗ ಮೊದಲು ಹೊರಡಬೇಕು. ಎರಡನೇ ಭಾಗವು ಏತ್‌ಮಾದಖಾನ ಇಖ್ತಿಯಾರುಲ್‌ಮುಲ್ಕ ಮತ್ತು ಇತರೆ ಅಮೀರರ ಅಧೀನದಲ್ಲಿರಬೇಕೆಂದು ಮತ್ತು ಮೂರನೇ ಭಾಗವು ಶೇರ್‌ಖಾನ ಮತ್ತು ಇತರೆ ಅಮೀರರ ಅಧೀನದಲ್ಲಿರಬೇಕೆಂದು ತೀರ್ಮಾನಿಸಿಕೊಂಡರು. ಮೊದಲನೆಯ ಭಾಗವು ಒಂದು ಮಜಲು ಪ್ರಯಾಣಿಸಿದ ನಂತರ ಎರಡನೇ ಮಜಲು ಹೊರಡಬೇಕು. ಇದೇ ರೀತಿ ಎರಡನೇ ಭಾಗ ಪ್ರಯಾಣಿಸಿದ ನಂತರ ಮೂರನೇ ಭಾಗ ಹೊರಡಬೇಕು.

ಹಬಶಿ ಅಮೀರರ ಪ್ರಯಾಣ :

ಇವೆಲ್ಲಾ ಕ್ರಮಗಳ ಚರ್ಚೆ ಮತ್ತು ತೀರ್ಮಾನಗಳ ನಂತರ ಹಬಶಿ ಅಮೀರರು, ಅಲಖ್‌ಖಾನ್, ಸೈಫುಲಮುಲ್ಕ್ ಮತ್ತು ಜಹಾಜ್‌ಖಾನ್ ಮತ್ತಿತರರು ಪ್ರಯಾಣವನ್ನು ಬೆಳೆಸಿದರು. ಪ್ರಯಾಣದ ಮಜಲುಗಳನ್ನು ಪಾರು ಮಾಡುತ್ತಾ ಮಹಮೂದಾಬಾದಿಗೆ ತಲುಪಿದರು. ಕರಾರಿನಂತೆ ಏತಮಾದ್‌ಖಾನನು ಸಹ ತನ್ನ ಸೈನ್ಯವನ್ನೆತ್ತಿ ನಗರದಿಂದ ಆಚೆ ಹೊರಟನು. ಆದರೆ ಸ್ವಲ್ಪ ದೂರ ಹೋದ ಮೇಲೆ ಆತನ ನಿಯತ್ತು ಬದಲಾಯಿತು. ಮುಂದುವರಿಯುವ ಮನಸ್ಸನ್ನು ಸಡಿಲಗೊಳಿಸಿದ.

ಏತಮಾದಖಾನನ ಅಸಭ್ಯ ವರ್ತನೆ :

ಅಲಖ್‌ಖಾನ ಮತ್ತು ಆತನ ಸ್ನೇಹಿತರಿಗೆ ಏತಮಾದಖಾನನ ಈ ಅಸಭ್ಯ ವರ್ತನೆ ಗೊತ್ತಾಗಿ ಅವರು ತುಂಬಾ ದುಃಖಿತರಾದರು. ನಾವು ಏತಮಾದನಿಗೆ ಎಲ್ಲ ಸಂದರ್ಭಗಳಲ್ಲೂ ಸಹಕರಿಸಿದ್ದೇವೆ. ಆದರೂ ಆತನು ನಮಗೆ ದ್ರೋಹವನ್ನು ಬಗೆದಿದ್ದಾನೆಂದು ಮಾತನಾಡಿಕೊಂಡರು. ನಾವು ಆತನ ಶತ್ರುವಾದ ಚಂಗೇಸಖಾನನನ್ನು ಕೊಂದು ಆತನಿಗೆ ಅನುಕೂಲ ಮಾಡಿದ್ದರೂ ನಮಗೆ ಮೋಸ ಮಾಡಿರುವುದರಿಂದ ಅವನಿಗೆ ಶಿಕ್ಷೆ ಕೊಡಲೇಬೇಕೆಂದು ತೀರ್ಮಾನಿಸಿಕೊಂಡರು. ಈಗ ನಾವು ಮಾಡಬೇಕಾದ ಕೆಲಸವೇನೆಂದರೆ–ಆತನ ಜಾಗೀರುಗಳನ್ನು ನಮ್ಮ ವಶಕ್ಕೆ ತೆಗೆದುಕೊಂಡು ನಮ್ಮಲ್ಲಿ ಹಂಚಿಕೊಳ್ಳುವುದೇ ಸೂಕ್ತವೆಂದು ತೀರ್ಮಾನಿಸಿಕೊಂಡರು.

ಜನಾನೇರ್, ಸೂರತ್ ಬಂದರು ಮತ್ತು ಭರೋಚ್‌ಗಳು ಮೀರ್‌ಜಾಗಳ ವಶ :

ಇದಾದ ನಂತರ ಹಬಷಿ ಅಮೀರರು ಏತಮಾದನ ಜಾಗೀರಿ ಪರಗಣ ಜಿಲ್ಲೆಗಳಾದ ಕಂಪಾಯತ್, ಜಲಾವ್ ಮುಂತಾದವುಗಳನ್ನು ವಶಪಡಿಸಿಕೊಂಡರು. ಈ ಪರಿಸ್ಥಿತಿಯಿಂದ ಮೀರ್‌ಜಾ ಸಹೋದರರು ಉತ್ಸಾಹಿತರಾಗಿ, ಜನಾನೇರ್ ಕೋಟೆ, ಸೂರತ್ ಬಂದರು ಮತ್ತು ಇತರೆ ಜಾಗಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ರುಸ್ತುಂಖಾನನು ಭರೋಚ್ ಕೋಟೆಯಲ್ಲಿ ಅಡಗಿಕೊಂಡನು. ಮೀರ್‌ಜಾ ಸಹೋದರರು ಆತನ ಮೇಲೆ ಯುದ್ಧವನ್ನು ಮಾಡಿದರು. ರುಸ್ತುಂಖಾನನು ಶಾಂತಿಯನ್ನು ಬಯಸಿ ಕೋಟೆಯನ್ನು ಬಿಟ್ಟುಕೊಟ್ಟನು. ಇದರ ಮೇಲೂ ಮೀರಜಾರ ಅಧಿಕಾರವಾಯಿತು.

ಅಲಖ್‌ಖಾನ್ ಮತ್ತು ಜಹಾಜ್‌ಖಾನರಲ್ಲಿ ವೈರ :

ಗುಜರಾತಿನ ಶಾಸಕರು ಚಿಂತಾಕ್ರಾಂತರಾಗಿ ನಗರದಿಂದ ಹೊರಟರು. ಅಲಖ್‌ಖಾನನು ಜಹಾಜಖಾನನನ್ನು ಕುರಿತು ಸೈನ್ಯಗಳೆಲ್ಲವೂ ನಗರವನ್ನು ಬಿಟ್ಟು ಹೊರಬಂದಿವೆ. ನಮ್ಮೊಂದಿಗೆ ಸೇರಿದ್ದಾರೆ. ಈಗ ಉಚಿತವೆಂದರೆ ಏತಮಾದನ ಜಾಗೀರಿಗಳಲ್ಲಿ ಒಂದನ್ನು ಅವರಿಗೂ ಕೊಡೋಣ ಎಂದನು. ಇದಕ್ಕೆ ಉತ್ತರವಾಗಿ

ಜಹಾಜಖಾನನು ಯಾವ ಪ್ರದೇಶವನ್ನು ಅವರಿಗೆ ಕೊಡಬೇಕೆಂದಿದ್ದಿಯೋ ಅದನ್ನು ನನ್ನ ವಶಕ್ಕೆ ಬಿಡು. ನೀನು ಅವರ ಮೇಲೆ ಯಾವ ಭರವಸೆಯನ್ನಿಟ್ಟಿದ್ದೀಯೋ ಅದನ್ನು ನಾನು ಪೂರೈಸುತ್ತೇನೆ ಎಂದನು. ಈ ವಿಚಾರದಲ್ಲಿ ಅಲಖ್‌ಖಾನನಲ್ಲೂ ಜಹಾಜಖಾನನಲ್ಲೂ ವೈಮನಸ್ಸು ಉಂಟಾಯಿತು.

ಶೇರ್‌ಖಾನನ ಶಕ್ತಿಯಲ್ಲಿ ಆಧಿಕ್ಯ :

ಏತಮಾದಖಾನನು ಈ ಪರಿಸ್ಥಿತಿಯ ಲಾಭವನ್ನು ಪಡೆದನು. ಅಲಖ್‌ಖಾನನಿಗೆ ಆಸೆ ತೋರಿಸಿ ತನ್ನಲ್ಲಿಗೆ ಬರಮಾಡಿಕೊಂಡನು. ಇದರಿಂದಾಗಿ ಹಬಶಿಯರ ಶಕ್ತಿಯು ವೃದ್ಧಿಯಾಯಿತು. ಅಲಖ್‌ಖಾನ ಹಬಶಿ ಮತ್ತು ಸಾದಾತ್‌ಖಾನ್ ಬುಖಾರಿ, ಶೇರ್‌ಖಾನ್ ಫೌಲಾದಿಯವರುಗಳಿಂದ ಒಂದು ರೀತಿಯ ಒಗ್ಗಟ್ಟಿನಿಂದಾಗಿ ಇವರ ಉತ್ಸಾಹ ಹೆಚ್ಚಾಯಿತು. ಹೀಗೆ ಶೆರ್‌ಖಾನ್ ಫೌಲಾದಿಯು ಹಿಗ್ಗಿದನು.

ಸುಲ್ತಾನ್ ಮುಜಾಫ್ಫರನು ಪರಾರಿ :

ಇವೆಲ್ಲ ಪರಿಸ್ಥಿತಿಗಳಿಂದ ಸುಲ್ತಾನ್ ಮುಜಫ್ಫರನು ಬಹಳ ಚಿಂತಾಕ್ರಾಂತನಾದನು. ಈಗ ತಾನು ಏನು ಮಾಡಬೇಕೆಂಬುದೆ ತೋಚದಂತಾಯಿತು. ಆತನು ಇಲ್ಲಿಂದ ಎಲ್ಲಿಯಾದರೂ ಓಡಿಹೋಗುವುದೇ ಸೂಕ್ತವೆಂದು ಯೋಚಿಸಿ ಸಾಯಂಕಾಲದ ಸಮಯದಲ್ಲಿ ಒಂದು ಕಿಟಕಿಯ ಮೂಲಕ ತಾನು ವಾಸವಿದ್ದ ಕೊಠಡಿಯಿಂದ ಹೊರಬಂದು ಸರ್‌ಕಚ್ಚ್‌ನ ಕಸಬಾ ಇನಾಯತ್‌ಪುರದ ಕಡೆಗೆ ಹೋಗಿ ತಲುಪಿದನು. ಅಲ್ಲಿದ್ದ ಅಲಖ್‌ಖಾನನ ಮನೆಗೆ ಹೋದನು. ಅಲಖ್‌ಖಾನನು ಆತನನ್ನು ಭೇಟಿಯಾಗಲು ಇಷ್ಟಪಡಲಿಲ್ಲ.

ಅಲಖ್‌ಖಾನನ ವರ್ತನೆ :

ಅಲಖ್‌ಖಾನನು ತಕ್ಷಣ ಶೇರ್‌ಖಾನನ ಬಳಿಗೆ ಬಂದು ಸುಲ್ತಾನ್ ಮುಜಫ್ಫರರು ತನ್ನ ಮನೆಗೆ ಬಂದ ಸಮಾಚಾರವನ್ನು ತಿಳಿಸಿದ. ನಾನು ಆತನನ್ನು ಭೇಟಿಯಾಗಲಿಲ್ಲವೆಂಬ ವಿಚಾರವನ್ನೂ ಹೇಳಿದ. ಶೇರ್‌ಖಾನನು ಅಲಖ್‌ಖಾನನನ್ನು ಸಮಾಧಾನದಿಂದಲೇ ತಿಳಿಸಿದುದೇನೆಂದರೆ "ಸುಲ್ತಾನ್ ಮುಜಫ್ಫರನು ಈಗ ನಿನ್ನ ಅತಿಥಿಯಾಗಿದ್ದಾನೆ. ನೀನೀಗ ಆತನ ಸತ್ಕಾರ ಸೇವೆಯನ್ನು ಮಾಡುವುದು ನಿನ್ನ ಪರಮಧರ್ಮ ಹೋಗು ಆತನನ್ನು ಸತ್ಕರಿಸು" ಎಂದನು.

ಮೊಗಲರಿಗೆ ಆಹ್ವಾನ :

ಮಾರನೇ ದಿನ ಶೇರ್‌ಖಾನ ಫೌಲಾದಿಯ ಹೆಸರಿನಲ್ಲಿ ಏತಮಾದನ ಒಂದು ಪತ್ರ ಬಂದಿತು. ಅದರ ವಿಷಯ–ಸುಲ್ತಾನ್ ಮುಜಫ್ಫರನು ಸುಲ್ತಾನ್ ಮಹಮೂದ್‌ನ

ಮಗನಲ್ಲ. ಆದ್ದರಿಂದ ನಾನು ಆತನನ್ನು ಈ ದೇಶದಿಂದಲೇ ಹೊರಕ್ಕೆ ಅಟ್ಟಿದ್ದೇನೆ. ಮೊಗಲ ಸುಲ್ತಾನರನ್ನು ಗುಜರಾತಿನಲ್ಲಿ ಬರಲು ಆಹ್ವಾನಿಸಿದ್ದೇನೆ. ಈ ಪ್ರದೇಶವೆಲ್ಲವನ್ನು ಅವರಿಗೆ ಹಸ್ತಾಂತರಿಸುತ್ತೇನೆ.

ಸಯ್ಯದ್ ಹಮೀದನ ವಿವರಣೆ :

ಶೇರ್‌ಖಾನ ಫೌಲಾದಿಯು ಏತಮಾದನ ಪತ್ರವನ್ನು ಓದಿದ ತಕ್ಷಣ ಸಯ್ಯದ ಹಮೀದನ ಮನೆಗೆ ಓಡಿದನು. ಅಲ್ಲಿ ಆತನು ಹೀಗೆ ಹೇಳಿದನು. ಅಂದು ಮುಜಫ್ಫರನ ಪಟ್ಟಾಭಿಷೇಕದ ದಿನ ಏತಮಾದನು ಎಲ್ಲ ಅಮೀರರ ಮುಂದೆ ಸುಲ್ತಾನ್ ಮಹಮೂದ್‌ನ ಮಗ ಇವನೇ ಆಗಿದ್ದಾನೆಂದು ಹೇಳಿದ್ದ. ಆದರೆ ಈಗ ಹೀಗೆ ಹೇಳುತ್ತಿದ್ದಾನಲ್ಲ. ಇದು ಸರಿಯೇ? ಎಂದು ಪ್ರಶ್ನಿಸಿದನು. ಅದಕ್ಕೆ ಸಯ್ಯದ್ ಹಮೀದ ಮತ್ತು ಸಾದಾತ್‌ಖಾನರು ಹೀಗೆ ಹೇಳಿದರು. "ಏತಮಾದನು ಅಂದು ಕುರಾನ ಪವಿತ್ರ ಗ್ರಂಥದ ಮೇಲೆ ಕೈಯಿಟ್ಟು ಪ್ರಮಾಣ ಮಾಡಿ ಈತನು ಸುಲ್ತಾನ್ ಮಹಮೂದ್‌ನ ಮಗನೇ ಹೌದೆಂದಿದ್ದನು. ಈಗ ಅವನು ಹೀಗೆ ಓಡಿಸಿ ಮೊಗಲರಿಗೆ ಆಹ್ವಾನ ನೀಡಿರುವುದು ತುಂಬಾ ಅನ್ಯಾಯ.

ಶೇರ್‌ಖಾನ್ ಮತ್ತು ಸುಲ್ತಾನ್ ಮುಜಫ್ಫರನ ಭೇಟಿ :

ಸಯ್ಯದ್ ಹಮೀದನ ಮನೆಯಿಂದ ಎದ್ದು ಹೊರಟ ಶೇರ್‌ಖಾನನು ನೇರವಾಗಿ ಅಲಖ್‌ಖಾನನ ಮನೆಗೆ ಬಂದನು. ಅಲ್ಲಿ ಸುಲ್ತಾನ್ ಮುಜಫ್ಫರನನ್ನು ಭೇಟಿ ಮಾಡಿದನು. ಒಬ್ಬ ನೌಕರನು ತನ್ನ ಯಜಮಾನನನ್ನು ಹೇಗೆ ಕಾಣುತ್ತಾನೋ ಹಾಗೆ ಕಂಡನು. ಅಲಖ್‌ಖಾನನ ಮನೆಯಿಂದ ತನ್ನ ಮನೆಗೆ ಬಾದಶಹನನ್ನು ಕರೆದುಕೊಂಡು ಹೋಗಿ ಆತನ ಸೇವೆಯಲ್ಲಿ ಮಗ್ನನಾದನು.

ಮೊಗಲರ ಆಗಮನ ಮತ್ತು ಹಬಶಿಗಳೊಂದಿಗೆ ಯುದ್ಧ :

ಏತಮಾದ್‌ಖಾನನು ಮೊಗಲರನ್ನು ಭರೋಚ್ ಗಡಿಯ ಮೂಲಕ ಕರೆಯಿಸಿದನು. ಮೊಗಲ ಅಮೀರರು ಸುಮಾರು ಐದು ಆರು ಸಾವಿರ ಸವಾರರೊಂದಿಗೆ ಅಹಮದಾಬಾದಿಗೆ ತಲುಪಿದರು. ಏತಮಾದನು ಸೈಪುಲ್‌ಮುಲ್ಕ್‌ನ ಅಧೀನದಲ್ಲಿ ಸೈನ್ಯವನ್ನು ಕೊಟ್ಟು ಮೊಗಲರಿಗೆ ಸಹಾಯ ಮಾಡಿ ಹಬಶಿಗಳ ಮೇಲೆ ಯುದ್ಧಕ್ಕೆ ಕಳುಹಿಸಿದನು. ಇದರಿಂದಾಗಿ ನಿಧಾನವಾಗಿ ಗುಜರಾತಿನ ಎಲ್ಲ ಪರಿಸ್ಥಿತಿಗಳು ಕೆಟ್ಟು ಹೋದವು.

ಬಾದಶಹ ಅಕ್ಬರನ ಹೆಸರಿನಲ್ಲಿ ಏತಮಾದನ ಪತ್ರ :

ಏತಮಾದನಿಗೆ ಮೊಗಲರ ದಾಳಿಗಳಿಂದಲೂ ಯಾವುದೇ ಪ್ರಯೋಜನ ಕಾಣಲಿಲ್ಲ.

ಆಗ ಆತನು ದೆಹಲಿಯ ಜಲಾಲುದ್ದೀನ ಅಕ್ಬರ್ ಬಾದಶಹನಿಗೊಂದು ಪತ್ರವನ್ನು ಬರೆದನು. ಅದರಲ್ಲಿ ಆತನು ಗುಜರಾತಿನ ಮೇಲೆ ತಮ್ಮ ಆಕ್ರಮಣ ನಡೆಯುವುದು ಸೂಕ್ತವೆಂದು ಪ್ರೋತ್ಸಾಹಿಸಿದನು. ಹಿಜರಿ ೯೮೦ರಲ್ಲಿ ಅಕ್ಬರನು ನಾಗೋರಿನಲ್ಲಿದ್ದನು. ಆ ಸಂದರ್ಭದಲ್ಲಿ ಬಾದಶಹನು ತನ್ನ ಅಮೀರ ಪೀರ್‌ಮಹಮ್ಮದ್‌ಖಾನ ಉರುಫ್ ಕಲಾನನ್ನು ದೊಡ್ಡ-ದೊಡ್ಡ ಅಮೀರರೊಂದಿಗೆ 'ಸರ್‌ವಹಿ' ಪ್ರದೇಶವನ್ನು ಗೆದ್ದುಕೊಂಡು ಬರಲು ಕಳುಹಿಸಿದನು. ಪೀರ್‌ಮಹಮ್ಮದನು ಸರ್‌ವಹಿ ರಾಜನ ದೂತನಿಂದ ಗಾಯಗೊಂಡಿದ್ದನು. ಆಗ ಅಕ್ಬರನು ಸ್ವತಃ ತನ್ನ ಸೈನ್ಯವಿದ್ದ ಜಾಗಕ್ಕೆ ಬಂದಿದ್ದನು. ಆ ಸಂದರ್ಭದಲ್ಲಿ ಏತಮಾದನ ಪತ್ರ ಅಕ್ಬರನಿಗೆ ಸಿಕ್ಕಿತ್ತು.

ಅಕ್ಬರ್ ಬಾದಶಹನ ಮನಸ್ಸು ಗುಜರಾತಿನತ್ತ :

ಅಕ್ಬರನು ನಾಗೋರಿನಿಂದ ಗುಜರಾತಿನತ್ತ ಪ್ರಯಾಣಿಸಿದನು. ಈ ಸಂಬಂಧದ ಎಲ್ಲ ಘಟನೆಗಳನ್ನು ಅಕ್ಬರನ ಚರಿತ್ರೆಯಲ್ಲಿ ವಿವರವಾಗಿ ಪ್ರಸ್ತಾಪಿಸಲಾಗಿದೆ. ಅಕ್ಬರನ ಸೈನ್ಯವು 'ಪಟನ್' ಗುಜರಾತಿಗೆ ತಲುಪಿದಾಗ ಶೇರ್‌ಖಾನ ಫೌಲಾದಿಯು ಅಹಮದಾಬಾದನ್ನು ಮುತ್ತಿದ. ಆತನು ಹೆದರಿ ಓಡಿ ಹೋದನು. ಇಬ್ರಾಹಿಂ ಹುಸೇನ್‌ಮಿರ್ಜಾ ಮತ್ತು ಆತನ ತಮ್ಮನು ಬರೋದ್ರ ಮತ್ತು ಭರೋಚ್‌ನತ್ತ ಓಡಿದರು. ಏತಮಾದಖಾನ, ಮಿರ್ಜಾ ಅಬೂತುರಾಬ್‌ಶೇರಾಜಿ, ಅಲಖ್‌ಖಾನ ಹಬಶಿ, ಜಹಾಜಖಾನ ಮತ್ತು ಇಖ್ತಿಯಾರುಲ್‌ಮುಲ್ಕ್‌ರು ಕೈಕಟ್ಟಿಕೊಂಡು ಅಕ್ಬರನ ಸೇವೆಯಲ್ಲಿ ಹಾಜರಾದರು. ಮತ್ತು ಮೊಗಲ ಬಾದಶಹನ ಗುಂಪಿನವರ ಲೆಕ್ಕದಲ್ಲಿ ಸೇರಿಕೊಂಡರು.

ಸುಲ್ತಾನ್ ಮುಜಫ್ಫರನು ಅಕ್ಬರ ಬಾದಶಹನ ಸೇವೆಯಲ್ಲಿ :

ಸುಲ್ತಾನ್ ಮುಜಫ್ಫರನು ಸಹ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು, ಶೇರ್‌ಖಾನ ಫೌಲಾದಿಯ ಜೊತೆಯನ್ನು ಬಿಟ್ಟು ಅಕ್ಬರ ಬಾದಶಹನ ಸೇವೆಯಲ್ಲಿ ಬಂದನು. ಇದರ ಅರ್ಥವೆಂದರೆ, ಗುಜರಾತಿ ಬಾದಶಹರ ಶಾಸನಾಧಿಕಾರವೆಲ್ಲವೂ ಮುಗಿದಿತ್ತು. ಈಗ ಸಂಪೂರ್ಣ ಗುಜರಾತ್ ಸಾಮ್ರಾಜ್ಯವು ಅಕ್ಬರನ ಆಡಳಿತಕ್ಕೆ ಸೇರಿಹೋಯಿತು. ಈ ಘಟನೆ ಹಿಜರಿ ೯೮೧ರ ಜಬ್ ತಿಂಗಳ ೧೪ನೇ ತಾರೀಖಿನಂದು ಸಂಭವಿಸಿತ್ತು.

ಸೂರತ್ ಬಂದರಿನ ಮೇಲೆ ಬಾದಶಹ ಅಕ್ಬರನ ಹಿಡಿತ :

ಅದೇ ದಿನಗಳಲ್ಲಿ ಅಕ್ಬರ್ ಬಾದಶಹನು ಸೂರತ್ ಬಂದರಿನ ಕೋಟೆಯನ್ನು ಮಹಮ್ಮದ್ ಹುಸೇನ್ ಮೀರಜಾನ ಅಧೀನದಲ್ಲಿದ್ದುದನ್ನು ವಶಪಡಿಸಿಕೊಂಡು ತನ್ನ ಸಾಮ್ರಾಜ್ಯದಲ್ಲಿ ಸೇರಿಕೊಂಡನು. ವಾಪಸ್ ಬರುವಾಗ ಭರೋಚನಲ್ಲಿ ಚಂಗೇಸಖಾನನ ತಾಯಿ ಅಳುತ್ತಾ ಬಾದಶಹ ಅಕ್ಬರನ ಮುಂದೆ ಹಾಜರಾದಳು. ನನ್ನ ಮಗ ಚಂಗೇಸಖಾನನನ್ನು ಯಾವುದೇ ಅಪರಾಧವಿಲ್ಲದೆ ಜಹಾಜ್‌ಖಾನನು ಕೊಲೆ

ಮಾಡಿದ್ದಾನೆಂದು ಪ್ರಾರ್ಥಿಸಿಕೊಂಡಳು. ಹಾಗೂ ನ್ಯಾಯವನ್ನು ಕೊಡಬೇಕೆಂದು ಬೇಡಿದಳು.

ಸುಲ್ತಾನ್ ಮುಜಫ್ಫರನು ಆಗ್ರಾ ಮತ್ತು ಬಂಗಾಲದಲ್ಲಿ :

ಜಹಾಜಖಾನನು ಅಕ್ಬರನ ಜೊತೆಯಲ್ಲಿಯೇ ಇದ್ದನು. ಆತನ ಮೇಲೆ ಶಿಕ್ಷೆಯನ್ನು(ರಕ್ತಕ್ಕೆರಕ್ತ) ನಿಗದಿಪಡಿಸಿ, ಸುಲ್ತಾನ್ ಮುಜಾಫ್ಫರನನ್ನು ತನ್ನ ಜೊತೆಯಲ್ಲಿ ಕರೆದುಕೊಂಡು ಆಗ್ರಾಕ್ಕೆ ಬಂದನು. ಆ ದಿನಗಳಲ್ಲಿ ಮನ್‌ಅಮ್‌ಖಾನನು ಬಂಗಾಲದ ಕಡೆ ಹೋಗಲು ಸಿದ್ಧನಾಗಿದ್ದನು. ಬಾದಶಹನು ಸುಲ್ತಾನ್ ಮುಜಫ್ಫರನನ್ನು ಆತನ ವಶಕ್ಕೆ ಕೊಟ್ಟನು. ಮನ್‌ಆಮ್‌ಖಾನನು ತನ್ನ ಜೊತೆಯಲ್ಲಿ ಮುಜಫ್ಫರನನ್ನು ಬಂಗಾಲಕ್ಕೆ ಕರೆದೊಯ್ದನು. ಮನ್‌ಆಮ್‌ನು ತನ್ನ ಮಗಳನ್ನು ಮುಜಫ್ಫರನಿಗೆ ಕೊಟ್ಟು ಮದುವೆ ಮಾಡಿದನು. ಮಗಳ ಹೆಸರು ಶಹಜಾದಿಖಾನಂ ಎಂದಿತ್ತು.

ಸುಲ್ತಾನ್ ಮುಜಫ್ಫರನು ಮತ್ತೆ ಗುಜರಾತಿನಲ್ಲಿ :

ಕೆಲವು ದಿನಗಳ ನಂತರ ಮನ್‌ಆಮ್‌ಖಾನನು ಸುಲ್ತಾನ್ ಮುಜಫ್ಫರನೊಂದಿಗೆ ಮನಸ್ತಾಪ ಉಂಟುಮಾಡಿಕೊಂಡನು. ಮುಜಫ್ಫರನನ್ನು ಖೈದಿಯಾಗಿ ಬಂಧಿಸಿದ. ಒಂದು ದಿನ ಮುಜಫ್ಫರನು ಸಮಯವನ್ನು ನೋಡಿ ಖೈದ್‌ಖಾನೆ (ಸೆರೆಮನೆ)ಯಿಂದ ಓಡಿದನು. ಹೇಗೋ ಮಾಡಿ ಹಿಜರಿ ೯೮೧ರಲ್ಲಿ ಗುಜರಾತಿಗೆ ಬಂದು ಸೇರಿದನು.

ಸುಲ್ತಾನ್ ಮುಜಫ್ಫರನ ಶಾಸನ ಗುಜರಾತಿನಲ್ಲಿ :

ಇಲ್ಲಿಗೆ ಬಂದ ಮುಜಫ್ಫರನು ಒಂದು ಬಹುದೊಡ್ಡ ಸೈನ್ಯವನ್ನು ಸಂಗ್ರಹಿಸಿಕೊಂಡನು. ಆಗ ಅಲ್ಲಿ ಶಾಸಕನಾಗಿ ನೇಮಕವಾಗಿದ್ದ ಖುತುಬುದ್ದೀನ್ ಖಾನನನ್ನು ಯುದ್ಧದಲ್ಲಿ ಸೋಲಿಸಿ ಆತನನ್ನು ಕೊಲೆ ಮಾಡಿದನು. ಹೀಗೆ ಸುಲ್ತಾನ್ ಮುಜಫ್ಫರನು ಒಂಬತ್ತು ವರ್ಷಗಳ ನಂತರ ಗುಜರಾತಿನಲ್ಲಿ ಎರಡನೇ ಸಲ ತನ್ನ ಶಾಸನವನ್ನು ಖಾಯಂಗೊಳಿಸಿ ತನ್ನ ಹೆಸರಿನ ಖುತ್ಬಾ (ಶಾಹಿಘೋಷಣೆ) ಮತ್ತು ನಾಣ್ಯಗಳನ್ನು, ಮುದ್ರೆಯನ್ನೂ ಜಾರಿ ಮಾಡಿಕೊಂಡನು.

ಗುಜರಾತಿನ ಮೇಲೆ ಎರಡನೇ ಸಲ ಅಕ್ಬರನ ಜಯ, ಶಾಸನ :

ಕೆಲವು ದಿನಗಳವರೆಗೆ ಸುಲ್ತಾನ್ ಮುಜಫ್ಫರನು ಶಾಂತಿ ಮತ್ತು ಸಮಾಧಾನಗಳಿಂದ ಆಡಳಿತವನ್ನು ನಡೆಸಿದನು. ಆದರೆ ಈ ಶಾಂತಿ ಸಮಾಧಾನಗಳು ಬಹಳ ದಿನಗಳವರೆಗೆ ಉಳಿಯಲಿಲ್ಲ. ಹಿಜರಿ ೯೯೧ರಲ್ಲಿ ಅಕ್ಬರ ಬಾದಶಹನು ತನ್ನ ಸೈನ್ಯಾಧಿಕಾರಿ ಭೈರಾಮಖಾನನ ಮಗ ಅಬ್ದುರ್ ರಹೀಮನನ್ನು ಗುಜರಾತಿಗೆ ಕಳುಹಿಸಿದನು. ಸುಲ್ತಾನ್ ಮುಜಫ್ಫರನಿಗೆ ಆತನು ಬರುತ್ತಿರುವ ಸುದ್ದಿ ತಿಳಿಯಿತು. ಆಗ ಆತನು ಜುನಾಗಢದ

ಕಡೆ ಓಡಿದನು. ಈ ಘಟನೆಯ ನಂತರ ಎರಡನೇ ಸಲ ಗುಜರಾತ ಪ್ರದೇಶವು ಅಕ್ಬರ ಬಾದಶಹನ ವಶವಾಯಿತು. ಎಲ್ಲಿಯವರೆಗೆ ಅಕ್ಬರನೂ ಬಾದಶಹನಾಗಿದ್ದನೋ ಅಲ್ಲಿಯ ತನಕ ಆತನ ಸಾಮ್ರಾಜ್ಯದಲ್ಲಿಯೇ ಇತ್ತು.

ಸುಲ್ತಾನ್ ಮುಜಫ್ಫರನು ಸಿಂಹಾಸನವನ್ನೇರಿದ ದಿನಾಂಕದಿಂದ (೧೭) ಹದಿನೇಳು ವರ್ಷಗಳ ತನಕ ಬಾದಶಹ ಗುಜರಾತ ಎಂದೇ ಶಾಸನವನ್ನು ಮಾಡಿದನು.

■

II. ಮಾಳವ ಮತ್ತು ಮಾಂಡುವಿನ ಬಾದಶಹರುಗಳು

*

೧. ದಿಲಾವರ್‌ಖಾನ್ ಘೋರಿ

ಮಾಳವದ ಕೀರ್ತಿ :

ಇತಿಹಾಸಕಾರರು, ಸಾಹಿತಿಗಳು ಬಹಳ ಚೆನ್ನಾಗಿ ಹೊಗಳಿರುವುದೇನೆಂದರೆ– ಮಾಳವ ದೇಶ ಒಂದು ಬಹುದೊಡ್ಡ ಸಾಮ್ರಾಜ್ಯವೆನಿಸಿ, ಬಹಳ ದೊಡ್ಡ–ದೊಡ್ಡ ಅಪಾರ ಕೀರ್ತಿವೆತ್ತ ಶಾಸಕರು ಶಾಸನವನ್ನು ಮಾಡಿದ್ದಾರೆಂದು ತಿಳಿದು ಬರುತ್ತದೆ. ವಿಕ್ರಂಜಿತ ಮತ್ತು ರಾಜಭೋಜ್ ಮುಂತಾದ ದೊಡ್ಡ–ದೊಡ್ಡ ರಾಜ ಮಹಾರಾಜರುಗಳು ಭಾರತದ ಇತಿಹಾಸದಲ್ಲಿ ತಮ್ಮ ಬಹುದೊಡ್ಡ ಸ್ಥಾನವನ್ನು ಸ್ಥಿರಗೊಳಿಸಿಕೊಂಡಿದ್ದಾರೆ. ಇಂತವರೆಲ್ಲರೂ ಮಾಳವ ದೇಶದವರಾಗಿದ್ದರು.

ದಿಲಾವರ್‌ಖಾನ್ ಘೋರಿಯ ಸಾಹಸ :

ಸುಲ್ತಾನ್ ಮಹಮೂದ್ ಗಜ್ನಿಯ ಶುಭ ಪ್ರಯತ್ನಗಳಿಂದಾಗಿ ಹಿಂದೂಸ್ತಾನದಲ್ಲಿ ಇಸ್ಲಾಂ ಧರ್ಮವು ಬಹಳ ಬಹಳ ಉನ್ನತ ಮಟ್ಟಕ್ಕೆ ಬೆಳೆಯಿತು. ದೆಹಲಿಯ ಸುಲ್ತಾನ್‌ರುಗಳಿಂದ ಹಿಡಿದು, ಸುಲ್ತಾನ್ ಮಹಮ್ಮದ್ ಫೈರೋಜ್‌ಶಾಹನವರೆಗೆ ಮಾಳವ ದೇಶದಲ್ಲಿ ಆಡಳಿತವನ್ನು ನಡೆಸಿದರು. ಸುಲ್ತಾನ್ ಮಹಮೂದ್ ಫೈರೋಜಶಾಹನ ಕೊಲೆಯ ನಂತರ ದಿಲಾವರ್‌ಖಾನ ಘೋರಿ ಆತನ ನಿಜವಾದ ಹೆಸರು ಹುಸೇನ್ ಎಂದಿತ್ತು. ಈತನು ಮಾಳವ ದೇಶವನ್ನು ತನ್ನ ವಶಕ್ಕೆ ಪಡೆದನು. ನಂತರ ದಿನೇ ದಿನೇ ಒಬ್ಬ ಶ್ರೇಷ್ಠ ಆಡಳಿತಗಾರನೆನಿಸಿ ಹೆಸರು ಗಳಿಸಿದ್ದ.

ಮಾಳವದ ಬಾದಶಹರುಗಳು :

ದಿಲಾವರ್‌ಖಾನ ಘೋರಿಯ ಸ್ವತಂತ್ರ ಶಾಸನದ ನಂತರ ಮಾಳವ ಸಾಮ್ರಾಜ್ಯವು ದೆಹಲಿ ಆಳರಸರ ವಶದಿಂದ ಸ್ವತಂತ್ರವಾಯಿತು. ಮಾಳವದಲ್ಲಿ ಈ ಸ್ವತಂತ್ರ ಶಾಸಕರ ನಂತರ ಒಬ್ಬರಾದ ಮೇಲೆ ಮತ್ತೊಬ್ಬ ಸಾಹಸಿಗಳು ಸುಮಾರು ಹನ್ನೊಂದು

ಬಾದಶಹರುಗಳು ದಕ್ಷತೆಯಿಂದ ಆಳಿರುವುದು ಇತಿಹಾಸ ಸಾರುತ್ತದೆ. ಇವರಲ್ಲದೆ ಕೆಲ ಕಾಲ ನಸೀರುದ್ದೀನ ಹುಮಾಯೂನನ ಮತ್ತು ಸುಲ್ತಾನ್ ಬಹಾದೂರರಂತಹ ಶ್ರೇಷ್ಠ ಶಾಸಕರೂ ಸಹ ಈ ದೇಶವನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿದ್ದರು.

ಮಹಮ್ಮದ್‌ಶಾಹಿ ಅಮೀರರು :

ಮಹಮ್ಮದ್ ಶಾಹ ಬಿನ್ ಫೈರೋಜಶಾಹನು ಸಿಂಹಾಸನವನ್ನೇರಿದ ನಂತರ ತನ್ನ ಅಮೀರರುಗಳಿಗೆ ಅಪಾರ ಸಂಪತ್ತಿನಿಂದ ಗೌರವಿಸಿದ್ದನೆಂದು ತಿಳಿದು ಬರುತ್ತದೆ. ಫೈರೋಜ್‌ಶಾಹನು ಪದಚ್ಯುತನಾಗಿ ಓಡಾಡಿದ ಸಂದರ್ಭದಲ್ಲಿ ಆ ಅಮೀರರು ಆತನಿಗೆ ತುಂಬಾ ಸಹಾಯವನ್ನು ಮಾಡಿದ್ದರು. ಮಹಮ್ಮದಶಾಹನು ಖ್ವಾಜಾ ಸರ್‌ವರನಿಗೆ "ಖ್ವಾಜಾಜಹಾನ" ಎಂಬ ಬಿರುದನ್ನು ಕೊಟ್ಟು ಸಂಪೂರ್ಣ ಸಾಮ್ರಾಜ್ಯದ ಪ್ರಧಾನಮಂತ್ರಿಯನ್ನಾಗಿಸಿದನು. ಗುಜರಾತ್, ಮುಲ್ತಾನ ಮತ್ತು ಮಾಳವದ ಆಡಳಿತಗಳು ವ್ಯವಸ್ಥಿತವಾಗಿ ಜಫರ್‌ಖಾನ್‌ಬಿನ್ ವಜೀಹುಲ್‌ಮುಲ್ಕ್, ಖಿಜರ್‌ಖಾನ್, ಮತ್ತು ದಿಲಾವರ್‌ಖಾನರ ಸುಪರ್ದಿಗೆ ಬಿಟ್ಟಿದ್ದನು. ಈ ನಾಲ್ಕು ಜನ ಅಮೀರರು ಬಾದಶಹನ ದರ್ಜೆಗೇರಿದರು.

ದಿಲಾವರನ ಸಾಹಸ :

ದಿಲಾವರಖಾನ ಘೋರಿಯು 'ಧಾರ್' ನಗರದಲ್ಲಿ ನೆಲೆಸಿದ್ದನು. ತನ್ನ ಬುದ್ಧಿವಂತಿಕೆ, ಧೈರ್ಯಶಾಲಿ ಗುಣಗಳು ಮತ್ತು ಉತ್ತಮ ವ್ಯವಸ್ಥೆಯಿಂದಾಗಿ ಮಾಳವ ದೇಶವನ್ನು ಉನ್ನತಮಟ್ಟಕ್ಕೇರಿಸಿದರು. ಈ ಪ್ರದೇಶದಲ್ಲಿ ಯಾವುದೇ ಒಳ ಜಗಳಗಳಿಂದ ದೂರವಿರಿಸಿ ಪ್ರಗತಿಯ ಹಾದಿಯಲ್ಲಿ ಸಾಗಿಸಿದ್ದರು. ಪರದೇಶಿಯರನ್ನು ಇಲ್ಲಿಂದ ಓಡಿಸಿದ್ದರು. ದಿಲಾವರ್‌ಖಾನನು ಶಾದಿಆಬಾದ ಮಾಂಡುವಿನಲ್ಲಿ ನೆಲೆಸಿ, ಅದನ್ನು ತನ್ನ ರಾಜಧಾನಿಯನ್ನಾಗಿಸಿ ಕೊಂಡಿದ್ದನು. ಆಗಾಗ್ಗೆ ಆ ನಗರದಲ್ಲಿ ಬಂದು ಹೋಗುತ್ತಿದ್ದನು. ಅಲ್ಲಿ ಅನೇಕ ಕಟ್ಟಡಗಳನ್ನು ಸ್ವತಃ ನಿಂತು ಕಟ್ಟಿಸುತ್ತಿದ್ದನು. ನಂತರ ತನ್ನ ಹಳೆಯ ರಾಜಧಾನಿ 'ಧಾರ್' ನಗರಕ್ಕೆ ಬಂದು ಬಿಡುತ್ತಿದ್ದನು.

ಸುಲ್ತಾನ್ ಮಹಮೂದ್ ಮಾಳವದಲ್ಲಿ

ಹಿಜರಿ ೮೦೧ರಲ್ಲಿ ಅಮೀರ ತೈಮೂರನ ಹೆದರಿಕೆಯಿಂದ ದಿಲ್ಲಿಯ ಬಾದಶಹನಾದ ಸುಲ್ತಾನ್ ಮಹಮೂದ್‌ನು ಓಡಿ ಗುಜರಾತಿಗೆ ಬಂದಿದ್ದನು. ಅಲ್ಲಿನ ಶಾಸಕನಾಗಿದ್ದ ಸುಲ್ತಾನ್ ಮುಜಫ್ಫರನು ಸುಲ್ತಾನ್ ಮಹಮೂದ್‌ನೊಂದಿಗೆ ಒಳ್ಳೆಯ ವರ್ತನೆಯನ್ನು ತೋರಿರಲಿಲ್ಲ. ಅದರಿಂದಾಗಿ ಬೇಸರಪಟ್ಟುಕೊಂಡು 'ಧಾರ್' ನಗರ ದತ್ತ ರವಾನೆಯಾಗಿದ್ದನು. ದಿಲಾವರನಿಗೆ ಸುಲ್ತಾನ್ ಮಹಮೂದನು ಬರುತ್ತಿರುವ ಸುದ್ದಿಯನ್ನು ತಿಳಿದು, ಆತನನ್ನು ಸ್ವಾಗತಿಸಲು ಬಂದನು.

ಸ್ವಾಗತ :

ದಿಲಾವರ್‌ಖಾನನ ಅಮೀರರು ಬಹಳ ವೈಭವದಿಂದ, ಸಂಭ್ರಮದಿಂದ ಸುಲ್ತಾನ್ ಮಹಮೂದ್‌ನನ್ನು ಸ್ವಾಗತಿಸಿದರು. ಇನ್ನೂ ಎಂಟು ಮೈಲಿ ದೂರದಲ್ಲಿದ್ದಂತೆಯೇ ದಿಲಾವರ್‌ಖಾನನು ಅಮೀರರ ಜೊತೆಯಲ್ಲಿ ಸ್ವಾಗತಕ್ಕೋಸ್ಕರ ಹೋಗಿದ್ದನು. ದಿಲಾವರ್‌ಖಾನನ ಮಗ ಹೊಷಂಗನು ತನ್ನ ತಂದೆಯ ಈ ವರ್ತನೆಯನ್ನು ಕಂಡು ಸಿಟ್ಟಾಗಿದ್ದನು. ಆತನು ಮಾಳವದ ಸೈನ್ಯದ ಒಂದು ದೊಡ್ಡ ಭಾಗವನ್ನು ತೆಗೆದುಕೊಂಡು ಶಾದಿಆಬಾದ ಮಾಂಡುವಿನತ್ತ ಹೋದನು.

ಗೌರವ – ಮರ್ಯಾದೆಗಳು :

ದಿಲಾವರ್‌ಖಾನನು ಬಹಳ ವೈಭವದಿಂದ ಸುಲ್ತಾನ್ ಮಹಮೂದ್‌ನ ಸ್ವಾಗತವನ್ನು ಮಾಡಿದನು. ಆತನನ್ನು ಬಹಳ ಸಂಭ್ರಮದಿಂದ ತನ್ನ ನಗರದ ಬೀದಿಗಳಲ್ಲಿ ಕರೆತಂದನು. ದಿಲಾವರ್‌ಖಾನನು ತನ್ನ ಬಳಿ ಇದ್ದ ನಗದು ಹಣ ವಜ್ರ ವೈಡೂರ್ಯಗಳಿಂದ ಸನ್ಮಾನಿಸಿದನು. ನಾನು ತಮ್ಮ ಗುಲಾಮನಾಗಿದ್ದೇನೆ. ನನ್ನ ಅಂತಃಪುರದವರೆಲ್ಲರೂ ತಮ್ಮ ದಾಸ-ದಾಸಿಯರಾಗಿದ್ದಾರೆಂದು ತಿಳಿಸಿದನು. ಸುಲ್ತಾನ್ ಮಹಮೂದ್‌ನು ದಿಲಾವರನಿಗೆ ಆಶೀರ್ವದಿಸಿ, ಆತನು ಕೊಟ್ಟಿದ್ದ ಬಹುಮಾನಗಳಲ್ಲಿ, ಸಂಪತ್ತಿನಲ್ಲಿ ತನಗೆ ಅಲ್ಪ ಪ್ರಮಾಣದಲ್ಲಿ ಬೇಕಾದಷ್ಟು ತೆಗೆದುಕೊಂಡು ಉಳಿದದ್ದನ್ನು ದಿಲಾವರನಿಗೆ ವಾಪಸ್ ಕೊಟ್ಟುಬಿಟ್ಟನು.

ಸುಲ್ತಾನ್ ಮಹಮೂದ್‌ನು ವಾಪಸ್ಸಾದನು :

ಹಿಜರಿ ೮೦೪ರಲ್ಲಿ ಸುಲ್ತಾನ್ ಮಹಮೂದ್‌ನು ದಿಲಾವರ್‌ಖಾನನಿಂದ ಬೀಳ್ಕೊಡುಗೆಯನ್ನು ಪಡೆದು ದೆಹಲಿಯ ಅಮೀರರ ಆಹ್ವಾನದ ಮೇರೆಗೆ ದೆಹಲಿಯತ್ತ ಮುಖವನ್ನು ಮಾಡಿದನು. ಹೋಷಂಗನಿಗೆ ಈ ವಿಷಯ ತಿಳಿದ ನಂತರ ಧಾರ್‌ನತ್ತ ತನ್ನ ತಂದೆಯ ಸೇವೆಯಲ್ಲಿ ಹಾಜರಾಗಲು ಹೊರಟನು. ಹೋಷಂಗನು ಮೂರು ವರ್ಷದ ಅವಧಿಯಲ್ಲಿ ಮಾಂಡುವಿನಲ್ಲಿ ಒಂದು ಸುಂದರವಾದ ಕೋಟೆಯನ್ನು ಕಟ್ಟಿಸಿದ್ದನು. ಈ ಕೋಟೆಯನ್ನು ಸುಣ್ಣದ ಗಾರೆ ಮತ್ತು ಕಲ್ಲುಗಳಿಂದ ಕಟ್ಟಲ್ಪಟ್ಟಿದೆ. ಅದು ಬಹಳ ಸದೃಢವಾಗಿದೆ ಎಂದು ಹೇಳಲಾಗುತ್ತದೆ. ಮಾಂಡು ನಗರದ ವಿಷಯದಲ್ಲಿ ಮುಂದಿನ ಪುಟಗಳಲ್ಲಿ ವಿವರವಾಗಿ ಹೇಳಲಾಗುತ್ತದೆ.

ದಿಲಾವರ್‌ಖಾನನನ್ನು ಬಾದಶಹನೆಂದು ಘೋಷಣೆ :

ಸುಲ್ತಾನ್ ನಾಸಿರುದ್ದೀನನ ಮರಣದ ನಂತರ ದಿಲ್ಲಿ ಸಾಮ್ರಾಜ್ಯದಲ್ಲಿ ದೊಡ್ಡ ಅಂತಃ ಕಲಹಗಳು ಹರಡಿದವು. ದಿಲಾವರ್‌ಖಾನನು ಮಾಳವದಲ್ಲಿ ತನ್ನ ಸದೃಢ ಶಾಸನವನ್ನು ಸ್ಥಿರಗೊಳಿಸಿಕೊಂಡನು. ತನ್ನ ಹೆಸರಿನ ಖುತ್ಬಾ (ಪ್ರಶಂಸಾತ್ಮಕ

ಪ್ರವಚನ)ವನ್ನು ಜಾರಿಗೊಳಿಸಿಕೊಂಡನು. ತನ್ನ ಶಾಸನ ಕಾಲದಲ್ಲಿ ಬಿಳಿಛತ್ರಿ, ಚಾಮರ, ಪರದೆ, ಕೆಂಪು ನಿಶಾನೆಗಳನ್ನು ಪಡೆದುಕೊಂಡನು.

ದಿಲಾವರನ ವಂಶ :

ದಿಲಾವರನ ಪೂರ್ವಜರು, ಹಿರಿಯರು ಆದ ಒಬ್ಬ ವ್ಯಕ್ತಿಯು ಘೋರ್‌ನಿಂದ ದೆಹಲಿಗೆ ಬಂದಿದ್ದರೆಂದು ಹೇಳಲಾಗುತ್ತದೆ. ಅಲ್ಲಿಂದ ದೆಹಲಿಯ ಬಾದಶಹರಲ್ಲಿ ನೌಕರಿಗೆ ಸೇರಿದರು. ನೌಕರಿಯನ್ನು ಬಹಳ ಶ್ರದ್ಧೆಯಿಂದ ಮಾಡಿದ ಫಲ ಒಳ್ಳೆಯ ಹೆಸರನ್ನು ಸಂಪಾದಿಸಿದನು. ಈ ವ್ಯಕ್ತಿಯ ಮಗನೊಬ್ಬನು ಪ್ರಗತಿಯನ್ನು ಹೊಂದುತ್ತಾ ಬಹಳ ಎತ್ತರಕ್ಕೆ ತಲುಪಿದನು. ಆತನ ಮೊಮ್ಮಗನಾದ ದಿಲಾವರ್‌ಖಾನನು ಫೈರೋಜಶಾಹ್‌ನ ಶಾಸನದ ಕಾಲದಲ್ಲಿ ಉನ್ನತ ಮಟ್ಟದ ಅಮೀರನೆನಿಸಿಕೊಂಡನು.

ದಿಲಾವರನ ಮರಣ :

ದಿಲಾವರನು ಅನೇಕ ವರ್ಷಗಳ ತನಕ ಬಹಳ ಜನಪ್ರಿಯನಾಗಿ ಆಡಳಿತವನ್ನು ನಡೆಸಿದನು. ಹಿಜರಿ ೮೦೮ರಲ್ಲಿ ಆತನು ಇಹಲೋಕವನ್ನು ತ್ಯಜಿಸಿದನು. ದಿಲಾವರನ ಆಡಳಿತದ ಕಾಲ (೨೦) ಇಪ್ಪತ್ತು ವರ್ಷಗಳಾಗಿದ್ದವು. ಇವುಗಳಲ್ಲಿ ನಾಲ್ಕು ವರ್ಷ ಬಾದಶಹನಾಗಿ ಆಳಿದ ದಿನಗಳು ಸೇರಿವೆ. ಕೆಲವು ಐತಿಹಾಸಿಕ ಗ್ರಂಥಗಳಿಂದ ತಿಳಿದುಬರುವುದೇನೆಂದರೆ ಆತನ ಮರಣ ವಿಷಪ್ರಾಶನದಿಂದ ಆಯಿತುಎಂದು. ಈ ಆಪಾದನೆ ಆತನ ಮಗನಾದ ಹೋಷಂಗನ ಮೇಲೆ ಇದೆ ಎಂದೂ ತಿಳಿದು ಬರುತ್ತದೆ.

■

*

೨. ಸುಲ್ತಾನ್ ಹೋಷಂಗ್ ಬಿನ್ ದಿಲಾವರ್‌ಖಾನ್ ಘೋರಿ

ಮುಜಫ್ಫರ್ ಗುಜರಾತಿಯ ಮಾಳವದ ಮೇಲೆ ಸೈನಿಕ ಕಾರ್ಯಕ್ರಮಗಳು :

ದಿಲಾವರ್‌ಖಾನನ ನಂತರ ಆತನ ಮಗ ಅಲಪ್‌ಖಾನನು ಸುಲ್ತಾನ್ ಹೋಷಂಗ್ ಎಂಬ ಬಿರುದಿನೊಂದಿಗೆ ಸಿಂಹಾಸನವನ್ನು ಏರಿದ್ದನು. ಎಲ್ಲ ಅಮೀರರು, ಶಾಸಕ ಮಾರ್ಗದವರೂ ಆತನ ಅಧೀನತೆಯ ದೀಕ್ಷೆಯನ್ನು ಪಡೆದುಕೊಂಡರು. ಸರಿಯಾಗಿ ಕಪ್ಪಕಾಣಿಕೆಗಳನ್ನು ಅರ್ಪಿಸುತ್ತೇವೆ. ಎಂದು ಪ್ರಮಾಣ ವಚನವನ್ನು ತೆಗೆದುಕೊಂಡರು. ಹೋಷಂಗನು ಆಡಳಿತದ ಲಗಾಮನ್ನು ತನ್ನ ಕೈಗೆ ತೆಗೆದುಕೊಂಡ ಕೆಲವೇ ದಿನಗಳಲ್ಲಿ ಗುಪ್ತಚರರಿಂದ ಸುದ್ದಿ ತಿಳಿದಿದ್ದೇನೆಂದರೆ-ಶಾಹ ಮುಜಫ್ಫರನು ಗುಜರಾತಿನಿಂದ ತನ್ನ ಸೈನ್ಯದೊಂದಿಗೆ ಮಾಳವ ದೇಶದ ಗಡಿಯನ್ನು ದಾಟಿ ಬರುತ್ತಿದ್ದಾನೆಂದು ತಿಳಿಯಿತು. ಇದರ ಕಾರಣವೇನೆಂದರೆ-ಸುಲ್ತಾನ್ ಮುಜಫ್ಫರನು, ದಿಲಾವರ್‌ಖಾನನೂ ಒಳ್ಳೆಯ ಸ್ನೇಹಿತರಾಗಿದ್ದು, ಅಣ್ಣತಮ್ಮಂದಿರಂತೆ ಆಳುತ್ತಿದ್ದರು. ಮುಜಫ್ಫರ ಗುಜರಾತಿಗೆ ತಿಳಿದುಬಂದದ್ದೇನೆಂದರೆ- ಹೋಷಂಗನು ತನ್ನ ತಂದೆಗೆ ವಿಷವನ್ನು ಕೊಡಿಸಿ ಸಾಯಿಸಿ ಆಡಳಿತವನ್ನು ತನ್ನ ವಶಕ್ಕೆ ತೆಗೆದುಕೊಂಡಿದ್ದನೆಂಬ ಕಾರಣಕ್ಕೆ ಆತನಿಗೆ ಶಿಕ್ಷಿಸಲು ಮಾಳವದ ಮೇಲೆ ಆಕ್ರಮಣವನ್ನು ಮಾಡಲು ಬಂದಿದ್ದನೆಂದು ತಿಳಿದುಬರುತ್ತದೆ.

ಇಬ್ಬರಲ್ಲೂ ಯುದ್ಧ :

ಈ ಸಮಾಚಾರವನ್ನು ತಿಳಿದ ಕೂಡಲೇ ಹೋಷಂಗನು ತನ್ನ ಸೈನ್ಯವನ್ನು ಸಿದ್ಧಗೊಳಿಸಿಕೊಂಡನು. ಸುಲ್ತಾನ್ ಗುಜರಾತಿಯನ್ನು ಎದುರುಗೊಳ್ಳಲು ಧಾರ ಕೋಟೆಯಿಂದ ಹೊರ ಬಂದನು. ಹಿಜರಿ ೮೧೧ರಲ್ಲಿ ಗುಜರಾತಿ ಮತ್ತು ಮಾಳವೀ ಸೈನ್ಯಗಳು ಎದುರುಬದುರಾದವು. ಇಬ್ಬರಲ್ಲೂ ಘೋರ ಯುದ್ಧವೇ ಆಯಿತು. ಇಬ್ಬರೂ ಬಹಳ ವೀರಾವೇಶದಿಂದ ಹೋರಾಡಿದರು. ಸುಲ್ತಾನ್ ಮುಜಫ್ಫರನು ಗಾಯಗೊಂಡನು.

ಹೋಷಂಗನು ಸಹ ಯುದ್ಧವಾಡುತ್ತಿದ್ದಾಗ ತನ್ನ ಕುದುರೆಯಿಂದ ಕೆಳಗೆ ಬಿದ್ದುಬಿಟ್ಟನು. ಇಷ್ಟಾದರೂ ಯುದ್ಧವೂ ನಡೆಯುತ್ತಲೇ ಇತ್ತು. ಕೊನೆಗೆ ಅದೃಷ್ಟಲಕ್ಷ್ಮೀಯು ಮುಜಫ್ಫರನ ಕೈ ಹಿಡಿದಳು. ಆತನಿಗೆ ಗೆಲುವು ಸಿಕ್ಕಿತು. ಸುಲ್ತಾನ್ ಹೋಷಂಗನು ಸೋತು 'ಧಾರ್' ಕೋಟೆಯೊಳಗೆ ಆಶ್ರಯವನ್ನು ಪಡೆದನು.

ಸುಲ್ತಾನ್ ಹೋಷಂಗನ ಸೆರೆ :

ಸುಲ್ತಾನ್ ಹೋಷಂಗನು ಯೋಚಿಸಿದ್ದೇನೆಂದರೆ–ಇನ್ನು ಸುಲ್ತಾನ್ ಮುಜಫ್ಫರನ ಕೈಯಿಂದ ತಪ್ಪಿಕೊಳ್ಳುವುದು ಸಾಧ್ಯವಿಲ್ಲವೆಂದು ತಿಳಿದು, ಶಾಂತಿಯನ್ನು ಬಯಸಿ ಬಾದಶಹನಿಗೆ ಹೇಳಿ ಕಳುಹಿಸಿದನು. ಬಾದಶಹನು ಒಪ್ಪಿದನು. ಹೋಷಂಗನು ಬಾದಶಹನ ಸೇವೆಯಲ್ಲಿ ಹಾಜರಾದನು. ಮುಜಫ್ಫರನು ಹೋಷಂಗನೊಂದಿಗೆ ಆತನ ಅಮೀರರೆಲ್ಲರನ್ನೂ ಸೆರೆ ಹಿಡಿದನು. ಇದಾದ ನಂತರ ಮುಜಫ್ಫರನು ತನ್ನ ಸಹೋದರನಾದ ಖಾನ್‌ಆಜಂಖಾನನಿಗೆ ಒಂದು ದೊಡ್ಡ ಸೈನ್ಯವನ್ನು ಕೊಟ್ಟು ಧಾರ್ ಕೋಟೆಯ ರಕ್ಷಣೆಯಲ್ಲಿರಲು ನೇಮಿಸಿ ತಾನು ಸ್ವತಃ ಗುಜರಾತಿಗೆ ವಾಪಸ್ಸಾದನು.

ಧಾರ್‌ನಿಂದ ನುಸ್ರತ್‌ಖಾನನ ಪದಚ್ಯುತಿ :

ನುಸ್ರತ್‌ಖಾನನು ಆಡಳಿತದ ಕಾರ್ಯದಲ್ಲಿ ಅನುಭವವನ್ನು ಹೊಂದಿರಲಿಲ್ಲ. ಆತನು ತನ್ನ ಆಡಳಿತದ ಮೊದಲನೇ ವರ್ಷವೇ ಪ್ರಜೆಗಳ ಮೇಲೆ ಭಾರಿ ಮೊತ್ತದ ಕಂದಾಯವನ್ನು ಹೇರಿದ. ಪ್ರಜೆಗಳಲ್ಲಿ ಆತನು ಹೇರಿದ್ದ ಹಣವನ್ನು ಕೊಡುವ ಶಕ್ತಿ ಇರಲಿಲ್ಲ. ಜನರು ಕಂದಾಯವನ್ನು ಕೊಡುವುದರಲ್ಲಿ ತಡಮಾಡಿದರೆ ಬಹಳ ಕಠಿಣವಾಗಿ ಹಿಂಸಿಸುತ್ತಿದ್ದನು. ಜನರು ಆತನಿಂದ ದೂರವಾಗತೊಡಗಿದರು. ಮಾಳವದ ಸೈನಿಕರು ನುಸ್ರತ್‌ಖಾನನ ವಿರುದ್ಧ ಶತ್ರುತ್ವವನ್ನು ಬೆಳೆಸಿಕೊಂಡರು. ಸಿಪಾಯಿಗಳು ಯೋಚಿಸಿದ್ದೇನೆಂದರೆ–ಸುಲ್ತಾನ್ ಮುಜಫ್ಫರನು ಗುಜರಾತಿಗೆ ಬಹಳ ದೂರ ಹೋಗಿಬಿಟ್ಟದ್ದಾನೆಂದು ತಿಳಿದು ಅವರು ನುಸ್ರತ್‌ಖಾನನನ್ನು ಧಾರ್ ನಗರದಿಂದಲೇ ಪದಚ್ಯುತಿಗೊಳಿಸಿ ಓಡಿಸಿಬಿಟ್ಟರು.

ನುಸ್ರತ್‌ಖಾನನು ಮಾಂಡು ಕೋಟೆಯಲ್ಲಿ :

ನುಸ್ರತ್‌ಖಾನನು ಮಾಳವದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಾಸಿಸುತ್ತಿದ್ದನು. ಮಾಳವಿ ಸೈನ್ಯವು ಆತನನ್ನು ಹಿಂಬಾಲಿಸುತ್ತಾ ಆತನ ಸ್ನೇಹಿತರನ್ನು ಹಿಡಿದು ಹಿಂಸಿಸುತ್ತಿದ್ದರು. ಸುಲ್ತಾನ್ ಮುಜಫ್ಫರನ ಹೆದರಿಕೆಯಿಂದ ನುಸ್ರತ್‌ಖಾನನು ಗುಜರಾತಿಗೆ ಹೋಗಲು ಇಷ್ಟಪಡಲಿಲ್ಲ. ಆತನು ಮಾಂಡುವಿನ ಶಾದಿಆಬಾದ್ ಕಡೆ ಹೊರಟನು. ಅಲ್ಲಿಯ ಒಂದು ಕೋಟೆಯಲ್ಲಿ ತಂಗಿದನು.

ಹೋಷಂಗನ ಪತ್ರ ಮುಜಫ್ಫರ್ ಗುಜರಾತಿಯ ಹೆಸರಿನಲ್ಲಿ :

ಇದಾದ ನಂತರ ಮಾಳವದ ಪ್ರಜೆಗಳು ಸುಲ್ತಾನ್ ಹೋಷಂಗನ ದಾಯಾದಿ ಸಹೋದರನಾದ ಮೂಸಾಖಾನನ್ನು ತಮ್ಮ ಶಾಸಕನಾಗಿ ಮಾಡಿಕೊಳ್ಳಲು ಆರಿಸಿದರು. ಹೋಷಂಗನಿಗೆ ಈ ವಿಷಯವು ತಿಳಿದ ಕೂಡಲೆ ಸುಲ್ತಾನ್ ಮುಜಫ್ಫರನಿಗೆ ಒಂದು ಪತ್ರವನ್ನು ಹೀಗೆ ಬರೆದ-ಜನಾಬ್ ಸುಲ್ತಾನರು ನನ್ನ ತಂದೆಯ ಸಮಾನರಾಗಿದ್ದು, ನಾನು ತಮಗೆ ಅಪಾರ ಗೌರವವನ್ನು ತೋರುವವನಾಗಿದ್ದಾನೆ. ನನ್ನ ವಿರುದ್ಧ ಪಿತೂರಿಕಾರರು ಹೇಳಿರುವ ಮಾತುಗಳೆಲ್ಲವೂ ಸುಳ್ಳು. ನಾನು ಕೇಳಿರುವುದೇನೆಂದರೆ- ಈ ದಿನಗಳಲ್ಲಿ ಮಾಳವದ ಅಮೀರಖಾನ ಆಜಂನ ಜೊತೆಯಲ್ಲಿ ಜನರು ಕೆಟ್ಟದಾಗಿ ವರ್ತಿಸಿರುತ್ತಾರೆ. ಹಾಗೂ ಮಾಳವದ ಜನರು ಮೂಸಾಖಾನನನ್ನು ತಮ್ಮ ಸರದಾರನನ್ನಾಗಿ ಆರಿಸಿರುವುದರಿಂದ ಆತನು ತನ್ನ ರಾಜ್ಯದ ಮೇಲೆ ಅಧಿಕಾರವನ್ನು ನಡೆಸುತ್ತಿದ್ದಾನೆ. ಹುಜೂರರು ನನ್ನನ್ನು ಸೆರೆಯಿಂದ ಬಿಡಿಸಿ ಸ್ವತಂತ್ರಗೊಳಿಸಿದರೆ ನಾನು ಪುನಃ ಆ ಪ್ರದೇಶವನ್ನು ನನ್ನ ವಶಕ್ಕೆ ಪಡೆಯಲು ಸಾಧ್ಯವಾಗುತ್ತದೆ. ಎಂದು ಪ್ರಾರ್ಥಿಸಿಕೊಂಡನು.

ಹೋಷಂಗನ ಬಿಡುಗಡೆ :

ಒಂದು ವರ್ಷದ ಬಳಿಕ ಸುಲ್ತಾನ್ ಹೋಷಂಗನನ್ನು ಸುಲ್ತಾನ್ ಮುಜಫ್ಫರನು ಬಿಡುಗಡೆಗೊಳಿಸಿದನು. ಆತನೊಂದಿಗೆ ಪ್ರಮಾಣವನ್ನು ಮಾಡಿಸಿಕೊಂಡು ಹಿಜರಿ-೮೨೧ರಲ್ಲಿ ಅಹಮದ್‌ಶಾಹನನ್ನು ಆತನ ಸಹಾಯಕ್ಕೆ ಕಳುಹಿಸಿಕೊಟ್ಟನು. ಅಹಮದ್‌ಶಾಹನು ಧಾರ್ ಮತ್ತು ಅದರ ಸುತ್ತಮುತ್ತಲ ವಿದ್ರೋಹಿ ಅಮೀರರಿಂದ ಆ ಜಾಗೀರಿಗಳನ್ನು ಕಿತ್ತು ಹೋಷಂಗನ ವಶಕ್ಕೆ ಕೊಡಿಸಿದನು. ಅಹಮದಶಾಹನು ತನ್ನ ಕೆಲಸವನ್ನು ಪೂರ್ಣಗೊಳಿಸಿ ಗುಜರಾತಿಗೆ ಬಂದನು.

ಮಾಂಡುವಿನ ಅಮೀರರಿಗೆ ಆಹ್ವಾನ :

ಸುಲ್ತಾನ್ ಹೋಷಂಗನು ಕೆಲವು ದಿನಗಳ ತನಕ ಧಾರನಲ್ಲಿ ನೆಲೆಸಿದ್ದನು. ಮೊದಲಿನ ಎಲ್ಲ ಆಪ್ತ ಸಿಪಾಯಿಗಳು ಇವನ ಗುಂಪಿನಲ್ಲಿ ಸೇರಿಕೊಂಡರು. ಆತನು ಮಾಂಡುವಿನ ಶಾದಿಆಬಾದನಲ್ಲಿದ್ದ ಎಲ್ಲ ಅಮೀರರನ್ನು ತನ್ನಲ್ಲಿಗೆ ಬರುವಂತೆ ಆಹ್ವಾನಿಸಿದನು. ಎಲ್ಲ ಅಮೀರರೂ ಬಾದಶಹನ ಈ ಕ್ರಮದಿಂದಾಗಿ ಸಂತೋಷಪಟ್ಟರು. ಆದರೆ ಅವರು ಬಾದಶಹನ ಸೇವೆಯಲ್ಲಿ ಹಾಜರಾಗಲಿಲ್ಲ. ಏಕೆಂದರೆ ಅಮೀರರ ಎಲ್ಲ ಸಂಬಂಧಿಕರು ಮಕ್ಕಳು ಕೋಟೆಯಲ್ಲಿ ಸ್ಥಿರವಾಗಿ ನೆಲೆಸಿದ್ದರು. ಅವರನ್ನೆಲ್ಲಾ ಬಿಟ್ಟು ಬಾದಶಹನ ಹತ್ತಿರ ಹೋಗಲು ಸಾಧ್ಯವಾಗಲಿಲ್ಲ.

ಯುದ್ಧ :

ಸುಲ್ತಾನ್ ಹೋಷಂಗನು ಅಮೀರರ ಈ ವರ್ತನೆಯಿಂದ ಕೋಪಗೊಂಡನು. ಇದರ ಅರ್ಥ ವಿದ್ರೋಹದ ಸೂಚನೆಯೆಂದು ತಿಳಿದು, ತನ್ನ ಸೈನ್ಯವನ್ನು ತೆಗೆದುಕೊಂಡು ಧಾರ್‌ನ ಹತ್ತಿರದ ಕಸಬಾ ಮೆಹರ್‌ನಲ್ಲಿ ಬಂದನು. ಅಲ್ಲಿಗೆ ತಲುಪಿ ಯುದ್ಧವನ್ನು ಪ್ರಾರಂಭಿಸಿದನು. ಹೋಷಂಗನ ಸಿಪಾಯಿಗಳು ಪ್ರತಿನಿತ್ಯ ಗಾಯಗೊಳ್ಳುತ್ತಿದ್ದರು. ಯಾವುದೇ ನಿರ್ಣಾಯಕ ತೀರ್ಮಾನ ಆಗುತ್ತಿರಲಿಲ್ಲ. ಕೊನೆಗೆ ಇಲ್ಲಿಂದ ಬೇಗ ಹಿಂತಿರುಗುವುದೇ ಮೇಲೆಂದು ತೀರ್ಮಾನಿಸಿ, ತನ್ನ ರಾಜಧಾನಿಯತ್ತ ಹೋಗಿ ಅಲ್ಲಿ ಉತ್ತಮ ವ್ಯವಸ್ಥೆಯನ್ನು ಮಾಡಿಕೊಳ್ಳಲು ಹೊರಟನು.

ಮಲಿಕ್‌ಖಿಜರ್ ಮತ್ತು ಮಲಿಕ್ ಮಗೀಸ್‌ನ ಚರ್ಚೆ :

ಹೋಷಂಗನು ತನ್ನ ಅಮೀರರನ್ನು ಕಸಬಾ ಮತ್ತು ಪರಗಣ ಜಿಲ್ಲೆಗಳನ್ನು ವಶಪಡಿಸಿಕೊಳ್ಳಲು ಕಳುಹಿಸಿದನು. ಅದೇ ಸಂದರ್ಭದಲ್ಲಿ ಹೋಷಂಗನ ತಂದೆಯ ತಂಗಿಯ ಮಗನಾದ ಮಲಿಕ್ ಮಂಗಿಸ್‌ನು ಮಲಿಕ್ ಖಿಜರ್ ಉರ್ಫ ಮಿಯಾಖಾನನನ್ನು ಕುರಿತು ಹೀಗೆಂದನು. ಮೂಸಾಖಾನನು ಒಬ್ಬ ಒಳ್ಳೆಯ ಗುಣಾಢ್ಯನು, ಸಂಬಂಧಿಕನೂ ಆಗಿದ್ದರೂ ಸಹ ಸುಲ್ತಾನ್ ಹೋಷಂಗನು ಮೌಸಾಖಾನನಿಗಿಂತ ಉತ್ತಮ ಶಾಸಕನೂ, ಧೈರ್ಯಶಾಲಿಯು ಆಗಿರುತ್ತಾನೆ. ಅಷ್ಟೇ ಅಲ್ಲದೆ ಹೋಷಂಗನು ಈ ರಾಜ್ಯದ ನಿಜವಾದ ಹಕ್ಕುದಾರನೂ ಆಗಿರುತ್ತಾನೆ. ಆತನ ಲಾಲನೆ ಪಾಲನೆ ಶಿಕ್ಷಣವೆಲ್ಲವೂ ನನ್ನ ತಾಯಿಯ ನೆರಳಿನಲ್ಲಿ ನಡೆದಿದೆ. ಆದ್ದರಿಂದ ನಾನು ಆಡಳಿತವನ್ನು ಆತನ ವಶಕ್ಕೆ ಬಿಡುವುದು ಒಳ್ಳೆಯದೆಂದು ತೀರ್ಮಾನಿಸಿದ್ದೇನೆ. ಈ ಮಾತುಗಳನ್ನು ಕೇಳಿದ ಮಲಿಕ್ಖಿಜರನು ಮಲಿಕ್‌ಮಗೀನ ಸಹಾಯಕ್ಕೆ ನಿಂತನು. ಅದೇ ದಿನ ರಾತ್ರಿಯಲ್ಲಿ ಈ ಇಬ್ಬರೂ ಅಮೀರರು ಕೋಟೆಯಿಂದ ಕೆಳಗಿಳಿದು ಬಂದು ಹೋಷಂಗನೊಂದಿಗೆ ಸೇರಿಕೊಂಡನು.

ಮಾಂಡುವಿನ ಕೋಟೆಯ ವಶ :

ಸುಲ್ತಾನ್ ಹೋಷಂಗನು ಮಲಿಕ್ ಮಗೀಸ್‌ನಿಗೆ ತನ್ನ ಹತ್ತಿರ ಕಾಯಂ ಸಹಾಯಕನನ್ನಾಗಿ ನೇಮಿಸಿಕೊಳ್ಳುತ್ತೇನೆಂದು ವಾಗ್ದಾನವನ್ನು ಮಾಡಿದನು. ಈ ವಾಗ್ದಾನದಿಂದ ಮಲಿಕ್ ಮಂಗೀಸನು ಬಹಳ ಸಂತೋಷಪಟ್ಟನು. ಮೂಸಾಖಾನನಿಗೆ ಈ ವಿಷಯವು ತಿಳಿದು ತುಂಬಾ ಚಿಂತಾಕ್ರಾಂತನಾದನು. ಆತನ ಸ್ವಪ್ನಗಳ ಗಾಜಿನ ಅರಮನೆ ಒಡೆದು ಚೂರು ಚೂರಾಯಿತು. ಆತನು ಬಹಳ ಚೆನ್ನಾಗಿ ಅರ್ಥಮಾಡಿಕೊಂಡಿದ್ದೇನೆಂದರೆ ಈಗ ಶಾಸನದ ಅಧಿಕರಾವನ್ನು ತನ್ನ ಕೈಯಲ್ಲಿ ತೆಗೆದುಕೊಳ್ಳುವುದು ಅಸಾಧ್ಯವೆಂದರಿತನು. ತಕ್ಷಣ ಕೋಟೆಯನ್ನು ಖಾಲಿ ಮಾಡಿಸಿ ಓಡಿದನು.

ಮಲಿಕ್ ಮಗೀಸನ ಸನ್ಮಾನ :

ಇದಾದ ನಂತರ ಹೋಷಂಗನು ಮಾಂಡು ಕೋಟೆಯನ್ನು ತನ್ನ ವಶಕ್ಕೆ ಪಡೆದುಕೊಂಡನು. ಆತನು ಕೋಟೆಯಲ್ಲಿ ಪ್ರವೇಶಿಸಿ ರಾಜಧಾನಿಯ ಅರಮನೆಯಲ್ಲಿ ನೆಲೆಸಿದನು. ಹೋಷಂಗನು ತನ್ನ ವಾಗ್ದಾನವನ್ನು ಪೂರೈಸಿದನು. ಮಲಿಕ್ ಮಗೀಸನಿಗೆ "ಮಲಿಕ್‌ಶರ್ಫ್" ಎಂಬ ಬಿರುದನ್ನು ನೀಡಿ ಮುಖ್ಯಮಂತ್ರಿಯ ಹುದ್ದೆಯನ್ನು ನೀಡಿ ಗೌರವಿಸಿದನು. ನಂತರ ತನ್ನ ಎಲ್ಲ ರಾಜಕೀಯ ಕಾರ್ಯಗಳಲ್ಲಿ ತನ್ನ ಆಪ್ತ ಗರ್ವನರ ಆಗಿ ನೇಮಿಸಿದ್ದೇ ಅಲ್ಲದೆ, ಖಾಯಂ ನಿವಾಸಿಯಾಗಿ ಇಟ್ಟುಕೊಂಡನು.

ಗುಜರಾತಿನಲ್ಲಿ ಮುಜಫ್ಫರಶಾಹನ ಮಕ್ಕಳ ಗಲಭೆ :

ಹಿಜರಿ ೮೧೧೦ರಲ್ಲಿ ಸುಲ್ತಾನ್ ಮುಜಫ್ಫರನ ಮರಣವಾಯಿತು. ಶಾಸನಾಧಿಕಾರವು ಅಹಮದ್‌ಶಾಹ್ ಬಿನ್ ಮಹಮ್ಮದ್‌ಶಾಹ್ ಬಿನ್ ಮುಜಫ್ಫರ್‌ಶಾಹ್‌ನ ಕೈಗೆ ಸಿಕ್ಕಿತು. ಮುಜಫ್ಫರಶಾಹನ ಗಂಡು ಮಕ್ಕಳಾದ ಫೈರೋಜಖಾನ್, ಹೀಬತ್‌ಖಾನ್‌ರುಗಳು ಭರೋಚ್‌ನಲ್ಲಿ ಪಿತೂರಿ, ಗಲಭೆಗಳನ್ನು ಹೆಚ್ಚಿಸಿದರು.

ಸುಲ್ತಾನ್ ಹೋಷಂಗನಿಂದ ಸಹಾಯವನ್ನು ಬೇಡಿದರು. ಸುಲ್ತಾನ್ ಹೋಷಂಗನು ಮುಜಫ್ಫರಶಾಹನ ಹಾಗೂ ಅಹಮದ್‌ಶಾಹನ ಎಲ್ಲ ಉಪಕಾರಗಳನ್ನು ಮರೆತು ಗುಜರಾತಿನಲ್ಲಿ ಪ್ರವೇಶಿಸಿದನು. ಹಾಗೂ ದುರ್ವರ್ತನೆಗಳನ್ನು ಪ್ರಾರಂಭಿಸಿದನು. ಸುಲ್ತಾನ್ ಅಹಮದ್‌ಶಾಹನಿಗೆ ಈ ಸಮಾಚಾರವು ಸಿಕ್ಕಿದ್ದರಿಂದ ಆತನು ಒಂದು ದೊಡ್ಡ ಸೈನ್ಯವನ್ನು ತೆಗೆದುಕೊಂಡು ಭರೋಚ್ ಕಡೆಗೆ ಬಂದನು.

ಭರೋಚ್ ಕೋಟೆಯ ಮುತ್ತಿಗೆ :

ಸುಲ್ತಾನ್ ಅಹಮದ್‌ಶಾಹ್‌ನು ಭರೋಚ್ ಕೋಟೆಯನ್ನು ಮುತ್ತಿದನು. ಫೈರೋಜ್‌ಖಾನ ಮತ್ತು ಹೀಬತ್‌ಖಾನರಲ್ಲಿ ಅಹಮದ್‌ಶಾಹ್‌ನ ಸೈನ್ಯವನ್ನೆದುರಿಸುವಷ್ಟು ಶಕ್ತಿ ಇರಲಿಲ್ಲ. ಅವರಿಬ್ಬರೂ ತುಂಬ ಚಿಂತಿತರಾದರು. ಕೊನೆಗೆ ಅವರು ಶಾಂತಿ ಸಂಧಾನವನ್ನು ಬಯಸಿ, ಅಹಮದ್‌ಶಾಹನೊಂದಿಗೆ ಸೇರಿಕೊಂಡರು. ಸುಲ್ತಾನ್ ಹೋಷಂಗನಿಗೆ ಈ ಸುದ್ದಿ ತಿಳಿದ ಮೇಲೆ ಆತನು ಅರ್ಧ ದಾರಿಯಿಂದ ಹಿಂದಕ್ಕೆ ಬಂದು ಬಿಟ್ಟನು. ಈ ವಿಚಾರದಲ್ಲಿ ಆತನು ಆಡಿದ ಮಾತುಗಳಲ್ಲಿ ಬಹಳ ತಪ್ಪು ಭಾವನೆ ಇತ್ತು. ಇದಾದ ನಂತರ ಆತನು ಮತ್ತೊಂದು ತಪ್ಪನ್ನು ಮಾಡಿದನು. ಅದರ ವಿವರ ಹೀಗಿದೆ.

ರಾಜ ಜಾಲೂರನ ಸಹಾಯ :

ಹಿಜರಿ ೮೨೨ರಲ್ಲಿ ಸುಲ್ತಾನ್ ಹೋಷಂಗನಿಗೆ ತಿಳಿದಿದ್ದೇನೆಂದರೆ – ಸುಲ್ತಾನ್

ಅಹಮ್ಮದಶಾಹ ಗುಜರಾತಿಯು ರಾಜ ಜಾಲೂರನ ಮೇಲೆ ಸೈನಿಕಾಚರಣೆಯಲ್ಲಿ ತೊಡಗಿದ್ದಾನೆಂದು ರಾಜ ಜಾಲೂರನು ಸುಲ್ತಾನ್ ಹೋಷಂಗನ ಸಹಾಯಕ್ಕೆ ಪತ್ರವನ್ನು ಬರೆದನು. ಹೋಷಂಗನು ಹಿಂದಿನ ಎಲ್ಲ ಉಪಕಾರಗಳನ್ನೂ ಮರೆತು ಸೈನ್ಯವನ್ನು ಸಿದ್ಧಗೊಳಿಸಿ ರಾಜನ ಸಹಾಯಕ್ಕೆಂದು ಗುಜರಾತಿನ ಕಡೆಗೆ ಹೊರಟನು. ಗುಜರಾತಿನ ಅನೇಕ ಪ್ರದೇಶಗಳಲ್ಲಿ ಬಹಳ ನಷ್ಟವನ್ನುಂಟು ಮಾಡಿದನು.

ಹೋಷಂಗನು ವಾಪಸ್ಸಾದನು :

ಸುಲ್ತಾನ್ ಅಹಮದ್‌ಶಾಹನಿಗೆ ಈ ಸಮಾಚಾರವು ತಿಳಿಯಿತು. ಸುಲ್ತಾನ್ ಹೋಷಂಗನಿಗೆ ಬುದ್ಧಿ ಕಲಿಸಬೇಕೆಂದು ಸೊಂಟ ಕಟ್ಟಿದನು. ಸುಲ್ತಾನ್ ಹೋಷಂಗನು ಇನ್ನೂ ರಾಜ ಚಾಲೂರನಿಗೆ ಸಹಾಯವನ್ನು ಮಾಡಿರಲೇ ಇಲ್ಲ. ಅಷ್ಟರೊಳಗೆ ಸುಲ್ತಾನ್ ಅಹಮದ್‌ಶಾಹನು ಹೋಷಂಗನ ಎದುರಿಗೆ ಬಂದೇ ಬಿಟ್ಟನು. ಸುಲ್ತಾನ್ ಹೋಷಂಗನು ಚಿಂತಿತನಾಗಿ ತನ್ನ ರಾಜ್ಯದತ್ತ ಓಡಿದನು.

ನಸೀರ್‌ಖಾನನ ಸಹಾಯ :

ಅದೇ ದಿನಗಳಲ್ಲಿ ನಸೀರ್‌ಖಾನನು ಥಾನೇಶ್ವರ ಕೋಟೆಯುನ್ನು ವಶಪಡಿಸಿಕೊಳ್ಳಬೇಕೆಂಬ ಹುನ್ನಾರದಲ್ಲಿದ್ದನು. ಈ ಕೋಟೆಯು ಆತನ ಕಿರಿಯ ಸಹೋದರನಾದ ಮಲಿಕ್ ಇಫ್ತೆಖಾರ್‌ನ ಹಿಡಿತದಲ್ಲಿತ್ತು. ಅದನ್ನು ಅವನ ತಂದೆಯು ಕೊಟ್ಟಿದ್ದನು. ನಸೀರ್‌ಖಾನ ಫಾರೂಖಿಯು ಸುಲ್ತಾನ್ ಹೋಷಂಗನ ಸಹಾಯವನ್ನು ಬೇಡಿದನು. ಹೋಷಂಗನು ಅವನ ಬೇಡಿಕೆಯನ್ನು ಒಪ್ಪಿ ತನ್ನ ಮಗನಾದ ಜೈನ್‌ಖಾನನನ್ನು ೧೫ ಸಾವಿರ ಸೈನ್ಯದೊಂದಿಗೆ ನಸೀರಖಾನನ ಸಹಾಯಕ್ಕೆಂದು ಕಳುಹಿಸಿದನು. ನಸೀರಖಾನನು ಫಜ್ನೈನ್‌ಖಾನನ ಸಹಾಯದಿಂದ ಥಾನೇಶ್ವರ ಕೋಟೆಯನ್ನು ವಶಪಡಿಸಿಕೊಂಡನು. ನಂತರ ಸುಲ್ತಾನ್‌ಪುರದ ಸುತ್ತಲಿನ ಪ್ರದೇಶದಲ್ಲಿ ಪ್ರವೇಶಿಸಿದನು.

ಗುಜರಾತಿನ ಜಮೀನುದಾರರ ಅರ್ಜಿಗಳು :

ಸುಲ್ತಾನ್ ಅಹಮದ್‌ಶಾಹನು ನಸೀರಖಾನನನ್ನು ಅಡಗಿಸಲು ಮನಸ್ಸು ಮಾಡಿದನು. ಈ ಉದ್ದೇಶದಿಂದ ಆತನತ್ತ ಹೊರಟನು. ಗುಜರಾತಿನ ಜಮೀನದಾರರು ವಿಶೇಷ ರೀತಿಯಲ್ಲಿ ರಾಜಜಾಲೂರ, ಜನಾನೇರ್‌ನ ರಾಜ, ರಾಜ ನಾವದತ್ತ ಮತ್ತು ಐದರನ ಶಾಸಕರುಗಳು ಸಮಯವನ್ನು ನೋಡಿ ಸುಲ್ತಾನ್ ಹೋಷಂಗನ ಸೇವೆಯಲ್ಲಿ ಅರ್ಜಿಗಳನ್ನು ಕಳುಹಿಸಿದರು. ಅರ್ಜಿಗಳ ವಿಷಯ ಮೊದಲನೆ ಸಲ ನಮ್ಮಿಂದ ತಮ್ಮ ಸೇವೆಯಲ್ಲಿ ನ್ಯೂನತೆ ಆಗಿದೆ. ಆದರೆ ಈಗ ನಮ್ಮ ಪ್ರಾಣಗಳನ್ನೇ ಕೊಡಲು ಹಿಂಜರಿಯುವುದಿಲ್ಲ. ತಾವೇನಾದರೂ ಗುಜರಾತಿನ ಮೇಲೆ ಸೈನಿಕಾಚರಣೆಯಲ್ಲಿ

ತೊಡಗಿದರೆ ತಾವೇನಾದರೂ ನಮಗೆ ದಾರಿ ತೋರಲು ಹೇಳಿದರೆ ನಾವು ನಿಮ್ಮನ್ನು ಅಹಮದ್‌ಶಾಹನಿಗೆ ಗೊತ್ತಿಲ್ಲದಂತೆ ಕರೆದುಕೊಂಡು ಹೋಗಲು ಸಿದ್ಧರಿದ್ದೇವೆ.

ಹೋಷಂಗನ ಇಚ್ಛೆ ಗುಜರಾತಿನ ಕಡೆಗೆ :

ಈ ತೆರನಾದ ಪತ್ರಗಳನ್ನು ಓದಿದ ಹೋಷಂಗನು ತನ್ನ ಸೈನ್ಯದ ಸಿದ್ಧತೆಯಲ್ಲಿ ತೊಡಗಿದನು. ಹಿಜರಿ ೮೨೧ರಲ್ಲಿ ಮೆಹ್ರಾಸಾದ ದಾರಿಯಿಂದ ಗುಜರಾತಿನತ್ತ ಹೊರಟನು. ಅಕಸ್ಮಾತಾಗಿ ಅದೇ ದಿನಗಳಲ್ಲಿ ಸುಲ್ತಾನ್ ಅಹಮದ್‌ಶಾಹನು ಸುಲ್ತಾನ್‌ಪುರ ನದರ್‌ಬಾರ್‌ನ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಂಚರಿಸುತ್ತಿದ್ದನು. ಘಜ್ನೈನ್‌ಖಾನನು ಮಾಳವದತ್ತ ಓಡಿದನು. ಮತ್ತು ನಸೀರ್‌ಖಾನನು ಆಹೇರ್ ಕಡೆಗೆ ಓಡಿದನು.

ಸುಲ್ತಾನ್ ಅಹಮದ್ ಮೆಹ್ರಾಸದ ಕಡೆ :

ಸುಲ್ತಾನ್ ಅಹಮದ್‌ಶಾಹನಿಗೆ ಹೋಷಂಗನು ಮೇಹ್ರಾಸದಲ್ಲಿ ಬಂದಿದ್ದಾನೆಂದು ತಿಳಿಯಿತು. ಹೋಷಂಗನನ್ನು ಅಡಗಿಸಲು ಎಲ್ಲಕ್ಕಿಂತ ಮೊದಲನೆ ಕೆಲಸವೆಂದು ತಿಳಿದು ಬಹಳ ಬೇಗ ಪ್ರಯಾಣದ ಮಜಲುಗಳನ್ನು ಪಾರು ಮಾಡುತ್ತಾ, ಮೇಹ್ರಾಸಾ ತಲುಪಿದನು. ಗುಪ್ತಚರರು ಹೋಷಂಗನಿಗೆ ಅಹಮದ್‌ಶಾಹನು ಬರುತ್ತಿದ್ದಾನೆಂದು ತಿಳಿಸಿದರು. ಹೋಷಂಗನು ತುಂಬಾ ಚಿಂತಿತನಾದನು. ಆತನು ಅರ್ಜಿ ಬರೆದಿದ್ದ ಎಲ್ಲಾ ಜಮೀನ್ದಾರರನ್ನು ತನ್ನ ಬಳಿಗೆ ಕರೆಯಿಸಿಕೊಂಡನು.

ಹೋಷಂಗ ವಾಪಸ್ಸಾದನು :

ಸುಲ್ತಾನ್ ಹೋಷಂಗನು ಅರ್ಥ ಮಾಡಿಕೊಂಡಿದ್ದೇನೆಂದರೆ ಆತನಿಗೆ ಜಮೀನ್ದಾರರು ಕರೆಸಿದ್ದುದರಲ್ಲಿ ಏನೋ ಮೋಸವಿದೆ ಎಂದು ತಿಳಿದು ಎಲ್ಲ ಜಮೀನದಾರರನ್ನು ಚೆನ್ನಾಗಿ ಬೈದು ತಾನೂ ಯಾವ ದಾರಿಯಲ್ಲಿ ಬಂದಿದ್ದನೋ ಅದೇ ದಾರಿಯಿಂದ ವಾಪಸ್ಸಾದನು.

ಸುಲ್ತಾನ್ ಅಹಮದ್‌ಶಾಹ ಗುಜರಾತಿಯ ಆಸೆ ಮಾಳವ :

ಸುಲ್ತಾನ್ ಅಹಮದ್‌ಶಾಹ ಗುಜರಾತಿಯು ಕೆಲವು ದಿನಗಳ ತನಕ ಮೆಹ್ರಾಸದಲ್ಲಿ ತಂಗಿದನು. ಏಕೆಂದರೆ ಇನ್ನಷ್ಟು ಸೈನ್ಯ ತನ್ನ ಸೈನ್ಯದೊಂದಿಗೆ ಬಂದು ಸೇರಿಕೊಳ್ಳಲಿ ಎಂದು ಸೈನ್ಯ ಬಂದರೆ ಆತನು ಹಿಜರಿ ೮೪೪ರಲ್ಲಿ ಮಾಳವದ ಮೇಲೆ ಆಕ್ರಮಣವನ್ನು ಮಾಡಲು ಇಚ್ಛೆಸಿದ್ದನು. ಈ ಉದ್ದೇಶದಿಂದ ಹಗಲು ರಾತ್ರಿ ಪ್ರಯಾಣವನ್ನು ಮಾಡುತ್ತಾ ಬೇಗ ಬೇಗ 'ಕಾಲಿಯಾದ' ಪ್ರದೇಶದ ಗಡಿಯಲ್ಲಿ ತಲುಪಿ ಅಲ್ಲಿ ತಂಗಿದನು.

ಹೋಷಂಗನ ಸೋಲು :

ಸುಲ್ತಾನ್ ಹೋಷಂಗನು ತನ್ನ ಸೈನ್ಯವನ್ನು ಸಿದ್ಧಮಾಡಿಕೊಂಡನು. ಯುದ್ಧದ

ಉದ್ದೇಶದಿಂದಲೇ ಗುಜರಾತಿ ಸೈನ್ಯದ ಎದುರು ಬಂದನು. ಇಬ್ಬರಲ್ಲೂ ಭಯಂಕರ ಯುದ್ಧವಾಯಿತು. ಈ ಹೊಡೆದಾಟದಲ್ಲಿ ಸುಲ್ತಾನ್ ಅಹಮ್ಮದಶಾಹನ ಕೈ ಮೇಲಾಯಿತು. ಹೋಷಂಗನು ಸೋತು ಮಾಂಡುವಿನ ಶಾದಿಆಬಾದ್ ಕೋಟೆಯಲ್ಲಿ ಅಡಗಿದನು. ಸುಲ್ತಾನ್ ಅಹಮದಶಾಹನು ಕೋಟೆಯ ಬಾಗಿಲ ಬಳಿಯವರೆಗೂ ಹಿಂಬಾಲಿಸಿ ಬಂದನು. ಸೋತ ಸೈನ್ಯದ ಅಪಾರ ಯುದ್ಧ ಸಾಮಗ್ರಿ ಸಾಮಾನುಗಳನ್ನು ತನ್ನ ವಶಕ್ಕೆ ಪಡೆದುಕೊಂಡನು.

ಸುಲ್ತಾನ್ ಅಹಮದ್‌ಶಾಹ ಗುಜರಾತಿಯು ವಾಪಸ್ಸಾದನು :

ಸುಲ್ತಾನ್ ಅಹಮದ್ ಗುಜರಾತಿಯು ತನ್ನ ಅಮೀರರನ್ನು ಮಾಳವದ ಸುತ್ತ ಮುತ್ತಲಿನ ಕೋಟೆಗಳನ್ನು ಗೆಲ್ಲಲು ಕಳುಹಿಸಿದನು. ಮಾಂಡುವಿನ ಶಾದಿಆಬಾದ ಕೋಟೆಯು ಬಹಳ ಗಟ್ಟಿ ಹಾಗೂ ದೃಢವಾಗಿದ್ದುದರಿಂದ ಅಹ್ಮದ ಗುಜರಾತಿಯು ಅದನ್ನು ಗೆಲ್ಲುವ ವಿಚಾರವನ್ನು ಬಿಟ್ಟು ಧಾರ ಎಂಬ ಸ್ಥಳಕ್ಕೆ ಬಂದನು. ಇಲ್ಲಿಂದ ಅವನು ಉಜ್ಜೈನಿ ಕಡೆಗೆ ಹೋಗುವ ಆಸೆ ಇತ್ತು. ಆದರೆ ಮಳೆಗಾಲವು ಪ್ರಾರಂಭವಾಯಿತು. ಗುಜರಾತಿ ಅಮೀರರು ಸುಲ್ತಾನ್ ಅಹಮದಶಾಹನನ್ನು ಈ ವರ್ಷದ ಮಟ್ಟಿಗೆ ಯುದ್ಧಗಳನ್ನು ನಿಲ್ಲಿಸಿ ತಮ್ಮ ರಾಜಧಾನಿಗೆ ವಾಪಸ್ ಹೋಗುವುದೇ ಒಳ್ಳೆಯದೆಂದು ಸಲಹೆಯನ್ನು ಕೊಟ್ಟರು. ಪಿತೂರಿಕೋರರಿಗೆ ಶಿಕ್ಷೆಯನ್ನು ಕೊಡಬೇಕಾಗಿರುವುದರಿಂದ ಮಾಳವದ ಗೆಲುವನ್ನು ಮುಂದಿನ ವರ್ಷದಲ್ಲಿ ಸಾಧಿಸಲು ಹೇಳಿದರು. ಸುಲ್ತಾನ್‌ನು ಈ ಸಲಹೆಯನ್ನು ಒಪ್ಪಿ ಗುಜರಾತಿನತ್ತ ರವಾನೆಯಾದನು.

ಮಹಮೂದ್ ಬಿನ್ ಮಲಿಕ್ ಮಗೀಸ್‌ನ ಉನ್ನತಿ :

ಇದೇ ವರ್ಷ ಸುಲ್ತಾನ್ ಹೋಷಂಗನು ಮಲಿಕ್ ಮಗೀಸನ ಮಗ ಮಲಿಕ್ ಮಹಮೂದ್‌ನು ಬಹಳ ಪ್ರಾಮಾಣಿಕ ಗುಣಾಢ್ಯನಾಗಿದ್ದುದರಿಂದ ಆತನಿಗೆ ಮಹಮೂದ್‌ಖಾನ ಎಂಬ ಬಿರುದನ್ನು ಕೊಟ್ಟು ಆತನ ತಂದೆಯ ಜೊತೆಯಲ್ಲಿಯೇ ರಾಜ್ಯದ ರಾಜಕೀಯ ವ್ಯವಹಾರಗಳನ್ನು ತಿಳಿಯಲು ಸೇರಿಸಿದನು. ಸುಲ್ತಾನನು ಎಲ್ಲಿಗಾದರೂ ಹೋದಾಗ, ಹೋಷಂಗನು ಮಲಿಕ್ ಮಗೀಸನನ್ನು ಕೋಟೆಯಲ್ಲಿಯೇ ಬಿಟ್ಟು ಹೋಗುತ್ತಿದ್ದನು. ಏಕೆಂದರೆ ಆಡಳಿತದ ಯಾವುದೇ ಸಮಸ್ಯೆ ಬಂದರೂ ಆತನೇ ಬಗೆಹರಿಸಿಕೊಳ್ಳತಕ್ಕದೆಂದು ನಿಶ್ಚಯಿಸಿದ್ದನು. ಮಲಿಕ್ ಮಗೀಸ ಮಗನನ್ನು ಬಾದಶಹನು ತನ್ನ ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದನು.

ಸುಲ್ತಾನ್ ಅಹಮದ್ ಮತ್ತು ಹೋಷಂಗನಲ್ಲಿ ಸಂಧಿ :

ಇದೇ ವರ್ಷದ ಕೊನೆಯಲ್ಲಿ ಸುಲ್ತಾನ್ ಅಹಮದ್ ಗುಜರಾತಿಯು ಮನಸ್ಸು ಮಾಡಿದ್ದೇನೆಂದರೆ–ಮಾಳವ ದೇಶದಲ್ಲಿ ಪ್ರವೇಶ ಮಾಡಿ, ಪಿತೂರಿ, ಗಲಭೆಗಳನ್ನು

ಹೆಚ್ಚು ಮಾಡಬೇಕೆಂದು. ಸುಲ್ತಾನ್ ಹೋಷಂಗನಿಗೆ ಈ ವಿಷಯವು ತಿಳಿಯಿತು. ಆತನು ತನ್ನ ದೂತರೊಂದಿಗೆ ಬಹಳ ಬೆಲೆ ಬಾಳುವ ಉಡುಗೊರೆ, ಹಣ, ಬಹುಮಾನಗಳನ್ನು ಸುಲ್ತಾನ್ ಅಹಮದ್‌ಶಾಹ ಗುಜರಾತಿಯ ಸೇವೆಯಲ್ಲಿ ಕಳುಹಿಸಿದನು. ಹಾಗೂ ಸಂಧಿಯ ಪ್ರಸ್ತಾಪವನ್ನು ಮುಂದಿಟ್ಟನು. ಸುಲ್ತಾನ್ ಅಹಮದ್‌ಶಾಹನು ಹೋಷಂಗನ ಬೇಡಿಕೆಯನ್ನು ಆತನು ಕಳುಹಿಸಿರುವ ಬಹುಮಾನಗಳನ್ನೂ ಒಪ್ಪಿ, ಸ್ವೀಕರಿಸಿ ಯುದ್ಧದ ಮನಸ್ಸನ್ನು ಕೈಬಿಟ್ಟನು.

ಖೇರಾಲಾದ ಮೇಲೆ ಆಕ್ರಮಣ ಮತ್ತು ಗೆಲುವು :

ಹಿಜರಿ ೮೨೩ರಲ್ಲಿ ಸುಲ್ತಾನ್ ಹೋಷಂಗನು ಕಸಬಾ ಖೇರಾಲದ ಮೇಲೆ ಆಕ್ರಮಣವನ್ನು ನಡೆಸಿದನು. ಅದು ಬರಾರ್‌ನ ಸರಹದ್ದಿನಲಿತ್ತು. ಖೇರಾಲದ ಶಾಸಕನು ೫೦ ಸಾವಿರ ಸವಾರರ ಸೈನ್ಯದೊಂದಿಗೆ ಹೋಷಂಗನ ಸೈನ್ಯದ ಎದುರು ಯುದ್ಧಕ್ಕೆ ಬಂದನು. ಇಬ್ಬರಲ್ಲೂ ಭಯಂಕರ ಯುದ್ಧವಾಯಿತು. ಖೇರಾಲದ ಶಾಸಕ ನರಸಿಂಗ್‌ರಾವ್ ಎಂಬುವನು ಯುದ್ಧದಲ್ಲಿ ಹತನಾದನು. ಯುದ್ಧದ ಮೈದಾನವು ಹೋಷಂಗನ ಕೈಯಲ್ಲಿತ್ತು. ಇದಾದ ನಂತರ ಹೋಷಂಗನು ನರಸಿಂಗರಾವನ ಕೋಟೆ, ಸಾರಂಗ ಗಢವನ್ನು ತನ್ನ ವಶಕ್ಕೆ ತೆಗೆದುಕೊಂಡನು. ಅಲ್ಲಿ ಅವನಿಗೆ ೮೪ ಆನೆಗಳು, ರಾಜನ ಖಜಾನೆ ಸಂಪತ್ತು ಹೋಷಂಗನ ವಶಕ್ಕೆ ಬಂದವು. ನರಸಿಂಗರಾವನ ಮಗನಿಗೆ ತನ್ನ ಅಧೀನತೆಯನ್ನು ಒಪ್ಪಿಸಿ, ಸರಿಯಾಗಿ ಕಪ್ಪ ಕಾಣಿಕೆಗಳನ್ನು ತಪ್ಪದೇ ಕಳುಹಿಸಿಕೊಡಲು ಆಜ್ಞಾಪಿಸಿದನು. ನಂತರ ಮಾಂಡುವಿನ ಶಾದಿಆಬಾದಿಗೆ ವಾಪಸ್ಸಾದನು.

ಜಾಜ್ ನಗರದತ್ತ ಪ್ರಯಾಣ :

ಸುಲ್ತಾನ್ ಹೋಷಂಗನು ಹಿಜರಿ ೮೨೫ರಲ್ಲಿ ಒಂದು ಸಾವಿರ ಸವಾರರೊಂದಿಗೆ ವೇಷವನ್ನು ಬದಲಾಯಿಸಿಕೊಂಡು ವ್ಯಾಪಾರಿಗಳ ವೇಷದಲ್ಲಿ ಜಾಜ್ ನಗರದ ಕಡೆ ಪ್ರಯಾಣವನ್ನು ಮಾಡಿದನು. ಅವನು ತನ್ನ ಜೊತೆ ಬಿಳಿ ಕುದುರೆಗಳನ್ನು ತೆಗೆದುಕೊಂಡು ಹೋಗಿದ್ದನು. ಏಕೆಂದರೆ ಜಾಜ್ ನಗರದ ರಾಜನು ಬಿಳಿ ಕುದುರೆಗಳನ್ನು ಬಹಳವಾಗಿ ಇಷ್ಟ ಪಡುತ್ತಿದ್ದನು. ಅವುಗಳ ಜೊತೆಯಲ್ಲಿ ಅನೇಕ ವಸ್ತುಗಳನ್ನು ತೆಗೆದುಕೊಂಡು ಹೋಗಿದ್ದನು. ಅವುಗಳನ್ನು ಅಲ್ಲಿಯ ಜನರು ಬಹಳ ಆಸೆಯಿಂದ ಕೊಂಡುಕೊಳ್ಳುತ್ತಿದ್ದರು. ಸುಲ್ತಾನ್ ಹೋಷಂಗನ ಉದ್ದೇಶವೆಂದರೆ ಕುದುರೆಗಳನ್ನು ಅನೇಕ ಅಗತ್ಯ ವಸ್ತುಗಳನ್ನು ಮಾರಿ ಜಾಜ್ ನಗದರ ಆನೆಗಳನ್ನು ಕೊಳ್ಳುವುದಾಗಿತ್ತು. ಇದರಿಂದಾಗಿ ತನ್ನ ಸೈನಿಕ ಶಕ್ತಿಯನ್ನು ಹೆಚ್ಚಿಸಿಕೊಂಡು ಸುಲ್ತಾನ್ ಅಹಮದ್‌ಶಾಹನ ಗುಜರಾತಿಯ ಮೇಲಿನ ಸೇಡನ್ನು ತೀರಿಸಿಕೊಳ್ಳುವುದಾಗಿತ್ತು.

ಜಾಜ್‌ನಗರದ ರಾಜನಿಗೆ ಸೂಚನೆ :

ಸುಲ್ತಾನ್ ಹೋಷಂಗನು ಜಾಜ ನಗರಕ್ಕೆ ತಲುಪಿ ಒಬ್ಬ ವ್ಯಕ್ತಿಯನ್ನು ಆತನ ಬಳಿಗೆ ಹೇಳಿ ಕಳುಹಿಸಿದ್ದೇನೆಂದರೆ–ನಿಮ್ಮ ನಗರಕ್ಕೆ ಒಬ್ಬ ವ್ಯಾಪಾರಿಯು ಆನೆಗಳನ್ನು ಕೊಳ್ಳಲು ಬಂದಿದ್ದಾನೆಂದು ಆತನ ಬಳಿ ಬಿಳಿಯ ಕುದುರೆಗಳು ಮತ್ತು ಇತರೆ ಜಾತಿಯ ಕುದುರೆಗಳು ಅಲ್ಲದೇ, ಇನ್ನೂ ಅನೇಕ ವಸ್ತುಗಳನ್ನು ತಂದಿರುತ್ತಾನೆಂದು ಅವನ್ನೆಲ್ಲಾ ಮಾರಲು ಬಂದಿರುವನೆಂದು ತಿಳಿಸಿದನು. ರಾಜನು ಆ ವ್ಯಕ್ತಿಯನ್ನು ಕುರಿತು ಈ ನಿಮ್ಮ ವ್ಯಾಪಾರಿಯು ನಗರದಿಂದ ಅಷ್ಟೂ ದೂರ ಏಕೆ ತಂಗಿದ್ದಾನೆ? ನಗರದ ಒಳಗೆ ಏಕೆ ಬಂದಿಲ್ಲ? ಎಂದು ಪ್ರಶ್ನಿಸಿದನು. ಆಗ ಆ ವ್ಯಕ್ತಿಯು ಹೀಗೆ ಉತ್ತರಿಸಿದನು. ಆ ವ್ಯಾಪಾರಿಯ ಜೊತೆಯಲ್ಲಿ ಇನ್ನೂ ಅನೇಕ ವ್ಯಾಪಾರಿಗಳಿದ್ದಾರೆ. ಆದ್ದರಿಂದ ಆ ವ್ಯಾಪಾರಿಗಳು ನಗರದಲ್ಲಿ ವ್ಯರ್ಥ ತೊಂದರೆಗಳನ್ನು ಕೊಡಲು ಇಷ್ಟ ಪಡುತ್ತಿಲ್ಲ. ಇದೇ ಅಲ್ಲದೇ ಅಲ್ಲಿ ಪ್ರಾಣಿಗಳಿಗೆ ನೀರು ಮೇವು ಸುಲಭವಾಗಿ ಸಿಗುವಂತಿದೆ. ಆದ್ದರಿಂದ ನಾವು ಅಲ್ಲಿಯೇ ಬೀಡು ಬಿಟ್ಟಿದ್ದೇವೆ ಎಂದು ಸಮಾಧಾನಪಡಿಸಿದನು.

ಜಾಜ್ ನಗರದಲ್ಲಿ ವ್ಯಾಪಾರದ ನಿಯಮ :

ಈ ನಗರದ ವ್ಯಾಪಾರದ ನಿಯಮವೆಂದರೆ–ಯಾರಾದರೂ ದೊಡ್ಡ ವ್ಯಾಪಾರಿಗಳು ಈ ನಗರದಲ್ಲಿ ವ್ಯಾಪಾರ ಮಾಡಬೇಕಾಗಿದ್ದರೆ ಆತನು ತನ್ನ ಕುದುರೆಯ ಮೇಲೆ ಜೀನನ್ನು ಕಟ್ಟಿರಬೇಕು. ತಾನು ಮಾರಲು ತಂದಿರುವ ಸಾಮಾನುಗಳನ್ನು ಒಂದು ವ್ಯವಸ್ಥಿತ ರೀತಿಯಲ್ಲಿ ನೆಲದ ಮೇಲೆ ಜೋಡಿಸಿಡಬೇಕು. ಇದಾದ ನಂತರ ಈ ನಗರದ ರಾಜನು ಮಾರಲು ತಂದಿರುವ ಸಾಮಾನುಗಳನ್ನು ನೋಡಲು ಕುದುರೆಯನ್ನೇರಿ ಬಂದು ಸಾಮಾನುಗಳನ್ನು, ಕುದುರೆಗಳನ್ನು ಪರೀಕ್ಷಿಸುವನು. ಆಗ ರಾಜನಿಗೆ ಯಾವ ವಸ್ತು ಅಥವಾ ಕುದುರೆ ಇಷ್ಟವಾಗುತ್ತದೋ ಅದನ್ನು ಖರೀದಿಸುವನು. ಕುದುರೆ ಅಥವಾ ವಸ್ತುಗಳ ಬೆಲೆಗೆ ಆನೆಗಳನ್ನು ನೀಡುವನು.

ರಾಜನ ಸಂದೇಶ ಹೋಷಂಗನಿಗೆ :

ತನ್ನ ನಿಯಮದ ಪ್ರಕಾರ ಜಾಜನಗರದ ರಾಜನು ಹೋಷಂಗನಿಗೆ ಸಂದೇಶವನ್ನು ಕಳುಹಿಸಿದ್ದುದೇನೆಂದರೆ –ನಾನು ನಿಮ್ಮ ಪೇಟೆಗೆ ಇಂತಹದೊಂದು ನಿಗದಿತ ದಿನದಂದು ಬರಲು ಒಪ್ಪಿರುತ್ತೇನೆ. ನೀನು ನಿಮ್ಮ ವ್ಯಾಪಾರಿಗಳಿಗೆ ತಮ್ಮ ತಮ್ಮ ಕುದುರೆಗಳನ್ನು ತಯಾರು ಮಾಡಿಕೊಂಡು ನಿಂತಿರಬೇಕು. ತಮ್ಮ ಎಲ್ಲ ಸಾಮಾನುಗಳನ್ನು ವ್ಯವಸ್ಥಿತವಾಗಿ ಜೋಡಿಸಿಟ್ಟಿರಬೇಕು. ಅವೆಲ್ಲವನ್ನೂ ನೆಲದ ಮೇಲೆ ಜೋಡಿಸಬೇಕು. ಯಾವ ವಸ್ತುವು ನನಗೆ ಇಷ್ಟವಾಗುವುದೋ ಅದನ್ನು ನಾನು ಖರೀದಿಸಿ ಅದರ ಬೆಲೆಯನ್ನು ಆನೆಗಳ ಮೂಲಕ ಅಥವಾ ನಗದು ರೂಪಾಯಿಗಳನ್ನು ನೀಡಲು ನಾನು ಸಿದ್ಧನಿದ್ದೇನೆ. ರಾಜನ ದೂತನು ಹೋಷಂಗನ ಪೇಟೆಯಿಂದ ಹಿಂತಿರುಗಿದ ನಂತರ ಹೋಷಂಗನು

ತನ್ನ ಸ್ನೇಹಿತರೆಲ್ಲರಿಗೂ ತಿಳಿಸಿದ್ದೇನೆಂದರೆ- ರಾಜನು ಏನೂ ಹೇಳಿರುವನೋ ಅದರಂತೆ ಎಲ್ಲರೂ ನಡೆದುಕೊಳ್ಳುವುದು ಕಡ್ಡಾಯವೆಂದು ಆಜ್ಞಾಪಿಸಿದನು. ರಾಜನು ಬರುವ ದಿನವನ್ನು ಕಾತರದಿಂದ ಕಾಯತೊಡಗಿದರು.

ರಾಜನ ಮತ್ತೊಂದು ಸಂದೇಶ :

ಯಾವ ದಿನದಂದು ರಾಜನು ಹೋಷಂಗನ ಹತ್ತಿರ ಹೋಗಬೇಕೆಂದಿದ್ದನೋ ಅಂದು ತಾನು ಅಲ್ಲಿಗೆ ಹೋಗುವ ಮೊದಲೇ ತನ್ನ ನಲವತ್ತು ಆನೆಗಳನ್ನು ವ್ಯಾಪಾರಿಗಳ ಹತ್ತಿರ ಕಳುಹಿಸಿಕೊಟ್ಟನು. ವ್ಯಾಪಾರಿಗಳು ಆತನ ಆನೆಗಳನ್ನು ಪರೀಕ್ಷಿಸಿ ಯಾವ ಆನೆಯನ್ನಾದರೂ ತೆಗೆದುಕೊಳ್ಳಲಿ ಎಂಬ ಉದ್ದೇಶಕ್ಕೆಂದು ಕಳುಹಿಸಿದನು. ಅದರ ಜೊತೆಯಲ್ಲಿಯೇ ಸಂದೇಶವನ್ನು ನೀಡಿದ್ದನು. ಏನೆಂದರೆ ನಿಮ್ಮ ಎಲ್ಲ ವಸ್ತುಗಳನ್ನು ನೆಲದ ಮೇಲೆ ಶೃಂಗರಿಸಿಟ್ಟುಕೊಳ್ಳಿ ನಿಮ್ಮ ಕುದುರೆಗಳನ್ನು ಸರಿಯಾಗಿ ನಿಲ್ಲಿಸಿಕೊಳ್ಳಿ ನಾನು ಬರುತ್ತಿದ್ದೇನೆ ಎಂದು ಮತ್ತೊಂದು ಸಂದೇಶವನ್ನು ಕಳುಹಿಸಿದನು. ಆದರೆ ಹೋಷಂಗನು ನಿವೇದಿಸಿಕೊಂಡಿದ್ದೇನೆಂದರೆ ಈ ದಿನ ಮಳೆ ಬರುವಂತಿದೆ. ನಮ್ಮ ವಸ್ತುಗಳನ್ನು ನೆಲದ ಮೇಲೆ ಶೃಂಗರಿಸಿಟ್ಟರೆ ನೆನದು ಹಾಳಾಗುವ ಭಯವಿದೆ ಎಂದನು. ಆದರೆ ರಾಜನ ನೌಕರರು ಹೋಷಂಗನ ಮಾತನ್ನು ಒಪ್ಪಲಿಲ್ಲ. ಅವರ ಸಾಮಾನುಗಳನ್ನು ಒತ್ತಾಯ ಪೂರ್ವಕವಾಗಿ ತೆರೆದಿಡಲು ಆಜ್ಞಾಪಿಸಿದರು.

ಮಳೆಯ ಕಾರಣ ಎಲ್ಲ ಸಾಮಾನುಗಳು ನಾಶ :

ಇದೇ ಸಂದರ್ಭದಲ್ಲಿ ರಾಜನು (೫೦೦) ಐದು ನೂರು ಸಿಪಾಯಿಗಳೊಂದಿಗೆ ವ್ಯಾಪಾರಿಗಳ ಹತ್ತಿರ ಬಂದು ಅವರು ತಂದಿದ್ದ ಸಾಮಾನುಗಳನ್ನು ನೋಡುವುದರಲ್ಲಿ ಮಗ್ನನಾದನು. ಹೋಷಂಗನು ಯೋಚಿಸಿದಂತೆಯೇ ಬಹಳ ಜೋರಾಗಿ ಮಳೆ ಬಂದಿತು. ಸಿಡಿಲು-ಗುಡುಗು ಸಹಿತ ಜೋರಾಗಿ ಮಳೆ ಸುರಿಯಿತು. ಈ ವಾತಾವರಣದಿಂದಾಗಿ ಆನೆಗಳು ದಿಕ್ಕಾಪಾಲಾದವು. ವ್ಯಾಪಾರಿಗಳು ತಂದಿದ್ದ ಸಾಮಾನುಗಳು ಆನೆಗಳ ತುಳಿತಕ್ಕೆ ಸಿಕ್ಕಿ ನಾಶವಾದವು. ಹೋಷಂಗನ ಎಲ್ಲ ಸಿಪಾಯಿಗಳಲ್ಲಿ ಅಲ್ಲೋಲ-ಕಲ್ಲೋಲ ಉಂಟಾಯಿತು.

ಹೋಷಂಗನ ಇಚ್ಛೆ ಯುದ್ಧ ಮಾಡಬೇಕೆಂದು :

ವ್ಯಾಪಾರಿಗಳ ವೇಷದಲ್ಲಿದ್ದ ಹೋಷಂಗನ ಗಡ್ಡ-ಮೀಸೆಗಳು ಕಿತ್ತು ಹೋದವು. ನನ್ನ ಎಲ್ಲ ಸಾಮಾನುಗಳು ನಾಶವಾದ ಬಳಿಕ ನಾನು ಜೀವಂತವಾಗಿ ಇದ್ದು ಏನು ಪ್ರಯೋಜನವೆಂದು ಬಗೆದು, ಹೋಷಂಗನು ತನ್ನ ಎಲ್ಲ ಸಿಪಾಯಿಗಳೊಂದಿಗೆ ಕುದುರೆಗಳನ್ನೇರಿ ಕುಳಿತು ರಾಜನ ಮುಂದಕ್ಕೆ ಬಂದು ನಿಂತನು. ರಾಜನು ಚಿಂತಿತನಾದನು. ಇನ್ನೇನು ದಾರಿ ಕಾಣದೆ ರಾಜನು ವಿವಶನಾಗಿ ಯುದ್ಧಕ್ಕೆ ಸಿದ್ಧನಾದನು.

ರಾಜ ಜಾಜ್‌ನು ಸೋತು ಸೆರೆಯಾದನು :

ಮೊದಲ ಆಕ್ರಮಣದಲ್ಲಿಯೇ ರಾಜನಿಗೆ ಸೋಲಾಯಿತು. ಆತನ ಅನೇಕ ಸಿಪಾಯಿಗಳು ಯುದ್ಧದಲ್ಲಿ ಸತ್ತರು. ಉಳಿದವರು ನಗರದ ಕಡೆಗೆ ಓಡಿದರು. ರಾಜನು ಜೀವಂತವಾಗಿ ಸೆರೆಸಿಕ್ಕಿದ್ದನು. ಸುಲ್ತಾನ್ ಹೋಷಂಗನು ತಾನು ಬಂದಿದ್ದ ಸಮಾಚಾರವನ್ನು ತಿಳಿಸಿದನು. ನಾನು ಮಾಳವ ದೇಶದ ಬಾದಶಹನಾಗಿದ್ದೇನೆ. ನಾನು ಇಲ್ಲಿಗೆ ಆನೆಗಳನ್ನು ಖರೀದಿಸಲು ಬಂದಿದ್ದೆ. ನಾನು ನಿನಗೆ ಸೆರೆ ಹಿಡಿಯಲು ಬಂದಿರಲಿಲ್ಲ. ಏನು ಮಾಡಲಿ, ಮಳೆಯ ಕಾರಣ ನನ್ನ ಎಲ್ಲ ಬೆಲೆಬಾಳುವ ವಸ್ತುಗಳು ನಾಶವಾಗಿವೆ. ಅದರಿಂದಾಗಿ ವಿವಶನಾಗಿ ಈ ಕೆಲಸವನ್ನು ನಾನು ಮಾಡಬೇಕಾಯಿತು ಎಂದನು.

ಹೋಷಂಗನು ಹಿಂತಿರುಗಿದನು :

ರಾಜನು ಹೋಷಂಗನ ಧೈರ್ಯ-ಸ್ಥೈರ್ಯಗಳ ಬಗ್ಗೆ ಆಶ್ಚರ್ಯವನ್ನು ವ್ಯಕ್ತಪಡಿಸಿದನು. ರಾಜನು ತನ್ನ ಒಬ್ಬ ದೂತನನ್ನು ಜಾಜ್ ನಗರದೊಳ್ಳಕ್ಕೆ ಕಳುಹಿಸಿ ತನ್ನ ಅಮೀರರಿಗೆ ಆಜ್ಞಾಪಿಸಿದುದೇನೆಂದರೆ-ತನ್ನಲ್ಲಿದ್ದ ಎಲ್ಲ ಆನೆಗಳಲ್ಲಿ ಉತ್ತಮವಾದ ಎಪ್ಪತ್ತೈದು (೭೫) ಆನೆಗಳನ್ನು ಆರಿಸಿಕೊಂಡು ಬರಲು ಹೇಳಿ ಕಳುಹಿಸಿದನು. ಆ ಎಪ್ಪತ್ತೈದು ಆನೆಗಳನ್ನು ಹೋಷಂಗನಿಗೆ ಕೊಟ್ಟು ತನ್ನ ತಪ್ಪನ್ನು ಮನ್ನಿಸಬೇಕೆಂದು ಪ್ರಾರ್ಥಿಸಿಕೊಂಡನು. ಹೋಷಂಗನು ರಾಜನು ಕೊಟ್ಟ ಆನೆಗಳೊಂದಿಗೆ ಹಾಗೂ ರಾಜನೊಂದಿಗೆ ತನ್ನ ರಾಜಧಾನಿಗೆ ಹಿಂತಿರುಗಿದನು. ಜಾಜ್‌ನಗರದ ಸರಹದ್ದಿನ ಹೊರಗೆ ಬಂದ ಹೋಷಂಗನು ರಾಜನನ್ನು ಹಿಂದಕ್ಕೆ ಕಳುಹಿಸಿಕೊಟ್ಟನು. ರಾಜನು ತನ್ನ ನಗರಕ್ಕೆ ವಾಪಸ್ಸಾದನು ರಾಜನು ಹೋಷಂಗನ ಧೈರ್ಯ ಸಾಹಸಗಳಿಂದ ಬಹಳ ಪ್ರಭಾವಿತನಾದನು. ಆತನು ತನ್ನ ರಾಜಧಾನಿಗೆ ಹಿಂತಿರುಗಿದ ಮೇಲೆ ಇನ್ನೂ ಕೆಲವು ಆನೆಗಳನ್ನು ಹೋಷಂಗನ ಸೇವೆಯಲ್ಲಿ ಕಳುಹಿಸಿಕೊಟ್ಟನು. ಹಾಗೂ ಕ್ಷಮೆಯಾಚಿಸಿದನು.

ಅಹಮದ್ ಗುಜರಾತಿಯ ಮಾಳವದ ಮೇಲೆ ಆಕ್ರಮಣ :

ದಾರಿಯಲ್ಲಿ ಬರುತ್ತಿರುವಾಗ ಹೋಷಂಗನಿಗೆ ಸುದ್ದಿ ತಿಳಿದಿದ್ದೇನೆಂದರೆ- ಮಾಳವದ ಬಾದಶಹನು ರಾಜಧಾನಿಯಲ್ಲಿಲ್ಲವೆಂಬ ಸಮಾಚಾರವನ್ನು ತಿಳಿದು ಮಾಳವದ ಮೇಲೆ ಅಹಮದ್‌ಶಾಹ ಗುಜರಾತಿಯು ಆಕ್ರಮಣವನ್ನು ನಡೆಸಿದ್ದಾನೆಂದು ತಿಳಿಯಿತು.

ಖೇರಾಲ ಕೋಟೆಯ ವಶ :

ಸುಲ್ತಾನ್ ಹೋಷಂಗನು ಪ್ರಯಾಣದ ಮಜಲುಗಳನ್ನು ಪಾರು ಮಾಡುತ್ತಾ ಖೇರಾಲ ತಲುಪಿದನು. ಇಲ್ಲಿನ ಕೋಟೆಯ ರಾಜನನ್ನು ಬಂಧನದಲ್ಲಿಟ್ಟು, ಕೋಟೆಯನ್ನು

ವಶಪಡಿಸಿಕೊಂಡನು. ಈ ಕೋಟೆಯನ್ನು ಹೋಷಂಗನು ತನ್ನ ಅಮೀರರ ಸುಪರ್ದಿಗೆ ಬಿಟ್ಟು ಅಲ್ಲಿಂದ ಮಾಂಡುವಿನ ಶಾದಿ ಆಬಾದಿಗೆ ತಲುಪಿದನು.

ಹೋಷಂಗ ಮಾಂಡುವಿನ ಶಾದಿಆಬಾದನಲ್ಲಿ :

ಸುಲ್ತಾನ್ ಹೋಷಂಗನು ಮಾಂಡುವಿನ ಶಾದಿ ಆಬಾದಿನ ಹತ್ತಿರ ತಲುಪಿದಾಗ ಸುಲ್ತಾನ್ ಅಹಮದ್ ಗುಜರಾತಿಯು ತನ್ನ ಅಮೀರರನ್ನು ಕೇಂದ್ರಗಳಿಂದ ತನ್ನಲ್ಲಿಗೆ ಕರೆಯಿಸಿಕೊಂಡನು. ಅವರೆಲ್ಲರನ್ನೂ ಯುದ್ಧ ಸಿದ್ಧತೆಯಲ್ಲಿ ತೊಡಗಿಸಿಕೊಂಡನು. ಹೋಷಂಗನು ಇದನ್ನು ತಾತ್ಸಾರ ಭಾವನೆಯಿಂದಲೇ ಕಂಡನು. ತಾರಾಪುರದ ಕಡೆಯ ಬಾಗಿಲಿನಿಂದ ಕೋಟೆಯ ಒಳಗೆ ಪ್ರವೇಶಿಸಿದನು.

ಮಾಂಡುವಿನ ಶಾದಿಆಬಾದ ಕೋಟೆಯ ಬಗ್ಗೆ ಕೆಲವು ಮಾತುಗಳು :

ಮಾಂಡುವಿನ ಶಾದಿಆಬಾದ ಕೋಟೆಯು ಆಶ್ಚರ್ಯಗಳಲ್ಲೊಂದಾಗಿದೆ. ಫರಿಶ್ತಾ ಎಂಬ ಪ್ರಸಿದ್ಧ ಇತಿಹಾಸ ಲೇಖಕನ ಗ್ರಂಥ, "ರಾಖಿಮುಲ್ ಹುರೂಫ್"ನಲ್ಲಿ ಈ ಕೋಟೆಯ ವಿಶೇಷತೆಯ ಬಗ್ಗೆ ನಾಲ್ಕು ಮಾತು ಹೇಳಲೇ ಬೇಕೆಂಬ ಇಚ್ಛೆಯನ್ನು ಪ್ರಕಟಿಸುತ್ತಾ ಅದು ನನ್ನ ಆದ್ಯ ಕರ್ತವ್ಯವೆಂದು ಹೇಳಿದ್ದಾನೆ. ಈ ಕೋಟೆಯು ಒಂದು ಎತ್ತರವಾದ ಬೆಟ್ಟದ ಮೇಲೆ ಸ್ಥಿರವಾಗಿ ನಿಂತಿದೆ. ಅದರ ಸುತ್ತಳತೆ ಸುಮಾರು (೧೯) ಮೈಲಿಗಳಷ್ಟಿದೆ. ಇದರ ಸುತ್ತಲೂ ಕಂದಕವಿಲ್ಲ. ಆದರೆ ಬಹಳ ದೊಡ್ಡ ಗುಹೆ ಇದೆ. ಇದರಿಂದಾಗಿ ಇದರ ಮುತ್ತಿಗೆಯನ್ನು ಹಾಕಿ, ಇದನ್ನು ಗೆಲ್ಲುವುದು ಅಸಾಧ್ಯದ ಮಾತಾಗಿದೆ. ಕೋಟೆಯ ಒಳಗೆ ನೀರಿನ ಮತ್ತು ಇತರೆ ಅವಶ್ಯಕತೆಗಳಿಗೆ ಕೊರತೆ ಇಲ್ಲ. ಕೋಟೆಯ ಒಳಗೆ ವ್ಯವಸಾಯ ಯೋಗ್ಯವಾದ ಭೂಮಿಯೂ ಇದೆ. ಈ ಕೋಟೆಯ ಸುತ್ತಲೂ ಮುತ್ತಿಗೆ ಹಾಕಲು ಮಾನವ ಶಕ್ತಿಗೆ ಅಸಾಧ್ಯವಾದದ್ದು. ಈ ಕೋಟೆಯು ಒಳಗಿನ ಕೆಲವು ಕಟ್ಟಡಗಳು ಮತ್ತು ಜಾಗಗಳು ಯಾರಿಗೂ ಅರ್ಥವಾಗದಂತಹವುಗಳಿವೆ. ಇಲ್ಲಿ ಶಾಂತರಾಗಿ ಕಾಲ ಕಳೆಯಲು ಆಗುವುದಿಲ್ಲ. ಈ ಕೋಟೆಯ ಹೆಬ್ಬಾಗಿಲು ದಕ್ಷಿಣದ ಕಡೆ ಇದೆ. ಈ ಜಾಗಕ್ಕೆ ತಾರಾಪುರ ಎಂದು ಕರೆಯಲಾಗುತ್ತದೆ. ಒಂದು ವೇಳೆ ಯಾರಾದರೂ ಈ ಕೋಟೆಯ ಎಲ್ಲ ಬಾಗಿಲುಗಳಿಂದ ಪ್ರವೇಶಿಸಬೇಕೆಂದು ಇಷ್ಟಪಟ್ಟರೆ ಬಹಳ ಶ್ರಮಪಟ್ಟು ಅನೇಕ ಮೈಲಿಗಳಷ್ಟು ನೆಲವನ್ನು ಪಾರು ಮಾಡಬೇಕಾಗುತ್ತದೆ. ಈ ಕೆಲಸ ಯಾರಿಂದಲೂ ಸಾಧ್ಯವಿಲ್ಲವೆಂದೇ ಹೇಳುತ್ತಾರೆ. ಒಂದು ವೇಳೆ ದಾರಿಯ ರಕ್ಷಣೆಗೋಸ್ಕರ ಸೈನ್ಯವನ್ನು ನೇಮಿಸುವುದಾದರೆ ದಾರಿಯ ಮಧ್ಯದಲ್ಲಿ ಸಣ್ಣಪುಟ್ಟ ಬೆಟ್ಟಗುಡ್ಡಗಳಿರುವುದರಿಂದ ಸಿಪಾಯಿಗಳು ಒಬ್ಬರೊಬ್ಬರು ಭೇಟಿಯಾಗಲು ಸಾಧ್ಯವಾಗದು ರಹಸ್ಯಾತ್ಮಕ ದಾರಿಗಳಿವೆ. ಈ ಕೋಟೆಯ ದಾರಿಗಳಲ್ಲಿ ದೆಹಲಿಯತ್ತ ಹೋಗುವ ಮಾರ್ಗವು ಬೇರೆ ದಾರಿಗಳಿಗಿಂತ ಸ್ವಲ್ಪ ಸುಲಭ ಮಾರ್ಗವೆಂದು ಹೇಳಬಹುದು.

ಸುಲ್ತಾನ್ ಹೋಷಂಗನ ಇಚ್ಛೆ ಸಾರಂಗಪುರದ ಮೇಲೆ :

ವಿಷಯವನ್ನು ಸಂಕ್ಷಿಪ್ತವಾಗಿ ಹೇಳುವುದಾದರೆ, ಅಹಮದ್‌ಶಾಹ ಗುಜರಾತಿಯ ಅನುಭವಕ್ಕೆ ಬಂದದ್ದೇಂದರೆ-ಮಾಂಡುವಿನ ಶಾದಿಆಬಾದ್ ಕೋಟೆಯನ್ನು ಮುತ್ತುವ ಪ್ರಶ್ನೆ ಯಾರಿಗೂ ಲಾಭದಾಯಕವಲ್ಲವೆಂಬುದು ಆಗಿತ್ತು. ಆತನು ಮುತ್ತಿಗೆಯನ್ನು ತೆರುವುಗೊಳಿಸಿ ಆ ದೇಶದ ಹಲವು ಭಾಗಗಳನ್ನು ನಾಶಪಡಿಸಿ, ಲೂಟಿ ಮಾಡುವುದೆ ಲೇಸೆಂದು ಬಗೆದನು. ಆತನು ಉಜ್ಜಯಿನಿ ಕಡೆಯಿಂದ ಸಾರಂಗಪುರದ ಕಡೆಗೆ ಬಂದನು. ಸುಲ್ತಾನ್ ಹೋಷಂಗನಿಗೆ ಈ ವಿಚಾರ ಗೊತ್ತಾದ ತಕ್ಷಣ ಆತನು ವೇಗವಾಗಿ ಬೇರೆ ದಾರಿಯಿಂದ ಸಾರಂಗಪುರವನ್ನು ತಲುಪಿದನು.

ಹೋಷಂಗನ ಕಪಟ :

ಸುಲ್ತಾನ್ ಹೋಷಂಗನು ಒಂದು ಕಪಟ ನೀತಿಯನ್ನು ಚಿಂತಿಸಿದನು. ಸುಲ್ತಾನ್ ಅಹಮದ್‌ನಿಗೊಂದು ಸಂದೇಶವನ್ನು ಕಳುಹಿಸಿದನು. ಏನೆಂದರೆ ನಾವಿಬ್ಬರೂ ಇಸ್ಲಾಂ ಧರ್ಮದ ಶಾಸಕರೂ, ಆ ಧರ್ಮದ ನಿಯಮಗಳನ್ನು ಪಾಲಿಸತಕ್ಕವರೂ ಆಗಿದ್ದೇವೆ. ನಾವು ಒಬ್ಬ ರಾಜ್ಯದಲ್ಲಿ ಮತ್ತೊಬ್ಬರು ನುಗ್ಗಿ, ಲೂಟಿ, ದಂಗೆಗಳನ್ನು ಮಾಡುವುದು ನಮ್ಮ ಧರ್ಮದ ನಿಯಮಗಳಿಗೆ ವಿರುದ್ಧವಾದದ್ದು, ಆದ್ದರಿಂದ ತಾವುಗಳು ತಮ್ಮ ರಾಜಧಾನಿಗೆ ವಾಪಸ್ ಹೋಗುವುದರಲ್ಲಿ ಒಳಿತು ಇದೆ. ತಾವು ಇಲ್ಲಿಂದ ಹೋದ ನಂತರ ನಾನು ನನ್ನ ದೂತನನ್ನು ತಮ್ಮಲ್ಲಿಗೆ ಕಳುಹಿಸಿ ಅವನೊಂದಿಗೆ ತಮಗೆ ಸಲ್ಲಬೇಕಾಗಿರುವ ಹಣ, ಕಪ್ಪ-ಕಾಣಿಕೆಗಳನ್ನು ಕಳುಹಿಸಿ ಕೊಡುತ್ತೇನೆ.

ಗುಜರಾತಿ ಸೈನ್ಯದ ಮೇಲೆ ರಾತ್ರಿಯಲ್ಲಿ ಆಕ್ರಮಣ :

ಸುಲ್ತಾನ್ ಅಹಮದ್‌ಶಾಹನು ಹೋಷಂಗನ ಮಾತುಗಳನ್ನು ನಂಬಿದನು. ಅಂದು ರಾತ್ರಿ ಸುಲ್ತಾನ್ ಅಹಮದನು, ತನ್ನ ಸೈನ್ಯದ ಬಗ್ಗೆ ಎಚ್ಚರ ತಪ್ಪಿ ಮಲಗಿ ಬಿಟ್ಟರು. ಹೋಷಂಗನು ಇದನ್ನೇ ಕಾಯುತ್ತಿದ್ದನು. ಹಿಜರಿ ೮೨೬ರಲ್ಲಿ ಮೊಹರಂ ತಿಂಗಳ ೧೨ ತಾರೀಖಿನಂದು ರಾತ್ರಿಯಲ್ಲಿ "ಶಬ್‌ಖೂನ್" ಎಂದರೆ ರಾತ್ರಿಯಲ್ಲಿ ಆಕಸ್ಮಿಕ ಆಕ್ರಮಣವನ್ನು ನಡೆಸಿದನು. ಗುಜರಾತಿ ಸೈನಿಕರು ಮೈ ಮರೆತು ಮಲಗಿದ್ದರು. ಗುಜರಾತಿ ಸೈನಿಕರಿಗೆ ಹೀಗಾಗುತ್ತದೆಂಬ ವಿಷಯ ಗೊತ್ತಾಗಿರಲಿಲ್ಲ. ಇವರಿಗೆ ಅಂದು ರಾತ್ರಿ ತುಂಬಾ ನಷ್ಟವಾಯಿತು. ಅಪಾರ ಸಂಖ್ಯೆಯ ಗುಜರಾತಿ ಸೈನಿಕರು ಹತರಾದರು.

ವಿನಾಶ :

ಈ ಆಕಸ್ಮಿಕ ಯುದ್ಧದಲ್ಲಿ ದಂದಹ್‌ನರಾಜ 'ರಾಯ್‌ಸಾಮತ್'ನ ಸಮೇತ ಐದುನೂರು ರಾಜಪೂತರು ಸುಲ್ತಾನ್ ಗುಜರಾತಿ ಅಹಮದ್‌ಶಾಹ್‌ನ ಮುಂದೆಯೇ ಹತರಾದರು. ಸುಲ್ತಾನ್ ಅಹಮದ್‌ನಿಗೆ ಆಕಸ್ಮಿಕ ಆಪತ್ತಿನ ವಿಷಯ ತಿಳಿದಾಗ

ಆತನು ತನ್ನ ಬಿಡಾರದಿಂದ ಆಚೆ ಬಂದು ಕಾಡಿನ ಮಧ್ಯದಲ್ಲಿ ನಿಂತು ಬಿಟ್ಟನು. ಬಾದಶಹನ ಜೊತೆಯಲ್ಲಿ ಆಗ ಕೇವಲ ಒಬ್ಬನು ಮಾತ್ರ ಇದ್ದನು.

ಹೋಷಂಗನ ಸೈನ್ಯದ ಮೇಲೆ ಆಕ್ರಮಣ :

ಬೆಳಗಾದ ಸಂದರ್ಭದಲ್ಲಿ ಉಳಿದ ಕೆಲವು ಸೈನಿಕರು ಮಾತ್ರ ಬಾದಶಹ ಅಹಮದ್ ಸುತ್ತಲೂ ಬಂದು ನಿಂತರು. ಅಹಮದ್ ಗುಜರಾತಿಯು ತನ್ನ ಸೈನಿಕರಲ್ಲಿ ಉತ್ಸಾಹವನ್ನು ತುಂಬಿ ಸಾಧ್ಯವಾದಷ್ಟು ಬೇಗ ಹೋಷಂಗನ ಸೈನ್ಯದ ಮೇಲೆ ಆಕ್ರಮಣವನ್ನು ಮಾಡಿದನು. ಇಬ್ಬರಲ್ಲೂ ಭಯಾನಕ ಹಾಗೂ ಘೋರ ಯುದ್ಧವು ನಡೆಯಿತು. ಕೊನೆಗೆ ಇಬ್ಬರೂ ಬಾದಶಹರುಗಳು ಸ್ವತಃ ಯುದ್ಧಕ್ಕೆ ನಿಂತರು. ಒಬ್ಬರನ್ನೊಬ್ಬರು ಅಂತಿಮಯುದ್ಧಕ್ಕೆ ನಿಂತು ಬಿಟ್ಟರು. ಕೊನೆಗೆ ಯುದ್ಧದಲ್ಲಿ ಸುಲ್ತಾನ್ ಹೋಷಂಗನಿಗೆ ಸೋಲುಂಟಾಯಿತು. ಆತನು ಯುದ್ಧ ಮೈದಾನದಿಂದ ಓಡಿ ಹೋಗಿ ಸಾರಂಗಪುರದ ಕೋಟೆಯಲ್ಲಿ ಅವಿತುಕೊಂಡನು. ಗುಜರಾತಿಗಳು ಮಾಳವದ ಅಪಾರ ಯುದ್ಧ ಸಾಮಗ್ರಿಗಳನ್ನು, ಏಳು ಆನೆಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡರು.

ಸುಲ್ತಾನ್ ಅಹಮದನ ಗೆಲುವು ಮತ್ತು ವಾಪಸ್ :

ರಬಿವುಸ್ಸಾನಿ ತಿಂಗಳ ಹದಿನಾಲ್ಕನೇ ತಾರೀಖಿನಂದು ಸುಲ್ತಾನ್ ಅಹಮದ್ ಗುಜರಾತಿಯು ಪ್ರಯಾಣಕ್ಕೆ ಸಂಬಂಧಿಸಿದ ಸಾಮಾನುಗಳನ್ನು ಸರಿಪಡಿಸಿಕೊಂಡು ಗೆಲುವಿನ ಸಂತೋಷದ ನಗಾರಿಗಳನ್ನು ಬಾರಿಸುತ್ತ ತನ್ನ ರಾಜಧಾನಿಯತ್ತ ಹೊರಟನು. ಈ ವಿಚಾರವು ಹೋಷಂಗನಿಗೆ ಗೊತ್ತಾಯಿತು. ಆತನು ಬಹಳ ಅಹಂಕಾರದಿಂದಲೇ ಸಾರಂಗಪುರದ ಕೋಟೆಯನ್ನು ಬಿಟ್ಟು ಹೊರಬಂದು ಗುಜರಾತಿಗಳನ್ನು ಹಿಂಬಾಲಿಸಿದನು.

ಯುದ್ಧ :

ಸುಲ್ತಾನ್ ಹೋಷಂಗನು ಸ್ವಲ್ಪ ಹಿಂದೆ ಬಿದ್ದಿದ್ದ ಆ ಗುಜರಾತಿ ಸೈನಿಕರನ್ನು ಸಾಯಿಸುತ್ತ ಹಿಂಬಾಲಿಸಿದನು. ಇದನ್ನು ಕಂಡ ಅಹಮದಶಾಹ ಗುಜರಾತಿಯು ಹಿಂತಿರುಗಿ ಹೋಷಂಗನ ಮೇಲೆ ಬಿದ್ದನು. ಇಬ್ಬರಲ್ಲೂ ಪುನಃ ಯುದ್ಧವಾಯಿತು. ಹೋಷಂಗನು ಮೊದಲ ಆಕ್ರಮಣದಲ್ಲಿಯೇ ಅಹಮದಶಾಹ ಗುಜರಾತಿಯ ಅನೇಕ ಸೈನಿಕರನ್ನು ಕೊಂದನು. ಅಹಮದ್ ಗುಜರಾತಿಯು ಈ ಪರಿಸ್ಥಿತಿಯನ್ನು ಕಂಡು ಚಿಂತಿತನಾದನು. ಸ್ವಲ್ಪ ಯೋಚಿಸಿದ ನಂತರ ಸ್ವತಃ ಆತನೇ ಹೋಷಂಗನ ಮೇಲೆ ಬಂದು ಬಿದ್ದನು. ಆ ಯುದ್ಧದಲ್ಲಿಯೂ ತನ್ನ ಕೈ ಮೇಲಾದಂತೆ ಕಂಡಿತು.

ಅಹಮದ್ ಗುಜರಾತಿಯ ವಾಪಸಾತಿ :

ಸುಲ್ತಾನ್ ಹೋಷಂಗನು ಯುದ್ಧವಾಡುತ್ತಾ ತುಂಬಾ ಆಯಾಸ ಪಟ್ಟಿದ್ದನು.

ಅಲ್ಲಿಂದ ಓಡುತ್ತಾ ಸಾರಂಗಪುರದ ಕೋಟೆಯಲ್ಲಿ ಪುನಃ ಅಡಗಿದನು. ಆ ದಿನದ ಯುದ್ಧದಲ್ಲಿ ಹೋಷಂಗನ ನಾಲ್ಕು ಸಾವಿರ ಸೈನಿಕರು ಯುದ್ಧ ಮೈದಾನದಿಂದ ಓಡುತ್ತಾ ಹತರಾಗಿದ್ದರು. ಹೋಷಂಗನ ಯುದ್ಧ ಸಂಬಂಧಿ ಎಲ್ಲಾ ಸಾಮಾನು ಸರಂಜಾಮುಗಳು ಗುಜರಾತಿಗಳ ಕೈವಶವಾದುವು. ಇದಾದ ನಂತರ ಸುಲ್ತಾನ್ ಅಹಮದಶಾಹ ಗುಜರಾತಿಯು ತನ್ನ ರಾಜ್ಯದತ್ತ ಹೊರಟನು. ಸುಲ್ತಾನ್ ಹೋಷಂಗನು ಮಾಂಡುವಿನ ಶಾದಿಆಬಾದನತ್ತ ಪ್ರಯಾಣವನ್ನು ಬೆಳೆಸಿದನು.

ಈ ಯುದ್ಧದ ಪರಿಣಾಮದ ಬಗ್ಗೆ ಮತ್ತೊಂದು ವರದಿ :

ಸುಲ್ತಾನ್ ಹೋಷಂಗನು ಜಾಜ್ ನಗರಕ್ಕೆ ಹೋದ ಬಗ್ಗೆ ಅಥವಾ ಮಾಂಡುವಿನ ಶಾದಿಆಬಾದಿಗೆ ಬಂದುದರ ಬಗ್ಗೆ ಮತ್ತೊಂದು ವರದಿಯೂ ಸಿಗುತ್ತದೆ. ಈ ವರದಿಯು ಫರಿಶ್ತಾ ಬರೆದಿರುವ ಗ್ರಂಥ "ರಾಖಿಮುಲ್ ಹುರೂಫ್" ನಲ್ಲೂ ಉಲ್ಲೇಖವಿದೆ. ಆದರೂ ನಾವು ಈ ವರದಿಯನ್ನು "ಸಲಾತೀನ್–ಎ–ಗುಜರಾತ್" ನಲ್ಲಿ ಬರೆಯುತ್ತಾ ವಿವರವಾಗಿ ತಿಳಿಸಿದ್ದೇವೆ. ಆದ್ದರಿಂದ ಇಲ್ಲಿ ಅದರ ವರ್ಣನೆ ಅನವಶ್ಯಕವೆನಿಸುತ್ತದೆ.

ಕಾಕರೂನ್ ಕೋಟೆಯ ಗೆಲುವು :

ಇದೇವರ್ಷ ಸುಲ್ತಾನ್ ಹೋಷಂಗನು ಕಾಕ್‌ರೂನ ಕೋಟೆಯನ್ನು ಗೆಲ್ಲಲು ಸಿದ್ಧತೆಯಲ್ಲಿ ತೊಡಗಿದನು. ಕೆಲವೇ ಸಮಯದಲ್ಲಿ ಈ ಕೋಟೆಯನ್ನು ವಶಪಡಿಸಿಕೊಂಡನು. ಅದೇ ದಿನಗಳಲ್ಲಿ ಹೋಷಂಗನು ಗ್ವಾಲಿಯರ್‌ನ್ನು ವಶಪಡಿಸಿಕೊಳ್ಳಲು ಇಚ್ಛಿಸಿದನು. ಈ ಉದ್ದೇಶದಿಂದ ಅತ್ತ ಪ್ರಯಾಣವನ್ನು ಬೆಳೆಸಿ ಕೋಟೆಯ ಹತ್ತಿರಕ್ಕೆ ತಲುಪಿ ಅದನ್ನು ಮುತ್ತಿದನು.

ಗ್ವಾಲಿಯರ್ ಕೋಟೆಯ ಮುತ್ತಿಗೆ :

ಈ ಘಟನೆಯ ನಂತರ ಕೆಲವು ದಿನಗಳು ಕಳೆದವು. ಸುಲ್ತಾನ್ ಮುಬಾರಕ ಶಾಹ ಬಿನ್ ಖಿಜರ್‌ಖಾನ್‌ನು ಬಯಾನದ ದಾರಿಯಿಂದ ಗ್ವಾಲಿಯರ್ ರಾಜನ ಸಹಾಯಕ್ಕೆ ಬಂದನು. ಈ ಸುದ್ದಿಯನ್ನು ತಿಳಿದ ಹೋಷಂಗನು ಗ್ವಾಲಿಯರ್ ಕೋಟೆಯ ಮುತ್ತಿಗೆಯನ್ನು ತೆರುವುಗೊಳಿಸಿ ದಬಲ್‌ಪುರದ ಕೆರೆಯೊಳಗೆ ತಲುಪಿದನು. ಇಲ್ಲಿ ಬಂದು ಸ್ವಲ್ಪ ವಿಶ್ರಾಂತಿಯ ಸಂತೋಷವನ್ನು ಅನುಭವಿಸಿದನು. ದಬಲ್‌ಪುರದ ಸುಲ್ತಾನನು, ಹೋಷಂಗನು ಪರಸ್ಪರ ಭೇಟಿಯಾದರು. ಒಬ್ಬರು ಮತ್ತೊಬ್ಬರಿಗೆ ಬಹುಮಾನ ವಿತರಣೆಯನ್ನು ಮಾಡಿಕೊಂಡರು. ಸ್ನೇಹದಿಂದ ಇರಲು ಒಪ್ಪಿಕೊಂಡರು. ಇಬ್ಬರೂ ಆಡಳಿತಗಾರರು ತಮ್ಮ–ತಮ್ಮ ರಾಜಧಾನಿಗಳತ್ತ ನಡೆದರು.

ಖೇರಾಲದ ಮೇಲೆ ಅಹಮದ್ ಬಹಮನಿಯ ಆಕ್ರಮಣ :

ಹಿಜರಿ ೮೩೩ರಲ್ಲಿ ಸುಲ್ತಾನ್ ಅಹಮದ್‌ಶಾಹ ಬಹಮನಿಯು ಖೇರಾಲ

ಕೋಟೆಯನ್ನು ಗೆಲ್ಲುವ ಇಚ್ಛೆಯನ್ನು ವ್ಯಕ್ತಪಡಿಸಿದನು. ಈ ಉದ್ದೇಶಕ್ಕಾಗಿಯೇ ಸೈನ್ಯವನ್ನು ಸಿದ್ಧಗೊಳಿಸಿಕೊಂಡು ಖೇರಾಲ ತಲುಪಿದನು. ಇಲ್ಲಿನ ಶಾಸಕನು ನರಸಿಂಗ್‌ರಾವನ ಮಗನಾಗಿದ್ದನು. ಈತನನ್ನು ಸುಲ್ತಾನ್ ಹೋಷಂಗನು ನೇಮಿಸಿದ್ದನು. ಶಾಸಕನು ಹೋಷಂಗನ ಹತ್ತಿರಕ್ಕೆ ಒಬ್ಬ ದೂತನನ್ನು ಕಳುಹಿಸಿ ಸೈನಿಕ ಸಹಾಯವನ್ನು ಬೇಡಿದನು.

ದಖನಿ ಸೈನ್ಯವನ್ನು ಹಿಂಬಾಲಿಸಿದನು :

ಸುಲ್ತಾನ್ ಹೋಷಂಗನು ತನ್ನ ಸೈನ್ಯವನ್ನು ಸಂಗ್ರಹಿಸಿಕೊಂಡು ಖೇರಾಲಾದತ್ತ ಹೊರಟನು. ಆತನು ಅಲ್ಲಿಗೆ ತಲುಪಿದಾಗ ಹೆದರಿಕೆಯಿಂದ ದಖನಿ ಬಹಮನಿಯು ಓಡಿ ಹೋದನು. ಅವರು ಓಡಿ ಹೋದುದರಿಂದ ಹೋಷಂಗನು ಯೋಚಿಸಿದ್ದೇನೆಂದರೆ ದಖನಿಯವರು ಬಹಳ ದುರ್ಬಲರಾಗಿದ್ದಾರೆಂದು ತಿಳಿದುಕೊಂಡನು. ಖೇರಾಲ ಶಾಸಕನು ಹೋಷಂಗನ ಅಭಿಪ್ರಾಯವನ್ನು ಅನುಮೋದಿಸಿ, ದಖನಿಯವರನ್ನು ಹಿಂಬಾಲಿಸಲು ಪ್ರೇರೇಪಿಸಿದನು. ಹೋಷಂಗನು ಈತನ ಅಭಿಪ್ರಾಯಕ್ಕೆ ಅವರನ್ನು ಹಿಂಬಾಲಿಸಿ ಹೊರಟನು.

ಶತ್ರುವಿನ ಕಪಟ ಯೋಜನೆ :

ಸುಲ್ತಾನ್ ಅಹಮದ್‌ಶಾಹ ಬಹಮನಿಯು ತನ್ನ ಅಮೀರರ ಹಾಗೂ ಸ್ವತಃ ತನ್ನ ಸೈನ್ಯದ ಮಧ್ಯೆ ಯಾರಿಗೂ ಕಾಣದಂತೆ ಬಚ್ಚಿಟ್ಟುಕೊಂಡನು. ಉಳಿದ ಸೈನ್ಯವು ಹಿಂಬಾಲಿಸಿ ಬರುತ್ತಿದ್ದ ಹೋಷಂಗನ ಸೈನ್ಯದೊಡನೆ ಯುದ್ಧವಾಡಲು ಆಜ್ಞಾಪಿಸಿದನು, ಹೋಷಂಗನು ದಕ್ಷಿಣದ ಸೈನ್ಯವನ್ನು ಹಿಂಬಾಲಿಸಿ ಬರುತ್ತಲೇ ಇದ್ದನು. ಆತನಿಗೆ ದಖನಿ ಬಾದಶಹನ ಯೋಜನೆಯೇ ಅರ್ಥವಾಗಲಿಲ್ಲ. ದಾರಿಯಲ್ಲಿ ದಖನಿ ಸೈನ್ಯವು ಹೋಷಂಗನಿಗೆ ಎದುರಾಯಿತು. ಸಂಖ್ಯೆಯಲ್ಲಿ ಕಡಿಮೆಏನಿರಲಿಲ್ಲ. ಹೋಷಂಗನ ಮತ್ತಷ್ಟು ಸೈನ್ಯ ಹಿಂದೆ ಬಹಳ ದೂರದಲ್ಲಿ ಬರುತ್ತಿತ್ತು. ಅದರ ನಿರೀಕ್ಷಣೆಯನ್ನು ಮಾಡದೆ ಯುದ್ಧವನ್ನು ಪ್ರಾರಂಭಿಸಿಯೇ ಬಿಟ್ಟನು.

ಹೋಷಂಗನ ಹೊಸ ಸೋಲು :

ಸುಲ್ತಾನ್ ಅಹಮದ್‌ಶಾಹ ಬಹಮನಿಯ ಯೋಚನೆ ಯೋಜನೆಗಳಂತೆಯೇ ಸಫಲವಾಗುವಂತೆ ಕಂಡಿತು. ಆತನು ತಾನು ಬಚ್ಚಿಟ್ಟುಕೊಂಡಿದ್ದ ಜಾಗದಿಂದ ಹೊರಬಂದು ಸುಲ್ತಾನ್ ಹೋಷಂಗನ ಹಿಂದಿನಿಂದ ಬಂದನು. ಹೋಷಂಗನ ಮೇಲೆ ಆಕ್ರಮಣವನ್ನು ನಡೆಸಿದನು. ಹೋಷಂಗನಿಗೆ ಈ ಯೋಜನೆಯ ವಿಚಾರವು ಅರ್ಥವಾಗಿರಲಿಲ್ಲ. ಇದರಿಂದ ತುಂಬಾ ಚಿಂತಿತನಾದನು. ಉಳಿಯುವ ಆಸೆ ತೋರಲಿಲ್ಲ. ಆದರೂ ಘೋರ ಯುದ್ಧವನ್ನು ಮಾಡಿದನಾದರೂ ಸೋಲೊಪ್ಪಿ ಎಲ್ಲವನ್ನೂ,

ಎಲ್ಲರನ್ನೂ ಅಲ್ಲಿಯೇ ಬಿಟ್ಟು ಹೆದರಿಕೆಯಿಂದ ಪ್ರಾಣವನ್ನು ಉಳಿಸಿಕೊಂಡು ಓಡಿಹೋದನು.

ಸುಲ್ತಾನ್ ಅಹಮದ ಬಹಮನಿಯ ಸೆರೆಹಿಡಿದವರೊಂದಿಗೆ ವರ್ತನೆ :

ದಖನಿಗಳು ಹೋಷಂಗನ ಹೆಂಡತಿ ಮಕ್ಕಳನ್ನು ಸೆರೆ ಹಿಡಿದನು. ಸುಲ್ತಾನ್ ಅಹಮದ್‌ಶಾಹ ಬಹಮನಿಗೆ ಹೊಷಂಗ ಹೆಂಡತಿ ಮಕ್ಕಳೆಂಬ ವಿಷಯವು ತಿಳಿದಾಗ ಈ ನಿರಪರಾಧಿಗಳ ಬಗ್ಗೆ ತುಂಬಾ ಕನಿಕರವುಂಟಾಯಿತು. ಆತನು ಅವರೆಲ್ಲರ ಮೇಲೆ ತುಂಬಾ ದಯೆಯಿಂದ ಅವರುಗಳ ಅತಿಥಿ ಸತ್ಕಾರವನ್ನು ಮಾಡಿದನು. ಅವರೊಂದಿಗೆ ಬಹಳ ಗೌರವದಿಂದ ನಡೆದುಕೊಂಡನು. ಅವರೆದುರಿಗೆ ಯಾವ ಕಠಿಣವಾದ ಮಾತನ್ನೂ ಆಡಲಿಲ್ಲ. ಅವರ ಮನಸ್ಸನ್ನು ನೋಯಿಸಲಿಲ್ಲ. ಅವರು ಖೈದಿಗಳೇ ಅಲ್ಲವೆಂಬಂತೆ ಅವರೊಡನೆ ವರ್ತಿಸಿದನು. ಅವರೆಲ್ಲರಿಗೂ ಉನ್ನತ ಮಟ್ಟದ ಒಂದೊಂದು ಉಡುಪುಗಳನ್ನು ಉಡುಗೊರೆಯಾಗಿ ನೀಡಿದನು. (೫೦೦) ಐದುನೂರು ಸಿಪಾಯಿಗಳ ರಕ್ಷಣೆಯಲ್ಲಿ ಅವರನ್ನೆಲ್ಲಾ ಹೋಷಂಗನ ಹತ್ತಿರಕ್ಕೆ ಕಳುಹಿಸಿಕೊಟ್ಟನು.

ಕಾಲ್ಪಿಯ ಗೆಲುವಿನ ಇಚ್ಛೆ :

ಹಿಜರಿ ೮೩೦ರಲ್ಲಿ ಹೋಷಂಗನು ಕಾಲ್ಪಿಯನ್ನು ಗೆಲ್ಲುವ ಮನಸ್ಸು ಮಾಡಿದನು. ಈ ಪ್ರದೇಶವು ಶಾಹ ದೆಹಲಿಯ ಅಮೀರನಾದ ಅಬ್ದುಲ್ ಖಾದರ್ ಎಂಬಾತನೊಬ್ಬ ಅಮೀರನ ವಶದಲ್ಲಿತ್ತು. ಈತನನ್ನು ಗೆಲ್ಲುವ ಉದ್ದೇಶದಿಂದ ಸುಲ್ತಾನ್ ಹೋಷಂಗನು ಮಾಂಡುವಿನಿಂದ ಹೊರಟನು. ಕಾಲ್ಪಿಯ ಸುತ್ತಮುತ್ತ ಇನ್ನು ಬರುತ್ತಿದ್ದಾಗ ದಾರಿಯಲ್ಲಿ ಹೋಷಂಗನಿಗೆ ಸುದ್ದಿ ತಿಳಿದಿದ್ದೇನೆಂದರೆ–ಜಾನ್‌ಪುರದ ಸುಲ್ತಾನ್ ಇಬ್ರಾಹಿಂ ಶರ್ಖಿಯೂ ಸಹ ಕಾಲ್ಪಿಯನ್ನು ಗೆಲ್ಲಲು ಬೇರೆ ದಾರಿಯಲ್ಲಿ ಬರುತ್ತಿದ್ದಾನೆಂದು ಗೊತ್ತಾಯಿತು.

ಸುಲ್ತಾನ್ ಹಿಬ್ರಾಹಿಂ ಶರ್ಖಿಯ ಆಗಮನ :

ಸುಲ್ತಾನ್ ಹೋಷಂಗನು ನಿಶ್ಚಯಿಸಿದುದೇನೆಂದರೆ–ಕಾಲ್ಪಿಯನ್ನು ಗೆಲ್ಲುವುದಕ್ಕೆ ಮುಂಚೆ ಸುಲ್ತಾನ್ ಇಬ್ರಾಹಿಂನನ್ನು ಸೋಲಿಸುವುದೇ ಸೂಕ್ತವೆಂದು ತಿಳಿದನು. ಆತನು ಬರುತ್ತಿರುವತ್ತ ಇವನೂ ಹೊರಟನು. ಇಬ್ಬರೂ ಎದುರುಬದುರಾದರು.

ಸುಲ್ತಾನ್ ಶರ್ಖಿಯು ಹಿಮ್ಮೆಟ್ಟಿದನು :

ಇಬ್ಬರಲ್ಲೂ ಯುದ್ಧವಾಗಲೇ ಇಲ್ಲ. ಯುದ್ಧ ಇಂದು ನಾಳೆ ಎನ್ನುವುದರೊಳಗಾಗಿ ಶರ್ಖಿಗೆ ಸುದ್ಧಿ ತಿಳಿದುದೇನೆಂದರೆ ದಿಲ್ಲಿಯ ಬಾದಶಹನಾದ ಮುಬಾರಕಶಾಹನು

ಸಂದರ್ಭವನ್ನು ತಿಳಿದು ಜೌನ್‌ಪುರವನ್ನು ವಶಪಡಿಸಿಕೊಳ್ಳಲು ಬರುತ್ತಿದ್ದಾನೆಂದು ಈ ಸುದ್ದಿಯನ್ನು ತಿಳಿದ ಕೂಡಲೆ ಸುಲ್ತಾನ್ ಶರ್ಖಿಯು ತನ್ನ ರಾಜಧಾನಿಯತ್ತ ಬಹಳ ವೇಗವಾಗಿ ಓಡಲು ಯತ್ನಿಸಿದನು. ಹೀಗಾಗಿ ಮಾಳವರಲ್ಲಿ ಮತ್ತು ಜೌನ್‌ಪುರಿಗಳಲ್ಲಿ ಯುದ್ಧದ ಸಂದರ್ಭವೇ ಬರಲಿಲ್ಲ.

ಕಾಲ್ಪಿ ಹೋಷಂಗನ ವಶ :

ಸುಲ್ತಾನ್ ಶರ್ಖಿಯು ಹೋದ ನಂತರ ಹೋಷಂಗನು ಯುದ್ಧವೇ ಇಲ್ಲದೆ, ಕಾಲ್ಪಿಯನ್ನು ವಶಪಡಿಸಿಕೊಂಡು ನಗರದಲ್ಲಿ ತನ್ನ ಪ್ರಶಂಸೆಯ (ಖುತ್ಬಾ) ಪ್ರವಚನ ಓದಿಸಿದನು. ಸ್ವಲ್ಪದಿನ ಅಲ್ಲಿ ತಂಗಿದನು. ಹಿಂದಿನ ಶಾಸಕನಾದ ಅಬ್ದುಲ್ ಖಾದರನ ಸುಪರ್ದಿಗೆ ಅಲ್ಲಿಯ ಆಡಳಿತವನ್ನು ನೀಡಿ ಮಾಳವಕ್ಕೆ ರವಾನೆಯಾದನು.

ಪಿತೂರಿಕೋರರ ಚಟುವಟಿಕೆಗಳು :

ದಾರಿಯಲ್ಲಿ ಸುಲ್ತಾನ್ ಹೋಷಂಗನಿಗೆ ಠಾಣೆದಾರರು ತಮ್ಮ ಕಷ್ಟ ಕಾರ್ಪಣ್ಯಗಳನ್ನು ತಿಳಿಸುವ ಅರ್ಜಿಗಳನ್ನು ಕೊಟ್ಟರು. ಕೆಲವು ದಂಗೆಕೋರರು ಜಾಬಿಯ ಬೆಟ್ಟಗಳ ಕಡೆಯಿಂದ ಮಾಳವದಲ್ಲಿ ನುಗ್ಗಿ ಬಂದು ಬಡ ಹಳ್ಳಿಗರ ಮೇಲೆ ಆಕ್ರಮಣವನ್ನು ಮಾಡಿ ಲೂಟಿ ಮಾಡುತ್ತಾರೆಂದು ದೂರಿದರು. ಅವರು ಹೌಸ್‌ಭೀಮ್‌ನಲ್ಲಿ ಹೋಗಿ ಅಡಗಿಕೊಳ್ಳುವರೆಂದು ಹೇಳಿದರು.

ಹೌಸ್‌ಭೀಮ್ :

ಈ ಜಾಗದ ಬಗ್ಗೆ ಸ್ವಲ್ಪ ತಿಳಿದುಕೊಳ್ಳುವುದು ಉಚಿತವೆನಿಸುತ್ತದೆ. ಈ ಹೌಸ್ (ಜಲಾಶಯ)ನ್ನು ರಾಯ್‌ಭೀಮನು ತನ್ನ ಶಾಸನ ಕಾಲದಲ್ಲಿ ಕಟ್ಟಿಸಿದ್ದನು. ರಾಜನು ಎರಡು ಬೆಟ್ಟಗಳನ್ನು ಒಂದು ಆಣೆಕಟ್ಟೆಯಿಂದ ಜೋಡಿಸಿ ಕಟ್ಟಿಸಿದ್ದನು. ಅಣೆ ಬಹಳ ದೊಡ್ಡದಾಗಿದ್ದು, ಕಲ್ಲುಬಂಡೆಗಳ ಸೀಳಿಸಿ, ಒಡೆಸಿ, ಭದ್ರವಾದ ಅಣೆಕಟ್ಟನ್ನು ಕಟ್ಟಿಸಿದ್ದನು. ಇದರ ಉದ್ದ-ಅಗಲಗಳನ್ನು ಅಳೆಯುವುದೇ ಕಷ್ಟವೆಂದು ತಿಳಿಯುತ್ತದೆ. ಒಂದು ಕಡೆ ನಿಂತು ನೋಡಿದರೆ ಮತ್ತೊಂದು ಕಡೆಯ ದಡವು ಕಣ್ಣಿಗೆ ಕಾಣಿಸುವುದಿಲ್ಲ. ಆಳವೂ ಬಹಳವಿದೆಯೆಂದು ಹೇಳುತ್ತಾರೆ.

ಹೋಷಂಗನ ಮಕ್ಕಳಲ್ಲಿ ಯುದ್ಧ :

ಯಾವ ದಿನಗಳಲ್ಲಿ ಹೋಷಂಗನ ಠಾಣೆದಾರರು ಅರ್ಜಿಗಳನ್ನು ಕೊಟ್ಟಿದ್ದಾರೋ ಅದೇ ದಿನಗಳಲ್ಲಿ ಆತನ ಮಕ್ಕಳಲ್ಲಿ ಅಂತಃಕಲಹಗಳು ಪ್ರಾರಂಭವಾಗಿದ್ದುವು. ಸುಲ್ತಾನ್ ಹೋಷಂಗನ ಏಳು ಗಂಡು ಮಕ್ಕಳು ಮತ್ತು ಮೂರು ಜನ ಹೆಣ್ಣುಮಕ್ಕಳಿದ್ದರು. ಆಲಂಖಾನನ ಮಗಳಿಂದ ಮೂರು ಜನ ಗಂಡು ಮಕ್ಕಳಿದ್ದರು. ಆಲಂಖಾನನು ಅಸೀರನ ಶಾಸಕನೂ, ಅಮೀರನೂ ಆಗಿದ್ದನು. ಈ ಮೂರು ಗಂಡು ಮಕ್ಕಳ

ಹೆಸರುಗಳು (೧) ಉಸ್ಮಾನಖಾನ (೨) ಫತಹ್‌ಖಾನ್ (೩) ಹೀಬತ್‌ಖಾನ ಆಗಿದ್ದುವು. ಬಾಕಿ ಗಂಡು ಮಕ್ಕಳ ಹೆಸರು –(೪) ಗಜ್ನೈನ್‌ಖಾನ (೫) ಅಹಮದ್‌ಖಾನ್ (೬) ಉಮರ್‌ಖಾನ್ ಮತ್ತು (೭) ಅಬು ಇಸ್‌ಹಾಕ್ ಎಂಬ ಒಟ್ಟು ಏಳು ಜನರಿದ್ದರು. ಗಜ್ನೈನಖಾನನೇ ಹಿರಿಯ ಮಗನಾಗಿದ್ದನು.

ಉಸ್ಮಾನ್ ಮತ್ತು ಗಜ್ನೈನ್‌ರಲ್ಲಿ ವಿರೋಧ :

ಫತಹ್‌ಖಾನ್, ಹೀಬತ್‌ಖಾನ್, ಅಹಮದ್‌ಖಾನ್, ಉಮರ್‌ಖಾನ್ ಮತ್ತು ಅಬೂಇಸ್‌ಹಾಕ್‌ರಲ್ಲಿ ಒಳ್ಳೆಯ ಸ್ನೇಹಪ್ರೀತಿಗಳಿದ್ದುವು. ಇವರೆಲ್ಲ ಷಹಜಾದರೂ ತನ್ನ ಹಿರಿಯ ಅಣ್ಣನ ಆಜ್ಞಾರಾಧಕರಾಗಿದ್ದರು. ಆದರೆ ಉಸ್ಮಾನ್‌ಖಾನನಿಗೂ ಗಜ್ನೈನ್‌ಖಾನನಿಗೂ ಆಗುತ್ತಿರಲಿಲ್ಲ. ಈ ಕಾರಣದಿಂದಾಗಿ ಅಮೀರರೂ, ಶಾಸಕರೂ ಎರಡು ಭಾಗವಾಗಿ ವಿಂಗಡಿಸಿಕೊಂಡಿದ್ದರು. ಇವರಿಬ್ಬರಲ್ಲಿ ಬಹಳ ದ್ವೇಷವಿತ್ತು.

ಮಹಮೂದ್‌ಖಾನನ ಬುದ್ಧಿವಂತಿಕೆ :

ಸುಲ್ತಾನ್ ಹೋಷಂಗನು ತನ್ನ ಮಕ್ಕಳ ಈ ಪರಿಸ್ಥಿತಿಗಳನ್ನು ಕಂಡು ತುಂಬಾ ದುಃಖಿತನಾಗಿದ್ದನು. ಮಲಿಕ್ ಮಗೀಸ್ ಮತ್ತು ಆತನ ಮಗ ಮಹಮೂದ್‌ಖಾನನು ಬಹಳ ಬುದ್ಧಿವಂತರಿದ್ದರು. ಇವರಿಬ್ಬರೂ ಏನಾದರೂ ಮಾಡಿ ಸುಲ್ತಾನ್ ಹೋಷಂಗನ ಚಿಂತೆಯನ್ನು ಕಡಿಮೆ ಮಾಡಲು ಪ್ರಯತ್ನಿಸುತ್ತಿದ್ದರು. ಸುಲ್ತಾನ್ ಹೋಷಂಗನು ಮಹಮೂದ್‌ನಿಂದ ಬಹಳ ಸಂತುಷ್ಟನಾಗಿದ್ದನು. ಒಮ್ಮೊಮ್ಮೆ ಈ ನವ ಯುವಕನು ನನ್ನ ಆತ್ಮೀಯನಾಗಿದ್ದನೆಂದು ಪ್ರಶಂಸಿಸುತ್ತಿದ್ದನು. ಮಗೀಸನು ಬಾದಶಹನಿಗೆ ಹೀಗೆ ಹೇಳುತ್ತಿದ್ದನು. "ಅಲ್ಲಾನು ತಮ್ಮ ಮಕ್ಕಳ ಆಯಸ್ಸನ್ನು ವೃದ್ಧಿಸಲಿ" ನಾವು ನಿಮ್ಮ ನೋವು ನಿವಾರಕ ಗುಲಾಮರು ಮಾತ್ರ ಎನ್ನುತ್ತಿದ್ದನು.

ಉಸ್ಮಾನನ ಅಧಿಕಪ್ರಸಂಗಿತನ :

ಒಂದು ದಿನ ಕಾಲ್ಪಿಯ ದಾರಿಯಲ್ಲಿ ಉಸ್ಮಾನನು ತನ್ನ ಹಿರಿಯ ಅಣ್ಣ ಘಜ್ನೈನ್‌ಖಾನನೊಂದಿಗೆ ಅಸಭ್ಯವಾಗಿ ವರ್ತಿಸಿದನು. ಉಸ್ಮಾನನು ತನ್ನ ಒಬ್ಬ ನೌಕರನನ್ನು ಘಜ್ನೈನನ ಅಂತಃಪುರಕ್ಕೆ ಕಳುಹಿಸಿ ಆತನು ಅಣ್ಣನನ್ನು ತುಚ್ಛ ಮಾತುಗಳನ್ನಾಡಿ ನಿಂದಿಸಿದನು. ಘಜ್ನೈನನ ನೌಕರರು ಆತನನ್ನು ತಡೆದರು. ಆದರೂ ಆತ ಬಯ್ಯುವುದನ್ನು ನಿಲ್ಲಿಸಲಿಲ್ಲ. ಘಜ್ನೈನನ ನೌಕರರು ಆತನನ್ನು ಹಿಡಿದು ಚೆನ್ನಾಗಿ ಬಡಿದರು. ಸುಲ್ತಾನ್ ಹೋಷಂಗನಿಗೂ ಈ ಜಗಳದ ಸಮಾಚಾರವು ತಲುಪಿತು. ಉಸ್ಮಾನನು ತನ್ನ ತಂದೆಯ ಹೆದರಿಕೆಯಿಂದ ತಾನಿದ್ದ ಜಾಗದಿಂದ ಹೊರಗಡೆ ಹೋದನು. ಇವನು ಹೋದುದರಿಂದ ಇನ್ನೂ ಅಸಭ್ಯ ಚಟುವಟಿಕೆಗಳು ಜರುಗಿದವು. ಉಸ್ಮಾನನು ಸೈನಿಕ ಶಿಬಿರದಿಂದ ಹೊರಗಿದ್ದನು.

ಸೈನಿಕರ ಬೀಡಿನಿಂದ ಬೇರ್ಪಟ್ಟನು :

ಶಹಜಾದ ಉಸ್ಮಾನನ ಹತ್ತಿರ ಇದ್ದವರೆಲ್ಲರೂ ಅಷ್ಟೊಂದು ಬುದ್ಧಿವಂತರಾಗಿರಲಿಲ್ಲ. ಅಯೋಗ್ಯರನ್ನು ಉಸ್ಮಾನನು ಹತ್ತಿರವಿಟ್ಟುಕೊಂಡಿದ್ದನು. ಅಂತಹವರ ಆಶ್ವಾಸನೆಗಳ ಮೇಲೆ ವಿಶ್ವಾಸವಿಟ್ಟು ಬಾದಶಹನೊಂದಿಗೆ ಅವಿಶ್ವಾಸವನ್ನು ತೋರ್ಪಡಿಸುತ್ತಿದ್ದನು. ಈ ವಿಚಾರವು ಹೋಷಂಗನಿಗೆ ಗೊತ್ತಾಗಿ ಮಗನ ಮೇಲೆ ತುಂಬಾ ಕ್ರೋಧಿತನಾದನು. ಹಾಗೂ ಮಲಿಕ್ ಮಗೀಸನೊಂದಿಗೆ ವಿಷಯ ವಿಮರ್ಶೆಯನ್ನು ಮಾಡಿದನು. ಮಗೀಸನು ಬಾದಶಹರಿಗೆ ಸಲಹೆ ನೀಡಿದ್ದೇನೆಂದರೆ–ಉಸ್ಮಾನನಿಂದ ಇಂತಹ ತಪ್ಪು ಚಟುವಟಿಕೆ ಆಗಿರುವುದು ನಿಜ. ತಾವು ಆತನನ್ನು ಕ್ಷಮಿಸಿರುವುದು ಉಂಟು. ಈ ಸಲವು ತಾವು ಶಾಂತಿಯಿಂದ ಆತನನ್ನು ಕ್ಷಮಿಸುವುದೇ ಉತ್ತಮವೆಂದು ಸಲಹೆ ನೀಡಿದನು. ತಾವು ಕ್ಷಮಿಸಿದರೆ ಆತನು ಸೈನ್ಯದಲ್ಲಿ ಸೇರಿಕೊಳ್ಳಲುಬಹುದು ಹೋಷಂಗನು ಮಲಿಕ್ ಮಗೀಸನ ಮಾತನ್ನು ಒಪ್ಪಿ, ಷಹಜಾದನ ತಪ್ಪುಗಳನ್ನು ಮನ್ನಿಸಿದನು.

ಉಸ್ಮಾನನ ಬಂಧನ :

ಕೊನೆಗೆ ಉಸ್ಮಾನನು ಸೈನಿಕ ಶಿಬಿರಕ್ಕೆ ಹಿಂತಿರುಗಿದನು. ಉಜ್ಜೈನಿಯಲ್ಲಿ ಬಾದಶಹನು ತನ್ನ ದರಬಾರನ್ನು ಆಯೋಜಿಸಿದನು. ಆ ಸಂದರ್ಭದಲ್ಲಿ ಉಸ್ಮಾನನನ್ನು, ಫತಹ್‌ಖಾನನ್ನು, ಹೀಬತ್‌ಖಾನರಿಗೆ ಸ್ವಲ್ಪ ಸಿಟ್ಟಾಗಿ ಮಾತನಾಡಿದ. ಹಾಗೂ ಈ ಮೂವರನ್ನು ಸಿಪಾಯಿಗಳ ವಶಕ್ಕೆ ಕೊಟ್ಟನು. ಈ ಘಟನೆಯ ಮೂರನೇ ದಿನ ಈ ಮೂರು ಜನರನ್ನು ಕೈ–ಕಾಲುಗಳಿಗೆ ಸಂಕೋಲೆಗಳನ್ನು ಬಿಗಿಸಿ, ಮಲಿಕ್‌ಮಗೀಸ ವಶಕ್ಕೆ ಕೊಟ್ಟನು. ಆತನು ಮಾಂಡುವಿನ ಶಾದಿಆಬಾದಿನ ಕೋಟೆಯಲ್ಲಿ ಬಂಧನದಲ್ಲಿಡಿಸಿದನು.

ಜಾಬಿಯ ಬೆಟ್ಟದ ಮೇಲೆ ಸೈನಿಕ ಕಾರ್ಯಾಚರಣೆ :

ಇದಾದ ನಂತರ ಹೋಷಂಗನು ಜಾಬಿಯ ಬೆಟ್ಟದಲ್ಲಿದ್ದ ದಂಗೆಕೋರರನ್ನು ಅಡಗಿಸಲು ಅತ್ತ ಗಮನವನ್ನು ಹರಿಸಿದನು. ಅಲ್ಲಿಗೆ ತಲುಪಿ ಹೌಸ್‌ಭೀಮ್ ಜಲಾಶಯದ ಅಣೆಯನ್ನು ಒಡೆದು ಆ ಪ್ರದೇಶದಲ್ಲಿ ವಾಸಿಸುತ್ತಿದ್ದ ಕಳ್ಳರನ್ನು ಹಿಡಿದು ಕಠಿಣ ಶಿಕ್ಷೆಗೆ ಗುರಿಪಡಿಸಿದನು. ಇಲ್ಲಿನ ರಾಜನು ಹೆದರಿ ಕಾಡಿನಲ್ಲಿ ಓಡಿ ಅಡಗಿಕೊಂಡನು. ಆತನ ಸಂಪತ್ತಿನೊಂದಿಗೆ ಆತನ ಪರಿವಾರವನ್ನು ಬಂಧಿಸಿ ತಂದನು. ಬಾದಶಹನು ಆ ನಗರವನ್ನು ಸಂಪೂರ್ಣವಾಗಿ ನಾಶಪಡಿಸಿದನು. ಅಲ್ಲಿಯ ಅನೇಕ ಪ್ರಜೆಗಳನ್ನೂ ಸೆರೆಹಿಡಿದು ಬಂಧನದಲ್ಲಿಟ್ಟನು.

ಹೋಷಂಗನ ಕಿರೀಟದ ಕೆಂಪು ವಜ್ರ ಕಾಣೆಯಾದುದು, ಅಪಶಕುನದ ಚಿಹ್ನೆ :

ಬಾದಶಹನು ಹೋಷಂಗಾಬಾದಿಗೆ ಬಂದನು. ಮಳೆಗಾಲ ಮುಗಿಯುವವರೆಗೂ

ಅಲ್ಲಿಯೇ ತಂಗಿದ್ದನು. ಮಳೆಗಾಲದಲ್ಲಿ ಬಾದಶಹನು ಪ್ರವಾಸಕ್ಕೆಂದು ಒಂದು ದಿನ ಹೊರ ಹೊರಟನು. ಅಕಸ್ಮಾತಾಗಿ ಆತನ ಕಿರೀಟದಿಂದ "ಲಾಲ್" ಕೆಂಪು ವಜ್ರದ ಹರಳು ಕಿತ್ತು ಬಿದ್ದು ಹೋಗಿತ್ತು. ಮೂರು ದಿನಗಳ ನಂತರ ಈ ವಜ್ರದ ಹರಳು ಒಬ್ಬ ಸಿಪಾಯಿಗೆ ಸಿಕ್ಕಿ, ಅದನ್ನು ಆತನು ಬಾದಶಹರ ಸೇವೆಯಲ್ಲಿ ತಂದು ಅರ್ಪಿಸಿದನು. ಬಾದಶಹನು ಸಂತೋಷಪಟ್ಟು ಆತನಿಗೆ (೫೦೦) ಐದುನೂರು "ತಿನ್ಗೆ" ಚಿನ್ನದ ನಾಣ್ಯಗಳನ್ನು ಬಹುಮಾನವಾಗಿ ಕೊಟ್ಟನು.

ಜೀವನದಿಂದ ನಿರಾಶೆ :

ಈ ಸಂದರ್ಭದಲ್ಲಿ ಸುಲ್ತಾನ್ ಹೋಷಂಗನು ಒಂದು ಘಟನೆಯನ್ನು ಜ್ಞಾಪಿಸಿಕೊಂಡನು. ಒಂದು ದಿನ ಸುಲ್ತಾನ್ ಫೈರೋಜಶಾಹ್‌ನ ಕಿರೀಟದಿಂದ ಕೆಂಪು ವಜ್ರದ ಹರಳು ಬಿದ್ದು ಹೋಗಿತ್ತು. ಒಬ್ಬ ಸಿಪಾಯಿಯು ಅದನ್ನು ಹುಡುಕಿ ತಂದು ಕೊಟ್ಟಿದ್ದನು. ಬಾದಶಹನು ಆತನಿಗೆ ಬಹುಮಾನವನ್ನು ಕೊಟ್ಟಿದ್ದನು. ಆಗ ಬಾದಶಹನು ಅದರ ಭವಿಷ್ಯವನ್ನು ಹೀಗೆ ನುಡಿದಿದ್ದನಂತೆ–"ಈಗ ನನ್ನ ಜೀವನದ ಪಾತ್ರೆ ತುಂಬಿದೆ" ಎಂದು ಹೇಳಿದ್ದನು. ಹೀಗೆ ಹೇಳಿದ ಕೆಲವೇ ದಿನಗಳ ನಂತರ ಇಹಲೋಕವನ್ನು ತ್ಯಜಿಸಿದ್ದನಂತೆ. ಅದೇ ರೀತಿ ನನ್ನ ಜೀವನದಲ್ಲೂ ನಡೆದಿದೆ. ಈಗ ನನಗೂ ಅನ್ನಿಸುತ್ತಿರುವುದೇನೆಂದರೆ–ನನ್ನ ಜೀವಮಾನದ ಸೂರ್ಯನೂ ಮುಳುಗಲಿದ್ದಾನೆಂದು.

ಮೃತ್ಯುವಿನ ಯೋಚನೆ :

ಈ ಕಥೆಯನ್ನು ಕೇಳಿದ ಅಲ್ಲಿದ್ದ ಜನರು ಪ್ರಾರ್ಥಿಸಿದ್ದುದೇನೆಂದರೆ–ಸುಲ್ತಾನ್ ಫೈರೋಜ್‌ಶಾಹರ ಜೀವನದಲ್ಲಿ ಇಂತಹದೇ ಘಟನೆ ನಡೆದಾಗ ಅವರ ವಯಸ್ಸು (೯೦) ತೊಂಬತ್ತು ವರ್ಷಗಳಾಗಿದ್ದುವು. ಆದರೆ ತಾವು ಇನ್ನು ಯುವಕರಾಗಿದ್ದೀರಿ. ಆಡಳಿತವನ್ನು ನಡೆಸುವ ಶಕ್ತಿ ನಿಮ್ಮಲ್ಲಿ ಅಪಾರವಾಗಿದೆ. ಆದ್ದರಿಂದ ತಾವು ಇಂತಹ ಚಿಂತೆಯನ್ನು ಮನಸ್ಸಿಗೆ ಹಚ್ಚಿಕೊಳ್ಳಲೇಬಾರದು ಎಂದರು. ಇದಕ್ಕೆ ಉತ್ತರವಾಗಿ ಬಾದಶಹನು ಸಾವಿಗೆ ಆಯುಸ್ಸಿನ ಹೆಚ್ಚು ಕಡಿಮೆಯ ಅಂತರವಿಲ್ಲ. ಅದು ಮುಪ್ಪಿನಲ್ಲೂ ಬರಬಹುದು ಇಲ್ಲವೇ ಯೌವನದಲ್ಲಿಯೂ ಸಂಭವಿಸಬಹುದು.

ಹೋಷಂಗನ ಅನಾರೋಗ್ಯ :

ಅಕಸ್ಮಾತಾಗಿ ಈ ಘಟನೆಯ ಕೆಲವೇ ದಿನಗಳಲ್ಲಿ ಬಾದಶಹನು ಕಾಯಿಲೆ ಬಿದ್ದನು. ಮರಣದ ನಕ್ಷೆ ಆತನ ಕಣ್ಣಲ್ಲಿ ತಿರುಗುತ್ತಿತ್ತು. ಇದೇ ಪರಿಸ್ಥಿತಿಯಲ್ಲಿಯೂ ಹೋಷಂಗಬಾದನಿಂದ ಶಾದಿಆಬಾದಿಗೆ ಬಂದನು. ಅಲ್ಲಿಂದ ಮಾಂಡುವಿನತ್ತ ನಡೆದನು. ದಾರಿಯಲ್ಲಿಯೇ ಒಂದು ಸಲ ದರ್ಬಾರನ್ನು ನಡೆಸಿದನು. ತನ್ನ ಸಾಮ್ರಾಜ್ಯದ

ಶಾಸಕರ, ಅಮೀರರ ಎದುರಿಗೆ ಷಹಜಾದ ಘಜ್ನೈನನ್ನು ಕರೆದು ರಾಜ್ಯದ ಮುದ್ರೆಯನ್ನು ನೀಡಿದನು.

ಅಮೀರರಿಗೆ ಬಾದಶಹನ ಉಪದೇಶ :

ಸುಲ್ತಾನ್ ಹೋಷಂಗನು ಘಜ್ನೈನ ಕೈಯನ್ನು ಮಹಮೂದ್ ಉರ್ಫ್ ಮಹಮೂದ್‌ಖಾನನ ಕೈಯಲ್ಲಿಟ್ಟು ಆತನ ರಕ್ಷಣೆಯನ್ನು ಮಾಡಬೇಕೆಂದು ಕೇಳಿಕೊಂಡನು. ಮಹಮೂದ್‌ನು ಪ್ರಮಾಣ ಮಾಡುತ್ತ ಎಲ್ಲಿನ ತನಕ ನನ್ನ ಜೀವವಿರುವುದೋ ಅಲ್ಲಿಯವರೆಗೆ ನಾನು ಇವರ ಸೇವೆಯಲ್ಲಿ ನನ್ನ ಪ್ರಾಣವನ್ನು ತೆತ್ತಾದರೂ ರಕ್ಷಿಸುವೆನು ಎಂದನು. ಇದಾದ ನಂತರ ಅಮೀರರನ್ನು, ಶಾಸಕರನ್ನೂ, ಉದ್ದೇಶಿಸಿ ತಮ್ಮ-ತಮ್ಮಲ್ಲಿ ದ್ವೇಷಭಾವವನ್ನು ಇಡಬೇಡಿ. ದ್ವೇಷದಿಂದಾಗಿ ಅನೇಕ ಸಾಮ್ರಾಜ್ಯಗಳು ಹಾಳಾಗಿವೆ ಎಂದನು.

ಮಹಮೂದ್‌ಖಾನನಿಗೆ ಉಪದೇಶ :

ಸುಲ್ತಾನ್ ಹೋಷಂಗನು ಮಹಮೂದ್‌ಖಾನನ ಆಸೆಯನ್ನು ಅರಿತಿದ್ದನು. ಆತನು ರಾಜ್ಯವನ್ನು ತನ್ನದಾಗಿಸಿಕೊಳ್ಳಬೇಕೆಂದಿದ್ದನು. ಆದ್ದರಿಂದ ಬಾದಶಹನು ಆತನನ್ನು ವಿಶೇಷವಾಗಿ ಕರೆದು ಹೇಳಿದ-ಸುಲ್ತಾನ್ ಅಹಮದ್‌ಶಾಹ ಗುಜರಾತಿಯು ಒಬ್ಬ ಸಮರ್ಥ, ದಕ್ಷ ಬಾದಶಹನಾಗಿದ್ದಾನೆ. ಆತನು ಯಾವಾಗಲೂ ನಮ್ಮ ಮಾಳವ ದೇಶವನ್ನು ಕಬಳಿಸುವ ಹುನ್ನಾರದಲ್ಲಿದ್ದಾನೆ. ಒಂದು ವೇಳೆ ನೀವೆಲ್ಲಾ ಒಗ್ಗಟ್ಟನ್ನು ತೊರೆದು ಜನರಲ್ಲಿ ರಾಜಧರ್ಮವನ್ನು ಬಿಟ್ಟು ವರ್ತಿಸಬಾರದು. ಸೈನ್ಯವನ್ನು ಪ್ರಜೆಗಳನ್ನು ಪ್ರೀತಿಯಿಂದ ಪಾಲಿಸಬೇಕು. ಷಹಜಾದರ ಹಿತರಕ್ಷಣೆ ಬಹಳ ಮುಖ್ಯವಾದುದು. ಇಲ್ಲವಾದರೆ ನಿಮ್ಮ ದೇಶವನ್ನು ಗೆಲ್ಲುವುದು ಸುಲ್ತಾನ್ ಅಹಮದಶಾಹನಿಗೆ ಒಂದು ಆಟವೆನಿಸುವುದು. ಮಾಳವ ದೇಶವನ್ನು ಗೆಲ್ಲಲು ಎಲ್ಲ ಪ್ರಯತ್ನಗಳನ್ನು ಆತ ಮಾಡುವನು ಎಂದು ಬುದ್ಧಿವಾದವನ್ನು ಹೇಳಿದನು.

ಗಜ್ನೈನ್‌ನ ಸಂದೇಶ ಮಹಮೂದ್‌ಖಾನನಿಗೆ :

ಇದಾದ ನಂತರ ಷಹಜಾದ ಘಜ್ನೈನನು ತನ್ನ ಒಬ್ಬ ಅಮೀರ ಉದ್ಮತುಲ್ ಮಲಿಕ್ ಎಂಬುವನನ್ನು ಮಹಮೂದ್‌ಖಾನನ ಹತ್ತಿರ ಕಳುಹಿಸಿ ಹೇಳಿಸಿದುದೇನೆಂದರೆ- ಒಂದು ವೇಳೆ ತಾವು ತಮ್ಮ ಅಧೀನತೆಯ ಒಪ್ಪಿಗೆಯನ್ನು ಪ್ರಮಾಣಿಕರಿಸಿ, ವಿಶ್ವಾಸವನ್ನು ದೃಢಪಡಿಸಿದ್ದೇ ಆದರೆ, ನಾನು ಅದನ್ನು ತಮ್ಮ ಒಂದು ದೊಡ್ಡ ಉಪಕಾರವೆಂದು ತಿಳಿಯುತ್ತೇನೆ. ನನಗೂ ಅದರಿಂದ ಸಮಾಧಾನವಾಗುತ್ತದೆ ಎಂದು. ಮಹಮೂದ್‌ಖಾನನು ಷಹಜಾದನ ಸಂದೇಶವನ್ನು ಒಪ್ಪಿಕೊಂಡು ತನ್ನ ಹುದ್ದೆಯನ್ನು ವಿಶ್ವಾಸವನ್ನೂ ಪ್ರಮಾಣ ವಚನದೊಂದಿಗೆ ದೃಢಪಡಿಸಿದನು.

ಉಸ್ಮಾನನ ಬಿಡುಗಡೆಗೆ ಪ್ರಯತ್ನ :

ಕೆಲವು ಅಮೀರರು ಸುಲ್ತಾನ್ ಹೋಷಂಗನನ್ನು ಕುರಿತು ಅಲ್ಲಾನ ಕೃಪೆಯಿಂದ ಶಹಜಾದ ಉಸ್ಮಾನನೂ ಸಹ ಬುದ್ಧಿವಂತನೂ, ಸಭ್ಯನೂ ಆಗಿದ್ದಾನೆ. ಆದ್ದರಿಂದ ಆತನನ್ನು ಬಂಧನದಿಂದ ಬಿಡುಗಡೆಗೊಳಿಸಿ ಆತನಿಗೊಂದು ವಾಳವದಲ್ಲಿ ಜಾಗೀರಿಯನ್ನು ಬಿಟ್ಟುಕೊಡುವುದು ಸೂಕ್ತವೆಂದು ಪ್ರಾರ್ಥಿಸಿದರು. ಅದಕ್ಕೆ ಉತ್ತರವಾಗಿ ಸುಲ್ತಾನ್ ಹೋಷಂಗನು ನನಗೂ ಹಾಗೆಯೇ ಮಾಡಬೇಕೆಂಬ ಆಸೆ ಇದೆ. ಆದರೆ ದುಃಖದ ಮಾತೆಂದರೆ–ನಾನು ಹಾಗೆ ಮಾಡಲಾರೆ ಏಕೆಂದರೆ ಹಾಗೇನಾದರೂ ನಾನು ಆತನನ್ನು ಬಿಡುಗಡೆ ಮಾಡಿದರೆ ನನ್ನ ದೇಶದಲ್ಲಿ ದೊಡ್ಡ ಗಲಭೆಯ ಹುಟ್ಟಿಕೊಳ್ಳುವುದರಲ್ಲಿ ಅನುಮಾನವಿಲ್ಲ.

ಪ್ರಮಾಣ ವಚನ :

ಷಹಜಾದ ಫಜ್ನೈನನಿಗೆ ತಿಳಿದು ಬಂದದ್ದೇನೆಂದರೆ–ಕೆಲವು ಅಮೀರರು ಶಹಜಾದ ಉಸ್ಮಾನನ ಬಿಡುಗಡೆಯ ಸಂಬಂಧದಲ್ಲಿ ಪ್ರಯತ್ನಶೀಲರಾಗಿದ್ದಾರೆಂದು ಆತನು ಮತ್ತೊಮ್ಮೆ ಉಮ್ದತುಲ್‌ಮಲಿಕನನ್ನು ಮಹಮೂದ್‌ಖಾನನಲ್ಲಿಗೆ ಕಳುಹಿಸಿ ಒಂದು ವೇಳೆ ನೀನು ನನ್ನ ಮುಂದೆ ಬಂದು ನಿನ್ನ ಹುದ್ದೆಯ ಪ್ರಮಾಣವಚನವನ್ನು ಪೂರ್ಣಗೊಳಿಸಿದ್ದೇ ಆದರೆ ನನಗೆ ಸಮಾಧಾನವಾದೀತು ಎಂದು ಹೇಳಿ ಕಳುಹಿಸಿದನು. ಮಹಮೂದ್‌ಖಾನನು ಷಹಜಾದನ ಇಚ್ಛೆಯನ್ನು ಪೂರೈಸಲು ಆತನ ಮುಂದೆ ಬಂದು ವಿಶ್ವಾಸವನ್ನು ಇಟ್ಟಿರುವುದಕ್ಕೆ ಪ್ರಮಾಣವಚನವನ್ನು ಪಡೆದುಕೊಂಡನು.

ಮಲಿಕ್ ಉಸ್ಮಾನ್‌ಖಾನ ಜಲಾಲನು ಮಹಮೂದ್‌ನ ಹತ್ತಿರ ಬಂದದ್ದು :

ಅಮೀರರುಗಳಿಗೆ ಈ ವಿಷಯವು ತಿಳಿದಾಗ ಅವರು ಒಬ್ಬ ಹೆಸರಾಂತ ಅಮೀರ ಮಲಿಕ್ ಉಸ್ಮಾನಖಾನ ಜಲಾಲ್ ಎಂಬುವನನ್ನು ಮುಬಾರಕ್ ಖಾರಿ ಎಂಬುವನ ಜೊತೆಯಲ್ಲಿ ಮಹಮೂದ್‌ಖಾನನ ಹತ್ತಿರ ಕಳುಹಿಸಿದರು. ಅಕಸ್ಮಾತ ಆ ಸಮಯದಲ್ಲಿ ಉಮ್ದತಲ್‌ಮುಲ್ಕನೂ ಅಲ್ಲಿಯೇ ಕುಳಿತಿದ್ದನು. ಮಹಮೂದ್‌ಖಾನನು ಉಮ್ದತಲ್‌ಮುಲ್ಕನನ್ನು ತನ್ನ ಬಿಡಾರದಲ್ಲಿಯೇ ಬಿಟ್ಟು ತಾನು ಹೊರಬಂದು ಮಲಿಕ್ ಉಸ್ಮಾನಖಾನ ಜಲಾಲ್ ಮತ್ತು ಮುಬಾರಕ್‌ಖಾರಿಯೊಂದಿಗೆ ಮಾತನಾಡಲಾರಂಭಿಸಿದನು. ಮಹಮೂದ್‌ಖಾನ್‌ನ ಈ ಕ್ರಮದ ಅರ್ಥವೇನೆಂದರೆ ಉಮ್ದತಲ್ ಮುಲ್ಕನು ಈ ಮಾತುಗಳನ್ನು ಕೇಳಿಸಿಕೊಳ್ಳಲಿ ಎಂದು ಹೊರಬಂದಿದ್ದನು.

ಉಸ್ಮಾನನ ಪಕ್ಷದವರ ಅಮೀರರ ಸಂದೇಶ :

ಮಲಿಕ್ ಮುಬಾರಕ್ ಗಾಜಿಯು ಮಾತುಗಳನ್ನಾರಂಭಿಸಿದನು. ಆಶೀರ್ವಾದದ ನಂತರ ಷಹಜಾದ ಉಸ್ಮಾನ ಮತ್ತು ಅಮೀರರ ಕಡೆಯಿಂದ ಈ ಸಂದೇಶ ನಮಗೆ

ಬಹಳ ಚೆನ್ನಾಗಿ ಗೊತ್ತಿರುವುದೇನೆಂದರೆ–ನಮ್ಮಂತಹ ವಜೀರ (ಮಂತ್ರಿ)ರಿಗೆ ನಿಮ್ಮಂತಹ ದೊಡ್ಡ ವ್ಯಕ್ತಿ ಮತ್ತಾರೂ ಸಿಗಲಾರರು. ತಾವು ತಮ್ಮ ಶ್ರೇಷ್ಠಮಟ್ಟದ ಸಲಹೆಗಳೊಂದಿಗೆ ಈ ಹುದ್ದೆಗೆ ತಲುಪುತ್ತೀರಿ. ಆದರೆ ನಮಗೆ ಈಗ ಆಶ್ಚರ್ಯವೆಂದರೆ ರಾಜ್ಯದ ಉತ್ತರಾಧಿಕಾರಿಯಾಗಿ ನೇಮಿಸಲು ಫಜ್ಲೈನನನ್ನು ಹೇಗೆ ಅನುಮೋದಿಸಿದ್ದಿರಿ ಎಂಬುದು ಅರ್ಥವಾಗುತ್ತಿಲ್ಲ. ಷಹಜಾದ ಉಸ್ಮಾನನು ತನ್ನ ಶೌರ್ಯಕ್ಕೆ ಜನಪ್ರಿಯತೆಗೆ ಉತ್ತಮ ಉದಾಹರಣೆಯಾಗಿರುತ್ತಾನೆ. ಈ ರಾಜ್ಯಕ್ಕೆ ಆತನೇ ನಿಜವಾದ ಹಕ್ಕುದಾರನಾಗಿದ್ದಾನೆಂದು ತಿಳಿಸಿದರು.

ಇಷ್ಟೇ ಅಲ್ಲದೆ ಉಸ್ಮಾನನು ಮಲಿಕ್ ಮಗೀಸನ ಅಳಿಯನೂ ಆಗಿರುತ್ತಾನೆ. ಮಲಿಕ್ ಮಗೀಸನು ತನ್ನ ಅಳಿಯನನ್ನು ಮಗನಂತೆ ಕಾಣುತ್ತಾನೆ. ಉಸ್ಮಾನನ ಅಸಭ್ಯ ವರ್ತನೆ ಏಕಾಯಿತೇಂದರೆ–ಆಗ ಸುಲ್ತಾನ್‌ರು ಅನಾರೋಗ್ಯ ಪೀಡಿತರಾಗಿದ್ದರು. ಇಲ್ಲದಿದ್ದರೆ ಇವೆಲ್ಲಾ ಘಟನೆಗಳು ಸಂಭವಿಸುತ್ತಿರಲಿಲ್ಲ. ಆದ್ದರಿಂದ ನಾವೆಲ್ಲಾ ಅಮೀರರ ಪ್ರಾರ್ಥನೆ ಏನೆಂದರೆ–ತಾವು ಷಹಜಾದ ಉಸ್ಮಾನನ ಪಕ್ಷದಲ್ಲಿ ಇರಬೇಕೆಂದು ಆತನ ತಲೆಯ ಮೇಲೆ ತಮ್ಮ ಕೃಪೆಯ ಆಶೀರ್ವಾದ ಹಸ್ತವನ್ನಿಡಬೇಕೆಂದು ವಿನಂತಿಸುತ್ತೇವೆ.

ಮಹಮೂದ್‌ಖಾನನ ಉತ್ತರ :

ಮಹಮೂದ್‌ಖಾನನು ಇಷ್ಟಪಡುತ್ತಿದ್ದುದೇನೆಂದರೆ ಉತ್ತರಾಧಿಕಾರದ ವಿಷಯದಲ್ಲಿ ಉಸ್ಮಾನನು ಹಸ್ತಕ್ಷೇಪ ಮಾಡುವುದು ಸರಿಯಲ್ಲವೆಂಬುದಾಗಿತ್ತು. ಈ ವಿಷಯಗಳಿಗೂ ನನಗೂ ಯಾವುದೇ ಸಂಬಂಧವಿಲ್ಲವೆಂದು ಉತ್ತರ ಕೊಡುತ್ತಾ ನಾನೊಬ್ಬ ಸಾಮಾನ್ಯ ಮನುಷ್ಯ. ನನ್ನ ಕೆಲಸವೆಂದರೆ ಹುಜೂರರ ಸೇವೆಯನ್ನು ಮಾಡುವುದಷ್ಟೇ. ಒಡೆಯನ ಕೆಲಸ ಅವರಿಗೆ ಗೊತ್ತಿದೆ. ಅಲ್ಲಾನು ಅವರನ್ನು ಬಹುದೊಡ್ಡ ಸ್ಥಾನದಲ್ಲಿ ಕುಳ್ಳಿರಿಸಿದ್ದಾನೆ. ನಾನು ಅಂತಹ ದೊಡ್ಡ ತೀರ್ಮಾನಗಳನ್ನು ತೆಗೆದುಕೊಳ್ಳುವಷ್ಟು ದೊಡ್ಡವನೆಂದು ನಾನು ತಿಳಿದಿಲ್ಲವೆಂದನು.

ಫಜ್ಲೈನನ ಅರಿವು :

ಇದಾದ ನಂತರ ಮಲಿಕ್ ಮುಬಾರಕ ಘಾಜಿಖಾನ್ ಮತ್ತು ಮಲಿಕ್‌ಖಾನ್‌ಜಲಾಲ್ ಅಲ್ಲಿಂದ ಹೊರಟರು. ಮಹಮೂದ್‌ಖಾನನು ಉಮ್ದತಲ್‌ಮುಲ್ಕನನ್ನು ಹೊರಕ್ಕೆ ಕರೆದನು. ನೀನು ಮರೆಯಲ್ಲಿ ಕುಳಿತು ಇಲ್ಲಿಯ ತನಕ ಏನನ್ನು ಕೇಳಿದೆಯೋ ಅದನ್ನು ಷಹಜಾದ ಫಜ್ಲೈನನಿಗೆ ತಿಳಿಸು ಎಂದನು. ಉಮ್ದತುಲ್ ಮುಲ್ಕನು ಫಜ್ಲೈನನ ಬಳಿಗೆ ಬಂದು ತಾನು ಕೇಳಿದುದನ್ನೆಲ್ಲಾ ತಿಳಿಸಿದನು.

ಷಹಜಾದ ಉಸ್ಮಾನನ ಬಿಡುಗಡೆಗೆ ಪ್ರಯತ್ನ :

ಈ ಸಮಾಚಾರವನ್ನು ಕೇಳಿದ ಫಜ್ಲೈನನು ಸಂತೋಷಪಟ್ಟನು.

ಮಹಮೂದ್‌ಖಾನನ ವಿಶ್ವಾಸಾರ್ಹತೆಯ ಬಗ್ಗೆ ನಂಬಿಕೆಯು ಬಂದಿತ್ತು. ಸುಲ್ತಾನ್ ಹೋಷಂಗನ ಕಾಯಿಲೆ ಹೆಚ್ಚುತ್ತಲೇ ಇತ್ತು. ಮಲಿಕ್‌ಉಸ್ಮಾನ್‌ಖಾನ್‌ಜಲಾಲನ ವಕೀಲನಾದ ಮುಜಫ್ಫರಖಾನನು ಷಹಜಾದ ಉಸ್ಮಾನನ ರಕ್ಷಕರಿಂದ ಏನಾದರೂ ಮಾಡಿ ಷಹಜಾದನನ್ನು ಬಂಧನದಿಂದ ಬಿಡುಗಡೆ ಮಾಡಿಸಲು ಪ್ರಯತ್ನಿಸುತ್ತಿದ್ದರು. ಈ ಉದ್ದೇಶವನ್ನು ಸಫಲಗೊಳಿಸಲು ಸೈನಿಕ ಬಿಡಾರದಿಂದ ಓಡಿ ಬಂದನು.

ರಕ್ಷಣೆಯ ಉಪಾಯಗಳು :

ಮಹಮೂದ್‌ಖಾನನಿಗೆ ಇದರ ಸಮಾಚಾರ ಸಿಕ್ಕಿತು. ಆತನು ತಕ್ಷಣ ಘಜ್ನೈನನಿಗೆ ಮುಜಫ್ಫರನು ಸೈನಿಕ ಬಿಡಾರದಿಂದ ಓಡಿರುವ ವಿಚಾರವನ್ನು ತಿಳಿಸಿದನು. ಇದರಿಂದ ಎಚ್ಚೆತ್ತ ಘಜ್ನೈನನು ರಕ್ಷಣೆಯ ಉಪಾಯಗಳನ್ನು ಬಿಗಿಗೊಳಿಸಿದನು. ಆತನು ಮಲಿಕ್ ಅಹಸನ್ ಮತ್ತು ಮಲಿಕ್ ಬಿರ್‌ಖುರ್‌ದಾರನಿಗೆ ಆಜ್ಞಾಪಿಸಿ, ಕುದುರೆ ಲಾಯದಿಂದ ಕುದುರೆಗಳನ್ನು ತರಲು ಹೇಳಿ ಕಳುಹಿಸಿದನು. ಆದರೆ ಮೀರ್‌ಆಖುರನು 'ಉಸ್ಮಾನನ ಪಕ್ಷದವನಾಗಿದ್ದುದರಿಂದ ಆತನು ಕುದುರೆಗಳನ್ನು ಕೊಡಲು ನಿರಾಕರಿಸಿದನು. ಹೇಳಿದ್ದೇನೆಂದರೆ–ಇನ್ನೂ ಬಾದಶಹರು ಜೀವಂತವಾಗಿದ್ದಾರೆ. ಅವರ ಅನುಮತಿ ಇಲ್ಲದೆ ನಾನು ಕುದುರೆಗಳನ್ನು ಯಾವ ಕಾರಣಕ್ಕೂ ಕೊಡಲಾರೆ ಎಂದನು.

ಷಹಜಾದ ಘಜ್ನೈನನ ದೂರು :

ಮೀರ್ ಆಖುರನು ಈ ಮಾತನ್ನು ಖ್ವಾಜಾಸರಾರವರಿಗೆ ತಿಳಿಸಿದನು. ಈ ಖ್ವಾಜಾಸರಾನೂ ಸಹ ಷಹಜಾದ ಉಸ್ಮಾನನ ಪಕ್ಷವನ್ನು ವಹಿಸಿದ್ದವನು. ಆತನು ಸಲಹೆ ಕೊಟ್ಟದ್ದೇನೆಂದರೆ–ನೀನು ಬಾದಶಹ ಹೋಷಂಗರ ಮಂಚದ ಪಕ್ಕಕ್ಕೆ ಹೋಗಿ ಜೋರಾಗಿ ಎಲ್ಲ ವಿಷಯವನ್ನು ಹೇಳು. ಎಲ್ಲವೂ ಬಾದಶಹರಿಗೆ ಗೊತ್ತಾಗಲಿ ಎಂದು ಹೇಳಿದನು. ಷಹಜಾದ ಘಜ್ನೈನನು ತಾವು ಜೀವಂತವಾಗಿ ಇರುವಾಗಲೇ ಎಲ್ಲ ವಿಚಾರಗಳಲ್ಲಿ ತನ್ನ ಅಧಿಕಾರವನ್ನು ನಡೆಸುತ್ತಿರುವೆಂದು ಕೂಗಿ–ಕೂಗಿ ಹೇಳು ಎಂದನು. ಮೀರ್‌ಆಖರನು ಅವರ ಸಲಹೆಯಂತೆಯೇ ಬಾದಶಹರ ಮಂಚದ ಪಕ್ಕಕ್ಕೆ ಹೋಗಿ ಅವರನ್ನು ಘಜ್ನೈನನ ವಿರುದ್ಧ ಪ್ರೇರೇಪಿಸಿದನು.

ಘಜ್ನೈನನು ಕಾಕರೂನಿಗೆ ಪರಾರಿ :

ಬಾದಶಹರ ಆರೋಗ್ಯದಲ್ಲಿ ಸ್ವಲ್ಪ ಸುಧಾರಣೆ ಕಂಡು ಬಂದಿತು. ತನ್ನ ಬತ್ತಳಿಕೆಯನ್ನು ತರಿಸಿಕೊಂಡನು. ನಂತರ ಎಲ್ಲ ಅಮೀರರನ್ನು ತನ್ನ ಬಳಿಗೆ ಕರೆಯಿಸಿಕೊಂಡನು. ಕೆಲವು ಅಮೀರರು ಅನುಮಾನದಿಂದಾಗಿ ಬಹುಶಃ ಬಾದಶಹರ ಅಂತ್ಯವಾಗಿರಬಹುದೆಂದುಕೊಂಡರು. ಹೀಗೆ ಹೆದರಿ ಅಮೀರರು ಬಾದಶಹನ ಹತ್ತಿರಕ್ಕೆ ಬರಲು ತಿರಸ್ಕರಿಸಿದರು. ಷಹಜಾದ ಘಜ್ನೈನನಿಗೆ ಈ ವಿಚಾರವು ತಿಳಿದು ಆತನು

ಹೆದರಿ ಸೈನಿಕ ಬಿಡಾರದಿಂದ ಮೂರು ಮೈಲಿ ದೂರದಲ್ಲಿರುವ ಕಾಕರೂನಿಗೆ ಓಡಿ ಹೋದನು.

ಫಜ್ಜೈನನ ಸಂದೇಶ ಮಹಮೂದ್‌ನಿಗೆ :

ಫಜ್ಜೈನನು ಉಮ್ದತುಲ್‌ಮುಲ್ಕನನ್ನು ಮಹಮೂದ್‌ಖಾನನ ಹತ್ತಿರ ಕಳುಹಿಸಿ "ಈಗ ಎಲ್ಲ ಅಮೀರರು ಷಹಜಾದ ಉಸ್ಮಾನನ್ನು ಬಾದಶಹನನ್ನಾಗಿ ಮಾಡಲು ಪ್ರಯತ್ನಿಸುತ್ತಿದ್ದಾರೆ. ನಿಮ್ಮನ್ನು ಬಿಟ್ಟರೆ ನನ್ನ ಸುತ್ತ ಈಗ ಯಾರೂ ಕಂಡುಬರುತ್ತಿಲ್ಲ. ನಿಮಗೂ ಗೊತ್ತಿರುವಂತೆ ಬಾದಶಹರು ಬತ್ತಳಿಕೆಯನ್ನು ತರಿಸಿಕೊಂಡಿದ್ದರು. ನಾನು ಆ ಹೆದರಿಕೆಯಿಂದ ಅಂದರೆ ಬಾದಶಹರು ನನ್ನನ್ನು ಸೆರೆ ಹಿಡಿಸಿ ಇತರೆ ಷಹಜಾದರ ಜೊತೆಯಲ್ಲಿ ಬಂಧನದಲ್ಲಿಡಬಹುದೆಂದು ಹೆದರಿ ನಾನು ಈಗ ಕಾಕರೂನಿಗೆ ಬಂದು ಬಿಟ್ಟಿದ್ದೇನೆಂದು ತಿಳಿಸಿದನು.

ಮಹಮೂದ್‌ನ ಉತ್ತರ :

ನೀನು ಖಂಡಿತವಾಗಿಯೂ ಸುಲ್ತಾನ್ ಹೋಷಂಗರ ವಿರುದ್ಧ ಯಾವುದೇ ತಪ್ಪನ್ನು ಮಾಡಿಲ್ಲ. ಯಾರೋ ಕೆಲವರು ನಿನ್ನ ವಿರುದ್ಧ ಸ್ವಲ್ಪ ದೂರುಗಳನ್ನು ಹೇಳಿರಬಹುದು. ನಾನು ಬಾದಶಹರನ್ನು ಸ್ವತಃ ಕಂಡು ಎಲ್ಲ ವಿಚಾರಗಳನ್ನು ತಿಳಿಸಿ ಸರಿಪಡಿಸುತ್ತೇನೆ. ಹಾಗೂ ಐವತ್ತು ಕುದುರೆಗಳ ವಿಷಯದ ವಾಸ್ತವಿಕತೆಯನ್ನೂ ಅವರಿಗೆ ಮನವರಿಕೆ ಮಾಡಿಸುತ್ತೇನೆ ಎಂದು ಉತ್ತರವನ್ನು ಕಳುಹಿಸಿದನು.

ಇದನ್ನು ಕೇಳಿದ ಫಜ್ಜೈನನು ಮತ್ತೊಮ್ಮೆ ಉಮ್ದತುಲ್‌ಮುಲ್ಕನನ್ನು ಮಹಮೂದ್‌ಖಾನನ ಹತ್ತಿರ ಕಳುಹಿಸಿ ನೀನು ನನ್ನ ಬಗ್ಗೆ ಒಳ್ಳೆಯ ಮನಸ್ಸನ್ನು ಹೊಂದಿದ್ದರೂ, ಖ್ವಾಜಾಸರಾರನು ಬಾದಶಹರ ಹತ್ತಿರ ನನ್ನ ವಿಚಾರದಲ್ಲಿ ಸುಳ್ಳು ದೂರುಗಳನ್ನು ಕೊಡುತ್ತಿರುವುದಕ್ಕೆ ಏನು ಮಾಡುವುದು? ನನಗೆ ತುಂಬಾ ಹೆದರಿಕೆಯಾಗಿದೆ ಎಂದು ಹೇಳಿಸಿದ್ದಕ್ಕೆ ಮಹಮೂದ್‌ಖಾನನ ಉತ್ತರ – ನೀವು ನಿಶ್ಚಿಂತರಾಗಿ ಇರಬೇಕು. ತಕ್ಷಣ ಸೈನಿಕ ಬಿಡಾರಕ್ಕೆ ಬಂದು ಸೇರಬೇಕು. ನಾನು ಎಲ್ಲ ಸಮಸ್ಯೆಗಳನ್ನು ನಿರ್ವಹಿಸಿಕೊಳ್ಳುತ್ತೇನೆಂದನು.

ಮಹಮೂದ್‌ಖಾನನ ಪತ್ರ ಮಗೀಸ್‌ಖಾನನಿಗೆ :

ಉಮ್ದತುಲ್ ಮುಲ್ಕನ ಎದುರಿನಲ್ಲಿಯೇ ಮಹಮೂದ್‌ಖಾನನು ಮಲಿಕ್ ಮಗೀಸನ ಹೆಸರಿನಲ್ಲಿ ಎಲ್ಲ ವಿಚಾರಗಳನ್ನೊಳಗೊಂಡ ಒಂದು ಪತ್ರವನ್ನು ಬರೆದು ಬಾದಶಹರು ಫಜ್ಜೈನ್‌ಖಾನನನ್ನು ಉತ್ತರಾಧಿಕಾರಿಯೆಂದು ಘೋಷಿಸಿರುತ್ತಾರೆ. ಈಗ ಬಾದಶಹರ ಸ್ಥಿತಿ ತುಂಬಾ ಕೆಟ್ಟಿದೆ. ಜೀವ ಮಾನದ ಆಸೆ ಪೂರ್ಣವಾಗಿ ಮುಗಿದಿರುವಂತೆ ಕಂಡುಬರುತ್ತಿದೆ. ಆದ್ದರಿಂದ ತಾವು ಷಹಜಾದ ಉಸ್ಮಾನನ ಮೇಲೆ ತೀಕ್ಷಣವಾದ

ನಿಗಾ ಇಟ್ಟಿರಬೇಕು. ಎಂದು ಪತ್ರದಲ್ಲಿ ಬರೆದಿದ್ದನ್ನು ಉಮ್ದತುಲ್‌ಮುಲ್ಕನು ಘಜ್ನೈನನಿಗೆ ತಿಳಿಸಿದನು. ಷಹಜಾದನಿಗೆ ಸಂತೋಷವಾಯಿತು. ಅದೇ ಕ್ಷಣದಲ್ಲಿ ಸೈನಿಕ ಬಿಡಾರಕ್ಕೆ ವಾಪಸ್ ಬಂದು ಬಿಟ್ಟನು.

ಉಸ್ಮಾನನ ಪಕ್ಷದವರ ಪಿತೂರಿ :

ಖ್ವಾಜಾಸರಾಗಳೂ, ಖಾನ್‌ಜಹಾಂ ಖಾನ್, ಆರಿಜುಲ್‌ಮುಲ್ಕ್ ಇವರೆಲ್ಲರೂ ಷಹಜಾದ ಉಸ್ಮಾನನ ಪಕ್ಷಪಾತಿಗಳಾಗಿದ್ದರು. ಬಾದಶಹರ ಜೀವನದ ಅಂತ್ಯ ಸಮೀಪಿಸಿರುವುದನ್ನು ಕಂಡು ತಮ್ಮ ತಮ್ಮಲ್ಲಿ ಮಾತನಾಡಿಕೊಂಡದ್ದೇನೆಂದರೆ - ನಾಳೆಯೇ ಬೆಳಿಗ್ಗೆ ಮಹಮೂದ್‌ಖಾನನಿಗೆ ತಿಳಿಸದಂತೆ ಸುಲ್ತಾನ್ ಹೋಷಂಗರನ್ನು ಪಾಲ್ಕಿಯಲ್ಲಿ ಕೂರಿಸಿಕೊಂಡು ಬೇಗ ಮಾಂಡುವಿನ ಶಾದಿಆಬಾದಗೆ ಕರೆದುಕೊಂಡು ಹೋಗತಕ್ಕದೆಂದು ತೀರ್ಮಾನಿಸಿದರು. ಏಕೆಂದರೆ ಉಸ್ಮಾನನಿಗೆ ಬಂಧನದಿಂದ ಹೊರತಂದು ಸಿಂಹಾಸನದಲ್ಲಿ ಕೂರಿಸಬಹುದು.

ಹೋಷಂಗನ ಮರಣ :

ಮಾರನೆ ದಿನ ಉಸ್ಮಾನನ ಪಕ್ಷಪಾತಿಗಳು ನಿನ್ನೆಯ ತೀರ್ಮಾನದಂತೆ ಮಹಮೂದ್‌ನಿಗೂ ತಿಳಿಸದಂತೆ ಬಾದಶಹರನ್ನು ಪಾಲ್ಕಿಯಲ್ಲಿ ಕೂರಿಸಿಕೊಂಡು ಹೊರಟರು. ಸುಲ್ತಾನ್‌ರು ಇನ್ನೂ ಸ್ವಲ್ಪ ದೂರವೂ ಹೋಗಿರಲಿಲ್ಲ. ಅವನು ಪ್ರಾಣತ್ಯಾಗವನ್ನು ಮಾಡಿದನು.

ಮಹಮೂದ್‌ನಿಗೆ ಸುದ್ದಿ :

ಮಹಮೂದ್‌ಖಾನನಿಗೆ ಹೇಗೋ ಇದರ ಸುದ್ದಿ ತಿಳಿಯಿತು. ಆತನು ತನ್ನ ಕೆಲ ನೌಕರರರನ್ನು ಜೊತೆಯಲ್ಲಿ ಕರೆದುಕೊಂಡು ಹೊರಟನು. ಖ್ವಾಜಾಸರಾಗಳನ್ನೂ, ಅಮೀರರನ್ನು ತಡೆದು ಬಾದಶಹರ ಪಲ್ಲಕ್ಕಿಯನ್ನು ತಡೆಯಬಹುದೆಂದು ಓಡಿ ಬಂದನು. ಷಹಜಾದ ಘಜ್ನೈನನೂ ಮತ್ತು ಮಹಮೂದ್‌ಖಾನರು ಸ್ವತಃ ಆ ಜಾಗಕ್ಕೆ ತಲುಪಿ, ಅವರು ಖ್ವಾಜಾಸರಾಗಳನ್ನು ಚೆನ್ನಾಗಿ ಬಯ್ದರು.

ಖ್ವಾಜಾಸರಾಗಳು ಇದಕ್ಕುತ್ತರವಾಗಿ ಬಾದಶಹರು ಇನ್ನೂ ಜೀವಂತವಾಗಿದ್ದಾಗಲೇ ಮಾಂಡುವಿನ ಶಾದಿಆಬಾದಿಗೆ ಹೋಗುವ ಇಚ್ಛೆಯನ್ನು ವ್ಯಕ್ತಪಡಿಸಿದ್ದರು. ತಡ ಮಾಡದೇ ನನ್ನನ್ನು ಅಲ್ಲಿಗೆ ಕರೆದೊಯ್ಯಬೇಕೆಂದು ಆಜ್ಞಾಪಿಸಿದ್ದುದರಿಂದ, ನಾವು ಅವರ ಆಜ್ಞೆಯನ್ನು ಪಾಲಿಸಿದೆವು ಎಂದು ಉತ್ತರಿಸಿದರು. ಈ ಮಾತನ್ನು ಕೇಳಿದ ಮಹಮೂದ್‌ನು, ಘಜ್ನೈನನೂ ಸುಮ್ಮನಾದರು.

ಮಹಮೂದ್‌ಖಾನನ ಘೋಷಣೆ :

ಇದಾದ ನಂತರ ಮಹಮೂದ್‌ಖಾನನು ಬಾದಶಹರ ಅಂತ್ಯಕ್ರಿಯೆಯ ಬಗ್ಗೆ ಎಲ್ಲ ವ್ಯವಸ್ಥೆಗಳ ಬಗ್ಗೆ ಅಲ್ಲಿಯೇ ತೀರ್ಮಾನಿಸಿದನು. ಇತರೆ ಕೆಲವು ಅಮೀರರು ಈ ವ್ಯವಸ್ಥೆಯಿಂದ ದೂರ ಸರಿದರು. ಅಂತ್ಯಕ್ರಿಯೆಯಿಂದ ಸಂತುಷ್ಟನಾದ ಮಹಮೂದ್‌ನು ಬಹಳ ಗಟ್ಟಿಯಾದ ಧ್ವನಿಯಲ್ಲಿ ಹೇಳಿದನು. ಅಲ್ಲಾನ ಆಜ್ಞಾನುಸಾರ ಬಾದಶಹ ಹೋಷಂಗರು ಮೃತಪಟ್ಟಿರುತ್ತಾರೆ. ಬಾದಶಹರು ತಾವು ಜೀವಿಸಿದ್ದಾಗಲೇ ಷಹಜಾದ ಘಜ್ನೈನ್‌ನಿಗೆ, ತಮ್ಮ ಉತ್ತರಾಧಿಕಾರಿಯೆಂದು ನಿಶ್ಚಯಿಸಿದ್ದರು. ಆದ್ದರಿಂದ ಯಾರು ಘಜ್ನೈನನನ್ನು ಸುಲ್ತಾನ್‌ನೆಂದು ತಿಳಿದು ಆತನ ಕೈಯಲ್ಲಿ ಕೈಯಿಟ್ಟು ಪ್ರಮಾಣವಚನವನ್ನು ತೆಗೆದುಕೊಳ್ಳ ಬಯಸುವರೋ ಅವರು ಇಲ್ಲಿ ಬರಬಹುದು. ಇಲ್ಲವೇ ಆತನನ್ನು ವಿರೋಧಿಸುವವರು ಸೈನ್ಯದಿಂದ ಬೇರ್ಪಡಬಹುದಾಗಿದೆ ಎಂದು ಘೋಷಿಸಿದನು.

ಅಮೀರರ ಪ್ರಮಾಣ ವಚನ :

ಎಲ್ಲರಿಗಿಂತ ಮೊದಲು ಸ್ವತಃ ಮಹಮೂದ್‌ಖಾನನು ಷಹಜಾದ ಘಜ್ನೈನನ ಅಧೀನತೆಯನ್ನು ಒಪ್ಪಿ ಪ್ರಮಾಣವಚನವನ್ನು ಸ್ವೀಕರಿಸಿದನು. ಆತನ ಕೈಗಳಿಗೆ ಮುತ್ತಿಟ್ಟನು. ಇದಾದ ನಂತರ ಬಾರಿ–ಬಾರಿಯಾಗಿ ಬೇರೆ–ಬೇರೆ ಅಮೀರರು ಷಹಜಾದನ ಹತ್ತಿರ ಬಂದು ಆತನ ಕಾಲಿಗೆರಗಿದರು. ಅಮೀರರೆಲ್ಲರೂ ಕಾಲಿಗೆ ನಮಸ್ಕಾರ ಮಾಡುತ್ತಾ, ಪ್ರಮಾಣವಚನವನ್ನು ಸ್ವೀಕರಿಸುತ್ತಿರುವಾಗ, ಬಹಳವಾಗಿ ಅಳುತ್ತಿದ್ದರು. ಅಮೀರರ ಪ್ರಮಾಣವಚನದಿಂದಾಗಿ ಘಜ್ನೈನನಿಗೆ ಒಂದು ರೀತಿಯ ಧೈರ್ಯ, ಸಾಹಸಗಳು ಹೆಚ್ಚಾದವು. ಆತನಿಗೆ ರಾಜ್ಯದ ಹಕ್ಕು ಸ್ಥಿರವಾದಂತೆ ತೋರಿತು. ಇದಾದ ನಂತರ ಹೋಷಂಗನ ಶವವನ್ನು ಮಾಂಡುವಿನ ಶಾದಿಆಬಾದಿಗೆ ತರಲಾಯಿತು. ಆ ತಿಂಗಳು ಜಿಲ್‌ಹಜ್ಜವಾಗಿತ್ತು. ಅಂದು ದಫನ್ ಮಾಡಲಾಯಿತು.

ಸುಲ್ತಾನ್ ಹೋಷಂಗನನ್ನು ದಫನ್ ಮಾಡಿದ ನಂತರ ಶಾಹ ಅರಮನೆಯಲ್ಲಿ ಒಂದು ಸಭೆಯನ್ನು ಏರ್ಪಡಿಸಲಾಯಿತು. ಅದರಲ್ಲಿ ಎಲ್ಲ ಅಮೀರರೂ, ಮಲಿಕ್ ಮಗೀಸನೂ, ಖಾನ್ ಜಹಾಂಖಾನ್ ಮುಂತಾದವರು ಘಜ್ನೈನನ ಅಧೀನತೆಯನ್ನು ಸ್ವೀಕರಿಸಿ ಪ್ರಮಾಣವನ್ನು ಮಾಡಿದರು.

ಸುಲ್ತಾನ್ ಹೋಷಂಗನ ಚಮತ್ಕಾರ ಮತ್ತು ಕಾರ್ಯಕಾಲ :

ಸುಲ್ತಾನ್ ಹೋಷಂಗನು (೩೦) ಮೂವತ್ತು ವರ್ಷಗಳ ಕಾಲ ಆಡಳಿತವನ್ನು ನಡೆಸಿದನು. ಬಾದಶಹನನ್ನು ಮಾಂಡುವಿನಲ್ಲಿ ಒಂದು ನೀರು ಹನಿಯುವ ಪೆಟ್ಟಿಗೆಯಲ್ಲಿ ಶವವನ್ನಿಟ್ಟು ದಫನ್ ಮಾಡಲಾಯಿತು. ಆ ಗೋರಿಯನ್ನು ಸುಣ್ಣದ ಗಾರೆ–ಗಚ್ಚು

ಮತ್ತು ಕಲ್ಲುಗಳಿಂದ ಕಟ್ಟಲಾಗಿದೆ. ಆ ಪೆಟ್ಟಿಗೆಯಲ್ಲಿ ಯಾವಾಗಲೂ ಹನಿ-ಹನಿಯಾಗಿ ಪ್ರತಿಕ್ಷಣದಲ್ಲೂ ನೀರು ತೊಟ್ಟಿಕ್ಕುತ್ತಿರುತ್ತದೆ. ರಾಖಿಮುಲ್‌ಹುರೂಪಿನ ಲೇಖಕ ಫರಿಶ್ತಾ ಎಂಬುವನು ಈ ನೀರು ತೊಟ್ಟಿಕ್ಕುತ್ತಿರುವ ಪೆಟ್ಟಿಗೆ (ಡಬ್ಬ)ವನ್ನು ಸ್ವತಃ ನೋಡಿದ್ದನೆಂದು ತಿಳಿದು ಬರುತ್ತದೆ. ಇವುಗಳಲ್ಲಿ ರಂಧ್ರಗಳಿವೆಯೆಂದೂ, ಗಾಳಿಯೂ ಈ ರಂಧ್ರಗಳಲ್ಲಿ ಪ್ರವೇಶಿಸಿ, ನೀರಾಗಿ ತೊಟ್ಟಿಕ್ಕುತ್ತದೆಂದು ಹೇಳುತ್ತಾರೆ. ಆದರೆ ಹಿಂದೂಸ್ತಾನಿಯರ ನಂಬಿಕೆ ಏನೆಂದರೆ ಇದು ಸುಲ್ತಾನ್ ಹೋಷಂಗನ ಒಂದು ಅತೌಕಿಕ ಚಮತ್ಕಾರವೆಂದು ನಂಬಿದ್ದಾರೆ.

■

*

೩. ಸುಲ್ತಾನ್ ಘಜ್ನೈನ್ ಅಲ್‌ಮುಖಾತಿಬ್ ಮಹಮ್ಮದ್‌ಶಾಹ್ ಬಿನ್ ಸುಲ್ತಾನ್ ಹೋಷಂಗ್‌ಘೋರಿ

ಸಿಂಹಾಸನಾರೋಹಣ :

ಸುಲ್ತಾನ್ ಹೋಷಂಗ ಘೋರಿಯ ಮರಣಾನಂತರ ಈತನ ಹಿರಿಯ ಮಗ ಘಜ್ನೈನ್‌ಖಾನನು ಹಿಜರಿ ೮೨೮ರಲ್ಲಿ ಮಲಿಕ್ ಮಲಿಕಲ್‌ಖಾತಿಬ್ ಮಲಿಕ್ ಶರ್ಫ್ ಮತ್ತು ಎಹ್‌ತೆಮಾಮುಲ್‌ಮುಲ್ಕ ಅಲ್‌ಖಾತಿಬ್-ಬ-ಮಹಮೂದ್‌ಖಾನರ ಪ್ರಯತ್ನಗಳಿಂದಾಗಿ ಸಿಂಹಾಸನವನ್ನೇರಿದನು. ಪಟ್ಟಾಭಿಷೇಕದ ನಂತರ "ಸುಲ್ತಾನ್ ಮಹಮ್ಮದ್‌ಶಾಹ"ನೆಂಬ ಬಿರುದಿನೊಂದಿಗೆ ಹೆಸರು ವಾಸಿಯಾದನು. ಎಲ್ಲ ಅಮೀರರು ರಾಜ್ಯದ ಎಲ್ಲ ಶಾಸಕರೂ ಹೊಸ ಬಾದಶಹನ ಹತ್ತಿರ ಬಂದು ಅಧೀನತೆಯ ಪ್ರಮಾಣವಚನವನ್ನು ಮಾಡಿದರು. ಅವರವರು ಈಗ ಎಲ್ಲೆಲ್ಲಿ ಶಾಸನವನ್ನು ಮಾಡುತ್ತಿರುವರೋ ಅಲ್ಲಿಯೇ ಖಾಯಂ ಆಗಿರುವಂತೆ ಬಾದಶಹನು ಆಜ್ಞಾಪಿಸಿದನು. ಯಾರ ಬದಲಾವಣೆಯೂ ಇರಲಿಲ್ಲ.

ಮಗೀಸ್ ಮತ್ತು ಮಹಮೂದ್‌ರ ಸನ್ಮಾನ :

ಮಲಿಕ್ ಮಗೀಸ್ ಮತ್ತು ಮಹಮೂದ್‌ರ ಪ್ರಾಮಾಣಿಕ ಸೇವೆಯಿಂದಾಗಿ ರಾಜ್ಯದ ಜೀವದಲ್ಲಿ ಒಂದು ಹೊಸ ಚೇತನವು ಪ್ರವಹಿಸುವಂತಾಯಿತು. ಪ್ರಜೆಗಳು ತಮ್ಮ ಹೊಸ ಬಾದಶಹನನ್ನು ಮನಸ್ಪೂರ್ವಕವಾಗಿ ಸ್ವೀಕರಿಸುತ್ತಿದ್ದರು. ಬಾದಶಹನು ಮಲಿಕ್ ಮಗೀಸನನ್ನು ಉನ್ನತ ಹುದ್ದೆಗೇರಿಸಿದನು. ಅವನನ್ನು "ಮಸ್ನದ್-ಎ-ಆಲಾ" ಎಂಬ ಬಿರುದನ್ನು ನೀಡಿ ಗೌರವಿಸಿದನು. ಮಗೀಸನ ಮಗ ಮಹಮೂದ್‌ಖಾನನನ್ನು "ಅಮೀರುಲ್-ಆಲಾ" ಎಂಬ ಬಿರುದಿನಿಂದ ಗೌರವಿಸಿದನು.

ಸಹೋದರರ ಕೊಲೆ :

ಪಟ್ಟಕ್ಕೇರಿದ ಕೆಲವೇ ದಿನಗಳ ನಂತರ ತನ್ನ ಸಹೋದರರನ್ನು ಹಿಂಸಿಸತೊಡಗಿದನು. ಕೊನೆಗೊಂದು ದಿನ ಅವರನ್ನು ಕೊಲೆಗೈದನು. ಇದೂ ಅಲ್ಲದೆ ತನ್ನ ತಮ್ಮನ ಮಗನ ಹಾಗೂ ಅಳಿಯ ನಿಜಾಂಖಾನ್ ಮತ್ತು ಆತನ ಮೂರು ಮಕ್ಕಳ ಕಣ್ಣುಗಳಿಗೆ ಕಾದ ಸಲಾಕೆಗಳನ್ನು ಚುಚ್ಚಿಸಿದನು. ಈ ಹಿಂಸೆಯನ್ನು ಕಂಡ ಜನರು ಈತನ ವಿರೋಧಿಗಳಾದರು.

ರಾಜ್ಯದಲ್ಲಿ ಪಿತೂರಿ ಮತ್ತು ಜಗಳಗಳು :

ಸಹೋದರರ ಈ ಕೊಲೆ ಸುಲ್ತಾನ್ ಫಜ್ಸೈನನಿಗೆ ಶಾಪವಾಗಿ ಪರಿಣಮಿಸಿತು. ಈ ರಕ್ತಪಾತವಾಗಿ ಇನ್ನೂ ಕೆಲವು ದಿನಗಳು ಕಳೆದಿದ್ದುವು. ಇಡೀ ರಾಜ್ಯದಲ್ಲಿ ಪಿತೂರಿಗಳು, ಗಲಭೆಗಳು, ಜಗಳಗಳು ಭುಗಿಲೆದ್ದವು. ಹೊರ ರಾಜ್ಯದ ನಾದೂನಿಯ ರಾಜಪೂತರು ಸಮಯವನ್ನು ನೋಡಿ ವಿದ್ರೋಹವನ್ನೆಬ್ಬಿಸಿದರು. ರಾಜ್ಯದ ಒಂದು ಭಾಗದ ಮೇಲೆ ಸೈನಿಕ ಕಾರ್ಯಾಚರಣೆಯನ್ನೂ ನಡೆಸಿದರು. ಬಾದಶಹನಿಗೆ ಈ ಸುದ್ದಿಯು ತಿಳಿದು, ಆತನು ಖಾನಜಹಾನನಿಗೆ ಹತ್ತು ಆನೆ ಹಾಗೂ ಒಂದು ಖಿಲ್ಲತ್ತನ್ನು ಕೊಟ್ಟು ಹದಿನೈದು ರಬೀವುಲ್ ಅವ್ವಲ್ ಹಿಜರಿ ೮೩೮ರಲ್ಲಿ ವಿದ್ರೋಹಿಗಳನ್ನಡಗಿಸಲು ಕಳುಹಿಸಿದನು.

ಫಜ್ಸೈನ್‌ನ ಶರಾಬು ಸೇವನೆ :

ಮಹಮ್ಮದ್‌ಶಾಹನು ಅಸಭ್ಯ ವರ್ತನೆಗಳನ್ನು ತೋರಲಾರಂಭಿಸಿದನು. ರಾಜ್ಯದ ವ್ಯವಸ್ಥೆಗಳಿಂದ ಸಂಪೂರ್ಣವಾಗಿ ದೂರವಾಗಿದ್ದ. ತಾನೂ ಯಾವಾಗಲೂ ಮದ್ಯಪಾನದಲ್ಲಿ ಮುಳುಗಿ ಭೋಗವಿಲಾಸದಲ್ಲಿ ತೊಡಗಿದ್ದ. ಈ ಸಂಬಂಧದಲ್ಲಿ ಆತನು ತನ್ನನ್ನು ಈ ಜಗತ್ತಿನಿಂದಲೇ ಕೊನೆಗೊಳಿಸಿಕೊಳ್ಳುವ ಇಚ್ಛೆಯನ್ನು ವ್ಯಕ್ತಪಡಿಸಿಕೊಳ್ಳುತ್ತಿದ್ದನು. ಕೊನೆಗೆ ಎಷ್ಟೊಂದು ಮದ್ಯವ್ಯಸನಿಯಾದನೆಂದರೆ–ಆತನಿಗೆ, ಮದ್ಯದ ಶೀಶೆ, ಮದ್ಯ, ಮದ್ಯವನ್ನು ಸುರಿದುಕೊಡುವ ಮಹಿಳೆಯನ್ನು ಬಿಟ್ರೆ ಬೇರೇನೂ ಕಾಣಿಸುತ್ತಿರಲಿಲ್ಲ.

ಮಹಮೂದ್‌ಖಾನನ ಶಾಸನ :

ಮಹಮೂದ್‌ಖಾನನ ಸೇವಕರು. ಶಾಸನದ ವ್ಯವಸ್ಥೆಯಲ್ಲಿ ಉತ್ತಮ ದರ್ಜೆಯ ಕೆಲಸಗಳನ್ನು ರೂಢಿಸಿಕೊಂಡಿದ್ದರು. ಅವರು ಜಾಗೀರಿಗಳು ಬಹಳ ಉನ್ನತ ಮಟ್ಟದಲ್ಲಿ ಪ್ರಗತಿ ಹೊಂದಿದ್ದುವು. ಅವರ ಎಲ್ಲ ಅಮೀರರೂ ಮತ್ತು ಹಿರಿಯರೂ ಮಹಮೂದ್‌ಖಾನನಿಗೆ ಸರಿಗಟ್ಟುವಲ್ಲಿ ಸಮರ್ಥರಾಗಿದ್ದರು. ಖಾನಜಹಾನ

ವಿದ್ರೋಹಿಗಳನ್ನು ಅಡಗಿಸಲು ಹೋಗಿದ್ದರು. ಮತ್ತು ರಾಜಧಾನಿಯಲ್ಲಿ ಮಹಮೂದ್‌ಖಾನನಿಗಿಂತ ದಕ್ಷ, ಶಾಸಕ ಅಲ್ಲಿ ಮತ್ತಾರೂ ಇರಲಿಲ್ಲ.

ಮಹಮೂದ್‌ಖಾನನ ದೂರು ಬಾದಶಹನಿಗೆ :

ರಾಜಧಾನಿಯಲ್ಲಿ ಒಂದು ಗುಂಪು ಹೇಗಿತ್ತೆಂದರೆ ಬಾದಶಹನೊಂದಿಗೆ ಅತಿ ಸಮೀಪದ ಸಂಬಂಧವನ್ನು ಇಟ್ಟುಕೊಂಡಿತ್ತು. ಈ ಗುಂಪಿನ ಜನರು ಘೋರಿ ವಂಶಸ್ಥರನ್ನು ಬಹಳ ಗೌರವದಿಂದ ಕಾಣುವಂತವರಾಗಿದ್ದರು. ಆ ಜನರು ಮಹಮೂದ್‌ಖಾನನ ಶಾಸನವನ್ನು ಶಂಕಾಸ್ಪದವಾಗಿ ಕಾಣುತ್ತಿದ್ದರು. ಇದರಿಂದಾಗಿ ಅವರು ಯೋಚಿಸುತ್ತಿದ್ದುದೇನೆಂದರೆ-ಘಜ್ನೈನ್‌ಖಾನನನ್ನು ಸಿಂಹಾಸನದಿಂದ ಪದಚ್ಯುತಿಗೊಳಿಸಿ ತಾವು ಬಾದಶಹನ ಪಟ್ಟಕ್ಕೆ ಕೂರಬೇಕೆಂಬ ಹುನ್ನಾರವನ್ನು ಮಾಡುತ್ತಿದ್ದರು. ಆ ಜನರು ಶಾಹಿ ಅಂತಃಪುರದ ಮೂಲಕ ಈ ಸುದ್ದಿಯನ್ನು ಕಳುಹಿಸಿದ್ದುದೇನೆಂದರೆ- "ತಮ್ಮ ಪ್ರಭಾವ ಪೂರ್ಣ ಶಾಸನದ ಕಾರಣದಿಂದಾಗಿ ಮಹಮೂದ್‌ಖಾನನು ಬಹಳ ಅಹಂಕಾರಿಯಾಗಿಬಿಟ್ಟಿದ್ದಾನೆ. ಈಗ ತಮ್ಮನ್ನು ಪದಚ್ಯುತಿಗೊಳಿಸಿ ತಾನು ಬಾದಶಹನಾಗುವ ಸ್ವಪ್ನವನ್ನು ಕಾಣುತ್ತಿದ್ದಾನೆ".

ಮಹಮೂದ್‌ನ ಕೊಲೆಯ ಪ್ರಯತ್ನ :

ಬಾದಶಹನು ಈ ಸುದ್ದಿಯನ್ನು ತಿಳಿದ ಕೂಡಲೆ ತನ್ನ ಆಪ್ತರೊಂದಿಗೆ ಸಮಾಲೋಚಿಸಿದನು ಮತ್ತು ಮಹಮೂದ್‌ಖಾನನು ಮೊದಲು ಏನಾದರೂ ಕ್ರಮವನ್ನು ತೆಗೆದುಕೊಳ್ಳುವುದಕ್ಕಿಂತ ಮುಂಚೆಯೇ ಆತನನ್ನು ಕೊಲೆ ಮಾಡಬೇಕೆಂದು ತೀರ್ಮಾನಿಸಿಕೊಂಡನು. ಮಹಮುದ್‌ಖಾನನಿಗೂ ಹೇಗೋ ಬಾದಶಹನು ತೆಗೆದುಕೊಂಡಿರುವ ತೀರ್ಮಾನದ ಸುದ್ದಿ ತಿಳಿಯಿತು. ಆಗ ಆತನು ಹೀಗೆ ಹೇಳಿದ- ಅಲ್ಲಾನ ಕೃಪೆಯಿಂದ ನಾನು ರಾಜ ದ್ರೋಹವನ್ನು ಬಗೆದಿಲ್ಲ.

ಬಾದಶಹನ ಚಿಂತೆ :

ಇದಾದ ನಂತರ ಮಹಮೂದ್‌ಖಾನನು ಬಹಳ ಎಚ್ಚರಿಕೆಯಿಂದಿರಲಾರಂಭಿಸಿದನು. ಸೈನ್ಯವನ್ನು ಸಂಗ್ರಹಿಸಲಾರಂಭಿಸಿದನು. ಮಹಮೂದ್‌ನು ಗುಪ್ತಚರರ ಇಲಾಖೆಯನ್ನು ಬಹಳ ಜಾಗೃತಗೊಳಿಸಿಕೊಂಡನು. ಬಹಿರಂಗದಲ್ಲಿ ಬಾದಶಹನ ಹತ್ತಿರದಿಂದ ಆದಾನ-ಪ್ರದಾನಗಳನ್ನು ಇಟ್ಟುಕೊಂಡಿದ್ದನು. ಆತನು ಬಾದಶಹನಲ್ಲಿಗೆ ಎಂದಾದರೂ ಹೋಗುವಂತಹ ಸಂದರ್ಭ ಬಂದರೆ ಬಹಳ ಎಚ್ಚರಿಕೆಯಿಂದ ಇರುತ್ತಿದ್ದನು. ಬಾದಶಹನು ಇದರಿಂದಾಗಿ ಇನ್ನೂ ಹೆಚ್ಚು ಚಿಂತೆಯಲ್ಲಿ ಮುಳುಗಿದನು.

ಬಾದಶಹ ಮತ್ತು ಮಹಮೂದ್‌ನ ಮಾತುಕತೆ :

ಬಾದಶಹನು ಮಹಮೂದ್‌ಖಾನನಿಂದ ಬಹಳ ಬೆದರಿದ್ದನು. ಒಂದು ದಿನ

ಬಾದಶಹನ ಬೆದರಿಕೆ ಎಲ್ಲಿಯವರೆಗೆ ಮುಟ್ಟಿತ್ತೆಂದರೆ–ಆತನು ಮಹಮೂದ್‌ನ ಕೈ ಹಿಡಿದುಕೊಂಡು ಅಂತಃಪುರದೊಳಗೆ ಕರೆದುಕೊಂಡು ಹೋಗಿ ಅಲ್ಲಿ ತನ್ನ ಪತ್ನಿಯಾದ ಮಹಮ್ಮದಿ ಬೇಗಂಳನ್ನು ಕರೆದನು. ಆಕೆ ಮಹಮೂದ್‌ನ ತಂಗಿಯಾಗಿದ್ದಳು. ಆಗ ಹೀಗೆ ಹೇಳಿದನು. "ನಾನು ನಿನ್ನ ಮುಂದೆ ಮಹಮೂದ್‌ನಿಗೆ ಹೇಳುವುದೇನೆಂದರೆ–ಈತನು ನನ್ನಲ್ಲಿ ಏನಾದರೂ ತಪ್ಪುಗಳನ್ನು ಕಂಡಿದ್ದರೆ, ಕ್ಷಮಿಸಿ ಬಿಡು ಎಂದು ನನಗೆ ಯಾವ ಪ್ರಾಣದ ನಷ್ಟವನ್ನುಂಟು ಮಾಡಬಾರದೆಂದು. ನಾನು ಸಾಮ್ರಾಜ್ಯದ ಎಲ್ಲ ಆಡಳಿತದ ಜವಾಬ್ದಾರಿಯನ್ನು ಯಾವುದೇ ಜಗಳ ಯುದ್ಧವೂ ಇಲ್ಲದೆ ಈತನ ಸುಪರ್ದಿಗೆ ವಹಿಸಿಕೊಟ್ಟು ಬಿಡುತ್ತೇನೆ.

ಈ ವಿಚಾರದಲ್ಲಿ ಮಹಮೂದ್‌ನ ಹೇಳಿಕೆ :

ಈ ಮಾತಿಗೆ ಮಹಮೂದ್‌ನ ಉತ್ತರ ಹೀಗಿತ್ತು. ತಾವು ನನ್ನ ಕರಾರುಗಳೆಲ್ಲವನ್ನೂ ಮರೆತಿರುವಂತೆ ಕಾಣುತ್ತದೆ. ಯಾರೋ ಪಿತೂರಿಕಾರರು ನಿಮ್ಮ ಮನಸ್ಸನ್ನು ಕೆಡಿಸಿರುವಂತೆ ಕಾಣುತ್ತಿದೆ. ಇಲ್ಲದಿದ್ದರೆ, ನೀವು ಹೀಗೆ ಮಾತನಾಡುತ್ತಿರಲಿಲ್ಲ. ಯಾರು ಪಿತೂರಿಯನ್ನು ಮಾಡಿದ್ದಾರೋ ಅವರು ಖಂಡಿತ ಪಶ್ಚಾತಾಪ ಪಡುವುದರಲ್ಲಿ ಸಂದೇಹವಿಲ್ಲ. ತಮಗೆ ನನ್ನಿಂದೇನಾದರೂ ಅಪಾಯವಿದೆ ಎಂದು ತಿಳಿದಿದ್ದರೆ, ಅದನ್ನು ಮನಸ್ಸಿನಿಂದ ತೆಗೆದು ಬಿಡಿ. ಈಗ ನಾನು ಒಂಟಿಯಾಗಿ ನಿಮ್ಮಲ್ಲಿಗೆ ಬಂದಿದ್ದೇನೆ. ನನ್ನ ಜೊತೆ ಈಗ ಯಾರೂ ಇಲ್ಲ. ತಾವು ನನಗೆ ಏನು ಬೇಕಾದರೂ ಮಾಡಬಹುದು.

ಬಾದಶಹನ ದಡ್ಡತನ :

ಮಹಮೂದ್‌ಖಾನನ ಬಾಯಿಂದ ಆ ಮಾತುಗಳನ್ನು ಕೇಳಿದ ಬಾದಶಹನು ನಮ್ರನಾದನು. ಆತನು ಕ್ಷಮೆಯನ್ನು ಬೇಡಿದನು. ಬಾದಶಹನಲ್ಲಿ ಸ್ವಾಭಾವಿಕವಾಗಿಯೇ ದಡ್ಡತನವಿತ್ತು. ಯಾವಾಗಲೂ ಸಂಶಯ ಪಿಶಾಚಿಯಾಗಿ ತನ್ನನ್ನು ತೊಂದರೆಗಳಿಗೆ ಒಳಪಡಿಸಿಕೊಳ್ಳುತ್ತಿದ್ದನು. ಆದ್ದರಿಂದಲೇ ಇಂತಹ ಅನೇಕ ಸಣ್ಣತನದ ಕಾರ್ಯಗಳನ್ನು ಮಾಡುತ್ತಿದ್ದನು. ಮಹಮೂದ್‌ಖಾನನ ವಿರೋಧಿ ತಾನು ಎಂಬಂತೆ ಆತನೇ ಅನೇಕ ಸಲ ಬಿಂಬಿಸಿಕೊಳ್ಳುತ್ತಿದ್ದನು.

ಸುಲ್ತಾನ್ ಮಹಮ್ಮದನ ಅಂತ್ಯ :

ಈ ಪರಿಸ್ಥಿತಿಯನ್ನು ಅರಿತ ಮಹಮೂದ್‌ಖಾನನು, ತನ್ನ ಪ್ರಯತ್ನಗಳನ್ನು ಇನ್ನೂ ಹೆಚ್ಚು ಮಾಡಿದನು. ಬಾದಶಹನನ್ನು ಸಾಧ್ಯವಾದಷ್ಟು ಬೇಗ ಕೊನೆಗೊಳಿಸಬೇಕೆಂಬ ಮನಸ್ಸನ್ನು ದೃಢಪಡಿಸಿಕೊಂಡನು. ಆತನು ಬಾದಶಹನಿಗೆ ಮದ್ಯವನ್ನು ಸುರಿದು ಕೊಡುತ್ತಿದ್ದ (ಸಾಖಿ)ವನಿಗೆ ತನ್ನತ್ತ ಸೆಳೆದುಕೊಂಡನು. ಆತನನ್ನು ಬಾದಶಹನ ಕೊಲೆ

ಮಾಡುವ ವಿಚಾರದಲ್ಲಿ ಭದ್ರಪಡಿಸಿಕೊಂಡನು. ಸಾಖಿಯು ಬಾದಶಹನು ಕುಡಿಯುತ್ತಿದ್ದ ಮದ್ಯದಲ್ಲಿ ವಿಷವನ್ನು ಸೇರಿಸಿ ಕುಡಿಸಿ, ಈ ಲೋಕದಿಂದಲೇ ಅಂತ್ಯಗೊಳಿಸಿದನು.

ಷಹಜಾದ ಮಸೂದನ ಪಟ್ಟಾಭಿಷೇಕ :

ಅಮೀರರಿಗೆ ಬಾದಶಹರ ಅಂತ್ಯದ ಸಮಾಚಾರ ಗೊತ್ತಾಗಿ ಹೋಯಿತು. ಖ್ವಾಜಾನಸೀರುಲ್ಲಾ ವಜೀರನಾದ ಮುಶಿರ್‌ಉಲ್‌ಮುಲ್ಕ, ಲತೀಫ್ ಜಿಕ್ರಿಯಾ ಮತ್ತು ಇತರೆ ಅಮೀರರು, ಚರ್ಚೆ ಮಾಡಿ ತೀರ್ಮಾನಿಸಿದ್ದುದೇನೆಂದರೆ ಬಾದಷಹನ ಮರಣದ ಸುದ್ದಿಯನ್ನು ಸದ್ಯಕ್ಕೆ ಗುಪ್ತವಾಗಿಡಬೇಕೆಂದೂ, ಇವರೇ ಎಲ್ಲರೂ ಸೇರಿ, ದಿವಂಗತ ಬಾದಷಹನ ಮಗ ಷಹಜ಼ಾದ ಮಸೂದ್ ಖಾನನನ್ನು (ಆತನ ವಯಸ್ಸು ಇನ್ನೂ ಹದಿಮೂರು ವರ್ಷಗಳಾಗಿದ್ದವು) ಅಂತಃಪುರದಿಂದ ಹೊರತಂದು, ಆತನನ್ನು ಸಿಂಹಾಸನದ ಮೇಲೆ ಕೂರಿಸಿಯೇಬಿಟ್ಟರು.

ಅಮೀರರ ಪಿತೂರಿ:

ಇದಾದ ನಂತರ ಅಮೀರರು ಪುನಃ ತೀರ್ಮಾನಿಸಿದುದು ಹೀಗೆ–ಏನಾದರೂ ಮಾಡಿ ಮಹಮೂದ್ ಖಾನನನ್ನು ಮುಗಿಸಿಬಿಡಬೇಕೆಂದು. ಅಮೀರರು ಬಾಯಜ಼ೀದ್ ಶೇಖಾ ಎಂಬುವವನನ್ನು ಮಹಮೂದ್ ಖಾನನ ಹತ್ತಿರ ಕಳುಹಿಸಿ ಈ ವಿಷಯವನ್ನು ತಿಳಿಸಲು ಹೇಳಿದರು. ಏನೆಂದರೆ – "ಸುಲ್ತಾನ್ ಮಹಮ್ಮದನು ನಿನಗೆ, ಸಾಧ್ಯವಾದಷ್ಟೂ ಬೇಗ ಬರಲು ಆಜ್ಞಾಪಿಸಿದ್ದಾರೆಂದು. ಏಕೆಂದರೆ ನಿನ್ನನ್ನು ಗುಜರಾತಿಗೆ ರಾಜದೂತನಾಗಿ ಕಳುಹಿಸಬೇಕೆಂದು ಇಚ್ಛಿಸಿದ್ದಾರೆ". ಮಹಮೂದ್‌ನು ಇದಕ್ಕುತ್ತರವಾಗಿ – "ನಾನು ಈಗ ಈ ಜಗತ್ತಿನ ಎಲ್ಲಾ ಕಾರ್ಯಕಲಾಪಗಳಿಂದ ದೂರ ಉಳಿದು ಮುಕ್ತನಾಗಲು ಇಚ್ಛಿಸಿದ್ದೇನೆ. ನಾನು ಎಲ್ಲ ಸಂಬಂಧಗಳಿಂದಲೂ ದೂರವಾಗಿದ್ದೇನೆ. ಈಗ ನನ್ನ ಇಚ್ಛೆಯೆಂದರೆ, ಇನ್ನುಳಿದ ಬಾಕಿ ಆಯಸ್ಸನ್ನು ಸುಲ್ತಾನ್ ಹೋಷಂಗರ ಗೋರಿಯ (ಮಜ಼ಾರ್) ಹತ್ತಿರ ಇದ್ದು, ಅಲ್ಲಿನ ಕಸ ಗುಡಿಸಿಕೊಂಡಿರಬೇಕೆಂದು ತೀರ್ಮಾನಿಸಿದ್ದೇನೆ. ಈ ನನ್ನ ಇಚ್ಛೆ ಹೀಗಿದ್ದರೂ, ನಿಮ್ಮ ಮಾತಿನ ಪ್ರಕಾರ ತಾವೆಲ್ಲರೂ ನನ್ನ ಬಡವನ ಮನೆಗೆ ಒಮ್ಮೆ ಬಂದು, ನನಗೆ ಏನು ಹೇಳಬೇಕೆಂದಿದ್ದೀರೋ ಅದನ್ನು ಹೇಳಿ, ನಾನು ಏನು ಹೇಳಬೇಕೆಂದಿರುವೆನೋ ಅದನ್ನು ನೀವೂ ಕೇಳಿ, ಆ ಎಲ್ಲ ವಿಚಾರವನ್ನು ತೆಗೆದುಕೊಂಡು ಹೋಗಿ ಸುಲ್ತಾನ್ ಮಹಮ್ಮದರಿಗೆ ಹೇಳಿ".

ಮಲಿಕ್ ಶೇಖಾನ ಅಭಿಪ್ರಾಯ:

ಮಲಿಕ್ ಬಾಯಜ಼ೀದ್ ಶೇಖಾ ಎಂಬುವನು ಈ ಉತ್ತರವನ್ನು ತಂದು ಅಮೀರರಿಗೆ ಹೇಳಿದನು. ಹಾಗೂ, ಮಹಮೂದ್ ಖಾನನಿಗೆ ಇಲ್ಲಿನವರೆಗೂ, ಸುಲ್ತಾನ್ ಮಹಮ್ಮದನ ಮರಣದ ಸುದ್ದಿ ತಿಳಿದಿಲ್ಲ. ಆತನು ತಿಳಿದಿರುವುದೇನೆಂದರೆ, ಬಾದಷಹನು

ಜೀವಂತನಾಗಿಯೇ ಇದ್ದಾನೆಂದು. ಆದ್ದರಿಂದ ನನ್ನ ಅಭಿಪ್ರಾಯದಲ್ಲಿ, ತಾವೆಲ್ಲರೂ ಒಟ್ಟಿಗೆ ಸೇರಿಕೊಂಡು ಮಹಮೂದ್‌ನ ಮನೆಗೆ ಹೋಗುವುದು ಮತ್ತು ನೀವೆಲ್ಲರೂ ಆತನನ್ನು ಬಾದಷಹನ ದರ್ಬಾರಿಗೆ ಕರೆತಂದು, ಆತನ ಕೆಲಸವನ್ನು ಪೂರ್ಣಗೊಳಿಸಬಹುದು.

ಅಮೀರರ ಸೆರೆ:

ಅಮೀರರು ಮಲಿಕ್ ಶೇಖಾನ ಸಲಹೆಯನ್ನು ಸ್ವೀಕರಿಸಿದರು. ಎಲ್ಲರೂ ಸೇರಿ ಮಹಮೂದ್ ಖಾನನ ಮನೆಗೆ ತೆರಳಿದರು. ಮಹಮೂದ್‌ನು ಮೊದಲೇ ತನ್ನ ಸೈನಿಕರನ್ನು ಅಲ್ಲಲ್ಲಿ ಕಾಣದಂತೆ ನಿಲ್ಲಿಸಿದ್ದನು. ಮಹಮೂದ್ ಖಾನನ ಮನೆಗೆ ಅಮೀರರು ಪ್ರವೇಶಿಸಿದ ತಕ್ಷಣ, ಅವರನ್ನು ಕುರಿತು ಒಂದು ಪ್ರಶ್ನೆಯನ್ನು ಕೇಳಿದನು. ಅದೇನೆಂದರೆ– "ಬಾದಷಹನು ಎಚ್ಚರದಿಂದಿರುವನೋ ಅಥವಾ ಮತ್ತಿನಲ್ಲಿ ಮಲಗಿದ್ದಾನೋ?" ಎಂದು. ಅಮೀರರು ಪ್ರಶ್ನೆಯ ಅರ್ಥವನ್ನು ತಿಳಿದುಕೊಂಡರು, ಹಾಗೆಯೇ ಸುಮ್ಮನಾಗಿಬಿಟ್ಟರು. ಅಷ್ಟರೊಳಗೆ ಮಹಮೂದ್‌ನ ಸಿಪಾಯಿಗಳು ಅವರಿಗೆ ಏನನ್ನೂ ಯೋಚಿಸಲೂ ಬಿಡದೇ, ಅಡಗಿದ್ದ ಜಾಗದಿಂದ ಹೊರಬಂದು ಎಲ್ಲ ಅಮೀರರನ್ನೂ ಸೆರೆ ಹಿಡಿದು ಬಂಧನದಲ್ಲಿಡಲು ಆಜ್ಞಾಪಿಸಿದನು.

ಷಹಜಾದ ಮಸೂದನ ಪಕ್ಷದವರ ಸಿದ್ಧತೆ:

ಅಮೀರರ ಸೆರೆಯ ಸುದ್ದಿ ಸಾಮಾನ್ಯವಾಗಿ ಎಲ್ಲೆಡೆ ಹಬ್ಬಿತು. ಇದರಿಂದ ಷಹಜಾದ ಮಸೂದನ ಪಕ್ಷದವರಿಗೆ ಸಿಟ್ಟು ಬಂದಿತು. ಅವರು ಷಾಹಿ ಸೈನ್ಯವನ್ನು ತಯಾರು ಮಾಡಿಕೊಂಡರು. ಸುಲ್ತಾನ್ ಹೋಷಂಗನ ಗೋರಿಯಲ್ಲಿದ್ದ, ಬಾದಷಹರಿಗೆ ಸಂಬಂಧಿಸಿದ, ಛತ್ರ ಚಾಮರ, ತಲೆಯ ಮೇಲಿನ ಪರದಾ, ಕೆಂಪು ನಿಶಾನೆಗಳನ್ನು ಇಳಿಸಿ ತಂದು ಷಹಜ಼ಾದ ಮಸೂದನ ತಲೆಯ ಮೇಲೆ ಇರಿಸಿ ಗೌರವಿಸಿದರು.

ಮಹಮೂದ್ ಮತ್ತು ಮಸೂದನ ಪಕ್ಷದವರಲ್ಲಿ ಯುದ್ಧ:

ಮಹಮೂದ್ ಖಾನನಿಗೆ ಇದರ ಸುದ್ದಿ ತಿಳಿಯುತ್ತಿದ್ದಂತೆ, ಆತನೂ ತನ್ನ ಸೈನ್ಯವನ್ನು ಸಿದ್ಧಗೊಳಿಸಿಕೊಂಡನು ಮತ್ತು ಷಹಜ಼ಾದ ಮಸೂದನನ್ನು ಸೆರೆ ಹಿಡಿಯಲು ಷಾಹಿ ಅರಮನೆಯತ್ತ ಸೈನ್ಯದೊಂದಿಗೆ ನಡೆದನು. ಅರಮನೆಯ ಹತ್ತಿರ ತಲುಪಿದಾಗ, ಷಹಜ಼ಾದ ಮಸೂದನ ಪಕ್ಷದವರು ಇವನನ್ನು ತಡೆದು ಬಿಲ್ಲು, ಬಾಣಗಳಿಂದ ಯುದ್ಧವನ್ನು ಆರಂಭಿಸಿದರು. ಸಾಯಂಕಾಲದ ತನಕ ಇಬ್ಬರಲ್ಲೂ ಯುದ್ಧ ನಡೆಯಿತು. ಸೂರ್ಯನು ಮುಳುಗಿದ ನಂತರ, ಷಹಜ಼ಾದ ಉಮರ್ ಕೋಟೆಯಿಂದ ಹೊರಟು ಓಡಿ ಹೋದನು. ಷಹಜ಼ಾದ ಮಸೂದನು ಶೇಖ್ ಜಾ ಬಲಾಹ್ ಎಂಬುವನಲ್ಲಿ ಆಶ್ರಯವನ್ನು ಪಡೆದನು. ಈ ರೀತಿಯಾಗಿ ಎಲ್ಲ ಅಮೀರರೂ ತಮ್ಮ ಪ್ರಾಣಗಳನ್ನುಳಿಸಿಕೊಳ್ಳಲು ಅತ್ತ–ಇತ್ತ ಓಡಿ ಅಡಗಿಕೊಂಡರು.

ಮಹಮೂದ್‌ನು ಷಾಹಿ ಅರಮನೆಯಲ್ಲಿ:

ಬೆಳಗಿನವರೆಗೂ ಮಹಮೂದ್ ಖಾನನು ತನ್ನ ಸೈನ್ಯದೊಂದಿಗೆ ಷಾಹಿ ಅರಮನೆಯ ಹತ್ತಿರ ನಿಂತಿದ್ದನು. ಸೂರ್ಯನ ಉದಯವಾಗುತ್ತಿದ್ದಂತೆಯೇ, ಆತನಿಗೆ ಗೊತ್ತಾದುದೇನೆಂದರೆ – ಅರಮನೆಯು ಸಂಪೂರ್ಣವಾಗಿ ಖಾಲಿಯಾಗಿದೆಯೆಂದೂ, ಅಲ್ಲಿ ಈಗ ಯಾರೂ ಇಲ್ಲವೆಂದೂ ತಿಳಿಯಿತು. ಎಲ್ಲರೂ ಎಲ್ಲೆಲ್ಲೋ ಹೋಗಿ ಅವಿತುಕೊಂಡ ವಿಷಯವೂ ತಿಳಿಯಿತು. ಮಹಮೂದ್‌ನು ಷಾಹಿ ಅರಮನೆಯಲ್ಲಿ ಪ್ರವೇಶಿಸಿದನು. ತಕ್ಷಣ ತನ್ನ ತಂದೆ ಖಾನ ಜಹಾನ ಎಂಬುವನಿಗೊಂದು ಪತ್ರ ಬರೆದುದೇನೆಂದರೆ – "ಬಹಳ ಬೇಗ ನೀವು ಇಲ್ಲಿಗೆ ಬರಬೇಕೆಂದೂ, ಇಲ್ಲಿನ ಆಡಳಿತವನ್ನು ವಹಿಸಿಕೊಳ್ಳಬೇಕು ಎಂದು ಬರೆದನು. ಈಗ ಬಾದಷಹನಾಗುವ ಹಕ್ಕು ನಿಮ್ಮದೆಂದೂ, ಸಾಧ್ಯವಾದಷ್ಟು ಬೇಗ ಬರಬೇಕೆಂದು. ಯಾಕೆಂದರೆ ಷಾಹಿ ಸಿಂಹಾಸನವು ಬಹಳ ಹೊತ್ತಿನ ತನಕ ಖಾಲಿಯಿದ್ದರೆ ಪಿತೂರಿ, ಷಡ್ಯಂತ್ರಗಳು ಹೆಚ್ಚಾಗುವುವೆಂದೂ ಬರೆದಿದ್ದನು. ಹಾಗೂ ನಿಮಗೂ ಚೆನ್ನಾಗಿ ಗೊತ್ತೇ ಇರುವುದೇನೆಂದರೆ ಮಾಳವ ದೇಶವು ಒಂದು ವಿಶಾಲ ಸಾಮ್ರಾಜ್ಯವಾಗಿರುವುದರಿಂದ ಪಿತೂರಿಗಳು ಪ್ರಾರಂಭವಾಗಿಬಿಡುತ್ತವೆ, ನಂತರ ಅವುಗಳನ್ನು ಅಡಗಿಸುವುದೂ ಕಷ್ಟವಾಗುತ್ತದೆ. ಅಲ್ಲಾಹ್‌ನ ಕೃಪೆಯಿಂದ, ಈಗ ಸದ್ಯಕ್ಕೆ ಪಿತೂರಿಗಾರರು ತಣ್ಣಗಾಗಿದ್ದಾರೆ. ಅವರಿಗೆ ಪಿತೂರಿ ಮಾಡುವ ಅವಕಾಶಗಳು ಸದ್ಯಕ್ಕಿಲ್ಲವಾಗಿವೆ".

ಮಹಮೂದ್ ಖಾನನ ಪಟ್ಟಾಭಿಷೇಕ:

ತಂದೆ ಖಾನ್ ಜಹಾನನು ಮಗನಿಗೆ ಪತ್ರವನ್ನು ಬರೆದರು.– "ಅಲ್ಲಾಹ್‌ನ ಕೃಪೆಯಿಂದ ನಿನ್ನಲ್ಲೂ ಶಾಸನವನ್ನು ಮಾಡುವ ಎಲ್ಲ ಬುದ್ಧಿಶಕ್ತಿಗಳು ಇವೆ. ಆದ್ದರಿಂದ ನೀನೇ ಪಟ್ಟಕ್ಕೆ ಕುಳಿತುಕೋ". ಈ ಮಾತನ್ನು ಮಹಮೂದ್ ಖಾನನ ಅಮೀರರು ಕಾರ್ಯರೂಪಕ್ಕೆ ತರಲು ನಿಶ್ಚಯಿಸಿದರು. ಮಹಮೂದ್ ಖಾನನು ಜ್ಯೋತಿಷಿಗಳ ಜ್ಯೋತಿಷ್ಯದ ಪ್ರಕಾರ ಸಿಂಹಾಸನವನ್ನೇರಿದನು. ಎಲ್ಲ ಅಮೀರರೂ, ಶಾಸಕರೂ ಅವನ ಹಸ್ತದಲ್ಲಿ ಹಸ್ತವಿಟ್ಟು ಪ್ರಮಾಣ ಮಾಡಿ, ಆತನ ಅಧೀನತೆಯನ್ನು ಸ್ವೀಕರಿಸಿದರು.

ಸುಲ್ತಾನ್ ಮಹಮ್ಮದ್ ಶಾಹ್ ಘೋರಿಯು ಒಂದು ವರ್ಷದ ನಂತರ ಕೆಲವು ತಿಂಗಳುಗಳು ಮಾತ್ರ ಆಡಳಿತವನ್ನು ನಡೆಸಿದನು.

■

III. ಖಿಲ್ಜಿ ಸುಲ್ತಾನರು

*

೧. ಸುಲ್ತಾನ್ ಮಹಮೂದ್ ಖಿಲ್ಜಿ

ಪಟ್ಟಾಭಿಷೇಕ :

ಇತಿಹಾಸಕಾರರು ಈ ವಿಚಾರದಲ್ಲಿ ಚೆನ್ನಾಗಿ ಬಲ್ಲವರಾಗಿದ್ದು, ಹಿಂದೂಸ್ತಾನದ ಐತಿಹಾಸಿಕ ಗ್ರಂಥಗಳಿಂದ ಸಾಮಾನ್ಯವಾಗಿ ತಿಳಿದುಬರುವುದಲ್ಲದೆ ಮುಲ್ಲಾ ಅಹಮದ್ ತನ್ವೀಯವರ ತುಲನಾತ್ಮಕ ಇತಿಹಾಸ ಗ್ರಂಥವಾದ, "ತಾರೀಖುಲ್ ಅಲ್ಫಿ"ಯಲ್ಲಿ ಸ್ಪಷ್ಟವಾಗಿ ಬರೆದಿರುವುದೇನೆಂದರೆ – ಸುಲ್ತಾನ್ ಘೋರಿಯ ಆಡಳಿತವು ಅಂತ್ಯವಾದ ನಂತರ, ಹಿಜರಿ–೮೩೯ ಶವ್ವಾಲ್ ತಿಂಗಳ ೨೯ನೇ ದಿನಾಂಕದಂದು, ಅಂದರೆ ಸೋಮವಾರದಂದು ಮಹಮೂದ್ ಖಿಲ್ಜಿಯು ಮಾಳವ ದೇಶದ ಬಾದಷಹನಾಗಿ ಕುಳಿತನು. ಆಗ ಆತನ ವಯಸ್ಸು ೩೪ ವರ್ಷಗಳಾಗಿದ್ದುವು. ತನ್ನ ದೇಶದಲ್ಲೆಲ್ಲಾ ತನ್ನ ಹೆಸರಿನ ಪ್ರಶಂಸಾತ್ಮಕ ಖುತ್ಬಾ ಮತ್ತು ಮುದ್ರೆ, ನಾಣ್ಯಗಳ ಚಲಾವಣೆಯನ್ನು ಮಾಡಿದನು.

ಅಮೀರರೊಂದಿಗೆ ಸಂಬಂಧ:

ಸುಲ್ತಾನ್ ಮಹಮೂದ್‌ನು ತನ್ನ ಅಮೀರರೊಂದಿಗೆ ಉತ್ತಮವಾದ ಸಂಬಂಧವನ್ನಿಟ್ಟುಕೊಂಡು, ಅವರನ್ನು ಅನೇಕ ರೀತಿಯಿಂದ ಸನ್ಮಾನಿಸುತ್ತಿದ್ದನು. ಪ್ರತಿಯೊಬ್ಬರ ಜಾಗೀರಿಗಳನ್ನು ಹೆಚ್ಚು ಮಾಡಿದನು. ಅನೇಕರಿಗೆ ಬಿರುದುಗಳನ್ನು ಕೊಟ್ಟು ಗೌರವಿಸಿದನು. ಮುಶೀರುಲ್ ಮುಲ್ಕಿಯವರಿಗೆ "ನಿಜಾಮಲ್ ಮುಲ್ಕ್" ಎಂಬ ಬಿರುದನ್ನು ಕೊಟ್ಟು, ಮಂತ್ರಿಯ ಸ್ಥಾನದಲ್ಲಿರಿಸಿಕೊಂಡನು. ಮಲಿಕ್ ಬರ್‌ಖುರ್‌ದಾರರಿಗೆ "ಆರಿಜ್ ಮುಮಾಲಿಕ್" ಎಂಬ ಬಿರುದನ್ನು ಕೊಟ್ಟನು. ಮತ್ತು "ತಾಜ್ ಖಾನ್" ಹೆಸರಿನಿಂದ ಕರೆಯುತ್ತಿದ್ದನು. ಅಮೀರುಲ್ ಉಮ್ರಾನ ಜಾಗೀರಿಗೆ ಖಾನ್ ಜಹಾನ್‌ನನ್ನು ನೇಮಿಸಿದನು. ಹಾಗೂ ಮಾಳವದ ಫಲವತ್ತಾದ ಪ್ರದೇಶಗಳನ್ನು ಈತನಿಗೆ ಬಿಟ್ಟುಕೊಡಲಾಯ್ತು. ಅಷ್ಟೇ ಅಲ್ಲದೆ "ಆಜಂ ಹುಮಾಯೂನ್" ಎಂಬ ಬಿರುದನ್ನು ಕೊಟ್ಟು ಸನ್ಮಾನಿಸಿದನು. ಇವರ ಜೊತೆಗೆ–ಛತ್ರ, ಬಿಳಿ ಬತ್ತಳಿಕೆ

ಮುಂತಾದುವುಗಳನ್ನು ನೀಡಿದನು. ಇವೆಲ್ಲವೂ ಆ ಕಾಲದಲ್ಲಿ ಬಾದಷಹನ ಸಮಕ್ಕೆ ಸಲ್ಲುತ್ತಿದ್ದ ಗೌರವಗಳಾಗಿದ್ದವು.

ಖಾನ್‌ಜಹಾನನ ಗೌರವ:

ಸುಲ್ತಾನ್ ಮಹಮೂದ್‌ನು – ಖಾನ್‌ಜಹಾನನನ್ನು ಬಹಳವಾಗಿ ಗೌರವಿಸುತ್ತಿದ್ದನು. ಆತನ ಸವಾರಿಯನ್ನು ಬಾದಷಹರುಗಳ ದರ್ಜೆಗೇರಿಸಿದ್ದನು. ಆತನ ವಂಶವೃಕ್ಷವನ್ನು ಚಿನ್ನ, ಬೆಳ್ಳಿಗಳಿಂದ ಮಾಡಲ್ಪಟ್ಟಿದ್ದರಲ್ಲಿ ಕೆತ್ತಿಸಲಾಗಿತ್ತು. ಕೈಯಲ್ಲಿ ಚಿನ್ನ ದಂಡವಿರುತ್ತಿತ್ತು. ಖಾನ್‌ಜಹಾನನು ತನ್ನ ಸವಾರಿಯ ಮೇಲೇರುವಾಗ, ಬಹಳ ಜೋರಾಗಿ ಈ ಶಬ್ದ "ಬಿಸ್ಮಿಲ್ಲಾ ಹಿರ್ರಹ್ಮಾನಿರ್ರಹೀಂ" ಎಂದು ಹೇಳುತ್ತಾ ಏರುತ್ತಿದ್ದನು.

ವಿದ್ಯಾಕ್ಷೇತ್ರ

ಸುಲ್ತಾನ್ ಮಹಮೂದ್‌ನು ತನ್ನ ರಾಜ್ಯವನ್ನು ಆಡಳಿತದ ದೃಷ್ಟಿಯಿಂದ ಬಿಗಿಗೊಳಿಸಿದ ಮೇಲೆ, ಆತನು ವಿದ್ಯಾಕ್ಷೇತ್ರದತ್ತ ಗಮನವನ್ನು ಹರಿಸಿದನು. ತನ್ನ ಸಾಮ್ರಾಜ್ಯದ ಎಲ್ಲ ವಿದ್ಯಾವಂತ ವಿದ್ವಾಂಸರನ್ನು ಶ್ರೇಷ್ಠ ಬಹುಮಾನಗಳಿಂದ ಸನ್ಮಾನಿಸಿ ಅವರನ್ನು ಶ್ರೀಮಂತಗೊಳಿಸಿದನು. ದೇಶದಲ್ಲೆಲ್ಲಾ ಮದ್ರಸಾ (ಶಾಲೆಗಳು)ಗಳನ್ನು ತೆರೆಸಿದನು. ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಗಳನ್ನು ನಿಗದಿಪಡಿಸಿದನು. ಈ ಕಾರಣಗಳಿಂದಾಗಿ ಆತನ ಶಾಸನ ಕಾಲದಲ್ಲಿ ವಿದ್ಯಾಕ್ಷೇತ್ರವು ಸಮರಖಂದ ದೇಶಕ್ಕೆ ಸಮನಾಗಿ ನಿಂತಿತು.

ಅಮೀರರುಗಳ ವಿದ್ರೋಹ:

ಸುಲ್ತಾನ್ ಮಹಮೂದ್‌ನು ಮಾಳವ ದೇಶದಲ್ಲಿ ತನ್ನ ಕಾಲುಗಳನ್ನು ದೃಢವಾಗಿ ನೆಲೆಯೂರಿದನು. ದಿವಂಗತ ಸುಲ್ತಾನ್ ಹೋಷಂಗನ ಪಕ್ಷದವರಾದ ಅಮೀರರ ಒಂದು ಗುಂಪು ತಮ್ಮಲ್ಲಿದ್ದ ದ್ವೇಷ, ಅಸೂಯೆಗಳನ್ನು ಹೊರಹಾಕಲಾರಂಭಿಸಿದರು. ಅವರಲ್ಲಿ ಪ್ರಮುಖರೆಂದರೆ– ಮಲಿಕ್ ಖುತ್ಬುದ್ದೀನ್ ಸಮ್ನಾನಿ, ದಬೀರ್ ಹರ್ಜಾನಿ ಎಂಬುವರು ವಿದ್ರೋಹದ ಬೆಂಕಿಯನ್ನು ಹಬ್ಬಿಸಿದರು. ಈ ವಿದ್ರೋಹಿಗಳು ಒಂದು ದಿನ ಬಹಳ ದೊಡ್ಡ ಅಸಭ್ಯ ಕೆಲಸವನ್ನು ಮಾಡಿದರು. ಷಾಹಿ ಅರಮನೆಗೆ ಲಗತ್ತಾಗಿ ಒಂದು ಮಸೀದಿ ಇದ್ದಿತು. ಈ ವಿದ್ರೋಹಿ ಅಮೀರರು ಏಣಿಗಳ ಸಹಾಯದಿಂದ ಮಸೀದಿಯ ಮೇಲೆ ಹತ್ತಿದರು. ಅಲ್ಲಿಂದ ಅರಮನೆಯ ಒಂದು ಕೋಣೆಯ ಒಳಗೆ ಬರಲು ಸಾಧ್ಯವಿದ್ದ ಜಾಗಕ್ಕೆ ಬಂದರು. ಅಲ್ಲಿಗೆ ಬಂದಮೇಲೆ ಮುಂದೇನು ಮಾಡಬೇಕೆಂದು ತೋಚದೆ ಸುಮ್ಮನೆ ನಿಂತುಬಿಟ್ಟರು.

ಬಾದಷಹನ ಧೈರ್ಯ:

ವಿದ್ರೋಹಿ ಅಮೀರರು ಮುಂದೇನು ಮಾಡಬೇಕೆಂದು ಯೋಚಿಸುವಷ್ಟರಲ್ಲಿ, ಆಕಸ್ಮಿಕವಾಗಿ ಬಾದಷಹನು ಅತ್ತ ಬಂದನು. ಆತನು ಈ ಅಮೀರರು ಅರಮನೆ

ಅಂತಃಪುರದ ಕೋಣೆಯ ಕಡೆಗೆ ಏಕೆ ಬಂದಿರಬಹುದು ಎಂದು ಯೋಚಿಸಿದನು. ಏನೋ ಅನಾಹುತವನ್ನು ಮಾಡಲು ಬಂದಿರಬಹುದೆಂದು ಬಗೆದನು. ಬಾದಷಹನು ಆ ಸಂದರ್ಭದಲ್ಲಿ ಬತ್ತಳಿಕೆಯನ್ನು ಕಟ್ಟಿಕೊಂಡಿದ್ದನು. ಆ ಸಂದರ್ಭದಲ್ಲಿ ಧೈರ್ಯದಿಂದ ತಾನೊಬ್ಬನೇ ಅಮೀರರ ಮೇಲೆ ಬಾಣಗಳನ್ನು ಬಿಟ್ಟನು. ಕೆಲವರನ್ನು ಗಾಯಗೊಳಿಸಿದನು.

ವಿದ್ರೋಹಿಗಳು ಪರಾರಿಯಾದರು:

ಈ ಸಂದರ್ಭದಲ್ಲಿ ಮುಶೀಕುಲ್ ಮುಲ್ಕ್-ಅಲ್-ಮುಖಾತಿಬ್ ಬಿನ್ ನಿಜಾಮುಲ್ ಮುಲ್ಕ್ ಮತ್ತು ಮಲಿಕ್ ಮಹಮ್ಮದ್ ಖಿಜ಼ರ್‌ರವರಿಗೆ ಈ ಘಟನೆಯ ವಿಷಯವು ತಿಳಿದ ತಕ್ಷಣ ಅಲ್ಲಿನ ಸಲಾಹ್‌ದಾರರ ಒಂದು ಗುಂಪಿನೊಂದಿಗೆ ಘಟನೆಯ ಸ್ಥಳಕ್ಕೆ ಧಾವಿಸಿದರು. ವಿದ್ರೋಹಿಗಳಿಗೆ ಆಪತ್ತು ತಪ್ಪಿದ್ದಲ್ಲವೆಂದು ಅವರು ಬಗೆದು, ಯಾವ ಮಾರ್ಗದಿಂದ ಬಂದಿದ್ದರೋ ಆ ಮಾರ್ಗದಿಂದ ಇಳಿದು ಓಡಿದರು. ಅವರಲ್ಲಿ ಒಬ್ಬ ಅತಿಯಾಗಿ ಗಾಯಗೊಂಡಿದ್ದರಿಂದ, ಆತನು ಓಡಲಾರದೆ ಸಿಕ್ಕಿಹಾಕಿಕೊಂಡನು. ಆತನನ್ನು ಸೆರೆಹಿಡಿಯಲಾಯ್ತು. ಆತನು ಅಲ್ಲಿಗೆ ಬಂದಿದ್ದ ವಿದ್ರೋಹಿಗಳ ಎಲ್ಲರ ಹೆಸರುಗಳನ್ನೂ ಹೇಳಿದನು. ಇಂತಹ ಅಸಭ್ಯ ವರ್ತನೆಯ ಮುಖಂಡನು ಯಾರು? ಅವರುಗಳ ಉದ್ದೇಶವೇನಿತ್ತು? ಎಲ್ಲವನ್ನೂ ಬಹಿರಂಗಪಡಿಸಿದನು.

ವಿದ್ರೋಹಿಗಳಿಗೆ ಶಿಕ್ಷೆಗಳು:

ಸುಲ್ತಾನ್ ಮಹಮೂದ್‌ನು ಆ ವಿದ್ರೋಹಿಗಳೆಲ್ಲರನ್ನೂ ದರ್ಬಾರಿಗೆ ಕರೆಯಿಸಿಕೊಂಡು ಅವರ ತಪ್ಪುಗಳಿಗನುಸಾರವಾಗಿ ಶಿಕ್ಷೆಯನ್ನು ವಿಧಿಸಿದನು. ಈ ವಿದ್ರೋಹದಲ್ಲಿ ಷಹಜಾದ ಅಹಮದ್ ಖಾನ್ ಬಿನ್ ಹೋಷಂಗನು, ಮಲಿಕ್ ಯೂಸೂಫ್ ಖವಾಮುಲ್ ಮುಲ್ಕ್ ಮತ್ತು ಮಲಿಕ್ ನಸೀರ್ ದಬೀರ್‌ರೂ ಭಾಗಿಯಾಗಿದ್ದರು. ಆದರೆ ಆಜ಼ಂ ಹುಮಾಯೂನನ ಶಿಫಾರಸ್ಸಿನ ಮೇರೆಗೆ, ಈ ಮೂವರಿಗೂ ಶಿಕ್ಷೆಯನ್ನು ವಿಧಿಸದೆ ಉಳಿಸಿಕೊಂಡರು. ಷಹಜಾದ ಅಹಮದ್ ಖಾನನು ಈ ವಿದ್ರೋಹದಲ್ಲಿ ಭಾಗವಹಿಸಲು ಬುರ್‌ಹಾನ್‌ಪುರದಿಂದ ಬಂದಿದ್ದನು. ಈತನನ್ನು ಸುಲ್ತಾನ್ ಮಹಮೂದ್‌ನು ಕ್ಷಮಿಸಿ, ಇಸ್ಲಾಮಾಬಾದ್ ಕೋಟೆಯ ಅಮೀರರನ್ನಾಗಿ ನೇಮಿಸಿದನು. ಮಲಿಕ್ ಯೂಸುಫ಼್ ಖವಾಮುಲ್ ಮುಲ್ಕನ ತಪ್ಪನ್ನೂ ಕ್ಷಮಿಸಿ "ಖವಾಮ್ ಖಾನ್" ಎಂಬ ಬಿರುದನ್ನು ನೀಡಿ "ಭೈನ್ಸಾ"ದ ಜಾಗೀರ್‌ದಾರನನ್ನಾಗಿ ನೇಮಿಸಿದನು. ಮಲಿಕ್ ನಸೀರುದ್ದೀನನನ್ನು "ನುಸ್ರತ್ ಖಾನ್" ಎಂಬ ಬಿರುದನ್ನು ನೀಡಿ ಚಂದೇರಿಯ ಜಾಗೀರಿಯನ್ನು ನೀಡಿದನು. ಈ ಮೂವರನ್ನೂ ಅವರವರ ಜಾಗೀರಿಗಳಿಗೆ ಹೋಗಿ ತಕ್ಷಣದಿಂದಲೇ ಅಲ್ಲಿನ ಆಡಳಿತವನ್ನು ನೋಡಿಕೊಳ್ಳಲು ಕಳುಹಿಸಿ ಕೊಟ್ಟನು.

ಷಹಜಾದ ಅಹಮದನ ವಿದ್ರೋಹ:

ಇಸ್ಲಾಮಾಬಾದ್ ತಲುಪಿದ ಷಹಜಾದ ಅಹಮದ್ ಖಾನನು, ಪಿತೂರಿಗಳನ್ನು ನಡೆಸುವುದನ್ನು ಮುಂದುವರಿಸಿಕೊಂಡೇ ನಡೆದನು. ಆತನು ತನ್ನ ಎಲ್ಲ ತೆರನಾದ ಶಕ್ತಿಗಳನ್ನು ವೃದ್ಧಿಸಿಕೊಂಡೇ ಕೆಲಸ ಮಾಡುತ್ತಿದ್ದನು. ಆತನು ತನ್ನ ಪ್ರದೇಶದಲ್ಲಿ ವಿದ್ರೋಹಗಳನ್ನು, ದಂಗೆಗಳನ್ನು ಮುಂದುವರಿಸಿದನು. ಸುಲ್ತಾನ್ ಮಹಮೂದ್‌ನು ಆಝಂ ಹುಮಾಯೂನನಿಗೆ ಈ ವಿಚಾರಗಳನ್ನು ತಿಳಿಸಿ, ಆತನಿಗೆ ಬುದ್ಧಿವಾದವನ್ನು ಹೇಳಿಸಿದನು. ಆದರೆ ಅದರಿಂದ ಯಾವುದೇ ಉತ್ತಮ ಪರಿಣಾಮವಾಗಲಿಲ್ಲ. ಕೊನೆಗೆ ವಿವಶನಾಗಿ ಸುಲ್ತಾನ್ ಮಹಮೂದ್ ಖಿಲ್ಜಿಯು ತಾಜ್‌ಖಾನನನ್ನು ಅಹಮದ್ ಖಾನನ ಪಿತೂರಿಗಳನ್ನು ಅಡಗಿಸಲು ನೇಮಿಸಿದನು.

ಇಸ್ಲಮಾಬಾದ್ ಕೋಟೆಯ ಮುತ್ತಿಗೆ:

ತಾಜ್‌ಖಾನನು ಇಸ್ಲಾಮಾಬಾದ ಕೋಟೆಗೆ ಮುತ್ತಿಗೆ ಹಾಕಿದನು. ಮುತ್ತಿಗೆಯು ಬಹಳ ದಿನಗಳ ತನಕ ಹಿಡಿಯಿತು. ಯಾವುದೇ ನಿರ್ಣಾಯಕ ಪರಿಣಾಮ ಸಿಗಲಿಲ್ಲ. ಕೊನೆಗೆ ತಾಜ್‌ಖಾನನು ಸುಲ್ತಾನ್ ಮಹಮೂದ್‌ನಿಗೊಂದು ಪತ್ರವನ್ನು ಬರೆದು ಸೈನಿಕ ಸಹಾಯವನ್ನು ಬೇಡಿಕೊಂಡನು.

ಮಲಿಕ್ ಜಹಾದ ಮತ್ತು ನುಸ್ರತ್ ಖಾನರ ವಿದ್ರೋಹ:

ಅದೇ ದಿನಗಳಲ್ಲಿ ಸರ್ಕಾರಿ ಗುಪ್ತದಳದವರಿಂದ ಸುಲ್ತಾನ್ ಮಹಮೂದ್‌ನಿಗೆ ಸುದ್ದಿ ತಿಳಿದಿದುದೇನೆಂದರೆ, ಮಲಿಕ್ ಜಹಾದನು ಹೋಷಂಗಾಬಾದಿನಲ್ಲಿ ಮತ್ತು ನುಸ್ರತ್ ಖಾನನು ಚಂದೇರಿಯಲ್ಲಿ ಬಾದಷಹನ ವಿರುದ್ಧ ದಂಗೆ ಎದ್ದಿರುವ ಸುದ್ದಿ ತಿಳಿಯಿತು. ಸುಲ್ತಾನ್ ಮಹಮೂದ್ ಖಿಲ್ಜಿಯು ಈ ದಂಗೆಕೋರರನ್ನು ಅಡಗಿಸಲು ಮಲಿಕ್ ಮಗೀಸ್ ಉರ್ಫ್ ಆಝಂ ಹುಮಾಯೂನನನ್ನು ಕಳುಹಿಸಿಕೊಟ್ಟನು.

ಆಜಂ ಹುಮಾಯೂನನ ಸೈನಿಕ ಕಾರ್ಯಾಚರಣೆ:

ಆಝಂ ಹುಮಾಯೂನನು ತನ್ನ ಸೈನ್ಯವನ್ನು ತೆಗೆದುಕೊಂಡು ಹೊರಟನು. ಆತನು ತನ್ನ ಸೈನ್ಯದೊಂದಿಗೆ ಇಸ್ಲಾಮಾಬಾದ್ ಕೋಟೆಗೆ ಎರಡು ಮೈಲಿ ದೂರದಲ್ಲಿ ಬೀಡು ಬಿಟ್ಟನು. ತಾಜ್‌ಖಾನನು ಮತ್ತು ಇತರೆ ಅಮೀರರು ಆಝಂ ಹುಮಾಯೂನನನ್ನು ಭೇಟಿಯಾಗಲು ಬಂದರು. ತಮ್ಮ ಎಲ್ಲ ಅಹವಾಲುಗಳನ್ನು ವಿವರಿಸಿದರು. ಮಾರನೇ ದಿನವೇ ಆಝಂ ಹುಮಾಯೂನನು ಸೈನ್ಯವನ್ನೆತ್ತಿಕೊಂಡು, ಇಸ್ಲಾಮಾಬಾದಿನ ಸುತ್ತಲೂ ಮುತ್ತಿಗೆಯನ್ನು ಹಾಕಿದನು. ಸೈನ್ಯವನ್ನು ವಿಭಜಿಸಿ, ಸೂಕ್ತ ಸ್ಥಳಗಳಲ್ಲಿ ನೆಲೆಸಿದನು.

ಷಹಜ಼ಾದ ಅಹಮದನನ್ನು ಸರಿದಾರಿಗೆ ತರಲು ಪ್ರಯತ್ನ:

ಆಜ಼ಂ ಹುಮಾಯೂನನು ವಿದ್ವಾಂಸರನ್ನು, ಬುದ್ಧಿಜೀವಿಗಳನ್ನೊಳಗೊಂಡ ಒಂದು ನಿಯೋಗವನ್ನು ಷಹಜ಼ಾದ ಅಹಮದನ ಹತ್ತಿರಕ್ಕೆ ಕಳುಹಿಸಿಕೊಟ್ಟನು. ಆತನಿಗೆ ಸರಿಯಾದ ದಾರಿಗೆ ತರಲು, ಬುದ್ಧಿವಾದವನ್ನು ಹೇಳಲು ಪ್ರಯತ್ನಿಸಿದರು. ಸುಲ್ತಾನ್‌ನ ವಿರುದ್ಧ ದಂಗೆಯೇಳುವುದು ಪಾಪಕಾರ್ಯವೆಂದೂ ತಿಳಿಸಿದರು. ಅವರೆಲ್ಲರ ಪ್ರಯತ್ನವು ವಿಫಲವಾಯಿತು. ಆ ನಿಯೋಗದ ಯಾವ ಮಾತನ್ನೂ ಅಹಮದ್ ಖಾನನು ಗೌರವಿಸದೆ, ಅವರಿಗೆ ಅವಮಾನವನ್ನು ಮಾಡಿ ಕೋಟೆಯಿಂದ ಹೊರಹಾಕಿ ಬಿಟ್ಟನು.

ಷಹಜ಼ಾದ ಅಹಮದ ಖಾನನ ಅಂತ್ಯ:

ಖವಾಮ್ ಖಾನನೂ ಸಹ ಒಬ್ಬ ಪ್ರಮುಖ ಅಮೀರನಾಗಿದ್ದನು. ಅಹಮದ್ ಖಾನನು ಈಗ ರಾಜನ ಕೋಪಕ್ಕೆ ಗುರಿಯಾಗಿರುವುದನ್ನು ಅರಿತು, ಆತನ ಸಹಾಯಕ್ಕೆಂದು, ಯುದ್ಧ ಸಾಮಗ್ರಿಗಳನ್ನು ಕಳುಹಿಸಿದನು. ಈತನೂ ಆಜ಼ಂ ಹುಮಾಯೂನನನ್ನು ವಿರೋಧಿಸುತ್ತಿದ್ದನು. ಮುಂದೆಯೂ ಸಹಾಯ ಮಾಡುವೆನೆಂದು ಮಾತು ಕೊಟ್ಟನು. ಷಹಜ಼ಾದ ಅಹಮದ್ ಖಾನನ ಹತ್ತಿರದವನು ಷಹಜ಼ಾದನಿಗೆ ಶರಾಬಿನಲ್ಲಿ ವಿಷವನ್ನು ಸೇರಿಸಿ ಕುಡಿಸಿದನು. ಈ ಕೆಲಸದಲ್ಲಿ ಆಜ಼ಂ ಹುಮಾಯೂನನ ಪಿತೂರಿ ಇತ್ತೆಂದೂ ಅನುಮಾನಿಸುತ್ತಾರೆ. ಷಹಜ಼ಾದನು ವಿಷದಿಂದಾಗಿ ಸತ್ತು ಹೋದನು. ಇದಾದ ನಂತರ ಆಜ಼ಂ ಹುಮಾಯೂನನು ಸುಲಭವಾಗಿ ಕೋಟೆಯನ್ನು ವಶಪಡಿಸಿಕೊಂಡನು.

ಖವಾಮನು ಪರಾರಿಯಾದನು:

ಇಸ್ಲಾಮಾಬಾದಿನ ಗೆಲುವಿನ ನಂತರ, ಆಜ಼ಂ ಹುಮಾಯೂನನು ಹೋಷಂಗಾಬಾದಿನತ್ತ ರವಾನೆಯಾದನು. ಖವಾಮ್ ಖಾನನು ಷಹಜ಼ಾದ ಅಹಮದ್ ಖಾನನಿಗೆ ಸಹಾಯವನ್ನು ಮಾಡಿದ್ದನು. ಮನಸ್ಸಿನಲ್ಲೇ ತಾನು ಮಾಡಿದ ತಪ್ಪನ್ನು ನೆನೆದುಕೊಂಡು ಬೆದರಿದ್ದನು. ಆದ್ದರಿಂದ ಆತನು ದಾರಿ ಮಧ್ಯದಿಂದಲೇ ಸೈನ್ಯದಿಂದ ಬೇರ್ಪಟ್ಟು ಭೈನ್ಸಾ ಕಡೆಗೆ ಓಡಿಹೋದನು. ಆಜ಼ಂ ಹುಮಾಯೂನನು ಆತನನ್ನು ಹಿಂಬಾಲಿಸುವುದು ಸೂಕ್ತವಲ್ಲವೆಂದು ತಿಳಿದನು. ಅಲ್ಲಿಂದ ಮಲಿಕ್ ಜಹಾದನನ್ನು ಅಡಗಿಸಲು ತೀರ್ಮಾನಿಸಿಕೊಂಡನು.

ಮಲಿಕ್ ಜಹಾದನ ಕೊಲೆ:

ಆಜ಼ಂ ಹುಮಾಯೂನನು ಹೋಷಂಗಾಬಾದನ್ನು ತಲುಪಿದನೆಂಬ ಸುದ್ದಿಯನ್ನು ತಿಳಿದ ಮಲಿಕ್ ಜಹಾದನು ತುಂಬಾ ಚಿಂತೆಯಲ್ಲಿ ಮುಳುಗಿಹೋದನು. ಏಕೆಂದರೆ ಆತನಲ್ಲಿ ಆಜ಼ಂ ಹುಮಾಯೂನನನ್ನು ಎದುರಿಸುವಷ್ಟು ಶಕ್ತಿಯಿರಲಿಲ್ಲ. ಇದರಿಂದಾಗಿ

ಆತನು ಹೆದರಿ ತನ್ನ ಎಲ್ಲ ಸಾಮಾನು, ಸಾಮಗ್ರಿಗಳನ್ನು ಬಿಟ್ಟು ಗೋಂಡ್ವಾಡ ಬೆಟ್ಟದ ತಪ್ಪಲಿನತ್ತ ಓಡಿದನು. ಗೋಂಡ್ವಾಡದ ಜನರಿಗೆ ಮಲಿಕ್ ಜಹಾದನು ದುಷ್ಟ ಅಮೀರನೆಂದು ಗೊತ್ತಿತ್ತು. ಅವರು ಆತನನ್ನು ಹಿಡಿದು ಸಾಯಿಸಿದರು.

ಆಝಂ ಹುಮಾಯೂನನು ಚಂದೇರಿಯತ್ತ ನಡೆದನು:

ಆಝಂ ಹುಮಾಯೂನನು, ಮಲಿಕ್ ಜಹಾದನ ಮರಣದ ಸುದ್ದಿ ತಿಳಿದು ಬಹಳ ಸಂತೋಷಪಟ್ಟನು. ತಕ್ಷಣ ಹೋಷಂಗಾಬಾದಿನ ಕೋಟೆಯೊಳಗೆ ಪ್ರವೇಶಿಸಿದನು. ಆ ನಗರದ ಸುವ್ಯವಸ್ಥೆಯ ಜವಾಬ್ದಾರಿಯನ್ನು ತನ್ನ ಒಬ್ಬ ಆಪ್ತ ಅಮೀರನ ಸುಪರ್ದಿಗೆ ವಹಿಸಿ, ತಾನು ಸ್ವತಃ ನುಸ್ರತ್ ಖಾನನಿಗೆ ಬುದ್ಧಿ ಕಲಿಸಲು ಚಂದೇರಿಯತ್ತ ಹೊರಟನು.

ನುಸ್ರತ್ ಖಾನನನ್ನು ಪದಚ್ಯುತಗೊಳಿಸಲಾಯ್ತು:

ಚಂದೇರಿಯನ್ನು ತಲುಪಿದ ಆಝಂ ಹುಮಾಯೂನನು ನುಸ್ರತ್‌ಖಾನನತ್ತ ಗಮನವನ್ನು ಹರಿಸತೊಡಗಿದನು. ನುಸ್ರತ್ ಖಾನನ ಹತ್ತಿರ ಆಝಂ ಹುಮಾಯೂನನನ್ನು ಎದುರಿಸುವಷ್ಟು ಸಾಮರ್ಥ್ಯವಿಲ್ಲದ್ದನ್ನು ಗಮನಿಸಿದ ಆತನು, ಹುಮಾಯೂನನನ್ನು ಸ್ವಾಗತಿಸುವ ವ್ಯವಸ್ಥೆಯನ್ನು ಮಾಡಿಕೊಂಡನು. ಆತನ ಹತ್ತಿರಕ್ಕೆ ಬಂದು, ಏನೇನೋ ಮಾತುಗಳನ್ನಾಡುತ್ತಾ, ತಾನು ಬಾದಷಹನ ಮಿತ್ರನಂತೆ ವರ್ತಿಸತೊಡಗಿದನು. ಆತನ ತಪ್ಪುಗಳನ್ನು ಮುಚ್ಚುವಂತೆ ಪ್ರಯತ್ನಿಸಿದನು. ಆದರೆ ಆಝಂ ಹುಮಾಯೂನನು ದಡ್ಡನಾಗಿರಲಿಲ್ಲ. ಆತನು ನಗರದ ಹಿರಿಯ ಮುಖಂಡರನ್ನೆಲ್ಲಾ ಕರೆಯಿಸಿ ಕೊಂಡು, ನುಸ್ರತನ ಚಾರಿತ್ರ್ಯದ ಬಗ್ಗೆ ವಿಷಯಗಳನ್ನು ಸಂಗ್ರಹಿಸತೊಡಗಿದನು. ಈ ವಿಚಾರಣೆಯಿಂದ ಹೊರಬಂದ ಸಮಾಚಾರವೆಂದರೆ, ನುಸ್ರತನು ತನ್ನ ಅಹಂಕಾರಯುತ ವರ್ತನೆಗಳಿಂದ ಈ ಪ್ರದೇಶದಲ್ಲಿ ದಂಗೆಕೋರ ಪ್ರವೃತ್ತಿಯನ್ನು ಬೆಳೆಸಿಕೊಂಡಿರುವುದು ತಿಳಿದು ಬಂದಿತು. ಆಗ ಆಝಂ ಹುಮಾಯೂನನು ನುಸ್ರತನನ್ನು ಪದಚ್ಯುತಗೊಳಿಸಿ, ಆ ಜಾಗದಲ್ಲಿ ಹಾಜಿಕಾಲು ಎಂಬುವವನನ್ನು ಚಂದೇರಿಯ ಶಾಸಕನನ್ನಾಗಿ ನೇಮಿಸಿದನು.

ಖವಾಮಲ್ ಮುಲ್ಕನನ್ನು ಅಡಗಿಸಿದನು:

ಇದಾದ ನಂತರ ಹುಮಾಯೂನನು ಭೈಸ್ಸಾದತ್ತ ರವಾನೆಯಾದನು. ಅಲ್ಲಿಗೆ ತಲುಪಿ ತನ್ನ ಕೆಲವು ಆಪ್ತರನ್ನು ಖವಾಮುಲ್ ಮುಲ್ಕ್‌ನ ಹತ್ತಿರ ಕಳುಹಿಸಿ, ಆತನನ್ನು ಸರಿದಾರಿಗೆ ಬರಲು ಹೇಳಿಕಳುಹಿಸಿದನು. ಆದರೆ ಆ ಪ್ರಯತ್ನಕ್ಕೆ ಯಾವುದೇ ಉತ್ತಮ ಪರಿಣಾಮ ದೊರೆಯದಿದ್ದ ಕಾರಣ, ಆತನ ಹಠವಾದಿತನಕ್ಕೆ, ಆತನ ಮೇಲೆ ಕಠಿಣ ಕ್ರಮವನ್ನು ತೆಗೆದುಕೊಳ್ಳಲಾರಂಭಿಸಿದನು. ಇದರಿಂದಾಗಿ ಖವಾಮುಲ್ ಮುಲ್ಕನು ಬೆದರಿ ಓಡಿದನು. ಆಝಂ ಹುಮಾಯೂನನು ಕೆಲದಿನಗಳ ಕಾಲ ಭೈಸ್ಸಾದಲ್ಲಿಯೇ

ತಂಗಿದನು. ಇಲ್ಲಿಯ ವ್ಯವಸ್ಥೆಗಳೆಲ್ಲವನ್ನೂ ಸರಿಪಡಿಸಿದನು. ಆ ಪ್ರದೇಶದಲ್ಲಿ ಶಾಂತಿಯನ್ನು ಸ್ಥಾಪಿಸಿ, ಮಾಂಡುವಿನತ್ತ ಪ್ರಯಾಣಿಸಿದನು.

ಸುಲ್ತಾನ್ ಅಹಮದ್ ಗುಜರಾತಿಯು ಮಾಳವದ ಮೇಲೆ ಆಕ್ರಮಣ:

ದಾರಿಯಲ್ಲಿದ್ದಂತೆಯೇ ಆಜ಼ಂ ಹುಮಾಯೂನನಿಗೆ ಸುದ್ದಿ ತಿಳಿದಿದುದೇನೆಂದರೆ – ಗುಜರಾತಿನ ಬಾದಷಹ ಸುಲ್ತಾನ್ ಅಹಮದನು ಮಾಳವವನ್ನು ವಶಪಡಿಸಿಕೊಳ್ಳಲು, ಒಂದು ದೊಡ್ಡ ಸೈನ್ಯದೊಂದಿಗೆ ಬರುತ್ತಿದ್ದಾನೆ ಎಂದು ತಿಳಿಯಿತು. ಷಹಜ಼ಾದ ಮಸೂದ್ ಖಾನನು, ಸುಲ್ತಾನ್ ಮಹಮೂದ್ ಖಿಲ್ಜಿಯಿಂದ ಶಾಂತಿಯನ್ನು ಬಯಸಿ ಗುಜರಾತಿಗೆ ಹೋಗಿದ್ದಾನೆಂದು. ಇಷ್ಟೇ ಅಲ್ಲದೆ ಒಂದು ವಿಶಾಲ ಸೈನ್ಯದೊಂದಿಗೆ ಇಪ್ಪತ್ತು (೨೦) ಆನೆಗಳ ಸಮೇತ ಸುಲ್ತಾನ್ ಮಹಮೂದ್ ಖಿಲ್ಜಿಯೊಂದಿಗೆ ಯುದ್ಧಕ್ಕೆ ಬರುತ್ತಿದ್ದಾನೆ. ಈ ಸುದ್ದಿಯನ್ನು ತಿಳಿದ ಆಜ಼ಂ ಹುಮಾಯೂನನು ಬಹಳ ವೇಗವಾಗಿ, ಮಜಲುಗಳನ್ನು ಪಾರು ಮಾಡುತ್ತಾ, ಸುಲ್ತಾನ್ ಅಹಮದನು ಇನ್ನೂ ಆರು ಮೈಲಿಗಳು ದೂರವಿರುವುದರೊಳಗೆ, ತಾರಾಪೂರ್‌ನ ಬಾಗಿಲ ಕಡೆಯಿಂದ ಮಾಂಡು ಕೋಟೆಯ ಒಳಗೆ ಪ್ರವೇಶಿಸಿಬಿಟ್ಟನು.

ಮಾಂಡು ಕೋಟೆಗೆ ಮುತ್ತಿಗೆ:

ಸುಲ್ತಾನ್ ಅಹಮದ್ ಗುಜರಾತಿಯು ಕೋಟೆಯ ಕೆಳಭಾಗಕ್ಕೆ ಬಂದು ಮುತ್ತಿಗೆಯನ್ನು ಹಾಕಿದನು. ಸುಲ್ತಾನ್ ಮಹಮೂದ್ ಖಿಲ್ಜಿಯು ತನ್ನ ತಂದೆಯಾದ ಆಜ಼ಂ ಹುಮಾಯೂನನ ಆಗಮನದಿಂದಾಗಿ ಬಹಳ ಸಂತೋಷಪಟ್ಟನು. ಬಾದಷಹನು ಪ್ರತಿದಿನ ತನ್ನ ಸೈನ್ಯವನ್ನು ಗುಜರಾತಿ ಸೈನ್ಯದೊಂದಿಗೆ ಯುದ್ಧ ಮಾಡಲು ಕಳುಹಿಸುತ್ತಿದ್ದನು. ಮಹಮೂದ್ ಖಿಲ್ಜಿ ಸಹ ಕೋಟೆಯಿಂದ ಹೊರಬಂದು ಯುದ್ಧ ಮಾಡಲು ಇಚ್ಛಿಸಿದನು. ಆದರೆ ಆತನು ಹಾಗೆ ಮಾಡಲಿಲ್ಲ. ಏಕೆಂದರೆ ಹೋಷಂಗನ ಶಾಹಿ ಅಮೀರರ ಮೇಲೆ ಆತನಿಗೆ ನಂಬಿಕೆಯಿರಲಿಲ್ಲ. ಈ ಸಂದರ್ಭದ ದುರುಪಯೋಗ ಮಾಡಿಕೊಂಡು ಈತನ ವಿರುದ್ಧ ಬಂಡಾಯದ ಬಾವುಟವನ್ನು ಅವರು ಹಾರಿಸಿಬಿಡುವರೋ ಎಂಬ ಹೆದರಿಕೆ ಇತ್ತು. ಪರಿಸ್ಥಿತಿ ಹೇಗಿತ್ತೆಂದರೆ ಸುಲ್ತಾನ್ ಮಹಮೂದ್ ಖಿಲ್ಜಿಯ ಶತ್ರುಗಳು ಯಾರು ಅಥವಾ ಮಿತ್ರರು ಯಾರು ಎಂದು ತಿಳಿಯುವುದೇ ಕಷ್ಟವಾಗಿತ್ತು.

ಮಹಮೂದ್ ಖಿಲ್ಜಿಯ ಉದಾರತೆ:

ಮಹಮೂದ್ ಖಿಲ್ಜಿಯು ಬಹಳ ಉದಾರಿ, ಸ್ನೇಹಮಯಿ ಮನುಷ್ಯನಾಗಿದ್ದನು. ಈ ಮುತ್ತಿಗೆಯ ಕಾಲದಲ್ಲೂ ಪ್ರಜೆಗಳಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ನೋಡಿಕೊಳ್ಳುತ್ತಿದ್ದನು. ಸರ್ಕಾರಿ ಗೋದಾಮುಗಳಿಂದ ಆತನು ಬಡಬಗ್ಗರಿಗೆ ಮತ್ತು

ಭಿಕ್ಷುಕರಿಗೆ ಆಹಾರವನ್ನು ವಿತರಿಸುತ್ತಿದ್ದನು. ಅಲ್ಲಲ್ಲಿ ಅನ್ನಸತ್ರಗಳನ್ನೂ ಸ್ಥಾಪಿಸಿ ಬಡಬಗ್ಗರಿಗೆ ಅನ್ನದಾನವನ್ನು ಮಾಡಿಸುತ್ತಿದ್ದನು. ಈ ಉದಾರ ನೀತಿಯಿಂದಾಗಿ ಪ್ರಜೆಗಳು ಬಹಳ ಸಂತುಷ್ಟರಾಗಿದ್ದರು. ಸುಲ್ತಾನ್ ಮಹಮೂದ್ ಖಿಲ್ಜಿಯನ್ನು ಬಹಳವಾಗಿ ಪ್ರೀತಿಸುತ್ತಿದ್ದರು.

ಗುಜರಾತಿ ಅಮೀರರು ತಮ್ಮ ಬಾದಷಹನಿಂದ ಬೇರ್ಪಟ್ಟರು:

ಮಹಮೂದ್ ಖಿಲ್ಜಿಯ ಉದಾರತೆಯಿಂದಾಗಿ ಮಾಂಡು ಕೋಟೆಯಲ್ಲಿ ಸುಲ್ತಾನ್ ಅಹಮದ್ ಗುಜರಾತಿಯ ಸೈನ್ಯಕ್ಕೆ ಸಂಬಂಧಿಸಿದಂತೆ ಆಹಾರ ಪದಾರ್ಥಗಳು ಬಹಳ ಅಗ್ಗವಾಗಿ ದೊರೆಯುತ್ತಿದ್ದವು. ಮಹಮೂದ್‌ನು ಕೆಲವು ಗುಜರಾತಿ ಅಮೀರರು, ಅಂದರೆ ಸಯ್ಯದ್ ಅಹಮದ್ ಸೂಫ಼ಿ ಖಾನ್ ವಲದ್ ಅಮಾದುಲ್ ಮುಲ್ಕ್ ಮಲಿಕ್ ಶರ್ಫ಼್, ಮಲಿಕ್ ಮಹಮೂದ್ ಬಿನ್ ಅಹಮದ್ ಸಲಹ್‌ದಾರ್, ಮಲಿಕ್ ಖಾಸಿಂ ಮತ್ತು ಮಲಿಕ್ ನಯಾಮುದ್ದೀನ್ ಮತ್ತಿತರಿಗೆ, ಸುಲ್ತಾನ್ ಅಹಮದ್‌ಶಾದ್ ಗುಜರಾತಿಯ ವಿರೋಧಿಗಳಾಗಿದ್ದರು. ಜಾಗೀರಿ, ಮತ್ತು ಹಣದ ಆಸೆಯನ್ನು ತೋರಿಸಿ ಅವರನ್ನು ತನ್ನತ್ತ ಸೆಳೆದುಕೊಂಡನು. ಈ ಘಟನೆಯಿಂದಾಗಿ, ಸುಲ್ತಾನ್ ಮಹಮೂದ್ ಖಿಲ್ಜಿಯ ಬುದ್ಧಿವಂತಿಕೆಯನ್ನು ನಾವು ತಿಳಿದುಕೊಳ್ಳಬಹುದು.

ಗುಜರಾತಿ ಸೈನ್ಯದ ಚೆಲ್ಲಾಪಿಲ್ಲಿ:

ಗುಜರಾತಿ ಅಮೀರರು ಬೇರ್ಪಟ್ಟಿದ್ದ ಕಾರಣ ಮತ್ತು ಸುಲ್ತಾನ್ ಅಹಮದ್ ಗುಜರಾತಿಯ ಸೈನ್ಯದಲ್ಲಿ ಹೋಗಿ ಸೇರಿದ ಕಾರಣದಿಂದಾಗಿ, ಆತನ ಸೈನ್ಯ ಚೆಲ್ಲಾಪಿಲ್ಲಿಯಾಗಿ ವಿಭಜಿಸಿತು. ಮಹಮೂದ್ ಖಿಲ್ಜಿಯು ಈ ಪರಿಸ್ಥಿತಿಯ ಲಾಭವನ್ನು ಪಡೆಯಲು ಗುಜರಾತಿ ಸೈನ್ಯವು ಬೀಡುಬಿಟ್ಟಿರುವ ಸಂದರ್ಭವನ್ನು ನೋಡಿ, ರಾತ್ರಿಯ ಹೊತ್ತು ಅಕಸ್ಮಾತ್ತಾಗಿ ಸೈನಿಕರು ಮಲಗಿದಾಗ ಅವರ ಮೇಲೆ ಬಿದ್ದು ನಾಶಪಡಿಸಬೇಕೆಂಬ ಉಪಾಯವನ್ನು ಯೋಚಿಸಿದನು. ಆದರೆ ಈ ಉಪಾಯದ ಸುದ್ದಿಯು ಸುಲ್ತಾನ್ ಹೋಷಂಗನ ಒಬ್ಬ ಅಮೀರನಾದ ನಸೀರುದ್ದೀನನಿಗೆ ಗೊತ್ತಾಗಿ ಆತನು ಸುಲ್ತಾನ್ ಅಹಮದ್ ಗುಜರಾತಿಗೆ ತಿಳಿಸಿಬಿಟ್ಟನು.

ಶಬ್-ಖೂನ್ (ರಾತ್ರಿಯ ಆಕ್ರಮಣ):

ಯೋಚಿಸಿದ್ದ ಪ್ರಕಾರ ಸುಲ್ತಾನ್ ಮಹಮೂದ್ ಖಿಲ್ಜಿಯ ಸೈನ್ಯವು, ಶಬ್‌ಖೂನ್ (ರಾತ್ರಿಯ ಆಕ್ರಮಣ) ಮಾಡಲು ಕೋಟೆಯಿಂದ ಕೆಳಗಿಳಿಯಿತು. ಆದರೆ ಗುಜರಾತಿ ಸೈನ್ಯವು ಕಣ್ಣಿಗೆ ಕಾಣಿಸಲಿಲ್ಲ. ಎಲ್ಲ ದಾರಿಗಳೂ ಮುಚ್ಚಿದ್ದವು. ಹೀಗಿದ್ದರೂ ಇಬ್ಬರಲ್ಲೂ ಯುದ್ಧವು ನಡೆಯಿತು. ಬೆಳಗಿನ ಜಾವದವರೆಗೂ ಯುದ್ಧವು ನಡೆಯಿತು. ಬಹಳ ಸಿಪಾಯಿಗಳು ಎರಡೂ ಕಡೆಯಲ್ಲಿ ಸತ್ತರು. ಬೆಳಗಾದ ಮೇಲೆ ಮಹಮೂದ್ ಖಿಲ್ಜಿಯ ಸೈನ್ಯವು ಕೋಟೆಯ ಒಳಗೆ ಸೇರಿಕೊಂಡಿತು.

ಚಂದೇರಿ ಮತ್ತು ಸಾರಂಗಿಪುರದಲ್ಲಿ ದಂಗೆಗಳು:

ಕೆಲವು ದಿನಗಳ ನಂತರ, ಸರ್ಕಾರಿ ಗುಪ್ತದಳದವರಿಂದ ಸುದ್ದಿ ಬಂದದ್ದೇನೆಂದರೆ, ಮಾಳವದ ಶಹಜ಼ಾದ ಉಮರ್‌ಖಾನನು, ಇತರರೂ ದಂಗೆಯೆದ್ದಿರುವ ಸುದ್ದಿಯನ್ನು ತಿಳಿದು ಈತನೂ ಚಂದೇರಿಯ ಮೇಲೆ ಆಕ್ರಮಣವನ್ನು ನಡೆಸಿದ್ದಾನೆಂದು ತಿಳಿಯಿತು. ಅಲ್ಲಿಯ ಸೈನ್ಯ ಮತ್ತು ಪ್ರಜೆಗಳು ಸೇರಿಕೊಂಡು, ಪಿತೂರಿಗಳನ್ನು ನಡೆಸಿ ಹಾಜಿಕಾಲುವಿನ ವಿರುದ್ಧ ಬಂಡೆದ್ದು, ಷಹಜ಼ಾದ ಉಮರನನ್ನು ತಮ್ಮ ನಾಯಕನೆಂದು ಘೋಷಿಸಿದ್ದಾರೆ. ಇದೂ ಅಲ್ಲದೆ ಸುಲ್ತಾನ್ ಅಹಮದ್ ಶಾಹ್ ಗುಜರಾತಿಯ ಮಗನಾದ ಷಹಜ಼ಾದ ಮಹಮೂದ್ ಖಾನನು, ಐದು ಸಾವಿರ ಸವಾರರು ಮತ್ತು ಮುನ್ನೂರು ಆನೆಯ ಸೈನ್ಯದೊಂದಿಗೆ ಸಾರಂಗಪುರಕ್ಕೆ ಬಂದು ಅಲ್ಲಿನ ಶಾಸಕನೊಂದಿಗೆ ಯುದ್ಧವನ್ನು ಮಾಡಿ, ಆತನನ್ನು ಕೊಲೆಗೈದಿದ್ದಾರೆಂದೂ ತಿಳಿಯಿತು.

ಸುಲ್ತಾನ್ ಮಹಮೂದ್ ಖಿಲ್ಜಿಯು ಈ ಸಮಾಚಾರಗಳನ್ನು ಕೇಳಿ, ತನ್ನ ಶಾಸಕರನ್ನೂ, ಅಮೀರರನ್ನೂ ಒಂದು ಕಡೆ ಸೇರಿಸಿ ಚರ್ಚೆಯನ್ನು ನಡೆಸಿದನು. ಬಹಳ ಚಿಂತನೆಗಳನ್ನು, ಚರ್ಚೆಗಳನ್ನು ನಡೆಸಿ ತೀರ್ಮಾನಿಸಿದ್ದೇನೆಂದರೆ, ಆಜ಼ಂ ಹುಮಾಯೂನನು ಮಾಂಡುವಿನಲ್ಲಿಯೇ ಇದ್ದು, ನಗರದ ರಕ್ಷಣೆಯನ್ನು ಮಾಡಬೇಕೆಂದೂ, ಸುಲ್ತಾನ್ ಮಹಮೂದ್ ಖಿಲ್ಜಿಯು ಕೋಟೆಯಿಂದ ಹೊರಬಂದು ರಾಜ್ಯದ ಅಲ್ಲಲ್ಲಿ ಶತ್ರುಗಳ ವಿರುದ್ಧ ಯುದ್ಧಗಳನ್ನು ನಡೆಸಬೇಕೆಂದೂ ತೀರ್ಮಾನಿಸಿದರು.

ಮಹಮೂದ್ ಖಿಲ್ಜಿಯು ಸಾರಂಗಪುರಕ್ಕೆ ಪ್ರಯಾಣ:

ಇದಾದ ನಂತರ ಸುಲ್ತಾನ್ ಮಹಮೂದ್ ಖಿಲ್ಜಿಯು ಸಾರಂಗಪುರದತ್ತ ರವಾನೆಯಾದನು. ಆತನು ಹೊರಡುವುದಕ್ಕೆ ಮೊದಲೇ ತಾಜ್‌ಖಾನ್ ಮತ್ತು ಮನಸೂರ್‌ಖಾನ್ ಗುಜರಾತಿಯು ತನ್ನ ಕಡೆಯ ಮಲಿಕ್ ಹಾಜಿ ಆಲಿಯೆಂಬುವನನ್ನು ದಾರಿಯನ್ನು ಕಾಯಲು ನೇಮಿಸಿದ್ದನು. ತಾಜ್‌ಖಾನ್ ಮತ್ತು ಮನಸೂರ್‌ಖಾನರು ಅಲ್ಲಿಗೆ ತಲುಪಿ, ಮಲಿಕ್ ಹಾಜಿ ಆಲಿಯೊಂದಿಗೆ ಯುದ್ಧವನ್ನು ಮಾಡಿದರು. ಹಾಜಿ ಆಲಿಯು ಯುದ್ಧದಲ್ಲಿ ಸೋತು ಓಡಿ ಹೋದನು.

ಅಹಮದ್ ಗುಜರಾತಿಯ ರಕ್ಷಣಾತ್ಮಕ ಉಪಾಯಗಳು:

ಮಲಿಕ್ ಹಾಜಿ ಆಲಿಯು ಸುಲ್ತಾನ್ ಅಹಮದ್ ಶಾಹ್ ಗುಜರಾತಿಯ ಹತ್ತಿರ ಹೋಗಿ, ಸುಲ್ತಾನ್ ಮಹಮೂದ್ ಖಿಲ್ಜಿಯು ಮಾಂಡುವಿನಿಂದ ತನ್ನ ಸೈನ್ಯದೊಂದಿಗೆ ಹೊರಟು, ಸಾರಂಗಪುರದತ್ತ ಬರುತ್ತಿದ್ದಾನೆಂಬ ಸುದ್ದಿಯನ್ನು ತಿಳಿಸಿದನು. ಸುಲ್ತಾನ್ ಅಹಮದ್ ಗುಜರಾತಿಯು ತಕ್ಷಣ ಷಹಜ಼ಾದ ಮಹಮೂದ್ ಖಾನನ ಹತ್ತಿರ ಒಬ್ಬ ರಾಜದೂತನ ಮೂಲಕ ಹೀಗೆ ಹೇಳಿಕಳುಹಿಸಿದನು. "ನೀನು ತಕ್ಷಣ, ಸುಲ್ತಾನ್

ಮಹಮೂದ್ ಖಿಲ್ಜಿಯು ಸಾರಂಗಪುರಕ್ಕೆ ಬರುವ ಮೊದಲೇ ಉಜ್ಜಯನಿಗೆ ಬಂದುಬಿಡು" ಎಂದು ತಿಳಿಸಿದನು. ದೂತನು ಷಹಜ಼ಾದ ಮಹಮೂದ್ ಖಾನನ ಹತ್ತಿರಕ್ಕೆ ತಲುಪಿ ಸುದ್ದಿಯನ್ನು ಮುಟ್ಟಿಸಿದನು. ಆಗ ಷಹಜಾನನು ಬಹಳ ವೇಗವಾಗಿ ಬಂದು, ಸುಲ್ತಾನ್ ಅಹಮದ್ ಗುಜರಾತಿಯನ್ನು ಕಂಡನು.

ಮಲಿಕ್ ಇಸ್‌ಹಾಖ್‌ನ ಪತ್ರ ಮಹಮೂದ್ ಖಿಲ್ಜಿಗೆ:

ಸಾರಂಗಪುರದ ಶಾಸಕ, ಇಸ್‌ಹಾಖ್ ಬಿನ್ ಖುತುಬುಲ್ ಮಲ್ಕ್‌ನು, ಸುಲ್ತಾನ್ ಮಹಮೂದ್ ಖಿಲ್ಜಿಯ ಸೇವೆಯಲ್ಲಿ ಒಂದು ಅರ್ಜಿಯನ್ನು ಬರೆದು, ತನ್ನೆಲ್ಲಾ ತಪ್ಪುಗಳಿಗೂ ಕ್ಷಮೆಯನ್ನು ಯಾಚಿಸಿದನು. ಅರ್ಜಿಯಲ್ಲಿ ಇನ್ನೂ ಬರೆದಿದ್ದೇನೆಂದರೆ– ಷಹಜ಼ಾದ ಮಹಮ್ಮದನು ತಾವು ಬರುತ್ತಿರುವ ಸುದ್ದಿಯನ್ನು ತಿಳಿದು ಉಜ್ಜೈನಿಗೆ ಓಡಿ ಹೋದನೆಂದೂ, ಆದರೆ ಷಹಜ಼ಾದ ಉಮರನು ಸಾರಂಗಪುರವನ್ನು ಗೆಲ್ಲಬೇಕೆಂಬ ಉದ್ದೇಶದಿಂದ, ತನ್ನ ಸೈನ್ಯವನ್ನು ಇಲ್ಲಿ ಮೊದಲಿನಿಂದಲೇ ಇಟ್ಟಿದ್ದಾನೆಂದೂ, ಆತನ ಸಹಾಯಕ್ಕೆ ಸ್ವತಃ ಉಮರನು ಬರುತ್ತಿದ್ದಾನೆಂದು ತಿಳಿಸಿದನು. ಈ ಎಲ್ಲ ವಿಷಯಗಳನ್ನು ತನ್ನ ಅರ್ಜಿಯಲ್ಲಿ ಬರೆದು ಮಲಿಕ್ ಇಸ್‌ಹಾಖ್ ಬಿನ್ ಖುತುಬ್ ಉಲ್ ಮುಲ್ಕನು, ಸುಲ್ತಾನ್ ಮಹಮೂದ್ ಖಿಲ್ಜಿಗೆ ತಿಳಿಸಿದನು.

ಮಹಮೂದ್ ಖಿಲ್ಜಿಯು ಸಾರಂಗಪುರದಲ್ಲಿ:

ಈ ಪತ್ರವನ್ನು ಓದಿದ ಮಹಮೂದ್ ಖಿಲ್ಜಿಯು ಸಂತೋಷಪಟ್ಟನು. ಸುಲ್ತಾನ್‌ನು ಇಸ್‌ಹಾಖನ ತಪ್ಪುಗಳನ್ನು ಕ್ಷಮಿಸಿದನು. ಬಾದಷಹನು ತಾನು ಹೊರಡುವುದಕ್ಕೆ ಮುಂಚೆಯೇ ತಾಜ್‌ಖಾನನನ್ನು ಇಸ್‌ಹಾಖ್‌ನ ಸಹಾಯಕ್ಕೆ ಕಳುಹಿಸಿಕೊಟ್ಟನು. ತಾನೂ ಹಿಂದೆಯೇ ಹೊರಟನು. ಮಲಿಕ್ ಇಸ್‌ಹಾಖನು ನಗರದ ಪ್ರಮುಖ ವ್ಯಕ್ತಿಗಳೊಂದಿಗೆ ಹಾಗೂ ಅಮೀರರೊಂದಿಗೆ ಸುಲ್ತಾನ್ ಮಹಮೂದ್ ಖಿಲ್ಜಿಯ ಸ್ವಾಗತವನ್ನು ಮಾಡಿದನು. ಬಾದಷಹನು ಮಲಿಕ್ ಇಸ್‌ಹಾಖನಿಗೆ "ದೌಲತ್‌ಖಾನ್" ಎಂಬ ಬಿರುದನ್ನು ದಯಪಾಲಿಸಿ, ಒಂದು ಶಾಹಿ ಬಾವುಟವನ್ನು, ಶಾಹೀ ನಿಶಾನೆಗಳನ್ನು ನೀಡಿ ಗೌರವಿಸಿದನು. ಇಷ್ಟೇ ಅಲ್ಲದೆ ಒಂದು ಪ್ರಶಸ್ತಿಯನ್ನೂ, ಹತ್ತು ಸಾವಿರ ತಿನ್ಗೆ ಚಿನ್ನದ ನಾಣ್ಯಗಳನ್ನೂ ನೀಡಿದನು. ಇದೂ ಅಲ್ಲದೆ ಇಸ್‌ಹಾಖನ ಇತರೆ ಅಮೀರರಿಗೂ ಬಹುಮಾನಗಳನ್ನು ನೀಡಿ ಗೌರವಿಸಿದನು.

ಷಹಜ಼ಾದ ಉಮರನ ಪ್ರವೇಶ:

ಸುಲ್ತಾನ್ ಮಹಮೂದನು ಸಾರಂಗಪುರಕ್ಕೆ ತಲುಪಿದ ನಂತರ, ಸುಲ್ತಾನ್ ಅಹಮದ್ ಶಾಹನೂ ಉಜ್ಜಯಿನಿಯಿಂದ ಸಾರಂಗಪುರದತ್ತ ಬಂದನು. ಈತನ ಜೊತೆಯಲ್ಲಿ ಈತ ಮೂವತ್ತು ಸಾವಿರ ಸವಾರರೂ, ಮುನ್ನೂರು ಆನೆಗಳ ಸೈನ್ಯವೂ

ಸೇರಿ, ಒಂದು ವಿಶಾಲ ಸೈನ್ಯವೇ ಇತ್ತು. ಸುಲ್ತಾನ್ ಮಹಮೂದ್ ಖಿಲ್ಜಿಯು ಮೊದಲು ಉಮರ್‌ಖಾನನ ಮೇಲೆ ಯುದ್ಧವನ್ನು ಮಾಡಲು ನಿಶ್ಚಯಿಸಿ ರಾತ್ರಿಯ ಮೂರನೇ ಜಾವದಲ್ಲಿಯೇ ಹೊರಟನು. ಎರಡೂ ಕಡೆ ಸೈನ್ಯಕ್ಕೆ ಇನ್ನೂ ಆರು ಮೈಲಿ ದೂರವಿದ್ದಂತೆಯೇ ಬಾದಶಹ ಖಿಲ್ಜಿಯು ಶತ್ರು ಸೈನ್ಯದ ಶಕ್ತಿ ಸಾಮರ್ಥ್ಯವನ್ನು ತಿಳಿದುಬರಲು, ಹಾಗೂ ಎಷ್ಟು ಹೊತ್ತಿನಲ್ಲಿ ಯುದ್ಧವನ್ನು ಮಾಡಬೇಕೆಂದು ನಿರ್ಧರಿಸಲು, ಕೆಲವರನ್ನು ಕಳುಹಿಸಿದನು. ಇದಾದ ನಂತರ ಮಹಮೂದ್ ಖಿಲ್ಜಿಯು ನಿಝಾಮಲ್ ಮುಲ್ಕ್‌ನನ್ನು, ಮಲಿಕ್ ಅಹಮದನನ್ನೂ ಹಾಗೂ ಇನ್ನಿತರೆ ಅಮೀರರನ್ನು, ಎಲ್ಲಿ ಯುದ್ಧವನ್ನು ಮಾಡುವುದು ಎಂಬುದನ್ನು ತಿಳಿದು ಬರಲು ಕಳುಹಿಸಿದನು. ಬೆಳಗಾದ ತಕ್ಷಣ ತನ್ನ ಸೈನ್ಯವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿ ಷಹಜ಼ಾದ ಉಮರನೊಂದಿಗೆ ಯುದ್ಧವನ್ನು ಮಾಡಲು ಹೊರಟನು.

ಯುದ್ಧದ ಸಿದ್ಧತೆಗಳು:

ಷಹಜ಼ಾದ ಉಮರನಿಗೂ ಸುಲ್ತಾನ್ ಮಹಮೂದ್ ಖಿಲ್ಜಿಯು ಯುದ್ಧಕ್ಕೆ ಬರುತ್ತಿದ್ದಾನೆಂಬ ಸುದ್ದಿಯು ತಿಳಿಯಿತು. ಆತನೂ ಯುದ್ಧದ ಸಿದ್ಧತೆಗಳನ್ನು ಮಾಡಿಕೊಂಡು ಸುಲ್ತಾನ್ ಖಿಲ್ಜಿಯ ಎದುರಿಗೆ ಬಂದನು. ಷಹಜ಼ಾದನು ತನ್ನ ಸೈನ್ಯವನ್ನು ಸುಲ್ತಾನ್ ಖಿಲ್ಜಿಯೊಂದಿಗೆ ಯುದ್ಧಕ್ಕೆ ಕಳುಹಿಸಿದನು. ತಾನು ಸ್ವತಃ ಸೈನ್ಯದೊಂದಿಗೆ ಬೆಟ್ಟದ ಹಿಂದಿನಿಂದ ಆಕ್ರಮಣವನ್ನು ಮಾಡಲು ಅವಿತು ಕುಳಿತನು. ಹಾಗೂ ಸುಲ್ತಾನ್ ಮಹಮೂದ್ ಖಿಲ್ಜಿಯು ಸೈನ್ಯವನ್ನು ಎದುರು ನೋಡಲಾರಂಭಿಸಿದನು.

ಷಹಜಾದ ಉಮರನ ಇಚ್ಛೆ:

ಅಕಸ್ಮಾತ್ತಾಗಿ ಒಬ್ಬ ವ್ಯಕ್ತಿಯು ಬಂದು ಸುಲ್ತಾನ್ ಮಹಮೂದ್ ಖಿಲ್ಜಿಗೆ ತಿಳಿಸಿದುದೇನೆಂದರೆ – "ಷಹಜ಼ಾದ ಉಮರನು ತನ್ನ ಸೈನ್ಯದೊಂದಿಗೆ ಬೆಟ್ಟದ ಹಿಂದೆ ಅವಿತು ಕುಳಿತಿದ್ದಾನೆಂದು". ಮಹಮೂದ್ ಖಿಲ್ಜಿಯು ತಕ್ಷಣ ತನ್ನ ಸೈನ್ಯವನ್ನು ತೆಗೆದುಕೊಂಡು ಷಹಜ಼ಾದ ಉಮರನು ಅವಿತಿರುವತ್ತ ಹೊರಟನು. ಷಹಜ಼ಾದನಿಗೆ ಈ ವಿಷಯ ತಿಳಿದಾಗ ಆತನು ತನ್ನ ಸೈನ್ಯವನ್ನು ಕುರಿತು ಹೀಗೆಂದನು – "ಮಹಮೂದ್ ಖಿಲ್ಜಿಯು ಒಬ್ಬ ಸೇವಕನಿದ್ದಂತೆ, ಆತನಿಗೆ ಹೆದರಿ ನಾವು ಹಿಂದಕ್ಕೆ ಓಡಿ ಹೋಗುವುದು ನಮ್ಮ ಗೌರವಕ್ಕೆ ಧಕ್ಕೆಯಾಗುತ್ತದೆ. ಯುದ್ಧ ಮೈದಾನದಲ್ಲಿ ನಾವು ದೃಢವಾಗಿ ನಿಂತು, ನಮ್ಮ ಪ್ರಾಣಗಳನ್ನು ಕೊಡುವುದೇ ಮೇಲು. ಸೋಲೊಪ್ಪುವುದು ಬೇಡ"ವೆಂದು ವೀರಾವೇಶದಿಂದ ನುಡಿದನು.

ಷಹಜ಼ಾದನ ಕೊಲೆ:

ಇದಾದ ನಂತರ ಸುಲ್ತಾನ್ ಮಹಮೂದ್ ಖಿಲ್ಜಿಯ ಸೈನ್ಯದ ಮೇಲೆ ಆಕ್ರಮಣವನ್ನು

ಮಾಡಿದನು. ಯುದ್ಧವನ್ನು ಮಾಡುತ್ತಾ ಖಿಲ್ಜಿಯ ಸೈನ್ಯಕ್ಕೆ ಸೆರೆ ಸಿಕ್ಕಿಬಿಟ್ಟನು. ಮಹಮೂದ್ ಖಿಲ್ಜಿಯ ಆಜ್ಞೆಯಂತೆ ಆತನನ್ನು ಯುದ್ಧ ಮೈದಾನದಲ್ಲೇ ಕೊಲೆ ಮಾಡಲಾಯಿತು. ಷಹಜ್ಹಾದನ ಸೈನ್ಯದ ಸರದಾರನು ಈ ಕೊಲೆಯನ್ನು ನೋಡಿ ಬಹಳ ಚಿಂತಾಕ್ರಾಂತನಾದನು. ಆತನು ಸುಲ್ತಾನ್ ಮಹಮೂದ್ ಖಿಲ್ಜಿಯ ಹತ್ತಿರ ಒಂದು ಸಂದೇಶವನ್ನು ಕಳುಹಿಸಿ – "ತಾವು ದಯವಿಟ್ಟು ಇಂದು ಯುದ್ಧವನ್ನು ನಿಲ್ಲಿಸಿ. ನಾಳೆ ನಾವು ನಿಮ್ಮ ಸೇವೆಯಲ್ಲಿ ಹಾಜರಾಗಲು ಸಿದ್ಧರಿದ್ದೇವೆ. ಹಾಗೂ ನಾವು ನಿಮ್ಮನ್ನೇ ನಮ್ಮ ಬಾದಷಹನೆಂದು ಸ್ವೀಕರಿಸಲಿದ್ದೇವೆ" ಎಂದು ಬೇಡಿಕೊಂಡನು.

ಷಹಜ್ಹಾದನ ಸೈನ್ಯ ತಮ್ಮ ದೇಶಕ್ಕೆ ಪ್ರಯಾಣ:

ಈ ಬೇಡಿಕೆಯಿಂದಾಗಿ ಸೈನ್ಯಗಳು ತಮ್ಮ-ತಮ್ಮ ಬಿಡಾರಗಳಿಗೆ ಹಿಂದಿರುಗಿದವು. ಯುದ್ಧವನ್ನು ನಿಲ್ಲಿಸಲಾಯಿತು. ರಾತ್ರಿಯ ಹೊತ್ತಿನಲ್ಲಿ ಷಹಜ್ಹಾದ ಉಮರನ ಸೈನ್ಯವು ತಮ್ಮ ದೇಶದತ್ತ ಪ್ರಯಾಣವನ್ನು ಬೆಳೆಸಿತು. ಈ ಸೈನ್ಯದಲ್ಲಿದ್ದ ಒಬ್ಬ ವ್ಯಕ್ತಿ ಮಲಿಕ್ ಸುಲೇಮಾನ್ ಬಿನ್ ಮುಶೀರುಲ್ ಮುಲ್ಕನನ್ನು ತಮ್ಮ ಮುಖಂಡನೆಂದು ಘೋಷಿಸಿಕೊಂಡರು. ಈತನು ಷಹಜ್ಹಾದನ ಸಂಬಂಧಿಕನಾಗಿದ್ದನು. ಮಲಿಕ್ ಸುಲೇಮಾನ್‌ನನ್ನು "ಸುಲೇಮಾನ್ ಷಹಾಬುದ್ದೀನ್" ಎಂಬ ಬಿರುದಿನಿಂದ ಗೌರವಿಸಿದನು.

ಸುಲ್ತಾನ್ ಅಹಮದ್ ಗುಜರಾತಿಯೊಂದಿಗೆ ಯುದ್ಧದ ಇಚ್ಛೆ:

ಸುಲ್ತಾನ್ ಮಹಮೂದ್ ಖಿಲ್ಜಿಯು ತನ್ನ ಸೈನ್ಯದ ಒಂದು ಭಾಗವನ್ನು ಸುಲ್ತಾನ್ ಷಹಾಬುದ್ದೀನನನ್ನು ಎದುರಿಸಲು ಬಿಟ್ಟು, ತಾನು ಸ್ವತಃ ಅಹಮದ್ ಶಾಹ್ ಗುಜರಾತಿಯನ್ನೆದುರಿಸಲು ಹೊರಟನು. ಇನ್ನೂ ಎರಡು ಕಡೆಯ ಸೈನ್ಯಗಳು ಎದುರು ಬದುರಾಗಲು ಬಹಳ ದೂರವೇ ಇದ್ದುವು. ಸುಲ್ತಾನ್ ಅಹಮದ್ ಗುಜರಾತಿಯ ಸೈನ್ಯದಲ್ಲಿದ್ದ ಕೆಲವು ಶುದ್ಧ-ಪ್ರಾಮಾಣಿಕ ವ್ಯಕ್ತಿಗಳ ಕನಸಿನಲ್ಲಿ ಹಜ್ರತ್ ಮುಹಮ್ಮದ್ ಪೈಗಂಬರರು ಕಾಣಿಸಿಕೊಂಡಂತೆಯೂ, ಹಾಗೂ ಅವರು ಹೀಗೆ ಹೇಳಿದಂತೆ – ಅಂದರೆ, "ನಿಮ್ಮ ಮೇಲೆ ಆಕಾಶದಿಂದಲೇ ಒಂದು ದೊಡ್ಡ ಕೇಡು ಸಂಭವಿಸುವಂತಿದೆ, ನೀವು ನಿಮ್ಮ ಸುಲ್ತಾನ್ ಅಹಮದನಿಗೆ, ಯುದ್ಧ ಮಾಡದೆ, ತನ್ನ ದೇಶಕ್ಕೆ ವಾಪಸ್ಸಾಗುವುದು ಒಳ್ಳೆಯದು" ಎಂದು ಹೇಳಿದಂತಾಯಿತು.

ಗುಜರಾತಿ ಸೈನ್ಯದಲ್ಲಿ ಸಂದೇಹ ಮತ್ತು ವಾಪಸ್ಸಾದರು:

ಈ ಕನಸನ್ನು ಪ್ರಾಮಾಣಿಕ ವ್ಯಕ್ತಿಗಳು ವಿವರಿಸಿ ಹೇಳಿದರು. ಆದರೆ ಸುಲ್ತಾನ್ ಗುಜರಾತಿಯು ಇದನ್ನು ನಂಬದೆ ತಿರಸ್ಕರಿಸಿದನು. ಈ ತಿರಸ್ಕಾರದ ಫಲವಾಗಿ ಗುಜರಾತಿ ಸೈನಿಕರಲ್ಲಿ ಒಂದು ರೀತಿಯ ಖಾಯಿಲೆಯು ಪ್ರಾರಂಭವಾಯಿತು.

ಸೈನ್ಯದಲ್ಲಿನ ಸೈನಿಕರು ಇದ್ದಕ್ಕಿದ್ದಂತೆ ಮರಣ ಹೊಂದಲಾರಂಭಿಸಿದರು. ಮರಣ ಹೇಗೆ ಆಗುತ್ತಿದ್ದುದೆಂದರೆ, ಸತ್ತವರಿಗೆ ಗೋರಿಗಳನ್ನು ತೋಡುವುದೂ ಕಷ್ಟವಾಗತೊಡಗಿತು. ಕೊನೆಗೆ ಚಿಂತಿತನಾದ ಅಹಮದ್ ಗುಜರಾತಿಯು ತನ್ನ ಸೈನ್ಯದೊಂದಿಗೆ ತನ್ನ ದೇಶಕ್ಕೆ ಹಿಂತಿರುಗಿದನು.

ಚಂದೇರಿಗೆ ರವಾನೆ:

ಸುಲ್ತಾನ್ ಅಹಮದ್ ಗುಜರಾತಿಯು ಷಹಜ಼ಾದ ಮಸೂದನಿಗೆ ವಾಗ್ದಾನ ಮಾಡಿದ್ದೇನೆಂದರೆ – "ನಾನು ಮುಂದಿನ ವರ್ಷ ಈ ದೇಶವನ್ನು ಗೆದ್ದು ನಿನ್ನ ಸುಪರ್ದಿಗೆ ಬಿಡುತ್ತೇನೆ" ಎಂದು. ಸುಲ್ತಾನ್ ಮಹಮೂದ್ ಖಿಲ್ಜಿಯೂ ಸಹ ತನ್ನ ದೇಶ ಮಾಂಡುವಿನತ್ತ ರವಾನೆಯಾದನು. ಅಲ್ಲಿಗೆ ತಲುಪಿ, ಆತನು ತನ್ನ ಸೈನ್ಯವನ್ನು ಏಳು ದಿನಗಳವರೆಗೆ ಸರಿಪಡಿಸಿಕೊಂಡನು. ಚಂದೇರಿಯ ವಿದ್ರೋಹವನ್ನು ಅಡಗಿಸಲು ಹೊರಟನು.

ಷಹಾಬುದ್ದೀನನ ಮರಣ:

ಮಲಿಕ್ ಸುಲೇಮಾನ್ ಉರ್ಫ್ ಸುಲ್ತಾನ್ ಷಹಾಬುದ್ದೀನ್‌ನು ಕೋಟೆಯಿಂದ ಹೊರಬಂದನು. ಆತನು ಸುಲ್ತಾನ್ ಮಹಮೂದ್ ಖಿಲ್ಜಿಯ ಸೈನ್ಯದೊಂದಿಗೆ ಬಹಳ ವೀರಾವೇಶದಿಂದ ಹೋರಾಡಿದನು. ಸುಲ್ತಾನ್ ಮಹಮೂದ್‌ನ ಸೈನ್ಯದ ಶಕ್ತಿಯು ಷಹಾಬುದ್ದೀನನ ಶಕ್ತಿಗಿಂತ ಹೆಚ್ಚಾಗಿದ್ದಿತು. ಷಹಾಬುದ್ದೀನನು ಯುದ್ಧ ಮೈದಾನದಿಂದ ಕಾಲ್ತೆಗೆದು ಕೋಟೆಯೊಳಗೆ ಸೇರಿಕೊಂಡನು. ಮೂರು ದಿನಗಳ ನಂತರ ಷಹಾಬುದ್ದೀನನ ಆರೋಗ್ಯವು ಕೆಟ್ಟು, ಆತನು ಮರಣ ಹೊಂದಿದನು.

ಚಂದೇರಿಯ ಯುದ್ಧ:

ಕೋಟೆಯ ಒಳಗಿನ ಮುಖಂಡರುಗಳು ಬೇರೊಬ್ಬ ವ್ಯಕ್ತಿಯನ್ನು ಸುಲ್ತಾನ್ ಷಹಾಬುದ್ದೀನ್ ಎಂಬ ಬಿರುದಿನಲ್ಲಿ ತಮ್ಮ ಬಾದಷಹನೆಂದು ಘೋಷಿಸಿಕೊಂಡರು. ಆತನ ಮುಖಂಡತ್ವದಲ್ಲಿ ಯುದ್ಧದ ಸಿದ್ಧತೆಗಳನ್ನು ಮಾಡಿಕೊಂಡರು. ಚಂದೇರಿಯ ಅಮೀರರು ಸಮಯ, ಸಂದರ್ಭವನ್ನು ನೋಡಿ ಕೋಟೆಯಿಂದ ಹೊರಬಂದರು. ಸುಲ್ತಾನ್ ಮಹಮೂದ್ ಖಿಲ್ಜಿಯ ಎದುರಿನಲ್ಲಿ ಯುದ್ಧಕ್ಕೆ ನಿಂತರು. ಆದರೆ ಮೊದಲಿನಂತೆಯೇ ಯುದ್ಧ ಮೈದಾನದಿಂದ ಓಡಿ ಕೋಟೆಯ ಒಳಗೆ ಸೇರಿಕೊಂಡರು.

ಸುಲ್ತಾನ್ ಮಹಮೂದ್‌ನು ಚಂದೇರಿ ಕೋಟೆಯ ಒಳಗೆ ಪ್ರವೇಶ:

ಸುಲ್ತಾನ್ ಮಹಮೂದ್‌ನು ಕೋಟೆಯ ಮುತ್ತಿಗೆಯನ್ನು ಮುಂದುವರಿಸಿದ್ದನು. ಈ ಮುತ್ತಿಗೆಗೆ ಸುಮಾರು ಎಂಟು ತಿಂಗಳು ಹಿಡಿದಿತ್ತು. ಆದರೂ ಸಫಲತೆ ಸಿಕ್ಕಿರಲಿಲ್ಲ.

ಇಷ್ಟು ದಿನಗಳಲ್ಲೂ ಏನಾದರೂ ಮಾಡಿ ಕೋಟೆಯ ಒಳಗೆ ಪ್ರವೇಶಿಸಲು ಉಪಾಯಗಳನ್ನು ಹುಡುಕುತ್ತಲೇ ಇದ್ದನು. ಕೊನೆಗೂ ಅನೇಕ ಪ್ರಯತ್ನಗಳಿಂದಾಗಿ ಆತನಿಗೆ ಅವಕಾಶ ದೊರೆತುಬಿಟ್ಟಿತು. ಒಂದು ದಿನದ ರಾತ್ರಿಯಲ್ಲಿ ಒಳಗೆ ಹೊಕ್ಕೇಬಿಟ್ಟನು. ಆತನ ಹಿಂದೆ ಆತನ ಸೈನ್ಯವೂ ಒಳಹೊಕ್ಕಿತು. ಈ ಸೈನ್ಯದವರು ಒಳಗಿನ ಅನೇಕ ಸೈನಿಕರನ್ನು ಕೊಂದರು. ಉಳಿದ ಸೈನಿಕರು ಬೆಟ್ಟದ ಒಂದು ಭಾಗದಲ್ಲಿ ಆಶ್ರಯವನ್ನು ಪಡೆದುಕೊಂಡರು.

ಕೋಟೆಯೊಳಗಿದ್ದವರು ಶಾಂತಿಯನ್ನು ಬಯಸಿದರು:

ಆಶ್ರಯವನ್ನು ಪಡೆದ ಸೈನಿಕರು ಬಹಳ ದಿನಗಳ ತನಕ ಮಹಮೂದ್‌ನ ಕಣ್ಣಿನಿಂದ ತಪ್ಪಿಸಿಕೊಂಡಿರಲು ಸಾಧ್ಯವಾಗಲಿಲ್ಲ. ಬಾದಷಹನು ಅವರನ್ನು ಪತ್ತೆ ಮಾಡಿದನು. ಕೋಟೆಯ ಒಳಗಿದ್ದವರು ಇನ್ನು ಮುಂದೆ ನಮಗೆ ಉಳಿಗಾಲವಿಲ್ಲವೆಂದು ತಿಳಿದು, ಸುಲ್ತಾನ್ ಮಹಮೂದ್ ಖಿಲ್ಜಿಯೊಡನೆ ಶಾಂತಿಯನ್ನು ಬಯಸಿ, ಪ್ರಾಣ ರಕ್ಷಣೆಯನ್ನು ಬೇಡಿಕೊಂಡರು. ಸುಲ್ತಾನ್ ಮಹಮೂದನು ಅವರ ಬೇಡಿಕೆಯನ್ನು ಸ್ವೀಕರಿಸಿದನು. ಆದರೆ ಒಂದು ಷರತ್ತನ್ನು ಅವರ ಮುಂದಿಟ್ಟನು. ಅದೇನೆಂದರೆ, ಕೋಟೆಯಲ್ಲಿರುವ ಎಲ್ಲರೂ ತಮ್ಮ ಮಕ್ಕಳು ಹಾಗೂ ಎಲ್ಲ ಸಾಮಾನುಗಳೊಂದಿಗೆ ಪೇಟೆಯಲ್ಲಿ ಬರಬೇಕು. ಏಕೆಂದರೆ, ಸಾಮಾನ್ಯ ಜನರಿಗೆ, ಬಾದಷಹನು ಒಳ್ಳೆಯ ಚಾರಿತ್ರ್ಯ ಉಳ್ಳವನೆಂದೂ, ಹಾಗು ತನ್ನ ಮಾತನ್ನು ಉಳಿಸಿಕೊಳ್ಳುವವನೆಂಬುದು ಗೊತ್ತಾಗಬೇಕು.

ದೊಂಗರ್‌ಸೀನ್‌ನ ವಿದ್ರೋಹ:

ಕೋಟೆಯ ಒಳಗಿದ್ದವರು ಬಾದಷಹನ ಈ ಷರತ್ತನ್ನು ಒಪ್ಪಿಕೊಂಡರು. ತಮ್ಮ ಮಕ್ಕಳ ಸಮೇತ ತಮ್ಮ ಎಲ್ಲ ಸಾಮಾನು ಸರಂಜಾಮುಗಳೊಂದಿಗೆ, ಕೋಟೆಯಿಂದ ಹೊರಬಂದರು. ಸುಲ್ತಾನ್ ಮಹಮೂದ್ ಖಿಲ್ಜಿಯು "ಚಂದ್‌ಬರಿ" ಎಂಬ ಒಂದು ಹೊಸ ಶಾಸನವನ್ನು ಜಾರಿಗೆ ತಂದನು. ನಂತರ ಮಾಂಡು ವಾಪಸ್ ಹೋಗಲು ಮನಸ್ಸು ಮಾಡಿದನು. ಈ ಸಂಬಂಧದಲ್ಲಿ ಸಿದ್ಧತೆಗಳನ್ನು ಮಾಡಿಕೊಳ್ಳುವಷ್ಟರಲ್ಲಿ, ಗುಪ್ತಚರರು ಈ ಸುದ್ದಿಯನ್ನು ತಂದರು. ಏನೆಂದರೆ, ದೋಂಗರ್‌ಸೀನನು ರಾಜ ಗ್ವಾಲಿಯರ್‌ನ ಸಹಾಯದಿಂದ ಮುತ್ತಿಗೆಯನ್ನು ಹಾಕಿದ್ದಾನೆಂದು ತಿಳಿದು ಸುಲ್ತಾನ್ ಮಹಮೂದ್ ಖಿಲ್ಜಿಯು ಮಾಂಡುವಿಗೆ ಹೋಗುವ ವಿಚಾರವನ್ನು ಕೈಬಿಟ್ಟನು.

ಮಹಮೂದ್ ಖಿಲ್ಜಿಯು ಗ್ವಾಲಿಯರ್‌ನಲ್ಲಿ:

ಆ ದಿನಗಳಲ್ಲಿ ಇಲ್ಲಿ ಬಹಳವಾಗಿ ಮಳೆ ಸುರಿಯುತ್ತಿತ್ತು. ಎರಡನೆಯದಾಗಿ ಚಂದೇರಿ ಕೋಟೆಯ ಮುತ್ತಿಗೆಯು ಬಹಳ ಕಾಲ ಹಿಡಿದಿದ್ದರಿಂದ ಸುಲ್ತಾನ್

ಮಹಮೂದ್‌ನ ಸೈನ್ಯವು ಬಳಲಿತ್ತು. ಇಷ್ಟಾದರೂ ಸುಲ್ತಾನ್ ಮಹಮೂದನು ಗ್ವಾಲಿಯರ್ ಕಡೆಗೆ ಪ್ರಯಾಣವನ್ನು ಬೆಳೆಸಿದನು. ಇಲ್ಲಿಗೆ ತಲುಪಿ ಬಾದಷಹನು ವಿನಾಶ, ಲೂಟಿಗಳನ್ನು ಪ್ರಾರಂಭಿಸಿದನು.

ರಾಜಪುತ್ರರೊಂದಿಗೆ ಯುದ್ಧ:

ರಾಜಪುತ್ರರ ಒಂದು ಸೈನ್ಯವು ಸುಲ್ತಾನ್ ಮಹಮೂದನೊಂದಿಗೆ ಯುದ್ಧವನ್ನು ಮಾಡಲು ಕೋಟೆಯಿಂದ ಹೊರಬಂದಿತು. ಸುಲ್ತಾನ್ ಮಹಮೂದನ ಸೈನ್ಯವು ರಾಜಪುತ್ರರ ಸೈನ್ಯಕ್ಕಿಂತ ಹೆಚ್ಚಾಗಿತ್ತು. ಆದ್ದರಿಂದ ರಾಜಪುತ್ರರು ಯುದ್ಧ ಮೈದಾನದಲ್ಲಿ ಬಹಳ ಹೊತ್ತಿನ ತನಕ ನಿಲ್ಲಲಿಲ್ಲ. ಕೋಟೆಯ ಒಳಗೆ ಪ್ರವೇಶಿಸಿದರು. ದೊಂಗರ್‌ಸೀನನಿಗೆ ಈ ವಿಷಯವು ತಿಳಿದು, ನಗರದ ಹಿಂಭಾಗದಿಂದ ಗ್ವಾಲಿಯರ್ ಕಡೆಗೆ ಓಡಿದನು. ಇದಾದ ನಂತರ ಸುಲ್ತಾನ್ ಮಹಮೂದ್ ಖಿಲ್ಜಿಯು ಮಾಂಡುವಿನತ್ತ ಹಿಂದಿರುಗಿದನು. ಗ್ವಾಲಿಯರ್ ಕೋಟೆಯನ್ನು ವಶಪಡಿಸಿಕೊಳ್ಳುವ ಇಚ್ಛೆಯನ್ನು ಕೈಬಿಟ್ಟನು. ಏಕೆಂದರೆ 'ನೋಕೋ' ಪಟ್ಟಣದಿಂದ ದೊಂಗರ್‌ಸೀನನ ಹಿಡಿತದಿಂದ ತಪ್ಪಿಸಕೊಳ್ಳಬೇಕಾಗಿತ್ತು. ಈ ಉದ್ದೇಶ ಸಫಲವಾಗಿತ್ತು.

ಜಾಮಾಮಸೀದಿ ಮತ್ತು ಸುಲ್ತಾನ್ ಹೋಷಂಗನ ಗೋರಿಗಳ ನಿರ್ಮಾಣ:

ಸುಲ್ತಾನ್ ಮಹಮೂದ್ ಖಿಲ್ಜಿಯು ಹಿಜರಿಶಕೆ-೮೪೪ರಲ್ಲಿ ಸುಲ್ತಾನ್ ಹೋಷಂಗ್‌ನ ಗೋರಿ ಮತ್ತು ಜಾಮಾ ಮಸೀದಿಯನ್ನು ("ಜೊರಾಮುಯಿ" ಬಾಗಿಲ ಹತ್ತಿರವಿದೆ.) ಇವುಗಳ ನಿರ್ಮಾಣ ಕಾರ್ಯವನ್ನು ಕೈಗೊಂಡನು. ಇದು ೨೮ ಕಂಬಗಳ ಮೇಲೆ ನಿರ್ಮಿತವಾಗಿದೆ. ಕೆಲವೇ ಕಾಲದಲ್ಲಿ ಈ ಕಟ್ಟಡಗಳು ನಿರ್ಮಾಣಗೊಂಡವು.

ದೆಹಲಿಯ ಅಮೀರರು ಹಾಗು ಮುಖಂಡರುಗಳ ಪತ್ರಗಳು:

ಹಿಜರಿ ೮೪೪ರಲ್ಲಿ ಸುಲ್ತಾನ್ ಮಹಮೂದ್ ಖಿಲ್ಜಿಯ ಹೆಸರಿಗೆ ಮೇವಾಡದ ಅಮೀರರಿಂದ ಮತ್ತು ದೆಹಲಿಯ ಮುಖಂಡರಿಂದ ಬಹಳ ಪತ್ರಗಳು ಬಂದವು. ಅವುಗಳಲ್ಲಿ ಬರೆದದ್ದೇನೆಂದರೆ, "ಸುಲ್ತಾನ್ ಮುಬಾರಕ್ ಶಾಹನು ಬಾದಷಹ ನಾಗುವಂಥ ಯೋಗ್ಯತೆಯನ್ನಿಟ್ಟುಕೊಂಡಿಲ್ಲ. ಆತನಿಗೆ ತನ್ನ ರಾಜ್ಯವನ್ನು ಸರಿಯಾಗಿ ಆಳುವ ಶಕ್ತಿಯೂ ಇಲ್ಲ. ಸಾಮ್ರಾಜ್ಯವು ಹಿಂಸೆ, ಜಗಳಗಳ ಕೇಂದ್ರವಾಗಿಬಿಟ್ಟಿದೆ. ಬಡವರ ಮೇಲೆ ಹಗಲು ರಾತ್ರಿ ಹಿಂಸೆಗಳು ನಡೆಯುತ್ತಿವೆ. ಅವರ ಕಷ್ಟಗಳನ್ನು ಯಾರೂ ಕೇಳುವವರಿಲ್ಲ. ಅಲ್ಲಾಹನು ನಿಮಗೆ ಬಾದಷಹನಾಗಿರುವಂತಹ ಎಲ್ಲ ಗುಣಗಳನ್ನೂ ನೀಡಿರುತ್ತಾನೆ. ಆದ್ದರಿಂದ ತಾವು ನಮ್ಮ ಕಡೆ ಗಮನವನ್ನು ನೀಡಬೇಕೆಂದು ನಮ್ಮ ಕೋರಿಕೆ. ಈ ಪ್ರದೇಶದ ಜನರು ತಮ್ಮ ಬಾದಷಹತ್ವವನ್ನು ಸ್ವೀಕರಿಸಲು ಬಹಳ ಉತ್ಸುಕರಾಗಿದ್ದಾರೆ".

ದೆಹಲಿಯನ್ನು ಗೆಲ್ಲುವ ಇಚ್ಛೆ:

ಅದೇ ವರ್ಷದ ಕೊನೆಯಲ್ಲಿ ಸುಲ್ತಾನ್ ಮಹಮೂದ್ ಖಿಲ್ಜಿಯು ತನ್ನ ಸೈನ್ಯವನ್ನು ಸಿದ್ಧಗೊಳಿಸಿಕೊಂಡು ದೆಹಲಿಯನ್ನು ವಶಪಡಿಸಿಕೊಳ್ಳುವ ಇಚ್ಛೆಯನ್ನು ವ್ಯಕ್ತಪಡಿಸಿದನು. ಈ ಉದ್ದೇಶಕ್ಕಾಗಿ ಹೊರಟನು. ಬಾದಷಹನು ಬಂದೋನ್ ಕಸಬಾಕ್ಕೆ ತಲುಪಿದಾಗ, ಯೂಸುಫ್‌ಖಾನ್ ಬಂದೋನಿಯು ಬಾದಷಹನ ಸೇವೆಯಲ್ಲಿ ಹಾಜರಾದನು. ಈ ಜಾಗದಿಂದ ಮುಂದೆ ಹೊರಟು, ಸುಲ್ತಾನ್ ಮಹಮೂದ್ ಖಿಲ್ಜಿಯು ಮುಂದುವರಿದಾಗ, ಎದುರಿನಿಂದ ಮುಬಾರಕ್ ಶಾಹನೂ ಸೈನ್ಯವನ್ನು ತೆಗೆದುಕೊಂಡು ಯುದ್ಧಕ್ಕೆ ಮುಂದಾದನು.

ಸುಲ್ತಾನ್ ಮುಬಾರಕ್‌ನ ಹೇಡಿತನ:

ಸುಲ್ತಾನ್ ಮುಬಾರಕ್‌ಶಾಹ್‌ನ ಸೈನ್ಯವು ಸುಲ್ತಾನ್ ಮಹಮೂದ್ ಖಿಲ್ಜಿಯ ಸೈನ್ಯಕ್ಕಿಂತ ಹೆಚ್ಚಾಗಿತ್ತು. ಮುಬಾರಕನು ಮಹಮೂದನ ಹತ್ತಿರ ತಲುಪಿದಾಗ ಚಿಂತಾಕ್ರಾಂತನಾದನು. ಈತನಿಗೆ ಯುದ್ಧ ಸಂಯೋಜನೆ ಹೇಗೆ ಮಾಡಬೇಕೆಂಬುದೇ ಗೊತ್ತಿರಲಿಲ್ಲ. ಇದರಿಂದಾಗಿ ಮುಬಾರಕನು ಯುದ್ಧ ಮಾಡುವುದನ್ನು ಬಿಟ್ಟು ದೆಹಲಿಯನ್ನು ತೆರವುಗೊಳಿಸಿ, ಪಂಜಾಬಿನತ್ತ ಓಡಿ ಹೋಗಲು ಮನಸ್ಸು ಮಾಡಿದನು.

ಸುಲ್ತಾನ್ ಮುಬಾರಕನ ಮನಸ್ಸು ಬದಲಾವಣೆ:

ಸುಲ್ತಾನ್ ಮುಬಾರಕನ ಈ ಉದ್ದೇಶ ತೀರಾ ಹೇಡಿತನದ್ದಾಗಿತ್ತು. ಆತನೇ ತನ್ನ ಈ ಹೇಡಿತನದ ಉದ್ದೇಶದ ಬಗ್ಗೆ ಪುನರ್ಪರಿಶೀಲನೆಯನ್ನು ಮಾಡಿಕೊಂಡು, ನಾನು ಒಂದು ವೇಳೆ ಯುದ್ಧದಿಂದ ಹಿಮ್ಮೆಟ್ಟಿದರೆ, ನನಗೆ ತುಂಬಾ ಅವಮಾನ ವಾಗುವುದೆಂದೂ, ನನ್ನ ಅಮೀರರೇ ನನಗೆ ಛೀಮಾರಿ ಹಾಕುವರೆಂದೂ ತಿಳಿದುಕೊಂಡನು. ತಕ್ಷಣ ತನ್ನ ಮನಸ್ಸನ್ನು ಬದಲಾಯಿಸಿ, ಸುಲ್ತಾನ್ ಮಹಮೂದ್ ಖಿಲ್ಜಿಯ ಸೈನ್ಯದೊಂದಿಗೆ ಯುದ್ಧವನ್ನು ಮಾಡಲು ತೀರ್ಮಾನಿಸಿದನು. ಅಮೀರರೆಲ್ಲರು ತನ್ನ ಷಹಜಾದನೊಂದಿಗೆ ಯುದ್ಧವನ್ನು ಸಾರಲು ಆಜ್ಞಾಪಿಸಿದನು.

ಯುದ್ಧ ಸಿದ್ಧತೆಗಳು:

ದೆಹಲಿಯ ಅಮೀರರು ತಮ್ಮ ಬಾದಷಹನ ಆಜ್ಞಾನುಸಾರ ಸುಲ್ತಾನ್ ಮಹಮೂದ್ ಖಿಲ್ಜಿಯೊಂದಿಗೆ ಯುದ್ಧವನ್ನು ಮಾಡಲು ದೆಹಲಿಯಿಂದ ಹೊರಬಂದರು. ಮಲಿಕ್ ಬಹಲೂಲ್ ಲೋಧಿಯು ಆ ಕಾಲದ ಸುಲ್ತಾನ್ ಮುಬಾರಕನ ಸೇವಕನೂ, ಬಿಲ್ಲುಗಾರಿಕೆಯಲ್ಲಿ ನಿಸ್ಸೀಮನೂ, ಬಿಲ್ಲುಗಾರರ ಸೈನ್ಯದ ಸರದಾರನೂ ಆಗಿದ್ದನು. ಆತನು ತನ್ನ ಸೈನ್ಯದೊಂದಿಗೆ ಹೊರಟನು. ಮಹಮೂದ್ ಖಿಲ್ಜಿಗೆ ಗೊತ್ತಾದು ದೇನೆಂದರೆ, ಸುಲ್ತಾನ್ ಮುಬಾರಕನು ಸೈನ್ಯದ ಜೊತೆಯಲ್ಲಿ ಬರುತ್ತಿಲ್ಲವೆಂಬ ಸುದ್ದಿ.

ಇದನ್ನು ತಿಳಿದು ತಾನೂ ಸಹ ತನ್ನ ಹತ್ತಿರ ಸ್ವಲ್ಪ ಸೈನ್ಯವನ್ನಿಟ್ಟುಕೊಂಡು, ಉಳಿದ ಸೈನ್ಯವನ್ನು ತನ್ನ ಇಬ್ಬರು ಮಕ್ಕಳಾದ ಘಿಯಾಸುದ್ದೀನ್ ಮತ್ತು ಖದೀರ್‌ಖಾನರ ಅಧೀನದಲ್ಲಿ ಯುದ್ಧಕ್ಕೆ ಕಳುಹಿಸಿಕೊಟ್ಟನು.

ಯುದ್ಧ:

ಎರಡೂ ಸೈನ್ಯಗಳುಎದುರಾದವು. ಮಧ್ಯಾಹ್ನದಿಂದ ರಾತ್ರಿಯವರೆಗೂ ಯುದ್ಧವು ನಡೆಯಿತು. ಎರಡೂ ಕಡೆಯ ಸೈನಿಕರು ತಮ್ಮ-ತಮ್ಮ ಶೌರ್ಯ ಪ್ರದರ್ಶನವನ್ನು ಮಾಡಿದರು. ತಮ್ಮ-ತಮ್ಮ ಪ್ರಾಣಗಳನ್ನು ಪಣಕ್ಕಿಟ್ಟು ಹೋರಾಡಿದರು. ಇದಾದ ನಂತರ ಎರಡೂ ಕಡೆಗಳಿಂದ ಯುದ್ಧವನ್ನು ನಿಲ್ಲಿಸುವ ನಗಾರಿಗಳು ಬಾರಿಸ ಲಾರಂಭಿಸಿದವು. ಇಬ್ಬರೂ ತಮ್ಮ-ತಮ್ಮ ಬಿಡಾರಗಳಿಗೆ ವಾಪಸ್ಸಾದರು.

ಮಹಮೂದ್ ಖಿಲ್ಜಿಯ ಭಯಾನಕ ಕನಸು:

ಆಕಸ್ಮಿಕವಾಗಿ ಸುಲ್ತಾನ್ ಮಹಮೂದ್ ಖಿಲ್ಜಿಯು ಆ ರಾತ್ರಿ ಒಂದು ಕನಸನ್ನು ಕಂಡನು. ಚಂದೇರಿಯ ಕೆಲವು ಪಿತೂರಿಕೋರರು, ದುಷ್ಟರು ಮಾಂಡುವಿನ ಶಾದಿಯಾಬಾದ್ ಆಬಾದ್ ಕೋಟೆಯನ್ನು ಆಕ್ರಮಿಸಿಕೊಂಡಿದ್ದಾರೆಂದೂ, ದಿವಂಗತ ಸುಲ್ತಾನ್ ಹೋಷಂಗನ ಗೋರಿಯಿಂದ ಬಾದಷಹ ಯೋಗ್ಯ ಶ್ವೇತಛತ್ರಯನ್ನು ತೆಗೆದುಕೊಂಡು ಹೋಗಿ ಯಾರಿಗೂ ಬೇಡವಾದ ಒಬ್ಬ ಅಯೋಗ್ಯನ ತಲೆಯ ಮೇಲೆ ಇಟ್ಟಿರುವಂತೆಯೂ ಕನಸನ್ನು ಕಂಡನು. ಸುಲ್ತಾನ್ ಮಹಮೂದನ ಮುಖ ಚಿಂತೆಗೆ ಒಳಗಾದಂತೆ ಕಾಣಿಸಿತು.

ಸುಲ್ತಾನ್ ಮುಬಾರಕನೊಂದಿಗೆ ಸಂಧಿ, ಮಹಮೂದನು ವಾಪಸ್:

ಸುಲ್ತಾನ್ ಮಹಮೂದನು ಬಹಳ ಚಿಂತಾಕ್ರಾಂತನಾದನು. ಏನಾದರೂ ಉಪಾಯವನ್ನು ಮಾಡಿ, ಇಲ್ಲಿಂದ ಸುರಕ್ಷಿತವಾಗಿ ಮಾಳವ ದೇಶವನ್ನು ತಲುಪ ಬೇಕಾಗಿದೆಯೆಂದು ತುಂಬಾ ಯೋಚಿಸಿದನು. ಸುಲ್ತಾನ್ ಮಹಮೂದನು ಈ ಚಿಂತೆಯಲ್ಲಿ ಮುಳುಗಿದ್ದಾಗ, ಸುಲ್ತಾನ್ ಮುಬಾರಕನೂ ತನ್ನ ಹೇಡಿತನದಿಂದಾಗಿ ತನ್ನ ಅಮೀರರನ್ನು ಸುಲ್ತಾನ್ ಖಿಲ್ಜಿಯ ಹತ್ತಿರ ಸಂಧಿ ಮಾಡಿಕೊಳ್ಳುವ ಪ್ರಸ್ತಾಪದೊಂದಿಗೆ ಕಳುಹಿಸಿಕೊಟ್ಟನು. 'ಕುರುಡನಿಗೇನು ಬೇಕೆಂದರೆ ಎರಡು ಕಣ್ಣು' ಎಂದಂತೆ ಸುಲ್ತಾನ್ ಮಹಮೂದ್ ಸಹ ತಕ್ಷಣ ಸಂಧಿ ಪ್ರಸ್ತಾಪವನ್ನು ಒಪ್ಪಿಕೊಂಡನು. ಮುಬಾರಕ್ ಶಾಹನಿಂದ ಒಂದು ರೀತಿಯ ಉಪಕಾರವೇ ಆಯಿತೆಂದು ಒಪ್ಪಿಕೊಂಡು ಮಾಳವದತ್ತ ರವಾನೆಯಾದನು.

ಮಹಮೂದ್ ಖಿಲ್ಜಿಯು ಮಾಂಡುವಿನಲ್ಲಿ:

ದಾರಿಯಲ್ಲಿದ್ದಂತೆಯೇ ಸುಲ್ತಾನ್ ಮಹಮೂದ್ ಖಿಲ್ಜಿಗೆ ತಿಳಿದುಬಂದದ್ದೇನೆಂದರೆ,

ಯಾವ ರಾತ್ರಿ ಆತನಿಗೆ ಕೆಟ್ಟ ಕನಸು ಬಿದ್ದಿತ್ತೋ, ಅಂದು ರಾತ್ರಿ ಮಾಂಡುವಿನ ಶಾದಿ ಆಬಾದನಲ್ಲಿ ಕೆಲವು ಪಿತೂರಿಕೋರರು ದಂಗೆ ಎದ್ದು, ಗಲಭೆಗಳನ್ನು ಎಬ್ಬಿಸಿದ್ದರು. ಆದರೆ ಆಝಂ ಹುಮಾಯೂನನು ತನ್ನ ಬುದ್ಧಿಶಕ್ತಿಯ ಸಹಾಯದಿಂದ ಆ ಪಿತೂರಿ, ಗಲಭೆಗಳನ್ನು ಅಡಗಿಸಿದ್ದನೆಂದು. ಕೆಲವು ಇತಿಹಾಸಕಾರರ ಪ್ರಕಾರ ಸುಲ್ತಾನ್ ಮಹಮೂದನಿಗೆ ಸುದ್ದಿ ತಿಳಿದಿದ್ದುದೇನೆಂದರೆ, ಸುಲ್ತಾನ್ ಅಹಮದ್ ಗುಜರಾತಿಯು ಮಾಳವದ ಮೇಲೆ ಆಕ್ರಮಣವನ್ನು ಮಾಡಿದ್ದಾನೆಂದು ತಿಳಿದಿತ್ತು. ಈ ಐತಿಹಾಸಿಕ ವರದಿಯೇ ಸರಿಯೆಂದು ತಿಳಿದುಬರುತ್ತದೆ. ಸುಲ್ತಾನ್ ಮಹಮೂದ್ ಖಿಲ್ಜಿಯು ಮಾಂಡು ತಲುಪಿದ ನಂತರ, ತನ್ನ ಅಮೀರರನ್ನು ಮತ್ತು ಶಾಸಕರನ್ನು ಬಹುಮಾನಗಳಿಂದ ಸನ್ಮಾನಿಸಿದನು.

ಜ಼ಫ಼ರಾಬಾದಿನ ಪ್ರಯಾಣ:

ಇದೇ ವರ್ಷ ಸುಲ್ತಾನ್ ಮಹಮೂದ್‌ನು ಜ಼ಫ಼ರಾಬಾದ್ ನಾಲ್ಚದಲ್ಲಿ ಪ್ರವೇಶಿಸಿದನು. ಆತನು ಇಲ್ಲಿ ಒಂದು ಸುಂದರವಾದ ತೋಟವನ್ನು ನಿರ್ಮಿಸಿದನು. ಈ ತೋಟದಲ್ಲಿ ಒಂದು ಸುಂದರವಾದ ಗುಂಬಜನ್ನೂ, ಅದಕ್ಕೆ ಹೊಂದಿಕೊಂಡಂತೆ ಕೆಲವು ಕಟ್ಟಡಗಳನ್ನೂ ನಿರ್ಮಿಸಿದನು. ಕೆಲವು ದಿನಗಳ ನಂತರ ಬಾದಷಹನು ತನ್ನ ಸೈನ್ಯವನ್ನು ಹೊಸ ರೀತಿಯಲ್ಲಿ ತರಬೇತುಗೊಳಿಸಿದನು. ಹಿಜರಿ ೮೪೬ರಲ್ಲಿ ರಾಜಪೂತರ ದಂಗೆಗಳನ್ನು ಅಡಗಿಸಲು ಚಿತ್ತೂರಿನತ್ತ ಹೊರಟನು.

ಕಾಲ್ಪಿಯ ಶಾಸಕನ ದುಷ್ಟ ಚಟುವಟಿಕೆಗಳು:

ಸುಲ್ತಾನ್ ಮಹಮೂದ್ ಖಿಲ್ಜಿಗೆ ಕಾಲ್ಪಿಯ ಶಾಸಕನಾದ, ನಸೀರ್ ವಲದ್ ಅಬ್ದುಲ್ ಖಾದರನ ದುಷ್ಟ ಚಟುವಟಿಕೆಗಳ ಬಗ್ಗೆ ಸುದ್ದಿ ತಿಳಿಯಿತು. ಈ ಶಾಸಕನು ತನ್ನ ಅಹಂಕಾರದ ಕಾರಣಗಳಿಂದಾಗಿ "ನಸೀರ್‌ಶಾಹ್"ನೆಂಬ ಬಿರುದನ್ನು ತಾನೇ ಘೋಷಿಸಿಕೊಂಡು ಬಾದಷಹನೆಂದು ಹೇಳಿಕೊಳ್ಳುತ್ತಿದ್ದನು. ಈ ವಿಚಾರದಲ್ಲಿ ಕಾಲ್ಪಿಯ ಪ್ರಜೆಗಳು, ಮುಖಂಡರುಗಳು ಸುಲ್ತಾನ್ ಮಹಮೂದ್ ಖಿಲ್ಜಿಗೆ ಅನೇಕ ಪತ್ರಗಳನ್ನು ಬರೆದಿದ್ದರು. ಆ ಪತ್ರಗಳಲ್ಲಿ ಆತನ ದುಷ್ಟ ಚಟುವಟಿಕೆಗಳ ಬಗ್ಗೆ ವಿವರವಿತ್ತು. ಆತನ ಹಿಂಸಾತ್ಮಕ ಚಟುವಟಿಕೆಗಳನ್ನು ತಪ್ಪಿಸಬೇಕೆಂದೂ ಬರೆದಿದ್ದರು.

ಕಾಲ್ಪಿಗೆ ಮಹಮೂದನ ಪ್ರಯಾಣ :

ಸುಲ್ತಾನ್ ಮಹಮೂದ್‌ನು ಚಿತ್ತೂರಿನತ್ತ ಹೋಗುವ ಮನಸ್ಸನ್ನು ಬದಲಾಯಿಸಿ, ನಸೀರ್‌ಶಾಹ್‌ನನ್ನು ಅಡಗಿಸಲು ಇಷ್ಟಪಟ್ಟನು. ಈ ಉದ್ದೇಶದಿಂದ ಕಾಲ್ಪಿಯತ್ತ ಪ್ರಯಾಣವನ್ನು ಮಾಡಿದನು. ನಸೀರ್‌ಶಾಹನಿಗೆ ಸುಲ್ತಾನ್ ಮಹಮೂದ್‌ನು ಬರುತ್ತಿರುವ ಸುದ್ದಿ ತಲುಪಿದ ತಕ್ಷಣ, ಆತನು ತನ್ನ ಒಬ್ಬ ಆಪ್ತ ದೂತನಿಗೆ ಬಹಳ ಬೆಲೆಬಾಳುವ

ಸಂಪತ್ತು ಮತ್ತು ಬಹುಮಾನಗಳನ್ನು ಕೊಟ್ಟು ಸುಲ್ತಾನ್ ಮಹಮೂದನ ಸೇವೆಯಲ್ಲಿ ಕಳುಹಿಸಿಕೊಟ್ಟನು. ಅದರ ಜೊತೆಯಲ್ಲಿ ಹೇಳಿಕಳುಹಿಸಿದುದ್ದೇನೆಂದರೆ, ನನ್ನ ಶತ್ರುಗಳು ನನ್ನ ಬಗ್ಗೆ ತಿಳಿಸಿರುವಂತೆ, ಅವೆಲ್ಲಾ ಸುಳ್ಳು ವಿಚಾರಗಳಾಗಿವೆ. ತಾವುಗಳು ತಮ್ಮ ಆಪ್ತ ಅಮೀರರನ್ನು ಕಳುಹಿಸಿ ನನ್ನ ಬಗ್ಗೆ ವಿಚಾರವನ್ನು ತಿಳಿದುಕೊಳ್ಳಬಹುದು. ಒಂದು ವೇಳೆ ನನ್ನ ತಪ್ಪುಗಳೇನಾದರೂ ತಮಗೆ ಕಂಡುಬಂದರೆ, ತಾವು ನೀಡುವ ಯಾವುದೇ ಶಿಕ್ಷೆಗೆ ಗುರಿಯಾಗಲು ನಾನು ಸಿದ್ಧನಿದ್ದೇನೆ. ಸುಲ್ತಾನ್ ಮಹಮೂದ್ ಖಿಲ್ಜಿಯು ನಸೀರ್‌ಶಾಹನ ದೂತನನ್ನು ಕಾಣಲು ಅವಕಾಶವನ್ನೇ ಕೊಡಲಿಲ್ಲ. ಸರಿಯಾದ ಕ್ರಮದಲ್ಲಿ ಪ್ರಯಾಣದ ಮಜಲುಗಳನ್ನು ಪಾರು ಮಾಡುತ್ತಲೇ ನಡೆದನು.

ನಸೀರಖಾನನ ಕ್ಷಮೆ:

ಷಾಹಿ ಸೈನ್ಯವು ಸಾರಂಗಪುರಕ್ಕೆ ತಲುಪಿದಾಗ, ಆಝಂ ಹುಮಾಯೂನನು ಮತ್ತು ಇತೆ ಅಮೀರರು ಬಾದಷಹನಿಂದ ನಸೀರಶಾಹನಿಗೆ ಕ್ಷಮಿಸುವಂತೆ ಶಿಫಾರಸ್ಸನ್ನು ಮಾಡಿದನು. ಈ ಕಾರಣದಿಂದಾಗಿ ಸುಲ್ತಾನ್ ಮಹಮೂದ್‌ನು ನಸೀರ್‌ಶಾಹನ ತಪ್ಪುಗಳನ್ನು ಕ್ಷಮಿಸಿದನು. ದೂತನಿಗೆ ದರ್ಬಾರಿಗೆ ಬರಲು ಆಜ್ಞಾಪಿಸಿದನು. ನಾಸಿರ್‌ಶಾಹ್‌ನಿಂದ ಕ್ಷಮಿಸಲ್ಪಟ್ಟ ಬಹುಮಾನಗಳನ್ನು ಸ್ವೀಕರಿಸಿದನು. ಆತನ ಹೆಸರಿಗೆ ಮುಂದಿನ ದಿನಗಳಲ್ಲಿ ಹೇಗೆ ನಡೆದುಕೊಳ್ಳಬೇಕೆಂಬ ಉಪದೇಶಾತ್ಮಕ ಪತ್ರವನ್ನೂ ಬರೆದು ಅದೇ ದೂತನೊಂದಿಗೆ ಕಳುಹಿಸಿದನು.

ಸುಲ್ತಾನ್ ಮಹಮೂದನು ಚಿತ್ತೋರಿನಲ್ಲಿ:

ಇದಾದ ನಂತರ ಸುಲ್ತಾನ್ ಮಹಮೂದ್‌ನು ಸಾರಂಗಪುರದಿಂದ ಚಿತ್ತೂರಿನತ್ತ ಹೊರಟನು. ದಾರಿಯಲ್ಲಿದ್ದ ಭೀಮ್ ನದಿಯನ್ನು ಪಾರು ಮಾಡಿ, ಚಿತ್ತೂರಿನ ಪ್ರದೇಶಕ್ಕೆ ಕಾಲಿಡುತ್ತಲೇ ವಿನಾಶ ಮತ್ತು ಲೂಟಿಗಳನ್ನು ಪ್ರಾರಂಭಿಸಿದನು. ಬಾದಷಹನು ಪ್ರತಿನಿತ್ಯ ತನ್ನ ಸೈನ್ಯವನ್ನು ಕಳುಹಿಸಿ ಲೂಟಿ, ಕೊಳ್ಳೆ ಹೊಡೆಸುತ್ತಿದ್ದನು. ಆತನು ಚಿತ್ತೂರಿನ ಪ್ರಜೆಗಳಿಗೆ ಅಪಾರವಾಗಿ ಹಿಂಸಿಸಲಾರಂಭಿಸಿದನು. ಅನೇಕರ ಕೊಲೆಗಳನ್ನು ಮಾಡಿಸಿದನು. ಅನೇಕರನ್ನು ಸೆರೆಹಿಡಿಸಿದನು. ಅನೇಕ ದೇವಸ್ಥಾನಗಳನ್ನು ಕೆಡವಿಸಿದನು. ಅವುಗಳ ಜಾಗದಲ್ಲಿ ಮಸೀದಿಗಳನ್ನು ಕಟ್ಟಿಸಿದನು. ಬಾದಷಹನ ಪ್ರತಿಯೊಂದು ಪಯಣದಲ್ಲೂ ಮೂರು–ನಾಲ್ಕು ದಿನಗಳ ತನಕ ತಂಗುತ್ತಿದ್ದನು. ಕೊನೆಗೆ ಚಿತ್ತೂರಿನ ಜೈಸಲ್ಮೇರ್‌ನ ಹತ್ತಿರ ಬೀಡುಬಿಟ್ಟನು.

ಕೋಟೆಯ ಮುತ್ತಿಗೆ:

ಸುಲ್ತಾನ್ ಮಹಮೂದ್ ಖಿಲ್ಜಿಯು ಕೋಟೆಯನ್ನು ಮುತ್ತಿದನು. ರಾಜನು ವಿವಶನಾಗಿ ಯುದ್ಧ ಮಾಡಲಾರಂಭಿಸಿದನು. ರಾಜಪೂತ ಕೋಟೆಯ ಮುಂದೆ

ಒಂದು ಮಂದಿರವನ್ನು ಕಟ್ಟಿಸಿದ್ದರು. ಮಂದಿರಕ್ಕೆ ಸ್ವಲ್ಪ ದೂರದಲ್ಲಿ ಸುತ್ತುಗೋಡೆ (ಕಾಂಪೌಂಡ್) ಇತ್ತು. ಇದರಲ್ಲಿ ರಾಜಪೂತರು ಯುದ್ಧದ ಸಾಮಗ್ರಿಗಳನ್ನು ತುಂಬಿಟ್ಟಿದ್ದರು. ಸುಲ್ತಾನ್ ಮಹಮೂದ್‌ನು ಮೊದಲು ಆ ದೇವಸ್ಥಾನವನ್ನು ವಶಪಡಿಸಿಕೊಳ್ಳುವ ಪ್ರಯತ್ನವನ್ನು ಮಾಡಿದನು. ಒಂದು ವಾರದ ಶ್ರಮದಿಂದ ಕೊನೆಗೂ ಆ ಮಂದಿರವನ್ನು ವಶಪಡಿಸಿಕೊಂಡನು. ಈ ಪ್ರಯತ್ನದಲ್ಲಿ ಬಹಳ ರಾಜಪುತ್ರರು ಮರಣವನ್ನು ಹೊಂದಿದರು. ಅದರಲ್ಲಿ ಬಹಳಷ್ಟು ಮಂದಿ ಸೆರೆಯಾದರು.

ಒಂದು ದೇವಸ್ಥಾನದ ನಾಶ:

ಸುಲ್ತಾನ್ ಮಹಮೂದ್ ಖಿಲ್ಜಿಯು ಆಜ್ಞಾಪಿಸಿದುದೇನೆಂದರೆ – ಮಂದಿರದ ಒಳಗೆ ಮರ, ಸೌದೆಗಳನ್ನು ತುಂಬಿ ಅದಕ್ಕೆ ಬೆಂಕಿಯನ್ನು ಇಡಿಸಿದನು. ಗೋಡೆಗಳ ಮೇಲೆ ತಣ್ಣೀರನ್ನು ಹಾಕಿಸಿದನು. ಇದಾದ ನಂತರ ನೋಡು–ನೋಡುತ್ತಲೇ ಈ ಮಂದಿರವು ಬಿದ್ದುಹೋಯಿತು. ಮೂರ್ತಿಗಳೆಲ್ಲವನ್ನೂ ತುಂಡರಿಸಿ ಎಸೆಯಲಾಯ್ತು. ಒಂದು ಮೂರ್ತಿಯು ಹಾಲುಗಲ್ಲಿನಿಂದ ಮಾಡಲ್ಪಟ್ಟಿತ್ತು. ಅದನ್ನು ಅರೆದು ಸುಣ್ಣವನ್ನಾಗಿಸಿ ಕೊಂಡರು. ಈ ಸುಣ್ಣವನ್ನು ವೀಳ್ಯದೆಲೆಗೆ ಹಚ್ಚಿ ರಾಜಪೂತರಿಗೆ ತಿನ್ನಿಸಲಾಯಿತು. ಇದರ ಉದ್ದೇಶ ತಮ್ಮ ಅಶಕ್ತ ಮೂರ್ತಿಗಳನ್ನು ರಾಜಪೂತರೇ ನುಂಗಿ ಹಾಕಿದರು ಎಂದು.

ಸುಲ್ತಾನ್ ಮಹಮೂದನ ಸಂತೋಷ:

ಸುಲ್ತಾನ್ ಮಹಮೂದ್ ಖಿಲ್ಜಿಯು ಈ ಸಫಲತೆಯಿಂದಾಗಿ ತುಂಬಾ ಸಂತೋಷ ಪಟ್ಟನು. ಏಕೆಂದರೆ ಆತನು ಒಂದು ದೊಡ್ಡ ದೇವಸ್ಥಾನವನ್ನು ಕೆಡವಿಸಿದ್ದನು. ಅಷ್ಟೇ ಅಲ್ಲ, ಗುಜರಾತಿ ಸುಲ್ತಾನರು ಅನೇಕ ವರ್ಷಗಳ ಪ್ರಯತ್ನದಿಂದಲೂ ಈ ಕೆಲಸವನ್ನು ಮಾಡಲಾರದೇ ಹೋಗಿದ್ದರು. ಇದಾದ ನಂತರ ಬಾದಷಹನು ಚಿತ್ತೂರಿನ ಕೋಟೆಯ ಕಡೆಗೆ ರವಾನೆಯಾದನು.

ರಾಜು ಕೋನ್ಹಿಯಾನು ಪರಾರಿ:

ಸುಲ್ತಾನ್ ಮಹಮೂದ ಖಿಲ್ಜಿಯು ಚಿತ್ತೂರಿನ ಸುತ್ತಮುತ್ತಲ ಪ್ರದೇಶಕ್ಕೆ ಬಂದು ಅಲ್ಲಿನ ಒಂದು ಕೋಟೆಯನ್ನು ಯುದ್ಧ ಮಾಡಿ ಗೆದ್ದುಕೊಂಡನು. ಅದು ಒಂದು ಬೆಟ್ಟದ ತಪ್ಪಲಿನಲ್ಲಿತ್ತು. ಬಾದಷಹನು ಚಿತ್ತೂರಿನ ಕೋಟೆಗೆ ಮುತ್ತಿಗೆಯನ್ನು ಹಾಕಲು ಸಿದ್ಧತೆಗಳನ್ನು ಮಾಡುತ್ತಿದ್ದನು. ಆ ಸಂದರ್ಭದಲ್ಲಿ ಆತನಿಗೆ ತಿಳಿದುಬಂದದ್ದೇನೆಂದರೆ ರಾಜಪೂತ ರಾಜ ಕೋನ್ಹಿಯಾ ಎಂಬುವನು ಕೋಟೆಯಲ್ಲಿ ಇಲ್ಲವೆಂಬುದು. ಆತನು ಇಂದೇ ಕೋಟೆಯಿಂದ ಹೊರಟು, ಪಾಯ ಬೆಟ್ಟದ ಕಡೆ ಓಡಿಹೋಗಿದ್ದಾನೆಂದು ತಿಳಿಯಿತು.

ರಾಜನು ಚಿತ್ತೂರಿನ ಕೋಟೆಗೆ ವಾಪಸ್ಸಾದನು:

ಸುಲ್ತಾನ್ ಮಹಮೂದನು ಆತನು ಅಡಗಿಕೊಂಡಿರುವ ಬೆಟ್ಟದ ಕಡೆಗೆ ಆತನನ್ನು ಹಿಂಬಾಲಿಸುವ ವಿಚಾರದಲ್ಲಿದ್ದನು. ತನ್ನ ಸೈನ್ಯದ ಒಂದು ಭಾಗವನ್ನು ಈ ಉದ್ದೇಶಕ್ಕೋಸ್ಕರ ಕಳಿಸಿಯೇಬಿಟ್ಟನು. ರಾಜನ ಹತ್ತಿರವೂ ಒಂದು ವಿಶಾಲ ಸೈನ್ಯವೂ ಇತ್ತು. ಇಬ್ಬರಲ್ಲೂ ಘೋರ ಯುದ್ಧವೇ ನಡೆಯಿತು. ರಾಜನು ಸೋಲನ್ನನುಭವಿಸಿ ದನು. ಆತನು ಯುದ್ಧ ಮೈದಾನದಿಂದ ಓಡಿ, ಪುನಃ ತನ್ನ ಕೋಟೆಯೊಳಗೇ ಬಂದು ಆಶ್ರಯಿಸಿದನು.

ಚಿತ್ತೂರು ಕೋಟೆಯ ಮುತ್ತಿಗೆ:

ಸುಲ್ತಾನ್ ಮಹಮೂದ್‌ನು ತನ್ನ ಸೈನ್ಯದ ಒಂದು ಭಾಗವನ್ನು ಚಿತ್ತೂರು ಕೋಟೆಯ ಮುತ್ತಿಗೆಯಲ್ಲಿ ನಿಲ್ಲಿಸಿ ತಾನು ಸ್ವತಃ ಆ ದೇಶದ ಸರಹದ್ದಿನಲ್ಲಿ ಸೈನ್ಯದೊಂದಿಗೆ ಕಾವಲು ನಿಂತನು. ಅಲ್ಲಿ ನಿಂತು ಪ್ರತಿನಿತ್ಯ ತನ್ನ ಸೈನ್ಯವನ್ನು ಕೆಲವು ಮುಖ್ಯ ಪ್ರದೇಶಗಳಲ್ಲಿ ವಿನಾಶ, ಲೂಟಿ, ಕೊಳ್ಳೆ ಹೊಡೆಯಲು ಕಳುಹಿಸುತ್ತಿದ್ದನು. ಮಹಮೂದ್ ಖಿಲ್ಜಿಯು ಆಝಂ ಹುಮಾಯೂನನನ್ನು ಕರೆಯಿಸಿಕೊಂಡು, ಚೇತೂನ ಪ್ರದೇಶ, ಮಂದ್‌ಸೂರಿನಲ್ಲಿರುವ ಪ್ರದೇಶವನ್ನು ವಶಪಡಿಸಿಕೊಳ್ಳಲು ಆಜ್ಞಾಪಿಸಿದನು.

ಆಝಂ ಹುಮಾಯೂನನ ಮರಣ:

ಬಾದಷಹನ ಆಜ್ಞೆಗನುಸಾರವಾಗಿ ಆಝಂ ಹುಮಾಯೂನನು ಮಂದ್‌ಸೂರ್ ತಲುಪಿದನು. ಅಲ್ಲಿ ಆತನು ಕಾಯಿಲೆ ಬಿದ್ದನು. ಅದೇ ಕಾಯಿಲೆಯೆ ಕಾರಣ ದಿಂದಾಗಿ ಆತನು ಮರಣ ಹೊಂದಿದನು. ಈ ಸುದ್ದಿಯಿಂದ ಸುಲ್ತಾನ್ ಮಹಮೂದ್‌ನು ತುಂಬಾ ದುಃಖಿತನಾದನು. ಬಹಳವಾಗಿ ಅಳುತ್ತಾ ಮಂದ್‌ಸೂರಿಗೆ ತಲುಪಿದನು. ಇಲ್ಲಿಂದ ಆತನು ತನ್ನ ತಂದೆಯ ಶವವನ್ನು ಮಾಳವಕ್ಕೆ ಕಳುಹಿಸಿ ಕೊಟ್ಟನು.

ತಾಜ್‌ಖಾನನಿಗೆ ಗೌರವ:

ಸುಲ್ತಾನ್ ಮಹಮೂದ್‌ನು ತನ್ನ ಅಳಿಯನೂ, ಸೈನ್ಯಾಧಿಕಾರಿಯೂ ಆದ ತಾಜ್‌ಖಾನನಿಗೆ ಆಝಂ ಹುಮಾಯೂನನ ಬಿರುದನ್ನು ನೀಡಿ ಗೌರವಿಸಿದನು. ಆತನು ಇದಕ್ಕೆ ಮೊದಲು ಆಝಂ ಹುಮಾಯೂನನ ಸೈನ್ಯದಲ್ಲಿದ್ದನು. ಆ ಸೈನ್ಯವು ಈ ಹೊಸ ಆಝಂ ಹುಮಾಯೂನನ ಆಡಳಿತಕ್ಕೊಳಪಟ್ಟಿತು. ನಂತರ ಬಾದಷಹನು ತನ್ನ ಸೈನ್ಯವು ಬೀಡುಬಿಟ್ಟಿದ್ದ ಜಾಗಕ್ಕೆ ಬಂದುಬಿಟ್ಟನು. ಆ ಕಾಲದಲ್ಲಿ ಮಳೆಗಾಲವು ಪ್ರಾರಂಭವಾಗಿತ್ತು. ಈ ಪರಿಸ್ಥಿತಿಯನ್ನು ಗಮನಿಸಿದ ಸುಲ್ತಾನ್ ಮಹಮೂದ್‌ನು, ಈಗ ಎಲ್ಲಿಂಯಾದರೂ ಎತ್ತರವಾದ ಪ್ರದೇಶದಲ್ಲಿ ಸೈನ್ಯದ ಬೀಡನ್ನು ಬಿಡಬೇಕಾಗಿದೆಯೆಂದು ತೀರ್ಮಾನಿಸಿದನು. ಮಳೆಗಾಲವು ಪೂರ್ಣಗೊಂಡ ನಂತರ ಪುನಃ ಚಿತ್ತೂರು ಕೋಟೆಯನ್ನು ಮುತ್ತಿಗೆ ಹಾಕಬಹುದೆಂದು ನಿರ್ಧರಿಸಿದನು.

ಮಹಮೂದ್‌ನ ಸೈನ್ಯದ ಮೇಲೆ ರಾತ್ರಿಯ ಆಕ್ರಮಣ:

ರಾಜ ಕೋನ್ಹಿಯಾನು, ಸುಲ್ತಾನ್‌ನ ಸೈನ್ಯದ ಆಕ್ರಮಣಕ್ಕೆ ಮುಂಚೆಯೇ ಸ್ವತಃ ರಾಜನೇ ಹಿಜರಿ ೮೪೬ರಲ್ಲಿ ಶುಕ್ರವಾರದ ಒಂದು ರಾತ್ರಿಯಲ್ಲಿ ಆಕಸ್ಮಿಕವಾಗಿ ಆಕ್ರಮಣವನ್ನು (ಶಬ್‌ಖೂನ್) ಮಾಡಿದನು. ಆತನ ಹತ್ತಿರ ಹನ್ನೆರಡು ಸಾವಿರ ಸವಾರರು, ಆರು ಸಾವಿರ ಕಾಲಾಳುಗಳ ಸೈನ್ಯವಿತ್ತು. ಈ ವಿಚಾರ ಹೇಗೋ ತಿಳಿದ ಮಹಮೂದ್‌ನು ಬಹಳ ಬುದ್ಧಿವಂತಿಕೆಯಿಂದ ತನ್ನ ಸೈನ್ಯವನ್ನು ರಕ್ಷಿಸಿದನು. ಇದರ ಪರಿಣಾಮವಾಗಿ ರಾಜನ ಉಪಾಯ ಫಲಿಸಲಿಲ್ಲ. ಅದಕ್ಕೆ ತದ್ವಿರುದ್ಧವಾಗಿ ಆತನಿಗೇ ನಷ್ಟವುಂಟಾಯಿತು. ಆ ಸಂದರ್ಭದಲ್ಲಿ ಬಹಳ ಜನ ರಾಜಪೂತ ಸೈನಿಕರು ಹತರಾದರು.

ರಾಜನ ಸೈನ್ಯದ ಮೇಲೆ (ಶಬ್‌ಖೂನ್) ರಾತ್ರಿಯ ಆಕ್ರಮಣ, ಗೆಲುವು ಮತ್ತು ಹಿಂತಿರುಗುವಿಕೆ:

ಮಾರನೇ ದಿನವೇ ಸುಲ್ತಾನ್ ಮಹಮೂದ್ ಖಿಲ್ಜಿಯು ಒಂದು ವಿಶಾಲ ಸೈನ್ಯವನ್ನು ತೆಗೆದುಕೊಂಡು ರಾಜನ ಸೈನ್ಯದ ಮೇಲೆ ರಾತ್ರಿಯ ಆಕಸ್ಮಿಕ ಆಕ್ರಮಣವನ್ನು ನಡೆಸಿದನು. ರಾಜ ಕೋನ್ಹಿಯಾ ಗಾಯಗೊಂಡು ಓಡಿಹೋದನು. ಆತನ ಅಸಂಖ್ಯಾತ ಸಿಪಾಯಿಗಳು ಹತರಾದರು. ಸುಲ್ತಾನ್ ಮಹಮೂದ್‌ನು ಅಪಾರ ಯುದ್ಧ ಸಾಮಗ್ರಿಗಳನ್ನು ವಶಪಡಿಸಿಕೊಂಡನು. ಈ ಸಫಲತೆಯು ಅಲ್ಲಾಹ್‌ನ ಕೃಪೆಯೆಂದು ತಿಳಿದನು. ಒಂದು ಸಂತೋಷ ಸಮಾರಂಭವನ್ನೂ ಏರ್ಪಡಿಸಿದನು. ಚಿತ್ತೂರು ಕೋಟೆಯನ್ನು ಮುಂದಿನ ವರ್ಷದಲ್ಲಿ ಗೆಲ್ಲಲು ತೀರ್ಮಾನಿಸಿದನು. ಇದಾದ ನಂತರ ಬಾದಶಹನು ಮಾಂಡುವಿಗೆ ವಾಪಸ್ಸಾದನು. ಆ ಕಾಲವು ಜಿಲ್‌ಹಜ್ಜ್ ತಿಂಗಳಾಗಿತ್ತು (ಹಜ್ ಯಾತ್ರೆಯ ತಿಂಗಳು) ಆ ತಿಂಗಳ ಕೊನೆಯಲ್ಲಿ ಹೋಶಂಗ್‌ಶಾಹ್‌ನ ಜಾಮಿಯಾ ಮಸೀದಿಯ ಮುಂಭಾಗದಲ್ಲಿ ಒಂದು ಮದ್ರಸಾ ಶಾಲೆಯನ್ನು "ಹಫ್ತ್ ಮಂಝಿರಿ" ಎಂಬ ಮೀನಾರನ್ನು ಕಟ್ಟಿಸಿದನು.

ಇಬ್ರಾಹಿಂ ಶರ್ಖಿಯ ಒಬ್ಬ ರಾಜದೂತನ ಆಗಮನ:

ಹಿಜರಿ ೮೪೭ರಲ್ಲಿ ಸುಲ್ತಾನ್ ಇಬ್ರಾಹೀಂ ಶರ್ಖಿಯ ಕಡೆಯಿಂದ ಒಬ್ಬ ರಾಜದೂತನು, ಅನೇಕ ಬೆಲೆಬಾಳುವ ಬಹುಮಾನಗಳನ್ನು ತೆಗೆದುಕೊಂಡು ಸುಲ್ತಾನ್ ಮಹಮೂದ್‌ನ ಸೇವೆಯಲ್ಲಿ ಹಾಜರಾದನು. ತಾನು ತಂದಿದ್ದ ಬಹುಮಾನಗಳನ್ನು ಹುಜೂರರ ಮುಂದಿಟ್ಟು, ಇಬ್ರಾಹೀಂ ಶರ್ಖಿಯು ಹೇಳಿಕಳುಹಿಸಿರುವ ಮಾತುಗಳನ್ನು ಹೀಗೆ ತಿಳಿಸಿದನು. "ನಸೀರ್‌ಶಾಹ್‌ನು ಇಸ್ಲಾಂ ಧರ್ಮದ ನಿಯಮಗಳಿಂದ ದೂರನಾಗಿ, ಪರಧರ್ಮೀಯ ನಿಯಮಗಳನ್ನು ಪಾಲಿಸುತ್ತಿರುವನೆಂದೂ, ನಮಾಜ್, ರೋಝ ಮತ್ತು ಇತರೆ ಇಸ್ಲಾಂ ಧರ್ಮದ ನಿಯಮಗಳಿಂದ ದೂರ ಸರಿದಿರುವನೆಂದೂ, ಅವರ ಧಾರ್ಮಿಕ ವಿದ್ಯೆಯನ್ನು ಕಲಿಯಲು ಒತ್ತಾಯಿಸುತ್ತಿರುವನೆಂದೂ ದೂರಿದನು.

ನಸೀರ್‌ಶಾಹ್‌ನ ಮೇಲೆ ದೂರು:

ಕಾಲ್ಪಿಯ ಶಾಸಕ ನಸೀರ್‌ಶಾಹ್‌ನು ಸುಲ್ತಾನ್ ಹೋಷಂಗನ ಆಡಳಿತಾವಧಿಯಲ್ಲಿ ಮಾಳವ ದೇಶದ ಅಧೀನತೆಯನ್ನು ಸ್ವೀಕರಿಸಿದುದಷ್ಟೇ ಅಲ್ಲ, ಆ ಬಾದಷಹರಿಗೆ ತಪ್ಪದೇ ಕಪ್ಪ ಕಾಣಿಕೆಗಳನ್ನು ಒಪ್ಪಿಸುತ್ತಾ ಬಂದಿದ್ದನು. ಇತ್ತೀಚೆಗೆ ಆತನು ಸ್ವತಂತ್ರನಾಗಲು ಇಷ್ಟಪಟ್ಟು ಅನೈತಿಕ ಚಟುವಟಿಕೆಗಳಲ್ಲಿ ತನ್ನನ್ನು ತೊಡಗಿಸಿ ಕೊಂಡಿರುವುದನ್ನು ನಾನು ತಮ್ಮ ಗಮನಕ್ಕೆ ಪ್ರಾಮಾಣಿಕವಾಗಿ ತರಲು ಇಚ್ಛಿಸುತ್ತೇನೆ. ಈತನಿಗೆ ಬುದ್ಧಿ ಕಲಿಸಿ, ಸರಿಯಾದ ದಾರಿಗೆ ತರಲು ತಮಗೆ ಪುರಸತ್ತು ಇಲ್ಲದಿದ್ದರೆ, ನಾನು ಆತನಿಗೆ ಬುದ್ಧಿ ಕಲಿಸಲು ಸಿದ್ಧನಿದ್ದೇನೆ. ದಯವಿಟ್ಟು ತಾವು ನನಗೆ ಅಪ್ಪಣೆಯನ್ನು ನೀಡಬೇಕೆಂದು ಇಬ್ರಾಹಿಂ ಶರ್ಖಿಯವರು ಬಾದಷಹನಿಗೆ ದೂರು ನೀಡಿದರು.

ಸುಲ್ತಾನ್ ಮಹಮ್ಮದನ ಸಂದೇಶ ಸುಲ್ತಾನ್ ಶರ್ಖಿಯವರಿಗೆ:

ಸುಲ್ತಾನ್ ಶರ್ಖಿಯವರು ಕಳುಹಿಸಿದ್ದ ಬಹುಮಾನಗಳನ್ನು ಸ್ವೀಕರಿಸಿ, ಧನ್ಯವಾದ ಗಳನ್ನು ಅರ್ಪಿಸಿದ ಸುಲ್ತಾನ್ ಮಹಮೂದ್ ಖಿಲ್ಜಿಯು, ಅವರ ಸಂದೇಶಕ್ಕೆ ಉತ್ತರವಾಗಿ, ಇತ್ತೀಚೆಗೆ ನನ್ನ ಸೈನ್ಯವು ಮಂದ್‌ಸೋರಿನ ವಿದ್ರೋಹಿಗಳನ್ನು ಅಡಗಿಸಲು ದೂರ ಹೋಗಿದೆ. ಇದರಿಂದಾಗಿ ನನಗೆ ನಿಜವಾಗಿಯೂ ನಸೀರ್ ಶಾಹ್‌ನತ್ತ ಗಮನವನ್ನು ಹರಿಸಲು ಪುರಸತ್ತು ಇಲ್ಲವಾಗಿದೆ. ನಸೀರ್‌ಶಾಹ್‌ನ ದುರ್ನಡತೆಗಳು ಒಂದು ಧರ್ಮಕ್ಕೆ ಸಂಬಂಧಿಸಿರುವುದರಿಂದ, ಇವುಗಳು ಒಬ್ಬ ಶುದ್ಧ ಮುಸಲ್ಮಾನನಾಗಿರುವುದರಿಂದ, ತಮಗೆ ಇವುಗಳನ್ನು ಸರಿಪಡಿಸುವ ಸಂಪೂರ್ಣ ಹಕ್ಕಿದೆ. ಆದ್ದರಿಂದ ತಾವು ಬಹಳ ಸಂತೋಷದಿಂದ, ನಸೀರ್‌ಶಾಹ್‌ನನ್ನು ಸರಿದಾರಿಗೆ ತರಬಹುದು. ನನ್ನ ಸಂಪೂರ್ಣ ಸಹಕಾರ ತಮ್ಮೊಂದಿಗಿದೆ. ಅಲ್ಲಾಹ್‌ನಲ್ಲಿ ನಾನು ಪ್ರಾರ್ಥಿಸುವುದೇನೆಂದರೆ, ತಮಗೆ ಎಲ್ಲ ರೀತಿಯ ಸಹಕಾರ ಈ ವಿಚಾರದಲ್ಲಿ ಸಿಗಲಿ. ಇದಾದ ನಂತರ ಸುಲ್ತಾನ್ ಮಹಮೂದ್‌ನು, ಶರ್ಖಿಯವರ ಕಡೆಯಿಂದ ಬಂದಿದ್ದ ರಾಜದೂತನಿಗೆ, ಸೂಕ್ತ ಬಹುಮಾನಗಳನ್ನು ಕೊಟ್ಟು ಗೌರವಿಸಿ ಕಳುಹಿಸಿದನು.

ಸುಲ್ತಾನ್ ಮಹಮೂದ್‌ನ ಮಕ್ಕಳ ಮದುವೆಗಳು:

ಈ ಘಟನೆಯಾದ ಕೆಲವು ಸಮಯದ ನಂತರ, ಸುಲ್ತಾನ್ ಮಹಮೂದ್‌ನು ತನ್ನ ಗಂಡುಮಕ್ಕಳ ಮದುವೆಗಳನ್ನು ನಿಶ್ಚಯಿಸಿದನು. ಈ ಸಂಬಂಧದಲ್ಲಿ ಒಂದು ವೈಭವೋಪೇತ ಸುಂದರ ಸಮಾರಂಭವನ್ನು ಏರ್ಪಡಿಸಿದನು. ಹನ್ನೆರಡು ಸಾವಿರ ಬಹುಮಾನಗಳನ್ನು ಸೈನಿಕರಲ್ಲಿ ಹಾಗೂ ಸರದಾರರಲ್ಲಿ ಹಂಚಲಾಯಿತು.

ಕಾಲ್ಪಿಯ ಮೇಲೆ ಸುಲ್ತಾನ್ ಶರ್ಖಿಯ ಸೈನಿಕಾಚರಣೆ:

ಸುಲ್ತಾನ್ ಶರ್ಖಿಯ ರಾಜದೂತನು ಜಾನ್‌ಪುರವನ್ನು ತಲುಪಿ, ಸುಲ್ತಾನ್

ಮಹಮೂದ್ ಖಿಲ್ಜಿಯ ಸಂದೇಶವನ್ನು ತಿಳಿಸಿದನು. ಸುಲ್ತಾನ್ ಶರ್ಖಿಯು ಈ ಸಂದೇಶದಿಂದ ಸಂತೋಷಪಟ್ಟನು. ಆತನು ಇಪ್ಪತ್ತು (೨೦) ಆನೆಗಳೊಂದಿಗೆ, ಇತರೆ ಅಮೂಲ್ಯ ಸಂಪತ್ತನ್ನು ಬಹುಮಾನದ ರೂಪದಲ್ಲಿ ಸುಲ್ತಾನ್ ಮಹಮೂದ್ ಖಿಲ್ಜಿಯ ಸೇವೆಯಲ್ಲಿ ಕಳುಹಿಸಿಕೊಟ್ಟನು. ತಾನು ಸ್ವತಃ ಒಂದು ವಿಶಾಲ ಸೈನ್ಯದೊಂದಿಗೆ ಕಾಲ್ಪಿಯತ್ತ ಹೊರಟನು.

ಸುಲ್ತಾನ್ ಮಹಮೂದನಿಗೆ ನಸೀರನ ಅರ್ಜಿ :

ಸುಲ್ತಾನ್ ಶರ್ಖಿಯು ನಸೀರ್ ಬಿನ್ ಅಬ್ದುಲ್ ಖಾದರನಿಗೆ, ಶಾಸಕತ್ವದಿಂದ ಪದಚ್ಯುತಗೊಳಿಸಿದನು. ನಸೀರ್‌ಶಾಹ್‌ನು ಸುಲ್ತಾನ್ ಮಹಮೂದ್ ಖಿಲ್ಜಿಯ ಹೆಸರಿನಲ್ಲಿ ಒಂದು ಪತ್ರವನ್ನು ಬರೆದು ಹೀಗೆ ವಿನಂತಿಸಿಕೊಂಡನು. ನಾನು ಸುಲ್ತಾನ್ ಹೋಷಂಗರ ಕಾಲದಿಂದಲೂ ಇಲ್ಲಿನವರೆಗೆ ಮಾಳವ ಬಾದಷಹರುಗಳ ಅಧೀನತೆಯನ್ನು ಸ್ವೀಕರಿಸಿಕೊಂಡು ತಪ್ಪದಂತೆ ಕಪ್ಪ-ಕಾಣಿಕೆಗಳನ್ನು ಸಲ್ಲಿಸುತ್ತಾ ಬಂದಿರುತ್ತೇನೆ. ಮಾಳವ ಬಾದಷಹರುಗಳ ವಿರುದ್ಧ ನಾನು ಯಾವುದೇ ತಪ್ಪು ಚಟುವಟಿಕೆಗಳಲ್ಲಿ ನನ್ನನ್ನು ತೊಡಗಿಸಿಕೊಂಡಿರಲಿಲ್ಲ. ಆದರೆ ಈಗ ಸುಲ್ತಾನ್ ಇಬ್ರಾಹಿಂ ಶರ್ಖಿಯು ನನ್ನನ್ನು ಕಾಲ್ಪಿಯಿಂದ ತೆಗೆದು, ಸ್ವತಃ ಈ ಎಲ್ಲಾ ಪ್ರದೇಶದ ಮೇಲೆ ಅಧಿಕಾರವನ್ನು ಸ್ಥಾಪಿಸಿಕೊಂಡಿರುತ್ತಾನೆ. ನಾನು ಪ್ರಾರಂಭದಿಂದಲೂ ತಮ್ಮ ಪಕ್ಷದವನಾಗಿರುತ್ತೇನೆ. ತಮ್ಮ ಬಗ್ಗೆ ನನಗೆ ತುಂಬಾ ಗೌರವವಿದೆ. ಈ ದಿನಗಳಲ್ಲಿ ನಾನು ಚಂದೇರಿಯ ಗಡಿ ಭಾಗದಲ್ಲಿ ವಾಸಿಸುತ್ತಿದ್ದೇನೆ. ನನ್ನ ಬಗ್ಗೆ ತಮ್ಮ ಯಾವುದೇ ಆಜ್ಞೆಯಾದರೂ ನಾನು ಅದನ್ನು ಸ್ವೀಕರಿಸಿ ಪಾಲಿಸಲು ಸಿದ್ಧನಿದ್ದೇನೆ.

ಮಹಮೂದ್ ಶರ್ಖಿಯ ಹೆಸರಿಗೆ ಮಹಮೂದ್ ಖಿಲ್ಜಿಯ ಸಂದೇಶ:

ನಸೀರ್ ಶಾಹನ ಪತ್ರವನ್ನು ಓದಿದ ಸುಲ್ತಾನ್ ಮಹಮೂದ್ ಖಿಲ್ಜಿಯು, ಸುಲ್ತಾನ್ ಮಹಮೂದ್ ಬಿನ್ ಇಬ್ರಾಹಿಂ ಶರ್ಖಿಯ ಹೆಸರಿಗೆ ಒಂದು ಪತ್ರವನ್ನು ಬರೆದು ತನ್ನ ರಾಜದೂತನಾದ ಅಲಿಖಾನ್‌ನನ್ನು ಆತನೊಂದಿಗೆ ಬಹುಮೂಲ್ಯ ಬಹುಮಾನಗಳನ್ನು ಕೊಟ್ಟು ಕಳುಹಿಸಿದನು. ಪತ್ರದ ಸಂದೇಶ – ತಮ್ಮ ಅತ್ಯುತ್ತಮ ಪ್ರಯತ್ನಗಳಿಂದಾಗಿ, ನಸೀರ್ ಬಿನ್ ಅಬ್ದುಲ್ ಖಾದರನು, ಸರಿಯಾದ ದಾರಿಗೆ ಬಂದಿರುತ್ತಾನೆ. ಆತನು ತನ್ನ ದುಷ್ಟ ಚಟುವಟಿಕೆಗಳನ್ನು ಬಿಟ್ಟು, ಸದ್ಗುಣಗಳನ್ನು ರೂಢಿಸಿಕೊಂಡಿರುತ್ತಾನೆ. ಅಷ್ಟೇ ಅಲ್ಲ, ಇಸ್ಲಾಂ ಧರ್ಮದ ನಿಯಮಗಳನ್ನು ತಪ್ಪದೇ ಪಾಲಿಸಲು ಒಪ್ಪಿಕೊಂಡಿರುತ್ತಾನೆ. ಆದ್ದರಿಂದ ತಾವುಗಳು ಆತನ ತಪ್ಪುಗಳನ್ನು ಕ್ಷಮಿಸಿ, ತಾವು ಆತನಿಂದ ವಶಪಡಿಸಿಕೊಂಡಿರುವ ಪ್ರದೇಶವನ್ನು ಆತನಿಗೆ ಹಿಂದಕ್ಕೆ ಬಿಟ್ಟುಕೊಡುವುದು ಒಳ್ಳೆಯದೆಂದು ನನ್ನ ಅಭಿಪ್ರಾಯವಾಗಿದೆಯೆಂದು ಬರೆದು ಕಳುಹಿಸಿದನು.

ಮಹಮೂದ್ ಖಿಲ್ಜಿಯ ಇಚ್ಛೆ ಚಂದೇರಿಯತ್ತ:

ಅಲಿಖಾನನು ಮಹಮೂದ್ ಖಿಲ್ಜಿಯ ಸಂದೇಶವನ್ನು ಹೊತ್ತು, ಜೌನ್‌ಪುರದ ಸುಲ್ತಾನ್ ಮಹಮೂದ್ ಶರ್ಖಿಯನ್ನು ಭೇಟಿ ಮಾಡಿದನು. ಖಿಲ್ಜಿಯಿಂದ ಕಳುಹಿಸಲ್ಪಟ್ಟ ಬಹುಮಾನಗಳನ್ನು ಅರ್ಪಿಸಿದನು. ಸಂದೇಶದ ವಿಷಯವನ್ನೂ ತಿಳಿಸಿದನು. ಎಷ್ಟು ದಿನಗಳು ಕಳೆದರೂ, ಮಹಮೂದ್ ಖಿಲ್ಜಿಯ ಪತ್ರಕ್ಕೆ ಉತ್ತರವನ್ನೂ ಕೊಡಲಿಲ್ಲ. ಇದರಿಂದಾಗಿ ಮಹಮೂದ್ ಖಿಲ್ಜಿಗೆ ಶರ್ಖಿಯ ಮೇಲೆ ಸಿಟ್ಟು ಬಂದಿತು. ನಸೀರ್‌ಖಾನನಿಗೆ ಸಹಾಯ ಮಾಡುವುದು ನನ್ನ ಕರ್ತವ್ಯವೆಂದೂ ತಿಳಿದ. ಈ ಉದ್ದೇಶದಿಂದಾಗಿ ಚಂದೇರಿಯತ್ತ ನಡೆದ. ಈ ಘಟನೆ ಹಿಜಿರಾ ಶಕೆ-೮೪೮ರಲ್ಲಿ ಘಟಿಸಿತ್ತು.

ಮಹಮೂದ್ ಶರ್ಖಿಯ ರಕ್ಷಣಾತ್ಮಕ ಉಪಾಯಗಳು:

ಚಂದೇರಿಯ ಗಡಿಗಳಲ್ಲಿ ವಾಸವಾಗಿದ್ದ ನಸೀರ್‌ಶಾಹ್‌ನು ಬಾದಷಹ ಸುಲ್ತಾನ್ ಮಹಮೂದ್ ಖಿಲ್ಜಿಯ ಸೇವೆಯಲ್ಲಿ ಹಾಜರಾದನು. ಈ ವಿಚಾರದ ಸುದ್ದಿಯನ್ನು ತಿಳಿದ ಮಹಮೂದ್ ಶರ್ಖಿಯು ನಗರವನ್ನು ಬಿಟ್ಟು ಹೊರ ಹೊರಟು 'ಏರ್ಜಾ' ಎಂಬಲ್ಲಿಗೆ ಹೋಗಿ ತಂಗಿದನು. ಮಹಮೂದ್ ಶರ್ಖಿಯು ಈ ಪ್ರದೇಶದ ವಂಶಪಾರಂಪರ್ಯವಾಗಿ ಶಾಸನವನ್ನು ನಡೆಸಿಕೊಂಡು ಬರುತ್ತಿದ್ದ ಮುಬಾರಕ್ ವಲದ್ ಜುನ್ಯೆದ್‌ಖಾನನನ್ನು ಸೆರೆ ಹಿಡಿದನು. ಇಲ್ಲಿಂದ "ಜೌನ್" ಎಂಬ ಸ್ಥಳಕ್ಕೆ ತಲುಪಿದನು. ಈ ಜಾಗಕ್ಕೆ ಹೋಗುವ ದಾರಿ ಬಹಳ ಇಕ್ಕಟ್ಟಾಗಿ ಕಷ್ಟಕರವಾಗಿತ್ತು. ಇತ್ತ ಕಡೆ ಯಾವ ಶತ್ರುವೂ ಬರಲು ಇಷ್ಟಪಡುತ್ತಿರಲಿಲ್ಲ. ಇಂತಹ ಜಾಗಕ್ಕೆ ತಲುಪಿದ ಶರ್ಖಿಯು, ಅಲ್ಲಿ ಸ್ವಲ್ಪ ದಿನ ನೆಲೆಸಿ, ಅಲ್ಲಿ ಸುತ್ತ-ಮುತ್ತಲ ಪ್ರದೇಶದ ಶಾಸನ ವ್ಯವಸ್ಥೆಯನ್ನು ಸರಿಪಡಿಸಲು ತೊಡಗಿದನು.

ಖಿಲ್ಜಿಗಳಲ್ಲಿ ಮತ್ತು ಶರ್ಖಿಗಳಲ್ಲಿ ಯುದ್ಧ:

ಸುಲ್ತಾನ್ ಮಹಮೂದ್ ಖಿಲ್ಜಿಯು, ಮಹಮೂದ್ ಶರ್ಖಿಯೊಂದಿಗೆ ಯಾವ ಸೈನಿಕ ಕಾರ್ಯಾಚರಣೆಯನ್ನೂ ನಡೆಸದೆ, ಆತನನ್ನು ಕೆಣಕದೆ, ನೇರವಾಗಿ ಕಾಲ್ಪಿಯತ್ತ ನಡೆದನು. ಮಹಮೂದ್ ಶರ್ಖಿಯೂ ಇವನನ್ನು ಹಿಂಬಾಲಿಸಿ ಹೊರಟನು. ಖಿಲ್ಜಿ ಸೈನ್ಯವು ಶರ್ಖಿ ಸೈನ್ಯವು ಹಿಂಬಾಲಿಸುತ್ತಿರುವುದನ್ನು ಕಂಡು ಶರ್ಖಿ ಸೈನ್ಯದ ಮೇಲೆ ಖಿಲ್ಜಿ ಸೈನ್ಯವು ಆಕ್ರಮಣವನ್ನು ಮಾಡಿತು. ಶತ್ರು ಸೈನ್ಯದ ಅಪಾರ ಯುದ್ಧ ಸಾಮಗ್ರಿಗಳನ್ನು ತನ್ನ ವಶಕ್ಕೆ ಪಡೆಯಿತು. ಇದಾದ ನಂತರ ಇಬ್ಬರಲ್ಲೂ ನಿರ್ಣಾಯಕ ಯುದ್ಧವೇ ನಡೆಯಿತು. ಸಾಯಂಕಾಲದ ತನಕ ಯುದ್ಧವಾಯಿತು. ನಂತರ ಎರಡೂ ಕಡೆ ಸೈನ್ಯಗಳೂ ತಮ್ಮ-ತಮ್ಮ ಬಿಡಾರಗಳಿಗೆ ಹಿಂತಿರುಗಿದವು.

ಜಫರಾಬಾದಿಗೆ ಮಹಮೂದ್ ಖಿಲ್ಜಿಯು ವಾಪಸ್ಸು:

ಈ ಘಟನೆಯಾದ ಎರಡು ಮೂರು ದಿನಗಳ ನಂತರ ಮಳೆ ಪ್ರಾರಂಭವಾಯಿತು. ಮಳೆಗಾಲದಲ್ಲಿ ಯುದ್ಧದಿಂದ ಏನನ್ನೂ ಸಾಧಿಸಲು ಸಾಧ್ಯವಾಗದು ಎಂದು ಬಗೆದ ಸುಲ್ತಾನ್ ಮಹಮೂದ್ ಖಿಲ್ಜಿಯು, ಕಾಲ್ಪಿಯ ಸುತ್ತಮುತ್ತಲ ಕೆಲವು ಹಳ್ಳಿಗಳನ್ನು ನಾಶ ಪಡಿಸುತ್ತಾ, ಲೂಟಿ ಮಾಡುತ್ತಾ ಫತಹಾಬಾದಿಗೆ ವಾಪಾಸ್ ಬಂದನು. ಅಲ್ಲಿ "ಖಸರ್ ಹಫ್ತ್ ತಬಖ" ಎಂಬ ಒಂದು ಕಟ್ಟಡದ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಿದನು.

ಮಲಿಕ್ ಅಶ್ರಫನು ಏರ್ಜಾದ ಮೇಲೆ ಆಕ್ರಮಣ:

ಅದೇ ದಿನಗಳಲ್ಲಿ ಏರ್ಜಾದ ಶಾಸಕರುಗಳು ಸುಲ್ತಾನ್ ಮಹಮೂದ್ ಖಿಲ್ಜಿಗೆ ಆ ಪ್ರದೇಶದ ಶಾಸಕನಾದ ಮುಬಾರಕ್‌ಖಾನನ ಹಿಂಸಾತ್ಮಕ ಕಾರ್ಯಾಚರಣೆಗಳ ಬಗ್ಗೆ ದೂರನ್ನು ಸಲ್ಲಿಸಿದರು. ಈತನ ಹಿಂಸೆಗಳನ್ನು ನಿಲ್ಲಿಸಬೇಕೆಂದು ಪ್ರಾರ್ಥಿಸಿದರು. ಸುಲ್ತಾನ್ ಮಹಮೂದ್ ಖಿಲ್ಜಿಯು ಚಂದೇರಿಯ ಶಾಸಕನಾದ ಮಲಿಕ್ ಅಶ್ರಫ್ ಮುಜಫ್ಫರ್ ಇಬ್ರಾಹಿಂನ ಅಧೀನದಲ್ಲಿ ಒಂದು ವಿಶಾಲ ಸೈನ್ಯವನ್ನು ಕೊಟ್ಟು ಏರ್ಜಾದತ್ತ ಕಳುಹಿಸಿದನು. ಅಶ್ರಫ್ ಮಲಿಕ್‌ನು ಏರ್ಜಾ ತಲುಪಿದಾಗ ಆತನಿಗೆ ತಿಳಿದು ಬಂದಿದ್ದೇನೆಂದರೆ – ಸುಲ್ತಾನ್ ಮಹಮೂದ್ ಶರ್ಖಿಯು, ಅಶ್ರಫ್‌ನ ವಿರುದ್ಧ ಮಲಿಕ್ ಕಾಲು ಎಂಬುವನನ್ನು ಏರ್ಜಾದತ್ತ ಕಳುಹಿಸಿರುವನೆಂದು ತಿಳಿಯಿತು.

ಯುದ್ಧ:

ಮಲಿಕ್ ಅಶ್ರಫ್‌ನು ಮಲಿಕ್ ಕಾಲುವಿನೊಂದಿಗೆ ಯುದ್ಧವನ್ನು ಮಾಡಲು ಮುಂದುವರಿದನು. ಇಬ್ಬರೂ 'ರಾತ್ಬ' ಎಂಬ ಕಸಬಾದ ಹತ್ತಿರ ಎದುರಾದರು. ಇಬ್ಬರಲ್ಲೂ ಘೋರ ಯುದ್ಧವೇ ನಡೆಯಿತು. ಮಲಿಕ್ ಕಾಲು ಎಂಬುವನು ಯುದ್ಧದಲ್ಲಿ ಸೋತು ಮೈದಾನದಿಂದ ಓಡಿ ಹೋದನು. ಇದಾದ ನಂತರ ಸುಲ್ತಾನ್ ಶರ್ಖಿಯು ಯುದ್ಧಕ್ಕೆ ಬಂದನು. ಈ ಯುದ್ಧವು ಬಹಳ ಕಾಲ ನಡೆಯಿತು. ಈ ಕಾರಣದಿಂದಾಗಿ ಎರಡೂ ಕಡೆಯ ಮುಸಲ್ಮಾನರು ಹತರಾದರು.

ಶರ್ಖಿ ಮತ್ತು ಖಿಲ್ಜಿ ಸುಲ್ತಾನ್‌ರುಗಳಲ್ಲಿ ಸಂಧಿ ಮತ್ತು ಮಹಮೂದ್ ಖಿಲ್ಜಿಯ ಹಿಂತಿರುಗುವಿಕೆ:

ಶೇಖ್ ಜಾಬಲ್ದ ಎಂಬುವರು ಆ ಕಾಲದ ಒಬ್ಬ ದೊಡ್ಡ ಗುರುಗಳೂ, ಜ್ಞಾನಿಗಳೂ ಆಗಿದ್ದರು. ಅವರು ಮುಸಲ್ಮಾನರುಗಳ ಈ ತೆರನಾದ ರಕ್ತಪಾತ, ಹತ್ಯಾಕಾಂಡವನ್ನು ನೋಡಿ ತುಂಬಾ ಚಿಂತಿತರಾದರು. ಇವರು ಇಬ್ಬರೂ ಸುಲ್ತಾನರನ್ನು ಸಂಧಿ ಮಾಡಿಕೊಳ್ಳಲು ಆಹ್ವಾನಿಸಿ ಈ ಷರತ್ತುಗಳನ್ನು ಅವರ ಮುಂದೆ ಇಟ್ಟರು. ಸುಲ್ತಾನ್ ಶರ್ಖಿಯು ಕಸಬಾ ರಾತ್ಬ ಮತ್ತು 'ಮಹೂಜ'ಗಳನ್ನು ನಸೀರ್‌ಖಾನನಿಗೆ

ಬಿಟ್ಟುಕೊಡಬೇಕೆಂದೂ, ಇಷ್ಟು ಕಸಬಾಗಳನ್ನು ಬಿಟ್ಟ ಮೇಲೆ, ಸುಲ್ತಾನ್ ಮಹಮೂದ್ ಖಿಲ್ಜಿಯು ತನ್ನ ರಾಜಧಾನಿಗೆ ವಾಪಸ್ ಹೋಗಬೇಕೆಂದೂ, ಈ ಘಟನೆಯ ಮಾತುಕತೆಗಳು ನಡೆದ ನಾಲ್ಕು ತಿಂಗಳ ನಂತರ, ಮಹಮೂದ್ ಶರ್ಖಿ ಸಹ ಕಾಲ್ಪಿಯನ್ನು ಬಿಟ್ಟುಕೊಡಬೇಕೆಂದೂ ತೀರ್ಮಾನಿಸಲಾಯ್ತು. ನಾಲ್ಕು ತಿಂಗಳ ಕಾಲಾವಕಾಶವನ್ನು ಏಕೆ ಇಡಲಾಯಿತೆಂದರೆ, ಈ ಸಮಯದಲ್ಲಿ ನಸೀರ್‌ಖಾನನು, ಇಸ್ಲಾಮಿನ ಸ್ನೇಹ ಸಂಪಾದನೆಯನ್ನು ಮಾಡಿಕೊಳ್ಳಬೇಕೆಂದು ಈ ಷರತ್ತು ವಿಧಿಸಲಾಗಿತ್ತು. ಇದಾದ ನಂತರ ಮಹಮೂದ್ ಖಿಲ್ಜಿಯು ಮಾಂಡುವಿನತ್ತ ಹೋಗಬೇಕೆಂದು ತೀರ್ಮಾನಿಸಲಾಯಿತು.

ಒಂದು ದೊಡ್ಡ ದವಾಖಾನೆಯ (ಆಸ್ಪತ್ರೆ) ನಿರ್ಮಾಣ:

ಹಿಜರಿ ೮೪೪ರಲ್ಲಿ ಸುಲ್ತಾನ್ ಮಹಮೂದ್ ಖಿಲ್ಜಿಯು ಒಂದು ಸಾರ್ವಜನಿಕ ಆಸ್ಪತ್ರೆಯನ್ನು ಸ್ಥಾಪಿಸಿದನು. ಅದರಲ್ಲಿ ಆ ಕಾಲದ ಪ್ರಸಿದ್ಧ ಹಕೀಮ್ (ವೈದ್ಯ) ಮೌಲಾನ ಫ಼ಜ್ಲುಲ್ಲಾರವರನ್ನು, ರೋಗಿಗಳ ಶುಶ್ರೂಷೆಗೆ ನೇಮಕ ಮಾಡಲಾಯಿತು. ಈ ಆಸ್ಪತ್ರೆಯ ಖರ್ಚಿಗಾಗಿ ಕೆಲವು ಕಸಬಾಗಳನ್ನು ಸರ್ಕಾರದ ವಶಕ್ಕೆ ಪಡೆದು ಆಸ್ಪತ್ರೆಯ ವೈದ್ಯರಿಗೆ ಜಾಗೀರಿಯಾಗಿ ಬಿಡಲಾಯಿತು.

ಮಂಡಲ್‌ಗಢ ಕೋಟೆಯ ಮೇಲೆ ಸೈನಿಕಾಚರಣೆ:

ಹಿಜರಿ ೮೫೦ರಲ್ಲಿ ಬಾದಷಹನು ಮಂಡಲ್‌ಗಢ ಕೋಟೆಯನ್ನು ವಶಪಡಿಸಿಕೊಳ್ಳ ಬೇಕೆಂಬ ಇಚ್ಛೆಯನ್ನು ತೋರಿದನು. ಈ ಉದ್ದೇಶಕ್ಕಾಗಿ ಒಂದು ವಿಶಾಲ ಸೈನ್ಯವನ್ನು ತೆಗೆದುಕೊಂಡು ಅದರತ್ತ ಸಾಗಿದನು. ಸುಲ್ತಾನ್‌ನು ತನ್ನ ಸೈನ್ಯದೊಂದಿಗೆ ಬೇಗ-ಬೇಗ ಮಜಲುಗಳನ್ನು ಪಾರು ಮಾಡುತ್ತಾ ಬಿಯಾಸ್ ನದಿಯ ದಡಕ್ಕೆ ತಲುಪಿದನು. ರಾಜ ಕೋನ್ಬಿಯಾನಲ್ಲಿ ಸುಲ್ತಾನ್ ಖಿಲ್ಜಿಯ ವಿಶಾಲ ಸೈನ್ಯವನ್ನು ಎದುರಿಸುವಷ್ಟು ಶಕ್ತಿಯಿರಲಿಲ್ಲ. ಈ ಕಾರಣದಿಂದಾಗಿ ಆತನು ಕೋಟೆಯಲ್ಲಿ ಅವಿತು ಕುಳಿತನು.

ರಾಜಪೂತರೊಂದಿಗೆ ಯುದ್ಧ:

ಈ ಘಟನೆಯ ಎರಡು ಮೂರು ದಿನಗಳ ನಂತರ, ರಾಜಪೂತರ ಒಂದು ಸೈನ್ಯವು ಕೋಟೆಯಿಂದ ಹೊರಬಂದಿತು. ಇಬ್ಬರಲ್ಲೂ ಯುದ್ಧವೂ ಆಯಿತು. ರಾಜಪೂತರು ಬಹಳ ಶೌರ್ಯದಿಂದಲೇ ಹೋರಾಡಿದರು. ಆದರೆ ಅವರ ದೀಪ ಸುಲ್ತಾನ್ ಖಿಲ್ಜಿಯ ಮುಂದೆ ಉರಿಯಲಿಲ್ಲ. ಕೊನೆಗೆ ರಾಜಪೂತರು ವಿವಶರಾಗಿ ಸಂಧಿಯ ಪ್ರಸ್ತಾಪವನ್ನು ಖಿಲ್ಜಿಯ ಮುಂದಿಟ್ಟರು. ಹಾಗೂ ಕಪ್ಪ ಕಾಣಿಕೆಗಳನ್ನು ಕೊಡಲು ಒಪ್ಪಿದರು. ಸುಲ್ತಾನ್ ಖಿಲ್ಜಿಯು ಪರಿಸ್ಥಿತಿಯನ್ನು ಗಮನಿಸಿ, ಈ ಪ್ರಸ್ತಾಪವನ್ನು ಒಪ್ಪಿಕೊಂಡನು. ನಂತರ ತನ್ನ ರಾಜಧಾನಿಯತ್ತ ಹಿಂತಿರುಗಿದನು.

ಬಯಾನ ಕೋಟೆಯ ಮೇಲೆ ಸೈನಿಕಾಚರಣೆ:

ಕೆಲವು ದಿನಗಳ ನಂತರ ಬಾದಷಹನು ಪುನಃ ತನ್ನ ಸೈನ್ಯವನ್ನು ಸಿದ್ಧಪಡಿಸಿ ಕೊಂಡನು. ಬಯಾನ ಕೋಟೆಯನ್ನು ವಶಪಡಿಸಿಕೊಳ್ಳಲು ಹೊರಟನು. ಬಾದಷಹನು ಬಯಾನ ಕೋಟೆಗೆ ಇನ್ನೂ ಎರಡು ಮೈಲಿ ದೂರವಿದ್ದಂತೆಯೇ ತನ್ನ ಬೀಡನ್ನು ಬಿಡಿಸಿದನು. ಈ ಕೋಟೆಯ ಶಾಸಕನಾದ ಮಹಮ್ಮದ್ ಖಾನನು ತನ್ನ ಮಗನಾದ ವಾಹಿದ್‌ಖಾನನೊಂದಿಗೆ, ಒಂದು ನೂರು ಕುದುರೆಗಳನ್ನೂ ಒಂದು ಲಕ್ಷ ಚಿನ್ನದ ತಿನ್ಗೆ ನಾಣ್ಯಗಳನ್ನೂ ಕೊಟ್ಟು ಸುಲ್ತಾನ್ ಖಿಲ್ಜಿಯ ಸೇವೆಯಲ್ಲಿ ಕಳುಹಿಸಿಕೊಟ್ಟನು. ಅದರ ಜೊತೆಗೆ ಖಿಲ್ಜಿಯ ಅಧೀನದಲ್ಲಿ ಪ್ರಾಮಾಣಿಕವಾಗಿ ನಡೆಯುತ್ತೇನೆಂಬ ವಾಗ್ದಾನವನ್ನು ಮಾಡಲು ಹೇಳಿಕಳುಹಿಸಿದನು.

ಬಯಾನ ಶಾಸಕನ ಅಧೀನತೆಯ ಸ್ವೀಕಾರ:

ಸುಲ್ತಾನ್ ಮಹಮೂದ್ ಖಿಲ್ಜಿಯು ಮಹಮ್ಮದ್‌ಖಾನನ ಬಹುಮಾನಗಳನ್ನು ಒಪ್ಪಿ ಸ್ವೀಕರಿಸಿದನು. ಹಾಗೂ ತನ್ನ ಕಡೆಯಿಂದ ವಾಹಿದ್‌ಖಾನನಿಗೆ ಬಹುಮಾನಗಳನ್ನು ನೀಡಿ ಗೌರವಿಸಿದನು. ಮತ್ತು ಹಿಂತಿರುಗಲು ಅನುಮತಿಯನ್ನೂ ಕೊಟ್ಟನು. ಇದಾದ ನಂತರ ಸುಲ್ತಾನ್ ಮಹಮೂದನು, ಜರಿ ಕುಸುರಿ ಕೆಲಸವನ್ನು ಮಾಡಿರುವ ಕೋಟನ್ನು ಮತ್ತಿತರ ಕೆಲವು ಅಮೂಲ್ಯ ವಸ್ತುಗಳನ್ನು ಕಳುಹಿಸಿಕೊಟ್ಟನು. ಮಹಮ್ಮದ್‌ಖಾನನು ಈ ಕೋಟನ್ನು ತೊಟ್ಟುಕೊಂಡನು. ಇದರಿಂದ ಸಂತೋಷಪಟ್ಟು ಸುಲ್ತಾನ್ ಖಿಲ್ಜಿಯನ್ನು ಬಹಳವಾಗಿ ಹೊಗಳಿದನು. ಬಯಾನದಲ್ಲಿ ಇಲ್ಲಿನ ತನಕ ದಿಲ್ಲಿಯ ಬಾದಷಹರ ಖುತ್ಬಾ ಮತ್ತು ಮುದ್ರೆ ಚಾಲನೆಯಲ್ಲಿತ್ತು. ಇದನ್ನು ರದ್ದುಪಡಿಸಿ ಆ ಜಾಗದಲ್ಲಿ ಮಹಮೂದ್ ಖಿಲ್ಜಿಯ ಪ್ರಶಂಸಾತ್ಮಕ ಪ್ರವಚನ (ಖುತ್ಬಾ) ಮತ್ತು ಮುದ್ರೆಯ ಚಾಲನೆಯನ್ನು ಪ್ರಾರಂಭಿಸಲಾಯಿತು.

ನಬೂರ್ ಕಸಬಾ ಪ್ರದೇಶವನ್ನು ಗೆದ್ದು ವಾಪಸ್ಸು:

ಇದಾದ ನಂತರ ಬಾದಷಹನು ಹಿಂತಿರುಗಲು ನಿಶ್ಚಯಿಸಿ, ದಾರಿಯಲ್ಲಿ ಸಿಗುವ ರಣಸ್ಥಂಬೋರಿನ ಹತ್ತಿರವಿರುವ ಕಸಬಾ ನಬೋರ್ ಎಂಬುದನ್ನು ತನ್ನ ವಶಕ್ಕೆ ತೆಗೆದುಕೊಂಡನು. ಇದಾದ ನಂತರ ಬಾದಷಹನು, ತಾಜ್‌ಖಾನನ ಅಧೀನದಲ್ಲಿ ಎಂಟು ಸಾವಿರ ಸವಾರರ ಸೈನ್ಯವನ್ನೂ, ಇಪ್ಪತ್ತೈದು (೨೫) ಆನೆಗಳನ್ನೂ ಕೊಟ್ಟು ಚಿತ್ತೂರಿನ ಕೋಟೆಯನ್ನು ವಶಪಡಿಸಿಕೊಳ್ಳಲು ಕಳುಹಿಸಿದನು. ಸುಲ್ತಾನ್ ಮಹಮೂದ್‌ನು ರಾಜ್‌ಕೋಟದಿಂದ ಒಂದು ಲಕ್ಷ ಇಪ್ಪತ್ತೈದು ಸಾವಿರ ಚಿನ್ನದ ತಿನ್ಗೆ ನಾಣ್ಯಗಳನ್ನು ಕಪ್ಪ–ಕಾಣಿಕೆಯಾಗಿ ವಸೂಲು ಮಾಡಿದನು. ನಂತರ ಮಾಂಡುವಿನ ಶಾದಿ ಆಬಾದಿಗೆ ರವಾನೆಯಾದನು.

ರಾಜ ಗಂಗದಾಸನ :

ಹಿಜರಿ ೮೪೫ರಲ್ಲಿ ಜನಾನೇರ್ ಕೋಟೆಯ ಶಾಸಕನಾದ ರಾಜ ಗಂಗದಾಸನಿಗೆ, ಸುಲ್ತಾನ್ ಮಹಮೂದ್ ಖಿಲ್ಜಿಯ ಸೇವೆಯಲ್ಲಿ ಕಪ್ಪ-ಕಾಣಿಕೆಗಳನ್ನು ಸಲ್ಲಿಸಿ, ಈ ಅರ್ಜಿಯನ್ನೂ ನೀಡಿದನು. ಆ ದಿನಗಳಲ್ಲಿ ಸುಲ್ತಾನ್ ಮಹಮ್ಮದ್ ಶಾಹ್ ಗುಜರಾತಿಯು ಜನಾನೇರ್ ಕೋಟೆಯನ್ನು ಮುತ್ತಿದ್ದಾನೆಂದು ಹೇಳಿಕೊಂಡನು. ನಾನು ಮಾತ್ರ ಯಾವಾಗಲೂ ತಮ್ಮಿಂದ ಸಹಾಯವನ್ನು ಕೇಳುವವನಾಗಿದ್ದೇನೆ. ಈ ಸಲವೂ ತಾವೇ ನನಗೆ ಸಹಾಯವನ್ನು ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಜನಾನೇರ್‌ನತ್ತ ಪ್ರಯಾಣ:

ಸುಲ್ತಾನ್ ಮಹಮೂದ್‌ನು ಗಂಗದಾಸನಿಗೆ ಸಹಾಯವನ್ನು ಮಾಡಲು ಒಪ್ಪಿದನು. ಈ ಉದ್ದೇಶಕ್ಕೆಂದೇ ತನ್ನ ಸೈನ್ಯವನ್ನು ಸಿದ್ಧಪಡಿಸಿಕೊಂಡು ಜನಾನೇರ್‌ನತ್ತ ಹೊರಟನು. ದಾರಿಯಲ್ಲಿ ಸುದ್ದಿ ತಿಳಿದಿದ್ದೇನೆಂದರೆ, ಸುಲ್ತಾನ್ ಮಹಮ್ಮದ್ ಶಾಹ್ ಗುಜರಾತಿಯು ಕಪ್ಪ-ಕಾಣಿಕೆಗಳ ವಸೂಲಿಗೆಂದು ಐದರ್‌ನತ್ತ ಹೋಗಿದ್ದಾನೆಂದು. ಸುಲ್ತಾನ್ ಮಹಮೂದ್‌ನು ಅಲ್ಲಿಂದ ಸ್ವಲ್ಪ ಹಿಂದೆ ಸರಿದು ಮಹಂದರಿ ನದಿ ದಡದಲ್ಲಿ ಬೀಡು ಬಿಟ್ಟನು.

ಹಿಂತಿರುಗಿದನು:

ರಾಜ ಗಂಗದಾಸನು ಹದಿಮೂರು ಲಕ್ಷ ತಿನ್ಗೆ ನಾಣ್ಯಗಳನ್ನೂ ಮತ್ತು ಕೆಲವು ಕುದುರೆಗಳನ್ನು ತೆಗೆದುಕೊಂಡು ಮಹಂದರಿ ನದಿಯ ದಡಕ್ಕೆ ಬಂದನು. ಮತ್ತು ಆತನು ಸುಲ್ತಾನ್ ಮಹಮೂದ್ ಖಿಲ್ಜಿಯನ್ನು ಭೇಟಿ ಮಾಡಿ ತನ್ನ ಕಾಣಿಕೆಗಳನ್ನು ಅರ್ಪಿಸಿದನು. ಇದರಿಂದ ಸಂತೋಷಗೊಂಡ ಬಾದಷಹನು ರಾಜನಿಗೆ ಖಿಲ್ಲತ್ತು (ಬಹುಮಾನ)ಗಳನ್ನು ಕೊಟ್ಟು ಗೌರವಿಸಿದನು. ಅಲ್ಲಿಂದ ಮಾಂಡುವಿನ ಶಾದಿ ಆಬಾದಿನತ್ತ ಹಿಂತಿರುಗಿದನು. ದಾರಿಯಲ್ಲಿ ಬಾದಷಹನು ಐದರ್ ರಾಜನಿಗೆ ಮೂರು ಲಕ್ಷ ತಿನ್ಗೆ ನಾಣ್ಯಗಳನ್ನೂ, ಐದು ಆನೆಗಳನ್ನೂ, ಇಪ್ಪತ್ತೊಂದು (೨೧) ಕುದುರೆಗಳನ್ನೂ ಬಹುಮಾನವಾಗಿ ನೀಡಿದನು. ಇದಾದ ನಂತರ ಸುಲ್ತಾನ್ ಖಿಲ್ಜಿಯು ಬಹಳ ದಿನಗಳ ತನಕ ಮಾಂಡುವಿನಲ್ಲೇ ತಂಗಿದನು ಮತ್ತು ತನ್ನ ಸಾಮ್ರಾಜ್ಯದ ಪ್ರಜಾಹಿತ ಕಾರ್ಯಗಳ ವ್ಯವಸ್ಥೆಯಲ್ಲಿ ತನ್ನನ್ನು ತೊಡಗಿಸಿಕೊಂಡನು.

ಗುಜರಾತನ್ನು ಗೆಲ್ಲುವ ಮಹತ್ವಾಕಾಂಕ್ಷೆ:

ಹಿಜರಿ ೮೫೫ರಲ್ಲಿ ಸುಲ್ತಾನ್ ಮಹಮೂದನು ಗುಜರಾತನ್ನು ಗೆಲ್ಲುವ ಇಚ್ಛೆಯನ್ನು ವ್ಯಕ್ತಪಡಿಸಿದನು. ಈ ಉದ್ದೇಶಕ್ಕಾಗಿ ಒಂದು ಲಕ್ಷ ಸೈನ್ಯವನ್ನು ಸಂಗ್ರಹಿಸಿಕೊಂಡು ಹೊರಟೇಬಿಟ್ಟನು. ಬಾದಷಹನು ಕಸಬಾ 'ಕಾಖೀನವಾಲ'ದಿಂದ, ನಡೆಯುತ್ತಾ

ಸುಲ್ತಾನ್‌ಪುರವನ್ನು ಮುತ್ತಿದನು. ಈ ಪ್ರದೇಶದಲ್ಲಿ ಸುಲ್ತಾನ್ ಮಹಮ್ಮದ್‌ಶಾಹ್ ಗುಜರಾತಿಯ ಗುಮಾಸ್ತನಾಗಿದ್ದ ಮಲಿಕ್ ಅಲ್ಲಾವುದ್ದೀನ್ ಸೊಹ್ರಾಬನು ಇದ್ದನು. ಈತನು ಮೊದಮೊದಲು ಕೆಲವು ದಿನಗಳ ತನಕ ಕೋಟೆಯಿಂದ ಹೊರಬಂದು ಯುದ್ಧವನ್ನು ಮಾಡಿದನು. ಆದರೆ ಆತನ ಬಾದಷಹನಾದ ಸುಲ್ತಾನ್ ಗುಜರಾತಿಯವನ ಕಡೆಯಿಂದ ಯಾವುದೇ ಸಹಾಯ ದೊರೆಯುವ ಲಕ್ಷಣಗಳು ಕಂಡುಬರಲಿಲ್ಲವಾದ ಕಾರಣ, ಈತನು ಸುಲ್ತಾನ್ ಖಿಲ್ಜಿಯೊಂದಿಗೆ ಶಾಂತಿ ಪ್ರಸ್ತಾಪವನ್ನು, ರಕ್ಷಣೆಯನ್ನು ಕೇಳಿದನು. ಹಾಗೂ ಬಾದಷಹನ ಸೇವೆಯಲ್ಲಿ ಹಾಜರಾದನು.

ಅಹಮದಾಬಾದಿಗೆ ರವಾನೆ:

ಸುಲ್ತಾನ್ ಮಹಮೂದ್ ಖಿಲ್ಜಿಯು ಅಲ್ಲಾವುದ್ದೀನ್ ಸೊಹ್ರಾಬನ ಮಕ್ಕಳು, ಪರಿವಾರವನ್ನು ಮಾಂಡುವಿನ ಶಾದಿ ಆಬಾದಿಗೆ ಕಳುಹಿಸಿಕೊಟ್ಟನು. ಆತನಿಂದ ಪ್ರಾಮಾಣಿಕವಾಗಿರುವಂತೆ ತನ್ನ ಸೈನ್ಯದ ಜವಾಬ್ದಾರಿಯನ್ನು ಹೊರಿಸಿ ಪ್ರಮಾಣ ವಚನವನ್ನು ತೆಗೆದುಕೊಂಡು ತನ್ನ ಜೊತೆಯಲ್ಲಿ ಕರೆದುಕೊಂಡು ಹಾಗೂ ಆತನಿಗೆ "ಮುಬಾರಝ್ ಖಾನ್" ಎಂಬ ಬಿರುದನ್ನೂ ಕೊಟ್ಟು ಅಹಮದಾಬಾದಿನತ್ತ ಹೊರಟನು.

ಮಹಮ್ಮದ್ ಶಾಹ್ ಗುಜರಾತಿಯ ಮರಣ:

ದಾರಿಯಲ್ಲಿದ್ದಂತೆಯೇ ಸುಲ್ತಾನ್ ಖಿಲ್ಜಿಗೆ ಸಮಾಚಾರ. ತಿಳಿದಿದ್ದೇನೆಂದರೆ - ಸುಲ್ತಾನ್ ಮಹಮ್ಮದ್ ಶಾಹ್‌ನು ಇಹಲೋಕವನ್ನು ತ್ಯಜಿಸಿದ್ದಾನೆಂದು. ಆತನ ಮರಣಾನಂತರ, ಆತನ ಮಗನಾದ ಸುಲ್ತಾನ್ ಖುತುಬುದ್ದೀನನು ತನ್ನ ತಂದೆಯ ಜಾಗದಲ್ಲಿ ಸಿಂಹಾಸನವನ್ನೇರಿರುವನೆಂದೂ ತಿಳಿಯಿತು. ಸುಲ್ತಾನ್ ಮಹಮೂದ್ ಖಿಲ್ಜಿಯು ಗುಜರಾತಿನ ಮೇಲೆ ಯುದ್ಧ ಮಾಡಿ ವಶಪಡಿಸಿಕೊಳ್ಳುವ ಉದ್ದೇಶದಿಂದಲೇ ಬಂದಿದ್ದನು. ಆದರೆ ಅಲ್ಲಿನ ಪರಿಸ್ಥಿತಿ ಮತ್ತು ಮಾನವೀಯತೆಯ ದೃಷ್ಟಿಯಿಂದ ಯೋಚಿಸಿದನು. ಸುಲ್ತಾನ್ ಖುತುಬುದ್ದೀನನಿಗೊಂದು ಪತ್ರವನ್ನು ಬರೆದು, ಅದರಲ್ಲಿ ಆತನಿಗೆ ಪಟ್ಟಾಭಿಷೇಕದ ಶುಭಾಶಯಗಳನ್ನು ತಿಳಿಸಿದ್ದನು. ಹಾಗು ನಿಮ್ಮ ತಂದೆಯವರ ಮರಣದ ಸುದ್ದಿ ಕೇಳಿ ನಮಗೂ ದುಃಖವಾಗಿದೆಯೆಂದು ವಿಷಾದವನ್ನು ವ್ಯಕ್ತಪಡಿಸಿದ್ದನು.

ಕಸಬಾ ಬರೋದ್ರವನ್ನು ನಾಶಪಡಿಸಿದನು:

ತದನಂತರ ಸುಲ್ತಾನ್ ಖಿಲ್ಜಿಯು ಕಸಬಾ ಬರೋದ್ರದಲ್ಲಿ ಲೂಟಿ, ಕೊಳ್ಳೆ, ವಿನಾಶದ ಕಾರ್ಯವನ್ನು ಕೈಗೊಂಡು ಅನೇಕ ಹಿಂದೂ, ಮುಸಲ್ಮಾನರನ್ನು ಸೆರೆ ಹಿಡಿದು, ಅನೇಕ ದಿನಗಳ ಕಾಲ ಅಲ್ಲಿಯೇ ತಂಗಿದನು. ಆ ಪ್ರದೇಶವನ್ನು ಸಂಪೂರ್ಣವಾಗಿ ಲೂಟಿ ಹೊಡೆದನು. ಇದಾದ ನಂತರ, ಆತನು ಅಹಮದಾಬಾದಿನತ್ತ ಪ್ರಯಾಣಿಸಿದನು.

ಅಲ್ಲಾವುದ್ದೀನ್ ಸೊಹ್ರಾಬನ ವಿದ್ರೋಹ:

ಬಾದಷಹನು ಬಹಳ ವೇಗವಾಗಿ ಪ್ರಯಾಣದ ಹಂತವನ್ನು ಪಾರು ಮಾಡುತ್ತಲಿದ್ದನು. ಅಲ್ಲಾವುದ್ದೀನ್ ಸೊಹ್ರಾಬನು ಈ ಅವಕಾಶವನ್ನೇ ಕಾಯುತ್ತಿದ್ದನು. ತನ್ನ ಹಿಂದಿನ ಒಡೆಯನಾದ ಅಹಮದ್ ಶಾಹ್ ಗುಜರಾತಿಯನ್ನು ಕಾಣಲು ಕಾತುರನಾಗಿದ್ದನು. ಕೊನೆಗೆ ಸುಲ್ತಾನ್ ಮಹಮೂದ್ ಖಿಲ್ಜಿಯೊಂದಿಗೆ ವಿದ್ರೋಹವನ್ನು ಬಗೆದು, ತನ್ನ ಹಿಂದಿನ ಸುಲ್ತಾನ್‌ನ ಮಗನಾದ ಸುಲ್ತಾನ್ ಖುತುಬುದ್ದೀನ್ ಗುಜರಾತಿಯ ಕಡೆಗೆ ಹೋಗಿಬಿಟ್ಟನು.

ಗುಜರಾತಿ ಮತ್ತು ಮಾಳವಿ ಸೈನಿಕರ ಸಿದ್ಧತೆ:

ಸುಲ್ತಾನ್ ಮಹಮೂದ್ ಖಿಲ್ಜಿಯು ಅಹಮದಾಬಾದಿಗೆ ಇನ್ನು ಐದು ಮೈಲಿ ದೂರವಿದ್ದಂತೆ ಸರ್‌ಕಚ್ಛ್ ಎಂಬಲ್ಲಿ ನೆಲೆ ನಿಲ್ಲಿಸಿದನು. ಖುತುಬುದ್ದೀನನೂ ಯುದ್ಧದ ಸಿದ್ಧತೆಗಳನ್ನು ಮಾಡಿಕೊಂಡನು. ಈತನು ತನ್ನ ಸೈನ್ಯವನ್ನು ತೆಗೆದುಕೊಂಡು ಸರ್‌ಕಚ್ಛಿಗೆ ಮೂರು ಮೈಲಿಗಳಿರುವಂತೆ ಬೀಡು ಬಿಟ್ಟನು. ಕೆಲವು ದಿನಗಳ ತನಕ ಎರಡೂ ಕಡೆಯ ಸೈನಿಕರು ಯಾವುದೇ ಘಟನೆಗಳಿಲ್ಲದಂತೆ ಹಾಗೆಯೇ ನಿಂತಿದ್ದರು.

ಗುಜರಾತಿ ಸೈನ್ಯದ ಮೇಲೆ ಶಬ್‌ಖೂನನ ವ್ಯರ್ಥ ಪ್ರಯತ್ನ:

ಹಿಜರಿ ೮೬೫ ಸಫ಼ರ್ ತಿಂಗಳ ಒಂದನೇ ತಾರೀಖಿನಂದು ರಾತ್ರಿಯಲ್ಲಿ ಆಕಸ್ಮಿಕ ಶಬ್‌ಖೂನ್ ಯುದ್ಧವನ್ನು ಮಾಡಲು ಖಿಲ್ಜಿ ಸೈನಿಕರು ತಮ್ಮ ಸೈನಿಕ ಬೀಡಿನಿಂದ ಹೊರಬಂದರು. ಯಾವ ವ್ಯಕ್ತಿಯು ದಾರಿಯನ್ನು ತೋರಲು ನೇಮಕಗೊಂಡಿದ್ದನೋ ಆತನು ರಾತ್ರಿಯಲ್ಲಿ ದಾರಿತಪ್ಪಿದನು. ಇದರ ಪರಿಣಾಮವೆಂದರೆ ಸುಲ್ತಾನ್ ಮಹಮೂದ್‌ನಿಗೆ ಆ ರಾತ್ರಿಯೆಲ್ಲಾ ಒಂದು ಭಯಾನಕ ಕಾಡಿನಲ್ಲಿ ರಾತ್ರಿ ಕಳೆಯುವಂತಾಯಿತು.

ಮಾಲವ ಸೈನ್ಯದ ವ್ಯವಸ್ಥೆ:

ಮಾರನೇ ದಿನದ ಬೆಳಿಗ್ಗೆ ಸುಲ್ತಾನ್ ಮಹಮೂದ್‌ನು ತನ್ನ ಸೈನ್ಯದ ಒಂದು ಭಾಗವನ್ನು ಸಾರಂಗಪುರದ ಸೈನ್ಯದೊಂದಿಗೆ ಸಂಯೋಜಿಸಿ ತನ್ನ ಮಗನಾದ ಘಿಯಾಸುದ್ದೀನನ ಅಧೀನತೆಗೆ ಒಪ್ಪಿಸಿದನು. ಮುತ್ತಿಗೆಯ ವಿಷಯದಲ್ಲಿ ಚಂದೇರಿಯ ಅಮೀರನಿಗೆ ಜವಾಬ್ದಾರಿಯನ್ನು ವಹಿಸಿದನು. ಸ್ವತಃ ತಾನು ಕೇಂದ್ರ ಸೈನ್ಯದ ಜವಾಬ್ದಾರಿಯನ್ನು ಹೊತ್ತನು. ಇಷ್ಟಾದ ನಂತರ ಯುದ್ಧಕ್ಕೆ ಸಿದ್ಧನಾದನು.

ಯುದ್ಧದ ಪ್ರಾರಂಭ:

ಸುಲ್ತಾನ್ ಖುತುಬುದ್ದೀನನು ಸಹ ಗುಜರಾತಿ ಸೈನ್ಯವನ್ನು ವ್ಯವಸ್ಥೆಗೊಳಿಸಿ

ಸಿದ್ಧರನ್ನಾಗಿಸಿದನು. ಯುದ್ಧಕ್ಕೋಸ್ಕರ ಮೈದಾನದತ್ತ ಹೊರಟನು. ಎರಡೂ ಕಡೆ ಸೈನಿಕರು, ಸರದಾರರೂ ಎದುರುಬದುರಾದರು. ಗುಜರಾತಿ ಕೇಂದ್ರ ಸೈನಿಕರು ಸೋತು ಮೈದಾನವನ್ನು ಬಿಟ್ಟು ಓಡಿ ಹೋದರು. ಚಂದೇರಿ ಭಾಗದ ಪ್ರಮುಖ ಅಮೀರ ಮಲಿಕ್ ಅಶ್ರಫ್ ಮುಜಫ್ಫರ್ ಇಬ್ರಾಹೀಂನು ಮಾಳವೀ ಸೈನ್ಯದಿಂದ ಸ್ವಲ್ಪ ಬೇರ್ಪಟ್ಟು ಗುಜರಾತಿ ಸೈನ್ಯದ ಮೇಲೆ ಆಕ್ರಮಣವನ್ನು ಮಾಡಿದ್ದರ ಪರಿಣಾಮವೆಂದರೆ, ಗುಜರಾತಿ ಸೈನಿಕರು ಯುದ್ಧ ಮೈದಾನದಿಂದ ಓಟ ಕಿತ್ತರು.

ಮಲಿಕ್ ಅಶ್ರಫ್‌ನ ಶೌರ್ಯ ಸಾಹಸಗಳು:

ಮಲಿಕ್ ಅಶ್ರಫನು ಸುಲ್ತಾನ್ ಖುತುಬುದ್ದೀನ್ ಗುಜರಾತಿ ಬಿಡಾರದವರೆಗೂ ಮೇಮ್ನಾ ಎಂಬುವನನ್ನು ಓಡಿಸಿಕೊಂಡು ಹೋಗಿದ್ದನು. ಆತನು ಶತ್ರು ಸೈನ್ಯವನ್ನು ಬಹಳ ಹೀನಾಯವಾಗಿ ನಾಶಪಡಿಸಿದನು. ಸುಲ್ತಾನ್ ಖುತುಬುದ್ದೀನನ ಖಜಾನೆಯನ್ನೂ ತನ್ನ ವಶಕ್ಕೆ ತೆಗೆದುಕೊಂಡುಬಿಟ್ಟಿದ್ದನು. ಮಲಿಕ್ ಅಶ್ರಫ್‌ನ ಹತ್ತಿರ ಎಷ್ಟು ಆನೆಗಳಿದ್ದವೋ ಅಷ್ಟು ಆನೆಗಳ ಮೇಲೆ, ಎಷ್ಟು ಸಾಧ್ಯವಿತ್ತೋ ಅಷ್ಟು ಸಂಪತ್ತನ್ನು ತುಂಬಿ ಹೇರಿಕೊಂಡು ಮಾಳವಿ ಸೈನ್ಯದ ಶಿಬಿರಕ್ಕೆ ತರಲಾಯಿತು. ಮತ್ತೊಮ್ಮೆ ಖಜಾನೆಯ ಹಣವನ್ನು ತರಲು ಹೊರಟಾಗ ಸುದ್ದಿ ಬಂದಿದ್ದೇನೆಂದರೆ, ಗುಜರಾತಿ ಸೈನ್ಯದ ಒಂದು ಭಾಗವು ಷಹಜ಼ಾದ ಫ಼ಿದಾಯಿ ಖಾನನ ಮೇಲೆ ಹೊಸ ಆಕ್ರಮಣವನ್ನು ಮಾಡಿ, ಆತನನ್ನು ತುಂಬಾ ಕಷ್ಟಕ್ಕೀಡು ಮಾಡಿದ್ದಾರೆಂಬುದು ಗೊತ್ತಾಯಿತು. ಷಹಜಾದನು ಯುದ್ಧ ಮೈದಾನದಿಂದ ಓಡಿ ಹೋಗಿದ್ದಾನೆಂದೂ ತಿಳಿಯಿತು.

ಸುಲ್ತಾನ್ ಖಿಲ್ಜಿಯ ಸಾಹಸ:

ತಕ್ಷಣ ಮಲಿಕ್ ಅಶ್ರಫ್‌ನು ತನ್ನ ಆನೆಗಳನ್ನೂ, ಸೈನ್ಯವನ್ನೂ ಜೊತೆಯಲ್ಲಿ ಕರೆದುಕೊಂಡು ಒಂದು ಜಾಗದಲ್ಲಿ ನಿಂತನು. ಸುಲ್ತಾನ್ ಖಿಲ್ಜಿಯು ತನ್ನ ಸೈನ್ಯ ಚೆಲ್ಲಾಪಿಲ್ಲಿಯಾದುದನ್ನು ನೋಡಿ, ಹಾಗೂ ಮೇಸ್ರಾದ ಸೋಲನ್ನು ಕಂಡು ಆಶ್ಚರ್ಯಚಕಿತನಾದನು. ಆದರೂ ಇದನ್ನು ತನ್ನ ಸೋಲೆಂದು ಭಾವಿಸಲಿಲ್ಲ. ಸುಲ್ತಾನ್‌ನು ಕೇವಲ ನಲವತ್ತು ಸವಾರರೊಂದಿಗೆ ತುಂಬಾ ಧೈರ್ಯದಿಂದ ಯುದ್ಧ ಮಾಡುತ್ತಲೇ ಇದ್ದನು. ಎಲ್ಲಿನತನಕ ತನ್ನ ಬತ್ತಳಿಕೆಯಲ್ಲಿ ಬಾಣಗಳಿದ್ದವೋ ಅಲ್ಲಿತನಕ ತನ್ನ ಯುದ್ಧದ ಕಮಾನನ್ನು ಸಡಿಗೊಳಿಸಿರಲಿಲ್ಲ.

ಮಹಮೂದ್ ಖಿಲ್ಜಿಯ ಪ್ರಶಂಸಾತ್ಮಕ ಕಾರ್ಯ:

ಸುಲ್ತಾನ್ ಖುತುಬುದ್ದೀನ್ ಗುಜರಾತಿಯು ಒಂದು ದೊಡ್ಡ ಸೈನ್ಯವನ್ನು ಇಟ್ಟುಕೊಂಡು, ಆಯಕಟ್ಟಿನ ಜಾಗದಲ್ಲಿ ಅವಿತುಕೊಂಡಿದ್ದನು. ಆತನಿಗೆ ಈಗ ಇಲ್ಲಿಂದ ಹೊರಡುವುದೇ ಉಚಿತವೆಂದು ತಿಳಿದಾಗ ತನ್ನ ಆಯಕಟ್ಟಿನ ಜಾಗದಿಂದ ಹೊರಬಂದನು.

ಸುಲ್ತಾನ್ ಖಿಲ್ಜಿಯ ಕಡೆಗೆ ಹೊರಟನು. ಈ ಸಂದರ್ಭದಲ್ಲಿ ಸುಲ್ತಾನ್ ಖಿಲ್ಜಿಯು ಒಂದು ಚಮತ್ಕಾರಿಕ ರೀತಿಯಲ್ಲಿ ತನ್ನ ಶೌರ್ಯವನ್ನು ತೋರಿದನು. ಈಗ ಆತನ ಹತ್ತಿರ ಕೇವಲ ಹದಿಮೂರು ಜನ ಸವಾರರು ಮಾತ್ರ ಇದ್ದರು. ಖಿಲ್ಜಿಯು ಈ ಹದಿಮೂರು ಸವಾರರನ್ನು ತನ್ನೊಡನೆ ತೆಗೆದುಕೊಂಡು ಮಿಂಚಿನ ವೇಗದಲ್ಲಿ ಸುಲ್ತಾನ್ ಖುತುಬುದ್ದೀನನ ಸೈನ್ಯದ ಶಿಬಿರದಲ್ಲಿಗೆ (ಅದು ಯುದ್ಧ ಮೈದಾನದ ಹಿಂಭಾಗದಲ್ಲಿತ್ತು) ಬಂದುಬಿಟ್ಟನು. ಆತನು ನೇರವಾಗಿ ಸುಲ್ತಾನ್‌ನು ಇಳಿದುಕೊಳ್ಳುವ ವಿಶೇಷ ಬಿಡಾರದೊಳಕ್ಕೆ ನುಗ್ಗಿ, ಸುಲ್ತಾನ್‌ನ ಕಿರೀಟ, ತಲೆಯ ಮೇಲಿನ ಪರದಾ, ಸೊಂಟಪಟ್ಟಿ ಎಲ್ಲವನ್ನೂ ತನ್ನ ವಶಕ್ಕೆ ತೆಗೆದುಕೊಂಡನು. ತಕ್ಷಣ ಅಲ್ಲಿಂದ ತನ್ನ ಶಿಬಿರಕ್ಕೆ ಓಡಿ ಬಂದುಬಿಟ್ಟನು.

ಮಾಂಡುವಿಗೆ ಹಿಂತಿರುಗಿದನು:

ಸುಲ್ತಾನ್ ಮಹಮೂದ್ ಖಿಲ್ಜಿಯ ಸುತ್ತಲೂ ಸುಮಾರು ನಾಲ್ಕೈದು ಸಾವಿರ ಸೈನಿಕ ಸವಾರರು ಬಂದು ನಿಂತುಬಿಟ್ಟರು. ಆತನು ಪ್ರಚಾರ ಮಾಡಿದ್ದೇನೆಂದರೆ, ಇಂದು ರಾತ್ರಿ ಶತೃ ಸೈನ್ಯದ ಮೇಲೆ ಶಬ್‌ಖೂನ್ (ಅನಿರೀಕ್ಷಿತ ರಾತ್ರಿಯ ಆಕ್ರಮಣ)ವನ್ನು ಮಾಡಬೇಕೆಂದು. ರಾತ್ರಿಯ ಒಂದು ಭಾಗ ಕಳೆದಾಗ ಸುಲ್ತಾನ್ ಮಹಮೂದ್‌ನು ಶಬ್‌ಖೂನನ ನೆಪದಲ್ಲಿ ರವಾನೆಯಾಗಿ ಮಾಂಡುವಿನ ಶಾದಿ ಆಬಾದ್ ಕಡೆ ಬಂದುಬಿಟ್ಟನು.

ಮಹಮೂದ್ ಖಿಲ್ಜಿಯ ಸೋಲು:

ಗುಜರಾತಿಗಳು ನಿಶ್ಚಯವಾಗಿಯೂ, ಮಹಮೂದ್ ಖಿಲ್ಜಿಯನ್ನು ಸೋಲಿಸಿದ್ದರು. ಸುಲ್ತಾನ್ ಖಿಲ್ಜಿಗೆ ಇದರಿಂದ ತುಂಬಾ ದುಃಖವಾಯಿತು. ಹೇಳುವುದಾದರೆ ಸುಲ್ತಾನ್ ಮಹಮೂದ್‌ನು ತನ್ನ ಶಾಸನ ಕಾಲದ ಅವಧಿಯಲ್ಲಿ ಎಲ್ಲಿಯೂ ಸೋಲನ್ನು ಅನುಭವಿಸಿರಲಿಲ್ಲ. ಆತನು ಯಾವುದೇ ಯುದ್ಧದಲ್ಲಿ ಭಾಗವಹಿಸಿದ್ದರೂ, ಎಲ್ಲ ಕಡೆ ಗೆಲುವನ್ನೇ ಕಂಡಿದ್ದನು. ಆದರೆ ಗುಜರಾತಿಗಳು ಸೋಲು ಏನೆಂಬುದನ್ನು ಕಲಿಸಿದ್ದರು.

ವಿದ್ರೋಹಿಗಳಿಗೆ ಶಿಕ್ಷೆ:

ಮಾಂಡುವಿನ ಶಾದಿ ಆಬಾದಿಗೆ ತಲುಪಿದ ಸುಲ್ತಾನ್ ಮಹಮೂದ್ ಖಿಲ್ಜಿಯು ತನ್ನ ಸೈನ್ಯದ ವ್ಯವಸ್ಥೆಯನ್ನು ಸರಿಪಡಿಸಲು ಪ್ರಯತ್ನಿಸಿದನು. ಅವರಿಗೆ ಸರಿಯಾದ ತರಬೇತಿಯನ್ನು ಕೊಟ್ಟನು. ಇದೇ ಸಂದರ್ಭದಲ್ಲಿ, ಷಹಜ಼ಾದ ಘಿಯಾಸುದ್ದೀನನು, ಸೂರತ್ ಬಂದರಿನ ಕೆಲವು ಪ್ರದೇಶಗಳಲ್ಲಿ ಆಕ್ರಮಣವನ್ನು ನಡೆಸಿ, ಮಾಂಡುವಿಗೆ ವಾಪಸ್ಸಾದನು. ಅದೇ ದಿನಗಳಲ್ಲಿ ಮುಶೀರುಲ್ ಮುಲ್ಕ್–ಅಲ್–ಮುಖಾತಿಬ್–ಬ–ನಿಜಾಮುಲ್ ಮುಲ್ಕ್ ಮತ್ತು ಆತನ ಮಕ್ಕಳ ವಿಚಾರದಲ್ಲಿ ಬಾದಷಹನಿಗೆ ಸುದ್ದಿ

ತಿಳಿದಿದ್ದುನೇಂದರೆ, ಈ ಜನರು ವಿದ್ರೋಹದ ಬಾವುಟಗಳನ್ನು ಮೇಲೇರಿಸುವ ತವಕದಲ್ಲಿದ್ದಾರೆಂದೂ, ಅನೇಕ ದಂಗೆಗಳನ್ನೆಬ್ಬಿಸುವ ಹುನ್ನಾರಗಳನ್ನು ರಚಿಸಿದ್ದಾ ರೆಂದೂ, ಹಾಗೂ ಈ ವಿದ್ರೋಹಿಗಳಿಗೆ ಶಿಕ್ಷೆಯನ್ನು ಕೊಡಬೇಕೆಂದೂ ತಿಳಿಸಿದರು.

ಗುಜರಾತಿ ಬಾದಷಹನೊಂದಿಗೆ ಸಂಧಿ ಸನ್ನಾಹ:

ಹಿಜರಿ ೮೫೭ರಲ್ಲಿ ಸುಲ್ತಾನ್ ಮಹಮೂದ್ ಖಿಲ್ಜಿಯು ಮಾರ್ವಾಡವನ್ನು ಗೆಲ್ಲುವ ಮನಸ್ಸು ಮಾಡಿದ. ಬಾದಷಹ ಖಿಲ್ಜಿಗೆ, ಸುಲ್ತಾನ್ ಖುತುಬುದ್ದೀನ ಗುಜರಾತಿಯ ಕಡೆಯಿಂದ ಅಪಾಯವಿತ್ತು. ಆದ್ದರಿಂದ ಆತನು ನಿಶ್ಚಯಿಸಿದುದೇನೆಂದರೆ, ಮಾರ್ವಾಡದ ಮೇಲೆ ಹೋಗುವುದಕ್ಕಿಂತ ಮುಂಚೆಯೇ ಸುಲ್ತಾನ್ ಖುತುಬುದ್ದೀನ್ ಗುಜರಾತಿಯೊಂದಿಗೆ ಸಂಧಿ ಮಾಡಿಕೊಳ್ಳುವುದು ಉತ್ತಮವೆಂದು. ಈ ವಿಚಾರವನ್ನು ಬಾದಷಹನು ಯಾರೊಂದಿಗೂ ಹೇಳಿರಲಿಲ್ಲ. ಸೈನ್ಯವನ್ನೆತ್ತಿಕೊಂಡು ಮಾಂಡುವಿನಿಂದ ಕಸಬಾಧಾರ್‌ನ್ನು ತಲುಪಿದ. ಇಲ್ಲಿಂದ ತಾಜ್‌ಖಾನನಿಗೆ ಒಂದು ವಿಶಾಲ ಸೈನ್ಯವನ್ನು ಕೊಟ್ಟು, ಗುಜರಾತಿ ಗಡಿಪ್ರದೇಶದತ್ತ ಕಳುಹಿಸಿದ. ಅಲ್ಲಿಂದ ಸಂಧಿಯ ಮಾತುಕತೆಯನ್ನು ಪ್ರಾರಂಭಿಸಬಹುದೆಂದು ಯೋಚಿಸಿದ್ದನು.

ಗುಜರಾತಿ ಮಂತ್ರಿಗಳ ಹೆಸರಿಗೆ ತಾಜ್‌ಖಾನನ ಪತ್ರಗಳು:

ತಾಜ್‌ಖಾನನು ಖುತುಬುದ್ದೀನ ಗುಜರಾತಿಯ ವಜೀರರು (ಮಂತ್ರಿ)ಗಳ ಹೆಸರಿನಲ್ಲಿ ಪತ್ರಗಳನ್ನು ಬರೆದು ತನ್ನ ರಾಜದೂತರನ್ನು ಗುಜರಾತಿನತ್ತ ಕಳುಹಿಸಿದನು. ಆತನು ಈ ಪತ್ರಗಳಲ್ಲಿ – ಸುಲ್ತಾನ್ ಗುಜರಾತ್ ಮತ್ತು ಸುಲ್ತಾನ್ ಮಾಳವದ ಆಂತರಿಕ ವೈಷಮ್ಯವು ಭಗವಂತನ (ಅಲ್ಲಾಹ್) ಸೃಷ್ಠಿಯಾದ ಮಾನವಕುಲಕ್ಕೆ ಒಂದು ರೀತಿಯ ಬಹುದೊಡ್ಡ ಶಾಪವೆನಿಸಿದೆ. ಆದ್ದರಿಂದ ಇಬ್ಬರಲ್ಲೂ ಸಂಧಿ ಮಾಡಿಕೊಳ್ಳುವುದು ಉಚಿತವೆನಿಸುತ್ತಿದೆ. ಆದ್ದರಿಂದ ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ, ತಾವು ಈ ಸಂಬಂಧದಲ್ಲಿ ಸಾಧ್ಯವಾದಷ್ಟು ಪ್ರಯತ್ನಿಸಬೇಕು. ಏಕೆಂದರೆ ಈ ಒಂದು ಪವಿತ್ರ ಕಾರ್ಯವು ಬೇಗ ಕಾರ್ಯರೂಪಕ್ಕೆ ಬರುವುದು ಒಳ್ಳೆಯದು.

ಗುಜರಾತಿ ಮತ್ತು ಮಾಳವೀಯರಲ್ಲಿ ಸಂಧಿ:

ಸುಲ್ತಾನ್ ಖುತುಬುದ್ದೀನ್ ಗುಜರಾತಿ ಸಹ ಈ ವಿಚಾರದಲ್ಲಿ ತನ್ನ ದೂರದರ್ಶಿತ್ವವನ್ನು ಪ್ರದರ್ಶಿಸಿದನು. ಸಂಧಿಗೆ ಸಂಬಂಧಪಟ್ಟ ಮಾತುಕತೆಗಳನ್ನು ಪ್ರಾರಂಭಿಸಲು ಅನುಮತಿಯನ್ನು ನೀಡಿದನು. ಇದಾದ ನಂತರ ಎರಡೂ ಕಡೆಯ ಪ್ರಮುಖರು ಒಂದು ಕಡೆ ಸೇರಿದರು. ಅವರು ಸಂಧಿಗೆ ಸಂಬಂಧಿಸಿದ ಷರತ್ತುಗಳು ಹೀಗಿದ್ದವು – "ರಾಜ ಕೋನ್ಜಿಯಾಗೆ ಸೇರಿದ್ದ ಗುಜರಾತಿ ಸರಹದ್ದಿನಲ್ಲಿರುವ ಆ ಪಟ್ಟಣಗಳನ್ನು ಗುಜರಾತಿಗೆ ಬಿಟ್ಟುಕೊಡಬೇಕೆಂದೂ, ಇಬ್ಬರಲ್ಲೂ ಸ್ನೇಹ ಸಂಬಂಧಗಳನ್ನು

ಹೆಚ್ಚಿಸಿಕೊಂಡು ಸಂದರ್ಭ ಬಂದಾಗ ಒಬ್ಬರಿಗೊಬ್ಬರು ಸಹಾಯವನ್ನು ಮಾಡಬೇಕು" ಎಂದು. ಈ ಷರತ್ತನ್ನು ಇಬ್ಬರೂ ಒಪ್ಪಿಕೊಂಡರು.

ಮಹೂನಿಯ ರಾಜಪೂತರ ಕೊಲೆ:

ಹಾರೂನಿಯ ಸುತ್ತಮುತ್ತಲ ಪ್ರದೇಶದಲ್ಲಿ ಬಹಳ ಕೆಟ್ಟ ವಿದ್ರೋಹಿ ರಾಜಪೂತರು ಜನರಿಗೆ ತುಂಬಾ ಹಿಂಸಿಸುತ್ತಿದ್ದ ವಿಷಯ ತಿಳಿಯಿತು. ಹಿಜರಿ ೮೫೮ರಲ್ಲಿ ಸುಲ್ತಾನ್ ಮಹಮೂದ್‌ನು ಆ ವಿದ್ರೋಹಿಗಳನ್ನು ಅಡಗಿಸಲು ಹೊರಟನು. ಬಾದಷಹನು ಕಸಬಾ ಮಹೂನಿಯಲ್ಲಿನ ಅನೇಕ ದುಷ್ಟ ರಜಪೂತರನ್ನು ಹಿಡಿದು ಕೊಲೆ ಮಾಡಿಸಿದನು. ಅವರ ಪರಿವಾರದವರನ್ನು ಸೆರೆ ಹಿಡಿಸಿ, ಮಾಂಡುವಿಗೆ ಕಳುಹಿಸಿಕೊಟ್ಟನು.

ಮಹಮೂದ್ ಖಿಲ್ಜಿಯು ಬಯಾನದಲ್ಲಿ:

ಇದಾದ ನಂತರ ಸುಲ್ತಾನ್ ಮಹಮೂದ್‌ನು ಗ್ವಾಲಿಯರ್ ಮಾರ್ಗವಾಗಿ ಬಯಾನದತ್ತ ರವಾನೆಯಾದನು. ಬಾದಷಹನು ಕಸಬಾ ಮಹೂನಿಯಲ್ಲಿನ ಅನೇಕ ದುಷ್ಟ ರಾಜಪೂತರನ್ನು ಹಿಡಿದು ಕೊಲೆ ಮಾಡಿಸಿದನು. ಅವರ ಪರಿವಾರದವರನ್ನು ಸೆರೆ ಹಿಡಿಸಿ ಮಾಂಡುವಿಗೆ ಕಳುಹಿಸಿಕೊಟ್ಟನು.

ಮಹಮೂದ್ ಖಿಲ್ಜಿಯು ಬಯಾನದಲ್ಲಿ:

ಇದಾದ ನಂತರ ಸುಲ್ತಾನ್ ಮಹಮೂದನು ಗ್ವಾಲಿಯರ್ ಮಾರ್ಗವಾಗಿ ಬಯಾನದತ್ತ ರವಾನೆಯಾದನು. ಬಾದಷಹನು ಬಯಾನ ಹತ್ತಿರಕ್ಕೆ ಬಂದಾಗ ಅಲ್ಲಿನ ಶಾಸಕನಾದ ದಾವೂದ್‌ಖಾನನು ಬಾದಷಹನ ಸೇವೆಯಲ್ಲಿ ಹಾಜರಾಗಿ, ತಾನು ಸಲ್ಲಿಸಬೇಕಾಗಿದ್ದ ಕಪ್ಪ-ಕಾಣಿಕೆಗಳನ್ನು ಸಲ್ಲಿಸಿ, ಅಧೀನತೆಯ ವಿಶ್ವಾಸವನ್ನು ತೋರಿದನು. ಬಾದಷಹನು ಬಯಾನದ ಶಾಸಕನಾಗಿರಲು ದಾವೂದ್‌ಖಾನನನ್ನೇ ಪುನರ್ನೇಮಕ ಮಾಡಿದನು. ದಾವೂದ್‌ಖಾನ್ ಮತ್ತು ಯೂಸೂಫ್‌ಖಾನ್ ಹಿಂದೂನಿಯರಲ್ಲಿ ಬಹಳ ದಿನಗಳಿಂದ ದ್ವೇಷಾಸೂಯೆಗಳು ನಡೆದು ಬರುತ್ತ ಇದ್ದವು. ಸುಲ್ತಾನ್ ಮಹಮೂದ್‌ನು, ಇವರಿಬ್ಬರನ್ನೂ ಒಂದು ಕಡೆ ಕರೆಯಿಸಿಕೊಂಡು ಇಬ್ಬರಿಗೂ ಸ್ನೇಹದಿಂದಿರಲು ಸಮಾಧಾನ ಪಡಿಸಿದನು. ಇವರಿಬ್ಬರೂ ಒಳ್ಳೆಯ ಸ್ನೇಹಿತರಾಗಿಬಿಟ್ಟರು. ಬಾದಷಹನು ಹಾರೂನಿ, ಶಹರ್‌ನವಾ ಮತ್ತು ಅಜ್ಮೇರಿನ ಆಡಳಿತಕ್ಕೆ ಷಹಜಾನ ಫಿದಾಯಿ ಎಂಬುವನನ್ನು ನೇಮಿಸಿದನು. ನಂತರ ತಾನು ಮಾಂಡುವಿನತ್ತ ಪ್ರಯಾಣವನ್ನು ಬೆಳೆಸಿದನು.

ಮಾಹೋರನ್ನು ಗೆಲ್ಲುವ ಮನಸ್ಸು:

ಇದೇ ವರ್ಷದಲ್ಲಿ ಅಲ್ಲಾವುದ್ದೀನ್ ಬಹಮನಿಯ ಇಬ್ಬರು ಅಮೀರರಾದ

ಸಿಕಂದರ್‌ಖಾನನೂ ಮತ್ತು ಜಲಾಲ್‌ಖಾನ್ ಬುಖಾರಿಯವರು, ಸುಲ್ತಾನ್ ಮಹಮೂದ್ ಖಿಲ್ಜಿಯು ಸೇವೆಯಲ್ಲಿ ಅರ್ಜಿಗಳನ್ನು ರವಾನಿಸಿದರು. ಅರ್ಜಿಯಲ್ಲಿದ್ದುದೇನೆಂದರೆ – ಬರಾರಿನ ಉತ್ತಮ ಪ್ರದೇಶವಾದ ಮಾಹೋರನ್ನು ಗೆದ್ದುಕೊಳ್ಳಬೇಕೆಂದಿತ್ತು. ಸುಲ್ತಾನ್ ಮಹಮೂದ್‌ನು ಒಂದು ದೊಡ್ಡ ಸೈನ್ಯವನ್ನು ತೆಗೆದುಕೊಂಡು ಹೋಷಂಗ್ ಆಬಾದ್‌ನ ಮಾರ್ಗವಾಗಿ ಮಾಹೋರಿನತ್ತ ಹೊರಟನು. ಮಹಮೂದಾಬಾದಿನ ಪ್ರದೇಶದಲ್ಲಿ ಖಿಲ್ಜಿಯ ಸೈನ್ಯವು ತಲುಪಿದಾಗ, ಸಿಕಂದರ್‌ಖಾನನು ಸುಲ್ತಾನ್ ಖಿಲ್ಜಿಯನ್ನು ಭೇಟಿಯಾದನು. ಹಾಗೂ ಆತನ ಅಧೀನತೆಯನ್ನು ಸ್ವೀಕರಿಸಿಕೊಂಡನು.

ಮಾಹೋರ್‌ನಲ್ಲಿ ಕೋಟೆಯ ಮುತ್ತಿಗೆ:

ಸುಲ್ತಾನ್ ಖಿಲ್ಜಿಯು ಮಾಹೋರ್ ಕೋಟೆಯನ್ನು ಮುತ್ತಿದನು. ಸುಲ್ತಾನ್ ಅಲ್ಲಾವುದ್ದೀನ್ ಬಹಮನಿಯ ಒಂದು ವಿಶಾಲ ಸೈನ್ಯದೊಂದಿಗೆ ಕೋಟೆಯ ರಕ್ಷಣೆಗೆಂದು ಬಂದನು. ಸುಲ್ತಾನ್ ಖಿಲ್ಜಿಯು ಯೋಚಿಸಿದ್ದೇನೆಂದರೆ – ಬಹಮನಿ ಬಾದಷಹನ ಸೈನ್ಯವನ್ನೆದುರಿಸುವುದು ಕಷ್ಟವೆಂದು. ಆದ್ದರಿಂದ ಆತನು ಮಲಿಕ್ ಆಲಿಶಾನ್, ತಾಜ್‌ಖಾನ್, ಮತ್ತು ಸಿಕಂದರ್‌ಖಾನ್ ಬುಖಾರಿಯವರನ್ನು ಕೋಟೆಯ ಮುತ್ತಿಗೆಯಲ್ಲಿ ನಿಲ್ಲಿಸಿ, ಆತನು ವಾಪಸ್ಸಾದನು.

ಮಹಮೂದ್ ಖಿಲ್ಜಿಯ ಬಕ್ಲಾನಕ್ಕೆ ಪ್ರಯಾಣ:

ಸುಲ್ತಾನ್ ಮಹಮೂದ್ ಖಿಲ್ಜಿಗೆ ದಾರಿಯಲ್ಲೇ ಸುದ್ದಿ ಬಂದದ್ದೇನೆಂದರೆ – ಅಸೀರ್‌ನ ಶಾಸಕ ಮುಬಾರಕ್‌ಖಾನನು ಬಕ್ಲಾನ ಪ್ರದೇಶ, ಅದು ಗುಜರಾತ್ ಮತ್ತು ದಕ್ಷಿಣ ಪ್ರದೇಶದ ಮಧ್ಯ ಇದೆ, ಅದರ ಮೇಲೆ ಆಕ್ರಮಣವನ್ನು ಮಾಡಿದ್ದಾನೆಂದು ತಿಳಿಯಿತು. ಬಕ್ಲಾನದ ರಾಜನು ಸುಲ್ತಾನ್ ಖಿಲ್ಜಿಯ ಅಧೀನದಲ್ಲಿದ್ದು, ಕಪ್ಪ–ಕಾಣಿಕೆಗಳನ್ನು ಸರಿಯಾಗಿ ಸಲ್ಲಿಸುತ್ತಿದ್ದನು. ಈ ಸಂದರ್ಭದಲ್ಲಿ ಆತನ ಸಹಾಯವನ್ನು ಮಾಡುವುದು ಉಚಿತವೆಂದು ತಿಳಿದು, ದಾರಿಯಲ್ಲಿದ್ದಂತೆಯೇ ಬಕ್ಲಾನದತ್ತ ಹೊರಟನು. ತಾನು ಅಲ್ಲಿಗೆ ತಲುಪುವ ಮೊದಲೇ ಇಕ್ಬಾಲ್‌ಖಾನ್ ಮತ್ತು ಯೂಸುಫ್‌ಖಾನರನ್ನು ಅತ್ತ ಕಳುಹಿಸಿದನು.

ಮೀರಾನ್ ಮುಬಾರಕನೊಂದಿಗೆ ಯುದ್ಧ ಮತ್ತು ಗೆಲುವು:

ಮೀರಾನ್ ಮುಬಾರಕನಿಗೆ ಸುಲ್ತಾನ್ ಖಿಲ್ಜಿಯ ಆಗಮನದ ಸುದ್ದಿ ತಿಳಿಯುತ್ತಲೇ ತಾನೂ ಒಂದು ದೊಡ್ಡ ಸೈನ್ಯವನ್ನು ತೆಗೆದುಕೊಂಡು ಯುದ್ಧಕ್ಕೆ ನಿಂತನು. ಇಬ್ಬರಲ್ಲೂ ಘೋರ ಯುದ್ಧವೇ ನಡೆಯಿತು. ಫಾರೂಖಿ ಶಾಸಕನು ಬಹಳ ಹೊತ್ತಿನ ತನಕ ಮೈದಾನದಲ್ಲಿ ನಿಲ್ಲಲಾರದೇ ಅಸೀರ್‌ನತ್ತ ಓಡಿಹೋದನು. ಮಹಮೂದ್ ಖಿಲ್ಜಿಯು

ಅಸೀರ್‌ನ ಸುತ್ತಮುತ್ತಲ ಕೆಲವು ಪ್ರದೇಶಗಳನ್ನು ಲೂಟಿ ಮಾಡಿದನು. ನಂತರ ಮಾಂಡುವಿನ ಶಾದಿ ಆಬಾದ್‌ನತ್ತ ಪ್ರಯಾಣವನ್ನು ಬೆಳೆಸಿದನು.

ಮೀರಾನ್ ಮುಬಾರಕ ಫಾರೂಖಿಯ ಬಕ್ಲಾನದಲ್ಲಿ ಪ್ರವೇಶ:

ಇದೇ ವರ್ಷದಲ್ಲಿ ಸುಲ್ತಾನ್ ಮಹಮೂದ್ ಖಿಲ್ಜಿಗೆ ತಿಳಿದುಬಂದದ್ದೇನೆಂದರೆ – ಬಕ್ಲಾನದ ರಾಜನ ಮಗ ರಾಯ್‌ಬಾಲು ಎಂಬುವನು ಬಾದಷಹನ ಹುಜೂರಿನಲ್ಲಿ ಬರಲು ಆಸೆಯನ್ನಿಟ್ಟುಕೊಂಡಿದ್ದಾನೆಂದು. ಆದರೆ ಮೀರಾನ್ ಮುಬಾರಕ ಫಾರೂಖಿಯು ಇದನ್ನು ವಿರೋಧಿಸುತ್ತಿದ್ದಾನೆ. ಇದನ್ನು ತಡೆಯಲು ಆತನು ಬಕ್ಲಾನಕ್ಕೆ ವಾಪಸ್ ಬಂದಿದ್ದಾನೆಂದು ತಿಳಿಯಿತು. ಸುಲ್ತಾನ್ ಖಿಲ್ಜಿಯು ತಕ್ಷಣ ಷಹಜ಼ಾದ ಘಿಯಾಸುದ್ದೀನನನ್ನು ಮೀರಾನ್ ಮುಬಾರಕನನ್ನು ದಮನ ಮಾಡಲು ನೇಮಿಸಿದನು.

ರಾಜ ಬಕ್ಲಾನದ ಮಗನು ಸುಲ್ತಾನ್ ಖಿಲ್ಜಿಯ ದರ್ಬಾರಿನಲ್ಲಿ:

ಮೀರಾನ್ ಮುಬಾರಕ್ ಫ಼ಾರೂಖಿಗೆ ಷಹಜ಼ಾದ ಘಿಯಾಸುದ್ದೀನನು ಬರುತ್ತಿರುವ ಸುದ್ದಿ ತಿಳಿದು, ಆತನು ಹೆದರಿ ತನ್ನ ದೇಶಕ್ಕೆ ವಾಪಸ್ ಓಡಿಹೋದನು. ಇದಾದ ನಂತರ ಬಕ್ಲಾನದ ರಾಜನ ಮಗನು ಬಾದಷಹನಿಗೆ ಕಪ್ಪ–ಕಾಣಿಕೆಗಳನ್ನು ತೆಗೆದುಕೊಂಡು ಸುಲ್ತಾನ್ ಮಹಮೂದ್ ಖಿಲ್ಜಿಯ ಸೇವೆಯಲ್ಲಿ ಹಾಜರಾದನು. ಇದರಿಂದಾಗಿ ಬಾದಷಹನು ಆತನ ಮೇಲೆ ತುಂಬಾ ಸಂತೋಷಪಟ್ಟನು. ಆತನಿಗೆ ಬಹುಮಾನಗಳನ್ನು ಕೊಟ್ಟು ಗೌರವಿಸಿದನು. ನಂತರ ಆತನಿಗೆ ಬಹುಮಾನಗಳನ್ನು ನೀಡಿ ಗೌರವಿಸಿದನು. ನಂತರ ಆತನನ್ನು ಬೀಳ್ಕೊಟ್ಟನು.

ಚಿತ್ತೂರಿನ ಮೇಲೆ ಸೈನಿಕಾಚರಣೆ:

ಷಹಜ಼ಾದ ಘಿಯಾಸುದ್ದೀನನು ರಹಸ್ತೋರಿಗೆ ಬಂದನು. ಅದೇ ದಿನಗಳಲ್ಲಿ ಸುಲ್ತಾನ್ ಮಹಮೂದ್ ಖಿಲ್ಜಿಯು ಚಿತ್ತೂರಿಗೆ ಬಂದನು. ಚಿತ್ತೂರಿನ ರಾಜನು ಬಾದಷಹನೊಂದಿಗೆ ಉತ್ತಮವಾಗಿ ನಡೆದುಕೊಂಡನು. ಬಾದಷಹನನ್ನು ತುಂಬಾ ಗೌರವಿಸಿದನು. ರಾಜ' ಕೋನ್ಹಿಯಾನು ಬಾದಷಹನನ್ನು ಸಂತೃಪ್ತಿಗೊಳಿಸಲು ಕೆಲವು ರೂಪಾಯಿಗಳನ್ನೂ, ಕೆಲವು ಚಿನ್ನದ ನಾಣ್ಯಗಳನ್ನೂ ಕಳುಹಿಸಿಕೊಟ್ಟನು. ಆ ನಾಣ್ಯಗಳ ಮೇಲೆ ರಾಜ ಕೊನ್ಹಿಯಾನ ಮುದ್ರೆಯಿತ್ತು. ಇದನ್ನು ಕಂಡು ಬಾದಷಹನಿಗೆ ತುಂಬಾ ಸಿಟ್ಟು ಬಂದಿತು. ರಾಜನು ಕಳುಹಿಸಿದ್ದ ಬಹುಮಾನಗಳನ್ನು ತಕ್ಷಣ ವಾಪಸ್ ಮಾಡಿದನು. ತನ್ನ ಸೈನ್ಯಕ್ಕೆ ಚಿತ್ತೂರನ್ನು ನಾಶಪಡಿಸಲು ಆಜ್ಞಾಪಿಸಿದನು. ಷಾಹಿ ಸೈನ್ಯವನ್ನು ಅಪಾರವಾಗಿ ಲೂಟಿ ಮಾಡಿದನು. ಅನೇಕರು ಸತ್ತರು. ಈ ಲೂಟಿ ಮತ್ತು ವಿನಾಶದಿಂದಾಗಿ, ಎಲ್ಲಿಯೂ ಜನರು ಕಾಣಸಿಗುತ್ತಿರಲಿಲ್ಲ.

ಬಯಾನ ಕೋಟೆಯ ಮೇಲೆ ಸೈನಿಕಾಚರಣೆ:

ಕೆಲವು ದಿನಗಳ ನಂತರ ಬಾದಷಹನು ಪುನಃ ತನ್ನ ಸೈನ್ಯವನ್ನು ಸಿದ್ಧಪಡಿಸಿ ಕೊಂಡನು. ಬಯಾನ ಕೋಟೆಯನ್ನು ವಶಪಡಿಸಿಕೊಳ್ಳಲು ಹೊರಟನು. ಬಾದಷಹನು ಬಯಾನ ಕೋಟೆಗೆ ಇನ್ನೂ ಎರಡು ಮೈಲಿ ದೂರವಿದ್ದಂತೆಯೇ ತನ್ನ ಬೀಡನ್ನು ಬಿಡಿಸಿದನು. ಈ ಕೋಟೆಯ ಶಾಸಕನಾದ ಮಹಮ್ಮದ್ ಖಾನನು ತನ್ನ ಮಗನಾದ ವಾಹಿದ್‌ಖಾನನೊಂದಿಗೆ, ಒಂದು ನೂರು ಕುದುರೆಗಳನ್ನೂ ಒಂದು ಲಕ್ಷ ಚಿನ್ನದ ತಿನ್ಗೆ ನಾಣ್ಯಗಳನ್ನೂ ಕೊಟ್ಟು ಸುಲ್ತಾನ್ ಖಿಲ್ಜಿಯ ಸೇವೆಯಲ್ಲಿ ಕಳುಹಿಸಿಕೊಟ್ಟನು. ಅದರ ಜೊತೆಗೆ ಖಿಲ್ಜಿಯ ಅಧೀನದಲ್ಲಿ ಪ್ರಾಮಾಣಿಕವಾಗಿ ನಡೆಯುತ್ತೇನೆಂಬ ವಾಗ್ದಾನವನ್ನು ಮಾಡಲು ಹೇಳಿಕಳುಹಿಸಿದನು.

ಬಯಾನ ಶಾಸಕನ ಅಧೀನತೆಯ ಸ್ವೀಕಾರ:

ಸುಲ್ತಾನ್ ಮಹಮೂದ್ ಖಿಲ್ಜಿಯು ಮಹಮ್ಮದ್‌ಖಾನನ ಬಹುಮಾನಗಳನ್ನು ಒಪ್ಪಿ ಸ್ವೀಕರಿಸಿದನು. ಹಾಗೂ ತನ್ನ ಕಡೆಯಿಂದ ವಾಹಿದ್‌ಖಾನನಿಗೆ ಬಹುಮಾನಗಳನ್ನು ನೀಡಿ ಗೌರವಿಸಿದನು. ಮತ್ತು ಹಿಂತಿರುಗಲು ಅನುಮತಿಯನ್ನೂ ಕೊಟ್ಟನು. ಇದಾದ ನಂತರ ಸುಲ್ತಾನ್ ಮಹಮೂದನು, ಜರಿ ಕುಸುರಿ ಕೆಲಸವನ್ನು ಮಾಡಿರುವ ಕೋಟನ್ನು ಮತ್ತಿತರ ಕೆಲವು ಅಮೂಲ್ಯ ವಸ್ತುಗಳನ್ನು ಕಳುಹಿಸಿಕೊಟ್ಟನು. ಮಹಮ್ಮದ್‌ಖಾನನು ಈ ಕೋಟನ್ನು ತೊಟ್ಟುಕೊಂಡನು. ಇದರಿಂದ ಸಂತೋಷಪಟ್ಟು ಸುಲ್ತಾನ್ ಖಿಲ್ಜಿಯನ್ನು ಬಹಳವಾಗಿ ಹೊಗಳಿದನು. ಬಯಾನದಲ್ಲಿ ಇಲ್ಲಿನ ತನಕ ದಿಲ್ಲಿಯ ಬಾದಷಹರ ಖುತ್ಬಾ ಮತ್ತು ಮುದ್ರೆ ಚಾಲನೆಯಲ್ಲಿತ್ತು. ಇದನ್ನು ರದ್ದುಪಡಿಸಿ ಆ ಜಾಗದಲ್ಲಿ ಮಹಮೂದ್ ಖಿಲ್ಜಿಯ ಪ್ರಶಂಸಾತ್ಮಕ ಪ್ರವಚನ (ಖುತ್ಬಾ) ಮತ್ತು ಮುದ್ರೆಯ ಚಾಲನೆಯನ್ನು ಪ್ರಾರಂಭಿಸಲಾಯಿತು.

ನಬೂರ್ ಕಸಬಾ ಪ್ರದೇಶವನ್ನು ಗೆದ್ದು ವಾಪಸ್ಸು:

ಇದಾದ ನಂತರ ಬಾದಷಹನು ಹಿಂತಿರುಗಲು ನಿಶ್ಚಯಿಸಿ, ದಾರಿಯಲ್ಲಿ ಸಿಗುವ ರಣಸ್ಥಂಬೋರಿನ ಹತ್ತಿರವಿರುವ ಕಸಬಾ ನಬೋರ್ ಎಂಬುದನ್ನು ತನ್ನ ವಶಕ್ಕೆ ತೆಗೆದುಕೊಂಡನು. ಇದಾದ ನಂತರ ಬಾದಷಹನು, ತಾಜ್‌ಖಾನನ ಅಧೀನದಲ್ಲಿ ಎಂಟು ಸಾವಿರ ಸವಾರರ ಸೈನ್ಯವನ್ನೂ, ಇಪ್ಪತ್ತೈದು (೨೫) ಆನೆಗಳನ್ನೂ ಕೊಟ್ಟು ಚಿತ್ತೂರಿನ ಕೋಟೆಯನ್ನು ವಶಪಡಿಸಿಕೊಳ್ಳಲು ಕಳುಹಿಸಿದನು. ಸುಲ್ತಾನ್ ಮಹಮೂದ್‌ನು ರಾಜ್‌ಕೋಟದಿಂದ ಒಂದು ಲಕ್ಷ ಇಪ್ಪತ್ತೈದು ಸಾವಿರ ಚಿನ್ನದ ತಿನ್ಗೆ ನಾಣ್ಯಗಳನ್ನು ಕಪ್ಪ-ಕಾಣಿಕೆಯಾಗಿ ವಸೂಲು ಮಾಡಿದನು. ನಂತರ ಮಾಂಡುವಿನ ಶಾದಿ ಆಬಾದಿಗೆ ರವಾನೆಯಾದನು.

ರಾಜ ಗಂಗದಾಸನ :

ಹಿಜರಿ ೮೪೫ರಲ್ಲಿ ಜನಾನೇರ್ ಕೋಟೆಯ ಶಾಸಕನಾದ ರಾಜ ಗಂಗದಾಸನಿಗೆ, ಸುಲ್ತಾನ್ ಮಹಮೂದ್ ಖಿಲ್ಜಿಯ ಸೇವೆಯಲ್ಲಿ ಕಪ್ಪ-ಕಾಣಿಕೆಗಳನ್ನು ಸಲ್ಲಿಸಿ, ಈ ಅರ್ಜಿಯನ್ನೂ ನೀಡಿದನು. ಆ ದಿನಗಳಲ್ಲಿ ಸುಲ್ತಾನ್ ಮಹಮ್ಮದ್ ಶಾಹ್ ಗುಜರಾತಿಯು ಜನಾನೇರ್ ಕೋಟೆಯನ್ನು ಮುತ್ತಿದ್ದಾನೆಂದು ಹೇಳಿಕೊಂಡನು. ನಾನು ಮಾತ್ರ ಯಾವಾಗಲೂ ತಮ್ಮಿಂದ ಸಹಾಯವನ್ನು ಕೇಳುವವನಾಗಿದ್ದೇನೆ. ಈ ಸಲವೂ ತಾವೇ ನನಗೆ ಸಹಾಯವನ್ನು ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಜನಾನೇರ್‌ನತ್ತ ಪ್ರಯಾಣ:

ಸುಲ್ತಾನ್ ಮಹಮೂದ್‌ನು ಗಂಗದಾಸನಿಗೆ ಸಹಾಯವನ್ನು ಮಾಡಲು ಒಪ್ಪಿದನು. ಈ ಉದ್ದೇಶಕ್ಕೆಂದೇ ತನ್ನ ಸೈನ್ಯವನ್ನು ಸಿದ್ಧಪಡಿಸಿಕೊಂಡು ಜನಾನೇರ್‌ನತ್ತ ಹೊರಟನು. ದಾರಿಯಲ್ಲಿ ಸುದ್ದಿ ತಿಳಿದಿದ್ದೇನೆಂದರೆ, ಸುಲ್ತಾನ್ ಮಹಮ್ಮದ್ ಶಾಹ್ ಗುಜರಾತಿಯು ಕಪ್ಪ-ಕಾಣಿಕೆಗಳ ವಸೂಲಿಗೆಂದು ಐದರ್‌ನತ್ತ ಹೋಗಿದ್ದಾನೆಂದು. ಸುಲ್ತಾನ್ ಮಹಮೂದ್‌ನು ಅಲ್ಲಿಂದ ಸ್ವಲ್ಪ ಹಿಂದೆ ಸರಿದು ಮಹಂದರಿ ನದಿ ದಡದಲ್ಲಿ ಬೀಡು ಬಿಟ್ಟನು.

ಹಿಂತಿರುಗಿದನು:

ರಾಜ ಗಂಗದಾಸನು ಹದಿಮೂರು ಲಕ್ಷ ತಿನ್ಗೆ ನಾಣ್ಯಗಳನ್ನೂ ಮತ್ತು ಕೆಲವು ಕುದುರೆಗಳನ್ನು ತೆಗೆದುಕೊಂಡು ಮಹಂದರಿ ನದಿಯ ದಡಕ್ಕೆ ಬಂದನು. ಮತ್ತು ಆತನು ಸುಲ್ತಾನ್ ಮಹಮೂದ್ ಖಿಲ್ಜಿಯನ್ನು ಭೇಟಿ ಮಾಡಿ ತನ್ನ ಕಾಣಿಕೆಗಳನ್ನು ಅರ್ಪಿಸಿದನು. ಇದರಿಂದ ಸಂತೋಷಗೊಂಡ ಬಾದಷಹನು ರಾಜನಿಗೆ ಖಿಲ್ಲತ್ತು (ಬಹುಮಾನ)ಗಳನ್ನು ಕೊಟ್ಟು ಗೌರವಿಸಿದನು. ಅಲ್ಲಿಂದ ಮಾಂಡುವಿನ ಶಾದಿ ಆಬಾದಿನತ್ತ ಹಿಂತಿರುಗಿದನು. ದಾರಿಯಲ್ಲಿ ಬಾದಷಹನು ಐದರ್ ರಾಜನಿಗೆ ಮೂರು ಲಕ್ಷ ತಿನ್ಗೆ ನಾಣ್ಯಗಳನ್ನೂ, ಐದು ಆನೆಗಳನ್ನೂ, ಇಪ್ಪತ್ತೊಂದು (೨೧) ಕುದುರೆಗಳನ್ನೂ ಬಹುಮಾನವಾಗಿ ನೀಡಿದನು. ಇದಾದ ನಂತರ ಸುಲ್ತಾನ್ ಖಿಲ್ಜಿಯು ಬಹಳ ದಿನಗಳ ತನಕ ಮಾಂಡುವಿನಲ್ಲೇ ತಂಗಿದನು ಮತ್ತು ತನ್ನ ಸಾಮ್ರಾಜ್ಯದ ಪ್ರಜಾಹಿತ ಕಾರ್ಯಗಳ ವ್ಯವಸ್ಥೆಯಲ್ಲಿ ತನ್ನನ್ನು ತೊಡಗಿಸಿಕೊಂಡನು.

ಗುಜರಾತನ್ನು ಗೆಲ್ಲುವ ಮಹತ್ವಾಕಾಂಕ್ಷೆ:

ಹಿಜರಿ ೮೫೫ರಲ್ಲಿ ಸುಲ್ತಾನ್ ಮಹಮೂದನು ಗುಜರಾತನ್ನು ಗೆಲ್ಲುವ ಇಚ್ಛೆಯನ್ನು ವ್ಯಕ್ತಪಡಿಸಿದನು. ಈ ಉದ್ದೇಶಕ್ಕಾಗಿ ಒಂದು ಲಕ್ಷ ಸೈನ್ಯವನ್ನು ಸಂಗ್ರಹಿಸಿಕೊಂಡು ಹೊರಟೇಬಿಟ್ಟನು. ಬಾದಷಹನು ಕಸಬಾ 'ಕಾಖೀನವಾಲ'ದಿಂದ, ನಡೆಯುತ್ತಾ

ಸುಲ್ತಾನ್‌ಪುರವನ್ನು ಮುತ್ತಿದನು. ಈ ಪ್ರದೇಶದಲ್ಲಿ ಸುಲ್ತಾನ್ ಮಹಮ್ಮದ್‌ಶಾಹ್ ಗುಜರಾತಿಯ ಗುಮಾಸ್ತನಾಗಿದ್ದ ಮಲಿಕ್ ಅಲ್ಲಾವುದ್ದೀನ್ ಸೊಹ್ರಾಬನು ಇದ್ದನು. ಈತನು ಮೊದಮೊದಲು ಕೆಲವು ದಿನಗಳ ತನಕ ಕೋಟೆಯಿಂದ ಹೊರಬಂದು ಯುದ್ಧವನ್ನು ಮಾಡಿದನು. ಆದರೆ ಆತನ ಬಾದಷಹನಾದ ಸುಲ್ತಾನ್ ಗುಜರಾತಿಯವನ ಕಡೆಯಿಂದ ಯಾವುದೇ ಸಹಾಯ ದೊರೆಯುವ ಲಕ್ಷಣಗಳು ಕಂಡುಬರಲಿಲ್ಲವಾದ ಕಾರಣ, ಈತನು ಸುಲ್ತಾನ್ ಖಿಲ್ಜಿಯೊಂದಿಗೆ ಶಾಂತಿ ಪ್ರಸ್ತಾಪವನ್ನು, ರಕ್ಷಣೆಯನ್ನು ಕೇಳಿದನು. ಹಾಗೂ ಬಾದಷಹನ ಸೇವೆಯಲ್ಲಿ ಹಾಜರಾದನು.

ಅಹಮದಾಬಾದಿಗೆ ರವಾನೆ:

ಸುಲ್ತಾನ್ ಮಹಮೂದ್ ಖಿಲ್ಜಿಯು ಅಲ್ಲಾವುದ್ದೀನ್ ಸೊಹ್ರಾಬನ ಮಕ್ಕಳು, ಪರಿವಾರವನ್ನು ಮಾಂಡುವಿನ ಶಾದಿ ಆಬಾದಿಗೆ ಕಳುಹಿಸಿಕೊಟ್ಟನು. ಆತನಿಂದ ಪ್ರಾಮಾಣಿಕವಾಗಿರುವಂತೆ ತನ್ನ ಸೈನ್ಯದ ಜವಾಬ್ದಾರಿಯನ್ನು ಹೊರಿಸಿ ಪ್ರಮಾಣ ವಚನವನ್ನು ತೆಗೆದುಕೊಂಡು ತನ್ನ ಜೊತೆಯಲ್ಲಿ ಕರೆದುಕೊಂಡು ಹಾಗೂ ಆತನಿಗೆ "ಮುಬಾರಖ್ ಖಾನ್" ಎಂಬ ಬಿರುದನ್ನೂ ಕೊಟ್ಟು ಅಹಮದಾಬಾದಿನತ್ತ ಹೊರಟನು.

ಮಹಮ್ಮದ್ ಶಾಹ್ ಗುಜರಾತಿಯ ಮರಣ:

ದಾರಿಯಲ್ಲಿದ್ದಂತೆಯೇ ಸುಲ್ತಾನ್ ಖಿಲ್ಜಿಗೆ ಸಮಾಚಾರ. ತಿಳಿದಿದ್ದೇನೆಂದರೆ – ಸುಲ್ತಾನ್ ಮಹಮ್ಮದ್ ಶಾಹ್‌ನು ಇಹಲೋಕವನ್ನು ತ್ಯಜಿಸಿದ್ದಾನೆಂದು. ಆತನ ಮರಣಾನಂತರ, ಆತನ ಮಗನಾದ ಸುಲ್ತಾನ್ ಖುತುಬುದ್ದೀನನು ತನ್ನ ತಂದೆಯ ಜಾಗದಲ್ಲಿ ಸಿಂಹಾಸನವನ್ನೇರಿರುವನೆಂದೂ ತಿಳಿಯಿತು. ಸುಲ್ತಾನ್ ಮಹಮೂದ್ ಖಿಲ್ಜಿಯು ಗುಜರಾತಿನ ಮೇಲೆ ಯುದ್ಧ ಮಾಡಿ ವಶಪಡಿಸಿಕೊಳ್ಳುವ ಉದ್ದೇಶದಿಂದಲೇ ಬಂದಿದ್ದನು. ಆದರೆ ಅಲ್ಲಿನ ಪರಿಸ್ಥಿತಿ ಮತ್ತು ಮಾನವೀಯತೆಯ ದೃಷ್ಟಿಯಿಂದ ಯೋಚಿಸಿದನು. ಸುಲ್ತಾನ್ ಖುತುಬುದ್ದೀನನಿಗೊಂದು ಪತ್ರವನ್ನು ಬರೆದು, ಅದರಲ್ಲಿ ಆತನಿಗೆ ಪಟ್ಟಾಭಿಷೇಕದ ಶುಭಾಶಯಗಳನ್ನು ತಿಳಿಸಿದ್ದನು. ಹಾಗು ನಿಮ್ಮ ತಂದೆಯವರ ಮರಣದ ಸುದ್ದಿ ಕೇಳಿ ನಮಗೂ ದುಃಖವಾಗಿದೆಯೆಂದು ವಿಷಾದವನ್ನು ವ್ಯಕ್ತಪಡಿಸಿದ್ದನು.

ಕಸಬಾ ಬರೋದ್ರವನ್ನು ನಾಶಪಡಿಸಿದನು:

ತದನಂತರ ಸುಲ್ತಾನ್ ಖಿಲ್ಜಿಯು ಕಸಬಾ ಬರೋದ್ರದಲ್ಲಿ ಲೂಟಿ, ಕೊಳ್ಳೆ, ವಿನಾಶದ ಕಾರ್ಯವನ್ನು ಕೈಗೊಂಡು ಅನೇಕ ಹಿಂದೂ, ಮುಸಲ್ಮಾನರನ್ನು ಸೆರೆ ಹಿಡಿದು, ಅನೇಕ ದಿನಗಳ ಕಾಲ ಅಲ್ಲಿಯೇ ತಂಗಿದನು. ಆ ಪ್ರದೇಶವನ್ನು ಸಂಪೂರ್ಣವಾಗಿ ಲೂಟಿ ಹೊಡೆದನು. ಇದಾದ ನಂತರ, ಆತನು ಅಹಮದಾಬಾದಿನತ್ತ ಪ್ರಯಾಣಿಸಿದನು.

ಅಲ್ಲಾವುದ್ದೀನ್ ಸೊಹ್ರಾಬನ ವಿದ್ರೋಹ:

ಬಾದಷಹನು ಬಹಳ ವೇಗವಾಗಿ ಪ್ರಯಾಣದ ಹಂತವನ್ನು ಪಾರು ಮಾಡುತ್ತಲಿದ್ದನು. ಅಲ್ಲಾವುದ್ದೀನ್ ಸೊಹ್ರಾಬನು ಈ ಅವಕಾಶವನ್ನೇ ಕಾಯುತ್ತಿದ್ದನು. ತನ್ನ ಹಿಂದಿನ ಒಡೆಯನಾದ ಅಹಮದ್ ಶಾಹ್ ಗುಜರಾತಿಯನ್ನು ಕಾಣಲು ಕಾತುರನಾಗಿದ್ದನು. ಕೊನೆಗೆ ಸುಲ್ತಾನ್ ಮಹಮೂದ್ ಖಿಲ್ಜಿಯೊಂದಿಗೆ ವಿದ್ರೋಹವನ್ನು ಬಗೆದು, ತನ್ನ ಹಿಂದಿನ ಸುಲ್ತಾನ್‌ನ ಮಗನಾದ ಸುಲ್ತಾನ್ ಖುತುಬುದ್ದೀನ್ ಗುಜರಾತಿಯ ಕಡೆಗೆ ಹೋಗಿಬಿಟ್ಟನು.

ಗುಜರಾತಿ ಮತ್ತು ಮಾಳವಿ ಸೈನಿಕರ ಸಿದ್ಧತೆ:

ಸುಲ್ತಾನ್ ಮಹಮೂದ್ ಖಿಲ್ಜಿಯು ಅಹಮದಾಬಾದಿಗೆ ಇನ್ನು ಐದು ಮೈಲಿ ದೂರವಿದ್ದಂತೆ ಸರ್‌ಕಚ್ಛ್ ಎಂಬಲ್ಲಿ ನೆಲೆ ನಿಲ್ಲಿಸಿದನು. ಖುತುಬುದ್ದೀನನೂ ಯುದ್ಧದ ಸಿದ್ಧತೆಗಳನ್ನು ಮಾಡಿಕೊಂಡನು. ಈತನು ತನ್ನ ಸೈನ್ಯವನ್ನು ತೆಗೆದುಕೊಂಡು ಸರ್‌ಕಚ್ಛಿಗೆ ಮೂರು ಮೈಲಿಗಳಿರುವಂತೆ ಬೀಡು ಬಿಟ್ಟನು. ಕೆಲವು ದಿನಗಳ ತನಕ ಎರಡೂ ಕಡೆಯ ಸೈನಿಕರು ಯಾವುದೇ ಘಟನೆಗಳಿಲ್ಲದಂತೆ ಹಾಗೆಯೇ ನಿಂತಿದ್ದರು.

ಗುಜರಾತಿ ಸೈನ್ಯದ ಮೇಲೆ ಶಬ್‌ಖೂನನ ವ್ಯರ್ಥ ಪ್ರಯತ್ನ:

ಹಿಜರಿ ೮೫೫ ಸಫ಼ರ್ ತಿಂಗಳ ಒಂದನೇ ತಾರೀಖಿನಂದು ರಾತ್ರಿಯಲ್ಲಿ ಆಕಸ್ಮಿಕ ಶಬ್‌ಖೂನ್ ಯುದ್ಧವನ್ನು ಮಾಡಲು ಖಿಲ್ಜಿ ಸೈನಿಕರು ತಮ್ಮ ಸೈನಿಕ ಬೀಡಿನಿಂದ ಹೊರಬಂದರು. ಯಾವ ವ್ಯಕ್ತಿಯು ದಾರಿಯನ್ನು ತೋರಲು ನೇಮಕಗೊಂಡಿದ್ದನೋ ಆತನು ರಾತ್ರಿಯಲ್ಲಿ ದಾರಿತಪ್ಪಿದನು. ಇದರ ಪರಿಣಾಮವೆಂದರೆ ಸುಲ್ತಾನ್ ಮಹಮೂದ್‌ನಿಗೆ ಆ ರಾತ್ರಿಯೆಲ್ಲಾ ಒಂದು ಭಯಾನಕ ಕಾಡಿನಲ್ಲಿ ರಾತ್ರಿ ಕಳೆಯು ವಂತಾಯಿತು.

ಮಾಲವ ಸೈನ್ಯದ ವ್ಯವಸ್ಥೆ:

ಮಾರನೇ ದಿನದ ಬೆಳಿಗ್ಗೆ ಸುಲ್ತಾನ್ ಮಹಮೂದ್‌ನು ತನ್ನ ಸೈನ್ಯದ ಒಂದು ಭಾಗವನ್ನು ಸಾರಂಗಪುರದ ಸೈನ್ಯದೊಂದಿಗೆ ಸಂಯೋಜಿಸಿ ತನ್ನ ಮಗನಾದ ಘಿಯಾಸುದ್ದೀನನ ಅಧೀನತೆಗೆ ಒಪ್ಪಿಸಿದನು. ಮುತ್ತಿಗೆಯ ವಿಷಯದಲ್ಲಿ ಚಂದೇರಿಯ ಅಮೀರನಿಗೆ ಜವಾಬ್ದಾರಿಯನ್ನು ವಹಿಸಿದನು. ಸ್ವತಃ ತಾನು ಕೇಂದ್ರ ಸೈನ್ಯದ ಜವಾಬ್ದಾರಿಯನ್ನು ಹೊತ್ತನು. ಇಷ್ಟಾದ ನಂತರ ಯುದ್ಧಕ್ಕೆ ಸಿದ್ಧನಾದನು.

ಯುದ್ಧದ ಪ್ರಾರಂಭ:

ಸುಲ್ತಾನ್ ಖುತುಬುದ್ದೀನನು ಸಹ ಗುಜರಾತಿ ಸೈನ್ಯವನ್ನು ವ್ಯವಸ್ಥೆಗೊಳಿಸಿ

ಸಿದ್ಧರನ್ನಾಗಿಸಿದನು. ಯುದ್ಧಕ್ಕೋಸ್ಕರ ಮೈದಾನದತ್ತ ಹೊರಟನು. ಎರಡೂ ಕಡೆ ಸೈನಿಕರು, ಸರದಾರರೂ ಎದುರುಬದುರಾದರು. ಗುಜರಾತಿ ಕೇಂದ್ರ ಸೈನಿಕರು ಸೋತು ಮೈದಾನವನ್ನು ಬಿಟ್ಟು ಓಡಿ ಹೋದರು. ಚಂದೇರಿ ಭಾಗದ ಪ್ರಮುಖ ಅಮೀರ ಮಲಿಕ್ ಅಶ್ರಫ್ ಮುಜಫ್ಫರ್ ಇಬ್ರಾಹೀಂನು ಮಾಳವೀ ಸೈನ್ಯದಿಂದ ಸ್ವಲ್ಪ ಬೇರ್ಪಟ್ಟು ಗುಜರಾತಿ ಸೈನ್ಯದ ಮೇಲೆ ಆಕ್ರಮಣವನ್ನು ಮಾಡಿದ್ದರ ಪರಿಣಾಮವೆಂದರೆ, ಗುಜರಾತಿ ಸೈನಿಕರು ಯುದ್ಧ ಮೈದಾನದಿಂದ ಓಟ ಕಿತ್ತರು.

ಮಲಿಕ್ ಅಶ್ರಫ್‌ನ ಶೌರ್ಯ ಸಾಹಸಗಳು:

ಮಲಿಕ್ ಅಶ್ರಫನು ಸುಲ್ತಾನ್ ಖುತುಬುದ್ದೀನ್ ಗುಜರಾತಿ ಬಿಡಾರದವರೆಗೂ ಮೇಮ್ನಾ ಎಂಬುವನನ್ನು ಓಡಿಸಿಕೊಂಡು ಹೋಗಿದ್ದನು. ಆತನು ಶತ್ರು ಸೈನ್ಯವನ್ನು ಬಹಳ ಹೀನಾಯವಾಗಿ ನಾಶಪಡಿಸಿದನು. ಸುಲ್ತಾನ್ ಖುತುಬುದ್ದೀನನ ಖಜಾನೆಯನ್ನೂ ತನ್ನ ವಶಕ್ಕೆ ತೆಗೆದುಕೊಂಡುಬಿಟ್ಟಿದ್ದನು. ಮಲಿಕ್ ಅಶ್ರಫ್‌ನ ಹತ್ತಿರ ಎಷ್ಟು ಆನೆಗಳಿದ್ದವೋ ಅಷ್ಟು ಆನೆಗಳ ಮೇಲೆ, ಎಷ್ಟು ಸಾಧ್ಯವಿತ್ತೋ ಅಷ್ಟು ಸಂಪತ್ತನ್ನು ತುಂಬಿ ಹೇರಿಕೊಂಡು ಮಾಳವಿ ಸೈನ್ಯದ ಶಿಬಿರಕ್ಕೆ ತರಲಾಯಿತು. ಮತ್ತೊಮ್ಮೆ ಖಜಾನೆಯ ಹಣವನ್ನು ತರಲು ಹೊರಟಾಗ ಸುದ್ದಿ ಬಂದಿದ್ದೇನೆಂದರೆ, ಗುಜರಾತಿ ಸೈನ್ಯದ ಒಂದು ಭಾಗವು ಷಹಝಾದ ಫ಼ಿದಾಯಿ ಖಾನನ ಮೇಲೆ ಹೊಸ ಆಕ್ರಮಣವನ್ನು ಮಾಡಿ, ಆತನನ್ನು ತುಂಬಾ ಕಷ್ಟಕ್ಕೀಡು ಮಾಡಿದ್ದಾರೆಂಬುದು ಗೊತ್ತಾಯಿತು. ಷಹಜಾದನು ಯುದ್ಧ ಮೈದಾನದಿಂದ ಓಡಿ ಹೋಗಿದ್ದಾನೆಂದೂ ತಿಳಿಯಿತು.

ಸುಲ್ತಾನ್ ಖಿಲ್ಜಿಯ ಸಾಹಸ:

ತಕ್ಷಣ ಮಲಿಕ್ ಅಶ್ರಫ್‌ನು ತನ್ನ ಆನೆಗಳನ್ನೂ, ಸೈನ್ಯವನ್ನೂ ಜೊತೆಯಲ್ಲಿ ಕರೆದುಕೊಂಡು ಒಂದು ಜಾಗದಲ್ಲಿ ನಿಂತನು. ಸುಲ್ತಾನ್ ಖಿಲ್ಜಿಯು ತನ್ನ ಸೈನ್ಯ ಚೆಲ್ಲಾಪಿಲ್ಲಿಯಾದುದನ್ನು ನೋಡಿ, ಹಾಗೂ ಮೇಸ್ರಾದ ಸೋಲನ್ನು ಕಂಡು ಆಶ್ಚರ್ಯಚಕಿತನಾದನು. ಆದರೂ ಇದನ್ನು ತನ್ನ ಸೋಲೆಂದು ಭಾವಿಸಲಿಲ್ಲ. ಸುಲ್ತಾನ್‌ನು ಕೇವಲ ನಲವತ್ತು ಸವಾರರೊಂದಿಗೆ ತುಂಬಾ ಧೈರ್ಯದಿಂದ ಯುದ್ಧ ಮಾಡುತ್ತಲೇ ಇದ್ದನು. ಎಲ್ಲಿನತನಕ ತನ್ನ ಬತ್ತಳಿಕೆಯಲ್ಲಿ ಬಾಣಗಳಿದ್ದವೋ ಅಲ್ಲಿತನಕ ತನ್ನ ಯುದ್ಧದ ಕಮಾನನ್ನು ಸಡಿಗೊಳಿಸಿರಲಿಲ್ಲ.

ಮಹಮೂದ್ ಖಿಲ್ಜಿಯ ಪ್ರಶಂಸಾತ್ಮಕ ಕಾರ್ಯ:

ಸುಲ್ತಾನ್ ಖುತುಬುದ್ದೀನ್ ಗುಜರಾತಿಯು ಒಂದು ದೊಡ್ಡ ಸೈನ್ಯವನ್ನು ಇಟ್ಟುಕೊಂಡು, ಆಯಕಟ್ಟಿನ ಜಾಗದಲ್ಲಿ ಅವಿತುಕೊಂಡಿದ್ದನು. ಆತನಿಗೆ ಈಗ ಇಲ್ಲಿಂದ ಹೊರಡುವುದೇ ಉಚಿತವೆಂದು ತಿಳಿದಾಗ ತನ್ನ ಆಯಕಟ್ಟಿನ ಜಾಗದಿಂದ ಹೊರಬಂದನು.

ಸುಲ್ತಾನ್ ಖಿಲ್ಜಿಯ ಕಡೆಗೆ ಹೊರಟನು. ಈ ಸಂದರ್ಭದಲ್ಲಿ ಸುಲ್ತಾನ್ ಖಿಲ್ಜಿಯು ಒಂದು ಚಮತ್ಕಾರಿಕ ರೀತಿಯಲ್ಲಿ ತನ್ನ ಶೌರ್ಯವನ್ನು ತೋರಿದನು. ಈಗ ಆತನ ಹತ್ತಿರ ಕೇವಲ ಹದಿಮೂರು ಜನ ಸವಾರರು ಮಾತ್ರ ಇದ್ದರು. ಖಿಲ್ಜಿಯು ಈ ಹದಿಮೂರು ಸವಾರರನ್ನು ತನ್ನೊಡನೆ ತೆಗೆದುಕೊಂಡು ಮಿಂಚಿನ ವೇಗದಲ್ಲಿ ಸುಲ್ತಾನ್ ಖುತುಬುದ್ದೀನನ ಸೈನ್ಯದ ಶಿಬಿರದಲ್ಲಿಗೆ (ಅದು ಯುದ್ಧ ಮೈದಾನದ ಹಿಂಭಾಗದಲ್ಲಿತ್ತು) ಬಂದುಬಿಟ್ಟನು. ಆತನು ನೇರವಾಗಿ ಸುಲ್ತಾನ್‌ನು ಇಳಿದುಕೊಳ್ಳುವ ವಿಶೇಷ ಬಿಡಾರದೊಳಕ್ಕೆ ನುಗ್ಗಿ, ಸುಲ್ತಾನ್‌ನ ಕಿರೀಟ, ತಲೆಯ ಮೇಲಿನ ಪರದಾ, ಸೊಂಟಪಟ್ಟಿ ಎಲ್ಲವನ್ನೂ ತನ್ನ ವಶಕ್ಕೆ ತೆಗೆದುಕೊಂಡನು. ತಕ್ಷಣ ಅಲ್ಲಿಂದ ತನ್ನ ಶಿಬಿರಕ್ಕೆ ಓಡಿ ಬಂದುಬಿಟ್ಟನು.

ಮಾಂಡುವಿಗೆ ಹಿಂತಿರುಗಿದನು:

ಸುಲ್ತಾನ್ ಮಹಮೂದ್ ಖಿಲ್ಜಿಯ ಸುತ್ತಲೂ ಸುಮಾರು ನಾಲ್ಕೈದು ಸಾವಿರ ಸೈನಿಕ ಸವಾರರು ಬಂದು ನಿಂತುಬಿಟ್ಟರು. ಆತನು ಪ್ರಚಾರ ಮಾಡಿದ್ದೇನೆಂದರೆ, ಇಂದು ರಾತ್ರಿ ಶತ್ರು ಸೈನ್ಯದ ಮೇಲೆ ಶಬ್‌ಖೂನ್ (ಅನಿರೀಕ್ಷಿತ ರಾತ್ರಿಯ ಆಕ್ರಮಣ)ವನ್ನು ಮಾಡಬೇಕೆಂದು. ರಾತ್ರಿಯ ಒಂದು ಭಾಗ ಕಳೆದಾಗ ಸುಲ್ತಾನ್ ಮಹಮೂದ್‌ನು ಶಬ್‌ಖೂನನ ನೆಪದಲ್ಲಿ ರವಾನೆಯಾಗಿ ಮಾಂಡುವಿನ ಶಾದಿ ಆಬಾದ್ ಕಡೆ ಬಂದುಬಿಟ್ಟನು.

ಮಹಮೂದ್ ಖಿಲ್ಜಿಯ ಸೋಲು:

ಗುಜರಾತಿಗಳು ನಿಶ್ಚಯವಾಗಿಯೂ, ಮಹಮೂದ್ ಖಿಲ್ಜಿಯನ್ನು ಸೋಲಿಸಿದ್ದರು. ಸುಲ್ತಾನ್ ಖಿಲ್ಜಿಗೆ ಇದರಿಂದ ತುಂಬಾ ದುಃಖವಾಯಿತು. ಹೇಳುವುದಾದರೆ ಸುಲ್ತಾನ್ ಮಹಮೂದ್‌ನು ತನ್ನ ಶಾಸನ ಕಾಲದ ಅವಧಿಯಲ್ಲಿ ಎಲ್ಲಿಯೂ ಸೋಲನ್ನು ಅನುಭವಿಸಿರಲಿಲ್ಲ. ಆತನು ಯಾವುದೇ ಯುದ್ಧದಲ್ಲಿ ಭಾಗವಹಿಸಿದ್ದರೂ, ಎಲ್ಲ ಕಡೆ ಗೆಲುವನ್ನೇ ಕಂಡಿದ್ದನು. ಆದರೆ ಗುಜರಾತಿಗಳು ಸೋಲು ಏನೆಂಬುದನ್ನು ಕಲಿಸಿದ್ದರು.

ವಿದ್ರೋಹಿಗಳಿಗೆ ಶಿಕ್ಷೆ:

ಮಾಂಡುವಿನ ಶಾದಿ ಆಬಾದಿಗೆ ತಲುಪಿದ ಸುಲ್ತಾನ್ ಮಹಮೂದ್ ಖಿಲ್ಜಿಯು ತನ್ನ ಸೈನ್ಯದ ವ್ಯವಸ್ಥೆಯನ್ನು ಸರಿಪಡಿಸಲು ಪ್ರಯತ್ನಿಸಿದನು. ಅವರಿಗೆ ಸರಿಯಾದ ತರಬೇತಿಯನ್ನು ಕೊಟ್ಟನು. ಇದೇ ಸಂದರ್ಭದಲ್ಲಿ, ಷಹಜ಼ಾದ ಘಿಯಾಸುದ್ದೀನನು, ಸೂರತ್ ಬಂದರಿನ ಕೆಲವು ಪ್ರದೇಶಗಳಲ್ಲಿ ಆಕ್ರಮಣವನ್ನು ನಡೆಸಿ, ಮಾಂಡುವಿಗೆ ವಾಪಸ್ಸಾದನು. ಅದೇ ದಿನಗಳಲ್ಲಿ ಮುಶೀರುಲ್ ಮುಲ್ಕ್–ಅಲ್–ಮುಖಾತಿಬ್–ಬ–ನಿಜಾಮುಲ್ ಮುಲ್ಕ್ ಮತ್ತು ಆತನ ಮಕ್ಕಳ ವಿಚಾರದಲ್ಲಿ ಬಾದಷಹನಿಗೆ ಸುದ್ದಿ

ತಿಳಿದಿದ್ದುನೇಂದರೆ, ಈ ಜನರು ವಿದ್ರೋಹದ ಬಾವುಟಗಳನ್ನು ಮೇಲೇರಿಸುವ ತವಕದಲ್ಲಿದ್ದಾರೆಂದೂ, ಅನೇಕ ದಂಗೆಗಳನ್ನೆಬ್ಬಿಸುವ ಹುನ್ನಾರಗಳನ್ನು ರಚಿಸಿದ್ದಾ ರೆಂದೂ, ಹಾಗೂ ಈ ವಿದ್ರೋಹಿಗಳಿಗೆ ಶಿಕ್ಷೆಯನ್ನು ಕೊಡಬೇಕೆಂದೂ ತಿಳಿಸಿದರು.

ಗುಜರಾತಿ ಬಾದಷಹನೊಂದಿಗೆ ಸಂಧಿ ಸನ್ನಾಹ:

ಹಿಜರಿ ೮೫೭ರಲ್ಲಿ ಸುಲ್ತಾನ್ ಮಹಮೂದ್ ಖಿಲ್ಜಿಯು ಮಾರ್ವಾಡವನ್ನು ಗೆಲ್ಲುವ ಮನಸ್ಸು ಮಾಡಿದ. ಬಾದಷಹ ಖಿಲ್ಜಿಗೆ, ಸುಲ್ತಾನ್ ಖುತುಬುದ್ದೀನ ಗುಜರಾತಿಯ ಕಡೆಯಿಂದ ಅಪಾಯವಿತ್ತು. ಆದ್ದರಿಂದ ಆತನು ನಿಶ್ಚಯಿಸಿದುದೇನೆಂದರೆ, ಮಾರ್ವಾಡದ ಮೇಲೆ ಹೋಗುವುದಕ್ಕಿಂತ ಮುಂಚೆಯೇ ಸುಲ್ತಾನ್ ಖುತುಬುದ್ದೀನ್ ಗುಜರಾತಿಯೊಂದಿಗೆ ಸಂಧಿ ಮಾಡಿಕೊಳ್ಳುವುದು ಉತ್ತಮವೆಂದು. ಈ ವಿಚಾರವನ್ನು ಬಾದಷಹನು ಯಾರೊಂದಿಗೂ ಹೇಳಿರಲಿಲ್ಲ. ಸೈನ್ಯವನ್ನೆತ್ತಿಕೊಂಡು ಮಾಂಡುವಿನಿಂದ ಕಸಬಾಧಾರ್‌ನ್ನು ತಲುಪಿದ. ಇಲ್ಲಿಂದ ತಾಜ್‌ಖಾನನಿಗೆ ಒಂದು ವಿಶಾಲ ಸೈನ್ಯವನ್ನು ಕೊಟ್ಟು, ಗುಜರಾತಿ ಗಡಿಪ್ರದೇಶದತ್ತ ಕಳುಹಿಸಿದ. ಅಲ್ಲಿಂದ ಸಂಧಿಯ ಮಾತುಕತೆಯನ್ನು ಪ್ರಾರಂಭಿಸಬಹುದೆಂದು ಯೋಚಿಸಿದ್ದನು.

ಗುಜರಾತಿ ಮಂತ್ರಿಗಳ ಹೆಸರಿಗೆ ತಾಜ್‌ಖಾನನ ಪತ್ರಗಳು:

ತಾಜ್‌ಖಾನನು ಖುತುಬುದ್ದೀನ ಗುಜರಾತಿಯ ವಜೀರರು (ಮಂತ್ರಿ)ಗಳ ಹೆಸರಿನಲ್ಲಿ ಪತ್ರಗಳನ್ನು ಬರೆದು ತನ್ನ ರಾಜದೂತರನ್ನು ಗುಜರಾತಿನತ್ತ ಕಳುಹಿಸಿದನು. ಆತನು ಈ ಪತ್ರಗಳಲ್ಲಿ – ಸುಲ್ತಾನ್ ಗುಜರಾತ್ ಮತ್ತು ಸುಲ್ತಾನ್ ಮಾಳವದ ಆಂತರಿಕ ವೈಷಮ್ಯವು ಭಗವಂತನ (ಅಲ್ಲಾಹ್) ಸೃಷ್ಟಿಯಾದ ಮಾನವಕುಲಕ್ಕೆ ಒಂದು ರೀತಿಯ ಬಹುದೊಡ್ಡ ಶಾಪವೆನಿಸಿದೆ. ಆದ್ದರಿಂದ ಇಬ್ಬರಲ್ಲೂ ಸಂಧಿ ಮಾಡಿಕೊಳ್ಳುವುದು ಉಚಿತವೆನಿಸುತ್ತಿದೆ. ಆದ್ದರಿಂದ ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ, ತಾವು ಈ ಸಂಬಂಧದಲ್ಲಿ ಸಾಧ್ಯವಾದಷ್ಟು ಪ್ರಯತ್ನಿಸಬೇಕು. ಏಕೆಂದರೆ ಈ ಒಂದು ಪವಿತ್ರ ಕಾರ್ಯವು ಬೇಗ ಕಾರ್ಯರೂಪಕ್ಕೆ ಬರುವುದು ಒಳ್ಳೆಯದು.

ಗುಜರಾತಿ ಮತ್ತು ಮಾಳವೀಯರಲ್ಲಿ ಸಂಧಿ:

ಸುಲ್ತಾನ್ ಖುತುಬುದ್ದೀನ್ ಗುಜರಾತಿ ಸಹ ಈ ವಿಚಾರದಲ್ಲಿ ತನ್ನ ದೂರದರ್ಶಿತ್ವವನ್ನು ಪ್ರದರ್ಶಿಸಿದನು. ಸಂಧಿಗೆ ಸಂಬಂಧಪಟ್ಟ ಮಾತುಕತೆಗಳನ್ನು ಪ್ರಾರಂಭಿಸಲು ಅನುಮತಿಯನ್ನು ನೀಡಿದನು. ಇದಾದ ನಂತರ ಎರಡೂ ಕಡೆಯ ಪ್ರಮುಖರು ಒಂದು ಕಡೆ ಸೇರಿದರು. ಅವರು ಸಂಧಿಗೆ ಸಂಬಂಧಿಸಿದ ಷರತ್ತುಗಳು ಹೀಗಿದ್ದವು – "ರಾಜ ಕೋನ್ಹಿಯಾಗೆ ಸೇರಿದ್ದ ಗುಜರಾತಿ ಸರಹದ್ದಿನಲ್ಲಿರುವ ಆ ಪಟ್ಟಣಗಳನ್ನು ಗುಜರಾತಿಗೆ ಬಿಟ್ಟುಕೊಡಬೇಕೆಂದೂ, ಇಬ್ಬರಲ್ಲೂ ಸ್ನೇಹ ಸಂಬಂಧಗಳನ್ನು

ಹೆಚ್ಚಿಸಿಕೊಂಡು ಸಂದರ್ಭ ಬಂದಾಗ ಒಬ್ಬರಿಗೊಬ್ಬರು ಸಹಾಯವನ್ನು ಮಾಡಬೇಕು" ಎಂದು. ಈ ಷರತ್ತನ್ನು ಇಬ್ಬರೂ ಒಪ್ಪಿಕೊಂಡರು.

ಮಹೂನಿಯ ರಾಜಪೂತರ ಕೊಲೆ:

ಹಾರೂನಿಯ ಸುತ್ತಮುತ್ತಲ ಪ್ರದೇಶದಲ್ಲಿ ಬಹಳ ಕೆಟ್ಟ ವಿದ್ರೋಹಿ ರಾಜಪೂತರು ಜನರಿಗೆ ತುಂಬಾ ಹಿಂಸಿಸುತ್ತಿದ್ದ ವಿಷಯ ತಿಳಿಯಿತು. ಹಿಜರಿ ೮೫೮ರಲ್ಲಿ ಸುಲ್ತಾನ್ ಮಹಮೂದ್‌ನು ಆ ವಿದ್ರೋಹಿಗಳನ್ನು ಅಡಗಿಸಲು ಹೊರಟನು. ಬಾದಷಹನು ಕಸಬಾ ಮಹೂನಿಯಲ್ಲಿನ ಅನೇಕ ದುಷ್ಟ ರಜಪೂತರನ್ನು ಹಿಡಿದು ಕೊಲೆ ಮಾಡಿಸಿದನು. ಅವರ ಪರಿವಾರದವರನ್ನು ಸೆರೆ ಹಿಡಿಸಿ, ಮಾಂಡುವಿಗೆ ಕಳುಹಿಸಿಕೊಟ್ಟನು.

ಮಹಮೂದ್ ಖಿಲ್ಜಿಯು ಬಯಾನದಲ್ಲಿ:

ಇದಾದ ನಂತರ ಸುಲ್ತಾನ್ ಮಹಮೂದ್‌ನು ಗ್ವಾಲಿಯರ್ ಮಾರ್ಗವಾಗಿ ಬಯಾನದತ್ತ ರವಾನೆಯಾದನು. ಬಾದಷಹನು ಕಸಬಾ ಮಹೂನಿಯಲ್ಲಿನ ಅನೇಕ ದುಷ್ಟ ರಾಜಪೂತರನ್ನು ಹಿಡಿದು ಕೊಲೆ ಮಾಡಿಸಿದನು. ಅವರ ಪರಿವಾರದವರನ್ನು ಸೆರೆ ಹಿಡಿಸಿ ಮಾಂಡುವಿಗೆ ಕಳುಹಿಸಿಕೊಟ್ಟನು.

ಮಹಮೂದ್ ಖಿಲ್ಜಿಯು ಬಯಾನದಲ್ಲಿ:

ಇದಾದ ನಂತರ ಸುಲ್ತಾನ್ ಮಹಮೂದನು ಗ್ವಾಲಿಯರ್ ಮಾರ್ಗವಾಗಿ ಬಯಾನದತ್ತ ರವಾನೆಯಾದನು. ಬಾದಷಹನು ಬಯಾನ ಹತ್ತಿರಕ್ಕೆ ಬಂದಾಗ ಅಲ್ಲಿನ ಶಾಸಕನಾದ ದಾವೂದ್‌ಖಾನನು ಬಾದಷಹನ ಸೇವೆಯಲ್ಲಿ ಹಾಜರಾಗಿ, ತಾನು ಸಲ್ಲಿಸಬೇಕಾಗಿದ್ದ ಕಪ್ಪ–ಕಾಣಿಕೆಗಳನ್ನು ಸಲ್ಲಿಸಿ, ಅಧೀನತೆಯ ವಿಶ್ವಾಸವನ್ನು ತೋರಿದನು. ಬಾದಷಹನು ಬಯಾನದ ಶಾಸಕನಾಗಿರಲು ದಾವೂದ್‌ಖಾನನನ್ನೇ ಪುನರ್ನೇಮಕ ಮಾಡಿದನು. ದಾವೂದ್‌ಖಾನ್ ಮತ್ತು ಯೂಸೂಫ್‌ಖಾನ್ ಹಿಂದೂನಿಯರಲ್ಲಿ ಬಹಳ ದಿನಗಳಿಂದ ದ್ವೇಷಾಸೂಯೆಗಳು ನಡೆದು ಬರುತ್ತ ಇದ್ದವು. ಸುಲ್ತಾನ್ ಮಹಮೂದ್‌ನು, ಇವರಿಬ್ಬರನ್ನೂ ಒಂದು ಕಡೆ ಕರೆಯಿಸಿಕೊಂಡು ಇಬ್ಬರಿಗೂ ಸ್ನೇಹದಿಂದಿರಲು ಸಮಾಧಾನ ಪಡಿಸಿದನು. ಇವರಿಬ್ಬರೂ ಒಳ್ಳೆಯ ಸ್ನೇಹಿತರಾಗಿಬಿಟ್ಟರು. ಬಾದಷಹನು ಹಾರೂನಿ, ಶಹರ್‌ನವಾ ಮತ್ತು ಅಜ್ಮೇರಿನ ಆಡಳಿತಕ್ಕೆ ಷಹಜಾನ ಫಿದಾಯಿ ಎಂಬುವನನ್ನು ನೇಮಿಸಿದನು. ನಂತರ ತಾನು ಮಾಂಡುವಿನತ್ತ ಪ್ರಯಾಣವನ್ನು ಬೆಳೆಸಿದನು.

ಮಾಹೋರನ್ನು ಗೆಲ್ಲುವ ಮನಸ್ಸು:

ಇದೇ ವರ್ಷದಲ್ಲಿ ಅಲ್ಲಾವುದ್ದೀನ್ ಬಹಮನಿಯ ಇಬ್ಬರು ಅಮೀರರಾದ

ಸಿಕಂದರ್‌ಖಾನನೂ ಮತ್ತು ಜಲಾಲ್‌ಖಾನ್ ಬುಖಾರಿಯವರು, ಸುಲ್ತಾನ್ ಮಹಮೂದ್ ಖಿಲ್ಜಿಯ ಸೇವೆಯಲ್ಲಿ ಅರ್ಜಿಗಳನ್ನು ರವಾನಿಸಿದರು. ಅರ್ಜಿಯಲ್ಲಿದ್ದುದೇನೆಂದರೆ – ಬರಾರಿನ ಉತ್ತಮ ಪ್ರದೇಶವಾದ ಮಾಹೋರನ್ನು ಗೆದ್ದುಕೊಳ್ಳಬೇಕೆಂದಿತ್ತು. ಸುಲ್ತಾನ್ ಮಹಮೂದ್‌ನು ಒಂದು ದೊಡ್ಡ ಸೈನ್ಯವನ್ನು ತೆಗೆದುಕೊಂಡು ಹೋಷಂಗ್ ಆಬಾದ್‌ನ ಮಾರ್ಗವಾಗಿ ಮಾಹೋರಿನತ್ತ ಹೊರಟನು. ಮಹಮೂದಾಬಾದಿನ ಪ್ರದೇಶದಲ್ಲಿ ಖಿಲ್ಜಿಯ ಸೈನ್ಯವು ತಲುಪಿದಾಗ, ಸಿಕಂದರ್‌ಖಾನನು ಸುಲ್ತಾನ್ ಖಿಲ್ಜಿಯನ್ನು ಭೇಟಿಯಾದನು. ಹಾಗೂ ಆತನ ಅಧೀನತೆಯನ್ನು ಸ್ವೀಕರಿಸಿಕೊಂಡನು.

ಮಾಹೋರ್‌ನಲ್ಲಿ ಕೋಟೆಯ ಮುತ್ತಿಗೆ:

ಸುಲ್ತಾನ್ ಖಿಲ್ಜಿಯು ಮಾಹೋರ್ ಕೋಟೆಯನ್ನು ಮುತ್ತಿದನು. ಸುಲ್ತಾನ್ ಅಲ್ಲಾವುದ್ದೀನ್ ಬಹಮನಿಯ ಒಂದು ವಿಶಾಲ ಸೈನ್ಯದೊಂದಿಗೆ ಕೋಟೆಯ ರಕ್ಷಣೆಗೆಂದು ಬಂದನು. ಸುಲ್ತಾನ್ ಖಿಲ್ಜಿಯು ಯೋಚಿಸಿದ್ದೇನೆಂದರೆ – ಬಹಮನಿ ಬಾದಷಹನ ಸೈನ್ಯವನ್ನೆದುರಿಸುವುದು ಕಷ್ಟವೆಂದು. ಆದ್ದರಿಂದ ಆತನು ಮಲಿಕ್ ಆಲಿಶಾನ್, ತಾಜ್‌ಖಾನ್, ಮತ್ತು ಸಿಕಂದರ್‌ಖಾನ್ ಬುಖಾರಿಯವರನ್ನು ಕೋಟೆಯ ಮುತ್ತಿಗೆಯಲ್ಲಿ ನಿಲ್ಲಿಸಿ, ಆತನು ವಾಪಸ್ಸಾದನು.

ಮಹಮೂದ್ ಖಿಲ್ಜಿಯ ಬಕ್ಲಾನಕ್ಕೆ ಪ್ರಯಾಣ:

ಸುಲ್ತಾನ್ ಮಹಮೂದ್ ಖಿಲ್ಜಿಗೆ ದಾರಿಯಲ್ಲೇ ಸುದ್ದಿ ಬಂದದ್ದೇನೆಂದರೆ – ಅಸೀರ್‌ನ ಶಾಸಕ ಮುಬಾರಕ್‌ಖಾನನು ಬಕ್ಲಾನ ಪ್ರದೇಶ, ಅದು ಗುಜರಾತ್ ಮತ್ತು ದಕ್ಷಿಣ ಪ್ರದೇಶದ ಮಧ್ಯ ಇದೆ, ಅದರ ಮೇಲೆ ಆಕ್ರಮಣವನ್ನು ಮಾಡಿದ್ದಾನೆಂದು ತಿಳಿಯಿತು. ಬಕ್ಲಾನದ ರಾಜನು ಸುಲ್ತಾನ್ ಖಿಲ್ಜಿಯ ಅಧೀನದಲ್ಲಿದ್ದು, ಕಪ್ಪ–ಕಾಣಿಕೆಗಳನ್ನು ಸರಿಯಾಗಿ ಸಲ್ಲಿಸುತ್ತಿದ್ದನು. ಈ ಸಂದರ್ಭದಲ್ಲಿ ಆತನ ಸಹಾಯವನ್ನು ಮಾಡುವುದು ಉಚಿತವೆಂದು ತಿಳಿದು, ದಾರಿಯಲ್ಲಿದ್ದಂತೆಯೇ ಬಕ್ಲಾನದತ್ತ ಹೊರಟನು. ತಾನು ಅಲ್ಲಿಗೆ ತಲುಪುವ ಮೊದಲೇ ಇಕ್ಬಾಲ್‌ಖಾನ್ ಮತ್ತು ಯೂಸುಫ಼್‌ಖಾನರನ್ನು ಅತ್ತ ಕಳುಹಿಸಿದನು.

ಮೀರಾನ್ ಮುಬಾರಕನೊಂದಿಗೆ ಯುದ್ಧ ಮತ್ತು ಗೆಲುವು:

ಮೀರಾನ್ ಮುಬಾರಕನಿಗೆ ಸುಲ್ತಾನ್ ಖಿಲ್ಜಿಯ ಆಗಮನದ ಸುದ್ದಿ ತಿಳಿಯುತ್ತಲೇ ತಾನೂ ಒಂದು ದೊಡ್ಡ ಸೈನ್ಯವನ್ನು ತೆಗೆದುಕೊಂಡು ಯುದ್ಧಕ್ಕೆ ನಿಂತನು. ಇಬ್ಬರಲ್ಲೂ ಘೋರ ಯುದ್ಧವೇ ನಡೆಯಿತು. ಫಾರೂಖಿ ಶಾಸಕನು ಬಹಳ ಹೊತ್ತಿನ ತನಕ ಮೈದಾನದಲ್ಲಿ ನಿಲ್ಲಲಾರದೇ ಅಸೀರ್‌ನತ್ತ ಓಡಿಹೋದನು. ಮಹಮೂದ್ ಖಿಲ್ಜಿಯು

ಅಸೀರ್‌ನ ಸುತ್ತಮುತ್ತಲ ಕೆಲವು ಪ್ರದೇಶಗಳನ್ನು ಲೂಟಿ ಮಾಡಿದನು. ನಂತರ ಮಾಂಡುವಿನ ಶಾದಿ ಆಬಾದ್‌ನತ್ತ ಪ್ರಯಾಣವನ್ನು ಬೆಳೆಸಿದನು.

ಮೀರಾನ್ ಮುಬಾರಕ ಘಾರೂಖಿಯ ಬಕ್ಲಾನದಲ್ಲಿ ಪ್ರವೇಶ:

ಇದೇ ವರ್ಷದಲ್ಲಿ ಸುಲ್ತಾನ್ ಮಹಮೂದ್ ಖಿಲ್ಜಿಗೆ ತಿಳಿದುಬಂದದ್ದೇನೆಂದರೆ – ಬಕ್ಲಾನದ ರಾಜನ ಮಗ ರಾಯ್‌ಬಾಲು ಎಂಬುವನು ಬಾದಷಹನ ಹುಜೂರಿನಲ್ಲಿ ಬರಲು ಆಸೆಯನ್ನಿಟ್ಟುಕೊಂಡಿದ್ದಾನೆಂದು. ಆದರೆ ಮೀರಾನ್ ಮುಬಾರಕ ಘಾರೂಖಿಯು ಇದನ್ನು ವಿರೋಧಿಸುತ್ತಿದ್ದಾನೆ. ಇದನ್ನು ತಡೆಯಲು ಆತನು ಬಕ್ಲಾನಕ್ಕೆ ವಾಪಸ್ ಬಂದಿದ್ದಾನೆಂದು ತಿಳಿಯಿತು. ಸುಲ್ತಾನ್ ಖಿಲ್ಜಿಯು ತಕ್ಷಣ ಷಹಜ್ಞಾದ ಘಿಯಾಸುದ್ದೀನನನ್ನು ಮೀರಾನ್ ಮುಬಾರಕನನ್ನು ದಮನ ಮಾಡಲು ನೇಮಿಸಿದನು.

ರಾಜ ಬಕ್ಲಾನದ ಮಗನು ಸುಲ್ತಾನ್ ಖಿಲ್ಜಿಯ ದರ್ಬಾರಿನಲ್ಲಿ:

ಮೀರಾನ್ ಮುಬಾರಕ್ ಫ಼ಾರೂಖಿಗೆ ಷಹಜ಼ಾದ ಘಿಯಾಸುದ್ದೀನನು ಬರುತ್ತಿರುವ ಸುದ್ದಿ ತಿಳಿದು, ಆತನು ಹೆದರಿ ತನ್ನ ದೇಶಕ್ಕೆ ವಾಪಸ್ ಓಡಿಹೋದನು. ಇದಾದ ನಂತರ ಬಕ್ಲಾನದ ರಾಜನ ಮಗನು ಬಾದಷಹನಿಗೆ ಕಪ್ಪ–ಕಾಣಿಕೆಗಳನ್ನು ತೆಗೆದುಕೊಂಡು ಸುಲ್ತಾನ್ ಮಹಮೂದ್ ಖಿಲ್ಜಿಯ ಸೇವೆಯಲ್ಲಿ ಹಾಜರಾದನು. ಇದರಿಂದಾಗಿ ಬಾದಷಹನು ಆತನ ಮೇಲೆ ತುಂಬಾ ಸಂತೋಷಪಟ್ಟನು. ಆತನಿಗೆ ಬಹುಮಾನಗಳನ್ನು ಕೊಟ್ಟು ಗೌರವಿಸಿದನು. ನಂತರ ಆತನಿಗೆ ಬಹುಮಾನಗಳನ್ನು ನೀಡಿ ಗೌರವಿಸಿದನು. ನಂತರ ಆತನನ್ನು ಬೀಳ್ಕೊಟ್ಟನು.

ಚಿತ್ತೂರಿನ ಮೇಲೆ ಸೈನಿಕಾಚರಣೆ:

ಷಹಜ಼ಾದ ಘಿಯಾಸುದ್ದೀನನು ರಹಸ್ತೋರಿಗೆ ಬಂದನು. ಅದೇ ದಿನಗಳಲ್ಲಿ ಸುಲ್ತಾನ್ ಮಹಮೂದ್ ಖಿಲ್ಜಿಯು ಚಿತ್ತೂರಿಗೆ ಬಂದನು. ಚಿತ್ತೂರಿನ ರಾಜನು ಬಾದಷಹನೊಂದಿಗೆ ಉತ್ತಮವಾಗಿ ನಡೆದುಕೊಂಡನು. ಬಾದಷಹನನ್ನು ತುಂಬಾ ಗೌರವಿಸಿದನು. ರಾಜ ಕೋನ್ಹಿಯಾನು ಬಾದಷಹನನ್ನು ಸಂತೃಪ್ತಿಗೊಳಿಸಲು ಕೆಲವು ರೂಪಾಯಿಗಳನ್ನೂ, ಕೆಲವು ಚಿನ್ನದ ನಾಣ್ಯಗಳನ್ನೂ ಕಳುಹಿಸಿಕೊಟ್ಟನು. ಆ ನಾಣ್ಯಗಳ ಮೇಲೆ ರಾಜ ಕೊನ್ಹಿಯಾನ ಮುದ್ರೆಯಿತ್ತು. ಇದನ್ನು ಕಂಡು ಬಾದಷಹನಿಗೆ ತುಂಬಾ ಸಿಟ್ಟು ಬಂದಿತು. ರಾಜನು ಕಳುಹಿಸಿದ್ದ ಬಹುಮಾನಗಳನ್ನು ತಕ್ಷಣ ವಾಪಸ್ ಮಾಡಿದನು. ತನ್ನ ಸೈನ್ಯಕ್ಕೆ ಚಿತ್ತೂರನ್ನು ನಾಶಪಡಿಸಲು ಆಜ್ಞಾಪಿಸಿದನು. ಷಾಹಿ ಸೈನ್ಯವನ್ನು ಅಪಾರವಾಗಿ ಲೂಟಿ ಮಾಡಿದನು. ಅನೇಕರು ಸತ್ತರು. ಈ ಲೂಟಿ ಮತ್ತು ವಿನಾಶದಿಂದಾಗಿ, ಎಲ್ಲಿಯೂ ಜನರು ಕಾಣಸಿಗುತ್ತಿರಲಿಲ್ಲ.

ರಾಜ ಕೋನ್ಹಿಯಾನ ವಿನಂತಿ:

ಸುಲ್ತಾನ್ ಮಹಮೂದ್ ಖಿಲ್ಜಿಯು ಮನ್ಸೂರುಲ್ ಮುಲ್ಕನಿಗೆ ಮಂದ್‌ಸೋರಿನ ಮೇಲೆ ಆಕ್ರಮಣವನ್ನು ಮಾಡಲು ಆಜ್ಞಾಪಿಸಿದನು. ಏಕೆಂದರೆ ಆ ಪ್ರದೇಶದಲ್ಲಿ ನಮ್ಮ ಠಾಣೆದಾರರನ್ನು ನೇಮಿಸಲು ಅನುಕೂಲವಾಗುತ್ತದೆ. ಈ ಪ್ರದೇಶದ ಮಧ್ಯಭಾಗದಲ್ಲಿ ಸುಲ್ತಾನ್ ಮಹಮದ್ ಖಿಲ್ಜಿಯು "ಖಿಲ್ಜಿಪುರ" ಎಂಬ ಹೆಸರಿನಲ್ಲಿ ಒಂದು ನಗರದ ನಿರ್ಮಾಣವನ್ನು ಮಾಡುವ ಇಚ್ಛೆಯನ್ನು ವ್ಯಕ್ತಪಡಿಸಿದನು. ರಾಜ ಕೋನ್ಹಿಯಾನಿಗೆ ಈ ವಿಚಾರವು ತಿಳಿದುಬಂದದ್ದರಿಂದ ಆತನು ಬಾದಷಹನಿಗೆ ಒಂದು ಸಂದೇಶವನ್ನು ಹೀಗೆ ಕಳುಹಿಸಿದನು. "ನಾನು ತಮಗೆ ಎಷ್ಟು ಬೇಕಿದ್ದರೂ ಕಪ್ಪ-ಕಾಣಿಕೆಗಳನ್ನು ಕೊಡಲು ಸಿದ್ಧನಿದ್ದೇನೆ. ನಾನು ಯಾವತ್ತೂ ತಮ್ಮ ವಿರುದ್ಧ ಒಂದು ಕೆಟ್ಟ ಮಾತನ್ನೂ ಆಡಿಲ್ಲ. ಮುಂದೆಯೂ ಆಡುವುದಿಲ್ಲ. ಎಂದಿಗೂ ನಾನು ತಮ್ಮ ಹಿತಚಿಂತಕನಾಗಿದ್ದೇನೆ. ಆದರೆ ನನ್ನದೊಂದು ಪ್ರಾರ್ಥನೆ ತಮ್ಮಲ್ಲಿ ಏನೆಂದರೆ, ತಾವು ಖಿಲ್ಜಿಪುರ ಎಂಬ ನಗರವನ್ನು ನಿರ್ಮಾಣ ಮಾಡಲು ಹೊರಟಿರುವ ಇಚ್ಛೆಯನ್ನು ದಯವಿಟ್ಟು ಬಿಟ್ಟುಕೊಡಬೇಕೆಂದು ಸವಿನಯ ವಿನಂತಿ.

ಬಾದಷಹನು ಮಂದ್‌ಸೋರಿಗೆ ವಾಪಸ್ಸು:

ಆ ದಿನಗಳಲ್ಲಿ ಮಳೆಗಾಲವು ಪ್ರಾರಂಭವಾಯಿತು. ಮಾಳವಿ ಸೈನ್ಯವು ಪರ ರಾಜ್ಯದಲ್ಲಿ ತಂಗುವುದು ಅಷ್ಟು ಒಳ್ಳೆಯದಲ್ಲವೆಂದು ಬಗೆದು, ಸುಲ್ತಾನ್ ಮಹಮೂದ್ ಖಿಲ್ಜಿಯು ರಾಜ ಕೋನ್ಹಿಯಾನ ಬೇಡಿಕೆಯನ್ನು ಸ್ವೀಕರಿಸಿ, ಆತನಿಂದ ಅಪಾರ ಸಂಪತ್ತನ್ನು ಕಾಣಿಕೆಯ ರೂಪದಲ್ಲಿ ಪಡೆದು ಮಾಂಡುವಿನ ಶಾದಿ ಆಬಾದಿನತ್ತ ಪ್ರಯಾಣವನ್ನು ಬೆಳೆಸಿದನು.

ಮಂದ್‌ಸೋರನ್ನು ಗೆಲ್ಲುವ ಇಚ್ಛೆ:

ಹಿಜರಿ ೮೫೯ರಲ್ಲಿ ಸುಲ್ತಾನ್ ಮಹಮೂದ್ ಖಿಲ್ಜಿಯು ಎರಡನೇ ಬಾರಿಗೆ ಮಂದ್‌ಸೋರನ್ನು ಗೆಲ್ಲುವ ಆಸೆಯನ್ನು ವ್ಯಕ್ತಪಡಿಸಿದನು. ಈ ಉದ್ದೇಶದಿಂದ ಒಂದು ವಿಶಾಲ ಸೈನ್ಯವನ್ನು ತೆಗೆದುಕೊಂಡು ಪ್ರಯಾಣವನ್ನು ಬೆಳೆಸಿದನು. ಆತನು ತನ್ನ ಸೈನ್ಯವನ್ನು ಪ್ರಮುಖ ಸ್ಥಳಗಳಿಗೆ ಕಳುಹಿಸಿದನು. ತಾನು ಸ್ವತಃ ಕೇಂದ್ರಸ್ಥಳದಲ್ಲಿ ಬಿಡಾರವನ್ನು ಹಾಕಿದನು. ಪ್ರತಿನಿತ್ಯ ಬಾದಷಹನಿಗೆ ಎಲ್ಲ ಕಡೆಗಳಿಂದಲೂ ಬಿಸಿ-ಬಿಸಿ ಸುದ್ದಿಗಳು ತಲುಪುತ್ತಿದ್ದವು.

ಅಜ್ಮೇರಿನ ಪರಿಸ್ಥಿತಿ:

ಷಾಹಿ ಸೈನ್ಯದ ಒಂದು ಭಾಗ ಹಾರೂನಿ ಪ್ರದೇಶದಲ್ಲಿ ನೆಲೆಸಿದ್ದ ಸರದಾರನಿಂದ ಒಂದು ಅರ್ಜಿ ಬಂದಿತು. ಅದರಲ್ಲಿ ಹಿಂದೂಸ್ತಾನದಲ್ಲಿ ಇಸ್ಲಾಂ ಧರ್ಮದ ಪ್ರಾರಂಭ

ಹಾಗು ಪ್ರಚಾರ ಅಜ್ಮೇರಿನಿಂದ ಆಗಿದೆ. ಈ ನಗರವು ಖ್ವಾಜ ಮೆಯಿನುದ್ದೀನ ಸಂಜರಿಯವರ ನಿವಾಸ ಸ್ಥಾನವಾಗಿದೆ. ಆದರೆ ಇತ್ತೀಚೆಗೆ ಇಲ್ಲಿ ಇಸ್ಲಾಮಿನ ಯಾವ ಕುರುಹುಗಳೂ ಕಾಣಿಸುತ್ತಿಲ್ಲ. ಎತ್ತ ನೋಡಿದರೂ ಕಾಫಿರರೇ ಕಾಣಿಸುತ್ತಾರೆ. ಇಸ್ಲಾಂ ಧರ್ಮದ ಯಾವ ಪ್ರಭಾವವೂ ಇಲ್ಲಿ ಇಲ್ಲದಿರುವುದು ವಿಷಾದನೀಯ.

ಮಹಮೂದ್ ಖಿಲ್ಜಿ ಅಜ್ಮೇರಿನಲ್ಲಿ:

ಮಹಮೂದ್ ಖಿಲ್ಜಿಯು ಈ ಅರ್ಜಿಯನ್ನು ಓದಿದ ದಿನವೇ ಅಜ್ಮೇರಿನತ್ತ ಪ್ರಯಾಣವನ್ನು ಬೆಳೆಸಿದನು. ಬೇಗ-ಬೇಗ ಪ್ರಯಾಣವನ್ನು ಮಾಡಿ ಅಜ್ಮೇರನ್ನು ತಲುಪಿದನು. ಹಜ್ರತ್ ಖ್ವಾಜಾರವರ ಸಮಾಧಿಯಿಂದ ಪ್ರೇರಣೆಯನ್ನು ಪಡೆದು, ಅವರ ಆಶೀರ್ವಾದ ಮತ್ತು ಸಹಾಯವನ್ನು ಬೇಡಿದನು. ಕೋಟೆಯನ್ನು ಸರಿಯಾಗಿ ನಿರೀಕ್ಷಿಸಿ, ತಕ್ಷಣ ತನ್ನ ಸೈನ್ಯಕ್ಕೆ ಸುತ್ತಲೂ ಮುತ್ತಿಗೆಯನ್ನು ಹಾಕಲು ಆಜ್ಞಾಪಿಸಿದನು.

ಅಜ್ಮೇರ್ ಕೋಟೆಯನ್ನು ತನ್ನ ವಶಕ್ಕೆ ಪಡೆದನು:

ಕೋಟೆಯ ಶಾಸಕ ಗಜಾಧರನು ರಾಜಪೂತರ ಒಂದು ಗುಂಪಿನೊಂದಿಗೆ ಕೋಟೆಯ ಹೊರಗೆ ಬಂದನು. ಮುಸಲ್ಮಾನರೊಂದಿಗೆ ಯುದ್ಧ ಮಾಡಿದನು. ಸುಲ್ತಾನ್ ಖಿಲ್ಜಿಯ ಸೈನಿಕರು ಬಹಳ ಶೌರ್ಯದಿಂದ ಹೋರಾಡಿದರು. ರಾಜಪೂತರ ಸೋಲು ಆರಂಭವಾಯಿತು. ರಾಜಪೂತರು ಕೋಟೆಯ ಒಳಗೆ ಸೇರಿಕೊಂಡರು. ನಾಲ್ಕು ದಿನಗಳ ತನಕ ಮುಸಲ್ಮಾನರೊಂದಿಗೆ ಯುದ್ಧ ಮಾಡಿದರು. ಐದನೇ ದಿನ ಪುನಃ ಗಜಾಧರನು ತನ್ನ ಸೈನ್ಯದೊಂದಿಗೆ ಕೋಟೆಯ ಹೊರಕ್ಕೆ ಬಂದನು. ಈ ಸಲ ಗಜಾಧರನು ಯುದ್ಧದಲ್ಲಿ ಸತ್ತನು. ಅಜ್ಮೇರ್ ಕೋಟೆಯು ಮುಸಲ್ಮಾನರ ವಶವಾಯಿತು.

ಖ್ವಾಜಾ ನಿಯಾಮತುಲ್ಲಾನ ನೇಮಕ:

ಈ ಮಹತ್ತರವಾದ ಗೆಲುವಿನ ನೆನಪಿಗಾಗಿ ಮೊದಲು ಅಲ್ಲಾಹ್‌ನಲ್ಲಿ ಪ್ರಾರ್ಥನೆಯನ್ನು ಸುಲ್ತಾನ್ ಮಹಮೂದ್ ಖಿಲ್ಜಿಯು ಸಲ್ಲಿಸಿದನು. ಖ್ವಾಜಾ ಸಾಹೇಬರ ದರ್ಗಾದಲ್ಲಿಯೂ ಪ್ರಾರ್ಥನೆಯನ್ನು ಸಲ್ಲಿಸಿ, ಅಜ್ಮೇರಿನಲ್ಲಿ ಒಂದು ಸುಂದರವಾದ ಮಸೀದಿಯನ್ನು ಕಟ್ಟಿಸಿದನು. ಖ್ವಾಜ ನಿಯಾಮತುಲ್ಲಾ ಎಂಬುವನಿಗೆ "ಸೈಫ್‌ಖಾನ್" ಎಂಬ ಬಿರುದನ್ನು ದಯಪಾಲಿಸಿ, ಇಲ್ಲಿನ ಶಾಸಕತ್ವವನ್ನು ಆತನಿಗೆ ವಹಿಸಿದನು. ಬಾದಷಹನು ಖ್ವಾಜಾ ಅಜ್ಮೇರಿನ ಮುಜಾವರರಿಗೆ ಬಹುಮಾನಗಳನ್ನು ನೀಡಿ ಸನ್ಮಾನಿಸಿದನು. ಅಲ್ಲಿಂದ ಮಂಡಲಗಢದ ಕಡೆಗೆ ಪ್ರಯಾಣವನ್ನು ಮಾಡಿದನು.

ರಾಜ ಕೋನ್ಥಿಯಾನೊಂದಿಗೆ ಯುದ್ಧ:

ಬಾದಷಹನು ಬಿಯಾಸ್ ನದಿಯ ದಡದಲ್ಲಿ ಬಿಡಾರವನ್ನು ಹೂಡಿದನು ಮತ್ತು ತನ್ನ ಅಮೀರರನ್ನು ಕೋಟೆಯಿಂದ ಹೊರಗೆ ಕಳುಹಿಸಿಕೊಟ್ಟನು. ಇಬ್ಬರಲ್ಲೂ ಘೋರ

ಯುದ್ಧವು ನಡೆಯಿತು. ಸುಲ್ತಾನ್ ಮಹಮೂದ್‌ನ ಸೈನ್ಯದ ಅಸಂಖ್ಯಾತ ಸೈನಿಕರು ಯುದ್ಧದಲ್ಲಿ ಸತ್ತರು. ಬಹಳ ಜನ ರಾಜಪೂತರೂ ಹತರಾದರು. ರಾತ್ರಿಯ ವೇಳೆಯಲ್ಲಿ ಯುದ್ಧವನ್ನು ನಿಲ್ಲಿಸಿ ತಮ್ಮ-ತಮ್ಮ ಬಿಡಾರಗಳಿಗೆ ವಾಪಸ್ಸಾದರು.

ಮಾಂಡುವಿಗೆ ಹಿಂತಿರುಗಿದನು:

ಮಾರನೇ ದಿನ ಬೆಳಿಗ್ಗೆ ಎಲ್ಲ ಅಮೀರರೂ, ಶಾಸಕರೂ, ಸೈನ್ಯಾಧಿಕಾರಿಗಳೂ ಸುಲ್ತಾನ್ ಮಹಮೂದ್ ಖಿಲ್ಜಿಯ ಸೇವೆಯಲ್ಲಿ ಹಾಜರಾದರು. ಈ ವರ್ಷ ಎರಡನೇ ಸಲ ಸೈನಿಕಾಚರಣೆಯನ್ನು ನಡೆಸಲಾಗಿದೆ. ಆದ್ದರಿಂದ ಸೈನ್ಯವೂ ಬಹಳ ದುರ್ಬಲವಾಗಿದೆ. ಎರಡನೆಯದಾಗಿ ಮಳೆಗಾಲವೂ ಪ್ರಾರಂಭವಾಗಿದೆ. ಇದರಿಂದ ನಾವು ಪ್ರಾರ್ಥಿಸುವುದೇನೆಂದರೆ ಹುಜೂರರು ರಾಜಧಾನಿಗೆ ಹಿಂತಿರುಗಿ ಹೋಗುವುದು ಒಳ್ಳೆಯದು. ಮಳೆಗಾಲವು ಮುಗಿದ ನಂತರ ಪುನಃ ಈ ಕೋಟೆಯನ್ನು ಗೆಲ್ಲಲು ಬರಬಹುದು. ಬಾದಷಹನು ಅಮೀರರ ಬೇಡಿಕೆಯನ್ನು ಒಪ್ಪಿದನು. ನಂತರ ಮಾಂಡುವಿನತ್ತ ಪ್ರಯಾಣ ಮಾಡಲು ಆಜ್ಞಾಪಿಸಿದನು.

ಮಂಡಲಗಢದ ಮೇಲೆ ಸೈನಿಕಾಚರಣೆ:

ಸುಲ್ತಾನ್ ಮಹಮೂದ್ ಖಿಲ್ಜಿಯು ಮಂಡಲಗಢದ ಮೇಲೆ ಆಕ್ರಮಣವನ್ನು ಮಾಡಿ ಅದನ್ನು ಗೆಲ್ಲಬೇಕೆಂದು ಇಚ್ಛಿಸಿದನು. ಈ ಉದ್ದೇಶದಿಂದ ಬಾದಷಹನು ೨೬ನೇ ತಾರೀಖು ಮೊಹರಂ ತಿಂಗಳ ಹಿಜರಿ ೮೬೧ರಲ್ಲಿ ರವಾನೆಯಾದನು. ಮಂಡಲಗಢವನ್ನು ತಲುಪಿ ಸುಲ್ತಾನ್ ಮಹಮೂದ್‌ನು ಆಜ್ಞಾಪಿಸಿದ್ದುದೇನೆಂದರೆ- ಇಲ್ಲಿನ ಎಲ್ಲ ಮರಗಳನ್ನು ಬೇರು ಸಮೇತ ಕಿತ್ತು ಹಾಕಬೇಕೆಂದೂ, ಕಟ್ಟಡಗಳನ್ನೆಲ್ಲಾ ಕೆಡವಿಸಿ, ಇಲ್ಲಿ ಯಾರೂ ವಾಸಿಸಬಾರದೆಂದೂ ಆಜ್ಞಾಪಿಸಿದನು. ಬಾದಷಹನ ಆಜ್ಞೆಯನ್ನು ಪಾಲಿಸಲಾಯಿತು.

ಕೋಟೆಯನ್ನು ವಶಪಡಿಸಿಕೊಳ್ಳಲಾಯಿತು:

ಬಾದಷಹನು ಕೋಟೆಯನ್ನು ಮುತ್ತಿದನು. ಸೈನ್ಯವನ್ನು ಕಂದಕದಿಂದ ಪಾರುಮಾಡಿಸಿ ಕೋಟೆಯ ಸುತ್ತಲೂ ನಿಲ್ಲಿಸಿದನು. ಬಹಳ ಕಡಿಮೆ ಸಮಯದಲ್ಲಿ ಬಾದಷಹನು ಕೋಟೆಯನ್ನು ವಶಪಡಿಸಿಕೊಂಡನು. ರಾಜಪೂತರ ಅಸಂಖ್ಯಾತ ಸೈನಿಕರು ಹತರಾದರು. ಮತ್ತೆ ಕೆಲವರು ಸೋತು ಕೋಟೆಯೊಳಗೆ ಅವಿತುಕೊಂಡರು. ಕೋಟೆಯು ಬೆಟ್ಟದ ಶಿಖರದ ಮೇಲೆ ಕಟ್ಟಲ್ಪಟ್ಟಿತ್ತು.

ರಾಜಪೂತರ ಶಾಂತಿಯ ಬೇಡಿಕೆ:

ಮೇಲೆ ಹೋದ ರಾಜಪೂತರು ತಿಳಿದಿದ್ದೇನೆಂರೆ- ಈಗ ನಾವು ಶತ್ರುವಿನ ಹಿಡಿತದಿಂದ ಸಂಪೂರ್ಣವಾಗಿ ತಪ್ಪಿಸಿಕೊಂಡು ಬಂದಿದ್ದೇವೆ. ಈ ಕಾರಣದಿಂದ

ಅವರು ಬಹಳ ಅಹಂಕಾರದಿಂದ ಮಾತನಾಡಲಾರಂಭಿಸಿದರು. ಮೇಲಿನ ಕೋಟೆಯಲ್ಲಿ ನೀರಿನ ಅಭಾವವಿತ್ತು. ಕೆಲವೇ ದಿನಗಳಲ್ಲಿ ನೀರಿಲ್ಲದಂತಾಯಿತು. ಅಲ್ಲಿನ ಎಲ್ಲ ಕೆರೆಗಳೂ ಬತ್ತಿ ಹೋಗಿದ್ದವು. ಈ ಸಂಕಟದಿಂದ ಅವರು ಬಹಳ ಚಿಂತಾಕ್ರಾಂತರಾದರು. ಕೊನೆಗೆ ವಿವಶರಾಗಿ ಸುಲ್ತಾನ್ ಮಹಮೂದ್‌ನಿಂದ ಶಾಂತಿಯ ರಕ್ಷಣೆಯನ್ನು ಕೋರಿದರು. ರಾಜಪೂತರು ಹತ್ತು ಲಕ್ಷ ರುಪಾಯಿಗಳನ್ನು ಬಾದಷಹನ ಹುಜೂರಿನಲ್ಲಿ ಅರ್ಪಿಸಿದರು. ನಂತರ ಕೋಟೆಯನ್ನು ಖಾಲಿ ಮಾಡಿದರು.

ಕಾಫಿರರ ನಾಶ:

ಈ ಘಟನೆಯು ಹಿಜರಿ ೮೬೨ರ ಜಿಲ್‌ಹಜ್ಜ್ ಇಪ್ಪತ್ತೈದನೇ ತಾರೀಖು ಸಂಭವಿಸಿತ್ತು. ಸುಲ್ತಾನ್ ಮಹಮೂದ್ ಖಿಲ್ಜಿಯು ಆ ದಿನ ಅಲ್ಲಾಹ್‌ನಲ್ಲಿ ಗೆಲುವಿನ ಸಂತೋಷಕ್ಕೆ ಪ್ರಾರ್ಥನೆಯನ್ನು ಸಲ್ಲಿಸಿದನು. ಮಾರನೇ ದಿನ ಕೋಟೆಯಲ್ಲಿ ಪ್ರವೇಶಿಸಿದನು. ಬಾದಷಹನು ಅಲ್ಲಿನ ಎಲ್ಲ ಮಂದಿರಗಳನ್ನು ಕೆಡವಿಸಿ, ಆ ಜಾಗಗಳಲ್ಲಿ ಮಸೀದಿಗಳನ್ನು ಕಟ್ಟಿಸಿದನು. ಮಸೀದಿಗಳಿಗೆ ಖಾಜಿಗಳನ್ನು, ಮುಖ್ಯಸ್ಥರನ್ನು, ಖುತ್ಬಾ ಹೇಳುವವರನ್ನು ಮತ್ತು ಮೌಝನ್‌ಗಳನ್ನು ನೇಮಿಸಿದನು.

ಭಿಲ್ವಾರದ ನಾಶ:

ಹದಿನೈದನೇ ತಾರೀಖು, ಮೊಹರಂ ತಿಂಗಳ ಹಿಜರಿ ೮೬೩ರಲ್ಲಿ ಸುಲ್ತಾನ್ ಮಹಮೂದ್ ಖಿಲ್ಜಿಯು ಚಿತ್ತೂರನ್ನು ಗೆಲ್ಲಲು ಮನಸ್ಸು ಮಾಡಿ ಪ್ರಯಾಣವನ್ನು ಬೆಳೆಸಿದನು. ಚಿತ್ತೂರಿನ ಗಡಿ ಭಾಗದಲ್ಲಿ ಪ್ರವೇಶಿಸಿ ಬಾದಷಹನು ಷಹಝಾದ ಘಿಯಾಸುದ್ದೀನ್‌ನಿಗೆ ಭಿಲ್ವಾರದ ವಿನಾಶ, ಲೂಟಿ ಮಾಡಲು ಕಳುಹಿಸಿಕೊಟ್ಟನು. ಷಹಝಾದನು ಈ ಪ್ರದೇಶವನ್ನು ಸಂಪೂರ್ಣವಾಗಿ ಹಾಳು ಮಾಡಿದನು. ಅನೇಕರನ್ನು ಸೆರೆ ಹಿಡಿದು ತನ್ನೊಂದಿಗೆ ಕರೆತಂದನು.

ಕೋಂದಿ ಕೋಟೆಯ ಗೆಲುವು:

ಇದಾದ ಕೆಲವು ದಿನಗಳ ನಂತರ ಬಾದಷಹನು ತಾಜ್‌ಖಾನ್ ಮತ್ತು ಫಿದಾಯಿ ಖಾನರಿಗೆ ಕೋಂದಿ ಕೋಟೆಯನ್ನು ಗೆಲ್ಲಲು ನೇಮಕ ಮಾಡಿದನು. ಷಹಝಾದ ಫಿದಾಯಿಖಾನನು ಒಂದು ಬಲಿಷ್ಠ ಸೈನ್ಯವನ್ನು ತೆಗೆದುಕೊಂಡು ಕೋಂದಿ ಪ್ರದೇಶದ ಗಡಿಭಾಗಕ್ಕೆ ಬಂದನು. ಅತ್ತ ಕಡೆಯಿಂದ ರಾಜಪೂತರೂ ಕೋಟೆಯ ಹೊರಕ್ಕೆ ಬಂದರು. ಇಬ್ಬರಲ್ಲೂ ಘೋರ ಯುದ್ಧವು ನಡೆಯಿತು. ಪರಿಣಾಮವಾಗಿ ರಾಜಪೂತರು ಸೋಲನ್ನು ಅನುಭವಿಸಿದರು. ಅಸಂಖ್ಯಾತ ರಾಜಪೂತರು ಹತರಾದರು. ರಾಜಪೂತರ ಒಂದು ಗುಂಪು ತಮ್ಮ ಪ್ರಾಣಗಳನ್ನು ಉಳಿಸಿಕೊಳ್ಳಲು ಕಂದಕದಲ್ಲಿ ಇಳಿದಿದ್ದವರನ್ನು ಷಹಝಾದ ಫಿದಾಯಿಖಾನನು ಸೆರೆಹಿಡಿದನು. ಫಿದಾಯಿಖಾನನ ಶೌರ್ಯ-

ಸಾಹಸಗಳಿಂದಾಗಿ ಮೊದಲನೇ ದಿನವೇ ಕೋಟೆಯನ್ನು ವಶಪಡಿಸಿಕೊಂಡನು. ಆತನು ಗೆದ್ದ ಸಂತೋಷಕ್ಕೆ ಅಲ್ಲಾಹ್‌ನಲ್ಲಿ ಪ್ರಾರ್ಥನೆಯನ್ನೂ ಸಲ್ಲಿಸಿದನು. ತನ್ನ ಒಬ್ಬ ಆಪ್ತನನ್ನು ಕೋಟೆಯ ಅಧಿಪತಿಯಾಗಿ ನೇಮಿಸಿ, ಸಂತೋಷದಿಂದ ಮಾಂಡುವಿನ ಶಾದಿ ಆಬಾದಿಗೆ ಹಿಂತಿರುಗಿ ಬಾದಷಹನ ಸೇವೆಯಲ್ಲಿ ಹಾಜರಾದನು.

ರಾಜಪೂತರ ಹೊಸ ವಿದ್ರೋಹ:

ಹಿಜರಿ ೮೬೬ರಲ್ಲಿ ಸುಲ್ತಾನ್ ಮಹಮೂದ್ ಖಿಲ್ಜಿಯು ಮತ್ತೊಮ್ಮೆ ರಾಜಪೂತರ ದಾಳಿಗಳನ್ನು ಅಡಗಿಸಲು ಸೈನ್ಯದ ಸಿದ್ಧತೆಯನ್ನು ಮಾಡಿಕೊಂಡನು. ತನ್ನ ರಾಜಧಾನಿಯನ್ನು ಬಿಟ್ಟು ಹೊರಹೊರಟನು. ಅಬಾರ್ ಎಂಬ ಹಳ್ಳಿಯಲ್ಲಿ ಬೀಡು ಬಿಟ್ಟನು. ಬಾದಷಹನು ತನ್ನ ಮಗ ಘಿಯಾಸುದ್ದೀನನನ್ನು ಅಲ್ಲಿನ ನಗರಗಳ ವಿನಾಶ, ಲೂಟಿಗಾಗಿ ಕಳುಹಿಸಿಕೊಟ್ಟನು. ಷಹಜ಼ಾದನು ಷಾಹಿ ಆಜ್ಞೆಯನ್ನು ಪಾಲಿಸಿದನು. ಆ ಪ್ರದೇಶಗಳಲ್ಲಿ ಲೂಟಿ ಮಾಡಿದ ನಂತರ ಕೋತಲ್ಮೇರ್ ಮೇಲೆ ಆಕ್ರಮಣವನ್ನು ಮಾಡಿದನು.

ಕೋತಲ್ಮೇರ್ ಗೆಲ್ಲಲು ಪ್ರಯಾಣ:

ಇದಾದ ನಂತರ ಷಹಜ಼ಾದ ಘಿಯಾಸುದ್ದೀನನು ಬಾದಷಹನ ಸೇವೆಯಲ್ಲಿ ಹಾಜರಾದನು. ಆತನು ಬಾದಷಹನ ಮುಂದೆ ಕೋತಲ್ಮೇರಿನ ಅಪಾರ ಪ್ರಶಂಸೆಯನ್ನು ಮಾಡಿದನು. ಮಾರನೇ ದಿನವೇ ಬಾದಷಹನು ಕೋತಲ್ಮೇರಿನತ್ತ ಪ್ರಯಾಣ ಬೆಳೆಸಿದನು. ದಾರಿಯಲ್ಲಿ ಲೂಟಿಯನ್ನು ಮಾಡುತ್ತಲೇ ಹೋಗಿ ಕೋತಲ್ಮೇರಿನ ಸರಹದ್ದಿನಲ್ಲಿಳಿದುಕೊಂಡನು.

ದೋಂಗರ್‌ಪುರದ ಮೇಲೆ ಆಕ್ರಮಣ:

ಒಂದು ದಿನ ಬಾದಷಹನು ಕೋಟೆಯ ಒಂದು ಮೈಲು ದೂರದಲ್ಲಿ ಪಶ್ಚಿಮದ ಕಡೆ ಸವಾರಿ ಮಾಡುತ್ತಾ ಹೊರಟನು. ಆತನು ಪಟ್ಟಣವನ್ನು ನೋಡಿ, ಈ ಕೋಟೆಯನ್ನು ಸುಲಭವಾಗಿ ಗೆಲ್ಲಲು ಸಾಧ್ಯವಿಲ್ಲ ಎಂದನು. ಇದನ್ನು ಗೆಲ್ಲಬೇಕಾದರೆ ಅನೇಕ ವರ್ಷಗಳು ಮುತ್ತಿಗೆಯನ್ನು ಹಾಕಬೇಕಾಗುತ್ತದೆಂದು ಹೇಳಿದನು. ಬಾದಷಹನ ಹತ್ತಿರ ಅನೇಕ ವರ್ಷಗಳ ಮುತ್ತಿಗೆಯಲ್ಲಿ ನಿಲ್ಲಲು ಪುರಸತ್ತು ಇರಲಿಲ್ಲ. ಇದನ್ನರಿತ ಬಾದಷಹನು ಮಾರನೇ ದಿನವೇ ಅಲ್ಲಿಂದ ಡೋಂಗರ್‌ಪುರದತ್ತ ಹೊರಟನು. ಅಲ್ಲಿನ ರಾಜನು ಪರಾರಿಯಾಗಿ 'ಕೋನಬಯಾಸ' ಎಂಬಲ್ಲಿ ಆಶ್ರಯವನ್ನು ಪಡೆದನು. ರಾಜನು ಬಹಳ ವಿನೀತನಾಗಿ, ನಮ್ರತೆಯಿಂದ ಎರಡು ಲಕ್ಷ ತಿನ್ಗೆ ನಾಣ್ಯಗಳನ್ನೂ, ಇಪ್ಪತ್ತು ಕುದುರೆಗಳನ್ನೂ ಬಾದಷಹನ ಸೇವೆಯಲ್ಲಿ ಕಳುಹಿಸಿದನು. ಬಾದಷಹನು ಈ ಕೊಡುಗೆಯನ್ನು ಸ್ವೀಕರಿಸಿ ಮಾಂಡುವಿನ ಶಾದಿ ಆಬಾದ್ ಕಡೆ ಬಂದುಬಿಟ್ಟನು.

ಮಹಮೂದ್ ಖಿಲ್ಜಿಯು ದಖನ್ನಿನತ್ತ:

ಹಿಜರಿ ೮೬೭ರ ಮೊಹರಂ ತಿಂಗಳಲ್ಲಿ ದಕ್ಷಿಣ ಸಿಂಹಾಸನದ ಮೇಲೆ ಒಬ್ಬ ಚಿಕ್ಕ ಬಾಲಕನು ಬಾದಷಹ ಪಟ್ಟಕ್ಕೇರಿದ್ದನು. ಬಾದಷಹನು ಚಿಕ್ಕವನಾಗಿದ್ದುದರಿಂದ ದಖನಿ ಅಮೀರರು ಬಾಲಕನನ್ನು ಸರಿಯಾಗಿ ಸೇವಿಸುತ್ತಿರಲಿಲ್ಲ. ನಿಜಾಮಲ್ ಮುಲ್ಕ್ ಘೋರಿಯ ಚಿತಾವಣೆಯ ಮೇರೆಗೆ, ಸುಲ್ತಾನ್ ಮಹಮೂದ್ ಖಿಲ್ಜಿಯು ಸೈನ್ಯವನ್ನು ತೆಗೆದುಕೊಂಡು ದಕ್ಷಿಣಕ್ಕೆ ಬಂದನು. ಬಾದಷಹನು ನರ್ಮದಾ ನದಿಯನ್ನು ದಾಟಿದ್ದಾಗ, ಆತನ ಗುಪ್ತಚರರು ಅಸೀರಿನ ಶಾಸಕನಾದ ಮುಬಾರಕ್‌ಖಾನನ ಮರಣವಾಯಿತೆಂದು ತಿಳಿಸಿದರು. ಆತನ ಮಗ ಘಾಜ಼ಿಖಾನನು "ಆದಿಲ್‌ಖಾನ್" ಎಂಬ ಹೆಸರಿನಲ್ಲಿ ತಂದೆಯ ಸ್ಥಾನವನ್ನು ಅಲಂಕರಿಸಿದ್ದಾನೆಂದೂ ತಿಳಿಸಿದರು.

ಅಸೀರಿನ ಆದಿಲ್‌ಖಾನನು ಹಿಂಸೆಗಳನ್ನು ಪ್ರಾರಂಭಿಸಿದನು:

ಆದಿಲ್‌ಖಾನನು ಪಟ್ಟಕ್ಕೇರಿದ ತಕ್ಷಣ ಪ್ರಜೆಗಳನ್ನು ಹಿಂಸಿಸುವುದೇ ತನ್ನ ಕರ್ತವ್ಯ ವೆಂದು ತಿಳಿದಿದ್ದನು. ಸಯ್ಯದ್ ಕಮಾಲುದ್ದೀನ್ ಮತ್ತು ಸಯ್ಯದ್ ಸುಲ್ತಾನ್‌ರ ಯಾವುದೇ ತಪ್ಪಿಲ್ಲದಿದ್ದರೂ, ಈ ಅಮೀರರನ್ನು ಕೊಲೆಗೈದು ಅವರ ಮನೆಗಳನ್ನು ನಾಶಪಡಿಸಿದ್ದನು. ಈ ಸುದ್ದಿ ತಿಳಿದ ಕೆಲವು ದಿನಗಳ ನಂತರ, ಸಯ್ಯದ್ ಕಮಾಲುದ್ದೀನ್ ಮತ್ತು ಸಯ್ಯದ್ ಸುಲ್ತಾನರ ತಮ್ಮನಾದ ಸಯ್ಯದ್ ಜಲಾಲನು ಸುಲ್ತಾನ್ ಮಹಮೂದ್‌ನ ಸೇವೆಯಲ್ಲಿ ಹಾಜರಾದನು. ತನ್ನ ತಮ್ಮಂದಿರ ಕೊಲೆಯ ದುಃಖದ ಕತೆಯನ್ನು ವಿವರಿಸಿ, ಆದಿಲ್‌ಖಾನನ ಹಿಂಸಾತ್ಮಕ ಚಟುವಟಿಕೆಗಳಿಂದ ಉಳಿಸಬೇಕೆಂದು ಬಾದಷಹನಲ್ಲಿ ಪ್ರಾರ್ಥಿಸಿದನು.

ಆದಿಲ್‌ಖಾನನ ಕ್ಷಮಾಯಾಚನೆ:

ಸುಲ್ತಾನ್ ಮಹಮೂದ್‌ನು, ಆದಿಲ್‌ಖಾನನ ಅಸಭ್ಯ ವರ್ತನೆಗಳನ್ನು ಕೇಳಿ ಬಹಳ ವಾಗಿ ಕೋಪಗೊಂಡನು. ಆತನು ಆದಿಲ್‌ಖಾನನಿಗೆ ಶಿಕ್ಷೆಯನ್ನು ಕೊಡುವ ದೃಢ ನಿರ್ಧಾರವನ್ನು ಮಾಡಿದನು. ಈ ಉದ್ದೇಶಕ್ಕಾಗಿ ಅಸೀರಿನತ್ತ ಪ್ರಯಾಣವನ್ನು ಮಾಡಿದನು. ಆದಿಲ್‌ಖಾನನಿಗೆ ಈ ವಿಷಯವು ತಿಳಿದು ತುಂಬಾ ಚಿಂತಿತನಾದನು. ಆತನು ಹಜ್ರತ್ ಶಕರ್‌ಗಂಜ್‌ರ ಮಗಳ ಮಗನೊಂದಿಗೆ ಕಪ್ಪ-ಕಾಣಿಕೆ, ಬಹುಮಾನಗಳನ್ನು ಕೊಟ್ಟು ಬಾದಷಹನ ಸೇವೆಯಲ್ಲಿ ಕಳುಹಿಸಿಕೊಟ್ಟನು. ಹಾಗೂ ತನ್ನ ತಪ್ಪುಗಳನ್ನು ಕ್ಷಮಿಸಬೇಕೆಂದು ಕೇಳಿಕೊಂಡಿದ್ದನು. ಮಹಮೂದ್ ಖಿಲ್ಜಿಗೆ ಬಹಳ ಚೆನ್ನಾಗಿ ಗೊತ್ತಿದ್ದುದೇನೆಂದರೆ ಅಸೀರ್ ಕೋಟೆಯನ್ನು ಗೆಲ್ಲುವುದು ಬಹಳ ಕಷ್ಟದ ಕೆಲಸವಾಗಿತ್ತು. ಎರಡನೆಯದಾಗಿ ಆತನು ದಕ್ಷಿಣ ದೇಶವನ್ನು ಗೆಲ್ಲಲು ಹೊರಟಿದ್ದನು. ಇದರಿಂದಾಗಿ ಆದಿಲ್‌ಖಾನನ ತಪ್ಪನ್ನು ಕ್ಷಮಿಸಿ, ಇನ್ನು ಮುಂದೆ ಶಾಂತಿಯಿಂದ ಶಾಸನವನ್ನು

ನಡೆಸುವಂತೆ ಆದೇಶವನ್ನು ಮಾಡಿ, ಬರಾರ್ ಮತ್ತು ಏಲಚ್‌ಪುರದ ಕಡೆಗೆ ಪ್ರಯಾಣವನ್ನು ಬೆಳೆಸಿದನು.

ದಖನಿ ಅಮೀರರ ಸಿದ್ಧತೆ:

ಸುಲ್ತಾನ್‌ನು ಪ್ರಯಾಣದ ಮಜಲುಗಳನ್ನು ಪಾರು ಮಾಡುತ್ತಾ ಮಾಲಾಪುರವನ್ನು ತಲುಪಿದನು. ಇಲ್ಲಿಗೆ ಬಂದಾಗ ಷಾಹೀ ಗುಪ್ತಚರರು ತಿಳಿಸಿದ್ದುದೇನೆಂದರೆ, ನಿಜಾಂ ಷಾಹೀ ಅಮೀರರು ತಮ್ಮ ಸೈನ್ಯಗಳನ್ನು ಸರಹದ್ದಿನ ಮುಖ್ಯ ಸ್ಥಳಗಳಲ್ಲಿ ಕರೆಯಿಸಿಕೊಂಡು ಜಮಾಯಿಸಿದ್ದಾರೆಂದು ಹೇಳಿದನು. ಹಾಗು ಶಾಹೀ ಖಜಾನೆ ಯಿಂದ ಎರಡು ಕೋಟಿ ತಿನ್ಗೆ ನಾಣ್ಯಗಳನ್ನು ತೆಗೆದು, ಈಗ ಇಲ್ಲಿ ಸೇರಿರುವ ಸೈನ್ಯದಲ್ಲಿ ಹಂಚಿದಾರೆಂದೂ, ಅವರು ಒಂದು ನೂರಾ ಐವತ್ತು (೧೫೦) ಆನೆಗಳನ್ನು ತೆಗೆದುಕೊಂಡು ನಗರದ ಹೊರಗೆ ಬೀಡು ಬಿಟ್ಟಿದ್ದಾರೆಂದೂ ತಿಳಿಯಿತು.

ಮಹಮೂದ್ ಖಿಲ್ಜಿಯು ನಿಜಾಂಶಾಹಿ ಸೈನ್ಯದ ಎದುರಿನಲ್ಲಿ:

ಸುಲ್ತಾನ್ ಮಹಮೂದ್ ಖಿಲ್ಜಿಯು ಈ ಸಮಾಚಾರವನ್ನು ಕೇಳಿ, ತನ್ನ ಸೈನ್ಯವನ್ನು ಒಂದು ವ್ಯವಸ್ಥಿತ ರೀತಿಯಲ್ಲಿ ತರಬೇತುಗೊಳಿಸಿಕೊಂಡನು. ಹಾಗೂ ನಿಜಾಂಶಾಹ್ ಬಹಮನಿಯ ಎದುರಿಗೆ ಬಂದನು. ದಖನಿ ವಜೀರರು ಎಂಟು ವರ್ಷದ ನಿಜಾಂ ಶಾಹ್ ತಲೆಯ ಮೇಲೆ ಬಿಳಿ ಛತ್ರಿ, ಚಾಮರ, ನಿಶಾನೆಗಳನ್ನು ಹಿಡಿದು, ಖ್ವಾಜಾಜಹಾಂ ಮಲಿಕ್ ಶಾಹ್ ತುರ್ಕನಿಗೆ ಬಾದಷಹನ ರಕ್ಷಣೆಯಲ್ಲಿ ಬಿಟ್ಟರು. ಮಹಮೂದ್ ಗೀಲಾನಿ ಮತ್ತು ಮಲಿಕ್ ತುರ್ಕನೂ ರಕ್ಷಣೆಗೆ ನಿಂತರು.

ಮಾಳವ ದೇಶದ ಸೈನ್ಯಕ್ಕೆ ಸೋಲು:

ಮಲಿಕುತುಜ್ಜಾರ್‌ನು ಯುದ್ಧವನ್ನು ಪ್ರಾರಂಭಿಸಿದನು. ಸುಲ್ತಾನ್ ಮಹಮೂದ್ ಖಿಲ್ಜಿಯ ಸೈನ್ಯದ ಮೇಲೆ ಆಕ್ರಮಣವಾಯಿತು. ಮಹಮೂದ್‌ನ ಪ್ರಮುಖ ಸೈನ್ಯದ ಸರದಾರನಾದ ಮಹಾಬತ್‌ಖಾನ್, ಶಾಸಕ ಚಂದೇರಿ, ವಜೀರನಾದ ಜಹೀರುಲ್ ಮುಲ್ಕರು ಯುದ್ಧದಲ್ಲಿ ಸತ್ತರು. ಈ ಕಾರಣದಿಂದಾಗಿ ಮಾಳವೀ ಮುಖ್ಯ ಸೈನ್ಯವು ಚೆಲ್ಲಾಪಿಲ್ಲಿಯಾಯಿತು. ಇದರ ಪರಿಣಾಮವಾಗಿ ಮಾಳವ ಸೈನ್ಯಕ್ಕೆ ಹೀನಾಯ ಸೋಲುಂಟಾಯ್ತು.

ನಿಜಾಂ ಶಾಹ್‌ನ ಮೇಲೆ ಮಹಮೂದ್ ಖಿಲ್ಜಿಯ ಆಕ್ರಮಣ:

ನಿಜಾಂ ಶಾಹಿ ಸೈನ್ಯವು ಹತ್ತು ಮೈಲಿಗಳಷ್ಟು ದೂರದ ತನಕ ಸೈನ್ಯವನ್ನು ಅಟ್ಟಿಸಿ ಕೊಂಡು ಹೋಯಿತು. ಸುಲ್ತಾನ್ ಮಹಮೂದ್ ಖಿಲ್ಜಿಯ ಸೈನ್ಯವನ್ನು ಬಹಳವಾಗಿ ನಾಶಪಡಿಸಿದರು. ಮಹಮೂದ್ ಖಿಲ್ಜಿಯು ಒಂದು ಕಡೆ ಅವಿತುಕೊಂಡನು. ನಿಜಾಂ

ಶಾಹಿ ಸೈನ್ಯವು ಲೂಟಿಯಲ್ಲಿ ತೊಡಗಿತ್ತು. ನಿಜಾಂಶಾಹ್‌ನು ಒಂದು ಮೈದಾನದಲ್ಲಿ ನಿಂತಿದ್ದನು. ಮಹಮೂದ್ ಖಿಲ್ಜಿಯು ಎರಡು ಸಾವಿರ ಸೈನ್ಯದೊಂದಿಗೆ ಹಿಂದಿನಿಂದ, ನಿಜಾಂಶಾಹ್‌ನ ಮೇಲೆ ಆಕ್ರಮಣವನ್ನು ಮಾಡಿದನು.

ನಿಜಾಂಶಾಹಿ ಸೈನ್ಯದ ನಾಶ:

ನಿಝಾಂಶಾಹಿ ಪ್ರಮುಖ ಸೈನ್ಯದ ಸರದಾರನಾದ ಖ್ವಾಜಾಜಹಾನ ಎಂಬುವನು ಬಹಳ ಶೌರ್ಯದಿಂದ, ಎಚ್ಚರಿಕೆಯಿಂದ ಖಿಲ್ಜಿ ಸೈನ್ಯದೊಂದಿಗೆ ಹೋರಾಡಿದನು. ನಿಜಾಂಶಾಹ ನನ್ನು ಕರೆದುಕೊಂಡು, ಬೀದರಿನ ಅಹಮದಾಬಾದಿನತ್ತ ಹೊರಟುಬಿಟ್ಟನು. ಮಹಮೂದ್ ಖಿಲ್ಜಿಯು ಈ ಆಕ್ರಮಣದಲ್ಲಿ ಅಸಂಖ್ಯಾತ ನಿಝಾಂಶಾಹಿ ಸೈನಿಕರನ್ನು ಕೊಂದನು. ನಿಝಾಂಶಾಹ್‌ನ ತಾಯಿ ಮಲಿಕಾಜಹಾಂ, ತನ್ನ ಅಮೀರರ ದುಷ್ಟ ಚಟುವಟಿಕೆಗಳನ್ನು ಚೆನ್ನಾಗಿ ತಿಳಿದಿದ್ದಳು. ಇದರಿಂದಾಗಿ ಆಕೆಯು ಮಲ್ಲೂಖಾನನಿಗೆ ಬೀದರ್ ನಗರದ ರಕ್ಷಣೆಗೆ ನೇಮಿಸಿದ್ದಳು. ಆಕೆಯು ಸ್ವತಃ ತನ್ನ ಮಗ ಹಾಗೂ ನಿಝಾಂಶಾಹ್‌ನನ್ನು ಕರೆದುಕೊಂಡು ಫೈರೋಜಾಬಾದಿನಲ್ಲಿ ನೆಲೆಸಿದಳು.

ಬೀದರ್ ಕೋಟೆಯ ಮುತ್ತಿಗೆ:

ಮಲಿಕಾಜಹಾನಳು ಫೈರೋಜಾಬಾದಿನಿಂದ ಸುಲ್ತಾನ್ ಮಹಮೂದ್ ಗುಜರಾತಿಗೆ ಒಂದು ಪತ್ರವನ್ನು ಬರೆದು ಆತನಿಂದ ಸಹಾಯವನ್ನು ಬೇಡಿದಳು. ಮಹಮೂದ್ ಖಿಲ್ಜಿಯು ನಿಝಾಂಶಾಹಿ ಸೈನ್ಯವನ್ನು ಹಿಂಬಾಲಿಸಿ ಬಂದನು. ಬೀದರ್ ನಗರವನ್ನು ಮುತ್ತಿದನು. ಯುದ್ಧಮೈದಾನದಿಂದ ಓಡಿಹೋಗಿದ್ದ ಸೈನಿಕರೆಲ್ಲರೂ ಓಡಿಬಂದು ಫೈರೋಜಾಬಾದಿನ ನಿಝಾಂಶಾಹ್‌ನ ಸುತ್ತಲೂ ನಿಂತುಬಿಟ್ಟರು. ಸುದ್ದಿ ತಿಳಿದಿದ್ದೇನೆಂದರೆ- ಮಲಿಕುತುಜ್ಜಾರನು ಒಂದು ವಿಶಾಲ ಸೈನ್ಯದ ಸಮೇತ ನಿಝಾಂಶಾಹ್‌ನ ರಕ್ಷಣೆಗೆಂದು ಬರುತ್ತಿದ್ದಾನೆಂದು ಗೊತ್ತಾಯಿತು.

ಸುಲ್ತಾನ್ ಮಹಮೂದ್ ವಾಪಸ್:

ಈ ಪರಿಸ್ಥಿತಿಯನ್ನು ಗಮನಿಸಿದ ಸುಲ್ತಾನ್ ಮಹಮೂದ್ ಖಿಲ್ಜಿಯು ತನ್ನ ಅಮೀರರೊಂದಿಗೆ ಚರ್ಚಿಸಿದನು. ಪರಿಸ್ಥಿತಿಗಳೂ ಅನುಕೂಲಕರವಾಗಿರಲಿಲ್ಲ. ಬೇಸಿಗೆ ಹೆಚ್ಚಾಗಿತ್ತು. ರಂಜಾನ್ ತಿಂಗಳೂ ಹತ್ತಿರವಾಗಿತ್ತು. ಆದ್ದರಿಂದ ದಕ್ಷಿಣದ ಸೈನಿಕಾಚರಣೆಯನ್ನು ಮುಂದಿನ ವರ್ಷಕ್ಕೆ ಮುಂದೂಡುವುದೇ ಮೇಲೆಂದು ತೀರ್ಮಾನಿಸಿದರು. ಈ ನಿರ್ಧಾರದಿಂದ ತನ್ನ ದೇಶದತ್ತ ಹೊರಟನು.

ದಖನ್ನಿನ ಆಕ್ರಮಣದ ಪುನಃ ಸಿದ್ಧತೆ:

ದಖನ್ನಿನ ದೇಶವನ್ನು ಗೆಲ್ಲುವ ಆಸೆ, ಸುಲ್ತಾನ್ ಮಹಮೂದ್‌ನಿಗೆ ದಿನನಿತ್ಯ ಕಾಡುತ್ತಿತ್ತು. ಮಲಿಕುತುಜ್ಜಾರನ ಕೈಯಿಂದ ಅನುಭವಿಸಿದ್ದ ಸೋಲಿನ ಸೇಡನ್ನು

ತೀರಿಸಿಕೊಳ್ಳಲು ಬಹಳ ಕಾತುರನಾಗಿದ್ದನು. ಹಿಜರಿ ೮೬೭ರಲ್ಲಿ ಬಾದಷಹನು ಎರಡನೇ ಬಾರಿಗೆ ಸೈನ್ಯವನ್ನು ಸಿದ್ಧಗೊಳಿಸಿದನು. ದಖನ್ನಿನ ಪ್ರದೇಶವನ್ನು ಗೆಲ್ಲಲು ಹೊರಟನು. ನಾಲ್ಚದ ಝಫ್ಫರಾಬಾದಿಗೆ ಬಂದಿಳಿದನು.

ಠಾಣೆದಾರ ಖೆರ್‌ಲಾದಿಂದ ಅರ್ಜಿ:

ಸುಲ್ತಾನ್ ಮಹಮೂದ್‌ನು ಇನ್ನೂ ಝಫ್ಫರಾಬಾದಿನಲ್ಲಿದ್ದಂತೆಯೇ ಠಾಣೇದಾರ ಸಿರಾಜುಲ್ ಮುಲ್ಕನ ಅರ್ಜಿ ಬಂದಿತು. ನಿಝಾಂಶಾಹ್ ಬಹಮನಿಯು, ನಿಜಾಮುಲ್ ಮುಲ್ಕನನ್ನು ಒಂದು ವಿಶಾಲ ಸೈನ್ಯದೊಂದಿಗೆ ಖೇರ್‌ಲಾ ಗೆಲ್ಲಲು ಕಳುಹಿಸಿದ್ದಾನೆಂದು ಬರೆದಿತ್ತು. ಇನ್ನು ಕೆಲವೇ ದಿನಗಳಲ್ಲಿ ಆತನ ಸೈನ್ಯವು ಇಲ್ಲಿಗೆ ತಲುಪಲಿದೆಯೆಂದೂ ತಿಳಿಯಿತು.

ಖೇರ್‌ಲಾಕ್ಕೆ ಪ್ರಯಾಣ:

ಈ ಅರ್ಜಿ ಬಂದ ತಕ್ಷಣ ಸುಲ್ತಾನ್ ಮಹಮೂದ್‌ನು, ಖೇರ್‌ಲಾದ ಠಾಣೆದಾರನ ಸಹಾಯಕ್ಕೆ ಹೊರಟನು. ಸುದ್ದಿ ಬಂದದ್ದೇನೆಂದರೆ – ಇಂತಹ ಸಂದರ್ಭದಲ್ಲಿ ಸಿರಾಜುಲ್ ಮುಲ್ಕನು ನದಿಯನ್ನು ದಾಟಿ ಖೇರ್‌ಲಾ ತಲುಪಿ, ಕೋಟೆಯನ್ನು ಮುತ್ತಿದ್ದಾನೆಂದು ತಿಳಿಯಿತು.

ನಿಜಾಮುಲ್ ಮುಲ್ಕನು ಖೇರ್‌ಲಾ ಕೋಟೆಯನ್ನು ವಶಪಡಿಸಿಕೊಂಡನು:

ಸಿರಾಜುಲ್ ಮುಲ್ಕನ ಮಗನು ಕೋಟೆಯಿಂದ ಹೊರಬಂದು ನಿಜಾಮುಲ್ ಮುಲ್ಕನೊಂದಿಗೆ ಯುದ್ಧ ನಿರತನಾದನು. ಆದರೆ ಈತನು ಯುದ್ಧ ಮೈದಾನದಲ್ಲಿ ನಿಲ್ಲಲಿಲ್ಲ. ಹೆದರಿ ಕೋಟೆಯೊಳಗೆ ಸೇರಿಕೊಂಡನು. ನಿಜಾಮುಲ್ ಮುಲ್ಕನು ಕೋಟೆಯೊಳಗೆ ಪ್ರವೇಶಿಸಿದನು. ಕೋಟೆಯನ್ನು ಸಂಪೂರ್ಣವಾಗಿ ತನ್ನ ವಶಕ್ಕೆ ಪಡೆದನು. ಆಕಸ್ಮಿಕವಾಗಿ ಅದೇ ದಿನ ರಾಜಪೂತ ಸೈನಿಕರು ಸಮಯವನ್ನು ನೋಡಿ, ನಿಜಾಮುಲ್ ಮುಲ್ಕನನ್ನು ಸಂಹರಿಸಿದರು.

ಮಹಮೂದ್ ದೌಲತಾಬಾದಿಗೆ ಪ್ರಯಾಣ:

ಈ ಸುದ್ದಿಯು ಸುಲ್ತಾನ್ ಮಹಮೂದ್‌ನಿಗೆ ತಲುಪಿದಾಗ ಆತನು ಮಖಬೂಲ್‌ಖಾನನಿಗೆ ನಾಲ್ಕು ಸಾವಿರ ಸೈನ್ಯವನ್ನು ಕೊಟ್ಟು ಖೇರ್‌ಲಾದತ್ತ ಕಳುಹಿಸಿದನು. ತಾನು ಸ್ವತಃ ಸೇಡು ತೀರಿಸಿಕೊಳ್ಳಲು ದೌಲತಾಬಾದಿನತ್ತ ಹೊರಟನು. ದಾರಿಯಲ್ಲಿ ರಾಜ ಸರ್‌ಕಚ್ಛ್‌ನು ಮತ್ತು ಜಾಜ್ ನಗರದ ರಾಜನ ಸೇವಕರು ಐದು ನೂರಾ ಮೂವತ್ತು (೫೩೦) ಆನೆಗಳನ್ನು ಸುಲ್ತಾನ್ ಮಹಮೂದನಿಗೆ ನೀಡಿದರು. ಆ ಸೇವಕರಿಗೆ ಬಾದಷಹನು ಬಹುಮಾನಗಳನ್ನು ನೀಡಿ ಕಳುಹಿಸಿದನು.

ಖಲೀಫ಼ಾ ಅಬ್ಬಾಸಿ ಕಡೆಯಿಂದ ಆಜ್ಞೆ ಮತ್ತು ಬಿರುದು:

ಇದೇ ಕಾಲದಲ್ಲಿ ಸುಲ್ತಾನ್ ಮಹಮೂದ್ ಖಿಲ್ಜಿಯು ಖಲೀಫ಼ಾ ಆಬಾದ್ ಎಂಬ ಹಳ್ಳಿಯಲ್ಲಿ ಇಳಿದುಕೊಂಡಿದ್ದಾಗ, ಈಜಿಪ್ಟಿನ (ಮಿಸರ್) ಅಮೀರುಲ್ ಮೋಮೆನೀನ್ ಯೂಸುಫ್ ಬಿನ್ ಮಹಮ್ಮದ್ ಅಬಾಸಿಯ ಒಬ್ಬ ರಾಜದೂತನು ಆ ದೇಶದ ಬಹುಮೂಲ್ಯ ಖಿಲ್ಲತ್ತನ್ನು ತೆಗೆದುಕೊಂಡು, ಸುಲ್ತಾನ್ ಮಹಮೂದ್‌ನ ಸೇವೆಯಲ್ಲಿ ಹಾಜರಾದನು. ಬಾದಷಹನು ಬಹಳ ಸಂತೋಷದಿಂದ ಸಂದೇಶವನ್ನು (ಖಿಲ್ಲತ್), ಬಹುಮಾನಗಳನ್ನು ಸ್ವಾಗತಿಸಿದನು. ಖಲೀಫ಼ನ ರಾಜದೂತನನ್ನು ಬಹಳವಾಗಿ ಗೌರವಿಸಿದನು. ಆತನಿಗೆ ಅನೇಕ ರೀತಿಯ ಬಹುಮಾನಗಳನ್ನು ಕೊಟ್ಟು ಸತ್ಕರಿಸಿದನು.

ಮಹಮೂದ್ ಖಿಲ್ಜಿಯು ವಾಪಸ್:

ಸುಲ್ತಾನ್ ಮಹಮೂದ್ ಖಿಲ್ಜಿಯು ದೌಲತಾಬಾದಿನ ಹತ್ತಿರಕ್ಕೆ ತಲುಪಿದಾಗ ಆತನಿಗೆ ಗೊತ್ತಾಗಿದ್ದೇನೆಂದರೆ– ಸುಲ್ತಾನ್ ಮಹಮೂದ್ ಗುಜರಾತಿಯು ದಖನಿ ನಿಜಾಂ ಶಾಹ್‌ನ ಸಹಾಯಕ್ಕೆ ಬರುತ್ತಿದ್ದಾನೆಂದು. ಈ ಸುದ್ದಿ ತಿಳಿದ ಮೇಲೆ ಸುಲ್ತಾನ್ ಖಿಲ್ಜಿಯು ಬಾಲ್ಕಂದದ ಕಡೆಗೆ ಹೊರಟನು. ಆ ಭಾಗದ ಕೆಲವು ಪ್ರದೇಶಗಳ ಮೇಲೆ ಆಕ್ರಮಣಗಳನ್ನು ನಡೆಸಿಕೊಂಡು ಕೊಂಡವಾಡದ ಕಡೆಯಿಂದ, ಮಾಂಡುವಿನ ಶಾದಿ ಆಬಾದಿನತ್ತ ವಾಪಸ್ ಬಂದುಬಿಟ್ಟನು.

ಮಖಬೂಲ್‌ಖಾನನು ಏಲಚ್‌ಪುರದ ಮೇಲೆ ಆಕ್ರಮಣ:

ಹಿಜರಿ ೮೭೧, ರಬೀವುಲ್ ಅವ್ವಲ್ ತಿಂಗಳಲ್ಲಿ ಸುಲ್ತಾನ್ ಮಹಮೂದ್ ಖಿಲ್ಜಿಯು ಮಖ್‌ಬೂಲ್‌ಖಾನನೊಂದಿಗೆ ಒಂದು ಸೈನ್ಯವನ್ನು ಕೊಟ್ಟು, ಏಲಚ್‌ಪುರದ ಮೇಲೆ ಆಕ್ರಮಣವನ್ನು ಮಾಡಲು ಕಳುಹಿಸಿಕೊಟ್ಟನು. ಮಖ್‌ಬೂಲ್‌ಖಾನನು ಏಲಚ್‌ಪುರದ ಸುತ್ತಮುತ್ತಲ ಪ್ರದೇಶಗಳನ್ನು ವಶಪಡಿಸಿಕೊಂಡು, ನಗರವನ್ನು ವಿನಾಶ ಮತ್ತು ಲೂಟಿ ಮಾಡಲಾರಂಭಿಸಿದನು. ಒಂದು ದಿನದ ರಾತ್ರಿಯ ಸಮಯದಲ್ಲಿ ಏಲಚ್‌ಪುರದ ಶಾಸಕನು ತನ್ನ ಇತರೆ ಶಾಸಕರಾದ ಖಾಜ಼ಿಖಾನ್ ಮತ್ತು ಪೀರ್‌ಖಾನರೊಂದಿಗೆ ಕೇವಲ ನೂರೈವತ್ತು (೧೫೦) ಸವಾರರನ್ನು ತೆಗೆದುಕೊಂಡು ಅವರೊಂದಿಗೆ ಅಸಂಖ್ಯಾತ ಕಾಲಾಳು ಸೈನ್ಯವನ್ನೂ ತೆಗೆದುಕೊಂಡು ಯುದ್ಧದ ಮನಸ್ಸು ಮಾಡಿಕೊಂಡು ಬಂದನು.

ಮಖಬೂಲ್ ಮತ್ತು ಖಾಜಿಖಾನರಲ್ಲಿ ಯುದ್ಧ:

ಮಖ್‌ಬೂಲ್‌ಖಾನನಿಗೆ ಇದರ ಸಮಾಚಾರ ಸಿಕ್ಕಿತು. ಆತನು ತಾನು ಲೂಟಿ ಮಾಡಿದ್ದ ಮಾಲು ಸಾಮಗ್ರಿಗಳನ್ನು ಸೈನ್ಯದ ಒಂದು ಭಾಗದ ರಕ್ಷಣೆಯಲ್ಲಿ ರಾಜಧಾನಿಗೆ ಕಳುಹಿಸಿಕೊಟ್ಟನು. ತಾನು ಸ್ವತಃ ಕೆಲವು ಆಯ್ದ ಸೈನಿಕರೊಂದಿಗೆ ಅಲ್ಲಿಯೇ

ಉಳಿದುಕೊಂಡಿದ್ದನು. ಒಂದು ಭಾಗ ಸೈನಿಕರನ್ನು ಶತ್ರುಗಳ ಮೇಲೆ ಯುದ್ಧಕ್ಕೆ ಕಳುಹಿಸಿದನು. ತಾನು ಇದ್ದಲ್ಲಿಯೇ ಅಡಗಿಕೊಂಡಿದ್ದನು.

ಮಖಬೂಲನ ಗೆಲುವು:

ಇಬ್ಬರಲ್ಲೂ ಯುದ್ಧ ಪ್ರಾರಂಭವಾದಾಗ ಮಖ್‌ಬೂಲ್‌ಖಾನನು ತಾನು ಅಡಗಿದ್ದ ಜಾಗದಿಂದ ಹೊರಬಂದು ಶತ್ರು ಸೈನ್ಯದ ಮೇಲೆ ಆಕ್ರಮಿಸಿದನು. ಶತ್ರು ಸೈನ್ಯವು ಆ ಆಕಸ್ಮಿಕ ಆಕ್ರಮಣದ ಸಂಕಷ್ಟವನ್ನು ಎದುರಿಸಲಾಗದೆ, ಖಾಜಿಖಾನನು ಸೋಲನ್ನು ಅನುಭವಿಸಬೇಕಾಯಿತು. ಆತನು ಏಲಚ್‌ಪುರದತ್ತ ಓಡಿಹೋದನು. ಮಖ್‌ಬುಲ್ ಖಾನನು ಇಪ್ಪತ್ತು ಜನ ಹೆಸರಾಂತ ವೀರ ಶತ್ರು ಸರದಾರರನ್ನು ಕೊಲೆ ಮಾಡಿದನು. ಮೂವತ್ತು ಜನ ಸರದಾರರನ್ನು ಸೆರೆಹಿಡಿದನು. ಇಷ್ಟಾದ ಮೇಲೆ ಮಖ್‌ಬೂಲ್ ಖಾನನು ವಾಪಸ್ಸು ತೆರಳಿದನು. ಗೆಲುವಿನ ಸಂತೋಷದಲ್ಲಿ ಮಹಮೂದಾಬಾದ್ ತಲುಪಿದನು.

ದಖನ್ನಿನ ಬಾದಷಹರು ಮತ್ತು ಮಾಳವರಲ್ಲಿ ಸಂಧಿ:

ಹಿಜರಿ ೮೭೧, ಜಮಾದಿಲ್ ಅವ್ವಲ್ ತಿಂಗಳಲ್ಲಿ ಮಾಳವ ಮತ್ತು ದಖನ್ನಿನ ಶಾಸಕರುಗಳಲ್ಲಿ, ಪರಸ್ಪರ ದರ್ಬಾರಿನಲ್ಲಿ ತಮ್ಮ-ತಮ್ಮ ರಾಜದೂತರನ್ನು ಸಂಧಿ ಪ್ರಸ್ತಾಪಕ್ಕೆ ಕಳುಹಿಸಿಕೊಡಲಾಯ್ತು. ಕೊನೆಗೆ ಬಹಳ ಚಿಂತನ-ಮಂಥನಗಳ ನಂತರ ಈ ಷರತ್ತುಗಳ ಮೇಲೆ, ಅಂದರೆ – ದಖನಿ ಶಾಸಕರು ಏಲಚ್‌ಪುರ, ಕೊಂಡವಾಡ ಮತ್ತು ಖೇರ್‌ಲಾ ಪ್ರದೇಶಗಳನ್ನು ಸುಲ್ತಾನ್ ಮಹಮೂದ್ ಖಿಲ್ಜಿಯ ವಶಕ್ಕೆ ಬಿಡಬೇಕೆಂದೂ, ಹಾಗೂ ಸುಲ್ತಾನ್ ಮಹಮೂದ್ ಖಿಲ್ಜಿಯು ಮುಂದೆ ಎಂದೂ ಸಹ ದಖನ್ನಿನ ಪ್ರದೇಶಗಳಲ್ಲಿ ಆಕ್ರಮಣಗಳನ್ನು ಮಾಡಬಾರದೆಂದೂ ಮತ್ತು ದಖನ್ನಿನಲ್ಲಿ ಕಛೇರಿ ಕೆಲಸಗಳಲ್ಲಿ ಚಾಂದ್ರಮಾನ ಲೆಕ್ಕಗಳನ್ನಿಡಬೇಕೆಂದೂ, ಸೌರಮಾನದ ಲೆಕ್ಕವನ್ನು ನಿಲ್ಲಿಸಬೇಕೆಂದೂ ಸುಲ್ತಾನ್ ಖಿಲ್ಜಿಯು ದಖನ್ನಿನ ಶಾಸಕರನ್ನು ಒಪ್ಪಿಸಿದನು.

ಶೇಖ್ ಅಲ್ಲಾವುದ್ದೀನನ ಆಗಮನ:

ಇದೇ ವರ್ಷದ ರಬೀವುಲ್ ಅವ್ವಲ್ ತಿಂಗಳಲ್ಲಿ ಒಬ್ಬ ಪ್ರಸಿದ್ಧ ಹಾಗು ಹೆಸರಾಂತ ವಿದ್ವಾಂಸರಾದ ಶೇಖ್ ಅಲ್ಲಾವುದ್ದೀನ್ ಮಾಂಡುವಿನ ಶಾದಿ ಆಬಾದಿಗೆ ಬಂದರು. ಸುಲ್ತಾನ್ ಖಿಲ್ಜಿಯು ಇವರನ್ನು ಬಹಳ ಸಂಭ್ರಮದಿಂದ ಸ್ವಾಗತಿಸಿದನು. ಅಷ್ಟೇ ಅಲ್ಲದೆ ಅವರನ್ನು ಎದೆಗೆ ಅಪ್ಪಿಕೊಂಡನು.

ಮೌಲಾನ ಇಮಾದುದ್ದೀನ ಆಗಮನ:

ಹಿಜರಿ ೮೭೧,ರ ಜಿಲ್‌ಹಜ್ಜ್ ತಿಂಗಳಲ್ಲಿ, ಸಯ್ಯದ್ ನೂರ್ ಮಹಮ್ಮದ್ ಬಕ್ಷಿಯ

ರಾಜದೂತನಾದ ಮೌಲಾನ ಇಮಾದುದ್ದೀನ್‌ನು ಸುಲ್ತಾನ್ ಮಹಮೂದ್ ಖಿಲ್ಜಿಯ ಆಸ್ಥಾನಕ್ಕೆ ಬಂದನು. ಮೌಲಾನರವರು ತಮ್ಮ ಶೇಖ್‌ರವರ ಪವಿತ್ರ ಉಡುಪನ್ನು ಜೊತೆಯಲ್ಲಿ ತಂದಿದ್ದರು. ಅದನ್ನು ಸುಲ್ತಾನ್ ಖಿಲ್ಜಿಗೆ ನೀಡಿದರು. ಬಾದಷಹನು ಮೌಲಾನ ಇಮಾದುದ್ದೀನರನ್ನು ಬಹಳ ಪ್ರೇಮದಿಂದ ಆಹ್ವಾನಿಸಿ, ಅವರು ಕೊಟ್ಟ ಉಡುಪನ್ನು ಸ್ವೀಕರಿಸಿ, ಬಹಳ ಶ್ರದ್ಧಾ ಭಕ್ತಿಗಳಿಂದ ಧರಿಸಿಕೊಂಡನು. ತನ್ನ ರಾಜ್ಯದ ಎಲ್ಲಾ ವಿದ್ವಾಂಸರನ್ನು ಕರೆಯಿಸಿ, ಬಹುಮಾನಗಳಿಂದ ಗೌರವಿಸಿದನು.

ಮಹಮೂದಾಬಾದಿನಲ್ಲಿ ಮುಸಲ್ಮಾನರ ಕೊಲೆ:

ಹಿಜರಿ ೮೭೨, ಮೊಹರಂ ತಿಂಗಳಲ್ಲಿ, ಸುದ್ದಿಗಾರರು ಬಾದಷಹನಿಗೆ ತಿಳಿಸಿದ್ದುದೇನೆಂದರೆ– ಮಖ್‌ಬೂಲ್‌ಖಾನನು, ಮಹಮೂದಾಬಾದ್ ಅಂದರೆ ಅದರ ಮತ್ತೊಂದು ಹೆಸರು ಖೇರ್‌ಲಾದಲ್ಲಿ ವಿನಾಶವನ್ನು ಮಾಡಿದ್ದನು. ಈತ ಆತನು ದಖನ್ನಿನ ರಾಜರುಗಳಿಂದ ಸಹಾಯವನ್ನು ಪಡೆದು, ಮಖ್‌ಬೂಲ್‌ಖಾನನು ಖೇರ್‌ಲಾದ ರಾಜಕುಮಾರನಿಗೆ, ತನ್ನ ಹತ್ತಿರವಿದ್ದ ಕೆಲವು ಆನೆಗಳನ್ನು ಕೊಟ್ಟಿದ್ದಾನೆಂದೂ, ರಾಜಕುಮಾರನು ಕಸಬಾ ಮಹಮೂದಾಬಾದಿನ ಮೇಲೆ ಆಕ್ರಮಣವನ್ನು ನಡೆಸಿ, ಆ ಕೋಟೆಯಲ್ಲಿ ನೆಲೆಸಿದ್ದ ಎಲ್ಲ ಮುಸಲ್ಮಾನರನ್ನೂ ಕೊಲೆಗೈದಿದ್ದೇ ಅಲ್ಲದೆ, ಅಲ್ಲಿಗೆ ಬರುವ ಎಲ್ಲಾ ದಾರಿಗಳನ್ನೂ ಮುಚ್ಚಿರುತ್ತಾನೆಂದು ಗೊತ್ತಾಯಿತು.

ಮಹಮೂದ್ ಖಿಲ್ಜಿ ಜಫ಼ರಾಬಾದಿನಲ್ಲಿ:

ಸುಲ್ತಾನ್ ಮಹಮೂದ್ ಖಿಲ್ಜಿಯು ಈ ಸುದ್ದಿಯನ್ನು ತಿಳಿದು, ತಾಜ್‌ಖಾನನನ್ನು ಮತ್ತು ಅಹಮದ್‌ಖಾನನನ್ನು ಈ ವಿಚಾರದಲ್ಲಿ ಕಾರ್ಯಪ್ರವೃತ್ತರಾಗಲು ಮಹಮೂದಾಬಾದಿಗೆ ಕಳುಹಿಸಿಕೊಟ್ಟನು. ಮತ್ತು ತಾನು ಸ್ವತಃ ಇದೇ ವರ್ಷದ ರಬೀವುಲ್ ಆಖರ್ ತಿಂಗಳಲ್ಲಿ, ಜಫ಼ರಾಬಾದ್ ನಾಲ್ಚದಲ್ಲಿ ಬಿಡಾರವನ್ನು ಹೂಡಿದನು.

ತಾಜ್‌ಖಾನನು ಮಹಮೂದಾಬಾದಿನಲ್ಲಿ:

ಕೆಲವು ದಿನಗಳ ನಂತರ ಸುಲ್ತಾನ್ ಮಹಮೂದ್ ಖಿಲ್ಜಿ ಸಹ ಮಹಮೂದಾಬಾದಿನತ್ತ ಹೊರಟನು. ದಾರಿಯಲ್ಲಿಯೇ ಬಾದಷಹನಿಗೆ ತಾಜ್‌ಖಾನನು ಬಂದಿರುವ ಸಮಾಚಾರವು ಸಿಕ್ಕಿತು. ತಾಜ್‌ಖಾನನು ಮಹಮೂದಾಬಾದಿಗೆ ತಲುಪಿದಾಗ, ಆಗ ಅಲ್ಲಿ ದಸರಾ ಹಬ್ಬದ ದಿನವಾಗಿತ್ತು. ರಾಜನ ಮಗನು ಆ ಸಂದರ್ಭದಲ್ಲಿ ಊಟಕ್ಕೆ ಕುಳಿತಿದ್ದನು. ತಾಜ್‌ಖಾನನು ಬಂದಿರುವ ವಿಷಯ ಆತನಿಗೆ ತಿಳಿದೇ ಇರಲಿಲ್ಲ. ತಾಜ್‌ಖಾನನು ಇಷ್ಟಪಟ್ಟಿದ್ದರೆ, ಆ ಸಮಯದಲ್ಲಿ ಆ ಸಮಯದಲ್ಲಿ ರಾಜಕುಮಾರನ ಮೇಲೆ ಬಿದ್ದು ಆತನನ್ನು ಕೊಲೆ ಮಾಡಬಹುದಿತ್ತು. ಆದರೆ ತಾಜ್‌ಖಾನನು ಶತ್ರುವನ್ನು ನಿಸ್ಸಹಾಯಕ ಸ್ಥಿತಿಯಲ್ಲಿ ಆತನನ್ನು ಸೋಲಿಸುವುದು

ವೀರರ ಲಕ್ಷಣವಲ್ಲವೆಂದು ತಿಳಿದು ಒಬ್ಬ ವ್ಯಕ್ತಿಯನ್ನು ರಾಜಕುಮಾರನ ಬಳಿಗೆ ತಾನು ಬಂದಿರುವ ಸಮಾಚಾರವನ್ನು ತಿಳಿಸಲು ಕಳುಹಿಸಿದನು.

ಮಹಮೂದಾಬಾದಿನ ಮೇಲೆ ತಾಜ್‌ಖಾನನ ಆಕ್ರಮಣ:

ರಾಜಕುಮಾರನು ಸರಿಯಾಗಿ ಊಟವನ್ನು ಮಾಡಿರಲಿಲ್ಲ. ತಕ್ಷಣ ಅಲ್ಲಿಂದ ಎದ್ದು ತನ್ನ ಸೈನಿಕರೊಂದಿಗೆ ಯುದ್ಧ ಮೈದಾನಕ್ಕೆ ಬಂದನು. ಇಬ್ಬರಲ್ಲೂ ಯುದ್ಧವು ಪ್ರಾರಂಭವಾಯಿತು. ಒಬ್ಬರನ್ನೊಬ್ಬರು ಸೋಲಿಸಲು ಪ್ರಯತ್ನಪಟ್ಟರು. ಆದರೆ ಗೆಲುವು ತಾಜ್‌ಖಾನನ ಪಕ್ಷದಲ್ಲಿತ್ತು. ಆತನೇ ಗೆದ್ದನು. ಅಸಂಖ್ಯಾತ ರಾಜಪೂತರು ಹತರಾದರು. ರಾಜಕುಮಾರನು ಬೆತ್ತಲೆ ತಲೆ ಮತ್ತು ಕಾಲುಗಳಲ್ಲಿ ಯುದ್ಧ ಮೈದಾನದಿಂದ ಓಡಿ ಹೋದನು. ತಾಜ್‌ಖಾನನು ಮಖ್‌ಬೂಲ್‌ಖಾನನ ಸಮೇತ ಅನೇಕ ಯುದ್ಧ ಸಾಮಗ್ರಿಗಳೊಂದಿಗೆ ಮಹಮೂದಾಬಾದನ್ನು ವಶಪಡಿಸಿಕೊಂಡನು.

ಗೋಂದಾನ್ ಗುಂಪಿನ ದಮನ:

ಇದೇ ಸಂದರ್ಭದಲ್ಲಿ ತಾಜ್‌ಖಾನನ ಒಂದು ಅರ್ಜಿ ಬಾದಷಹನಿಗೆ ತಲುಪಿತು. ಇದರಲ್ಲಿ ಎಲ್ಲ ವಿಚಾರಗಳ ವಿವರವೂ ಇತ್ತು. ಸುಲ್ತಾನ್ ಮಹಮೂದ್ ಖಿಲ್ಜಿಯು ಈ ಪತ್ರವನ್ನು ಓದಿ ಬಹಳ ಸಂತೋಷಪಟ್ಟನು. ಬಾದಷಹನು ಮಲಿಕುಲ್ ಅಮ್ರಾ ಮತ್ತು ಮಲಿಕ್‌ದಾವರ್ ಎಂಬುವರನ್ನು ಗೋಂದಾನ್ ಗುಂಪಿನವರ ದಮನಕ್ಕೆ ಕಳುಹಿಸಿ ದನು. ಗೋಂದಾನರಿಗೆ ಈ ಸುದ್ದಿಯು ತಿಳಿದ ಕೂಡಲೇ, ಅಲ್ಲಿಗೆ ಬಂದಿದ್ದ ರಾಜಕುಮಾರನನ್ನು ಹಿಡಿದು, ತಾಜ್‌ಖಾನನ ಹತ್ತಿರ ಕಳುಹಿಸಿಕೊಟ್ಟರು.

ಖ್ವಾಜ ಜಮಾಲುದ್ದೀನನ ಆಗಮನ:

ಇದಾದ ನಂತರ ಸುಲ್ತಾನ್ ಮಹಮೂದ್ ಖಿಲ್ಜಿಯು ಮಹಮೂದಾಬಾದಿನತ್ತ ರವಾನೆಯಾದನು. ರಜಬ್ ತಿಂಗಳ ಆರನೇ ತಾರೀಖಿನಂದು ಸಾರಂಗಪುರದಲ್ಲಿ ಬಂದಿಳಿದನು. ಕೆಲವು ದಿನಗಳ ನಂತರ, ಖ್ವಾಜ ಜಮಾಲುದ್ದೀನ್ ಅಸ್ತರಾಬಾದಿ ಯವರು, ಮೀರ್‌ಜ಼ಾ ಸುಲ್ತಾನ್ ಅಬೂಸಯೀದರ ರಾಜದೂತರೆನಿಸಿ ಹಿಂದೂಸ್ತಾನಕ್ಕೆ ಬಂದಿದ್ದರು. ಅವರು ಸುಲ್ತಾನ್ ಮಹಮೂದ್ ಖಿಲ್ಜಿಯನ್ನು ಭೇಟಿಯಾದರು. ಸುಲ್ತಾನ್ ಖಿಲ್ಜಿಯು ಖ್ವಾಜಾ ಜಮಾಲುದ್ದೀನರನ್ನು ಭೇಟಿಯಾಗಿ ಬಹಳ ಸಂತೋಷಪಟ್ಟನು.

ಖ್ವಾಜಾರವರ ಸನ್ಮಾನ:

ಬಾದಷಹನು ಖ್ವಾಜಾ ಜಮಾಲುದ್ದೀನರನ್ನು ಅನೇಕ ರೀತಿಯ ಸನ್ಮಾನ, ಬಹುಮಾನ ಗಳೊಂದಿಗೆ ಗೌರವಿಸಿದನು. ಅವರ ಜೊತೆಯಲ್ಲಿ ಹಿಂದೂಸ್ತಾನದ ಬಹಳ ಬೆಲೆಬಾಳುವ

ಉಡುಪುಗಳು, ದಾಸಿಯರು, ಆನೆಗಳು ಹಾಗು ಇತರೆ ಅಮೂಲ್ಯ ಸಾಮಗ್ರಿಗಳನ್ನು ಈರಾನಿನ ಬಾದಷಹರ ಸೇವೆಯಲ್ಲಿ ಕಳುಹಿಸಿಕೊಟ್ಟನು. ಇದೂ ಅಲ್ಲದೆ ಈರಾನ ದೇಶದ ಪ್ರಶಂಸೆಯಲ್ಲಿ ಹಿಂದಿ ಭಾಷೆಯಲ್ಲಿ ಒಂದು (ಖಸೀದಾ) ಕವಿತೆಯನ್ನು ಬರೆದು ಖ್ವಾಜಾ ಸಾಹಬರ ಕೈಯಲ್ಲಿ ಕೊಟ್ಟನು. ಷಾಹ್‌ನಿರಾನನು ಅದನ್ನು ಓದಿ ಬಹಳ ಸಂತೋಷಪಟ್ಟನು.

ಕಚ್ವಾರದ ಜಮೀನ್ದಾರರು ದಂಗೆ ಎದ್ದರು:

ಹಿಜರಿ ೮೭೩ರಲ್ಲಿ ಸುಲ್ತಾನ್ ಮಹಮೂದ್ ಖಿಲ್ಜಿಯ ಸೇವೆಯಲ್ಲಿ ಫಾಝಿಖಾನನು ಈ ವಿಷಯದಲ್ಲಿ ಅರ್ಜಿ ಬರೆದನು. ಏನೆಂದರೆ, ಕಚ್ವಾರದ ಜಮೀನ್ದಾರರು ಹುಜೂರರ ಅಧೀನತೆಯನ್ನು ತಿರಸ್ಕರಿಸಿ, ಪಿತೂರಿಕೋರತನವನ್ನು ತೋರುತ್ತಿದ್ದಾರೆಂದು ತಿಳಿಸಿದನು.

ಜಲಾಲ್‌ಪುರ ಒಂದು ಹೊಸ ಕೋಟೆ:

ಈ ಅರ್ಜಿ ತಲುಪಿದ ತಕ್ಷಣ ಸುಲ್ತಾನ್ ಮಹಮೂದ್‌ನು ಆ ಜಮೀನ್ದಾರರ ವಿದ್ರೋಹವನ್ನು ಅಡಗಿಸಲು ವ್ಯವಸ್ಥೆಯನ್ನು ಮಾಡಿದನು. ಒಂದು ದೊಡ್ಡ ಸೈನ್ಯವನ್ನು ಕಚ್ವಾರದ ಕಡೆಗೆ ಕಳುಹಿಸಿಕೊಟ್ಟನು. ತಾನೂ ಸಹ ಈ ಪ್ರದೇಶದತ್ತ ಹೋಗಿ ಗಡಿಭಾಗದಲ್ಲಿ ಬೀಡು ಬಿಟ್ಟನು. ಈ (ಮೊಖಾಮಿ) ಸ್ಥಳದಲ್ಲಿ ಮಹಮೂದ್ ಖಿಲ್ಜಿಯು ಒಂದು ಕೋಟೆಯನ್ನು ನಿರ್ಮಿಸಿದನು. ಅದು ಕೇವಲ ಆರು ದಿನಗಳಲ್ಲಿ ನಿರ್ಮಾಣ ಗೊಂಡಿತು. ಈ ಕೋಟೆಗ "ಜಲಾಲ್‌ಪುರ" ಎಂಬ ಹೆಸರಿಡಲಾಯಿತು. ಮೀರ್ಜಾ ಖಾನನಿಗೆ ಈ ಕೋಟೆಯ ಆಧಿಪತ್ಯವನ್ನು ನೀಡಲಾಯಿತು.

ದೆಹಲಿ ಬಾದಷಹನ ರಾಜದೂತರ ಆಗಮನ:

ಹಿಜರಿ ೮೭೩ ಷಾಬಾನ್ ತಿಂಗಳ ಏಳನೇ ತಾರೀಖಿನಂದು ಶೇಖ್ ಮಹಮ್ಮದ್ ಅಫ್ಜಲಿ ಮತ್ತು ಗ್ವಾಲಿಯರ್‌ನ ರಾಜ ಕಪೂರ್‌ಚಂದನ ಮಗನು, ದೆಹಲಿಯ ಸುಲ್ತಾನ್ ಬಹಲೂಲೂ ಲೋಧಿಯ ರಾಜದೂತರಾಗಿ, ಸುಲ್ತಾನ್ ಖಿಲ್ಜಿಯ ಸೇವೆಯಲ್ಲಿ ಹಾಜರಾದರು. ರಾಜದೂತರು ಅಪಾರವಾದ ಬಹುಮಾನಗಳನ್ನು ಬಾದಷಹನಿಗೆ ನೀಡಿದರು. ಹಾಗು ಸಂದೇಶವನ್ನೂ ನೀಡಿದರು. ಏನೆಂದರೆ, ಸುಲ್ತಾನ್ ಮಹಮೂದ್ ಶರ್ಖಿಯು ಯಾವಾಗಲೂ ಷಡ್ಯಂತ್ರ, ಪಿತೂರಿಗಳನ್ನು ರಚಿಸುತ್ತ ನಮಗೆ ಬಹಳ ತೊಂದರೆಗಳನ್ನು ನೀಡುವುದರಲ್ಲಿ ನಿರತನಾಗಿದ್ದಾನೆ. ಒಂದು ವೇಳೆ ತಾವು ಈ ಸಂಬಂಧದಲ್ಲಿ ನಮಗೆ ಸಹಾಯವನ್ನು ಮಾಡುವುದಾದರೆ, ಹಾಗೂ ದೆಹಲಿಯ ಪ್ರದೇಶದಲ್ಲಿ ತಾವು ಬಂದು ಮಹಮೂದ್ ಶರ್ಖಿಯನ್ನು ಸರಿದಾರಿಗೆ ತರುವುದಾದರೆ, ನಾವು ನಿಮಗೆ ಬಯಾನ ಕೋಟೆ ಮತ್ತು ಅದರ ಸುತ್ತಮುತ್ತಲ ಪ್ರದೇಶವನ್ನು ಬಿಟ್ಟುಕೊಡಲು ಸಿದ್ಧರಿದ್ದೇವೆ. ಇಲ್ಲಿಂದ ತಾವು ಅವನನ್ನು ಅಡಗಿಸಿ ಹಿಂತಿರುಗುವಾಗ

ಆರು ಸಾವಿರ ಕುದುರೆಗಳನ್ನು ನಿಮಗೆ ಬಹುಮಾನದ ರೂಪದಲ್ಲಿ ನೀಡಲಿದ್ದೇವೆ ಎಂದು ಸಂದೇಶವನ್ನು ಕೊಟ್ಟರು.

ಇದಕ್ಕೆ ಉತ್ತರವಾಗಿ ಮಹಮೂದ್ ಖಿಲ್ಜಿಯು ಹೇಳಿದ್ದೇನೆಂದರೆ– ಸುಲ್ತಾನ್ ಹುಸೇನನು ದೆಹಲಿಯತ್ತ ಹೋದಾಗ ನಾನೂ ಸಾಧ್ಯವಾದಷ್ಟು ಬೇಗ ತಮ್ಮ ನೆರವಿಗೆ ಬಂದುಬಿಡುತ್ತೇನೆ. ಸುಲ್ತಾನ್ ಮಹಮೂದ್‌ನು ಈ ರಾಜದೂತರಿಗೆ ಅನೇಕ ಬಹುಮಾನಗಳನ್ನು ನೀಡಿ, ಗೌರವಿಸಿ ಕಳುಹಿಸಿಕೊಟ್ಟನು.

ಮಹಮೂದ್ ಖಿಲ್ಜಿಯ ಮರಣ:

ಹೀಗೆ ಹೇಳಿದ ನಂತರ ಸುಲ್ತಾನ್ ಮಹಮೂದ್ ಖಿಲ್ಜಿಯು ಮಾಂಡುವಿನ ಶಾದಿ ಆಬಾದಿನತ್ತ ಪ್ರಯಾಣವನ್ನು ಮಾಡಿದನು. ರಾತ್ರಿಯಲ್ಲಿ ಬಹಳ ಸೆಕೆ ಇತ್ತು. ಬಾದಷಹನ ಆರೋಗ್ಯ ಸ್ಥಿತಿ ಹಿಡಿತದಲ್ಲಿರಲಿಲ್ಲ. ಆತನು ಕಾಯಿಲೆ ಬಿದ್ದನು. ಈ ಕಾಯಿಲೆ ದಿನೇ–ದಿನೇ ಹೆಚ್ಚಾಗುತ್ತಲೇ ಹೋಯಿತು. ಕೊನೆಗೆ ಅಂತ್ಯಕಾಲವೂ ಸಮೀಪಿಸಿತು. ಸುಲ್ತಾನ್ ಮಹಮೂದ್ ಖಿಲ್ಜಿಯು ಕಚ್ವಾರದಲ್ಲಿ ಹಿಜರಾ ಶಕೆ-೮೭೩, ಜೀಖದ್ ತಿಂಗಳ ಹತ್ತೊಂಬತ್ತನೇ ದಿನಾಂಕದಂದು ಮರಣ ಹೊಂದಿದನು.

ಆಡಳಿತವನ್ನು ನಡೆಸಿದ ಕಾಲ:

ಸುಲ್ತಾನ್ ಮಹಮೂದ್ ಖಿಲ್ಜಿಯು ಇಪ್ಪತ್ತನಾಲ್ಕು ವರ್ಷಗಳ ಕಾಲ ಬಾದಷಹನಾಗಿ ಆಳಿದನು. ಆತನು ಸಿಂಹಾಸನವನ್ನೇರಿದಾಗ ಆತನ ವಯಸ್ಸೂ ಕೂಡ ಇಪ್ಪತ್ನಾಲ್ಕು ವರ್ಷಗಳಾಗಿದ್ದವು. ಇದೊಂದು ಆಶ್ಚರ್ಯಜನಕ ವಿಷಯವಾಗಿದೆ. ಅಮೀರ ತೈಮೂರಲಂಗನೂ ಸಹ ಮೂವತ್ತಾರನೇ ವಯಸ್ಸಿನಲ್ಲಿ ಪಟ್ಟಕ್ಕೇರಿ, ಮೂವತ್ತಾರು ವರ್ಷಗಳ ಆಡಳಿತವನ್ನು ನಡೆಸಿದ್ದನು.

ಸುಲ್ತಾನ್‌ನ ಚಾರಿತ್ರ್ಯ:

ಸುಲ್ತಾನ್ ಮಹಮೂದ್ ಖಿಲ್ಜಿಯ ಅಪಾರವಾದ ಘಟನಾವಳಿಗಳು, ಚಾರಿತ್ರ್ಯಗಳಿವೆ. ಆದರೆ ಫರಿಶ್ತಾನು, ಇಲ್ಲಿ ಸಂಕ್ಷಿಪ್ತಗೊಳಿಸಿ ಹೇಳಿದ್ದಾನೆ. ಸುಲ್ತಾನನು ಬಹಳ ಬಹಾದುರ ವೀರನೂ, ಅತ್ಯುನ್ನತ ಮಟ್ಟದ ಬುದ್ಧಿಶಾಲಿಯೂ ಆಗಿದ್ದನು. ಈತನ ಆಡಳಿತದ ಕಾಲದಲ್ಲಿ, ಪ್ರಜೆಗಳ ಎಲ್ಲ ವರ್ಗದವರೂ ಸಂತೋಷದಿಂದಿದ್ದರು. ಹಿಂದೂ–ಮುಸಲ್ಮಾನರಿಬ್ಬರೂ ಈತನನ್ನು ಗೌರವಿಸುತ್ತಿದ್ದುದೇ ಅಲ್ಲ – ತಮ್ಮ ಪ್ರಾಣಗಳನ್ನು ಬಲಿದಾನ ಮಾಡಲು ಯಾವತ್ತೂ ಸಿದ್ಧರಿರುತ್ತಿದ್ದರು. ಬಾದಷಹ ಸಹ ತನ್ನ ಪ್ರಜೆಗಳನ್ನು ತನ್ನ ಮಕ್ಕಳಂತೆ ನೋಡಿಕೊಳ್ಳುತ್ತಿದ್ದನು.

ಯುದ್ಧದಲ್ಲಿ ಮಹಾಶೂರ ಹಾಗೂ ಉತ್ಸಾಹಿ:

ಸುಲ್ತಾನ್ ಮಹಮೂದ್ ಖಿಲ್ಜಿಯು ಇತರೆ ಬಾದಷಹರುಗಳಂತೆ, ಮದ್ಯಪಾನವನ್ನು ಸೇವಿಸುತ್ತಿರಲಿಲ್ಲ. ಭೋಗ ವಿಲಾಸಗಳಲ್ಲಿ ಕಾಲವನ್ನು ಕಳೆಯುತ್ತಿರಲಿಲ್ಲ. ತನ್ನ ಜೀವಮಾನವನ್ನೆಲ್ಲಾ, ತನ್ನ ರಾಜ್ಯದ ಶತ್ರುಗಳನ್ನು ದಮನ ಮಾಡಿ, ಅದನ್ನು ಪ್ರಗತಿಯತ್ತ ತೆಗೆದುಕೊಂಡು ಹೋಗಲು ಶ್ರಮಿಸಿದ್ದನು. ಅವನ ಅತಿ ಹೆಚ್ಚು ಉತ್ಸಾಹವೆಂದರೆ ಯುದ್ಧೋನ್ಮಾದವಾಗಿತ್ತು. ಅವನ ಆಡಳಿತದ ಪ್ರಾರಂಭದಿಂದ ಕೊನೆಯವರೆಗೆ ಯುದ್ಧದಲ್ಲಿ ಕಳೆಯದೇ ಇರುವ ಯಾವುದೇ ವರ್ಷವಿಲ್ಲ. ಯಾವತ್ತೂ ಆತನಿಗೆ ಯುದ್ಧದ ಚಿಂತೆಯೇ ಆಗಿತ್ತು. ಅವನು ಸುಖ-ಭೋಗಗಳೆಲ್ಲವನ್ನೂ ಯುದ್ಧ ಮೈದಾನದಲ್ಲೇ ಸವಿಯುತ್ತಿದ್ದನು. ಜೀವನವನ್ನೆಲ್ಲಾ ಒಂದು ರೋಷದಲ್ಲೇ ಕಳೆದನು.

ಇತಿಹಾಸದಲ್ಲಿ ಆಸಕ್ತಿ:

ಸುಲ್ತಾನ್ ಮಹಮೂದ್ ಖಿಲ್ಜಿಯಲ್ಲಿನ ಒಂದು ತೀವ್ರ ಆಸಕ್ತಿಯೆಂದರೆ, ಒಳ್ಳೆಯ ಅನುಭವಿ ಲೇಖಕರ ಇತಿಹಾಸದಿಂದ ರಾಜಕೀಯ ವಿಷಯಗಳನ್ನು, ಹಿಂದಿನ ಕಾಲದ ಶಾಸಕರುಗಳ ಜೀವನಗಳನ್ನು ಬಹಳ ಶ್ರದ್ಧೆಯಿಂದ ಆಲಿಸುತ್ತಿದ್ದನು. ಹಿಂದಿನ ರಾಜರುಗಳ ಜೀವನದ ಚರಿತ್ರೆಗಳನ್ನು, ಅವರ ಶ್ರೇಷ್ಠ ಕಾರ್ಯಗಳನ್ನು, ಅವರ ಶೌರ್ಯ ಸಾಹಸಗಾಥೆಗಳನ್ನು ಮನಃಪೂರ್ವಕವಾಗಿ ಕೇಳಿ, ತಾನೂ ಹಾಗೇ ನಡೆದುಕೊಳ್ಳಬೇಕೆಂಬ ಆಸೆಯನ್ನು ಇಟ್ಟುಕೊಳ್ಳುತ್ತಿದ್ದನು. ಹಳೆಯ ಕಾಲದ ಬಾದಷಹರು, ರಾಜ ಮಹಾರಾಜರುಗಳ ಜೀವನ ಚರಿತ್ರೆಯ ಉತ್ತಮ ಆದರ್ಶಗಳನ್ನು ತನ್ನಲ್ಲಿ ತರಲು ಪ್ರಯತ್ನಿಸುತ್ತಿದ್ದನು. ಸಾಧ್ಯವಾದಷ್ಟೂ ಒಳ್ಳೆಯ ನಡತೆಗಳನ್ನು ಕಾರ್ಯರೂಪಕ್ಕೆ ತರುತ್ತಿದ್ದನು.

ಪರಲೋಕದ ಚಿಂತನೆ ಇತ್ತು:

ಗತಿಸಿಹೋದ ಬಾದಷಹರುಗಳ ಆದರ್ಶಗಳನ್ನು ಯಾವತ್ತೂ ಜ್ಞಾಪಿಸಿಕೊಂಡು, ತನ್ನ ಅನೇಕ ಸಭೆಗಳಲ್ಲಿ ಆ ವಿಚಾರಗಳನ್ನು ಇತರೆ ಅಮೀರರಿಗೂ ಬೋಧಿಸುತ್ತಿದ್ದನು. ಅವುಗಳ ಮೇಲೆ ನಿಗಾ ಇಡುತ್ತಿದ್ದನು. ಕೆಟ್ಟ ಬಾದಷಹರುಗಳ ನಡತೆಗಳಿಂದ ದೂರವಿರಲು ಪ್ರಯತ್ನಿಸುತ್ತಿದ್ದನು.

ಶಾಂತಚಿತ್ತತೆ:

ಸುಲ್ತಾನ್ ಮಹಮೂದ್ ಖಿಲ್ಜಿಯ ಶಾಸನ ಕಾಲದಲ್ಲಿ ಕಳ್ಳತನ, ಡಕಾಯಿತಿ ಮುಂತಾದುವುಗಳು ನಡೆಯುತ್ತಿರಲಿಲ್ಲ. ಎಲ್ಲಿಯಾದರೂ ಇಂತಹ ವರದಿಗಳು ಬಂದರೆ, ಕಳೆದುಕೊಂಡವರಿಗೆ ಶಾಹಿ ಖಜಾನೆಯಿಂದ ಕೊಟ್ಟು ಅವರಿಗೆ ಸಮಾಧಾನ ಪಡಿಸುತ್ತಿದ್ದನು. ಕದ್ದ ಸಾಮಾನನ್ನು, ಅದರ ಬೆಲೆಯನ್ನು ಆ ಪ್ರದೇಶದ ಆಡಳಿತಗಾರರಿಂದ ವಸೂಲು ಮಾಡಿಸುತ್ತಿದ್ದನು. ಈ ಕಾರಣದಿಂದಾಗಿ ಪ್ರಜೆಗಳು

ಯಾವುದೇ ಭಯವಿಲ್ಲದೆ ಜೀವನವನ್ನು ನಡೆಸುತ್ತಿದ್ದರು. ಜನರು ಶಾಂತಿಯಿಂದ ಬದುಕುತ್ತಿದ್ದರು. ವ್ಯಾಪಾರಿಗಳು ಕಾಡಿನಲ್ಲೂ ತಮ್ಮ ಸರಕುಗಳ ಬಗ್ಗೆ, ಅದರ ರಕ್ಷಣೆಯ ಬಗ್ಗೆ ಚಿಂತೆ ಮಾಡುತ್ತಿರಲಿಲ್ಲ. ತಮ್ಮ ಮನೆಗಳಲ್ಲಿದ್ದಂತೆಯೇ ಸುರಕ್ಷತೆ ಇತ್ತು. ಒಂದು ಸಲ ಒಬ್ಬ ವ್ಯಕ್ತಿಗೆ ಒಂದು ಹುಲಿಯು ಸಾಯಿಸಿತು. ಆತನ ಹೆಂಡತಿ ಬಾದಷಹನ ಹತ್ತಿರ ತನ್ನ ದುಃಖವನ್ನು ತೋಡಿಕೊಂಡಳು. ಬಾದಷಹನು ತಕ್ಷಣ ಆಜ್ಞೆಯನ್ನು ಹೊರಡಿಸಿದ್ದುದೇನೆಂದರೆ– ಎಲ್ಲಿಯಾದರೂ ಹುಲಿಯು ಕಂಡುಬಂದರೆ ಅದನ್ನು ಸಾಯಿಸಬೇಕೆಂದು. ಇದರಿಂದಾಗಿ ಅನೇಕ ಹುಲಿಗಳು ಸತ್ತವು. ಮಾಳವ ದೇಶದಲ್ಲಿ ಎಲ್ಲಿಯೂ ಕಾಡು ಕ್ರೂರಮೃಗಗಳು ಇರಲೇ ಇಲ್ಲ.

■

*

೨. ಸುಲ್ತಾನ ಘಿಯಾಸುದ್ದೀನ ಬಿನ್ ಸುಲ್ತಾನ ಮಹಮೂದ ಖಿಲ್ಜಿ

ಸಿಂಹಾಸನಾರೋಹಣ:

ಸುಲ್ತಾನ್ ಮಹಮೂದ್ ಖಿಲ್ಜಿಯ ಮರಣಾನಂತರ ಆತನ ಮಗ ಸುಲ್ತಾನ್ ಘಿಯಾಸದ್ದೀನನು ಸಿಂಹಾಸನವನ್ನೇರಿದನು. ಈ ಬಾದಷಹನು ಪ್ರಜೆಗಳನ್ನು ತೃಪ್ತಿಪಡಿಸಲು, ಸಾಧ್ಯವಿದ್ದ ಎಲ್ಲಾ ಪ್ರಯತ್ನಗಳನ್ನು ಪ್ರಯೋಗಿಸಿದನು. ಈತನ ಛತ್ರಿಯ ಮೇಲೆ ಉಕ್ತವಾಗಿದ್ದ ಹಣದ ಮೊಗಲರನ್ನೆಲ್ಲ ಬಡವರಲ್ಲಿ ವಿತರಿಸಿದನು. ಬಾದಷಹನ ಕಿರಿಯ ಸಹೋದರನಾದ ಫಿದಾಯಿಖಾನನು ಸುಲ್ತಾನ್ ಮಹಮೂದ್ ಖಿಲ್ಜಿಯ ಶಾಸನ ಕಾಲದಲ್ಲಿ, ರಾಜಧಾನಿಯೇ ಅಲ್ಲದೆ ಇತರೆ ಪರಗಣ ಪ್ರದೇಶಗಳನ್ನು ಆಳುತ್ತಿದ್ದನು. ಬಾದಷಹನು ಆ ಪ್ರದೇಶಗಳನ್ನು ಆತನ ಆಡಳಿತಕ್ಕೆ ಬಿಟ್ಟುಕೊಟ್ಟನು. ಈ ಸಂಬಂಧದಲ್ಲಿ ಯಾವುದೇ ಬದಲಾವಣೆಯನ್ನು ಮಾಡಲು ಹೋಗಲಿಲ್ಲ.

ಶಹಜಾದ ಅಬ್ದುಲ್‌ಖಾದರನನ್ನು ಯುವರಾಜಕುಮಾರನ್ನಾಗಿ ನೇಮಕ:

ಸುಲ್ತಾನ್ ಘಿಯಾಸುದ್ದೀನನು ತನ್ನ ಹಿರಿಯ ಮಗನಾದ ಅಬ್ದುಲ್‌ಖಾದರನನ್ನು "ನಾಸೀರುದ್ದೀನ"ನೆಂಬ ಬಿರುದಿನೊಂದಿಗೆ ತನ್ನ ಉತ್ತರಾಧಿಕಾರಿ ಯುವ ರಾಜಕುಮಾರನೆಂದು ಘೋಷಿಸಿದನು. ಆತನಿಗೆ ಮಂತ್ರಿ ಪದವಿಯನ್ನು ಕೊಟ್ಟು ಗೌರವಿಸಿದನು. ಇದರೊಂದಿಗೆ ಛತ್ರ-ಚಾಮರಗಳ ಸಮೇತ ಹನ್ನೆರಡು ಸಾವಿರ ಸೈನಿಕ ಸವಾರರನ್ನು ಮತ್ತು ಕೆಲವು ಪ್ರದೇಶಗಳ ಜಾಗೀರಿಯನ್ನು ಕೊಟ್ಟು ಕಳುಹಿಸಿದನು.

ಭೋಗ-ವಿಲಾಸದಲ್ಲಿ ಮುಳುಗಿದ:

ಸಿಂಹಾಸನನಾರೋಹಣದ ಸಂಪ್ರದಾಯಗಳ ನಂತರ, ಘಿಯಾಸುದ್ದೀನನು ಶಾಸನದ ಎಲ್ಲ ಹುದ್ದೆಗಳನ್ನೂ ತನ್ನ ಅನುಭವಿ ಅಮೀರರಲ್ಲಿ ಹಂಚಿಕೊಟ್ಟನು. ನಂತರ ಅವರನ್ನು

ಕುರಿತು ನಾನು ಸುಲ್ತಾನ್ ಮಹಮೂದ್ ಖಿಲ್ಜಿಯವರ ಕಾಲದ ಸುಮಾರು ಇಪ್ಪತ್ತು ನಾಲ್ಕು ವರ್ಷಗಳ ತನಕ ಸೈನಿಕ ಕಾರ್ಯಾಚರಣೆಗಳಲ್ಲಿಯೇ ಕಳೆದೆ. ಆ ಕಾಲದಲ್ಲಿ ನನ್ನ ದೀರ್ಘಕಾಲವು ಯುದ್ಧ ಮೈದಾನದಲ್ಲೇ ಕಳೆಯಿತು. ಆದ್ದರಿಂದ ಈಗ ನನಗೆ ವಿಶ್ರಾಂತಿಯು ಬೇಕಾಗಿದೆ. ನನಗೆ ಈ ರಾಜ್ಯವು ನಮ್ಮ ತಂದೆಯವರಿಂದ ಸಿಕ್ಕಿದೆ. ಇದನ್ನು ಇನ್ನೂ ಬೆಳೆಸಬೇಕೆಂಬ ಆಸೆಯಿಲ್ಲ. ಇಷ್ಟರಿಂದಲೇ ನಾನು ತೃಪ್ತಿಪಟ್ಟುಕೊಳ್ಳುತ್ತೇನೆ. ಹಾಗೂ ಇದರ ರಕ್ಷಣೆಯನ್ನೂ ಮಾಡುತ್ತೇನೆ ಎಂದು ಹೇಳಿದನು. ಇದಾದ ನಂತರ ಬಾದಷಹನು ಭೋಗವಿಲಾಸದಲ್ಲಿ ಮುಳುಗಿದನು. ಇನ್ನು ಮುಂದೆ ನನಗೆ ಭೋಗವಿಲಾಸಕ್ಕೆ ಸಂಬಂಧಪಟ್ಟ ಎಲ್ಲಾ ವಸ್ತುಗಳು ಸಿಗಲೆಂದು ಆಶಿಸುತ್ತೇನೆ ಎಂದು ತೀರ್ಮಾನಿಸಿದನು.

ಮಹಿಳೆಯರ ಮೇಲಿನ ಆಸಕ್ತಿ:

ಇದಾದ ನಂತರ ಬಾದಷಹನ ಅಂತಃಪುರದಲ್ಲಿ ಅತೀ ಸುಂದರ ಯುವತಿಯರು ತುಂಬಿಹೋದರು. ಅದರಲ್ಲಿ ಕೆಲ ಯುವತಿಯರು ವಾದ್ಯ ಪ್ರವೀಣೆ ಎನಿಸಿದರೆ, ಕೆಲವರು ಕಲೆ, ಸಂಗೀತದಲ್ಲಿ ಪ್ರಾವೀಣ್ಯತೆ ಪಡೆದವರಾಗಿದ್ದರು. ಅಂತಹ ಸೇವಕಿಯರು ದಿನನಿತ್ಯ ಬಂದು ಅಂತಃಪುರಕ್ಕೆ ಸೇರುತ್ತಿದ್ದರು. ಅವರ ಸಂಖ್ಯೆ ಬೆಳೆಯುತ್ತಲೇ ಹೋಯಿತು. ಕೆಲವೇ ದಿನಗಳಲ್ಲಿ ಬಾದಷಹನ ಅಂತಃಪುರದಲ್ಲಿ ಸುಮಾರು ಹತ್ತು ಸಾವಿರ ಸೇವಕಿಯರು ಅನೇಕ ರಾಜ ಮಹಾರಾಜರುಗಳ ಹೆಣ್ಣುಮಕ್ಕಳು ಸೇರಿಕೊಂಡರು.

ಸ್ತ್ರೀಯರಲ್ಲಿ ಹುದ್ದೆಗಳ ಹಂಚಿಕೆ:

ಬಾದಷಹನು ರಾಜರ ಮತ್ತು ಅಮೀರರ ಹೆಣ್ಣುಮಕ್ಕಳಿಗೆ ಹುದ್ದೆಗಳನ್ನು ಹಂಚಿದನು. ಹೇಗೆ ಅಂತಃಪುರವನ್ನು ಬಿಟ್ಟು ಹೊರಗೆ ಅಮೀರರಿಗೆ ಹುದ್ದೆಗಳನ್ನು ಹಂಚುತ್ತಿದ್ದರೋ ಹಾಗೆ ವಿತರಿಸತೊಡಗಿದನು. ಆ ಸ್ತ್ರೀಯರಲ್ಲಿ ಕೆಲವರಿಗೆ ವಕೀಲರನ್ನಾಗಿ, ಮಂತ್ರಿಗಳನ್ನಾಗಿ, ರಕ್ಷಕರನ್ನಾಗಿ ಅನೇಕ ಹುದ್ದೆಗಳನ್ನು ನೀಡಿದನು. ಕೆಲವರನ್ನು ಅಧ್ಯಕ್ಷರನ್ನಾಗಿ, ಕೆಲವರನ್ನು ಶಿಕ್ಷಕಿಯರನ್ನಾಗಿ, ಕೆಲವರನ್ನು ಖುರಾನಿನ ಹಾಫೀಜರನ್ನಾಗಿ, ಕೆಲವರನ್ನು ಮೌಜನ್‌ರನ್ನಾಗಿ ನೇಮಿಸಿದನು. ಕೆಲವರನ್ನು ಕೈಕಸಬು, ಕಲಾತ್ಮಕ ಕೈಗಾರಿಕೆಗಳ ತರಬೇತಿಯನ್ನು ಸ್ತ್ರೀಯರಿಗೆ ಕೊಡಿಸಿದನು. ಬಟ್ಟೆಗಳನ್ನು ಹೊಲಿಯುವುದು, ಬಟ್ಟೆಗಳ ಮೇಲೆ ಕಸೂತಿ ಕೆಲಸವನ್ನು ಮಾಡುವುದು, ಚೀನಿ ಪಾತ್ರೆಗಳನ್ನು, ಲೋಹಗಳ ಪಾತ್ರೆಗಳನ್ನು ಮಾಡುವುದು, ಅವುಗಳ ಚಿತ್ರಕಲೆಯನ್ನು ಬಿಡಿಸುವುದು, ಜರಿ ಕೆಲಸವನ್ನು ಮಾಡುವುದು ಮತ್ತು ಬೆಲೆ ಬಾಳುವ ಉಡುಪುಗಳನ್ನು ತಯಾರಿಸುವುದನ್ನು ಕಲಿಸಿದನು. ಕೆಲವರು ಬಾಣ ಬತ್ತಳಿಕೆಗಳನ್ನು ಯುದ್ಧೋಪಯೋಗಿ ವಸ್ತುಗಳ ತಯಾರಿಕೆಯಲ್ಲಿ ನಿಪುಣರನ್ನಾಗಿಸಿದನು. ಕೆಲ ಮಹಿಳೆಯರಿಗೆ ಬಡಗಿ ಕೆಲಸವನ್ನು ಕಲಿಸಿಕೊಟ್ಟನು. ಅಂತಃಪುರದಲ್ಲಿ ಒಂದು ದೊಡ್ಡ ಕಾರಖಾನೆಯನ್ನೇ ತೆರೆದು ಮಹಿಳೆಯರು ದುಡಿಯುವ ಮಾನಸಿಕ ಪ್ರವೃತ್ತಿಯನ್ನು

ಬೆಳೆಸಿದನು. ಎಲ್ಲ ಸ್ತ್ರೀಯರೂ ಒಂದಲ್ಲ ಒಂದು ಕಸುಬಿನಲ್ಲಿ ತೊಡಗಿರಬೇಕೆಂಬ ಕಟ್ಟಾಜ್ಞೆಯನ್ನು ವಿಧಿಸಿದ ಬಾದಷಹನೆಂದರೆ ಘಿಯಾಸುದ್ದೀನ್ ಖಿಲ್ಜಿಯಾಗಿದ್ದನು.

ಸ್ತ್ರೀಯರು ಸೈನ್ಯದಲ್ಲಿ:

ಸುಲ್ತಾನ್ ಘಿಯಾಸುದ್ದೀನನು ಐದುನೂರು ಸ್ತ್ರೀಯರನ್ನು ತುರ್ಕಿ ದೇಶದಿಂದ ಕರೆಯಿಸಿ ಅವರಿಗೆ ಪುರುಷ ಯೋಗ್ಯ ಉಡುಪುಗಳನ್ನು ತೊಡಿಸಿ, ಬಾಣ, ಬಿಲ್ಲುಗಾರಿಕೆಯ ತರಬೇತಿಯನ್ನು ಕೊಡಿಸಿ ಬಹಳ ನಿಪುಣರನ್ನಾಗಿಸಿದ್ದನು. ಕತ್ತಿ ವರಸೆಗಳನ್ನು ಕಲಿಸಿದ್ದನು. ಈ ಗುಂಪಿನ ಸೈನಿಕರಿಗೆ "ಸಿಪಾಹ್-ತುರ್ಕ್" ತುರ್ಕಿ ಸಿಪಾಯಿಗಳೆಂದು ನಾಮಕರಣವನ್ನು ಮಾಡಿದ್ದನು. ಅವರನ್ನು ಷಾಹಿ ಸೈನ್ಯದ ಬಲಭಾಗದ ಸೈನಿಕರನ್ನಾಗಿ ನೇಮಿಸಿದನು ಮತ್ತು ಹಬಷ್ ದೇಶದ ಸ್ತ್ರೀಯರಿಗೂ ಕತ್ತಿಯಲ್ಲಿ ಯುದ್ಧ ಮಾಡುವ ತರಬೇತಿಯನ್ನು ಕೊಡಿಸಿ, ಸುಮಾರು ಐದುನೂರು ಸಿಪಾಯಿಗಳನ್ನು ತಯಾರುಮಾಡಿ ಷಾಹಿ ಸೈನ್ಯದ ಎಡಭಾಗದ ಸೈನಿಕರನ್ನಾಗಿ ನೇಮಿಸಿದನು.

ಅಂತಃಪುರದಲ್ಲಿ ಪೇಟೆ (ಸಂತೆ)ಯ ವ್ಯವಸ್ಥೆ:

ಬಾದಷಹನು ತನ್ನ ಅಂತಃಪುರದಲ್ಲಿ ಒಂದು ಸಂತೆಯ ವ್ಯಾಪಾರಕ್ಕೆ ಬೇಕಾದ ಮಳಿಗೆಗಳನ್ನು ಕಟ್ಟಿಸಿ ಎಲ್ಲ ರೀತಿಯ ಅವಶ್ಯಕ ವಸ್ತುಗಳ ಮಾರಾಟದ ವ್ಯವಸ್ಥೆಯನ್ನು ಏರ್ಪಡಿಸಿದನು. ಅಲ್ಲಿ ಅರಮನೆಯ ಹೊರಗೆ ಯಾವ ಬೆಲೆಗಳಲ್ಲಿ ಮಾರಾಟ ನಡೆಯುತ್ತದೆಯೋ ಅದೇ ಬೆಲೆಗಳಲ್ಲಿ ವಸ್ತುಗಳು ಸಿಗುವಂತೆ ವ್ಯವಸ್ಥೆ ಮಾಡಿದನು. ಮುದುಕಿಯರು ಮತ್ತು ಕುರೂಪಿ ಸ್ತ್ರೀಯರಿಗೆ ಈ ಸಂತೆಯಲ್ಲಿ ಬರಲು ಅವಕಾಶವಿರಲಿಲ್ಲ. ಎಲ್ಲಾ ಸುಂದರಿಯರೇ ಇರಬೇಕೆನ್ನುವ ನಿಯಮವಿತ್ತು. ಅಕಸ್ಮಾತ್ತಾಗಿ ಯಾರಾದರೂ ಮುದುಕಿ ಆ ಸಂತೆಯಲ್ಲಿ ಕಂಡದ್ದೇ ಆದರೆ ಅಂತಹವರನ್ನು ತಕ್ಷಣ ಹೊರಹಾಕಲಾಗುತ್ತಿತ್ತು.

ಸಮಾನತೆ:

ಇದೊಂದು ವಿಚಿತ್ರ ಮಾತಾಗಿದೆ. ಅಂತಃಪುರದ ಎಲ್ಲ ಸ್ತ್ರೀಯರಿಗೂ ಸಮಾನ ವೇತನ ನೀಡಲಾಗುತ್ತಿತ್ತು. ಒಂದೇ ಅಳತೆಯ ಆಹಾರ ಮತ್ತು ಜೇಬು ಖರ್ಚಿಗೆ ಎರಡು ತಿನ್ಗೆ ಹಣ ಮತ್ತು ಎರಡು ಮಣ (ಒಂದು ಮಣಕ್ಕೆ ೪೦ ಸೇರು) ಆಹಾರವನ್ನು ಕೊಡಲಾಗುತ್ತಿತ್ತು. ಆಕೆ ಅತ್ಯಂತ ಸುಂದರಿಯಾಗಿರಲಿ ಅಥವಾ ಮಧ್ಯಮ ದರ್ಜೆಯ ಸುಂದರಿಯಾಗಿರಲಿ ಎಲ್ಲರಿಗೂ ಒಂದೇ ಸಮನಾಗಿ ವಿತರಣೆಯಾಗುತ್ತಿದ್ದುದು ಇಲ್ಲಿನ ವಿಶೇಷತೆಯಾಗಿತ್ತು. ಅಂತಃಪುರದ ಇತರೆ ಪ್ರಾಣಿ ಪಕ್ಷಿಗಳಿಗೂ ಸಮಾನತೆಯಲ್ಲಿ ವ್ಯತ್ಯಾಸವಿರಲಿಲ್ಲ. ಅಂತಃಪುರದ ಗಿಣಿ, ಮೈನಾ, ಪಾರಿವಾಳ ಪಕ್ಷಿಗಳಿಗೂ ಒಂದೇ ಅಳತೆಯ ಆಹಾರ ಧಾನ್ಯಗಳು ವಿತರಿಸಲ್ಪಡುತ್ತಿದ್ದವು.

ಇಲಿಯ ಜೀವನ:

ಈ ವಿಚಾರದಲ್ಲಿ ಮತ್ತೊಂದು ಆಶ್ಚರ್ಯಕರ ಹಾಗೂ ವಿಚಿತ್ರ ಮಾತೆಂದರೆ ಒಂದು ದಿನ ಬಾದಷಹರ ಕಣ್ಣಿಗೆ ಒಂದು ಇಲಿಯು ಅಂತಃಪುರದಲ್ಲಿ ಕಾಣಿಸಿಕೊಂಡಿತು. ಬಾದಷಹನು ತಕ್ಷಣ ಒಬ್ಬ ಸ್ತ್ರೀಯನ್ನು ಕರೆದು ಅಷ್ಟೇ ಅಳತೆಯ ಆಹಾರವನ್ನು ಇಲಿಯ ಬಿಲದ ಹತ್ತಿರ ಪ್ರತಿನಿತ್ಯ ಹಾಕಲು ನೇಮಿಸಿದನು, ಆಹಾರವನ್ನು ಕೊಳ್ಳಲು ಎರಡು ತಿನ್ಗೆ ಹಣವನ್ನು ನೀಡಿದನು.

ಅತೀ ಸುಂದರಿಯರಿಗೆ ಕೆಲವು ರಿಯಾಯತಿಗಳು:

ಬಾದಷಹನು ಯಾರನ್ನು ಅತ್ಯಂತ ಪ್ರೀತಿಯಿಂದ ಕಾಣುತ್ತಿದ್ದನೋ ಅವರಿಗೂ ಒಂದೇ ಸಮನಾದ ಹಣ ಮತ್ತು ಆಹಾರವನ್ನು ನೀಡುತ್ತಿದ್ದನು. ಆದರೆ ಅತೀ ಸುಂದರ ಸ್ತ್ರೀಯರಿಗೆ ಸ್ವಲ್ಪ ವಿಶೇಷ ರಿಯಾಯತಿಗಳುಳ್ಳ ಪ್ರೀತಿಯನ್ನು ತೋರುತ್ತಿದ್ದನು. ಅಂದರೆ ಅತೀ ಸುಂದರಿಯರಿಗೆ ಚಿನ್ನದ ಮತ್ತು ಮುತ್ತುರತ್ನ ಒಡವೆಗಳನ್ನು ಕೊಟ್ಟು ಶೃಂಗರಿಸಿಕೊಳ್ಳಲು ಆಜ್ಞಾಪಿಸುತ್ತಿದ್ದನು.

ದಾನ ಮತ್ತು ಉದಾರತೆ:

ಬಾದಷಹನ ಪ್ರತಿನಿತ್ಯದ ಮಾಮೂಲು ವಾಡಿಕೆಯಂದರೆ ಪ್ರತಿರಾತ್ರಿ ತನ್ನ ತಲೆದಿಂಬಿನ ಕೆಳಗೆ ಒಂದುನೂರು "ಅಶರ್ಫಿ" (ಚಿನ್ನದ ನಾಣ್ಯ)ಗಳನ್ನು ಇಟ್ಟುಕೊಂಡು ಮಲಗುತ್ತಿದ್ದನು. ಬೆಳಗಾಗುತ್ತಲೇ ಆ ನಾಣ್ಯಗಳನ್ನು ತುಂಬಾ ಬಡವರನ್ನು ಕರೆಯಿಸಿಕೊಂಡು ಅವರಲ್ಲಿ ಹಂಚುತ್ತಿದ್ದನು. ಬಾದಷಹನ ಮತ್ತೊಂದು ವಾಡಿಕೆಯಂದರೆ ಬಾದಷಹನು ಎಂದಾದರೂ ತನ್ನ ಹೆಂಡತಿ-ಮಕ್ಕಳನ್ನು ಎದುರಿನಲ್ಲಿ ಕಂಡಾಗ "ಈ ಸಂದರ್ಭ ಅಲ್ಲಾಹನ ಕೃಪೆ" ಎಂದು ತಿಳಿದು "ಶುಕ್ರಿಯಾ" ಕೃತಜ್ಞತೆಯನ್ನು ಹೇಳಿದ ತಕ್ಷಣ, ಬಡವರಿಗೆ ಐವತ್ತು ತಿನ್ಗೆ ಹಣವನ್ನು ಹಂಚಬೇಕೆಂದು ಆಜ್ಞಾಪಿಸಿದ್ದನು. ಇನ್ನೊಂದು ವಾಡಿಕೆಯಂದರೆ ಬಾದಷಹನು ಎಂದಾದರೂ ದರ್ಬಾರಿನಲ್ಲಿ ಕುಳಿತಾಗ ಹಾಗೂ ಮೊಟ್ಟಮೊದಲ ವ್ಯಕ್ತಿ ಯಾರೊಂದಿಗೆ ಮಾತನಾಡುತ್ತಿದ್ದನೋ ಆತನಿಗೆ ಒಂದು ಸಾವಿರ ತಿನ್ಗೆ ಹಣವನ್ನು ಕೊಡಲು ಆಜ್ಞಾಪಿಸಿದ್ದನು.

ಅಲ್ಲಾಹನ ಹೆದರಿಕೆ:

ಅಂತಃಪುರದಲ್ಲಿನ ಒಂದು ಸಾವಿರ ಸ್ತ್ರೀಯರು ಖುರಾನ ಗ್ರಂಥದ ಹಾಫೀಜ್ (ಬಾಯಿಪಾಠ-ಕಂಠಪಾಠ)ಗಳು ಇದ್ದರು. ಬಾದಷಹನು ತನ್ನ ಉಡುಪುನ್ನು ಬದಲಾಯಿಸಿದಾಗ ಅವರೆಲ್ಲರೂ, ಆತನ ಉಡುಪಿನ ಮೇಲೆ ಖುರಾನಿನ ಶ್ಲೋಕಗಳನ್ನು ಉಚ್ಚರಿಸಿದ ತಮ್ಮ ಉಸಿರನ್ನು ಬಿಟ್ಟು ಭಗವಂತನಲ್ಲಿ ಶ್ರೇಯಸ್ಸನ್ನು ಕೋರಬೇಕಿತ್ತು. ಬಾದಷಹನು ಬೆಳಗಿನ ಜಾವದ ಇರುಳಲ್ಲಿ ಎದ್ದು ಅಲ್ಲಾಹನ ಧ್ಯಾನದಲ್ಲಿ

ಮಗ್ನನಾಗುತ್ತಿದ್ದನು. ಅರ್ಧ ರಾತ್ರಿಯಲ್ಲೂ ಅಲ್ಲಾಹನ ಪ್ರಾರ್ಥನೆಯಲ್ಲಿ ತೊಡಗಲು, ನಿದ್ರೆಯಿಂದ ಜಾಗೃತಗೊಳಿಸಲು ಆಜ್ಞಾಪಿಸಿದ್ದನು. ನಿದ್ರೆಯಿಂದ ತಾನು ಎಚ್ಚರಗೊಳ್ಳದಿದ್ದಾಗ, ತನ್ನ ಮುಖದ ಮೇಲೆ ನೀರು ಸಿಂಪಡಿಸಿ ಎಚ್ಚರಿಸಲು ಹಿಂಜರಿಯಬಾರದೆಂದು ಆಜ್ಞೆ ಮಾಡಿದ್ದನು. ಇಷ್ಟಕ್ಕೂ ಏಳದೆ ಗಾಢ ನಿದ್ರೆಯಲ್ಲಿ ಮುಳುಗಿದ್ದರೆ, ಆತನ ಶರೀರವನ್ನು ಅಲುಗಾಡಿಸಿಯಾದರೂ ಎಬ್ಬಿಸುವಂತೆ ಅನುಮತಿಯನ್ನು ನೀಡಿದ್ದನು. ಬಾದಷಹನು ಭೋಗವಿಲಾಸಿಯಾಗಿದ್ದರೂ ಅಲ್ಲಾಹನ ಧ್ಯಾನ ಪ್ರಾರ್ಥನೆಗಳನ್ನು ಚಾಚೂ ತಪ್ಪದೆ ನಿಭಾಯಿಸುತ್ತಿದ್ದುದು ಈತನ ವಿಶೇಷ ವಾಡಿಕೆಗಳಾಗಿದ್ದುವು.

ಅಂತಿಮ ದಿನದ ಚಿಂತೆಯು ಕಾಡುತ್ತಿತ್ತು:

ಬಾದಷಹನಿಗೆ ಸಾವಿನ (ಅಂತಿಮ ದಿನದ) ಜ್ಞಾಪಕವು ಪ್ರತಿನಿತ್ಯ ಬರುವಂತೆ ಒಂದು ಉಪಾಯವನ್ನು ಆಯೋಜಿಸಿದ್ದನು. ಅದೇನೆಂದರೆ– ಆತನು ಭೋಗವಿಲಾಸದಲ್ಲಿ ಮುಳುಗಿರುವ ಸಂದರ್ಭದಲ್ಲಿ, ದೈನಂದಿನ ಪ್ರಾಪಂಚಿಕ ಕಾರ್ಯಗಳ ಮಗ್ನನಾಗಿದ್ದಾಗ, ಆತನ ಕಣ್ಮುಂದೆ, ಮರಣವಾದಾಗ ಸುತ್ತುವ ಬಟ್ಟೆಯನ್ನು "ಕಫನ್" ತಂದು ತೋರಿಸಲು ಆಜ್ಞಾಪಿಸಿದ್ದನು. ಏಕೆಂದರೆ ಮನುಷ್ಯನು ಒಂದಲ್ಲ ಒಂದುದಿನ ಸಾಯಲೇಬೇಕೆಂಬ ಸತ್ಯದ ಅರಿವಾಗಲೆಂಬುದೇ ಆತನ ಆಶಯವಾಗಿದ್ದಿತು. ಅಂತಹ ಸಂದರ್ಭ ಬಂದಾಗ ತನ್ನ ಯಾವುದೇ ಕ್ರಿಯೆಯಲ್ಲಿ ಮಗ್ನನಾಗಿದ್ದರೂ, ಅದನ್ನು ತ್ಯಜಿಸಿ, ತಕ್ಷಣ ಎದ್ದು ನಮಾಜ್ ಪ್ರಾರ್ಥನೆಗೆಂದು, ಕೈಕಾಲು ಮುಖ (ವಜೂ)ವನ್ನು ತೊಳೆದು ಪ್ರಾರ್ಥನೆಯಲ್ಲಿ ತೊಡಗಿ ತನ್ನ ದುಷ್ಕರ್ಮಗಳ ಬಗ್ಗೆ ಅಲ್ಲಾಹ್‌ನಲ್ಲಿ ಕ್ಷಮೆಯಾಚಿಸುತ್ತಿದ್ದನು.

ಮದ್ಯಪಾನವನ್ನು ವರ್ಜಿಸಿದ್ದನು:

ಷಾಹಿ ದರ್ಬಾರಿನಲ್ಲಿ, ಷಾಹಿ ಸದಸ್ಯರು ಸೇರಿರುವ ಗುಂಪಿನಲ್ಲಿ ಅನವಶ್ಯಕ, ಅಸಭ್ಯ ಮಾತುಗಳನ್ನು ಆಡಬಾರದೆಂದು ಆಜ್ಞಾಪಿಸಿದ್ದನು. ಸುಲ್ತಾನ್ ಘಿಯಾಸುದ್ದೀನ್‌ನು ಮದ್ಯಪಾನದಿಂದ ಬಹಳ ಕಠಿಣವಾಗಿ ವಿರೋಧಿಸುತ್ತಿದ್ದನು. ಒಂದುಸಲ ಬಾದಷಹನಿಗೋಸ್ಕರ ಒಂದು ವಿಶೇಷ ಔಷಧಿಯನ್ನು ತಬೀಬ್‌ಗಳು (ವೈದ್ಯರುಗಳು) ತಯಾರಿಸಿದರು. ಆಗ ಬಾದಷಹನು ಅದರಲ್ಲಿ ಯಾವ ಯಾವ ವಸ್ತುಗಳು ಸೇರಿವೆ ಎಂಬ ವಿವರವನ್ನು ನೀಡಲು ಆಜ್ಞಾಪಿಸಿದನು. ಅದರಲ್ಲಿ ಸುಮಾರು ಮುನ್ನೂರು ವಸ್ತುಗಳು ಸೇರಿಸಿದ್ದರು. ಅವುಗಳಲ್ಲಿ ಒಂದು ವಸ್ತು (ನಶೆ) ಮತ್ತು ಬರುವಂತಹ ವಸ್ತುವೂ ಸೇರಿಸಿದ್ದುದನ್ನು ಕೇಳಿದ ಬಾದಷಹನು, ತಕ್ಷಣ ಆ ಚೂರ್ಣವನ್ನು ಬೆಂಕಿಗೆ ಹಾಕಿ ಸುಟ್ಟು ಬಿಡಲು ಆಜ್ಞಾಪಿಸಿದನು. ಅಲ್ಲಿದ್ದ ಒಬ್ಬ ವ್ಯಕ್ತಿ ಬಾದಷಹನ ಆತ್ಮೀಯನು ಹೀಗೆ ಹೇಳಿದನು. ಬಾದಷಹರೆ– ಅದನ್ನು ಸುಡುವುದಕ್ಕಿಂತ, ಯಾರಿಗಾದರೂ

ದಾನವಾಗಿ ಕೊಡಬಹುದಲ್ಲವೇ? ಏಕೆಂದರೆ, ಆತನಾದರೂ ಅದನ್ನು ಮಾರಿಕೊಂಡು ಲಾಭವನ್ನು ಪಡೆಯಬಹುದಾಗಿದೆ ಎಂದು ಸಲಹೆಯನ್ನು ಕೊಟ್ಟನು. ಆ ಔಷಧವು ಬಹುಮೂಲ್ಯ ವಸ್ತುಗಳಿಂದ ತಯಾರಿಸಲಾಗಿದೆ. ಅದನ್ನು ನಾಶಪಡಿಸುವುದು ಸೂಕ್ತವಲ್ಲವೆಂದಾಗ ಬಾದಷಹನು – "ಯಾವ ವಸ್ತುವನ್ನು ಅಯೋಗ್ಯವೆಂದು ತಿಳಿದ ಮೇಲೆ, ಆ ವಸ್ತುವು ಮತ್ತೊಬ್ಬರಿಗೆ ಯೋಗ್ಯವೆಂದು ಹೇಳುವುದು ಮೂರ್ಖತನವಲ್ಲವೆ?" ಎಂದು ಹೇಳಿ ತಿರಸ್ಕರಿಸಿದನು.

ಮಾನವೀಯತೆಯ ಮೂರ್ತಿ:

ಬಾದಷಹನು ತನ್ನ ಕೆಲವು ಆಪ್ತರಿಗೆ ದಾನಧರ್ಮಗಳನ್ನು ಮಾಡುವ ಪೂರ್ಣ ಸ್ವಾತಂತ್ರ್ಯವನ್ನು ನೀಡಿದ್ದನು. ದಾನವನ್ನು ಕೇಳುವವರು ಬಾದಷಹನ ಹತ್ತಿರಕ್ಕೆ ಬರುವ ಅವಶ್ಯಕತೆ ಇರಲಿಲ್ಲ. ಒಮ್ಮೆ ಒಬ್ಬ ಬಡವ ಶೇಖ್ ಲುಕ್ಮಾನ್ ಎಂಬ ಬಾದಷಹನ ಆತ್ಮೀಯನ ಹತ್ತಿರ ಬಂದು ತನ್ನ ಬೇಡಿಕೆಯನ್ನು ಇಟ್ಟನು. ನೀವು ಶಿಫಾರಸ್ಸನ್ನು ಮಾಡಿ ಬಾದಷಹರ ಹತ್ತಿರ ನನ್ನನ್ನು ಕರೆದೊಯ್ದು ನನ್ನ ಮಗಳ ಮದುವೆಗೆ ಹಣ ಕೊಡಿಸಲು ಪ್ರಾರ್ಥಿಸಿಕೊಂಡನು. ಆಗ ಆ ಲುಕ್ಮಾನ್ ಎಂಬ ಆಪ್ತನು ಹೀಗೆಂದನು– "ನೀನು ಬಾದಷಹರ ಹತ್ತಿರಕ್ಕೆ ಹೋಗುವ ಅವಶ್ಯಕತೆ ಇಲ್ಲ ನನ್ನ ಹತ್ತಿರವಿರುವ ಸಂಪತ್ತಿನಿಂದಲೇ ನಿನ್ನ ಅವಶ್ಯಕತೆಗಳನ್ನು ನಾನು ಪೂರೈಸಲು ಸಮರ್ಥನಿದ್ದೇನೆ" ಎಂದನು. ಈ ಮಾತನ್ನು ಕೇಳಿದ ಬಡವನು ನಾನು ನಿನ್ನಿಂದ ದಾನವನ್ನು ಪಡೆಯಲು ಇಚ್ಛಿಸುವುದಿಲ್ಲ. ನನಗೆ ಸ್ವತಃ ಬಾದಷಹರಿಂದಲೇ ದಾನವನ್ನು ಪಡೆದು ಗೌರವಿಸಿಕೊಳ್ಳುವ ಆಸೆ ಇದೆ ಎಂದನು. ಇದಕ್ಕೆ ಉತ್ತರವಾಗಿ ಶೇಖ್ ಲುಕ್ಮಾನನು ಹೀಗೆಂದನು– ನಾನು ಕೆಲವು ವಿಶೇಷ ವ್ಯಕ್ತಿಗಳಿಗೆ ಬಾದಷಹರ ಹತ್ತಿರ ಹೋಗಲು ಶಿಫಾರಸ್ಸು ಮಾಡುತ್ತೇನೆ. ಅವರೆಂದರೆ–ಯಾವ ವ್ಯಕ್ತಿಯು ದೊಡ್ಡ ವಂಶಸ್ಥನಾಗಿದ್ದಾನೋ ಅಥವಾ ಅವರ ಸಂಬಂಧಿಕನಾಗಿದ್ದಾನೋ ಅಂತಹವರನ್ನು ಮಾತ್ರ ಶಿಫಾರಸ್ಸು ಮಾಡಬಲ್ಲೆ. ಆದರೆ ನೀನು ಮಾತ್ರ ಆ ಎರಡು ಗುಂಪಿಗೆ ಸೇರಿದವನಾಗಿಲ್ಲವಾದ್ದರಿಂದ ನಾನು ನಿನ್ನನ್ನು ಬಾದಷಹರ ಹತ್ತಿರ ಹೇಗೆ ತಲುಪಿಸಲಿ? ಎಂದು ಕೇಳಿದನು. ಅದಕ್ಕೆ ಉತ್ತರವಾಗಿ ಬಡವನು ಹೀಗೆಂದನು– "ಈಗ ನಾನು ನಿನ್ನ ಹತ್ತಿರಕ್ಕೆ ಬಂದು ನನ್ನನ್ನು ನಿನ್ನಲ್ಲಿ ಹೇಗೆ ಸಮರ್ಥಿಸಿಕೊಂಡಿದ್ದೇನೆಯೋ ಹಾಗೆಯೇ ನೀನು ನನ್ನನ್ನು ಬಾದಷಹರ ಹತ್ತಿರ ಸಮರ್ಪಿಸಿಬೇಕಾಗಿದೆ" ಎಂದನು.

ಕೊನೆಗೆ ಶೇಖ್ ಲುಕ್ಮಾನನು ವಿವಶನಾಗಿ ಶಾಹಿ ದರ್ಬಾರಿಗೆ ಆ ಬಡವನನ್ನು ಕರೆದೊಯ್ದನು. ಆತನಿಗೆ ಈ ಒಂದು ನಿಯಮವನ್ನು ಬೋಧಿಸಿದ್ದುದೇನೆಂದರೆ, ಅಲ್ಲಿ ಬಡವರಿಗೆ ಹಂಚಲು ಇಡಿಸಿದ್ದ ಗೋಧಿಯ ಸಂಗ್ರಹದಿಂದ ಒಂದು ಹಿಡಿ ಗೋಧಿಯನ್ನು ತೆಗೆದುಕೊಂಡು ತನ್ನಲ್ಲಿ ಜೋಪಾನವಾಗಿ ಇಟ್ಟುಕೊಂಡಿರಲೂ

ಹೇಳಿದ್ದನು. ಬಡವನು ಆತನ ಮಾತಿನಂತೆಯೇ ನಡೆದುಕೊಂಡು ಇಬ್ಬರೂ ಬಾದಷಹನ ಎದುರು ಹಾಜರಾದರು. ಬಾದಷಹನು ಆ ವ್ಯಕ್ತಿಯಾರೆಂದು ಲುಕ್ಮಾನನನ್ನು ಪ್ರಶ್ನಿಸಿದನು. ಲುಕ್ಮಾನನು ಈತನು ಒಬ್ಬ ಬಡವ. ದಾನಕ್ಕೆ ಪಾತ್ರನಾದವನು. ಈತನು ತಮಗೋಸ್ಕರ ಒಂದು ಕಾಣಿಕೆಯನ್ನು ತಂದಿರುತ್ತಾನೆ ಎಂದನು. ಹಾಗಿದ್ದ ಮೇಲೆ ನೀನು ಈತನನ್ನು ನನ್ನ ಹತ್ತಿರ ಏಕೆ ಕರೆದುಕೊಂಡು ಬಂದೆ? ಎಂದನು. ನಾನೇ ಸ್ವತಃ ಈ ಬಡವನ ಹತ್ತಿರ ಹೋಗುತ್ತಿದ್ದೆ. ಈತನ ಕಷ್ಟವನ್ನು ನಾನೇ ಕೇಳುತ್ತಿದ್ದೆ ಎಂದನು. ಅದಕ್ಕೆ ಲುಕ್ಮಾನನು ಹೀಗೆ ಉತ್ತರಿಸಿದನು– ಸ್ವತಃ ಬಾದಷಹರು ಈತನ ಹತ್ತಿರ ಹೋಗಿ ಕೇಳುವಷ್ಟು ಎತ್ತರದ ಮನುಷ್ಯ ಈತನಲ್ಲ ಪ್ರಭು. ಈತನು ಅಯೋಗ್ಯ ಎಂದನು. ಈತನು ಅಷ್ಟೊಂದು ಯೋಗ್ಯ ಮನುಷ್ಯನಲ್ಲದಿದ್ದರೂ ಈತನು ನನಗೋಸ್ಕರ ತಂದಿರುವ ಒಂದು ಹಿಡಿ ಗೋಧಿಯಾದರೂ ಬೆಲೆಬಾಳುವಂತಹದಲ್ಲವೇ? ಇದಕ್ಕೋಸ್ಕರವಾದರೂ ನಾನು ಆತನ ಹತ್ತಿರ ಹೋಗಬಹುದಾಗಿತ್ತಲ್ಲವೇ? ಎಂದು ಬಾದಷಹನು ಪ್ರಶ್ನಿಸಿದನು. ತಕ್ಷಣ ಬಾದಷಹನು ಆತನು ತಂದಿರುವ ಕಾಣಿಕೆಯನ್ನು ನೀಡಲು ಒತ್ತಾಯಿಸಿದನು. ಆಗ ಲುಕ್ಮಾನನು ಹೀಗೆ ಹೇಳಿದನು– ಹುಜೂರ್‌ರವರೇ ಆ ಬಡವನು ತಮಗೆ ನೀಡಲು ತಂದಿರುವ ಕಾಣಿಕೆಯನ್ನು ಮಸೀದಿಯಲ್ಲಿ ಶುಕ್ರವಾರದ ದಿನ ನೀಡಲು ಇಷ್ಟಪಡುತ್ತಾನೆಂದು ನಿವೇದಿಸಿದನು. ಅಂತೆಯೇ ಆ ಬಡವನು ತಾನು ತಂದಿದ್ದ ಒಂದು ಹಿಡಿ ಗೋಧಿಯನ್ನು ಶುಕ್ರವಾರದ ಪ್ರಾರ್ಥನೆಯ ಸಂದರ್ಭದಲ್ಲಿ ಮಸೀದಿಯಲ್ಲಿ ಬಾದಷಹರ ಆಜ್ಞೆಯನ್ನು ಪಡೆದು, ಮೇಜಿನ ಮೇಲೆ ನಿಂತು ಬಾದಷಹರ ಮಡಿಲಲ್ಲಿ ಗೋಧಿಯನ್ನು ಸುರಿದನು. ಇದಕ್ಕೆ ಬದಲಾಗಿ ಬಾದಷಹನು ಆ ಬಡವನಿಗೆ ಅನೇಕ ರೀತಿಯ ಬಹುಮೂಲ್ಯ ಸಂಪತ್ತನ್ನು ದಾನವಾಗಿ ನೀಡಿದನು.

ಅತ್ಯಂತ ಸುಂದರ ಸೌಂದರ್ಯದ ಹುಡುಕಾಟ:

ಒಂದುದಿನ ಬಾದಷಹನು ತನ್ನ ಆಪ್ತ ಆತ್ಮೀಯರನ್ನು ಕುರಿತು ಹೀಗೆಂದನು– "ನನ್ನ ಅಂತಃಪುರದಲ್ಲಿ ಸಾವಿರಾರು ಸುಂದರ ಸ್ತ್ರೀಯರು ತುಂಬಿಕೊಂಡಿದ್ದಾರೆ, ಅವರಲ್ಲಿ ಯಾವ ಸೌಂದರ್ಯಕ್ಕೂ ಏನೂ ಕೊರತೆ ಇಲ್ಲ. ಒಬ್ಬಳಿಗಿಂತ ಮತ್ತೊಬ್ಬಳು ಸುಂದರಿಯಾಗಿ ನನ್ನ ಮುಂದೆ ಬರುತ್ತಿರುತ್ತಾರೆ. ಆದರೆ ನಾನು ಯಾವ ಸೌಂದರ್ಯವನ್ನು ಹುಡುಕುತ್ತಿರುವೆನೋ ಅದು ನನಗೆ ದೊರೆತಿಲ್ಲ. ಭಗವಂತನು ಇಷ್ಟಪಟ್ಟು ನಾನು ಯಾವ ಸೌಂದರ್ಯವನ್ನು ಹುಡುಕಿತ್ತಿರುತ್ತೇನೆಯೋ ಅದನ್ನು ಕೊಟ್ಟಿದ್ದಿದ್ದರೆ ನಾನು ಅದನ್ನು ಕಂಡು ಸಂತೋಷ ಪಡುತ್ತಿದ್ದೆ ಎಂದು ತನ್ನ ಮನದ ಇಂಗಿತವನ್ನು ವ್ಯಕ್ತಪಡಿಸಿದನು.

ಸೌಂದರ್ಯದ ಒರೆಗಲ್ಲು:

ಈ ಸಂದರ್ಭದಲ್ಲಿನ ಒಬ್ಬ ಆಪ್ತನು ಬಾದಷಹರಲ್ಲಿ ವಿನಂತಿಸಿದನು. ಕೆಲವರು

ಸ್ತ್ರೀಯರಿಂದ ಸೌಂದರ್ಯವನ್ನು ಪಡೆದರೂ ಬುದ್ಧಿವಂತಿಕೆಯಲ್ಲಿ ಅಶಕ್ತರು. ಅವರಿಗೆ ಸೌಂದರ್ಯವೇನೆಂಬುದು ಗೊತ್ತೇ ಇಲ್ಲ. ಆದ್ದರಿಂದಲೇ ಅಂತಹವರು ತಮಗೆ ಸೌಂದರ್ಯವೇನೆಂಬುದು ತಿಳಿಯಲು ಅಶಕ್ತರಾಗಿದ್ದಾರೆ. ಒಂದು ವೇಳೆ ತಾವು ಆ ಕಾರ್ಯವನ್ನು ವಹಿಸಿದರೆ ತಮಗೆ ತೃಪ್ತಿಪಡಿಸುವಂತಹ ಸುಂದರ ಸ್ತ್ರೀಯನ್ನು ಹುಡುಕಿ ತಮ್ಮ ಮನಸ್ಸನ್ನು ಸಂತೋಷಪಡಿಸಬಲ್ಲೆ ಎಂದನು. ಆಗ ಬಾದಷಹನು ನಿನ್ನ ಅಭಿಪ್ರಾಯದಲ್ಲಿ ಸೌಂದರ್ಯದ ಒರೆಗಲ್ಲು ಯಾವುದು? ಎಂದು ಪ್ರಶ್ನಿಸಿದನು. ಇದಕ್ಕೆ ಆಪ್ತ ದರಬಾರಿಯು– ನನ್ನ ಅಭಿಪ್ರಾಯದಲ್ಲಿ ಯಾವುದೇ ಒಬ್ಬ ಸುಂದರಿಯ ಶರೀರದ ಯಾವುದೇ ಒಂದು ಭಾಗದ ಮೇಲೆ ದೃಷ್ಟಿ ಬಿದ್ದಮೇಲೆ, ಆತನು ಆ ಭಾಗಕ್ಕೆ ಎಷ್ಟು ಆಕರ್ಷಿತನಾಗುತ್ತಾನೋ ಅದಕ್ಕಿಂತ ಹೆಚ್ಚಾಗಿ ಇನ್ನುಳಿದ ಭಾಗಗಳನ್ನು ಇನ್ನೂ ಹೆಚ್ಚಾಗಿ ನೋಡಲು ಕಾತರನಾಗಬೇಕು. ಉದಾಹರಣೆಗೆ ಯಾವುದೇ ಒಬ್ಬ ಸುಂದರಿಯ ಶರೀರವನ್ನು ನೋಡುತ್ತಲೇ, ಆಕೆಯ ಇನ್ನಿತರೆ ಶರೀರದ ಭಾಗಗಳನ್ನು ನೋಡುವ ಅತೀವ ಹಂಬಲವನ್ನು ವ್ಯಕ್ತಪಡಿಸುವಂತಹನಾಗಬೇಕೆಂಬ ಅಭಿಪ್ರಾಯವನ್ನು ಸೌಂದರ್ಯದ ಒರೆಗಲ್ಲು ಎಂದು ವಿವರಿಸಿದನು. ಬಾದಷಹನಿಗೆ ಈ ಉತ್ತರವೂ ಸರಿಯಾಗಿ ಕಂಡಿತು. ಬಾದಷಹನ ಈತನ ಸೌಂದರ್ಯ ವರ್ಣನೆಯನ್ನು ಪ್ರಶಂಸಿಸಿ, ಅಂತಹ ಸೌಂದರ್ಯವನ್ನು ಹುಡುಕಲು ಅಪ್ಪಣೆಯನ್ನು ನೀಡಿದನು.

ಒಬ್ಬ ಅತೀವ ಸುಂದರಿಯ ಹುಡುಕಾಟ:

ಆ ದರಬಾರಿಯು ಒಬ್ಬ ಅತೀ ಸುಂದರಿಯನ್ನು ಹುಡುಕುತ್ತ ಇಡೀ ಸಾಮ್ರಾಜ್ಯವನ್ನೆಲ್ಲ ಸುತ್ತಿದನು. ಎಷ್ಟು ಹುಡುಕಿದರೂ, ಆತನ ಒರೆಗಲ್ಲಿನಲ್ಲಿ ನಿಲ್ಲುವಂತಹ ಸುಂದರ ಸ್ತ್ರೀಯು ಸಿಗಲಿಲ್ಲ. ಕೊನೆಗೆ ಸೋತು ನಿರಾಶನಾಗಿ ವಾಪಸ್ ಬಂದುಬಿಟ್ಟನು. ಒಂದು ದಿನ ಅಕಸ್ಮಾತ್ತಾಗಿ ಒಬ್ಬ ಹುಡುಗಿಯ ಮೇಲೆ ಆತನ ಕಣ್ಣು ಬಿದ್ದಿತು. ಆ ಹುಡುಗಿಯು ದಾರಿಯಲ್ಲಿ ಸರಳವಾಗಿ ತನ್ನದೇ ಆದ ನೈಜ ನಡಗೆಯಲ್ಲಿ ನಡೆಯುತ್ತಿದ್ದಳು. ಆಕೆಯ ಶರೀರ ಹಾಗೂ ನಡಿಗೆ ಒಂದು ವಿಶೇಷ ರೀತಿಯಲ್ಲಿಯೇ ಇತ್ತು. ಆಕೆಯ ಶರೀರ ಹಾಗೂ ನಡಿಗೆಯ ರೀತಿ ಆಕರ್ಷಕವಾಗಿತ್ತು. ದರಬಾರಿಯು ಆಕೆಯನ್ನು ಬಹಳ ಸಂತೋಷಪಟ್ಟನು. ಆತನ ಎದುರಿಗೆ ಆ ಹುಡುಗಿಯ ಭೇಟಿಯಾಯಿತು. ಇದರಿಂದಾಗಿ ಆತನ ಸಂತೋಷಕ್ಕೆ ಪಾರವೇ ಇರಲಿಲ್ಲವಾಯಿತು. ಸೌಂದರ್ಯದ ಪರಮಾವಧಿ ಯಾವುದು ಎಂದು ಆತನು ತಿಳಿದಿದ್ದನು ಅದಕ್ಕಿಂತ ಸಾವಿರಪಟ್ಟು ಆ ಹುಡುಗಿ ಸುಂದರವಾಗಿದ್ದಳು.

ಮುತ್ತಿನಂತ ಆಸೆ ಪರಿಪೂರ್ಣ:

ದರಬಾರಿಯು ಆ ಹುಡುಗಿಯನ್ನು ಎಷ್ಟು ಸಾಧ್ಯವೋ ಅಷ್ಟು ಮೋಸದ ಮಾತುಗಳನ್ನಾಡಿ ತನ್ನ ವಶಕ್ಕೆ ಪಡೆದಿದ್ದನು. ಆಕೆಯನ್ನು ಬಾದಷಹನ ಸೇವೆಯಲ್ಲಿ

ತಂದು ನಿಲ್ಲಿಸಿದನು. ಬಾದಷಹನು ಆ ಹುಡುಗಿಯನ್ನು ನೋಡಿ ಮಂತ್ರಮುಗ್ಧನಾದನು. ಹಾಗೂ ಆ ಸೌಂದರ್ಯ ಮತ್ತು ದರಬಾರಿಯ ಆಯ್ಕೆಯು ಬಹಳವಾಗಿ ಪ್ರಶಂಸಿಸಿದನು. ಆಗ ದರಬಾರಿಯು ಬಾದಷಹರಲ್ಲಿ ವಿನಂತಿಸಿದ್ದೇನೆಂದರೆ "ಪ್ರಭುಗಳೆ ನಾನು ಇವಳನ್ನು ಸಾವಿರಾರು ತಿನ್ಗೆ ಹಣವನ್ನು ಕೊಟ್ಟು ಖರೀದಿಸಿದ್ದೇನೆ" ಎಂದನು.

ಹುಡುಗಿಯರ ತಂದೆ-ತಾಯಿಯರ ನಿವೇದನೆ:

ದರಬಾರಿಯು ಆ ಹುಡುಗಿಯನ್ನು ಮೋಸದ ಬಲೆಯನ್ನು ಬೀಸಿ ಹೊತ್ತು ತಂದಿದ್ದನು. ಈ ಕಾರಣದಿಂದಾಗಿ ಆ ಹುಡುಗಿಯ ತಂದೆ-ತಾಯಂದಿರು ತುಂಬಾ ಚಿಂತಿತರಾಗಿದ್ದರು. ಆಕೆಯನ್ನು ಹುಡುಕಲು ಅವರು ತುಂಬಾ ಶ್ರಮಪಟ್ಟಿದ್ದರು. ಕೊನೆಗೆ ತಮ್ಮ ಮಗಳು ಬಾದಷಹನ ದರಬಾರಿನಲ್ಲಿದ್ದಾಳೆಂದು ಗೊತ್ತಾಯಿತು. ಹುಡುಗಿಯ ತಂದೆ-ತಾಯಂದಿರು ಬಾದಷಹರಲ್ಲಿ ದೂರು ನೀಡಲು ಬಂದರು. ಒಂದು ದಿನ ಬಾದಷಹನು ಸವಾರಿಯಲ್ಲಿ ಹೊರಟಾಗ ಆ ಇಬ್ಬರೂ ದಾರಿಯಲ್ಲಿಯೇ ನಿಂತು ತಮ್ಮ ಅಳಲನ್ನು ಬಾದಷಹರಲ್ಲಿ ತೋಡಿಕೊಂಡರು. ತಕ್ಷಣ ಬಾದಷಹನು ತನ್ನ ಪ್ರಯಾಣವನ್ನು ಅಲ್ಲಿಯೇ ನಿಲ್ಲಿಸಿ ಅದೇ ಜಾಗಕ್ಕೆ ತನ್ನ ನ್ಯಾಯಾಧೀಶ ವಿದ್ವಾಂಸರನ್ನು ಬರಲು ಆಜ್ಞಾಪಿಸಿದನು.

ಸುಲ್ತಾನ ಘಿಯಾಸುದ್ದೀನನ ನ್ಯಾಯ:

ವಿದ್ವಾಂಸರು ಅಲ್ಲಿಗೆ ಧಾವಿಸಿದಾಗ ಬಾದಷಹನು, ಇಸ್ಲಾಂ ಧರ್ಮವು ಈ ಸಂದರ್ಭದಲ್ಲಿ ಏನು ನಿಯಮವನ್ನು ಬೋಧಿಸುತ್ತದೆಂದು ಕೇಳಿದನು. ವಿದ್ವಾಂಸರು ಆ ಹುಡುಗಿಯ ಪರಿಸ್ಥಿತಿಯನ್ನ ಅಧ್ಯಯನವನ್ನು ಮಾಡಿದ ನಂತರ ಹೀಗೆಂದರು- ಆ ಹುಡುಗಿಯು ಅವಳನ್ನು ಹೊತ್ತು ತಂದವನ ಬಳಿಯಲ್ಲಿದ್ದಿದ್ದರೆ, ಹೊತ್ತು ತಂದವನಿಗೆ ಶಿಕ್ಷೆಯನ್ನು ವಿಧಿಸಬಹುದಿತ್ತು. ಆದರೆ ಆ ಹುಡುಗಿಯು ತಮ್ಮ ಆಧೀನದಲ್ಲಿರುವುದರಿಂದ ನಮಗೆ ಈಗ ಯಾವ ಸಂಶಯವು ಉಳಿದಿಲ್ಲ. ಈ ವಿಷಯವು ನಮಗೆ ಹೆಮ್ಮೆಯ ವಿಷಯವಾಗಿದೆ. ನಾವು ತಮಗೆ ಉಪಕೃತರಾಗಿದ್ದೇವೆ. ಏಕೆಂದರೆ ನಮ್ಮನ್ನು ಈ ಗೌರವಕ್ಕೆ ಪಾತ್ರರೆಂದು ನಂಬಿದ್ದೀರಿ. ಇದನ್ನು ಕೇಳಿದ ಬಾದಷಹನು ವಿದ್ವಾಂಸರನ್ನು ಕುರಿತು- ಒಂದು ವೇಳೆ ಅ ಹುಡುಗಿ ನನ್ನ ಆಶ್ರಯವನ್ನು ಪಡೆದು ಈಗ ನನ್ನ ರಕ್ಷಣೆಯಲ್ಲಿ ನಿಂತಿದ್ದಾಳೆ. ಅದಕ್ಕೆ ನನ್ನ ಆಶ್ರಯಕ್ಕೆ ಬರುವ ಮೊದಲಿನ ಸಮಯದಲ್ಲಿ ಆಕೆಗೆ ಆಗಿರುವ ನಷ್ಟದ ಬಗ್ಗೆ ನಮ್ಮ ಧರ್ಮದ ನಿಯಮಗಳು ಏನನ್ನು ಹೇಳುತ್ತವೆ ಎಂಬುದನ್ನು ಮೊದಲು ತೀರ್ಮಾನಿಸಿ ಎಂದನು. ಈ ವಿಚಾರದ ಬಗ್ಗೆ ಒಂದುವೇಳೆ ನಾನು ತಪ್ಪಿತಸ್ಥನೆಂದಾದರೆ ನನಗೆ ಮರಣದಂಡನೆಯನ್ನು ತಾವು ವಿಧಿಸಲು ಹಿಂಜರಿಯಬೇಡಿ. ನಾನು ಆ ಶಿಕ್ಷೆಯನ್ನು ಸ್ವೀಕರಿಸಲು ಸಿದ್ಧನಿದ್ದೇನೆ. ನಿಷ್ಪಕ್ಷಪಾತವಾಗಿ ತೀರ್ಮಾನಿಸಿ ಎಂದನು. ಆಗ ವಿದ್ವಾಂಸರು ಹೀಗೆಂದರು- ತಿಳಿಯದೇ ಯಾವುದಾದರೂ

ಅಕ್ರಮ ತಪ್ಪು ನಡೆದಿದ್ದರೆ ಅದು ಕ್ಷಮಾಯೋಗ್ಯವಾದುದೆಂದು ಹೇಳಬಹುದು. ಅಂತಹ ಅಕ್ರಮಕ್ಕೆ ಬದಲಾಗಿ ಒಂದು ಉತ್ತಮ ಕಾರ್ಯವನ್ನು ಮಡಿದಾಗ ಅಲ್ಲಾಹನು ನಿಮ್ಮ ತಪ್ಪನ್ನು ಕ್ಷಮಿಸುತ್ತಾನೆ ಎಂದರು. ಆದರೂ ಈ ಘಟನೆಯಿಂದ ಬಾದಷಹನು ನಾಚಿಕೆಯಿಂದ ಪಶ್ಚಾತಾಪವನ್ನು ಪಟ್ಟಿದ್ದನು. ಆತನು ತಕ್ಷಣ ಒಂದು ಕಟ್ಟುನಿಟ್ಟಾದ ಆಜ್ಞೆಯನ್ನು ಹೊರಡಿಸಿದ್ದುದ್ದೇನೆಂದರೆ – ಇನ್ನು ಮುಂದೆ ಯಾವುದೇ ವ್ಯಕ್ತಿಯು ಪರಸ್ತ್ರೀಯರನ್ನು ಅರಮನೆಯ ಉಪಯೋಗಕ್ಕೆ ಕರೆತರುವ ಸಾಹಸವನ್ನು ಯಾರೂ ಮಾಡಬಾರದೆಂದು ವಿಧಿಸಿದನು.

ಬಾದಷಹನ ಮೂರ್ಖತನ:

ಸುಲ್ತಾನ ಘಿಯಾಸುದ್ದೀನನ ಮುಗ್ದತೆ ಹಾಗೂ ಸೌಂದರ್ಯೋಪಾಸನೆಯ ವಿಷಯದಲ್ಲಿ ಮತ್ತೊಂದು ದಂತ ಕಥೆಯು ಪ್ರಚಾರದಲ್ಲಿದೆ. ಒಂದು ದಿನ ಒಬ್ಬ ವ್ಯಕ್ತಿಯು ಬಾದಷಹನ ದರಬಾರಿಗೆ ಬಂದು ತನ್ನೊಡನೆ ತಂದಿದ್ದ ಒಂದು ಕತ್ತೆಯ ಕಾಲಿನ ಗೊರಸವನ್ನು ತೋರಿಸುತ್ತಾ "ಪ್ರಭೂ, ಈ ಗೊರಸು ಏಸುಕ್ರಿಸ್ತನ ಕತ್ತೆಯ ಕಾಲಿನದ್ದಾಗಿದೆ" ಹೀಗೆ ಹೇಳಿದ ತಕ್ಷಣ ಆ ಮಾತನ್ನು ಕೇಳಿದ ಮೂರ್ಖ ಬಾದಷಹನು ತನ್ನ ವಿದ್ವಾಂಸರನ್ನು ಕುರಿತು ಆದೇಶಿಸಿದ್ದೇನೆಂದರೆ ಈತನಿಗೆ ಐವತ್ತು ಸಾವಿರ ತಿನ್ಗೆ ಚಿನ್ನದ ನಾಣ್ಯಗಳನ್ನು ಕೊಡಲು ಹೇಳಿ, ಆ ಕತ್ತೆಯ ಗೊರಸನ್ನು ಖರೀದಿಸಿಕೊಂಡನು.

ನಂಬಿಕೆಯಲ್ಲಿ ವಿಶ್ವಾಸ:

ಇದಾದ ನಂತರ ಪುನಃ ಮೂರು ಜನ ವ್ಯಕ್ತಿಗಳು ಏಸುಕ್ರಿಸ್ತನ ಕತ್ತೆಯ ಗೊರಸುಗಳೆಂದು ಹೇಳತ್ತಾ ದರಬಾರಿಗೆ ಬಂದರು. ಬಾದಷಹನು ಆ ಮೂರು ವ್ಯಕ್ತಿಗಳಲ್ಲಿದ್ದ ಮೂರು ಗೊರಸುಗಳಿಗೆ ಐವತ್ತು ಸಾವಿರಕ್ಕೊಂದು ಗೊರಸನ್ನು ಖರೀದಿಸಿದನು. ಇದಾದ ನಂತರ ಮತ್ತೊಬ್ಬನು ತನ್ನಲ್ಲಿದ್ದ ಗೊರಸಿಗೂ ಏಸುಕ್ರಿಸ್ತನ ಕತ್ತೆಯ ಗೊರಸೆಂದು ಹೇಳಿದ್ದಕ್ಕೆ ಆ ಗೊರಸಿಗೂ ಐವತ್ತು ಸಾವಿರ ಚಿನ್ನದ ನಾಣ್ಯಗಳನ್ನು ಕೊಟ್ಟು ಖರೀದಿಸಿದನು. ಒಟ್ಟು ಐದು ಗೊರಸುಗಳಾದವು. ಇದನ್ನು ಕಂಡ ಒಬ್ಬ ದರಬಾರಿಯು ಬಾದಷಹನನ್ನು ಕುರಿತು – ಏನು? ಹಜ್ರತ್ ಈಸಾಮಸೀಹನ ಕತ್ತೆಗೆ ಐದು ಕಾಲುಗಳು ಇದ್ದದ್ದು ನಿಜವೇ? ಎಂದು ಪ್ರಶ್ನಿಸಿದನು. ಆಗ ಬಾದಷಹನು – "ಇದ್ದಿರಬಹುದು ಆ ವ್ಯಕ್ತಿಗೆ ಬೇರೆ ಯಾರಾದರು ಸುಳ್ಳು ಹೇಳಿರಬಹುದು" ಎಂದು ಹಾರಿಸಿಬಿಟ್ಟನು.

ಬೇಟೆಯಲ್ಲಿ ಆಸಕ್ತಿ:

ಸುಲ್ತಾನ ಘಿಯಾಸುದ್ದೀನನಿಗೆ ಭೇಟೆಯಾಡುವುದರಲ್ಲಿ ಬಹಳ ಆಸಕ್ತಿಯಿತ್ತು. ಆತನು ತನ್ನ ರಾಜಧಾನಿಯಲ್ಲಿ ಅನೇಕ ಪ್ರಾಣಿಸಂಗ್ರಹಾಲಯಗಳನ್ನು ಕಟ್ಟಿಸಿ, ಅವುಗಳಲ್ಲಿ

ಅನೇಕ ಪ್ರಾಣಿಗಳನ್ನು ಸಾಕಿದ್ದನು. ಅನೇಕ ವೇಳೆ ತನಗೆ ಇಷ್ಟವಿದ್ದ ಸ್ತ್ರೀಯರೊಂದಿಗೆ ಸವಾರಿಯಲ್ಲಿ ಕರೆದೊಯ್ದು, ಬೇಟೆಯನ್ನು ಆಡುತ್ತಿದ್ದನು ಮತ್ತು ಪ್ರಾಣಿಸಂಗ್ರಹಾಲಯಗಳಿಗೂ ಭೇಟಿ ಕೊಡುತ್ತಿದ್ದನು.

ಭೋಗವಿಲಾಸದಲ್ಲಿ ಬಹಳ ಆಸಕ್ತಿ:

ಬಾದಷಹನಿಗೆ ಅತೀ ಸುಂದರ ಸ್ತ್ರೀಯರಲ್ಲಿ ಬಹಳ ಆಸಕ್ತಿಯಿತ್ತು. ಸಂಗೀತ ಮತ್ತು ನೃತ್ಯಗಾರ್ತಿಯರನ್ನು ಬಹಳವಾಗಿ ಆಕರ್ಷಿಸುತ್ತಿದ್ದನು. ಈ ಕಾರಣಗಳಿಂದಾಗಿ ಆತನ ಹೆಚ್ಚು ಸಮಯ ಅಂತಃಪುರದಲ್ಲಿಯೇ ಕಳೆದು ಹೋಗುತ್ತಿತ್ತು. ಸಾಮಾನ್ಯವಾಗಿ ಬಾದಷಹನು ಅಲ್ಪಕಾಲಕ್ಕಾಗಿ ದರಬಾರನ್ನು ಸೇರಿಸಿ ಸಿಂಹಾಸನದ ಮೇಲೆ ಕುಳಿತುಕೊಳ್ಳುತ್ತಿದ್ದನು. ಅಮೀರರ, ದರಬಾರಿಗಳ "ಸಲಾಂ"ಗಳನ್ನು ಸ್ವೀಕರಿಸುತ್ತಿದ್ದನು. ಅತ್ಯಂತ ಅವಶ್ಯಕ ವಿಚಾರ, ಸಮಸ್ಯೆಗಳ ಬಗ್ಗೆ ಬೇಗ ತಿರ್ಮಾನಗಳನ್ನು ತೆಗೆದುಕೊಂಡು ತಕ್ಷಣ ಅಂತಃಪುರದೊಳಗೆ ಪ್ರವೇಶಿಸಿ ಬಿಡುತ್ತಿದ್ದನು. ಇನ್ನು ಯಾವುದಾದರೂ ಉಳಿದ ಸಮಸ್ಯೆಗಳನ್ನು ಬಗೆಹರಿಸುವ ಜವಾಬ್ದಾರಿಯನ್ನು ಮಂತ್ರಿಗಳ ಹಾಗೂ ವಕೀಲರುಗಳ ಮೇಲೆ ಹೊರಿಸಿ ತಾನು ನಿರ್ಗಮಿಸುತ್ತಿದ್ದುದು ಪ್ರತಿನಿತ್ಯದ ಕೆಲಸವಾಗಿತ್ತು. ಕೆಲವೊಮ್ಮೆ ಬಾದಷಹನು ಅನೇಕ ವಾರಗಳ ತನಕ ಅಂತಃಪುರದ ಒಳಗಿನಿಂದ ಈಚೆಗೆ ಬರುತ್ತಿರಲೇ ಇಲ್ಲ. ಇಂತಹ ಸಂದರ್ಭಗಳಲ್ಲಿ ಆಜ್ಞೆ ಮಾಡಿದ್ದೇನೆಂದರೆ ಅತ್ಯಂತ ಜರೂರು ಕೆಲಸಗಳು ಎಂದರೆ ಗಡಿಭಾಗಗಳಿಂದ ಬಾದಷಹನನ್ನು ಕಾಣಲು ಯಾರಾದರೂ ಬಂದಿದ್ದರೆ ಅಥವಾ ಅತೀ ಅವಶ್ಯಕ ಕೆಲಸವೇನಾದರೂ ಕಂಡುಬಂದರೆ ಮಾತ್ರ ನನಗೆ ತಿಳಿಸತಕ್ಕದ್ದು. ಇನ್ನುಳಿದ ಎಲ್ಲ ಕಾರ್ಯಕಲಾಪಗಳನ್ನು ವಜೀರರು (ಮಂತ್ರಿ) ಗಳು ಅಥವಾ ವಕೀಲರುಗಳೇ ನಿರ್ವಹಿಸಿಕೊಳ್ಳಬೇಕೆಂದು ಕಟ್ಟಾಜ್ಞೆಯಾಗಿತ್ತು. ಈ ಮಾತುಗಳಿಂದ ಬಾದಷಹನ ಭೋಗವಿಲಾಸದ ಎತ್ತರ ಎಷ್ಟಿತ್ತೆಂಬುದನ್ನು ಯಾರಾದರೂ ಊಹಿಸಬಹುದಾಗಿತ್ತು. ಸಾಮ್ರಾಜ್ಯದ ಕಾರ್ಯಕಲಾಪಗಳು ಆತನ ಭೋಗವಿಲಾಸದಲ್ಲಿ ಪ್ರವೇಶಿಸುವಂತಿರಲಿಲ್ಲ.

ಪಾಲನ್‌ಪುರದಲ್ಲಿ ಬಹಲೂಲ್ ಲೋಧಿಯ ಪಿತೂರಿ:

ಸುಲ್ತಾನ್ ಘಿಯಾಸುದ್ದೀನನ ಶಾಸನ ಕಾಲವು ಬಹಳ ಕ್ರಾಂತಿದಾಯಕವಾಗಿತ್ತು. ಈತನ ಕಾಲದಲ್ಲಿ ಯಾವುದೇ ರೀತಿಯ ಆಕ್ರಮಗಳಾಗಲೀ, ದಂಗೆಗಳಾಗಲೀ ಇರಲಿಲ್ಲ. ಇಂತಹ ಒಂದೇ ಒಂದು ಪಿತೂರಿ ಎಂದರೆ ಹಿಜರಿ ೮೮೦ ರಲ್ಲಿ ದೆಹಲಿಯ ಬಾದಷಹನಾಗಿದ್ದ ಸುಲ್ತಾನ ಬಹಲೂಲ್ ಲೋಧಿಯು ಪಾಲನ್‌ಪುರದ ಸುತ್ತಮುತ್ತಲ ಪ್ರದೇಶಗಳಲ್ಲಿ ಅಂದರೆ ರಣಸ್ಥಂಬೋರ್ ಪಟ್ಟಣದ ಸುತ್ತಲಿನ ಸ್ವಲ್ಪ ಪಿತೂರಿಗಳನ್ನು ಎಬ್ಬಿಸಿದ್ದನು. ಈ ಸುದ್ದಿಯು ಮಾಂಡುವಿಗೆ ತಲುಪಿತು. ಆದರೆ ಘಿಯಾಸುದ್ದೀನನ ಮುಂದೆ ಈ ವಿಷಯವನ್ನು ತಿಳಿಸುವ ಸಾಮರ್ಥ್ಯ ಯಾರಿಗೂ ಇರಲಿಲ್ಲ.

ಘಿಯಾಸುದ್ದೀನನಿಗೆ ಆಕ್ರಮಣದ ಸುದ್ದಿ ತಿಳಿಯಿತು:

ಕೊನೆಗೆ ಅಹಸನ್‌ಖಾನನು ಬಹಳ ಧೈರ್ಯವನ್ನು ಮಾಡಿಕೊಂಡು ಬಾದಷಹರಲ್ಲಿ ವಿನಂತಿಸಿಯೇ ಬಿಟ್ಟನು. ಅದೇನೆಂದರೆ – "ಸುಲ್ತಾನ್ ಬಹಲೂಲ್ ಲೋಧಿಯು ಮಹಮೂದ್ ಖಿಲ್ಜಿಯವರ ಸಾಮ್ರಾಜ್ಯದ ಶಾಸನ ಕಾಲದಲ್ಲಿ ಆತನು ಒಂದು ದೊಡ್ಡ ಮೊತ್ತವನ್ನು ಕಪ್ಪ–ಕಾಣಿಕೆಯ ರೂಪದಲ್ಲಿ ತಪ್ಪದೆ ಒಪ್ಪಿಸುತ್ತಿದ್ದನು. ಆದರೆ ಈಗ ತಾನು ಸ್ವತಂತ್ರ ಸುಲ್ತಾನನೆಂದು ಅಹಂಕಾರದಲ್ಲಿ ಬಿದ್ದಿದ್ದಾನೆ. ಪಾಲನ್‌ಪುರದ ಸುತ್ತಮುತ್ತ ಪಿತೂರಿಗಳನ್ನು ತಮ್ಮ ವಿರುದ್ಧ ನಡೆಸುತ್ತಿದ್ದಾನೆ" ಎಂದು ಬಾದಷಹನಿಗೆ ತಿಳಿಸಿದನು.

ಬಹಲೂಲ್ ಲೋಧಿಯ ಮೇಲೆ ಸೈನಿಕ ಕ್ರಮ:

ಈ ವಿಚಾರವನ್ನು ತಿಳಿದ ತಕ್ಷಣ ಸುಲ್ತಾನ್ ಘಿಯಾಸುದ್ದೀನನು ಚಂದೇರಿಯ ಶಾಸಕನಾದ ಶೇರಖಾನ್‌ಬಿನ್ ಮುಜಫ್ಫರಖಾನನಿಗೆ ಪತ್ರವನ್ನು ಬರೆದು ತಿಳಿಸಿತ್ತಿದ್ದೇನೆಂದರೆ– ಭಲಿಯಾ ಮತ್ತು ಸಾರಂಗಪುರದ ಸೈನ್ಯವನ್ನು ತೆಗೆದುಕೊಂಡು ಸುಲ್ತಾನ್ ಬಹಲೂಲ್ ಲೋಧಿಯ ಮೇಲೆ ಆಕ್ರಮಣವನ್ನು ಮಾಡಿ ಆತನನ್ನು ಅಡಗಿಸಲು ತಕ್ಷಣ ಹೊರಡಬೇಕೆಂದು ಆಜ್ಞಾಪಿಸಿದನು. ಷಾಹಿ ಆಜ್ಞೆಯನ್ನು ಸ್ವೀಕರಿಸಿದ ತಕ್ಷಣ ಶೇರಖಾನ್‌ನು ಸೈನ್ಯವನ್ನು ತೆಗೆದುಕೊಂಡು ಬಯಾನ ಪ್ರದೇಶದತ್ತ ಹೊರಟನು.

ಬಹಲೂಲ್‌ನು ಪರಾರಿಯಾದನು:

ಸುಲ್ತಾನ್ ಬಹಲೂಲ್‌ನ ಹತ್ತಿರ ಶೇರಖಾನನನ್ನು ಎದುರಿಸುವಷ್ಟು ಸಾಮರ್ಥ್ಯವಿರಲಿಲ್ಲ. ಈ ಕಾರಣದಿಂದಾಗಿ ಬಹಲೂಲ್‌ನು ಬಯಾನಾದಿಂದ ಹೊರಟು ದೆಹಲಿಯತ್ತ ಓಡಿದನು. ಶೇರಖಾನ್‌ನು ಆತನನ್ನು ಹಿಂಬಾಲಿಸಿ ದೆಹಲಿಯತ್ತ ಹೋದನು. ಈ ಪರಿಸ್ಥಿತಿಯನ್ನು ಕಂಡ ಬಹಲೂಲ್‌ನು ಸಂಧಿ ಒಪ್ಪಂದವನ್ನು ಮಾಡಿಕೊಳ್ಳಲು ಮುಂದಾದನು. ಶೇರಖಾನ್‌ನಿಗೆ ಕಪ್ಪ–ಕಾಣಿಕೆಗಳನ್ನು ಅರ್ಪಿಸಿ ಕ್ಷಮೆಯಾಚಿಸಿ ಅವರನ್ನು ವಾಪಸ್ಸ ಕಳುಹಿಸಿಕೊಟ್ಟನು. ಶೇರಖಾನ್‌ನು ಪಾಲನ್‌ಪುರವನ್ನು ಇನ್ನಷ್ಟು ಪ್ರಗತಿಗೊಳಿಸಿ ಅಲ್ಲಿನ ಅನೇಕ ಬೇಡಿಕೆಗಳನ್ನು ಪೂರೈಸಿ ಜನೋಪಯೋಗಿ ಕಾರ್ಯಗಳನ್ನು ಮಾಡಿಸಿ ಚಂದೇರಿಗೆ ವಾಪಸ್ಸಾದನು.

ದುರದೃಷ್ಟದ ಪರಿಣಾಮ:

ನಿಜಾಮುದ್ದೀನ್ ಅಹಮ್ಮದ ಬದ್‌ಖಶಿ ಎಂಬುವರ ಇತಿಹಾಸ ಗ್ರಂಥದಲ್ಲಿ ಬರೆದಿರುವಂತೆ ಪಾಲನಪುರ ಮತ್ತು ಖಿಲ್ಜಿ ಸಾಮಾಜ್ಯದ ಪತನಕ್ಕೆ ಕಾರಣ ಅವರ ಕೆಲವು ಗ್ರಹಗತಿಗಳು ಸರಿಯಾಗಿಲ್ಲದಿದ್ದುದೇ ಅಗಿತ್ತೆಂದು ತಿಳಿದು ಬರುತ್ತದೆ. ಈ ಕಾರಣದಿಂದಾಗಿ ಖಿಲ್ಜಿ ಸಾಮ್ರಾಜ್ಯ ಭಯಾನಕ ಅಲ್ಲೋಲ ಕಲ್ಲೋಲಗಳು ಉಂಟಾದವು.

ಇದರಿಂದಾಗಿ ಪಾಲನ್‌ಪುರ ಮತ್ತು ಬಹಲೂನ್ ಲೋಧಿಯ ಪತನಕ್ಕೆ ಕಾರಣಗಳೆಂದು ನಂಬಿಕೆ ಇದೆ.

ಶೇಖಸಾದುಲ್ಲಾಹ್ ಲಾರಿ ಮರಣ:

ಹಿಜರಿ ಶಕೆ ೯೦೨ ಜಮಾದಿಲ್ ಆಖರ್ ತಿಂಗಳ ಹನ್ನೊಂದನೆ ದಿನಾಂಕದಂದು ಒಬ್ಬ ಪ್ರಸಿದ್ದ ವಿದ್ವಾಂಸರಾದ ಶೇಖಸಾದುಲ್ಲಾಹ್ ಲಾರಿ ಮಾಂಡವಿಯವರು ದೈವಾಧೀನರಾದರು. ಅವರನ್ನು ಸುಲ್ತಾನ ಮಹಮೂದಖಿಲ್ಜಿಯ ಗುಂಬಜಿನ ಪಕ್ಕದಲ್ಲೇ ದಫನ್ ಮಾಡಲಾಯಿತು.

ಶಹಜಾದ್ (ರಾಜಕುಮಾರ)ರ ವಿರೋಧ:

ಹಿಜರಿ ೯೦೩ ರಲ್ಲಿ ಸುಲ್ತಾನ್ ಘಿಯಾಸುದ್ದೀನನ ಆರೋಗ್ಯ ಕೆಟ್ಟಿತ್ತು. ವೃದ್ಧಾಪ್ಯದ ಕಾರಣದಿಂದಾಗಿ ಅವನು ತುಂಬಾ ನಿಶಕ್ತನಾಗಿದ್ದನು. ತಂದೆಯ ಈ ಪರಿಸ್ಥಿತಿಯನ್ನು ಕಂಡ ಶಹಜಾದರಲ್ಲಿ ತೀವ್ರ ದ್ವೇಷಾಸೂಯೆಗಳು ಬೆಳೆದವು. ಒಂದು ಕಡೆ ಶಹಜಾದ ನಾಸಿರುದ್ದೀನನಿದ್ದರೆ ಮತ್ತೊಂದು ಪಕ್ಷದಲ್ಲಿ ಶಹಜಾದ ಶುಜಾಅತ್‌ಖಾನ್-ಅಲ್-ಮಾರೂಫ್-ಬ-ಅಲ್ಲಾವುದ್ದೀನನು ಇದ್ದನು. ಇವರಿಬ್ಬರ ರಾಜ ಮಾತೆಯಾಗಿದ್ದ, ರಾಜಬಿಕ್ಲಾನನ ಮಗಳಾದ ರಾಣಿ ಖುರ್‌ಶೀದ್ ಎಂಬುವಳು ತನ್ನ ಮಗನಾದ ಶಹಜಾದ ಶುಜಾಅತ್‌ನ ಪಕ್ಷದಲ್ಲಿದ್ದಳು. ದರಬಾರಿನ ಎಲ್ಲ ಅಮೀರರುಗಳನ್ನು ಶುಜಾಅತ್‌ಖಾನನ ಪಕ್ಷವಹಿಸುವಂತೆ ಮಾಡಿದಳು.

ಷಹಜಾದ ನಾಸಿರುದ್ದೀನನು ಪರಾರಿ:

ರಾಣಿ ಖುರ್‌ಶೀದಳು ಬಾದಷಹನನ್ನು ಒಪ್ಪಿಸಿಕೊಂಡು ನಾಸಿರುದ್ದೀನನನ್ನು ವಿರೋಧಿಸುವಂತೆ ವ್ಯವಸ್ಥೆ ಮಾಡಿದಳು. ಈ ಕಾರಣದಿಂದಾಗಿ ಬಾದಷಹನು ತನ್ನ ಮಗನಾದ ನಾಸಿರುದ್ದೀನನನ್ನು ಬಂಧಿಸಿ ಸೆರೆಯಲ್ಲಿಡಲು ಆಜ್ಞಾಪಿಸಿದನು. ಈ ವಿಚಾರ ತಿಳಿದ ನಾಸಿರುದ್ದೀನನು ಹಿಜರಿ ೯೦೫ರಲ್ಲಿ ಮಾಂಡು ನಗರವನ್ನು ಬಿಟ್ಟು ಓಡಿಹೋದನು.

ನಾಸಿರುದ್ದೀನನ ಕೊಲೆಯ ಸಂಚು:

ಶಹಜಾದ ನಾಸಿರುದ್ದೀನನ ಎಲ್ಲ ಸಾಮಾನು-ಸರಂಜಾಮುಗಳನ್ನು ಶಹಜಾದ ಶುಜಾಅತ್‌ನು ತನ್ನ ವಶಕ್ಕೆ ತೆಗೆದುಕೊಂಡನು. ಇಷ್ಟಕ್ಕೆ ಸುಮ್ಮನಾಗದೆ ಆತನನ್ನು ಕೊಲೆಮಾಡಿಸುವ ಸಂಚಿನಲ್ಲಿದ್ದನು. ಇದನ್ನು ತಿಳಿದ ನಾಸಿರುದ್ದೀನನು ಓಡಿ ಪರರಾಜ್ಯದಲ್ಲಿ ಆಶ್ರಯವನ್ನು ಪಡೆದನು. ಅಲ್ಲಿ ಆತನ ಪಕ್ಷದವರು ಆತನಿಗೆ ಪೂರ್ಣ ಸಹಕಾರವನ್ನು ನೀಡಿದರು. ಇದರಿಂದಾಗಿ ಆತನು ತನ್ನ ಶಕ್ತಿಯನ್ನು ಬಲಪಡಿಸಿಕೊಂಡನು.

ನಾಸಿರುದ್ದೀನನು ಮಾಂಡುವಿನಲ್ಲಿ:

ನಾಸಿರುದ್ದೀನನು ತನ್ನ ಸೈನ್ಯಶಕ್ತಿಯನ್ನು ಬಲಪಡಿಸಿಕೊಂಡು ಮಾಂಡುವಿಗೆ ಬಂದು ಅದನ್ನು ಸುತ್ತುವರಿದನು. ಇತ್ತ ಮಾಂಡುವಿನಲ್ಲಿದ್ದ ಶಹಜಾದ ಸುಜಾಅತ್‌ನು ತನ್ನ ಪಕ್ಷದ ವಜೀರರ ರಕ್ಷಣೆಯಲ್ಲಿದವನೂ ಸಹ ಸೈನಿಕ ಶಕ್ತಿಯನ್ನು ತರಬೇತಿಗೊಳಿಸಿಕೊಂಡನು. ಅರಮನೆಯಲ್ಲೂ ನಾಸಿರುದ್ದೀನನ ಪಕ್ಷದವರು ಗುಪ್ತ ರೀತಿಯಲ್ಲಿದ್ದುಕೊಂಡು ಇದ್ದಕ್ಕಿದ್ದಂತೆ ಮಾಂಡು ಕೋಟೆಯ ಬಾಗಿಲನ್ನು ತೆರೆದುಬಿಟ್ಟರು. ತಕ್ಷಣ ನಾಸಿರುದ್ದೀನನು ಕೋಟೆಯ ಒಳಗೆ ಪ್ರವೇಶಿಸಿದನು.

ಶುಜಾಅತ್‌ಖಾನನ ಸಮೇತ ಆತನ ಎಲ್ಲ ಮಕ್ಕಳ ಕೊಲೆ:

ಶಹಜಾದ ಶುಜಾಅತ್‌ಖಾನನು ಕೋಟೆಯ ರಕ್ಷಣೆಯಲ್ಲಿ ನಿರತನಾಗಿದ್ದನು. ಆತನು ಓಡಿಬಂದು ತಂದೆಯಾದ ಘಿಯಾಸುದ್ದೀನನ ಅರಮನೆಯಲ್ಲಿ ಆಶ್ರಯವನ್ನು ಪಡೆದನು. ನಾಸಿರುದ್ದೀನನು ಬಹಳ ಕಠಿಣವಾದ ದುರ್ವರ್ತನೆಯನ್ನೇ ಪ್ರಕಟಿಸಿದನು. ತನ್ನ ಸೈನ್ಯದ ಒಂದು ಗುಂಪನ್ನು ತನ್ನ ತಾಯಿಯಾದ ರಾಣಿ ಖುರ್‌ಶೀದಳನ್ನೂ, ಶಹಜಾದ ಶುಜಾಅತ್‌ನನ್ನು ಬಂಧಿಸಲು ನೇಮಿಸಿದನು. ಅವರೆಲ್ಲರೂ ಬಂಧಿಸಲ್ಪಟ್ಟರು. ಶುಜಾಅತ್‌ಖಾನನ ಸಮೇತ ಆತನ ಮಕ್ಕಳೆಲ್ಲರನ್ನೂ ನಿರ್ದಯವಾಗಿ ಕೊಂದನು. ಇದಾದ ನಂತರ ನಾಸಿರುದ್ದೀನನು ನಿಯಮಾನುಸಾರ ಬಾದಷಹನೆಂದು ಘೋಷಿಸಿಕೊಂಡು ಶಾಸನವನ್ನು ಮಾಡಲು ಆರಂಭಿಸಿದನು.

ಸುಲ್ತಾನ ಘಿಯಾಸುದ್ದೀನನ ಮರಣ:

ಸುಲ್ತಾನ ಘಿಯಾಸುದ್ದೀನನು ಮೊದಲೇ ಶಾಸನದ ಹಕ್ಕುಗಳನ್ನು ಬೇರೆಯವರಿಗೆ ವಹಿಸಿ ತಾನು ಭೋಗವಿಲಾಸದಲ್ಲಿ ಸಂಪೂರ್ಣವಾಗಿ ಮುಳುಗಿದ್ದನ್ನು ನಾವು ಹಿಂದಿನ ಸಂಪುಟಗಳಲ್ಲಿ ಓದಿದ್ದೇವೆ. ಅನಾರೋಗ್ಯದಿಂದ ಬಳಲುತ್ತಿದ್ದ ವೃದ್ಧ ಸುಲ್ತಾನ ಘಿಯಾಸುದ್ದೀನನಿಗೆ ಅರಮನೆಯಲ್ಲಿ ನಡೆದ ವಿಪ್ಲವದಿಂದ ಇನ್ನೊಂದು, ಆತನೂ ಮರಣಹೊಂದಿದನು. ಹೇಳಲ್ಪಡುವುದೇನೆಂದರೆ ನಾಸಿರುದ್ದೀನನು ತನ್ನ ತಂದೆಗೆ ವಿಷಪ್ರಾಶನವನ್ನು ಮಾಡಿಸಿದ್ದನೆಂದು, ಈ ಕಾರಣಗಳಿಂದಾಗಿ ನಾಸಿರುದ್ದೀನನು ತನ್ನ ಹೀನ ಚಾರಿತ್ರಕ್ಕೆ ಇತಿಹಾಸದಲ್ಲಿ ಹೆಸರಾಗಿದ್ದಾನೆ.

ಸುಲ್ತಾನ ಘಿಯಾಸುದ್ದೀನ ಖಿಲ್ಜಿಯು (೩೩) ಮೂವತ್ಮೂರು ವರ್ಷಗಳ ಆಡಳಿತವನ್ನು ನಡೆಸಿದ್ದನು.

■

*

೩. ಸುಲ್ತಾನ ನಾಸಿರುದ್ದೀನ ಬಿನ ಸುಲ್ತಾನ ಘಿಯಾಸುದ್ದೀನ ಖಿಲ್ಜಿ

ಜನ್ಮ :

ನಾಸಿರುದ್ದೀನನು ಹುಟ್ಟಿದ ದಿನದಂದು ಅವನ ತಾತನಾದ ಮಹಮೂದ ಖಿಲ್ಜಿಯು ಮುಪ್ಪಿನ ಬಂಧನದಲ್ಲಿ ಬಂಧಿತನಾಗಿದ್ದನು. ಈತನ ಜನ್ಮದಿಂದಾಗಿ ಮಹಮೂದ ಖಿಲ್ಜಿಯು ತುಂಬಾ ಸಂತೋಷಪಟ್ಟಿದ್ದನು. ಆತನು ತನ್ನ ಪೌತ್ರನ ಜನ್ಮದ ಸಂತೋಷದಲ್ಲಿ ಒಂದು ದೊಡ್ಡ ಸಂತೋಷಕೂಟವನ್ನೇರ್ಪಡಿಸಿದ್ದನು. ಆ ಸಂತೋಷಕೂಟವು ಒಂದು ತಿಂಗಳ ತನಕ ನಡೆದಿತ್ತು. ಮಹಮೂದ ಖಿಲ್ಜಿಗೆ ನಾಸಿರುದ್ದೀನನು ನಾಲ್ಕನೇ ಮೊಮ್ಮಗನಾಗಿದ್ದನು. ಅಲ್ಲಾಹನಲ್ಲಿ ಈತನ ಶ್ರೇಯಸ್ಸಿಗೆ ತುಂಬಾ ಪ್ರಾರ್ಥಿಸಿದ್ದನು. ಆತನು ಎಲ್ಲಾ ಪ್ರಜೆಗಳಿಗೆ, ವಿದ್ವಾಂಸರಿಗೆ ಅನೇಕ ರೀತಿಯ ಬಹುಮೂಲ್ಯ ಬಹುಮಾನಗಳನ್ನು ನೀಡಿ ಗೌರವಿಸಿದ್ದನು.

ಬಾಲ್ಯದ ಪರಿಸ್ಥಿತಿಗಳು:

ಜ್ಯೋತಿಷಿಗಳು ನವಜಾತ ಶಿಶುವಿನ ಬಗ್ಗೆ ಭವಿಷ್ಯವನ್ನು ನುಡಿಯುತ್ತ ಆತನ ಜೀವನದ ದಿನಗಳು ಉಜ್ವಲವಾಗಿರತ್ತವೆಂದು ನುಡಿದಿದ್ದರು. ಏಳನೆಯ ದಿನದಂದು ಸುಲ್ತಾನ್ ಮಹಮೂದ ಖಿಲ್ಜಿಯು ಆ ಮಗುವನ್ನು ತನ್ನ ಮಡಿಲಿಗೆ ಹಾಕಿಸಿಕೊಂಡು ವೃದ್ಧಬುದ್ಧಿಜೀವಿಗಳ, ಸಂತರ ಸೇವೆಯಲ್ಲಿ ಬಂದಿದ್ದನು. ಆ ಸಂದರ್ಭದಲ್ಲಿ ಮಗುವನ್ನು ಅಬ್ದುಲ್‌ಖಾದರ್ ಎಂದು ನಾಮಕರಣವನ್ನು ಮಾಡಿದರು. ಮಗು ಬೆಳೆದು ಯುವಕನಾದಾಗ ಸುಲ್ತಾನ್ ಘಿಯಾಸುದ್ದೀನನು ಯುವರಾಜಕುಮಾರನನ್ನು ಪಟ್ಟಕ್ಕೇರಿಸಿ ಮಂತ್ರಿ ಪದವಿಯನ್ನು ನೀಡಿದ್ದನು. ಬಾಲ್ಯದಿಂದ ಹಿಡಿದು ಯೌವ್ವನಕ್ಕೆ ತಲುಪವವರೆಗೂ ನಾಸಿರುದ್ದೀನನ ಪೋಷಣೆ ತುಂಬಾ ಉನ್ನತ ಮಟ್ಟದಲ್ಲೇ ನಡೆದಿತ್ತು.

ಶುಜಾಅತ್‌ಖಾನನ ವಿರೋಧ:

ನಾಸಿರುದ್ದೀನನ ಕಿರಿಯ ಸಹೋದರನಾದ ಶುಜಾಅತ್‌ನು ಬಾಹ್ಯದಲ್ಲಿ ಅಣ್ಣನ ಆಜ್ಞಾನುಸಾರಿಯಾಗಿಯೇ ಬೆಳೆದ. ಆದರೆ ಆಂತರ್ಯದಲ್ಲಿ ನಾಸಿರುದ್ದೀನನ ವಿರೋಧಿಯೇ ಆಗಿದ್ದ. ಈ ಸಂಬಂಧದಲ್ಲಿ ಪ್ರತಿಕ್ಷಣದಲ್ಲೂ ಅಣ್ಣನನ್ನು ವಿರೋಧಿಸುವ ಕ್ಷಣಗಳನ್ನು ಹುಡುಕುತ್ತಲೇ ಇದ್ದ.

ಘಿಯಾಸುದ್ದೀನನಿಗೆ ದೂರು:

ಸುಲ್ತಾನ್ ಘಿಯಾಸುದ್ದೀನನ ಶಾಸನ ಕಾಲದಲ್ಲಿ (ಕೊನೆಗಾಲದಲ್ಲಿ) ಒಂದುದಿನ ಷಹಜಾದ ಶುಜಾಅತ್‌ಖಾನನು ಬಾದಷಹನಲ್ಲಿ ಹೇಳಿದ್ದೇನೆಂದರೆ – ನಾಸಿರುದ್ದೀನನು ಇತ್ತೀಚೆಗೆ ತನ್ನ ಚಾರಿತ್ರ್ಯವನ್ನೇ ಬದಲಾಯಿಸಿಕೊಂಡು ಬೇರೊಂದು ರೂಪದಲ್ಲಿದ್ದಾನೆ. ಆತನು ದುಷ್ಟರ, ನೀಚರ ಒಂದು ಗುಂಪನ್ನೇ ರಚಿಸಿಕೊಂಡಿದ್ದಾನೆ. ಈಗಾಗಲೇ ಶಾಸನವನ್ನು ತನ್ನ ಕೈವಶ ಮಾಡಿಕೊಳ್ಳಲು ಹವಣಿಸುತ್ತಿದ್ದಾನೆ. ಆತನು ತಮ್ಮನ್ನೇ ಪದಚ್ಯುತಿಗೊಳಿಸಿ ಬಾದಷಹನಾಗಬೇಕೆಂದಿದ್ದಾನೆ. ತಾವು ಆತನನ್ನು ಈಗಲೇ ಸರಿಪಡಿಸದಿದ್ದರೆ ಪರಿಣಾಮಗಳು ಕೆಟ್ಟದಾಗುದರಲ್ಲಿ ಸಂದೇಹವಿಲ್ಲ ಎಂದನು.

ಘಿಯಾಸುದ್ದೀನನ ಕ್ರಮ:

ಇದನ್ನು ಕೇಳಿದ ಘಿಯಾಸುದ್ದೀನನು ತುಂಬಾ ಕ್ರೋಧಿತನಾದನು. ಷಹಜಾದ ನಾಸಿರುದ್ದೀನನನ್ನು ಬಂಧಿಸಲು ಚಿಂತಿಸಿದನು. ಆದರೆ ಅಂತಹ ಪರಿಸ್ಥಿತಿ ಒದಗಿ ಬರಲಿಲ್ಲ. ಘಿಯಾಸುದ್ದೀನನು ಷಹಜಾದನನ್ನು ಪ್ರೇಮದಿಂದಲೇ ವರ್ತಿಸಿ ಪರಿವರ್ತನೆಗೊಳಿಸಲು ಪ್ರಯತ್ನಿಸಿದನು. ಬಾದಷಹನು ನಾಸಿರುದ್ದೀನನಿಗೆ ನೀಡಿದ್ದ ಜಾಗೀರಿ ಪ್ರದೇಶವನ್ನು ಪ್ರಗತಿಗೊಳಿಸಲು ಸಹಾಯವನ್ನು ಮಾಡಿದನು. ಆತನ ಜಾಗೀರಿಯ ಮುಖ್ಯ ಆಡಳಿತಗಾರನಿಗೆ ಎಲ್ಲ ಅಮೀರರೊಂದಿಗೆ, ಸೈನಿಕ ಸರದಾರರೊಂದಿಗೆ ಎಲ್ಲರೂ ಸೇರಿಕೊಂಡು ನಾಸಿರುದ್ದೀನನ ನಿವಾಸಕ್ಕೆ ಪ್ರತಿನಿತ್ಯ ಒಮ್ಮೆಯಾದರೂ ಬಂದು ಭೇಟಿ ಮಾಡಬೇಕೆಂದು ಆಜ್ಞಾಪಿಸಿದ್ದನು.

ನಾಸಿರುದ್ದೀನನ ಶಕ್ತಿಯ ಪ್ರಗತಿ:

ಈ ಪರಿಸ್ಥಿತಿಗಳಿಂದಾಗಿ ಷಹಜಾದನ ಶಕ್ತಿ ಸಾಮರ್ಥ್ಯಗಳು ವೃದ್ಧಿಯಾದವು. ಆತನು ಸಾಮ್ರಾಜ್ಯದ ಎಲ್ಲ ಚಟುವಟಿಕೆಗಳ ಬಗ್ಗೆ ಹೆಚ್ಚು ಕುತೂಹಲವನ್ನು ಬೆಳೆಸಿಕೊಂಡು, ಎಲ್ಲ ವಿಚಾರಗಳಲ್ಲೂ ಪಾಲ್ಗೊಳ್ಳುತ್ತಿದ್ದನು. ಆತನು ಎಲ್ಲ ಕಡೆಗಳಲ್ಲೂ ಲೆಕ್ಕಪತ್ರಗಳನ್ನಿಡಲು ತನ್ನ ಗುಮಾಸ್ತರುಗಳನ್ನು ನೇಮಕ ಮಾಡಿದನು. ಖಾಸಾಪರಗಣಗಳಲ್ಲಿ ನೇಮಕರಾಗಿದ್ದ ಅಮಾಲ್ ಮೋಲಿಖಾನ ಮತ್ತು ಮಖನ್‌ಖಾನರನ್ನು ಪದಚ್ಯುತಿಗೊಳಿಸಿ ಆ ಜಾಗಗಳಲ್ಲಿ ಶೇಖ್ ಹಬೀಬ್ ಅಲ್ಲಾಹ ಮತ್ತು ಖ್ವಾಜಾ ಸಮೀಲರನ್ನು ನೇಮಕ ಮಾಡಿದನು.

ರಾಣಿ ಖುರ್‌ಶೀದಳ ರೋಷ:

ರಾಣಿ ಖುರ್‌ಶೀದ್‌ಳಿಗೆ ತನ್ನ ಕಿರಿಯ ಮಗನಾದ ಸುಜಾಅತ್‌ಖಾನನ ಮೇಲೆ ಅತೀವ ಪ್ರೀತಿಯನ್ನಿಟ್ಟಿದ್ದಳು. ಹಿರಿಯ ಮಗನ ಮೇಲೆ ಯಾವಾಗಲೂ ಒಂದು ರೀತಿಯ ಸಿಟ್ಟನ್ನೇ ಪ್ರಕಟಿಸುತ್ತಿದ್ದಳು. ಒಂದು ದಿನ ರಾಣಿ ಖುರ್‌ಶೀದ್‌ಳು ಸುಜಾಅತ್‌ಖಾನನ ಮಾತನ್ನು ಕೇಳಿ ಸುಲ್ತಾನ್ ಘಿಯಾಸುದ್ದೀನನಿಗೆ ಹೇಳಿದಳು– ಮಹಮೂದ್ ಕೋತ್ವಾಲನೂ ಸೊಂದಾಸನೂ ಬಹಳ ವಿದ್ರೋಹಿಗಳಾಗಿದ್ದಾರೆ. ಇವರಿಬ್ಬರೂ ಷಹಜಾದ ನಾಸಿರುದ್ದೀನನ ಮಿತ್ರರಾಗಿದ್ದಾರೆ. ಅವರ ಹೃದಯಗಳಲ್ಲಿ ಅಪಾಯಕಾರಿ ವಿಷ ತುಂಬಿದೆ ಎಂದು ಚಾಡಿ ಹೇಳಿದಳು.

ಮಹಮೂದ್ ಕೊತ್ವಾಲನ ಕೊಲೆ:

ಘಿಯಾಸುದ್ದೀನನು ಸ್ತ್ರೀಯರಲ್ಲೇ ಹೆಚ್ಚು ಕಾಲ ಕಳೆಯುತ್ತಿದ್ದು, ಅವರ ಮಾತುಗಳ ಬಲೆಗೆ ಬೇಗ ಬಿದ್ದುಬಿಡುತ್ತಿದ್ದನು. ಅವರ ಪ್ರತಿಯೊಂದು ಮಾತು ಸತ್ಯವೆಂದು ತಿಳಿಯುತ್ತಿದ್ದನು. ಅಂತೆಯೇ ರಾಣಿ ಖುರ್‌ಶೀದ್‌ಳ ಮಾತನ್ನು ಸತ್ಯವೆಂದು ನಂಬಿದ್ದನು. ಅವಳ ಮಾತನ್ನು ಕೇಳಿದ ತಕ್ಷಣ ಮಹಮೂದ್ ಕೊತ್ವಾಲನನ್ನು, ಸೊಂದಸನನ್ನು ಕೊಲೆಮಾಡಲು ಆಜ್ಞಾಪಿಸಿದನು. ಅವರಿಬ್ಬರ ಮನೆಗಳನ್ನು ನಾಶಪಡಿಸಲು ಹೇಳಿದನು. ಈ ಘಟನೆಯನ್ನು ಕೇಳಿದ ನಾಸಿರುದ್ದೀನನು ತುಂಬಾ ದುಃಖಪಟ್ಟನು. ಇದರಿಂದಾಗಿ ಷಾಹಿ ಅರಮನೆಗೆ ಬಂದುಹೋಗುವುದನ್ನೂ ನಿಲ್ಲಿಸಿಬಿಟ್ಟನು. ಬಾದಷಹರ ದರಬಾರಿನಲ್ಲಿ ನಡೆಯುತ್ತಿದ್ದ "ಸಲಾಂ" ಕಾರ್ಯಕ್ರಮದಲ್ಲೂ ಭಾಗವಹಿಸುತ್ತಿರಲಿಲ್ಲ.

ರಾಣಿ ಖುರ್‌ಶೀದ್ ಮತ್ತು ಷಹಜಾದ ಸುಜಾಅತ್‌ಖಾನನ ಹೊಸ ಪಿತೂರಿ:

ಅಲ್ಲಿಂದ ಮುಂದೆ ಇವರಿಬ್ಬರೂ ಸೇರಿ ಒಂದು ಹೊಸ ಪಿತೂರಿಯನ್ನು ಹೆಣೆದರು. ಪದಚ್ಯುತರಾಗಿದ್ದ ಆಮಾಲ್‌ಮಕ್ಕನ್‌ಖಾನ್ ಮತ್ತು ಮೋಲಿಖಾನ್‌ರನ್ನು ತಮ್ಮ ಪಕ್ಷಕ್ಕೆ ಸೇರಿಸಿಕೊಂಡು ಅವರಿಬ್ಬರಿಂದ ನಾಸಿರುದ್ದೀನನ ವಿರುದ್ಧ ಬಾದಷಹರಲ್ಲಿ ಚಾಡಿ ಹೇಳಿಸಲು ಪ್ರಾರಂಭಿಸಿದರು. ತಾಯಿ ಮಗ ಇಬ್ಬರೂ ಸಾಮ್ರಾಜ್ಯದ ಆಡಳಿತದ ಮತ್ತು ಸಂಪತ್ತಿನ ವಿಷಯಗಳಲ್ಲಿ ಎಲ್ಲ ವಿಚಾರಗಳಲ್ಲೂ ಮೂಗು ತೂರಿಸಲಾರಂಭಿಸಿದರು. ಹೀಗೆ ಬೆಳೆಯುತ್ತಾ ಷಾಹಿ ಖಜಾನೆಯ ಹಿಡಿತವನ್ನು ತಮ್ಮ ವಶಕ್ಕೆ ಪಡೆದುಕೊಂಡರು.

ಮೌಲಾಖಾನ್ ಬಖಾಲನ ಕೊಲೆ:

ಮೌಲಾಖಾನ್ ಬಖಾಲನು ಪಿತೂರಿ ವಿದ್ರೋಹಗಳನ್ನು ಹೆಣೆಯುದರಲ್ಲಿ ಪ್ರವೀಣನೆಂಬ ವಿಚಾರವು ಶೇಖ್ ಹಬೀಬಲ್ಲಾಹ್ ಮತ್ತು ಸಮೀಲ್ ಖ್ವಾಜಾ ಸರಾ ಎಂಬುವವರಿಗೆ ಚನ್ನಾಗಿ ಗೊತ್ತಿತ್ತು. ಇವರು ಆತನ ತಲೆಯನ್ನು ಕಡಿದು ಹಾಕಿದರು. ರಾಣಿ ಖುರ್‌ಶೀದ್‌ಳು ಈ ಘಟನೆಯನ್ನು ಬೆಳೆಸಿ ಅದಕ್ಕೆ ಉಪ್ಪುಖಾರಗಳನ್ನು ಬೆರಸಿ

ಬಾದಷಹರ ಮುಂದೆ ವರ್ಣಿಸಿದಳು. ಬಾದಷಹನು ತಕ್ಷಣ ಮಕ್ಕನ್‌ಖಾನನಿಗೆ ಆದೇಶಿಸಿದ್ದೇನೆಂದರೆ– ಷಹಜಾದ ನಾಸೀರ್‌ಖಾನ್‌ನ ಮನೆಯಿಂದ ಶೇಖ್ ಹಬೀಬಲ್ಲಾಹ ಮತ್ತು ಸಮೀಲ್ ಖ್ವಾಜಾರನ್ನು ಸೆರೆಹಿಡಿದು ತರಲು ಕಳುಹಿಸಿದನು. ಅದರ ಜೊತೆಯಲ್ಲಿಯೇ ಸೆರೆಹಿಡಿದು ತರುವ ಸಂದರ್ಭದಲ್ಲಿ ನಾಸಿರುದ್ದೀನನ ಮರ್ಯಾದೆಗೆ ಯಾವ ರೀತಿಯಲ್ಲೂ ಭಂಗ ಬರದಂತೆ ಎಚ್ಚರಿಕೆ ವಹಿಸಬೇಕೆಂದು ಆದೇಶಿಸಿದನು. ಆತನ ಗೌರವಕ್ಕೆ ಯಾವುದೇ ರೀತಿಯ ಧಕ್ಕೆಯಾಗಬಾರದೆಂದು ಆಜ್ಞಾಪಿಸಿದ್ದನು. ಹಾಗೇನಾದರೂ ಆದರೆ ಷಹಜಾದ ನಾಸಿರುದ್ದೀನನು ಯುವರಾಜಕುಮಾರ ಹಾಗೂ ಉತ್ತರಾಧಿಕಾರಿಯ ಅಪಮಾನವನ್ನು ಬಾದಷಹರೇ ಮಾಡಿಸಿದ್ದಾರೆಂಬ ಮಾತು ಬರಬಹುದು ಎಂದು ಎಚ್ಚರಿಸಿದ್ದನು.

ಶೇಖ್ ಹಬೀಬುಲ್ಲಾಹ ಮತ್ತು ಖ್ವಾಜಾ ಸಮೀಲ್‌ರು ಪರಾರಿ:

ಹೇಗೋ ತಮ್ಮ ಕೊಲೆಯ ಬಂಧನದ ವಿಚಾರವನ್ನು ತಿಳಿದ ಶೇಖ್ ಹಬೀಬಲ್ಲಾಹ ಮತ್ತು ಖ್ವಾಜಾ ಸಮೀಲ್‌ರು ನಾಸಿರುದ್ದೀನನ ಮನೆಯಿಂದ ಹೊರಟು ಕಾಡಿನ ಕಡೆಗೆ ಓಡಿಹೋದರು. ದಾರಿಯಲ್ಲಿ ಇವರಿಬ್ಬರೂ ಹೀಗೆ ಜೋರಾಗಿ ಹೇಳುತ್ತಾ ಹೋಗುತ್ತಿದ್ದುದೇನೆಂದರೆ "ನಾವು ಖಾಜಿಯಖಾನ್ (ಗೋರಿ) ಕಡೆಗೆ ಹೋಗುತ್ತಿದ್ದೇವೆ" ಎನ್ನುತ್ತಾ ನಡೆದರು. ಯಾರಿಗೆ ಮೌಲಾಖಾನನ ಕೊಲೆಯ ಸೇಡು ತೀರಿಸಿಕೊಳ್ಳಬೇಕೆಂದಿರುವಿರೋ ಅವರು ಖಾಜಿಮಕಾನ್ ಹತ್ತಿರ ಬರಲಿ ಎಂದೂ ಕೂಗುತ್ತ ನಡೆಯುತ್ತಿದ್ದರು.

ನಾಸಿರುದ್ದೀನನು ಕೊಲೆಗಡುಕರನ್ನು ಬರಲು ಹೇಳಿದನು:

ಮಖ್ಬನ್‌ಖಾನನು ನಾಸಿರುದ್ದೀನನ ಮನೆಗೆ ಬಂದನು. ತನ್ನ ಒಬ್ಬ ದೂತನನ್ನು ನಾಸಿರುದ್ದೀನನ ಹತ್ತಿರ ಹೀಗೆ ಹೇಳಿ ಕಳುಹಿಸಿದನು "ಮೌಲಾಖಾನನ ಕೊಲೆಗಾರನನ್ನು ನನ್ನ ವಶಕ್ಕೆ ಕಳುಹಿಸಿ" ಎಂದು ಇದಕ್ಕೆ ಉತ್ತರವಾಗಿ ಖ್ವಾಜಾ ಸಮೀಲ್ ಮತ್ತು ಶೇಖ್ ಹಬೀಬಲ್ಲಾರವರು ಮೌಲಾಖಾನನ ಕೊಲೆಯನ್ನು ನನ್ನ ಆಜ್ಞೆಯಂತೆ ಮಾಡಿಲ್ಲ. ಈ ಕೊಲೆಯ ವಿಚಾರವು ನಿಜವಾಗಿಯೂ ನನಗೆ ಗೊತ್ತಿಲ್ಲ. ಈಗ ಇವರಿಬ್ಬರೂ ಎಲ್ಲಿಗೆ ಹೋಗಿದ್ದಾರೆಂಬುದು ನನಗೆ ಗೊತ್ತಿಲ್ಲವೆಂದು ಹೇಳಿಕಳುಹಿಸಿದನು.

ನಾಸಿರುದ್ದೀನನ ಮನೆಯ ಮುತ್ತಿಗೆ:

ಬಾದಷಹನು ಮೊದಲೇ ಹೇಳಿದ್ದೇನೆಂದರೆ ನಾಸಿರುದ್ದೀನನ ಮರ್ಯಾದೆಗೆ ಯಾವ ರೀತಿಯಲ್ಲೂ ಧಕ್ಕೆ ಆಗಬಾರದೆಂದು. ಆದರೆ ರಾಣಿ ಖುರ್‌ಶೀದ್‌ಳ ಅಪ್ಪಣೆಯಂತೆ ಮಖ್ಬನ್‌ಖಾನನು ನಾಸಿರುದ್ದೀನನ ಮನೆಯನ್ನು ಮುತ್ತಿಗೆ ಹಾಕಿಯೇ ಬಿಟ್ಟನು. ಹೀಗೆ ಈ ಮುತ್ತಿಗೆ ಮೂರು ದಿನಗಳತನಕ ನಡೆಯಿತು.

ನಾಸಿರುದ್ದೀನನ ಹೆಸರಿಗೆ ಸುಲ್ತಾನ್ ಘಿಯಾಸುದ್ದೀನನ ಸಂದೇಶ:

ಈ ಸಂದರ್ಭದಲ್ಲಿ ಸುಲ್ತಾನ್ ಘಿಯಾಸುದ್ದೀನನು ತನ್ನ ಕಾಯಿಲೆಯ ಕಾರಣದಿಂದಾಗಿ ತುಂಬ ಬಳಲಿದ್ದನು. ಮಗನನ್ನು ಕುರಿತು ಸಂದೇಶ ಹೀಗಿತ್ತು– "ಮಗನೇ ನನ್ನಿಂದ ನಿನಗೆ ಏನಾದರೂ ತೊಂದರೆಯಾಗಿದ್ದರೆ ಅದನ್ನು ನಿನ್ನ ಮನಸ್ಸಿನಿಂದ ತೆಗೆದುಹಾಕಿಬಿಡು. ನಾನು ಎಷ್ಟೇ ಆದರೂ ನಿನ್ನ ತಂದೆಯಾಗಿದ್ದೇನೆ. ನಮ್ಮಿಬ್ಬರಲ್ಲಿ ಇರುವ ರಕ್ತ ಸಂಬಂಧವೂ ಎಂದೂ ಮರೆಯುವಂತಹದ್ದಲ್ಲ. ನನ್ನ ಮನಸ್ಸಿನಲ್ಲಿ ನಿನ್ನ ಬಗ್ಗೆ ತುಂಬಾ ಪ್ರೀತಿಯಿದೆ. ಈಗ ನಾನು ಬಹಳ ದಿನಗಳ ತನಕ ನಿನ್ನಿಂದ ದೂರವಾಗಿರಲಾರೆ. ನೀನು ಮೊದಲಿನಂತೆಯೇ ನನ್ನ ಹತ್ತಿರವಿರು. ಬೇಗ ಬಂದುಬಿಡು" ಎಂದು ಸಂದೇಶದಲ್ಲಿ ತಿಳಿಸಿದ್ದನು.

ತಂದೆ–ಮಗನಲ್ಲಿ ಸಂಧಿ:

ನಾಸಿರುದ್ದೀನನಿಗೆ ಈ ವಿಚಾರವು ಚೆನ್ನಾಗಿ ಗೊತ್ತಿದ್ದುದೇನೆಂದರೆ ಈ ಪರಿಸ್ಥಿತಿಗಳಲ್ಲಿ ನಾನು ಅರಮನೆಯನ್ನು ಪ್ರವೇಶಿಸಿದರೆ ನನ್ನ ಉಳಿಗಾಲವಿಲ್ಲ ಎಂದು, ಆದರೂ ಆತನು ತನ್ನ ತಂದೆಯುವರನ್ನು ನಿರಾಶೆಗೊಳಿಸಲಿಲ್ಲ. ತಂದೆಯುವರ ಪಾದಸೇವೆಯಲ್ಲಿರಬೇಕೆಂಬ ಹಂಬಲದಿಂದ ಅರಮನೆಗೆ ಹೋದನು. ತಂದೆಮಕ್ಕಳಿಬ್ಬರೂ ಭೇಟಿಯಾದರು. ಅನೇಕ ವಿಚಾರಗಳ ಚರ್ಚೆಗಳಾದವು. ಇಬ್ಬರಲ್ಲೂ ಇದ್ದ ಕಹಿ ವಿಚಾರಗಳು ಮಾಯವಾದವು. ನಾಸಿರುದ್ದೀನನು ತಂದೆಯವರ ಸೇವೆಯಲ್ಲಿ ಮೊದಲಿನಂತೆ ನಿರತನಾದನು. ಸಾಮ್ರಾಜ್ಯದ ಶಾಸನಿಕ ವಿಚಾರಗಳಲ್ಲಿ ಮಗ್ನನಾದನು. ಬಾದಷಹನೂ ಸಹ ಷಾಹಿ ಕೊಡುಗೆಗಳನ್ನು ಮಗನಿಗೆ ಕರುಣಿಸಿದನು.

ರಾಣಿ ಖುರ್‌ಶೀದ್‌ಳ ಮತ್ತೊಂದು ಪಿತೂರಿ:

ನಾಸಿರುದ್ದೀನನು ಷಾಹಿ ಅರಮನೆಯ ಪಕ್ಕದಲ್ಲೇ ಒಂದು ಕಟ್ಟಡವನ್ನು ಕಟ್ಟಿಸಿದನು. ತಾನು ಈ ಕಟ್ಟಡದಲ್ಲಿ ಇದ್ದುಕೊಂಡು ಬಾದಷಹರ ಸೇವೆಗೆ ಅನುಕೂಲವಾಗಲೆಂದು. ರಾಣಿ ಖುರ್‌ಶೀದ್‌ಳು ಈ ಕಟ್ಟಡವನ್ನು ನೋಡಿ ಉರಿದು ಬಿದ್ದಳು. ನಾಸಿರುದ್ದೀನನು ತನ್ನ ಮನೆಯನ್ನು ವಿದ್ರೋಹಕ್ಕೆ ಉಪಯೋಗಿಸಿಕೊಳ್ಳಲು ಬಳಸಬಹುದೆಂದು ಬಾದಷಹನ ಕಿವಿಯನ್ನು ತುಂಬಿದಳು.

ನಾಸಿರುದ್ದೀನ್ ಮತ್ತು ಬಾದಷಹರಲ್ಲಿ ಎರಡನೇ ಬಾರಿಗೆ ವಿರೋಧ:

ಸುಲ್ತಾನ್ ಘಿಯಾಸುದ್ದೀನನು ತನ್ನ ಮುಪ್ಪಿನ ದೌರ್ಬಲ್ಯಗಳಿಂದಾಗಿ ಬುದ್ಧಿಯನ್ನೇ ಕಳೆದುಕೊಂಡಿದ್ದ. ಪುನಃ ತನ್ನ ಹೆಂಡತಿಯ ಮಾತನ್ನು ಕೇಳಿ ಹಿಜರಿ ಶಕೆ ೯೦೫ ರಲ್ಲಿ ಗಾಲಿಬ್‌ಖಾನ್ ಕೊತ್ವಾಲನನ್ನು ಕರೆದು ನಾಸಿರುದ್ದೀನನು ಕಟ್ಟಿಸಿರುವ ಅರಮನೆಯನ್ನು ಸಂಪೂರ್ಣವಾಗಿ ಕೆಡವಿಸಿ ನೆಲಸಮ ಮಾಡಬೇಕೆಂದು

ಆಜ್ಞಾಪಿಸಿದನು. ಈ ವಿಚಾರವನ್ನು ಕೇಳಿದ ನಾಸಿರುದ್ದೀನನು ತುಂಬಾ ದುಃಖಿತನಾದನು. ಆತನು ತನ್ನ ಹೆಂಡತಿ ಮಕ್ಕಳನ್ನು ಕರೆದುಕೊಂಡು ಅರಮನೆಯನ್ನು ತ್ಯಜಿಸಿ "ಧಾರ್" ಎಂಬ ಕಾಡಿನತ್ತ ಹೊರಟು ಹೋದನು. ಶೇಖ್ ಹಬೀಬಲ್ಲಾಹ ಮತ್ತು ಖ್ವಾಜಾ ಸಮೀಲ್‌ರವರು ಕೂಡಾ ಧಾರ್‌ನತ್ತ ಪ್ರಯಾಣಿಸಿ ನಾಸಿರುದ್ದೀನನ ಸೇವೆಯಲ್ಲಿ ನಿರತರಾದರು.

ಶತ್ರುಗಳ ಮತ್ತೊಂದು ಪಿತೂರಿ:

ರಾಣಿ ಖುರ್‌ಶೀದ್ ಮತ್ತು ಷಹಜಾದ ಶುಜಾಅತ್‌ಖಾನ್‌ರಿಬ್ಬರೂ ಸೇರಿಕೊಂಡು ಮತ್ತೊಂದು ದುಷ್ಟ ಯೋಜನೆಯನ್ನು ರಚಿಸಿದರು. ಅವರಿಬ್ಬರೂ ಬಾದಷಹನ ಗಮನಕ್ಕೆ ತರದೆ ತಾತಾರ್‌ಖಾನ್‌ನನ್ನು ಕರೆದು– ನಾಸಿರುದ್ದೀನನನ್ನು ನೀನು ಏನಾದರೂ ಮಾಡಿ ಅವನ ಸ್ನೇಹವನ್ನು ಬೆಳೆಸಿಕೊಂಡು ಆತನನ್ನು ಕಾಡಿನಿಂದ ಪುನಃ ಪಟ್ಟಣಕ್ಕೆ ಕರೆತರಲು ಆಜ್ಞಾಪಿಸಿದಳು. ಇವಳ ಆದೇಶದಂತೆ ತಾತಾರ್‌ಖಾನ್‌ನು ತನ್ನ ಸೈನ್ಯವನ್ನು ಒಂದು ಗುಪ್ತ ಜಾಗದಲ್ಲಿ ಅಡಗಿಸಿಟ್ಟು ತನ್ನ ಆಪ್ತನಾದ ಮಲಿಕ್‌ಫಜ್ಲುಲ್ಲಾ ಮೀರ್ ಎಂಬುವನನ್ನು ಬೇಟೆಯ ನೆಪದಲ್ಲಿ ನಾಸಿರುದ್ದೀನನ ಹತ್ತಿರ ತಲುಪಿದರು.

ನಾಸಿರುದ್ದೀನನನ್ನು ನಾಶಪಡಿಸಲು ತಾತಾರ್‌ಖಾನ್‌ನ ನೇಮಕ:

ನಾಸಿರುದ್ದೀನನು ಸುಲ್ತಾನ್ ಘಿಯಾಸುದ್ದೀನನ ಹೆಸರಿನಲ್ಲಿ ಒಂದು ಪತ್ರವನ್ನು ಬರೆದು ತಾತಾರ್‌ಖಾನ್‌ನ ಕೈಯಲ್ಲಿ ಕೊಟ್ಟು, ಸ್ವತಃ ನೀನೇ ಈ ಪತ್ರವನ್ನು ಬಾದಷಹರ ಮುಂದೆ ಓದಿ ಹೇಳಬೇಕೆಂದು ಆದೇಶಿಸಿದನು. ತಾತಾರ್‌ನು ಈ ಪತ್ರವನ್ನು ತೆಗೆದುಕೊಂಡು ವೇಗವಾಗಿ ಶಾದಿಆಬಾದ್ ಮಾಂಡುವಿನತ್ತ ಧಾವಿಸಿಬಂದು, ಬಾದಷಹನ ಮುಂದೆ ಪತ್ರವನ್ನು ಓದಿ ಹೇಳಿದನು. ಇದರ ಉತ್ತರವಾಗಿ ಬಾದಷಹನು ಯಾವುದೇ ಅಭಿಪ್ರಾಯವನ್ನು ವ್ಯಕ್ತಪಡಿಸುವ ಮೊದಲೇ ರಾಣಿ ಖುರ್‌ಶೀದಳು ಬಾದಷಹರಿಗೆ ನಾಸಿರುದ್ದೀನನನ್ನು ನಾಶಪಡಿಸಲು ತಾತಾರ್‌ಖಾನ್‌ನನ್ನು ನೇಮಿಸಬೇಕೆಂದು ಆಗ್ರಹಪಡಿಸಿದಳು. ಬಾದಷಹನ ಮೇಲೆ ಈಕೆಯ ಪ್ರಭಾವ ಅಧಿಕವಾಗಿತ್ತು.

ತಾತಾರ್‌ಖಾನನ ಚಿಂತೆ:

ತಾತಾರ್‌ಖಾನನು ರಾಣಿ ಖುರ್‌ಶೀದಳ ಆಗ್ರಹದ ಮಾತನ್ನು ಕೇಳಿ ತುಂಬಾ ಚಿಂತಿತನಾದನು. ಆದರೆ ಇವರ ಮಾತನ್ನು ಉಲ್ಲಂಘಿಸುವಂತಿರಲಿಲ್ಲ. ಆತನು ಕೋಟೆಯಿಂದ ಕೆಳಗಿಳಿದು ಬಂದು ಕಂಬಾರಪುರಕ್ಕೆ ಬಂದನು. ಅಲ್ಲಿಗೆ ಬಂದ ಮೇಲೆ ಹೀಗೆ ಯೋಚಿಸತೊಡಗಿದನು– ನಾನೊಂದು ವೇಳೆ ನಾಸಿರುದ್ದೀನನೊಂದಿಗೆ ಯುದ್ಧ ಮಾಡಿದರೆ ನಾಸಿರುದ್ದೀನನು ಬಾದಷಹನಾದಾಗ ನನ್ನ ಮೇಲೆ ಸೇಡು

ತೀರಿಸಿಕೊಳ್ಳದೆ ಇರಲಾರನು. ಒಂದು ವೇಳೆ ನಾನು ಈಗ ನಾಸಿರುದ್ದೀನನ ಮೇಲೆ ಯುದ್ಧ ಮಾಡದೇ ಹಿಂತಿರುಗಿದರೆ ರಾಣಿ ಖುರ್‌ಶೀದಳು ಸಿಟ್ಟಾಗುವಳು. ಈ ಚಿಂತೆಯಲ್ಲಿ ಮುಳುಗಿರುವಷ್ಟರಲ್ಲಿ ಸುಲ್ತಾನ್ ಘಿಯಾಸುದ್ದೀನನ ಇಬ್ಬರು ಪ್ರಮುಖ ಅಮೀರರಾದ ಮಲ್ಲಿಖ್‌ಮೆಹತಾ ಮತ್ತು ಮಲ್ಲಿಖ್‌ಹಬೀಬ ಎಂಬುವರು ನಾಸಿರುದ್ದೀನನೊಂದಿಗೆ ಸೇರಿಕೊಂಡರು. ಇದರಿಂದಾಗಿ ನಾಸಿರುದ್ದೀನನ ಸಾಮರ್ಥ್ಯ ಹೆಚ್ಚಾಯಿತು.

ನಾಸಿರುದ್ದೀನನು ಕಸಬಾ ಹಾವಿಯದಲ್ಲಿ:

ನಾಸಿರುದ್ದೀನನು ತನ್ನ ಸೈನ್ಯವನ್ನು ಬಿಗಿಗೊಳಿಸಿ ಸರಿಯಾದ ತರಬೇತಿಯನ್ನು ಕೊಡಸಿದನು. ಈ ಸೈನ್ಯದೊಂದಿಗೆ ಕಸಬಾ ಹಾವಿಯ ಎಂಬಲ್ಲಿಗೆ ಬಂದನು. ಅಲ್ಲಿನ ಮೌಲಾನಾ ಅಮಾದುದ್ದೀನ್, ಅಪ್ಜಲ್‌ಖಾನಮತ್ತು ಇತರೆ ಜಮೀನ್ದಾರರು ನಾಸಿರುದ್ದೀನನಿಗೆ ಸಹಾಯ ಹಸ್ತವನ್ನು ನೀಡಿದರು. ಅಂದು ರಂಜಾನ್ ಹಬ್ಬವಾಗಿತ್ತು. ನಾಸಿರುದ್ದೀನನು ಹಬ್ಬವನ್ನು ಅಲ್ಲಿಯೇ ಆಚರಿಸಿದನು. ನಾಸಿರುದ್ದೀನನು ಷಾಹಿ ಛತ್ರಿಯನ್ನು ತನ್ನ ತಲೆಯ ಮೇಲೆ ಏರಿಸಿದನು. ತನ್ನ ಅಮೀರರುಗಳಲ್ಲಿ ಬಿರುದು, ಬಹುಮಾನಗಳನ್ನು ಹಂಚಿ ಗೌರವಿಸಿದನು.

ಮಲಿಕ್‌ಮಹಮೂದ್ ಮತ್ತು ಷಹಜಾದ ಸುಜಾಅತ್‌ನಲ್ಲಿ ಯುದ್ಧ:

ಇದೇ ಸಂದರ್ಭದಲ್ಲಿ ಸುದ್ದಿ ತಿಳಿದಿದ್ದುದೇನೆಂದರೆ ಷಹಜಾದ ಸುಜಾಅತ್‌ನು ಸೈನ್ಯದೊಂದಿಗೆ ಯುದ್ಧಕ್ಕೆಂದು ಬರುತ್ತಿದ್ದಾನೆಂದು ಆತನು ಕಸಬಾ ಕಂಕಾನೋದಿಂದ ಮುಂದುವರಿದು ಕಂದೋಬರ್‌ತಕ್‌ವರೆಗೆ ಬಂದಿದ್ದಾನೆಂದು. ನಾಸಿರುದ್ದೀನನು ಸಹ ಮಲ್ಲಿಕ್‌ಮಹಮೂದನಿಗೆ ಸೈನ್ಯವನ್ನು ಕೊಟ್ಟು ಶತ್ರುವನ್ನು ಕೊಟ್ಟು ಎದುರಿಸಲು ಕಳುಹಿಸಿಕೊಟ್ಟನು. ಮಲಿಕ್‌ಮಹಮೂದನು ಪ್ರಾಣದ ಮೇಲಿನ ಆಸೆಯನ್ನು ತೊರೆದು ಘೋರ ಯುದ್ಧವನ್ನೇ ಮಾಡಿದನು. ಶತ್ರುವನ್ನು ಸೋಲಿಸಿದನು. ಶತ್ರು ಸೋತು ಓಡಿಹೋದನು. ಮಲ್ಲಿಕ್‌ಮಹಮೂದನಿಗೆ ಯುದ್ಧದಲ್ಲಿ ಅಪಾರ ಸಂಪತ್ತು ಸಿಕ್ಕಿತು. ಅದನ್ನೆಲ್ಲ ತೆಗೆದುಕೊಂಡು ನಾಸಿರುದ್ದೀನನಿದ್ದ ಕಸಬಾ ಹಾವಿಯಕ್ಕೆ ಬಂದು ಸೇರಿದನು.

ನಾಸಿರುದ್ದೀನನು ಉಜ್ಜೈನಿನಲ್ಲಿ:

ಹಿಜರಿ ೯೦೫ ಷವ್ವಾಲ್ ತಿಂಗಳ ೧೨ ನೇ ತಾರೀಖಿನಂದು ನಾಸಿರುದ್ದೀನನು ಕಸಬಾಹಾವಿಯಿಂದ ಹೊರಟು ಉಜ್ಜೈನಿನತ್ತ ಪ್ರಯಾಣವನ್ನು ಬೆಳೆಸಿದನು. ದಾರಿಯಲ್ಲಿ ಅನೇಕ ಅಮೀರರು ಮತ್ತು ಶಾಸಕರು ಷಹಜಾದ ನಾಸಿರುದ್ದೀನನೊಂದಿಗೆ ಬಂದು ಸೇರಿಕೊಂಡರು. ನಾಸಿರುದ್ದೀನನು ಉಜ್ಜೈನಿಯನ್ನು ತಲುಪುವುದರೊಳಗಾಗಿ ಆತನ ಹತ್ತಿರ ಒಂದು ವಿಶಾಲ ಸೈನ್ಯವೇ ಬೆಳೆದಿತ್ತು.

ಸುಲ್ತಾನ್ ಘಿಯಾಸುದ್ದೀನನ ಸಂದೇಶ ನಾಸಿರುದ್ದೀನನಿಗೆ:

ಷಹಜಾದ ಸುಜಾಅತ್‌ಖಾನ ಮತ್ತು ರಾಣಿ ಖುರ್‌ಶೀದಳಿಗೆ ಈ ವಿಚಾರ ತಿಳಿದ ತಕ್ಷಣ ಅವರು ಬಾದಷಹ ಘಿಯಾಸುದ್ದೀನನಿಗೆ ತಿಳಿಸಿದ್ದುದೇನೆಂದರೆ "ನಮಗೆ ಸುದ್ದಿ ಬಂದಿರುವುದೇನೆಂದರೆ ನಾಸಿರುದ್ದೀನನ ಹತ್ತಿರ ಒಂದು ದೊಡ್ಡ ಸೈನ್ಯವಿದೆಯಂದೂ, ಆತನು ಇಷ್ಟರಲ್ಲೇ ಮಾಂಡುವಿಗೆ ಬಂದು ಕೋಟೆಯನ್ನು ಆಕ್ರಮಿಸಿಕೊಳ್ಳುವನೆಂದು ತಿಳಿದಿದೆ" ಎಂದರು. ಘಿಯಾಸಿದ್ದೀನನು ತನ್ನ ಕಾಲದ ಪ್ರಸಿದ್ಧ ಗುರುಗಳಾದ ಶೇಖ್‌ಅವ್‌ಲಿಯಾ ಮತ್ತು ಶೇಖ್‌ಬುರ್‌ಹಾನ್ ಎಂಬ ವೃದ್ಧ ವಿದ್ವಾಂಸರನ್ನು ದೂತರನ್ನಾಗಿ ನೇಮಿಸಿ ನಾಸಿರುದ್ದೀನನ ಹತ್ತಿರ ಕಳುಹಿಸಿದನು. ಅವರೊಂದಿಗೆ ಈ ಸಂದೇಶವನ್ನು ಕಳುಹಿಸಿದನು. "ನಾನು ಈ ಸಾಮ್ರಾಜ್ಯದ ಶಾಸನ ಸಂಬಂಧಿತ ಎಲ್ಲ ವಿಚಾರಗಳಿಂದಲೂ ಬಹಳ ವರ್ಷಗಳಿಂದ ದೂರವಾಗಿಬಿಟ್ಟಿದ್ದೇನೆ. ಹಾಗೂ ಎಲ್ಲ ವಿಷಯಗಳ ಜವಾಬ್ದಾರಿ ಮತ್ತು ಆಡಳಿತದ ಲಗಾಮನ್ನು ನಿನ್ನ ಕೈಯಲ್ಲಿ ಒಪ್ಪಿಸಿರುತ್ತೇನೆ. ನನಗೆ ತಿಳಿದು ಬಂದಿರುವುದೇನೆಂದರೆ ನಿನ್ನ ಜೊತೆಯಲ್ಲಿ ಕೆಲವು ದುಷ್ಟಶಕ್ತಿ ಲಫಂಗರುಗಳು ಸೇರಿಕೊಂಡಿರುವರೆಂದು ಅವರನ್ನೆಲ್ಲ ದೂರು ಮಾಡಿ ನನ್ನ ಬಳಿಗೆ ನೀನು ಬಂದದ್ದೇ ಆದರೆ ನಾನು ನಿನ್ನ ಸುಪರ್ದಿಗೆ ಎಲ್ಲ ಅಧಿಕಾರಗಳನ್ನು ಬಿಟ್ಟುಕೊಡಲು ಸಿದ್ಧನಿದ್ದೇನೆ" ಎಂದು ಸಂದೇಶವನ್ನು ಕಳುಹಿಸಿದನು.

ನಾಸಿರುದ್ದೀನನನೊಂದಿಗೆ ಮಖ್ಬನ್‌ಖಾನನ ಯುದ್ಧ:

ಮೇಲಿನ ಸಂದೇಶಕ್ಕೆ ನಾಸಿರುದ್ದೀನನು ಯಾವುದೇ ಉತ್ತರವನ್ನು ಕಳುಹಿಸಲಿಲ್ಲ. ಅದೇ ವರ್ಷ ಜೀಖದ್ ತಿಂಗಳಲ್ಲಿ ಉಜ್ಜೈನಿನಿಂದ ಕಸಬಾ ಧಾರ್ ಎಂಬಲ್ಲಿಗೆ ಬಂದನು. ಆತನು ಅಲ್ಲಿ ಕೆಲವು ದಿನಗಳ ತನಕ ಬೀಡುಬಿಟ್ಟನು. ಇಲ್ಲಿ ಆತನಿಗೆ ಸುದ್ದಿ ತಿಳಿದಿದ್ದುದೇನೆಂದರೆ ಪಿತೂರಿ ವಿದ್ರೋಹಗಳಲ್ಲಿ ಪ್ರಸಿದ್ಧನಾದ ಮಖ್ಬನಖಾನನು ಮೂರುಸಾವಿರ ಸೈನ್ಯದೊಂದಿಗೆ ಯುದ್ಧಕ್ಕೆಂದು ಬರುತ್ತಿರುವ ಸುದ್ದಿ ತಿಳಿಯಿತು. ನಾಸಿರುದ್ದೀನನು ಸಹ ಮಲ್ಲಿಕ್ ಅತಾ ಎಂಬುವವನಿಗೆ ಐದನೂರು ಸೈನಿಕರನ್ನು ಕೊಟ್ಟು ಮಖ್ಬನ್‌ಖಾನನನ್ನು ಎದುರಿಸಲು ಕಳುಹಿಸಿಕೊಟ್ಟನು. ಹಾನ್ಸಪುರವೆಂಬ ಹಳ್ಳಿಯ ಹತ್ತಿರ ಇಬ್ಬರಲ್ಲೂ ಯುದ್ಧ ನಡೆದು ಮಖ್ಬನ್‌ಖಾನನು ಸೋತು ಮಾಂಡುವಿನತ್ತ ಓಡಿಹೋದನು. ಆತನ ನೂರಾರು ಸೈನಿಕರು ಯುದ್ಧದಲ್ಲಿ ಸತ್ತರು.

ಮಖ್ಬನ್‌ಖಾನನೊಂದಿಗೆ ಎರಡನೆಯ ಯುದ್ಧ:

ರಾಣಿ ಖುರ್‌ಶೀದಳು ಎರಡನೇ ಸಲ ಮಖ್ಬನ್‌ಖಾನನನ್ನು ನಾಸಿರುದ್ದೀನನೊಂದಿಗೆ ಯುದ್ಧ ಮಾಡಲು ಒಂದು ವಿಶಾಲ ಸೈನ್ಯವನ್ನು ಕೊಟ್ಟುಕಳುಹಿಸಿದಳು. ಈ ಸಲವೂ ಮಖ್ಬನ್‌ಖಾನನು ಸೋತು ಮಾಂಡುವಿನ ಕೋಟೆಯೊಳಗೆ ಓಡಿಬಂದು ಸೇರಿಕೊಂಡನು.

ನಾಸಿರುದ್ದೀನನು ಕೋಶಕ್‌ಜಹಾಂನುಮಾದಲ್ಲಿ:

ಇದೇ ವರ್ಷ ಜಿಲ್‌ಹಜ್ಜ ತಿಂಗಳ ೨೨ರಲ್ಲಿ ನಾಸಿರುದ್ದೀನನು ಕೋಶಕ್‌ಜಹಾಂನುಮಾ ಎಂಬಲ್ಲಿ ಬೀಡು ಬಿಟ್ಟನು. ಅಲ್ಲಿ ಅವನಿಗೆ ಸುದ್ದಿ ಬಂದದ್ದು ಏನೆಂದರೆ- ಸುಲ್ತಾನ್ ಘಿಯಾಸುದ್ದೀನ್‌ರು ಸ್ವತಃ ಅವರೇ ಖುದ್ದಾಗಿ ಬಂದು ನಾಸಿರುದ್ದೀನನನ್ನು ಭೇಟಿಯಾಗುವರೆಂದು ಹಾಗೂ ಸಂಧಿ-ಒಪ್ಪಂದಗಳನ್ನು ಮಾಡುವರೆಂದು ತಿಳಿಯಿತು. ನಾಸಿರುದ್ದೀನನು ಈ ಸಮಾಚಾರವನ್ನು ಕೇಳಿ ಬಹಳ ಸಂತೋಷಪಟ್ಟನು. ರಾಣಿ ಖುರ್‌ಶೀದಳು ಮತ್ತು ಸುಜಾಅತ್‌ಖಾನರಿಬ್ಬರೂ ಜಫರಾಬಾದ್ ಕೋಟೆಗೆ ಬಂದು ಉಳಿದುಕೊಂಡರು. ಅಲ್ಲಿಗೆ ಬರುವ ಉದ್ದೇಶವೇನೆಂದರೆ ಒಂದು ವೇಳೆ ತಂದೆಯ ಜೊತೆಯಲ್ಲಿ ನಾಸಿರುದ್ದೀನನು ಅಲ್ಲಿಗೆ ಬಂದರೆ ಆತನನ್ನು ಕೊಲೆ ಮಾಡಿಸಬಿಡಬಹುದೆಂದು ಆಗಿತ್ತು.

ಬಾದಷಹನು ವಾಪಸ್ಸ ಬಂದನು:

ಸುಲ್ತಾನ್ ಘಿಯಾಸುದ್ದೀನನು ದೆಹಲಿ ಬಾಗಿಲ ಬಳಿ ತಲುಪಿದ. ಆ ಸಂದರ್ಭದಲ್ಲಿ ಬಾದಷಹನು ತುಂಬಾ ದುರ್ಬಲನಾಗಿದ್ದನು. ಆತನು ತನ್ನ ಆಪ್ತರನ್ನು- ನನ್ನನ್ನು ಎಲ್ಲಿಗೆ ಕರೆದೊಯ್ಯುತ್ತಿದ್ದೀರಿ? ಎಂದು ಕೇಳಿದನು. ಕೆಲವರು ಸತ್ಯ ಸಂಗತಿಯನ್ನು ತಿಳಿಸಿದರು. ಇಂದು ಬೇಡವೆಂದು ಹೇಳಿದನು. ನಾನು ನಾಳೆ ಹೊರಡುವೆನೆಂದನು. ಈಗ ನನ್ನನ್ನು ಷಾಹಿ ಅರಮನೆಗೆ ಕರೆದೊಯ್ಯಲು ಹೇಳಿದನು. ಬಾದಷಹನ ಮಾತನ್ನು ಯಾರೂ ಮೀರುವಂತಿರಲಿಲ್ಲ ಆದ್ದರಿಂದ ಅವರು ಬಾದಷಹನನ್ನು ಅರಮನೆಗೆ ಕರೆದುಕೊಂಡು ಬಂದರು.

ರಾಣಿ ಖುರ್‌ಶೀದಳು ಸಿಟ್ಟಾದಳು:

ರಾಣಿ ಖುರ್‌ಶೀದಳಿದ್ದ ಜಾಗಕ್ಕೆ ಸೇವಕರು ಬಾದಷಹನನ್ನು ಕರೆತರಲಿಲ್ಲವೆಂದು ತುಂಬಾ ಕ್ರೋಧಿತಳಾಗಿ ಅವರು ಷಾಹಿ ಅರಮನೆಗೆ ಏಕೆ? ವಾಪಸ್ಸಾದರು ಎಂದು ಕೇಳಿದಳು. ಸೇವಕರು ತಮ್ಮ ತಪ್ಪಿಲ್ಲವೆಂದೂ ಬಾದಷಹರೇ ನೇರವಾಗಿ ಅರಮನೆಗೆ ಕರೆದೊಯ್ಯಲು ಆಜ್ಞಾಪಿಸಿದರೆಂದೂ, ಇದರಲ್ಲಿ ನಾಸಿರುದ್ದೀನನ ಯಾವ ಕೈವಾಡವೂ ಇಲ್ಲವೆಂದು ತಿಳಿಸಿದರೂ, ನಾಸಿರುದ್ದೀನನೇ ಬಾದಷಹರಿಗೆ ವಾಪಸ್ಸ ಅರಮನೆಗೆ ಕಳುಹಿಸಿದ್ದಾನೆಂದು ತಿಳಿದಳು.

ಕೋಟೆಗೆ ಮುತ್ತಿಗೆ:

ಷಹಜಾದ ಸುಜಾಅತ್ ಮತ್ತು ರಾಣಿ ಖುರ್‌ಶೀದರು ಕೋಟೆಯನ್ನು ರಿಪೇರಿ ಮಾಡಿಸಿದರು. ನಾಸಿರುದ್ದೀನನು ಮುಂದುವರಿದು ಕೋಟೆಯ ಮುತ್ತಿಗೆಯನ್ನು ಹಾಕಿದನು. ಇದಾದ ನಂತರ ಯುದ್ಧವು ಪ್ರಾರಂಭವಾಯಿತು. ಇಬ್ಬರಲ್ಲೂ ಯುದ್ಧ

ನಡೆಯುತ್ತಿತ್ತು. ನಾಸಿರುದ್ದೀನನೊಂದಿಗೆ ಯುದ್ಧವಾಡಿ, ಎರಡೂ ಕಡೆ ಸಾವುನೋವುಗಳಾಗುತ್ತಿದ್ದುವು.

ಕೋಟೆ ಒಳಗಿನವರ ಚಿಂತೆ ಹೆಚ್ಚಾಯಿತು:

ಮುತ್ತಿಗೆ ಬಹಳ ದೀರ್ಘಕಾಲ ಹಿಡಿಯಿತು. ಯಾವ ಕಡೆಯಲ್ಲೂ ನಿರ್ಣಾಯಕ ಪರಿಣಾಮ ಆಗಲಿಲ್ಲ. ಕೋಟೆ ಒಳಗೆ ಆಹಾರ ಮತ್ತಿತರೆ ಸಾಮಾನುಗಳು ಇಲ್ಲದಂತಾದುವು. ಇದರಿಂದಾಗಿ ಕೋಟೆಯ ಒಳಗಿನವರ ಚಿಂತೆ ಹೆಚ್ಚಾಯಿತು. ಒಳಗಿನ ಕೆಲ ಹಿರಿಯ ಅಮೀರರು ಈ ಪರಿಸ್ಥಿತಿಯನ್ನು ಕಂಡು, ಅವರು ನಾಸಿರುದ್ದೀನನ ಪಕ್ಷದಲ್ಲಿ ಸೇರಿಕೊಳ್ಳುವುದೇ ಸರಿ ಎಂದು ತೀರ್ಮಾನಿಸಿದರು. ಸಮಯವನ್ನು ನೋಡಿ ಕೋಟೆಯ ಹೊರಬಂದು ನಾಸಿರುದ್ದೀನನೊಂದಿಗೆ ಸೇರಿಕೊಂಡರು.

ರಾಣಿ ಖುರ್‌ಶೀದಳ ಹಿಂಸೆ:

ರಾಣಿ ಖುರ್‌ಶೀದಳಿಗೆ ಈ ಅಮೀರರ ಸಿಟ್ಟು ಮತ್ತು ಆಕೆಯನ್ನು ಬಿಟ್ಟುಹೋದ ವಿಚಾರವನ್ನು ತಿಳಿದು, ಕೋಟೆಯ ರಕ್ಷಕನಾದ ಅಲಿಖಾನನನ್ನು ಕೆಲಸದಿಂದ ವಜಾ ಮಾಡಿದಳು. ಆತನ ಜಾಗದಲ್ಲಿ ಮಲಿಕ್ ಬಯಾರಹ್ ಎಂಬುವನನ್ನು ನೇಮಿಸಿ ಆತನಿಗೂ ಅಲಿಖಾನ್ ಎಂಬ ಬಿರುದನ್ನು ಕೊಟ್ಟಳು. ಇಷ್ಟೇ ಅಲ್ಲದೆ ಮುಹಾಫಿಜ್‌ಖಾನನನ್ನು ಮತ್ತು ಸೂರಜ್‌ಮಲ್ ಎಂಬುವರನ್ನು ಕೊಲೆ ಮಾಡಿಸಿದಳು. ಇವರಿಬ್ಬರೂ ನಾಸಿರುದ್ದೀನನೊಡನೆ ಗುಪ್ತ ವ್ಯವಹಾರವನ್ನಿಟ್ಟುಕೊಂಡಿದ್ದರೆಂಬ ಅನುಮಾನವಿತ್ತು. ಈ ಘಟನೆಯಿಂದಾಗಿ ಆ ನಗರದವರೆಲ್ಲರೂ ಹಾಗೂ ಅಮೀರರು ರಾಣಿ ಖುರ್‌ಶೀದಳ ಹಿಂಸೆಗಳಿಂದ ಬಹಳ ಬೇಸತ್ತರು. ಅವರೆಲ್ಲರೂ ನಾಸಿರುದ್ದೀನನಲ್ಲಿ ಮೊರೆಯಿಟ್ಟು ಈ ಹಿಂಸೆಗಳಿಂದ ಬಿಡುಗಡೆ ಬೇಗ ನಡೆಯಬೇಕೆಂದು ಪ್ರಾರ್ಥಿಸಿದರು. ನಾಸಿರುದ್ದೀನನು ಒಳಗಿನ ಅಮೀರರುಗಳಿಗೆ ಒಂದು ಪತ್ರವನ್ನು ಬರೆದು ಅವರೆಲ್ಲರನ್ನೂ ಧೈರ್ಯವಾಗಿರಲು ಹೇಳಿದನು. ಎಲ್ಲ ಅಮೀರರು ನಾಸಿರುದ್ದೀನನ ಪಕ್ಷಕ್ಕೆ ಸೇರಿಕೊಂಡರು.

ನಾಸಿರುದ್ದೀನನು ಕೋಟೆಯನ್ನು ಗೆಲ್ಲುವ ಪ್ರಯತ್ನ:

ಹಿಜರಿ ೯೦೬ ಸಫರ್ ತಿಂಗಳ ೧೭ ರಂದು ಕೋಟೆಯನ್ನು ಏನಾದರೂ ಮಾಡಿ ವಶಪಡಿಸಿಕೊಳ್ಳಲೇಬೇಕೆಂಬ ದೃಢ ನಿಶ್ಚಯವನ್ನು ಮಾಡಿದ. ಈ ವಿಷಯವು ರಾಣಿ ಖುರ್‌ಶೀದಳ ಸೈನ್ಯಕ್ಕೆ ಗೊತ್ತಾಗಿ ಇವರೂ ಎಚ್ಚೆತ್ತುಕೊಂಡು ನಾಸಿರುದ್ದೀನನ ಸೈನ್ಯದ ಮೇಲೆ ಬಾಣಗಳಿಂದ ಯುದ್ಧವನ್ನು ಪ್ರಾರಂಭಿಸಿದರು. ಈ ಕಾರಣದಿಂದ ನಾಸಿರುದ್ದೀನನ ಕಡೆಯ ಸೈನ್ಯದಲ್ಲಿನ ಅನೇಕ ಅನುಭವಿ ವೀರರು ಗಾಯಗೊಂಡರು. ಆದರೆ ಹೀಗಾದರೂ ನಾಸಿರುದ್ದೀನನು ಧೈರ್ಯಗೆಡದೆ ಏಳನೂರು ಹೆಚ್ಚಿನ

ಸಿಪಾಯಿಗಳನ್ನು ಯುದ್ಧ ನಡೆಯುತ್ತಿದ್ದ ಜಾಗಕ್ಕೆ ಕರೆಯಿಸಿಕೊಂಡು ಕೋಟೆಯ ಒಳಗೆ ಪ್ರವೇಶಿಸಿಯೇ ಬಿಟ್ಟ. ಇದೇ ಸಂದರ್ಭದಲ್ಲಿ ಸುಜಾಅತ್‌ಖಾನನು ಒಳ್ಳೆಯ ವೀರರ ಒಂದು ಸೈನ್ಯವನ್ನು ತೆಗೆದುಕೊಂಡು ಕೋಟೆಯ ಬುರ್ಜಿನತ್ತ ಬಂದನು. ಯುದ್ಧವು ಘೋರವಾಗತೊಡಗಿತು. ಈ ಸಂದರ್ಭದಲ್ಲಿ ನಾಸಿರುದ್ದೀನನು ವೀರಾವೇಶದಿಂದ ಹೋರಾಡಿದನು. ಆತನು ಬಿಲ್ಲುಗಾರಿಕೆಯಲ್ಲಿ ತಲ್ಲೀನನಾದನು. ಶತ್ರುಸೈನ್ಯದ ಅನೇಕ ವೀರರನ್ನು ಹೊಡೆದುರುಳಿಸಿದನು. ಸುಜಾಅತ್‌ಖಾನನಿಗೂ ಪ್ರತಿ ಘಳಿಗೆಯಲ್ಲೂ ಹೊಸ ಹುಮ್ಮಸ್ಸಿನ ಸೈನಿಕರು ಬಂದು ನಿಲ್ಲುತ್ತಿದ್ದರು. ಈ ಕಾರಣದಿಂದ ನಾಸಿರುದ್ದೀನನು ಇನ್ನೂ ಹೆಚ್ಚು ಹೊತ್ತು ಕೋಟೆಯ ಒಳಗೆ ಯುದ್ಧ ಮಾಡಬಾರದೆಂದು ತೀರ್ಮಾನಿಸಿ ತನ್ನ ಸೈನಿಕ ಶಿಬಿರಕ್ಕೆ ಹಿಂತಿರುಗಿದನು. ಈ ಯುದ್ಧದಲ್ಲಿ ವೀರವೇಶದಿಂದ ಹೋರಾಡಿದ ತನ್ನ ಸೈನಿಕರಿಗೆ ನಾಸಿರುದ್ದೀನನು ಬಹುಮಾನಗಳನ್ನು ವಿತರಿಸಿದನು.

ಚಂದೇರಿಯ ಸೈನ್ಯವು ನಾಸಿರುದ್ದೀನನ ಸಹಾಯಕ್ಕೆ:

ಇದಾದ ಕೆಲವು ದಿನಗಳ ನಂತರ ಚಂದೇರಿಯ ಶಾಸಕ ಮುಜಫ್ಫರ್‌ಖಾನನ ಮಗ ಶೇರ್‌ಖಾನನು ಒಂದು ಸಾವಿರ ಸೈನಿಕರನ್ನು ಜೊತೆಯಲ್ಲಿ ತೆಗೆದುಕೊಡಿದ್ದೇ ಅಲ್ಲದೇ ಹನ್ನೊಂದು ಆನೆಗಳ ಬಲದೊಂದಿಗೆ ನಾಸಿರುದ್ದೀನನ ಸಹಾಯಕ್ಕೆ ಬಂದು ನಿಂತನು. ಈ ಸೈನ್ಯದ ಬರುವಿಕೆಯಿಂದ ನಾಸಿರುದ್ದೀನನು ಬಹಳ ಸಂತೋಷಪಟ್ಟನು. ಇಲ್ಲಿದ್ದ ಸೈನಿಕರಲ್ಲೂ ಒಂದು ಹೊಸ ಉತ್ಸಾಹ ಮೂಡಿತು. ಇದೇ ಸಂದರ್ಭದಲ್ಲಿ ನಾಸಿರುದ್ದೀನನು ತನ್ನ ಹಿರಿಯ ಮಗ ಶೇರ್‌ಖಾನ್‌ನಿಗೆ ಮುಜಫ್ಫರ್‌ಖಾನ್ ಎಂದು ಕಿರಿಯ ಮಗನಿಗೆ ಸೈಯ್ಯದಖಾನ್ ಎಂಬ ಬಿರುದುಗಳನ್ನು ಕೊಟ್ಟು ಯುದ್ಧಕ್ಕೆ ಸಿದ್ಧಪಡಿಸಿದನು.

ಬಾಲಾಪುರದ ಕೋಟೆಯ ಬಾಗಿಲಿನ ರಕ್ಷಕರು ನಾಸಿರುದ್ದೀನನ ಪಕ್ಷಕ್ಕೆ:

ಕೋಟೆಯ ಒಳಗಿನ ಅನೇಕ ಜನರು ನಾಸಿರುದ್ದೀನನ ಪಕ್ಷದತ್ತ ವಾಲಿದ್ದರು. ಬಾಲಾಪುರದ ಕಡೆಗೆ ಇರುವ ಕೋಟೆಯ ಬಾಗಿಲಿನ ರಕ್ಷಕರು ನಾಸಿರುದ್ದೀನನ ಕಡೆ ಸೇರಿಕೊಂಡು, ಆ ಬಾಗಿಲಿನತ್ತ ಸೈನ್ಯವನ್ನು ಕರೆದುಕೊಂಡು ಬರಲು ಹೇಳಿಕಳುಹಿಸಿದರು. ನಾಸಿರುದ್ದೀನನು ರಬೀವುಸ್ಸಾನಿ ತಿಂಗಳ ಇಪ್ಪತ್ನಾಲ್ಕನೇ ತಾರೀಖಿನಂದು ಹಬೀಬಲ್ಲಾ, ಮುವಾಫಿಖ್‌ಖಾನ್ ಮತ್ತು ಖ್ವಾಜಾ ಸಮೀಲರನ್ನು ಆ ಬಾಗಿಲ ಕಡೆ ಕಳುಹಿಸಿಕೊಟ್ಟನು. ಈ ವಿಚಾರವು ಷಹಜಾದ ಸುಜಾಅತ್‌ಖಾನ್‌ನಿಗೆ ತಿಳಿಯಿತು. ಆತನು ತನ್ನೊಡನೆ ಸ್ವಲ್ಪ ಸೈನ್ಯವನ್ನು ತೆಗೆದುಕೊಂಡು ಬಾಲಾಪುರ ಬಾಗಿಲಿನತ್ತ ಓಡಿಬಂದನು ಆದರೆ ಅಲ್ಲಿ ನಡೆದ ಯುದ್ಧದಲ್ಲಿ ಸೋತು ತಂದೆ ಘಿಯಾಸುದ್ದೀನ್ ಸುಲ್ತಾನರಿದ್ದ ಅರಮನೆ ಕಡೆ ಓಡಿಹೋದನು.

ನಾಸಿರುದ್ದೀನನು ಕೋಟೆಯಲ್ಲಿ ಪ್ರವೇಶಿಸಿದನು:

ಶೇಖ್ ಹಬೀಬಲ್ಲಾ ಮತ್ತಿತರರು ಕೋಟೆಯೊಳಗೆ ಪ್ರವೇಶಿಸಿದಂತೆಯೇ ಅವರು ಬಾದಷಹರನ್ನೂ ಅಲ್ಲಿಗೆ ಬಂದು ಬಿಡಲು ಆಹ್ವಾನಿಸಿದರು. ಇದಾದನಂತರ ಎಲ್ಲ ಅಮೀರರು ನಾಸಿರುದ್ದೀನನಿಗೆ ಗೆಲುವಿನ ಶುಭಾಶಯಗಳನ್ನು ತಿಳಿಸಲು ಆತನ ಸುತ್ತಲೂ ಬಂದು ಸೇರಿದರು. ಅದೇ ಸಂದರ್ಭದಲ್ಲಿ ನಗರಕ್ಕೆ ಆಗಿರುವ ನಷ್ಟ, ಲೂಟಿ, ಬೆಂಕಿಯಿಂದ ಹಾಳಾಗಿರುವುದರ ಬಗ್ಗೆ ನಾಸಿರುದ್ದೀನನ ಗಮನವನ್ನು ಸೆಳೆದರು. ರಾಣಿ ಖುರ್‌ಶೀದಳೊಂದಿಗೆ ಷಹಜಾದ ಸುಜಾಅತ್‌ಖಾನರನ್ನು ಸುಲ್ತಾನಿ ಅರಮನೆಯಿಂದ ಹೊರ ಹಾಕಲು ನಾಸಿರುದ್ದೀನನು ಆಜ್ಞಾಪಿಸಿದನು. ಅದರಂತೆ ಅವರನ್ನು ಹೊರ ಹಾಕಲಾಯಿತು. ಸುಲ್ತಾನ್ ಘಿಯಾಸುದ್ದೀನನು ಸಹ ತನ್ನ ಭೋಗವಿಲಾಸಕ್ಕೆಂದು ಕಟ್ಟಿಸಿಕೊಂಡಿದ್ದ ಅರಮನೆಯಲ್ಲಿ ಆಶ್ರಯವನ್ನು ಪಡೆದುಕೊಂಡನು.

ನಾಸಿರುದ್ದೀನನ ಪಟ್ಟಾಭಿಷೇಕ:

ಅದೇ ವರ್ಷದ ರಬೀ ವುಸ್ಸಾನಿ ತಿಂಗಳ ಇಪ್ಪತ್ತೇಳನೇ ದಿನಾಂಕದಂದು ಅಂದು ಶುಕ್ರವಾರವಾಗಿತ್ತು. ನಾಸಿರುದ್ದೀನನು ಸಿಂಹಾಸನಾರೋಹಣವನ್ನು ಮಾಡಿದನು. ಅಂದಿನಿಂದಲೇ ಆತನ ಹೆಸರಿನ (ಖುತ್ಬಾ) ಪ್ರಶಂಸಾತ್ಮಕ ಪ್ರವಚನಗಳು ಹಾಗೂ ಮುದ್ರೆಯ ನಾಣ್ಯಗಳು ಪ್ರಾರಂಭವಾದವು. ಅಮೀರರು ಮತ್ತು ಇತರ ಪ್ರಮುಖರು ಬಾದಷಹ ನಾಸಿರುದ್ದೀನನಿಗೆ ನೀಡಿದ ಕಾಣಿಕೆ, ವಜ್ರ, ಸಂಪತ್ತುಗಳೆಲ್ಲವನ್ನೂ ಆತನು ಬಡವರಲ್ಲಿ ಹಂಚಿದನು.

ವಿರೋಧಿಗಳಿಗೆ ಶಿಕ್ಷೆ:

ನಾಸಿರುದ್ದೀನನ ಪ್ರಥಮ ಕರ್ತವ್ಯವಾಗಿದ್ದುದೇನೆಂದರೆ ತನ್ನ ವಿರೋಧಿ ಅಮೀರರೆಲ್ಲರನ್ನೂ ಕತ್ತಿಗೆ ಆಹುತಿಯನ್ನಾಗಿಸಿದ್ದುದಾಗಿತ್ತು. ಇದರೊಂದಿಗೆ ಮಖ್ಬುನ್‌ಖಾನ್, ಮುಹಾಫಿಜ್‌ಖಾನ್ ಮತ್ತು ಮುಫಶ್ರಹ್ ಹಬಶಿ ಮುಂತಾದವರೆಲ್ಲರೂ ಕೊಲೆಯಾದರು. ಅದೇ ದಿನಗಳಲ್ಲಿ ಷಹಜಾದ ಸುಜಾಅತ್‌ಖಾನ್‌ನು ಕೊಲೆಯಾದನು. ರಾಣಿ ಖುರ್‌ಶೀದಳನ್ನು ಬಂಧನದಲ್ಲಿರಿಸಿದನು.

ಉತ್ತರಾಧಿಕಾರಿಯ ನೇಮಕ ಮತ್ತು ಬಹುಮಾನಗಳ ವಿತರಣೆ:

ಈಗ ಸುಲ್ತಾನ್ ನಾಸಿರುದ್ದೀನನಿಗೆ ಶತ್ರುಗಳಿಂದ ಯಾವುದೇ ಭಯವಿಲ್ಲವೆಂದಾದಾಗ ಆತನು ತನ್ನ ಮಗ ಸಂಭಲೆಮಿಯ್ಯಾ ಎಂದು ಕರೆಸಿಕೊಳ್ಳುತ್ತಿದ್ದವನನ್ನು ತನ್ನ ಉತ್ತರಾಧಿಕಾರಿಯ ಪಟ್ಟವನ್ನು ಘೋಷಿಸಿದನು. ಆತನಿಗೆ "ಷಹಾಬುದ್ದೀನ್" ಎಂಬ ಬಿರುದನ್ನು ಕೊಟ್ಟು ಗೌರವಿಸಿದನು. ಶೇಖ್ ಹಬೀಬುಲ್ಲಾ ಎಂಬುವನಿಗೆ "ಆಲಂಖಾನ್" ಎಂಬ ಬಿರುದಿನಿಂದ ಸನ್ಮಾನಿಸಿದನು. ಆತನನ್ನು ಅಮೀರರ ಗುಂಪಿಗೆ ಸೇರಿಸಿಕೊಂಡನು.

ಖ್ವಾಜಾ ಸಮೀಲ್, ಖ್ವಾಜಾಸರಾ ಎಂಬುವನನ್ನು ಮಹಾದಂಡನಾಯಕನನ್ನಾಗಿ ನೇಮಿಸಿದನು. ಬಾದಷಹ ನಾಸಿರುದ್ದೀನನು ತನ್ನ ಇತರೆ ಆತ್ಮೀಯರಿಗೂ ದೊಡ್ಡ ದೊಡ್ಡ ಬಹುಮಾನಗಳನ್ನು ನೀಡಿ ಜಾಗೀರಿಗಳನ್ನು ಕೊಡಿಸಿದನು.

ತಂದೆ ಮಕ್ಕಳ ಭೇಟಿ:

ಜವಾ ದಿಸ್ಸಾನಿ ತಿಂಗಳ ಹದಿಮೂರನೇ ದಿನಾಂಕದಂದು ಸುಲ್ತಾನ್ ನಾಸಿರುದ್ದೀನನು ತನ್ನ ತಂದೆಯ ಸೇವೆಯಲ್ಲಿ ಹಾಜರಾದನು. ಸುಲ್ತಾನ್ ಘಿಯಾಸುದ್ದೀನನು ತನ್ನ ಮಗನನ್ನು ಗದ್ಗದಿತನಾಗಿ ಅಪ್ಪಿಕೊಂಡು ಮುದ್ದಾಡಿದನು. ಬಹಳ ಹೊತ್ತಿನ ತನಕ ಅಳುತ್ತಾ ಇದ್ದನು. ಇದಾದ ನಂತರ ಸುಲಾನ ಘಿಯಾಸುದ್ದೀನನು ಆತನಿಗೆ ಮಹಮ್ಮದ್‌ನೂರ್ ಬಕ್ಷಿಯವರಿಂದ ದೊರೆತಿದ್ದ ಪವಿತ್ರ ಉಡುಗೆಯನ್ನು ತನ್ನ ಮಗನಿಗೆ ನೀಡಿದನು ಅವುಗಳು ವಿಶೇಷ ಸಂದರ್ಭಗಳಲ್ಲಿ ಮಾತ್ರ ಆ ಉಡುಪುಗಳನ್ನು ಉಡಬೇಕಾದ್ದಿತು. ಸಾಮ್ರಾಜ್ಯದ ಕಿರೀಟವನ್ನು ಮಗನ ತಲೆಯ ಮೇಲೆ ಇಟ್ಟನು. ಮತ್ತು ಖಜಾನೆಗಳ ಬೀಗದ ಕೈಗಳನ್ನು ಹಸ್ತಾಂತರಿಸಿದನು. ಇದಾದ ನಂತರ ಸಿಂಹಾಸನಾರೋಹಣದ ಶುಭಾಶಯಗಳನ್ನು ಹೇಳಿ ಅರಮನೆಯೊಳಗೆ ಪ್ರವೇಶಿಸಲು ಅನುಮತಿಯನ್ನು ನೀಡಿದನು.

ಉತ್ತರಾಧಿಕಾರಿಯ ಮೇಲೆ ಪಾಹಿ ಕೊಡುಗೆಗಳು:

ಅದೇ ವರ್ಷ ರಜಬ್ ತಿಂಗಳ ೧೬ ನೇ ದಿನಾಂಕದಂದು ಸುಲ್ತಾನ್ ಘಿಯಾಸುದ್ದೀನನು ವಿಶೇಷ ಉಡುಪುಗಳೊಂದಿಗೆ ಅಪಾರ ಸಂಪತ್ತು, ೨೦ ಆನೆಗಳು, ಒಂಟೆಗಳು, ಕುದುರೆಗಳು, ಹನ್ನೊಂದು ಛತ್ರಿಗಳು, ಎರಡು ಪಲ್ಲಕ್ಕಿಗಳು, ನಗಾರಿ, ತಲೆಯ ಮೇಲಿನ ಕೆಂಪು ಬಣ್ಣದ ಪರದೆಗಳು ಮತ್ತು ಇಪ್ಪತ್ತು ಲಕ್ಷ ತಿನ್ಗೆ ಚಿನ್ನದ ನಾಣ್ಯಗಳು ಇನ್ನೂ ಮುಂತಾದ ಬೆಲೆಬಾಳುವ ವಸ್ತುಗಳನ್ನು ತನ್ನ ಮೊಮ್ಮಗ ಹಾಗೂ ಸಾಮ್ರಾಜ್ಯದ ಉತ್ತರಾಧಿಕಾರಿಯಾದ ಷಹಾಬುದ್ದೀನ್‌ನಿಗೆ ನೀಡಿ ಗೌರವಿಸಿದನು.

ಮಂದ್‌ಸೋರ್ ಶಾಸಕನ ವಿದ್ರೋಹ:

ಇದೇ ವರ್ಷದಲ್ಲಿ ಸುದ್ದಿ ಬಂದದ್ದೇನೆಂದರೆ– ಮಂದ್‌ಸೋರ್‌ನ ಶಾಸಕನಾದ ಮಕ್ಬೂಲ್‌ಖಾನ್‌ನು ವಿದ್ರೋಹವನ್ನು ಎಬ್ಬಿಸಿದ್ದಾನೆ. ಸುಲ್ತಾನನ ವಿರುದ್ಧ ಪಿತೂರಿಗಳನ್ನು ನಡೆಸುತ್ತಿದ್ದಾನೆಂದು ಗೊತ್ತಾಯಿತು. ತಕ್ಷಣ ಸುಲ್ತಾನ್ ನಾಸಿರುದ್ದೀನನು ಮಹಾಬತ್‌ಖಾನ್‌ನನ್ನು ಈ ವಿದ್ರೋಹಿಯಾದ ಮಕ್ಬಲ್‌ಖಾನ್‌ನನ್ನು ಸೆರೆಹಿಡಿದು ತರಲು ಕಳುಹಿಸಿದನು. ಮಹಾಬತ್‌ಖಾನ್‌ನು ಮಂದ್‌ಸೋರ್ ತಲುಪಿದನು. ಆದರೆ ಮಕ್ಬಲ್‌ಖಾನ್‌ನು ಅಲ್ಲಿ ಇರಲಿಲ್ಲ. ಚಂದೇರಿಯ ಶಾಸಕನಾದ ಶೇರ್‌ಖಾನ್‌ನ ಬಳಿಗೆ ಓಡಿಹೋಗಿದ್ದನು. ಅವನೊಂದಿಗೆ ಆತನ ಅಮೀರರಾದ ಅಲಿಖಾನ್ ಮುಂತಾದವರೂ

ಓಡಿಹೋಗಿದ್ದರು. ಏಕೆಂದರೆ ನಾಸಿರುದ್ದೀನನೊಂದಿಗೆ ಇವರ ಸಂಬಂಧ ಚನ್ನಾಗಿರಲಿಲ್ಲ. ಇವರೆಲ್ಲರೂ ಶೇರ್‌ಖಾನ್‌ನ ಹತ್ತಿರ ಆಶ್ರಯವನ್ನು ಪಡೆದರು.

ಶೇರ್‌ಖಾನ್‌ನೂ ವಿದ್ರೋಹದ ಘೋಷಣೆಯನ್ನು ಮಾಡಿದನು:

ಶೇರ್‌ಖಾನ್‌ನು ವಿದ್ರೋಹಿಗಳೊಂದಿಗೆ ಕೈ ಜೋಡಿಸಿದ್ದನು. ಏಕೆಂದರೆ ಸುಲ್ತಾನ್ ನಾಸಿರುದ್ದೀನನು ಯಾವಾಗಲೂ ಮದ್ಯಪಾನಿಯಾಗಿ ಅದರ ನಶೆಯಲ್ಲಿ ಪ್ರಜ್ಞೆ ತಪ್ಪಿ ವರ್ತಿಸುತ್ತಿದ್ದನು. ಇಂತಹ ಪರಿಸ್ಥಿತಿಯಲ್ಲಿ ತನ್ನ ತಂದೆಯವರ ಕಾಲದಲ್ಲಿ ನೇಮಕವಾಗಿದ್ದ ಅಮೀರರನ್ನು ಕೊಲೆ ಮಾಡಲು ಆಜ್ಞಾಪಿಸುತ್ತಾನೆ. ಇಂತಹ ಹಿಂಸಾತ್ಮಕ ಕೃತ್ಯಗಳು ಪ್ರತಿನಿತ್ಯ ನಡೆಯುತ್ತಿರುತ್ತವೆ. ಈ ಕಾರಣದಿಂದ ಚಂದೇರಿಯ ಶೇರ್‌ಖಾನನು ನಾಸಿರುದ್ದೀನನ ವಿರೋಧಿಯಾಗಿದ್ದನು.

ವಿದ್ರೋಹದ ಪ್ರಾಬಲ್ಯ:

ಸುಲ್ತಾನ್ ನಾಸಿರುದ್ದೀನನು ಮುಬಾರಕ್‌ಖಾನ್ ಮತ್ತು ಶೇಖ್ ಹಬೀಬಲ್ಲಾ ಅಲ್ ಮುಖಾತಿಬ್-ಬ-ಆಲಂಖಾನ್‌ರನ್ನು ಚಂದೇರಿಗೆ ಕಳುಹಿಸಿದ. ಈ ಇಬ್ಬರು ವಿದ್ವಾಂಸರು ಶೇರ್‌ಖಾನ್‌ನಿಗೆ ಬುದ್ಧಿ ಹೇಳಿ ಸರಿದಾರಿಗೆ ತರಲೆಂದು ಉದ್ದೇಶಿಸಿದನು. ಆದರೆ ಶೇರ್‌ಖಾನ್‌ನು ಸರಿದಾರಿಗೆ ಬರಲಿಲ್ಲ. ಅದಕ್ಕೆ ಬದಲಾಗಿ ವಿದ್ರೋಹವನ್ನು ಹೆಚ್ಚಿಸಿದ ಈತನು ಅಲ್ಲಿಗೆ ಬಂದಿದ್ದ ವಿದ್ವಾಂಸರನ್ನು ಬಂಧಿಸಲು ಪ್ರಯತ್ನಿಸಿದನು. ಆದರೆ ಆಲಂಖಾನ್‌ನು ಅವನ ಸೆರೆಗೆ ಸಿಗಲಿಲ್ಲ. ಮುಬಾರಕ್‌ಖಾನ್‌ನನ್ನು ಮಾತ್ರ ಸೆರೆಹಿಡಿದನು.

ಬಾದಷಹನ ಕ್ರೋಧ:

ಆಲಂಖಾನ್‌ನು ರಾಜಧಾನಿಗೆ ಹಿಂತಿರುಗಿದನು. ಆತನು ಅಲ್ಲಿ ನಡೆದ ಎಲ್ಲ ವಿಷಯಗಳನ್ನು ತಿಳಿಸಿದನು. ಶೇರ್‌ಖಾನ್‌ನ ಅಹಂಕಾರದ ವರ್ತನೆಯನ್ನು ಕೇಳಿದ ನಾಸಿರುದ್ದೀನ ಸುಲ್ತಾನನು ಕ್ರೋಧಿತನಾದನು. ಅದೇ ವರ್ಷ ಬಾದಷಹನು ಕೋಶಕ್ ಜಹಾಂನುಮಾದಲ್ಲಿ ಬಂದಿಳಿದನು. ಶೇರ್‌ಖಾನ್‌ನು ಉಜ್ಜಯಿನಿಗೆ ಓಡಿದನು. ಮತ್ತೆ ಮಹಾಬತ್‌ಖಾನ್‌ನೊಂದಿಗೆ ವಾಪಸ್ಸ ಬಂದನು. ಅಲ್ಲಿಂದ ದೇಪಾಲ್‌ಪುರಕ್ಕೆ ತಲುಪಿದನು. ಆತನು ಕಸಬಾ ಹದಿಯಾದಲ್ಲಿ ಲೂಟಿ, ನಾಶಪಡಿಸುವುದರಲ್ಲಿ ಮಗ್ನನಾದನು. ಸುಲ್ತಾನ್ ನಾಸಿರುದ್ದೀನನನಿಗೆ ಈ ಸಮಾಚಾರ ಸಿಕ್ಕಿದ ಕೂಡಲೆ ಅಲ್ಲಿಂದ ಹೊರಟು "ಕೋಶಕ್‌ಧಾರ್" ಎಂಬಲ್ಲಿ ಬೀಡುಬಿಟ್ಟನು.

ಘಿಯಾಸುದ್ದೀನನ ಕೊಲೆ:

ಇದೇ ಸಂದರ್ಭದಲ್ಲಿ ಘಿಯಾಸುದ್ದೀನನ ಮರಣವೂ ಸಂಭವಿಸಿತು. ಈ

ಸಂದರ್ಭದಲ್ಲಿ ಎಲ್ಲ ಪ್ರಮುಖ ಅಮೀರರು ಸುಲ್ತಾನ್ ಘಿಯಾಸುದ್ದೀನನ ಆಪ್ತರು ಎಲ್ಲರೂ ಸುಲ್ತಾನ್ ನಾಸಿರುದ್ದೀನನ ವಿರೋಧಿಗಳಾಗಿದ್ದರು. ಅವರೆಲ್ಲರೂ ದೃಢಪಡಿಸಿಕೊಂಡಿದ್ದೇನೆಂದರೆ ನಾಸಿರುದ್ದೀನನು ತನ್ನ ತಂದೆಗೆ ವಿಷವನ್ನು ಕೊಟ್ಟು ಸಾಯಿಸಿದ್ದಾನೆಂದು, ಈ ವಿಚಾರದಲ್ಲಿ "ರಾಖಿಮುಲ್ ಹುರೂಫ್‌ನ ಲೇಖಕ ಫರಿಶ್ತಾ"ನ ಅಭಿಪ್ರಾಯವೇನೆಂದರೆ– ಯಾರು ತನ್ನ ತಂದೆಯನ್ನು ಕೊಲೆಮಾಡಿ ಪಟ್ಟಕ್ಕೇರುತ್ತಾನೋ ಆತನು ಹೆಚ್ಚೆಂದರೆ ಒಂದು ವರುಷದ ತನಕ ಮಾತ್ರ ರಾಜ್ಯನ್ನಾಳುತ್ತಾನೆ ಎಂದು, ಅಷ್ಟೇ ಅಲ್ಲ ಒಂದು ವರ್ಷಕ್ಕಿಂತ ಹೆಚ್ಚಾಗಿ ಬದುಕುವುದು ಇಲ್ಲವೆಂದು ಹೇಳಿದ್ದಾನೆ. ಆದರೆ ಸುಲ್ತಾನ್ ನಾಸಿರುದ್ದೀನನು ಈ ಅಭಿಪ್ರಾಯಕ್ಕೆ ವಿರುದ್ಧವಾಗಿ ಬಹಳ ಕಾಲದವರೆಗೆ ಜೀವಂತವಾಗಿಯೂ ಇದ್ದುದ್ದೇ ಅಲ್ಲದೇ ಬಹಳ ಕಾಲ ಶಾಸಕನಾಗಿಯೂ ಬದುಕಿದ್ದನು. ಇದರಿಂದಾಗಿ ಸುಲ್ತಾನ್ ಘಿಯಾಸುದ್ದೀನನ ಕೊಲೆಗಾರ ಸುಲ್ತಾನ್ ನಾಸಿರುದ್ದೀನನನೇ ಆಗಿದ್ದನೆಂದು ಹೇಳುವುದು ಅಷ್ಟು ಸಮಂಜಸವಲ್ಲ. ಒಂದು ವೇಳೆ ನಾಸಿರುದ್ದೀನನು ಅಂತಹ ಅಸಭ್ಯ ಕೆಲಸ ಮಾಡಿದ್ದಿದ್ದರೆ ಆತನ ಮೇಲೆ ಕೆಟ್ಟ ಪರಿಣಾಮ ಆಗದೇ ಇರುತ್ತಿರಲಿಲ್ಲವೆಂಬ ನಂಬಿಕೆಯೇ ಜನರಲ್ಲಿ ಹೆಚ್ಚಾಗಿತ್ತು. ಆದ್ದರಿಂದ ಸುಲ್ತಾನ್ ನಾಸಿರುದ್ದೀನನ ಮೇಲೆ ಅಂತಹ ಅಪರಾಧವನ್ನು ಹೊರಿಸುವುದು ಸೂಕ್ತವಲ್ಲವೆಂಬುದೇ ಎಲ್ಲರ ತೀರ್ಮಾನವಾಯಿತು. ಸತ್ಯ ಸಂಗತಿ ಭಗವಂತನೇ ಬಲ್ಲ.

ಶೇರ್‌ಖಾನ್‌ನ ದಮನ:

ಸುಲ್ತಾನ್ ನಾಸಿರುದ್ದೀನನು ತನ್ನ ತಂದೆಯ ಮರಣಕ್ಕೆ ತುಂಬಾ ದುಃಖ ಪಟ್ಟನು. ಮೂರು ದಿನಗಳ ದುಃಖಸೂಚಕ ಸಂಪ್ರದಾಯವನ್ನು ಅಚರಿಸಿದನು. ಇದಾದ ನಂತರ ಚಂದೇರಿಯತ್ತ ನಡೆದನು. ಏಕೆಂದರೆ ಆತನು ಪ್ರಮುಖ ಕರ್ತವ್ಯವೆಂದರೆ ಶೇರ್‌ಖಾನ್‌ನ ವಿದ್ರೋಹಗಳನ್ನು ಅಡಗಿಸಿ ಆತನನ್ನು ದಮನ ಮಾಡಬೇಕಾಗಿತ್ತು. ಐನುಲ್‌ಮುಲ್ಕ ಮತ್ತು ಇನ್ನಿತರೇ ಸರದಾರರು ಶೇರ್‌ಖಾನ್‌ನ ಜೊತೆಯಿಂದ ದೂರವಾದರು. ಸುಲ್ತಾನ್ ನಾಸಿರುದ್ದೀನನ ಪಕ್ಷಕ್ಕೆ ಇವರೆಲ್ಲರೂ ಬಂದು ಸೇರಿಕೊಂಡರು. ಶೇರ್‌ಖಾನ್‌ನು ಸುಲ್ತಾನನ ಹೆದರಿಕೆಯಿಂದಾಗಿ ಸಾರಂಗಪುರದತ್ತ ಓಡಿಹೋದನು. ಬಾದಷಹನು ಆತನನ್ನು ಹಿಂಬಾಲಿಸಿದನು. ಕೊನೆಗೆ ಇಬ್ಬರಲ್ಲೂ ಯುದ್ಧವಾಯಿತು. ಶೇರ್‌ಖಾನ್ ಸೋತು ಏರ್‌ಜಾ ಕಡೆಗೆ ಓಡಿಹೋದನು. ಬಾದಷಹನು ಚಂದೇರಿ ತಲುಪಿದನು. ಅಲ್ಲಿ ಕೆಲದಿನ ತಂಗಿದನು.

ಚಂದೇರಿಯ ಶೇಖ್‌ಜಾದರ ಪತ್ರ ಶೇರ್‌ಖಾನನಿಗೆ:

ಚಂದೇರಿಯ ಶೇಖ್ ಸಂತರ ಮಕ್ಕಳು ಶೇರ್‌ಖಾನನಿಗೊಂದು ಪತ್ರವನ್ನು ಹೀಗೆ ಬರೆದು ಕಳುಹಿಸಿದರು "ಬಾದಷಹನ ಅನೇಕ ಸಿಪಾಯಿಗಳು, ಅಮೀರರು ತಮ್ಮ ತಮ್ಮ ಜಾಗೀರುಗಳಿಗೆ ಚಂದೇರಿಯನ್ನು ಬಿಟ್ಟು ಹೋಗಿದ್ದಾರೆ. ಈಗಿನ ದಿನಗಳಲ್ಲಿ

ಮಳೆಯೂ ಸುರಿಯುತ್ತಿದೆ. ಈ ಸಂದರ್ಭದಲ್ಲಿ ಬಾದಷಹನು ಇಲ್ಲಿ ತಂಗಿದ್ದು ರಕ್ಷಣಕ್ಕೆ ಸೈನ್ಯವನ್ನು ಸಂಗ್ರಹಿಸಲಾರ. ನೀವು ಈಗ ಚಂದೇರಿಗೆ ಬಂದು ಇಲ್ಲಿನ ಜನರನ್ನು ನಿಮ್ಮ ಪಕ್ಷಕ್ಕೆ ಸೇರಿಸಿಕೊಂಡು ಬಾದಷಹನನ್ನು ಬಹಳ ಸುಲಭವಾಗಿ ಬಂಧಿಸಬಹುದಾಗಿದೆ. ಬರುವುದಾದರೆ ಈಗಲೇ ತಕ್ಷಣವೇ ಬರಬೇಕು. ಇಲ್ಲದಿದ್ದರೆ ಕೆಲಸವು ಸಫಲವಾಗುವುದಿಲ್ಲ" ಎಂದು ಬರೆದಿದ್ದರು.

ಯುದ್ಧದ ನಂತರ ಶೇರಖಾನನ ಮರಣ:

ಸುಲ್ತಾನ್ ನಾಸಿರುದ್ದೀನನಿಗೆ ಶೇಖ್‌ಜಾದರ ಪಿತೂರಿಯ ರಹಸ್ಯ ತಿಳಿಯಿತು. ಸುಲ್ತಾನನು ತಕ್ಷಣ ಇಕ್ಬಾಲ್‌ಖಾನ್ ಮತ್ತು ಮಲ್ಲೂಖಾನ್‌ರೊಂದಿಗೆ ಸೈನ್ಯವನ್ನು ಕೊಟ್ಟು ಶೇರ್‌ಖಾನನನ್ನು ದಮನಿಸಲು ಕಳುಹಿಸಿದನು. ಚಂದೇರಿ ನಗರದ ಎರಡು ಮೈಲಿ ದೂರದಲ್ಲಿ ಎರಡೂ ಕಡೆ ಸೈನಿಕರು ಎದುರಾದರು. ಇಬ್ಬರಲ್ಲೂ ಘೋರ ಯುದ್ಧ ನಡೆಯಿತು. ಯುದ್ಧದಲ್ಲಿ ಶೇರ್‌ಖಾನನು ಗಾಯಗೊಂಡು ಬಿದ್ದನು. ಆತನ ಆಪ್ತ ವೀರನಾದ ಸಿಕಂದರ್‌ಖಾನನು ಯುದ್ಧದಲ್ಲಿ ಸತ್ತನು. ಇದಾದ ನಂತರ ಮಹಾಬತ್‌ಖಾನನು ಆನೆಯ ಮೇಲೆ ಗಾಯಗೊಂಡ ಶೇರ್‌ಖಾನನನ್ನು ಹೊತ್ತು ಪರಾರಿಯಾದನು. ದಾರಿಯಲ್ಲೇ ಶೇರ್‌ಖಾನನು ಸತ್ತನು. ಮಹಾಬತ್‌ಖಾನನು ಶೇರ್‌ಖಾನನ ಶವವನ್ನು ಅಲ್ಲಿಯೇ ದಫನ್ ಮಾಡಿದನು. ತಾನು ಅಲ್ಲಿಂದ ದೂರದ ದೇಶಕ್ಕೆ ಓಡಿಹೋದನು.

ಬಾದಷಹನು ಸಾದಲ್‌ಪುರದಲ್ಲಿ:

ಸುಲ್ತಾನ್ ನಾಸಿರುದ್ದೀನನು ಯುದ್ಧ ನಡೆದ ಮೈದಾನಕ್ಕೆ ಬಂದನು. ಆತನು ಶೇರ್‌ಖಾನನನ್ನು ಹೂತಿದ್ದ ಜಾಗಕ್ಕೆ ಹೋಗಿ ಆತನ ಶವವನ್ನು ಹೊರಕ್ಕೆ ತೆಗೆಯಿಸಿದ. ಶವವನ್ನು ಚಂದೇರಿಗೆ ತಂದು ಎಲ್ಲರೂ ಕಾಣುವಂತೆ ನೇಣುಗಂಬಕ್ಕೆ ಏರಿಸಿದ. ಇದಾದ ನಂತರ ಚಂದೇರಿಯ ಶಾಸನವನ್ನು ಬಹಜತ್‌ಖಾನನ ವಶಕ್ಕೆ ಕೊಟ್ಟು ತಾನು ಪ್ರಯಾಣವನ್ನು ಮಾಡುತ್ತ ಸಾದಲ್‌ಪುರಕ್ಕೆ ತಲುಪಿದನು.

ಆಲಂಖಾನನ ಸೆರೆ:

ಇಲ್ಲಿಗೆ ಬಂದಾಗ ಸುಲ್ತಾನ್ ನಾಸಿರುದ್ದೀನನಿಗೆ ತಿಳಿದು ಬಂದದ್ದೇನೆಂದರೆ ಶೇಖ್‌ಹಬೀಬುಲ್ಲಾ ಅಲ್‌ಮುಖಾತಿಬ್ ಆಲಂಖಾನನ ನಿಯತ್ತು ಸರಿಯಿಲ್ಲವೆಂದು ಆತನು ವಿದ್ರೋಹಿ ಮನಸುಳ್ಳವನಾಗಿದ್ದಾನೆಂದು ತಿಳಿಯಿತು. ಬಾದಷಹನು ಆತನನ್ನು ಬಂಧಿಸಿದನು. ತಾನು ಅಲ್ಲಿಂದ ಹೊರಡುವುದಕ್ಕೆ ಮುಂಚೆಯೇ ಆಲಂಖಾನನನ್ನು ಮಾಂಡುವಿಗೆ ಕಳುಹಿಸಿದನು. ಇದಾದ ನಂತರ ಸ್ವತಃ ತಾನೂ ಮಾಂಡುವಿನತ್ತ ಹೊರಟನು.

ಸುಲ್ತಾನ್ ನಾಸಿರುದ್ದೀನನ ಸಂಶಯಾತ್ಮಕ ಕ್ರಮ:

ಸುಲ್ತಾನ್ ನಾಸಿರುದ್ದೀನನ ತಂದೆಯವರ ಕಾಲದಲ್ಲಿ ನೇಮಕವಾಗಿದ್ದ ಅನೇಕ ಹಿರಿಯ ಸೇವಕರನ್ನು ಸುಲ್ತಾನನು ಅನುಮಾನಾಸ್ಪದವಾಗಿಯೇ ಕಾಣುತ್ತಿದ್ದನು. ಅವರಿಂದ ವಿದ್ರೋಹಿ ವಾಸನೆ ಬರುತ್ತಿದೆಯೆಂದು ಸಂಶಯವನ್ನು ಪಡುತ್ತಲೇ ಇದ್ದನು. ಈ ಕಾರಣದಿಂದಾಗಿ ಸುಲ್ತಾನನು ಅವರೊಂದಿಗೆ ಯಾವಾಗಲೂ ಸಿಟ್ಟಾಗಿಯೇ ಇರುತ್ತಿದ್ದನು. ಅವರನ್ನು ತಿರಸ್ಕರಿಸಿಕೊಂಡು ತನಗೆ ಬೇಕಾದ ಆಪ್ತರ ಕಡೆ ಹೆಚ್ಚು ಗಮನ ನೀಡಿ ಅವರನ್ನು ಹೆಚ್ಚಾಗಿ ಸಂತೃಪ್ತಿಗೊಳಿಸುತ್ತಿದ್ದನು. ಬಾದಷಹನು ತನ್ನ ತಾಯಿಯಾದ ರಾಣಿ ಖುರ್‌ಶೀದಳ ಜೊತೆಯಲ್ಲಿಯೂ ಸಂಶಯಾತ್ಮಕವಾಗಿಯೇ ನಡೆದುಕೊಳ್ಳುತ್ತಿದ್ದ. ತನ್ನ ತಂದೆಯ ಒಂದು ಖಜಾನೆಯ ಅಧಿಕಾರ ತಾಯಿಯ ಬಳಿಯಲ್ಲೇ ಇತ್ತು. ಇದನ್ನು ಹಿಂಸಾತ್ಮಕವಾಗಿಯೇ ಕಿತ್ತುಕೊಂಡನು.

ಬಾದಷಹನ ಮದ್ಯವ್ಯಸನ ಮತ್ತು ರಕ್ತಪಾತ:

ಇದಾದ ನಂತರ ಸುಲ್ತಾನ್ ನಾಸಿರುದ್ದೀನನು ಮದ್ಯಪಾನದಿಂದ ಯಾವಾಗಲೂ ಮತ್ತನಾಗಿದ್ದು ರಕ್ತಪಾತದಲ್ಲಿಯೇ ಹೆಚ್ಚು ಕಾಲವನ್ನು ಕಳೆಯತೊಡಗಿದನು. ತನ್ನ ತಂದೆಯವರ ಕಾಲದ ಹಿರಿಯ ಸೇವಕರನ್ನು ಶರಾಬ್ ಕುಡಿಸಿ ಅವರ ಕೊಲೆಗಳನ್ನು ಮಾಡಿಸುತ್ತಿದ್ದನು. ಸುಲ್ತಾನನ ಈ ಕೆಟ್ಟ ಆಚರಣೆಗಳಿಂದಾಗಿ ರಾಜ್ಯದಲ್ಲಿ ಕೆಟ್ಟ ಅಲ್ಲೋಲ ಕಲ್ಲೋಲಗಳು ಆರಂಭವಾದವು. ಪ್ರಜೆಗಳು ಸುಲ್ತಾನನನ್ನು ವಿರೋಧಿಸತೊಡಗಿದರು.

ನಾಸಿರುದ್ದೀನನ ಹಿಂಸಾಂತ್ಮಕ ಘಟನೆ:

ಒಂದು ದಿನ ಸುಲ್ತಾನನು ತನ್ನ ಅಂತಃಪುರದೊಳಗೆ ನೀರಿನ ಕೊಳದ ಪಕ್ಕದಲ್ಲಿ ಒಂದು ವಿಲಾಸಕೂಟವನ್ನು ಏರ್ಪಡಿಸಿದ್ದನು. ಈ ಕೂಟದಲ್ಲಿ ಅಂದು ಎಷ್ಟು ಶರಾಬ್‌ನ್ನು ಕುಡಿದನೆಂದರೆ ಆತನು ಪ್ರಜ್ಞೆಯನ್ನು ಸಂಪೂರ್ಣವಾಗಿ ಕಳೆದುಕೊಂಡು ಬಿಟ್ಟನು. ಅಲ್ಲಿಯೇ ಬಿದ್ದು ಮಲಗಿದನು. ಹೊರಳಾಡುತ್ತ ನೀರಿನ ಕೊಳದಲ್ಲಿ ಬಿದ್ದನು. ಅಲ್ಲಿಯೇ ಇದ್ದ ನಾಲ್ಕು ಜನ ಸೇವಕಿಯರು ಬಹಳ ಕಷ್ಟಪಟ್ಟು ನೀರಿನಿಂದ ಹೊರತಂದರು. ಆತನ ಉಡುಪೆಲ್ಲವೂ ನೆನೆದಿತ್ತು. ಅದನ್ನು ತೆಗೆದು ಒಣಗಿದ ಉಡುಪನ್ನು ತೊಡಸಿದರು. ಅಷ್ಟು ಹೊತ್ತಿಗೆ ಬಾದಷಹನಿಗೆ ಎಚ್ಚರವಾಗಿತ್ತು. ತನಗೆ ತಲೆ ನೋಯುತ್ತಿದೆ ಎಂದು ತಿಳಿಸಿದ. ಸೇವಕಿಯರು ನೀರಿನಲ್ಲಿ ಬಿದ್ದಿದ್ದ ಘಟನೆಯ ವಿಷಯವನ್ನು ತಿಳಿಸಿದರು. ಆತನಿಗೆ ಯಾವ ಸಿಟ್ಟು ಬಂದಿತೋ ಗೊತ್ತಿಲ್ಲ, ತಕ್ಷಣ ತನ್ನ ಕತ್ತಿಯನ್ನು ಹಿರಿದು ಆ ನಾಲ್ಕು ಜನ ಸೇವಕಿಯರನ್ನು ಕೊಲೆ ಮಾಡಿಬಿಟ್ಟನು. ಅವರು ನಿರಪರಾಧಿಗಳಾಗಿದ್ದರು. ಈ ವಿಚಾರಗಳಿಂದ ಸುಲ್ತಾನ್ ನಾಸಿರುದ್ದೀನನು ಎಂತಹ ಕ್ರೂರಿಯಾಗಿದ್ದನೆಂದು ತಿಳಿದುಬರುತ್ತದೆ.

ಕಛ್ವಾರ್‌ದ ಮೇಲೆ ಸೈನಿಕಾಚರಣೆ:

ಹಿಜರಿ ೯೦೮ ರಲ್ಲಿ ಸುಲ್ತಾನ್ ನಾಸಿರುದ್ದೀನನು ಕಛ್ವಾರ್‌ದ ಮೇಲೆ ಆಕ್ರಮಣವನ್ನು ಮಾಡಲು ನಿಶ್ಚಯಿಸಿದನು. ಈ ಉದ್ದೇಶಕ್ಕಾಗಿ ಆತನು ನಾಲ್ಚಾ ಪ್ರದೇಶಕ್ಕೆ ಬಂದನು. ಇಲ್ಲಿಂದ ಬಾದಷಹನು ಕಸಬಾ ಆಗ್ರಕ್ಕೆ ತಲುಪಿದನು. ಈ ಪ್ರದೇಶದ ಪ್ರಕೃತಿ ಸೌಂದರ್ಯ ಮತ್ತು ವಾತಾವರಣವನ್ನು ನೋಡಿ ತುಂಬಾ ಆಕರ್ಷಿತನಾದನು. ಇಲ್ಲಿ ಒಂದು ಭವ್ಯ ಅರಮನೆಯನ್ನು ನಿರ್ಮಿಸಿದನು. ಅದು ಕಲಾತ್ಮಕತೆಯಲ್ಲಿ ತನ್ನದೇ ಆದ ವಿಶೇಷತೆಯನ್ನು ಪಡೆದಿತ್ತು. ಇದಾದ ನಂತರ ಕಛ್ವಾರ್‌ದ ಪ್ರದೇಶದಲ್ಲಿ ಲೂಟಿ, ಕೊಲೆ, ಹಿಂಸೆಗಳನ್ನು ಪ್ರಾರಂಭಿಸಿದನು. ನಂತರ ಕೆಲ ದಿನಗಳಾದ ಮೇಲೆ ಅಲ್ಲಿಂದ ವಾಪಸ್ಸಾದನು.

ಚಿತ್ತೂರಿನ ಪ್ರಯಾಣ:

ಹಿಜರಿ ೯೧೯ರಲ್ಲಿ ಸುಲ್ತಾನ್ ನಾಸಿರುದ್ದೀನನು ಚಿತ್ತೂರಿನ ಪ್ರಯಾಣವನ್ನು ಕೈಗೊಂಡನು. ಅಲ್ಲಿನ ರಾಜ ರಣಮಲ್ಲ ಮತ್ತು ಎಲ್ಲ ಜಮೀನ್ದಾರರಿಂದ ಕಂದಾಯಗಳನ್ನು ವಸೂಲು ಮಾಡಿದನು. ರಾಜ ರಣಮಲ್ಲನ ಸಂಬಂಧಿಕನಾದ ಜೀವನಮಲ್ಲನು ತನ್ನ ಮಗಳನ್ನು ಬಾದಷಹನ ಸೇವೆಯಲ್ಲಿ ಒಪ್ಪಿಸಿದನು. ಬಾದಷಹನು ಆ ಹುಡುಗಿಯ ಹೆಸರನ್ನು ಬದಲಾಯಿಸಿ "ರಾಣಿ ಚಿತ್ತೋರಿ" ಎಂದು ನಾಮಕರಣವನ್ನು ಮಾಡಿದನು. ನಂತರ ಅಲ್ಲಿಂದ ರಾಜಧಾನಿಯತ್ತ ಬಂದನು.

ಅಹಮದ್ ನಿಜಾಮಷಾಹನು ಬುರ್ಹಾನ್‌ಪುರದ ಮೇಲೆ ಆಕ್ರಮಣ:

ದಾರಿಯಲ್ಲಿಯೇ ಸುಲ್ತಾನ ನಾಸಿರುದ್ದೀನನನಿಗೆ ಸುದ್ದಿ ತಿಳಿದಿದ್ದೇನೆಂದರೆ ಅಹಮದ್ ನಿಜಾಮಷಾಹನು ಕೆಲವು ವಿಷಯಗಳ ತಪ್ಪು ತಿಳಿವಳಿಕೆಯ ಕಾರಣಗಳಿಂದಾಗಿ ಬುರ್ಹಾನ್‌ಪುರದ ಮೇಲೆ ಆಕ್ರಮಣವನ್ನು ಮಾಡಿದ್ದಾನೆಂದು, ಅಷ್ಟೇ ಅಲ್ಲದೇ ಆ ಪ್ರದೇಶಗಳಲ್ಲಿ ವಿನಾಶ, ಲೂಟಿ, ಬೆಂಕಿಗಳ ಆರ್ಭಟವನ್ನು ಮಾಡುತ್ತಿದ್ದಾನೆಂದು ತಿಳಿಯಿತು. ಬುರ್ಹಾನ್‌ಪುರದ ಶಾಸಕನಾಗಿದ್ದ ದಾವುದ್‌ಖಾನ ಫಾರೂಕಿಯು ಅಸೀರ್ ಕೋಟೆಯಲ್ಲಿ ಆಶ್ರಯ ಪಡೆದಿದ್ದಾನೆಂದು ತಿಳಿಯಿತು. ಏಕೆಂದರೆ ಅಹಮದ್ ನಿಜಾಮಷಾಹನನ್ನು ಎದುರಿಸಲು ಸಮರ್ಥನಾಗಿರಲಿಲ್ಲ.

ದಾವುದ್‌ಖಾನ ಫಾರೂಕಿಯ ಸಹಾಯಕ್ಕೆ:

ಅಸೀರ್ ಕೋಟೆಯ ಶಾಸಕ ದಾವುದ್‌ಖಾನ ಫಾರೂಕಿಯೊಂದಿಗೆ ಸುಲ್ತಾನ್ ನಾಸಿರುದ್ದೀನನ ಸಂಬಂಧಗಳು ಚೆನ್ನಾಗಿ ಇದ್ದವು. ದಾವುದ್‌ಖಾನನಿಗೆ ಬಂದ ಸಂಕಟಗಳ ಸಂದರ್ಭದಲ್ಲೆಲ್ಲ ಸುಲ್ತಾನ್ ನಾಸಿರುದ್ದೀನನು ಸಹಾಯವನ್ನು ಮಾಡುತ್ತಿದ್ದನು. ಈ ಸಲವೂ ಸುಲ್ತಾನನು ಸ್ನೇಹಿತನ ಸಹಾಯಕ್ಕೆ ನಿಂತನು. ಇದಕ್ಕಾಗಿ ಇಕ್ಬಾಲ್‌ಖಾನನನ್ನು,

ಮಲ್ಲೂಖಾನನನ್ನು ಆತನ ಸಹಾಯಕ್ಕೆಂದು ಒಂದು ವಿಶಾಲ ಸೈನ್ಯವನ್ನು ಕೊಟ್ಟು ಬುರ್ಹಾನ್‌ಪುರದತ್ತ ಕಳುಹಿಸಿದನು. ಅಹಮದ ನಿಜಾಮಷಾಹನಿಗೆ ಈ ಸಮಾಚಾರವು ತಿಳಿದ ತಕ್ಷಣ ದಂಗೆಯನ್ನು ನಿಲ್ಲಿಸಿ ಭಯದಿಂದ ತನ್ನ ರಾಜಧಾನಿ ಅಹಮದ ನಗರದತ್ತ ಓಡಿದನು. ಇಕ್ಬಾಲ್‌ಖಾನನು ಬುರ್ಹಾನ್‌ಪುರದಲ್ಲಿ ಸುಲ್ತಾನ್ ನಾಸಿರುದ್ದೀನನ ಪ್ರಶಂಸಾತ್ಮಕ ಪ್ರವಚನ (ಖುತ್ಬಾ) ವನ್ನು ಜಾರಿಗೊಳಿಸಿದನು. ನಂತರ ಮಾಂಡುವಿಗೆ ವಾಪಸ್ಸಾದನು.

ಷಹಜಾದ ಷಹಾಬುದ್ದೀನನು ತಂದೆ ನಾಸಿರುದ್ದೀನನೊಂದಿಗೆ ವಿರಸ:

ಹಿಂದಿನ ಪುಟಗಳಲ್ಲಿ ವರ್ಣಿತವಾಗಿರುವಂತೆ ನಾಸಿರುದ್ದೀನನು ತನ್ನ ತಂದೆಯಾದ ಘಿಯಾಸುದ್ದೀನನ ವಿರುದ್ಧ ಅಸಭ್ಯ ವರ್ತನೆಗಳನ್ನು ತೋರಿದ್ದನು. ಇದರಂತೆಯೇ ತನ್ನ ಮಗ ಷಹಾಬುದ್ದೀನನು ಸಹ ನನ್ನ ವಿರುದ್ಧ ವಿದ್ರೋಹವನ್ನು ಮಾಡಬಹುದೆಂಬ ಭಯ ಯಾವತ್ತೂ ಆತನಿಗೆ ಕಾಡುತ್ತಿತ್ತು. ತನ್ನ ತಂದೆಯ ಈ ಭಾವನೆಯನ್ನು ಷಹಾಬುದ್ದೀನನು ಅರಿತಿದ್ದನು. ಇದರಿಂದಾಗಿ ಆತನು ಷಾಹಿ ದರಬಾರಿಗೆ ಹೆಚ್ಚಾಗಿ ಹೋಗುತ್ತಿರಲೇ ಇಲ್ಲ. ತನ್ನ ತಂದೆಯ ಕ್ರೂರ ಸ್ವಭಾವದಿಂದಾಗಿ ಬೇಸತ್ತಿದ್ದನು. ತನ್ನ ತಂದೆಯೊಂದಿಗೆ ಅಷ್ಟಾಗಿ ಪ್ರೀತಿಯಿಂದಿರಲಿಲ್ಲ. ಬೇರೆ ಬೇರೆ ದರಬಾರಿಗಳು ಸುಲ್ತಾನನ ಕ್ರೂರತನದಿಂದ ದೂರವಾಗಲು ಇಷ್ಟಪಡುತ್ತಿದ್ದರು. ಸುಲ್ತಾನ್ ನಾಸಿರುದ್ದೀನನು ಬೇಗ ಸತ್ತು ಹೋದರೆ ಒಳ್ಳೆಯದೆಂದು ಹಾರೈಸುತ್ತಿದ್ದರು.

ಸುಲ್ತಾನ್ ನಾಸಿರುದ್ದೀನನ ವಿರೋಧ:

ಹಿಜರಾ ಶಕೆ ೯೧೬ ರಲ್ಲಿ ಕೆಲವು ಮಾಳವೀ ಅಮೀರರು ಸುಲ್ತಾನ್ ಷಹಾಬುದ್ದೀನನೊಂದಿಗೆ ವಿಚಾರ ಮಡಿ ಬಾದಷಹನ ವಿರೋಧದಲ್ಲಿ ತರಬೇತಿಯನ್ನು ಕೊಟ್ಟರು. ಆತನು ಮೊದಲೇ ತನ್ನ ತಂದೆಯಿಂದ ಬೇಸರವಾಗಿದ್ದನು. ಈಗ ಕೆಲ ಅಮೀರರ ಚಿತಾವಣೆ ಸಿಕ್ಕಿದುದರಿಂದ ತಾನು ಇನ್ನೂ ತಂದೆಯ ವಿರೋಧಿಯಾದನು. ಆತನು ರಾಜಧಾನಿಯಿಂದ ಹೊರಬಂದು, ಹೊರಪ್ರದೇಶದ ಜನರನ್ನು ಪ್ರಚೋದಿಸಲಾರಂಭಿಸಿದನು. ಜನರೂ ನಾಸಿರುದ್ದೀನನ ಕ್ರೂರತನದಿಂದ ಬೇಸತ್ತಿದ್ದರು. ಎಲ್ಲರೂ ಷಹಾಬುದ್ದೀನನ ಪಕ್ಷದಲ್ಲಿ ಸೇರಲಾರಂಭಿಸಿದರು.

ಅಪ್ಪ ಮಗನಲ್ಲಿ ಯುದ್ಧ:

ಸುಲ್ತಾನ್ ನಾಸಿರುದ್ದೀನನಿಗೆ ತನ್ನ ಮಗನ ವಿದ್ರೋಹದ ಸುದ್ದಿ ತಿಳಿಯಿತು. ಸೈನ್ಯವನ್ನು ತೆಗೆದುಕೊಂಡು ಮಗನ ಮೇಲೆ ಯುದ್ಧಕ್ಕೆ ಹೊರಟನು. ಅಪ್ಪ ಮಕ್ಕಳಲ್ಲಿ ಒಂದು ಭಯಾನಕ ರಕ್ತಪಾತದ ಯುದ್ಧವೇ ನಡೆಯಿತು. ಅಪ್ಪನ ಹತ್ತಿರ ಸೈನ್ಯದ ಸಂಖ್ಯೆ ಕಡಿಮೆಯೇ ಇತ್ತು. ಆದರೂ ಅಪ್ಪನಿಗೆ ಗೆಲವು ಸಿಕ್ಕಿತು. ಮಗನು ಯುದ್ಧದಲ್ಲಿ

ಸೋತು ದೆಹಲಿಯತ್ತ ಓಡಿದನು. ನಾಸಿರುದ್ದೀನನು ಮನಸ್ಸು ಮಾಡಿದ್ದರೆ ಮಗನನ್ನ ಹಿಂಬಾಲಿಸಿ ಹಿಡಿಯಬಹುದಿತ್ತು. ಮಗನ ಮಮತೆ ಅಲ್ಲಿ ಅಡ್ಡ ಬಂದು ಹಿಂದಕ್ಕೆ ಬಂದು ಬಿಟ್ಟನು.

ತಂದೆಯ ಕರೆ–ಮಗನ ತಿರಸ್ಕಾರ:

ಸುಲ್ತಾನ್ ನಾಸಿರುದ್ದೀನನು ತನ್ನ ಕೆಲ ಆಪ್ತರನ್ನು ಮಗನ ಹತ್ತಿರ ಕಳುಹಿಸಿ ಆತನಿಗೆ ಬುದ್ಧಿ ಹೇಳಲು ಪ್ರಯತ್ನಿಸಿದನು. ಆದರೆ ಷಹಾಬುದ್ದೀನನು ಈ ಕರೆಯನ್ನು ಮೋಸದ ಜಾಲವೆಂದು ಬಗೆದನು. ಆತನಿಗೆ ಪ್ರಾಣಭಯವಿದ್ದುದರಿಂದ ಅವರ ಕರೆಯನ್ನು ತಿರಸ್ಕರಿಸಿದನು. ಆದರೆ ನಾಸಿರುದ್ದೀನನು ತುಂಬಾ ನಿರಾಶನಾದನು.

ನಾಸಿರುದ್ದೀನನು ಕಾಯಿಲೆ ಬಿದ್ದನು:

ಮದ್ಯಪಾನದ ದುಶ್ಚಟವು ಆತನನ್ನು ದಿನದಿಂದ ದಿನಕ್ಕೆ ದುರ್ಬಲನಾಗಿಸುತ್ತಲೇ ಇತ್ತು. ಕೊನೆಗೂ ದುಶ್ಚಟದ ಕೆಟ್ಟ ಪರಿಣಾಮ ಆಗಿಯೇ ತೀರಿತು. ಒಂದು ದಿನ ಆತನಿಗೆ ತುಂಬಾ ಜ್ವರವು ಕಾಡಿತು. ಬಾದಷಹನ ಮೈ ತುಂಬಾ ಬಿಸಿಯಾಯಿತು. ಆ ದಿನಗಳು ತುಂಬಾ ತಂಪಾಗಿದ್ದರೂ ಈತನ ಶರೀರದಲ್ಲಿ ಬೆವರು ಹೆಚ್ಚಾಯಿತು. ಬಾದಷಹನು ತಣ್ಣೀರಿನಲ್ಲಿ ಸ್ನಾನ ಮಾಡಿದನು. ಈ ಕಾರಣದಿಂದಾಗಿ ಆತನ ಆರೋಗ್ಯ ತುಂಬಾ ಬಿಗಡಾಯಿಸಿತು. ಹಾಗೆಯೇ ಆತನ ಪ್ರಾಣಪಕ್ಷಿ ಹಾರಿಹೋಯಿತು.

ಮರಣ:

ಹಕೀಮರು, ವೈದ್ಯರುಗಳು ಬಹಳವಾಗಿ ಚಿಕಿತ್ಸೆ ನಡೆಸಿದರೂ ಫಲವಾಗಲಿಲ್ಲ. ಅತನ ಕಾಯಿಲೆ ಹೆಚ್ಚಾಯಿತೇ ಹೊರತು ಕಡಿಮೆಯಾಗಲಿಲ್ಲ. ಇಂತಹ ಪರಿಸ್ಥಿತಿಯಲ್ಲಿಯೇ ಬಾದಷಹನು ಒಂದು ದಿನ ತನ್ನೆಲ್ಲ ಅಮೀರರು, ದರಬಾರಿಗಳೆಲ್ಲರನ್ನೂ ತನ್ನ ಹತ್ತಿರ ಸೇರಿಸಲು ಆಜ್ಞಾಪಿಸಿದನು. ಅವರೆಲ್ಲರ ಎದುರಿನಲ್ಲಿ ತನ್ನ ಮೂರನೇ ಮಗನಾದ ಸುಲ್ತಾನ್ ಮಹಮೂದನನ್ನು ಬಹಿಸ್ತಪುರವೆಂಬಲ್ಲಿಗೆ ಅಧಿಕಾರಿಯನ್ನಾಗಿ ಘೋಷಿಸಿದನು. ಇದಾದ ನಂತರ ತನ್ನೆಲ್ಲ ಪಾಪ ಕೃತ್ಯಗಳಿಗೆ ಅಲ್ಲಾಹನಲ್ಲಿ ಕ್ಷಮೆಯಾಚಿಸಿದನು. ತಕ್ಷಣವೇ ಆತನ ಮರಣವಾಯಿತು.

ಖಿಲ್ಜಿ ನಾಸಿರುದ್ದೀನ ಸುಲ್ತಾನನು ಹನ್ನೊಂದು ವರ್ಷ ನಾಲ್ಕು ತಿಂಗಳು ಮೂರು ದಿನಗಳ ತನಕ ರಾಜ್ಯವಾಳಿದನು.

■

*

೪. ಸುಲ್ತಾನ ಮಹಮೂದ ಸಾನಿ ಬಿನ್ ನಾಸಿರುದ್ದೀನ ಖಿಲ್ಜಿ

ಷಹಾಬುದ್ದೀನನ ಓಟ:

ಸುಲ್ತಾನ್ ನಾಸಿರುದ್ದೀನನ ಸುದ್ದಿ ಎಲ್ಲ ಕಡೆ ಹಬ್ಬಿತ್ತು. ಈ ಸುದ್ದಿಯನ್ನು ತಿಳಿದ ಷಹಾಬುದ್ದೀನನು ಆಗ ಆತನು ದೆಹಲಿಯತ್ತ ಹೋಗುತ್ತಿದ್ದನು. ತಕ್ಷಣ ಹಿಂತಿರುಗಿ ತನ್ನ ತಂದೆಯಿದ್ದ ಮಾಂಡವಿನತ್ತ ಓಟ ಕಿತ್ತನು. ಬಹಳ ಬೇಗ ಮಾಂಡುವನ್ನು ತಲುಪಿದನು. ಸುಲ್ತಾನ್ ಮಹಮೂದ ಸಾನಿಯು ತಲುಪುವುದಕ್ಕೆ ಮೊದಲೇ ಈತನು ಜಫರಾಬಾದ್ ನಾಲ್ಚಕ್ಕೆ ತಲುಪಿದನು. ಮುಹಾಫಿಜ್‌ಖಾನ್ ಖ್ವಾಜಾಸರಾ ಮತ್ತು ಖವಾಸ್‌ಖಾನ್‌ರು ಕೋಟೆಯ ಬಾಗಿಲನ್ನು ಮುಚ್ಚಿದರು. ಷಹಾಬುದ್ದೀನನ್ನು ಕೋಟೆಯ ಒಳಗೆ ಪ್ರವೇಶಿಸಲು ಬಿಡಲಿಲ್ಲ. ಇಷ್ಟರೊಳಗೆ ಸುಲ್ತಾನ್ ಮಹಮೂದನು ಷಹಾಬುದ್ದೀನನಿದ್ದ ಸ್ಥಳಕ್ಕೆ ಬಂದು ಬಿಟ್ಟನು. ಪರಿಸ್ಥಿತಿ ತುಂಬಾ ಭಯಾನಕವಾಗಿತ್ತು. ಷಹಾಬುದ್ದೀನನು ಅಸೀರ್‌ನತ್ತ ಓಡಿದನು.

ಮಹಮೂದನ ಸಿಂಹಾಸನಾರೋಹಣ:

ಸುಲ್ತಾನ್ ಮಹಮೂದ ಸಾನಿಯು ಯಾವುದೇ ಅಡೆತಡೆಗಳಿಲ್ಲದೆ ಕೋಟೆಯೊಳಗೆ ಪ್ರವೇಶಿಸಿದನು. ನಿರಾತಂಕವಾಗಿ ಸಿಂಹಾಸನದ ಮೇಲೆ ಕುಳಿತನು. ಸಂಪ್ರದಾಯದಂತೆ ಆತನ ಸಿಂಹಾಸನಾರೋಹಣದ ಎಲ್ಲ ವಿಧಿಗಳು ಪೂರೈಸಿದರು. ಏಳನೂರು ಆನೆಗಳನ್ನು ದರಬಾರಿಗೆ ಕರೆತಂದರು. ಅವುಗಳ ಬೆನ್ನಿನ ಮೇಲೆ ಮಕ್ಮಲ್ ಮತ್ತು ಜರಿ, ಕುಸುರಿ ಕೆಲಸಗಳ ಕಲಾತ್ಮಕತೆಯಿಂದ, ರತ್ನಜಟಿತ ಉಡುಪುಗಳನ್ನು ಹೊದಿಸಿದ್ದರು. ಎಲ್ಲ ಅಮೀರರು, ಹಿರಿಯ ವಿದ್ವಾಂಸರು ನೆರೆದಿದ್ದರು. ಷಾಹಿ ಛತ್ರಿಯ ಮೇಲಿನಿಂದ ಅಸಂಖ್ಯ ಚಿನ್ನದ ನಾಣ್ಯಗಳು ಸುರಿದವು. ಬಾದಷಹನು ಈ ನಾಣ್ಯಗಳನ್ನೆಲ್ಲ ಬಡ-ಬಗ್ಗರಿಗೆ ದಾನ ಮಾಡಿದನು.

ಬಸಂತರಾಯನ ಕೊಲೆ:

ಬಸಂತರಾಯ ಎಂಬುವನು ಸುಲ್ತಾನ್ ಮಹಮೂದನ ಆಪ್ತ ಅಮೀರನಾಗಿದ್ದನು. ಆತನನ್ನು ಬಾದಷಹನು ಬಹಳವಾಗಿ ನಂಬಿದ್ದನು. ಸುಲ್ತಾನ್ ಮಹಮೂದನು ಇನ್ನೂ ಚಿಕ್ಕವನಾಗಿದ್ದ ಕಾಲದಿಂದಲೂ ಆತನ ಸಮೀಪವರ್ತಿಯಾಗಿದ್ದನು. ಇಷ್ಟೊಂದು ಸಲಿಗೆಯಿಂದ ಇದ್ದುದ್ದನ್ನು ಕಂಡ ಕೆಲವು ಅಮೀರರು ಆತನ ಮೇಲೆ ಅನುಮಾನಪಡಲಾರಂಭಿಸಿದರು. ಸಮಯವನ್ನು ನೋಡಿ ಆತನನ್ನು ಕೊಲೆಗೈದರು. ಬಸಂತರಾಯನು ವಿದ್ರೋಹಿಯಾಗಿದ್ದನೆಂದು ಬಾದಷಹನಿಗೆ ತಿಳಿಸಿದರು. ಆತನು ಅಮೀರರೊಳಗೆ ಮತ್ತು ಸಿಪಾಯಿಗಳಲ್ಲಿ ಪಿತೂರಿಯನ್ನು ನಡೆಸಿ ವಿದ್ರೋಹವನ್ನು ಮಾಡಲು ಹವಣಿಸುತ್ತಿದ್ದನೆಂದು ತಿಳಿಸಿದರು. ಇದರಿಂದ ನಾವು ಅವನನ್ನು ಕೊಲೆ ಮಾಡಿದ್ದೇವೆಂದು ತಿಳಿಸಿದರು.

ಅಮೀರ ಅನಗತ್ಯ ಕಾರ್ಯಕ್ರಮ:

ಬಾದಷಹನು ಅವರ ಮಾತನ್ನು ನಂಬಲಿಲ್ಲ. ಪರಿಸ್ಥಿತಿಯ ಕಾರಣಗಳಿಂದಾಗಿ ಸುಮ್ಮನಿರಬೇಕಾಯಿತು. ಇದಾದ ನಂತರ ಅಮೀರರು ಮತ್ತೊಂದು ಅನಗತ್ಯ ಕ್ರಮವಾಗಿ ಬಾದಷಹನ ಹತ್ತಿರ ಬಂದು– ನಖ್ದಿಲ್‌ಮುಲ್ಕ ಸಹ ಬಸಂತರಾಯನಂತೆಯೇ ವಿದ್ರೋಹಿಯಾಗಿದ್ದಾನೆಂದು ಚಾಡಿ ಹೇಳಿದರು. ಆತನ ಕೃತ್ಯಗಳು ಸಾಮ್ರಾಜ್ಯಕ್ಕೆ ಧಕ್ಕೆ ತರುವಂತಹವು ಎಂದರು. ಆತನನ್ನು ಕೊಲ್ಲಿಸುವುದೇ ಮೇಲೆಂದು ಸಲಹೆ ನೀಡಿದರು. ಆದರೆ ಸುಲ್ತಾನ್ ಮಹಮೂದನು ವಿವಶನಾಗಿ, ನಖ್ದಿಲ್‌ಮುಲ್ಕನನ್ನು ಅಮೀರರ ಸುಪರ್ಧಿಗೆ ಕಳುಹಿಸಿ ಹೀಗೆಂದನು– ಈತನನ್ನು ಕೊಲ್ಲಬೇಡಿ, ನಮ್ಮ ರಾಜ್ಯದಿಂದ ದೂರ ಓಡಿಸಿಬಿಡಿ ಎಂದು ಆಜ್ಞಾಪಿಸಿದನು. ಅಮೀರರು ಹಾಗೆಯೇ ನಡೆದುಕೊಂಡರು. ಆದರೆ ಈ ಘಟನೆಗಳಿಂದ ಬಾದಷಹನು ತುಂಬಾ ನೊಂದನು.

ಮುಹಾಫಿಜ್‌ಖಾನ್ ಖ್ವಾಜಾಸರಾನ ಪಿತೂರಿ:

ನಗರದ ಶಾಸಕ ಮುಹಾಫಿಜ್‌ಖಾನ್ ಖ್ವಾಜಾಸರಾ ಎಂಬುವನು ತುಂಬಾ ದುರಾಚಾರಿಯಾಗಿದ್ದನು. ರಾಜ್ಯದಲ್ಲಿ ಸಮರ್ಥ ನಾಯಕತ್ವ ಇಲ್ಲವೆಂದು ತಿಳಿದು ತನ್ನ ಆರ್ಥಿಕ ಪರಿಸ್ಥಿತಿಗಳನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತಿದ್ದನು. ಒಂದು ದಿನ ಸಮಯವನ್ನು ನೋಡಿ ಬಾದಷಹನಿಗೆ ಹೀಗೆಂದನು "ತಮ್ಮ ಇಬ್ಬರು ಸಹೋದರರು ಕೋಟೆಯಲ್ಲಿ ಖೈದಿಯಾಗಿದ್ದಾರೆ. ಅವರು ಏನಾದರು ಮಾಡಿ ಬಿಡುಗಡೆ ಹೊಂದಿದ ಮೇಲೆ. ಶಾಸನವನ್ನು ತಮ್ಮ ಕೈಯಲ್ಲಿ ತೆಗೆದುಕೊಳ್ಳಲು ಹವಣಿಸುತ್ತಿರುವರು. ನೀವೇ ಈ ಸಾಮ್ರಾಜ್ಯವನ್ನು ಆಳಬೇಕೆಂದಿದ್ದರೆ ಅವರನ್ನು ಕೊಲೆ ಮಾಡುವುದೇ ಮೇಲು ಇಲ್ಲದಿದ್ದರೆ ನೀವು ಮುಂದೆ ಪಶ್ಚಾತ್ತಾಪ ಪಡಬೇಕಾಗುತ್ತದೆ" ಎಂದನು.

ಬಾದಷಾಹನ ಆಪ್ತರಕ್ಷಕ ಮುಹಾಫೀಜ್‌ಖಾನನ ಅಪರಾಧ:

ಮುಹಾಫೀಜ್‌ಖಾನನ ಈ ಪಿತೂರಿಯುಕ್ತ ಸಲಹೆ ಸ್ವಲ್ಪವೂ ಹಿಡಿಸಲಿಲ್ಲ. ಆತನ ಈ ಕೆಟ್ಟ ಸಲಹೆಯಿಂದಾಗಿ ತುಂಬಾ ನೊಂದುಕೊಂಡ. "ನೀನು ನಿನ್ನ ಕೆಲಸವನ್ನು ಮಾತ್ರ ನೋಡಿಕೋ ನಿನ್ನಂತಹ ಮಾಮೂಲಿ ವ್ಯಕ್ತಿ ಅರಮನೆಯ ಷಾಹಿ ವ್ಯವಹಾರದಲ್ಲಿ ಮೂಗು ತೂರಿಸುವ ಅವಶ್ಯಕತೆ ಇಲ್ಲ. ಕೊಲೆ ಮಾಡುವಂತಹ ಸಲಹೆ ನಾನು ನಿನ್ನಿಂದ ಕೇಳಬೇಕಾಗಿಲ್ಲ" ಎಂದಾಗ ಮುಹಾಫೀಜ್‌ಖಾನನು ಕೆಲವು ಅಸಭ್ಯ ಶಬ್ದಗಳನ್ನು ಬಾದಷಹನ ಮುಂದೆ ಪ್ರಯೋಗಿಸಿದನು.

ಮುಹಾಫೀಜ್‌ಖಾನನ ಮೇಲೆ ಬಾದಷಹನ ಆಕ್ರಮಣ:

ಈ ಮಾತುಗಳನ್ನು ಕೇಳಿದ ಬಾದಷಹನಿಗೆ ಅಪಾರ ಕ್ರೋಧವುಂಟಾಯಿತು. ಒಬ್ಬ ಸೇವಕನ ಅಹಂಕಾರಯುತ ಅಪರಾಧವನ್ನು ಸಹಿಸಲಾಗಲಿಲ್ಲ. ಬಾದಷಹನು ಮುಹಾಫೀಜ್‌ಖಾನನ ಕೈಯಲ್ಲಿದ್ದ ಕತ್ತಿಯನ್ನೇ ಕಿತ್ತುಕೊಂಡು ಆತನ ಮೇಲೆ ಆಕ್ರಮಿಸಿದನು. ಸುಲ್ತಾನ್ ಮಹಮೂದನು ಮುಹಾಫೀಜ್‌ಖಾನನ ತಲೆಯ ಮೇಲೆ ಹೊಡೆದನು. ತಲೆಗೆ ಬಲವಾದ ಪೆಟ್ಟು ಬಿದ್ದಿತು. ರಕ್ತ ಹರಿಯುತ್ತಿತ್ತು. ಇದೇ ಸ್ಥಿತಿಯಲ್ಲಿ ಮುಹಾಫೀಜ್‌ಖಾನನು ಹೊರಬಂದನು.

ಬಾದಷಹನ ಕೊಲೆಯ ಸಂಚು:

ಮುಹಾಫೀಜ್‌ಖಾನನು ತನ್ನ ಸ್ನೇಹಿತರನ್ನು ಒಟ್ಟುಗೂಡಿಸಿದನು. ಬಾದಷಹನನ್ನು ಕೊಲೆಮಾಡಲು ಷಾಹಿ ಅರಮನೆಯತ್ತ ಬಂದನು. ಅನೇಕ ಅಮೀರರು ಈತನ ಕೃತ್ಯದ ಮೇಲೆ ಕಣ್ಣಿಟ್ಟಿದ್ದರು. ಕೆಲವರು ಈ ತಮಾಷೆಯನ್ನು ನೋಡಲು ಏನೂ ಗೊತ್ತಿಲ್ಲದವರಂತೆ ಸುಮ್ಮನಿದ್ದರು. ಸುಲ್ತಾನ್ ಮಹಮೂದನು ಈ ವಿಷಯವನ್ನು ಗಮನಿಸಿ ತನ್ನ ವಿಶೇಷ ರಕ್ಷಕ ಸೈನ್ಯದ ಒಂದು ಗುಂಪು ಅದರಲ್ಲಿ ಇರಾಕ್, ಖುರಾಸಾನ್, ಹಬಷ್ ದೇಶದ ಸೈನಿಕರಿದ್ದವರನ್ನು ತಯಾರು ಮಾಡಿ ಮುಹಾಫೀಜ್‌ಖಾನನ ಮೇಲೆ ಯುದ್ಧ ಮಾಡಲು ಅರಮನೆಯಿಂದ ಆಚೆ ಬಂದನು.

ಸಾಹಬ್‌ಖಾನನು ಬಾದಷಹನಾದುದು:

ಮುಹಾಫೀಜ್‌ಖಾನನು ಸುಲ್ತಾನ್ ಮಹಮೂದ ಖಿಲ್ಜಿ ಸಾನಿಯ ಸಹೋದರನಾದ ಸಾಹಬ್‌ಖಾನನ್ನು ಬಂಧನದಿಂದ ಬಿಡಿಸಿ, ತಾನು ಆತನನ್ನು ಬಾದಷಹನೆಂದು ಘೋಷಿಸಿದನು. ಮಹಮೂದ ಖಿಲ್ಜಿಯು ರಾಜ್ಯದಲ್ಲಿ ಸಂಚರಿಸಿ ಸೈನ್ಯವನ್ನು ಒದಗಿಸಿಕೊಂಡನು. ಎಲ್ಲರಿಗಿಂತ ಮೊದಲು ಅಮೀರರಲ್ಲಿನ ಮೇದಿನಿರಾಯ್ ಎಂಬುವನು ಬಾದಷಹನ ಹತ್ತಿರ ಬಂದು ನನ್ನ ಸಂಬಂಧಿಕರೆಲ್ಲರೂ ತಮ್ಮ ಸಹಾಯಕ್ಕೆ

ಇದ್ದಾರೆಂದು ಹೇಳಿದನು. ಇವನ ನಂತರ ಚಂದೇರಿಯ ಶಾಸಕ ಬಹಜತ್‌ಖಾನನ ಮಗ ಷರ್‌ಜಾಖಾನನು ಬಾದಷಹನ ನೆರವಿಗೆ ನಿಂತನು. ಇವರ ನಂತರ ಇನ್ನೂ ಅನೇಕ ಅಮೀರರು ಬಾದಷಹನ ಹತ್ತಿರಕ್ಕೆ ಬಂದರು. ಈ ರೀತಿಯಲ್ಲಿ ಸುಲ್ತಾನ್ ಮಹಮೂದ ಖಿಲ್ಜಿಯ ಸಾಮರ್ಥ್ಯ ಹೆಚ್ಚಾಯಿತು.

ಸಾಹಬ್‌ಖಾನ ಮತ್ತು ಸುಲ್ತಾನ್ ಮಹಮೂದರಲ್ಲಿ ಯುದ್ಧ:

ಸಾಹಬ್‌ಖಾನ ಮತ್ತು ಮುಹಾಫೀಜ್‌ಖಾನರೂ ಸಹ ಬಹಳ ಪ್ರಯತ್ನ ಪಟ್ಟು ಒಂದು ವಿಶಾಲ ಸೈನ್ಯವನ್ನು ಕ್ರೋಡೀಕರಿಸಿಕೊಂಡರು. ಸುಲ್ತಾನ್ ಮಹಮೂದನು ಒಂದು ಸೈನ್ಯದೊಂದಿಗೆ ದೌಲತಾಬಾದ್ ಮಾಂಡುವಿಗೆ ಬಂದನು. ಇಬ್ಬರಲ್ಲೂ ಯುದ್ಧವು ಆರಂಭವಾಗಿಯೇ ಬಿಟ್ಟಿತು. ಭಯಂಕರ ಯುದ್ಧವೇ ನಡೆಯಿತು. ಇಬ್ಬರೂ ಗೆಲುವನ್ನು ಸಾಧಿಸಲು ಎಲ್ಲ ಪ್ರಯತ್ನಗಳನ್ನು ಮಾಡಿದರು.

ಸಾಹಬ್‌ಖಾನನು ಮಾಂಡು ಕೋಟೆಯಲ್ಲಿ ಅಡಗಿದನು:

ಸಾಹಬ್‌ಖಾನನು ಬಹಳ ವೀರಾವೇಶದಿಂದಲೇ ಸುಲ್ತಾನ್ ಮಹಮೂದ ಸೈನ್ಯದ ಮೇಲೆ ಪ್ರತಿ ಹೆಜ್ಜೆಯಲ್ಲೂ ಆಕ್ರಮಣವನ್ನು ಮಾಡಿದನು. ಅದೇ ಸಂದರ್ಭದಲ್ಲಿ ಸಾಹಬ್‌ಖಾನನ ಒಂದು ಆನೆ ಸುಲ್ತಾನ್ ಮಹಮೂದ ಖಿಲ್ಜಿಯತ್ತ ಬರುತ್ತಿದ್ದುದು ಕಂಡಿತು. ಸುಲ್ತಾನ್ ಮಹಮೂದನು ಮಾವುತನ ಎದೆಗೆ ಸರಿಯಾಗಿ ಗುರಿಯಿಟ್ಟು ಬಾಣವನ್ನು ಬಿಟ್ಟನು. ಬಾಣವು ಮಾವುತನ ಹಾಗೂ ಆನೆಯ ಬೆನ್ನಿನಿಂದ ಪಾರಾಗಿ ಹೋಯಿತು. ಇದೇ ಸಂದರ್ಭದಲ್ಲಿ ಮೇದಿನಿರಾಯನು ರಾಜಪೂತರ ಸೈನಿಕರೊಂದಿಗೆ ಬರ್ಚಿ–ಭಲ್ಲೆಗಳ ಸಹಾಯದಿಂದ ಸಾಹಬ್‌ಖಾನನ ಮೇಲೆ ಬಿದ್ದನು. ಸಾಹಬ್‌ಖಾನನು ಈ ಆಕ್ರಮಣವನ್ನು ಎದುರಿಸಲಾರದೆ ಚಿಂತಿತನಾಗಿ ಮಾಂಡು ಕೋಟೆಯೊಳಗೆ ಹೋಗಿ ಆಶ್ರಯವನ್ನು ಪಡೆದುಕೊಂಡನು.

ಸಾಹಬ್‌ಖಾನನ ಹೆಸರಿಗೆ ಸುಲ್ತಾನ್ ಮಹಮೂದನ ಸಂದೇಶ:

ಸುಲ್ತಾನ್ ಮಹಮೂದನು 'ಹೌಸ್–ಹಸೀನ್' ಎಂಬ ನೀರಿನ ಕೊಳದವರೆಗೂ ಸಾಹಬ್‌ಖಾನನನ್ನು ಹಿಂಬಾಲಿಸಿ ಹೋದನು. ತಾನೂ ಅದೇ ಜಾಗದಲ್ಲಿ ಬೀಡು ಬಿಟ್ಟನು. ಸುಲ್ತಾನ್ ಮಹಮೂದನು ತನ್ನ ತಮ್ಮನಿಗೆ "ನೀನು ಸ್ವಲ್ಪ ಯೋಚಿಸಿ ನೋಡು ಎಂತಹ ಅಪರಾಧವನ್ನು ಮಾಡುತ್ತಿರುವಿ ಎಂದು ನಿನಗೆ ಎಷ್ಟು ಸಂಪತ್ತು ಬೇಕೋ ಅಷ್ಟು ಸಂಪತ್ತನ್ನು ನಾನು ಕೊಡಲು ಸಿದ್ಧನಿದ್ದೇನೆ. ನಿನಗೆ ಯಾವ ಪ್ರದೇಶ ಬೇಕೆನಿಸುತ್ತದೋ ಆ ಭಾಗವನ್ನು ಬಿಟ್ಟುಕೊಡಲು ನನಗೆ ಯಾವ ಹಿಂಜರಿಕೆಯೂ ಇಲ್ಲ. ಆದರೆ ಬಾದಷಹನಾಗುವ ಯೋಚನೆ ಕನಸನ್ನು ಮಾತ್ರ ನಿನ್ನ ಮನಸ್ಸಿನಿಂದ ತೆಗೆದುಹಾಕು" ಎಂದು ಒಂದು ಸಂದೇಶವನ್ನು ಕಳುಹಿಸಿದನು.

ಕೋಟೆಯನ್ನು ಸುತ್ತುವರಿದೆ ಮುತ್ತಿದನು:

ಸಾಹಬ್‌ಖಾನನಿಗೆ ತಾನು ಅಡಗಿಕೊಂಡಿರುವ ಕೋಟೆಯ ಭದ್ರತೆಯ ಬಗ್ಗೆ ಗರ್ವವಿತ್ತು. ಆತನು ಸುಲ್ತಾನ ಮಹಮೂದನ ಪತ್ರಕ್ಕೆ ಯಾವ ಬೆಲೆಯನ್ನೂ ಕೊಡಲಿಲ್ಲ. ಮತ್ತು ತನ್ನ ಇಚ್ಛೆಯಲ್ಲಿ ಬದಲಾವಣೆಯನ್ನೂ ತರಲಿಲ್ಲ. ಸುಲ್ತಾನ್ ಮಹಮೂದನು ಕೋಟೆಗೆ ಮುತ್ತಿಗೆಯನ್ನು ಹಾಕಿ ಅನೇಕ ತೊಂದರೆಗಳನ್ನು ಕೊಡಲು ಪ್ರಾರಂಭಿಸಿದನು.

ಮುಹಾಫೀಜ್‌ಖಾನನು ಪರಾರಿ:

ಕೋಟೆಯ ಒಳಗೆ ಕೆಲವು ಅಮೀರರು ಮುಹಾಫೀಜ್‌ಖಾನನನ್ನು ವಿರೋಧಿಸುವವರು ಇದ್ದರು. ಅವನ ಆಡಳಿತವನ್ನು ಕಠಿಣವಾಗಿ ವಿರೋಧಿಸುತ್ತಿದ್ದರು. ಇವರೆಲ್ಲರೂ ಸುಲ್ತಾನ್ ಮಹಮೂದನಿಗೆ ಒಂದು ಸಂದೇಶವನ್ನು ಕಳುಹಿಸಿ, ಒಂದು ವೇಳೆ ನೀವು ಕೋಟೆಯ ಒಳಗೆ ಬರಲು ಇಷ್ಟ ಪಡುವುದಾದರೆ ಕೋಟೆಯ ನಿಗದಿತ ಬಾಗಿಲ ಹೆಸರನ್ನು ಹೇಳಿ ಅಲ್ಲಿ ಬರುವಂತೆ ಕೇಳಿಕೊಂಡಿದ್ದರು. ನಾವು ಅಲ್ಲಿ ನಿಮ್ಮ ಸೇವೆಗೆ ಎಲ್ಲ ವ್ಯವಸ್ಥೆಯನ್ನು ಮಾಡಲು ಸಿದ್ಧರಿದ್ದೇವೆ. ಮುಹಾಫೀಜ್‌ಖಾನನಿಗೆ ಈ ವಿಚಾರವು ಗೊತ್ತಾಯಿತು. ಆತನು ಈಗ ಪರಿಸ್ಥಿತಿ ಸರಿಯಿಲ್ಲವೆಂದು ತಿಳಿದು ತನ್ನೊಂದಿಗೆ ಅಪಾರ ಸಂಪತ್ತು, ಒಡವೆ, ವಜ್ರ, ವೈಡೂರ್ಯ, ಅಗತ್ಯ ಸಾಮಾನುಗಳನ್ನು ತೆಗೆದುಕೊಂಡು ಸಾಹಬ್‌ಖಾನನನ್ನು ಒಂಟಿಯಾಗಿ ಬಿಟ್ಟು ಗುಜರಾತಿನತ್ತ ಪಲಾಯನ ಮಾಡಿದನು.

ಮುಹಾಫೀಜ್‌ಖಾನನಿಗೆ ಎಲ್ಲಿಯೂ ನೆಲೆಸಿಗಲಿಲ್ಲ:

ಗುಜರಾತನ್ನು ತಲುಪಿದ ಮುಹಾಫೀಜ್‌ಖಾನನು ತನ್ನ ಪಿತೂರಿಯ ಚಾಳಿಯನ್ನು ಅಲ್ಲಿಯೂ ತೋರಿಸಿ ಒಂದು ಹೊಸ ಆಟವನ್ನೇ ಆಡಿದ. ಅಲ್ಲಿ ಆತನು ಇರಾನ ದೇಶದ ಬಾದಷಹನ ರಾಜದೂತನಾದ ಇಸ್ಮಾಯಲನೊಂದಿಗೆ ಜಗಳವಾಡಿಕೊಂಡನು. ಈ ಕಾರಣದಿಂದಾಗಿ ಅವನಿಗೆ ಗುಜರಾತನಲ್ಲೂ ಇರಲು ಸಾಧ್ಯವಾಗಲಿಲ್ಲ. ಅಲ್ಲಿಂದ ಸುಲ್ತಾನ್ ಮುಜಫರ್‌ನ ಅಪ್ಪಣೆ ಇಲ್ಲದೆ ಅಸೀರ್‌ನತ್ತ ಪ್ರಯಾಣವನ್ನು ಬೆಳೆಸಿದ. ಅಸೀರಿನಿಂದ ಮುಹಾಫೀಜ್‌ಖಾನನು ಮುನ್ನೂರು ಸವಾರರೊಂದಿಗೆ 'ಕಾವೇಲ್'ನತ್ತ ನಡೆದ. ಅಲ್ಲಿ ಮಹಮೂದ ಮುಲ್ಕನ ಆಡಳಿತವಿತ್ತು. ಅಲ್ಲಿಗೆ ತಲುಪಿದ. ಆತನನ್ನು ಸಹಾಯ ಮಾಡಲು ಕೇಳಿಕೊಂಡನು. ಆತನು ದಯೆತೋರಿಸಿ ಆತನ ಖರ್ಚಿಗೆಂದು ಕೆಲವು ಹಳ್ಳಿಗಳ ಜಾಗೀರಿಯನ್ನು ಕೊಟ್ಟನು.

ಇಕ್ಬಾಲ್‌ಖಾನ ಮತ್ತು ಮಖ್‌ಸೂಸ್‌ಖಾನರು ಮಾಂಡುವಿಗೆ ಬಂದರು:

ಸುಲ್ತಾನ್ ಮಹಮೂದ ಖಿಲ್ಜಿಯು ಸಾಹಬ್‌ಖಾನನ ಪಲಾಯನದ ನಂತರ ಶಾದಿ ಆಬಾದ್ ಮಾಂಡು ಕೋಟೆಯೊಳಗೆ ಪ್ರವೇಶಿಸಿದನು. ನಂತರ ರಾಜ್ಯದ

ರಾಜಕಾರ್ಯಗಳತ್ತ ಗಮನ ಹರಿಸಿದನು. ಈ ಘಟನೆಗಳೆಲ್ಲವು ನಡೆಯುವುದಕ್ಕೆ ಮುನ್ನವೇ ಇಕ್ಬಾಲ್‌ಖಾನ ಮತ್ತು ಮಖ್‌ಸೂಸ್‌ಖಾನರು ಯಾವುದೋ ಕಾರಣದಿಂದ ಅಸೀರ್ ಕಡೆಗೆ ಹೋಗಿದ್ದರು. ಇತ್ತ ಮಾಂಡುವಿನಲ್ಲಿ ಸಾಹಬ್‌ಖಾನನ ಗಲಾಟೆಗಳ ವಿಷಯವನ್ನು ಕೇಳಿದ ಇವರಿಬ್ಬರೂ ಷಹಾಬುದ್ದೀನನ ತಲೆಯ ಮೇಲೆ ಛತರ್‌ಶಾಹಿ ಆಶ್ರಯವನ್ನು ಪಡೆಯಲು ಬೇಸಿಗೆ ಬಿರಿ ಬಿಸಿಲಿದ್ದರೂ ಬುರ್‌ಹಾನ್‌ಪುರದ ಮಾರ್ಗವಾಗಿ ಶಾದಿ ಆಬಾದ್ ಮಾಂಡುವಿನತ್ತ ಬಂದರು.

ಷಹಾಬುದ್ದೀನ್‌ನ ಮರಣ:

ಅವರಿಬ್ಬರೂ ಬಹಳ ವೇಗವಾಗಿ ಪ್ರಯಾಣವನ್ನು ಮಾಡುತ್ತ ಒಂದು ದಿನಕ್ಕೆ ಮೂವತ್ತು ಮೈಲಿಯ ದಾರಿಯನ್ನು ಸವೆಯುತ್ತಾ ಬಂದರು. ಇವರಿಗೆ ಸಾಹಬ್‌ಖಾನ ಮತ್ತು ಮುಹಾಫೀಜ್‌ಖಾನರು ಸುಲ್ತಾನ್ ಮಹಮೂದನ ಎದುರು ನಿಲ್ಲುವ ಶಕ್ತಿ ಇರಲಿಲ್ಲವೆಂಬ ಸುದ್ದಿ ತಿಳಿದಿರಲಿಲ್ಲ. ಸಾಹಬ್‌ಖಾನನು ಮಾಂಡುವಿನಿಂದ ಪಲಾಯಾನ ಮಾಡಿದ ವಿಚಾರವೂ ಗೊತ್ತಿರಲಿಲ್ಲ. ಷಹಾಬುದ್ದೀನನು (ಹಿರಿಯ ಮಗ) ಅತೀಯಾದ ಬೇಸಿಗೆಯ ಕಾರಣದಿಂದ ಕಾಯಿಲೆ ಬಿದ್ದಿದ್ದನು. ಕೆಲವೇ ದಿನಗಳಲ್ಲಿ ಆತನು ತೀರಿಹೋದನು.

ಇಕ್ಬಾಲ್ ಮತ್ತು ಮಖ್‌ಸೂಸ್‌ರ ಪರಾರಿ:

ಷಹಾಬುದ್ದೀನನ ಮರಣದ ನಂತರ ಇಕ್ಬಾಲ್ ಮತ್ತು ಮಖ್‌ಸೂಸ್‌ಖಾನರು ಷಹಾಬುದ್ದೀನನ ಮಗನ ತಲೆಯ ಮೇಲೆ ಷಾಹಿ ಛತ್ರ-ಚಾಮರಗಳನ್ನಿಟ್ಟು, ಷಾಹಿ ಸಂಪ್ರದಾಯವನ್ನು ನೆರವೇರಿಸಿ, ಆತನಿಗೆ "ಸುಲ್ತಾನ್ ಹೋಷಂಗ್" ಎಂಬ ಬಿರುದನ್ನು ನೀಡಿ, ತಮ್ಮ ಬಾದಷಹನೆಂದು ಸ್ವೀಕರಿಸಿ, ಸುಲ್ತಾನ್ ಹೋಷಂಗ್‌ನನ್ನು ತಮ್ಮ ಜೊತೆಯಲ್ಲಿ ಕರೆದುಕೊಂಡು ಮಾಳವಕ್ಕೆ ಬಂದರು. ಸುಲ್ತಾನ್ ಮಹಮೂದನು ಅವರಿಬ್ಬರನ್ನು ಎದುರಿಸಿದನು. ಇಬ್ಬರಲ್ಲೂ ಘೋರ ಯುದ್ಧವೇ ನಡೆಯಿತು. ಇಕ್ಬಾಲ್‌ಖಾನ ಮತ್ತು ಮಖ್‌ಸೂಸ್‌ಖಾನರು ಸುಲ್ತಾನ್ ಮಹಮೂದಖಾನ ಎದುರಿನಲ್ಲಿ ಬಹಳ ಹೊತ್ತಿನ ತನಕ ಯುದ್ಧದಲ್ಲಿ ನಿಲ್ಲಲಾರದಾದರು. ಸೋತು ಯುದ್ಧ ಮೈದಾನದಿಂದ ಓಡಿದರು. ಓಡಿ ಬೆಟ್ಟಗುಡ್ಡಗಳಲ್ಲಿ ಅವಿತರು.

ಇಕ್ಬಾಲ್‌ಖಾನ ಮತ್ತು ಮಖ್‌ಸೂಸ್‌ಖಾನರು ಕ್ಷಮೆಯಾಚಿಸಿದರು:

ಕೆಲವು ದಿನಗಳ ನಂತರ ಆ ಇಬ್ಬರು ಅಮೀರರು ತಾವು ಮಾಡಿದ ತಪ್ಪುಗಳಿಗೆ ಕ್ಷಮೆಯಾಚಿಸಿದರು. ಮತ್ತು ಸುಲ್ತಾನ್ ಮಹಮೂದನ ಸೇವೆಯಲ್ಲಿ ಹಾಜರಾಗಿ ಬಾದಷಹನನ್ನು ಓಲೈಸಲು ಹಾಗೂ ನಂಬಿಕಸ್ಥರಾಗಿ ಇರುತ್ತೇವೆಂದು ಪ್ರಮಾಣವನ್ನು ಮಾಡಿದರು. ಬಾದಷಹನು ಅವರ ಅಪರಾಧಗಳನ್ನು ಕ್ಷಮಿಸಿ ಅವರಿಗೆ ಬಹುಮಾನಗಳನ್ನು ನೀಡಿದನು.

ಅಫ್ಜಲ್‌ಖಾನ್ ಮತ್ತು ಇಕ್ಬಾಲ್‌ರ ಕೊಲೆ:

ಮೇದಿನಿರಾಯ್‌ನು ಅಫ್ಜಲ್‌ಖಾನನನ್ನು ಮತ್ತು ಇಕ್ಬಾಲ್‌ಖಾನರನ್ನು ತನ್ನ ಶತ್ರುಗಳೆಂದೇ ಭಾವಿಸಿದ್ದನು. ತನ್ನ ಪ್ರಗತಿಯ ಹಾದಿಯ ಬಂಡೆಗಳೆಂದು ತಿಳಿದಿದ್ದನು. ಆತನು ಸುಲ್ತಾನ್ ಮಹಮೂದರಲ್ಲಿ ಅವರಿಬ್ಬರ ವಿರುದ್ಧ ಎತ್ತಿಕಟ್ಟಿದನು. ಈ ಇಬ್ಬರು ತಮ್ಮ ಸಹೋದರ ಶತ್ರು ಸಾಹಬ್‌ಖಾನನ ಆಪ್ತರು. ಇವರು ಆತನಿಗೆ ಪತ್ರವನ್ನು ಬರೆದು ಮಾಂಡುವಿನ ಮೇಲೆ ಆಕ್ರಮಣವನ್ನು ನಡೆಸಲು ಆಹ್ವಾನಿಸಿರುವ ವಿಷಯವನ್ನು ತಿಳಿಸಿದನು. ಈ ಮಾತುಗಳನ್ನು ಕೇಳಿದ ಬಾದಷಹನು ಇವರಿಬ್ಬರೂ ಬಾದಷಹರ ಸಲಾಂನಲ್ಲಿ ಭಾಗವಹಿಸಲು ಬಂದಾಗ ಇವರಿಬ್ಬರನ್ನೂ ಕೊಲೆ ಮಾಡಬೇಕೆಂದು ಆಜ್ಞಾಪಿಸಿದನು. ಬಾದಷಹನ ಆಜ್ಞೆಯು ಪಾಲಿಸಲಾಯಿತು. ಹೀಗೆ ಅವರಿಬ್ಬರೂ ಕೊಲೆಯಾದರು.

ಚಂದೇರಿಯ ಶಾಸಕನಿಗೆ ಕರೆ:

ಇದಾದ ನಂತರ ಮೇದಿನಿರಾಯನ ಕಣ್ಣು ಚಂದೇರಿಯ ಶಾಸಕನಾದ ಹಿಬತ್‌ಖಾನನ ಮೇಲೆ ಬಿತ್ತು. ಆತನು ಹಿಬತ್‌ಖಾನನ ಶತ್ರುವಾಗಿದ್ದನು. ಬಾದಷಹನನ್ನು ಈತನ ವಿರುದ್ಧ ಪ್ರೇರೇಪಿಸಿದನು. ಈ ವಿಚಾರವು ಹಿಬತ್‌ಖಾನನಿಗೂ ಗೊತ್ತಿತ್ತು. ಬಾದಷಹನು ಹಿಬತ್‌ಖಾನನನ್ನು ರಾಜಧಾನಿಗೆ ಕರೆಯಿಸಿದನು. ಹಿಬತ್‌ಖಾನನು ಮಳೆಗಾಲದ ನೆಪವೊಡ್ಡಿ ರಾಜಧಾನಿಗೆ ಬರಲಿಲ್ಲ.

ಸಿಕಂದರ್‌ಖಾನನ ವಿದ್ರೋಹ:

ಸುಲ್ತಾನ್ ಮಹಮೂದನು ಭೇಲ್ಯಾದ ಶಾಸಕ ಮನ್ಸೂರಖಾನನನ್ನು, ಸಿಕಂದರ್‌ಖಾನನ ವಿದ್ರೋಹವನ್ನು ಅಡಗಿಸಲು ನೇಮಿಸಿದನು. ಆ ದಿನಗಳಲ್ಲಿ ಸಿಕಂದರ್‌ಖಾನನು ಮಾಂಡುವಿನಿಂದ ಓಡಿಹೋಗಿ ರಾಜ್ಯದಲ್ಲಿ ವಿದ್ರೋಹದ ಗಾಳಿಯನ್ನು ಎಬ್ಬಿಸಿದ್ದನು. ಆತನು ಗಂದೋಬರ್‌ನಿಂದ ಷಹಾಬಾಬಾದ್‌ವರೆಗೂ ಅಷ್ಟೂ ಪ್ರದೇಶವು ನನ್ನದೆಂದು ಹೇಳುತ್ತಿದ್ದನು. ಸಿಕಂದರ್‌ಖಾನನಿಗೆ ತನ್ನ ವಿರುದ್ಧ ಮನ್ಸೂರಖಾನನು ಬರುತ್ತಿದ್ದಾನೆಂಬ ಸುದ್ದಿ ತಿಳಿದು ಅಪಾರವಾದ ಸೈನ್ಯವನ್ನು ಒದಗಿಸಿಕೊಂಡನು. ಇದರ ಜೊತೆಯಲ್ಲಿ ಆತನ ಸಹಾಯಕ್ಕೆಂದು 'ಕೊಂದವಾನ' ರಾಜನೂ ಬಂದು ಸೇರಿದನು. ಈ ಕಾರಣದಿಂದಾಗಿ ಮನ್ಸೂರನು ಸಿಕಂದರಖಾನನನ್ನು ಸೋಲಿಸಲಾಗಲಿಲ್ಲ.

ಸಿಕಂದರನ ದಮನ:

ಮನ್ಸೂರನು ಇಲ್ಲಿನ ಪರಿಸ್ಥಿತಿಯ ಸಮಚಾರವನ್ನು ಬಾದಷಹನಿಗೆ ತಿಳಿಸಿದನು. ಈ ಪರಿಸ್ಥಿತಿಯಲ್ಲಿ ನಾನು ಸಿಕಂದರ್‌ನನ್ನು ಎದುರಿಸಿ ಆತನನ್ನು ಸೋಲಿಸಲು

ಸಾಧ್ಯವಿಲ್ಲವೆಂಬುದನ್ನು ತಿಳಿಸಿದನು. ಪರಿಸ್ಥಿತಿ ಹೀಗಿದ್ದರೂ ಮೇದಿನಿರಾಯ್‌ನು ಮನ್ಸೂರನನ್ನು ಯುದ್ಧ ಮಾಡಲು ಪ್ರೇರೆಪಿಸಿದನು.

ಮನ್ಸೂರನ ಪಲಾಯಾನ:

ಈ ಉತ್ತರದಿಂದ ಮನ್ಸೂರನು ತುಂಬಾ ಚಿಂತಿತನಾದನು. ತನ್ನ ಹತ್ತಿರವೇ ಇದ್ದ ಜಹಾಜ್‌ಖಾನನೊಂದಿಗೆ ಪರಿಸ್ಥಿತಿಯನ್ನು ಕುರಿತು ತುಂಬಾ ಚರ್ಚಿಸಿದರು. ಇವರಿಬ್ಬರೂ ಬಹಳವಾಗಿಯೂ ಯೋಚಿಸಿದ ನಂತರ ಅಲ್ಲಿಯೇ ಹತ್ತಿರವಿದ್ದ ಚಂದೇರಿಯ ವಹಜತ್‌ಖಾನನ ಹತ್ತಿರ ಹೋಗಲು ತೀರ್ಮಾನಿಸಿದರು.

ಸಿಕಂದರ್‌ಖಾನನು ಶಾಂತಿ ಸಂದೇಶವನ್ನು ಕಳುಹಿಸಿದನು:

ಸುಲ್ತಾನ್ ಮಹಮೂದನಿಗೆ ಮನ್ಸೂರಖಾನನ ಅಸಹಾಯಕತೆಯ ಅರಿವಾಯಿತು. ಅತನು ಒಂದು ಶಕ್ತಿಶಾಲಿ ವಿಶಾಲ ಸೈನ್ಯವನ್ನು ತೆಗೆದುಕೊಂಡು ಧಾರ್‌ನತ್ತ ಹೊರಟನು. ಮೇದಿನಿರಾಯನು ಸಹ ಒಂದು ವಿಶಾಲ ರಾಜಪೂತ ಸೈನಿಕರನ್ನು ತೆಗೆದುಕೊಂಡು ಸಿಕಂದರ್‌ನನ್ನು ಸೋಲಿಸಲು ನೇಮಿಸಿದನು. ಈತನ ಸೈನ್ಯದಲ್ಲಿ ಹತ್ತುಸಾವಿರ ಸೈನಿಕರಿದ್ದರು ಐವತ್ತು ಆನೆಗಳಿದ್ದವು. ಈ ಸೈನ್ಯವು ಸಿಕಂದರ್‌ಖಾನನನ್ನು ಸೋಲಿಸಿತು. ಕೊನೆಗೆ ಸಿಕಂದರ್‌ಖಾನನು ಶಾಂತಿ ಸಂದೇಶವನ್ನು ಮೇದಿನಿರಾಯನ ಹತ್ತಿರ ಕಳುಹಿಸಿ ತನ್ನ ಅಪರಾಧಗಳಿಗೆ ಕ್ಷಮೆಯಾಚಿಸಿದನು. ಮೇದಿನಿರಾಯನು ಆತನ ತಪ್ಪನ್ನು ಕ್ಷಮಿಸಿ ಆತನ ಜಾಗಿರಿಯನ್ನು ಸಿಕಂದರ್‌ನಿಗೆ ಬಿಟ್ಟುಕೊಟ್ಟನು.

ಒಂದು ಹೊಸ ಪಿತೂರಿ:

ದಿನೇ ದಿನೇ ಮೇದಿನಿರಾಯನ ಅಧಿಕಾರದ ದುರ್ಬಳಕೆ ಅತೀಯಾಗಿ ಹೋಯಿತು. ಆ ಸಂದರ್ಭದಲ್ಲಿ ಸುಲ್ತಾನ್ ಮಹಮೂದನು ಷಾದಿ ಆಬಾದ್ ಮಾಂಡುವಿನಿಂದ ಬಹಳ ದೂರದಲ್ಲಿದ್ದನು. ಇಲ್ಲಿ ವಿದ್ರೋಹಿಗಳ ಒಂದು ಗುಂಪು ಒಬ್ಬ ಶಾಹಿ ವಂಶಸ್ಥನನ್ನು ತಮ್ಮ ಬಾದಷಾಹನೆಂದು ಘೋಷಿಸಿಕೊಂಡು ಸ್ವೀಕಾರಮಾಡಿಕೊಂಡರು. ಸುಲ್ತಾನ್ ಘೀಯಾಸುದ್ದೀನನ ಘೋರಿಯಿಂದ 'ಛತ್ರಿಶಾಹಿ'ಯನ್ನು ತೆಗೆದುಕೊಂಡು ಬಂದು ಈತನ ತಲೆಯ ಮೇಲಿಟ್ಟು ಬಾದಷಹನೆಂದು ಘೋಷಿಸಿಕೊಂಡರು. ಆದರೆ ಕೋಟೆಯ ರಕ್ಷಕನು ಇವರನ್ನೆಲ್ಲ ಸದೆಬಡಿದು ಓಡಿಸಿದನು.

ಬಹಜತ್‌ಖಾನನ ದಿಟ್ಟಹೆಜ್ಜೆ:

ಬಹಜತ್‌ಖಾನನಿಗೆ ಮೇದಿನಿರಾಯನ ದುಷ್ಟ ಕಾರ್ಯಕ್ರಮಗಳ ಮತ್ತು ಸುಲ್ತಾನ್ ಮಹಮೂದನ ಅಸಹಾಯಕತೆಯ ವಿಷಯವು ಅರಿವಾಯಿತು. ಆತನ ತನ್ನ ಕೆಲ ಆಪ್ತರನ್ನು ಕಾವೇಲ್ ಎಂಬಲ್ಲಿಗೆ ಕಳುಹಿಸಿ ಸಾಹಬ್‌ಖಾನನನ್ನು ಕರೆಯಿಸಿಕೊಳ್ಳಲು ಪ್ರಯತ್ನಿಸಿದನು ಇದಲ್ಲದೆ ದೆಹಲಿಯ ಸುಲ್ತಾನ್ ಸಿಕಂದರ್ ಲೋಧಿಯ ಹೆಸರಿಗೊಂದು

ಪತ್ರವನ್ನು ಹೀಗೆ ಬರೆದು ಕಳುಹಿಸಿದನು. "ಮಾಳವದಲ್ಲಿ ರಾಜಪೂತರು ಮುಸಲ್ಮಾನರ ಮೇಲೆ ಗಲಭೆಗಳನ್ನು ಸೃಷ್ಟಿಸಿ ಅವರನ್ನೆಲ್ಲ ಕೊಲ್ಲಿಸಿ ಮೇದಿನಿರಾಯನು ಈ ಗಲಭೆಗಳ ಸರದಾರನಾಗಿ ಮೆರೆಯುತ್ತಿರುವನು. ಇಲ್ಲಿಯ ತನಕ ಅಸಂಖ್ಯಾತ ಹಿರಿಯ ಮುಸಲ್ಮಾನ ಅಮೀರರನ್ನು, ಸೇವಕರನ್ನು ಕೊಲ್ಲಿಸಿದ್ದಾನೆ ಬಾಕಿ ಉಳಿದಿರುವ ಮುಸಲ್ಮಾನರು ಜೀವ ಭಯದಿಂದ ದೇಶವನ್ನೇ ಬಿಟ್ಟು ಹೊರ ರಾಜ್ಯಗಳಲ್ಲಿ ಸೇರಿಕೊಂಡಿದ್ದಾರೆ. ಮತ್ತು ಬಹಳ ಚಿಂತೆಯಲ್ಲಿ ಮುಳುಗಿದ್ದಾರೆಂದು" ತಿಳಿಸಿದನು.

ಸುಲ್ತಾನ್ ಮಹಮೂದನು ಅಸಹಾಯಕ:

ಸುಲ್ತಾನ್ ಮಹಮೂದನು ಈಗ ಮೇದಿನಿರಾಯನಿಗೆ ಎಲ್ಲ ಅಧಿಕಾರಗಳನ್ನೂ ನೀಡಿ ತಾನು ಸಂಪೂರ್ಣ ಅಸಹಾಯಕ ಹಾಗೂ ದುರ್ಬಲ ಬಾದಷಹನಾಗಿ ನಿಂತಿದ್ದಾನೆ. ಆತನೂ ವಿಚಿತ್ರ ಸ್ಥಿತಿಯಲ್ಲೇ ಮುಳುಗಿದ್ದಾನೆ. ಕೆಲವು ಹಳೆಯ ಶಾಹಿ ಸೇವಕರು ಬಾದಷಹರನ್ನು ಸೇವೆ ಮಾಡುವಂತೆಯೇ ಇಲ್ಲವಾಗಿದೆ. ಬಾದಷಹರು ಕೂಡ ನಮ್ಮನ್ನು ನಂಬದಂತೆ ಮಾಡಿಬಿಟ್ಟಿದ್ದಾನೆ. ಎಲ್ಲ ತೀರ್ಮಾನಗಳು ಮೇದಿನಿರಾಯನದ್ದೇ ಆಗಿವೆ.

ಪರಧರ್ಮೀಯನ ಕಾಲಚಕ್ರ:

ಸುಲ್ತಾನ ಮಹಮೂದನು ಮೇದಿನಿರಾಯನ ಸಲಹೆಯಂತೆ ಹಿರಿಯ ಶಾಹಿ ಸೇವಕರನ್ನು ತನ್ನ ಶತ್ರುಗಳಂತೆ ಕಾಣುತ್ತಿದ್ದಾನೆ. ಅವರ ರಕ್ತವನ್ನು ಕುಡಿಯಲು ನಿಂತಿದ್ದಾನೆ. ರಾಜ್ಯದಲ್ಲಿ ಎಲ್ಲ ಕಡೆ ಅಶಾಂತಿ, ಅಲ್ಲೋಲ ಕಲ್ಲೋಲ ಸ್ಥಿತಿ ಹರಡಿದೆ. ಇಸ್ಲಾಂ ಧಾರ್ಮಿಕತೆಯ ಅವಹೇಳನಗಳು ನಡೆಯುತ್ತಿವೆ. ಮಸೀದಿಗಳಲ್ಲಿ, ಮದರಸಾಗಳಲ್ಲಿ ಒಬ್ಬ ಮುಸಲ್ಮಾನನು ಕಾಣಿಸುತ್ತಿಲ್ಲ. ಪವಿತ್ರ ಸ್ಥಳಗಳು ಪರಕೀಯರ ಸ್ವತ್ತಾಗಿವೆ.

ದೆಹಲಿಯ ಬಾದಷಹನಿಂದ ಸಹಾಯದ ಕೋರಿಕೆ:

ಈ ಸಮಯದಲ್ಲಿ ಮೇದಿನಿರಾಯನು ಎಷ್ಟು ಬಲಿಷ್ಠನಾಗಿದ್ದಾನೆಂದರೆ ಯಾವುದೇ ಗಳಿಗೆಯಲ್ಲಿ ಸುಲ್ತಾನ ಮಹಮೂದನನ್ನು ಪದಚ್ಯುತಿಗೊಳಿಸಿ, ತಾನೇ ಬಾದಷಹನೆಂದು ಘೋಷಿಸಿಕೊಳ್ಳುವ ಕಾಲ ದೂರವಿಲ್ಲ. ಈ ಸಂದರ್ಭದಲ್ಲಿ ತಮ್ಮ ಸಹಾಯ ಅತ್ಯವಶ್ಯಕವಾಗಿದೆ. ತಾವು ತಮ್ಮ ಸೈನ್ಯವನ್ನು ಇತ್ತಕಡೆ ಕಳುಹಿಸಿ, ಸಾಹಬ್‌ಖಾನನನ್ನು ಬಾದಷಹನನ್ನಾಗಿ ಘೋಷಿಸಬೇಕು. ಚಂದೇರಿಯ ಸುತ್ತಮುತ್ತ ತಮ್ಮ ಹೆಸರಿನ (ಖುತ್ಬಾ) ಪ್ರಶಂಸಾತ್ಮಕ ಪ್ರವಚನವನ್ನು ಪ್ರಚುರಪಡಿಸಲಾಗುವುದೆಂದು ನಾನು ಪ್ರಮಾಣ ಮಾಡುತ್ತೇನೆ ಎಂದು ಬಹಜತ್‌ಖಾನನು ಆಹ್ವಾನಿಸಿದನು.

ಮುಹಾಫೀಜ್‌ಖಾನನು ದೆಹಲಿಯಲ್ಲಿ:

ಸಾಹಬ್‌ಖಾನ ಮತ್ತು ಮುಹಾಫೀಜ್‌ಖಾನರಿಬ್ಬರೂ ದಖನಿನತ್ತ ಹೊರಟ್ಟಿದ್ದರು.

ದಾರಿಯಲ್ಲಿ ಮುಹಾಫೀಜ್‌ಖಾನನು ತನ್ನ ಜೊತೆಗಾರನನ್ನು ತ್ಯಜಿಸಿ ದೆಹಲಿಯತ್ತ ಹೊರಟನು. ಆತನು ದೆಹಲಿಗೆ ಹೋಗಿ ಅಲ್ಲಿನ ಅಂದಿನ ಸುಲ್ತಾನ್ ಸಿಕಂದರ್‌ಶಾಹ ಲೋಧಿಯೊಂದಿಗೆ ಉತ್ತಮ ಸಂಬಂಧಗಳನ್ನು ಬೆಳೆಸಲಾರಂಭಿಸಿದನು. ಬಾದಷಹನು ಈತನಿಗೆ "ಸುಲ್ತಾನ್ ಮಹಮ್ಮದ" ಎಂಬ ಬಿರುದನ್ನು ಕೊಟ್ಟು ಗೌರವಿಸಿದನು. ಅಮಾದುಲ್‌ಮುಲ್ಕ್ ಮತ್ತು ಸಯೀದ್‌ಖಾನ್ ಎಂಬವರ ಅಧೀನದಲ್ಲಿ ಹನ್ನೆರಡುಸಾವಿರ ಸೈನ್ಯವನ್ನು ಕೊಟ್ಟು ಮಾಳವ ದೇಶದ ರಕ್ಷಣೆಗೆ ಕಳುಹಿಸಿಕೊಟ್ಟನು.

ಮಾಳವದಲ್ಲಿ ಅಸಹಾಯಕ ಸ್ಥಿತಿ:

ಅದೇ ಕಾಲದಲ್ಲಿ ಸುಲ್ತಾನ್ ಗುಜರಾತಿಯು ಒಂದು ವಿಶಾಲ ಸೈನ್ಯದೊಂದಿಗೆ ಅನೇಕ ಬಲಶಾಲಿ ಆನೆಗಳೊಂದಿಗೆ ಧಾರ್ ನಗರದತ್ತ ಧಾವಿಸಿದ. ಈ ಮಧ್ಯ ಸಿಕಂದರ್‌ಖಾನನು ತನ್ನ ಸೈನ್ಯದೊಂದಿಗೆ ಗಲಭೆಯ ಬಾವುಟವನ್ನು ಹಾರಿಸಿದ. ಈ ಕಾರಣಗಳಿಂದಾಗಿ ಮಾಳವ ದೇಶದಲ್ಲೆಲ್ಲ ಎಲ್ಲಲ್ಲೂ ಯುದ್ಧಭೀತಿಯು ಹರಡಿತು. ಮೇದಿನಿರಾಯನು ಈ ಗಲಭೆಗಳನ್ನು ಅಡಗಿಸಲು ಸರ್ವಪ್ರಯತ್ನಗಳಲ್ಲಿ ತೊಡಗಿದನು. ಪಿತೂರಿಕೋರರನ್ನು ಅಡಗಿಸುವ ಹಠ ತೊಟ್ಟನು.

ಸುಲ್ತಾನ್ ಮುಜಫ್ಫರನು ವಾಪಸ್ಸಾದನು:

ಮೇದಿನಿರಾಯನು ಸುಲ್ತಾನ್ ಮಹಮೂದನನ್ನು ಕೋಟೆಯಿಂದ ಹೊರತಂದು ರಾಜಪೂತರ ಒಂದು ಸೈನ್ಯವನ್ನು ಗುಜರಾತಿ ದಂಗೆಕೋರರನ್ನು ಅಡಗಿಸಲು ಕಳುಹಿಸಿದನು. ಕಂಧೋನಿಯ ಶಾಸಕನಾದ ಮಲ್ಲಿಕ್‌ಲೋದನನ್ನು ಸಿಕಂದರ್‌ಖಾನನ ಗಲಭೆಯನ್ನು ಅಡಗಿಸಲು ನೇಮಿಸಿದನು. ಈ ಸಂದರ್ಭದಲ್ಲಿ ಗುಜರಾತಿ ಸೈನ್ಯವನ್ನು ರಾಜಪೂತರು ಸೋಲಿಸಿ ಓಡಿಸಿದರು. ಸುಲ್ತಾನ್ ಮುಜಫ್ಫರ್ ಗುಜರಾತಿಯು ಈ ಸೋಲನ್ನು ಅಪಶಕುನವೆಂದು ತಿಳಿದು ತನ್ನ ದೇಶಕ್ಕೆ ಹಿಂತಿರುಗಿದನು.

ಸಿಕಂದರ ಮತ್ತು ಮಲಿಕ್‌ಲೋದನ ಯುದ್ಧ:

ಮಲಿಕ್‌ಲೋದನು ಸಿಕಂದರ್‌ನೊಂದಿಗೆ ಯುದ್ಧವನ್ನು ಮಾಡಿ ಆತನನ್ನು ಸೋಲಿಸಿದನು. ಯಾವ ಸಂದರ್ಭದಲ್ಲಿ ಮಲಿಕ್‌ಲೋದನು ಶತ್ರುಸೈನ್ಯವನ್ನು ನಾಶಪಡಿಸುತ್ತಿದ್ದನೋ ಅದೇ ಸಮಯದಲ್ಲಿ ಸಿಕಂದರನ ಒಬ್ಬ ಸಿಪಾಯಿಯು ಮಲಿಕ್‌ಲೋದನ ಹತ್ತಿರ ಬಂದು ಆತನ ಕಾಲಿಗೆ ಬೀಳಲು ಪ್ರಯತ್ನಿಸುವಂತೆ ನಟಿಸುತ್ತ ಬಂದನು. ಅದಕ್ಕೆ ಕಾರಣವೇನೆಂದರೆ, ಆ ಸಿಪಾಯಿಯ ಹೆಂಡತಿ, ಮಕ್ಕಳನ್ನು ಮಲಿಕ್‌ಲೋದನು ಸೆರೆಹಿಡಿದಿದ್ದನು. ಮಲಿಕ್‌ಲೋದನ ಹತ್ತಿರಕ್ಕೆ ಬಂದು ತನ್ನ ಚಾಕುವಿನಿಂದ ಅವನನ್ನು ಇರಿದು ಬಿಟ್ಟನು. ಆಳವಾದ ಗಾಯದಿಂದಾಗಿ ಮಲಿಕ್‌ಲೋದನು ಅಲ್ಲಿಯೇ ಹತನಾದನು. ಈ ಸಂದರ್ಭವನ್ನು ಬಳಸಿಕೊಂಡ

ಸಿಕಂದರ್‌ಖಾನನು ಶಾಹಿ ಸೈನ್ಯದ ಸೈನಿಕರನ್ನು ಸದೆಬಡಿದು ಆರು ಬಲಶಾಲಿ ಆನೆಗಳನ್ನು, ಅಪಾರ ಸಂಪತ್ತನ್ನು ದೋಚಿಕೊಂಡು 'ಸವಾಸನ್' ಎಂಬಲ್ಲಿಗೆ ಹೋದನು.

ದೆಹಲಿಯ ಸೈನ್ಯ ಮತ್ತು ಸಾಹಬ್‌ಖಾನನ ಆಗಮನ:

ಸುಲ್ತಾನ್ ಮಹಮೂದನು ಮೇದಿನಿರಾಯನ ಸಲಹೆಯಂತೆ ಸದ್ಯಕ್ಕೆ ಈ ಯುದ್ಧವನ್ನು ನಿಲ್ಲಿಸಿ, ಬಹಜತ್‌ಖಾನನನ್ನು ದಮನ ಮಾಡಲು ಚಂದೇರಿಯತ್ತ ಹೊರಟನು. ದಾರಿಯಲ್ಲಿ ಸುಲ್ತಾನ್ ಮಹಮೂದ ಖಿಲ್ಜಿಗೆ ಸುದ್ದಿ ತಿಳಿದಿದ್ದೇನೆಂದರೆ– ಸಾಹಬ್‌ಖಾನನು ಬಹಳ ಹತ್ತಿರಕ್ಕೆ ಬಂದಿದ್ದಾನೆಂದು ಹಾಗೂ ಮನ್ಸೂರ್‌ಖಾನನು ಆತನನ್ನು ಸ್ವಾಗತಿಸಿ ಶಾಹಿ ಛತ್ರಿಯಿಂದ ಗೌರವಿಸಿದ್ದಾನೆಂದು ತಿಳಿಯಿತು. ಅಷ್ಟೇ ಅಲ್ಲದೇ ದೆಹಲಿಯ ಸೈನ್ಯವು ಸಯೀದ್‌ಖಾನ, ಮುಹಾಫಿಜ್‌ಖಾನ ಮತ್ತು ಅಮಾದುಲ್ಲಾಮುಲ್ಕ ಲೋಧಿಯ ಅಧೀನದಲ್ಲಿ ಸಾಹಬ್‌ಖಾನನ ಸಹಾಯಕ್ಕೆಂದು ಬಹಳ ಹತ್ತಿರ ಬಂದಿದ್ದಾರೆಂದು ತಿಳಿಯಿತು.

ಸದರ್‌ಖಾನ್‌ನು ಮಖ್‌ಸೂಸ್‌ಖಾನನಿಂದ ಬೇರ್ಪಟ್ಟನು–

ಈ ಎಲ್ಲಾ ಸುದ್ದಿಗಳನ್ನು ಕೇಳಿ, ಮಹಮೂದ ಖಿಲ್ಜಿಯು ತುಂಬಾ ಚಿಂತಿತನಾದನು. ಈ ಎಲ್ಲಾ ಸಮಸ್ಯೆಗಳನ್ನು ಯಾವ ಉಪಾಯಗಳಿಂದ ಬಗೆಹರಿಸಬೇಕೆಂದು ಯೋಚಿಸತೊಡಗಿದನು. ಇದೇ ಸಂದರ್ಭದಲ್ಲಿ ಸುಲ್ತಾನ್ ಮಹಮೂದನ ಪ್ರಖ್ಯಾತ ಅಮೀರರಲ್ಲಿ ಸದರ್‌ಖಾನ್‌ನು ಸಹ ಬೇರ್ಪಟ್ಟು ಸಾಹಬ್‌ಖಾನನ ಕಡೆ ಹೋಗಿ ಸೇರಿಕೊಂಡನು.

ದೆಹಲಿಯ ಸೈನ್ಯ ವಾಪಸ್ಸಾಯಿತು:

ಅಮಾದುಲ್‌ಮುಲ್ಕ ಮತ್ತು ಸಯೀದ್‌ಖಾನರು ಮುಹಾಫೀಜ್‌ಖಾನನ ಸಲಹೆಯಂತೆ ಬಹಜತ್‌ಖಾನನಿಗೆ ಒಂದು ಸಂದೇಶವನ್ನು ಕಳುಹಿಸಿದ್ದೇನೆಂದರೆ "ನೀನು ಈ ದೇಶದಲ್ಲಿ ದೆಹಲಿಯ ಸುಲ್ತಾನ್ ಸಿಕಂದರ್ ಲೋಧಿಯ ಹೆಸರಿನ ಖುತ್ಬಾವನ್ನು ಎಲ್ಲರೂ ಓದುವಂತೆ ಹಾಗೂ ಆತನ ಮುದ್ರೆಯನ್ನು ಸ್ವೀಕರಿಸುವಂತೆ ಪ್ರಚಾರ ಮಾಡು" ಎಂದು ತಿಳಿಸಿದನು. ಆದರೆ ಬಹಜತ್‌ಖಾನನು ಈ ಸಂದೇಶಕ್ಕೆ ಯಾವ ಉತ್ತರವನ್ನೂ ನೀಡಲಿಲ್ಲ. ಅಮಾದುಲ್‌ಮುಲ್ಕನಿಗೆ ಈ ನೆಪವೇ ಸಾಕಾಗಿತ್ತು. ದೆಹಲಿಯತ್ತ ಹಿಂತಿರುಗಿದರು. ಚಂದೇರಿಯಿಂದ (೧೪) ಹದಿನಾಲ್ಕು ಮೈಲಿ ದೂರದಲ್ಲಿ ಬೀಡುಬಿಟ್ಟರು. ಇದಾದ ನಂತರ ಯಾವುದೇ ಯುದ್ಧದ ಸಂಭವ ಕಾಣಲಿಲ್ಲ. ದೆಹಲಿಯ ಸುಲ್ತಾನ್ ಸಿಕಂದರನು ತನ್ನ ಸೈನ್ಯಕ್ಕೆ ವಾಪಸ್ಸ ಬರಲು ಆದೇಶಿಸಿದನು.

ಒಂದು ಬೇರೆ ವರದಿ:

ಮತ್ತೊಂದು ವರದಿಯಂತೆ ಚಂದೇರಿಯಲ್ಲಿ ದೆಹಲಿಯ ಸುಲ್ತಾನ್ ಸಿಕಂದರ

ಖುತ್ಬಾ ಓದಲಾಯಿತು. ಆದರೆ ಸುಲ್ತಾನ್ ಸಿಕಂದರನು ತನ್ನ ದೆಹಲಿ ಸೈನ್ಯವನ್ನು ಚಂದೇರಿಯಲ್ಲಿ ಬಿಡಲು ಇಷ್ಟಪಡಲಿಲ್ಲ. ಏಕೆಂದರೆ ಆ ಸೈನ್ಯದಲ್ಲಿ ನಲವತ್ತು ಸಾವಿರ ರಾಜಪೂತ ಸೈನಿಕರಿದ್ದರು. ಅವರು ಮಹಾ ಶೂರರಾಗಿದ್ದರು. ಅವರೆದುರು ನಿಲ್ಲುವ ಶಕ್ತಿ ಯಾರಿಗೂ ಇರಲಿಲ್ಲ.

ಮುಹಾಫೀಜ್‌ಖಾನನ ಆಗಮನ:

ದೆಹಲಿಯ ಸೈನ್ಯವು ವಾಪಸ್ಸಾದ ಸುದ್ದಿ ತಿಳಿದ ಸುಲ್ತಾನ್ ಮಹಮೂದನು ತುಂಬಾ ಸಂತೋಷಪಟ್ಟು ಅಲ್ಲಾಹನಿಗೆ ಕೃತಜ್ಞತೆಯನ್ನು ಸಲ್ಲಿಸುವ ಪ್ರಾರ್ಥನೆಯನ್ನು ಮಾಡಿದನು. ಈ ಸಂತೋಷದ ಕುರುಹಾಗಿ ಮನಸ್ಸನ್ನು ತಿಳಿಗೊಳಿಸಿಕೊಳ್ಳಲು ಬೇಟೆಯಾಡಲು ಹೊರಟನು. ಇಂತಹುದೇ ಸಂತೋಷದಲ್ಲಿ ಮುಳುಗಿದ್ದ ಸಂದರ್ಭದಲ್ಲಿ ಸುದ್ದಿ ತಿಳಿದಿದ್ದೇನೆಂದರೆ ಮುಹಾಫೀಜ್‌ಖಾನನು ಬಹಜತ್‌ಖಾನನ ಸಲಹೆಯ ಮೇರೆಗೆ ಒಂದು ವಿಶಾಲ ಸೈನ್ಯ ಸಮೇತನಾಗಿ ದೆಹಲಿಯಿಂದ ಶಾದಿ ಆಬಾದ್ ಮಾಂಡುವಿನತ್ತ ಬರುತ್ತಿದ್ದಾನೆಂದು ತಿಳಿಯಿತು. ಬಾದಷಾಹನು ಹಬೀಬಖಾನ ಮತ್ತು ಫಖ್ರೂಲ್‌ಮುಲ್ಕ ಎಂಬ ಅಮೀರರ ಒಂದು ಗುಂಪಿನೊಂದಿಗೆ ಬಂದು ರಾಜಪೂತರ ಸೈನ್ಯವನ್ನು ಕೊಟ್ಟು ಮುಹಾಫೀಜ್‌ಖಾನನನ್ನು ದಮನ ಮಾಡಲು ನೇಮಿಸಿದನು.

ಯುದ್ಧದ ನಂತರ ಮುಹಾಫೀಜ್‌ಖಾನನ ಮರಣ:

ಜಫರ್ ಆಬಾದಿನ ಪ್ರದೇಶದಲ್ಲಿ ಸುಲ್ತಾನ್ ಮಹಮೂದನ ಸೈನ್ಯಕ್ಕೂ-ಮುಹಾಫೀಜ್‌ಖಾನನ ಸೈನ್ಯಕ್ಕೂ ಘೋರ ಯುದ್ಧವು ನಡೆಯಿತು. ಮಹಮೂದನಿಗೆ ಗೆಲವು ಸಿಕ್ಕಿತು. ಶತ್ರುಸೈನ್ಯವು ಸೋಲನ್ನು ಅನುಭವಿಸಿತು. ಈ ಯುದ್ಧದಲ್ಲಿ ಮುಹಾಫೀಜ್‌ಖಾನನು ಸತ್ತನು. ಈ ಕಾರಣದಿಂದಾಗಿ ಬಹಜತ್‌ಖಾನ ಮತ್ತು ಮಖ್‌ಸೂಸ್‌ಖಾನರು ಚಿಂತಿತರಾದರು. ಅವರು ಸಾಹಬ್‌ಖಾನನೊಂದಿಗೆ ಸಲಹೆ ವಿಮರ್ಶೆಯನ್ನು ಮಾಡಿ ಬಾದಷಾಹನೊಂದಿಗೆ ಸಂಧಿ ಮಾಡಿಕೊಳ್ಳಲು ಪ್ರಾರ್ಥನೆಯನ್ನು ಸಲ್ಲಿಸಿದರು.

ಒಪ್ಪಂದ:

ಸಾಹಬ್‌ಖಾನನು ಸುಲ್ತಾನ್ ಮಹಮೂದಖಾನನ ಹತ್ತಿರ ಶೇಖ್ ಔಲಿಯಾ ಎಂಬ ಸಂತ ವಿದ್ವಾಂಸರನ್ನು ಒಪ್ಪಂದಕ್ಕಾಗಿ ಕಳುಹಿಸಿದನು. ಸುಲ್ತಾನ್ ಮಹಮೂದನು ಈ ಒಪ್ಪಂದಕ್ಕೆ ಮನಸ್ಪೂರ್ವಕವಾಗಿ ಒಪ್ಪಿದನು. ಸೂಫಿ ಸಂತ ಶೇಖ್ ಔಲಿಯಾರ ಆಗಮನವನ್ನು ಮಹಮೂದನು ಭಗವಂತನ ಕೃಪೆಯಂದೇ ತಿಳಿದು ಸ್ವಾಗತಿಸಿದನು. ಅದೇ ಸಮಯದಲ್ಲಿ ಶಾಂತಿ ಸಂದೇಶವನ್ನು ಬಹಜತ್‌ಖಾನನಿಗೆ ಕಳುಹಿಸಿಕೊಟ್ಟನು. ಇದಾದ ನಂತರ ರಾಯಸೀನ್ ಕೋಟೆ ಭೇಲ್ಸಾ ಕಸಬಾ ಮತ್ತು ಹಾಮೋತಿ ಎಂಬ

ಪ್ರದೇಶಗಳನ್ನು ಅವರಿಗೆ ಬಿಟ್ಟುಕೊಟ್ಟನು. ಮುಹಾಫೀಜ್‌ನು ಎಲ್ಲಾ ಹಣ ಮತ್ತು ಆನೆಗಳನ್ನು ತೆಗೆದುಕೊಂಡು ಸಾಹಬ್‌ಖಾನನಿಗೆ ಕೊಟ್ಟನು.

ಸುಲ್ತಾನ್ ಮಹಮೂದನು ವಾಪಸ್ಸಾದನು:

ಕೆಲವು ಪಿತೂರಿಕೋರರು ಸಾಹಬ್‌ಖಾನನನ್ನು ಬಹಜತ್‌ಖಾನನ ವಿರುದ್ಧ ಪ್ರೇರೇಪಿಸಿದರು. ಅವರ ಪ್ರಕಾರ ಬಹಜತ್‌ಖಾನನು ನಿನ್ನನ್ನು ಬಂಧಿಸಬೇಕೆಂದಿದ್ದಾನೆಂದು ಹೇಳಿದರು. ಈ ವಿಚಾರವನ್ನು ತಿಳಿದ ಸಾಹಬ್‌ಖಾನನು ಹೆದರಿ ಯಾರಿಗೂ ತಿಳಿಸದಂತೆ, ದೆಹಲಿಯ ಸಿಕಂದರ್ ಲೂಧಿಯ ಹತ್ತಿರ ಓಡಿ ಹೋದನು. ಬಹಜತ್‌ಖಾನ ಮತ್ತು ಕೆಲ ಅಮೀರರು ಸುಲ್ತಾನ್ ಮಹಮೂದನ ಸೇವೆಯಲ್ಲಿ ಹಾಜರಾದರು. ಸುಲ್ತಾನ್ ಮಹಮೂದನು ಸಂತೋಷದಿಂದ ತನ್ನ ರಾಜಧಾನಿಗೆ ವಾಪಸ್ಸಾದನು.

ಸುಲ್ತಾನ್ ಮಹಮೂದನ ಹಿಂಸಾತ್ಮಕ ಕ್ರಮ:

ಮೇದಿನಿರಾಯನ ದುರಾಡಳಿತ ನಿಂತಿರಲೇ ಇಲ್ಲ. ಈತನ ಮಾತಿನಂತೆ ಕುಣಿಯುತ್ತಿದ್ದ ಸುಲ್ತಾನ್ ಮಹಮೂದನ ಹಿಂಸೆಯು ತಪ್ಪಿರಲಿಲ್ಲ. ಸೈನ್ಯದ ಅಮೀರರ, ಸರದಾರರ ಮೇಲೆ ಹಿಂಸಾತ್ಮಕ ಕ್ರಮಗಳು ನಡೆಯುತ್ತಲೇ ಇದ್ದವು. ಪ್ರತಿನಿತ್ಯ ಒಂದಲ್ಲ ಒಂದು ಕೊಲೆ. ನಿರಪರಾಧಿಗಳ ಮೇಲೆ ಹಿಂಸೆಗಳು ನಡೆಯುತ್ತಲೇ ಇದ್ದವು. ಹೀಗೆಯೇ ಕೊನೆಗೆ ಸುಲ್ತಾನ್ ಮಹಮೂದನು ಎಲ್ಲ ಅಮೀರರನ್ನು ಶತ್ರುಗಳಂತೆ ಕಾಣಲಾರಂಭಿಸಿದನು.

ಹಿಂದುಗಳ ಮೇಲೆ ಕರುಣೆ:

ಸುಲ್ತಾನ ಗಿಯಾಸುದ್ದೀನ ಮತ್ತು ನಾಸೀರುದ್ದೀನ ಕಾಲದಲ್ಲಿ ಈ ಮೊದಲು ಇದ್ದ ಎಲ್ಲ ಮುಸ್ಲಿಂ ಸುಬೇದಾರರನ್ನು, ಅಧಿಕಾರಿಗಳು ಮೊದಲಾದವರನ್ನು ಬಾದಶಹನು ಕಿತ್ತು ಹಾಕಿ ಅವರ ಸ್ಥಳದಲ್ಲಿ ಮೇದಿನಿರಾಯ ಮತ್ತು ಅವನ ಸಂಬಂಧಿಕರನ್ನು ನೇಮಿಸಿದನು. ಬಾದಶಹನ ಈ ಕೆಲಸದಿಂದ ಮುಸ್ಲೀಂ ಅಮೀರರು ವ್ಯಥೆಪಟ್ಟು ತಮ್ಮ ಹೆಂಡಿರ ಮಕ್ಕಳೊಡನೆ ಆಸ್ತಿ ಸಮೇತವಾಗಿ ಆ ಊರನ್ನೇ ಬಿಟ್ಟು ಹೋದರು.

ಮುಸಲ್ಮಾನ ವಿರೋಧಿ ಕಾರ್ಯಕ್ರಮಗಳು:

ಒಂದು ಕಾಲದಲ್ಲಿ ಶಾದಿಆಬಾದ್‌ಮಾಂಡು ನಗರವು ವಿದ್ಯೆಯ, ಕಲೆಗಳ ಸೌಂದರ್ಯದ ಬೀಡಾಗಿತ್ತು. ಆನಂದದ ತೊಟ್ಟಿಲನಂತಿತ್ತು. ಇಲ್ಲಿ ಮಹಾವಿದ್ವಾಂಸರು ತುಂಬಿ ತುಳುಕುತ್ತಿದ್ದರು. ಆದರೆ ಸುಲ್ತಾನ್ ಮಹಮೂದನ ಮೂರ್ಖತನದಿಂದಾಗಿ ಜನರೆಲ್ಲರೂ ರಾಜಧಾನಿಯನ್ನು ತೊರೆದು ದೂರ-ದೂರಪ್ರದೇಶಗಳಿಗೆ ಬದುಕನ್ನು

ಕಟ್ಟಿಕೊಳ್ಳಲಾರಂಭಿಸಿದರು. ಈ ನಗರ ಸಂಪೂರ್ಣವಾಗಿ ಹಿಂದೂಗಳ ವಶದಲ್ಲಿ ಸೇರಿಹೋಯಿತು. ಅರಮನೆಯಲ್ಲಿ ಎಲ್ಲರೂ ಹಿಂದೂಗಳೇ ಸೇರಿಹೋದರು. ಆನೆ ಕುದುರೆಗಳೆಲ್ಲರ ರಕ್ಷಣೆಯೂ ಹಿಂದೂಗಳದ್ದೇ ಆಗಿಹೋಯಿತು. ಸಮಯದ ಲಾಭವನ್ನು ಪಡೆದ ಹಿಂದುಗಳು ಮುಸಲ್ಮಾನರನ್ನೆಲ್ಲ ಅಲ್ಲಿಂದ ಖಾಲಿ ಮಾಡಿಸಿದರು. ಹಿಂದುಗಳು ಮುಸಲ್ಮಾನ ಹುಡುಗಿಯರ ಅಪಮಾನವನ್ನು ಮಾಡಲಾರಂಭಿಸಿದರು.

ಮಾಂಡುಕೋಟೆಯು ಅಲಿಖಾನನ ಕೈವಶ:

ಅಲಿಖಾನನು ಈ ನಗರದ ಒಬ್ಬ ಹಿರಿಯ ರಕ್ಷಕನಾಗಿದ್ದನು. ಆತನಿಗೆ ಈ ತೆರನಾದ ಮುಸ್ಲೀಮರ ಪತನವನ್ನು ನೋಡಲಾಗಲಿಲ್ಲ. ಆತನು ಬಾದಷಹನನ್ನು ವಿರೋಧಿಸಲು ಪ್ರಾರಂಭಿಸಿದನು. ಒಂದು ದಿನ ಸುಲ್ತಾನ್ ಮಹಮೂದ ಖಿಲ್ಜಿ ಸಾನಿಯು ಬೇಟೆಗೆಂದು ಹೊರಹೋಗಿದ್ದನು. ಆ ಸಮಯವನ್ನು ನೋಡಿ ಮಾಂಡು ಕೋಟೆಯನ್ನು ತನ್ನ ವಶಕ್ಕೆ ತೆಗೆದುಕೊಂಡನು. ಕೋಟೆಯಲ್ಲಿನ ಎಲ್ಲ ಜನರೂ ರಾಜಪೂತರ ಗಲಭೆಗಳಿಂದ ತೊಂದರೆಗೆ ಒಳಗಾಗಿದ್ದವರೆಲ್ಲರೂ ಅಲಿಖಾನನ ನೆರವಿಗೆ ದೃಢವಾಗಿ ನಿಂತರು.

ಅಲಿಖಾನನ ಪಲಾಯನ ಮತ್ತು ಕೊಲೆ:

ಸುಲ್ತಾನ್ ಮಹಮೂದನಿಗೆ ಈ ವಿಷಯ ತಿಳಿಯುತ್ತಿದ್ದಂತೆ ಬೇಟೆಯಿಂದ ಬಹಳ ವೇಗವಾಗಿ ವಾಪಸ್ಸ ಬಂದನು. ಕೋಟೆಯನ್ನು ಸುತ್ತುವರಿದು ಮುತ್ತಿದನು. ಅವರಿಗೆ ಅನೇಕ ತೊಂದರೆಗಳನ್ನು ಕೊಡಲಾರಂಭಿಸಿದನು. ಅಲಿಖಾನನು ಈ ತೊಂದರೆಗಳನ್ನು ಸಹಿಸಲಾರದೆ ತನ್ನ ಆಪ್ತರೊಂದಿಗೆ ಕೋಟೆಯಿಂದ ಕೆಳಗಿಳಿದು ಪಲಾಯಾನವನ್ನು ಮಾಡಿದನು. ಬಾದಷಹನು ಕೋಟೆಯ ಒಳಗೆ ಪ್ರವೇಶಿಸಿದನು. ಆತನು ರಾಜಪೂತರ ಒಂದು ಗುಂಪನ್ನು ಅಲಿಖಾನನನ್ನು ಹಿಂಬಾಲಿಸಲು ಕಳುಹಿಸಿದನು. ರಾಜಪೂತರು ಅಲಿಖಾನನನ್ನು ಹಿಡಿದು ಕೊಲೆ ಮಾಡಿದರು.

ಸುಲ್ತಾನ್ ಮಹಮೂದನ ಚಿಂತೆ:

ಇದಾದಮೇಲೆ ಮೇದಿನಿರಾಯನ ದುರಾಡಳಿತ ಇನ್ನೂ ಹೆಚ್ಚಾಯಿತು. ಆತನು ಮಾಳವದ ಎಲ್ಲ ಅಮೀರರು ಮನ್‌ಸಬ್ದಾರರನ್ನು ತನ್ನ ಕಡೆ ಮಾಡಿಕೊಂಡು ಅವರೆಲ್ಲರೂ ಹಿಂದೂಗಳೇ ಆಗಿರುವಂತೆ ನೋಡಿಕೊಂಡನು. ಈಗ ರಾಜ್ಯದಲ್ಲಿ ಕೇವಲ ಇನ್ನೂರು ಜನ ಮುಸಲ್ಮಾನರು ಮಾತ್ರ ಇದ್ದರು. ಬಾದಷಹ ಮಹಮೂದನು ಈ ಪರಿಸ್ಥಿತಿಯನ್ನು ನೋಡಿ ತುಂಬಾ ಚಿಂತಿತನಾದನು. ಈಗ ಆತನಿಗೆ ದುಷ್ಕರ್ಮದ ಅರಿವಾಗತೊಡಗಿತು. ಮೇದಿನಿರಾಯನ ಅಧಿಕಾರವನ್ನು ಕೊನೆಗೊಳಿಸಬೇಕೆಂದು ರಾಜಪೂತರನ್ನು ಕೋಟೆಯಿಂದ ಹೊರಹಾಕಬೇಕೆಂದು ತೀರ್ಮಾನಿಸಿಕೊಂಡನು.

ಮೇದಿನಿರಾಯನನ್ನು ಅಧಿಕಾರದಿಂದ ಕೆಳಗಿಳಿಸಿದನು:

ಹಿಂದೂ ಸಂಪ್ರದಾಯದಂತೆ ಯಾರನ್ನಾದರೂ ಕೆಲಸದಿಂದ ತೆಗೆಯಬೇಕಾದರೆ ಅಥವಾ ಅತಿಥಿಗಳನ್ನು ಬೀಳ್ಕೊಡುವ ಸಂದರ್ಭದಲ್ಲಿ ವೀಳ್ಯವನ್ನು ಕೊಟ್ಟು ಕಳುಹಿಸುವ ವಾಡಿಕೆ ಆಗ ಪ್ರಚಲಿತವಾಗಿತ್ತು. ಸುಲ್ತಾನ್ ಮಹಮೂದನು ಮೇದಿನಿರಾಯನಿಂದ ಬಿಡುಗಡೆ ಹೊಂದಲು ಆತನು ಆರಾಯಿಸ್‌ಖಾನನ ಕೈಯಲ್ಲಿ ವೀಳ್ಯವನ್ನು ಕೊಟ್ಟುಕಳುಹಿಸಿದನು. ಅದರಂತೆ ಹೀಗೆ "ನಾನು ನಿನ್ನನ್ನು ನನ್ನ ಸೇವೆಯಿಂದ ಬಿಡುಗಡೆಗೊಳಿಸಿದ್ದೇನೆ. ಆದ್ದರಿಂದ ನೀನು ನನ್ನ ರಾಜ್ಯವನ್ನು ತ್ಯಜಿಸಿ ಹೊರಕ್ಕೆ ಹೋಗು" ಎಂದು ಆದೇಶವನ್ನು ಕಳುಹಿಸಿದ್ದನು.

ರಾಜಪೂತರ ಸಂದೇಶ ಬಾದಷಹನಿಗೆ:

ರಾಜಪೂತರು ಸುಲ್ತಾನನ ಆದೇಶಕ್ಕೆ ಹೀಗೆ ಸಂದೇಶವನ್ನು ಕಳುಹಿಸದರು "ನಾವು ರಾಜಪೂತರು ಸಂಖ್ಯೆಯಲ್ಲಿ ನಲವತ್ತು ಸಾವಿರ ಜನರಿದ್ದೇವೆ. ನಾವೆಲ್ಲರೂ ತಮ್ಮ ಸೇವೆಯನ್ನು ಎಲ್ಲ ರೀತಿಯಲ್ಲೂ ಮಾಡಿದ್ದೇವೆ. ಪ್ರಾಣಗಳನ್ನ ಒತ್ತೆಯಿಟ್ಟು ತಮ್ಮ ಸೇವೆಯಲ್ಲಿ ಕರ್ತವ್ಯಗಳನ್ನು ನಿಭಾಯಿಸಿದ್ದೇವೆ. ನಿಮ್ಮ ಆಜ್ಞೆಗೆ ಮೀರಿ ಯಾವ ಕೆಲಸವನ್ನೂ ನಾವು ಮಾಡಿಲ್ಲ. ಕೊನೆಗೆ ನಮ್ಮ ತಪ್ಪು ಯಾವುದಿದೇ ಎಂದು ತಿಳಿಸಬೇಕು. ಇಷ್ಟೊಂದು ಕಠಿಣ ಸಜೆಯನ್ನು ನಮಗೇಕೆ ನೀಡಿದ್ದೀರಿ ತಿಳಿಸಿರಿ".

ಮೇದಿನಿರಾಯನ ದೂರದೃಷ್ಟಿ:

ರಾಜಪೂತರು ತಮ್ಮಲ್ಲಿಯೇ ತೀರ್ಮಾನಿಸಿಕೊಂಡಿದ್ದೇನೆಂದರೆ- ಏನಾದರೂ ಮಾಡಿ ಸುಲ್ತಾನ್ ಮಹಮೂದನನ್ನೇ ಕೊಲೆ ಮಾಡುವುದೊಂದೇ ಉಳಿದಿರುವ ನಮ್ಮ ಮಾರ್ಗ ಎಂದು. ಬಾದಷಹನ ಹುದ್ದೆಯನ್ನೇ ತೆಗೆದುಹಾಕಿ ಆಡಳಿತವನ್ನು ನಮ್ಮ ಕೈಗೆ ತೆಗೆದುಕೊಳ್ಳೋಣವೆಂದು ತೀರ್ಮಾನಿಸಿದರು. ಆದರೆ ಮೇದಿನಿರಾಯ ಬಹಳ ಚಾಣಾಕ್ಷನೂ, ಬುದ್ಧಿವಂತನೂ ಆಗಿದ್ದನು. ಆತನ ದೂರದೃಷ್ಟಿ ಭವಿಷ್ಯದ ಮೇಲಿತ್ತು. ಆದ್ದರಿಂದ ಆತನು ಈ ಅಭಿಪ್ರಾಯವನ್ನು ತಡೆದನು. ನಾವು ಹೀಗೆ ಮಾಡಬಾರದು ಎಂದು ಹೇಳಿದನು. ಇಲ್ಲದಿದ್ದರೆ ಗುಜರಾತಿ ಬಾದಷಹನು ನಮ್ಮ ಮೇಲೆ ಆಕ್ರಮಣವನ್ನು ಮಾಡುತ್ತಾನೆಂದು ತಿಳಿಸಿದನು. ಏನಾದರೂ ಮಾಡಿ ಸುಲ್ತಾನ ಮಹಮೂದನನ್ನು ಒಲಿಸಿಕೊಳ್ಳಬೇಕಾಗಿದೆ. ರಾಜ್ಯದ ಶಾಸನ ನಮ್ಮ ಕೈಯಲ್ಲಿಯೇ ಇರುವಂತೆ ಪ್ರಯತ್ನಿಸಬೇಕೆಂದು ಸಮಾಧಾನಪಡಿಸಿದನು.

ಮೇದಿನಿರಾಯನ ಅಪರಾಧಗಳ ಕ್ಷಮೆ:

ಮೇದಿನಿರಾಯನು ಸುಲ್ತಾನ ಮಹಮೂದನ ಸೇವೆಯಲ್ಲಿ ಹಾಜರಾದನು ಹಾಗೂ ನಾನು ಮಾಡಿರುವ ಅಪರಾಧಗಳನ್ನು ಕ್ಷಮಿಸುವಂತೆ ಪ್ರಾರ್ಥಿಸಿದನು. ಬಾದಷಹನು

ವಿವಶನಾಗಿ ಈ ಷರತ್ತುಗಳ ಮೇಲೆ ಕ್ಷಮಿಸಲು ಸಿದ್ಧನಾದನು. ೧) ಮೊದಲಿನಂತೆ ಎಲ್ಲ ಕೆಲಸಗಳನ್ನು ಮಾಡಲು ಮುಸಲ್ಮಾನರನ್ನು ನೇಮಿಸಿಕೊಳ್ಳಬೇಕು. ೨) ಮೇದಿನಿರಾಯನು ರಾಜ್ಯದ ಆಡಳಿತದಲ್ಲಿ ಯಾವುದರಲ್ಲೂ ಕೈಹಾಕಬಾರದು. ೩) ಹಿಂದೂ ಪರಿವಾರಗಳಲ್ಲಿರುವ ಎಲ್ಲ ಮುಸಲ್ಮಾನ ಹೆಂಗಸರನ್ನು ಸ್ವತಂತ್ರಗೊಳಿಸಿ, ನಿರಪರಾಧಿ ಮುಸಲ್ಮಾನರ ಮೇಲೆ ಹಿಂಸೆಯನ್ನು ನಿಲ್ಲಿಸಬೇಕು.

ಸಾಲ್‌ಬಾಹನ್ನನ ವಿರೋಧ:

ಮೇದಿನಿರಾಯನು ಈ ಎಲ್ಲ ಷರತ್ತುಗಳನ್ನು ಒಪ್ಪಕೊಂಡನು ಹಾಗೂ ಬಾದಷಹನಿಗೆ ವಿಧೇಯನಾಗಿರಲು ಒಪ್ಪಿ ಪ್ರಮಾಣವನ್ನು ಮಾಡಿದನು. ಸಾಲ್‌ಬಾಹನ್‌ಚೋರ್‌ಬಾ ಎಂಬುವನು ಬಾದಷಹನ ಒಬ್ಬ ಅಮೀರನಾಗಿದ್ದನು. ಆತನು ಈ ಷರತ್ತುಗಳನ್ನು ಒಪ್ಪಲು ನಿರಾಕರಿಸಿದನು ಹಾಗೂ ಬಾದಷಹನಿಗೆ ವಿಧೇಯನಾಗಿರಲು ಒಪ್ಪಲಿಲ್ಲ. ಆತನ ಹಿಂದಿನ ಮಾಮೂಲಿನಂತೆ ಕೆಟ್ಟ ಕೃತ್ಯಗಳಲ್ಲೇ ಮುಂದುವರೆಯಲು ತೀರ್ಮಾನಿಸಿಕೊಂಡನು.

ಬಾದಷಹನ ಧೈರ್ಯ:

ಬಾದಷಹನಿಗೆ ಈ ವಿಷಯ ತಿಳಿಯುತ್ತಿದ್ದಂತೆಯೇ ತುಂಬಾ ಕ್ರೋಧಿತನಾದನು. ಮೇದಿನಿರಾಯನನ್ನು ಮತ್ತು ಸಾಲಬಾಹನ್‌ನನ್ನು ಕೊಲೆಮಾಡಲು ನಿರ್ಧರಿಸಿದನು. ಈಗ ಸದ್ಯದಲ್ಲಿ ಬಾದಷಹನ ಹತ್ತಿರ ಕೇವಲ ಇನ್ನೂರು ಸಿಪಾಯಿಗಳು ಮಾತ್ರ ಉಳಿದಿದ್ದರು. ಆತನು ಧೈರ್ಯಗೆಡಲಿಲ್ಲ. ತನ್ನ ಕೆಲ ಆಪ್ತ ಸೈನಿಕರಿಗೆ – ಬಾದಷಹರು ಬೇಟೆಗೆ ಹೋದಾಗ, ವಾಪಸ್ಸ ಬರುತ್ತಿರುವ ಸಂದರ್ಭದಲ್ಲಿ ಸಾಲಬಾಹನ್ ಮತ್ತು ಮೇದಿನಿರಾಯನು ತಮ್ಮ ಮನೆಗಳತ್ತ ಹೋಗಲು ತಿರುಗಿದಾಗ ಅವರನ್ನು ಕೊಲೆಮಾಡಲು ಆಜ್ಞಾಪಿಸಿದನು.

ಸಾಲ್‌ಬಾಹನ್ನನ ಕೊಲೆ:

ಮಾರನೇ ದಿನ, ಹಿಂದಿನದಿನದಲ್ಲಿ ನಿಶ್ಚಯವಾದಂತೆ ಬಾದಷಹನು ಬೇಟೆಗೆ ಹೊರಟುಹೋದನು. ಮೇದಿನಿರಾಯ ಮತ್ತು ಸಾಲಬಾಹನ್‌ರು ಜೊತೆಯಲ್ಲಿದ್ದರು. ವಾಪಸ್ಸ ಬಂದಾಗ ಬಾದಷಹನು ಅವರಿಬ್ಬರನ್ನೂ ಬೀಳ್ಕೊಟ್ಟು ತಾನು ತನ್ನ ಅರಮನೆಯತ್ತ ಹೊರಟನು. ಬಾದಷಹನ ಕೆಲ ವ್ಯಕ್ತಿಗಳು ಅವರಿಬ್ಬರ ಮೇಲೆ ಆಕ್ರಮಣ ಮಾಡಿ ಕೊಲೆ ಮಾಡಲು ಸಂಚು ಹೂಡಿ ಕುಳಿತಿದ್ದರು. ಅವರಿಬ್ಬರೂ ನಡೆದು ಹೋಗುತ್ತಿದ್ದಾಗ ಹಿಂದಿನಿಂದ ಬಾದಷಹನ ವ್ಯಕ್ತಿಗಳು ಆಕ್ರಮಣವನ್ನು ಮಾಡಿದರು. ಸಾಲ್‌ಬಾಹನ್ನನು ಆ ಸಮಯದಲ್ಲಿ ಸತ್ತನು. ಆದರೆ ಮೇದಿನಿರಾಯನು ಕೇವಲ ಗಾಯಗೊಂಡನು. ಆತನನ್ನು ಆತನ ಸೇವಕರು ಉಳಿಸಿಕೊಂಡರು. ಮೇದಿನಿರಾಯನನ್ನು ಮನೆಗೆ ತಲುಪಿಸಿದರು.

ರಾಜಪೂತರ ಕ್ರೋಧ:

ರಾಜಪೂತರಿಗೆ ಈ ವಿಷಯ ತಿಳಿಯುತ್ತಿದ್ದಂತೆಯೇ ಗುಂಪುಗುಂಪಾಗಿ ಮೇದಿನಿರಾಯನ ಮನೆಯ ಹತ್ತಿರ ಸೇರಿದರು. ಅವರು ತಿಳಿದುಕೊಂಡಿದ್ದೇನೆಂದರೆ– ಈ ಕೃತ್ಯವು ಬಾದಷಹನ ಆಜ್ಞೆಯಿಂದಲೇ ನಡೆದಿದೆ ಎಂದು. ಮೇದಿನಿರಾಯನಿಗೆ ಯಾವ ವಿಷಯವನ್ನು ತಿಳಿಸದೆ ಯುದ್ಧ ಮಾಡಲು ಶಾಹಿ ದರಬಾರಿನತ್ತ ಸಾಗಿದರು.

ರಾಜಪೂತರೊಂದಿಗೆ ಬಾದಷಹನ ಯುದ್ಧ:

ಸುಲ್ತಾನ್ ಮಹಮೂದ ಖಿಲ್ಜಿಯು ಅಷ್ಟೊಂದು ಬುದ್ಧಿವಂತನಾಗಿರಲಿಲ್ಲ. ಆದರೂ ವೀರತೆಯಲ್ಲಿ ಯಾರಿಗೂ ಕಡಿಮೆ ಇರಲಿಲ್ಲ. ರಾಜಪೂತರು ಅರಮನೆಯತ್ತ ಯುದ್ಧಕ್ಕೆ ಬರುತ್ತಿದ್ದಾರೆಂಬ ಸುದ್ದಿ ತಿಳಿದು ಆತನು ಕೆಲವು ಮುಸಲ್ಮಾನ ನೌಕರರೊಂದಿಗೆ ಮತ್ತು ಕೇವಲ ಹದಿನಾರು ಜನ ಸವಾರರೊಂದಿಗೆ ಯುದ್ಧೋತ್ಸಾಹದಿಂದ ತನ್ನ ಅಂತಃಪುರವನ್ನು ಬಿಟ್ಟು ಹೊರಬಂದನು. ಅಲ್ಲಿ ಅನೇಕ ಸಾವಿರ–ಸಾವಿರ ಸಂಖ್ಯೆಯ ರಾಜಪೂತರೊಂದಿಗೆ ಯುದ್ಧದಲ್ಲಿ ನಿರತನಾಗಿಯೇ ಬಿಟ್ಟನು.

ಬಾದಷಹನ ಯುದ್ಧೋತ್ಸಾಹ:

ಒಬ್ಬ ರಾಜಪೂತ ಸಿಪಾಯಿಯು ಬಹಳ ಶೂರನಾಗಿದ್ದನು. ಮೊಟ್ಟಮೊದಲು ಆತನು ಮೈದಾನದಲ್ಲಿ ಬಂದು ಬಾದಷಹನ ಮೇಲೆ ಎರಗಿದನು. ಬಾದಷಹನು ಬಹಳ ಎಚ್ಚರಿಕೆಯಿಂದ ಅವನ ಏಟನ್ನು ತಡೆದು, ಬಹಳ ಧೈರ್ಯದಿಂದ ಆತನನ್ನು ನೂಕಿ, ಎರಡು ತುಂಡುಗಳನ್ನಾಗಿ ಕತ್ತರಿಸಿದನು. ಇದಾದ ನಂತರ ಮೊತ್ತೊಬ್ಬ ರಾಜಪೂತನು ಬಾದಷಹನ ಮೇಲೆ ಎರಗಿ ಬಂದನು. ಆತನನ್ನೂ ಬಾದಷಹನು ಎರಡು ತುಂಡಾಗಿ ಕತ್ತರಿಸಿದನು.

ರಾಜಪೂತರಿಗೆ ಮೇದಿನಿರಾಯನ ಸಲಹೆ:

ರಾಜಪೂತರು ಬಾದಷಹನ ಯುದ್ಧ ಕಲೆಯನ್ನು, ವೀರತೆಯನ್ನು ನೋಡಿ, ಯುದ್ಧವನ್ನು ಮುಂದುವರಿಸದೆ ಹಿಂದೆ ಸರಿಯುವುದೇ ಮೇಲೆಂದು ನಿಶ್ಚಯಿಸಿದರು. ಅಲ್ಲಿಂದ ಮೇದಿನಿರಾಯನ ಮನೆಯ ಮುಂಭಾಗದ ವಿಶಾಲ ಮೈದಾನದಲ್ಲಿ ಬಂದು ಸೇರಿದರು. ಮತ್ತೊಮ್ಮೆ ರಾಜಪೂತರು ಸೈನ್ಯವನ್ನು ಸಂಗ್ರಹಿಸಿಕೊಂಡು, ಬಾದಷಹನ ಮೇಲೆ ಯುದ್ಧಮಾಡಲು ಮೇದಿನಿರಾಯನ ಅನುಮತಿಯನ್ನು ಕೋರಿದರು. ಆಗ ಮೇದಿನಿರಾಯನು ಬಾದಷಹರು ನನ್ನನ್ನು ಕೊಲೆ ಮಾಡಿಸಲು ಪ್ರಯತ್ನ ಪಟ್ಟಿರುವುದು ಸತ್ಯವಾಗಿದ್ದರೂ ಅದು ಸಹಜವಾಗಿದೆ. ಅವರು ನನ್ನ ಮಾಲಿಕರು. ಅವರು ನನ್ನ ಬಗ್ಗೆ ಯಾವ ತೀರ್ಮಾನವನ್ನು ತೆಗೆದುಕೊಂಡರೂ ಅದು ನನಗೆ ಸ್ವೀಕಾರವಿದೆ. ಆದರೆ ನೀವು ಮಾತ್ರ ಅವರ ಮೇಲೆ ಸಿಟ್ಟಾಗಬೇಡಿ. ನೀವು ನನ್ನ ಪಕ್ಷವನ್ನು ವಹಿಸಿ

ಅವರಿಗೆ ಅವಿಧೇಯರಾಗಬೇಡಿ. ನೀವು ಯುದ್ಧದ ಚಿಂತೆ ಬಿಟ್ಟುಬಿಡಿ. ನೇರವಾಗಿ ಎಲ್ಲರೂ ತಮ್ಮತಮ್ಮ ಮನೆಗಳಿಗೆ ತೆರಳಿ ಎಂದು ಉಪದೇಶಿಸಿದನು.

ಮೇದಿನಿರಾಯನ ಸಂದೇಶ ಬಾದಷಹನಿಗೆ:

ಮೇದಿನಿರಾಯನಿಗೆ ಚನ್ನಾಗಿ ತಿಳಿದಿದ್ದೇನೆಂದರೆ– ಒಂದು ವೇಳೆ ಬಾದಷಹನು ಹತನಾದರೆ ಗುಜರಾತ, ಖಾನ್‌ದೇಶ್ ಮತ್ತು ಬರಾರಿನ ಬಾದಷಹರುಗಳು ನಮ್ಮ ಮೇಲೆ ಸೇಡನ್ನು ತೀರಿಸಿಕೊಳ್ಳದೇ ಬಿಡುವುದಿಲ್ಲ ಎಂದು. ಮೇದಿನಿರಾಯನು ಒಂದು ಕಡೆ ರಾಜಪೂತರನ್ನು ಸಮಾಧಾನ ಪಡಿಸಿ ಕಳುಹಿಸಿದರೆ ಮತ್ತೊಂದು ಕಡೆ ಸುಲ್ತಾನ್ ಮಹಮೂದನಿಗೆ "ನಾನು ಹುಜೂರ್‌ರಿಗೆ ಇಲ್ಲಿಯ ತನಕ ಮೋಸ ವಂಚನೆ ಮಾಡಿರಲಿಲ್ಲ. ನಿಮ್ಮ ಉಪ್ಪನ್ನು ನಾನು ಉಂಡಿದ್ದೇನೆ. ಗಾಯಗೊಂಡರೂ ಜೀವಂತನಾಗಿದ್ದೇನೆ. ಒಂದು ವೇಳೆ ನನ್ನನ್ನು ಕೊಲೆ ಮಾಡಿಸಿ ಸಾಮ್ರಾಜ್ಯಕ್ಕೆ ಒಳಿತಾಗುವುದಾದರೆ ನಾನು ಈಗಲೂ ಸಾಯಲು ಸಿದ್ಧನಾಗಿದ್ದೇನೆ" ಎಂದು ಸಂದೇಶವನ್ನು ಬರೆದು ಕಳುಹಿಸಿದನು.

ಬಾದಷಹನ ಪ್ರೇಮಪೂರ್ವಕ ಉತ್ತರ:

ಮೇದಿನಿರಾಯನಿಗೆ ಅಂತಹ ಪ್ರಾಣಘಾತುಕ ಗಾಯ ಆಗಿಲ್ಲವೆಂಬ ವಿಚಾರ ಬಾದಷಹನಿಗೆ ತಿಳಿಯಿತು. ಇದರಿಂದ ಆತನು ಪ್ರೇಮವನ್ನು ಪ್ರಕಟಿಸುತ್ತ ಹೀಗೆ ಸಂದೇಶವನ್ನು ಕಳುಹಿಸಿದನು "ಈಗ ನನಗೆ ಚೆನ್ನಾಗಿ ಅರ್ಥವಾಗಿರುವುದೇನೆಂದರೆ ನೀನು ಎಲ್ಲ ರೀತಿಯಿಂದಲೂ ನನ್ನ ಹಿತೈಷಿಯೇ ಆಗಿದ್ದಿ ಎಂದು. ನೀನು ನಿನ್ನ ಉತ್ತಮ ನಡತೆಯನ್ನು ತೋರಿಸಿದ್ದಿಯಾ. ವಿದ್ರೋಹಕ್ಕೆ ಸಿದ್ಧರಾಗಿ ನನ್ನ ಮೇಲೆ ಯುದ್ಧಕ್ಕೆ ಬಂದ ರಾಜಪೂತರನ್ನು ಹಿಂದಕ್ಕೆ ಕಳುಹಿಸಿದ್ದೀಯ. ಇದರಿಂದ ನನಗೆ ಸಂತೋಷವಾಗಿದೆ. ಸಾಲ್‌ಬಾಹನ್ನನು ಮಹಾ ಅಹಂಕಾರಿಯಾಗಿದ್ದ. ಆತನ ಕೊಲೆಯಾಗಿದೆ. ಈಗ ನಾನು ನಂಬಿರುವುದೇನೆಂದರೆ ಸಾಮ್ರಾಜ್ಯದ ಎಲ್ಲ ಕೆಲಸ ಕಾರ್ಯಗಳು ಮುಂದಿನ ದಿನಗಳಲ್ಲಿ ಸುಸೂತ್ರವಾಗಿ ನಡೆಯಬಹುದೆಂದು, ಯಾವ ಅಹಿತಕರ ಘಟನೆಗಳು ಜರುಗಲಾರವೆಂದು ನಂಬಿದ್ದೇನೆ.

ಮೇದಿನಿರಾಯನ ರಕ್ಷಣೆಯ ಉಪಾಯ:

ಇದಾದ ನಂತರ ಮೇದಿನಿರಾಯನು ಬಾದಷಹನನ್ನು ಸ್ವಲ್ಪ ಹೆಚ್ಚಾಗಿಯೇ ಹೊಗಳಲು ಪ್ರಾರಂಭಿಸಿದನು. ಹಿಂದಿನ ಘಟನೆಯ ಒಂದು ಶಬ್ದವನ್ನೂ ಮರೆತು ಆಡುತ್ತಿರಲಿಲ್ಲ. ಅಂದಿನಿಂದ ಬಾದಷಹರನ್ನು ಕಾಣಲು ಯಾವಾಗ ಬಂದರೂ ತನ್ನೊಡನೆ ಐದುನೂರು ಸವಾರರ ರಕ್ಷಣೆಯಲ್ಲಿ ಬರುತ್ತಿದ್ದನು. ಆತನಿಗೆ ಯಾವ ಘಳಿಗೆಯಲ್ಲಿ ಎಂಥ ಘಟನೆ ಸಂಭವಿಸುತ್ತದೋ ಎಂಬ ಭಯವಿತ್ತು.

ಸುಲ್ತಾನ್ ಮಹಮೂದನು ಗುಜರಾತಿನಲ್ಲಿ:

ಬಾದಷಹನು ಈ ಕೆಲವೊಂದು ಘಟನೆಗಳಿಂದಾಗಿ ತುಂಬಾ ಚಿಂತಿತನಾದನು. ಒಂದು ದಿನ ಬೇಟೆಯ ನೆಪದಲ್ಲಿ ರಾಜಪೂತರನ್ನು ಬಹಳಷ್ಟು ಹೆದರಿಸಿ ಓಡಿಸಿದನು. ಅಂದಿನ ರಾತ್ರಿಯಲ್ಲಿಯೇ ತನ್ನ ಪ್ರೀತಿಪಾತ್ರಳಾದ ರಾಣಿ ಕನ್ಯಾಳೊಂದಿಗೆ ಕೆಲವು ಸಾಮಾನ್ಯ ಸೇವಕರನ್ನು ಕರೆದುಕೊಂಡು ಕೋಟೆಯಿಂದ ಹೊರಹೊರಟನು. ಗುಜರಾತಿನ ಗಡಿಪ್ರದೇಶದತ್ತ ಸಾಗಿದನು. ಪ್ರಯಾಣ ಮಾಡುತ್ತ ಗುಜರಾತಿನ ಗಡಿಯಲ್ಲಿ ತಲುಪಿದನು. ಅಲ್ಲಿನ ಶಾಸಕನು ಬಹಳ ಗೌರವದಿಂದ ಸ್ವಾಗತಿಸಿದನು. ಅನೇಕ ಬಹುಮೂಲ್ಯ ವಸ್ತುಗಳನ್ನು ನೀಡಿ ಸಂತೋಷಪಡಿಸಿದನು. ಅಲ್ಲಿನ ಶಾಸಕರು ಸುಲ್ತಾನ್ ಗುಜರಾತಿಯೊಂದಿಗೆ ಭೇಟಿ ಮಾಡಿಸಿದರು. ಸುಲ್ತಾನ್ ಮಹಮೂದನು ತಾನು ಬಂದ ವಿಚಾರವನ್ನು ತಿಳಿಸಿದನು.

ಸುಲ್ತಾನ್ ಮುಜಫರ್ ಮತ್ತು ಸುಲ್ತಾನ್ ಮಹಮೂದನ ಭೇಟಿ:

ಸುಲ್ತಾನ್ ಮುಜಫರ್‌ನು ಸುಲ್ತಾನ್ ಮಹಮೂದನ ಆಗಮನದಿಂದ ತುಂಬಾ ಸಂತೋಷಪಟ್ಟನು. ಸುಲ್ತಾನ್ ಮಹಮೂದನನ್ನು ಸ್ವಾಗತಿಸಲು ಖೈಸರ್‌ಖಾನ, ತಾಜ್‌ಖಾನ, ಖವಾಮುಲ್‌ಮುಲ್ಕ ಮತ್ತು ಇನ್ನೂ ಹೆಸರಾಂತ ಅಮೀರರನ್ನು ಗೌರವಪೂರ್ವಕವಾಗಿ ಸ್ವಾಗತಿಸಿದರು. ಬಾದಷಹರಿಗೆ ಯೋಗ್ಯ ಸಾಮಾನುಗಳೆಂದರೆ ಅರಬ್ಬೀ ಕುದುರೆಗಳನ್ನು, ಕೆಲವು ಆನೆಗಳನ್ನು, ಸ್ವಾಗತಕ್ಕೆ ಸಂಬಂಧಪಟ್ಟ ಸಾಮಾನುಗಳನ್ನು, ತಲೆಯ ಮೇಲೆನ ಪರದಾಗಳನ್ನು ಮತ್ತು ಕೆಂಪು ಪರದಾಗಳನ್ನು ಎಲ್ಲವನ್ನೂ ಕಳುಹಿಸಿಕೊಟ್ಟನು. ಸುಲ್ತಾನ್ ಮುಜಫರ್‌ನೂ ಸಹ ಕೆಲವು ಮೈಲಿಗಳ ದೂರದಿಂದಲೇ ಸ್ವಾಗತಿಸಲು ಹೋದನು. ಇಬ್ಬರೂ ಬಾದಷಹರುಗಳು ಭೇಟಿಯಾದರು. ಸಭೆಯಲ್ಲಿ ಒಂದೇ ಸಿಂಹಾಸನದ ಮೇಲೆ ಕುಳಿತು ಚರ್ಚಿಸಿದರು.

ಸುಲ್ತಾನ್ ಮಹಮೂದನಿಗೆ ಸಹಾಯ ಮಾಡಲು ಒಪ್ಪಿದನು:

ಸುಲ್ತಾನ್ ಮುಜಫರ್‌ನು ಸುಲ್ತಾನ್ ಮಹಮೂದನೊಂದಿಗೆ ಬಹಳ ಸ್ನೇಹಪೂರ್ವಕವಾಗಿ ವರ್ತಿಸಿದನು. ತನ್ನ ಎಲ್ಲ ಸಮಸ್ಯೆಗಳನ್ನು ಸುಲ್ತಾನ್ ಮುಜಫರ್‌ನಿಗೆ ತಿಳಿಸದನು. ಆದರೂ ಕೆಲವೊಂದು ವಿಚಾರಗಳನ್ನು ಗುಪ್ತವಾಗಿಯೇ ಇಟ್ಟನು. ಸಂದರ್ಭ ಬಂದಾಗ ಸೈನಿಕ ಸಹಾಯವನ್ನು ಕೇಳಿಕೊಂಡನು.

ಸುಲ್ತಾನ್ ಮುಜಫರ್ ಗುಜರಾತಿಯು ಮಾಳವದ ಮೇಲೆ ಸೈನಿಕಾಚರಣೆ:

ಹಿಜರಿ ೯೨೩ ರಲ್ಲಿ ಸುಲ್ತಾನ್ ಮುಜಫರ್ ಗುಜರಾತಿಯು ಸುಲ್ತಾನ್ ಮಹಮೂದ ಖಿಲ್ಜಿಯ ಜೊತೆಯಲ್ಲಿಯೇ ಮಾಳವದ ಕಡೆ ಹೊರಟು ಬಂದನು. ಮೇದಿನಿರಾಯನು ಈ ಸುದ್ದಿಯನ್ನು ತಿಳಿದು ಎಚ್ಚತ್ತನು. ಇಬ್ಬರೂ ಬಾದಷಹರುಗಳೂ ಬರುತ್ತಿದ್ದಾರೆಂದು

ತಿಳಿದು ಆತನು ಶಾದಿ ಆಬಾದ್ ಮಾಂಡುವನ್ನು ತನ್ನ ಮಗನಾದ ನಥ್ಥೋರಾಯನ ಅಧೀನದಲ್ಲಿ ಹನ್ನೆರಡುಸಾವಿರ ಸಿಪಾಯಿಗಳನ್ನು, ಅಸಂಖ್ಯೆ ಸೇವಕರನ್ನು ಬಿಟ್ಟು ತಾನು ಸ್ವತಃ ಧಾರ್ ಕೋಟೆಯತ್ತ ಹೊರಟನು. ಅಲ್ಲಿನ ಕೋಟೆಯನ್ನು ಬಿಗಿಗೊಳಿಸುವ ಕೆಲಸದಲ್ಲಿ ತೊಡಗಿದನು.

ಮೇದಿನಿರಾಯನ ಪಲಾಯನ:

ಸುಲ್ತಾನ್ ಮುಜಫರ್‌ನ ಸೈನ್ಯವು ಬಹಳ ಹತ್ತಿರ ಬಂದ ತಕ್ಷಣ ಮೇದಿನಿರಾಯನು ತುಂಬಾ ಚಿಂತಿತನಾದನು. ಆತನಲ್ಲಿ ಗುಜರಾತಿನ ಬಹು ದೊಡ್ಡ ಸೈನ್ಯವನ್ನೆದುರಿಸುವಷ್ಟು ಸಾಮರ್ಥ್ಯವಿರಲಿಲ್ಲ. ತನ್ನ ಹತ್ತಿರವಿದ್ದ ಸೈನ್ಯದ ಬಹುಭಾಗವನ್ನು ತನ್ನ ಮಗನ ಸಹಾಯಕ್ಕೆ ಕಳುಹಿಸಿ ತಾನು ರಾಣಾಸಾಂಗನ ಹತ್ತಿರ ಜಯಪುರಕ್ಕೆ ಓಡಿದನು.

ಧಾರ್ ನಗರ ಕೋಟೆಯನ್ನು ವಶಪಡಿಸಿಕೊಂಡು ಮಾಂಡುವನ್ನು ಮುತ್ತಿದರು:

ಸುಲ್ತಾನ್ ಮುಜಫರ್‌ನು ಧಾರ್ ಕೋಟೆಯ ಮುಂದೆಯೇ ಬೀಡು ಬಿಟ್ಟನು. ಆತನು ಕೆಲವೇ ಸಮಯದಲ್ಲಿ ಧಾರ್ ಕೋಟೆಯನ್ನು ತನ್ನ ವಶಕ್ಕೆ ಪಡೆದನು. ಇದಾದ ನಂತರ ಮುಜಫರ್ ಗುಜರಾತಯಿ ಶಾದಿ ಆಬಾದ್ ಮಾಂಡು ಕೋಟೆಯನ್ನು ಮುತ್ತಿಗೆ ಹಾಕಿದನು. ಆತನು ಅಸೀರಿನ ಶಾಸಕನಾದ ಆದಿಲ್‌ಖಾನನೊಂದಿಗೆ ಅನೇಕ ಗುಜರಾತಿ ಅಮೀರರೊಂದಿಗೆ ಸೈನ್ಯವನ್ನು ಕೊಟ್ಟು ರಾಣಾಸಾಂಗ ಮತ್ತು ಮೇದಿನಿರಾಯನನ್ನು ಸೋಲಿಸಲು ಕಳುಹಿಸಿಕೊಟ್ಟನು.

ಮಾಂಡು ಕೋಟೆಯ ಗೆಲವು:

ಸುಲ್ತಾನ್ ಗುಜರಾತಿನ ಚರಿತ್ರೆಯಲ್ಲಿ ಬರೆದಿರುವಂತೆ ಹಿಜರಿ ೯೨೪ ರಲ್ಲಿ ಸುಲ್ತಾನ್ ಮುಜಫರ್ ಗುಜರಾತಿಯು ಮಾಂಡು ಕೋಟೆಯನ್ನು ವಶಕ್ಕೆ ತೆಗೆದುಕೊಂಡನು. ಗೆದ್ದ ದಿನದಂದು (೯೦) ತೊಂಬತ್ತುಸಾವಿರ ರಾಜಪೂತ ಸೈನಿಕರನ್ನು ಕೊಂದು ಹಾಕಲಾಗಿತ್ತು. ಅನೇಕ ರಾಜಪೂತರು ಜೌಹರ್ ಪದ್ಧತಿಯನ್ನು ಅನುಸರಿಸಿ ತಮ್ಮನ್ನು ನಾಶಪಡಿಸಕೊಂಡಿದ್ದರು.

ಮಾಂಡು ಕೋಟೆಯನ್ನು ಸುಲ್ತಾನ್ ಮಹಮೂದನ ವಶಕ್ಕೆ:

ಸುಲ್ತಾನ್ ಮಹಮೂದ ಖಿಲ್ಜಿಯು ಯುದ್ಧದ ಸಂದರ್ಭದಲ್ಲಿ ಮಾಂಡುವಿನಲ್ಲಿರಲಿಲ್ಲ. ಆತನು ಹಿಂದೆಯೇ ಉಳಿದುಕೊಂಡಿದ್ದನು. ಗೆಲುವಿನ ದಿನದಂದು ಮಾಂಡುವಿಗೆ ಬಂದನು. ಆತನು ಇಷ್ಟು ಮಹತ್ತರವಾದ ಸಾಧನೆಗೆ ಶುಭಾಶಯುಗಳನ್ನು ಮುಜಫರ್‌ಶಾಹನಿಗೆ ಹೇಳಿದನು ಮತ್ತು ಬಹಳ ಗೌರವಪೂರ್ವಕವಾಗಿಯೇ ಪ್ರಶ್ನಿಸಿದನು. "ಈಗ ನನ್ನ ಬಗ್ಗೆ ಜನಾಬ್‌ರ ಇಚ್ಛೆ ಏನು?" ಎಂದನು. ಸುಲ್ತಾನ್ ಮುಜಫರ್‌ನು ಬಹಳ ಪ್ರೇಮದಿಂದಲೇ ತನ್ನ

ಔದಾರ್ಯಕ್ಕೆ ಸಾಕ್ಷಿಯಾಗಿ "ಮಾಳವದ ಶಾಸನ ನಿಮಗೆ ಶುಭವಾಗಲಿ" ಎಂದನು. ಇದಾದ ನಂತರ ಸುಲ್ತಾನ್ ಮುಜಫರ್‌ನು ಮಾಂಡು ಕೋಟೆಯನ್ನು ಸುಲ್ತಾನ್ ಮಹಮೂದನಿಗೆ ಒಪ್ಪಿಸಿ ತಾನು ಸ್ವತಃ ತನ್ನ ಸೈನ್ಯದ ಶಿಬಿರಕ್ಕೆ ವಾಪಸ್ಸಾದನು.

ಸುಲ್ತಾನ್ ಮುಜಫರ್‌ನು ಧಾರ್‌ನಲ್ಲಿ:

ಸುಲ್ತಾನ್ ಮುಜಫರ್‌ನು ಮೇದಿನಿರಾಯ್ ಮತ್ತು ರಾಣಾಸಾಂಗರನ್ನು ದಮನ ಮಾಡಲು ಮಾಂಡುವಿನಿಂದ ಹೊರಟನು. ಬಾದಷಹನು ಧಾರ್ ತಲುಪಿದಾಗ ಗುಪ್ತಚರರು ತಿಳಿಸಿದ್ದೇನೆಂದರೆ ಆದಿಲ್‌ಖಾನ ಮತ್ತು ಗುಜರಾತಿ ಅಮೀರರು ಇನ್ನೂ ದೀಪಾಲ್‌ಪುರವನ್ನು ಮುಟ್ಟಿರಲಿಲ್ಲ. ಶತ್ರುಗಳು ಗೆಲುವಿನ ಸುದ್ದಿಯನ್ನು ತಿಳಿದು ಅವರು ಚಂದೇರಿಯತ್ತ ಓಡಿಹೋಗಿದ್ದರು.

ಸುಲ್ತಾನ್ ಮುಜಫರ್‌ನು ಮಾಂಡುವಿಗೆ ವಾಪಸ್ಸು:

ಒಂದು ದಿನ ಸುಲ್ತಾನ್ ಮುಜಫರ್‌ನು ಇನ್ನೂ ಧಾರ್‌ನಲ್ಲೇ ಇದ್ದಾಗ ಸುಲ್ತಾನ್ ಮಹಮೂದನು ಅಲ್ಲಿಗೆ ಬಂದನು. ಸುಲ್ತಾನ್ ಮುಜಫರ್‌ನನ್ನು ಒಂದು ದಿನದ ಮಟ್ಟಿಗಾದರು ತಾವು ಮಾಂಡುವಿಗೆ ಬಂದು ಹೋಗಲು ಆಹ್ವಾನವನ್ನು ನೀಡಿದ್ದನು. ಸುಲ್ತಾನ್ ಮುಜಫರ್‌ನು ಆತನ ಆಹ್ವಾನವನ್ನು ಸ್ವೀಕರಿಸಿದ್ದನು. ತನ್ನ ಸೈನ್ಯವನ್ನು ಧಾರ್‌ನಲ್ಲೇ ಬಿಟ್ಟು ಸ್ವತಃ ಬಾದಷಹ ಗುಜರಾತಿಯು ಮಾಂಡುವಿಗೆ ಬಂದಿದ್ದನು. ಸುಲ್ತಾನ್ ಮಹಮೂದನು ಆತನನ್ನು ಬಹಳ ವಿಜೃಂಭಣೆಯಿಂದ ಆಹ್ವಾನವನ್ನು ನೀಡಿದ್ದನು. ಆತನ ಗೌರವದಲ್ಲಿ ಬಹಳ ದೊಡ್ಡ ಸಮಾರಂಭವನ್ನೇರ್ಪಡಿಸಿದ್ದನು. ಬಹಳ ಅಮೂಲ್ಯವಾದ ಕೊಡುಗೆ, ಬಹುಮಾನಗಳನ್ನು ನೀಡಿ ಗೌರವಿಸಿದನು. ಸುಲ್ತಾನ್ ಮುಜಫರ್‌ನು ಬಹಳ ಸಂತೋಷಪಟ್ಟು ತನ್ನ ದೇಶಕ್ಕೆ ಹೊರಟಾಗ, ಸುಲ್ತಾನ್ ಮಹಮೂದನು ಆತನ ಜೊತೆಯಲ್ಲಿ ಬಹಳ ದೂರದ ತನಕ ಹೋಗಿ ಬೀಳ್ಕೊಟ್ಟು ಬಂದಿದ್ದನು.

ಸುಲ್ತಾನ್ ಮುಜಫರ್‌ನು ಗುಜರಾತಿಗೆ ಪ್ರಯಾಣ:

ಸುಲ್ತಾನ್ ಗುಜರಾತಿಯು ತನ್ನೆಲ್ಲ ಅಮೀರರಿಗಿಂತ ಸಮರ್ಥನಾದ ಒಬ್ಬ ಅಮೀರ ಆಸೀಫ್‌ಖಾನನನ್ನು ಆತನೊಂದಿಗೆ ಅನೇಕ ಸಾವಿರ ಸಂಖ್ಯೆಯ ಸೈನ್ಯವನ್ನು ಕೊಟ್ಟು ಮಹಮೂದನ ಸಹಾಯಕ್ಕೆಂದು ಮಾಂಡುವಿನಲ್ಲೇ ಬಿಟ್ಟು ಹೋದನು. ಇದಾದ ನಂತರ ಗುಜರಾತಿನತ್ತ ಪ್ರಯಾಣ ಬೆಳೆಸಿದನು.

ಕಾಕ್‌ರೂನ್‌ನ ಮೇಲೆ ಸುಲ್ತಾನ್ ಮಹಮೂದನ ಆಕ್ರಮಣ:

ಚಂದೇರಿ ಮತ್ತು ಕಾಕ್‌ರೂನಿನ ಮೇಲೆ ಮೇದಿನಿರಾಯನ ಆಧಿಪತ್ಯವಿತ್ತು.

ಅವುಗಳ ಜೊತೆಯಲ್ಲಿ ಕಸಬಾ ರಾಯ್ಸಿನ್, ಭೇಲ್ಸಾ ಮತ್ತು ಸಾರಂಗಪುರಗಳು ಸಲ್‌ಹದಿಬಯಾನ ಹಿಡಿತದಲ್ಲಿದ್ದವು. ಈ ಪ್ರದೇಶಗಳನ್ನು ಮಹಮೂದ ಖಿಲ್ಜಿಯು ತನ್ನ ವಶಕ್ಕೆ ಪಡೆಯಲು ನಿರ್ಧರಿಸಿದನು. ಮೊಟ್ಟಮೊದಲು ಆತನು ಕಾಕ್‌ರೂನಿನ ಮೇಲೆ ಆಕ್ರಮಣವನ್ನು ಮಾಡಿದನು. ಮೇದಿನಿರಾಯನು ಈ ಸಲವು ರಾಣಾಸಾಂಗನ ಸಹಾಯವನ್ನು ಬೇಡಿದನು. ರಾಣಾಸಾಂಗನು ಒಂದು ದೊಡ್ಡ ಸೈನ್ಯವನ್ನು ತೆಗೆದುಕೊಂಡು ಅವನ ಸಹಾಯಕ್ಕೆ ಬಂದನು.

ರಾಣಾಸಾಂಗನ ಸಿದ್ಧತೆಗಳು:

ಸುಲ್ತಾನ್ ಮಹಮೂದನು ಪ್ರಯಾಣದ ಮಜಲುಗಳನ್ನು ಪಾರುಮಾಡುತ್ತ ಶತ್ರುವಿನ ಹತ್ತಿರ ತಲುಪಿದನು. ರಾಣಾಸಾಂಗನ ಸೈನ್ಯದ ಎದುರು ತಲುಪಲು ಇನ್ನೂ ಏಳು ಮೈಲುಗಳು ಬಾಕಿ ಇದ್ದಾಗ, ಇಲ್ಲಿಯೇ ಬೀಡು ಬಿಡಲು ತೀರ್ಮಾನಿಸಿದನು. ಈ ವಿಚಾರವು ರಾಣಾಸಾಂಗನಿಗೆ ತಿಳಿದ ಕೂಡಲೆ ಆತನು ತನ್ನ ಸೈನ್ಯದ ಸರದಾರರನ್ನು ಸೇರಿಸಿಕೊಂಡು ಹೀಗೆ ಹೇಳಿದನು –"ಈಗ ನಮ್ಮ ಶತ್ರುವು ಪ್ರಯಾಣದ ಆಯಾಸದಿಂದ ಬಳಲುತ್ತಿದ್ದಾನೆ. ನಾವು ಈಗ ತಕ್ಷಣ ಆತನ ಮೇಲೆ ಆಕ್ರಮಣವನ್ನು ಮಾಡುವುದು ಒಳ್ಳೆಯದು. ಏಕೆಂದರೆ ಅವರಲ್ಲಿ ಹೊಸ ಹುರುಪನ್ನು ತುಂಬಲು ಅವಕಾಶವನ್ನು ಕೊಡಲೇಬಾರದು" ಎಲ್ಲ ಸರದಾರರೂ ರಾಣಾಸಾಂಗನ ಅಭಿಪ್ರಾಯಕ್ಕೆ ಮಾನ್ಯತೆಯನ್ನು ನೀಡಿದರು. ಯುದ್ಧದ ಸಿದ್ಧತೆಯಲ್ಲಿ ತೊಡಗಿದರು.

ರಾಣಾಸಾಂಗನು ಸುಲ್ತಾನ್ ಮಹಮೂದನ ಮೇಲೆ ಆಕ್ರಮಣ:

ರಾಣಾಸಾಂಗನು ತನ್ನ ಸೈನ್ಯವನ್ನು ಸಿದ್ಧಗೊಳಿಸಿಕೊಂಡು ಸುಲ್ತಾನ್ ಮಹಮೂದ ಖಿಲ್ಜಿಯ ಮೇಲೆ ಬಿದ್ದನು. ಮುಸಲ್ಮಾನ ಸೈನಿಕರ ಹತ್ತಿರಕ್ಕೆ ಬಂದನು. ಇಷ್ಟು ಬೇಗ ರಾಣಾಸಾಂಗನು ಬರುತ್ತಾನೆಂಬ ಸುದ್ದಿ ಮಹಮೂದನಿಗಿರಲಿಲ್ಲ. ಆದರೂ ತನ್ನ ಕೆಲವು ಅಮೀರರಿಗೆ ಈ ಸುದ್ದಿಯು ತಿಳಿಯಿತು. ಅವರು ಬಾದಷಹನಿಗೆ ಸುದ್ದಿಯನ್ನು ಮುಟ್ಟಿಸಿದರು. ಬಾದಷಹನು ಯುದ್ಧ ಮಾಡಲು ನಿಶ್ಚಯಿಸಿದನು. ಆದರೆ ಕೆಲವು ಅಮೀರರು ಆಸೀಫ್‌ಖಾನ ಗುಜರಾತಿ ಮತ್ತೀತರರು ಇಂದು ಯುದ್ಧಮಾಡುವುದು ಸರಿಯಲ್ಲ. ಏಕೆಂದರೆ ನಮ್ಮ ಸೈನಿಕರು ಆಯಾಸದಿಂದ ಬಳಲುತ್ತಿದ್ದಾರೆಂದರು. ಆದರೆ ದಡ್ಡನಾದ ಬಾದಷಹನಿಗೆ ಈ ಮಾತು ಹಿಡಿಸಲಿಲ್ಲ. ಆತನು ಶತ್ರುಗಳ ಮೇಲೆ ಯುದ್ಧವನ್ನು ಮಾಡುವ ದೃಢ ನಿಶ್ಚಯವನ್ನು ಮಾಡಿದನು.

ಮಾಳವಿ ಸೈನ್ಯದ ನಾಶ:

ಇಬ್ಬರಲ್ಲೂ ಯುದ್ಧವು ಆರಂಭವಾಗಿಯೇ ಬಿಟ್ಟಿತು. ಸ್ವಲ್ಪ ಹೊತ್ತಿನಲ್ಲಿಯೇ ಸುಲ್ತಾನ್ ಮಹಮೂದನ ಸೈನ್ಯದ ನಾಶವಾಯಿತು. ಈತನ ಸೈನ್ಯದ ೩೨ ಹೆಸರಾಂತ

ಸರದಾರರು ಹತರಾದರು. ಆಸೀಫ್‌ಖಾನ ಗುಜರಾತಿಯು ತನ್ನ ಸೈನ್ಯದ ಐದುನೂರು ಸಿಪಾಯಿಗಳೊಂದಿಗೆ ತಾನೂ ಹತನಾದನು. ಮಾಳವಿ ಸೈನ್ಯದಲ್ಲಿ ಕೇವಲ ಹನ್ನೊಂದು ಜನರು ಮಾತ್ರ ಉಳಿದುಕೊಂಡರು. ಅವರಲ್ಲಿ ಒಬ್ಬ ಸುಲ್ತಾನ್ ಮಹಮೂದ ಮತ್ತು ಹತ್ತು ಜನ ಸವಾರರು ಮಾತ್ರ ಜೀವಂತವಾಗಿ ಉಳಿದಿದ್ದರು. ಇದು ಎಂತಹ ಕನಿಷ್ಠ ಸೋಲೆಂದರೆ ಇದಕ್ಕೆ ಇತಿಹಾಸದಲ್ಲಿ ಉದಾಹರಣೆಗಳು ಸಿಗುವುದಿಲ್ಲ.

ಶತ್ರುವಿನ ಮೇಲೆ ಸುಲ್ತಾನನ ಆಕ್ರಮಣ:

ಸುಲ್ತಾನ್ ಮಹಮೂದನು ಈಗ ನನಗೆ ಸೈನ್ಯದ ಅವಶ್ಯಕತೆಯೇ ಇಲ್ಲ ಎಂದು ತೀರ್ಮಾನಿಸಿ ಧೈರ್ಯಗೆಡದೆ ರಾಜಪೂತರ ಮೇಲೆ ಸಿಂಹದಂತೆ ಬಿದ್ದನು. ಈಗ ಶತ್ರುಗಳ ಸೈನ್ಯದಲ್ಲಿ ಐವತ್ತುಸಾವಿರ ರಾಜಪೂತರಿದ್ದಾರೆ. ಆದರೂ ಇವನೊಬ್ಬನೆ ತನ್ನ ಹತ್ತು ಸವಾರರೊಂದಿಗೆ ಅವರ ಮೇಲೆ ಬಿದ್ದನು.

ಸುಲ್ತಾನ್ ಮಹಮೂದನ ಹುಚ್ಚು ವೀರಾವೇಶ:

ಸುಲ್ತಾನ್ ಮಹಮೂದನ ಜೊತೆಗಿದ್ದ ಹತ್ತುಜನ ಸವಾರರು ಬಹಳ ಬೇಗ ಶತ್ರುಗಳ ಕತ್ತಿಗಳಿಗೆ ಆಹುತಿಯಾದರು. ಆದರೆ ಸುಲ್ತಾನನೊಬ್ಬನೆ ಶತ್ರುಗಳನ್ನು ತರಿದು ಹಾಕುತ್ತ ಹುಚ್ಚು ವೀರಾವೇಶದಿಂದ ಮುನ್ನುಗ್ಗುತ್ತಿದ್ದನು. ತನ್ನ ಕುದುರೆಯನ್ನು ಮುಂದುವರೆಸುತ್ತ ಗಾಯಗೊಂಡ ಸಿಂಹದಂತೆ ಶತ್ರುಗಳ ತಲೆಗಳನ್ನು ಕತ್ತರಿಸುತ್ತ ನುಗ್ಗಿದನು. ವಿದ್ಯುತ್ತ ಪ್ರವಾಹದಂತೆ ನುಗ್ಗಿದನು. ರಾಜಪೂತರು ಸುಲ್ತಾನನ ವೀರತೆಯನ್ನು ಕಂಡು ಆಶ್ಚರ್ಯಚಕಿತರಾಗುತ್ತಿದ್ದರು. ಎಲ್ಲಿಯವರೆಗೆ ತನ್ನಲ್ಲಿ ಮಹಾಶಕ್ತಿ ಉದಯಿಸಿತೋ ಅಲ್ಲಿಯವರೆಗೆ ಹೋರಾಡುತ್ತಿದ್ದನು. ಆತನ ಶರೀರದ ಮೇಲೆ ಅನೇಕ ಗಾಯಗಳಾಗಿದ್ದವು. ಆದರೂ ಹಿಮ್ಮೆಟ್ಟದೆ ತನ್ನ ಕತ್ತಿಯಿಂದ ಮುಂದೆ ಬಂದವರೆಲ್ಲರನ್ನು ತರಿದು ಹಾಕುತ್ತಿದ್ದನು. ಕೊನೆಗೆ ರಾಜಪೂತರು ಆತನ ಸುತ್ತಲೂ ಸುತ್ತುವರಿದು ಕುದುರೆಯಿಂದ ಕೆಳಕ್ಕೆ ಕೆಡವಿದರು. ರಾಜಪೂತರು ಆತನ ಶೌರ್ಯಕ್ಕೆ ಮೆಚ್ಚಿಕೊಂಡು ಆತನನ್ನು ಕೊಲೆಮಾಡದೆ ಸೆರೆಹಿಡಿದರು. ರಾಣಾಸಾಂಗನ ಹತ್ತಿರಕ್ಕೆ ಕರೆತಂದರು.

ರಾಣಾಸಾಂಗನ ಒಳ್ಳೆಯ ವರ್ತನೆ ಸುಲ್ತಾನ ಮಹಮೂದನೊಂದಿಗೆ:

ರಾಜಪೂತ ಸೈನಿಕರು ರಾಣಾಸಾಂಗನ ಎದುರು ಸುಲ್ತಾನ್ ಮಹಮೂದನ ಅಪಾರ ಪ್ರಶಂಸೆಯನ್ನು ಮಾಡಿದರು. ಆತನ ವೀರಾವೇಶವನ್ನು ಮುಕ್ತ ಕಂಠದಿಂದ ಕೊಂಡಾಡಿದರು. ರಾಣಾಸಾಂಗನು ಸಹ ಬಾದಷಹನಿಗೆ ಅಪಾರ ಗೌರವವನ್ನು ನೀಡಿದನು. ಆತನನ್ನು ಸ್ವಲ್ಪ ಎತ್ತರದ ಸ್ಥಾನದಲ್ಲಿ ಕೂರಿಸಿ ತಾನು ಕೈಕಟ್ಟಿಕೊಂಡು ಬಾದಷಹನ ಮುಂದೆ ಗೌರವವನ್ನು ಪ್ರಕಟಿಸಿದನು. ಬಾದಷಹನಿಗೆ ಆಗಿದ್ದ ಗಾಯಗಳನ್ನು ತೊಳೆಸಿ ಔಷಧೋಪಚಾರವನ್ನು ನಡೆಸಿದನು. ಗಾಯಗಳು ಮಾಯತೊಡಗಿದವು.

ಆತನಿಗೆ ತನ್ನ ಆರು ಸಾವಿರ ರಾಜಪೂತ ಸೈನಿಕರ ಜೊತೆಯಲ್ಲಿ ಬಹಳ ಮರ್ಯಾದೆಯೊಂದಿಗೆ ಶಾದಿ ಆಬಾದ್ ಮಾಂಡುವಿನತ್ತ ಕಳುಹಿಸಿಕೊಟ್ಟನು.

ಮಾಳವದಲ್ಲಿ ಸಂಕಷ್ಟ ಮತ್ತು ಅಲ್ಲೋಲ ಕಲ್ಲೋಲ ಸ್ಥಿತಿ:

ಸುಲ್ತಾನ್ ಮಹಮೂದ ಖಿಲ್ಜಿಯು ಈಗ ಮೂರನೆಯ ಬಾರಿ ಸಿಂಹಾಸನಾರೂಢನಾಗಿದ್ದಾನೆ. ಆತನು ರಾಜ್ಯದ ಆಡಳಿತದ ಕಡೆ ಹೆಚ್ಚು ಗಮನವನ್ನು ನೀಡಿದನು. ಆ ಸಂದರ್ಭದಲ್ಲಿ ಆತನ ರಾಜ್ಯದಲ್ಲಿ ಕಠಿಣವಾದ ಪರಿಸ್ಥಿತಿಗಳು, ಜನರಲ್ಲಿ ಸಂಕಟಗಳು, ಭಯಾನಕ ಪರಿಸ್ಥಿತಿಗಳು ಕಂಡು ಬರುತ್ತಿದ್ದವು. ಕೆಲವು ಕಸಬಾಗಳನ್ನು, ಪಟ್ಟಣಗಳನ್ನು ಕೆಲವು ಅಮೀರರು ತಮ್ಮ ವಶಕ್ಕೆ ಪಡೆದುಕೊಂಡಿದ್ದರು. ಪ್ರಜೆಗಳಲ್ಲಿ ಯಾವುದೇ ಭಯವಿರಲಿಲ್ಲ. ತಮ್ಮತಮ್ಮಲ್ಲಿ ಎಲ್ಲರೂ ಸ್ವತಂತ್ರರು. ಬಾದಷಹನ ಮೇಲೆ ನಿಷ್ಠೆಯೇ ಕಂಡು ಬರುತ್ತಿರಲಿಲ್ಲ.

ಅಮೀರರ ವಿದ್ರೋಹ:

ಅಮೀರರ ವಿದ್ರೋಹ ಮತ್ತು ಪಿತೂರಿಗಳು ತಾರಕಕ್ಕೇರಿದ್ದವು. ಸಿಕಂದರ್‌ಖಾನ ಶಿವಾಜಿ ಎಂಬುವನು ಅನೇಕ ಪರಗಣ ಜಿಲ್ಲೆಗಳನ್ನು ತನ್ನ ವಶಕ್ಕೆ ಪಡೆದು, ತನ್ನ ಸ್ವತಂತ್ರ ಶಾಸನವನ್ನು ಪ್ರಜೆಗಳ ಮೇಲೆ ಹೇರಿದ್ದನು. ಮೇದಿನಿರಾಯನು ಚಂದೇರಿ, ಕಕರೂನ್ ಮತ್ತಿತರ ಪ್ರದೇಶಗಳ ಮಾಲಿಕನಾಗಿಬಿಟ್ಟಿದ್ದನು. ಬಾದಷಹನ ವಿರುದ್ಧ ಪಿತೂರಿಗಳನ್ನು ಹರಡುತ್ತಿದ್ದನು. ಇವನಂತೆಯೇ ಮತ್ತೆ ಕೆಲವು ಅಮೀರರೂ ತಮ್ಮ ತಾಳಕ್ಕೆ ತಕ್ಕಂತೆ ಕುಣಿಯಲಾರಂಭಿಸಿದರು. ಯಾರಿಗೆ ಹೇಗೆ ತೋಚುತಿತ್ತೋ ಹಾಗೆಯೇ ನಡೆದುಕೊಳ್ಳುತ್ತಿದ್ದರು. ಯಾವ ಪ್ರದೇಶವನ್ನು ಯಾರು ಬೇಕಿದ್ದರೂ ವಶಪಡಿಸಿಕೊಳ್ಳಬಹುದಿತ್ತು. ಒಟ್ಟಿನಲ್ಲಿ ಮಾಳವದಲ್ಲಿ ತುಂಬಾ ಅರಾಜಕತೆ ತಲೆದೂರಿತ್ತು.

ಪತನದ ಲಕ್ಷಣಗಳು:

ಅಮೀರರುಗಳು ಸ್ವತಂತ್ರರಾಗಿ ವಿದ್ರೋಹವನ್ನೆಬ್ಬಿಸಿದ್ದುದರ ಪರಿಣಾಮಗಳೆಂದರೆ ರಾಜ್ಯದಲ್ಲಿ ಅಲ್ಲೋಲ ಕಲ್ಲೋಲ ಸ್ಥಿತಿ ಹರಡಿತ್ತು. ಬಾದಷಹನ ಬುಡವೇ ಅಲುಗಾಡಿತ್ತು. ಇದಕ್ಕೆ ಕಾರಣವೆಂದರೆ ಬಾದಷಹನಲ್ಲಿ ದೂರದೃಷ್ಟಿಯ ಕೊರತೆ, ಎಲ್ಲವನ್ನೂ ಕತ್ತಿ ಮೊನಚಿನಲ್ಲಿ ಅಳೆಯಲು ಹೊರಟುದ್ದುದೇ ಈತನ ದಡ್ಡತನವೆನಿಸಿತ್ತು. ಈ ರೀತಿಯ ಶಾಸನ ಯಾರಿಗೂ, ಎಂದಿಗೂ ಶೋಭಿಸದ ವಾತಾವರಣವನ್ನು ನಿರ್ಮಿಸಿದ್ದನು.

ಸುಲ್ತಾನ್ ಮಹಮೂದನು ಸಲ್‌ಹದಿ ಪೂರಬಿಯ ಮೇಲೆ ಆಕ್ರಮಣ:

ಹಿಜರಿ ೯೨೬ ರಲ್ಲಿ ಸುಲ್ತಾನ್ ಮಹಮೂದನು ಸಲ್‌ಹದಿ ಪೂರಬಿಯಾನನ್ನು ದಮನ ಮಾಡಲು ಹೊರಟನು. ಸಲ್‌ಹದಿ ಪೂರಬಿಯಾನು ಸಹ ತನ್ನೊಂದಿಗೆ ಅಸಂಖ್ಯ ರಾಜಪೂತ ಸೈನಿಕರನ್ನು ಸಂಗ್ರಹಿಸಿಕೊಂಡನು. ಮೇದಿನಿರಾಯನನ್ನು ತನ್ನ

ಕಡೆಗೆ ಬರುವಂತೆ ಆಹ್ವಾನಿಸಿಕೊಂಡನು. ಬಾದಷಹನೊಂದಿಗೆ ಸಾರಂಗಪುರದ ಹತ್ತಿರ ಯುದ್ಧಮಾಡಲು ನಿರ್ಧರಿಸಿಕೊಂಡನು.

ಸಲ್‌ಹದಿ ಪೂರಬಿಯಾನ ಸೋಲು:

ಇಬ್ಬರಲ್ಲೂ ಯುದ್ಧವು ಆರಂಭವಾಯಿತು. ಮೊದಲಿನ ಆಕ್ರಮಣದಲ್ಲಿ ರಾಜಪೂತರು ಮುಸಲ್ಮಾನರನ್ನು ಸೋಲಿಸಿದರು. ಲೂಟಿ, ಕೊಳ್ಳೆ ಹೊಡೆಯಲು ಪ್ರಾರಂಭಿಸಿದರು. ಆದರೆ ಸುಲ್ತಾನ್ ಮಹಮೂದನು ಈ ಸೋಲಿನಿಂದ ನಿರಾಶನಾಗಲಿಲ್ಲ. ಆತನು ಬಂಡೆಯಂತೆ ದೃಢವಾಗಿ ನಿಂತನು. ರಾಜಪೂತರು ಲೂಟಿಯಲ್ಲಿ ತೊಡಗಿರುವ ಸಂದರ್ಭವನ್ನು ನೋಡಿ ಅವರ ಮೇಲೆ ಸಿಂಹದಂತೆ ಎರಗಿದನು. ಸಲ್‌ಹದಿಗೆ ಸೋಲಾಯಿತು. ಯುದ್ಧಮೈದಾನದಿಂದ ಪರಾರಿಯಾದನು. ಬಾದಷಹನು ಸಲ್‌ಹದಿಯ ಇಪ್ಪತ್ನಾಲ್ಕು ಆನೆಗಳನ್ನು ತನ್ನ ವಶಕ್ಕೆ ಪಡೆದುಕೊಂಡನು. ಸಾರಂಗಪುರವನ್ನು ಆತನ ಹಿಡಿತದಿಂದ ತನ್ನ ವಶಕ್ಕೆ ತೆಗೆದುಕೊಂಡನು. ಸಲ್‌ಹದಿಯು ತನ್ನ ಹಳೆಯ ಜಾಗೀರಿಯನ್ನಷ್ಟೇ ಉಳಿಸಿಕೊಂಡನು. ನಂತರ ಕಪ್ಪ-ಕಾಣಿಕೆಗಳನ್ನು ಬಾದಷಹನಿಗೆ ನೀಡಿ, ಬಾದಷಹನಿಗೆ ನಿಷ್ಠನಾಗಿರಲು ಒಪ್ಪಿಕೊಂಡನು. ಸುಲ್ತಾನ್ ಮಹಮೂದನು ಈ ಗೆಲುವನ್ನು ಭಗವಂತನ ಕೊಡುಗೆಯಂದೇ ಭಾವಿಸಿದನು. ನಂತರ ತನ್ನ ರಾಜಧಾನಿ ಮಾಂಡುವಿನತ್ತ ಪ್ರಯಾಣವನ್ನು ಬೆಳೆಸಿದನು.

ಷಹಜಾದ ಚಾಂದ್‌ಖಾನ್ ಗುಜರಾತಿ ಮಾಂಡುವಿನಲ್ಲಿ:

ಹಿಜರಿ ೯೩೨ ರಲ್ಲಿ ಗುಜರಾತಿನ ಶಾಸನವು ಸುಲ್ತಾನ್ ಬಹಾದೂರನ ವಶಕ್ಕೆ ಬಂದಿತು. ಇದರಿಂದಾಗಿ ಷಹಜಾದ ಚಾಂದ್‌ಖಾನ್‌ಬಿನ್ ಮುಜಫ್ಫರ್‌ಶಾಹ್ ಗುಜರಾತಿಯು ಪಲಾಯಾನವನ್ನು ಮಾಡಿ ಶಾದಿ ಆಬಾದ್ ಮಾಂಡುವಿಗೆ ಓಡಿಬಂದನು. ಏಕೆಂದರೆ ತನ್ನ ತಂದೆಯ ಅಪಾರ ಋಣ ಸುಲ್ತಾನ್ ಮಹಮೂದನ ಮೇಲಿದ್ದವು. ಇದರಿಂದಾಗಿ ದಿವಂಗತ ಮುಜಫ್ಫರ್ ಗುಜರಾತಿಯ ಶಾಸಕನ ಮಗನಾದ ಚಾಂದ್‌ಖಾನ್ ಗುಜರಾತಿಯು ಸುಲ್ತಾನ್ ಮಹಮೂದ ಖಿಲ್ಜಿ ಸಾನಿಯ ಆಸ್ಥಾನಕ್ಕೆ ಓಡಿಬಂದನು. ಸುಲ್ತಾನ್ ಮಹಮೂದನು ಚಾಂದ್‌ಖಾನ್ ಗುಜರಾತಿಯನ್ನು ಬಹಳ ವೈಭವ, ಸಂಭ್ರಮದಿಂದ ಸ್ವಾಗತಿಸಿ ಬರಮಾಡಿಕೊಂಡನು.

ರಜೀಯುಲ್‌ಮುಲ್ಕ ಗುಜರಾತಿಯ ಪ್ರಯತ್ನ:

ಅದೇ ದಿನಗಳಲ್ಲಿ ಒಬ್ಬ ಪ್ರಸಿದ್ಧ ಗುಜರಾತಿ ಅಮೀರನು ಸುಲ್ತಾನ್ ಬಹಾದೂರ್‌ಶಾಹ್‌ನಿಗೆ ಹೆದರಿ ಆತನ ಭಯದಿಂದ ಜಹೀರುದ್ದೀನ್ ಬಾಬರ್‌ನ ಹತ್ತಿರ ಓಡಿಹೋಗಿದ್ದನು ಆ ಅಮೀರನು ಸುಲ್ತಾನ್ ಬಹಾದೂರ್‌ಶಾಹ್‌ನನ್ನು ಪದಚ್ಯುತಿಗೊಳಿಸಿ, ಷಹಜಾದ್ ಚಾಂದ್‌ಖಾನ್‌ನನ್ನು ಪುನಃ ಆತನ ತಂದೆಯ

ಸಿಂಹಾಸನಕ್ಕೆ ಕೂರಿಸಲು ಪ್ರಯತ್ನಶೀಲನಾಗಿದ್ದನು. ಈ ಕಾರಣಕ್ಕಾಗಿ ಆ ಅಮೀರನು ಆಗ್ರಾದಿಂದ ಶಾದಿ ಆಬಾದ್ ಮಾಂಡುವಿಗೂ ಬಂದಿದ್ದನು. ಅಲ್ಲಿಯೇ ಯುದ್ಧ, ಚಾಂದ್‌ಖಾನ್‌ನೊಡನೆ ವಿಚಾರ ವಿಮರ್ಶೆಯನ್ನು ಮಾಡಿದ ನಂತರ ವಾಪಸ್ ಗುಜರಾತಿಗೆ ಹೊದನು.

ಸುಲ್ತಾನ್ ಬಹಾದೂರ್‌ನ ಪತ್ರ ಸುಲ್ತಾನ್ ಮಹಮೂದನಿಗೆ:

ಸುಲ್ತಾನ್ ಬಹಾದೂರ್ ಗುಜರಾತಿಗೆ ಈ ಚಟುವಟಿಕೆಗಳ ಸುದ್ದಿ ತಿಳಿದು ಸುಲ್ತಾನ್ ಮಹಮೂದನಿಗೊಂದು ಪತ್ರ ಹೀಗೆ ಬರೆದನು. –"ನನ್ನಲ್ಲಿ ಮತ್ತು ನಿಮ್ಮಲ್ಲಿನ ಆತ್ಮೀಯ ಸಂಬಂಧಗಳಿಗನುಸಾರವಾಗಿ ನೀವು ನನ್ನ ಶತ್ರುಗಳಿಗೆ ಸಹಾಯ ಹಸ್ತವನ್ನು ನೀಡಬಾರದು. ನನಗೆ ಆಶ್ಚರ್ಯವಾದುದೇನೆಂದರೆ ರಜೀಯುಲ್‌ಮುಲ್ಕ ನಂತಹ ನಮಕ್‌ಹರಾಮನನ್ನು ನಿಮ್ಮಲ್ಲಿ ಆಶ್ರಯವನ್ನು ಪಡೆದಿರುವ ಚಾಂದ್‌ಖಾನ್ ನೊಂದಿಗೆ ಮಾತುಕತೆ ನಡೆಸಲು ಅವಕಾಶ ಕೊಟ್ಟಿರುವುದು, ಈ ಸಂಬಂಧದಲ್ಲಿ ತಾವು ಸಹಾಯ ಸಹಕಾರಗಳನ್ನು ಕೊಡದೆ ಎಚ್ಚರವಹಿಸುವುದು ಮೇಲು. ನಮ್ಮ–ನಿಮ್ಮ ಸಂಬಂಧಗಳು ಶಾಶ್ವತವಾಗಿ ಉಳಿಸಿಕೊಳ್ಳುತ್ತೀರಿ ಎಂದು ನಿಮ್ಮ ಮೇಲೆ ವಿಶ್ವಾಸವನ್ನಿಟ್ಟಿರುತ್ತೇನೆ".

ಬಹಾದೂರ್ ಗುಜರಾತಿಯ ಮಾಳವದ ಮೇಲೆ ಆಕ್ರಮಣದ ಸಿದ್ಧತೆಗಳು:

ಅಕಸ್ಮಾತ್ತಾಗಿ ಅದೇ ದಿನಗಳಲ್ಲಿ ರಜೀಯುಲ್‌ಮುಲ್ಕನು ಬಾಬರ್‌ನ ಅಮೀರರೊಂದಿಗೆ ವಿಚಾರ ವಿಮರ್ಶೆಯನ್ನು ನಡೆಸಿ, ಮತ್ತೊಮ್ಮೆ ಮಾಂಡುವಿಗೆ ಬಂದು ಷಹಜಾದ್ ಚಾಂದ್‌ಖಾನ್‌ನನ್ನು ಭೇಟಿಮಾಡಿದನು. ಈ ಸಲ ಬಂದದ್ದು ಸುಲ್ತಾನ್ ಬಹಾದೂರ್ ಗುಜರಾತಿಗೆ ತಿಳಿದು ಹೋಯಿತು. ಆತನಿಗೆ ಈ ಸುದ್ದಿ ತಿಳಿದು ತುಂಬಾ ಸಿಟ್ಟು ಬಂದಿತು. ಈ ಸಲ ಸುಲ್ತಾನ್ ಮಹಮೂದನ ಮೇಲೆ ಯಾವ ಪತ್ರ ವ್ಯವಹಾರವನ್ನು ನಡೆಸದೆ ಮಾಳವದ ಮೇಲೆ ಯುದ್ಧಮಾಡುವ ಸಿದ್ಧತೆಗಳನ್ನು ನಡೆಸಿದನು. ಈ ಸಂದರ್ಭವು ಹೇಗಿತ್ತೆಂದರೆ ಮಾಳವದಲ್ಲಿ ಖಿಲ್ಜಿ ಸಂತತಿಯ ಆಳ್ವಿಕೆಯ ಅಂತ್ಯ ಸಮೀಪಿಸಿತ್ತು. ಈ ಸಂದರ್ಭದಲ್ಲೂ ಸುಲ್ತಾನ್ ಮಹಮೂದನು ಸಹ ದೂರದೃಷ್ಟಿಯನ್ನು ತೋರಿಸಲಿಲ್ಲ.

ಜಯಪುರದ ಕೆಲವು ಪರಗಣಗಳ ಮೇಲೆ ಸೈನಿಕಾಚರಣೆ:

ಇದೇ ಸಂದರ್ಭದಲ್ಲಿ ರಾಣಾಸಾಂಗನ ಮರಣದ ಸುದ್ದಿಯು ಸುಲ್ತಾನ್ ಖಿಲ್ಜಿಗೆ ತಲುಪಿತು. ಆತನ ಜಾಗಕ್ಕೆ ಆತನ ಮಗನು ಸಿಂಹಾಸನಕ್ಕೇರಿದ್ದಾನೆಂದು ತಿಳಿಯಿತು. ಈ ಸಂದರ್ಭದ ಲಾಭವನ್ನು ಪಡೆಯಲು ಬಾದಷಹನು ರತನ್ಸಿಯ ಮೇಲೆ ಯುದ್ಧಕ್ಕೆ ಷರ್ಜಾಖಾನನನ್ನು ಕಳುಹಿಸಿದನು. ಷರ್ಜಾಖಾನನು ಜಯಪುರದ ಕೆಲವು ಪರಗಣಗಳನ್ನು ನಾಶಪಡಿಸಿ ಲೂಟಿ ಮಾಡಿದನು.

ಮಹಮೂದ ಖಿಲ್ಜಿ ಸಾರಂಗಪುರದಲ್ಲಿ:

ರಾಣಾಸಾಂಗನ ಮಗ ರತನ್ಸಿಯು ಸುಲ್ತಾನ್ ಬಹಾದ್ದೂರ್‌ಶಾಹ ಮತ್ತು ಸುಲ್ತಾನ್ ಮಹಮೂದ ಖಿಲ್ಜಿಯವರಲ್ಲಿ ಒಡಕು ಉಂಟಾಗಿದೆ ಎಂಬ ವಿಚಾರವನ್ನು ತಿಳಿದುಕೊಂಡನು. ಸುಲ್ತಾನ್ ಬಹಾದ್ದೂರ್‌ನು ಮಾಳವದ ಮೇಲೆ ಆಕ್ರಮಣವನ್ನು ಮಾಡುವ ಸುದ್ದಿಯು ತಿಳಿದಿತ್ತು. ಈ ಸಂದರ್ಭದಲ್ಲಿ ರತನ್ಸಿಯು ತನ್ನ ಸೈನ್ಯವನ್ನು ತೆಗೆದುಕೊಂಡು ಮಾಳವದತ್ತ ಹೊರಟನು. ಸುಲ್ತಾನ್ ಮಹಮೂದನು ಸುಲ್ತಾನ್ ಗುಜರಾತಿಯನ್ನು ಸ್ವಾಗತಿಸಲು ಇಚ್ಛೆಪಟ್ಟನು. ಇದಕ್ಕಾಗಿ ಸಾರಂಗಪುರವನ್ನು ತಲುಪಿದನು. ಈ ಸಂದರ್ಭದಲ್ಲಿ ಸಿಕಂದರ್‌ಖಾನ್ ಮೇವಾತಿಯೂ ತೀರಿಕೊಂಡಿದ್ದನು. ಸಿಕಂದರ್‌ಖಾನ್‌ನ ದತ್ತುಪುತ್ರ ಮೇಯಿನ್‌ಖಾನನನ್ನು ಮಹಮೂದ ಖಿಲ್ಜಿಯು ಕರೆದು ಆಸ್ಥಾನಕ್ಕೆ ನೇಮಿಸಿದನು.

ಮಹಮೂದ ಖಿಲ್ಜಿಯ ವಿರುದ್ಧ ದೂರು ಬಹಾದ್ದೂರ್ ಗುಜರಾತಿಗೆ:

ಸುಲ್ತಾನ್ ಮಹಮೂದನು ಸಲ್‌ಹದಿ ಪೂರಬಿಯಾನನ್ನು ತನ್ನಲ್ಲಿಗೆ ಕರೆಯಿಸಿಕೊಂಡು ಆತನ ಜಾಗೀರಿಗಳ ಜೊತೆಯಲ್ಲಿ ಇನ್ನಷ್ಟು ಪರಗಣಗಳನ್ನು ಸೇರಿಸಿ ಹೆಚ್ಚಿಸಿದನು. ಹೀಗೇಕೆ ಮಾಡಿದನೆಂಬ ಅನುಮಾನದಿಂದ ಪೂರಬಿಯಾನು ಮೇಯಿನ್‌ಖಾನನನ್ನು ಕರೆದುಕೊಂಡು ರತನ್ಸಿಯ ಹತ್ತಿರಕ್ಕೆ ಹೋದನು. ಅಲ್ಲಿಂದ ಆತನು ತನ್ನ ಮಗ ಭೂಪಕನನ್ನು ಜೊತೆಯಲ್ಲಿ ಕರೆದುಕೊಂಡು ಸುಲ್ತಾನ್ ಬಹಾದ್ದೂರ್ ಗುಜರಾತಿಯ ಹತ್ತಿರಕ್ಕೆ ಬಂದನು. ಅಲ್ಲಿ ಮಹಮೂದ ಖಿಲ್ಜಿಯ ಮೇಲೆ ದೂರು ಹೇಳಿದನು.

ಮಹಮೂದ ಖಿಲ್ಜಿಯ ಸಂದೇಶ ಬಹಾದ್ದೂರ್ ಗುಜರಾತಿಗೆ:

ಸುಲ್ತಾನ್ ಮಹಮೂದ ಖಿಲ್ಜಿಗೆ ಈ ವಿಚಾರಗಳೆಲ್ಲವೂ ತಿಳಿದ ಮೇಲೆ ಆತನು ತುಂಬಾ ಚಿಂತಿತನಾದನು. ಆತನು ದರಿಯಾಖಾನನನ್ನು ಸುಲ್ತಾನ್ ಬಹಾದ್ದೂರ್ ಗುಜರಾತಿಯ ಹತ್ತಿರಕ್ಕೆ ಕಳುಹಿಸಿ ಈ ಸಂದೇಶವನ್ನು ರವಾನಿಸಿದನು – "ತಮ್ಮ ವಂಶಸ್ಥರ ಉಪಕಾರಗಳು ನನ್ನ ಮೇಲೆ ಬಹಳವಾಗಿವೆ. ನೀವು ಈಗ ಇತ್ತ ಬರುತ್ತಿದ್ದೀರಿ. ಇನ್ನು ದಾರಿ ಹೆಚ್ಚಾಗಿಲ್ಲ ಆದ್ದರಿಂದ ನಾನು ನಿಮ್ಮ ಸೇವೆಯಲ್ಲಿ ಬಂದು ನಿಮ್ಮನ್ನು ಸ್ವಾಗತಿಸಬೇಕೆಂದಿದ್ದೇನೆ".

ಸುಲ್ತಾನ್ ಬಹಾದ್ದೂರ್‌ನ ಸದುದ್ದೇಶ:

ಸುಲ್ತಾನ್ ಬಹಾದ್ದೂರ್‌ಶಾಹನ ಜೀವನ ಚರಿತ್ರೆಯಲ್ಲಿ ಬರೆದಿಟ್ಟಿರುವಂತೆ ಆತನು ಮಹಮೂದನ ಸಂದೇಶಕ್ಕೆ ಉತ್ತಮ ಪ್ರೇಮಪೂರ್ಣ ಪ್ರತಿಕ್ರಿಯೆಯನ್ನೇ ತೋರಿರುವನು. ಆತನು ಈ ಸಂದೇಶವನ್ನು ನೋಡಿದ ಮೇಲೆ ಕರ್ಬಿ ನದಿಯ ದಡದಲ್ಲಿ ತಂಗಿ

ಆತನನ್ನು ಎದುರು ನೋಡಲಾರಂಭಿಸಿದನು. ಈ ಜಾಗದಿಂದ ರತನ್ಸಿಯು ತನ್ನ ಸ್ಥಾನಕ್ಕೆ ಹಿಂದಿರುಗಿ ಹೋದನು. ಆದರೆ ಸಲ್‌ಹದಿ ಪೂರಬಿಯಾನು ಮಾತ್ರ ಬಹಾದೂರ್‌ಶಾಹನ ಸೈನಿಕ ಶಿಬಿರದಲ್ಲೇ ಉಳಿದಿದ್ದನು.

ಸುಲ್ತಾನ್ ಮಹಮೂದನ ದಡ್ಡತನದ ಮತ್ತೊಂದು ಉದಾಹರಣೆ:

ಸುಲ್ತಾನ್ ಮಹಮೂದನ ದಡ್ಡತನದಿಂದಾದ ಮತ್ತೊಂದು ಘಟನೆ ಸಂಭವಿಸಿತು. ಆತನು ಸುಲ್ತಾನ್ ಬಹಾದೂರ್‌ಶಾಹನನ್ನು ಸ್ವಾಗತಿಸದೆ ಸಿಕಂದರ್‌ಖಾನನ ಸೇವಕರನ್ನು ಅಡಗಿಸಲು ಸೀವಾಸ್‌ದತ್ತ ಹೊರಟು ಹೋದನು. ದಾರಿಯಲ್ಲಿ ಹೋಗುತ್ತ ಬೇಟೆಯಾಡಲು ಹೊರಟನು. ಆ ಸಂತೋಷದಲ್ಲಿ ಕುದುರೆಯಿಂದ ಬಿದ್ದುಬಿಟ್ಟನು. ಆ ಸಂದರ್ಭದಲ್ಲಿ ಆತನ ಬಲಗೈ ಮುರಿಯಿತು. ಈ ಸ್ಥಿತಿಯನ್ನು ಅವನು ಯಾವುದೋ ಅಪಶಕುನವೆಂದು ತಿಳಿದನು. ಎಲ್ಲವನ್ನು ಬಿಟ್ಟು ತನ್ನ ರಾಜಧಾನಿ ಅರಮನೆಗೆ ಬಂದುಬಿಟ್ಟನು. ಇಲ್ಲಿಗೆ ಬಂದು ಕೋಟೆಯನ್ನು ಭದ್ರಪಡಿಸುವ ಕಾರ್ಯದಲ್ಲಿ ತೊಡಗಿದನು.

ಮಾಂಡು ಕೋಟೆಯ ಮುತ್ತಿಗೆ:

ಸುಲ್ತಾನ್ ಬಹಾದೂರ್ ಗುಜರಾತಿಯು ಮಹಮೂದನನ್ನು ನಿರೀಕ್ಷಿಸದೆ ಶಾದಿ ಆಬಾದ್ ಮಾಂಡುವಿನ ಮೇಲೆ ಮುತ್ತಿಗೆಯನ್ನು ಹಾಕಿದನು. ಸುಲ್ತಾನ್ ಮಹಮೂದನ ಅನೇಕ ಸೇವಕರು ಸುಲ್ತಾನ್ ಬಹಾದೂರ್‌ನೊಂದಿಗೆ ಬಂದು ಸೇರಿಕೊಂಡರು. ಧಾರ್ ನಗರದ ಶಾಸಕನಾದ ಷರ್ಜಾಖಾನನು ಸುಲ್ತಾನ್ ಬಹಾದೂರ್‌ನ ಪಕ್ಷಕ್ಕೆ ಬಂದು ಸೇರಿಕೊಂಡನು. ಸುಲ್ತಾನ್ ಬಹಾದೂರ್ ಗುಜರಾತಿಯು ಮುಜಫ್‌ರಾಬಾದಿನ ನಾಲ್ಚಕ್ಕೆ ಬಂದು, ಕೋಟೆಯನ್ನು ಸುತ್ತುವರಿದು, ಸೈನಿಕರಿಗೆ ಮೋರ್ಚಾಗಳನ್ನು ಹಂಚಿದನು.

ಅಂತಿಮ ಭೋಗವಿಲಾಸ:

ಸುಲ್ತಾನ್ ಮಹಮೂದ ಖಿಲ್ಜಿಯ ಮೂರುಸಾವಿರ ಸೈನಿಕರೊಂದಿಗೆ ಕೋಟೆಯಲ್ಲಿ ಅಡಗಿ ಕುಳಿತನು. ಆತನ ಪ್ರತಿರಾತ್ರಿ ಹೊತ್ತು ಶತ್ರುಸೈನ್ಯದ ಮೋರ್ಚಾಗಳ ಪರೀಕ್ಷೆಯನ್ನು ಮಾಡಿ ಸುಲ್ತಾನ್ ಘಿಯಾಸುದ್ದೀನನು ಕಟ್ಟಿಸಿಕೊಂಡಿದ್ದ ಮದರಸಾದಲ್ಲಿ ಹೋಗಿ ವಿಶ್ರಾಂತಿಯನ್ನು ಪಡೆಯುತ್ತಿದ್ದನು. ಕೋಟೆಯ ಹೊರಗಡೆಯ ವಿಚಾರಗಳು ಈತನಿಗೆ ತಿಳಿದಿದ್ದರಿಂದ ಆ ಜಾಗವನ್ನು ತ್ಯಜಿಸಿ ತಾನು ಮೊದಲು ಎಲ್ಲಿರುತ್ತಿದ್ದನೋ ಆ ಮೊಹಲ್ಲಾದಲ್ಲಿಯೇ ಇರಲು ತೀರ್ಮಾನಿಸಿದನು. ತಾನು ಸಂಪೂರ್ಣ ಭೋಗವಿಲಾಸದಲ್ಲಿ ಮುಳುಗಿಬಿಟ್ಟನು. ಕೆಲವು ಬುದ್ಧಿವಂತರು ಈತನನ್ನು ಈ ಸಂದರ್ಭದಲ್ಲಿ ಭೋಗವಿಲಾಸದಲ್ಲಿ ಮುಳುಗಿರುವುದು ಸರಿಯಲ್ಲವೆಂದು ಎಚ್ಚರಿಸಿದರು. ಇದಕ್ಕೆ

ಬಾದಷಹನು "ಈಗ ನನ್ನ ಅಂತಿಮ ದಿನಗಳು ಸಮೀಪಿಸಿವೆ. ಈಗ ನನಗೆ ಏನು ತೋಚುತ್ತದೋ ಅದನ್ನು ಮಾಡುವುದೇ ಒಳ್ಳೆಯದೆಂದು ಉತ್ತರಿಸಿದನು".

ಮಾಂಡು ಕೋಟೆಯು ಬಹಾದೂರ್ ಗುಜರಾತಿಯ ವಶ:

ಹಿಜರಿ ೯೩೭ ಷಾಬಾನ್ ತಿಂಗಳ ೯ನೇ ತಾರೀಖಿನಂದು ಬೆಳಿಗ್ಗೆ ಬಹಾದೂರ್‌ಶಾಹ ಗುಜರಾತಿಯು ಮಾಂಡು ಕೋಟೆಯನ್ನು ಗೆದ್ದುಕೊಂಡನು. ಷಹಜಾದ ಚಾಂದ್‌ಖಾನ್ ಈ ಎಲ್ಲ ಜನಗಳಿಗೆ ಮೂಲಕಾರಣನಾಗಿದ್ದನು. ಅತನು ಕೋಟೆಯಿಂದ ಹೊರಹೊರಟು ದಕ್ಷಿಣದತ್ತ ಬಹುದೂರ ಬಂದುಬಿಟ್ಟನು. ಇಷ್ಟಾದರೂ ಸುಲ್ತಾನ್ ಮಹಮೂದನು ಸ್ವಲ್ಪ ಸೈನ್ಯವನ್ನು ತೆಗೆದುಕೊಂಡು ಬಹಾದೂರ್‌ಶಾಹನ ಮೇಲೆ ಯುದ್ಧಕ್ಕೆ ಕೋಟೆಯನ್ನು ಬಿಟ್ಟು ಹೊರಕ್ಕೆ ಬಂದನು. ಅತನಲ್ಲಿ ಗುಜರಾತಿ ಶಾಸಕನ ಸೈನ್ಯದೆದುರು ನಿಲ್ಲುವ ಸಾಮರ್ಥ್ಯವಿರಲಿಲ್ಲ. ಕೊನೆಗೆ ಕೋಟೆಯಲ್ಲಿ ಹಿಂದೆ ಸರಿದನು.

ಸುಲ್ತಾನ್ ಮಹಮೂದನು ತನ್ನ ಪರಿವಾರವನ್ನೆಲ್ಲ ಕೊಲೆಮಾಡಲು ಮುಂದಾದನು:

ಸುಲ್ತಾನ್ ಮಹಮೂದನು ತನ್ನ ಸೋಲನ್ನು ದೃಢಪಡಿಸಿಕೊಂಡನಂತರ ಕೋಟೆಯನ್ನು ತ್ಯಜಿಸಿ ಎಲ್ಲಿಯಾದರೂ ಓಡಿಹೋಗಬಹುದಿತ್ತು. ಆದರೆ ಇಲ್ಲಿಯೂ ಆತನ ದಡ್ಡತನದ ಪರಮಾವಧಿಯನ್ನೇ ಪ್ರದರ್ಶಿಸಿದನು. ಆತನು ತನ್ನೊಂದಿಗೆ ಒಂದು ಸಾವಿರ ಸೈನಿಕರನ್ನು ಕರೆದುಕೊಂಡು ತನ್ನ ಅಂತಃಪುರದತ್ತ ಎಲ್ಲಾ ಹೆಂಗಸರು, ಮಕ್ಕಳನ್ನು ಕೊಲೆಮಾಡಲು ಹೊರಟನು. ಆದರೆ ಕೆಲವು ಬುದ್ಧಿವಂತ ಜನರು ಈ ಕೆಲಸವನ್ನು ಮಾಡದಿರಲು ತಡೆದರು. ಸುಲ್ತಾನ್ ಬಹಾದೂರ್‌ಶಾಹನು ನಿನ್ನ ಪರಿವಾರದವರನ್ನು ಕೊಲೆಮಾಡುವಷ್ಟು ದಡ್ಡನು, ಕೆಟ್ಟವನಲ್ಲವೆಂದು ಸಮಾಧಾನ ಪಡಿಸಿದರು. ಈ ಸಂದರ್ಭದಲ್ಲಿ ನಾವು ಕೋಟೆಯಿಂದ ಹೊರಹೊರಟು ಎಲ್ಲಿಯಾದರೂ ಹೋಗಿ ಸೈನ್ಯವನ್ನು ಒದಗಿಸಿಕೊಂಡು ಶತ್ರುವನ್ನು ಸೋಲಿಸುವುದೇ ಉತ್ತಮವೆಂದು ಸಲಹೆಯನ್ನು ನೀಡಿದರು.

ಇಬ್ಬರು ಬಾದಷಹರ ಭೇಟಿ:

ಬಾದಷಹ ಮಹಮೂದನು ತನ್ನ ಆಪ್ತರೊಂದಿಗೆ ಮಾತುಕತೆಯಲ್ಲಿ ತೊಡಗಿದ್ದಾಗ ಸುಲ್ತಾನ್ ಬಹಾದೂರ್ ಗುಜರಾತಿಯು ಅತ್ತ ಕಡೆಗೆ ಬಂದನು. ಆತನು ಲಾಲ್‌ಮಹಲ್‌ನ ಮುಂಭಾಗಕ್ಕೆ ಬಂದನು. ಅಲ್ಲಿ ಕುಳಿತು ಸುಲ್ತಾನ್ ಖಿಲ್ಜಿಯನ್ನು ಕರೆತರಲು ಆಜ್ಞಾಪಿಸಿದನು. ಸುಲ್ತಾನ್ ಖಿಲ್ಜಿಯ ತನ್ನೆಲ್ಲ ಸರದಾರರನ್ನು ಅಲ್ಲಿಯೇ ಬಿಟ್ಟು ಕೇವಲ ಏಳು ಜನ ಸವಾರರೊಂದಿಗೆ ಬಹಾದೂರ್ ಗುಜರಾತಿ ಹತ್ತಿರ ಬಂದನು. ಇಬ್ಬರೂ ಶಾಂತಿಯಿಂದಲೇ ಒಬ್ಬರನ್ನೊಬ್ಬರು ಅಪ್ಪಿಕೊಂಡರು. ಬಹಾದೂರ್‌ಷಾಹನು ಮಹಮೂದನನ್ನು ಪಕ್ಕದಲ್ಲೇ ಕುಳ್ಳಿರಿಸಿಕೊಂಡನು.

ಬದಲಾದ ಒರಟು ವರ್ತನೆ:

ಇದಾದ ನಂತರ ಬಹಾದೂರ್ ಗುಜರಾತಿಯು ಸೋತು ಶರಣಾದ ಸುಲ್ತಾನ್ ಮಹಮೂದನೊಂದಿಗೆ ಸ್ವಲ್ಪ ಕಠಿಣವಾಗಿ ಒರಟಾದ ಶಬ್ದಗಳಲ್ಲೇ ಮಾತನಾಡಿಸಿದನು. ನಂತರ ನಿಶ್ಯಬ್ದವಾಗಿ ಕುಳಿತನು. ಆತನ ಮುಖದಲ್ಲಿ ಸ್ವಲ್ಪ ಸಿಟ್ಟು ಕಾಣುತ್ತಿತ್ತು. ಏನು ಮಾಡಬೇಕೆಂದಿದ್ದನೋ ಯಾರಿಗೂ ಅರ್ಥವಾಗುತ್ತಿರಲಿಲ್ಲ. ಇದ್ದಕ್ಕಿದ್ದಂತೆ ಬಹಾದೂರ್ ಗುಜರಾತಿಯು –"ನಾನು ನಿನ್ನ ಎಲ್ಲ ಅಮೀರರ ಪ್ರಾಣವನ್ನು ರಕ್ಷಿಸಿದ್ದೇನೆ. ಅವರೆಲ್ಲ ತಮ್ಮತಮ್ಮ ಮನೆಗಳಿಗೆ ವಾಪಸ್ಸ ಹೋಗಲಿ" ಎಂದು ಸಿಟ್ಟಿನಲ್ಲೇ ಹೇಳಿದನು.

ಮಹಮೂದ ಖಿಲ್ಜಿಯ ಸೆರೆ:

ಕೆಲವು ಇತಿಹಾಸದ ಪುಸ್ತಕಗಳಲ್ಲಿ ಹೀಗೆ ಬರೆದಿದೆ. ಏನೆಂದರೆ – ಮಾತುಕತೆ ಆಡುತ್ತಿರುವ ಸಂದರ್ಭದಲ್ಲಿ ತಾನು ಸಂಪೂರ್ಣವಾಗಿ ಸೋತಿದ್ದರೂ ಬಾದಷಹ ಗುಜರಾತಿಯ ಮೇಲೆ ಈತನು ಅಹಂಕಾರದಿಂದ ವರ್ತಿಸಿದ್ದನು. ಸುಲ್ತಾನ್ ಗುಜರಾತಿಯು ಸುಲ್ತಾನ್ ಮಹಮೂದನನ್ನು ಕ್ಷಮಿಸಲು ಸಿದ್ಧನಿದ್ದನು. ಈತನ ಅಹಂಕಾರವನ್ನು ಕಂಡು ಬದಲಾದನು. ಸುಲ್ತಾನ್ ಮಹಮೂದನನ್ನು ಬಂಧಿಸಲು ಆಜ್ಞಾಪಿಸಿದನು. ಶುಕ್ರವಾರದ ದಿನ ಶಾದಿ ಆಬಾದಿ ಮಾಂಡುವಿನ ಎಲ್ಲ ಮಸೀದಿಗಳಲ್ಲಿ ಸುಲ್ತಾನ್ ಬಹಾದೂರ್‌ನ (ಖುತ್ಬಾ) ಪ್ರಶಂಸಾತ್ಮಕ ಪ್ರವಚನ ಮಾಡಲು ಆಜ್ಞಾಪಿಸಿದನು. ಸುಲ್ತಾನ್ ಮಹಮೂದನಿಗೆ ಸಂಕೋಲೆಗಳಿಂದ ಬಿಗಿದು ಬೇಡಿಗಳನ್ನು ಹಾಕಿಸಿದನು. ಆತನ ಏಳುಜನ ಗಂಡು ಮಕ್ಕಳನ್ನು ಆಸೀಫ್‌ಖಾನ್‌ನ ವಶಕ್ಕೆ ಕಳುಹಿಸಿದನು. ಅವರನ್ನೆಲ್ಲ ಜನಾನೇರ್ ಕೋಟೆಯಲ್ಲಿ ಬಂಧನದಲ್ಲಿಡಲು ಆಜ್ಞಾಪಿಸಿದನು.

ಮಹಮೂದ ಖಿಲ್ಜಿಯ ಕೊಲೆ:

ದಾರಿಯಲ್ಲಿ ಕೋಲ್ ಮತ್ತು ಭೇಲ್ ಜಾತಿಯ ಎರಡುಸಾವಿರ ಜನರು ಆಸೀಫ್‌ಖಾನ್‌ನ ಸೈನ್ಯದ ಮೇಲೆ ರಾತ್ರಿಯ ಆಕ್ರಮಣವನ್ನು ಮಾಡಿದರು. ಸುಲ್ತಾನ್ ಮಹಮೂದನು ರಾತ್ರಿಯ ನಮಾಜು ಪ್ರಾರ್ಥನೆಯನ್ನು ಸಲ್ಲಿಸಿ ಮಲಗಲು ಪ್ರಯತ್ನಿಸುತ್ತಿದ್ದನು. ಇದ್ದಕ್ಕಿದ್ದಂತೆ ಗಲಾಟೆಯು ಪ್ರಾರಂಭವಾಯಿತು. ಬೇಗ ತಪ್ಪಿಸಿಕೊಂಡು ಓಡಲು ಪ್ರಯತ್ನಪಟ್ಟನು. ತನ್ನ ಕಾಲಿನಲ್ಲಿ ಬಿಗಿಯಲ್ಪಟ್ಟಿದ್ದ ಸರಪಳಿಗಳನ್ನು ಕಿತ್ತನು. ರಕ್ಷಕರಿಗೆ ಈ ಸಮಚಾರವು ತಿಳಿಯಿತು. ಈತನ ಸೈನಿಕರೇ ರಾತ್ರಿ ಆಕ್ರಮಣವನ್ನು ಮಾಡಿರಬಹುದೆಂದು ಸುಲ್ತಾನ್ ಮಹಮೂದನನ್ನು ಕೊಲೆಗೈದರು.

ಖಿಲ್ಜಿ ಸಾಮ್ರಾಜ್ಯದ ಅಂತ್ಯ:

ಬೆಳಗಾಯಿತು ಆಸೀಫ್‌ಖಾನ್‌ನು ಸುಲ್ತಾನ್ ಮಹಮೂದನನ್ನು ದಹೋರ್‌ಹೌಸ್‌ನ ಹತ್ತಿರ ದಫನ್ ಮಾಡಿದನು. ಆತನ ಮಕ್ಕಳನ್ನು ಜನಾನೇರ್ ಕೋಟೆಯಲ್ಲಿ

ಬಂಧನದಲ್ಲಿಟ್ಟನು. ಕೆಲವು ಕಾಲದ ನಂತರ ಆ ವಂಶದಲ್ಲಿ ಮಹಮ್ಮದಶಾಹ್‌ಬಿನ್ ಸುಲ್ತಾನ್ ನಾಸೀರುದ್ದೀನ್ ಎಂಬವನ ಹೊರತು ಇನ್ನಾರೂ ಉಳಿದಿರಲಿಲ್ಲ. ಈತನು ಬಾಬರನ ಸೇವೆಯಲ್ಲಿದ್ದವನಾಗಿದ್ದನು. ಈ ತೆರನಾಗಿ ಖಿಲ್ಜಿ ಸಂತತಿಯ ಅಂತ್ಯವಾಗಿ ಮಾಳವ ದೇಶದ ಮೆಲೆ ಸುಲ್ತಾನ್ ಬಹಾದೂರ್‌ಶಾಹ್ ಗುಜರಾತಿಯ ಶಾಸನವು ಆರಂಭವಾಯಿತು.

ಗುಜರಾತಿಗಳು ಹಿಜರಿ ೯೪೧ ರವರೆಗೆ ಮಾಳವದ ಮೇಲೆ ಶಾಸನವನ್ನು ನಡೆಸಿದರು. ಕಾಲಚಕ್ರದ ಪರಿಸ್ಥಿತಿಗಳಿಗನುಸಾರವಾಗಿ ಈ ಶಾಸನಗಳು ಬದಲಾಗುತ್ತ ಇದ್ದವು. ಹಿಜರಿ ೯೬೮ರಲ್ಲಿ ಜಲಾಲುದ್ದೀನ್ ಮಹಮೂದ ಅಕ್ಬರ್‌ನು ತನ್ನ ವಶಕ್ಕೆ ತೆಗೆದುಕೊಂಡನು. ಈ ರೀತಿ ಈ ಜಗತ್ತಿನ ಅಂದಿನ ಮಾನವರು ಪ್ರಪಂಚದಲ್ಲಿನ ಅಪ್ರಾಮಾಣಿಕತೆ, ಅನ್ಯಾಯ, ಉಪಕಾರಕ್ಕೆ ಅಪಕಾರಗಳ ಅನೇಕ ಜೀವಂತ ಉದಾಹರಣೆಗಳನ್ನು ಕಣ್ಣಾರೆ ಕಂಡರು ಕೇಳಿದರು.

■

IV. ಖಿಲ್ಜಿ ಸುಲ್ತಾನರ ಸಂತತಿಯ ನಂತರ ಮಾಳವ ದೇಶದ ಪರಿಸ್ಥಿತಿ

*

೧. ಸುಲ್ತಾನ್ ಬಹಾದೂರ್ ಗುಜರಾತಿಯ ಗಲಭೆ

ಕೆಲವು ಇತಿಹಾಸಕಾರರ ಚರಿತ್ರೆಗಳಲ್ಲಿ ಬರೆದಿರುವಂತೆ ಸುಲ್ತಾನ್ ಮಹಮೂದ ಖಿಲ್ಜಿಯ ನಂತರ ಮಾಳವ ದೇಶದ ಮೇಲೆ ಸುಲ್ತಾನ್ ಬಹಾದೂರ್ ಗುಜರಾತಿಯ ಸಂಪೂರ್ಣ ಹಿಡಿತವಿತ್ತು. ಎಲ್ಲ ಮಾಳವಿ ಅಮೀರರು ಸುಲ್ತಾನ್ ಬಹಾದೂರ್ ಗುಜರಾತಿಯ ವಶದಲ್ಲಿ ನಿಷ್ಠೆಯಿಂದ ಇದ್ದರೆಂದೂ ತಿಳಿದು ಬರುತ್ತದೆ. ಬಾದಷಹನು ಆ ಅಮೀರರುಗಳಿಗೆ ಅನೇಕ ಬಿರುದು ಬಹುಮಾನಗಳನ್ನು ನೀಡಿ ಗೌರವಿಸಿ, ಅವರೆಲ್ಲರೂ ತನ್ನ ಆಳ್ವಿಕೆಯನ್ನು ಒಪ್ಪಿಕೊಳ್ಳುವಂತೆ ಮಾಡಿದ್ದನೆಂದೂ ತಿಳಿದು ಬರುತ್ತದೆ.

ಸಲ್‌ಹದಿ ಪೂರಬಿಯಾನ ಪರಿಣಾಮ:

ಸಲ್‌ಹದಿ ಪೂರಬಿಯಾನು, ಸುಲ್ತಾನ್ ಬಹಾದೂರ್ ಗುಜರಾತಿಯ ಹತ್ತಿರ ಮೊಟ್ಟಮೊದಲು ಹೋದವರಲ್ಲಿ ಮೊದಲಿಗನು. ಈ ಕಾರಣದಿಂದಾಗಿ ಸುಲ್ತಾನ್ ಬಹಾದೂರ್‌ನು ಆತನನ್ನು ಹೆಚ್ಚು ಗೌರವಿಸುತ್ತಿದ್ದನು. ಇದರಿಂದಾಗಿ ಆತನಿಗೆ ಬಾದಷಹನು ಉಜ್ಜೈನ್, ಸಾರಂಗಪುರ ಮತ್ತು ರಾಯ್ಸೀನ್ ಪ್ರದೇಶಗಳನ್ನು ಬಿಟ್ಟುಕೊಟ್ಟನು. ಆದರೆ ಈತನಿಂದ ಸುಲ್ತಾನ್ ಬಹಾದೂರ್‌ನು ಅಷ್ಟೊಂದು ಚೆನ್ನಾಗಿ ಇರಲಿಲ್ಲ. "ಸಲಾತೀನೆ ಗುಜರಾತ್" ಇತಿಹಾಸದಲ್ಲಿ ವರ್ಣಿಸಲಾಗಿರುವಂತೆ ಸಲ್‌ಹದಿ ಪೂರಬಿಯಾನು ಸುಲ್ತಾನ್ ಬಹಾದೂರ್‌ನ ಭಯದಿಂದ ರಾಯ್ಸೀನ್ ಕೋಟೆಯಲ್ಲಿ ಆತ್ಮಹತ್ಯೆಯನ್ನು ಮಾಡಿಕೊಂಡನೆಂದು ತಿಳಿದು ಬರುತ್ತದೆ. ನಂತರ ಆತನ ಮಗನಾದ ಭೂಪತನು ಅಲ್ಲಿಂದ ಪರಾರಿಯಾಗಿದ್ದ. ಈ ವಿಚಾರಗಳನ್ನು ಹಿಂದೆ ಹೇಳಿರುವುದರಿಂದ ಇಲ್ಲಿ ವಿಸ್ತರಿಸುವುದರ ಅವಶ್ಯಕತೆ ಇಲ್ಲ.

ಸುಲ್ತಾನ್ ಬಹಾದೂರ್‌ನು ಜನಾನೇರ್‌ಗೆ ವಾಪಸ್ಸ:

ಇದಾದ ನಂತರ ಸುಲ್ತಾನ್ ಬಹಾದೂರ್ ಗುಜರಾತಿಯು ದರಿಯಾಖಾನ್ ಲೋಧಿ ಎಂಬುವನನ್ನು ಉಜ್ಜೈನ್‌ನ ಶಾಸಕನನ್ನಾಗಿ ನೇಮಿಸಿದನು. ರಾಯ್ಸೀನ್‌ನ

ಶಾಸನವನ್ನು ಕಾಲ್ಪಿಯ ಶಾಸಕನಾದ ಆಲಂಖಾನನಿಗೆ ವಹಿಸದನು. ಶಾದಿ ಆಬಾದ್ ಮಾಂಡುವನ್ನು ಇಖ್ತಿಯಾರ್‌ಖಾನನಿಗೆ ವಹಿಸಿದನು. ಸುಲ್ತಾನ್ ಬಹಾದೂರ್‌ನು ಸ್ವತಃ ಜನಾನೇರ್ ಕೋಟೆಗೆ ವಾಪಸ್ಸಾದನು.

ಮಾಂಡುವಿನ ಮೇಲೆ ಹುಮಾಯಾನನ ಆಕ್ರಮಣ:

ಈ ಘಟನೆಗಳ ನಂತರ ನಾಸೀರುದ್ದೀನ ಹುಮಾಯಾನನು ಗುಜರಾತನ್ನು ಗೆದ್ದುಕೊಂಡನು. ಸುಲ್ತಾನ್ ಬಹಾದೂರ್ ಗುಜರಾತಿಯು ಬಂದರ್‌ದೇವ್‌ನತ್ತ ಓಡಿಹೋದನು. ಇದಾದ ನಂತರ ಹುಮಾಯಾನನು ಶಾದಿ ಆಬಾದ್ ಮಾಂಡುವಿಗೆ ಪ್ರವೇಶಿಸಿದನು. ಇಲ್ಲಿ ಹುಮಾಯಾನನು ತನ್ನ ಹೆಸರಿನ (ಖುತ್ಬಾ) ಮಸೀದಿಗಳಲ್ಲಿ ಪ್ರಶಂಸಾತ್ಮಕ ಭಾಷಣವನ್ನು ಮಾಡಲು ಆಜ್ಞಾಪಿಸಿದನು. ತನ್ನ ಹೆಸರಿನ ಮುದ್ರೆಯನ್ನು ಸ್ವೀಕರಿಸಲು ಆಜ್ಞಾಪಿಸಿದನು. ಹುಮಾಯನನು ಮಾಂಡು ಪ್ರದೇಶದಲ್ಲಿ ತನಗೆ ಬೇಕಾದ ಅಮೀರರನ್ನು ನೇಮಿಸಿ ತಾನು ಆಗ್ರಾಕ್ಕೆ ಬಂದನು.

■

*

೨. ಸುಲ್ತಾನ್ ಅಬ್ದುಲ್‌ಖಾದರ್

ಸುಲ್ತಾನ್ ಅಬ್ದುಲ್‌ಖಾದರ್:

ಮಲ್ಲುಖಾನನು ಸುಲ್ತಾನ್ ನಾಸೀರುದ್ದೀನ್ ಹುಮಾಯಾನನ ಆಪ್ತರಲ್ಲಿ ಒಬ್ಬನಾಗಿದ್ದನು. ಇವನು ಹುಮಾಯಾನನ ಸೇವಕನು. ಆತನು ತನ್ನ ಶ್ರಮದಿಂದ ಬಹಳ ದೊಡ್ಡ ಹುದ್ದೆಗಳಿಗೇರಿದ್ದನು. ಆತನು ಮಾಳವ ದೇಶದಲ್ಲಿ ಒಬ್ಬ ಸ್ವತಂತ್ರ ಬಾದಷಹನೆಂದು ಘೋಷಿಸಿಕೊಂಡು ಶಾಸನವನ್ನು ಸ್ಥಾಪಿಸಿಕೊಂಡನು. ತನ್ನ ಹೆಸರನ್ನು ಸುಲ್ತಾನ ಅಬ್ದುಲ್‌ಖಾದರ್ ಎಂದು ಪ್ರಚುರಪಡಿಸಕೊಂಡನು. ಅತನು ಭೇಲ್ಯಾದಿಂದ ಹಿಡಿದು ನರ್ಮದಾ ನದಿಯವರೆಗೂ ತನ್ನ ರಾಜ್ಯವನ್ನು ವಿಸ್ತರಿಕೊಂಡನು. ತನ್ನ ಹೆಸರಿನ ಖುತ್ಬಾ ಮತ್ತು ಮುದ್ರೆಯನ್ನು ಜಾರಿ ಮಾಡಿಕೊಂಡನು. ಸಲ್‌ಹದಿ ಪೂರಬಿಯಾನ ಮಕ್ಕಳಾದ ಭೂಪತ್ ಮತ್ತು ಪೂರನ್‌ಮಲ್ಲರು ಜಯಪುರದ ಕೋಟೆಯಿಂದ ಹೊರಬಂದು ರಾಯ್ಸೀನ್‌ನನ್ನು ವಶಪಡಿಸಿಕೊಂಡರು. ಸುಲ್ತಾನ್ ಅಬ್ದುಲ್‌ಖಾದರ್‌ನ ಶಾಸನ ಮತ್ತು ಅಧೀನತೆಯನ್ನು ಸ್ವೀಕರಿಸಿಕೊಂಡು, ಆತನಿಗೆ ಕಪ್ಪ-ಕಾಣಿಕೆಗಳನ್ನು ಒಪ್ಪಿಸಲು ಸಿದ್ಧರಾದರು.

ಶೇರ್‌ಶಾಹ್ ಸೂರಿಯ ಪತ್ರ ಸುಲ್ತಾನ್ ಅಬ್ದುಲ್‌ಖಾದರ್‌ನ ಹೆಸರಿಗೆ:

ಕೆಲವೇ ದಿನಗಳ ನಂತರ ಸುಲ್ತಾನ್ ಅಬ್ದುಲ್‌ಖಾದರ್‌ನ (ಆಡಳಿತವು) ಕೀರ್ತಿಯು ಬಹಳ ವೇಗವಾಗಿ ಬೆಳೆಯತೊಡಗಿತು. ಆ ಕಾಲದಲ್ಲಿ ಬಂಗಾಳದ ಕಡೆಗೆ ಅಪಾರ ಹೆಸರನ್ನು ಗಳಿಸಿದ್ದ ಶೇರ್‌ಶಾಹ್ ಸೂರಿಯ ಯುದ್ಧಗಳು ನಾಸೀರುದ್ದೀನ್ ಹುಮಾಯಾನನೊಂದಿಗೆ ನಡೆಯುತ್ತಿದ್ದವು. ಈ ಸಂದರ್ಭದಲ್ಲಿ ಅಬ್ದುಲ್‌ಖಾದರ್‌ನ ಪತ್ರವು ಹೀಗಿತ್ತು "ಮೊಗಲ ಸೈನ್ಯವು ಬಂಗಾಳದಲ್ಲಿ ಪ್ರವೇಶಿಸಿದೆ. ಈಗ ನೀನು ಆಗ್ರದ ಕಡೆಗೆ ದಂಗೆ, ಗಲಭೆಗಳನ್ನು ಎಬ್ಬಿಸಿದರೆ ಹುಮಾಯಾನನು ಶಾಂತಿಯಿಂದ ಇತ್ತಕಡೆ ಆಡಳಿತವನ್ನು ನಡೆಸಬಹುದು".

ಸುಲ್ತಾನ್ ಅಬ್ದುಲ್‌ಖಾದರ್‌ನ ಕ್ರೋಧ:

ಈ ಪತ್ರವನ್ನು ಓದಿದ ಅಬ್ದುಲ್‌ಖಾದರ್‌ನು ಕೋಪಗೊಂಡನು. ಏಕೆಂದರೆ ಈ ಪತ್ರವನ್ನು ಒಂದು ರಾಜಾಜ್ಞೆಯಂತೆ ವಿಧಿಪೂರ್ವಕವಾಗಿ ಬರೆದಿದ್ದನು. ಪತ್ರದ ಮೇಲೆ ಮುದ್ರೆಯನ್ನು ಒತ್ತಿದ್ದನು. ಸುಲ್ತಾನ್ ಅಬ್ದುಲ್‌ಖಾದರ್‌ನು ಸಿಟ್ಟಿನಿಂದಲೇ ಆ ಪತ್ರಕ್ಕೆ, ಪತ್ರದಿಂದಲೇ ಉತ್ತರ ಕೊಡಲು ನಿರ್ಧರಿಸಿ, ತನ್ನ ಮುನ್ಷಿಯ ಕೈಗೆ ಕೊಟ್ಟನು. ಮುನ್ಷಿಯು ಪತ್ರವನ್ನು ಬರೆದು ಸುಲ್ತಾನ್ ಅಬ್ದುಲ್‌ಖಾದರ್‌ನ ಮುದ್ರೆಯನ್ನು ಒತ್ತಲು ಹೇಳಿದನು. ಇದೇ ಸಂದರ್ಭದಲ್ಲಿ ಸುಲ್ತಾನ್ ಅಬ್ದುಲ್‌ಖಾದರ್‌ನ ಆಪ್ತನೊಬ್ಬನು ಹೀಗೆ ಸಮಾಧಾನ ಪಡಿಸಿದನು. "ಶೇರ್‌ಷಾಹನು ಜಾನ್‌ಪುರದ ಬಾದಷಹನಾಗಿದ್ದಾನೆ ಆತನ ಹತ್ತಿರ ಎಷ್ಟೋ ಸೈನ್ಯವಿದೆ ಎಂದರೆ ದೆಹಲಿಯ ಬಾದಷಹನನ್ನು ಎದುರಿಸುವ ಶಕ್ತಿ ಇದೆ. ಆತನು ನಿನ್ನ ಹೆಸರಿಗೆ ರಾಜಾಜ್ಞೆಯಂತೆ ಪತ್ರ ಬರೆದಿದ್ದರೆ ಏನು ತಪ್ಪಾಯಿತು? ಇದರಲ್ಲಿ ಸಿಟ್ಟಾಗುವಂತಹ ಮಾತೇನಿದೆ?" ಎಂದು ಸೈಫ್‌ಖಾನನೆಂಬುವನು ಸಮಾಧಾನ ಪಡಿಸಿದನು.

ಶೇರ್‌ಷಾಹ್‌ನ ಹೆಸರಿಗೆ ರಾಜಾಜ್ಞೆಯಂತುಹುದೇ ಪತ್ರ:

ಸುಲ್ತಾನ್ ಅಬ್ದುಲ್‌ಖಾದರನು ಆತನ ಪತ್ರಕ್ಕೆ ಉತ್ತರವಾಗಿ–ಒಂದುವೇಳೆ ಶೇರ್‌ಷಾಹನು ಬಂಗಾಳದ ಜೌನ್‌ಪುರದ ಬಾದಷಹನಾಗಿದ್ದರೆ, ನಾನೂ ಮಾಳವ ದೇಶದ ಶಾಸಕ ಬಾದಷಹನಾಗಿದ್ದೇನೆ. ನೀನು ನನ್ನನ್ನು ಗೌರವಿಸದಿದ್ದಾಗ ನಾನೇಕೆ ನಿನ್ನನ್ನ ಗೌರವಿಸಲಿ? ಎಂಬ ರಾಜಾಜ್ಞೆಯಂತಹ ಪತ್ರವನ್ನೇ ಕಳುಹಿಸಿದ. ಈತನ ರಾಜಾಜ್ಞೆಯಂತಹ ಪತ್ರವು ಶೇರ್‌ಷಾಹನಿಗೆ ತಲುಪಿದಾಗ ಆತನೂ ಕ್ರೋಧಿತನಾದನು. ಆಗ ಅವನ ಬಾಯಿಂದ ಈ ಶಬ್ದಗಳು ಹೊರಟವು "ಯಾವುದಾದರೊಂದು ದಿನ ಅವಕಾಶ ಸಿಕ್ಕರೆ ಆತನ ಗರ್ವದ ರುಚಿಯನ್ನು ತೋರಿಸಿಯೇ ತೀರುತ್ತೇನೆ" ಎಂದನು.

ಶೇರ್‌ಷಾಹನಿಗೆ ಮಾಳವವನ್ನು ಗೆಲ್ಲುವ ಇಚ್ಚೆ:

ಶೇರ್‌ಷಾಹ ಸೂರಿಯು ತನ್ನ ಪರಾಕ್ರಮದಿಂದ ದೆಹಲಿಯನ್ನು ಗೆದ್ದು ಬಾದಷಹನಾದನು. ಆತನು ಈಗ ಹಿಂದೂಸ್ತಾನದ ಬಾದಷಹನಾಗಿದ್ದನು. ಹಿಜರಿ ೯೪೯ ರಲ್ಲಿ ಆತನು ಮಾಳವ ದೇಶವನ್ನು ಗೆಲ್ಲುವ ಇಚ್ಚೆಯನ್ನು ಪ್ರಕಟಿಸಿ ಹೊರಟೇಬಿಟ್ಟನು. ಶೇರ್‌ಷಾಹನು ಸಾರಂಗಪುರದ ಸಮೀಪಕ್ಕೆ ಬಂದಾಗ, ಸುಲ್ತಾನ್ ಅಬ್ದುಲ್‌ಖಾದರನು ತುಂಬಾ ಚಿಂತಿತನಾದನು. ಆತನಿಗೆ ಹೆದರಿಕೆಯಾಗಿದ್ದೆಂದರೆ, ಹಿಂದಿನ ಪತ್ರದ ಸೇಡನ್ನು ತೀರಿಸಿಕೊಳ್ಳಲು ಬರುತ್ತಿರುವನೆಂದು. ಈ ಸಂದರ್ಭದಲ್ಲಿ ಸೈಫ್‌ಖಾನ್ ದೆಹಲವಿಯ ಸಲಹೆ ಹೀಗಿತ್ತು. ಈ ಸಂದರ್ಭದಲ್ಲಿ ನಾವು ಶೇರ್‌ಷಾಹನ ಎದುರು ಯುದ್ಧಮಾಡುವಷ್ಟು ಸಾಮರ್ಥ್ಯ ನಮ್ಮಲ್ಲಿ ಇಲ್ಲ. ಉಚಿತವೆಂದರೆ ಬೇಗ ಸಾರಂಗಪುರಕ್ಕೆ ಹೋಗಿ ಅವನನ್ನು ಸ್ವಾಗತಿಸಿ ಭೇಟಿಯಾಗುವುದೇ ಮೇಲು ಎಂದನು.

ಶೇರ್‌ಷಾಹ್ ಸೂರಿ ಮತ್ತು ಅಬ್ದುಲ್‌ಖಾದರ್‌ನ ಭೇಟಿ:

ಸುಲ್ತಾನ್ ಅಬ್ದುಲ್‌ಖಾದರ್‌ನಿಗೆ ಸೈಫ್‌ಖಾನನ ಸಲಹೆ ಸರಿಯೆನಿಸಿತು. ತಕ್ಷಣ ಶೇರ್‌ಷಾಹನನ್ನು ಎದುರುಗೊಳ್ಳಲು ಹೊರಟನು. ಸಾರಂಗಪುರಕ್ಕೆ ತಲುಪಿ ಆತನ ದರಬಾರಿನಲ್ಲಿ ಹಾಜರಾದನು. ಶೇರ್‌ಷಾಹನ ಸೇವಕರು ಸುಲ್ತಾನ್ ಅಬ್ದುಲ್‌ಖಾದರ್‌ನ ಆಗಮನದ ಸುದ್ದಿಯನ್ನು ತಿಳಿಸಿದರು. ಶೇರ್‌ಷಾಹನು ತನ್ನ ಹುಜೂರಿಗೆ ಬರಲು ಸಮ್ಮತಿಸಿದ. ಶೇರ್‌ಷಾಹನು ಅಬ್ದುಲ್‌ಖಾದರನನ್ನು ಪ್ರೇಮದಿಂದಲೇ ಆಹ್ವಾನಿಸಿದ. ಆತನಿಗೆ ಬಹುಮಾನಗಳನ್ನು ಕೊಟ್ಟು ಗೌರವಿಸಿದ. ಮಾರನೇ ದಿನ ಶೇರ್‌ಷಾಹನು ಉಜ್ಜೈನಿಯ ಕಡೆಗೆ ಹೊರಟನು. ಹೋಗುವಾಗ ಶುಜಾಅಲಿಖಾನ್ ಎಂಬುವನಿಗೆ ಸುಲ್ತಾನ್ ಅಬ್ದುಲ್‌ಖಾದರನ ನಿಗಾವಹಿಸಲು ಆಜ್ಞಾಪಿಸಿ ಹೋದನು. ಆತನಿಗೆ ವಿಶ್ರಾಂತಿಯನ್ನು ನೀಡಲು ಹೇಳಿದನು.

ಶೇರ್‌ಷಾಹನಿಗೆ ಉಜ್ಜೈನಿಯನ್ನು ವಶಪಡಿಸಿಕೊಳ್ಳುವ ಆಸೆ:

ಉಜ್ಜೈನಿ ತಲುಪಿದ ಶೇರ್‌ಷಾಹನು ಆ ಪ್ರದೇಶಗಳನ್ನೆಲ್ಲ ವಶಪಡಿಸಿಕೊಳ್ಳುವ ಆಸೆ ಆತನಿಗಿತ್ತು. ಅಬ್ದುಲ್‌ಖಾದರನಿಗೆ ಇದರ ನಂಬಿಕೆ ಇರಲಿಲ್ಲ. ಶೇರ್‌ಷಾಹನು ಸಮಯದ ಪರಿಸ್ಥಿತಿಗನುಸಾರವಾಗಿ ಅಬ್ದುಲ್‌ಖಾದರನನ್ನು ಲಕ್ನೋತಿಯ ಶಾಸನವನ್ನು ನೋಡಿಕೊಳ್ಳಲು ನೇಮಿಸಿದನು. ಆತನನ್ನು ನಿನ್ನ ಹೆಂಡತಿ ಮಕ್ಕಳನ್ನು ಅಲ್ಲಿಗೆ ಕಳುಹಿಸಿ, ಬಾದಷಹನ ಸೇವೆಯಲ್ಲಿರಲು ಆಜ್ಞಾಪಿಸಿದನು.

ಅಬ್ದುಲ್‌ಖಾದರನು ಸಾರಂಗಪುರದಲ್ಲಿ ತಂಗಿದನು:

ಅಬ್ದುಲ್‌ಖಾದರನಿಗೆ ಎಲ್ಲ ವಿಚಾರಗಳು ತಲೆಕೆಳಗಾದಂತೆ ಕಂಡು ತನ್ನ ಹೆಂಡತಿ ಮಕ್ಕಳನ್ನು ಉಜ್ಜೈನಿಯಿಂದ ಕರೆಯಿಸಿಕೊಂಡು, ಸಾರಂಗಪುರ ಮತ್ತು ಸೈನಿಕ ಶಿಬಿರದ ಮಧ್ಯ ಒಂದು ಕಸಬಾ ಊರಿನ ತೋಟದಲ್ಲಿ ಉಳಿದುಕೊಂಡನು. ಅದೇ ದಿನಗಳಲ್ಲಿ ಸಿಕಂದರ್‌ಖಾನ ಮೇವಾತಿಯ ದತ್ತು ಮಗನಾದ ಮೇಯಿನ್‌ಖಾನನು ಸಹ ಶೇರ್‌ಷಾಹನ ಸೇವೆಯಲ್ಲಿ ಹಾಜರಾದನು. ಶೇರ್‌ಷಾಹನು ಆತನಿಗೆ ಸಿಕಂದರ್‌ಖಾನ್ ಎಂಬ ಬಿರುದನ್ನು ಕೊಟ್ಟು ಒಂದು ಉತ್ತಮ ಜಾಗೀರಿಯನ್ನು ನೀಡಿದನು.

ಶೇರ್‌ಷಾಹನ ಸ್ನೇಹ – ಒಂದು ದುಬಾರಿ ವ್ಯವಹಾರ:

ಒಂದು ದಿನ ಅಬ್ದುಲ್‌ಖಾದರನು ತನ್ನ ಮನೆಯಿಂದ ಶೇರ್‌ಷಾಹನ ದರಬಾರಿನತ್ತ ಹೋಗುತ್ತಿದ್ದನು. ದಾರಿಯಲ್ಲಿ ಆತನು ಮೊಗಲ ವಂಶದ ಬಹಳ ಮಂದಿಯನ್ನು ಆಫ್‌ಗನ್ನರು ಸೆರೆಹಿಡಿದು ಇಟ್ಟುಕೊಂಡಿದ್ದರು. ಅವರೆಲ್ಲರೂ ಎಚ್ಚರವಾಗಿದ್ದರಲ್ಲದೇ ಹಾಡುಗಳನ್ನು ಹೇಳುತ್ತಿದ್ದರು. ಈ ಜನರೆಲ್ಲರೂ ಯಾವಾಗಲೂ ಸೈನಿಕ ಶಿಬಿರದ ಸುತ್ತಲೂ ಕಂದಕವನ್ನು ತೋಡುವ ಕೆಲಸದಲ್ಲಿ ನಿರತರಾಗಿರುತ್ತಿದ್ದರು. ಅಬ್ದುಲ್‌ಖಾದರನು

ಆ ಜನಗಳ ಹತ್ತಿರದಿಂದ ನಡೆದು ಹೋಗುತ್ತಿದ್ದಾಗ ಒಬ್ಬ ಮೊಗಲನು ಜೋರಾಗಿ ಈ ವಾಕ್ಯವನ್ನು ಫಾರ್ಶಿ ಭಾಷೆಯಲ್ಲಿ ಹೇಳುತ್ತಿದ್ದನು. ಆ ವಾಕ್ಯವನ್ನು ಕೇಳಿದ ಅಬ್ದುಲ್‌ಖಾದರನು ಆಶ್ಚರ್ಯಚಕಿತನಾದನು. ಹಾಗೂ ಎಚ್ಚೆತ್ತುಕೊಂಡು, ಆತನ ಮನಸ್ಸಿನಲ್ಲಿ ಬಂದದ್ದೇನೆಂದರೆ ನಾನೇನಾದರೂ ಶೇರ್‌ಷಾಹನ ಹತ್ತಿರ ಇದ್ದರೆ, ಆತನು ನನ್ನನ್ನೂ ಹಾಡು ಹೇಳುವ ಕೆಲಸಕ್ಕೆ ನೇಮಿಸುವನೆಂದು ಯೋಚಿಸಿದನು.

ಶೇರ್‌ಷಾಹನ ಸಮಯಪ್ರಜ್ಞೆ:

ಅಬ್ದುಲ್‌ಖಾದರನು ಶೇರ್‌ಷಾಹನಿಂದ ಬೇರ್ಪಡಲು ಇಚ್ಛಿಸಿದನು. ಏನಾದರೂ ಉಪಾಯವನ್ನು ಮಾಡಿ ಅಲ್ಲಿಂದ ಓಡಿಹೋಗುವ ಪ್ರಯತ್ನವನ್ನು ಮಾಡಬೇಕೆಂದು ಯೋಚಿಸಿದನು. ಆದರೆ ಶೇರ್‌ಷಾಹನು ಬಹಳ ಬುದ್ಧಿವಂತನಾಗಿದ್ದನು. ಆತನು ಅಬ್ದುಲ್‌ಖಾದರನ ಮನಸ್ಸಿನಲ್ಲಿ ಇದ್ದುದ್ದನ್ನು ಅರಿತುಕೊಂಡನು. ತನ್ನ ಆಪ್ತನಾದ ಶುಜಾಖಾನ್‌ನೊಂದಿಗೆ ಹೀಗೆಂದನು "ನಾನು ಅಬ್ದುಲ್‌ಖಾದರನ ದುರ್ನಡತೆಯ ವರ್ತನೆಗಳನ್ನು ಪೂರ್ಣವಾಗಿ ತಿಳಿದುಕೊಂಡಿದ್ದೇನೆ. ಈತನು ಎಂದಿಗೂ ನನ್ನಲ್ಲಿ ಪ್ರಮಾಣಿಕನಾಗಿರಲಾರನು. ಏಕೆಂದರೆ ನಾನು ಇವನನ್ನು ನನ್ನಲ್ಲಿಗೆ ಬರಲು ಆಹ್ವಾನಿಸಿರಲೇ ಇಲ್ಲ. ಈತನೇ ನನ್ನಲ್ಲಿಗೆ ಬಂದಿರುತ್ತಾನೆ. ಸದ್ಯಕ್ಕೆ ಈತನಿಗೆ ನಾನು ಯಾವ ಶಿಕ್ಷೆಯನ್ನೂ ನೀಡುವುದಿಲ್ಲ. ಈಗಲೇ ಶಿಕ್ಷೆ ನೀಡಿದರೆ ಆತನು ಓಡಿಹೋಗುತ್ತಾನೆ. ಸ್ವಲ್ಪ ದಿನಗಳು ಕಳೆದಾಗ ಆತನಿಗೆ ಸೆರೆಹಿಡಿದು ಸೂಕ್ತ ಶಿಕ್ಷೆಯನ್ನು ನೀಡಲಾಗುವುದು.

ಅಬ್ದುಲ್‌ಖಾದರನು ಪರಾರಿ:

ಇತ್ತ ಅಬ್ದುಲ್‌ಖಾದರನು ತಪ್ಪಿಸಿಕೊಂಡು ಓಡಲು ತುಂಬಾ ಪ್ರಯತ್ನಿಸುತ್ತಿದ್ದನು. ಒಂದುದಿನ ಅವನಿಗೆ ಒಳ್ಳೆಯ ಅವಕಾಶ ಸಿಕ್ಕಿಬಿಟ್ಟಿತು. ಆತನು ಪಲಾಯಾನವನ್ನು ಮಾಡಿದನು. ಶೇರ್‌ಷಾಹನು ಆತನನ್ನು ಹಿಡಿಯಲು ಸೈನಿಕರನ್ನು ಕಳುಹಿಸಿದನು. ಅವರು ಹಿಂಬಾಲಿಸಿದರೂ ಸಿಗದಂತೆ ಓಡಿಹೋಗಿದ್ದನು. ಸೈನಿಕರು ನಿಷ್ಫಲರಾಗಿ ಹಿಂತಿರುಗಿದರು. ಈ ಸಂದರ್ಭದಲ್ಲಿ ಶೇರ್‌ಷಾಹನು ಫಾರ್ಶಿ ಶಬ್ದಗಳಲ್ಲಿ ಒಂದು ವಚನವನ್ನು ಹಾಡಿದನು.

■

*

೩. ಶುಜಾಅ ಖಾನ್

ಅಬ್ದುಲ್‌ಖಾದರನು ತಪ್ಪಿಸಿಕೊಂಡು ಓಡಿ ಹೋದಮೇಲೆ ಶೇರ್‌ಷಾಹನು ಕೆಲವು ದಿನಗಳ ತನಕ ಉಜ್ಜೈನಿಯಲ್ಲೇ ನೆಲೆ ನಿಂತನು. ಮಾಳ್ವಾ ದೇಶವನ್ನು ತನ್ನ ಅಮೀರರಲ್ಲಿ ಹಂಚಿಕೆ ಮಾಡಿದನು. ಉಜ್ಜೈನ, ಸಾರಂಗಪುರ ಮತ್ತು ಇನ್ನೂ ಅನೇಕ ಪರಗಣ ಜಿಲ್ಲೆಗಳನ್ನು ಶುಜಾಅ ಖಾನನಿಗೆ ಜಾಗೀರಿಯಾಗಿ ಬಿಟ್ಟು ಕೊಟ್ಟನು. ಹಾಗೂ ಆತನನ್ನು ಈ ಪ್ರದೇಶದ ಸೇನಾಧಿಪತಿಯನ್ನಾಗಿಯೂ ಘೋಷಿಸಿದನು. ನಂತರ ಶೇರ್‌ಷಾಹನು ರಣಥಂಬೋರ್‌ನತ್ತ ಹೊರಟನು. ಆತನು ಅಲ್ಲಿಗೆ ಹೋದ ಕಾರಣವೇನೆಂದರೆ ಸಿಕಂದರ್‌ಖಾನನನ್ನು ಸೆರೆಹಿಡಿಯಲೆಂದು.

ನಸೀರ್‌ಖಾನನು ಶುಜಾಅ ಖಾನನ ಮೇಲೆ ಆಕ್ರಮಣ :

ಸಿಕಂದರ್‌ಖಾನನ ಮಗ ನಸೀರ್‌ಖಾನನಿಗೆ ತನ್ನ ತಂದೆಯನ್ನು ಸೆರೆಹಿಡಿಯುವ ಹುನ್ನಾರ ಗೊತ್ತಾಯಿತು. ಆತನು ಸೀವಾಸ್‌ದಲ್ಲಿ ಸೈನ್ಯವನ್ನು ಸಂಗ್ರಹಿಸಲು ಪ್ರಾರಂಭಿಸಿದನು. ಒಂದು ದೊಡ್ಡ ಸೈನ್ಯದೊಂದಿಗೆ ಸುಜಾಅ ಖಾನ್‌ನ ಮೇಲೆ ಯುದ್ಧ ಮಾಡಲು ಬಂದನು. ನಸೀರ್‌ಖಾನನು ತನ್ನ ಸ್ನೇಹಿತರಿಗೆ ಹೇಳಿದ್ದೇನೆಂದರೆ– ಶುಜಾಅ ಖಾನನನ್ನು ಯುದ್ಧದಲ್ಲಿ ಜೀವಂತವಾಗಿ ಸೆರೆಹಿಡಿದು ತರಬೇಕೆಂದು. ಏಕೆಂದರೆ ಆತನನ್ನು ನನ್ನ ತಂದೆಯ ಸೆರೆಯ ಬದಲಿಗೆ ನನ್ನ ಹತ್ತಿರ ಬಂಧಿಸಿಡುತ್ತೇನೆ. ಈ ರೀತಿಯಲ್ಲಿ ನಮ್ಮ ತಂದೆಯವರನ್ನು ಸೆರೆಯಿಂದ ಬಿಡಿಸಿಕೊಳ್ಳುತ್ತೇನೆ.

ಇಬ್ಬರಲ್ಲೂ ಯುದ್ಧ :

ಇಬ್ಬರಲ್ಲೂ ಯುದ್ಧವು ಪ್ರಾರಂಭವಾಯಿತು. ನಸೀರ್‌ಖಾನನು ಮತ್ತು ಆತನ ಕೆಲ ಸ್ನೇಹಿತರು ಹೇಗೋ ಮಾಡಿ ಅವನ ಹತ್ತಿರಕ್ಕೆ ತಲುಪಿದರು. ಆತನ ತಲೆಯ ಕೂದಲನ್ನು ಹಿಡಿದುಕೊಂಡು ತಮ್ಮ ಸೈನ್ಯದ ಕಡೆ ಎಳೆದುಕೊಂಡು ಹೋದರು. ಮುಬಾರಕ್‌ಖಾನನು, ಸುಜಾಅಖಾನನನ್ನು ಈ ರೀತಿಯಾಗಿ ಎಳೆದುಕೊಂಡು ಹೋಗುವುದನ್ನು ಕಂಡು, ಅವನನ್ನು ಉಳಿಸಿಕೊಳ್ಳಲು ಬಂದು ಬಹಳ ವೀರಾವೇಶದಿಂದ

ಹೋರಾಡಿ ಸುಜಾಅಖಾನನನ್ನು ಅವರ ಹಿಡಿತದಿಂದ ಬಿಡಿಸಿಕೊಂಡನು. ಈ ಯುದ್ಧದಲ್ಲಿ ಮುಬಾರಕ್‌ಖಾನನ ಒಂದು ಕಾಲು ತುಂಡಾಯಿತು. ಈ ಕಾರಣದಿಂದಾಗಿ ಆತನು ತನ್ನ ಕುದುರೆಯಿಂದ ಕೆಳಗೆ ಬಿದ್ದನು. ನಸೀರ್‌ಖಾನನ ಸಿಪಾಯಿಗಳು ತಕ್ಷಣ ಆತನತ್ತ ಧಾವಿಸಿದರು. ಆತನನ್ನು ಸಾಯಿಸಲು ಪ್ರಯತ್ನಿಸಿದರು. ಆದರೆ ರಾಜ ಗ್ವಾಲಿಯರನು ಅವನನ್ನು ಉಳಿಸಿಕೊಂಡನು.

ನಸೀರ್‌ಖಾನನಿಗೆ ಸೋಲು :

ನಸೀರ್‌ಖಾನನು ಈ ಯುದ್ಧದಲ್ಲಿ ಬಹಳಷ್ಟು ಶೌರ್ಯವನ್ನು ಪ್ರದರ್ಶಿಸಿದನು. ಆದರೆ ಅದೃಷ್ಟವು ಆತನಿಗೆ ಒಲಿಯಲಿಲ್ಲ. ಶತ್ರುಗಳ ಕೈ ಮೇಲಾಗಿ ಈತನು ಯುದ್ಧದಲ್ಲಿ ಸೋಲಬೇಕಾಯಿತು. ನಸೀರ್‌ಖಾನನು ಯುದ್ಧ ಮೈದಾನದಿಂದ ಪರಾರಿಯಾದನು. ಅಲ್ಲಿಂದ ಕಾವಾಂಧರಾ ಕೋಟೆಯಲ್ಲಿ ಆಶ್ರಯವನ್ನು ಪಡೆದನು. ಶುಜಾಅಖಾನನ ಮುಖ ಮತ್ತು ಪಕ್ಕೆಯಲ್ಲಿ ಐದಾರು ಗಾಯಗಳಾಗಿದ್ದವು. ಆತನ ಆಪ್ತರು ಎತ್ತಿಕೊಂಡು ಹೋಗಿ ಸೈನಿಕ ಶಿಬಿರದಲ್ಲಿ ಮಲಗಿಸಿದರು.

ಸುಲ್ತಾನ್ ಅಬ್ದುಲ್‌ಖಾದರನು ಧಾರ್‌ನ ಮೇಲೆ ಆಕ್ರಮಣ :

ಶುಜಾಅಖಾನನ ಗಾಯಗಳು ಇನ್ನೂ ಸರಿಯಾಗಿ ವಾಸಿಯಾಗಿರಲಿಲ್ಲ. ಅಷ್ಟರಲ್ಲಿ ಧಾರ್‌ನ ಜಾಗೀರ್‌ದಾರನಾದ ಹಾಜಿಖಾನನ ಪತ್ರ ಹೀಗೆ ತಲುಪಿತು. "ಸುಲ್ತಾನ್ ಅಬ್ದುಲ್‌ಖಾದರನು ಒಂದು ವಿಶಾಲ ಸೈನ್ಯದೊಂದಿಗೆ ನನ್ನ ಮೇಲೆ ಯುದ್ಧಕ್ಕೆ ಬಂದಿದ್ದಾನೆ. ಇಂದು ತಪ್ಪಿದರೆ ನಾಳೆ ಯುದ್ಧ ನಡೆಯುವ ಸಂಭವವಿದೆ." ಈ ಪತ್ರ ತಲುಪಿದೊಡನೆ ಶುಜಾಅಖಾನನು ಅದೇ ಸ್ಥಿತಿಯಲ್ಲಿ ಪಲ್ಲಕ್ಕಿಯಲ್ಲಿ ಕುಳಿತು ಧಾರ್ ನಗರದತ್ತ ಪ್ರಯಾಣವನ್ನು ಬೆಳೆಸಿದನು. ರಾತ್ರಿಯ ಹೊತ್ತಿನಲ್ಲಿ ನೂರೈವತ್ತು ಸವಾರರ ಜೊತೆಯಲ್ಲಿ ಧಾರ್ ನಗರವನ್ನು ತಲುಪಿ ಬಿಟ್ಟನು.

ಅಬ್ದುಲ್‌ಖಾದರನ ಸೋಲು :

ಶುಜಾಅಖಾನನು ಹಾಜಿಖಾನನ ಸೈನಿಕ ಶಿಬಿರದಲ್ಲಿ ಪ್ರವೇಶಿಸಿದಾಗ ಆತನು ಮಲಗಿದ್ದನು. ಶುಜಾಅನು ಆತನನ್ನು ಎಬ್ಬಿಸಿದನು. ಈಗಲೇ ಯುದ್ಧದ ಸಿದ್ಧತೆಗಳನ್ನು ಮಾಡಿಕೊಳ್ಳಲು ಸೂಚಿಸಿದನು. ಕೆಲವೇ ನಿಮಿಷಗಳಲ್ಲಿ ಸೈನ್ಯವು ಸನ್ನದ್ಧವಾಯಿತು. ಸುಲ್ತಾನ್ ಅಬ್ದುಲ್ ಖಾದರನ ಮೇಲೆ ಹೋಗಿ ಬಿದ್ದರು. ಇಬ್ಬರಲ್ಲೂ ರಕ್ತದ ಕೋಡಿಗಳು ಹರಿದುವು. ಇದರ ಪರಿಣಾಮವೆಂದರೆ, ಅಬ್ದುಲ್‌ಖಾದರನು ಸೋತು ಗುಜರಾತಿನ ಕಡೆಗೆ ಓಡಿ ಹೋದನು. ಈ ಯುದ್ಧದಲ್ಲಿ ಆತನು ಹೇಗೆ ನಾಶವಾದನೆಂದರೆ– ಮತ್ತೆಂದೂ ಯುದ್ಧದ ಸುದ್ದಿಯನ್ನು ಎತ್ತಬಾರದು. ಎಂದೂ ತಲೆ ಎತ್ತದಂತೆ ಹಾಳಾದನು.

ಶುಜಾಅಖಾನನ ಆಡಳಿತ ಕಾಲದಲ್ಲಿ ಪ್ರಗತಿ :

ಇದಾದ ನಂತರ ಶುಜಅಖಾನನ ಶಕ್ತಿ-ಸಾಮರ್ಥ್ಯಗಳು ಹೆಚ್ಚಾದುವು. ದಿನೇ ದಿನೇ ಪ್ರಗತಿಯ ಪಥದಲ್ಲಿ ಸಾಗತೊಡಗಿದನು. ಮಾಳ್ವಾ ದೇಶದಲ್ಲೆಲ್ಲಾ ಆತನ ಕೀರ್ತಿ ಪತಾಕೆ ಹಾರಲಾರಂಭಿಸಿತು. ಯಾವ ಶತ್ರುವೂ ಉಳಿದಿರಲಿಲ್ಲ. ಆ ದಿನಗಳಲ್ಲಿ ಕಾಲಂಜರ್ ಕೋಟೆಯಲ್ಲಿ ಶೇರ್‌ಶಾಹ್ ಸೂರಿಯು ಮರಣ ಹೊಂದಿದನು. ಆತನ ಜಾಗದಲ್ಲಿ ಆತನ ಮಗನಾದ ಸಲೀಂಶಾಹ ಸಿಂಹಾಸನವನ್ನೇರಿದನು.

ಸಲೀಂಶಾಹ ಮತ್ತು ಶುಜಾಅಖಾನನ ಸಂಬಂಧಗಳು :

ಸಲೀಂ ಶಾಹನು ಶುಜಾಅಖಾನನನ್ನು ನಂಬುತ್ತಿರಲಿಲ್ಲ. ಅವರಿಬ್ಬರಲ್ಲಿ ದ್ವೇಷ ಭಾವನೆಗಳಿದ್ದುವು. ಆದರೆ ಬಹಿರಂಗದಲ್ಲಿ ಆತ್ಮೀಯನಂತೆ ವರ್ತಿಸುತ್ತಿದ್ದನು. ಇದಕ್ಕೆ ಕಾರಣವೇನೆಂದರೆ, ಶುಜಾಅಖಾನನ ದತ್ತು ಪುತ್ರ ಸಲೀಂಶಾಹ್‌ನ ಆಪ್ತರಲ್ಲಿ ಹುದ್ದೆಯನ್ನು ಪಡೆದಿದ್ದನು. ಸಲೀಂಶಾಹನು ಶುಜಾಅನನ್ನು ದ್ವೇಷಿಸುತ್ತಿದ್ದರೂ, ತನ್ನ ತಂದೆಯಂತೆಯೇ ಆತನಿಗೆ ಮಾಳ್ವಾದ ಅಧಿಕಾರವನ್ನು ಒಪ್ಪಿಸಿದನು.

ಒಬ್ಬ ಶರಾಬಿ (ಕುಡುಕನ)ಯ ಘಟನೆ :

ಉಸ್ಮಾನ್‌ಖಾನ ಎಂಬುವನೊಬ್ಬನು ಶರಾಬನ್ನು ಕುಡಿದು ಶುಜಾಅಖಾನನ ದರ್ಬಾರ ಹಾಲಿನತ್ತ ಬಂದನು. ಉಸ್ಮಾನನು ಎಷ್ಟು ಶರಾಬು ಕುಡಿದಿದ್ದನೆಂದರೆ- ಆತನ ಬಾಯಿಯಿಂದ ಜೊಲ್ಲು ಸುರಿಯುತ್ತಲೇ ಇತ್ತು. ದರ್ಬಾರ ಹಾಲಿನ ಹಾಸಿಗೆ ಮೇಲೆಲ್ಲಾ ಜೊಲ್ಲು ಸುರಿಸಿ ಗಲೀಜು ಮಾಡುತ್ತಾ ಹೋಗುತ್ತಿದ್ದನು. ಹಾಸು ಹಾಸುವವನು ಆತನನ್ನು ಬರಲು ಅಡ್ಡಿಪಡಿಸಿದನು. ಆ ಕುಡುಕನು ಹಿಂದೆ ಮುಂದೆ ನೋಡದೆ ಆ ಹಾಸನ್ನು ಹಾಸುವವನ ಮುಖದ ಮೇಲೆ ಬಲವಾಗಿ ಗುದ್ದಿದನು. ಶುಜಾಅಖಾನನಿಗೆ ಈ ವಿಷಯವು ತಿಳಿಯಿತು. ಶುಜಾಅಖಾನನು ಹೀಗೆಂದನು-ಉಸ್ಮಾನಖಾನನಿಂದ ಮೂರು ಅಪರಾಧಗಳಾಗಿವೆ. ಒಂದನೇ ತಪ್ಪೆಂದರೆ-ಆತನು ಶರಾಬನ್ನು ಕುಡಿದಿರುವುದು. ಎರಡನೇ ತಪ್ಪು ಶರಾಬನ್ನು ಕುಡಿದು ದರ್ಬಾರ ಹಾಲಿನತ್ತ ಬಂದಿರುವುದು. ಮೂರನೇ ಅಪರಾಧವೆಂದರೆ- ಹಾಸುವವನಿಗೆ ಗುದ್ದಿರುವುದು. ಈ ತಪ್ಪುಗಳ ಶಿಕ್ಷೆಯೆಂದರೆ ಆತನ ಎರಡೂ ಕೈಗಳನ್ನು ಕತ್ತರಿಸಲಾಗುವುದು.

ಸಲೀಂಶಾಹನಿಗೆ ಶುಜಾಅನ ಮೇಲೆ ದೂರು :

ಶುಜಾಅಖಾನನ ಆಜ್ಞೆಯನ್ನು ಪಾಲಿಸಲಾಯಿತು. ಉಸ್ಮಾನನ ಎರಡೂ ಕೈಗಳು ಕತ್ತರಿಸಲ್ಪಟ್ಟವು. ಈ ಕ್ರೂರ ಶಿಕ್ಷೆಯನ್ನು ಅನುಭವಿಸಿದ ನಂತರವೂ ಉಸ್ಮಾನನು ಬದುಕಿದ್ದನು. ಆತನು ಸಲೀಂಶಾಹನ ರಾಜಧಾನಿಯಾದ ಗ್ವಾಲಿಯರ್ ತಲುಪಿದನು. ಅಲ್ಲಿಗೆ ಹೋಗಿ ತನ್ನೆಲ್ಲಾ ದೂರುಗಳನ್ನು ಸಲೀಂಶಾಹನಿಗೆ ಹೇಳಿದನು. ಆಗ ಸಲೀಂಶಾಹನು

ಹೀಗೆಂದನು–"ಶುಜಾಅನು ನಿನಗೆ ಯಾವ ರೀತಿಯ ಶಿಕ್ಷೆಯನ್ನು ವಿಧಿಸಿದ್ದಾನೆಯೋ ಹಾಗೆಯೇ ನೀನೂ ಆತನಿಗೆ ಅದೇ ಶಿಕ್ಷೆಯನ್ನು ಕೊಡು" ಎಂದನು.

ಶುಜಾಅಖಾನನ ಮೇಲೆ ಆಕ್ರಮಣ :

ಸಲೀಂಶಾಹನ ಈ ಉತ್ತರ ಶುಜಾಅನಿಗೆ ತುಂಬಾ ಕೆಟ್ಟದಾಗಿ ಕಾಣಿಸಿತು. ಆತನಿಗೆ ಸಲೀಂಶಾಹನ ಮೇಲೆ ಕೋಪ ಬಂದಿತು. ಈ ಸಿಟ್ಟಿನ ಭರದಲ್ಲಿ ಸಲೀಂಶಾಹನನ್ನು ಬೈದನು. ಒಂದು ದಿನ ಶುಜಾಅಖಾನನು ಸಲೀಂಶಾಹನನ್ನು ನಮಸ್ಕರಿಸಲು ಗ್ವಾಲಿಯರ್ ಕೋಟೆಯತ್ತ ಹೊರಟನು. ಆತನ ಪಲ್ಲಕ್ಕಿ ಹತಿಯಾಪೋಲ್ ಎಂಬ ಬಾಗಿಲಿನ ಬಳಿ ತಲುಪಿದಾಗ ಆತನು ಕಂಡಿದ್ದೇನೆಂದರೆ–ಅಲ್ಲಿಯ ಒಂದ ಅಂಗಡಿಯ ಮುಂದೆ ಉಸ್ಮಾನ್ ಶರಾಬಿಯು ಕುಳಿತಿರುವುದು. ಉಸ್ಮಾನನು ಹಳೆಯ ಘಟನೆಯನ್ನು ಮರೆತು ಬಿಟ್ಟಿದ್ದನು. ಶುಜಾಅಖಾನನು ಉಸ್ಮಾನನನ್ನು ಸ್ವಲ್ಪ ಸಮಾಧಾನ ಪಡಿಸಲು ಹಾಗೂ ಆತನ ಪರಿಸ್ಥಿತಿಯನ್ನು ಕೇಳಬೇಕೆಂದು ಇಚ್ಛಿಸಿದನು. ಇಷ್ಟರಲ್ಲಿ ಉಸ್ಮಾನನು ವಿದ್ಯುತ್ ವೇಗದಲ್ಲಿ ಶುಜಅನ ಪಲ್ಲಕ್ಕಿಯ ಒಳಗೆ ಏರಿ ಬಂದು ಆತನ ಮೇಲೆ ಆಕ್ರಮಣವನ್ನು ಮಾಡಿದನು. ಶುಜಾಅಖಾನನ ರಕ್ಷಕರು ಆತನನ್ನು ಹಿಡಿದು ಕೊಲೆ ಮಾಡಿದರು.

ಶುಜಾಅಖಾನನು ಗಾಯಗೊಂಡನು :

ಉಸ್ಮಾನಖಾನನನ್ನು ಶುಜಾಅಖಾನನ ಅಂಗರಕ್ಷಕರು ಗಮನಿಸಿ ನೋಡಿದಾಗ ತಿಳಿದು ಬಂದದ್ದೇನೆಂದರೆ–ಆತನು ಒಂದು ಕಬ್ಬಿಣದ ಕೃತಕ ಕೈಯನ್ನು ಜೋಡಿಸಿಕೊಂಡಿದ್ದನು. ಆ ಕೃತಕ ಕೈಯ ಸಹಾಯದಿಂದ ಶುಜಾಅಖಾನನ ಮೇಲೆ ಆಕ್ರಮಣ ಮಾಡಿದ್ದನು. (ನಂತರ ಶುಜಾಅಖಾನನು ಬಾದಶಹನಿಗೆ ಸಲಾಂ ಮಾಡದೇ ಹಿಂತಿರುಗಿದನು.) ಶುಜಾಅನ ಅಂಗರಕ್ಷಕರು ಆತನ ಉಡುಪನ್ನು ತೆಗೆದು ನೋಡಿದಾಗ ಉಸ್ಮಾನನ ಆಕ್ರಮಣದಿಂದ ಆತನ ಶರೀರದ ಒಂದು ಪಕ್ಕೆಯಲ್ಲಿ ಆಳವಾದ ಗಾಯವಾಗಿತ್ತು. ಅನೇಕ ಜನರು ಸಲೀಂಶಹಾನನ್ನು ನಿಂದಿಸತೊಡಗಿದರು. ಏಕೆಂದರೆ ಉಸ್ಮಾನನಿಗೆ ಸಲೀಂಶಾಹನ ಪ್ರೇರಣೆಯಿಂದಲೇ ಈ ಕೃತ್ಯವು ಜರುಗಿದೆ.

ಪರಿಸ್ಥಿತಿಯನ್ನು ತಿಳಿಯುವ ಪ್ರಯತ್ನ :

ಸಲೀಂಶಾಹನಿಗೆ ಶುಜಾಅಖಾನನು ಗಾಯಗೊಂಡ ಸುದ್ದಿ ತಿಳಿದು, ಆತನು ತನ್ನ ಅಮೀರರಿಗೆ, ದರ್ಬಾರಿಗಳಿಗೆ ಶುಜನ ಆರೋಗ್ಯ ಸ್ಥಿತಿಯನ್ನು ತಿಳಿದುಕೊಂಡು ಬರಲು ಕಳುಹಿಸಿದನು. ತಾನು ಸಹ ಆತನ ಸ್ಥಿತಿಯನ್ನು ಅರಿಯಲು ಶುಜಾಅನ ಮನೆಗೆ ಹೋಗಲು ಇಚ್ಛಿಸಿದನು. ಆದರೆ ಶುಜಾಅನು ಅವನನ್ನು ಬರಲು ತಡೆದನು. ಏಕೆಂದರೆ ಈ ಘಟನೆ ನಡೆಯಲು ಸಲೀಂಶಾಹನೇ ಕಾರಣನೆಂದು ಶುಜಾಅನ ಸಹಾಯಕರು ಚೆನ್ನಾಗಿ ಅರಿತಿದ್ದರು. ಒಂದು ವೇಳೆ ಸಲೀಂಶಾಹನು ಶುಜಾಅಖಾನನ

ಮನೆಗೆ ಬಂದಿದ್ದರೆ, ಇಲ್ಲಿಯ ಜನರು ಆತನ ಮೇಲೆ ಏನಾದರೂ ಅನಾಹುತವನ್ನು ನಡೆಸಬಹುದು ಎಂದು ಶುಜಾಲನಿಗೆ ಗೊತ್ತಿತ್ತು.

ಶುಜಾಲನ ಸಂದೇಶ ಸಲೀಂಶಾಹನಿಗೆ :

ಶುಜಾಲಖಾನನು ಬಾದಶಾಹನ ಹೆಸರಿಗೊಂದು ಸಂದೇಶವನ್ನು–"ನಾನು ಹುಜೂರರ ಮನೆಯ ಆಪ್ತ ಗುಲಾಮನಾಗಿದ್ದೇನೆ. ನಾನು ನಿಮ್ಮ ಸೇವೆಯನ್ನು ಮಾಡುವುದರಲ್ಲಿ ಎಂದೂ, ಯಾವ ಚ್ಯುತಿಯೂ ಬರದಂತೆ ನೋಡಿಕೊಂಡಿದ್ದೇನೆ. ನನ್ನ ಜೀವನ ಮರಣದ ಬಗ್ಗೆಯೂ ನಾನು ಎಂದೂ ಯೋಚಿಸಿಯೂ ಇಲ್ಲ. ನಾನು ಕೇವಲ (೩೬) ಮೂವತ್ತಾರು ಸೈನಿಕರ ಜೊತೆಯಲ್ಲಿ ತಮ್ಮ ಸಾಮ್ರಾಜ್ಯವು ನೆಲೆ ನಿಲ್ಲುವಂತೆ ಮಾಡಲು ಶ್ರಮಿಸಿರುವುದು ಪ್ರಪಂಚಕ್ಕೆ ತಿಳಿದಿದೆ. ಈಗಲೂ ನಾನು ಬದುಕಿದ್ದರೆ, ನಿಮಗೋಸ್ಕರ ಒಂದಲ್ಲ ಒಂದು ದಿನ ನನ್ನ ಪ್ರಾಣವನ್ನೇ ತ್ಯಾಗ ಮಾಡಲು ಸಿದ್ಧನಿದ್ದೇನೆ. ನನ್ನಂಥ ಬಡವನ ಮನೆಗೆ ತಾವು ಬರುವ ಸಾಹಸವನ್ನು ದಯವಿಟ್ಟು ಮಾಡುವುದು ಬೇಡ. ನನ್ನ ಆರೋಗ್ಯವು ಸುಧಾರಿಸಿದ ನಂತರ ನಾನೇ ಖುದ್ದಾಗಿ ಬಂದು ತಮ್ಮನ್ನು ಕಾಣುತ್ತೇನೆಂದು ಬರೆದು ಕಳುಹಿಸಿದನು."

ಸಲೀಂಶಾಹನು ಶುಜಾಲನ ಮನೆಗೆ ಹೋಗುವನು :

ಶುಜಾಲನು ನಿಜವಾಗಿಯೂ ಸಲೀಂಶಾಹನಿಗೆ ತುಂಬಾ ಸಹಾಯವನ್ನು ಮಾಡಿದ್ದನು. ಆತನ ಋಣ ಸಲೀಂಶಾಹನ ಮೇಲೆ ಅಪಾರವಾಗಿತ್ತು. ಸಲೀಂಶಾಹನಿಗೆ ಆ ಘಟನೆಯ ಮೂಲ ಕಾರಣಗಳ ಪರಿಚಯವಾಯಿತು. ಶುಜಾಲನು ಸಲೀಂಶಾಹನ ಮೇಲೆ ಏಕೆ ಕೋಪಗೊಂಡಿದ್ದಾನೆಂಬ ಸತ್ಯವನ್ನು ತಿಳಿದುಕೊಂಡನು. ಮಾರನೇ ದಿನ ಸಲೀಂಶಾಹನು ಶುಜಾಲನ ಆರೋಗ್ಯ ಪರಿಸ್ಥಿತಿಯನ್ನು ಅರಿಯಲು ಆತನ ಮನೆಗೆ ಹೋದನು.

ಬಾದಶಹನ ಕೊಲೆಯ ವ್ಯರ್ಥ ಪ್ರಯತ್ನ :

ಶುಜಾಲಖಾನನ ಆಪ್ತನಾದ ಫತಹ್‌ಖಾನನು ಮಹಾ ಬಲಶಾಲಿಯಾಗಿದ್ದನು. ಆತನು ತನ್ನ ಹೊಡೆತಕ್ಕೆ ಪ್ರಸಿದ್ಧನಾಗಿದ್ದನು. ಆತನು ಸಲೀಂಶಾಹನು ಒಬ್ಬನೇ ಶುಜಾಲನ ಮನೆಗೆ ಬರುತ್ತಿದ್ದಾನೆಂದು ತಿಳಿದು, ಬಾದಶಾಹನನ್ನು ಕೊಲೆ ಮಾಡಬೇಕೆಂದು ನಿರ್ಧರಿಸಿಕೊಂಡನು. ಈ ಕೆಲಸಕ್ಕೆ ಶುಜಲನ ಮಗನಾದ ಬಾಯಜೀದ್‌ನನ್ನೂ ತನ್ನೊಡನೆ ಸೇರಿಸಿಕೊಂಡಿದ್ದನು. ಈ ಸಮಾಚಾರವು ಶುಜಾಲನಿಗೆ ತಿಳಿಯಿತು. ತಕ್ಷಣ ಶುಜಾಲನು ಫತಹಖಾನನನ್ನು ಹತ್ತಿರ ಕರೆದು ಕುದುರೆಗಳನ್ನು ಸಿದ್ಧಪಡಿಸುವ ಕೆಲಸಕ್ಕೆ ತಕ್ಷಣವೇ ಹೋಗಲು ಆಜ್ಞಾಪಿಸಿದನು. ಹೀಗಾಗಿ ಅಂದು ನಡೆಯಬಹುದಾದಂತಹ ದುರ್ಘಟನೆಯು ತಪ್ಪಿ ಹೋಯಿತು.

ಸ್ಪಷ್ಟ ಹೇಳಿಕೆ :

ಇದಾದ ನಂತರ ಶುಜಾಅಖಾನನು ಸಲೀಂಶಾಹನಿಗೆ ಸ್ಪಷ್ಟವಾಗಿ ತಿಳಿಸಿದ್ದುದೇನೆಂದರೆ–"ತಾವು ಇನ್ನು ಮುಂದೆ ಎಂದೂ ನನ್ನಂತಹ ಬಡವನ ಮನೆಗೆ ಬರುವಂತಹ ಕಷ್ಟವನ್ನು ತೆಗೆದುಕೊಳ್ಳಬಾರದು. ಏಕೆಂದರೆ, ನನಗೆ ಹೆದರಿಕೆ ಏನೆಂದರೆ, ನನ್ನ ಆಪ್ತರು ಏನಾದರೂ ಅಸಭ್ಯ ವರ್ತನೆಗಳನ್ನು ನಿಮಗೆ ತೋರಬಹುದು. ಇದರಿಂದ ಉಂಟಾಗಬಹುದಾದಂತಹ ದೂರದ ಪರಿಣಾಮಗಳಿಂದ ತಮ್ಮ ಸಾಮ್ರಾಜ್ಯಕ್ಕೆ ನಷ್ಟ ಉಂಟಾಗಬಹುದು" ಎಂದು ತಿಳಿಸಿದನು.

ಶುಜಾಅಖಾನನು ಸಾರಂಗಪುರಕ್ಕೆ ಹೋದನು :

ಈ ಘಟನೆಯ ಕೆಲವು ದಿನಗಳ ನಂತರ ಶುಜಅನು ಆರೋಗ್ಯ ಸುಧಾರಿಸಿ ಸ್ನಾನವನ್ನು ಪೂರೈಸಿದನು. ನಂತರ ಸಲೀಂಶಾಹನ ಸೇವೆಗೆಂದು ಸಲಾಂ ಪದ್ಧತಿಯನ್ನು ಪೂರೈಸಲು ಹೋದನು. ಬಾದಶಾಹನು ಶುಜಾಅಖಾನನನ್ನು ಬಹಳ ಗೌರವದಿಂದ ಬರಮಾಡಿಕೊಂಡನು. ಆತನಿಗೆ ಅನೇಕ ಬಹುಮಾನ, ಉಡುಗೆಗಳಿಂದ ಸತ್ಕರಿಸಿದನು. ೧೦೦ ಕುದುರೆಗಳು, ಅಷ್ಟೇ ಸಂಖ್ಯೆಯ ರೇಷ್ಮೆ ಉಡುಪುಗಳ ಗಂಟುಗಳನ್ನು ನೀಡಿದನು. ಶುಜಾಅನು ಆತನ ಮನಸ್ಸಿನಲ್ಲಿ ಏನೂ ಕೆಟ್ಟ ಭಾವನೆಯು ಉಳಿದಿಲ್ಲವೆಂದು ತಿಳಿದನು. ಆತನು ಬಾದಶಾಹನಲ್ಲಿ ಸ್ವಲ್ಪ ಹೊತ್ತು ಕುಳಿತನು. ನಂತರ ಅಲ್ಲಿಂದ ಎದ್ದು ತನ್ನ ಮನೆಗೆ ನಡೆದನು. ಆತನು ಅಂದಿನ ದಿನವೇ ತನ್ನ ಆಪ್ತರನ್ನು ಕುರಿತು "ಇಲ್ಲಿಂದ ಇಂದೇ ನಮ್ಮ ಪ್ರಯಾಣ ಆರಂಭವಾಗಲಿ. ಈ ಜಾಗ ತುಂಬಾ ಗಲೀಜಾಗಿದೆ. ಇಲ್ಲಿ ಇರುವುದು ಒಳ್ಳೆಯದಲ್ಲ" ಎಂದನು. ನಂತರ ಶುಜಾಅನು ತನ್ನ ಎಲ್ಲಾ ಸಾಮಾನು ಸರಂಜಾಮುಗಳನ್ನು ತನ್ನೊಂದಿಗೆ ತೆಗೆದುಕೊಂಡು ಸೇವಕರೊಂದಿಗೆ ಸಾರಂಗಪುರದತ್ತ ಹೊರಟನು.

ಶುಜಾಅನನ್ನು ಹಿಂಬಾಲಿಸಿದರು :

ಸಲೀಂಶಾಹನು ಈತನ ಪ್ರಯಾಣದ ಸುದ್ದಿ ತಿಳಿದು ಕೋಪಗೊಂಡನು. ಈ ವರ್ತನೆಯು ಅಸಭ್ಯವಾದುದು ಹಾಗೂ ತಪ್ಪು ಮಾಡಿದ್ದಾನೆಂದು ತಿಳಿದು ತನ್ನ ಸೈನ್ಯವನ್ನು ಆತನನ್ನು ಹಿಂಬಾಲಿಸಲು ಕಳುಹಿಸಿದನು. ತಾನೂ ಸಹ ಸೈನ್ಯದ ಹಿಂದೆಯೇ ನಡೆದನು. ಸಾರಂಗಪುರವನ್ನು ತಲುಪಿದ ಶುಜಾಅನು ಸೈನ್ಯವನ್ನು ಸಂಗ್ರಹಿಸತೊಡಗಿದನು. ಸಲೀಂಶಾಹನು ಬರುತ್ತಿದ್ದಾನೆಂಬ ಸುದ್ದಿ ತಿಳಿದು ತಾನು ಉಳಿದುಕೊಂಡಿರುವ ಮನೆಯನ್ನು ಬದಲಿಸಲು ತೀರ್ಮಾನಿಸಿಕೊಂಡನು. ಕೆಲವರು ಸಲೀಂಶಾಹನೊಂದಿಗೆ ಯುದ್ಧವನ್ನು ಮಾಡುವಂತೆ ಸಲಹೆಯನ್ನು ನೀಡಿದರು. ಇದಕ್ಕೆ ಶುಜಾಅನು ಸಲೀಂಶಾಹನು ನನ್ನ ಚಕ್ರವರ್ತಿಯ ಮಗನಾಗಿದ್ದಾನೆ. ನಾನು ಯಾವುದೇ ಕಾರಣಕ್ಕೂ ಆತನೊಂದಿಗೆ ಯುದ್ಧ ಮಾಡಲು ಇಷ್ಟಪಡುವುದಿಲ್ಲ.

ಆತನ ತಂದೆಯವರ ಉಪಕಾರಗಳು ನನ್ನ ಮೇಲೆ ಬಹಳವಾಗಿವೆ. ನನಗೆ ಇಂತಹ ಸಲಹೆಗಳನ್ನು ಇನ್ನು ಮುಂದೆ ಯಾರೂ ಹೇಳಬಾರದೆಂದೂ ಎಚ್ಚರಿಸಿದನು.

ಶುಜಾಅನು ಪಾನ್‌ಸುವಾಲಕ್ಕೆ ಹೋದನು :

ಶುಜಾಅಖಾನನು ಪಟ್ಟಣದಿಂದ ಹೊರ ಬಂದನು. ಮೊದಲು ಆತನು ತನ್ನ ಹೆಂಗಸರು, ಮಕ್ಕಳನ್ನು ಪಾನ್‌ಸುವಾಲ ಕಡೆಗೆ ಕಳುಹಿಸಿ ತಾನು ಅವರ ಹಿಂದೆಯೇ ಹೊರಟನು. ಸಲೀಂಶಾಹನು ಮಾಳ್ವಾ ದೇಶವನ್ನು ತನ್ನ ವಶಕ್ಕೆ ತೆಗೆದುಕೊಂಡನು. ಆತನು ಈಸಾಖಾನನ ಅಧೀನಕ್ಕೆ ೨೦೦೦ ಸವಾರರನ್ನು, ೨೦ ಆನೆಗಳನ್ನು ಕೊಟ್ಟು ಉಜ್ಜೈನಿಯ ಆಧಿಪತ್ಯಕ್ಕೆ ಆತನನ್ನು ನೇಮಿಸಿ, ತಾನು ಗ್ವಾಲಿಯರ್‌ನತ್ತ ಪ್ರಯಾಣವನ್ನು ಬೆಳೆಸಿದನು.

ಶುಜಾಅಖಾನನ ಕ್ಷಮೆ ಮತ್ತು ಆತನ ನೇಮಕ :

ಶುಜಾಅಖಾನನ ಹತ್ತಿರ ಸೈನ್ಯವು ಇತ್ತು ಹಾಗೂ ಅಧಿಕಾರವೂ ಇತ್ತು. ಆತನು ಇಷ್ಟಪಟ್ಟಿದ್ದರೆ ಏನೆಲ್ಲಾ ಮಾಡಬಹುದಾಗಿತ್ತು. ಆದರೆ ಆತನು ತನ್ನ ಸ್ಥಾನವೇನು? ಎಂಬುದನ್ನು ತಿಳಿದಿದ್ದ. ಮಾಳ್ವ ಸಾಮ್ರಾಜ್ಯಕ್ಕೆ ಯಾವುದೇ ರೀತಿ ಯುದ್ಧಕ್ಕೆ ಹೋಗದಂತೆ ನೋಡಿಕೊಳ್ಳುವುದು ನನ್ನ ಕರ್ತವ್ಯವೆಂದು ತಿಳಿದ. ಇದೇ ಸಂದರ್ಭದಲ್ಲಿ ದೌಲತ್‌ಖಾನ ಎಂಬುವನು ಸಲೀಂಶಾಹ್‌ನಲ್ಲಿ ಶುಜಾಅತ್‌ಖಾನನ ಶಿಫಾರಸ್ಸು ಮಾಡಿದನು. ಹಾಗೂ ಆತನ ತಪ್ಪುಗಳೇನಾದರೂ ಇದ್ದರೆ ಕ್ಷಮಿಸಿ ಬಿಡಲು ಹೇಳಿದನು. ಸಲೀಂಶಾಹನು ದೌಲತ್‌ಖಾನನ ಮಾತನ್ನು ಒಪ್ಪಿಕೊಂಡನು. ಶುಜಾಅಖಾನನು ಸಲೀಂಶಾಹನ ಸೇವೆಯಲ್ಲಿ ಹಾಜರಾದನು. ಬಾದಶಾಹನು ಆತನನ್ನು ಕ್ಷಮಿಸಿದನು. ಬಾದಶಾಹನು ೧೦೦ ಕುದುರೆ ಸವಾರರನ್ನು, ಅಪಾರವಾದ ರೇಷ್ಮೆ ಉಡುಗೆ-ತೊಡುಗೆಗಳನ್ನು ಆತನಿಗೆ ನೀಡಿದನು. ರಾಯ್ಸೀನ್, ಸಾರಂಗಪುರ ಮತ್ತು ಇತರೆ ಪ್ರದೇಶಗಳನ್ನು ಜಾಗೀರಿಯಾಗಿ ನೀಡಿದನು. ಹಾಗೂ ಆತನನ್ನು ಮಾಳ್ವಾದ ಸೇನಾಧಿಪತಿ ಯನ್ನಾಗಿಯೂ ಸ್ವೀಕರಿಸಿದನು. ನಂತರ ಮಾಳ್ವಾಕ್ಕೆ ಹೋಗಲು ಆಜ್ಞಾಪಿಸಿದನು.

ಸಲೀಂಶಾಹನ ಮರಣ :

ಅದೇ ದಿನಗಳಲ್ಲಿ ಸಲೀಂಶಾಹ ಸೂರಿ ಸಲೀಂಶಾಹನು ಮರಣ ಹೊಂದಿದನು. ಆಡಳಿತದ ಲಗಾಮು ಮುಬಾರಕಖಾನನಿಗೆ ಸಿಕ್ಕಿತು. ಆತನು ತನ್ನ ಹಿರಿಯರ ಮಾರ್ಗದಲ್ಲಿಯೇ ನಡೆದನು. ಮಾಳ್ವಾದ ಆಡಳಿತ ಶುಜಅನಿಗೆ ದೊರೆಯಿತು.

ಸಾಮ್ರಾಜ್ಯದ ವಿಭಾಗ :

ಶುಜಾಅಖಾನನು ಮಾಳ್ವಾ ಸಾಮ್ರಾಜ್ಯವನ್ನು ತನ್ನ ಮಕ್ಕಳಲ್ಲಿ ಹಾಗೂ ಆಪ್ತರಲ್ಲಿ ಹಂಚಿಕೊಟ್ಟನು. ಉಜ್ಜೈನಿ ಮತ್ತು ಅದರ ಸುತ್ತಲಿನ ಪ್ರದೇಶಗಳನ್ನು ದೌಲತ್‌ಖಾನನಿಗೆ

ನೀಡಿದನು. ತನ್ನ ಕಿರಿಯ ಮಗನಾದ ಮಲಿಕ್ ಮುಸ್ತಫಾ ಎಂಬುವವನಿಗೆ ರಾಯ್ಸೀನ್ ಮತ್ತು ಭೇಲ್ಸಾ ಪ್ರದೇಶದ ಶಾಸಕನನ್ನಾಗಿ ನೇಮಿಸಿದನು. ತಾನು ಸ್ವತಃ ಸಾರಂಗಪುರದಲ್ಲಿ ನೆಲೆಸಿದನು. ಅಲ್ಲಿಂದ ಮುಂದಿನ ಅನೇಕ ವರ್ಷಗಳ ತನಕ ಸಂತೋಷದಿಂದ ಜೀವನವನ್ನು ನಡೆಸಿದನು.

ಬಾದಶಹತ್ವದ ಕನಸು :

ಯಾವ ಕಾಲದಲ್ಲಿ ದೆಹಲಿಯ ಸಾಮ್ರಾಜ್ಯದಲ್ಲಿ ಅಲ್ಲೊಲ್ಲ-ಕಲ್ಲೊಲ್ಲ ಪರಿಸ್ಥಿತಿ ಉಂಟಾಯಿತೋ ಆಗ ಎಲ್ಲೆಲ್ಲೂ ಅರಾಜಕತೆ ಉಂಟಾಯಿತು. ಸಂಕಷ್ಟದ ಕಾಲದಲ್ಲಿ ಜನರು ತುಂಬಾ ತೊಂದರೆಗಳಿಗೆ ತುತ್ತಾದರು. ಪ್ರತಿಯೊಬ್ಬನೂ ಸ್ವತಂತ್ರವಾಗಿ ವರ್ತಿಸುತ್ತಿದ್ದನು. ಎಲ್ಲರೂ ಬಾದಶಾಹರಾಗಲೂ ಕುಣಿಯುತ್ತಿದ್ದರು. ಶುಜಅನು ಸಹ ಮಾಳ್ವಾದಲ್ಲಿ ತನ್ನ ಹೆಸರಿನ ಖುತ್ಬಾ ಮತ್ತು ಮುದ್ರೆಯ ಚಲಾವಣೆಯನ್ನು ಮಾಡುವ ಕನಸನ್ನು ಕಂಡನು. ಆದರೆ ಮರಣದ ಕ್ರೂರ ಕೈಗಳು ಆತನಿಗೆ ಬಿಡಲಿಲ್ಲ.

ಮರಣ :

ಹಿಜರಿ ಶಕೆ ೯೬೨ರಲ್ಲಿ ಶುಜಅಖಾನನು ಮರಣ ಹೊಂದಿದನು. ೧೨ ವರ್ಷಗಳ ತನಕ ಮಾಳವಾದ ಶಾಸಕನಾಗಿ ಆಳಿದನು. ಉಜ್ಜೈನಿಯ ಹತ್ತಿರ ಶುಜಾವಲ್‌ಪುರ ಎಂಬ ಹೆಸರಿನ ಕಸಬಾ ಊರು ಅವನಿಂದಲೇ ಕಟ್ಟಲ್ಪಟ್ಟಿತ್ತು. ಮಾಳವಾದಲ್ಲಿ ಈ ಕಸಬಾವನ್ನು ಬಿಟ್ಟು ಇನ್ನೂ ಅನೇಕ ಕುರುಹುಗಳು ಈತನ ಹೆಸರನ್ನು ಹೇಳುತ್ತವೆ.

ಶುಜಾಅಖಾನನ ನಂತರ ಆತನ ಮಗ ಬಾಯಜೀದನು "ಬಾಜ್ ಬಹಾದುರ್" ಎಂಬ ಹೆಸರಿನಲ್ಲಿ ತಂದೆಯ ಸಿಂಹಾಸನವನ್ನೇರಿದನು.

■

*

೪. ಬಾಜ್ ಬಹಾದುರ್

ದೌಲತಖಾನನೊಂದಿಗೆ ಯುದ್ಧ ಮತ್ತು ಒಪ್ಪಂದ :

ಶುಜಾಅಖಾನನ ಮರಣದ ನಂತರ ಆತನ ಹಿರಿಯ ಮಗನಾದ ಬಾಯಜೀದನು ಹಿಂದವಿಯಾದಿಂದ ಸಾರಂಗಪುರಕ್ಕೆ ಬಂದನು. ಆತನು ತನ್ನ ತಂದೆಯ ಸಿಂಹಾಸನವನ್ನು ತನ್ನ ಸ್ಥಾನಕ್ಕೆ ಪಡೆದನು. ಸುಲ್ತಾನ ಸಲೀಂಶಾಪನ ದರ್ಬಾರಿನ ಒಬ್ಬ ಪ್ರಖ್ಯಾತ ಅಮೀರನಾದ ದೌಲತ್‌ಖಾನನು ಬಹಳ ಹೆಸರುವಾಸಿಯಾಗಿದ್ದನು. ಈತನು ಬಾಯಜೀದನನ್ನು ಇಷ್ಟಪಡುತ್ತಿರಲಿಲ್ಲ. ಕೆಟ್ಟದೃಷ್ಟಿಯಲ್ಲೇ ಆತನನ್ನು ಕಾಣುತ್ತಿದ್ದನು. ಆತನ ಮೇಲೆ ಯುದ್ಧ ಮಾಡಲು ಇಚ್ಛಿಸಿದನು. ಮಾಳವಾದ ಎಲ್ಲ ಸೈನ್ಯವೂ ದೌಲತ್‌ಖಾನನ ಪಕ್ಷದಲ್ಲಿದ್ದರೂ ಬಾಯಜೀದನು ಈ ಜಗಳವನ್ನು ತಪ್ಪಿಸಲು ತನ್ನ ತಾಯಿಯ ಜೊತೆಯಲ್ಲಿ ಕೆಲ ಗೌರವಾನ್ವಿತ ವ್ಯಕ್ತಿಗಳ ಸಮೇತ ದೌಲತ್‌ಖಾನನ ಹತ್ತಿರ ಕಳುಹಿಸಿದನು. ಕೊನೆಗೆ ತೀರ್ಮಾನವಾದುದ್ದೇನೆಂದರೆ–ಉಜ್ಜೈನ್, ಮಾಂಡು ಮುಂತಾದ ಪ್ರದೇಶಗಳ ಆಡಳಿತವು ದೌಲತ್‌ಖಾನನಿಗೆ ಸೇರಬೇಕೆಂದು, ಸಾರಂಗಪುರ, ಸಿವಾಸ್, ಸರ್‌ವಹಿ, ಬಿರಾಹ ಮತ್ತು ಬಿಲ್ವಾರಗಳು ಮಲಿಕ್ ಬಾಯಜೀದನ ವಶದಲ್ಲಿರಬೇಕೆಂದೂ, ರಾಯ್ಸೀನ್, ಭೇಲ್ಸಾ ಮುಂತಾದ ಪ್ರದೇಶಗಳು ಮುಸ್ತಫಾನ ಆಡಳಿತದಲ್ಲಿರಬೇಕೆಂದು ಒಪ್ಪಂದವಾಯಿತು.

ದೌಲತಖಾನನ ಕೊಲೆ :

ಈ ಒಪ್ಪಂದದ ನಂತರ ಬಾಯಜೀದನು ಒಂದು ದುಷ್ಟನೀತಿಯನ್ನು ಅನುಸರಿಸಿದನು. ಆತನು ಉಜ್ಜೈನಿಯ ಕಡೆಗೆ ಪ್ರಯಾಣವನ್ನು ಬೆಳೆಸಿದನು. ಎಲ್ಲರಿಗೂ ಹೇಳಿದ್ದೇನೆಂದರೆ ನಾನು ದೌಲತಖಾನನ ಹತ್ತಿರ ಶುಜಅಖಾನನ ಹೊಗಳಿಕೆಯನ್ನು ಕೇಳಲು ಹೋಗುತ್ತಿದ್ದೇನೆಂದು, ಆದರೆ ವಾಸ್ತವ ಸ್ಥಿತಿಯೇ ಬೇರೆ ಇತ್ತು. ಆತನು ದೌಲತಖಾನನನ್ನು ಕೊಂದು ಆತನ ವಶದಲ್ಲಿರುವ ಪ್ರದೇಶಗಳನ್ನು ತನ್ನ ವಶಕ್ಕೆ ತೆಗೆದುಕೊಳ್ಳುವುದೇ ಆಗಿತ್ತು. ದೌಲತ್‌ಖಾನನಿಗೆ ಬಾಯಜೀದನ ಕಪಟ ಅರ್ಥವಾಗಲಿಲ್ಲ.

ಈ ಕಾರಣದಿಂದಾಗಿ ಆತನು ಬಾಯಜೀದನ ಕೈಯಿಂದ ಹತನಾದನು. ಬಾಯಜೀದನು ದೌಲತ್‌ಖಾನನ ತಲೆಯನ್ನು ಶರೀರದಿಂದ ಬೇರ್ಪಡಿಸಿ ಸಾರಂಗಪುರಕ್ಕೆ ಕಳುಹಿಸಿದನು. ಆ ತಲೆಯನ್ನು ಸಾರಂಗಪುರದ ಕೋಟೆಯ ಬಾಗಿಲಿಗೆ ನೇತು ಹಾಕಿದನು. ಇದಾದ ನಂತರ ಬಾಯಜೀದನು ಮಾಳವಾದ ಅನೇಕ ಪ್ರದೇಶಗಳನ್ನು ತನ್ನ ಆಡಳಿತಕ್ಕೆ ಸೇರಿಸಿಕೊಂಡನು.

ಬಾದಶಾಹತ್ವ :

ಹಿಜರಿ ೯೬೩ರಲ್ಲಿ ಮಲಿಕ್ ಬಾಯಜೀದನು ಬಾದಶಾಹರ ಯೋಗ್ಯ ಛತ್ರ, ಚಾಮರ, ಕೆಂಪು ಪರದೆಗಳನ್ನು ತನ್ನ ತಲೆಯ ಮೇಲೆ ಇಡಲಾರಂಭಿಸಿ, ತನ್ನ ಹೆಸರಿನ ಖುತ್ಬಾ ಮತ್ತು ಮುದ್ರೆಗಳನ್ನು ಜಾರಿಗೊಳಿಸಿದನು. ಆತನು ತನ್ನ ಹೆಸರನ್ನು ಬದಲಾಯಿಸಿಕೊಂಡು "ಬಾಜ್ ಬಹಾದುರ್" ಎಂದೆನಿಸಿದ್ದನು. ನಂತರ ತನ್ನ ಪ್ರದೇಶಗಳನ್ನು ಉತ್ತಮ ಪಡಿಸಿಕೊಂಡು ಬಾಜ್‌ಬಹಾದುರನು ರಾಯ್ಸೀನ್‌ನತ್ತ ಕಣ್ಣು ಹಾಯಿಸಿದನು. ಇಲ್ಲಿ ತನ್ನ ಸಹೋದರನಾದ ಮುಸ್ತಫಾನ ಆಡಳಿತವಿತ್ತು. ಸಹೋದರನು ಅಣ್ಣನನ್ನು ಎದುರಿಸಿದನು.

ರಾಯ್ಸೀನ್ ಮತ್ತು ಭೇಲ್ಸಾಗಳ ವಶ :

ಇಬ್ಬರು ಸಹೋದರರಲ್ಲಿ ಯುದ್ಧವು ಪ್ರಾರಂಭವಾಯಿತು. ಮಲಿಕ್ ಮುಸ್ತಫಾನು ಬಹಳ ವೀರನೂ ಧೈರ್ಯಶಾಲಿ ಯುವಕನೂ ಆಗಿದ್ದನು. ಅಣ್ಣನ ದುಷ್ಟನೀತಿಯಿಂದ ತಾನು ಸೋತನು. ಈ ಕಾರಣದಿಂದಾಗಿ ರಾಯ್ಸೀನ್ ಮತ್ತು ಭೇಲ್ಸಾಗಳು ಅಣ್ಣನ ವಶವಾದುವು.

ಕದ್ವಾಲದ ಗೆಲುವು :

ಇದಾದ ನಂತರ ಬಾಜ್‌ಬಹಾದೂರನು ಕದ್ವಾಲವನ್ನು ಗೆದ್ದುಕೊಳ್ಳುವ ಆಸೆಯನ್ನು ತೋರಿದನು. ಬಾಜ್‌ಬಹಾದೂರನ ಕೆಲವು ಸರದಾರರು ಇವನೊಂದಿಗೆ ಅವಿಧೇಯರಾಗಿ ನಡೆದುಕೊಳ್ಳುತ್ತಿದ್ದರು. ಬಾಜ್‌ಬಹಾದೂರನು ಅವರನ್ನೆಲ್ಲಾ ಸೆರೆಹಿಡಿದು ಒಂದು ಬಾವಿಯಲ್ಲಿ ಎಸೆಯಲು ಆಜ್ಞಾಪಿಸಿದನು. ಅವರೆಲ್ಲರೂ ಆ ಬಾವಿಯಲ್ಲಿ ಸತ್ತರು. ಶತ್ರುವಿನೊಡನೆ ಬಹಳ ದಿನಗಳ ತನಕ ಯುದ್ಧವನ್ನು ಮಾಡಿ ಕೊನೆಗೆ ಕಾದ್ವಾಲವನ್ನು ಗೆದ್ದನು. ಇದೇ ಸಂದರ್ಭದಲ್ಲಿ ಬಾಜ್‌ಬಹಾದೂರನ ಚಿಕ್ಕಪ್ಪ (ಚಿಕ್ಕಮ್ಮನ ಗಂಡ)ನು ಯುದ್ಧದಲ್ಲಿ ಗುಂಡು ತಗುಲಿ ಸತ್ತನು. ಬಾಜ್‌ಬಹಾದೂರನು ಫತಹ್‌ಖಾನನ ಜಾಗದಲ್ಲಿ ಆತನ ಮಗನನ್ನು ನೇಮಿಸಿದನು. ಅಲ್ಲಿಂದ ವಾಪಸ್ ಸಾರಂಗಪುರಕ್ಕೆ ಬಂದನು.

ರಾಣಿ ದುರ್ಗಾವತಿಯೊಂದಿಗೆ ಯುದ್ಧ :

ಕೆಲವು ದಿನಗಳ ನಂತರ ಬಾಜ್‌ಬಹಾದೂರನು ರಾಜಾಕುಂಭನೊಂದಿಗೆ ಯುದ್ಧ

ಮಾಡಲು ಹೊರಟನು. ಬಾಜ್ ಬಹಾದೂರನು ಅಲ್ಲಿಗೆ ತಲುಪಿದಾಗ ಗೊತ್ತಾಗಿದ್ದೇನೆಂದರೆ, ಅಲ್ಲಿನ ಶಾಸನ, ಆಡಳಿತವನ್ನು ತನ್ನ ಗಂಡನ ಮರಣಾನಂತರ ರಾಣಿ ದುರ್ಗಾವತಿಯು ನಡೆಸುತ್ತಿದ್ದಳು. ರಾಣಿಯು ಕೋಂದರನ್ನು ಸಂಗ್ರಹಿಸಿ ಖಾಟಿ ಎಂಬಲ್ಲಿ ಬಾಜ್ ಬಹಾದೂರನನ್ನು ಎದುರಿಸಲು ಬರುತ್ತಿದ್ದಾಳೆಂಬುದು. ಆಕೆಯ ಸೈನಿಕರು ಸಂಖ್ಯೆಯಲ್ಲಿ ಹೆಚ್ಚಾಗಿದ್ದರು. ಯುದ್ಧವು ನಡೆಯಿತು. ಆ ರಾಣಿಯ ಕಾಲಾಳುಗಳು ಬಾಜ್‌ಬಹಾದೂರನನ್ನು ಸುತ್ತುವರಿದರು.

ಬಾಜ್‌ಬಹಾದೂರನ ಸೋಲು :

ಬಾಜ್‌ಬಹಾದೂರನು ಈ ಪರಿಸ್ಥಿತಿಯಿಂದ ತುಂಬಾ ವಿಚಲಿತನಾದನು. ಮೈದಾನದಿಂದ ಓಡಿ ಹೋಗಲು ವಿವಶನಾದನು. ಈತನ ಸೈನ್ಯದ ಒಂದು ಭಾಗವು ಯುದ್ಧದಲ್ಲಿ ಹತವಾದರೂ ಬಾಜ್‌ಬಹಾದೂರನು ಬಹಳ ಕಷ್ಟಪಟ್ಟುಕೊಂಡು ಸಾರಂಗಪುರವನ್ನು ತಲುಪಿದನು. ಆತನು ತನ್ನ ಸೋಲಿನ ಸೇಡನ್ನು ತೀರಿಸಿಕೊಳ್ಳುವ ಇಚ್ಛೆಯನ್ನು ಕೈ ಬಿಟ್ಟನು. ತನ್ನ ಆಯಾಸವನ್ನು ದೂರ ಮಾಡಿಕೊಳ್ಳಲು ಭೋಗ ವಿಲಾಸದಲ್ಲಿ ಮುಳುಗಿದನು.

ಸಂಗೀತದ ಕಡೆಗೆ ತುಂಬಾ ಆಸಕ್ತನಾದನು :

ಬಾಜ್‌ಬಹಾದೂರನಿಗೆ ಸಂಗೀತ, ಕಲೆ ಎಂದರೆ ತುಂಬಾ ಆಸಕ್ತಿಯನ್ನು ತೋರುತ್ತಿದ್ದನು. ಆತನು ಸಂಗೀತಕಲೆಯಲ್ಲಿ ಪಾರಂಗತರಾದ ಅನೇಕ ಸ್ತ್ರೀಯರನ್ನು ತನ್ನ ಸುತ್ತಲೂ ಸೇರಿಸಿಕೊಂಡಿರುತ್ತಿದ್ದನು. ಈ ಆಸಕ್ತಿಯಲ್ಲಿ ಮುಳುಗಿದ ಬಾಜ್‌ಬಹಾದೂರನು ರಾಜ್ಯದ ಆಡಳಿತದ ಕಡೆಗೆ ಗಮನವನ್ನು ನೀಡುತ್ತಿರಲಿಲ್ಲ. ಆತನ ಪೂರ್ಣ ಸಮಯ ಸಂಗೀತ ಕಛೇರಿಯಲ್ಲೇ ಕಳೆಯುತ್ತಿತ್ತು.

ರೂಪಮತಿಯೊಂದಿಗೆ ಪ್ರೇಮ :

ಒಬ್ಬ ಸಂಗೀತದ ವಿದುಷಿಯ ಹೆಸರು ರೂಪಮತಿ ಎಂದಿತ್ತು. ಆಕೆಯು ಅವನ ಕಣ್ಣಲ್ಲಿ ತುಂಬಿಕೊಂಡಿದ್ದಳು ಆಕೆಯ ಸೌಂದರ್ಯ, ಕಂಠ ಮಾಧುರ್ಯಗಳೆರಡೂ ಬಾಜ್‌ಬಹಾದೂರನನ್ನು ಆಕರ್ಷಿಸಿದ್ದವು. ಬಾಜ್‌ಬಹಾದೂರನು ಆಕೆಯನ್ನು ಬಹಳವಾಗಿ ಪ್ರೀತಿಸುತ್ತಿದ್ದನು. ರೂಪಮತಿಯು ತನ್ನ ಪ್ರೇಮಿಯನ್ನು ಹೃದಯಪೂರ್ವಕವಾಗಿ ಪ್ರೇಮಿಸುತ್ತಿದ್ದಳು. ಇಬ್ಬರೂ ಒಬ್ಬರನ್ನೊಬ್ಬರು ಒಂದು ಕ್ಷಣವೂ ಬಿಟ್ಟಿರುತ್ತಿರಲಿಲ್ಲ. ಅವರಿಬ್ಬರ ಪ್ರೇಮದ ಕಥೆ ಸಂಪೂರ್ಣ ಹಿಂದೂಸ್ತಾನದಲ್ಲಿ ಹರಡಿತು.

ಮಾಳವದ ಮೇಲೆ ಅಕ್ಬರನ ಕಣ್ಣು :

ಬಾಜ್‌ಬಹಾದೂರನು ರಾಜಕಾರ್ಯಗಳಿಂದ ಸಂಪೂರ್ಣವಾಗಿ ವಿರಕ್ತಿಯನ್ನು ಹೊಂದಿದ್ದನು. ಸೈನ್ಯದಲ್ಲೂ ಯಾವ ಉತ್ಸಾಹವಾಗಲಿ, ತರಬೇತಿಯಾಗಲೀ

ಇಲ್ಲದಂತೆಯೇ ಆಗಿತ್ತು. ಈ ಸಮಾಚಾರವು ದೆಹಲಿಯ ಜಲಾಲುದ್ದೀನ ಅಕ್ಬರನಿಗೆ ತಿಳಿಯಿತು. ಆತನು ಮಾಳವವನ್ನು ಗೆಲ್ಲಬೇಕೆಂದು ನಿಶ್ಚಯಿಸಿದನು. ಅಕ್ಬರನು ಹಿಜರಿ ೯೬೮ರಲ್ಲಿ ತನ್ನ ಅಮೀರರ ಒಂದು ಗುಂಪನ್ನು ಓಧಮ್‌ಖಾನನ ನೇತೃತ್ವದಲ್ಲಿ ಮಾಳವ ದೇಶವನ್ನು ಗೆಲ್ಲಲು ಕಳುಹಿಸಿದನು.

ಮೊಗಲ ಸೈನ್ಯ ಮಾಳವದಲ್ಲಿ :

ಬಾಜ್‌ಬಹಾದೂರನಂತೂ ಪ್ರೇಮ, ಸಂಗೀತದಲ್ಲಿ ಎಷ್ಟೂ ಮುಳುಗಿದ್ದನೆಂದರೆ– ಆತನಿಗೆ ಅಕ್ಬರನು ಏನು ಮಾಡುತ್ತಿದ್ದಾನೆಂಬ ಯಾವ ಸುದ್ದಿಯುನ್ನೂ ತಿಳಿದುಕೊಳ್ಳಲಾರದಷ್ಟು ತಲ್ಲೀನನಾಗಿದ್ದನು. ಅಕ್ಬರನ ಸೈನ್ಯವು ಮಾಳವ ದೇಶದಲ್ಲಿ ಪ್ರವೇಶಿಸಿದಾಗ ಆತನ ಕಣ್ಣುಗಳು ತೆರೆದವು. ಬಾಜ್‌ಬಹಾದೂರನು ಬೇಗ ಬೇಗ ಅವಸರದಲ್ಲಿ ಎಷ್ಟೂ ಸಾಧ್ಯವೋ ಅಷ್ಟನ್ನು ಸರಿಪಡಿಸಿದನು. ಸಾಕಷ್ಟು ತಯಾರಿ ಇರಲಿಲ್ಲ. ಹೆಂಗಸರ ಗುಂಪಿನ ಮಧ್ಯದಿಂದ ಅವಸರ–ಅವರಸವಾಗಿ ಶತ್ರು ಸೈನ್ಯದತ್ತ ಹೋದನು. ಯುದ್ಧ ಮೈದಾನವು ಸಾರಂಗಪುರದಿಂದ ಒಂದು ಮೈಲಿ ದೂರದಲ್ಲಿತ್ತು.

ಬಾಜ್‌ಬಹಾದೂರನ ಪಲಾಯನ :

ಬಾಜ್‌ಬಹಾದೂರನು ಯುದ್ಧಕ್ಕೆ ಎದುರಾಗಲು ನಿಶ್ಚಯಿಸಿದನು. ಶಕ್ತಿಯೂ ಕಡಿಮೆ ಇತ್ತು. ಶತ್ರುವಿನ ಎದುರಿಗೆ ನಿಲ್ಲುವಷ್ಟು ಸಾಮರ್ಥ್ಯವೂ ಇರಲಿಲ್ಲ. ಆತನು ಮೊಘಲರ ಸೈನ್ಯವನ್ನು ನೋಡಿಯೇ ಬೆದರಿದನು. ಆತನು ಮಾಳವದ ಗಡಿಯ ಅಂತ್ಯದಲ್ಲಿನ ಒಂದು ಪ್ರದೇಶಕ್ಕೆ ಹೋಗಲು ತೀರ್ಮಾನಿಸಿಕೊಂಡನು. ಆತನು ತನ್ನ ಆಪ್ತರ ಒಂದು ಗುಂಪನ್ನು ಒಂದು ಕೆಲಸಕ್ಕೆ ನೇಮಿಸಿದನು. ಅದೆಂದರೆ ಒಂದು ವೇಳೆ ನಾನು ಯುದ್ಧದಲ್ಲಿ ಸೋತರೆ, ಆ ಹಾಡುಗಾರ್ತಿಯರಾದ ಎಲ್ಲ ಸ್ತ್ರೀಯರನ್ನು ಕೊಲೆ ಮಾಡಲು ಹೇಳಿದ್ದನು.

ಹಾಡುಗಾರ್ತಿಯರ ಅಂತ್ಯ :

ಬಾಜ್‌ಬಹಾದೂರನಿಗೆ ಸೋಲಾಯಿತು. ನಿಗದಿತ ಕೆಲಸಗಾರರು ತಮ್ಮ ಯಜಮಾನನು ಹೇಳಿರುವ ಕೆಲಸವನ್ನು ಮಾಡಿ ಮುಗಿಸಲು ತಮ್ಮ ಕತ್ತಿಗಳನ್ನು ಹಿರಿದರು. ರೂಪಮತಿ ಮತ್ತು ಇತರೆ ಹಾಡುಗಾರ್ತಿಯರನ್ನು ಕೊಲೆಗಾರರು ಅವರ ಚಿಂತಾಕ್ರಾಂತ ಸ್ಥಿತಿಯಲ್ಲಿದ್ದವರನ್ನು ಗಾಯಗೊಳಿಸಿದರು. ಆ ಸ್ತ್ರೀಯರು ಬೆದರಿ ಅತ್ತಿತ್ತ ಓಡಿದರು. ಕೊಲೆಗಡುಕರ ಭಯದಿಂದ ಆ ಸ್ತ್ರಿಯರೆಲ್ಲರೂ ಒಂದು ಗುಂಪಾಗಿ ಬಾಜ್ ಬಹಾದೂರನ ಹಿಂದೆಯೇ ಓಡಿದರು.

ರೂಪಮತಿಯ ಹುಡುಕಾಟ :

ಮೊಗಲ ಸೇನಾಧಿಪತಿ ಓಧಮ್‌ಖಾನನು ಪಟ್ಟಣದಲ್ಲಿ ಪ್ರವೇಶಿಸಿದನು. ಅಲ್ಲಿನ

ಎಲ್ಲ ಸ್ತ್ರೀಯರನ್ನು ತನ್ನ ವಶಕ್ಕೆ ಪಡೆದನು. ಅವರೆಲ್ಲರನ್ನೂ ಪ್ರಶ್ನಿಸಿದ್ದೇನೆಂದರೆ–ರೂಪಮತಿ ಎಲ್ಲಿದ್ದಾಳೆ ಎಂದು. ಆ ಹೆಂಗಸರು ಹೇಳಿದ್ದೇನೆಂದರೆ–ರೂಪಮತಿಯು ಆ ಅರಮನೆಯಲ್ಲಿ ತನ್ನ ಸಖಿಯರೊಂದಿಗೆ ಕೊಲೆಯಾಗಿ ಬಿದ್ದಿದ್ದಾಳೆ, ಎಂದರು. ಈ ಮಾತಿನ ಸತ್ಯಾಸತ್ಯತೆಯನ್ನು ಪರೀಕ್ಷಿಸಲು ಊಧಂಖಾನನು ರೂಪಮತಿಯ ಅರಮನೆಗೆ ಕೆಲವು ಸೈನಿಕರನ್ನು ಕಳುಹಿಸಿದನು. ಆ ಸೈನಿಕರು ಹೋಗಿ ನೋಡಿದರು. ಅವರಿಗೆ ಗೊತ್ತಾಗಿದ್ದುದೇನೆಂದರೆ–ರೂಪಮತಿ ಮತ್ತು ಆಕೆಯ ಕೆಲ ಸಖಿಯರು ಗಾಯಗೊಂಡು ಬಿದ್ದಿದ್ದಾರೆಂದು ಅವರು ಇನ್ನೂ ಜೀವಂತವಾಗಿದ್ದಾರೆಂದು ತಿಳಿಯಿತು.

ಊಧಂಖಾನನ ಸಂದೇಶ ರೂಪಮತಿಯ ಹೆಸರಿಗೆ :

ಊಧಂಖಾನನಿಗೆ ರೂಪಮತಿಯು ಜೀವಂತವಾಗಿದ್ದಾಳೆಂಬ ಸುದ್ದಿ ತಿಳಿದು ಸಂತೋಷಪಟ್ಟನು. ಆತನು ಬಹಳ ಹಿಂದೆಯೇ ಆಕೆಯ ಸೌಂದರ್ಯ ಮತ್ತು ಸಂಗೀತದ ಕೀರ್ತಿಯನ್ನು ಕೇಳಿದ್ದನು. ಆದ್ದರಿಂದಲೇ ಆತನು ಆಕೆಯ ಬಗ್ಗೆ ಆಸಕ್ತಿಯನ್ನು ತಳೆದನು. ಊಧಾಂಖಾನನು ಆಕೆಯ ಹೆಸರಿನಲ್ಲಿ ಒಂದು ಪತ್ರವನ್ನು ಬರೆದು ಈ ಸಂದೇಶವನ್ನು ಕಳುಹಿಸಿದನು. "ನೀನು ಒಳ್ಳೆಯ ಔಷಧಗಳನ್ನು ತೆಗೆದುಕೊಂಡು ನಿನ್ನ ಆರೋಗ್ಯವನ್ನು ಸುಧಾರಿಸಿಕೋ ನೀನು ಪೂರ್ಣ ಗುಣಮುಖಳಾದಾಗ ನಾನು ನಿನ್ನನ್ನು ಬಾಜ್‌ಬಹಾದೂರನ ಹತ್ತಿರಕ್ಕೆ ಕಳುಹಿಸಿಕೊಡುತ್ತೇನೆ ಎಂದು.

ರೂಪಮತಿಯ ಆರೋಗ್ಯ ಸುಧಾರಿಸಿತು :

ಈ ಮಾತನ್ನು ಕೇಳಿದ ರೂಪಮತಿಯಲ್ಲಿ ಧೈರ್ಯ ಉಲ್ಬಣಿಸಿತು. ಆಕೆಯು ಊಧಂಖಾನನಿಗೆ ಕೃತಜ್ಞತೆಯನ್ನು ತಿಳಿಸಿದಳು. ನಂತರ ಆಕೆಯೂ ತನ್ನ ಆರೋಗ್ಯವನ್ನು ಸುಧಾರಿಸಿಕೊಳ್ಳುವತ್ತ ಗಮನವನ್ನು ನೀಡಿದಳು. ಆಕೆಯು ಒಳ್ಳೆಯ ವೈದ್ಯರಿಂದ ಚಿಕಿತ್ಸೆಯನ್ನು ಪಡೆದಳು. ಇದರಿಂದಾಗಿ ಗಾಯುಗಳು ತುಂಬಿಕೊಂಡು ಮಾಯುತೊಡಗಿದವು. ಆರೋಗ್ಯ ಸುಧಾರಿಸಿದ ನಂತರ ರೂಪಮತಿಯು ಊಧಂಖಾನನಿಗೆ ವಿಷಯವನ್ನು ತಿಳಿಸಿದಳು. ಈಗ ನಾನು ಅಲ್ಲಾಹನ ಕೃಪೆಯಿಂದ ಪೂರ್ಣ ಗುಣಮುಖಳಾಗಿದ್ದೇನೆ. ತಾವು ಕೊಟ್ಟ ಮಾತಿನಂತೆ ನನ್ನನ್ನು ಬಾಜ್‌ಬಹಾದೂರನ ಹತ್ತಿರ ತಲುಪಿಸಿ ಎಂದಳು. ನಾನು ನಿಮ್ಮ ಈ ಉಪಕಾರವನ್ನು ಎಂದಿಗೂ ಮರೆಯುವುದಿಲ್ಲ.

ದುರಾಶೆ ಮತ್ತು ಕಾಮುಕತೆಗೆ ನ್ಯಾಯವೆಲ್ಲಿ ? :

ಊಧಂಖಾನನಿಗೆ ಕಾಮಪೀಡೆಯ ಭೂತವು ತಲೆಗೇರಿತ್ತು. ಅಂದು ಮಾತು ಕೊಡುವ ದಿನದಂದು ತಾನೆ ಯಾವ ಪ್ರಾಮಾಣಿಕತೆಯಲ್ಲಿ ಹೇಳಿದ್ದ? ಆತನು ರೂಪಮತಿಗೆ ಕೊಟ್ಟ ಉತ್ತರವೆಂದರೆ–"ಬಾಜ್‌ಬಹಾದೂರನು ಬಾದಶಾಹನ ವಿದ್ರೋಹಿಯಾಗಿದ್ದಾನೆ. ಒಂದು ವೇಳೆ ಆತನು ಬಾದಶಾಹರಿಗೆ ಕಪ್ಪ–ಕಾಣಿಕೆಗಳನ್ನು

ಕೊಟ್ಟು ತನ್ನ ತಪ್ಪುಗಳಿಗೆ ಕ್ಷಮೆಯಾಚಿಸದ್ದಿದ್ದರೆ ನಾನು ನಿನ್ನನ್ನು ಆತನ ಹತ್ತಿರಕ್ಕೆ ಕಳುಹಿಸುತ್ತಿದ್ದೆ. ಆದರೆ ಈಗ ಪರಿಸ್ಥಿತಿಯೇ ಬೇರೆಯಾಗಿದೆ. ಒಂದು ವೇಳೆ ನಾನು ಬಾದಶಾಹರ ಅನುಮತಿ ಇಲ್ಲದೆ ನಿನ್ನನ್ನು ಬಾಜ್‌ಬಹಾದೂರನ ಹತ್ತಿರ ಏನಾದರೂ ಕಳುಹಿಸಿದರೆ ಬಾದಶಾಹರು ನನ್ನ ಮೇಲೆ ಕೋಪಗೊಳ್ಳುವರು.

ಪ್ರೀತಿಗೆ ನಿಷ್ಠಳಾದ ರೂಪಮತಿ :

ಇದಾದ ನಂತರ ಊಧಂಖಾನನು ತನ್ನ ಆಪ್ತ ಹಾಗೂ ರಹಸ್ಯವನ್ನು ಕಾಪಾಡುವ ವ್ಯಕ್ತಿಯನ್ನು ರೂಪಮತಿಯ ಹತ್ತಿರ ಅರ್ಧರಾತ್ರಿಯಲ್ಲಿ ಅವಳೊಂದಿಗೆ ಸೇರುವ ಅಭಿಲಾಷೆಯನ್ನು ತಿಳಿಸಲು ಕಳುಹಿಸಿದನು. ರೂಪಮತಿಯು ಬಹಳ ಬುದ್ಧಿವಂತಳು. ಊಧಂಖಾನನ ನೀತಿಯನ್ನು ಅರ್ಥಮಾಡಿಕೊಂಡಳು. ಒಂದು ವೇಳೆ ನಾನು ಆತನ ಮಾತನ್ನು ಕೇಳದಿದ್ದರೆ ಬಲಾತ್ಕಾರದಿಂದಲಾದರೂ ನನ್ನನ್ನು ಪೀಡಿಸಬಹುದು. ಒಂದು ವೇಳೆ ನಾನು ಆತನಲ್ಲಿ ಅನುರಕ್ತಳಾದರೂ ಪ್ರೇಮ–ಪ್ರೀತಿಯ ಘನತೆ ಗೌರವಗಳು ಉಳಿಯಲಾರವು. ರೂಪಮತಿಯೂ ಬಾಜ್‌ಬಹಾದೂರನನ್ನು ಪ್ರಾಣಕ್ಕಿಂತ ಹೆಚ್ಚಾಗಿ, ಅತಿಯಾಗಿ ಪ್ರೀತಿಸುತ್ತಿದ್ದಳು. ಆತನೊಂದಿಗೆ ಪ್ರಮಾಣ ಮಾಡಿದ್ದಳೇನೆಂದರೆ–ನಾನು ಜೀವಂತವಾಗಿರುವವರೆಗೂ ಬೇರೆ ಯಾರನ್ನೂ ಪ್ರೀತಿಸುವುದಿಲ್ಲ. ಸಂಬಂಧವನ್ನು ಬೆಳೆಸುವುದಿಲ್ಲವೆಂದು.

ಊಧಂಖಾನನಿಗೆ ರೂಪಮತಿಯ ಉತ್ತರ :

ಆಕೆಯು ತುಂಬಾ ಯೋಚಿಸಿದಳು. ಕೊನೆಗೆ ಒಂದು ತೀರ್ಮಾನಕ್ಕೆ ಬಂದದ್ದೇನೆಂದರೆ ಹಾವು ಸಾಯಬೇಕು ಮತ್ತು ಲಾಠಿಯೂ ಮುರಿಯಬಾರದು. ಹೀಗೆ ಯೋಚಿಸಿ ಊಧಂಖಾನನ ವ್ಯಕ್ತಿಯನ್ನು ಕುರಿತು–ನಾನಾದರೋ ಊಧಂನ ಸೇವಕಿ, ಅವರು ಏನು ಹೇಳುವರೋ ಅದನ್ನು ಮಾಡಲು ಸಿದ್ಧಳಿದ್ದೇನೆ. ಅವರ ಹತ್ತಿರ ಬರಲು ನನಗೇನು ಹಿಂಜರಿಕೆ ಇಲ್ಲ. ಆದರೆ ಅವರು ಇಲ್ಲಿಗೆ ಬಂದರೆ ನನ್ನ ಮರ್ಯಾದೆಯನ್ನು ಹೆಚ್ಚಿಸಿದಂತಾಗುವುದಿಲ್ಲವೆ? ಎಂದಳು.

ಊಧಂಖಾನನು ರೂಪಮತಿಯ ಮನೆಗೆ :

ಊಧಂಖಾನನ ವ್ಯಕ್ತಿಯು ಈ ಉತ್ತರವನ್ನು ಪಡೆದು ಆತನ ಮಾಲೀಕನ ಹತ್ತಿರ ಬಂದನು. ಆತನು ರೂಪಮತಿಯ ಉತ್ತರವನ್ನು ತಿಳಿಸಿದನು. ಈ ಮಾತನ್ನು ಕೇಳಿದ ಊಧಂಖಾನನು ಆಕೆಯಲ್ಲಿ ಕಾಮವನ್ನು ಬಯಸುತ್ತಿದ್ದ. ನವಯುವಕನೂ ಆಗಿದ್ದವನು ಬಹಳ ಸಂತೋಷಪಟ್ಟನು. ಆಕೆಯನ್ನು ಭೇಟಿಯಾಗಲು ಸಿದ್ಧತೆಯಲ್ಲಿ ತೊಡಗಿದನು. ಆತನಿಗೊಂದು ಹೆದರಿಕೆ ಇದುದ್ದೇನೆಂದರೆ ಎಲ್ಲಿಯಾದರೂ ಬಾದಶಾಹರಿಗೆ ಗೊತ್ತಾದರೆ ತುಂಬ ಕಷ್ಟವೆಂದು ತಿಳಿದು ತನ್ನ ವೇಷವನ್ನು ಬದಲಿಸಿಕೊಂಡನು. ತನ್ನ ಜೊತೆಯಲ್ಲಿ ಕೇವಲ ಇಬ್ಬರನ್ನು ಮಾತ್ರ ತೆಗೆದುಕೊಂಡು ರೂಪಮತಿಯ ಅರಮನೆಗೆ ಬಂದನು.

ಪ್ರೇಮ ಮತ್ತು ಕಾಮದ ವ್ಯತ್ಯಾಸ :

ಊಧಂಖಾನನು ಅರಮನೆಯ ಸೇವಕಿಯರನ್ನು ರೂಪಮತಿ ಎಲ್ಲಿದ್ದಾಳೆಂದು ವಿಚಾರಿಸಿದನು. ಉತ್ತರವಾಗಿ ಅವಳು ಮಲಗಿದ್ದಾಳೆಂದು ತಿಳಿಯಿತು. ಊಧಂಖಾನನು ಆಕೆಯ ಮಂಚದ ಪಕ್ಕಕ್ಕೆ ಹೋದನು. ಹೊದಿಕೆಯನ್ನು ಅವಳ ಮುಖದಿಂದ ಸರಿಸಿದನು. ಆ ಸಂದರ್ಭದಲ್ಲಿ ರೂಪಮತಿಯು ಅಸಂಖ್ಯೆ ಸುವಾಸನೆಗಳಲ್ಲಿ ಮುಳುಗಿದ್ದಳು. ಅವಳ ಕೊರಳಲ್ಲಿ ಹೂವಿನ ಹಾರಗಳಿದ್ದುವು. ಇಂತಹ ಸುಗಂಧಿತ ಪುಷ್ಪಗಳಿಂದ ಅಲಂಕೃತ ಹಾಸಿಗೆಯಲ್ಲಿದ್ದಳು. ಊಧಂಖಾನನು ಅವಳ ಶರೀರವನ್ನು ದೃಷ್ಟಿಸಿ ನೋಡಿದನು. ಆದರೆ ಆ ಶರೀರದಲ್ಲಿ ಪ್ರಾಣವಿದ್ದಂತೆ ಕಾಣಿಸಲಿಲ್ಲ.

ನೈಜ ಪ್ರೇಮದ ಸ್ವರೂಪ :

ರೂಪಮತಿಯನ್ನು ಈ ಸ್ಥಿತಿಯಲ್ಲಿ ಕಂಡ ಊಧಂನು ಆಶ್ಚರ್ಯಚಕಿತನಾದನು. ತಕ್ಷಣ ಆತನು ಆಕೆಯ ಸೇವಕ ಸೇವಕಿಯರನ್ನು ಕರೆದು ವಿಚಾರಿಸಿದನು. ಸೇವಕರು ಹೀಗೆ ಹೇಳಿದರು. ತಮ್ಮಿಂದ ಕಳುಹಿಸಲ್ಪಟ್ಟಿದ್ದ ವ್ಯಕ್ತಿಯು ರೂಪಮತಿಯನ್ನು ಕರೆದದ್ದಕ್ಕೆ, ಆಕೆಯು ತಮಗೆ ಉತ್ತರವನ್ನು ಕೊಟ್ಟು ಕಳುಹಿಸಿದಳು. ನಂತರ ಬಾಜ್ ಬಹಾದೂರನನ್ನು ಜ್ಞಾಪಿಸಿಕೊಂಡು ತುಂಬಾ ಅಳಲಾರಂಭಿಸಿದಳು. ಅದೇ ದುಃಖದ ಪರಿಸ್ಥಿತಿಯಲ್ಲಿ ಆಕೆಯು ಕರ್ಪೂರವನ್ನು ಮತ್ತು ವಿಷವನ್ನು ತಿಂದು ಬಿಟ್ಟಳು. ಆಕೆಯ ದೇಹ ಸ್ಥಿತಿ ತುಂಬಾ ಕೆಟ್ಟಿತು. ನಂತರ ಮಂಚದ ಮೇಲೇರಿ ಮಲಗಿದಳು. ಈಗ ಅವಳು ಈ ಸ್ಥಿತಿಯಲ್ಲಿದ್ದಾಳೆ ಎಂದರು.

ಊಧಂಖಾನನ ಪದಚ್ಯುತಿ :

ಈ ಮಾತುಗಳನ್ನು ಕೇಳಿದ ಊಧಂಖಾನನು ಆಕೆಯ ಪವಿತ್ರ ಪ್ರೇಮದ ಪರಕಾಷ್ಠೆಯನ್ನು ಯೋಚಿಸಿ ಆಶ್ಚರ್ಯ ಚಕಿತನೂ, ಪ್ರಭಾವಿತನೂ ಆದನು. ಅಂತ್ಯಗೊಂಡಿರುವ ರೂಪಮತಿಯನ್ನು ಕೊಂಡಾಡಿದನು. ಇದೇ ಕಾರಣಕ್ಕಾಗಿ ಊಧಂಖಾನನನ್ನು ಪದಚ್ಯೂತಿಗೊಳಿಸಲಾಯಿತು. ಆತನ ಜಾಗದಲ್ಲಿ ಫೀರ್‌ಮುಹಮ್ಮದಖಾನನನ್ನು ಮಾಳವದ ಶಾಸಕನನ್ನಾಗಿ ನೇಮಕ ಮಾಡಲಾಯಿತು.

ಬಾಜ್‌ಬಹಾದೂರನನ್ನು ಸೋಲಿಸುವ ಪ್ರಯತ್ನ :

ಹಿಜರಿ ೯೬೯ರಲ್ಲಿ ಪೀರ್ ಮಹಮ್ಮದಶೇರ್‌ವಾನಿಯು ಬಾಜ್‌ಬಹಾದೂರನನ್ನು ಸಂಪೂರ್ಣವಾಗಿ ನಾಶಪಡಿಸಲು ಸೈನಿಕ ಕಾರ್ಯಾಚರಣೆಯಲ್ಲಿ ತೊಡಗಿದನು. ಆಗ ಬಾಜ್‌ಬಹಾದೂರನು ಮಾಳವದ ಕೊನೆಯ ಗಡಿಯಲ್ಲಿ ವಾಸಿಸುತ್ತಿದ್ದನು. ಈ ವಿಚಾರವನ್ನು ತಿಳಿದ ಬಾಜ್‌ಬಹಾದೂರನು ಬರಾರ್ ಶಾಸಕನಾದ ತಫಾಲ್‌ಖಾನ್, ಬುರ್‌ಹಾನ್‌ಪುರದ ಶಾಸಕನಾದ ಮೀರಾನ್ ಮುಬಾರಕ್‌ಫಾರೂಖಿ ಮುಂತಾದವರ

ಸಹಾಯವನ್ನು ಕೇಳಿದನು. ಆ ಇಬ್ಬರೂ ಶಾಸಕರು ಬಾಜ್‌ಬಹಾದೂರನಿಗೆ ಸಹಾಯ ಮಾಡಲು ಒಪ್ಪಿದರು. ಆತನ ಸಹಾಯಕ್ಕೆಂದು ಸೈನ್ಯವನ್ನು ಸಂಗ್ರಹಿಸತೊಡಗಿದರು.

ಮಾಳವಿ, ಬರಾರಿ ಮತ್ತು ಬುರ್‌ಹಾನ್‌ಪುರಿ ಶಾಸಕರುಗಳ ಒಗ್ಗಟ್ಟು :

ಪೀರ್‌ಮಹಮ್ಮದ್‌ಶೇರ್‌ವಾನಿಗೆ ಈ ಒಗ್ಗಟ್ಟಿನ ಸಮಾಚಾರವು ತಿಳಿಯಿತು. ಇದರಿಂದಾಗಿ ಮಾಳವ ದೇಶದಲ್ಲಿ ಲೂಟಿ, ನಾಶಗಳಂತಹ ಕೃತ್ಯಗಳನ್ನು ಹೆಚ್ಚಿಸಿದನು. ಆತನು ಬುರ್‌ಹಾನಪುರವನ್ನು ತಲುಪಿ ಅಲ್ಲಿಯೂ ಇಂತಹ ಕೃತ್ಯಗಳನ್ನೇ ಹೆಚ್ಚಿಸಿದನು. ಇದೇ ಸಂದರ್ಭದಲ್ಲಿ ಮೂರು ಜನ ಶಾಸಕರು ಪೀರ್‌ಮಹಮ್ಮದ್‌ಶೇರ್‌ವಾನಿಯ ಕೃತ್ಯಗಳನ್ನು ದಮನಿಸಲೇಬೇಕೆಂದು ಪ್ರತಿಜ್ಞೆಯನ್ನು ಮಾಡಿದರು. ಒಂದು ವಿಶಾಲ ಸೈನ್ಯವನ್ನು ತೆಗೆದುಕೊಂಡು ಹೊರಟರು.

ಮಾಳವದಿಂದ ಮೊಗಲರ ನಿರ್ಗಮನ :

ಪೀರ್‌ಮಹಮ್ಮದನು ಈ ಮೂರು ಶಾಸಕರ ಒಗ್ಗಟ್ಟಿನ ಶಕ್ತಿಯನ್ನು ಕಂಡು ತುಂಬಾ ಚಿಂತಿತನಾದನು. ತಕ್ಷಣ ಬುರ್‌ಹಾನ್‌ಪುರದಿಂದ ವಾಪಸ್ಸಾದನು. ಈ ಮೂರು ಶಾಸಕರು ಆತನನ್ನು ಹಿಂಬಾಲಿಸಿದರು. ಆತನನ್ನು ಹಿಡಿದು ಆತನಿಗೆ ತುಂಬಾ ನಷ್ಟವನ್ನುಂಟು ಮಾಡಿದರು. ದೆಹಲಿ ಸುಲ್ತಾನರ ಇತಿಹಾಸದ ಗ್ರಂಥಗಳಲ್ಲಿ ವರ್ಣಿಸಲಾಗಿರುವಂತೆ, ಪೀರ್‌ಮುಹಮ್ಮದ್‌ಖಾನನು ಪಲಾಯನ ಮಾಡುವ ಸಂದರ್ಭದಲ್ಲಿ ನರ್ಮದಾ ನದಿಯನ್ನು ದಾಟುವಾಗ ಮುಳುಗಿ ಸತ್ತನೆಂದು ತಿಳಿದು ಬರುತ್ತದೆ. ಇದಾದ ನಂತರ ಮೊಗಲ ಅಮೀರರು ಮಾಳವದಲ್ಲಿ ನೆಲೆಸುವುದು ತುಂಬಾ ಕಷ್ಟವಾಯಿತು. ಅವರೆಲ್ಲರೂ ಮಾಳವವನ್ನು ಖಾಲಿ ಮಾಡಿದರು.

ಬಾಜ್‌ಬಹಾದೂರನ ಎರಡನೇ ಸಲದ ಪಟ್ಟಾಭಿಷೇಕ ಮತ್ತು ಪಲಾಯನ :

ಬಾಜ್‌ಬಹಾದ್ದೂರನು ಎರಡನೇ ಸಲ ಸಿಂಹಾಸನವನ್ನೇರಿದನು. ತನ್ನ ಸೈನ್ಯವನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸಿದನು. ಆತನ ಸ್ಥಿತಿ ಇನ್ನೂ ಸುಧಾರಿಸಲೇ ಇಲ್ಲದ ಸಂದರ್ಭದಲ್ಲಿ, ಜಲಾಲುದ್ದೀನ ಅಕ್ಬರನ ಕಡೆಯ ಒಬ್ಬ ಅಮೀರನಾದ ಅಬ್ದುಲ್ಲಾಖಾನನು, ಹಿಜರಿ ೯೭೦ರಲ್ಲಿ ಒಂದು ವಿಶಾಲ ಸೈನ್ಯದೊಂದಿಗೆ ಬಂದು ಮಾಳವ ದೇಶದ ಮೇಲೆ ಆಕ್ರಮಿಸಿದನು. ಬಾಜ್‌ಬಹಾದೂರನು ಸ್ವಾಭಾವಿಕವಾಗಿ ಭೋಗವಿಲಾಸವನ್ನು ಹೆಚ್ಚಾಗಿ ಬಯಸುತ್ತಿದ್ದವನಾಗಿದ್ದರಿಂದ, ಮೊಗಲರ ಸೈನ್ಯದ ಎದುರಿನಲ್ಲಿ ನಿಲ್ಲಲಾರದೆ ಮಾಳವ ದೇಶವನ್ನು ಬಿಟ್ಟು ಹೊರಗೆ ಪಲಾಯನವನ್ನು ಮಾಡಿದನು.

ಬಾಜ್‌ಬಹಾದೂರನು ಅಕ್ಬರನ ದರ್ಬಾರಿನಲ್ಲಿ :

ಬಹಳ ಕಾಲದವರೆಗೆ ಬಾಜ್‌ಬಹಾದೂರನು ಮಾಳವ, ಖಾನ್‌ದೇಶ ಮತ್ತು ದಖನ್ನಿನ ಬೆಟ್ಟಗುಡ್ಡಗಳಲ್ಲಿ, ಕಾಡು ಮೇಡುಗಳಲ್ಲಿ ದಿಕ್ಕಿಲ್ಲದೆ ಸುತ್ತುವರಿಯುತ್ತಿದ್ದನು.

ಅಲ್ಲಲ್ಲಿ ಮೊಗಲರ ವಿರುದ್ಧ ದಂಗೆಗಳನ್ನು ಎಬ್ಬಿಸುತ್ತಿದ್ದನು. ಆದರೆ ಆತನಿಗೆ ತನ್ನ ಕೃತ್ಯಗಳಲ್ಲಿ ಸಫಲತೆಯು ಸಿಕ್ಕಿರಲಿಲ್ಲ. ಕೊನೆಗೆ ಅಕ್ಬರ ಬಾದಶಾಹನಲ್ಲಿ ಪ್ರಾಣಭಿಕ್ಷೆ ಹಾಗೂ ಶಾಂತಿಯ ಪ್ರಸ್ತಾಪವನ್ನಿಟ್ಟನು. ಹಾಗೂ ಅಕ್ಬರನ ದರ್ಬಾರಿನಲ್ಲಿ ಹಾಜರಾದನು. ಕೊನೆಗೆ ಅಕ್ಬರ ಬಾದಶಾಹನು ಆತನನ್ನು ಕ್ಷಮಿಸಿ, ಎರಡು ಸಾವಿರ ಸೈನ್ಯದ ಸರದಾರನನ್ನಾಗಿ ನೇಮಿಸಿ, ತನ್ನ ಅಮೀರರುಗಳಲ್ಲಿ ಸೇರಿಕೊಂಡನು. ಬಾಜ್‌ಬಹಾದೂರನ ಉಳಿದ ಜೀವನವನ್ನು ಭೋಗ ವಿಲಾಸದಲ್ಲಿ ಅಕ್ಬರನ ಅಧೀನ ಅರಮನೆಯಲ್ಲಿ ಕಳೆದನು.

ಬಾಜ್‌ಬಹಾದೂರನ ಕಿರಿಯ ಸಹೋದರನಾದ ಮಲಿಕ್ ಮುಸ್ತಫಾನು ಸಹ ತನ್ನ ಅಣ್ಣನ ಜೊತೆಯಲ್ಲಿ ಅಕ್ಬರನ ದರ್ಬಾರಿನಲ್ಲಿ ಹಾಜರಾದನು. ಆ ದಿನಗಳಲ್ಲಿ ಹಕೀಮ್ ಅಬುಲ್‌ಫತಹ್ ಯೂಸೂಫ್‌ಜನಿಯನ ಜೊತೆಯಲ್ಲಿ ಆಫ್ಘನರೊಂದಿಗೆ ಯುದ್ಧವಾಡುತ್ತಾ ಆತನೂ ಸತ್ತುಹೋದನು.

ಬಾಜಬಹಾದೂರನು ತನ್ನ ಜೀವನದ ಪ್ರಾರಂಭದಿಂದ ಹಿಡಿದು ಮಾಳವದ ಶಾಸನದಿಂದ ಪದಚ್ಯುತನಾಗುವ ಕಾಲದವರೆಗೆ ಒಟ್ಟು ೧೭ ವರ್ಷಗಳ ತನಕ ಶಾಸನವನ್ನು ಮಾಡಿದನು. ಹಿಜರಿ ೯೭೮ರಿಂದ ಹಿಡಿದು ಹಿಜರಿ ೧೦೧೮ರ ವರೆಗೆ ಆಳುತ್ತಾ ಮಾಳವದ ಮಾಲೀಕ ಬಾದಶಹ ದೆಹಲಿಯ ಆಡಳಿತದಲ್ಲಿ ಸೇರಿಹೋದನು.

■

V. ಬುರ್ಹಾನ್‌ಪುರದ ಫಾರೂಖಿ ಸುಲ್ತಾನರು

*

೧. ಮಲಿಕ್ ರಾಜ ಫಾರೂಖಿ

ವಂಶ ಪರಿಚಯ :

ಖಾನದೇಶದಲ್ಲಿ ಮೊಟ್ಟಮೊದಲು ಆಡಳಿತವನ್ನು ಸ್ಥಾಪಿಸಿದವನು ಮಲಿಕ್ ರಾಜ ಫಾರೂಖಿ. ಆತನ ತಂದೆಯ ಹೆಸರು "ಖಾನ್ ಜಹಾನ್ ಫಾರೂಖಿ" ಆಗಿತ್ತು. ಆತನ ಗುರುಗಳು ಅಲ್ಲಾವುದ್ದೀನ ಖಿಲ್ಜಿ ಮತ್ತು ಮಹಮ್ಮದ ತುಘಲಕ್‌ರ ದರಬಾರಿನಲ್ಲಿ ಹೆಸರಾಂತ ಅಮೀರರಾಗಿದ್ದರು. ಕಾಲ ಚಕ್ರದ ಸುಳಿಯಲ್ಲಿ ಸಿಲುಕಿದ ಮಲಿಕ್‌ರಾಜ ಫಾರೂಖಿಯು ತನ್ನ ವಂಶಸ್ಥರಂತೆ ಪ್ರಗತಿಯ ಮೆಟ್ಟಿಲುಗಳನ್ನು ಏರಲಾರದೆ, ತುಂಬಾ ಚಿಂತೆಯ ಸ್ಥಿತಿಯಲ್ಲಿ ಬಿದ್ದು, ಬಡತನದ ಸ್ಥಿತಿಯಲ್ಲಿ ತಿರುಕನ ಕನಸಿನಂತೆ ಆಗಾಗ್ಗೆ ಆ ಚಿಂತೆಯಲ್ಲಿ ಮನಸ್ಸನ್ನು ಸಂತೋಷಗೊಳಿಸಿಕೊಳ್ಳುತ್ತಿದ್ದನು.

ಸುಲ್ತಾನ್ ಫೈರೋಜ್‌ಶಾಹ್‌ನ ಒಂದು ಘಟನೆ :

ಒಂದು ದಿನ ಸುಲ್ತಾನ್ ಫೈರೋಜ್‌ಶಾಹನು ಮಾಂಡುವಿನ ದಾರಿಯಿಂದ ಗುಜರಾತಿಗೆ ಬಂದಿದ್ದನು. ಆ ಸಂದರ್ಭದಲ್ಲಿ ಅವನು ತನ್ನ ಕೆಲ ಆಪ್ತ ಸ್ನೇಹಿತರೊಂದಿಗೆ ಬೇಟೆಯನ್ನು ಹುಡುಕುತ್ತಾ ಹದಿನಾಲ್ಕು, ಹದಿನೈದು ಮೈಲಿಗಳಷ್ಟು ದೂರದ ತನಕ ಓಡುತ್ತಾ ಹೋಗಿ ಬಿಟ್ಟನು. ಅದೇ ಸಂದರ್ಭದಲ್ಲಿ ಬಾದಶಾಹನಿಗೆ ಹಸಿವು ಬಹಳವಾಗಿ ಸತಾಯಿಸಿತು. ಆತನ ಸ್ನೇಹಿತರಲ್ಲೂ ಏನೂ ತಿನ್ನಲು ಇರಲಿಲ್ಲ. ಅಲ್ಲಿ ಹತ್ತಿರದಲ್ಲಿ ಯಾವ ಜನವಸತಿಯೂ ಇರಲಿಲ್ಲ. ಹೊಟ್ಟೆ ಹಸಿವಿನಿಂದ ತುಂಬಾ ನಿತ್ರಾಣನಾಗಿ ಸುಲ್ತಾನ್ ಫೈರೋಜ್‌ಶಾಹನು ಒಂದು ಮರದ ಕೆಳಗೆ ನೆರಳಿನಲ್ಲಿ ಕುಳಿತು ಬಿಟ್ಟನು.

ಫೈರೋಜ್‌ಶಾಹ್ ಮತ್ತು ಮಲಿಕ್ ರಾಜನ ಭೇಟಿ :

ಸುಲ್ತಾನ್ ಫೈರೋಜನು ಹಸಿವಿನ ಚಿಂತೆಯಲ್ಲಿ ಮುಳುಗಿರುವಾಗ, ಅಕಸ್ಮಾತಾಗಿ ಆತನ ದೃಷ್ಟಿ ಒಬ್ಬ ಸವಾರನ ಮೇಲೆ ಬಿತ್ತು. ಆತನ ಜೊತೆಯಲ್ಲಿ ಎರಡು ಬೇಟೆ ನಾಯಿಗಳು ಮತ್ತು ಕೆಲವು ಪ್ರಾಣಿಗಳಿರುವುದು ಕಂಡಿತು. ಅವನು ಯಾವುದೋ

ಒಂದು ಬೇಟೆಯ ಹಿಂದೆ ಬಿದ್ದಿರುವುದು ಗೊತ್ತಾಯಿತು. ಬಾದಶಾಹನು ತಕ್ಷಣ ಆ ಸವಾರನನ್ನು ಸನ್ನೆ ಮಾಡಿ ಕರೆದನು. ಆತನನ್ನು ನಿನ್ನ ಹತ್ತಿರ ತಿನ್ನಲು ಏನಾದರೂ ಇದೆಯೇ? ಎಂದು ಕೇಳಿದನು. ಅದಕ್ಕೆ ಆ ಸವಾರನು ತನ್ನಲ್ಲಿದ್ದ ಒಣ ಆಹಾರವನ್ನು ಬಾದಶಾಹನ ಮುಂದಿಟ್ಟನು. ತಾನು ಬಾದಶಾಹನ ಹಿಂದೆ ನಿಂತನು.

ಶಾಹಿ ಸಂತೋಷ :

ಬಾದಶಾಹನು ಊಟ ಮಾಡಿದನು. ಊಟ ನೀಡಿದ ಸವಾರನ ಉನ್ನತ ಮಟ್ಟದ ಸೇವಾ ಮನೋಭಾವ ಮತ್ತು ಮಾತಿನಲ್ಲಿದ್ದ ವಿನಯ, ವಿಧೇಯತೆಗಳನ್ನು ಕಂಡು ಪ್ರಭಾವಿತನಾದನು. ಆಗ ಈ ಪ್ರಶ್ನೆಯನ್ನು ಕೇಳಿದನು–ನೀನು ಯಾರು? ಇಲ್ಲಿ ಎಲ್ಲಿರುತ್ತಿಯಾ? ಆಗ ಆ ಸವಾರನು ಬಹಳ ನಮ್ರವಾಗಿ, ವಿಧೇಯತೆಯಿಂದ ಉತ್ತರಿಸಿದನು. ನನ್ನ ಹೆಸರು ಮಲಿಕ್ ರಾಜ ಫಾರೂಖಿ ಎಂದು, ನಾನು ಖಾನೆ ಜಹಾಂ ಫಾರೂಖಿಯ ಮಗನಾಗಿದ್ದೇನೆ. ನನ್ನ ಆಸೆ ಏನೆಂದರೆ–ಬಾದಷಹರ ಸೇವೆಯಲ್ಲಿದ್ದು ಪ್ರಗತಿಯನ್ನು ಸಾಧಿಸಬೇಕೆಂದಿದ್ದೇನೆ. ಬಾದಷಹನು ಈತನ ತಂದೆ ಖಾನ್–ಜಹಾನ್‌ಖಾನ್‌ಫಾರೂಖಿಯನ್ನು ಚನ್ನಾಗಿ ಬಲ್ಲವನಾಗಿದ್ದನು. ಎರಡನೆಯದಾಗಿ ಮಲಿಕ್ ರಾಜಫಾರೂಖಿಯ ವಿನಯ ಪೂರ್ವಕ ಸೇವೆಯಿಂದ ಬಹಳ ಸಂತೋಷಪಟ್ಟಿದ್ದನು. ಆಗ ಬಾದಷಹನು ತನ್ನ ಒಬ್ಬ ಆಪ್ತನನ್ನು ಕರೆದು–"ಯಾವ ದಿನದಂದು ನನ್ನ ದರ್ಬಾರು ಸೇರುವುದೋ ಅಂದು ಮಲಿಕ್‌ರಾಜಾನನ್ನು ನನ್ನ ಸೇವೆಯಲ್ಲಿ ಹಾಜರುಪಡಿಸತಕ್ಕದ್ದು" ಎಂದು ಆಜ್ಞಾಪಿಸಿದನು.

ಮಲಿಕ್ ರಾಜನು ಪ್ರಗತಿಯ ಮೆಟ್ಟಿಲಲ್ಲಿ :

ಮಲಿಕ್ ರಾಜನು ದರ್ಬಾರ ನಡೆಯುತ್ತಿದ್ದ ಸಂದರ್ಭದಲ್ಲಿ ಬಾದಶಾಹನ ಎದುರಿನಲ್ಲಿ ಬಂದನು. ಸುಲ್ತಾನ್ ಫೈರೋಜಶಾಹನು ತನ್ನ ಅಮೀರರು, ದರ್ಬಾರಿಗಳಲ್ಲಿ ಹೀಗೆ ಹೇಳಿದನು. "ಈ ವ್ಯಕ್ತಿಯ ಎರಡು ಹಕ್ಕು (ಋಣ)ಗಳು ನನ್ನ ಮೇಲಿವೆ. ಒಂದನೆಯದೆಂದರೆ ಈತನು ನನ್ನ ಆಪ್ತ ಸ್ನೇಹಿತನ ಮಗನಾಗಿದ್ದಾನೆ. ಎರಡನೆಯದೆಂದರೆ–ಈತನು ಒಂದು ದಿನ ನಾನು ಬೇಟೆಯಾಡುತ್ತಿದ್ದ ಸಂದರ್ಭದಲ್ಲಿ ನನ್ನ ಸೇವೆಯನ್ನು ಮಾಡಿದ್ದಾನೆ. ಎಂದು ಹೇಳಿದ ತಕ್ಷಣ ಆತನಿಗೆ ಎರಡು ಸಾವಿರ ಸವಾರರ ಮನ್‌ಸಬ್ದಾರಿಯಲ್ಲಿ ಸೇರಿಸಿಕೊಂಡನು. ಡಾಲೇಜ್ ಮತ್ತು ಕರೊಂದ್‌ಗಳ ಪ್ರದೇಶದ ಜಾಗೀರಿಯನ್ನು ನೀಡಿದನು. ಇವು ಖಾನ್‌ದೇಶದಲ್ಲಿನ ದಕ್ಷಿಣ ಭಾಗದ ಸರಹದ್ದಿನಲ್ಲಿರುವ ಪ್ರದೇಶಗಳಾಗಿದ್ದುವು.

ರಾಜ ಬಹಾರ್‌ಜಿಯ ಮೇಲೆ ಆಕ್ರಮಣ :

ಹಿಜರಿ ೭೭೬ರಲ್ಲಿ ಮಲಿಕ್‌ರಾಜ ಫಾರೂಖಿಯು ತನ್ನ ಜಾಗೀರಿಗೆ ಬಂದನು. ಈ ಪ್ರದೇಶದ ಪ್ರಗತಿಯಲ್ಲಿ ತನ್ನನ್ನು ತೊಡಗಿಸಿಕೊಂಡನು. ಆತನು ರಾಜ ಬಹಾರ್‌ಜಿಯ

ಮೇಲೆ ಸೈನಿಕ ಕಾರ್ಯಾಚರಣೆ ಮಾಡಿದನು. ಏಕೆಂದರೆ ಈ ರಾಜನು ಸುಲ್ತಾನ ಫೈರೋಜಶಾಹನ ಅಧೀನತೆಯನ್ನು ಸ್ವೀಕರಿಸಿರಲಿಲ್ಲ. ಮಲಿಕ್‌ರಾಜ ಫಾರೂಖಿಯೂ ಆತನನ್ನು ಮಣಿಸಿ ಬಾದಶಾಹನಿಗೆ ಕಪ್ಪ-ಕಾಣಿಕೆಗಳನ್ನು ಕೊಡುವಂತೆ ಒಪ್ಪಿಸಿದನು. ಆತನಿಂದ ಐದು ಬಲಶಾಲಿ ಆನೆಗಳನ್ನು, ಹತ್ತು ಸಣ್ಣಪುಟ್ಟ ಆನೆಗಳನ್ನು ಮತ್ತು ಇತರೆ ಬೆಲೆ ಬಾಳುವ ವಸ್ತುಗಳನ್ನು ವಸೂಲಿ ಮಾಡಿಕೊಂಡನು. ಇದು ಅಲ್ಲದೆ ಬಹಳಷ್ಟು ಚಿನ್ನದ ನಾಣ್ಯಗಳನ್ನೂ ಪಡೆದನು.

ಮಲಿಕ್ ರಾಜ ಫಾರೂಖಿಯ ಪ್ರಶಂಸೆ :

ಮಲಿಕ್ ರಾಜನು ದಕ್ಷಿಣ ದೇಶದ ರಾಜನಿಂದ ಆನೆಗಳನ್ನು ಪಡೆದು, ಅವುಗಳನ್ನು ಚಿನ್ನದ ಸರಪಳಿಗಳಿಂದ ಬಿಗಿಸಿ, ಅವುಗಳ ಬೆನ್ನಿನ ಮೇಲೆ ಮಕ್ಮಲ್ಲಿನ ಹೊದಿಕೆಗಳನ್ನು ಹೊದಿಸಿ, ಆ ರಾಜನಿಂದ ಪಡೆದಿದ್ದ ಎಲ್ಲ ಸಂಪತ್ತನ್ನೂ ಅವುಗಳ ಬೆನ್ನಿನ ಮೇಲೆ ಹೊರಿಸಿದನು. ಅನೇಕ ಒಂಟೆಗಳ ಮೇಲೆ ಮಕ್ಮಲ್ ಹೊದಿಕೆಗಳನ್ನು ಹೊದಿಸಿ, ಶೃಂಗರಿಸಿ ಎಲ್ಲ ಹಣವನ್ನು ಬಾದಶಾಹನ ಎದುರಿಗೆ ಕಳುಹಿಸಿಕೊಟ್ಟನು. ಇದರಿಂದ ಬಾದಷಹನು ತುಂಬಾ ಸಂತೋಷಪಟ್ಟನು. ಮಲಿಕ್‌ರಾಜನ ಪ್ರಾಮಾಣಿಕತೆಯನ್ನು ಮನಸಾರೆ ಪ್ರಶಂಸಿಸಿದನು. ಯಾವ ಶಾಸನ ದಖನ್ ಶಾಸಕನ ಕೈ ಸೇರಿದೆಯೋ ಅದು ತುಂಬಾ ಫಲದಾಯಕವಾಗಿದೆ ಎಂದನು.

ಮಲಿಕ್ ರಾಜನ ಪ್ರಗತಿ ತಾರಕಕ್ಕೆ :

ಸುಲ್ತಾನ್ ಫೈರೋಜಶಾಹನು ಮಲಿಕ್‌ರಾಜ ಫಾರೂಖಿಗೆ ಈಗ ಮೂರು ಸಾವಿರ ಸವಾರರ ನಸಬ್ದಾರನಾಗಿ ಬಡ್ತಿ ಸಿಕ್ಕಿತು. ಆತನಿಗೆ ಖಾನದೇಶದ ಸೇನಾದಂಡನಾಯಕನೆಂದು ಪಟ್ಟಕ್ಕೇರಿಸಲಾಯಿತು. ದಿನೇ-ದಿನೇ ಮಲಿಕ್‌ರಾಜನ ಅದೃಷ್ಟದ ಬಾಗಿಲು ತನ್ನಷ್ಟಕ್ಕೆ ತಾನೇ ತೆರೆದುಕೊಳ್ಳಲಾರಂಭಿಸಿತು. ಕೆಲವೇ ದಿನಗಳಲ್ಲಿ ಆತನು ಹನ್ನೆರಡು ಸಾವಿರ ಸವಾರರ ಒಂದು ವಿಶಾಲ ಸೈನ್ಯದ ಅಧಿಪತಿಯಾದನು. ಖಾನ್‌ದೇಶದ ಆದಾಯ ಅಷ್ಟು ದೊಡ್ಡ ಸೈನ್ಯದ ಖರ್ಚುವೆಚ್ಚಕ್ಕೆ ಸಾಕಾಗುತ್ತಿರಲಿಲ್ಲ. ಇದರಿಂದ ಫಾರೂಖಿಯು 'ನದ್ವಾರ' ಮತ್ತು ಆ ಪ್ರದೇಶಗಳ ಸುತ್ತಮುತ್ತಲ ರಾಜರುಗಳಿಂದ ಹಣ ವಸೂಲಿ ಮಾಡಿ ಖರ್ಚು ವೆಚ್ಚಗಳನ್ನು ಭರಿಸಿಕೊಳ್ಳುತ್ತಿದ್ದನು.

ಬಾದಷಹನ ದರ್ಜೆಗೆ :

ಕೆಲವೇ ದಿನಗಳಲ್ಲಿ ಮಲಿಕ್‌ರಾಜ ಫಾರೂಖಿಯು ಎಷ್ಟು ಪ್ರಗತಿಯನ್ನು ಸಾಧಿಸಿದನೆಂದರೆ-ಜಾಜ್ ನಗರದ ರಾಜನು ಆತನಿಂದ ಬಹಳ ದೂರದಲ್ಲಿ ಆಳುತ್ತಿದ್ದರೂ, ಸ್ನೇಹ ಹಸ್ತವನ್ನು ಚಾಚಿದ್ದನು. ಆತನು ತನ್ನ ಶ್ರಮ, ಪ್ರಾಮಾಣಿಕತೆ, ಬುದ್ಧಿವಂತಿಕೆಗಳಿಂದ ದಿನೇ-ದಿನೇ ತನ್ನ ಸ್ಥಾನವನ್ನು ಮೇಲ್ಮಟ್ಟಕ್ಕೇರಿಸುತ್ತಾ ಬಾದಷಹತ್ವದ ಮಟ್ಟಕ್ಕೆ ತಲುಪಿದನು.

ಮಲಿಕ್ ರಾಜ ಮತ್ತು ದಿಲಾವರ್‌ಖಾನ್‌ನನ ಸೋದರ ಸಂಬಂಧ :

ಸುಲ್ತಾನ್ ಫೈರೋಜ್‌ಶಾಹ್‌ನ ಮರಣಾನಂತರ ಮಾಳವದ ಆಡಳಿತವು ದಿಲಾವರ್‌ಖಾನ ಘೋರಿಯ ಕೈಯಲ್ಲಿ ಬಂದಿತು. ಈ ಇಬ್ಬರೂ ಶಾಸಕರು ಒಬ್ಬರಲ್ಲೊಬ್ಬರು ಬಹಳ ಪ್ರೇಮದಿಂದ ಇದ್ದರು. ಇವರಲ್ಲಿ ಸ್ವಂತ ಸಹೋದರ ಭಾವವಿತ್ತು. ಕೊನೆಗೆ ಸಂಬಂಧವೂ ಬೆಳೆಯಿತು. ಅದರಂತೆ ಮಲಿಕ್ ರಾಜನ ಮಗಳನ್ನು ಹೋಷಂಗನಿಗೆ ಕೊಟ್ಟು ಮದುವೆಯೂ ಆಗಿತ್ತು. ಮತ್ತು ದಿಲಾವರ್‌ಖಾನನ ಮಗಳನ್ನು ಮಲಿಕ್ ರಾಜ ಫಾರೂಖಿಯ ಮಗನಾದ ನಸೀರ್‌ಖಾನನಿಗೆ ತಂದುಕೊಳ್ಳಲಾಗಿತ್ತು.

ಸುಲ್ತಾನ್‌ಪುರ ಮತ್ತು ಅಂದರ್‌ಬಾರ್‌ನ ಮೇಲೆ ಆಕ್ರಮಣ :

ಅದೇ ದಿನಗಳಲ್ಲಿ ಗುಜರಾತಿನಲ್ಲಿ ಸುಲ್ತಾನ್ ಮುಜಾಫ್ಫರನು ಗುಜರಾತಿನ ಶಾಸನವನ್ನು ತನ್ನ ವಶಕ್ಕೆ ತೆಗೆದುಕೊಂಡಿದ್ದನು. ಈ ಕಾರಣದಿಂದಾಗಿ ಮಲಿಕ್ ರಾಜ ಫಾರೂಖಿಯ ರಾಜ್ಯದಲ್ಲಿ ಕೆಲವು ಕಾರಣಗಳಿಂದಾಗಿ ಅರಾಜಕತೆ ಉಂಟಾಗಿತ್ತು. ಪರಿಸ್ಥಿತಿಗಳು ಕೆಟ್ಟಿದ್ದವು. ಮಲಿಕ್ ರಾಜ ಫಾರೂಖಿಯು ದಿಲಾವರ್‌ಖಾನನ ಸಹಾಯವನ್ನು ಪಡೆದು, ಸುಲ್ತಾನ್‌ಪುರ ಮತ್ತು ಅಂದರ್‌ಬಾರಿನ ಮೇಲೆ ಆಕ್ರಮಣವನ್ನು ನಡೆಸಿ ಸುಲ್ತಾನ್ ಮುಜಾಫ್‌ರ್ ಗುಜರಾತಿಯವನಿಂದ ನೇಮಿಸಲ್ಪಟ್ಟಿದ್ದ ಶಾಸಕರನ್ನು ಪದಚ್ಯುತಿಗೊಳಿಸಲಾಗಿತ್ತು.

ಮಲಿಕ್‌ರಾಜ ಮತ್ತು ಮುಜಫ್ಫರ್ ಗುಜರಾತಿಯಲ್ಲಿ ಒಪ್ಪಂದ :

ಸುಲ್ತಾನ್ ಮುಜಾಫ್ಫರ ಗುಜರಾತಿಯು ಈ ದಿನಗಳಲ್ಲಿ ಹಿಂದುಗಳೊಂದಿಗೆ ಯುದ್ಧಗಳಲ್ಲಿ ತಲ್ಲೀನನಾಗಿದ್ದನು. ಆತನು ತಕ್ಷಣ ಆ ಯುದ್ಧಗಳನ್ನು ನಿಲ್ಲಿಸಿ ಬೇಗ ಸುಲ್ತಾನ್‌ಪುರದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ತಲುಪಿದನು. ಮಲಿಕ್‌ರಾಜ ಫಾರುಖಿಯು ಗುಜರಾತಿ ಸೈನ್ಯದೊಂದಿಗೆ ಯುದ್ಧ ಮಾಡಲು ಸಮರ್ಥನಿರಲಿಲ್ಲ. ಮತ್ತು ಥಾಲೇಜ್ ಕೋಟೆಯಲ್ಲಿ ಆಶ್ರಯವನ್ನು ಪಡೆದುಕೊಂಡನು. ಮಲಿಕ್‌ರಾಜ ಫಾರೂಖಿಯೂ ಕೆಲವು ವಿದ್ವಾಂಸರನ್ನು, ಧಾರ್ಮಿಕ ಮುಖಂಡರನ್ನು ಸುಲ್ತಾನ್ ಮುಜಾಫ್ಫರ್ ಗುಜರಾತಿಯ ಹತ್ತಿರ ಕಳುಹಿಸಿ ಒಪ್ಪಂದದ ಮಾತುಗಳನ್ನು ಮುಂದುವರಿಸಿದನು. ಸುಲ್ತಾನ ಮುಜಾಫ್ಫರ ಗುಜರಾತಿಯು ಒಪ್ಪಂದಕ್ಕೆ ಒಪ್ಪಿಗೆ ನೀಡಿದನು. ಒಪ್ಪಂದವಾದೊಡನೆ ಹಿಂದಕ್ಕೆ ಹೋದನು. ಈ ಘಟನೆಗಳಾದ ನಂತರ ಮಲಿಕ್‌ರಾಜ ಫಾರೂಖಿಯು ತನ್ನ ರಾಜ್ಯದ ಏಳಿಗೆಯತ್ತ ಗಮನವನ್ನು ನೀಡಿದನು. ಆತನು ಅನೇಕ ಭವ್ಯ ಕಟ್ಟಡಗಳನ್ನು ನಿರ್ಮಿಸಿದನು. ವ್ಯವಸಾಯಕ್ಕೆ ಸಂಬಂಧಿಸಿದ ಕೆರೆ–ಕಟ್ಟೆ–ಕಾಲುವೆಗಳನ್ನು ಕಟ್ಟಿಸಿದನು. ಇದಾದ ನಂತರ ಆತನು ಪುನಃ ಯಾವ ಕಡೆಗೂ ಪ್ರಯಾಣವನ್ನು ಮಾಡಲಿಲ್ಲ.

ಮಲಿಕ್‌ರಾಜ ಫಾರೂಖಿಯ ನಿಧನ :

ಕೊನೆಗೆ ಫಾರೂಖಿಯು ತನ್ನ ಅಂತ್ಯದ ದಿನಗಳನ್ನು ಕಾಣಲಾರಂಭಿಸಿ ಕಾಯಿಲೆ ಬಿದ್ದನು. ಒಂದು ದಿನ ಯಮನ ಪಾಶಕ್ಕೆ ವಶವಾದನು. ಆತನು ತನ್ನ ಹಿರಿಯ ಮಗನಾದ ಮಲಿಕ್‌ನಸೀರನನ್ನು ತನ್ನ ಉತ್ತರಾಧಿಕಾರಿಯನ್ನಾಗಿ ನೇಮಿಸಿದನು. ಮಲಿಕ್‌ರಾಜ ಫಾರೂಖಿಗೆ ಆತನ ಸೂಫಿ ಸಂತ ಗುರುಗಳಾದ ಮುರ್ಷದ್‌ಶೇಖ್ ಜೈನುದ್ದೀನ್‌ರವರಿಂದ ದೊರೆತಿದ್ದ ಪವಿತ್ರ (ಬುರ್ಖಾ) ಉಡುಪನ್ನು ತನ್ನ ಮಗನಾದ ಮಲಿಕ್‌ನಸೀರನಿಗೆ ಹಸ್ತಾಂತರಿಸಿದನು. ಮಲಿಕ್‌ರಾಜ ಫಾರೂಖಿಯು ತನ್ನ ಕಿರಿಯ ಮಗ ಫತೆಹಖಾನನಿಗೆ ಥಾಲೇಜ್ ಕೋಟೆ ಮತ್ತು ಅದರ ಸುತ್ತಮುತ್ತಲ ಪ್ರದೇಶಗಳನ್ನು ಜೀವಂತವಾಗಿದ್ದಾಗಲೇ ಹಂಚಿಕೊಟ್ಟಿದ್ದನು. ಹಿಜಿರಿ ಶಕೆ ೮೦೧, ಶವ್ವಾಲ್ ತಿಂಗಳ, ಇಪ್ಪತ್ತೆರಡರಲ್ಲಿ ಶುಕ್ರವಾರದಂದು ಅಂತಿಮ ದಿನವನ್ನು ಕಂಡನು. ಮತ್ತು ಥಾಲೇಜ್‌ನಲ್ಲಿ ಆತನನ್ನು ದಫನ್ ಮಾಡಲಾಯಿತು.

ಇತಿಹಾಸ ಲೇಖಕ ಫರಿಶ್ತಾನ ವಿಮರ್ಶೆ :

ಹಿಜರಿ ೧೦೧೩ರಲ್ಲಿ "ರಾಖಿಮುಲ್ ಹುರೂಫ್ ಮಹಮ್ಮದ್ ಖಾಸಿಂ ಫರಿಶ್ತಾ" ಈ ಐತಿಹಾಸಿಕ ಪುಸ್ತಕದ ಲೇಖಕನಾಗಿದ್ದನು. ಈ ಲೇಖಕನಿಗೆ ಆದಿಲ್‌ಶಾಹನ ಮಗಳಾದ ಸುಲ್ತಾನ ಬೇಗಂಳ ಪಾಲಕಿಯ ಜೊತೆಯಲ್ಲಿ ಬಿಜಾಪುರಕ್ಕೆ ಹೋಗುವ ಅವಕಾಶ ಸಿಕ್ಕಿತು. ನಾನು ಖ್ವಾಜಾ ಮಿರ್ಜಾ ಅಲಿ ಅಸ್ಫಾ ಆಯಿನಿಯವರೊಂದಿಗ ಭೇಟಿಯಾಗಿದ್ದೆ. ಅವರು ಅಸೀರ್ ಕೋಟೆಯ ಗೆಲುವಿನ ನಂತರ ಫಾರೂಖಿ ಸುಲ್ತಾನರ ಗ್ರಂಥಾಲಯಕ್ಕೆ ಭೇಟಿ ಕೊಟ್ಟಿದ್ದರು. ಹಾಗೂ ಅಲ್ಲಿನ ಅನೇಕ ಗ್ರಂಥಗಳನ್ನು ಓದಿದ್ದರು. ನಾನು ಯಾವ ಪುಸ್ತಕದಲ್ಲಿ ಫಾರೂಖಿಯ ವಂಶಸ್ಥರ ಚರಿತ್ರೆಯು ದಾಖಲಾಗಿದೆ ಎಂಬ ಬಗ್ಗೆ ತಿಳಿಸಲು ಖ್ವಾಜಾ ಮೀರ್ಜಾ ಅಲಿ ಅಸ್ಫಾ ಆಯಿನಿಯವರನ್ನು ಕೇಳಿದ್ದೆ. ಆದರೆ ಅವರು ನನಗೆ ಗೊತ್ತಿಲ್ಲವೆಂದು ತಿಳಿಸಿದರು. ಆದರೂ ನನಗೆ ಆ ಪುಸ್ತಕ ಸಿಕ್ಕಿತು. ಅದರ ಒಂದು ಹಾಳೆಯಲ್ಲಿ ಮಲಿಕ್‌ರಾಜ ಫಾರೂಖಿಯ ವಂಶ ಹಾಗೂ ಅವನು ಸಿಂಹಾಸನವನ್ನೇರಿದ ಹಾಗೂ ಆತನ ಮರಣದ ದಿನಾಂಕಗಳು ಬರೆಯಲ್ಪಟ್ಟಿದ್ದವು. ನಾನು ಆಪುಸ್ತಕದ ನಕಲು ಮಾಡಿಕೊಂಡೆನು. ಆ ಹಾಳೆಯನ್ನು ದೃಷ್ಟಿಸಿ ನೋಡಿದಾಗ ಅದರಿಂದ ತಿಳಿದಿದ್ದೇನೆಂದರೆ– ಮಲಿಕ್‌ರಾಜಾ ಫಾರೂಖಿಯು ಹಜ್ರತ್ ಉಮರ್‌ನ ಆ ಹಾಳೆಯನ್ನು ದೃಷ್ಟಿಸಿ ನೋಡಿದಾಗ ತಿಳಿದು ಬಂದದ್ದೇನೆಂದರೆ ಮಲಿಕ್ ರಾಜ ಫಾರೂಖಿಯು ತನ್ನನ್ನು ಹಜ್ರತ್ ಉಮರ್‌ನ ಸಂತಾನವೆಂದು ಹೇಳಿಕೊಂಡಿದ್ದಾನೆ.

ಮಲಿಕ್‌ರಾಜ ಫಾರೂಖಿಯ ಸಂಬಂಧ ಮತ್ತು ವಂಶಾವಳಿ :

ಮೇಲೆ ತಿಳಿಸಿರುವ ಪುಸ್ತಕದಲ್ಲಿ ವಂಶವೃಕ್ಷವೂ ಹೀಗಿದೆ. ಮಲಿಕ್ ರಾಜಾಬಿನ್, ಖಾನ್ ಜಹಾನ್‌ಬಿನ್, ಅಲಿಖಾನ್‌ಬಿನ್, ಉಸ್ಮಾನ್‌ಬಿನ್, ಶಮ್‌ಊನ್‌ಷಾಹ್‌ಬಿನ್,

ಅಶ್‌ಅತ್‌ಶಾಹ್‌ಬಿನ್, ಸಿಕಂದರಶಾಹ ಬಿನ್, ತಲಹಶಾಹ ಬಿನ್, ದಾನಿಯಲ್ ಶಾಹ್ ಬಿನ್, ಅಶ್‌ಅತ್‌ಶಾಹ ಬಿನ್, ಅರ್‌ಮಿಯಾನಶಾಹ ಬಿನ್, ಸುಲ್ತಾನುತ್ತಾರಕೀನ್, ಬುರ್‌ಹಾನುಲ್ ಆರಿಫೀನ್, ಇಬ್ರಾಹಿಂಶಾಹ ಬಲ್‌ಖಿ ಬಿನ್, ಅಧಮ್‌ಷಾಹ್ ಬಿನ್, ಮಹಮೂದಷಾಹ ಬಿನ್, ಅಹಮ್ಮದಷಾಹ ಬಿನ್, ಮಹಮ್ಮದಷಾಹ ಬಿನ್ ಆಜಂಷಾಹ ಬಿನ್, ಅಸ್ಗರ್‌ಬಿನ್, ಮಹಮ್ಮದ ಅಹಮ್ಮದ ಬಿನ್, ಮಹಮ್ಮದ್ ಬಿನ್, ಅಬ್ದುಲ್ಲಾ ಬಿನ್, ಅಮೀರುಲ್ ಮೋಮಿನೀನ್ ಹಜ್ರತ್ ಉಮರ್‌ಫಾರೂಖ್ (ರಜಿ) ೨೩ ತಲೆ

ಶೇಖ್ ಜೈನ್‌ರ ಅಭಿಪ್ರಾಯ :

ಮಲಿಕ್ ರಾಜ ಫಾರೂಖಿಯು ಶೇಖುಲ್ ಇಸ್ಲಾಂ ಶೇಖೆ ಜೇನ್ ದೌಲತಾಬಾದಿಯವ ಮುರೀದನಾಗಿದ್ದನು. ಆತನು "ಖುರ್ಖ-ಯೆ-ಇರಾದಾತ್" (ಪವಿತ್ರ ಉಡುಪ)ನ್ನು ಪಡೆದಿದ್ದನು. ಇದೇ ಉಡುಪನ್ನು ಆತನು ತನ್ನ ಮಗನಾದ ನಸೀರ್‌ಖಾನನಿಗೆ ಉತ್ತರಾಧಿಕಾರಿಯನ್ನಾಗಿ ನೇಮಿಸುವಾಗ ನೀಡಿದ್ದನು. ಅಲ್ಲಿಂದ ಸುಮಾರು ಇನ್ನೂರು ವರ್ಷಗಳ ತನಕ ಇದೇ ರೀತಿಯಾಗಿ ತಮ್ಮ ಉತ್ತರಾಧಿಕಾರಿಯನ್ನು ನೇಮಿಸುವ ಸಂದರ್ಭದಲ್ಲಿ ಪ್ರತಿಯೊಬ್ಬ ಬಾದಷಾಹನೂ ಸಹ ನೀಡುತ್ತಾ ಬಂದರು. ಎಲ್ಲಿಯವರೆಗೆಂದರೆ ಈ ವಂಶದ ಅಂತಿಮ ಬಾದಷಾಹ ಬಹಾದುರ್‌ಖಾನ ಫಾರೂಖಿ ಎಂಬುವನು ಈ (ಖುರ್ಖಾ) ಪವಿತ್ರ ಉಡುಪನ್ನು ತನ್ನ ತಂದೆ ಅಲಿಖಾನ್‌ರವರಿಂದ, ವಂಶಪಾರಂಪರ್ಯವಾಗಿ ಬಂದದ್ದನ್ನು ಪಡೆದಿದ್ದನು.

ಮಲಿಕ್‌ರಾಜಾ ಫಾರೂಖಿಯ ಶಾಸನ ಕಾಲ ಹತ್ತೊಂಬತ್ತು ವರ್ಷಗಳು.

■

*

೨. ನಸೀರ್‌ಖಾನ್ ಫಾರುಖಿ ಬಿನ್ ಮಲಿಕ್‌ರಾಜ ಫಾರುಖಿ

ವಿದ್ಯೆಯೊಂದಿಗೆ ಸ್ನೇಹ :

ನಸೀರ್‌ಖಾನನ ಆಡಳಿತ ಕಾಲದಲ್ಲಿ ಫಾರೂಖಿ ವಂಶವು ಬಹಳ ಪ್ರಗತಿಯನ್ನು ಸಾಧಿಸಿತು. ಅದರ ಮರ್ಯಾದೆ, ಗೌರವಗಳು ಮೊದಲಿಗಿಂತಲೂ ಹೆಚ್ಚಾಗಿ ಬೆಳೆದವು. ನಸೀರ್‌ಖಾನನು ಬೇರೆ ಬಾದಷಾಹರಂತೆ ತನ್ನ ದರಬಾರಿನಲ್ಲಿ ಶ್ರೇಷ್ಠ ವಿದ್ವಾಂಸರನ್ನು ಸೇರಿಸಿಕೊಂಡನು. ಆತನು ಶಿಕ್ಷಣ ಮತ್ತು ವಿದ್ಯೆಗೆ ಎಷ್ಟು ಗೌರವಿಸುತ್ತಿದ್ದನೆಂದರೆ, ಇಡೀ ಖಾನ್ ದೇಶವು ವಿದ್ಯೆಯ ಕೇಂದ್ರಸ್ಥಾನವೆನಿಸಿಕೊಂಡಿತು. ನಾಸಿರ್‌ಖಾನನು ದೊಡ್ಡ-ದೊಡ್ಡ ವಿದ್ವಾಂಸರಿಗೆ ತನ್ನ ಶಕ್ತಿಮೀರಿ ಬಹುಮಾನಗಳನ್ನು, ಜಾಗೀರಿಗಳನ್ನು ನೀಡುತ್ತಿದ್ದನು.

ಖಾನ ದೇಶದಲ್ಲಿ ನಸೀರನ ಹೆಸರಿನ ಖುತ್ಬಾ :

ನಸೀರ್‌ಖಾನನಿಗೆ ಸುಲ್ತಾನ್ ಅಹಮ್ಮದ್ ಗುಜರಾತಿಯು ಸಾಮ್ರಾಜ್ಯದ ರಾಜದಂಡವನ್ನು 'ನಸೀರ್‌ಖಾನ್' ಎಂಬ ಬಿರುದನ್ನು ನೀಡಿದ್ದನು. ನಸೀರ್‌ಖಾನನು ಖಾನ್ ದೇಶದಲ್ಲಿ ತನ್ನ ಹೆಸರಿನ (ಖುತ್ಬಾ) ಪ್ರಶಂಸಾತ್ಮ ಪ್ರವಚನ ಓದಲು ಆಜ್ಞಾಪಿಸಿದ್ದನು. ಹೀಗೆ ತನ್ನ ತಂದೆಯ ಕಾಲದಲ್ಲಿ ಯಾವ ಆಸೆಗಳು ಪೂರ್ಣವಾಗಿರಲಿಲ್ಲವೋ ಅವುಗಳನ್ನು ಮಗನು ಪೂರ್ಣಗೊಳಿಸಿದನು. ಇದರ ಪ್ರಕಾರ ಫಾರೂಖಿ ವಂಶವು ಸಹ ಬಾದಶಾಹರ ಸ್ಥಾನದಲ್ಲಿ ಎಣಿಸಲಾರಂಭಿಸಿದರು.

ನಸೀರ್‌ಖಾನನು ಬಾದಶಾಹರಿಗೆ ಯೋಗ್ಯವಾದ ಕೆಂಪು ಪರದಾ, ಛತ್ರಿ-ಚಾಮರಗಳನ್ನು ತಲೆಯ ಮೇಲೆ ಹಿಡಿಸಲು ತಯಾರು ಮಾಡಿಸಿದನು. ಈತನು ನಸೀರ ಕೋಟೆಯನ್ನು ಆಸಾಬಿರನ ಹಿಡಿತದಿಂದ ಬಿಡಿಸಿ, ಬುರ್ಹಾನ್‌ಪುರವೆಂಬ ಹೆಸರಿನಲ್ಲಿ ಅಭಿವೃದ್ಧಿಗೊಳಿಸಿದನು. ಇದರ ವಿವರಣೆಯನ್ನು ಮುಂದೆ ಕೊಡಲಾಗುವುದು.

ಅಸೀರ್ ಕೋಟೆ :

ಆಸಾಬೀರ್‌ನ ತಾತ ಮುತ್ತಾತಂದಿರು ಖಾನ್‌ದೇಶದ ಬೆಟ್ಟದ ಮೇಲೆ ಕಲ್ಲು-ಮಣ್ಣಿನಿಂದ ಕಟ್ಟಲ್ಪಟ್ಟ ಒಂದು ಕೋಟೆಯನ್ನು ನಿರ್ಮಿಸಿದ್ದರು. ಈ ವಂಶಸ್ಥರ ಕುಲಕಸುಬೆಂದರೆ, ಭೂಮಿಯನ್ನು ಉಳುವ ರೈತರ ಕುಟುಂಬದವರಾಗಿದ್ದರು. ಒಂದು ಕಾಲದಲ್ಲಿ ಈ ಕೋಟೆಯಲ್ಲಿ ತುಂಬಾ ಜನರು ವಾಸಿಸುತ್ತಿದ್ದರು. ಈ ಕೋಟೆಯನ್ನು ಕಟ್ಟಿದ ಒಂದು ನೂರು ವರ್ಷಗಳ ನಂತರ ಆಸಾಬೀರನು ತನ್ನ ವಂಶಸ್ಥರೊಂದಿಗೆ ಅಲ್ಲಿಯೇ ವಾಸಿಸುತ್ತಿದ್ದನು. ಆತನು ಅದರ ಪ್ರಗತಿಯನ್ನು ಮಾಡಿದ್ದನು. ಆತನ ಹತ್ತಿರ ಐದು ಸಾವಿರ ಎಮ್ಮೆಗಳು, ಐದು ಸಾವಿರ ಹಸುಗಳು, ಇಪ್ಪತ್ತು ಸಾವಿರ ಮೇಕೆಗಳು ಮತ್ತು ಕುರಿಗಳು ಮತ್ತು ಒಂದು ಸಾವಿರ ಹೆಣ್ಣು ಕುದುರೆಗಳಿದ್ದವು.

ಆಸಾಬೀರ :

ಆಸಾಬೀರನ ಸೇವಕರು ಸಂಖ್ಯೆಯಲ್ಲಿ, ಆ ಪ್ರಾಣಿಗಳನ್ನೆಲ್ಲ ನಿಗಾ ಮಾಡುವವರು, ರಕ್ಷಕರು ಸುಮಾರು ಎರಡು ಸಾವಿರ ಜನರಿದ್ದರು. ಖಾನ್ ದೇಶ ಮತ್ತು ಕೋಂದವಾರದ ಜನರಿಗೆ ಹಣದ ಅವಶ್ಯಕತೆ ಏನಾದರೂ ಬೀಳುತ್ತಿದ್ದರೆ, ಆಸಾಬೀರನು ಸಾಲದ ರೂಪದಲ್ಲಿ ನೀಡುತ್ತಿದ್ದನು. ಆಹಾರ ಮುಂತಾದ ಖರ್ಚುಗಳಿಗೆ ಇವನಲ್ಲಿ ಸಾಲ ಮಾಡುತ್ತಿದ್ದರು. ಅಮೀರರಿಗೆ ಒಳ್ಳೆಯ ಕುದುರೆಗಳ ಅವಶ್ಯಕತೆ ಏನಾದರೂ ಬೀಳುತ್ತಿದ್ದರೆ, ಆತನಿಂದ ಕುದುರೆಗಳನ್ನು ಖರೀದಿಸುತ್ತಿದ್ದರು. ಈ ಮನುಷ್ಯ ಜಾತಿಯಿಂದ ಗೊಲ್ಲನಾಗಿದ್ದನು. ಆದರೆ ಆತನ ಕೀರ್ತಿ ಬಹಳ ದೂರ-ದೂರದ ರಾಜ್ಯಗಳಲ್ಲೂ ಹರಡಿತ್ತು.

ಆಸಾಬೀರನ ದರ್ಜೆ :

ಆಸಾಬೀರನ ಸ್ಥಾನ ಎಷ್ಟಿತ್ತೆಂದರೆ-ಎಲ್ಲಿಯಾದರೂ ಜಗಳವಾದರೆ, ಅದರ ತೀರ್ಮಾನಕ್ಕೆ ಈತನೇ ಬೇಕಾಗಿದ್ದಿತ್ತು. ಈತನ ಮಾತನ್ನು ಯಾರೂ ಮೀರುತ್ತಿರಲಿಲ್ಲ. ಯಾವ ಸಮಸ್ಯೆಗಳು ಉದ್ಭವಿಸುತ್ತಿದ್ದರೂ ಜನರು ಈತನನ್ನೇ ಹುಡುಕಿಕೊಂಡು ಬರುತ್ತಿದ್ದರು. ಈತನ ತೀರ್ಮಾನಗಳಲ್ಲಿ ನ್ಯಾಯವಿರುತ್ತಿತ್ತು.

ಭಯಾನಕ ಬರಗಾಲ :

ಮಲಿಕ್ ರಾಜ ಫಾರೂಖಿಯನ ಶಾಸನ ಕಾಲಕ್ಕೆ ಸ್ವಲ್ಪ ಮೊದಲು ಖಾನ್‌ದೇಶ, ಮಾಳವ, ಬರಾರ್, ಸುಲ್ತಾನ್‌ಪುರ ಮತ್ತು ನದರ್‌ಬಾರ್‌ಗಳಲ್ಲಿ ಭಯಂಕರ ಬರಗಾಲವು ಕಾಣಿಸಿಕೊಂಡಿತು. ಗಂಡವಾಡ ಪ್ರದೇಶದಲ್ಲಂತೂ ಎಂತಹ ಬರಗಾಲ ಬಂದಿತ್ತೆಂದರೆ, ಎಲ್ಲರೂ ನಾಶವಾಗಿ ಕೇವಲ ಎರಡು ಮೂರು ಸಾವಿರ ಜನರು ಉಳಿದಿದ್ದರು. ಇದೇ ರೀತಿ ಖಾನ ದೇಶದ ಬಾದಶಾಹರುಗಳು ನಾಶವಾಗಿದ್ದರು. ಇವರಲ್ಲಿ ಯಾರಾದರೂ ಉಳಿದಿದ್ದರೆ, ಅವರು ಆಸಾಬೀರನ ಹತ್ತಿರ ಹೋಗಿ ಬದುಕಿಕೊಂಡಿದ್ದರು.

ಕೊಂಡವಾಡದಲ್ಲಿ ಆಸಾಬೀರನ ಹತ್ತಿರ ಎರಡು ಸಾವಿರ ಆಹಾರದ ಮೂಟೆಗಳು ಶೇಖರಗೊಂಡಿದ್ದವು. ಇವನ ಗುಮಾಸ್ತರುಗಳು ಆಹಾರವನ್ನು ಮಾರಿ ಬಂದ ಹಣವನ್ನು ಆಸಾಬೀರನ ಹತ್ತಿರಕ್ಕೆ ಕಳುಹಿಸುತ್ತಿದ್ದರು. ಆಸಾಬೀರನ ಸೊಸೆ ತುಂಬಾ ದಯಾಳು ಮತ್ತು ಕರುಣಾಮಯಿಯಾಗಿದ್ದಳು. ಆಕೆಯು ತನ್ನ ಗೌಡನಿಗೊಂದು ದಿನ ಹೀಗೆ ಹೇಳಿದಳು. ಭಗವಂತನು ನಮಗೆ ಬಹಳವಾಗಿ ನೀಡಿದ್ದಾನೆ. ಈ ಜಗತ್ತಿನ ವಸ್ತುಗಳ ಮೇಲೆ ಅತಿ ಆಸೆ ಇರಬಾರದು. ನಾವು ತಿನ್ನುವ ಆಹಾರವನ್ನು ಹಣಕ್ಕೆ ಮಾರಿ ಹಣ ಸಂಗ್ರಹಿಸುವುದು ಪಾಪ ಕಾರ್ಯವಾಗುತ್ತದೆ. ನಾವು ಯಾವುದಾದರೊಂದು ಶ್ರೇಷ್ಠ ಕಾರ್ಯವನ್ನು ಮಾಡೋಣ ಎಂದಳು. ಆಸಾಬೀರನು ಅವಳ ಆಸೆ ಏನಿದೆ? ಎಂದು ಕೇಳಿದನು. ಆಗ ಆಕೆಯ ಸಲಹೆ ಹೀಗಿತ್ತು. ನನ್ನ ಅಭಿಪ್ರಾಯದಲ್ಲಿ ಇಲ್ಲಿ ಒಂದು ಕೋಟೆಯನ್ನು ನಿರ್ಮಿಸೋಣ. ಅದು ಸುಣ್ಣದ ಗಾರೆ ಮತ್ತು ಕಲ್ಲುಗಳಿಯಿಂದಾಗಿರಬೇಕು. ಅದರಲ್ಲಿ ಒಂದು ಅನ್ನಛತ್ರವನ್ನು ಕಟ್ಟಿಸೋಣ. ಇದರಲ್ಲಿ ಪ್ರತಿನಿತ್ಯ ಹಸಿದ ಫಕೀರರು, ಬಡವರು ಎಲ್ಲರೂ ಊಟ ಮಾಡಬೇಕು. ಇದಕ್ಕೆಲ್ಲ ನಮ್ಮ ಖರ್ಚಿನಿಂದಲೇ ಮಾಡೋಣವೆಂದು ತಿಳಿಸಿದಳು. ಆಸಾಬೀರನು ತನ್ನ ಹೆಂಡತಿಯ ಸಲಹೆಯನ್ನು ಒಪ್ಪಿ ಅದನ್ನು ಪೂರೈಸಿದನು. ಖಾನ್‌ದೇಶ ಮತ್ತು ಅದರ ಸುತ್ತಮುತ್ತಲ ಪ್ರದೇಶಗಳಲ್ಲಿ ಅನೇಕ ಕಡೆ ಅನ್ನಛತ್ರ ಮತ್ತು ನೀರಿನ ಅರವಟ್ಟಿಗೆಗಳನ್ನು ಸ್ಥಾಪಿಸಿದನು. ಹಳೆಯ ನಾಲ್ಕು ಗೋಡೆಗಳನ್ನು ಕೆಡವಿಸಿ ಸುಣ್ಣದ ಗಾರೆ ಮತ್ತು ಕಲ್ಲುಗಳಿಂದ ದೃಢವಾದ ಕೋಟೆಯನ್ನು ಕಟ್ಟಿಸಿದನು. ಮೊದ-ಮೊದಲು ಈ ಕೋಟೆಯ ಹೆಸರು "ಖಿಲಾ-ಎ-ಆಸಾಬೀರ್" ಅಂದರೆ ಆಸಾಬೀರನ ಕೋಟೆಯೆಂದೆ ಕರೆಯುತ್ತಿದ್ದರು. ದಿನೇ ದಿನೇ ಆ ಹೆಸರು ಜನರ ಬಾಯಿಂದ ಬಾಯಿಗೆ ಬದಲಾಗುತ್ತಾ ಆಸೀರ್ ಕೋಟೆಯೆಂದು ಕರೆಯಲಾಯಿತು.

ಸುಲ್ತಾನ್ ಫೈರೋಜ್‌ಶಾಹನಿಗೆ ಈ ವಿಚಾರವು ತಿಳಿದ ಮೇಲೆ ಆತನು ಆಸೀರ ಶಾಸಕನಿಗೊಂದು ಪತ್ರ ಬರೆದು ಒಬ್ಬ ಅಹಿರ ಗೊಲ್ಲನಿಗೆ ಇಂತಹ ಬಿಗಿಯಾದ ಕೋಟೆಯನ್ನು ಕಟ್ಟಲು ಏಕೆ ಅನುಮತಿಯನ್ನು ಕೊಡಲಾಯಿತು? ಎಂದು ಕೇಳಿದ್ದನು. ಇದಾದ ನಂತರ ಮಲಿಕ್ ರಾಜ ಫಾರೂಖಿಯು ಖಾನ್ ದೇಶದ ಶಾಸಕನಾಗಿ ನೇಮಕನಾದಾಗ, ಆಸಾಬೀರನು ಮಲಿಕ್ ರಾಜಾಫಾರೂಖಿಯ ಅಧೀನತೆಯನ್ನು ಒಪ್ಪಿಕೊಂಡು, ಶಾಸಕನಿಗೆ ಪ್ರತಿವರ್ಷ ಕಪ್ಪ-ಕಾಣಿಕೆಗಳನ್ನು ನೀಡುತ್ತಿದ್ದನು. ಕೆಲವೊಮ್ಮೆ ಮಲಿಕ್ ರಾಜ ಫಾರೂಖಿಯು ಆ ಕೋಟೆಯನ್ನು ಗೆಲ್ಲಬೇಕೆಂಬ ಮನಸ್ಸು ಮಾಡುತ್ತಿದ್ದರೂ, ಆ ಕೋಟೆಯ ದೃಢತೆಯನ್ನು ನೋಡಿ ಗೆಲ್ಲುವ ಆಸೆಯನ್ನು ಕೈ ಬಿಡುತ್ತಿದ್ದನು.

ನಸೀರ್‌ಖಾನನು ಆಸೀರ್‌ಕೋಟೆಯನ್ನು ಗೆಲ್ಲುವ ಇಚ್ಛೆಯನ್ನು ವ್ಯಕ್ತಪಡಿಸಿದನು :

ಖಾನ್ ದೇಶದ ಶಾಸನವು ನಸೀರ್‌ಖಾನ್ ಫಾರೂಖಿಯ ಕೈಗೆ ಬಂದಾಗ

ಆತನು ಆಸೀರ್ ಕೋಟೆಯನ್ನು ಗೆಲ್ಲುವ ಸಾಹಸವನ್ನು ವ್ಯಕ್ತಪಡಿಸಿದನು. ಆತನು ತನ್ನ ಶಾಸನ ಕಾಲದ ಪ್ರಾರಂಭಿಕ ದಿನಗಳಲ್ಲಿಯೇ ಅದರ ಬಗ್ಗೆ ಒಂದು ಉಪಾಯವನ್ನು ಯೋಚಿಸಿದ್ದನು. ಆಸಾಬೀರನಿಗೆ ಈ ಸಂದೇಶವನ್ನು ಕಳುಹಿಸಿದ್ದುದೇನೆಂದರೆ–"ಬಕ್ಲಾನದ ರಾಜ ರಣಥಂಭೋರ್‌ನು ಬಹಳ ಸೈನ್ಯವನ್ನು ಸಂಗ್ರಹಿಸಿಕೊಂಡಿರುತ್ತಾನೆ. ಈ ರಾಜರು ಮೊದಲಿನಂತೆ ನಮ್ಮ ಅಧೀನತೆಯನ್ನು ಒಪ್ಪಿಕೊಂಡಿಲ್ಲ. ಅಷ್ಟೇ ಅಲ್ಲದೇ ರಾಜಾ ಖೇರಾಲನ ಪಿತೂರಿ ಪ್ರೇರಣೆಯಿಂದ ವಿದ್ರೋಹವನ್ನು ಮಾಡಲು ಸಿದ್ಧರಾಗಿದ್ದಾರೆ. ಅವರು ನನ್ನ ರಾಜ್ಯದ ಮೇಲೆ ಆಕ್ರಮಣವನ್ನು ಮಾಡಲು ಸಿದ್ಧರಾಗಿದ್ದಾರೆ. ಥಾಲೇಜ್ ಕೋಟೆಯ ಮೇಲೆ ನಮ್ಮ ತಂದೆಯವರ ಆಜ್ಞೆಯಂತೆ ಮಲಿಕ್ ಇಫ್ತೆಖಾರ್ ಎಂಬುವನು ವಶಪಡಿಸಿಕೊಂಡಿದ್ದಾನೆ. ಮಲಿಂಗ್ ಕೋಟೆಯ ಶಾಸಕನ ಮೇಲೆ ನನಗೆ ನಂಬಿಕೆ ಇಲ್ಲ. ಏಕೆಂದರೆ ಆತನು ಶತ್ರುಗಳ ಸಮೀಪದಲ್ಲಿದ್ದಾನೆ. ಆದ್ದರಿಂದ ನಾನು ಬಯಸುವುದೇನೆಂದರೆ–ನನ್ನ ಮಕ್ಕಳನ್ನು ನಿನ್ನ ಹತ್ತಿರ ಆಸೀರ್ ಕೋಟೆಯಲ್ಲಿರಲು ಕಳುಹಿಸಬೇಕೆಂದಿದ್ದೇನೆ. ಏಕೆಂದರೆ ಅಲ್ಲಿ ಅವರು ಸುರಕ್ಷಿತರಾಗಿರುವರೆಂಬ ನಂಬಿಕೆ ನನಗಿದೆ. ಆಗ ನಾನು ಪೂರ್ಣ ರೀತಿಯಲ್ಲಿ ಶತ್ರುಗಳನ್ನು ದಮನಿಸಬಹುದಾಗಿದೆ.

ಕೋಟೆಯನ್ನು ಗೆಲ್ಲುವ ಉತ್ತಮ ಉಪಾಯ :

ಆಸಾಬೀರನು ನಸೀರಖಾನನ ವಿಚಾರವನ್ನು ಒಪ್ಪಿ ಬಹಳ ಸಂತೋಷದಿಂದ ಆಹ್ವಾನಿಸಿದನು. ಎಲ್ಲ ರೀತಿಯ ರಕ್ಷಣೆಯನ್ನು ಕೊಡಲು ಪ್ರಾಮಾಣಿಕವಾಗಿ ಒಪ್ಪಿದನು. ಇದಕ್ಕಾಗಿ ಆಸೀರ ಕೋಟೆಯಲ್ಲಿ ಶಾಹಿ ವಂಶಸ್ಥರು ಉಳಿದುಕೊಳ್ಳಲು ಯೋಗ್ಯವಾದ ಒಂದು ಮನೆಯನ್ನು ನಿಗದಿಪಡಿಸಿದನು. ನಸೀರ್‌ಖಾನನು ಮೊದಲು ಕೆಲವು ಸ್ತ್ರೀಯರನ್ನು ಗುಂಪು ಗುಂಪಾಗಿ ಪಲ್ಲಕ್ಕಿಗಳಲ್ಲಿ ಆಸೀರ್ ಕೋಟೆಯಲ್ಲಿ ಕಳುಹಿಸಿ ಕೊಟ್ಟನು. ಅವರಿಗೆ ಹೇಳಿ ಕಳುಹಿಸಿದ್ದುದೇನೆಂದರೆ–ಒಂದು ವೇಳೆ ಆಸಾಬೀರನ ಕಡೆಯ ಸ್ತ್ರೀಯರು ನಿಮ್ಮಲಿಗೆ ಬಂದರೆ ಅವರೊಂದಿಗೆ ಉತ್ತಮ ವರ್ತನೆಯನ್ನು ತೋರಬೇಕೆಂದು ತಿಳಿಸಿದನು. ಅವರನ್ನು ಗೌರವಿಸಬೇಕೆಂದು ಹೇಳಿ ಕಳುಹಿಸಿದನು.

ಇದಾದ ನಂತರ ನಸೀರ್‌ಖಾನನು ಮಾರನೇ ದಿನ ಮತ್ತೆ ಕೆಲವು ಪಲ್ಲಕ್ಕಿಗಳನ್ನು ತರಿಸಿ ಅವುಗಳಲ್ಲಿ ಎರಡುನೂರು ಸವಾರರಿಗೆ ಬುರ್ಖಾಗಳನ್ನು ತೊಡಿಸಿ ಪಲ್ಲಕ್ಕಿಗಳಲ್ಲಿ ಕೂರಿಸಿದನು. ಪ್ರಚುರಪಡಿಸಿದ್ದುದೇನೆಂದರೆ–ನಸೀರ್‌ಖಾನನ ತಾಯಿಯವರು ಮತ್ತು ಅಂತಃಪುರದ ಇನ್ನೂ ಅನೇಕ ಸ್ತ್ರೀಯರು ಆಸೀರ ಕೋಟೆಗೆ ಹೋಗುತ್ತಿದ್ದಾರೆಂದು, ಈ ಪಲ್ಲಕ್ಕಿಗಳು ಕೋಟೆಯ ಪಕ್ಕಕ್ಕೆ ತಲುಪಿದಾಗ ಆಸಾಬೀರನು ತನ್ನ ಕೋಟೆಯ ರಕ್ಷಕನಿಗೆ ಆಜ್ಞಾಪಿಸಿದ್ದುದೇನೆಂದರೆ–ಪಲ್ಲಕ್ಕಿಗಳು ಬಾಗಿಲಿನ ಹತ್ತಿರ ಬಂದಾಗ, ಬಾಗಿಲನ್ನು ತೆರೆದು ನೀನು ಪಕ್ಕಕ್ಕೆ ಹೋಗಿ ಬಿಡು ಎಂದು. ಅದರಂತೆಯೇ ಆಜ್ಞೆಯನ್ನು ಪಾಲಿಸಲಾಯಿತು. ಬಂದ ಪಲ್ಲಕ್ಕಿಗಳೆಲ್ಲ ಕೋಟೆಯ ಪ್ರಾಂಗಣದಲ್ಲಿ ತಲುಪಿದವು.

ಆಸಾಬೀರನ ಕೊಲೆ :

ಪಲ್ಲಕ್ಕಿಗಳ ಒಳಗೆ ಕುಳಿತಿದ್ದ ಕಪಟ ನವ ಯುವಕರು ತಾವು ಎಲ್ಲಿಗೆ ತಲುಪಬೇಕಾಗಿತ್ತೋ ಅಲ್ಲಿಗೆ ಯಾವ ಅಡ್ಡಿ ಆತಂಕವಿಲ್ಲದೆ ತಲುಪಿದ್ದೇವೆ ಎಂದು ದೃಢಪಡಿಸಿಕೊಂಡರು. ಒಳಗಿನಿಂದ ಹೊರ ಬರುವಾಗ ಕತ್ತಿಗಳನ್ನು ಹಿರಿದುಕೊಂಡೇ ಇಳಿದರು. ನೇರವಾಗಿ ಆಸಾಬೀರನ ಮನೆಯ ಕಡೆ ನುಗ್ಗಿದರು. ಅಲ್ಲಿ ಆಸಾಬೀರನಿಗೆ ಮತ್ತು ಆತನ ಮಕ್ಕಳಿಗೆ ಈ ಮೋಸದ ವ್ಯವಸ್ಥೆ ಏನೂ ಗೊತ್ತಿಲ್ಲದೆ, ಇವರನ್ನು ಸ್ವಾಗತಿಸಲು ಮುಂದೆ ಬಂದರು. ನಸೀರ್‌ಖಾನನ ಸಿಪಾಯಿಗಳು ತಕ್ಷಣ ಅವರೆಲ್ಲರನ್ನೂ ಕೊಚ್ಚಿ ಹಾಕಿದರು.

ಆಸೀರ್ ಕೋಟೆಯ ಕೈವಶ :

ಕೋಟೆಯಲ್ಲಿದ್ದ ಎಲ್ಲಾ ಜನರು ಆಸಾಬೀರನ ಕೊಲೆಯಿಂದ ತುಂಬಾ ಭಯಭೀತರಾದರು. ಅವರೆಲ್ಲರೂ ಬಹಳ ನಮ್ರತೆಯಿಂದ ಪ್ರಾಣಭಿಕ್ಷೆಯನ್ನು, ಶಾಂತಿಯನ್ನೂ ಕೋರಿದರು. ಅವರೆಲ್ಲರೂ ತಮ್ಮ ಪರಿವಾರಗಳೊಂದಿಗೆ ಕೋಟೆಯನ್ನು ಬಿಟ್ಟು ಆಚೆಗೆ ಹೊರಟು ಹೋದರು. ಈ ರೀತಿಯಲ್ಲಿ ಆಸೀರ ಕೋಟೆಗೆ ಗೆಲುವು ಸಿಕ್ಕಿತು. ಈ ಗೆಲುವಿನ ಸುದ್ದಿ ನಸೀರ್‌ಖಾನನಿಗೆ ತಲುಪಿದಾಗ ಆತನು ಮಲಂಗ್ ಕೋಟೆಯಲ್ಲಿದ್ದನು. ತಕ್ಷಣ ಅಸೀರ್ ಕೋಟೆಗೆ ಓಡಿ ಬಂದನು. ಬಂದ ತಕ್ಷಣ ಕೋಟೆಯ ರಿಪೇರಿ ಕಾರ್ಯದಲ್ಲಿ ಹೊಸ ರೂಪವನ್ನು ಕೊಡಲು ಪ್ರಾರಂಭಿಸಿದನು.

ಫಾರೂಖಿ ಕೃತ್ಯದ ಕಥೆ :

ಅಲ್ಲಿಗೆ ಸುಮಾರು ನೂರ ಮೂವತ್ತು (೧೩೦) ವರ್ಷಗಳ ಮೊದಲು, ಶೇರ್‌ಶಾಹ ಸೂರಿಯು 'ರಹ್ತಾಸ್' ಕೋಟೆಯನ್ನು ಇದೇ ರೀತಿಯಲ್ಲಿ ಗೆದ್ದಿದ್ದನ್ನೂ ಇಲ್ಲಿ ಸ್ಮರಿಸಿಕೊಳ್ಳಬಹುದು. ಒಂದು ಮಾತು ಸತ್ಯವಾದುದೆಂದರೆ, ಫಾರೂಖಿ ಆಡಳಿತಗಾರರು ಆಸಾಬೀರನ ಯಾವ ವಸ್ತುವನ್ನಾಗಲೀ, ಸಂಪತ್ತನ್ನಾಗಲಿ ಮುಟ್ಟಿರಲಿಲ್ಲ. ಅವೆಲ್ಲವನ್ನು ನ್ಯಾಸದ ರೂಪದಲ್ಲಿ ಉಳಿಸಿದ್ದನು. ಎಲ್ಲಿಯವರೆಗೆ ಅವೆಲ್ಲವೂ ಸುರಕ್ಷಿತವಾಗಿದ್ದುವೆಂದರೆ, ಅಕ್ಬರ್ ಬಾದಶಾಹನಿಗೆ ಈ ಕೋಟೆಯು ವಶವಾದ ನಂತರ ಆ ಸಂಪತ್ತೆಲ್ಲಾ ಆತನ ವಶಕ್ಕೆ ಹೋಯಿತು. ಆದರೆ ಫಾರೂಖಿ ವಂಶಸ್ಥರು ಆ ಸಂಪತ್ತನ್ನು ಮುಟ್ಟಿರಲಿಲ್ಲ. ಅಕ್ಬರನು ಈ ಚಿನ್ನ-ಬೆಳ್ಳಿ ಸಂಪತ್ತನೆಲ್ಲಾ ತನ್ನ ವಶಕ್ಕೆ ಬಂದ ಮೇಲೆ ಎಲ್ಲಾ ಬೆಳ್ಳಿಯನ್ನು ಕರಗಿಸಿ ಅಕ್ಬರನ ಹೆಸರಿನಲ್ಲಿ "ಅಕ್ಬರಿ ಸಿಕ್ಕ" ನಾಣ್ಯಗಳನ್ನು ಮುದ್ರಿಸಿದ್ದನು.

ಶೇಖ್ ಜೈನುದ್ದೀನರ ಆಗಮನ :

ಈ ಗೆಲುವಿನ ನಂತರ ದೌಲತಾಬಾದ್‌ನಿಂದ ಶೇಖ್ ಜೈನುದ್ದೀನರು ಖಾನ್ ದೇಶಕ್ಕೆ ಬಂದರು. ತನಗೆ ಶುಭಾಶಯಗಳನ್ನು ಹೇಳಬೇಕೆಂಬ ಉದ್ದೇಶಕ್ಕೆಂದು ಬರುವ

ಸಮಾಚಾರವನ್ನು ತಿಳಿದ ನಸೀರ್‌ಖಾನನು ತನ್ನೆಲ್ಲಾ ಅಮೀರರು, ದರ್ಬಾರಿ ಸದಸ್ಯರು, ಸೈನ್ಯ ಸಮೇತರಾಗಿ ಶೇಖ್ ಸಾಹೇಬರನ್ನು ಸ್ವಾಗತಿಸಲು ಕೋಟೆಯ ಹೊರಗೆ ಬಂದರು. ಆತನು ತಪತಿ ನದಿಯ ದಡದವರೆಗೆ ಬಂದು ಶೇಖ ಸಾಹಬರನ್ನು ಎದುರುಗೊಂಡನು. ಇಂದು ಇಲ್ಲಿ ಅವರ ಹೆಸರಿನ ಕಸಬಾ ಜೈನಾಬಾದ್ ಎಂದಿರುವುದನ್ನು ಜ್ಞಾಪಿಸಿಕೊಳ್ಳಬಹುದು. ಅವರನ್ನು ಮೊಟ್ಟ ಮೊದಲು ಅಸೀರ್ ಕೋಟೆಯಲ್ಲಿ ಪಾದಾರ್ಪಣೆ ಮಾಡಲು ವಿನಂತಿಸಿಕೊಂಡನು. ಇದಕ್ಕೆ ಶೇಖ ಸಾಹಬರು ಹೇಳಿದರು– "ನನಗೆ ತಪತಿ ನದಿಯನ್ನು ದಾಟುವ ಆಜ್ಞೆ ಅಲ್ಲಾನಿಂದ ಸಿಕ್ಕಿಲ್ಲ" ಎಂದು. ಸಿಕ್ಕಿದ್ದರೆ ನಾನು ಖಂಡಿತ ಅಸೀರ್ ಕೋಟೆಗೆ ಬರುತ್ತಿದ್ದೆ ಎಂದು ಹೇಳಿದರು.

ಪವಿತ್ರ ಭೇಟಿ :

ನಸೀರ್‌ಖಾನನು ಶೇಖ್ ಸಾಹಬರಿಂದ ಅನುಮತಿಯನ್ನು ಪಡೆದು ವಾಪಸ್ಸಾದನು. ತಪತಿ ನದಿಯ ದಡದಲ್ಲಿ ಇಂದಿನ ಬುರ್ಹಾನ್‌ಪುರದ ಹತ್ತಿರ ತನ್ನ ಸೈನ್ಯ ಸಮೇತ ಉಳಿದುಕೊಂಡನು. ಆತನು ಪ್ರತಿನಿತ್ಯ ಶೇಖ್ ಸಾಹೇಬರ ಹತ್ತಿರ ಐದು ಸಲ ಬಂದು ಭೇಟಿ ಮಾಡುತ್ತಿದ್ದನು. ಇದನ್ನು ಆತನು ಪವಿತ್ರ ಭೇಟಿ ಎಂದು ತಿಳಿದಿದ್ದನು. ಎರಡು ವಾರಗಳ ತನಕ ಇದೇ ರೀತಿ ಪವಿತ್ರ ಭೇಟಿಯನ್ನು ನಡೆಸಿದನು. ಶೇಖ್‌ಸಾಹೇಬರು ನಂತರ ದೌಲತಾಬಾದಿಗೆ ಹೊರಡಲು ಸಿದ್ಧರಾದರು. ನಸೀರಖಾನನು ತನಗೆ ಸಾಧ್ಯವಾದಷ್ಟು ಶೇಖ್ ಸಾಹೇಬರ ಸೇವೆಯನ್ನು ಮಾಡಿದನು. ಆತನು ಅವರ ಖಾನಖಾಹ್ ಕಟ್ಟಲು ಯಾವುದಾದರೊಂದು ಜಾಗವನ್ನು ತೋರಿಸಲು ಪ್ರಾರ್ಥಿಸಿಕೊಂಡನು. ಶೇಖ್‌ಸಾಹಬರು ಉತ್ತರಿಸಿದರು.–ಫಕೀರರಿಗೆ, ದರ್ವೇಶರರಿಗೆ ಯಾವುದೇ ನಿಶ್ಚಿತ ಜಾಗವಾಗಲೀ, ಕಸಬಾ, ಪರಗಣಗಳಾಗಲಿ ಬೇಕಿರುವುದಿಲ್ಲ. ಇವೆಲ್ಲವೂ ಪ್ರಾಪಂಚಿಕ ವಸ್ತುಗಳು. ಇವು ಪ್ರಪಂಚಕ್ಕೆ ಮಾತ್ರ ಸೀಮಿತ. ನಮಗೆ ಇವುಗಳಿಂದ ಯಾವುದೇ ಸಂಬಂಧವಿಲ್ಲ. ನಮ್ಮಂಥ ಫಕೀರರು ಈ ಸಂಕಟಗಳಲ್ಲೇಕೆ ಸಿಕ್ಕಿ ಹಾಕಿಕೊಳ್ಳಬೇಕು?

ಶೇಖ್ ಜೈನುದ್ದೀನರ ಆಸೆ :

ನಸೀರ್‌ಖಾನನು ಮತ್ತೊಮ್ಮೆ ಅದನ್ನೇ ಕೇಳಿದನು. ಇದಕ್ಕೆ ಶೇಖ ಸಾಹೇಬರು ನಾನು ಈ ದೇಶದಲ್ಲಿ ನನ್ನ ಹೆಸರಿನ ಜ್ವರ (ತಪಸ್ಸು)ವನ್ನು ಇಚ್ಚಿಸುತ್ತೇನೆ. ಈ ನದಿಯ ದಡದಲ್ಲಿ ನೀನು ಎಲ್ಲಿ ಉಳಿದುಕೊಂಡಿದ್ದೀಯೋ ಅಲ್ಲಿ ಒಂದು ನಗರವನ್ನು ನಿರ್ಮಿಸು. ಅದರ ಹೆಸರನ್ನು 'ಜೈನಾಬಾದ್' ಎಂದಿಡು ಎಂದರು.

ಜೈನಾಬಾದ್ ಮತ್ತು ಬುರ್ಹಾನ್‌ಪುರದ ನಿರ್ಮಾಣ :

ಶೇಖ್ ಜೈನುದ್ದೀನರ ನಾಲಿಗೆಯಿಂದ ಈ ಶಬ್ದಗಳು ಹೊರಟ ತಕ್ಷಣ ನಸೀರ್‌ಖಾನನು ಬಹಳ ಸಂತೋಷಪಟ್ಟನು. ಅದೇ ಘಳಿಗೆಯಲ್ಲಿ ತನ್ನ ದರ್ಬಾರಿಗಳಿಗೆ

ಆಜ್ಞಾಪಿಸಿದ್ದೇನೆಂದರೆ–ತಕ್ಷಣ ಬುರ್ಹಾನ್‌ಪುರ ಮತ್ತು ಜೈನಾಬಾದ ನಗರಗಳ ನಿರ್ಮಾಣ ಕಾರ್ಯಗಳನ್ನು ಪ್ರಾರಂಭಿಸಬೇಕೆಂದು. ಮೂರನೇ ದಿನವೇ ಶೇಖ್ ಸಾಹಬರು ದೌಲತಾಬಾದಿಗೆ ಅಲ್ಲಿಂದ ಹೊರಟರು. ನಗರಗಳ ನಿರ್ಮಾಣ ಕಾರ್ಯಗಳು ಮುಗಿದಮೇಲೆ ನಸೀರ್‌ಖಾನನು ಬುರ್ಹಾನ್‌ಪುರವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು.

ಥಾಲೇಜ್ ಕೋಟೆಯನ್ನು ತನ್ನ ವಶಕ್ಕೆ :

ಒಂದು ಗಾದೆ ಇದೆ– "ಒಂದು ಉಡುಪಿನಲ್ಲಿ ಇಬ್ಬರು ಫಖೀರರನ್ನು ಇಡಬಹುದು. ಆದರೆ ಒಂದು ರಾಜ್ಯದಲ್ಲಿ ಇಬ್ಬರು ಬಾದಶಾಹರನ್ನು ಇಡಲಾಗದು." ಇದರಂತೆ ನಸೀರ್‌ಖಾನನು ತನ್ನ ಸಹೋದರನ ವಶದಲ್ಲಿರುವ ಥಾಲೇಜ್ ಕೋಟೆಯಲ್ಲಿ ಆತನನ್ನು ಬಿಡಲು ಇಷ್ಟಪಡಲಿಲ್ಲ. ಏಕೆಂದರೆ ಒಂದು ರಾಜ್ಯದಲ್ಲಿ ಒಬ್ಬರ ಆಡಳಿತವಿರಬೇಕೆಂದು ಇಚ್ಚಿಸಿದನು. ಸ್ವತಂತ್ರ ನಿರ್ಣಯಗಳನ್ನು ತೆಗೆದುಕೊಳ್ಳಬೇಕಾದರೆ ಒಬ್ಬರ ಹಿಡಿತದಲ್ಲಿ ಆ ರಾಜ್ಯವಿರಬೇಕು. ಈ ವಿಚಾರದಲ್ಲಿ ನಸೀರ್‌ಖಾನನು ಮಾಳವದ ಶಾಸಕನ ಸಹಾಯವನ್ನು ಕೋರಿದನು. ಅಲ್ಲಿನ ಶಾಸಕನಾದ ಹೋಷಂಗನು ಈತನ ಸಂಬಂಧಿಯೇ ಆಗಿದ್ದನು. ಏಕೆಂದರೆ ಈತನೊಬ್ಬನೇ ಥಾಲೇಜನ್ನು ವಶಪಡಿಸಿಕೊಳ್ಳುವುದು ಸ್ವಲ್ಪ ಕಷ್ಟಕರವಾಗಿತ್ತು.

ಥಾಲೇಜ್ ಕೋಟೆಯ ಗೆಲುವು :

ಹಿಜರಿ ೮೩೦ರಲ್ಲಿ ನಸೀರ್‌ಖಾನನು ಥಾಲೇಜ್ ಕೋಟೆಯನ್ನು ಮುತ್ತಿದನು. ಮಲಿಕ್ ಇಫ್ತೆಖಾರನು ಸುಲ್ತಾನ್ ಅಹಮ್ಮದಶಾಹ ಗುಜರಾತಿಯ ಸಹಾಯವನ್ನು ಕೋರಿದನು. ಗುಜರಾತಿ ಶಾಸಕನು ಸಹಾಯಕ್ಕೆ ಒಪ್ಪಿದನು. ಸೈನ್ಯವನ್ನೊದಗಿಸಿಕೊಂಡು ಪ್ರಯಾಣಕ್ಕೆ ಸಿದ್ಧನಾದನು. ಇಷ್ಟರಲ್ಲಿ ಸುಲ್ತಾನ ಹೋಷಂಗನ ಮಗ ಘಜ್ನೈನಖಾನನು ಹದಿನೈದು ಸಾವಿರ ಸೈನ್ಯದೊಂದಿಗೆ ನಸೀರ್‌ಖಾನನ ಸಹಾಯಕ್ಕೆ ಬಂದು ಬಿಟ್ಟನು. ಸುಲ್ತಾನ್ ಅಹಮ್ಮದ ಗುಜರಾತಿಯು ಥಾಲೇಜಿಗೆ ತಲುಪುವುದರೊಳಗೆ ಕೋಟೆಯು ನಸೀರ್‌ಖಾನನ ವಶವಾಗಿತ್ತು. ಇಫ್ತಖಾರ್‌ನನ್ನು ಬಂಧಿಸಿ ಅಸೀರ್ ಕೋಟೆಗೆ ಕಳುಹಿಸಲಾಗಿತ್ತು.

ಸುಲ್ತಾನ್‌ಪುರ, ನದರ್‌ಬಾರ್‌ಗಳ ಮೇಲೆ ಸೈನಿಕಾಚರಣೆ :

ಇದಾದ ನಂತರ ಗಜ್ನೈನ್‌ಖಾನ ಮತ್ತು ನಸೀರ್‌ಖಾನರು ಸುಲ್ತಾನ್‌ಪುರ ಮತ್ತು ನದರ್‌ಬಾರ್‌ಗಳ ಆಡಳಿತವನ್ನು ಗುಜರಾತಿ ಶಾಸಕರುಗಳಿಂದ ಬಿಡಿಸಿ ಮಾಳ್ವ ಸಾಮ್ರಾಜ್ಯದಲ್ಲಿ ಸೇರಿಸಲು ಇಚ್ಚಿಸಿದರು. ಈ ಇಬ್ಬರೂ ಈ ಉದ್ದೇಶದಿಂದ ಸುಲ್ತಾನ್‌ಪುರವನ್ನು ತಲುಪಿದರು. ಅಲ್ಲಿನ ಶಾಸಕನಾದ ಮಲಿಕ್ ಹಬೀಬನು ತಕ್ಷಣ ಸುಲ್ತಾನ್ ಅಹಮ್ಮದ್ ಗುಜರಾತಿಗೆ ಸುದ್ದಿಯನ್ನು ಮುಟ್ಟಿಸಿದನು.

ಸುಲ್ತಾನ್ ಅಹಮದ್ ಗುಜರಾತಿಯ ಕ್ರಮ :

ಸುಲ್ತಾನ ಅಹಮ್ಮದ ಗುಜರಾತಿಗೆ ಈ ಸುದ್ದಿ ತಿಳಿದ ಕೂಡಲೇ ಆತನು ಕೋಪೋದ್ರಿಕ್ತನಾದನು. ಆತನು ಒಂದು ವಿಶಾಲ ಸೈನ್ಯವನ್ನು ಸಂಗ್ರಹಿಸಿಕೊಂಡನು. ಅತಿ ಶೀಘ್ರದಲ್ಲಿಯೇ ಪ್ರಯಾಣದ ಮಜಲುಗಳನ್ನು ಪಾರು ಮಾಡುತ್ತಾ ಸುಲ್ತಾನಪುರದತ್ತ ಹೊರಟನು. ತಾನು ಹೊರಡುವ ಮೊದಲೇ ಮಲಿಕ್ ಮಹಮ್ಮದ ತುರ್ಕನನ್ನು ಆತನ ಸಂಗಡ ಒಂದು ವಿಶಾಲ ಸೈನ್ಯವನ್ನು ಕೊಟ್ಟು ಕಳುಹಿಸಿದ್ದನು. ಘಜ್ನೈನ ಮತ್ತು ನಜೀರ್‌ಖಾನರಿಗೆ ಮಹಮ್ಮದ ತುರ್ಕನು ಸೈನ್ಯದೊಂದಿಗೆ ಬರುತ್ತಿದ್ದಾನೆಂಬ ಸುದ್ದಿ ತಿಳಿದ ತಕ್ಷಣ ಅದೇ ರಾತ್ರಿ ಆತನು ಮಾಂಡುವಿನತ್ತ ಓಡಿ ಹೋದನು. ಎರಡನೆಯವನು ಥಾಲೇಜ್ ಕೋಟೆಯಲ್ಲಿ ಅಡಗಿಕೊಂಡನು.

ನಸೀರ್ ಖಾನನು ಕ್ಷಮೆಯಾಚಿಸಿದನು :

ಮಲಿಕ್ ಮಹಮೂದನು ಥಾಲೇಜ್ ತಲುಪಿ ಕೋಟೆಯನ್ನು ಮುತ್ತಿದನು. ಸುಲ್ತಾನ್ ಅಹಮ್ಮದ ಗುಜರಾತಿಯು ಸುಲ್ತಾನಪುರದಲ್ಲಿ ತಂಗಿದನು. ಈ ಪರಿಸ್ಥಿತಿಯಿಂದ ನಸೀರ್‌ಖಾನನು ತುಂಬಾ ಚಿಂತತನಾದನು. ಈ ಕಷ್ಟಗಳಿಂದ ಪಾರಾಗಲು ಬೇರೆ ಯಾವುದೇ ದಾರಿ ಕಾಣದಾದ್ದರಿಂದ, ಆತನು ಗುಜರಾತಿ ಅಮೀರರಿಗೆ ನಗದು ಹಣವನ್ನು ನೀಡಿ ಸುಲ್ತಾನ ಗುಜರಾತಿಯನ್ನು ಶಾಂತಿಗಾಗಿ ಒಪ್ಪಿಸಲು ಕಳುಹಿಸಿಕೊಟ್ಟನು. ಗುಜರಾತಿ ಅಮೀರರು ಸಂದರ್ಭದ ಪರಿಸ್ಥಿತಿಗಳಿಂದ ಗುಜರಾತಿ ಸುಲ್ತಾನನನ್ನು ಒಪ್ಪಿಸಿ, ನಸೀರ್‌ಖಾನನನ್ನು ಕ್ಷಮಿಸುವಂತೆ ಮಾಡಿದರು.

ಗೌರವ ಮತ್ತು ಪ್ರಶಸ್ತಿ :

ನಸೀರ್‌ಖಾನನಿಗೆ ಅಲ್ಲಿಯ ತನಕ ಮಲಿಕ್‌ನಸೀರ್ ಎಂದೇ ಸಂಬೋಧಿಸಲಾಗುತ್ತಿತ್ತು. ಈಗ ಸುಲ್ತಾನ್ ಅಹಮ್ಮದ್ ಗುಜರಾತಿಯು, "ನಸೀರ್‌ಖಾನ್" ಎಂಬ ಬಿರುದನ್ನು ನೀಡಿ ಗೌರವಿಸಿದನು. ಇದರ ಜೊತೆಗೆ ಕೆಂಪು ಪರದಾ ಶಾಹಿ ಮತ್ತು ಛತ್ರ-ಚಾಮರಗಳನ್ನು ನೀಡಿದನು. ಇದರಿಂದ ತೃಪ್ತನಾದ ನಸೀರ್‌ಖಾನನು ಐದು ಬಲಿಷ್ಠ ಆನೆಗಳನ್ನು, ನಲವತ್ತು ಅರಬೀ ಮತ್ತು ಇರಾಖೀ ಕುದುರೆಗಳನ್ನು, ಅಪಾರ ನಗದು ಹಣವನ್ನು ಸುಲ್ತಾನ್ ಅಹಮ್ಮದ ಗುಜರಾತಿಗೆ ನೀಡಿದನು. ನಂತರ ಅಹಮ್ಮದ ಗುಜರಾತಿಯು ತನ್ನ ರಾಜಧಾನಿಗೆ ಹಿಂತಿರುಗಿದನು.

ಶಹಜಾದಿ ಜೈನಬ್‌ಳ ಮದುವೆ :

ಇದಾದ ಕೆಲವು ದಿನಗಳ ನಂತರ ದಖನ್ ಶಾಸಕನಾದ ಅಹಮ್ಮದ್‌ಶಾಹ ಬಹುಮನಿಯು ತನ್ನ ಕೆಲವು ಹೆಸರಾಂತ ಅಮೀರರನ್ನು ಬುರ್ಹಾನಪುರಕ್ಕೆ ಕಳುಹಿಸಿ, ತನ್ನ ಮಗನಿಗೆ ನಸೀರ್‌ಖಾನನ ಮಗಳನ್ನು ವಿವಾಹ ಮಾಡಿಕೊಡುವಂತೆ ಕೇಳಿಸಿದನು.

ನಸೀರ್‌ಖಾನನು ಈ ಸಂಬಂಧವನ್ನು ಬಹಳ ಸಂತೋಷದಿಂದ ಒಪ್ಪಿಕೊಂಡನು. ಒಂದು ವೈಭವಪೂರ್ಣ ಸಮಾರಂಭವನ್ನೇರ್ಪಡಿಸಿ, ಮದುವೆಯನ್ನು ಮಾಡಿ ಮುಗಿಸಿ, ತನ್ನ ಮಗಳ ಪಲ್ಲಕ್ಕಿಯನ್ನು ಮಹಮ್ಮದಾಬಾದ ಬೀದರ್ ನಗರಕ್ಕೆ ಕಳುಹಿಸಿಕೊಟ್ಟನು.

ರಾಜಾ ಕಾನ್ಹಾನ ಮೇಲೆ ಅಹಮದ್ ಗುಜರಾತಿಯ ಆಕ್ರಮಣ :

ಹಿಜರಿ ೮೩೩ರಲ್ಲಿ ಜಾಲ್ವಾರಾದ ರಾಜ ಕಾನ್ಹಾನ ಮೇಲೆ, ಗುಜರಾತಿ ಶಾಸಕನು ಸೈನಿಕ ಆಕ್ರಮಣವನ್ನು ಮಾಡಿದನು. ರಾಜಾ ಕಾನ್ಹಾನು ಪಲಾಯನವನ್ನು ಮಾಡಿ, ಅಸೀರ್ ಕೋಟೆಗೆ ಬಂದು, ನಸೀರ್‌ಖಾನನಿಗೆ ಸಹಾಯವನ್ನು ಮಾಡಲು ಕೇಳಿದನು. ನಸೀರ್‌ಖಾನನು ಕಾನ್ಹಾನನ್ನು ಗುಟ್ಟಾಗಿ ಕರೆದು ಹೀಗೆ ಹೇಳಿದನು.–ನನ್ನಲ್ಲಿ ಗುಜರಾತಿನ ಬಾದಶಾಹನ ಶತ್ರುತ್ವವನ್ನು ಕಟ್ಟಿಕೊಳ್ಳುವಷ್ಟು ಸಾಮರ್ಥ್ಯವಿಲ್ಲ. ನನ್ನ ಅಭಿಪ್ರಾಯದಲ್ಲಿ ನೀನು ದಕ್ಷಿಣದ ಶಾಸಕನಾದ ಅಹಮದ್‌ಶಾಹ ಬಹಮನಿಯ ದರ್ಬಾರಿಗೆ ಹೋಗಿ ಸಹಾಯದ ಬೇಡಿಕೆಯನ್ನಿಡು. ಆತನು ಖಂಡಿತ ನಿನಗೆ ಸಹಾಯವನ್ನು ಮಾಡಬಹುದು. ಆತನು ನಿನ್ನ ದೇಶವನ್ನು ಗುಜರಾತಿಗಳ ಹಿಡಿತದಿಂದ ಬಿಡಿಸಿ, ನಿನ್ನ ವಶಕ್ಕೆ ಕೊಡಿಸಬಲ್ಲ. ನೀನು ಇಷ್ಟಪಟ್ಟರೆ ನಾನೂ ಅವರಿಗೆ ಒಂದು ಪತ್ರವನ್ನು ಬರೆದು ಶಿಫಾರಸ್ಸು ಮಾಡಬಲ್ಲೆ. ಈ ಮಾತನ್ನು ಕೇಳಿದ ಖಾನನು ತಕ್ಷಣ ನಸೀರ್‌ಖಾನನ ಮೇಲೆ ಕೋಪಗೊಂಡನು. ಈಗ ಏನೂ ಮಾಡಲು ಸಾಧ್ಯವಿರಲಿಲ್ಲ. ನಸೀರ್‌ಖಾನನು ಇದ್ದ ಸಂಗತಿಯನ್ನು ತಿಳಿಸಿ ಬಿಟ್ಟಿದ್ದನು. ನಸೀರನು ಮೋಸದ ಮಾತನ್ನು ಹೇಳಿರಲಿಲ್ಲ. ಕೊನೆಗೆ ರಾಜಾಕ ಾನ್ಹಾನು ಸುಲ್ತಾನ್ ಅಹಮ್ಮದಶಾಹ ಬಹಮನಿಯ ಹತ್ತಿರ ತಲುಪಿದನು. ಆತನಿಂದ ಸಹಾಯವನ್ನು ಬೇಡಿದನು. ಅಹಮ್ಮದಶಾಹನು ರಾಜನಿಗೆ ತುಂಬಾ ಗೌರವಿಸಿದನು. ಹಾಗೂ ತನ್ನ ಕೆಲವು ಅಮೀರರ ಸಂಗಡ ತನ್ನ ಸೈನ್ಯವನ್ನು ಕೊಟ್ಟು, ರಾಜನ ಜೊತೆಯಲ್ಲಿ ಜಾಲ್ವಾರದತ್ತ ಕಳುಹಿಸಿಕೊಟ್ಟನು.

ದಖನ್ನಿನ ಸೈನ್ಯದೊಂದಿಗೆ ಗುಜರಾತಿಗಳ ಯುದ್ಧ :

ರಾಜಾ ಕಾನ್ಹನು ಬಹಮನಿ ಅಮೀರರ ಸೈನ್ಯದೊಂದಿಗೆ ನದರ್‌ಬಾರ್ ಪ್ರದೇಶಕ್ಕೆ ತಲುಪಿದನು. ಅಲ್ಲಿ ಲೂಟಿ–ಕೊಲೆ–ವಿನಾಶಗಳನ್ನು ಪ್ರಾರಂಭಿಸಿದನು. ಇದೇ ಸಂದರ್ಭದಲ್ಲಿ ಗುಜರಾತಿ ಸೈನ್ಯವು ಸಹ ಅಲ್ಲಿಗೆ ಬಂದಿತು. ಇಬ್ಬರಲ್ಲೂ ಯುದ್ಧವೂ ಪ್ರಾರಂಭವಾಯಿತು. ಬಹಮನಿ ಸೈನಿಕರು ಯುದ್ಧ ಮೈದಾನದಿಂದ ಓಡಲಾರಂಭಿಸಿದರು. ಕೆಲವರು ಹತರಾದರು. ಈ ಯುದ್ಧದಲ್ಲಿ ಗುಜರಾತಿಯವರ ಕೈ ಮೇಲಾಯಿತು. ಅವರು ದಖನ್ನಿನ ಸೈನಿಕರನ್ನು ಸಂಪೂರ್ಣವಾಗಿ ನಾಶಪಡಿಸಿದರು.

ಎರಡನೇ ಸೋಲು :

ಸುಲ್ತಾನ್ ಅಹಮ್ಮದಶಾಹ ಬಹಮನಿಗೆ ಈ ಸೋಲಿನ ವಿಷಯ ತಿಳಿದು ತನ್ನ ಸೈನ್ಯದ ನಷ್ಟವನ್ನು, ಅದರ ಸೇಡನ್ನು ತೀರಿಸಿಕೊಳ್ಳುವ ಮನಸ್ಸು ಮಾಡಿದನು. ಈ

ಉದ್ದೇಶಕ್ಕಾಗಿ ತನ್ನ ಮಗ ಅಲ್ಲಾವುದ್ದೀನ್‌ನನ್ನು ಕರೆದು ಆತನೊಂದಿಗೆ ಒಂದು ವಿಶಾಲ ಸೈನ್ಯವನ್ನು ಕೊಟ್ಟು ಕಳುಹಿಸಿದನು. ಷಹಜಾದನು ದೌಲತಾಬಾದಿಗೆ ಬಂದನು. ಅಲ್ಲಿ ರಾಜಾ ಕಾನ್ಹಾ ಮತ್ತು ನಸೀರ್‌ಖಾನರು ಷಹಜಾದನನ್ನು ಕಂಡರು. ಯುದ್ಧವಾಯಿತು. ಈ ಸಲವೂ ಗುಜರಾತಿಗಳು ದಖನ್ನಿನ ಸೈನ್ಯವನ್ನು ಸೋಲಿಸಿದರು. ರಾಜಾ ಕಾನ್ಹನು ಯುದ್ಧ ಮೈದಾನದಿಂದ ಓಡಿ, ಬೆಟ್ಟ ಗುಡ್ಡಗಳಲ್ಲಿ ಅಡಗಿಕೊಂಡನು. ಗುಜರಾತಿಗಳು ಖಾನ ದೇಶವನ್ನು ಬಹಳ ಕೆಟ್ಟ ರೀತಿಯಲ್ಲಿ ನಾಶ ಪಡಿಸಿದರು. ನಂತರ ತಮ್ಮ ದೇಶಕ್ಕೆ ವಾಪಸ್ಸಾದರು. ಇದಾದ ನಂತರ ನಸೀರಖಾನನು ಬುರ್ಹಾನ್‌ಪುರಕ್ಕೆ ವಾಪಸ್ಸಾಗಿ ತನ್ನ ರಾಜ್ಯದ ಆಡಳಿತದ ಕಡೆ ಗಮನವನ್ನು ನೀಡಿದನು.

ನಸೀರ್‌ಖಾನನ ಮಗಳ ಚಿಂತೆ :

ಹಿಜರಿ ೮೪೦ರಲ್ಲಿ ನಸೀರ್‌ಖಾನ ಫಾರೂಖಿಯ ಮಗಳು ಜೈನಬ್‌ಳು ತನ್ನ ಗಂಡನಿಗೆ ಆದ ಅವಮಾನಕ್ಕೆ ತನ್ನ ತಂದೆಯೇ ಕಾರಣನೆಂದು ದೂರು ಮಾಡಿದಳು. ತಂದೆಗೆ ದುಃಖದಿಂದ ತಿಳಿಸಿದ್ದುದೇನೆಂದರೆ,–ತಾನು ತುಂಬಾ ಚಿಂತಿತಳಾಗಿ, ದಿನಗಳನ್ನು ಸಾಗಿಸುತ್ತಿದ್ದೇನೆ. ಈ ವಿಚಾರದಲ್ಲಿ ನಸೀರ್‌ಖಾನನು ತನ್ನ ಅಳಿಯನನ್ನು ಕೇಳಿದ್ದಕ್ಕೆ ಇಬ್ಬರಲ್ಲೂ ಜಗಳವೇ ಆಗಿ ಹೋಯಿತು.

ನಸೀರ್‌ಖಾನನ ಕೆಟ್ಟ ವರ್ತನೆ :

ನಸೀರ್‌ಖಾನ್ ಫಾರೂಖಿಯು ಸುಲ್ತಾನ್ ಅಹಮ್ಮದ್‌ಶಾಹ ಗುಜರಾತಿಯ ಸಲಹೆಯಂತೆ ಬರಾರ್‌ನ್ನು ಗೆಲ್ಲುವ ಇಚ್ಛೆಯನ್ನು ಪ್ರಕಟಿಸಿದನು. ಬರಾರ್‌ನ ಅಮೀರರು ದಖನ್ನಿನ ಬಹಮನಿ ಸುಲ್ತಾನರ ಅಧೀನತೆಯಿಂದ ಬೇರ್ಪಟ್ಟವರಾಗಿದ್ದರು. ಈ ಸುದ್ದಿಯು ತಿಳಿದ ತಕ್ಷಣ ಅವರು ಬಹಳ ಸಂತೋಷಪಟ್ಟರು. ಒಂದು ಸಂದೇಶವನ್ನು "ತಾವು ಹಜರತ್ ಉಮರ್ ಫಾರೂಖರ ಸಂತಾನದಿಂದ ಬಂದವರಾಗಿದ್ದೀರಿ. ತಮ್ಮ ಸೇವೆಯನ್ನು ಮಾಡುವುದು ನಮಗೆ ಹೆಮ್ಮೆ ಎನಿಸುತ್ತದೆ. ಅಲ್ಲಾಹನು ಆ ದಿನವನ್ನು ಬೇಗ ಕರುಣಿಸಲಿ. ನಾವು ತಮ್ಮ ಸೇವೆಯಲ್ಲಿ ಹುತಾತ್ಮರಾಗಲು ಸಿದ್ಧರಿದ್ದೇವೆ.

ಬರಾರಿನಲ್ಲಿ ನಸೀರ್‌ಖಾನನ ಖುತ್ಬಾ (ಪ್ರಶಂಸೆ) :

ಖಾನ್–ಜಹಾನನು ದಖನ್ನಿನ ಹಾಗೂ ಬರಾರ್‌ನ ಸೇನಾದಂಡನಾಯಕನಾಗಿದ್ದನು. ಬಹಮನಿ ಸಾಮ್ರಾಜ್ಯದ ದಕ್ಷಿಣದ ಸೇನಾಪತಿಯೂ ಆಗಿದ್ದನು. ಆತನಿಗೆ ಬರಾರೀ ಶಾಸನದ ವಿಚಾರ ತಿಳಿದಾಗ, ಆತನು ನಾಲ ಕೋಟೆಯಲ್ಲಿ ಆಶ್ರಯವನ್ನು ಪಡೆದನು. ಆತನು ಸುಲ್ತಾನ್ ಅಲ್ಲಾವುದ್ದೀನನಿಗೆ ಎಲ್ಲ ಸಮಾಚಾರವನ್ನು ತಿಳಿಸಿದನು. ಬರಾರಿ ಅಮೀರರು ರಾಜ್ಯದಲ್ಲಿ ನಸೀರ್‌ಖಾನನ ಖುತ್ಬಾವನ್ನು ಓದಲು ಪ್ರಾರಂಭಿಸಿದರು. ಹಾಗೂ ಕೋಟೆಯನ್ನು ಮುತ್ತಿದರು.

ನಸೀರ್‌ಖಾನನು ಬರಾರಿನಿಂದ ಹೊರಕ್ಕೆ :

ಅಲ್ಲಾವುದ್ದೀನನು ತಕ್ಷಣ ಮಲಿಕುತುಜ್ಜಾರ್ ಎಂಬುವನನ್ನು ದೌಲತಾಬಾದಿನ ಸೇನಾಧಿಪತಿಯನ್ನಾಗಿ ನೇಮಿಸಿದನು. ಆತನ ಜೊತೆಯಲ್ಲಿ ಮೊಗಲ ಅಮೀರರನ್ನು ಮತ್ತು ಬಹಮನಿ ಸಿಪಾಯಿಗಳ ಒಂದು ವಿಶಾಲ ಸೈನ್ಯವನ್ನು ಕೊಟ್ಟು ಬರಾರಿಗೆ ಕಳುಹಿಸಿದನು. ನಸೀರ್‌ಖಾನನಲ್ಲಿ ಮಲಿಕುತುಜ್ಜಾರನನ್ನು ಎದುರಿಸುವ ಶಕ್ತಿ ಇರಲಿಲ್ಲ. ಆತನು ಬರಾರಿ ಅಮೀರರೊಂದಿಗೆ ಬರಾರ್‌ನಿಂದ ಹೊರಗೆ ಹೋಗಿ ಬಿಟ್ಟನು. ಮಲಿಕುತುಜ್ಜಾರ್‌ನು ನಸೀರ್‌ಖಾನನನ್ನು ಹಿಂಬಾಲಿಸಿದನು. ನಸೀರ್‌ಖಾನನು ಸುಲ್ತಾನ್ ಅಹಮ್ಮದ್‌ಶಾಹ ಗುಜರಾತಿಯ ಸಹಾಯವನ್ನು ಮೊದಲೇ ಬೇಡಿದ್ದನು. ಆದ್ದರಿಂದ ಆತನ ಅಧೀನದಲ್ಲಿದ್ದ ತಲಂಗ್ ಕೋಟೆಯತ್ತ ಓಡಿದನು.

ಮಲಿಕ್‌ತ್ತುಜ್ಜಾರ್‌ನ ಆಗಮನ :

ಮಲಿಕುತ್ತುಜ್ಜಾರ್‌ನು ಬುರ್ಹಾನಪುರಕ್ಕೆ ಬಂದನು. ಅಲ್ಲಿನ ಎಲ್ಲಾ ಒಳ್ಳೆಯ ಕಟ್ಟಡಗಳಿಗೆ ಬೆಂಕಿ ಹಚ್ಚಿ, ಎಲ್ಲವನ್ನೂ ನಾಶಪಡಿಸಿದನು. ಆತನಿಗೆ ಸುಲ್ತಾನ್‌ಪುರ ಮತ್ತು ನದರ್‌ಬಾರಿನ ಮತ್ತು ಮಾಳವದ ಸೈನ್ಯ ಬರುತ್ತಿದೆ ಎಂಬ ವಿಚಾರ ತಿಳಿದ ತಕ್ಷಣ, ತಲಂಗ್ ಕೋಟೆಯತ್ತ ಹೊರಟನು. ನಸೀರ್‌ಖಾನನಿಗೆ ಸೈನ್ಯದ ನೆರವು ಸಿಗುವುದಕ್ಕೆ ಮೊದಲೇ ಶತ್ರುವನ್ನು ಸೋಲಿಸಬೇಕೆಂಬ ಇಚ್ಛೆಯಾಗಿತ್ತು.

ಮಲಿಕುತುಜ್ಜಾರ್ ಮತ್ತು ನಸೀರ್‌ಖಾನನೊಡನೆ ಯುದ್ಧ :

ಮೂರು ಸಾವಿರ ಸೈನಿಕರೊಂದಿಗೆ ಮಲಿಕುತುಜ್ಜಾರ್‌ನು ಬಹಳ ದೂರದ ದಾರಿಯನ್ನು ಪಾರು ಮಾಡಿ, ಆಯಾಸಪಟ್ಟುಕೊಂಡು, ತಲಂಗ್ ಕೋಟೆಯ ಸುತ್ತಲಿನ ಪ್ರದೇಶವನ್ನು ತಲುಪಿದ. ನಸೀರ್‌ಖಾನನ ಸಹಾಯಕ್ಕೆ ಬರುತ್ತಿದ್ದ ಸೈನ್ಯದ ಬೆಂಬಲವನ್ನು ನಿರೀಕ್ಷಿಸದೆಯೇ, ಒಂದು ವಿಶಾಲ ಸೈನ್ಯದ ಜೊತೆಯಲ್ಲಿ ಯುದ್ಧ ಮೈದಾನಕ್ಕೆ ಬಂದನು. ಈ ಯುದ್ಧದಲ್ಲಿ ನಸೀರ್‌ಖಾನನಿಗೆ ಸೋಲುಂಟಾಯಿತು. ಆತನ ಎಲ್ಲಾ ಯುದ್ಧದ ಸಾಮಾನುಗಳೊಂದಿಗೆ ಇಪ್ಪತ್ತು ಆನೆಗಳೂ ಶತ್ರುವಿನ ಕೈವಶವಾದವು. ಬಹಳ ಕಷ್ಟಪಟ್ಟು ತನ್ನ ಪ್ರಾಣವನ್ನು ಉಳಿಸಿಕೊಂಡು ತಲಂಗ್‌ಕೋಟೆಯಲ್ಲಿ ಅಡಗಿಕೊಂಡನು.

ಮರಣ :

ನಸೀರ್‌ಖಾನನಿಗೆ ಈ ಸೋಲಿನ ದುಃಖ ಎಷ್ಟಾಯಿತೆಂದರೆ–ಕೊನೆಗೆ ಆತನು ಕಾಯಿಲೆ ಬಿದ್ದನು. ಈ ಕಾಯಿಲೆಯೇ ಆತನ ಅಂತ್ಯಕ್ಕೆ ಕಾರಣವಾಯಿತು. ಅದೇ ವರ್ಷ ರಬೀವುಲ್‌ಅವ್ವಲ್‌ನ ಮೂರನೇ ತಾರೀಖಿನಂದು ನಸೀರ್‌ಖಾನನು ಮರಣ ಹೊಂದಿದನು. ನಸೀರ್‌ಖಾನನ ಮಗನಾದ ಆದಿಲ್‌ಖಾನನು ತನ್ನ ತಂದೆಯ ಶವವನ್ನು

ಥಾಲೇಜ್ ಕೋಟೆಗೆ ಒಯ್ದನು. ನಸೀರ್‌ಖಾನನನ್ನು ಮಲಿಕ್ ರಾಜ ಫಾರೂಖಿಯ ಪಕ್ಕದಲ್ಲಿಯೇ ದಫನ ಮಾಡಲಾಯಿತು.

ನಸೀರ್‌ಖಾನನ ಶಾಸನದ ಕಾಲ ನಲವತ್ತು ವರ್ಷ ಆರು ತಿಂಗಳು ಮತ್ತು ಇಪ್ಪತ್ತಾರು ದಿನಗಳದ್ದಾಗಿತ್ತು.

■

*

೩. ಮೀರಾನ್ ಆದಿಲ್‌ಖಾನ್ ಬಿನ್ ನಸೀರ್‌ಖಾನ್

ಮೀರಾನ್ ಆದಿಲ್‌ಖಾನ್ ಫಾರೂಖಿಯು ಸುಲ್ತಾನ್ ಹೋಷಂಗನ ತಂಗಿಯ ಗರ್ಭದಲ್ಲಿ ಜನಿಸಿದ್ದನು. ಆದಿಲ್‌ನು ತನ್ನ ತಂದೆಯ ಮರಣದ ನಂತರ ಸಿಂಹಾಸನವನ್ನೇರಿದನು. ಮಲಿಕುತ್ತುಜ್ಜಾರನನ್ನು ದಮನ ಮಾಡುವ ಪ್ರತಿಜ್ಞೆಯನ್ನು ಸ್ವೀಕರಿಸಿದನು.

ಮೀರಾನ್ ಆದಿಲನು ಕೆಲವು ತನ್ನ ಆಪ್ತರನ್ನು ಸುಲ್ತಾನಪುರಕ್ಕೆ ಕಳುಹಿಸಿ, ಸಹಾಯಕ್ಕಾಗಿ ಸೈನ್ಯವನ್ನು ಕರೆಯಿಸಿಕೊಂಡನು. ಮಲಿಕುತ್ತುಜ್ಜಾರನಿಗೆ ಈ ವಿಷಯವು ತಿಳಿದು ವಾಪಸ್ ದಖನ್ನಿನತ್ತ ಓಡಿ ಹೋದನು. ಇದಾದ ನಂತರ ಆದಿಲನು ತನ್ನ ರಾಜ್ಯದ ಪ್ರಗತಿಯತ್ತ ಗಮನವನ್ನು ನೀಡಲಾರಂಭಿಸಿದನು. ಈತನು ಮೂರು ವರ್ಷ, ಆರು ತಿಂಗಳು, ಮೂವ್ವತ್ಮೂರು ದಿನಗಳ ತನಕ ಶಾಸನವನ್ನು ನಡೆಸಿದನು. ಆತನ ಮರಣವು ಜಿಲ್‌ಹಜ್ಜ ತಿಂಗಳ ಒಂಬತ್ತನೇ ತಾರೀಖು, ಹಿಜರಿ ೮೪೪ರಲ್ಲಿ ಶುಕ್ರವಾರದಂದು ಸಂಭವಿಸಿತು.

ಮೀರಾನ್ ಆದಿಲ್‌ಖಾನ್ ಫಾರೂಖಿಯ ವಿವರಣಾತ್ಮಕ ಸಂಗತಿಗಳು ರಾಖಿಮುಲ್ ಉರ್ಫ ಗ್ರಂಥದ ಲೇಖಕ ಫರಿಶ್ತಾನಿಗೆ ಸಿಗಲಿಲ್ಲ. ಆದ್ದರಿಂದ ಆತನ ಜೀವನದ ಹೆಚ್ಚಿನ ವಿಚಾರಗಳು ಸಿಗದ ಕಾರಣ ಸಂಕ್ಷಿಪ್ತಗೊಳಿಸಲಾಗಿದೆ. ಆದಿಲ್‌ಖಾನನು ತನ್ನ ಮಗ ಮುಬಾರಕ್‌ಖಾನನ್ನು ತನ್ನ ಉತ್ತರಾಧಿಕಾರಿಯನ್ನಾಗಿ ಮೊದಲೇ ಘೋಷಿಸಿದ್ದನು. ಇದರಿಂದಾಗಿ ಆತನ ನಂತರ ಸಿಂಹಾಸನವನ್ನು ಮುಬಾರಕ್‌ಖಾನನು ಏರಿದನು. ಮರಣದ ನಂತರ ಆದಿಲ್‌ಖಾನನ ಶವವನ್ನು ಥಾಲೇಜ್ ಕೋಟೆಗೆ ರವಾನಿಸಲಾಯಿತು. ಆತನನ್ನು ತನ್ನ ತಂದೆಯ, ತಾತನ ಪಕ್ಕದಲ್ಲಿಯೇ ದಫನ್ ಮಾಡಲಾಯಿತು.

■

*

೪. ಮುಬಾರಕ್ ಖಾನ್ ಫಾರೂಖಿ ಬಿನ್ ಆದಿಲ್‌ಖಾನ್ ಫಾರೂಖಿ

ಆದಿಲ್‌ಖಾನ್ ಫಾರೂಖಿಯ ಮರಣದ ನಂತರ ಮುಬಾರಕ್‌ಖಾನನು ಖಾನ್ ದೇಶದ ಶಾಸಕನಾದನು. ಈತನು ಹದಿನೇಳು ವರ್ಷ ಆರು ತಿಂಗಳು ಒಂಬತ್ತು ದಿನಗಳ ತನಕ ಶಾಸನವನ್ನು ಮಾಡಿದನೆಂದು ತಿಳಿದು ಬರುತ್ತದೆ. ಈತನ ಮರಣವು ಹಿಜರಿ ೮೬೧ರ ರಜಬ್ ತಿಂಗಳ ಹನ್ನೊಂದನೇ ತಾರೀಖಿನಂದು ಶುಕ್ರವಾರ ಸಂಭವಿಸಿತ್ತು. ಇವನ ನಂತರ ಈತನ ಮಗನಾದ ಮೀರಾನ್ ಅಲ್ಲೈನಾ ಊರ್ಫ್ ಆದಿಲ್‌ಖಾನ್ ಫಾರೂಖಿಯು ಪಟ್ಟಕ್ಕೆ ಕುಳಿತನು. ತನ್ನ ತಂದೆಯ ಶವವನ್ನು ಥಾಲೇಜ್ ಕೋಟೆಗೆ ರವಾನಿಸಿದನು. ಈತನನ್ನೂ ಅವರ ತಾತ ಮುತ್ತಾತರ ಸಾಲಿನಲ್ಲೇ ದಫನ್ ಮಾಡಲಾಗಿದೆ. ಈತನ ಬಗ್ಗೆ ಇದಕ್ಕಿಂತ ಹೆಚ್ಚಿನ ವಿವರ ದೊರೆತಿಲ್ಲ.

■

*

೫. ಮೀರಾನ್ ಅಲೈನಾ ಊರ್ಫ್ ಆದಿಲ್‌ಖಾನ್ ಫಾರೂಖಿ ಬಿನ್ ಮುಬಾರಕ್ ಖಾನ್ ಫಾರೂಖಿ

ಆಡಳಿತದಲ್ಲಿ ದೃಢತೆ ಮತ್ತು ಕೀರ್ತಿಶಾಲಿ ಶಾಸಕ :

ಮೀರಾನ ಅಲೈನಾ ಅಲ್ ಮುಖಾತಿಬ್-ಬ-ಆದಿಲ್‌ಖಾನ್ ಫಾರೂಖಿಯು ಯಾವ ದೃಢತೆ ಮತ್ತು ಕೀರ್ತಿಶಾಲಿಯಾಗಿ ಆಡಳಿತವನ್ನು ನಡೆಸಿದನೋ, ಆ ದೃಢತೆ ಮತ್ತು ಕೀರ್ತಿ ಬೇರೆ ಯಾರಿಗೂ ದೊರೆಯಲಿಲ್ಲ. ಆದಿಲ್‌ಖಾನನು ಸುತ್ತಮುತ್ತಲ ಎಲ್ಲಾ ರಾಜರುಗಳಿಂದ ಕಪ್ಪ-ಕಾಣಿಕೆಗಳನ್ನು ವಸೂಲಿ ಮಾಡಿದನು. ಗೊಂಡ್ವಾಡ ಮತ್ತು ಗದ್ಧ ಎಂಬ ಪ್ರದೇಶಗಳನ್ನು ತನ್ನ ಅಧೀನತೆಗೆ ತೆಗೆದುಕೊಂಡನು. ಇವರಿಂದಲೂ ಕಪ್ಪ-ಕಾಣಿಕೆಗಳನ್ನು ವಸೂಲು ಮಾಡಿದನು. ಆ ಬಾದಶಾಹನ ಉತ್ತಮ ಆಡಳಿತದಿಂದಾಗಿ ಅವನ ರಾಜ್ಯದಲ್ಲಿ ಕೆಟ್ಟ ಕೃತ್ಯಗಳು ನಡೆಯುತ್ತಿರಲಿಲ್ಲ. ಕಳ್ಳತನಗಳಿರಲಿಲ್ಲ.

ಮಾಲಿಗಢ :

ಮೀರಾ ಅಲೈನಾ ಉರ್ಫ್ ಆದಿಲ್‌ಖಾನ್ ಫಾರೂಖಿಯು ಆಸಾ ಅಬೀರ್‌ನ ರೀತಿಯಲ್ಲಿಯೇ ಮತ್ತೊಂದು ಕೋಟೆಯನ್ನು ಕಟ್ಟಿಸಿದನು. ಈ ಕೋಟೆಗೆ ಮತ್ತೊಂದು ಬಾಗಿಲನ್ನು ಇಡಿಸಿದನು. ಇಲ್ಲಿ 'ಮಾಲಿಗಢ' ಎಂಬ ನಗರವನ್ನು ನಿರ್ಮಿಸಿದನು. ಇದರಿಂದಾಗಿ ಈ ಕೋಟೆಯನ್ನು ಯಾವ ಶತ್ರುವಿನಿಂದಲೂ ಭೇದಿಸಲು ಸಾಧ್ಯವಾಗಲಿಲ್ಲ.

ಸುಲ್ತಾನ ಝಾಡ್‌ಖಂಡಿ :

ಮೀರಾನ್ ಅಲೈನಾನು ಬುರ್ಹಾನ್‌ಪುರದಲ್ಲಿ ತಪತಿ ನದಿಯ ದಡದಲ್ಲಿ ಮತ್ತೊಂದು ಕೋಟೆ ಮತ್ತು ಇತರೆ ವೈಭವ ಪೂರ್ಣ ಅರಮನೆಗಳನ್ನು ಕಟ್ಟಿಸಿದನು. ಈತನು ಯಾವಾಗಲೂ ಈ ಅರಮನೆಗಳಲ್ಲಿಯೇ ವಾಸಿಸುತ್ತಿದ್ದನು. ಆದಿಲ್‌ಖಾನನು ತನ್ನ ಹೆಸರನ್ನು ಸುಲ್ತಾನ್‌ಝಾಡ್‌ಖಂಡಿ ಅಂದರೆ ಷಾಹ್ ಕೋಹಿಸ್ತಾನ್ ಎಂದಿಟ್ಟುಕೊಂಡನು. ಹಿಂದೂಸ್ತಾನದಲ್ಲಿನ ದಟ್ಟವಾದ ಕಾಡುಗಳಿಗೆ ಈ ಶಬ್ದವು

ಬಳಕೆಯಾಗುತ್ತಿತ್ತೆಂದು ತಿಳಿದು ಬರುತ್ತದೆ. ಈ ಕಾಡುಗಳಲ್ಲಿ ಮಾನವನು ಸುಲಭವಾಗಿ ಹೋಗಲು ಸಾಧ್ಯವಾಗುತ್ತಿರಲಿಲ್ಲ.

ಅಹಂಕಾರಿ :

ಮೀರಾನ್ ಅಲೈನಾನ ಕೀರ್ತಿ ಬಹಳಷ್ಟು ಹರಡಿತ್ತು. ಅವನ ಜೀವನ ಬಹಳ ವೈಭವಪೂರ್ಣವಾದುದು. ಇವನ ಸಾಲಿಗೆ ನಿಲ್ಲುವ ಬಾದಶಾಹರು ಅತಿ ವಿರಳ, ಈ ಕಾರಣಗಳಿಂದಾಗಿ ಆತನಲ್ಲಿ ಅಹಂಕಾರವು ಬೆಳೆಯಿತು. ತನ್ನ ಹಿರಿಯರಿಗೂ ಆತನಲ್ಲಿ ಮರ್ಯಾದೆ ಇರಲಿಲ್ಲ. ಇದೇ ಅಹಂಕಾರದಲ್ಲಿ ಮುಳುಗಿ ಗುಜರಾತಿನ ಶಾಸಕರಲ್ಲೂ ಕಪ್ಪ-ಕಾಣಿಕೆಗಳನ್ನು ವಸೂಲು ಮಾಡಲು ಕಳುಹಿಸಿದನು. '

ಗುಜರಾತಿಗಳು ಇವನ ಮೇಲೆ ಬಿದ್ದರು :

ಸುಲ್ತಾನ್ ಮಹಮೂದ್ ಬಿಲೇರಾ ಎಂಬುವನಿಗೆ ಈತನ ವರ್ತನೆ ಹಿಡಿಸಲಿಲ್ಲ. ಹಿಜರಿ ೮೯೬ರಲ್ಲಿ ಒಂದು ವಿಶಾಲ ಸೈನ್ಯದೊಂದಿಗೆ ತನ್ನ ಅಮೀರರನ್ನು ಖಾನ್ ದೇಶಕ್ಕೆ ಕಳುಹಿಸಿಕೊಟ್ಟನು. ಖಾನ್‌ದೇಶದ ಅಮೀರರು ಮೊದ ಮೊದಲು ಗುಜರಾತಿ ಸೈನಿಕರನ್ನು ಎದುರಿಸಿದರು. ನಂತರ ಶತ್ರು ಸೈನಿಕರು ತಮಗಿಂತ ಹೆಚ್ಚು ಸಮರ್ಥರೆಂದು ತಿಳಿದು ಥಾಲೇಜ್ ಕೋಟೆಯಲ್ಲಿ ಮತ್ತು ಅಸೀರ್ ಕೋಟೆಯಲ್ಲಿ ಅಡಗಿಕೊಂಡರು. ಗುಜರಾತಿಗಳು ಖಾನ್‌ದೇಶದಲ್ಲಿ ಅಪಾರ ಲೂಟಿ ಮಾಡಿ ನಷ್ಟವನ್ನುಂಟು ಮಾಡಿದರು. ಇಷ್ಟೊಂದು ಲೂಟಿ-ನಾಶ ಹಿಂದೆ ಯಾರೂ ಮಾಡಿರಲಿಲ್ಲ.

ಕೆಟ್ಟ ಹೆಸರು :

ಮೀರಾನ್ ಅಲೈನಾ ಉರ್ಫ್ ಆದಿಲ್‌ಖಾನ್ ಫಾರೂಖಿಯು ಆ ದಿನಗಳಲ್ಲಿ ಅಸೀರ್ ಕೋಟೆಯಲ್ಲಿರುತ್ತಿದ್ದನು. ಆತನು ಗುಜರಾತಿಯವರು ಮಾಡಿದ ಗಲಭೆಗಳನ್ನು ನೋಡಿ, ತಾನು ಮಾಡಿದ ಕೆಲಸಗಳ ಬಗ್ಗೆ ಆತನಿಗೆ ನಾಚಿಕೆಯಾಯಿತು. ಆತನಿಗೆ ಇಷ್ಟೊಂದು ನಾಶ ಮಾಡುತ್ತಾರೆಂಬ ನಂಬಿಕೆ ಇರಲಿಲ್ಲ. ಕೊನೆಗೆ ಆತನು ವಿವಶನಾಗಿ ತನ್ನ ಅಮೀರರನ್ನು ಸೇರಿಸಿ, ತನ್ನ ರಾಜ್ಯದ ಅನೇಕ ಬುದ್ಧಿವಂತರನ್ನು ಒಟ್ಟುಗೂಡಿಸಿ, ಸುಲ್ತಾನ್ ಬೇಕ್ರಾನ್ ಸೇವೆಗೆ ಕಳುಹಿಸಿದನು. ಇನ್ನು ಮುಂದೆ ನಾನು ಪ್ರಾಮಾಣಿಕವಾಗಿ ನಡೆದುಕೊಂಡು ತಮಗೆ ಕಪ್ಪ-ಕಾಣಿಕೆಗಳನ್ನು ತಪ್ಪದೇ ಕಳುಹಿಸುವೆನೆಂಬ ಸುದ್ದಿಯನ್ನು ತಿಳಿಸುವಂತೆ ಹೇಳಿ ಕಳುಹಿಸಿದನು. ಮಹಮೂದ ಬೇಕ್ರಾ ಆತನ ದರಖಾಸ್ತನ್ನು ಒಪ್ಪಿಕೊಂಡನು. ಕೆಲವು ವರ್ಷಗಳ ಕಪ್ಪ-ಕಾಣಿಕೆಗಳನ್ನು ಮುಂಗಡವಾಗಿ ಪಡೆದು ಖಾನ್ ದೇಶದಿಂದ ಗುಜರಾತಿಯವರನ್ನು ತನ್ನ ರಾಜ್ಯಕ್ಕೆ ಕರೆಯಿಸಿಕೊಂಡನು.

ಮೀರಾನ್ ಅಲೈನಾನ ಮರಣ :

ಮೀರಾನ್ ಅಲೈನಾನು ನಲ್ವತ್ತಾರು ವರ್ಷ ಎಂಟು ತಿಂಗಳು ಹನ್ನೆರಡು ದಿನಗಳ

ತನಕ ಖಾನ್‌ದೇಶದಲ್ಲಿ ಆಳಿದನು. ಆತನು ಮಹಾಭೋಗ ವಿಲಾಸಿಯಾಗಿದ್ದನು. ಹಿಜರಿ ೮೯೮ರಲ್ಲಿ ರಬೀವುಲ್‌ಅವ್ವಲ್‌ನ ನಾಲ್ಕನೇ ತಾರೀಖಿನಂದು ಆತನ ಮರಣವಾಯಿತು. ಆತನ ಮಾತಿನಂತೆ ಬುರ್ಹಾನಪುರದ ಅರಮನೆ ದೌಲತ್‌ಮಂದ್ ಎಂಬಲ್ಲಿ ದಫನ್ ಮಾಡಲಾಯಿತು.

ಮೀರಾನ್ ಅಲ್ಯೆನಾನಿಗೆ ಗಂಡುಮಕ್ಕಳು ಇರಲಿಲ್ಲ. ಆದ್ದರಿಂದ ಆತನ ಮರಣಾನಂತರ ಆತನ ಸಹೋದರನಾದ ದಾವೂದ್‌ಖಾನನು ಖಾನ್‌ದೇಶದ ಪಟ್ಟಕ್ಕೇರಿದನು.

■

*

೬. ದಾವೂದ್‌ಖಾನ್ ಬಿನ್ ಮುಬಾರಕ್ ಖಾನ್ ಫಾರೂಖಿ

ಮೀರಾನ ಅಲ್ಯೆನಾನ ಮರಣಾನಂತರ ಆತನ ಸಹೋದರನಾದ ದಾವೂದ್‌ಖಾನ್‌ನು ಸಿಂಹಾಸನವನ್ನೇರಿದನು. ಆತನ ಶಾಸನ ಕಾಲದಲ್ಲಿ ದಯಾರ್ ಅಲಿ ಮತ್ತು ಹಿಸಾಮ್ ಅಲಿ ಎಂಬ ಇಬ್ಬರು ಸಹೋದರರು ಬಹಳಷ್ಟು ಪ್ರಗತಿ ಪಥದಲ್ಲಿ ಸಾಗಿ ಉನ್ನತ ಹುದ್ದೆಗಳಿಗೇರಿದರು. ಹಿಸಾಮ್ ಅಲಿಯನ್ನು "ಮಲಿಕ್ ಹಿಸಾಮ್" ಎಂಬ ಬಿರುದಿನಿಂದ ಕರೆಯಲಾಯಿತು. ಶಾಸನದ ಎಲ್ಲ ಕೆಲಸಗಳನ್ನು ಆತನೇ ಶ್ರದ್ಧೆಯಿಂದ ನಿಭಾಯಿಸುತ್ತಿದ್ದನು. ಇದರಿಂದಾಗಿ ಆತನು ಬಾದಶಾಹನ ಪ್ರೀತಿಗೆ ಪಾತ್ರನಾಗಿದ್ದನು.

ಅಹಮ್ಮದ್ ನಿಜಾಂಶಾಹ ಬಹರಿಯ ಆಕ್ರಮಣ :

ದಾವೂದ್‌ಖಾನನು ೮೬೬ ಹಿಜರಿಯಲ್ಲಿ ಕೆಲವು ಸರಹದ್ದಿನ ಪರಗಣಗಳನ್ನು ಅಹಮದ್ ನಿಜಾಂಶಾಹನ ಹಿಡಿತದಿಂದ ಬಿಡಿಸಿಕೊಳ್ಳುವ ಇಚ್ಛೆಯನ್ನು ವ್ಯಕ್ತಪಡಿಸಿದನು. ಅಹಮ್ಮದ್‌ನಿಜಾಂಶಾಹನಿಗೆ ಈ ವಿಚಾರವು ಗೊತ್ತಾಗಿ ಆತನು ಒಂದು ವಿಶಾಲ ಸೈನ್ಯದೊಂದಿಗೆ ಖಾನ್ ದೇಶದತ್ತ ಹೊರಟನು. ದಾವೂದ್‌ಖಾನನು ಅಸೀರ್ ಕೋಟೆಯಲ್ಲಿ ಅಡಗಿದನು. ಅಹಮ್ಮದ್ ನಿಜಾಂಶಾಹನು ಖಾನ್‌ದೇಶವನ್ನು ತಲುಪಿ, ಲೂಟಿ-ನಾಶಗಳನ್ನು ಮಾಡಲು ಪ್ರಾರಂಭಿಸಿದನು. ಈ ಸಂಬಂಧದಲ್ಲಿ ದಖನಿ ಶಾಸಕನು ಏನಾದರೂ ಮಾಡಿ ಖಾನ್ ದೇಶವನ್ನು ಸಂಪೂರ್ಣವಾಗಿ ನಾಶಪಡಿಸಬೇಕೆಂದು ಪ್ರಯತ್ನಿಸಿದನು. ದಾವೂದ್‌ಖಾನನು ನಿಜಾಂಶಾಹನ ಇಚ್ಛೆಯನ್ನು ಗಮನಿಸಿ ಸುಲ್ತಾನ್ ನಾಶೀರುದ್ದೀನಖಿಲ್ಜಿಯ ಸಹಾಯವನ್ನು ಬೇಡಿದನು.

ಮಾಂಡವಿ ಸೈನ್ಯದ ಆಗಮನ :

ಸುಲ್ತಾನ್ ನಾಶೀರುದ್ದೀನ ಖಿಲ್ಜಿಯು, ನೆರೆ ರಾಜ್ಯದ ಹಕ್ಕನ್ನು ನಿಭಾಯಿಸಿದನು. ಆತನು ತನ್ನ ಒಬ್ಬ ಅಮೀರ ಇಕ್ಬಾಲ್‌ಖಾನನಿಂದಿಗೆ ಅಸೀರಿನ ಸುತ್ತಮುತ್ತಲ ಪ್ರದೇಶಕ್ಕೆ

ಬಂದನು. ಅಹಮದ್ ನಿಜಾಂಶಾಹನಿಗೆ ಮಾಂಡವಿ ಸೈನ್ಯದೆದುರು ನಿಲ್ಲುವಷ್ಟು ಸಾಮರ್ಥ್ಯವಿರಲಿಲ್ಲ. ಆತನು ವಾಪಸ್ ಅಹಮದ್ ನಗರಕ್ಕೆ ಹೋದನು.

ನಾಸೀರುದ್ದೀನ್ ಖಿಲ್ಜಿಯ ಹೆಸರಿನಲ್ಲಿ ಖುತ್ಬಾ :

ಇಕ್ಬಾಲ್‌ಖಾನನು ಕೆಲವು ದಿನಗಳ ತನಕ ಬುರ್ಹಾನಪುರದಲ್ಲಿ ನಿಂತನು. ದಾವೂದ್‌ಖಾನನನ್ನು ಕುರಿತು–"ಖಾನ್‌ದೇಶದಲ್ಲಿ ಸುಲ್ತಾನ್ ನಾಶೀರುದ್ದೀನ ಖಿಲ್ಜಿಯ ಹೆಸರಿನ ಖುತ್ಬಾವನ್ನು ಪ್ರಾರಂಭಿಸಲು ಹೇಳಿದನು". ದಾವೂದ್‌ಖಾನನು ವಿವಶನಾದನು. ಒಂದು ವೇಳೆ ನಾನು ಈ ಮಾತನ್ನು ನಡೆಸದಿದ್ದರೆ ನನ್ನ ಮೇಲೆ ಪುನಃ ತೊಂದರೆ ತಪ್ಪಿದಲ್ಲವೆಂದು ತಿಳಿದು, ಆತನು ತನ್ನ ರಾಜ್ಯದಲ್ಲಿ ಸುಲ್ತಾನ ನಾಶೀರುದ್ದೀನ ಖಿಲ್ಜಿಯ ಪ್ರಸಂಶಾತ್ಮಕ ಪ್ರವಚನ (ಖುತ್ಬಾ)ವನ್ನು ಜಾರಿಗೊಳಿಸಿ, ಮುಂದೆ ಬರಬಹುದಾದ ತೊಂದರೆಗಳಿಂದ ಮುಕ್ತಿಯನ್ನು ಪಡೆದನು. ಇಕ್ಬಾಲ್‌ಖಾನನಿಗೆ ಅನೇಕ ಬೆಲೆ ಬಾಳುವ ವಸ್ತುಗಳನ್ನು, ನಾಣ್ಯಗಳನ್ನು, ಎರಡು ಆನೆಗಳನ್ನು ನೀಡಿ ಶಾದಿಆಬಾದ್ ಮಾಂಡುವಿಗೆ ಕಳುಹಿಸಿಕೊಟ್ಟನು.

ಮರಣ :

ದಾವೂದ್‌ಖಾನನು ಹಿಜರಿ ೯೧೪ರ ಜಮಾದಿಲ್ ಅವ್ವಲ್ ತಿಂಗಳ ಒಂದನೇ ತಾರೀಖು ಬುಧವಾರದಂದು ಮರಣ ಹೊಂದಿದನು. ಈತನು ಎಂಟು ವರ್ಷ ಒಂದು ತಿಂಗಳು ಎರಡು ದಿನಗಳ ತನಕ ಶಾಸನವನ್ನು ನಡೆಸಿದನು.

ಘಜ್ನೈನನ ಪಟ್ಟಾಭಿಷೇಕ ಮತ್ತು ಕೊಲೆ :

ಮಲಿಕ್ ಹಿಸ್ಸಾಮ್ ಮತ್ತು ಇತರೆ ಅಮೀರರು ಮತ್ತು ದರ್ಬಾರಿಗಳು ದಾವೂದ್‌ಖಾನನ ಮಗ ಘಜ್ನೈನಖಾನನನ್ನು ತಮ್ಮ ಬಾದಶಾಹರನ್ನಾಗಿ ಆರಿಸಿದರು. ಈ ಬಾದಶಾಹನು ಕೇವಲ ಹತ್ತು ದಿನಗಳು ಮಾತ್ರ ಆಡಳಿತವನ್ನು ನಡೆಸಿದನು. ಇದಾದ ನಂತರ ಹಿಸ್ಸಾಮನು ಘಜ್ನೈನನನ್ನು ಯಾವುದೋ ಒಂದು ತನಗೆ ಸರಿಯಾಗಿ ಗೊತ್ತಿಲ್ಲದ ಮಾತಿನಿಂದ ನಿರಪರಾಧಿಯಾದ ಬಾದಶಹನಿಗೆ ವಿಷವನ್ನು ಕೊಟ್ಟು ಕೊಲೆ ಮಾಡಿಸಿದನು.

ಆಲಂಖಾನನ ಪಟ್ಟಾಭಿಷೇಕ :

ದಾವೂದ್‌ಖಾನನಿಗೆ ಒಬ್ಬನೇ ಮಗನಿದ್ದನು. ಆತನೇ ಘಜ್ನೈನ್‌ಖಾನನು. ಆತನು ಸತ್ತ ನಂತರ ಹಿಸಾಮನು ಷಹಜಾದ ಆಲಂಖಾನನನ್ನು ಆರಿಸಲು ಇಚ್ಛಿಸಿದನು. ಈತನು ಫಾರೂಖಿಯ ವಂಶಸ್ಥನಾಗಿದ್ದನು. ಆಲಂಖಾನನು ಅಹಮದ್‌ನಗರದಲ್ಲಿ ವಾಸಿಸುತ್ತಿದ್ದನು. ಹಿಸಾಮನು ಕೆಲವು ವಿಶೇಷ ವ್ಯಕ್ತಿಗಳನ್ನು ಅಲ್ಲಿಗೆ ಕಳುಹಿಸಿ, ಆತನನ್ನು ಆಹ್ವಾನಿಸಿದನು. ಆಲಂಖಾನನು ಬುರ್ಹಾನಪುರಕ್ಕೆ ಬಂದನು. ಮಲಿಕ್ ಹಿಸಾಮನು

ಅಹಮದ್‌ಶಾಹ್ ಬಹರಿ ಮತ್ತು ಫತಹ್‌ಅಲ್ಲಾಹ್ ಅಮಾದ್‌ಶಾಹ್‌ರಂತಹ ಪ್ರತಿಷ್ಠ ವ್ಯಕ್ತಿಗಳ ಶಿಫಾರಸ್ಸಿನಂತೆ ಆಲಂಖಾನನನ್ನು ಬುರ್ಹಾನಪುರದ ಶಾಸಕನಾಗಿ ನೇಮಿಸಲು ಒಪ್ಪಿಕೊಂಡನು. ರಾಜ್ಯದ ಅನೇಕ ಅಮೀರರು ಜಮೀನ್ದಾರರು ಆಲಂಖಾನನ ಅಧೀನತೆಯನ್ನು ಸ್ವೀಕರಿಸಲು ಸಿದ್ಧರಾಗಿ, ನಿಯಮಪೂರ್ವಕವಾಗಿ ಕಪ್ಪ-ಕಾಣಿಕೆಗಳನ್ನು ಸಲ್ಲಿಸಲು ಒಪ್ಪಿಕೊಂಡರು.

ಮಲಿಕ್ ಲಾವನ್‌ನ ವಿದ್ರೋಹ :

ಖಾನ್‌ದೇಶದ ಒಬ್ಬ ಪ್ರಸಿದ್ಧ ಅಮೀರ್ ಲಾವನ್ ಎಂಬುವನು ಆಲಂಖಾನನ್ನು ತನ್ನ ಬಾದಶಾಹನಂದು ಒಪ್ಪಿಕೊಂಡಿರಲಿಲ್ಲ. ಇದರಿಂದ ಆತನು ವಿದ್ರೋಹದ ಬಾವುಟವನ್ನು ಮೇಲೆತ್ತಿದನು. ಹೀಗಾಗಿ ಆತನು ಅಸೀರ್ ಕೋಟೆಯನ್ನು ಗೆದ್ದು ಮಲಿಕ್‌ಹಿಸಾಮ್‌ನನ್ನು ಸೆರೆ ಹಿಡಿಯಬೇಕೆಂದಿದ್ದನು. ಆದರೆ ಅದು ಸಾಧ್ಯವಾಗಲಿಲ್ಲ.

ಆದಿಲ್‌ಬಿನ್ ನಸೀರನ ಪತ್ರ ಗುಜರಾತ್ ಬಾದಶಾಹನಿಗೆ :

ನಸೀರ್‌ಖಾನ್ ಫಾರೂಖಿಯ ಮಗ ಆದಿಲ್‌ಖಾನನು ಆ ದಿನಗಳಲ್ಲಿ ಥಾಲೇಜ್ ಸರಹದ್ದಿನಲ್ಲಿ ನೆಲೆಸಿದ್ದನು. ಈತನು ಸುಲ್ತಾನ್ ಮಹಮೂದ್ ಬೇಕ್ರ ಎಂಬುವನ ಮಗಳ ಮಗನಾಗಿದ್ದನು. ಆತನು ತನ್ನ ತಾಯಿಯ ಸಲಹೆಯಂತೆ ಸುಲ್ತಾನ ಮಹಮೂದನ ಹೆಸರಿನಲ್ಲಿ ಒಂದು ಪತ್ರವನ್ನು ಬರೆದು ಗುಜರಾತಿಗೆ ರವಾನಿಸಿದನು. ದಾವೂದ್‌ಖಾನನ ಮರಣಾನಂತರ ನಮ್ಮ ರಾಜ್ಯದ ಆಡಳಿತ ಪರಿಸ್ಥಿತಿಗಳು ತುಂಬಾ ಕೆಟ್ಟಿವೆ. ಪ್ರತಿಯೊಂದು ಸ್ಥಳದಲ್ಲೂ ಅಲ್ಲೋಲ ಕಲ್ಲೋಲದ ಪರಿಸ್ಥಿತಿ ನಿರ್ಮಾಣವಾಗಿದೆ. ಅರಾಜಕತೆಯಿಂದ ಎಲ್ಲರೂ ಸ್ವತಂತ್ರರಾಗಿ ವರ್ತಿಸುತ್ತಿದ್ದಾರೆ. ಈ ಸ್ಥಿತಿಗಳನ್ನು ಸುಧಾರಿಸಬೇಕೆಂದಿದ್ದರೆ ನಾನು ಇಲ್ಲಿನ ಆಡಳಿತದ ಲಗಾಮನ್ನು ಹಿಡಿಯ ಬೇಕಿದೆ. ಒಂದು ವೇಳೆ ತಾವು ನನ್ನ ಪೂರ್ವಜರ ಹಕ್ಕನ್ನು ನನಗೆ ಕೊಡಿಸಿ ಸಹಾಯ ಮಾಡಿದರೆ, ನಾನು ಅಂತ್ಯದವರೆಗೂ ಆ ಉಪಕಾರವನ್ನು ಮರೆಯುವುದಿಲ್ಲ.

ಸುಲ್ತಾನ್ ಮಹಮೂದ್ ಬೇಕ್ರಾನ ಆಗಮನ :

ಸುಲ್ತಾನ ಮಹಮೂದ್ ಬೇಕ್ರಾ ಆದಿಲ್‌ಖಾನನ ಅಭಿಪ್ರಾಯವನ್ನು ಒಪ್ಪಿಕೊಂಡನು. ಒಂದು ವಿಶಾಲ ಸೈನ್ಯದೊಂದಿಗೆ ಖಾನ್‌ದೇಶದತ್ತ ರವಾನೆ ಆದನು. ಮಲಿಕ್ ಹಿಸಾಮನಿಗೆ ಈ ವಿಷಯವು ತಿಳಿಯಿತು. ಇದರಿಂದ ಆತನು ತುಂಬಾ ಚಿಂತಿತನಾದನು. ಆತನು ತಕ್ಷಣ ಅಹಮ್ಮದ್ ನಿಜಾಮ ಬಹರಿ ಮತ್ತು ಫತಹ್ ಅಲ್ಲಾ ಅಮಾದ್‌ಶಾಹ್‌ರ ಹತ್ತಿರ ತನ್ನ ದೂತರನ್ನು ಅಟ್ಟಿದನು. ಅವರಲ್ಲಿ ಬಹಳ ನಮ್ರತೆಯಿಂದ ಸಹಾಯವನ್ನು ಬೇಡಿದನು. ಆ ಇಬ್ಬರು ಶಾಸಕರು ಮಲಿಕ್ ಹಿಸಾಮನ ಪ್ರಾರ್ಥನೆಯನ್ನು ಸ್ವೀಕರಿಸಿ, ತಮ್ಮ – ತಮ್ಮ ಸೈನ್ಯದೊಡನೆ ಬುರ್ಹಾನ್‌ಪುರಕ್ಕೆ ಬಂದರು.

ಮಹಮೂದ್ ಬೇಕ್ರಾ ಥಾಲೇಜ್‌ನಲ್ಲಿ :

ಸುಲ್ತಾನ್ ಮಹಮೂದ್ ಬೇಕ್ರಾನಿಗೆ ದಾರಿಯಲ್ಲಿ ಖಾನಜಾದಾಆಲಂಖಾನನ ಪಟ್ಟಾಭಿಷೇಕ ಮತ್ತು ಮಲಿಕ್ ಲಾವನ್‌ನ ವಿದ್ರೋಹದ ಮಾತುಗಳು ಕಿವಿಗೆ ಬಿದ್ದವು. ಆತನು ರಮಜಾನ ತಿಂಗಳಲ್ಲಿ ಇತ್ತ ಕಡೆ ಬಂದಿದ್ದನು. ನರ್ಮದಾ ನದಿಯ ದಡದಲ್ಲೇ ರಂಜಾನ ಹಬ್ಬವನ್ನು ಮುಗಿಸಿದನು. ಶವ್ವಾಲ್ ತಿಂಗಳಲ್ಲಿ ಅಲ್ಲಿಂದ ತನ್ನ ಸೈನ್ಯವನ್ನು ತೆಗೆದುಕೊಂಡು ಮುಂದುವರಿದನು. ಮಹಮೂದ್ ಬೇಕ್ರಾ ಥಾಲೇಜ್ ತಲುಪಿದಾಗ ಕೋಟೆಯ ರಕ್ಷಕನಾದ ಆಲಂಶಾಹ್‌ನು ಸುಲ್ತಾನ್‌ಪುರದ ಕೋಟೆಯ ಥಾನೆದಾರನಾದ ಅಜೀಜುಲ್‌ಮುಲ್ಕನಿಗೆ ಬಿಟ್ಟುಕೊಟ್ಟು, ಕೋಟೆಯನ್ನು ಖಾಲಿ ಮಾಡಿ, ಶಾಹೀ ಸೇವಕ ಸುಪರ್ದಿಗೆ ಬಿಟ್ಟುಕೊಟ್ಟನು.

ನಿಜಾಂಶಾಹ್ ಮತ್ತು ಅಮಾದುಲ್‌ಮುಲ್ಕರು ಕಾವೇಲ್‌ನತ್ತ ಪ್ರಯಾಣ :

ಅಹಮ್ಮದಶಾಹ ಮತ್ತು ಫತಹ್ ಅಲ್ಲಾ ಅಮಾದುಲ್‌ಮುಲ್ಕರು ಖಾನದೇಶದ ಸೈನ್ಯದ ವಿದ್ರೋಹವನ್ನು ವಿವರವಾಗಿ ಪರಿಶೀಲಿಸಿದರು. ಎರಡನೆಯದಾಗಿ ಅವರಿಗೆ ಗುಜರಾತಿ ಸೈನ್ಯದ ಶಕ್ತಿಯನ್ನು ಗಮನದಲ್ಲಿಟ್ಟುಕೊಂಡಿದ್ದರು. ಇದರಿಂದಾಗಿ ಇಬ್ಬರು ಶಾಸಕರುಗಳು ಆಲಂಖಾನನ ಮತ್ತು ಮಲಿಕ್ ಹಿಸಾಮನ ಸಹಾಯಕ್ಕೆಂದು ನಾಲ್ಕು ಸಾವಿರ ಸೈನಿಕರನ್ನು ಬಿಟ್ಟು ಕಾವೇಲ್‌ನತ್ತ ಹೊರಟು ಬಿಟ್ಟರು.

ದಖನ್ನಿ ಸೈನ್ಯದ ಪಲಾಯನ :

ಆಲಂಖಾನನು ಸುಮಾರು ಅರ್ಧ ಖಾನ್‌ದೇಶವನ್ನು ತನ್ನ ಹಿಡಿತದಲ್ಲಿಟ್ಟು ಕೊಂಡಿದ್ದನು. ಸುಲ್ತಾನ್ ಮಹಮೂದ್ ಬೇಕ್ರಾ ತನ್ನ ಅಮೀರರಾದ ಆಸೀಫ್‌ಖಾನ್ ಮತ್ತು ಅಜೀಜುಲ್‌ಮುಲ್ಕ ಎಂಬುವರನ್ನು ಹಿಸಾಮ ಮತ್ತು ಆಲಂಖಾನರನ್ನು ಸೋಲಿಸಲು ಸೈನ್ಯವನ್ನು ಕಳುಹಿಸಿದನು. ದಖನಿ ಸೈನಿಕರು ಆಲಂಖಾನನ ಸಹಾಯಕ್ಕೆಂದು ಬಂದಿದ್ದರು. ಗುಜರಾತಿ ಸೈನ್ಯವು ಅವರ ಮೇಲೆ ಯುದ್ಧಕ್ಕೆ ಬಂದರೆಂಬ ಸುದ್ದಿ ತಿಳಿದ ತಕ್ಷಣ, ಯಾರಿಗೂ ತಿಳಿಸದೆ ಖಾನ್‌ದೇಶದತ್ತ ಓಡಿಬಿಟ್ಟರು.

ಮಲಿಕ್ ಲಾವನ್ ಮತ್ತು ಹಿಸಾಮ್ ಸುಲ್ತಾನ ಬೇಕ್ರಾನ ಹತ್ತಿರ :

ಖಾನ್‌ದೇಶದ ಉಳಿದರ್ಧ ಭಾಗ ಮಲಿಕ್ ಲಾವನ್‌ನ ಹಿಡಿತದಲ್ಲಿತ್ತು. ಈತನು ಬೇಕ್ರಾನ ಅಮೀರ ಆಸೀಫ್‌ಖಾನನನ್ನು ಸ್ವಾಗತಿಸಿದನು. ಆತನಿಗೆ ಆಲಂಖಾನನ ವಿರುದ್ಧ ತಾನೂ ಸಹಾಯವನ್ನು ಮಾಡುವೆನೆಂದು ಭರವಸೆಯನ್ನು ಕೊಟ್ಟನು. ಆಸೀಫ್‌ಖಾನನು ಆತನನ್ನು ಕರೆದುಕೊಂಡು ಸುಲ್ತಾನ್ ಬೇಕ್ರಾನ ಸೇವೆಯಲ್ಲಿ ಹಾಜರಾದನು. ಮಲಿಕ್ ಹಿಸ್ಸಾಮನಿಗೆ ಈ ಸುದ್ದಿ ತಿಳಿದ ಮೇಲೆ ಆಲಂಖಾನನನ್ನು ದಖನ್ನಿನತ್ತ ಕಳುಹಿಸಿ, ತಾನು ಸುಲ್ತಾನ ಮಹಮೂದನ ಹತ್ತಿರ ಬಂದನು. ಸುಲ್ತಾನ್ ಮಹಮೂದನು ಇಬ್ಬರನ್ನೂ ಪ್ರೇಮದಿಂದಲೇ ಸ್ವಾಗತಿಸಿ ಗೌರವಿಸಿದನು.

ಆದಿಲ್‌ಖಾನನ ಪಟ್ಟಾಭಿಷೇಕ :

ಬಕ್ರೀದ್ ಹಬ್ಬ ದ ನಂತರ ಸುಲ್ತಾನ್ ಮಹಮೂದ್ ಬೇಕ್ರಾನು ಆದಿಲ್‌ಖಾನನಿಗೆ, "ಆಜಂಹುಮಾಯೂನ್" ಬಿರುದನ್ನು ಕೊಟ್ಟು, ಸುಲ್ತಾನ್ ಮುಜಾಫರ ಗುಜರಾತಿಯ ಮಗಳನ್ನು ತಂದು ಮದುವೆಯನ್ನು ಮಾಡಿದರು. ಆತನನ್ನು ಬುರ್ಹಾನಪುರದ ಸಿಂಹಾಸನಕ್ಕೇರಿಸಿದರು. ಸುಲ್ತಾನ್ ಮಹಮೂದನು ಮಲಿಕ್‌ಲಾವನ್‌ನಿಗೆ "ಖಾನ್‌ಜಹಾನ್" ಎಂಬ ಬಿರುದಿನಿಂದ ಗೌರವಿಸಿ, ಈತನಿಗೆ ಆತನ ಹುಟ್ಟಿದ ಸ್ಥಳವಾದ ನಬಾಸ್ ಎಂಬ ಪ್ರದೇಶವನ್ನು ಜಾಗೀರಿಯಾಗಿ ಕೊಡಲಾಯಿತು. ಅಸೀರ್‌ನ ವಾಸಿ ಅಮಾದುಲ್‌ಮುಲ್ಕ್‌ನ ಮಗ ಮಲಿಕ್‌ಮಾಖಾ ಎಂಬುವನಿಗೆ "ಫಾಜಿಖಾನ್" ಎಂದೂ ಮಲಿಕ್‌ಆಲಂ ಠಾಣೆದಾರನಿಗೆ "ಖುತುಬ್‌ಖಾನ್" ಮತ್ತು ಮಲಿಕ್‌ಯೂಸುಫನಿಗೆ "ಸೈಫ್‌ಖಾನ್" ಎಂದೂ ಬಿರುದುಗಳನ್ನು ಕೊಟ್ಟು ಆದಿಲ್‌ಖಾನನ ಸಹಾಯಕ್ಕೆ ನಿಲ್ಲಿಸಿದರು.

ಮಹಮೂದ್ ಬೇಕ್ರಾ ವಾಪಸ್ :

ಸುಲ್ತಾನ್ ಮಹಮೂದ್ ಬೇಕ್ರಾನು, ಆದಿಲ್‌ಖಾನನಿಗೆ ನಾಲ್ಕು ಆನೆಗಳನ್ನೂ, ಮೂವತ್ತು ಲಕ್ಷ ತಿನ್ಗೆ ನಾಣ್ಯಗಳನ್ನೂ ನಗದಾಗಿ ಕೊಟ್ಟನು. ನುಸ್ರತ್–ಅಲ್–ಮುಲ್ಕ ಮತ್ತು ಮುಜಾಹಿದುಲ್‌ಮುಲ್ಕರನ್ನು ಆತನ ಸಹಾಯಕ್ಕೆಂದು ಬಿಟ್ಟು ತಾನು ಸುಲ್ತಾನ್‌ಪುರ–ನದರ್‌ಬಾರಗಳ ಕಡೆ ರವಾನೆಯಾದನು.

ಮೊದಲನೆಯ ಪಯಣದ ಮಜಲಿನಲ್ಲಿ ಇಳಿದುಕೊಂಡಾಗ ಮಲಿಕ್–ಹಿಸಾಮನಿಗೆ "ಶಹರ್‌ಯಾರ್" ಎಂಬ ಬಿರುದನ್ನು ದಯಪಾಲಿಸಿ, ಆತನನ್ನು ಹಿಂತಿರುಗಲು ಅನುಮತಿಯನ್ನು ನೀಡಿದನು.

■

*

೭. ಆದಿಲ್‌ಖಾನ್ ಫಾರೂಖಿ-ಅಲ್‌ಮುಖಾತಿಬ್-ಬ-ಆಜಂಹುಮಾಯೂನ್-ಬಿನ್ ನಸೀರ್‌ಖಾನ್ ಫಾರೂಖಿ

ಹಿಂದಿನ ಪುಟಗಳಲ್ಲಿ ವರ್ಣಿಸಲಾಗಿರುವಂತೆ ಆದಿಲ್‌ಖಾನ್ ಫಾರೂಖಿಯು ತನ್ನ ತಾಯಿಯ ತಂದೆ (ನಾನಾ) (ಅಜ್ಜ) ಸುಲ್ತಾನ್ ಮಹಮೂದ್ ಬೇಕ್ರಾನ ಸಹಾಯದಿಂದ ಖಾನದೇಶದ ಆಡಳಿತವನ್ನು ತನ್ನ ಕೈಗೆ ತೆಗೆದುಕೊಂಡಿರುವುದನ್ನು ನಾವು ಓದಿದ್ದೇವೆ. ಮಹಮೂದ್ ಬೇಕ್ರಾನು ವಾಪಸ್ಸಾದ ನಂತರ ಆದಿಲ್‌ಖಾನನು ಥಾಲೇಜ್ ಕೋಟೆಯನ್ನು ಬಿಟ್ಟು, ಬುರ್ಹಾನಪುರಕ್ಕೆ ಬಂದನು. ಬಂದ ತಕ್ಷಣ ರಾಜ್ಯದ ಪ್ರಗತಿಯತ್ತ ಗಮನವನ್ನು ಹರಿಸಲಾರಂಭಿಸಿದನು. ಮಲಿಕ್ ಹಿಸಾಮುದ್ದೀನ್ ಶಹರ್‌ಯಾರನು ಮಲಿಕ್‌ಲಾವನ್‌ನ ಶತ್ರುವೂ ಆಗಿದ್ದನು. ಈತನು ಬುರ್ಹಾನಪುರದಿಂದ ಥಾಲೇಜ್ ಕೋಟೆಗೆ ಬಂದನು.

ಮಲಿಕ್ ಹಿಸಾಮನ ಆಸೆ :

ಕೆಲವು ದಿನಗಳ ನಂತರ ತಿಳಿದು ಬಂದದ್ದೇನೆಂದರೆ ಮಲಿಕ್ ಹಿಸಾಮನು ಮತ್ತೊಮ್ಮೆ ನಿಜಾಂಶಾಹನೊಂದಿಗೆ ಸೇರಿಕೊಂಡಿದ್ದಾನೆಂದು. ಆತನು ಆಲಂಖಾನನನ್ನು ಬುರ್ಹಾನಪುರದ ಶಾಸಕನನ್ನಾಗಿ ಮಾಡಲು ಕನಸನ್ನು ಕಾಣಲಾರಂಭಿಸಿದನು. ಆದಿಲ್‌ಖಾನನಿಗೆ ಈ ವಿಷಯವು ತಿಳಿಯಿತು. ಆತನು ಒಬ್ಬ ದೂತನನ್ನು ಮಲಿಕ್ ಹಿಸಾಮನನ್ನು ಕರೆತರಲು ಕಳುಹಿಸಿದನು. ಮಲಿಕ್ ಹಿಸಾಮನು ನಾಲ್ಕು ಸಾವಿರ ಸೈನಿಕ ಸವಾರರೊಂದಿಗೆ ಬುರ್ಹಾನಪುರಕ್ಕೆ ಬಂದನು.

ಮಲಿಕ್ ಹಿಸಾಮ ಬುರ್ಹಾನ್‌ಪುರದಲ್ಲಿ :

ಮಲಿಕ್ ಹಿಸಾಮನು ಬುರ್ಹಾನಪುರದ ಹತ್ತಿರ ಬಂದಾಗ, ಆದಿಲ್‌ಖಾನನು ಮೂರು ಸಾವಿರ ಗುಜರಾತಿ ಸೈನಿಕರನ್ನು ತೆಗೆದುಕೊಂಡು ಆತನನ್ನು ಸ್ವಾಗತಿಸಲು ಹೋದನು. ಆತನನ್ನು ತನ್ನೊಡನೆ ಕರೆದುಕೊಂಡು ಶಾಹಿ ಅರಮನೆಗೆ ಕರೆತಂದನು.

ಆತನನ್ನು ಗೌರವಿಸಿ ವಾಪಸ್ ಕಳುಹಿಸಿಕೊಟ್ಟನು. ನಂತರ ಆದಿಲ್‌ಖಾನನು ಮಲಿಕ್‌ಹಿಸಾಮನನ್ನು ಕೊಲೆ ಮಾಡಲು ನಿಶ್ಚಯಿಸಿಕೊಂಡನು. ತನ್ನ ಕೆಲ ಆಪ್ತರಿಗೆ ಈ ವಿಷಯವನ್ನು ತಿಳಿಸಿದನು. "ವರ್ಸಾಯ ಗುಜರಾತಿ" ಎಂಬುವನು ಕತ್ತಿವರಸೆಗಳಲ್ಲಿ ಬಹಳ ನಿಪುಣನಾಗಿದ್ದನು. ಆತನನ್ನು ಹಿಸಾಮನ ಕೊಲೆಗೆ ನೇಮಿಸಿದನು.

ಮಲಿಕ್ ಹಿಸಾಮ್‌ನ ಕೊಲೆ :

ಆದಿಲ್‌ಖಾನನು ಮಾರನೇ ದಿನವೇ ಮತ್ತೊಮ್ಮೆ ಮಲಿಕ್ ಹಿಸಾಮನನ್ನು ಅರಮನೆಗೆ ಬರುವಂತೆ ಆಹ್ವಾನಿಸಿದನು. ಆದರೆ ಮಲಿಕ್ ಹಿಸಾಮನು ಅಹಂಕಾರದಿಂದ ತನ್ನೆಲ್ಲಾ ಸೈನ್ಯವನ್ನು ತೆಗೆದುಕೊಂಡೇ ಬಂದನು. ಮಲಿಕ್ ಹಿಸ್ಸಾಮನೊಂದಿಗೆ ಪಕ್ಕದಲ್ಲಿ ಕರೆದುಕೊಂಡು, ಅತ್ತಿತ್ತ ಕಡೆಯ ಮಾತುಗಳನ್ನಾಡಿಸುತ್ತಾ, ತಾನು ಮಲಗುವ ಕೋಣೆಯತ್ತ ಮಲಿಕ್‌ಹಿಸಾಮನನ್ನು ಕರೆದುಕೊಂಡು ಹೋದನು. ಅಲ್ಲಿಯೂ ಇಬ್ಬರೂ ಕೆಲಹೊತ್ತು ಮಾತನಾಡಿದರು. ನಂತರ ಆದಿಲ್‌ಖಾನನು ಮಲಿಕ್‌ಹಿಸಾಮನನ್ನು ಹೋಗಲು ಅನುಮತಿಯನ್ನು ನೀಡಿದನು. ವರ್ಸಾಯ ಗುಜರಾತಿಯು ತನ್ನ ಪೂರ್ವ ಯೋಜಿತ ಉಪಾಯದಂತೆ ಸಮಯವನ್ನು ಕಾಯುತ್ತಾ ಕುಳಿತಿದ್ದವನು ಬಹಳ ವೇಗವಾಗಿ ಅವನ ಮೇಲೆ ಬಿದ್ದನು. ತನ್ನ ಕತ್ತಿಯಿಂದ ಒಂದೇ ಏಟಿಗೆ ಆತನ ಶರೀರವನ್ನು ಎರಡು ತುಂಡುಗಳನ್ನಾಗಿ ಕತ್ತರಿಸಿ ಬಿಟ್ಟನು.

ವಿದ್ರೋಹಿಗಳಿಗೂ ಕೊಲೆಯ ಆಜ್ಞೆ:

ಆದಿಲ್‌ಖಾನನು ತನ್ನ ಮಹಾಮಂತ್ರಿಗೆ ಆದೇಶಿಸಿದ್ದೇನೆಂದರೆ–ನೀನು ಗುಜರಾತಿ ಸೈನಿಕರೊಂದಿಗೆ ಹೋಗಿ ಮಲಿಕ್ ಹಿಸಾಮನೊಂದಿಗೆ ಬಂದಿರುವ ಪ್ರಮುಖ ವಿದ್ರೋಹಿ ಅಮೀರರನ್ನು ಕೊಲೆ ಮಾಡಲು ತಿಳಿಸಿದನು. ಗುಜರಾತಿಗಳು ಆದೇಶವನ್ನು ಪಡೆಯುತ್ತಲೇ ಒಂದು ದೊಡ್ಡ ಗಲಭೆಯನ್ನೇ ಸೃಷ್ಟಿಸಿದರು. ಮಲಿಕ್‌ಯಾಖಾ ಮತ್ತು ಇತರೆ ಅಮೀರರು ಮಲಿಕ್‌ಹಿಸಾಮನ ಪಕ್ಷದವರಾಗಿದ್ದವರೆಲ್ಲರೂ ಈ ಗಲಭೆಯಲ್ಲಿ ಸತ್ತರು. ಈ ರೀತಿ ಮಲಿಕ್‌ನ ಅರ್ಧಭಾಗ ರಾಜ್ಯವು ವಿದ್ರೋಹಿಗಳ ಕೈಯಲ್ಲಿದ್ದುದು ಆದಿಲ್‌ಖಾನನ ವಶಕ್ಕೆ ಬಂದಿತು. ರಾಜ್ಯವು ವಿದ್ರೋಹಿಗಳ ಕೈಯಿಂದ ಬಿಡುಗಡೆಯಾಯಿತು.

ಆದಿಲ್‌ಖಾನನ ಪತ್ರ ಮಹಮೂದ್ ಬೇಕ್ರಾನ ಹೆಸರಿಗೆ :

ಈ ಘಟನೆಗಳ ನಂತರ ಒಂದು ದಿನ ಆದಿಲ್‌ಖಾನನು ಅಸೀರ್‌ಕೋಟೆಗೆ ಹೋದನು. ಅಲ್ಲಿ ತನ್ನ ಶತ್ರುಗಳ ಮಸಲತ್ತನ್ನು ತಿಳಿದುಕೊಂಡನು. ವಾಪಸ್ಸಾಗುವಾಗ ಸುಲ್ತಾನ್ ಮಹಮೂದ್ ಬೇಕ್ರಾನಿಗೆ ಪತ್ರವನ್ನು ಬರೆದನು. ಪತ್ರದಲ್ಲಿ "ನಾನು ಒಮ್ಮೆ ಕೋಟೆಯನ್ನು ಪ್ರವೇಶಿಸಿ ಅಲ್ಲಿನ ಪರಿಸ್ಥಿತಿಯನ್ನರಿಯಲು ಹೋದೆ. ಅಲ್ಲಿ ನನಗೆ ತಿಳಿದಿದ್ದುದೇನೆಂದರೆ–ಸೈಫ್‌ಖಾನ್ ಮತ್ತು ಶೇರ್‌ಖಾನರು ನನ್ನ ಶತ್ರುಗಳಾಗಿದ್ದಾರೆ.

ಆ ಇಬ್ಬರು ಅಮೀರರು ಅಹಮದ್ ನಿಜಾಂಶಾಹ ಬಹರಿಗೆ ಪತ್ರವನ್ನು ಬರೆದು ಖಾನ್‌ಜಾದ ಆಲಂಖಾನನನ್ನು ಜೊತೆಯಲ್ಲಿ ಕರೆದುಕೊಂಡು ಬರಲು ಹೇಳಿದ್ದಾರೆಂದು ತಿಳಿಯಿತು. ಅಹಮದ್ ನಿಜಾಂಶಾಹನು ಇತ್ತೀಚಿನ ದಿನಗಳಲ್ಲಿ ಸರ್‌ಹದ್ದಿನ ಪ್ರದೇಶಗಳಲ್ಲಿ ನೆಲೆ ನಿಂತಿದ್ದಾನೆ. ಈಗ ನನ್ನ ಅಭಿಪ್ರಾಯವೇನೆಂದರೆ- ಖಾನ್ ಜಹಾನ್ ಮುಜಾಹಿದುಲ್ ಮುಲ್ಕ ಮತ್ತು ಇತರೆ ಅಮೀರರೊಂದಿಗೆ ಅಸೀರ್ ಕೋಟೆಯನ್ನು ಮುತ್ತಿಗೆ ಹಾಕಲು ಯೋಚಿಸಿದ್ದೇನೆ. ಒಂದು ವೇಳೆ ಮುತ್ತಿಗೆಯ ಸಮಯದಲ್ಲಿ ಅಹಮದ್ ನಿಜಾಂಶಾಹನು ಇತ್ತ ಕಡೆ ಏನಾದರೂ ಬಂದರೆ, ಮುತ್ತಿಗೆಯನ್ನು ತೆರವು ಮಾಡಿ, ಆತನನ್ನು ಎದುರಿಸಲು ತೀರ್ಮಾನಿಸಿದ್ದೇನೆ" ಎಂದು ಪತ್ರದಲ್ಲಿ ತಿಳಿಸಿದನು.

ಮಹಮೂದ್ ಬೇಕ್ರಾನ ಉತ್ತರ :

ಸುಲ್ತಾನ್ ಮಹಮೂದ್ ಬೇಕ್ರಾನಿಗೆ ಆದಿಲ್‌ಖಾನನ ಪತ್ರವು ತಲುಪಿತು. ಆತನು ತಕ್ಷಣ ಹನ್ನೆರಡು ಲಕ್ಷ ತಿನ್ಗೆ ನಾಣ್ಯಗಳನ್ನು ಆದಿಲ್‌ಖಾನನಿಗೆ ಕಳುಹಿಸಿಕೊಟ್ಟನು. ಮತ್ತು "ನೀನು ಯಾವ ರೀತಿಯಲ್ಲಿಯೂ ಚಿಂತೆಯನ್ನೂ ಮಾಡಬೇಡ. ನಿನಗೆ ಅವಶ್ಯಕತೆ ಇದ್ದಾಗಲೇಲ್ಲಾ ನಾನು ನಿನ್ನ ಸಹಾಯಕ್ಕೆ ಬರಲು ಸಿದ್ಧನಿದ್ದೇನೆ. ಹಾಗೂ ಅಹಮ್ಮದ ನಿಜಾಂ ಶಾಹ ಬಹರಿಯನ್ನು ನಾನು ನೋಡಿಕೊಳ್ಳುತ್ತೇನೆ. ಆತನು ದಖನ್ನಿನ ಗುಲಾಮಿ ವಂಶದವನು. ಆತನಲ್ಲಿ ನಿನಗೆ ಹಾಗೂ ನಿನ್ನ ಪ್ರಜೆಗೆ ತೊಂದರೆ ಕೊಡುವಷ್ಟು ಧೈರ್ಯ ಅವನಲ್ಲಿಲ್ಲ ಎಂದು ಪತ್ರವನ್ನು ಬರೆದನು.

ಜಾಲ್ನಾ ರಾಜನ ಮೇಲೆ ಆಕ್ರಮಣ :

ಜಾಲ್ನಾ ರಾಜನು ಅಹಮದ್‌ಶಾಹ್ ಬಹರಿಯ ಅಧೀನದಲ್ಲಿ ಆತನಿಗೆ ಕಪ್ಪ-ಕಾಣಿಕೆಗಳನ್ನು ಸಲ್ಲಿಸುತ್ತಿದ್ದ ಒಬ್ಬ ಸಾಮಂತ ರಾಜನಾಗಿದ್ದನು. ಆದಿಲ್‌ಖಾನನ ಹತ್ತಿರ ಗುಜರಾತಿ ಸೈನ್ಯವು ಬಂದ ತಕ್ಷಣ ಜಾಲ್ನಾ ರಾಜನ ಮೇಲೆ ಆಕ್ರಮಣವನ್ನು ನಡೆಸಿದನು. ರಾಜನ ಅನೇಕ ಹಳ್ಳಿಗಳನ್ನು ಲೂಟಿ ಮಾಡಿ ನಾಶಪಡಿಸಿದನು. ರಾಜನು ಈ ಪರಿಸ್ಥಿತಿಯಿಂದ ತುಂಬಾ ಚಿಂತಿತನಾದನು. ಆತನು ವಿನಯ ನಮ್ರತೆಯಿಂದ ಆದಿಲ್‌ಖಾನನಲ್ಲಿ ಪ್ರಾರ್ಥಿಸಿಕೊಂಡು ಕ್ಷಮೆ ಯಾಚಿಸಿದನು. ಆಗ ಆದಿಲ್‌ಖಾನನು ಗುಜರಾತಿ ಸೈನ್ಯವನ್ನು ವಾಪಸ್ ಕಳುಹಿಸಿ, ತಾನು ಅಸೀರ್ ಕೋಟೆಯತ್ತ ನಡೆದನು.

ಶಾದಿ ಆಬಾದ್ ಮಾಂಡುವಿನತ್ತ ಪ್ರಯಾಣ :

ಹಿಜರಿ ೯೨೩ರಲ್ಲಿ ಆದಿಲ್‌ಖಾನನು ಸುಲ್ತಾನ್ ಮುಜಾಫರ್ ಗುಜರಾತಿಯ ಜೊತೆಯಲ್ಲಿ ಶಾದಿ ಆಬಾದ ಮಾಂಡುವಿಗೆ ಹೋದನು. ಅಲ್ಲಿ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ವಿಚಾರಗಳನ್ನು ಗುಜರಾತಿ ಬಾದಶಹರುಗಳ ಇತಿಹಾಸದಲ್ಲಿ ವರ್ಣಿಸಲಾಗಿದೆ.

ಮರಣ :

ಇದೇ ವರ್ಷ ಆದಿಲ್‌ಖಾನನು ಕಾಯಿಲೆ ಬಿದ್ದನು. ರಂಜಾನ್ ತಿಂಗಳ ಹತ್ತನೇ ತಾರೀಖು ಶುಕ್ರವಾರದಂದು ಆತನು ಮರಣ ಹೊಂದಿದನು. ಈತನು ಹತ್ತೊಂಬತ್ತು ವರ್ಷಗಳ ಕಾಲ ಆಡಳಿತವನ್ನು ನಡೆಸಿದನು. ಆದಿಲ್‌ಖಾನನ ನಂತರ ಆತನ ಮಗ ಮೀರಾನ್ ಮಹಮ್ಮದ್‌ಶಾಹ ಫಾರೂಖಿಯು ಪಟ್ಟಕ್ಕೇರಿದನು. ಈತನು ಸುಲ್ತಾನ್ ಮುಜಾಫ್ಫರ್ ಗುಜರಾತಿಯ ತಂಗಿಯ ಮಗನಾಗಿದ್ದನು.

■

*

೮. ಮೀರಾನ್ ಮಹಮ್ಮದ್‌ಶಾಹ್ ಫಾರೂಖಿ-ಬಿನ್-ಆದಿಲ್‌ಖಾನ್ ಫಾರೂಖಿ

ಶಾಹಿ ದರ್ಜೆ :

ಆದಿಲ್‌ಖಾನ್ ಫಾರೂಖಿಯ ಮರಣಾನಂತರ ಮೀರಾನ್ ಮುಹಮ್ಮದ್‌ಶಾಹನು ಬುರ್ಹಾನಪುರದ ಶಾಸಕನಾದನು. ಈತನು ಕೊನೆಯಲ್ಲಿ ಗುಜರಾತಿನ ಬಾದಶಾಹ್‌ನು ಆಗಿ ಆಳಿದ್ದನು. ಇದರಿಂದಲೇ ಈತನ ಹೆಸರಿನ ಮುಂದೆ "ಶಾಹ್" ಎಂಬ ಶಬ್ದವು ಸೇರಿಸಲಾಗಿದೆ. ಮೀರಾನ್ ಮಹಮ್ಮದ್‌ಶಾಹ್ ಫಾರೂಖಿಯು ಆ ವಂಶದ ಮೂಲ ಪುರುಷನಾಗಿದ್ದಾನೆ. ಏಕೆಂದರೆ, ಫಾರೂಖಿಯ ವಂಶಸ್ಥರಲ್ಲಿ ಬಾದಶಹನೆಂದು ಕರೆಯಿಸಿಕೊಂಡವನು ಈತನೇ ಮೊದಲಿಗನು.

ನಿಜಾಂಶಾಹ್ ಮತ್ತು ಅಮಾದುಲ್‌ಮುಲ್ಕನಲ್ಲಿ ಜಗಳ :

ಅದೇ ದಿನಗಳಲ್ಲಿ ನಿಜಾಂಶಾಹ ಮತ್ತು ಅಮಾದುಲ್‌ಮುಲ್ಕರಲ್ಲಿ ಮಾಹೋರ್ ಕೋಟೆ ಮತ್ತು ಇನ್ನಿತರ ಪರಗಣಗಳ ವಿಷಯದಲ್ಲಿ ಜಗಳ ಪ್ರಾರಂಭವಾಯಿತು. ಅಮಾದುಲ್‌ಮುಲ್ಕನು ಮೀರಾನ್‌ಮಹಮ್ಮದ್‌ಶಾಹ್ ಫಾರೂಖಿಯ ಸಹಾಯದಿಂದ ಸುಲ್ತಾನ್ ಮುಜಾಫರ್ ಗುಜರಾತಿಯವನಿಂದ ಸಹಾಯವನ್ನು ಕೇಳಿದನು. ಸುಲ್ತಾನ್ ಬಹಾದುರ್ ಗುಜರಾತಿಯು ಪಟನ್ ಶಾಸಕನಾದ ಐನುಲ್‌ಮುಲ್ಕನನ್ನು ದಕ್ಷಿಣದ ಸರಹದ್ದಿನ ಕಡೆಗೆ ಕಳುಹಿಸಿದನು. ಅಲ್ಲಿನ ಪರಿಸ್ಥಿತಿಗಳನ್ನು ಸರಿಯಾಗಿ ತಿಳಿದುಕೊಂಡು ಬರಲು ಹೇಳಿದನು. ಹಾಗೂ ನಿಜಾಂಶಾಹ ಮತ್ತು ಅಮಾದುಲ್‌ಮುಲ್ಕರಲ್ಲಿ ಒಪ್ಪಂದವನ್ನು ಮಾಡಿಸಲು ಹೇಳಿ ಕಳುಹಿಸಿದನು. ನಿಜಾಂಶಾಹನು ಸುಲ್ತಾನ್ ಬಹಾದುರ್ ಗುಜರಾತಿಯ ಮಾತಿನಂತೆ ಅಮಾದುಲ್ ಮುಲ್ಕನೊಂದಿಗೆ ಸಂಧಿ ಮಾಡಿಕೊಂಡನು. ನಂತರ ತನ್ನ ದೇಶಕ್ಕೆ ಹೋದನು.

ನಿಜಾಂಶಾಹ್‌ನೊಂದಿಗೆ ಯುದ್ಧ :

ಎರಡನೇ ವರ್ಷದಲ್ಲಿ ಮತ್ತೆ ಬುರ್ಹಾನ ನಿಜಾಮನು ತನ್ನ ರಾಜ್ಯದಲ್ಲಿ ಸೈನ್ಯದೊಂದಿಗೆ ಸಂಚರಿಸುತ್ತಾ, ಬರಾರ್‌ನ ಕೆಲವು ಪರಗಣಗಳನ್ನು ಮಾಹೋರ್ ಕೋಟೆಯನ್ನು ಗೆದ್ದುಕೊಂಡನು. ಅಮಾದುಲ್‌ಮುಲ್ಕ್‌ನು ಚಿಂತಿತನಾಗಿ ಮೀರಾನ್ ಮಹಮ್ಮದಶಾಹ್ ಫಾರೂಖಿಯ ಹತ್ತಿರ ಸಹಾಯವನ್ನು ಬೇಡಿದನು. ಹಿಜರಿ ೯೩೪ರಲ್ಲಿ ಮೀರಾನ್ ಮಹಮ್ಮದ್‌ಶಾಹ್‌ನು ತನ್ನ ಆನೆಗಳು, ಸೈನ್ಯದೊಂದಿಗೆ ಅಮಾದುಲ್‌ಮುಲ್ಕನ ಸಹಾಯಕ್ಕೆಂದು ದಕ್ಷಿಣದಲ್ಲಿ ಬಂದನು. ಆತನ ಜೊತೆಯಲ್ಲಿ ಸೇರಿಕೊಂಡು ಒಂದು ನದಿಯ ದಡದಲ್ಲಿ ಬುರ್ಹಾನ ನಿಜಾಂಶಾಹನೊಂದಿಗೆ ಯುದ್ಧ ಮಾಡಿದನು. ಮೀರಾನ್ ಮಹಮ್ಮದ್‌ಶಾಹ್ ಫಾರೂಖಿಯು ನಿಜಾಂಶಾಹಿ ಸೈನ್ಯವನ್ನು ಸೋಲಿಸಿದನು. ಯುದ್ಧ ಮೈದಾನದಲ್ಲಿ ನಿಶ್ಚಿಂತನಾಗಿ ನಿಂತಿದ್ದನು. ಖಾನ್‌ದೇಶ ಮತ್ತು ಬರಾರಿ ಸೈನಿಕರು ನಿಜಾಂಶಾಹಿ ಸೈನ್ಯವನ್ನು ಹಿಂಬಾಲಿಸಿದರು. ದಾರಿಯಲ್ಲಿ ಸಾಕಷ್ಟು ಲೂಟಿಯನ್ನು ಮಾಡಿದರು.

ಮೀರಾನ್ ಮಹಮ್ಮದ್‌ಶಾಹ್‌ನ ಗೆಲುವು ಮತ್ತು ಸೋಲು :

ಬುರ್ಹಾನ್ ನಿಜಾಂಶಾಹ್‌ನು ಸೋತು ಒಂದು ಹಳ್ಳಿಯಲ್ಲಿ ಅಡಗಿದ್ದನು. ಅಲ್ಲಿಂದ ಸುಮಾರು ೩೦೦೦ ಸೈನಿಕರೊಂದಿಗೆ ಪುನಃ ಯುದ್ಧ ಮೈದಾನಕ್ಕೆ ಬಂದನು. ನಿಜಾಂಶಾಹ್‌ನು ಎಂತಹ ಆಕ್ರಮಣವನ್ನು ಮಾಡಿದ್ದನೆಂದರೆ–ಶತ್ರುಗಳಿಗೆ ತಮ್ಮ ಸೈನ್ಯದೊಂದಿಗೆ ತಯಾರಾಗಿ ಯುದ್ಧಕ್ಕೂ ಬರದಂತೆ ಅವರ ಮೇಲೆ ಬಿದ್ದನು. ಅಮಾದುಲ್ ಮುಲ್ಕನು, ಮೀರಾನ್‌ಮಹಮ್ಮದ್‌ಶಾಹ್‌ನು ಓಡಲು ಪ್ರಾರಂಭಿಸಿದರು. ನಿಜಾಂಶಾಹ್‌ನು ಅವರನ್ನು ನಾಲ್ಕು ಮೈಲಿಗಳ ದೂರ ಓಡಿಸಿಕೊಂಡು ಹೋದನು. ಅವರ ತೋಪುಖಾನೆಯನ್ನು ಕಿತ್ತಿಕೊಂಡನು. ಬರಾರಿ ಮತ್ತು ಖಾನ್‌ದೇಶದ ಬಹಳಷ್ಟು ಸೈನಿಕರು ಹತರಾದರು. ಅಮಾದುಲ್‌ಮುಲ್ಕ ಮತ್ತು ಮೀರಾನ್ ಮಹಮ್ಮದ್‌ಶಾಹ್‌ರು ಬಹಳ ಕೆಟ್ಟ ರೀತಿಯಲ್ಲಿ ಸೋತು ತಮ್ಮ–ತಮ್ಮ ರಾಜಧಾನಿಗಳತ್ತ ವಾಪಸ್ಸಾದರು. ಬುರ್ಹಾನ ನಿಜಾಂಶಾಹ್‌ನು ಬಹಳ ಧೈರ್ಯ ಮತ್ತು ಬುದ್ಧಿವಂತಿಕೆಯಿಂದ ತನ್ನ ಸೋಲನ್ನು ಗೆಲುವಿನಲ್ಲಿ ತಿರುಗಿಸಿ ಗೌರವದಿಂದ ಹಿಂತಿರುಗಿದನು.

ಬಹಾದೂರ್ ಗುಜರಾತಿಯ ಆಗಮನ :

ಈ ಘಟನೆಯ ನಂತರ ಮೀರಾನ್ ಮುಹಮ್ಮದ್‌ಶಾಹ್ ಮತ್ತು ಅಮಾದುಲ್‌ಮುಲ್ಕನು ಸುಲ್ತಾನ್ ಬಹಾದೂರ್ ಗುಜರಾತಿಯಿಂದ ಸೈನಿಕ ಸಹಾಯವನ್ನು ಬೇಡಿದರು. ಗುಜರಾತಿ ಶಾಸಕನು ಒಂದು ವಿಶಾಲ ಸೈನ್ಯವನ್ನು ತೆಗೆದುಕೊಂಡು ಬುರ್ಹಾನ್‌ಪುರಕ್ಕೆ ಬಂದನು. ಅಲ್ಲಿಂದ ಮೀರಾನ್ ಮಹಮ್ಮದ್‌ಶಾಹ್‌ನನ್ನು

ಜೊತೆಯಲ್ಲಿ ಕರೆದುಕೊಂಡು ಬರಾರ್‌ನಲ್ಲಿ ಪ್ರವೇಶಿಸಿದನು. ಜಾಲ್ನಾ ತಲುಪಿದ ನಂತರ ಬಹಾದೂರ್ ಗುಜರಾತಿಯ ನಿಯತ್ತಿನಲ್ಲಿ ವ್ಯತ್ಯಾಸವುಂಟಾಯಿತು. ಬರಾರ್ ದೇಶವನ್ನು ಅಮಾದುಲ್ ಮುಲ್ಕನಿಂದ ಕಿತ್ತುಕೊಂಡು ತನ್ನ ಸೇವಕರನ್ನು ಶಾಸಕರನ್ನಾಗಿ ನೇಮಕ ಮಾಡುವ ಯೋಚನೆ ಅವನಿಗೆ ಹೊಳೆಯಿತು. ಇದಾದ ನಂತರ ಅಹಮದ್‌ನಗರವನ್ನು ತಲುಪಿ ಬುರ್ಹಾನ ನಿಜಾಂಶಾಹ್‌ನ ಕೆಲವು ಪ್ರದೇಶಗಳನ್ನು ತನ್ನ ವಶಕ್ಕೆ ಪಡೆದು, ಆ ಪ್ರದೇಶಗಳಲ್ಲಿ ತನ್ನ ಖುತ್ಬಾ ಮತ್ತು ಮುದ್ರೆಯನ್ನು ಚಲಾವಣೆ ಮಾಡಲು ಚಿಂತಿಸಿದನು.

ಅಮಾದುಲ್‌ಮುಲ್ಕನ ಚಿಂತೆ :

ಅಮಾದುಲ್‌ಮುಲ್ಕ್‌ನಿಗೆ ಸುಲ್ತಾನ್ ಬಹಾದೂರ್‌ನ ಯೋಜನೆಯ ವಿಷಯ ತಿಳಿದು ತುಂಬಾ ಚಿಂತಿತನಾದನು. ಆತನು ಮೀರಾನ್ ಮಹಮ್ಮದಶಾಹ್ ಫಾರೂಖಿ ಸುಲ್ತಾನ್ ಬಹಾದೂರನ ದೂರು ಹೇಳಿದನು. ಅದಕ್ಕೆ ಉತ್ತರವಾಗಿ, ದುರದೃಷ್ಟಕ್ಕೆ ಯಾವ ಔಷಧಿಯೂ ಇಲ್ಲವೆಂದನು. ತಪ್ಪು ನಮ್ಮದೇ ಆಗಿದೆ. ಸುಲ್ತಾನ್ ಬಹಾದೂರ್ ಗುಜರಾತಿಯನ್ನು ನಾವೇ ಇಲ್ಲಿಗೆ ಕರೆಯಿಸಿದ್ದೇವೆ. ನಾವು ಹೀಗೆ ಮಾಡಬಾರದಿತ್ತು. ಈಗ ಶಾಂತವಾಗಿರುವುದೊಂದೇ ಮಾರ್ಗ. ಪರಿಸ್ಥಿತಿಗಳನ್ನು ಭಗವಂತನ ಮೇಲೆ ಹಾಕುವುದು ಒಳ್ಳೆಯದು.

ಮೀರಾನ್ ಮಹಮ್ಮದ್‌ಶಾಹ್‌ನ ಯೋಜನೆ :

ಅದೇ ದಿನಗಳಲ್ಲಿ ಒಂದಿ ದಿನ ಸಮುಯುವನ್ನು ನೋಡಿ ಮೀರಾನ್ ಮಹಮ್ಮದ್‌ಶಾಹ್ ಫಾರೂಖಿಯು ಸುಲ್ತಾನ್ ಬಹಾದೂರ್ ಗುಜರಾತಿಯೊಡನೆ– ಬರಾರ್ ದೇಶವು ಈಗ ತಮ್ಮ ವಶಕ್ಕೆ ಬಂದಿದೆ. ಈಗ ತಾವು ಇಲ್ಲಿ ಇನ್ನೂ ಹೆಚ್ಚಿನ ದಿನಗಳನ್ನು ಕಳೆಯುವುದು ಚೆನ್ನಾಗಿ ಕಾಣುತ್ತಿಲ್ಲ. ನನ್ನ ಅಭಿಪ್ರಾಯದಲ್ಲಿ ತಾವು ಈ ದೇಶದಲ್ಲಿ ತಮ್ಮ ಖುತ್ಬಾವನ್ನು, ಮುದ್ರೆಯನ್ನು ಜಾರಿಗೊಳಿಸಿ ಅಮಾದುಲ್‌ಮುಲ್ಕನನ್ನು ತಮ್ಮ ಸೇವೆಯಲ್ಲಿ ಸೇರಿಸಿಕೊಳ್ಳುವುದು ಹಾಗೂ ಅಹಮ್ಮದ್‌ನಗರಕ್ಕೆ ತಲುಪಿ, ನಿಜಾಂಶಾಹಿ ದೇಶವನ್ನು ತಮ್ಮ ಕೈವಶ ಮಾಡಿಕೊಳ್ಳುವುದು ಸೂಕ್ತ ಎಂದು ಹೇಳಿದನು.

ಬರಾರ್‌ನಲ್ಲಿ ಬಹಾದೂರ್ ಗುಜರಾತಿಯ ಖುತ್ಬಾ :

ಸುಲ್ತಾನ್ ಬಹಾದೂರ್ ಗುಜರಾತಿಗೆ ಮೀರಾನ್ ಮಹಮ್ಮದ್‌ಶಾಹ್‌ನ ಅಭಿಪ್ರಾಯವು ಬಹಳ ಮೆಚ್ಚುಗೆಯಾಯಿತು. ಆತನು ಬರಾರಿನಲ್ಲಿ ತನ್ನ ಹೆಸರಿನ ಖುತ್ಬಾವನ್ನು ಜಾರಿ ಮಾಡಿ ಅಮಾದುಲ್‌ಮುಲ್ಕ್‌ನಿಗೆ ತನ್ನ ಅಮೀರರಲ್ಲಿ ಸ್ಥಾನವನ್ನು ನೀಡಿದನು. ಇದಾದ ನಂತರ ಆತನು ಅಹಮದ್‌ನಗರದತ್ತ ರವಾನೆಯಾದನು. ಅಹಮ್ಮದನಗರವನ್ನು ತಲುಪಿದ ಸುಲ್ತಾನ್ ಬಹಾದೂರನು ದೌಲತಾಬಾದಿನತ್ತ

ಪ್ರಯಾಣ ಮಾಡಿದನು. ಈ ಸಂಬಂಧದ ಎಲ್ಲ ವಿಷಯಗಳನ್ನು ವಿವರವಾಗಿ ಹಿಂದೆಯೇ ಹೇಳಲಾಗಿದೆ. ಆದ್ದರಿಂದ ರಾಖಿಮುಲ್‌ಹುರ್ಫ್‌ನಿಗೆ ಆ ವಿಷಯಗಳನ್ನು ಇಲ್ಲಿ ಪುನಃರುಚ್ಚರಿಸಲು ಇಷ್ಟವಿಲ್ಲ. ಮೀರ ಮಹಮ್ಮದ್‌ಶಾಹ್ ಫಾರೂಖಿಯ ಉತ್ತಮ ಯೋಜನೆಯಿಂದ ಸುಲ್ತಾನ್ ಬಹಾದೂರ್ ಗುಜರಾತಿಯು ನಿಜಾಂಶಾಹ್ ಮತ್ತು ಅಮಾದುಲ್ ಮುಲ್ಕನ ರಾಜ್ಯದ ಮೇಲೆ ಹಿಡಿತವನ್ನು ಇಡಲು ಇಚ್ಛಿಸಲಿಲ್ಲ. ಮತ್ತು ತನ್ನ ರಾಜಧಾನಿಯತ್ತ ಹಿಂತಿರುಗಿದನು.

ಮಾಂಡುವಿನ ಗೆಲುವು :

ಸುಲ್ತಾನ್ ಬಹಾದೂರ್ ಗುಜರಾತಿಯು ಹಿಜರಿ ೯೩೭ರಲ್ಲಿ ಮಾಳವ ದೇಶವನ್ನು ಗೆಲ್ಲುವ ಇಚ್ಛೆಯನ್ನು ವ್ಯಕ್ತಪಡಿಸಿದನು. ಆತನು ಮೀರಾರ್ ಮಹಮ್ಮದ್‌ಶಾಹ್‌ನಿಗೆ ತನ್ನ ಹತ್ತಿರ ಕರೆಯಿಸಿಕೊಂಡನು. ಇಬ್ಬರೂ ಸೇರಿ ಮಾಂಡುವನ್ನು ಗೆದ್ದುಕೊಂಡರು. ಗೆದ್ದ ನಂತರ ಮೀರಾನ್ ಮಹಮ್ಮದ್‌ಶಾಹ್ ಫಾರೂಖಿಯು ಅದೇ ವರ್ಷದಲ್ಲಿ ಬುರ್ಹಾನಪುರಕ್ಕೆ ವಾಪಸ್ಸಾದನು.

ಬುರ್ಹಾನ್ ನಿಜಾಮನ ಚಿಂತೆ :

ಬುರ್ಹಾನ್ ನಿಜಾಂಶಾಹ್‌ನು ಈ ವಿಚಾರವನ್ನು ಅಂದರೆ ಮಾಳವ ದೇಶವನ್ನು ಗೆದ್ದ ವಿಷಯ ತಿಳಿದ ನಂತರ ತುಂಬಾ ಚಿಂತಿತನಾದನು. ಆತನು ಶಾಹ್‌ತಾಹೆರ್ ಎಂಬಾತನನ್ನು ತನ್ನ ದೂತನನ್ನಾಗಿ ನೇಮಿಸಿ ಬುರ್ಹಾನ್‌ಪುರಕ್ಕೆ ರವಾನಿಸಿದನು. ಏಕೆಂದರೆ ಅವರಿಬ್ಬರಲ್ಲೂ ಪ್ರೇಮ ಸೌಹಾರ್ದತೆ ಬೆಳೆಸುವದು ಆತನ ಉದ್ದೇಶವಾಗಿತ್ತು. ಹಿಜರಿ ೯೩೮ರಲ್ಲಿ ಸುಲ್ತಾನ್ ಬಹಾದೂರ್ ಗುಜರಾತಿಯು ಬುರ್ಹಾನ್‌ಪುರಕ್ಕೆ ಬಂದನು. ಈ ವಿಚಾರವೂ ಹಿಂದೆ ವರ್ಣಿಸಲಾಗಿದೆ. ಮೀರಾನ್ ಮಹಮ್ಮದ್‌ಶಾಹ್ ಫಾರೂಖಿಯ ಒಳ್ಳೆಯ ಸಂಧಾನಗಳಿಂದಾಗಿ ಬುರ್ಹಾನ್ ನಿಜಾಂಶಾಹನಲ್ಲೂ ಮತ್ತು ಸುಲ್ತಾನ ಬಹಾದೂರ್ ಗುಜರಾತಿಯಲ್ಲೂ ಉತ್ತಮ ಬಾಂಧವ್ಯ ಬೆಳೆಯಿತು.

ಬುರ್ಹಾನ್ ನಿಜಾಮಶಾಹ ಮತ್ತು ಬಹಾದೂರ್ ಗುಜರಾತಿಯಲ್ಲಿ ಒಪ್ಪಂದ :

ಬುರ್ಹಾನ್ ನಿಜಾಂಶಾಹನು ಮೀರಾನ್ ಮಹಮ್ಮದ್‌ಶಾಹ್ ಫಾರೂಖಿಯ ಸಲಹೆಯಂತೆ ಬುರ್ಹಾನ್‌ಪುರಕ್ಕೆ ಬಂದನು. ಅಲ್ಲಿ ಬಂದಾಗ ಸುಲ್ತಾನ್ ಬಹಾದೂರ್ ಗುಜರಾತಿಯೊಂದಿಗೆ ಭೇಟಿಯಾದನು. ಸುಲ್ತಾನ್ ಮಹಮೂದ್ ಗುಜರಾತಿಯು ದಖನಿ ಶಾಸಕನೊಂದಿಗೆ ಬಹಳ ಪ್ರೇಮದಿಂದ ವರ್ತಿಸಿದನು. ಆತನಿಗೆ ನಿಜಾಂಶಾಹಿ ಬಿರುದನ್ನು ನೀಡಿ, ಕೆಂಪು ತಲೆಯ ಮೇಲಿನ ಪರದಾ ಮತ್ತು ಛತ್ರಿ-ಚಾಮರಗಳನ್ನು ನೀಡಿದನು. ನಂತರ "ನಾನು ಶತ್ರುಗಳನ್ನು ಮಣ್ಣುಗೂಡಿಸಿದೆ, ಹಾಗೆಯೇ ಮಿತ್ರರನ್ನು ಸಿಂಹಾಸನಾರೂಢರನ್ನಾಗಿಸಿದೆ" ಎಂದನು. ಇದಾದ ನಂತರ ಬಹಾದೂರ್ ಗುಜರಾತಿಯು ಬುರ್ಹಾನ್ ನಿಜಾಂಶಾಹನನ್ನು ಹಿಂತಿರುಗಲು ಅನುಮತಿಯನ್ನು ನೀಡಿದನು.

ಓಡಾಟ :

ಸುಲ್ತಾನ್ ಬಹಾದೂರ್‌ನು ಎರಡನೇ ಸಲ ಮಾಳವದಲ್ಲಿ ಬಂದನು. ಮೀರಾನ್ ಮಹಮ್ಮದ್‌ಶಾಹ್ ಫಾರೂಖಿಯು ಆತನ ಜೊತೆಯಲ್ಲಿದ್ದನು. ಕೆಲವು ದಿನಗಳ ನಂತರ ಮಹಮ್ಮದ್‌ಶಾಹ್ ಫಾರೂಖಿಯು ಬುರ್ಹಾನ್‌ಪುರಕ್ಕೆ ವಾಪಸ್ ಬಂದನು. ಅದೇ ಸಂದರ್ಭದಲ್ಲಿ ಸುಲ್ತಾನ್ ಬಹಾದೂರ್ ಗುಜರಾತಿಯು ಚಿತ್ತೋರ ಕೋಟೆಯ ಮೇಲೆ ಆಕ್ರಮಣವನ್ನು ಮಾಡಿದನು. ಮೀರಾನ್ ಮಹಮ್ಮದ್‌ಶಾಹ್ ಫಾರೂಖಿಯು ತನ್ನ ಸೈನ್ಯವನ್ನು ಸರಿಪಡಿಸಿಕೊಂಡು ಚಿತ್ತೋರಿನತ್ತ ಹೊರಟನು. ಮೊಘಲ ಬಾದಶಾಹ ನಾಸೀರುದ್ದೀನ ಹುಮಾಯೂನನ ಎದುರು ನಿಲ್ಲಲಾರದೆ ಓಡಿ ಹೋದನು. ಬಹಾದೂರ್ ಗುಜರಾತಿಯು ಸೋತು ಮಹಮ್ಮದ್‌ಶಾಹ್ ಫಾರೂಖಿಯೊಂದಿಗೆ ಮಾಂಡುವಿಗೆ ಬಂದನು. ಬಹಾದೂರ್ ಗುಜರಾತಿಯು ಜನಾನೇರ್‌ನತ್ತ ಪ್ರಯಾಣ ಬೆಳೆಸಿ, ಮಹಮ್ಮದ್‌ಶಾಹ್ ಫಾರೂಖಿಯನ್ನು ಬುರ್ಹಾನ್‌ಪುರಕ್ಕೆ ಹೋಗಲು ಅನುಮತಿಯನ್ನು ನೀಡಿದನು.

ನಾಸೀರುದ್ದೀನ ಹುಮಾಯೂನನು ಗುಜರಾತಿನಲ್ಲಿ :

ಅದೇ ದಿನಗಳಲ್ಲಿ ನಾಸೀರುದ್ದೀನ ಹುಮಾಯೂನನು ಗುಜರಾತನ್ನು ಗೆದ್ದುಕೊಂಡನು. ತನ್ನ ಒಬ್ಬ ಆಪ್ತ ಅಮೀರನಾದ ಆಸಿಫ್‌ಖಾನನನ್ನು ಅಹಮದ್‌ನಗರಕ್ಕೆ ಕಳುಹಿಸಿ, ಬುರ್ಹಾನ್ ನಿಜಾಂನಿಂದ ಕಪ್ಪ–ಕಾಣಿಕೆಗಳನ್ನು ಸಲ್ಲಿಸುವಂತೆ ಹೇಳಿಕಳಿಸಿದನು. ಅದಾದ ನಂತರ ಹುಮಾಯೂನನು ಖಾನ್‌ದೇಶವನ್ನು ಗೆಲ್ಲಲು ಅಲ್ಲಿಗೆ ಬಂದನು. ಮೀರಾನ್ ಮುಹಮ್ಮದ್‌ಶಾಹ್ ಫಾರೂಖಿಯು ಚಿಂತಿತನಾಗಿ ಬುರ್ಹಾನ್ ನಿಜಾಂಶಾಹನಿಗೆ ಪತ್ರವನ್ನು ಬರೆದು, ಈಗ ಸದ್ಯಕ್ಕೆ ನನ್ನ ಸಂಕಷ್ಟವನ್ನು ಪರಿಹರಿಸುವಂತೆ ಕೇಳಿಕೊಂಡನು.

ಬುರ್ಹಾನ್ ನಿಜಾಂಶಾಹನ ಪತ್ರ ಹುಮಾಯೂನನಿಗೆ :

ಬುರ್ಹಾನ್ ನಿಜಾಂಶಾಹನು ನಾಸೀರುದ್ದೀನ್ ಹುಮಾಯೂನನಿಗೆ ಒಂದು ಅರ್ಜಿಯನ್ನು ರವಾನೆ ಮಾಡಿದನು. ಅದರ ವಿಷಯ–ಅತ್ಯಂತ ವಿನೀತನಾಗಿ ನಾನು ನಿಮ್ಮ ಸೇವೆಯಲ್ಲಿ ಪ್ರಾರ್ಥಿಸುವುದೇನೆಂದರೆ–ತಮ್ಮ ಕೃಪೆಯು ನಮ್ಮ ಮೇಲೆ ಇರುವವರೆಗೆ ಭಗವಂತನ ಕೃಪೆಯೆಂದೇ ನಾವು ಭಾವಿಸಿದ್ದೇವೆ. ನಮ್ಮ ಮೇಲೆ ತಮ್ಮ ಉಪಕಾರಗಳು ಅಪಾರವಾಗಿವೆ. ಅವುಗಳ ಕೃತಜ್ಞತೆಯನ್ನು ಅರ್ಪಿಸುವುದು ನಮ್ಮ ಆದ್ಯ ಕರ್ತವ್ಯವೂ ಆಗಿದೆ. ನಾನು ಈ ವಾಕ್ಯಗಳನ್ನು ಏಕೆ ಬರೆಯುತ್ತಿದ್ದೇನೆಂದರೆ–ತಮ್ಮಲ್ಲಿ ಬುರ್ಹಾನ್‌ಪುರದ ಮತ್ತು ಅಸೀರಿನ ಶಾಸಕನ ಬಗ್ಗೆ ಶಿಫಾರಸ್ಸು ಮಾಡಲೆಂಬ ಆಸೆಯಿಂದ ಈ ಪತ್ರವನ್ನು ಬರೆಯುತ್ತಿದ್ದೇನೆ. ಮೀರಾನ್ ಮುಹಮ್ಮದ್‌ಶಾಹ್‌ನು ತಮ್ಮನ್ನು ಅಪಾರವಾಗಿ ಗೌರವಿಸುತ್ತಾನೆ ಪ್ರೀತಿಸುತ್ತಾನೆ. ಈ ದಿನಗಳಲ್ಲಿ ತಾವು ಖಾನದೇಶವನ್ನು ಗೆಲ್ಲಬೇಕೆಂಬ

ಇಚ್ಛೆಯನ್ನು ಪ್ರಕಟಿಸಿದ್ದೀರಿ. ಮೀರಾನ್ ಮಹಮ್ಮದ್‌ಶಾಹ್‌ನು ತಮ್ಮ ಆಪ್ತರಲ್ಲೊಬ್ಬನಾಗಿರುವನು. ಆದ್ದರಿಂದ ಆತನೊಂದಿಗೆ ಉತ್ತಮವಾಗಿ ವ್ಯವಹರಿಸುತ್ತೀರೆಂದು ನಂಬಿರುತ್ತೇನೆ. ಆತನ ರಾಜ್ಯದ ಮೇಲೆ ಕೃಪೆ ಮಾಡಿ ಆತನನ್ನು ಕರುಣಿಸುವಂತೆ ಪ್ರಾರ್ಥಿಸುತ್ತೇನೆ.

ಹುಮಾಯೂನನು ಮಾಂಡುವಿನಲ್ಲಿ :

ಇದಾದ ನಂತರ ಬುರ್ಹಾನ್ ನಿಜಾಂಶಾಹ, ಇಬ್ರಾಹಿಂ ಆದಿಲ್‌ಶಾಹ್, ಸುಲ್ತಾನ ಖುಲಿಖುತುಬ್‌ಶಾಹ್, ಅಲಾವುದ್ದೀನ್ ಅಮಾದುಲ್‌ಮುಲ್ಕರುಗಳು ಮೀರಾನ್ ಮಹಮ್ಮದ್‌ಶಾಹ್‌ನ ಸಹಾಯಕ್ಕೆಂದು ಸೈನಿಕಾಚರಣೆಗಳನ್ನು ಕೈಕೊಂಡರು. ಅಕಸ್ಮಾತಾಗಿ ಅದೇ ದಿನಗಳಲ್ಲಿ ಮೀರ್‌ಜಾ ಅಮಾನ್‌ನ ವಿರೋಧ ಮತ್ತು ಶೇರ್‌ಶಾಹ್‌ನ ಗಲಭೆ, ಪಿತೂರಿಗಳ ಚಟುವಟಿಕೆಗಳು ಜಾಸ್ತಿಯಾದವು. ಹುಮಾಯೂನನು ಖಾನ್‌ದೇಶದ ಮೇಲೆ ಆಕ್ರಮಣ ಮಾಡಿ, ಈ ದೇಶವನ್ನು ಸರ್ವನಾಶಪಡಿಸಿದ ನಂತರ ಮಾಂಡುವಿನತ್ತ ಹೊರಟನು.

ಮೊಗಲ್ ಅಮೀರರನ್ನು ಮಾಳವದಿಂದ ಹೊರಕ್ಕೆ :

ಮಾಳವದಲ್ಲಿ ಬಹಳ ಜನ ಮೊಗಲ್ ಅಮೀರರು ಬಾಕಿ ಉಳಿದಿದ್ದರು. ಸುಲ್ತಾನ್ ಬಹಾದೂರ್ ಗುಜರಾತಿಯು ಮೀರಾನ್ ಮಹಮ್ಮದ್‌ಶಾಹ್ ಫಾರೂಖಿಗೆ ಅವರನ್ನೆಲ್ಲಾ ಓಡಿಸಲು ಒತ್ತಾಯಿಸಿದನು. ಅದಕ್ಕೆ ಅವನು ಮಲ್ಲುಖಾನನ ಸಹಾಯದಿಂದ ಆ ಮೊಗಲ ಅಮೀರರನೆಲ್ಲಾ ಶಾದಿಆಬಾದ್ ಮಾಂಡುವಿನಿಂದ ಹೊರಕ್ಕೆ ಕಳುಹಿಸಿದನು. ಮಾಂಡುವನ್ನು ಅವರ ಹಿಡಿತದಿಂದ ತನ್ನ ವಶಕ್ಕೆ ಪಡೆದುಕೊಂಡನು.

ಮೀರಾನ್ ಮಹಮ್ಮದ್‌ಶಾಹ್‌ನ ಶಾಸನ ಗುಜರಾತಿನಲ್ಲಿ :

ಮೀರಾನ್ ಮಹಮ್ಮದ್‌ಶಾಹ್‌ನು ಇನ್ನೂ ಮಾಳವದಲ್ಲಿದ್ದಾಗ ಫಿರಂಗಿಗಳ ಕೈಯಲ್ಲಿ ಮರಣಹೊಂದಿದನು. ಸುಲ್ತಾನ್ ಬಹಾದೂರ ಗುಜರಾತಿಯು ಸಂತಾನ ರಹಿತವಾಗಿ ಸತ್ತಿದ್ದನು. ಆದ್ದರಿಂದ ಗುಜರಾತಿ ಅಮೀರರುಗಳು ಒಗ್ಗಟ್ಟಾಗಿ ಮೀರಾನ್ ಮಹಮ್ಮದ್‌ಶಾಹ್ ಫಾರೂಖಿಯನ್ನು ತಮ್ಮ ಶಾಸಕನನ್ನಾಗಿ ಆರಿಸಿದರು. ಆತನನ್ನು ಕರೆಯಿಸಿ, ಆತನ ಹೆಸರಿನ ಖುತ್ಬಾ ಮುದ್ರೆ ಮುಂತಾದ ಎಲ್ಲ ಆಚರಣೆಗಳನ್ನು ಗುಜರಾತಿನಲ್ಲಿ ಜಾರಿಗೆ ತಂದರು. ಆತನ ಮೂಲ ಹೆಸರಿನ ಮುಂದೆ "ಶಾಹ್" ಎಂಬ ಪದವೂ ಸೇರಿಕೊಂಡಿತು. ಅಂದಿನಿಂದ ಬಾದಶಾಹನೆನಿಸಿಕೊಂಡನು.

ಮೀರಾನ್ ಮಹಮ್ಮದ್‌ಶಾಹ್‌ನ ಮರಣ :

ಗುಜರಾತಿ ಅಮೀರರುಗಳು ಸುಲ್ತಾನ್‌ಬಹಾದೂರ್ ಗುಜರಾತಿಯ ಛತ್ರ-ಚಾಮರ, ಕಿರೀಟಗಳನ್ನು, ರಾಜದಂಡವನ್ನು ಮೀರಾನ್ ಮಹಮ್ಮದ್‌ಶಾಹ್‌ನ ಸೇವೆಯಲ್ಲಿ

ಕಳುಹಿಸಿಕೊಟ್ಟರು. (ಆತನು ಮಾಂಡುವಿನಲ್ಲೇ ಇದ್ದನೆಂದು ಹಿಂದೆ ತಿಳಿದಿದ್ದೇವೆ) ಆತನನ್ನು ಗುಜರಾತಿಗೆ ಬರಲು ಆಹ್ವಾನಿಸಿದರು. ಮೀರಾನ್ ಮಹಮ್ಮದ್‌ಶಾಹ್‌ನು ಅವರು ಕಳುಹಿಸಿ ಕೊಟ್ಟ ಕಿರೀಟವನ್ನು ತನ್ನ ತಲೆಯ ಮೇಲಿಟ್ಟುಕೊಂಡನು. ಇನ್ನೇನು ಗುಜರಾತಿಗೆ ಹೊರಡುವಷ್ಟರಲ್ಲಿ ಕಾಯಿಲೆ ಬಿದ್ದು ಸತ್ತು ಹೋದನು. ಹಿಜರಿ-೯೨೪, ಜೀಕದ್ ತಿಂಗಳ ಹನ್ನೆರಡನೇ ತಾರೀಖಿನಂದು ಮರಣ ಹೊಂದಿದನು. ಅಮೀರರೆಲ್ಲರೂ ಆತನ ಶವವನ್ನು ಬುರ್ಹಾನಪುರದಲ್ಲಿ ಆದಿಲ್‌ಖಾನನ ಗೋರಿಯ ಪಕ್ಕದಲ್ಲಿ ದಫನ್ ಮಾಡಿದರು. ಮೀರಾನ್ ಮಹಮ್ಮದ್‌ಶಾಹ್ ಘಾರೂಖಿಯ ಸಂತಾನದಲ್ಲಿ ಯಾರೂ ಅಂತಹ ಸಮರ್ಥ ಮಕ್ಕಳು ಶಾಸನವನ್ನು ಮಾಡುವಂತವರು ಇರಲಿಲ್ಲ. ಅಮೀರರೆಲ್ಲರೂ ಆತನ ಸಹೋದರನಾದ ಮುಬಾರಕ್‌ಖಾನನನ್ನು ಖಾನದೇಶದ ಶಾಸಕನನ್ನಾಗಿ ಆರಿಸಿದರು.

■

*

೯. ಮೀರಾನ್ ಮುಬಾರಕ್‌ಶಾಹ್ ಬಿನ್ ಆದಿಲ್‌ಖಾನ್ ಫಾರೂಖಿ

ಪಟ್ಟಾಭಿಷೇಕ :

ಮೀರಾನ್ ಮಹಮ್ಮದ್‌ಶಾಹ್ ಫಾರೂಖಿಯ ಮಕ್ಕಳಲ್ಲಿ ಶಾಸನ ಮಾಡುವಂತಹ ಯೋಗ್ಯರಿರಲಿಲ್ಲವೆಂಬುದನ್ನು ನಾವು ಹಿಂದಿನ ಪುಟದಲ್ಲಿ ಓದಿದ್ದೇವೆ. ಆದ್ದರಿಂದ ಎಲ್ಲಾ ಅಮೀರರು ಒಗ್ಗಟ್ಟಾಗಿ ಮೀರಾನ್ ಮುಬಾರಕ್‌ಶಾಹ್‌ನನ್ನು ಸಿಂಹಾಸನದ ಮೇಲೆ ಕೂರಿಸಿದರು. ಈತನು ಶಾಸನದ ಲಗಾಮನ್ನು ತನ್ನ ಕೈಯಲ್ಲಿ ತೆಗೆದುಕೊಂಡನು. ಬಹಳ ಉತ್ತಮ ಗುಣಗಳಿಂದ ಶಾಸನವನ್ನು ನಡೆಸಲು ಪ್ರಾರಂಭಿಸಿದನು. ತನ್ನೆಲ್ಲಾ ದರ್ಬಾರಿಗಳಲ್ಲಿ ಅಮೀರರಲ್ಲಿ ಪ್ರೇಮದ ವರ್ತನೆಯನ್ನು ತೋರುತ್ತಿದ್ದನು.

ಗುಜರಾತಿನ ಅಮೀರರ ತೀರ್ಮಾನ :

ಅದೇ ದಿನಗಳಲ್ಲಿ ಗುಜರಾತಿ ಅಮೀರರು ಮಹಮೂದ್ ಗುಜರಾತಿ ಬಿನ್ ಷಹಜಾದಾತೀಫ್‌ಖಾನ್‌ನನ್ನು ಗುಜರಾತ್ ಸಾಮ್ರಾಜ್ಯದ ನಿಜವಾದ ಹಕ್ಕುದಾರನೆಂದು ತೀರ್ಮಾನಿಸಿದರು. ಆತನನ್ನು ತರಲು ಇಖ್ತಿಯಾರ್‌ಖಾನನನ್ನು ಬುರ್ಹಾನಪುರಕ್ಕೆ ಕಳುಹಿಸಿದರು. ಇಲ್ಲಿ ಇದನ್ನು ಜ್ಞಾಪಿಸಿಕೊಳ್ಳಬೇಕಾಗಿರುವುದೆಂದರೆ, **ಸುಲ್ತಾನ್ ಬಹಾದೂರ್ ಗುಜರಾತಿಯು ಮಹಮೂದ್ ಗುಜರಾತಿಗೆ** ಆತನು ಸಹೋದರನ ಮಗನಾಗಿದ್ದುದರಿಂದ, ಮೀರಾನ್ ಮಹಮ್ಮದ್‌ಶಾಹ್ ಫಾರೂಖಿಯ ವಶಕ್ಕೆ ಬಿಟ್ಟಿದ್ದನು. ಫಾರೂಖಿಯು ಮಹಮೂದ್ ಗುಜರಾತಿಯನ್ನು ಕೋಟೆಯಲ್ಲಿ ಬಂಧಿಸಿಟ್ಟಿದ್ದನು.

ಮಹಮೂದ್ ಗುಜರಾತಿಯ ಬಿಡುಗಡೆ :

ಇಖ್ತಿಯಾರ್‌ಖಾನನು ಬುರ್ಹಾನಪುರಕ್ಕೆ ಬಂದನು. ಆತನು ಮೀರಾನ್ ಮುಬಾರಕ್‌ಶಾಹ್‌ನೊಂದಿಗೆ ಭೇಟಿಯಾಗಿ ಮಹಮೂದ್ ಗುಜರಾತಿಯನ್ನು ಬಿಡುಗಡೆ

ಮಾಡಲು ಕೇಳಿದನು. ಮೀರಾನ್ ಮುಬಾರಕನಿಗಿದ್ದ ಆತಂಕವೆಂದರೆ, ಈಗ ನಾನು ಆತನನ್ನು ಬಿಡುಗಡೆಗೊಳಿಸಿದರೆ ಗುಜರಾತಿ ಅಮೀರರು ಅವನನ್ನು ಗುಜರಾತಿನ ಬಾದಶಾಹ್‌ನೆಂದು ಘೋಷಿಸಿ ಬಿಡುತ್ತಾರೆ. ಆದ್ದರಿಂದ ಮೀರಾನ್ ಮುಬಾರಕನು ಇಖ್ತಿಯಾರ್‌ಖಾನನೊಡನೆ, ಆಕಡೆ–ಈಕಡೆ ವ್ಯರ್ಥ ಮಾತುಗಳಲ್ಲೇ ಮುಳುಗಿಸಿ, ಬಿಡುಗಡೆಯನ್ನು ನಿರಾಕರಿಸಿದನು. ಗುಜರಾತಿ ಅಮೀರರಿಗೆ ಈ ಕಾರ್ಯದಿಂದ ತುಂಬಾ ಬೇಸರವಾಯಿತು. ಅವರೆಲ್ಲರೂ ಯುದ್ಧವನ್ನು ಸಾರಿದರು. ಸೈನ್ಯವನ್ನು ಸಿದ್ಧಗೊಳಿಸಿಕೊಂಡರು. ಯುದ್ಧಕ್ಕೆಂದು ಖಾನ್‌ದೇಶದತ್ತ ಹೊರಟರು. ಮೀರಾನ್ ಮುಬಾರಕನು ಈ ಪರಿಸ್ಥಿತಿಯನ್ನು ಕಂಡು ಮಹಮೂದ್ ಗುಜರಾತಿಯನ್ನು ಬಿಡುಗಡೆಗೊಳಿಸಿದನು. ಆತನನ್ನು ಇಖ್ತಿಯಾರ್‌ಖಾನನೊಡನೆ ಗುಜರಾತಿಗೆ ಕಳುಹಿಸಿದನು.

ಅಮಾದುಲ್‌ಮುಲ್ಕನು ಬುರ್ಹಾನ್‌ಪುರದಲ್ಲಿ :

ಅದೇ ದಿನಗಳಲ್ಲಿ ಗುಜರಾತಿನ ಶಾಸಕರ ಒಬ್ಬ ಗುಲಾಮನು, ಆತನ ಹೆಸರು ಅಮಾದುಲ್‌ಮುಲ್ಕನೆಂದಿತ್ತು. ತಪ್ಪಿಸಿಕೊಂಡು ಬುರ್ಹಾನಪುರಕ್ಕೆ ಬಂದನು. ಮೀರಾನ್ ಮುಬಾರಕ್‌ಶಾಹ್‌ನು ಆ ಸಂದರ್ಭದಲ್ಲಿ ಅಮಾದುಲ್‌ಮುಲ್ಕ್‌ನಿಗೆ ಸಹಾಯವನ್ನು ಮಾಡಿದನು. ಏಕೆಂದರೆ ಈಗ ಗುಜರಾತಿನ ಆಡಳಿತ ನನಗೆ ದೊರಕುವುದೆಂಬ ಆಸೆಯಿಂದ ಸಹಾಯವನ್ನು ಮಾಡಿದನು. ಇಲ್ಲಿ ಅಮಾದುಲ್‌ಮುಲ್ಕ್‌ನು ೧೦–೧೨ ಸಾವಿರ ಗುಜರಾತಿ ಸಿಪಾಯಿಗಳನ್ನು ರೂಪಿಸಿದನು. ಮತ್ತೊಂದು ಕಡೆ ದರಿಯಾಖಾನನು ಸುಲ್ತಾನ್ ಮಹಮೂದ್ ಗುಜರಾತಿಯನ್ನು ಯುದ್ಧಕ್ಕೆ ಸಿದ್ಧಪಡಿಸಿದನು. ಆತನೂ ಒಂದು ವಿಶಾಲ ಸೈನ್ಯವನ್ನು ತೆಗೆದುಕೊಂಡು ಮೀರಾನ್ ಮಹಮ್ಮದ್‌ಶಾಹ್ ಮತ್ತು ಅಮಾದುಲ್‌ಮುಲ್ಕರ ಮೇಲೆ ಯುದ್ಧ ಮಾಡಲು ಬುರ್ಹಾನ್‌ಪುರದತ್ತ ಹೊರಟನು.

ಸುಲ್ತಾನ್ ಮಹಮೂದ್ ಗುಜರಾತಿಯೊಂದಿಗೆ ಯುದ್ಧ :

ಖಾನ್ ದೇಶ ಮತ್ತು ಗುಜರಾತಿ ಸರಹದ್ದಿನಲ್ಲಿ ಎರಡೂ ಸೈನ್ಯಗಳಲ್ಲಿ ಘೋರ ಯುದ್ಧ ನಡೆಯಿತು. ಮೀರಾನ್ ಮುಬಾರಕ್‌ಶಾಹ್‌ನಿಗೆ ಸೋಲಾಯಿತು. ಆತನು ಕೋಟೆಯಲ್ಲಿ ಅಡಗಿಕೊಂಡನು. ಅಮಾದುಲ್‌ಮುಲ್ಕ್‌ನು ಯುದ್ಧ ಮೈದಾನದಿಂದ ಓಡಿ ಮಾಂಡುವಿನತ್ತ ನಡೆದನು. ಅಲ್ಲಿ ಖಾದರ್‌ಶಾಹ್‌ನ ಹತ್ತಿರ ಆಶ್ರಯವನ್ನು ಪಡೆದನು. ಸುಲ್ತಾನ್ ಮಹಮೂದ್ ಗುಜರಾತಿಯು ಖಾನ್‌ದೇಶವನ್ನು ನಾಶ ಹಾಗೂ ಹಾಳುಗೆಡುವಲು ಪ್ರಾರಂಭಿಸಿದನು. ಈ ಪರಿಸ್ಥಿತಿಯನ್ನು ಕಂಡ ಮೀರಾನ್ ಮುಬಾರಕನು ತುಂಬಾ ಚಿಂತಿತನಾದನು. ಆತನು ಮಹಮೂದ್ ಗುಜರಾತಿಗೆ ಕಪ್ಪ–ಕಾಣಿಕೆಗಳನ್ನು ಸಲ್ಲಿಸಿ, ಆತನಲ್ಲಿ ಒಪ್ಪಂದವನ್ನು ಮಾಡಿಕೊಂಡನು. ನಂತರ ಸುಲ್ತಾನ ಮಹಮೂದ್ ಗುಜರಾತಿಯು ತನ್ನ ರಾಜಧಾನಿಗೆ ಹಿಂತಿರುಗಿದನು.

ಸುಲ್ತಾನ್‌ಪುರ ಮತ್ತು ನದರ್‌ಬಾರ್‌ಗಳು ಮುಬಾರಕ್‌ಶಾಹ್‌ನ ವಶಕ್ಕೆ :

ಸುಲ್ತಾನ್ ಮಹಮೂದ್ ಗುಜರಾತಿಯು ಆಗ ಬಹಳ ವಿಶಾಲವಾದ ಪ್ರದೇಶವನ್ನು ತನ್ನ ಆಡಳಿತಕ್ಕೆ ಸೇರಿಸಿಕೊಂಡಿದ್ದನು. ಆತನ ಸಾಮ್ರಾಜ್ಯವೂ ದೃಢತೆಯನ್ನು ಪಡೆದಿತ್ತು. ಆದ್ದರಿಂದ ಆತನು ಸುಲ್ತಾನ್‌ಪುರ ಮತ್ತು ನದರ್‌ಬಾರ್ ಪ್ರದೇಶಗಳನ್ನು ಮೀರಾನ್ ಮುಬಾರಕ್‌ನಿಗೆ ಬಿಟ್ಟುಕೊಟ್ಟನು. ಇದಕ್ಕೊಂದು ಕಾರಣವೂ ಇತ್ತು. ಅದೇನೆಂದರೆ– ಯಾವ ಸಂದರ್ಭದಲ್ಲಿ ಸುಲ್ತಾನ್ ಮಹಮೂದ್ ಗುಜರಾತಿ ಮತ್ತು ಮೀರಾನ್ ಮುಬಾರಕ್‌ನು ಇಬ್ಬರೂ ಅಸೀರಕೋಟೆಯಲ್ಲಿರುತ್ತಿದ್ದಾಗ, ಸುಲ್ತಾನ್ ಮಹಮೂದ್ ಗುಜರಾತಿಯು ವಚನವನ್ನು ಕೊಟ್ಟಿದ್ದನು. ಅದೇನೆಂದರೆ ನಾನು ಎಂದಾದರೂ ಗುಜರಾತಿನ ಬಾದಶಾಹ್‌ನಾದರೆ–ಸುಲ್ತಾನ್‌ಪುರ ಮತ್ತು ನದರ್‌ಬಾರ್‌ಗಳನ್ನು ಮೀರಾನ್ ಮುಬಾರಕ್‌ಶಾಹನಿಗೆ ಬಿಡುತ್ತೇನೆಂದು.

ಬಾಜ್‌ಬಹಾದೂರನ ಆಗಮನ ಮತ್ತು ಪೀರ್‌ಮಹಮ್ಮದನ ಆಕ್ರಮಣ :

ಹಿಜರಿ ೯೬೯ರಲ್ಲಿ ಮಾಳವ ದೇಶದ ಮೇಲೆ ಮೊಗಲರು ಆಕ್ರಮಿಸಿ ವಶಪಡಿಸಿಕೊಂಡ ನಂತರ ಅಲ್ಲಿಯ ಶಾಸಕನಾದ ಬಾಜ್ ಬಹಾದೂರನು ಬುರ್ಹಾನಪುರಕ್ಕೆ ಬಂದನು. ಅಲ್ಲಿ ಮೀರಾನ್ ಮುಬಾರಕ್‌ಶಾಹ್‌ನ ಹತ್ತಿರ ಆಶ್ರಯವನ್ನು ಪಡೆದನು. ಮಾಳವದ ಮೊಗಲರ ಶಾಸಕ ಪೀರ್‌ಮಹಮ್ಮದನು ಬಾಜ್‌ಬಹಾದೂರನನ್ನು ಹಿಂಬಾಲಿಸಿ, ಒಂದು ವಿಶಾಲ ಸೈನ್ಯದೊಂದಿಗೆ ಖಾನ್ ದೇಶಕ್ಕೆ ಬಂದನು. ಪೀರ್‌ಮುಹಮ್ಮದನು ಬುರ್ಹಾನಪುರದವರೆಗೂ ನಾಶ, ಲೂಟಿಗಳನ್ನು ನಡೆಸುತ್ತಾ ಸರ್ವನಾಶ ಮಾಡುವುದರಲ್ಲಿ ಸಂಪೂರ್ಣವಾಗಿ ತನ್ನನ್ನು ತೊಡಗಿಸಿಕೊಂಡನು. ಖಾನ್‌ದೇಶದ ಎಲ್ಲ ಜನಾಂಗದ ಹುಡುಗ–ಹುಡುಗಿಯರನ್ನು ಮೊಗಲರು ಸೆರೆಹಿಡಿದು ಅವರನ್ನು ಹಿಂಸಿಸಲಾರಂಭಿಸಿದರು.

ಬರಾರ್ ಶಾಸಕನಿಂದ ಸಹಾಯದ ಬೇಡಿಕೆ :

ಮೀರಾನ್ ಮುಬಾರಕ್‌ಶಾಹ್‌ನು ಅಸೀರ್ ಕೋಟೆಯಲ್ಲಿ ಅಡಗಿಕೊಂಡನು. ಆತನು ಬರಾರ್‌ನ ಶಾಸಕನಾದ ತಫಾಲಖಾನನನ್ನು ತನ್ನ ಸಹಾಯಕ್ಕೆ ಕರೆದನು. ತಫಾಲಖಾನನು ಬೇಗ ತನ್ನದೊಂದು ದೊಡ್ಡ ಸೈನ್ಯವನ್ನು ತೆಗೆದುಕೊಂಡು ಖಾನ್‌ದೇಶದಲ್ಲಿ ಬಂದನು. ಮೀರಾನ್ ಮುಬಾರಕಶಾಹ್‌ನು ಬಾಜ್‌ಬಹಾದೂರನೂ ತಫಾಲ್‌ಖಾನ್‌ನನ್ನು ಸ್ವಾಗತಿಸಿದರು. ಆ ಮೂರೂ ಶಾಸಕರೂ ಪೀರ್ ಮಹಮ್ಮದ್‌ಖಾನನನ್ನು ಅಡಗಿಸಲು ಎಲ್ಲ ಪ್ರಯತ್ನಗಳನ್ನು ಮಾಡತೊಡಗಿದರು.

ಮೊಗಲ ಸೈನ್ಯ ಮಾಳವದ ಕಡೆಗೆ ಹೊರಟಿತು :

ಮೊಗಲ ಅಮೀರರು, ಸಿಪಾಯಿಗಳು ಖಾನ್ ದೇಶದಲ್ಲಿ ಲೂಟಿ ಮಾಡಿದ್ದ ಅಪಾರ ಸಂಪತ್ತು, ಸಾಮಾನುಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡು ಅಹಂಕಾರದಲ್ಲಿ

ಮುಳುಗಿದರು. ಭೋಗವಿಲಾಸಕ್ಕೆ ಶರಣಾದರು. ಅವರು ಶತ್ರುಗಳೊಂದಿಗೆ ಯುದ್ಧ ಮಾಡಲು ಇಷ್ಟಪಡಲಿಲ್ಲ. ಪೀರ್‌ಮಹಮ್ಮದ್‌ಖಾನನು ಇವರ ದಮನಕ್ಕೆ ಬರುತ್ತಿರುವ ಮೂವರು ಶಾಸಕರ ಸೈನ್ಯದೊಂದಿಗೆ ಯುದ್ಧವನ್ನು ಮಾಡಬೇಕೇ? ಬೇಡವೇ? ಎಂಬುದರ ಬಗ್ಗೆ ಸಲಹೆಯನ್ನು ತನ್ನ ಸರದಾರರಿಗೆ ಕೇಳಿದನು. ಅವರೂ ಯುದ್ಧ ಬೇಡವೆಂದು ಹೇಳಿದರು. ಪೀರ್‌ಮಹಮ್ಮದ್‌ಖಾನನು ಮೊಗಲರ ಎಲ್ಲ ಸೈನ್ಯವನ್ನು ತೆಗೆದುಕೊಂಡು ಮಾಳವದ ಕಡೆ ಹೊರಟರು.

ಮೊಗಲ ಸೈನಿಕ ಶಿಬಿರದ ಮೇಲೆ ಆಕ್ರಮಣ ಮತ್ತು ಪೀರ್‌ಮಹಮ್ಮದ್‌ನ ಪಲಾಯನ:

ತಫಾಲಖಾನ, ಮುಬಾರಕ್‌ರೌಹ್ ಮತ್ತು ಬಾಜ್‌ಬಹಾದೂರರು ಮೊಗಲರನ್ನು ಹಿಂಬಾಲಿಸಿದರು. ಪೀರ್ ಮಹಮ್ಮದ್‌ಖಾನನ ಹೊತ್ತು ತಂದಿದ್ದ ಅಪಾರ ಸಂಪತ್ತಿನ ರಕ್ಷಣೆಯ ಮೇಲಿತ್ತು. ಆದರೆ ಆತನ ಸೈನಿಕರಿಗೆ ತಮ್ಮ ಪ್ರಾಣಗಳ ಮೇಲೆ ಆಸೆ ಇತ್ತು. ಮೂರೂ ಶಾಸಕರ ಸೈನ್ಯವು ಬರುತ್ತಿದೆ ಎಂದು ತಿಳಿದ ಪೀರ್‌ಮಹಮ್ಮದ್‌ನ ಸೈನ್ಯವು ತಮ್ಮ ಪ್ರಾಣಗಳನ್ನು ಉಳಿಸಿಕೊಳ್ಳಲು, ತಮ್ಮ ಶಾಸಕನನ್ನು ಹಿಂದೆ ಬಿಟ್ಟು, ಅವರು ಮೊದಲೇ ಅಲ್ಲಿಂದ ಓಡಿ ನರ್ಮದಾ ನದಿಯನ್ನು ಪಾರು ಮಾಡಿಬಿಟ್ಟರು. ತಫಾಲಖಾನ ಬರಾರಿಗೆ ಈ ವಿಷಯವು ತಿಳಿದು ಆತನು ನರ್ಮದಾನದಿಯ ಹತ್ತಿರವಿದ್ದ ಸೈನಿಕ ಶಿಬಿರವನ್ನು ಸುತ್ತುವರಿಯಲು ನಿಶ್ಚಯಿಸಿದನು. ಪೀರ್‌ಮಹಮ್ಮದ್‌ನಲ್ಲಿ ಈ ಮೂರು ಶಾಸಕರ ಸೈನ್ಯವನ್ನೆದುರಿಸುವ ಯಾವುದೇ ಉಪಾಯ ಕಾಣಲಿಲ್ಲ. ತಾನು ಹೊತ್ತು ತಂದಿದ್ದ ಎಲ್ಲ ಸಾಮಾನುಗಳನ್ನು ಅಲ್ಲಿಯೇ ಬಿಟ್ಟು ಪರಾರಿಯಾದನು.

ಪೀರ್‌ಮಹಮ್ಮದ್‌ನ ಕೊಲೆ :

ತಫಾಲಖಾನನು ಬಹಳ ವೇಗವಾಗಿ ಪೀರ್‌ಮಹಮ್ಮದ್‌ನನ್ನು ಹಿಂಬಾಲಿಸಿದನು. ಮತ್ತೊಂದು ಕಡೆಯಲ್ಲಿ ಪೀರ್‌ಮಹಮ್ಮದ್‌ನು ಓಡಿ ಹೋಗದಂತೆ ಬಾಜ್ ಬಹಾದೂರನು ನರ್ಮದಾ ನದಿಯ ದಡದಲ್ಲಿದ್ದ ದೋಣಿಗಳನ್ನು ಬೇರೆ ಕಡೆಗೆ ಸರಿಸಿದನು. ಪೀರ್‌ಮಹಮ್ಮದ್‌ನು ನರ್ಮದಾ ನದಿಯ ದಡಕ್ಕೆ ತಲುಪಿದಾಗ ಅಲ್ಲಿ ಒಂದು ದೋಣಿಯೂ ಆತನಿಗೆ ಸಿಗಲಿಲ್ಲ. ಇದರಿಂದಾಗಿ ಪೀರ್‌ಮಹಮ್ಮದ್‌ನು ತುಂಬಾ ಚಿಂತಿತನಾದನು. ಈ ಚಿಂತೆಯಲ್ಲಿಯೇ ತನ್ನ ಕುದುರೆಯನ್ನು ನದಿಯಲ್ಲಿ ಈಜಲು ಬಿಟ್ಟನು. ಕುದುರೆಯ ಸಮೇತ ಈತನು ನರ್ಮದಾ ನದಿಯಲ್ಲಿ ಮುಳುಗಿ ಸತ್ತನು. ಇನ್ನೂ ಉಳಿದ ಸೈನಿಕರು ಹೇಗೋಮಾಡಿ ನರ್ಮದಾನದಿಯನ್ನು ಪಾರು ಮಾಡಿದರು. ಅವರ ಸಾಮಾನುಗಳನ್ನೆಲ್ಲಾ ತಫಾಲಖಾನನ ವಶವಾಯಿತು.

ಇದಾದ ನಂತರ ಮೀರಾನ್ ಮುಬಾರಕ್‌ಶಾಹ್ ಮತ್ತು ತಫಾಲಖಾನ್‌ನು ಬಾಜ್‌ಬಹಾದೂರ್‌ನ ಸಹಾಯಕ್ಕೆ ಬಂದು ಎಲ್ಲ ಮೊಗಲ ಶತ್ರುಗಳನ್ನು ಮಾಳವದಿಂದ

ಓಡಿಸಿದರು. ಬಾಜ್ ಬಹಾದೂರನು ಎರಡನೇ ಬಾರಿಗೆ ಮಾಳ್ವದ ಸಿಂಹಾಸನಕ್ಕೇರಿದನು. ಅಲ್ಲಿಂದ ಮುಬಾರಕ್‌ಶಾಹ್‌ಮತ್ತು ತಫಾಲಖಾನ್‌ರು ವಾಪಸ್ ಬಂದರು.

ಮೀರಾನ್ ಮುಬಾರಕನ ಮರಣ :

ಹಿಜರಿ ೯೭೪ರ, ಜಮಾದಿಸ್ಸಾನಿ, ಎರಡನೇ ತಾರೀಖು ಬುಧವಾರದಂದು ಮೀರಾನ್ ಮುಬಾರಕನು ಮರಣ ಹೊಂದಿದನು. ಆತನು ಮೂವತ್ತೆರಡು ವರ್ಷಗಳ ಕಾಲ ಆಡಳಿತವನ್ನು ಮಾಡಿದ್ದನು. ಮೀರಾನ್ ಮುಬಾರಕನ ನಂತರ ಆತನ ಮಗ ಮೀರಾನ್ ಮಹಮ್ಮದಖಾನ್‌ನು ತಂದೆಯ ಸ್ಥಾನದಲ್ಲಿ ಕುಳಿತನು.

■

*

೧೦. ಮೀರಾನ್ ಮಹಮ್ಮದ್‌ಶಾಹ್ ಬಿನ್ ಮುಬಾರಕಶಾಹ ಫಾರೂಖಿ

ಚಂಗೇಸ್‌ಖಾನನ ಪಿತೂರಿ :

ಮೀರಾನ್ ಮುಬಾರಕ್‌ಶಾಹ್ ಫಾರೂಖಿಯ ನಂತರ ಆತನ ಮಗ ಮೀರಾನ್ ಮಹಮ್ಮದ್‌ಶಾಹ್‌ನು ಪಟ್ಟಕ್ಕೆ ಬಂದನು. ಪಟ್ಟಕ್ಕೇರಿದ ಮೊದಲನೇ ವರ್ಷದ ಘಟನೆ ಏನೆಂದರೆ, ಚಂಗೇಸ್‌ಖಾನ್ ಗುಜರಾತಿಯು ಏತಮಾದುಲ್‌ಮುಲ್ಕನ ಸಲಹೆಯ ಮೇರೆಗೆ, ಸುಲ್ತಾನ್ ಮುಜಾಫ್ಫರ್ ಗುಜರಾತಿಯನ್ನು ತನ್ನ ಜೊತೆಯಲ್ಲಿ ಕರೆದುಕೊಂಡು ನದರ್‌ಬಾರಿಗೆ ಬಂದನು. ಚಂಗೇಸ್‌ಖಾನನು ಮೀರಾನ್ ಮಹಮ್ಮದ್‌ಶಾಹ್‌ನ ಠಾಣೆಗಳನ್ನು ತೆಗೆದು ಹಾಕಿದನು. ಈ ಕಾರ್ಯವನ್ನೆಸಗುವಾಗ ಆತನನ್ನು ಯಾರೂ ತಡೆಯಲಿಲ್ಲ. ಈ ಕಾರಣದಿಂದಾಗಿ ಚಂಗೇಸ್‌ಖಾನನ ಧೈರ್ಯವೂ ಇಮ್ಮಡಿಯಾಯಿತು. ಅಲ್ಲಿಂದ ಮುಂದುವರೆದು ಥಾನೇಶ್ವರ ಕೋಟೆಯ ಸುತ್ತಮುತ್ತಲ ಪ್ರದೇಶಗಳನ್ನು ಗೆದ್ದುಕೊಂಡನು.

ಚಂಗೇಸ್‌ಖಾನನು ತನ್ನ ಇಚ್ಛೆಯಂತೆ ಮೀರಾನ್ ಮಹಮ್ಮದ್‌ಶಾಹ್‌ನ ರಾಜ್ಯವನ್ನು ನಾಶಪಡಿಸಲು ಪಣತೊಟ್ಟನು. ಮೀರಾನ್ ಮಹಮ್ಮದ್‌ಶಾಹ್‌ನು ಬರಾರಿನ ಶಾಸಕನಾದ ತಫಾಲಖಾನನನ್ನು ತನ್ನ ಸಹಾಯಕ್ಕೆ ಕರೆದನು. ತಫಾಲಖಾನನು ಒಂದು ಸೈನ್ಯವನ್ನು ತೆಗೆದುಕೊಂಡು ಬಂದನು. ಮೀರಾನ್‌ಮಹಮ್ಮದನು ತಫಾಲಖಾನನು ಜೊತೆಗೂಡಿಕೊಂಡು ಚಂಗೇಸ್‌ಖಾನನನ್ನು ಎದುರಿಸಿದರು. ಚಂಗೇಸ್‌ನು ಬಹಳ ವೀರನೂ, ಧೈರ್ಯಶಾಲಿಯೂ ಆಗಿದ್ದನು. ಆದರೆ ಅವನು ಯಾವುದೋ ಒಂದು ಸಂದೇಹಕ್ಕೆ ಒಳಗಾಗಿ, ಹೆದರಿ ಬಹಳ ಕಷ್ಟಕರವಾದ ಒಂದು ಜಾಗದಲ್ಲಿ ಅಡಗಿಕೊಂಡನು. ತನ್ನ ತೋಪುಗಳ ಮಧ್ಯೆ ಅಡಗಿಕೊಂಡು ರಾತ್ರಿಯಲ್ಲಿ ಬರೋಚ್‌ನತ್ತ ಪರಾರಿಯಾದನು.

ಮೀರಾನ್ ಮಹಮ್ಮದ್‌ಶಾಹ್‌ನು ಗುಜರಾತನ್ನು ಬಿಡಿಸುವ ಇಚ್ಛೆ :

ತಘಾಲ್‌ಖಾನ್ ಮತ್ತು ಮೀರಾನ್ ಮಹಮ್ಮದ್‌ಶಾಹ್‌ನಿಗೆ ಚಂಗೇಸ್‌ನು ಓಡಿ ಹೋದ ಸುದ್ದಿ ತಿಳಿದು, ಆತನ ಎಲ್ಲಾ ಯುದ್ಧದ ಸಾಮಾನುಗಳನ್ನು ತಮ್ಮ ವಶಕ್ಕೆ ಪಡೆದರು. ಹಾಗೂ ಆತನು ಓಡಿದ ದಾರಿಯಲ್ಲಿ ಇವರು ಆತನನ್ನು ಹಿಂಬಾಲಿಸಿದರು. ಅದೇ ಸಂದರ್ಭದಲ್ಲಿ ಗುಜರಾತಿನಲ್ಲಿ ಅರಾಜಕತೆ ಉಂಟಾಗಿ ಅಲ್ಲೋಲ್ಲ-ಕಲ್ಲೋಲ ಪರಿಸ್ಥಿತಿಗಳು ಎಲ್ಲೆಡೆ ಹರಡಿದವು. ಅಲ್ಲಿಯ ಪ್ರಜೆಗಳಿಗೆ ಗೊತ್ತಾದುದೇನೆಂದರೆ ಸುಲ್ತಾನ್ ಮುಜಫ್ಫರ್ ಗುಜರಾತಿಯು, ಗುಜರಾತಿನ ರಾಜ (ಶಾಹೀ) ವಂಶದವನಲ್ಲವೆಂದು. ಇತ್ತ ಮೀರಾನ್ ಮಹಮ್ಮದ್‌ಶಾಹ್ ಫಾರೂಖಿಯು ಗುಜರಾತನ್ನು ತನ್ನ ವಂಶಸ್ಥರ ಸಿಂಹಾಸನವೆಂದು ತಿಳಿದು, ಆತನು ಅಪಾರ ಹಣವನ್ನು ಸಂಗ್ರಹಿಸಿಕೊಂಡು, ಒಂದು ಬಹುದೊಡ್ಡ ಸೈನ್ಯವನ್ನು ಕ್ರೋಡೀಕರಿಸಿಕೊಂಡನು. ಗುಜರಾತಿ ಅಮೀರ ಮತ್ತೊಂದು ಗುಂಪು ಈತನ ಸಹಾಯಕ್ಕೆ ಸಿದ್ಧರಾಗಿದ್ದರು. ಆತನು ಮೂವತ್ತು ಸಾವಿರ ಸೈನಿಕರನ್ನು ತೆಗೆದುಕೊಂಡು ಅಹಮದಾಬಾದನ್ನು ಗೆಲ್ಲಲು ಹೊರಟನು.

ಚಂಗೇಸ್‌ಖಾನನೊಂದಿಗೆ ಯುದ್ಧ ಮತ್ತು ಮಹಮೂದ್‌ಶಾಹ್‌ನ ಸೋಲು :

ಈ ದಿನಗಳಲ್ಲಿ ಚಂಗೇಸ್‌ಖಾನನು ಅಹಮದಾಬಾದ್‌ನ್ನು ತನ್ನ ವಶದಲ್ಲಿಟ್ಟುಕೊಂಡಿದ್ದನು. ಮತ್ತು "ಮೀರ್‌ಜಾ ಬಿರಾದರಾನ್" ಎಂಬ ಗುಂಪು ಆತನಿಗೆ ಸಹಾಯವನ್ನು ಮಾಡುತ್ತಿತ್ತು. ಚಂಗೇಸ್‌ಖಾನನಿಗೆ ಮೀರಾನ್ ಮಹಮ್ಮದ್‌ಶಾಹ್‌ನು ಗುಜರಾತಿನತ್ತ ಬರುತ್ತಿದ್ದಾನೆಂಬ ಸುದ್ದಿ ತಿಳಿದು, ಆತನು ಏಳೆಂಟು ಸಾವಿರ ಸವಾರರ ಸೈನ್ಯವನ್ನು ತೆಗೆದುಕೊಂಡು ಆತನನ್ನು ಎದುರಿಸಲು ಮುಂದಾದನು. ಇಬ್ಬರಲ್ಲೂ ಯುದ್ಧವು ನಡೆಯಿತು. ಈ ಯುದ್ಧದಲ್ಲಿ ಮೀರ್‌ಜಾ (ಬಹಾದೂರನು) ಬಿರಾದರರು ಚಂಗೇಸ್‌ಖಾನನಿಗೆ ತುಂಬಾ ಸಹಾಯವನ್ನು ಮಾಡಿದರು. ಈ ಕಾರಣದಿಂದಾಗಿ ಚಂಗೇಸ್‌ಖಾನನಿಗೆ ಗೆಲುವಾಯಿತು. ಮೀರಾನ್ ಮಹಮ್ಮದ್‌ಶಾಹ್‌ನು ತನ್ನೆಲ್ಲ ಯುದ್ಧದ ಸಾಮಾನು, ಆನೆ, ಕುದುರೆಗಳೆಲ್ಲವನ್ನೂ ಯುದ್ಧ ಮೈದಾನದಲ್ಲೇ ಬಿಟ್ಟು ಪಲಾಯನವನ್ನು ಮಾಡಿದನು. ಚಂಗೇಸ್‌ಖಾನನು ಈ ಎಲ್ಲಾ ಸಾಮಾನಿನ ಮೇಲೆ ತನ್ನ ಅಧಿಕಾರವನ್ನು ಸ್ಥಾಪಿಸಿದನು. ಈ ಯುದ್ಧದ ಗೆಲುವಿನಿಂದಾಗಿ ಚಂಗೇಸ್‌ಖಾನನ ಕೀರ್ತಿ ಅಪಾರವಾಯಿತು. ಅವನ ಆಡಳಿತದಲ್ಲಿ ಪ್ರಗತಿಯಾಯಿತು.

ಮೀರ್‌ಜಾ ಬಿರಾದರರ ಗಲಭೆಗಳು :

ಕೆಲವು ದಿನಗಳ ನಂತರ ಮೀರ್‌ಜಾ ಬಿರಾದರರ ಸಂಬಂಧಗಳು ಚಂಗೇಸ್‌ಖಾನನೊಂದಿಗೆ ಕೆಟ್ಟಿದ್ದುವು. ಅವರು ಗುಜರಾತಿನಿಂದ ಓಡಿ ಬಂದು

ಖಾನ್‌ದೇಶದಲ್ಲಿ ಸೇರಿಕೊಂಡಿದ್ದರು. ಖಾನ್‌ದೇಶದಲ್ಲಿ ಅವರು ಗಲಭೆಗಳನ್ನು ನಡೆಸಿ ತುಂಬಾ ನಷ್ಟವುಂಟು ಮಾಡಿದ್ದರು. ಮೀರಾನ್ ಮಹಮ್ಮದ್‌ಶಾಹ್‌ನು ಈ ಗಲಭೆಗಳನ್ನು ಅಡಗಿಸಲು ಸೈನ್ಯವನ್ನು ಸಂಗ್ರಹಿಸಿಕೊಂಡನು. ಮೀರ್ಜಾಗಳು ಇದಕ್ಕೆ ಅವಕಾಶವನ್ನು ಕೊಡದೆ ಖಾನ್‌ದೇಶದಿಂದ ಹೊರಟುಹೋದರು.

ಬರಾರಿನ ಮೇಲೆ ಮುರ್ತುಜಾ ನಿಜಾಮನ ಆಕ್ರಮಣ –ವಶ :

ಅಹಮದ್‌ನಗರದ ಶಾಸಕ ಮುರ್ತುಜಾ ನಿಜಾಂಶಾಹ್ ಬಹರಿಯು ಹಿಜರಿ ೯೮೨ರಲ್ಲಿ ಬರಾರನ್ನು ಗೆದ್ದು, ಅಲ್ಲಿನ ಶಾಸಕನನ್ನು ಸೆರೆಹಿಡಿದನು. ತದನಂತರ ಮುರ್ತುಜಾ ನಿಜಾಂನು ತನ್ನ ದೇಶಕ್ಕೆ ಹೊರಟು ಹೋದನು. ಇದೇ ಸಂದರ್ಭದಲ್ಲಿ ಒಬ್ಬ ವ್ಯಕ್ತಿ ಬರಾರ್‌ನಿಂದ ಪರಾರಿಯಾಗಿ, ಮೀರಾನ್ ಮಹಮ್ಮದ್‌ಶಾಹ್ ಫಾರೂಖಿಯತ್ತ ಬಂದನು. ಆತನು ತನ್ನನ್ನು ಅಮಾದ್‌ಶಾಹಿ ವಂಶದ ವ್ಯಕ್ತಿಯೆಂದು ಹೇಳಿಕೊಂಡು. ಮೀರಾನ್ ಮಹಮ್ಮದ್‌ಶಾಹ್‌ನ ಸಹಾಯವನ್ನು ಬೇಡಿದನು. ಫಾರೂಖಿಯು ೫–೬ ಸಾವಿರ ಸಿಪಾಯಿಗಳ ಸವಾರರನ್ನು ಆತನಿಗೆ ನೀಡಿ ಕಳುಹಿಸಿ ಕೊಟ್ಟನು. ಈ ಕಾರಣದಿಂದಾಗಿ ಬರಾರ್ ರಾಜ್ಯದಲ್ಲಿ ಕಠಿಣವಾದ ಪಿತೂರಿ–ದಂಗೆಗಳು ಹುಟ್ಟಿಕೊಂಡವು.

ಮುರ್ತುಜಾ ನಿಜಾಂನು ಖಾನ್‌ದೇಶದಲ್ಲಿ :

ಮುರ್ತುಜಾ ನಿಜಾಂಶಾಹ್‌ನಿಗೆ ಈ ಸುದ್ದಿಯು ತಿಳಿದು, ಆತನು ಖ್ವಾಜಾ ಮೀರ್ ಕಧ್ವೀರ್–ಅಸ್ಫಹಾನಿ–ಅಲ್–ಮುಖಾತಿಬ್–ಬ–ಚಂಗೇಸ್‌ಖಾನನ ಸಲಹೆಯಂತೆ ವಾಪಸ ಬಂದನು. ಹಾಗೂ ಮೊದಲು ಆತನು ಮೀರಾನ್ ಮಹಮ್ಮದಶಾಹ್ ಫಾರೂಖಿಯ ಸೈನ್ಯವನ್ನು ನಾಶ ಮಾಡಿದುದೇ ಅಲ್ಲದೆ, ನಂತರ ಬುರ್ಹಾನಪುರದತ್ತ ಮುಂದುವರಿದನು. ಅಹಮದ್‌ನಗರದ ಶಾಸಕನ ಸೈನ್ಯವನ್ನೆದುರಿಸುವಷ್ಟು ಧೈರ್ಯ ಮೀರಾನ್ ಮಹಮ್ಮದ್‌ಶಾಹ್‌ನಲ್ಲಿ ಇರಲಿಲ್ಲ. ಆದ್ದರಿಂದ ಆತನು ಅಸೀರ್ ಕೋಟೆಯಲ್ಲಿ ಅಡಗಿಕೊಂಡನು. ಮುರ್ತುಜಾ ನಿಜಾಂಶಾಹನು ಅಸೀರ್‌ಕೋಟೆಯನ್ನು ಮುತ್ತಿದನು. ಆತನ ಸೈನ್ಯವು ಖಾನದೇಶವನ್ನು ಲೂಟಿ, ನಾಶ ಮಾಡಲು ಪ್ರಾರಂಭಿಸಿದರು.

ಮುರ್ತುಜಾ ನಿಜಾಂನ ವಾಪಸ್ಸು :

ಮೀರಾನ್ ಮಹಮ್ಮದ್‌ಶಾಹ್ ಫಾರೂಖಿಯು ತುಂಬಾ ಚಿಂತಿತನಾದನು. ಮೊದಲೇ ತಿಳಿಸಿರುವಂತೆ ಆತನು ಒಪ್ಪಂದವನ್ನು ಮಾಡಿಕೊಳ್ಳಲು ಯೋಚಿಸಿದನು. ಆತನು ೬ ಲಕ್ಷ ಮುಜಫರಿ ಹಣ ಅಂದರೆ ೩ ಲಕ್ಷ ತಿನ್ಗೆ ನಾಣ್ಯಗಳನ್ನು ಮುರ್ತುಜಾನಿಜಾಂಶಾಹ್‌ನಿಗೆ ಮತ್ತು ಆತನ ವಕೀಲ ಚಂಗೇಸ್‌ಖಾನನಿಗೆ ಕೊಟ್ಟು, ಶತ್ರುಗಳಿಂದ ರಾಜಿ ಮಾಡಿಕೊಂಡನು. ಇದಾದ ನಂತರ ಮುರ್ತುಜಾ ನಿಜಾಂಶಾಹ್‌ನು ಕೋಟೆಯ ಮುತ್ತಿಗೆಯನ್ನು ತೆರವುಗೊಳಿಸಿ ತನ್ನ ರಾಜಧಾನಿಗೆ ಮರಳಿದನು.

ಮೀರಾನ್‌ಮಹಮ್ಮದ್‌ಶಾಹ್‌ನ ಮರಣ :

ಹಿಜರಿ ೯೮೪ರಲ್ಲಿ ಮೀರಾನ್ ಮಹಮ್ಮದ್‌ಶಾಹ್‌ನು ಅನಾರೋಗ್ಯ ಪೀಡಿತನಾಗಿ, ಅದೇ ವರ್ಷದಲ್ಲಿ ತೀರಿಕೊಂಡನು. ಈತನ ತೀರಾ ಚಿಕ್ಕ ಮಗುವಾಗಿದ್ದ ಹುಸ್ನಖಾನನನ್ನು ತಂದೆಯ ಜಾಗಕ್ಕೆ ಉತ್ತರಾಧಿಕಾರಿಯೆಂದು ಘೋಷಿಸಿದರು.

ಹುಸ್ನಖಾನನ ಪಟ್ಟಾಭಿಷೇಕ ಮತ್ತು ಪದಚ್ಯುತಿ :

ಮೀರಾನ್ ಮಹಮ್ಮದ್‌ಶಾಹ್‌ನ ಸಹೋದರ ರಾಜ ಅಲಿಖಾನ್ ಬಿನ್ ಮುಬಾರಕ್‌ಖಾನ್ ಫಾರೂಖಿಯು ಆ ದಿನಗಳಲ್ಲಿ ಜಲಾಲುದ್ದೀನ್ ಅಕ್ಬರ್ ಮೊಗಲ ಬಾದಷಾಹನ ಹತ್ತಿರ ಸೇವೆಯಲ್ಲಿದ್ದನು. ಆತನು ತನ್ನ ಅಣ್ಣನ ಕಾಯಿಲೆಯ ಸುದ್ದಿಯನ್ನು ತಿಳಿದು, ಆಗ್ರಾದಿಂದ ಹೊರಟು ಖಾನದೇಶಕ್ಕೆ ಬಂದನು. ಆತನು ಅಲ್ಲಿಗೆ ಬಂದಾಗ ತನ್ನ ಅಣ್ಣನ ಮರಣವಾಗಿತ್ತು. ಆತನು ಹುಸ್ನಖಾನ್‌ನನ್ನು ಪದಚ್ಯುತಿಗೊಳಿಸಿ, ಆಡಳಿತ ಚುಕ್ಕಾಣಿಯನ್ನು ತನ್ನ ಕೈಯಲ್ಲಿ ತೆಗೆದುಕೊಂಡನು. ಪ್ರಜೆಗಳು ಸಹ ಅಲಿಖಾನನನ್ನು ತಮ್ಮ ಶಾಸಕನಾಗಿರಲು ಒಪ್ಪಿಕೊಂಡರು.

■

*

೧೧. ಮೀರಾನ್ ರಾಜ ಅಲಿಖಾನ್ ಫಾರೂಖಿ

ಬಿನ್ ಮುಬಾರಕ್‌ಖಾನ್ ಬಿನ್, ಆಜಂಹುಮಾಯೂನ್ ಬಿನ್, ಆದಿಲ್‌ಖಾನ್‌ಬಿನ್, ಹುಸ್ನಖಾನ್‌ಬಿನ್, ನಸೀರ್‌ಖಾನ್‌ಬಿನ್, ಮಲಿಕ್‌ರಾಜಬಿನ್, ಖಾನ್‌ಜಹಾನ್ ಫಾರೂಖಿ

ದೂರದೃಷ್ಟಿ :

ಯಾವ ಕಾಲದಲ್ಲಿ ರಾಜ ಅಲಿಖಾನನು ಸಿಂಹಾಸನವನ್ನೇರಿದನೋ ಆಗ ಹಿಂದೂಸ್ತಾನದ ಎಲ್ಲ ದೊಡ್ಡ-ದೊಡ್ಡ ಹಾಗೂ ಪ್ರಸಿದ್ಧ ರಾಜ್ಯಗಳು ಬಂಗಾಲದಿಂದ ಹಿಡಿದು ಸಿಂಧ್‌ಪ್ರದೇಶದವರೆಗೆ ಮತ್ತು ಮಾಳವದಿಂದ ಗುಜರಾತಿನವರೆಗೆ ಮೊಗಲ ಬಾದಷಾಹ ಜಲಾಲುದ್ದೀನ ಮಹಮ್ಮದ್ ಅಕ್ಬರ್ ಬಾದಷಾಹನ ಆಳ್ವಿಕೆಗೆ ಸೇರಿ ಹೋಗಿದ್ದವು. ಇದರಿಂದಾಗಿ ರಾಜ ಅಲೀಖಾನನು ಅಂತಿಮವಾಗಿ ತನ್ನ ದೂರದೃಷ್ಟಿಯ ನೆರವಿನಿಂದ ತನ್ನ ಹೆಸರಿನ ಮುಂದಿದ್ದ "ಶಾಹ್" ಶಬ್ದವನ್ನು ತೆಗೆದು ಹಾಕಿದನು. ಜಲಾಲುದ್ದೀನ್ ಅಕ್ಬರ್‌ನ ಅಧೀನತೆಯನ್ನು ಒಪ್ಪಿಕೊಂಡು, ಶಾಂತಿಯಿಂದ ಆಳಬೇಕೆಂದು ತೀರ್ಮಾನಿಸಿಕೊಂಡನು.

ರಾಜ ಅಲಿಖಾನನ ಶ್ರೇಷ್ಠ ವ್ಯಕ್ತಿತ್ವ :

ರಾಜ ಅಲಿಖಾನನು ಆಗಾಗ್ಗೆ ಬಹಳ ಅಮೂಲ್ಯವಾದ ಕಪ್ಪ-ಕಾಣಿಕೆಗಳನ್ನು ಬಾದಶಾಹ ಜಲಾಲುದ್ದೀನ್ ಅಕ್ಬರ್‌ನ ಆಸ್ಥಾನಕ್ಕೆ ಕಳುಹಿಸುತ್ತಿದ್ದನು. ಬಾದಶಾಹ್‌ನಿಗೆ ತನ್ನ ಪ್ರಾಮಾಣಿಕತೆಯನ್ನು, ಅಧೀನತೆಯನ್ನು ವ್ಯಕ್ತಪಡಿಸುತ್ತಿದ್ದನು. ಇದೇ ರೀತಿ ದಕ್ಷಿಣದ ಶಾಸಕರುಗಳೊಂದಿಗೂ ಪ್ರೇಮವನ್ನು ಬೆಳೆಸಿಕೊಂಡಿದ್ದನು. ರಾಜ ಅಲಿಖಾನನು ಬುದ್ಧಿವಂತನೂ, ಸರಳ ಹೃದಯಿಯೂ, ವೀರನೂ ಆಗಿದ್ದನು. ಯಾವುದೇ ಕೆಟ್ಟ ಅಭ್ಯಾಸ, ಅಸಭ್ಯ ವರ್ತನೆಗಳಿಂದ ದೂರವಿದ್ದನು. ದಕ್ಷಿಣದ ರಾಜ್ಯಗಳ ಪ್ರಜೆಗಳ ಏಳಿಗೆಯಲ್ಲಿ ಸಹಕಾರಿಯಾಗಿದ್ದನು. ಇಸ್ಲಾಂ ಧರ್ಮದ ಹನಫಿ ಸಂಪ್ರದಾಯದ ವಿದ್ವಾಂಸರೊಂದಿಗೆ ಯಾವಾಗಲೂ ಸಂಪರ್ಕವನ್ನು ಇಟ್ಟುಕೊಂಡಿರುತ್ತಿದ್ದನು.

ಸಯ್ಯದ್ ಮುರ್ತುಜಾ ಬುರ್ಹಾನಪುರಕ್ಕೆ ಬಂದ ನಂತರ ಆಗ್ರಾಕ್ಕೆ ಪ್ರಯಾಣ :

ರಾಜ ಅಲಿಖಾನನಿಗೆ ಚೆನ್ನಾಗಿ ಗೊತ್ತಿದ್ದುದೇನೆಂದರೆ–ಸಯ್ಯದ್ ಮುರ್ತುಜಾ ಮತ್ತು ಆತನ ಸಂಗಡಿಗರು ಜಲಾಲುದ್ದೀನ್ ಅಕ್ಬರ್‌ನ ಹತ್ತಿರ ಹೋಗುವರೆಂದು, ಅಲ್ಲಿಂದ ಸೈನ್ಯವನ್ನು ತೆಗೆದುಕೊಂಡು ಬರುವರೆಂಬ ನಂಬಿಕೆ ಇತ್ತು. ರಾಜ ಅಲಿಖಾನನಿಗೆ ಈ ವಿಚಾರ ಹಿಡಿಸುತ್ತಿರಲಿಲ್ಲ. ಏಕೆಂದರೆ ಮುಂದೊಂದು ದಿನ ಈತನು ನನಗೆ ಕಂಕಟಪ್ರಾಯನಾಗುವುದರಲ್ಲಿ ಸಂದೇಹವಿಲ್ಲ. ಆದ್ದರಿಂದಲೇ ಅಲಿಖಾನನು ಆಗ್ರಾದ ಕಡೆ ಹೋಗಲು ಇವರನ್ನು ತಡೆದನು. ಆದರೆ ಸಯ್ಯದ್ ಮುರ್ತುಜಾನು ಅಲಿಖಾನನ ಸಲಹೆಯನ್ನು ಒಪ್ಪಲಿಲ್ಲ. ಒಂದು ದಿನ ರಾಜ ಅಲಿಖಾನನಿಗೆ ತಿಳಿಸದಂತೆಯೇ ಬುರ್ಹಾನ್‌ಪುರದಿಂದ ಆಗ್ರಾದ ಕಡೆಗೆ ಹೊರಟೇ ಬಿಟ್ಟನು.

ಖಾನ್‌ದೇಶದ ಸೈನ್ಯ ಮತ್ತು ಸಯ್ಯದ್ ಮುರ್ತುಜಾರ ಯುದ್ಧ :

ರಾಜ ಅಲಿಖಾನನಿಗೆ ಸಯ್ಯದ್ ಮುರ್ತುಜಾನ ಪ್ರಯಾಣದ ಸುದ್ದಿ ತಿಳಿದು, ತಕ್ಷಣ ಅಲಿಖಾನನು ಆತನನ್ನು ಹಿಂಬಾಲಿಸಲು ತನ್ನ ಸೈನ್ಯವನ್ನು ಕಳುಹಿಸಿದನು. ಹಾಗೆಯೇ ತನ್ನ ಸೈನ್ಯಕ್ಕೆ ಆಜ್ಞಾಪಿಸಿದುದೇನೆಂದರೆ, ಹೇಗಾದರೂ ಮಾಡಿ ಸಯ್ಯದ್ ಮುರ್ತುಜಾನು ಆಗ್ರಾಕ್ಕೆ ಹೋಗದಂತೆ ತಡೆಯಬೇಕೆಂದು ಹೇಳಿ ಕಳುಹಿಸಿದನು. ಆತನನ್ನು ಬುರ್ಹಾನಪುರಕ್ಕೆ ವಾಪಸ್ ಕರೆತರಬೇಕೆಂದನು. ಖಾನ್‌ದೇಶಿ ಸೈನ್ಯವು ಆತನ ಸೈನ್ಯದ ಹತ್ತಿರ ಹೋಗಿ ವಾಪಸ್ ಬರಬೇಕೆಂದು ಹೇಳಿದರು. ಆದರೆ ಅವರು ತಿರಸ್ಕರಿಸಿದರು. ಇದರಿಂದ ಇಬ್ಬರಲ್ಲೂ ಯುದ್ಧವು ಪ್ರಾರಂಭವಾಯಿತು. ಖುದಾವಂದ್‌ಖಾನ್ ಹಬಶಿಯ ವೀರತೆಯಿಂದಾಗಿ ಖಾನ್‌ದೇಶಿ ಸೈನಿಕರಿಗೆ ಸೋಲಾಯಿತು. ಇದರ ಪರಿಣಾಮವೆಂದರೆ ಸಯ್ಯದ್ ಮುರ್ತುಜಾನನ್ನು ಆಗ್ರಾಕ್ಕೆ ಹೋಗುವುದರಿಂದ ತಡೆಯಲಾಗಲಿಲ್ಲ. ಖಾನ್‌ದೇಶಿ ಸೈನ್ಯದ ಸೋಲಿನಿಂದಾಗಿ ಸಯ್ಯದ್ ಮುರ್ತುಜಾನಿಗೆ ಅಪಾರ ಸಾಮಾನು ಸರಂಜಾಮುಗಳು ದೊರೆತವು.

ಸಯ್ಯದ್ ಮುರ್ತುಜಾ ಅಕ್ಬರ್‌ನ ಹುಜೂರಿನಲ್ಲಿ :

ಸಯ್ಯದ್ ಮುರ್ತುಜಾ ಮತ್ತು ಖುದಾವಂದ್‌ಖಾನ ಹಬಶಿಗಳು ಖಾನ್‌ದೇಶಿ ಸೈನ್ಯವನ್ನು ಸೋಲಿಸಿದ ನಂತರ, ಸಫಲವಾಗಿ ನರ್ಮದಾ ನದಿಯನ್ನು ಪಾರು ಮಾಡಿದರು. ಇವರಿಬ್ಬರೂ ಜಲಾಲುದ್ದೀನ್ ಅಕ್ಬರನ ಹುಜೂರಿನಲ್ಲಿ ತಲುಪಿದರು. ಮತ್ತು ಅಕ್ಬರನಿಂದ ಸಹಾಯವನ್ನು ಬೇಡಿದರು.

ಜಲಾಲುದ್ದೀನ್ ಅಕ್ಬರನು ಬಹಳ ಹಿಂದಿನಿಂದಲೂ ದಕ್ಷಿಣದ ರಾಜ್ಯಗಳನ್ನು ತನ್ನ ವಶಕ್ಕೆ ತೆಗೆದುಕೊಳ್ಳುವ ಹುನ್ನಾರದಲ್ಲಿದ್ದನು. ಆತನು ಸಯ್ಯದ್ ಮುರ್ತುಜಾ ಮತ್ತು ಖುದಾವಂದ್‌ಖಾನರನ್ನು ಬಹಳ ಮರ್ಯಾದೆಯಿಂದಲೇ ಬರಮಾಡಿಕೊಂಡನು. ಇತರೆ ದಕ್ಷಿಣದ ಅಮೀರರನ್ನು ಸಹ ಬಹಳ ಗೌರವದಿಂದ ಕಂಡನು. ಅಕ್ಬರನು

ಅವರೆಲ್ಲರಿಗೂ ಜಾಗೀರಿಗಳನ್ನು ನೀಡಿದನು. ಹಾಗೆಯೇ ದಕ್ಷಿಣದ ಪ್ರದೇಶಗಳನ್ನು ಗೆಲ್ಲುವ ಸಂದರ್ಭದಲ್ಲಿ ನನಗೆ ಸಹಾಯ ಮಾಡಬೇಕೆಂದು ವಚನವನ್ನು ತೆಗೆದುಕೊಂಡನು. ರಾಜ ಅಲಿಖಾನ್ ಫಾರೂಖಿಗೆ ಈ ಎಲ್ಲ ವಿಚಾರಗಳು ತಿಳಿದವು. ಆತನು ಬಹಳ ಚಿಂತಾಕ್ರಾಂತನಾದನು. ಆತನು ಯುದ್ಧದ ಸಂದರ್ಭದಲ್ಲಿ ಒಂದು ನೂರು ಆನೆಗಳನ್ನು ಅಕ್ಬರನ ದರ್ಬಾರಿಗೆ ಕಳುಹಿಸಿದನು. ಇದರಿಂದ ತಾನೂ ಸಹ ಅಕ್ಬರನ ಅಧೀನತೆಯನ್ನು ಸ್ವೀಕರಿಸಿದಂತಾಯಿತು. ತನ್ನ ಮೇಲಿದ್ದ ಅಪವಾದಕ್ಕೆ ಅಕ್ಬರನಲ್ಲಿ ಕ್ಷಮೆ ಯಾಚಿಸಿದನು. ಈ ಘಟನೆಗೆ ಸ್ವಲ್ಪ ದಿನಗಳ ಮುಂಚೆ ಮುರ್ತುಜಾ ನಿಜಾಂಶಾಹನ ಸಹೋದರನೂ ಅಕ್ಬರನಿಂದ ಸಹಾಯವನ್ನು ಪಡೆಯಲು ಆಗ್ರಾಕ್ಕೆ ಬಂದಿದ್ದನು. ಈ ಕಾರಣದಿಂದಾಗಿ ರಾಜ ಅಲಿಖಾನನ ಪ್ರಯತ್ನ ಫಲಿಸಲಿಲ್ಲ. ಅವರೆಲ್ಲರೂ ಅಲಿಖಾನನ ವಿರೋಧದಲ್ಲಿ ಅಕ್ಬರನಿಗೆ ಚಾಡಿ ಹೇಳಿದರು. ಇವರಿಂದ ಅಲಿಖಾನನಿಗೆ ಕ್ಷಮೆ ಸಿಗಲಿಲ್ಲ.

ದಕ್ಷಿಣ ಭಾರತವನ್ನು ಗೆಲ್ಲಲು ಅಕ್ಬರನ ಆಜ್ಞೆ:

ಹಿಜರಿ ೧೦೦೩ರಲ್ಲಿ ಜಲಾಲುದ್ದೀನ್ ಅಕ್ಬರನು ಬುರ್ಹಾನ್ ನಿಜಾಂಶಾಹ ಸಾನಿ, ಸಯ್ಯದ್ ಮುರ್ತುಜಾಶಾಹ್, ಖುದಾವಂದ್‌ಖಾನ್ ಹಬಷಿ ಮತ್ತು ಇತರೆ ಎಲ್ಲಾ ದಕ್ಷಿಣದ ಅಮೀರರುಗಳಿಗೆ ಮಾಳವದ ಶಾಸಕನಾದ ಆಜಂ ಮೀರ್ಜಾ ಅಜೀಜನ ಹತ್ತಿರ ರವಾನೆ ಮಾಡಿದನು. ಅವರೆಲ್ಲರನೂ ಆಜ್ಞಾಪಿಸಿದ್ದುದು ಏನೆಂದರೆ– ಎಲ್ಲರೂ ಸೇರಿ ದಕ್ಷಿಣದ ಶಾಸಕರನ್ನು ಅಕ್ಬರನ ಶಾಸನದ ಅಧೀನತೆಯನ್ನು ಸ್ವೀಕರಿಸಲು, ಅವರ ಮೇಲೆ ಯುದ್ಧಗಳನ್ನು ಮಾಡಿ ಗೆಲ್ಲಬೇಕೆಂದು ಖಾನ್‌ಆಜಂಶಾಹನು ಶಾದಿ ಆಬಾದ್ ಮಾಂಡುವಿಗೆ ಬಂದು, ಬಾಬರ್ ಎಂಬ ಸ್ಥಳಕ್ಕೆ ಬಂದನು. ಆತನು ಮಾಳವಿ ಮತ್ತು ದಖನಿ ಅಮೀರರೆಲ್ಲರನ್ನೂ ಜೊತೆಗೂಡಿಸಿಕೊಂಡು ಬರಾರಿಗೆ ಬಂದನು.

ಮುರ್ತುಜಾ ನಿಜಾಂಶಾಹನು ಮೀರ್‌ಜಾನ ಮಹಮ್ಮದ್ ತಖಿನಜೀರಿ ಎಂಬುವರು ಸಾದಾತ್ ಎಂಬಲ್ಲಿ ಇರುತ್ತಿದ್ದರು. ಅವರನ್ನು ತನ್ನ ಸೇನಾದಂಡನಾಯಕನನ್ನಾಗಿ ನೇಮಿಸಿಕೊಂಡನು. ಆತನನ್ನು ಮೀರ್ಜಾ ಕೋಕೆ ಎಂಬುವನನ್ನು ಅಡಗಿಸಲು ಖಾನ್‌ದೇಶದ ಸರಹದ್ದಿಗೆ ಕಳುಹಿಸಿದನು. ಮಿರ್ಜಾ ಅಜೀಜ ಕೋಕೆ ಎಂಬುವನು ಅಸದುದ್ದೌಲ, ಶಾಹ ಫತಹುಲ್ಲಾ ಶಿರಾಜಿ ಎಂಬುವರನ್ನು ರಾಜಾ ಅಲಿಖಾನ್ ಫಾರೂಖಿಯ ಹತ್ತಿರ ಕಳುಹಿಸಿ ಜಲಾಲುದ್ದೀನ ಅಕ್ಬರನನ್ನು ಸಹಾಯಮಾಡಿ, ಅವನ ಗೆಲುವಿಗೆ ಸಹಕರಿಸುವಂತೆ ಹೇಳಿ ಕಳುಹಿಸಿದನು. ಅದೇ ದಿನಗಳಲ್ಲಿ ಮೀರಜಾ ಮಹಮ್ಮದ್ ತಖಿನಜೀರಿಯೂ ಸಹ ಅಸೀರಿಗೆ ಬಂದಿದ್ದನು. ಆತನೂ ಸಹ ರಾಜ ಅಲಿಖಾನನನ್ನು ಮುರ್ತುಜಾ ನಿಜಾಂಶಾಹನ ಸ್ನೇಹವನ್ನು ಸಂಪಾದಿಸಲು ಪ್ರಯತ್ನಪಟ್ಟನು.

ರಾಜ ಅಲಿಖಾನ್ ಮತ್ತು ಮೀರಜಾ ಮಹಮ್ಮದ್ ತಖಿಯಲ್ಲಿ ಒಮ್ಮತ :

ರಾಜಾ ಅಲಿಖಾನ್ ಫಾರೂಖಿಯು ಬಹಳ ಯೋಚಿಸಿದ ನಂತರ ಮುರ್ತುಜಾ ನಿಜಾಂಶಾಹ್‌ನಿಗೆ ಸಹಾಯ ಮಾಡಲು ತೀರ್ಮಾನಿಸಿದನು. ಮತ್ತು ಶಾಹ್ ಫತಹಲ್ಲಾ ಶಿರಾಜಿಯಲ್ಲಿ ಕ್ಷಮೆಯಾಚಿಸಿದನು. ರಾಜ ಅಲಿಖಾನ್ ಫಾರೂಖಿ ಮತ್ತು ಮೀರ್ಜಾ ಮಹಮ್ಮದ್‌ತಖಿ ಎಂಬುವರು ಮೂವತ್ತು ಸಾವಿರ ಸೈನಿಕರ ಒಂದು ಬೃಹತ್ ಸೈನ್ಯದೊಂದಿಗೆ ಮತ್ತು ಮಹಾಶಕ್ತಿಶಾಲಿ ತೋಪುಖಾನೆಯೊಂದಿಗೆ ಮೊಗಲ ಸೈನ್ಯವು ಹಿಂದಿಯಾ ಎಂಬ ಕಡೆ ಮುಂದುವರಿದರು. ಈ ಇಬ್ಬರೂ ಮೊಗಲ್ ಸೈನಿಕ ಶಿಬಿರಕ್ಕೆ ಎರಡು ಮೈಲಿ ದೂರದಲ್ಲಿ ಬೀಡು ಬಿಟ್ಟರು. ಮಾರನೇ ದಿನದಿಂದ ಯುದ್ಧವನ್ನು ಪ್ರಾರಂಭಿಸಬೇಕೆಂಬ ಇರಾದೆಯೂ ಇತ್ತು.

ಅಜೀಜ್ ಕೋಕೆಯು ಯುದ್ಧವನ್ನು ನಿರಾಕರಿಸಿದನು :

ಖಾನ್ ಅಜೀಂ ಮೀರ್ಜಾನು ತನ್ನ ಶತ್ರು ಸೈನ್ಯವನ್ನು ನೋಡಿ, ಈಗ ಇವರ ಮೇಲೆ ನಾನು ಯುದ್ಧ ಮಾಡುವುದೇ ಬೇಡವೆನಿಸಿತು. ಅಂದೇ ರಾತ್ರಿ ತನ್ನ ಸೈನಿಕ ಶಿಬಿರವನ್ನು ಬಿಟ್ಟು, ಬೇರೆ ಹಾದಿಯಿಂದ ಬರಾರ್‌ನತ್ತ ಓಡಿದನು. ಮೊಗಲ ಸೈನ್ಯವು ಮಾಲಾಪುರ ಮತ್ತು ಏಲಚ್‌ಪುರಗಳನ್ನು ಸಂಪೂರ್ಣವಾಗಿ ನಾಶ ಮಾಡಿದರು. ನಂತರ ಇಲ್ಲಿಯೇ ಉಳಿದುಕೊಂಡರು. ರಾಜ ಅಲಿಖಾನ್ ಫಾರೂಖಿ ಮತ್ತು ಮೀರಜಾ ಮಹಮ್ಮದ್‌ತಖಿಯವರೂ ಮೊಗಲ ಸೈನಿಕರನ್ನು ಹಿಂಬಾಲಿಸಿಕೊಂಡು ಬಂದರು. ಮೀರಜಾ ಅಜೀಜ್ ಕೋಕೆಯು ಈ ಸಲವೂ ಶತ್ರು ಸೈನ್ಯದೊಂದಿಗೆ ಯುದ್ಧ ಮಾಡಲು ಇಚ್ಛಿಸಲಿಲ್ಲ. ನಂತರ ನದರ್‌ಬಾರಿನ ದಾರಿಯಿಂದ ತನ್ನ ಸೈನಿಕ ಶಿಬಿರಕ್ಕೆ ಹಿಂತಿರುಗಿದನು.

ರಾಜ ಅಲಿಖಾನನ ಖುಷಿ :

ರಾಜ ಅಲಿಖಾನ್ ಫಾರೂಖಿಗೆ ಮೊಗಲರಿಂದ ಉತ್ತಮ ಪ್ರತಿಕ್ರಿಯೆ ಸಿಕ್ಕಿದ್ದರಿಂದ, ಆತನು ಮೀರಜಾ ಮಹಮ್ಮದ್ ತಖಿನಜೀರಿಯನ್ನು ಬೀಳ್ಕೊಟ್ಟನು. ತಾನು ಬುರ್ಹಾನಪುರಕ್ಕೆ ವಾಪಸ ಆದನು. ರಾಜ ಅಲಿಖಾನ್ ಫಾರೂಖಿಯು ಸಂತೋಷಪಟ್ಟಿದ್ದುದೇಕೆಂದರೆ–ಯುದ್ಧವಿಲ್ಲದೆ ಸಮಸ್ಯೆ ಬಗೆಹರಿದಿತ್ತು. ಈ ಸಂತೋಷದಲ್ಲಿ ಬಡವರಿಗೆ ಹಣವನ್ನು ಹಂಚಿದನು.

ಬುರ್ಹಾನ ನಿಜಾಂಶಾಹ್ ಸಾನಿಯ ಇಚ್ಛೆಗಳು :

ಬುರ್ಹಾನ ನಿಜಾಂಶಾಹ್ ಸಾನಿಯು ತನ್ನ ಯೋಜನೆಗಳು ಸಫಲವಾಗದಿರುವುದರಿಂದ ಬಹಳ ನಿರಾಶನಾಗಿ, ವಿವಶತೆಯಿಂದ ಬಾದಷಾಹ ಅಕ್ಬರನ ಸೇವೆಯಲ್ಲಿ ತನ್ನ ಜೀವನವನ್ನು ನಡೆಸುತ್ತಿದ್ದನು. ಹಿಜರಿ ೯೦೭ರಲ್ಲಿ ಬುರ್ಹಾನ್ ನಿಜಾಂಶಾಹ್‌ನ

ತಿಂಗಳುಗಳ ದೀರ್ಘಕಾಲವಾದರೂ ಯಾವ ಪರಿಣಾಮವೂ ಕಾಣಲಿಲ್ಲ. ಇದೇ ಸಂದರ್ಭದಲ್ಲಿ ಅಲ್ಲಾಹನ ಕಡೆಯಿಂದಲೂ ಕೋಟೆಯ ಮೇಲೆ ಸಂಕಷ್ಟವು ಎದುರಾಯಿತು. ಕೋಟೆಯಲ್ಲಿ ಅನೇಕ ಪ್ರಾಣಿಗಳು ಸಾಕಲ್ಪಟ್ಟಿದ್ದುವು. ಇಲ್ಲಿನ ವಾತಾವರಣವು ಕೆಟ್ಟು, ಅಲ್ಲಿನ ಜನರು-ಪ್ರಾಣಿಗಳು ಸಾಯತೊಡಗಿದುವು. ಈ ಪರಿಸ್ಥಿತಿಯಿಂದಾಗಿ ಕೋಟೆಯ ಒಳಗಿನ ವಾತಾವರಣವು ಚಿಂತಾಜನಕವಾಯಿತು.

ಜಾದು ಮಂತ್ರವಾದಿ, ಮಾಟಗಾರರು :

ಇದೇ ಸಂದರ್ಭದಲ್ಲಿ ಕೋಟೆಯ ಒಳಗಿನವರಿಗೆ ಸುದ್ದಿ ತಿಳಿದಿದ್ದುದೇನೆಂದರೆ-ಜಲಾಲುದ್ದೀನ್ ಅಕ್ಬರನು ಕೆಲವು ಮಾಟ-ಮಂತ್ರವಾದಿಗಳನ್ನು ಈ ಕೆಲಸಕ್ಕೆ ನೇಮಿಸಿದ್ದಾನೆಂದು ತಿಳಿದರು. ಈ ರೀತಿಯಿಂದಲಾದರೂ ಕೋಟೆಯನ್ನು ವಶಪಡಿಸಿಕೊಳ್ಳಲು ಬಯಸಿದ್ದಾರೆಂದು ತಿಳಿಯಲಾಯಿತು. ಇದಕ್ಕೆ ಪೂರಕವಾಗಿ ಜನರು ಅನುಮಾನಪಟ್ಟದ್ದೇನೆಂದರೆ-ಅಕ್ಬರನು ಯಾವಾಗಲೂ ತನ್ನ ಕೈಯಲ್ಲಿ ಜಪ-ಮಣಿಸರವನ್ನು ಹಿಡಿದಿರುತ್ತಾನೆಂದೂ ನಂಬಿದರು. ಇದರಿಂದಾಗಿ ಭಗವಂತನಲ್ಲಿ ಯಾವಾಗಲೂ ಕೋಟೆಯ ಗೆಲುವಿಗೆ ಪ್ರಾರ್ಥನೆಯನ್ನೂ ಸಲ್ಲಿಸುವನೆಂದು ಜನರು ನಂಬ ತೊಡಗಿದರು. ಕೋಟೆಯ ಒಳಗಿನವರು ತಿಳಿದಿದ್ದುದೇನೆಂದರೆ, ಈಗ ಬಂದಿರುವ ಸಂಕಟಕ್ಕೆ ಬಾದಶಾಹನ ಜಪ-ಮಣಿ ಪ್ರಭಾವವೇ ಎಂದು ತಿಳಿದರು. ಇದರಿಂದ ಬಾದಷಾಹರು ಜನರಿಗೆ ತುಂಬಾ ಚಿಂತೆಯಲ್ಲಿ ಮುಳುಗಿಸಿದ್ದಾರೆಂದು ನಂಬಿದರು.

ಸಮಗ್ರ ಕೋಟೆಯ ಪರಿಸ್ಥಿತಿ :

ಬಹಾದುರ್‌ಖಾನ್ ಗುಜರಾತಿ ಮತ್ತು ಆತನ ಆಪ್ತರೆಲ್ಲರೂ ತಮಗೆ ಒದಗಿರುವ ಸಂಕಷ್ಟಕ್ಕೆ ತುಂಬಾ ಚಿಂತಿತರಾಗಿದ್ದರು. ಈ ಸಂಕಷ್ಟವು ಏಕೆ ಬಂದಿದೆ? ಎಂಬುದರ ಸತ್ಯವನ್ನು ಅರಿಯಲಾರದೆ ಹೋದರು. ಇಂತಹ ಕಾಯಿಲೆಗಳು ಸ್ವಚ್ಛತೆಯ ಅಭಾವದಿಂದ, ಪ್ರಾಣಿಗಳು ಮತ್ತು ಮನುಷ್ಯರ ಅಜ್ಞಾನದಿಂದಾಗಿ ಬಂದಿರುವುದನ್ನು ಯೋಚಿಸಲೇ ಇಲ್ಲ. ಈ ವಿಚಾರದಲ್ಲಿ ಯಾರೂ ತಲೆ ಕೆಡಿಸಿಕೊಳ್ಳಲು ಹೋಗಲೇ ಇಲ್ಲ. ಸುಮ್ಮನೆ ತಲೆಯ ಮೇಲೆ ಕೈ ಹೊತ್ತುಕೊಂಡು ಕುಳಿತರೇ ಹೊರತು ಕಾಯಿಲೆ ಏಕೆ ಬಂದಿದೆ ಎಂಬುದು ಒಬ್ಬರಿಗೂ ಅರ್ಥವಾಗಲಿಲ್ಲ. ಕೋಟೆಯ ರಕ್ಷಕರ ಸ್ಥಿತಿಯು ಕೆಟ್ಟಿತ್ತು. ಅವರು ಬಹಾದುರ್‌ಖಾನ್‌ನಿಗೆ ಆಹಾರದ ಅಭಾವದ ಸ್ಥಿತಿಯನ್ನು ತಿಳಿಸಿದರು. ಬಹಾದುರ್‌ಖಾನನು ಕೇಳಿಯೂ ಸುಮ್ಮನಾದನು. ಕೊನೆಗೆ ಆರಕ್ಷಕರು ವಿವಶರಾಗಿ ಕೋಟೆಯ ರಕ್ಷಣೆಯನ್ನು ಮಾಡದೆ ಸುಮ್ಮನೆ ಕುಳಿತರು. ಅಕ್ಬರನ ಸೈನಿಕರು ಮುತ್ತಿಗೆಯಲ್ಲಿ ಬಹಳ ಬುದ್ದಿವಂತಿಕೆಯಿಂದಲೇ ಕೆಲಸ ಮಾಡಿದರು. ಕೋಟೆಯ ಒಳಗೆ ತಲುಪಬೇಕಾದ ಆಹಾರದ ಗೋದಾಮುಗಳು ಕೋಟೆಯ ಮುಂಬಾಗದಲ್ಲಿದ್ದುದರಿಂದ, ಅವುಗಳನ್ನು ಸೈನಿಕರು ವಶಪಡಿಸಿಕೊಂಡರು.

ಬಹಾದುರ್‌ಖಾನನ ವಿರೋಧ :

ಅಸೀರ್ ಕೋಟೆಯಲ್ಲಿ ಎಷ್ಟು ಆಹಾರದ ದಾಸ್ತಾನು ಇದ್ದಿತ್ತೆಂದರೆ–ಆ ಕೋಟೆಯ ಒಳಗಿನ ಜನರಿಗೆ ಹತ್ತು ವರ್ಷಗಳ ತನಕ ಕುಳಿತು ತಿಂದರೂ ಸವೆಯುತ್ತಿರಲಿಲ್ಲ. ಆದರೆ ಬಹಾದುರ್‌ಖಾನನ ಅಹಂಕಾರದಿಂದಾಗಿ ಯಾರಿಗೂ ಏನನ್ನೂ ಕೊಡಲಿಲ್ಲ. ಇದರಿಂದಾಗಿ ಕೋಟೆಯ ಒಳಗಿನವರೆಲ್ಲಾ ಈತನ ವಿರುದ್ಧ ತಿರುಗಿ ಬಿದ್ದರು. ಅದಕ್ಕೆ ಕೋಟೆಯ ಜನರು ತೀರ್ಮಾನಿಸಿದ್ದುದೇನೆಂದರೆ, ಬಹಾದುರ್‌ಖಾನನನ್ನು ಹಾಗೂ ಅವನ ಆಪ್ತರನ್ನು ಹಿಡಿದು, ಜಲಾಲುದ್ದೀನ್ ಅಕ್ಬರನ ವಶಕ್ಕೆ ಕೊಡೋಣವೆಂದು. ಕೋಟೆಯ ಜನರಿಗೆ ಮುಖ್ಯವಾಗಿ ತಮ್ಮ ಪ್ರಾಣಗಳನ್ನು ಉಳಿಸಿಕೊಳ್ಳಬೇಕಾಗಿತ್ತು. ಅವರು ವಿವಶರಾಗಿ ಆತನನ್ನು ಸೆರೆಹಿಡಿದು ಒಪ್ಪಿಸಲು ತೀರ್ಮಾನಿಸಿದರು.

ಬಹಾದುರ್‌ಖಾನನ ಅಮೀರರ ಸಲಹೆ :

ಬಹಾದುರ್‌ಖಾನನಿಗೆ ಕೋಟೆಯೊಳಗಿನ ಜನರ ತೀರ್ಮಾನದ ವಿಷಯವು ತಿಳಿಯಿತು. ಇದರಿಂದಾಗಿ ಆತನು ತನ್ನ ಅಮೀರರಾದ ಆಸಿಫ್‌ಖಾನ್, ಮೀರ್ಜಾಜಾಫರ್ ಮತ್ತು ಕಬೀರ್‌ಖಾನ್ ಮತ್ತು ಇತರರೊಂದಿಗೆ ಚರ್ಚೆಯನ್ನು ನಡೆಸಿದನು. ಅವರೆಲ್ಲರೂ, ಸದ್ಯದ ಪರಿಸ್ಥಿತಿಯನ್ನು ಕಂಡು, ಈ ಸಂದರ್ಭದಲ್ಲಿ ಪರಿಸ್ಥಿತಿಗಳು ಬಹಳ ಸೂಕ್ಷ್ಮವಾಗಿವೆ. ಕೋಟೆಯಲ್ಲಿ ಕಾಯಿಲೆಗಳು ಬಹಳ ಗಂಭೀರವಾಗಿ ಹರಡಿವೆ. ಸಾವುಗಳು ಒಂದೇ ಸಮನೆ ನಡೆಯುತ್ತಿವೆ. ಒಂದು ವೇಳೆ ಈಗ ನಾವು ಕೋಟೆಯೊಳಗಿನ ಆಹಾರ ಧಾನ್ಯಗಳನ್ನು ಒದಗಿಸಿದರೂ ನಮ್ಮ ಸಮಸ್ಯೆಗಳು ಬಗೆ ಹರಿಯುವ ಸೂಚನೆಗಳಿಲ್ಲ. ಏಕೆಂದರೆ ಆಹಾರ ಸರಬರಾಜಿನಿಂದ ಕಾಯಿಲೆಗಳು, ಮರಣಗಳು ನಿಲ್ಲಲಾರವು. ಈಗ ನಾವು ಅಕ್ಬರನಂತಹ ಪ್ರತಾಪಶಾಲಿ ಬಾದಷಾಹನಿಂದ ಉಳಿದುಕೊಳ್ಳುವುದು ಸಾಧ್ಯವಿಲ್ಲ. ಆದ್ದರಿಂದ ಉಚಿತವೆಂದರೆ–ತಾವು ಅಕ್ಬರನಿಂದ ಪ್ರಾಣ ರಕ್ಷಣೆ ಮತ್ತು ಶಾಂತಿಯನ್ನು ಕೋರಲು ಆತನ ಸೇವೆಯಲ್ಲಿ ಹೋಗಿ ಕೋಟೆಯನ್ನು ಆತನ ವಶಕ್ಕೆ ಬಿಟ್ಟು ಬಿಡುವುದೇ ಉತ್ತಮವಾದ ದಾರಿ ಎಂದನು.

ಅಸೀರ್ ಕೋಟೆಯು ಅಕ್ಬರನ ವಶ :

ಬಹಾದುರ್‌ಖಾನ ಫಾರೂಖಿಯ ಈ ಸಲಹೆಯನ್ನು ಎಲ್ಲ ಅಮೀರರು ಒಪ್ಪಿಕೊಂಡರು. ಆತನು ಖಾನ್ ಆಜಂಮೀರ್‌ಜಾ ಅಜೀಜ್‌ಕೋಕೆಯ ಮೂಲಕ ಅಕ್ಬರನಲ್ಲಿ ಪ್ರಾಣರಕ್ಷಣೆಯನ್ನು, ಶಾಂತಿಯನ್ನೂ ಬೇಡಿದರು. ಅಕ್ಬರನು ಈ ಬೇಡಿಕೆಯನ್ನು ಒಪ್ಪಿದನು. ಬಹಾದುರ್‌ಖಾನನು ಇದನ್ನು ಭಗವಂತನ ಕೃಪೆ ಎಂದು ತಿಳಿದನು. ತಕ್ಷಣ ಕೋಟೆಯಿಂದ ಹೊರ ಬಂದು ಅಜೀಜ್ ಕೋಕೆಯೊಂದಿಗೆ ಬಾದಷಾಹನ ಸೇವೆಯಲ್ಲಿ ಹಾಜರಾದರು. ಇನ್ನು ಹತ್ತು ವರ್ಷಗಳ ತನಕ ಬಾದಷಾಹ ಅಕ್ಬರನು ಅಲ್ಲಿ ಮುತ್ತಿಗೆ ಹಾಕಿದ್ದರೂ, ಬಹಾದುರಖಾನನೇ ಗೆಲ್ಲುತ್ತಿದ್ದನೇ ಹೊರತು ಅಕ್ಬರನ

ಕೈಯಲ್ಲಿ ಗೆಲ್ಲಲು ಸಾಧ್ಯವಿರಲಿಲ್ಲಿ. ಆದರೂ ಪರಿಸ್ಥಿತಿಗಳಿಗೆ ವಿವಶನಾಗಿ ಅಕ್ಬರನಿಗೆ ಕೋಟೆಯನ್ನು ವಶಮಾಡಿದರು.

ಅಸೀರ್ ಕೋಟೆಯ ವಿಷಯ :

ರಾಖಿಮುಲ್ ಹುರೂಫ್ ಲೇಖಕ ಫರಿಶ್ತಾನು ಹಿಜರಿ ೧೦೨೩ರಲ್ಲಿ ಈ ಕೋಟೆಯನ್ನು ನೋಡಿದ್ದಾನೆ. ನಾನು ಷಹಜಾದ ದಾನಿಯಲನ ದರ್ಬಾರಿನ ಖ್ವಾಜಾ ಹುಸ್ನ ತುರಬತಿಯವರ ಜೊತೆಯಲ್ಲಿ ಅಸೀರ್ ಕೋಟೆಯನ್ನು ನೋಡಲು ಹೋಗಿದ್ದೆ. ಕೋಟೆಯು ಬಹಳ ಎತ್ತರವಾದ ಒಂದು ಬೆಟ್ಟದ ಮೇಲೆ ಕಟ್ಟಲ್ಪಟ್ಟಿದೆ. ಈ ಬೆಟ್ಟದ ಮೇಲಿನ ಮೈದಾನವು ಸುಮಾರು ಅರ್ಧ ಮುಕ್ಕಾಲು ಮೈಲಿಯಷ್ಟು ವಿಸ್ತಾರವಾಗಿದೆ. ಇಲ್ಲಿ ಕೆಲವು ನೀರಿನ ಬುಗ್ಗೆಗಳಿವೆ. ಹಾಗೂ ಕೆಲವು ನೀರಿನ ಕೊಳಗಳು ಕಟ್ಟಲ್ಪಟ್ಟಿವೆ. ಇದರಿಂದ ಎಲ್ಲರಿಗೂ ನೀರು ದೊರಕುವುದರಲ್ಲಿ ಅನುಮಾನವಿಲ್ಲ. ಬೇಸಿಗೆಯಲ್ಲಿ ಬುಗ್ಗೆಗಳಿಂದ ನೀರು ಸರಬರಾಜು ಆಗುತ್ತಿತ್ತು. ಅಗಲವಾದ ಭೂಭಾಗವು ಬೆಟ್ಟದ ತುದಿಯಲ್ಲಿದೆ. ಇಲ್ಲಿ ಬೆಟ್ಟದ ಸುತ್ತಲೂ ಸದೃಢವಾದ ಕೋಟೆಯು ಕಟ್ಟಲ್ಪಟ್ಟಿದೆ.

ಕೋಟೆಯಲ್ಲಿ ದಾಖಲಾಗುವ (ಪ್ರವೇಶಿಸುವ) ದಾರಿ :

ಈ ಕೋಟೆಯ ಒಳಗೆ ಪ್ರವೇಶಿಸುವ ದಾರಿಯು ತುಂಬಾ ಕಠಿಣವಾದುದು. ಒಬ್ಬ ಮನುಷ್ಯ ಕೋಟೆಯೊಳಗೆ ಪ್ರವೇಶಿಸಬೇಕಾದರೆ ತುಂಬಾ ಶ್ರಮಪಡಬೇಕಾಗಿತ್ತು. ಒಂದು ವೇಳೆ ಯಾರಾದರೂ ಕುದುರೆ ಸವಾರನು ಕೋಟೆಯೊಳಗೆ ಹೋಗಬೇಕಿದ್ದರೆ, ಕುದುರೆಯಿಂದ ಅನೇಕ ಕಡೆ ಇಳಿಯಬೇಕಾಗುತ್ತಿತ್ತು. ಸವಾರನು ಕುದುರೆಯ ಒಂದರ ಹಿಂದೆ ಒಬ್ಬರು ಹೋಗಬೇಕಾಗುತ್ತಿತ್ತೇ ಹೊರತು ಒಮ್ಮೆಲೆ ಎರಡು ಜೀವಗಳು ಹೋಗುವಂತಿರಲಿಲ್ಲ. ಸಣ್ಣ-ಸಣ್ಣ ಆನೆಗಳನ್ನು ಹಗ್ಗಗಳಿಂದ ಬಿಗಿದು, ಬಹಳ ಎಚ್ಚರಿಕೆಯಿಂದ ಕರೆದುಕೊಂಡು ಮೇಲೇರಬೇಕಾಗಿತ್ತು. ಕೋಟೆಯ ಒಳಗೆ ಬಹಳ ಸುಂದರವಾದ ಬಹಳ ದೊಡ್ಡ ದೊಡ್ಡ ಭವ್ಯಕಟ್ಟಡಗಳಿವೆ. ತೋಟಗಳಲ್ಲಿ ಬಹಳಷ್ಟು ನೀರಿನ ಕೊಳಗಳಿವೆ. ಒಂದು ಜಾಮೀಯಾ ಮಸೀದಿಯು ಇದೆ. ಆ ಕಟ್ಟಡವನ್ನು ಬಹಳ ಭವ್ಯವಾಗಿ ಸುಂದರವಾಗಿ ಕಟ್ಟಿಸಲಾಗಿದೆ. ಈ ಮಸೀದಿಯನ್ನು ಅನೇಕ ಸುಂದರ ಕಲಾತ್ಮಕತೆಯಲ್ಲಿ ಚಿತ್ರಿಸಲಾಗಿದೆ. ಇಂತಹ ಸುಂದರ ಮಸೀದಿಯು ಪಟ್ಟಣಗಳಲ್ಲಿ ಎಲ್ಲಿಯೂ ನೋಡಲು ಸಿಗುವುದಿಲ್ಲ.

ಹೇಳಲ್ಪಡುವುದೇನೆಂದರೆ, ಅಕ್ಬರನು ಅಸೀರ ಕೋಟೆಯನ್ನು ತನ್ನ ವಶಕ್ಕೆ ಪಡೆದ ಮೇಲೆ ಆಗ್ರಾಕ್ಕೆ ಹೋದನು. ಆತನು ಹಿಂದೂ ಧರ್ಮದಲ್ಲಿ ನಂಬಿಕೆಯನ್ನಿಟ್ಟವನಾಗಿದ್ದರಿಂದ, ಆ ಕೋಟೆಯಲ್ಲಿನ ಸುಂದರ ಮಸೀದಿಯನ್ನು ಕೆಡವಿಸಿ ಆ ಜಾಗದಲ್ಲಿ ಒಂದು ಮಂದಿರವನ್ನು ಕಟ್ಟಿಸಲು ಆಜ್ಞಾಪಿಸಿದ್ದನೆಂದು ತಿಳಿದು ಬರುತ್ತದೆ. ಆದರೆ ಆ ದಿನಗಳಲ್ಲಿ ಶಹಜಾದ ದಾನಿಯಲನು ಬುರ್ಹಾನಪುರದಲ್ಲಿ ನೆಲೆಸಿದ್ದುದರಿಂದ ಆ ಕೆಲಸವನ್ನು

ಆತನು ಮಾಡಿಸಲಿಲ್ಲ. ರಾಖಿಮುಲ್ ಹುರೂಫ್ ಲೇಖಕ ಫರಿಶ್ತಾನು ಖ್ವಾಜಾ ಹುಸ್ನತುರ್‌ಬತಿಯವರೊಂದಿಗೆ, ಭಾರತದ ಅನೇಕ ಪ್ರಸಿದ್ಧ ಕೋಟೆಗಳನ್ನು ನೋಡಿದ್ದನು. ಆದರೆ ಆತನು ತುರ್‌ಬತಿಯವರಿಗೆ ಈ ಪ್ರಶ್ನೆಯನ್ನು ಕೇಳಿದ್ದನು. "ಏನು? ನೀವು ಇಂತಹ ಕೋಟೆಯನ್ನು ಎಲ್ಲಿಯಾದರೂ ಕಂಡಿದ್ದೀರಾ?" ಆಗ ಖ್ವಾಜಾ ಹುಸ್ನತುರ್‌ಬತಿಯವರು –"ಹೌದು ನಾನು ರೋಹ್ತಾಸ್ ದುರ್ಗದಲ್ಲಿ ಅದು ಪೂರ್ವ ಹಿಂದೂಸ್ತಾನದಲ್ಲಿದೆ. ಈ ಕೋಟೆಯನ್ನು ನೋಡಿದ್ದರೂ, ಅದರ ಅಗಲ, ವಿಸ್ತಾರ ಇದಕ್ಕಿಂತ ಕಡಿಮೆ" ಎಂದು ಉತ್ತರಿಸಿದರಂತೆ.

ಮಾಲೇಗರ ಕೋಟೆ :

ಫಾರೂಖಿ ಸುಲ್ತಾನರು ಅಸೀರ್ ಕೋಟೆಯ ಬಾಗಿಲ ಬಳಿ ಒಂದು ಹೊಸದಾಗಿ ಕೋಟೆಯನ್ನು ಕಟ್ಟಿಸಿದರು. ಅದರ ಹೆಸರನ್ನು "ಮಾಲೇಗರ್" ಕೋಟೆಯೆಂದು ಇಟ್ಟರು. ಹಿಂದಿನ ಪುಟಗಳಲ್ಲಿ ವರ್ಣಿಸಿರುವಂತೆ ಮುತ್ತಿಗೆಯ ಸಂದರ್ಭದಲ್ಲಿ ಕೋಟೆಯ ರಕ್ಷಕರು ಆಹಾರವಿಲ್ಲದೆ ಬಹಾದುರ್‌ಖಾನನಿಂದ ಸಿಟ್ಟಾಗಿದ್ದರು ಹಾಗೂ ಕೋಟೆಯ ರಕ್ಷಣೆಯ ಕೆಲಸವನ್ನು ಬಿಟ್ಟು ಕುಳಿತಿದ್ದಾಗ, ಅಕ್ಬರ ಸೈನ್ಯವು ಆ ಕೋಟೆಯನ್ನು (ಮಾಲೇಗರ್) ತನ್ನ ವಶಕ್ಕೆ ಪಡೆದಿದ್ದಿತು. ಏಕೆಂದರೆ ಅದರಲ್ಲಿ ಅಕ್ಬರನು ತಂದಿದ್ದ ಮದ್ದು-ಗುಂಡುಗಳನ್ನು ಸುರಕ್ಷಿತವಾಗಿ ಇಡಬಹುದಾಗಿತ್ತು. ತೋಪುಗಳನ್ನು ಅಲ್ಲಿ ಜೋಡಿಸಬಹುದಾಗಿತ್ತು. ಈ ಕಾರಣಕ್ಕಾಗಿ ಅಕ್ಬರನ ಸೈನ್ಯವು ವಶಪಡಿಸಿಕೊಂಡಿತ್ತು. ಅಲ್ಲಿ ಈ ಕೆಲಸಕ್ಕೆ ಎರಡುನೂರು ಸಿಪಾಯಿಗಳನ್ನು ನೇಮಿಸಬಹುದಾಗಿತ್ತು. ಆದರೂ ಅಸೀರ್‌ನ ಕೋಟೆಯನ್ನು ಗೆಲ್ಲುವುದು ಅಷ್ಟು ಸುಲಭವಾಗಿರಲಿಲ್ಲ.

ಫಾರೂಖಿ ಸಾಮ್ರಾಜ್ಯದ ಪತನ ಮತ್ತು ಬಹಾದುರ್‌ಖಾನನ ಮರಣ :

ಅಸೀರ್ ಕೋಟೆಯಂತಹ ಸದೃಢ ಸುಂದರ ಕೋಟೆಯು ಅಕ್ಬರನ ಕೈವಶವಾಯಿತು. ಹೀಗೆ ಹಿಜರಿ ೧೦೦೮ರಲ್ಲಿ ಫಾರೂಖಿ ಸಾಮ್ರಾಜ್ಯವು ಸಂಪೂರ್ಣವಾಗಿ ಪತನವನ್ನು ಕಂಡಿತು. ಬಹಾದುರ್‌ಖಾನನನ್ನು ಅಕ್ಬರನು ತನ್ನ ಜೊತೆಯಲ್ಲಿ ಕರೆದುಕೊಂಡು, ಆತನನ್ನು ಲಾಹೋರಿಗೆ ತಂದನು. ಈ ಬಡಪಾಯಿಗೆ ಪುನಃ ತನ್ನ ರಾಜಧಾನಿಯನ್ನು ನೋಡುವ ಭಾಗ್ಯ ಒದಗಲಿಲ್ಲ. ಬಹಾದುರ್‌ಖಾನನಿಗೆ ಮತ್ತು ಆತನ ಮಕ್ಕಳಿಗೆ ಅಕ್ಬರನು ಸಂಬಳಕ್ಕೆ ಅಲ್ಲಿ ನೇಮಿಸಿಕೊಂಡು ಅವರಿಗೆ ವೇತನಗಳನ್ನು ನಿಗದಿಪಡಿಸಿದನು.

ಬಹಾದುರ್‌ಖಾನ ಫಾರೂಖಿಯು ಜಹಾಂಗೀರನ ಶಾಸನದ ಕಾಲದವರೆಗೂ ಜೀವಂತನಾಗಿದ್ದು, ಹಿಜರಿ ೧೦೨೪ರಲ್ಲಿ ಆಗ್ರಾದಲ್ಲಿ ತೀರಿಕೊಂಡನು. ಬಹಾದುರ್‌ಖಾನನ ಆಡಳಿತದ ಕಾಲ ಕೇವಲ ಮೂರು ವರ್ಷಗಳು ಮಾತ್ರ.

■

ಮಗ ಇಸ್ಮಾಯಿಲ್ ನಿಜಾಂಶಾಹ್‌ನು ಅಹಮದ್‌ನಗರದಲ್ಲಿ ಪಟ್ಟಕ್ಕೆ ಏರಿದನು. ಈ ಸಂದರ್ಭದಲ್ಲಿ ಬುರ್ಹಾನ್ ನಿಜಾಂಶಾಹ್‌ನು ಪುನಃ ತನ್ನ ವಂಶಸ್ಥರ ರಾಜ್ಯವನ್ನು ತನ್ನ ವಶಕ್ಕೆ ಪಡೆದುಕೊಳ್ಳುವ ಆಸೆಯಾಯಿತು. ಜಲಾಲುದ್ದೀನ ಅಕ್ಬರನ ಸಲಹೆಯಂತೆ ನಿಜಾಂಶಾಹ್‌ಸಾನಿ ತನ್ನ ಜಾಗೀರಿಯಾದ ಹಿಂದಿಯದಲ್ಲಿ ಬಂದನು. ಅಲ್ಲಿಗೆ ಬಂದು ರಾಜ ಅಲಿಖಾನ್ ಫಾರೂಖಿಯ ಹತ್ತಿರ ಸಹಾಯವನ್ನು ಬೇಡಿದನು.

ಜಮಾಲ್‌ಖಾನ್ ಮೆಹದವಿಯನ ಆಸೆ ಬುರ್ಹಾನಪುರದಲ್ಲಿ :

ರಾಜ ಅಲಿಖಾನ್ ಫಾರೂಖಿಯು ಇಬ್ರಾಹಿಂ ಆದಿಲ್‌ಶಾಹ್‌ನ ಸಲಹೆಯಂತೆ ಬುರ್ಹಾನ್ ನಿಜಾಂಶಾಹ್ ಸಾನಿಗೆ ಸಹಾಯ ಮಾಡಲು ಒಪ್ಪಿದನು. ಈ ದಿನಗಳಲ್ಲಿ ಅಹಮದ್ ನಗರದ ಆಡಳಿತದ ಚುಕ್ಕಾಣೀಯು ಜಮಾಲ್‌ಖಾನ್ ಮೆಹದವಿಯ ಕೈಯಲ್ಲಿತ್ತು. ಆತನಿಗೆ ಈ ವಿಚಾರವು ತಿಳಿದಾಗ ಇಸ್ಮಾಯಿಲ್ ನಿಜಾಂಶಾಹ್‌ನ ಜೊತೆಗೂಡಿ ಬುರ್ಹಾನ್‌ಪುರದತ್ತ ರವಾನೆಯಾದನು.

ರಾಜ ಅಲಿಖಾನ್ ಮತ್ತು ಜಮಾಲ್‌ಖಾನನಲ್ಲಿ ಯುದ್ಧ :

ರಾಜ ಅಲಿಖಾನ್ ಫಾರೂಖಿಯು ತನ್ನ ಸೈನ್ಯವನ್ನು ಸಿದ್ಧಗೊಳಿಸಿಕೊಂಡು, ಬುರ್ಹಾನ ನಿಜಾಂಶಾಹ್‌ನನ್ನು ಜೊತೆಯಲ್ಲಿ ಕರೆದುಕೊಂಡು, ಬರಾರ್‌ನ ಸರಹದ್ದಿನಲ್ಲಿ ತಲುಪಿದನು. ರಾಜ ಅಲಿಖಾನನು ಜಮಾಲ್‌ಖಾನ್ ಮೆಹದವಿಯು ಅಲ್ಲಿಗೆ ತಲುಪುವುದಕ್ಕೆ ಮೊದಲೇ ಬರಾರಿ ಅಮೀರರುಗಳಿಗೆ ಬಹುಮಾನಗಳನ್ನು ನೀಡಿ, ತನ್ನ ಕಡೆ ಸೆಳೆದುಕೊಂಡಿದ್ದನು. ಅಲ್ಲಿಂದ ಬುರ್ಹಾನ ನಿಜಾಂಶಾಹ್ ಸಾನಿಯ ಬಳಿಗೆ ಬಂದನು. ಅದೇ ದಿನಗಳಲ್ಲಿ ಜಮಾಲ್‌ಖಾನ್ ಮೆಹದವಿಯು ಘಾಟ್‌ರೋಬ್ ನಗರವನ್ನು ಪಾರು ಮಾಡಿದನು. ಶತ್ರುಗಳಿಬ್ಬರೂ ಬಹಳ ಹತ್ತಿರಕ್ಕೆ ಸಮೀಪಿಸಿದರು. ಎರಡೂ ಕಡೆಯಿಂದ ಯುದ್ಧ ಪ್ರಾರಂಭವಾಯಿತು. ಇಬ್ಬರೂ ವೀರಾವೇಶದಿಂದ ಯುದ್ಧವಾಡಿದರು. ಅಕಸ್ಮಾತಾಗಿ ಬಂದೂಕಿನ ಒಂದು ಗುಂಡು ಜಮಾಲ್‌ಖಾನನ ಶರೀರಕ್ಕೆ ತಾಗಿತು. ಆತನು ಅಲ್ಲಿಯೇ ಸತ್ತು ಬಿದ್ದನು.

ರಾಜ ಅಲಿಖಾನನ ಗೆಲುವು :

ಜಮಾಲ್‌ಖಾನ್ ಮೆಹದವಿಯ ಮರಣದ ತಕ್ಷಣ ಶತ್ರುಗಳು ಮೈದಾನದಿಂದ ಓಡಿ ಹೋದರು. ಈ ಮಹತ್ತರವಾದ ಗೆಲುವಿನ ನಂತರ ರಾಜ ಅಲಿಖಾನನು, ಬುರ್ಹಾನ್ ನಿಜಾಂಶಾಹ್‌ನು ಸಂತೋಷಕೂಟವನ್ನೇರ್ಪಡಿಸಿದರು. ಇದಾದ ನಂತರ ಇಬ್ಬರೂ ಪ್ರತ್ಯೇಕವಾಗಿ ತಮ್ಮ ರಾಜಧಾನಿಗಳಿಗೆ ಹೊರಟರು. ಬುರ್ಹಾನ್ ನಿಜಾಂಶಾಹ್ ಸಾನಿಯು ಅಹಮ್ಮದ್‌ನಗರದ ಕಡೆ ಹೊರಟನು. ಮತ್ತು ರಾಜ ಅಲಿಖಾನನು ಬುರ್ಹಾನ್‌ಪುರಕ್ಕೆ ಬಂದನು.

ಅಹಮ್ಮದ್‌ನಗರದ ಮೇಲೆ ಅಕ್ಬರನ ಆಕ್ರಮಣ :

ಹಿಜರಿ ೧೦೦೪ರಲ್ಲಿ ಬುರ್ಹಾನ್ ನಿಜಾಂಶಾಹ್ ಸಾನಿಯು ಮರಣ ಹೊಂದಿದನು. ಷಹಜಾದ್ ಮುರಾದ್ (ಜಲಾಲುದ್ದೀನ್ ಅಕ್ಬರನ ಮಗ) ಮತ್ತು ಮೀರ್ಜಾ ಅಬ್ದುರ್‌ರ್‍ರಹೀಂಖಾನ್‌ಖಾನ (ಬೈರಂಖಾನನ ಮಗ) ನಿಜಾಮಶಾಹಿ ರಾಜ್ಯವನ್ನು ಗೆಲ್ಲಲು ಹೊರಟರು. ರಾಜಾ ಅಲಿಖಾನ ಕೂಡ ಒಂದು ಬೃಹತ್ ಸೈನ್ಯದೊಂದಿಗೆ ಜಲಾಲುದ್ದೀನ್ ಅಕ್ಬರನ ಆಜ್ಞೆಗನುಸಾರವಾಗಿ ಖಾನೆ-ಖಾನಾನ್‌ನ ಜೊತೆಯಲ್ಲಿ ಹೊರಟನು. ಷಹಜಾದಮುರಾದ್ ಮತ್ತು ಅಬ್ದುರ್‍ರಹೀಂಖಾನೆ-ಖಾನನು ಅಹಮದ್‌ನಗರವನ್ನು ತಲುಪಿ ಪಟ್ಟಣದ ಕೋಟೆಯನ್ನು ಮುತ್ತಿದರು. ಈ ಮುತ್ತಿಗೆಯಿಂದ ಯಾವ ಪರಿಣಾಮವೂ ಆಗಲಿಲ್ಲ. ಇಬ್ಬರಲ್ಲೂ ಒಂದು ಒಪ್ಪಂದವಾದುದೇನೆಂದರೆ-ಬರಾರಿನ ಮೇಲೆ ಅಕ್ಬರನ ಆಡಳಿತವಿರಲೆಂದು ಅಹಮದ್‌ನಗರದ ಮೇಲೆ ನಿಜಾಂಶಾಹ್‌ನ ಆಡಳಿತವಿರಲೆಂದು ತೀರ್ಮಾನವಾಯಿತು.

ಮೊಗಲರಲ್ಲಿ ಮತ್ತು ದಖನಿ ಸೈನ್ಯಗಳಲ್ಲಿ ಯುದ್ಧ :

ಈ ಒಪ್ಪಂದದ ಪ್ರಕಾರ ಷಹಜಾದ ಮುರಾದನು ಮತ್ತು ಖಾನೆ-ಖಾನಾನ್‌ರು ಬರಾರಿನ ಮೇಲೆ ತಮ್ಮ ಅಧಿಕಾರವನ್ನು ಸ್ಥಾಪಿಸಿದರು. ರಾಜಾ ಅಲಿಖಾನನು ಬುರ್ಹಾನ್‌ಪುರ ಮತ್ತು ಅಸೀರಿನ ಕಡೆ ಪ್ರಯಾಣವನ್ನು ಮಾಡಿದರು. ಈ ಘಟನೆಯ ಕೆಲವು ದಿನಗಳ ನಂತರ ದಖನಿಯರು ತಮ್ಮ ಒಗ್ಗಟ್ಟಿನಿಂದಾಗಿ ಬರಾರನ್ನು ಮೊಗಲರ ವಶದಿಂದ ಬಿಡಿಸಿಕೊಳ್ಳುವ ಮನಸ್ಸು ಮಾಡಿದರು. ದಖನಿ ಸುಹೇಲ್‌ಖಾನ್‌ಖ್ವಾಜಾ ಸರಾನ ಅಧೀನದಲ್ಲಿ ಗಂಗಾನದಿಯ ದಡದಲ್ಲಿ, ಸೋನ್‌ಪತ್ ಎಂಬ ಸ್ಥಳದಲ್ಲಿ ಸೇರಿದರು. ಖಾನೆ-ಖಾನಾನಿಗೆ ಈ ವಿಷಯವು ತಿಳಿಯಿತು. ಆತನೂ ಷಹಜಾದ ಮುರಾದನೂ, ರಾಜಾ ಅಲಿಖಾನನೊಡನೆ ಯುದ್ಧ ಮಾಡಲು ಹೊರಟರು. ಇಬ್ಬರಲ್ಲೂ ಘೋರ ಯುದ್ಧವು ನಡೆಯಿತು. ಈ ಯುದ್ಧದಲ್ಲಿ ಖಾನೆ-ಖಾನಾನ್‌ನಿಗೆ ಗೆಲವು ಸಿಕ್ಕಿತು.

ರಾಜಾ ಅಲಿಖಾನನ ಕೊಲೆ :

ರಾಜ ಅಲಿಖಾನನು ಎಂತಹ ಜಾಗದಲ್ಲಿ ಸೇರಿದ್ದನೆಂದರೆ, ಆ ಭಾಗದಲ್ಲಿ ದಖನಿಯರು ಭಯಂಕರ ಬೆಂಕಿಯನ್ನು ಹಚ್ಚಿದ್ದರು. ರಾಜ ಅಲಿಖಾನನು ಆ ಬೆಂಕಿಯ ಮಧ್ಯಭಾಗದಲ್ಲಿ ತನ್ನ ಅನೇಕ ಅಮೀರರೊಂದಿಗೆ ಸಿಕ್ಕಿಹಾಕಿಕೊಂಡು ಬೆಂಕಿಯ ಜ್ವಾಲೆಯಲ್ಲಿ ಸತ್ತನು. ಆತನ ಶವವನ್ನು ಬುರ್ಹಾನಪುರಕ್ಕೆ ತರಲಾಯಿತು. ಅಲ್ಲಿ ಆತನನ್ನು ದಫನ್ ಮಾಡಲಾಯಿತು.

ರಾಜಾ ಅಲಿಖಾನನ ಆಡಳಿತದ ಅವಧಿ ಮೂವತ್ತೊಂದು ವರ್ಷಗಳಾಗಿದ್ದವು.

■

*

೧೨. ಬಹಾದೂರ್‌ಖಾನ್ ಫಾರೂಖಿ

ಅನುಭವಹೀನ ಶಾಸಕ :

ಹಿಜರಿ–೧೦೦೫ರಲ್ಲಿ ರಾಜಾ ಅಲಿಖಾನ್ ಫಾರೂಖಿಯು ಸತ್ತ ನಂತರ ಆತನ ಮಗ ಬಹಾದೂರ್‌ಖಾನ್ ಫಾರೂಖಿಯು ತಂದೆಯ ಸ್ಥಾನಕ್ಕೆ ಪಟ್ಟಕ್ಕೇರಿದನು. ಈ ಪಟ್ಟಾಭಿಷೇಕವು ಜಲಾಲುದ್ದೀನ್ ಅಕ್ಬರನ ಆಜ್ಞಾನುಸಾರ, ಖಾನ್–ಖಾನಾನನ ಅಧೀನದಲ್ಲಿ ವ್ಯವಸ್ಥೆ ಮಾಡಲಾಗಿತ್ತು. ಬಹಾದೂರ್‌ಖಾನ ಫಾರೂಖಿಯು ದಡ್ಡನಾಗಿದ್ದನು. ರಾಜಕೀಯದಲ್ಲಿ ಅನುಭವಹೀನನೂ ಆಗಿದ್ದನು. ಈ ಕಾರಣಗಳಿಂದಾಗಿ ಆತನು ಮದ್ಯಪಾನ, ಅಫೀಮು ಸೇವನೆಗಳಿಂದ ಯಾವಾಗಲೂ ಮತ್ತನಾಗಿರುತ್ತಿದ್ದನು. ಆತನಿಗೆ ಸಂಗೀತದಲ್ಲಿ ಅಪಾರ ಅಭಿರುಚಿಯಿತ್ತು. ಹಾಗೂ ಹಾಡುಗಾರ್ತಿಯರನ್ನು ಸಂಗ್ರಹಿಸಿಕೊಂಡು ಅವರ ಮಧ್ಯೆ ಯಾವಾಗಲೂ ಓಲಾಡುತ್ತಿದ್ದನು.

ಬಹಾದುರ್ ಆಬಾದಿನ ನಿರ್ಮಾಣ :

ಬಹಾದುರ್‌ಖಾನನು ತಪತಿ ನದಿಯ ದಡದಲ್ಲಿ ಒಂದು ನಗರದ ನಿರ್ಮಾಣವನ್ನು ಮಾಡಿದನು. ಅದರ ಹೆಸರು "ಬಹಾದುರ್‌ಪುರ". ಆ ನಗರ ನಿರ್ಮಾಣಕ್ಕೆ ಬಹಳ ಶ್ರಮಪಟ್ಟಿದ್ದೇ ಅಲ್ಲದೇ ಅದರ ಅಗಾಧ ಪ್ರಗತಿಯನ್ನು ಮಾಡಿದನು. ಬಹಾದುರ್‌ಖಾನನು ಚೆನ್ನಾಗಿ ಅರಿತಿದ್ದುದೇನೆಂದರೆ, ಒಂದು ಬೃಹತ್ ಮೊಗಲ ಸೈನ್ಯವು ಆ ನಗರದ ಹತ್ತಿರ ಇದೆ. ಅದು ಒಂದಲ್ಲ ಒಂದು ದಿನ ಈ ಪ್ರದೇಶವನ್ನೆಲ್ಲಾ ತನ್ನ ಅಧೀನದಲ್ಲಿಡುವುದು ತಡವಿಲ್ಲ ಎಂದು. ಆ ಅನುಭವಹೀನ ಶಾಸಕನಿಗೆ ಇದರ ಬಗ್ಗೆ ಚಿಂತೆ ಇರಲಿಲ್ಲ. ಆತನು ಮಾತ್ರ ತನ್ನ ಭೋಗವಿಲಾಸ ಜೀವನದಲ್ಲಿ ಯಾವುದೇ ಅಡ್ಡಿ ಬರದಂತೆ ಜೀವಿಸುತ್ತಿದ್ದನು. ಆತನ ಸಂಪೂರ್ಣ ಹಗಲು–ರಾತ್ರಿಗಳು ವಿಲಾಸದಲ್ಲಿಯೇ ಕಳೆಯುತ್ತಿದ್ದುವು.

ಬಹಾದುರ್‌ಖಾನನ ದಡ್ಡತನ :

ಷಹಜಾದ ಮುರಾದನು ತೀರಿಕೊಂಡಾಗ ಅಕ್ಬರ್ ಬಾದಷಾಹನು ಆತನ ಜಾಗದಲ್ಲಿ ತನ್ನ ಎರಡನೇ ಮಗನಾದ ಷಹಜಾದ ದಾನಿಯಲನನ್ನು ದಕ್ಷಿಣದ ಸುಬೇದಾರನನ್ನಾಗಿ ನೇಮಿಸಿದನು. ದಾನಿಯಲನು ದಕ್ಷಿಣಕ್ಕೆ ಬಂದಾಗ, ಒಂದು ಸಂದರ್ಭದಲ್ಲಿ ಬಹಾದುರ್‌ಖಾನನು ಬಹಳ ದಡ್ಡತನದ ಒಂದು ಉದಾಹರಣೆಯನ್ನು ಸಾಬೀತುಪಡಿಸಿದನು. ಷಹಜಾದ ದಾನಿಯಲನನ್ನು ಬೇಟಿಯಾಗಲು ಹೋಗಲೇ ಇಲ್ಲ. ಹೀಗಿದ್ದಾಗ ಜಲಾಲುದ್ದೀನ್ ಅಕ್ಬರನು ದಕ್ಷಿಣ ಭಾಗಗಳನ್ನು ಜಯಿಸಲು ಶಾದಿಆಬಾದ್ ಮಾಂಡುವಿಗೆ ಬಂದನು. ಆಗಲೂ ಸಹ ಬಹಾದುರಖಾನನು ಭೇಟಿಮಾಡಲು ಹೋಗಲಿಲ್ಲ. ಬಾದಷಹರನ್ನು ಸ್ವಾಗತಿಸಲೂ ಹೋಗಲಿಲ್ಲ. ಹಾಗೂ ಭೇಟೆಯೂ ಆಗಲಿಲ್ಲ. ಅದಕ್ಕೆ ವ್ಯತಿರಿಕ್ತವಾಗಿ ಅಸೀರ್ ಕೋಟೆಯಲ್ಲಿ ದಾಖಲಾಗಿ ಕೋಟೆಯಲ್ಲಿನ ಕೆಲವು ಅವಶ್ಯಕ ಸಾಮಾನುಗಳನ್ನು ಸಂಗ್ರಹಿಸುವ ಕೆಲಸದಲ್ಲಿ ತೊಡಗಿಸಿಕೊಂಡನು. ಎಲ್ಲ ಸಾಮಾನುಗಳೊಂದಿಗೆ, ವಿಶೇಷ ಸೇವಕರನ್ನು ಜೊತೆ ಮಾಡಿಕೊಂಡು ಪ್ರಜೆಗಳ ಸಮೇತ ೧೮ ಸಾವಿರ ಜನರೊಂದಿಗೆ ಕೋಟೆಯನ್ನು ಪ್ರವೇಶಿಸಿದನು.

ಅಸೀರ್ ಕೋಟೆಯ ವಿಶೇಷತೆ :

ಕೋಟೆಯನ್ನು ಗೆದ್ದಮೇಲೆ ನಾವು ಆ ಕೋಟೆಯಲ್ಲಿನ ಜನ, ಪ್ರಾಣಿಗಳ ಸಂಖ್ಯೆಗಳನ್ನು ಎಣಿಸಿದಾಗ, ೮೦ ಸಾವಿರ ಹೆಂಗಸರು ಮತ್ತು ಗಂಡಸರು ಕೋಟೆಯಿಂದ ಹೊರಬಂದರು. ಇವರಲ್ಲದೇ ೪೦ ಸಾವಿರ ಜನರು ಕೋಟೆಯನ್ನು ಮುತ್ತಿದಾಗ ಸತ್ತರು. ಇದರಿಂದ ಅಂದಾಜಿಸಬಹುದಾದ ವಿಷಯವೆಂದರೆ–ಕೋಟೆಯ ಒಳಗೆ ಆನೆ, ಕುದುರೆ, ಹಸುಗಳು, ಎಮ್ಮೆ, ಇತರೆ ಪ್ರಾಣಿಗಳೆಷ್ಟಿದ್ದುವು ಎಂಬುದನ್ನು ಊಹಿಸಬಹುದಾಗಿದೆ. ಬಹಾದುರ್‌ಖಾನನು ಕೋಟೆಯಲ್ಲಿ ಒಂದು ಪ್ರಪಂಚವನ್ನೇ ಬೆಳೆಸಿದ್ದನು.

ಅಕ್ಬರನ ಆಗಮನ ಮತ್ತು ಕೋಟೆಯ ಮುತ್ತಿಗೆ :

ಜಲಾಲುದ್ದೀನ್ ಅಕ್ಬರನು ತನ್ನ ಸೈನ್ಯದೊಂದಿಗೆ ಬುರ್ಹಾನ್‌ಪುರಕ್ಕೆ ಬಂದಾಗ ಆತನಿಗೆ ಬಹಾದುರ್‌ನ ಸ್ಥಿತಿಗತಿಗಳ ಬಗ್ಗೆ ತಿಳಿಯಿತು. ಆತನು ಸ್ವತಃ ಅಹಮದ್‌ನಗರಕ್ಕೆ ಹೋಗುವ ಇಚ್ಛೆಯನ್ನು ರದ್ದುಪಡಿಸಿ, ತನ್ನ ಮಗ ದಾನಿಯಲನನ್ನು, ಖಾನೆ–ಖಾನಾನ್‌ನನ್ನು ಅಹಮದ್‌ನಗರದ ಆಕ್ರಮಣದ ಬಗ್ಗೆ ನೇಮಿಸಿ ಆತನು ಬುರ್ಹಾನ್‌ಪುರದಲ್ಲಿಯೇ ತಂಗಿದನು. ತನ್ನ ಅಮೀರರನ್ನು ಅಸೀರ್ ಕೋಟೆಯನ್ನು ಮುತ್ತಿಗೆ ಹಾಕಲು ಆಜ್ಞಾಪಿಸಿದನು. ಮುತ್ತಿಗೆಯು ಬಹಳ ಕಾಲ ಹಿಡಿಯಿತು. ಹತ್ತು

VI. ಪೂರ್ಬಿಯಾ ಸುಲ್ತಾನರು

*

ಪಿಠೀಕೆ

ಪೂರ್ವಾತ್ಯ ಹಾಗೂ ಪೂರ್ಖಿಯ ಎರಡು ಶಬ್ದಗಳ ಅರ್ಥವು ಒಂದಾಗಿದೆ. ಒಂದು ಶಬ್ದ ಅರಬಿ ಇನ್ನೊಂದು ಹಿಂದಿ. ಹಾಜಿಪೂರ ತರಹತ್ ಹಾಗೂ ಅದರ ಸುತ್ತ–ಮುತ್ತಲಿನ, ಪರಕೀಯ ಬಾದಶಹನ ನಾಣ್ಯ ಅಲ್ಲದೆ ಪ್ರಶಂಸನೀಯ ಸಲಾತೀನರೆ, ಪೂರ್ವ ಸುಲ್ತಾನರೆಂದು ಕರೆಯಲಾಗುತ್ತದೆ.

ಬಂಗ್ಲಾ, ಲಖ್ನೌತಿ, ಸಿತಾರಗಾಂವು, ಬಿಹಾರ ಜಾಜನಗರ ಹಾಗೂ ಇತರ ನಗರಗಳ ಸುಲ್ತಾನರಿಗೆ ಪೂರ್ಖಿಯ ಸಲಾತೀನರೆಂದು ಕರೆಯಲಾಗುತ್ತದೆ.

ಈ ವಿಷಯವು ನಿಖರವಾಗಿರಲೇ ಬೇಕಿತ್ತು ಆದರೆ, ಹಿಂದುಸ್ತಾನದ ನಂಬುವಂತಹ ಇತಿಹಾಸಗಳಲ್ಲಿಲ್ಲ ಸಲಾತೀನ ಫರ್ಖಿಯಾ ಹಾಗೂ ಪೂರ್ಬಯ ಸುಲ್ತಾನರು ಚರಿತ್ರೆಯನ್ನು ವಿವರವಾಗಿ ಉಲ್ಲೇಖಿಸಿಲ್ಲ. ಉಲ್ಲೇಖಿತನಾದ ಫರಿಷ್ತಾನು ಇದನ್ನನುಸರಿಸಿ “ತಾರೀಖುಲ್‌ಅನಿ”ಗೆ ನನ್ನ ಮೂಲವಸ್ತುವನ್ನಾಗಿಸಿದೆ. ಇದು “ಅಲ್ಬಾದಿ ಮುಲ್ಲಾ ಅಹಮ್ಮದ್ ತನ್ವಿ”ಯ ಸಂಕಲನವಿದೆ. ನಾನು ಸಂಪೂರ್ಣ ಘಟಕವನ್ನು ಇದರಿಂದಲೇ ತೆಗೆದುಕೊಂಡಿರುವೆನು. ಇತರ ಪರಂಪರೆಯ ಕುರಿತು ಚರ್ಚಿಸಿಲ್ಲ. ಒಂದು ವೇಳೆ ವೃತಾಂತದಲ್ಲಿ ವಿರೋಧಾಭಾಸ ಅಥವಾ ಯಾವ ದೋಷ ಕಂಡುಬಂದಲ್ಲಿ ವಾಚಕ ಮಹನೀಯರು ನನ್ನನ್ನು ಕ್ಷಮಿಸುವಿರೆಂದು ನಂಬಿರುವೆ.

■

*

೧. ಪೂರ್ವಾತ್ಯ (ಪೂರುಬಿ) ಸುಲ್ತಾನರು ಅಥವಾ ಬಂಗಾಲದ ಅಧಿಪತಿಗಳು

"ಮೊಹ್ಮದ್ ಭಕ್ತಿಯಾರ ಖಿಲ್ಜಿ"

ಪ್ರಾರಂಭಿಕ ಸ್ಥಿತಿಗತಿಗಳು :

ಈ ದೇಶದಲ್ಲಿ ಇಸ್ಲಾಮಿಯ ಆಡಳಿತವನ್ನು ಸ್ಥಾಪಿಸಿದ ಶ್ರೇಯಸ್ಸು ಮೊಹ್ಮದ ಭಕ್ತಿಯಾರ ಖಿಲ್ಜಿಗೆ ಸಲ್ಲುತ್ತದೆ. ಈ ಬಾದಶಹನೆ ಇಸ್ಲಾಮಿ ಧರ್ಮವನ್ನು ವಾಡಿಕೆಗೆ ತಂದನು. ಇವನು ಗೌರವದ ಶ್ರೇಷ್ಠರ ವಂಶಕ್ಕೆ ಸಂಬಂಧವುಳ್ಳವನಾಗಿದ್ದನು. ಭಕ್ತಿಯಾರನು ಸುಲ್ತಾನ ಗೀಯಾಸುದ್ದೀನನ ಸಾಮಾನ್ಯ ಆಡಳಿತಾವಧಿಯಲ್ಲಿ ಗಜ್ನೈನರ ಕೆಲ ಕಾಲದ ನಂತರ ಹಿಂದುಸ್ತಾನಕ್ಕೆ ಆಗಮಿಸಿದನು. ಅಲ್ಲಿ ಅವನು ಶಾಹಬುದ್ದೀನರ ಹೆಸರಾಂತ ಸರದಾರ ಮಲಿಕ ಮೋಝುಮ್ ಹಿಸಾಮುದ್ದೀನರವರ ಸೇವೆಯಲ್ಲಿ ಹಾಜರಾದ. ಮಲಿಕ್ ಹಿಸಾಮುದ್ದೀನರ ಪ್ರಯತ್ನದಿಂದ ಮೊಹ್ಮದ್ ಭಕ್ತಿಯಾರ ಖಿಲ್ಜಿಗೆ ಸಿಯಾನ್ ದೋ-ಆಬಾದಲ್ಲಿ ಅನೇಕ ಫರಗಣ(ಹಳ್ಳಿ)ಗಳನ್ನು ಜಾಗೀರಿನ ರೂಪದಲ್ಲಿ ದೊರೆತವು. ತದ ನಂತರ ಇವನ ಜಾಗೀರಿನಲ್ಲಿ ಕಂಪ್ಲಾ, ಪಟಿಯಾಲಿಗಳು ಹೆಚ್ಚಳಗೊಂಡವು.

ಶೂರತನ :

ಮಹಮ್ಮದ್ ಭಕ್ತಿಯಾರನು ಬುದ್ಧಿವಂತ, ಕಾರ್ಯಚತುರ ಮತ್ತು ಶೂರ ಮಾನವನಾಗಿದ್ದನು. ಇವನ ಶಾರೀರಿಕ ರೂಪ ರಚನೆ ಚಿತ್ರ ವಿಚಿತ್ರವಾಗಿತ್ತು. ಅವನು ಯಾವಾಗ ತನ್ನ ಕೈಗಳನ್ನು ನೀಳವಾಗಿ ಬಿಟ್ಟುಕೊಂಡು ನಿಂತಾಗ ಕೈಬೆರಳುಗಳು ಅವನ ಕಾಲಿನ ಮೀನು ಖಂಡಕ್ಕೆ ಮುಟ್ಟುತ್ತಿದ್ದವು. ಅವನು ಯಾವಾಗಲೂ ಬಿಹಾರ ಪ್ರದೇಶದ ಮೇಲೆ ಹಲ್ಲೆ ಹೂಡಿ ಅಲ್ಲಿಯ ಸುತ್ತಮುತ್ತಲಿನ ತಲೆ ತಿರುಕರನ್ನು ಮತ್ತು ವಿದ್ರೋಹಿಗಳನ್ನು ಮೆಟ್ಟುತಿದ್ದ ಹಾಗೂ ಆ ಪ್ರದೇಶವನ್ನು ಲೂಟಿ ಮಾಡಿ ಬಹಳಷ್ಟು ಶತ್ರು ಸಂಪತ್ತನ್ನು ಪಡೆಯುತ್ತಿದ್ದನು. ಅಲ್ಪ ಸಮಯದಲ್ಲಿಯೆ ಮೊಹ್ಮದ್ ಭಕ್ತಿಯಾರನ

ವೈಭವವು ಮೊದಲಿಗಿಂತಲು ಹೆಚ್ಚಾಯಿತು. ಹಾಗೂ ನಾಲ್ಕು ದಿಕ್ಕುಗಳಲ್ಲಿ ಅವನ ಕೀರ್ತಿಯು ಹಬ್ಬತೊಡಗಿತು. ಖುರಾಸಾನ, ಗಜ್ನೈನ ಹಾಗೂ ಗೌರ್ ಪ್ರದೇಶದ ಅನೇಕ ನಿವಾಸಿಗಳು ವ್ಯಾಕುಲಗೊಂಡು ಕಂಗಾಲಾಗಿ ಹಿಂದುಸ್ತಾನದಲ್ಲಿ ಅತ್ತ ಇತ್ತ ಅಲೆದಾಡುತ್ತಿದ್ದರು. ಇವರೆಲ್ಲರಿಗೆ ಭಕ್ತಿಯಾರನ ದಾನ ಧರ್ಮದ ಉದಾರ ಗುಣದ ಅರಿವಾದಾಗ ಅವರು ಇವನ ತಪ್ಪಲಲ್ಲಿ ಆಶ್ರಯ ಪಡೆದರು.

ಬಿಹಾರಿನ ಗೆಲವು :

ಸುಲ್ತಾನ್ ಕುತ್ಬೂದ್ದೀನ್ ಐಬಕ್‌ನಿಗೆ ಮೊಹ್ಮದ್ ಭಕ್ತಿಯಾರನ ಸ್ಥಿತಿಗತಿಗಳ (ತಿಳಿವಳಿಕೆ) ಪರಿಜ್ಞಾನವಾದಾಗ, ಅವನು ಭಕ್ತಿಯಾರನ ಮೇಲೆ ಕೃಪಾದೃಷ್ಟಿಯನ್ನು ಬೀರಿದನು. ಹಾಗೂ ರಾಜಕೀಯ ವೈಭವದ ಸಾಮಗ್ರಿಗಳನ್ನು ಬಿಹಾರಿಗೆ ರವಾನಿಸಿದನು. ಹಿಂದುಸ್ತಾನದ ಬಾದಶಹನ ಗಮನ ಮತ್ತು ಅವನ ಅನುಗ್ರಹಗಳಿಂದ ಭಕ್ತಿಯಾರನ ಧೈರ್ಯ ಇಮ್ಮಡಿಗೊಂಡಿತು. ಅವನು ಬಿಹಾರ ರಾಜ್ಯವನ್ನು ದ್ರೋಹಿಗಳಿಂದ ಹಾಗೂ ತಲೆ ತಿರುಕರಿಂದ ಸ್ವಚ್ಛಗೊಳಿಸಿ ಬಿಹಾರ ಕೋಟೆಯನ್ನು ಸ್ವಾಧೀನಪಡಿಸಿಕೊಂಡನು. ಹಾಗೂ ಮುರ್ತುಜ್ ಬ್ರಾಹ್ಮಣ (ಗಡ್ಡ, ಮೀಸೆಯನ್ನು ಬೋಳಿಸಿಕೊಳ್ಳುವ ಅಭ್ಯಾಸವುಳ್ಳ ಬ್ರಾಹ್ಮಣ)ರನ್ನು ಕೊಂದನು.

ಬಿಹಾರ ಹೆಸರಿಗೆ ಆಧಾರ ಪ್ರಮಾಣಗಳು :

ಬಿಹಾರಿ ಹಿಂದುಗಳ ಅನೇಕ ಧಾರ್ಮಿಕ ಗ್ರಂಥಗಳು ಭಕ್ತಿಯಾರ ಖಿಲ್ಜಿಯವರ ಕೈಸೇರಿದವು. ಆದರೆ ಅವುಗಳನ್ನು ಓದುವವರು ಅಥವಾ ಓದಿ ತಿಳಿಸುವವರು ಯಾರೂ ಸಿಕ್ಕಲಿಲ್ಲ. ಬಿಹಾರ ಹೆಸರಿಗೆ ಆಧಾರ ಪ್ರಮಾಣ ಇದು ಇದೆ. ಈ ಕೋಟೆಯಲ್ಲಿ ಹಿಂದು ಬೋಧಕರು ವಾಸಿಸುತ್ತಿದ್ದರು. ಅಲ್ಲದೆ ಹಿಂದಿಯಲ್ಲಿ ಬಿಹಾರದ ಅರ್ಥ ಶಾಲೆಯೆಂದಾಗುತ್ತದೆ. ಹೀಗಾಗಿ ಈ ಕೋಟೆಗೆ ಬಿಹಾರ ಎಂದು ಹೆಸರಿಸಲಾಯಿತು.

ಮೊಹ್ಮದ್ ಭಕ್ತಿಯಾರನು ಸುಲ್ತಾನ ಐಬಕ್‌ನ ಸೇವೆಯಲ್ಲಿ :

ಈ ಮಹಾನ ವಿಜಯದ ನಂತರ ಮೊಹ್ಮದ್ ಭಕ್ತಿಯಾರ ಖಿಲ್ಜಿ ಅಗಣಿತ ಶತ್ರು ಸಂಪತ್ತನ್ನು ತೆಗೆದುಕೊಂಡು ದಿಲ್ಲಿಯಕಡೆಗೆ ಪ್ರಯಾಣ ಬೆಳೆಸಿದನು. ಈ ಎಲ್ಲಾ ಸಾಮಾನುಗಳನ್ನು ಸುಲ್ತಾನ್ ಕುತ್ಬುದ್ದೀನನಿಗೆ ಅರ್ಪಿಸಿದನು. ಸುಲ್ತಾನ ಐಬಕ್‌ನು ಮೊಹ್ಮದ್ ಭಕ್ತಿಯಾರನೊಂದಿಗೆ ಒಳ್ಳೆಯ ಸಲುಗೆಯಿಂದ ವರ್ತಿಸಿದನು. ಇವನ ಮೇಲೆ ರಾಜಕೀಯ ಕೃಪೆಗೈದನು. ದಿಲ್ಲಿಯಲ್ಲಿ ಮೊಹ್ಮದ್ ಭಕ್ತಿಯಾರನಿಗೆ ಈ ಬಗೆಯ ಸನ್ಮಾನ ನೀಡಿದನು. ಇದನ್ನು ಕಂಡ ಸಮಕಾಲೀನರು ಮತ್ಸರಗೊಂಡು ಪೈಪೋಟಿಗೊಳಗಾದರು.

ಪೈಪೋಟಿಯಾಗ್ನಿ ಮತ್ತು ಮತ್ಸರ :

ಮತ್ಸರವುಳ್ಳ ಪೈಪೋಟಿಗರು, ಪರಸ್ಪರ ಕದ್ದು ಮುಚ್ಚಿ ಮೊಹಮ್ಮದ್ ಭಕ್ತಿಯಾರನ ವಿರುದ್ಧ ಪಿಸುಮಾತುಗಳನ್ನು ಆಡತೊಡಗಿದರು. ಮತ್ತು ಒಂದು ದಿನ ಸಮಯ ಸಾಧಿಸಿ ಸುಲ್ತಾನ ಖುತ್ಬುದ್ದೀನ್ ಐಬಕ್‌ನಿಗೆ ಹೀಗೆಂದು ಹೇಳಿದರು. "ಮಹ್ಮದ್ ಭಕ್ತಿಯಾರನ ದಾವೆ ಇದೆ" ಅಮಲೇರಿದ ಆನೆಯೊಂದಿಗೆ ಸೆಣಸಾಡಬಲ್ಲನು. ಮೊದಲಂತು ಸುಲ್ತಾನ ಐಬಕ್‌ನು ಮೊಹ್ಮದ್ ಭಕ್ತಿಯಾರನ ಸಾವಿಗೆ ಭಯಪಟ್ಟು ಅವನ ಪರೀಕ್ಷೆಯನ್ನು ತೆಗೆದುಕೊಳ್ಳಲು ನಿರಾಕರಿಸಿದನು. ಆದರೆ ಕೊನೆಗೆ ತನ್ನ ಸಾಮಿಪ್ಯದ ಸರದಾರ ಒತ್ತಾಯಕ್ಕೆ ಒಪ್ಪಿದನು.

ಮೊಹ್ಮದ್ ಭಕ್ತಿಯಾರನಿಂದ ಆನೆಯೊಂದಿಗೆ ಸೆಣಸಾಟ :

ಒಂದು ದಿನ ಸುಲ್ತಾನ ಖುತ್ಬುದ್ದೀನ ಐಬಕ್‌ನು ಸಾರ್ವಜನಿಕ ಸಭೆಯನ್ನು ನೆರವೇರಿಸಿದನು. ಈ ಸಭೆಯಲ್ಲಿ ಎಲ್ಲಾ ಸರದಾರರು ಹಾಗೂ ರಾಜ್ಯದ ಸದಸ್ಯರು ಭಾಗವಹಿಸಿದರು. ಹಲವರು ಬಾದಶಹನ ಸೇವೆಯಲ್ಲಿ ಒಂದು ಆನೆಯನ್ನು ಕೊಡಮಾಡಿದರು. ಹಾಗೂ ಈ ರೀತಿಯಿಂದ ಹೇಳಿದರು. ಹಿಂದುಸ್ತಾನದ ಯಾವನೊಬ್ಬನು ಈ ಆನೆಯ ಜೊತೆ ಸೆಣಿಸಲಾರ. ಸುಲ್ತಾನ ಖುತ್ಬುದ್ದೀನ ಐಬಕ್‌ನು ಇದನ್ನು ಕೇಳಿ ಮೊಹ್ಮದ ಭಕ್ತಿಯಾರನಿಗೆ ಹೇಳಿದ, ಒಂದು ವೇಳೆ ನಿಮ್ಮ ಶೌರ್ಯ ಸಾಹಸದ ಮೇಲೆ ದಾವೆ ಇದ್ದರೆ ಈ ಆನೆಯ ಎದುರಿಗೆ ಬನ್ನಿ, ಏಕೆಂದರೆ ಶೂರತನವನ್ನು ಪ್ರದರ್ಶಿಸುವ ಒಳ್ಳೆಯ ಸಂದರ್ಭವಿದೆ. ಮೊಹಮ್ಮದ್ ಭಕ್ತಿಯಾರನು ಆತ್ಮಾಭಿಮಾನ ಹಾಗೂ ಸಾಹಸದ ಮೇರೆಗೆ ನಿರಾಕರಿಸುವುದು ಸೂಕ್ತವಲ್ಲವೆಂದುಕೊಂಡನು. ಅವನು ಒಂದು ಗದೆಯನ್ನು ತನ್ನ ಕೈಯಲ್ಲಿ ತೆಗೆದುಕೊಂಡು, ತನ್ನ ಪೂರ್ಣ ಶಕ್ತಿಯನ್ನು ಶೇಖರಿಸಿ, ಆನೆಯ ಸೊಂಡಿಲಿಗೆ ಎರಡು ಕೋರೆಹಲ್ಲುಗಳ ನಡುವೆ ಗದೆಯಿಂದ ಬಲವಾಗಿ ಹೊಡೆದನು. ಇದರಿಂದ ಆನೆಗೆ ಅಸಾಧ್ಯ ಪೆಟ್ಟು ತಗಲಿತು. ತರುವಾಯ ಮೊಹ್ಮದ್ ಭಕ್ತಿಯಾರನು ಎರಡನೆಯ ಪ್ರಹಾರ ಮಾಡಲನುವಾದಾಗ ಆನೆಯು ಘೀರಾಡುತ್ತ ಓಡತೊಡಗಿತು.

ಸಾಹಸದ ಪ್ರಶಂಸೆ :

ಮೊಹ್ಮದ್ ಭಕ್ತಿಯಾರನು ಪದರ್ಶಿಸಿದ ಅಂದಿನ ಸಾಹಸವನ್ನು ಕಂಡು ತನ್ನವರು, ಅನ್ಯರು ವಿಸ್ಮಯಗೊಂಡರು. ನಾಲ್ಕು ದಿಕ್ಕುಗಳಿಂದ ಪ್ರಶಂಸನೀಯ ಘೋಷಣೆಗಳು ಮೊಳಗಿದವು. ಸುಲ್ತಾನ್ ಖುತ್ಬುದ್ದೀನ ಐಬಕನು ಕೂಡ ಭಕ್ತಿಯಾರನ ಸಾಹಸ ಹಾಗೂ ಶೌರ್ಯದಿಂದ ಪ್ರಭಾವಿತನಾದ. ಬಾದಶಹನು ಭಕ್ತಿಯಾರನಿಗೆ ಅತಿಶಯವಾಗಿ ಗೌರವಿಸಿದನು. ಮತ್ತು ಅವನಿಗೆ ಬಹಳಷ್ಟು ಧನವನ್ನು ಬಹುಮಾನ ರೂಪದಲ್ಲಿ

ಅತ್ಯಮೂಲ್ಯ ಬೆಲೆಯುಳ್ಳ ವಸ್ತುಗಳ ಕಾಣಿಕೆಯನ್ನು ಕೊಟ್ಟನು. ಮೊಹ್ಮದ್ ಭಕ್ತಿಯಾರನು ಬಾದಶಹನ ದರ್ಬಾರಿನಿಂದ ಹೊರಗಡೆ ಬಂದು, ತಾನು ಪಡೆದ ಹಣ ಹಾಗೂ ಉಡುಗೊರೆಗಳನ್ನು ಅಲ್ಲಿರುವ ಬಡಬಗ್ಗರಿಗೆ ಹಂಚಿದನು. ಶಾಹಿಗೌರವ ವಸ್ತ್ರವನ್ನು ಧರಿಸಿಕೊಂಡು ತನ್ನ ಮನೆಗೆ ಮರಳಿದನು. ಈ ವಿಷಯವು ಆತನ ಧೈರ್ಯಕ್ಕೆ ವಿಶೇಷ ಪ್ರತೀಕವಾಗಿದೆ.

ಲಖ್ನೌತಿ ಹಾಗೂ ಬಂಗ್ಲಾದ ಆಡಳಿತ :

ಎರಡನೆಯ ದಿನ ಸುಲ್ತಾನ ಖುತ್ಬುದ್ದೀನ ಐಬಕ್‌ನು ಮೊಹ್ಮದ್ ಭಕ್ತಿಯಾರನಿಗೆ ಬಿಹಾರ ಮತ್ತು ಲಖ್ನೌತಿಯ ರಾಜ್ಯಭಾರವನ್ನೊಪ್ಪಿಸಿದನು. ಜೊತೆಗೆ ಕೆಂಪು ಡೇರೆ, ತಬಲ (ದೊಡ್ಡ ಢೋಲು) ಹಾಗೂ ಧ್ವಜವನ್ನು ಕರುಣಿಸಿದನು. ಹಲವರು ಇದು ಉಲ್ಲೇಖಿಸಿದ್ದಾರೆ. ಲಖ್ನೌತಿ ಎಂದರೆ ಹಿಂದುಸ್ಥಾನದ ಆ ಭಾಗ, ಕೋರ ಮತ್ತು ಬಂಗ್ಲಾದಿಂದ ಗಂಗಾನದಿಯವರೆಗೆ ಹಬ್ಬಿದಿದೆ. ಆದರೆ ಇನ್ನೊಂದು ಹೇಳಿಕೆಯಲ್ಲಿ ಹೀಗಿದೆ. ಕೋರದಿಂದ ಬಿಹಾರದ ಗಡಿಯವರೆಗೆ ಲಖ್ನೌತಿ ಇದೆ. ಮತ್ತು ಕೋರದಿಂದ ಮತ್ತೊಂದೆಡೆ ಬನಾರಸ ಹಾಗೂ ಗಂಗಾನದಿಯವರೆಗಿನ ಪ್ರದೇಶವೇ ಬಂಗ್ಲಾ ಅಥವಾ ಬಂಗ್ ಎನಿಸುವುದು.

ರಾಜಾ ಲಖ್ಮಣ್ಣ :

ಈ ತರುವಾಯ ಮೊಹಮ್ಮದ್ ಭಕ್ತಿಯಾರ ಸುತ್ತಮುತ್ತಲಿನ ಪ್ರದೇಶಕ್ಕೆ ತಲುಪಿದ ಮತ್ತು ಬಂಗ್ಲಾ ಹಾಗೂ ಲಖ್ನೌತಿಯನ್ನು ಗೆಲ್ಲುವ ಪ್ರಯತ್ನ ಮಾಡಿದ. ಈ ಪ್ರದೇಶದ ಮೇಲೆ ಲಖ್ಮನ್ನಾ (ರಾಯ ಲಖ್ಮನ ಪುತ್ರ) ಆಡಳಿತಗಾರನಾಗಿದ್ದ. ಇತಿಹಾಸಕಾರರ ಹೇಳಿಕೆ ಇದೆ. ರಾಯ ಲಖ್ಮನನ ರಾಜಧಾನಿ ಲಖ್ನೌತಿಯ ಒಂದು ನಗರ 'ತೋದಿಯಾ' ಇತ್ತು. ರಾಜನ ಹೆಂಡತಿ ಬಹಳ ಬುದ್ಧಿವಂತೆ ಹಾಗೂ ತಿಳಿವಳಿಕೆಯುಳ್ಳ ವನಿತೆಯಾಗಿದ್ದಳು. ರಾಣಿಯು ಗರ್ಭವತಿಯಾಗಿ ನವಮಾಸ ತುಂಬಿ ಪ್ರಸವಕ್ಕೆ ಒಂದು ದಿನ ಮುನ್ನ ತೋದಿಯ ನಗರದ ಜೋಯಿಸ ಬ್ರಾಹ್ಮಣರು ಶಿಶುವಿನ ಜಾತಕವನ್ನು ತಯಾರಿಸಲು ಅರಮನೆಗೆ ಬಂದು, ಅವರು ಈ ರೀತಿಯಿಂದ ಹೇಳಿದರು. ಶಿಶುವಿನ ಜನನ ಈಗಲೇ ಆದರೆ ಹುಟ್ಟುವ ಮಗುವು ಅತಿಕ್ರೂರಿ ಹಾಗೂ ದುರ್ದೈವಿಯಾಗುವನು. ಆದರೆ ಜನನವು ಎರಡು ಘಳಿಗೆಯ ನಂತರವಾದರೆ ಹುಟ್ಟುವ ಶಿಶು ಭಾಗ್ಯವಂತ ಹಾಗೂ ಸದ್ಗುಣಿಯಾಗಿ ದೀರ್ಘಕಾಲದವರೆಗೆ ರಾಜ್ಯಾಡಳಿತವನ್ನು ನಡೆಸುವನು.

ಲಖ್ಮಣ್ಣನ ಜನನ ಹಾಗೂ ಪಟ್ಟಾಭಿಷೇಕ :

ಇದನ್ನು ಕೇಳಿದ ರಾಣಿಯ ಮನದಲ್ಲಿ ವಿಚಾರ ಮೂಡಿತು. ಹುಟ್ಟುವ ಶಿಶು ಎರಡು ಘಳಿಗೆಯ ನಂತರ ಹುಟ್ಟಿದರೆ ಒಳ್ಳೆಯದಾಗುವುದು. ಪ್ರಯುಕ್ತ ಅವಳು

ಸೇವಕರಿಗೆ ಆಜ್ಞೆ ನೀಡಿದಳು. ನನ್ನ ಎರಡು ಕಾಲುಗಳನ್ನು ಕಟ್ಟಿರಿ, ತಿರುವು ಮುರುವುಮಾಡಿ ತೂಗು ಹಾಕಿರಿ. ರಾಣಿಯ ಆಜ್ಞೆಯನ್ನು ಪಾಲಿಸಿದರು. ಹೀಗಾಗಿ ಶಿಶುವು ಎರಡು ಘಳಿಗೆಯವರೆಗೆ ಹುಟ್ಟಲಿಲ್ಲ. ತದನಂತರ ಶಿಶು ಜನನವಾಯಿತು. ಮಗುವಿಗೆ ಜನನವಿತ್ತು ತಾಯಿಯು ಮೃತಪಟ್ಟಳು. ರಾಜ ಲಖ್ಮಣ ಹಾಗೂ ಆಡಳಿತದ ಸದಸ್ಯರು ಹೊಸಜಾತ ಶಿಶುವಿಗೆ ಲಖ್ಮಾಣ ಎಂದು ಹೆಸರಿಟ್ಟರು. ಹಾಗೂ ಈ ಮಗುವಿನ ಪಾಲನೆ ಪೋಷಣೆಗೆ ಓರ್ವ ದಾಸಿಯನ್ನು ನಿಯಮಿಸಿದರು. ರಾಜಾ ಲಖ್ಮಾಣನ ಮರಣದ ನಂತರ ಲಖ್ಮನ್ನಾನು ಪಟ್ಟವೇರಿದನು. ದೀರ್ಘಾವಧಿಯವರೆಗೆ ಆಡಳಿತವನ್ನು ನಡೆಸಿದನು. ರಾಜಾ ಲಖ್ಮಾಣನು ನ್ಯಾಯ ಪ್ರವೃತ್ತಿವುಳ್ಳ, ಉಚ್ಛ ಸ್ವಭಾವ ಹಾಗೂ ದಯಾಳು ಅರಸನಾಗಿದ್ದನು. ಎಂದೂ ಯಾರೊಬ್ಬರ ಮೇಲೂ ಕ್ರೂರತನ ತೋರಲಿಲ್ಲ. ಯಾರಿಗಾದರು ಬಹುಮಾನ ಕೊಡಬೇಕಾದರೆ, ಒಂದು ಲಕ್ಷ ರೂಪಾಯಿಗಳಿಗಿಂತ ಕಡಿಮೆ ನೀಡುತ್ತಿರಲಿಲ್ಲ.

ಜ್ಯೋತಿಷ್ಯರ ಗದರಿಕೆ ಸೂಕ್ತ ಸಮಯದಲ್ಲಿ :

ಖಾಜಿ ಮಿನ್ಹಾಜುಸ್ಸಿರಾಜ್‌ನ ಜಿರ್ಜಾನಿಯಲ್ಲಿ ಉಲ್ಲೇಖಿಸಿದ್ದಾನೆ. ಜೋಯಿಸರು ವ ಬ್ರಾಹ್ಮಣರು ಲಖ್ಮನ್ನನಿಗೆ ತೋರಿಸಿದರು. ಹಳೆಯ (ಪುರಾತನ) ಗ್ರಂಥಗಳಲ್ಲಿ ಈ ವಿಷಯವು ನಮೂದಿಸಲಾಗಿದೆ. ಒಂದು ಕಾಲ ಇಂಥದು ಬರುವದು. ಈ ರಾಜ್ಯವು ತುರುಕರ ಸ್ವಾಧೀನಕ್ಕೊಳಗಾಗುವುದು. ಆ ಕಾಲವು ಈಗ ಸಮೀಪವಾಗಲಿದೆ. ಪ್ರಯುಕ್ತ ನಮ್ಮ ಸಲಹೆಯಂತೆ ನಡೆದುಕೊಳ್ಳಿರಿ. ಏಕೆಂದರೆ ನಾವು ಎಲ್ಲಾ ಹಿಂದುಗಳು ಈ ರಾಜ್ಯವನ್ನು ತ್ಯಜಿಸಿ ಎಲ್ಲಿಯಾದರೂ ಹೋಗಿ ನೆಲೆಸಿಕೊಂಡರೆ, ತುರುಕರ ಸತ್ತೆಯಿಂದ ದೂರಾಗಿ ಸುರಕ್ಷಿತವಾಗಿರುವೆವು. ಆಗ ರಾಜನು ಬ್ರಾಹ್ಮಣರಿಗೆ ಕೇಳಿದನು. ಏನು, ಪುರಾತನ ಗ್ರಂಥಗಳಲ್ಲಿ ಯಾವ ವ್ಯಕ್ತಿಯು ನಮ್ಮ ದೇಶವನ್ನು ಗೆಲ್ಲುವನು ಅವನ ಬಗ್ಗೆ ಉಲ್ಲೇಖವಾಗಿದೆಯಾ? ಬ್ರಾಹ್ಮಣರು ಉತ್ತರಿಸಿದರು. ಹೌದು, ಕೆಲ ಪುರಾತನ ಗ್ರಂಥಗಳಲ್ಲಿ ಬಂದಿದೆ. ಈ ರಾಜ್ಯವನ್ನು ಗೆಲ್ಲುವವನು ನಿಂತು ಎರಡು ಕೈಗಳನ್ನು ನೀಳವಾಗಿ ಬಿಟ್ಟಾಗ ಅವನ ಎರಡು ಕೈಬೆರಳುಗಳು ಅವನ ಮೀನುಖಂಡದವರೆಗೆ ತಲುಪುವವು.

ರಾಜಾ ಹಾಗೂ ಬ್ರಾಹ್ಮಣರ ವ್ಯಾಕುಲತೆ :

ರಾಜಾ ಲಖ್ಮಣ್ಣನು ತನ್ನ ಸಭಿಕರನ್ನು ಅಂಥ ವ್ಯಕ್ತಿಯ ಪತ್ತೆಯನ್ನು ಹಚ್ಚಲು ರವಾನಿಸಿದನು. ಬಹಳಷ್ಟು ಹುಡುಕಾಟ ಹಾಗೂ ಪರದಾಟದ ನಂತರ ರಾಜಾ ಲಖ್ಮಣ್ಣರ ಸಭಿಕರಿಗೆ ಪತ್ತೆ ಲಭಿಸಿತು. ಭಕ್ತಿಯಾರ ಖಿಲ್ಜಿಯವರಲ್ಲಿ ಬ್ರಾಹ್ಮಣರು ಸೂಚಿಸಿದ ಲಕ್ಷಣಗಳು ಕಂಡುಬಂದವು. ಸಭಿಕರು ರಾಜನಿಗೆ ಈ ವಿಷಯವನ್ನು ತಿಳಿಸಿದರು. ಇದರಿಂದಾಗಿ ರಾಜ ಹಾಗೂ ಬ್ರಾಹ್ಮಣರು ಗಾಬರಿಗೊಂಡರು. ಪುರಾತನ ಹೊತ್ತಿಗೆಗಳಲ್ಲಿ ಏನೆಂದು ಉಲ್ಲೇಖವಾಗಿದೆ ಅದರಂತೆ ವಿನಾಶವಂತು ಖಂಡಿತ.

ನೋದಿಯ ಮೇಲೆ ಭಕ್ತಿಯಾರನ ದಾಳಿ :

ಎಲ್ಲಾ ಬ್ರಾಹ್ಮಣರು ಅವಸರವಾಗಿ ಜಗನ್ನಾಥ ಕಾಮ್ರೂದ ಹಾಗೂ ಬಂಗ್ಲಾದ ಕಡೆಗೆ ಪ್ರಯಾಣ ಬೆಳೆಸಿದರು. ಆದರೆ ಲಖ್ಮಣ್ಣನು ತನ್ನ ಪಿತ್ರಾರ್ಜಿತ ರಾಜ್ಯದಿಂದ ದೂರಾಗಲು ಸಿದ್ಧನಾಗಲಿಲ್ಲ. ಆದಕಾರಣ ಬ್ರಾಹ್ಮಣರ ಜೊತೆಗೂಡಲಿಲ್ಲ. ಇದೇ ಸಂದರ್ಭದಲ್ಲಿ ಬಕ್ತಿಯಾರನು ಪ್ರಥಮವಾಗಿ ತಾನೆ ಸ್ವತಃ ಅತಿ ತೀವ್ರತೆಯಿಂದ ರಾಜನ ಮೇಲೆ ದಾಳಿ ಮಾಡಿದನು. ರಾಜನಿಗೆ ಈ ಸುದ್ದಿ ತಲುಪಿದಾಗ ರಾಜನು ಭೋಜನ ಮಾಡುತ್ತಿದ್ದನು. ದಾಳಿಯ ಸುದ್ದಿ ತಲುಪಿದಾಕ್ಷಣವೆ ಅಂತಃಪುರದ ಹಿಂದಿನ ಬಾಗಿಲಿನಿಂದ ಓಡಿ ಹೋದನು. ಇದೆ ಸ್ಥಿತಿಯಲ್ಲಿ ಮೃತಪಟ್ಟನು.

ಭಕ್ತಿಯಾರನ ವಿಕ್ರಮಗಳು :

ನೋದಿಯಾ ನಗರವು ಲಖ್ನೂತಿ ಹಾಗೂ ಬಂಗ್ಲಾದ ಪ್ರದೇಶಗಳ ಮಧ್ಯವಿದೆ. ಮೊಹ್ಮದ್ ಬಕ್ತಿಯಾರನು ಈ ನಗರದಲ್ಲಿ ಹೆಚ್ಚಾಗಿ ನಾಶಗೊಳಿಸಿದನು. ಅದೆ ತಾನೆ ನೆಲೆಯೂರಿ ನಿಂತ ನಗರವು ಹಾಳಾಯಿತು. ಭಕ್ತಿಯಾರನು ಲಖ್ನೂತಿಯ ಜೊತೆ ಜೊತೆ ಬಂಗ್ಲಾದ ಅನೇಕ ಪಾಳೆಯ (ಪರಗನಾ)ಗಳನ್ನು ತನ್ನ ವಶಪಡಿಸಿಕೊಂಡನು. ಇವುಗಳಲ್ಲದೆ ಜಾಜನಗರ, ಬಿಹಾರ ದೇವಕೋಟ ಹಾಗೂ ಬಾರಸೋಯಿಯಲ್ಲಿ ತನ್ನ ಹೆಸರಿನ ನಾಣ್ಯ ಹಾಗೂ ತನ್ನ ಪ್ರಶಂಶೆಯ ಕೀರ್ತನವನ್ನು ನಡೆಸುವಂತೆ ಆದೇಶವನ್ನು ನೀಡಿದನು.

ರಂಗಪುರದ ಶಂಕು ಸ್ಥಾಪನೆ :

ಮೊಹ್ಮದ್ ಭಕ್ತಿಯಾರನು ಬಂಗ್ಲಾದ ಗಡಿಯಲ್ಲಿ ನೋದಿಯಾ ನಗರದ ಸ್ಥಳದಲ್ಲಿ ಇನ್ನೊಂದು ನಗರವನ್ನು ನೆಲೆಗೊಳಿಸಿದನು. ಇದರ ಹೆಸರು "ರಂಗಪುರ" ಎಂದಿಟ್ಟನು. ಭಕ್ತಿಯಾರನು ಇದನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು. ಹಾಗೂ ಇಲ್ಲಿಯೆ ಅನೇಕ ಹೊಸ ಕಟ್ಟಡಗಳನ್ನು ನಿರ್ಮಾಣಗೊಳಿಸಿದನು. ಮಸೀದಿಗಳನ್ನು, ಸೂಫಿ ಸಂತರ ಆಶ್ರಮಗಳನ್ನು ಹಾಗೂ ಶಾಲೆಗಳನ್ನು ಕಟ್ಟಿಸಿದನು. ಹಿಂದು ಧರ್ಮದ ಬದಲಾಗಿ ಇಸ್ಲಾಮ ಧರ್ಮದ ಆದೇಶಗಳನ್ನು ಜಾರಿಗೆ ತಂದನು. ಅಂದಿನಂದು ಭಕ್ತಿಯಾರನಿಗೆ ದೊರೆತ ಶತ್ರು ಸಂಪತ್ತನ್ನು ಇದರಲ್ಲಿರುವ ಉಚ್ಚ ಹಾಗೂ ಬಹುಮೂಲ್ಯ ವಸ್ತುಗಳನ್ನು ಬೇರ್ಪಡಿಸಿದನು. ಭಕ್ತಿಯಾರನೆ ಈ ವಸ್ತುಗಳನ್ನು ಸುಲ್ತಾನ್ ಖುತ್ಬುದ್ದೀನ ಐಬಕ್‌ನ ಸೇವೆಯಲ್ಲಿ ಕಳುಹಿಸಿಕೊಟ್ಟನು.

ಹೀಗಾಗಿ ತನ್ನ ಪವಿತ್ರಾತ್ಮ ಹಾಗೂ ಸತ್ಯ ಶುದ್ಧ ನಡೆಯನ್ನು ಕಾಲಾವಧಿಯ ಮೇಲೆ ಪ್ರಕಟಗೊಳಿಸಿದನು.

ತಿಬ್ಬತ್ತ ಪ್ರದೇಶವನ್ನು ಗೆಲ್ಲುವ ಸಂಕಲ್ಪ :

ಕೆಲವು ವರ್ಷಗಳೊಳಗೆ ಇಡಿ ದೇಶ ಭಕ್ತಿಯಾರನ ಸ್ವಾಧೀನವಾಯಿತು. ಬಂಗ್ಲಾದ ಎಲ್ಲಾ ಭೂಮಾಲಿಕರು, ಮಾಂಡಲಿಕರು ಅವನ ಆಜ್ಞಾಪಾಲಕರು ಹಾಗೂ ಹಿತೈಷಿಗಳಾಗಿದ್ದರು. ಈ ಗೆಲುವಿನ ನಂತರ ಭಕ್ತಿಯಾರನಲ್ಲಿ ಅಖ್ಬತ್ ಹಾಗೂ ತುರುಕಸ್ಥಾನ ರಾಜ್ಯಗಳನ್ನು ಗೆಲ್ಲುವ ಆಶೆ (ಇಂಗಿತ) ಒಡಮೂಡಿತು. ಅವನು ತನ್ನ ದಂಡನಾಯಕನಾದ ಮೊಹ್ಮದ್ ಶೇರಖಾನ ಖಿಲ್ಜಿಗೆ ರಾಜನಗರ ಲಖ್ನೌತಿ ಹಾಗೂ ಇತರ ದೇಶಗಳನ್ನು ರಕ್ಷಣೆ ಮಾಡಲು ತನ್ನ ನಾಯಕನೆಂದು ನಿಯಮಿಸಿದನು. ಆತನ ಅಣ್ಣ ಇವನೊಬ್ಬ ಹೆಸರುವಾಸಿಯಾದ ಸರದಾರ, ಶೇರಖಾನನ ಸಹಾಯಕನೆಂದು ನಿಯಮಿಸಿದನು. ತರುವಾಯ (೧೨೦೦೦) ಹನ್ನೆರಡು ಸಾವಿರ ಯುದ್ಧ ಪ್ರಿಯಾ ಸೈನ್ಯವನ್ನು ತೆಗೆದುಕೊಂಡು ಕೋಹಿಸ್ಥಾನದ ಕಡೆಗೆ ನಡೆದನು. ಈ ಪ್ರದೇಶ ಲಖ್ನೌತಿ ಹಾಗೂ ತಖ್ಬತ್ ರಾಜ್ಯಗಳ ಮಧ್ಯದಲ್ಲಿದೆ.

ಭಕ್ತಿಯಾರ ಅಬ್ರೂಹನ್‌ನಲ್ಲಿ :

ಈ ಕೋಹಿಸ್ಥಾನದಲ್ಲಿ ಮೂರು ಜನಾಂಗದವರು ವಾಸವಾಗಿದ್ದರು. ಮೊದಲನೆಯ ಮಂಜ ಎರಡನೆಯ ಕುಂಚ ಮೂರನೆಯ ಬಿಹಾರಿ. ಆದರೆ ಈ ಮೂರು ಜನಾಂಗದ ರೂಪರೇಷ, ಸಹಬಾಳುವ ರೀತಿ ನೀತಿಗಳನ್ನು ಗಮನಿಸಿದಾಗ ತುರಕ್ ವಂಶಸ್ಥರೆಂದು ತಿಳಿದು ಬರುತ್ತದೆ. ಇವರ ಭಾಷೆಯು ತುರ್ಕಿ ಹಾಗೂ ಹಿಂದಿ ಮಿಶ್ರಣವೆಂದು ಗೊತ್ತಾಗುತ್ತದೆ. ಭಕ್ತಿಯಾರನು ತನ್ನ ಮಾರ್ಗದರ್ಶನಕ್ಕೆ ಮಂಜ ಜನಾಂಗದ ಸರದಾರನೊಬ್ಬನಿಗೆ ಜೊತೆಗೂಡಿಸಿಕೊಂಡನು. ಅವನು ಹಿಂದುಸ್ತಾನದ ಗಡಿ ಪ್ರದೇಶದ ನಿವಾಸಿಯಾಗಿದ್ದನು. ಸುಲ್ತಾನರ ಶೆರೆಯಾಳಾಗಿ ಇಸ್ಲಾಂ ಧರ್ಮವನ್ನು ಸ್ವೀಕರಿಸಿದ್ದನು. ಈ ಮಾರ್ಗದರ್ಶಕ ಭಕ್ತಿಯಾರನಿಗೆ ನಗರವೊಂದಕ್ಕೆ ಒಯ್ದನು. ಅದುವೆ ಅಬ್ರೂಹನ್ನ್‌ನು ಇತ್ತು.

ತಿಮ್ಕರಿ ನದಿ :

ಅಬ್ರೂಹನ್ ನಗರದೆದುರಿಗೆ ಒಂದು ನದಿಯು ಹರಿಯುತ್ತಿತ್ತು. ಇದರ ಉದ್ದ, ಅಗಲ ಹಾಗೂ ಆಳ ಗಂಗಾ ನದಿಯ ನಾಲ್ಕು ಪಟ್ಟು ಆಗಿತ್ತು. ಈ ನದಿಯ ಹೆಸರೇ ತಿಮ್ಕರಿ ಇತ್ತು. ಯಾವಾಗ ಶಷಾಸಬ್‌ನು ತುರ್ಕಿಸ್ತಾನ ಮಾರ್ಗದಿಂದ ಹಿಂದುಸ್ತಾನದ ಮೇಲೆ ದಾಳಿ ಮಾಡಿದನು. ತಿಮ್ಕರಿ ನದಿಯನ್ನು ದಾಟಬೇಕಾದರೆ ಹತ್ತು ದಿನಗಳು ಬೇಕಾಗುತ್ತಿದ್ದವು. ಇವನು ಹಲಗೆಗಳನ್ನು ಜೋಡಿಸಿ ಸೇತುವೆಯನ್ನು ನಿರ್ಮಿಸಿ ಆ ಸೇತುವೆಯ ಮುಖಾಂತರ ಭಕ್ತಿಯಾರನು ನದಿ ದಾಟುವ ವಿಷಯ ರಾಜ ಕಾಮರೂಪನಿಗೆ ಗೊತ್ತಾಯಿತು. ಅವನು ಬಕ್ತಿಯಾರನಿಗೆ ಸಂದೇಶ ಕಳುಹಿಸಿದನು. ತಿಬ್ಬತ್ತಿನ ಎಲ್ಲಾ ಮಾರ್ಗಗಳು ಹಾಯ್ದು ಹೋಗಲು ದುರ್ಗಮ ಹಾಗೂ

ಗಂಡಾಂತರಕಾರಿಯಾಗಿದೆ. ಆಪತ್ತಿನಿಂದ ಕೂಡಿರುವವು. ಎಲ್ಲಾ ಗಡಿಯ ಕೋಟೆಗಳು ಭದ್ರವಾಗಿವೆ. ಅದರಿಂದ ಈ ವರ್ಷ ತಿಬ್ಬತ್ತನ್ನು ಹತೋಟಿಗೆ ತರುವ ಸಂಕಲ್ಪವನ್ನು ತ್ಯಜಿಸಿದರೆ ಒಳಿತು. ಮುಂದಿನ ವರ್ಷ ನಾನೆ ಸ್ವತಃ ತಮ್ಮ ಈ ಮಹತ್ವ ಕಾರ್ಯ(ಯುದ್ಧ)ದಲ್ಲಿ ಪಾಲ್ಗೊಳ್ಳುವೆನು. ಹಾಗೂ ತಮಗೆ ಸಾಧ್ಯಾವಾದಷ್ಟು ಮಟ್ಟಿಗೆ ನೆರವು ನೀಡುವೆ.

ನಗರ ಹಾಗೂ ಕೋಟೆಗೆ ಮುತ್ತಿಗೆ :

ಮೊಹ್ಮದ್ ಭಕ್ತಿಯಾರನಿಗೆ ಅನಿಷ್ಠ ದಿನಗಳು ಬರಲಾರಂಭಿಸಿದವು. ಇದರ ಪ್ರಯುಕ್ತ ರಾಜನ ಸಂದೇಶಕ್ಕೆ ಮಹತ್ವ ಕೊಡಲಿಲ್ಲ. ಆತುರತೆಯಲ್ಲಿ ತಿಬ್ಬತ್ತಿನ ಕಡೆಗೆ ಪ್ರಯಾಣವನ್ನು ಬೆಳೆಸಿದನು. ೧೫ ದಿನಗಳವರೆಗೆ ದುರ್ಗಮ ಮಾರ್ಗಗಳನ್ನು ಕ್ರಮಿಸಿದಾಗ ಮುಸಲ್ಮಾನರ ಸೈನ್ಯವು ಒಂದು ಅರಣ್ಯಕ್ಕೆ ತಲುಪಿತು. ಅಲ್ಲಿಂದ ನಗರದತ್ತ ನಡೆದರು. ಮೊಹ್ಮದ ಭಕ್ತಿಯಾರನು ನಗರ ಹಾಗೂ ಕೋಟೆಯನ್ನು ಮುತ್ತಿದನು. ನಗರವಾಸಿಗಳು ಸಂಪೂರ್ಣ ಶಕ್ತಿಯನ್ನು ಕ್ರೋಡೀಕರಿಸಿ ಆಕ್ರಮಣಕಾರರ ಜೊತೆ ಹೋರಾಟ ನಡೆಸಿದರು. ಮುಂಜಾನೆಯಿಂದ ಸಾಯಂಕಾಲದವರೆಗೆ ಯುದ್ಧ ನಡೆಯಿತು. ನಗರ ನಿವಾಸಿಗರು ಮುಸಲ್ಮಾನರ ಒಂದು ಗುಂಪಿಗೆ ಗಾಯಗೊಳಿಸಿದರು. ಅವರನ್ನು ನಗರ ಹಾಗೂ ಕೋಟೆಯಿಂದ ಹೊರಗೆ ತಳ್ಳಿದರು.

ಕ್ರಿಶನ್ ನಗರದ ಪರಿಸ್ಥಿತಿ :

ಈ ನಗರದ ನಿವಾಸಿಗಳು ಬಿಲ್ಲುಗಾರಿಕೆಯಲ್ಲಿ ನಿಪುಣರಾಗಿದ್ದರು. ಇವರ ಬಿಲ್ಲುಗಳು ದೊಡ್ಡ ದೊಡ್ಡ ಖಾನೆಗಳುಳ್ಳವುಗಳಾಗಿದ್ದವು. ಇವರು ಭಲ್ಲೆಗಳನ್ನು ವಿರಳವಾಗಿ ಉಪಯೋಗಿಸುತ್ತಿದ್ದರು. ಯುದ್ಧವು ಪ್ರಾರಂಭವಾದ ರಾತ್ರಿಯಂದು ಅಲ್ಲಿಯೇ ತಂಗಿದನು. ಈ ರಾಜ್ಯದ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನಿಸಿದನು. ಅವನಿಗೆ ವಿಷಯ ವಿದಿತವಾಯಿತು. ಇಲ್ಲಿಂದ ಹದಿನೈದು ಮೈಲಿ ದೂರದಲ್ಲಿ ಕ್ರಿಶನ್ ಎಂಬ ಒಂದು ನಗರವಿದೆ. ಆ ನಗರದಲ್ಲಿ ೫೦ ಸಾವಿರ ಯುದ್ಧಪ್ರಿಯರು ಹಾಗೂ ಭಲ್ಲೆ ಹೊಡೆಯುವ ತುರುಕರು ಇರುತ್ತಾರೆ. ಇದೆ ನಗರದಲ್ಲಿ ಪ್ರತಿದಿನ ೧೫೦೦ ಕುದುರೆಗಳು ಮಾರಾಟವಾಗುತ್ತವೆ. ಬಂಗ್ಲಾ ಹಾಗೂ ಲಖ್ನೊತಿಯಲ್ಲಿ ಮಾರಾಟಕ್ಕೆ ಬರುವ ಕುದುರೆಗಳು ಇಲ್ಲಿಂದಲೇ ಖರೀದಿಸುತ್ತಾರೆ. ವ್ಯಾಪಾರಿಗಳು ಇಲ್ಲಿಂದಲೇ ಕೊಂಡುಕೊಳ್ಳುತ್ತಾರೆ.

ಮೊಹ್ಮದ್ ಭಕ್ತಿಯಾರನ ಮರುಳುವಿಕೆ :

ಕಷ್ಟಕರ ಮಾರ್ಗ ಯುದ್ಧದಲ್ಲಿ ತೊಡಗಿದ ಪ್ರಯುಕ್ತ ಮುಸಲ್ಮಾನರ ಸ್ಥಿತಿಯು ಬಹಳಷ್ಟು ಕೆಟ್ಟು ಹೋಯಿತು. ಇದರಿಂದಾಗಿ ಅವರು ವೈರಿಗಳೊಂದಿಗೆ ಯುದ್ಧಗೈಯುವ ಸ್ಥಿತಿಯಲ್ಲಿರಲಿಲ್ಲ. ಕಾರಣ ಅವರಿಗೆ ಹಿಂದಿರುಗುವುದೆ ಒಳ್ಳೆಯದೆಂದು ತಿಳಿದುಕೊಂಡರು. ತುಸು ರಾತ್ರಿಯುಳಿದಿರುವಾಗಲೇ ಈ ಸ್ಥಳದಿಂದ ರವಾನೆಯಾದರು. ಹಾದಿಯಲ್ಲಿ

ತಿಬ್ಬತ್ತಿನ ಪ್ರಜರು ಮುಸಲ್ಮಾನರಿಗೆ ಬಗೆ ಬಗೆಯ ತೊಂದರೆ ಕೊಟ್ಟರು. ಇದಲ್ಲದೆ ದವಸ ಹಾಗೂ ಮೇವು ಇವುಗಳ ಕೊರತೆಯಿಂದಾಗಿ ಅತ್ಯಂತ ವ್ಯಾಕುಲತೆ ಹಾಗೂ ಹಾಳಾದ ಸ್ಥಿತಿಯಲ್ಲಿ ತನ್ನ ತೊಂದರೆಗೀಡಾದ ಸೈನ್ಯದೊಂದಿಗೆ ಕಾಮರೂಪ ನಗರಕ್ಕೆ ಮರಳಿದನು.

ಕಷ್ಟವೇ ಕಷ್ಟ :

ಕಾಮರೂಪ ತಲುಪಿದ ನಂತರ ಭಕ್ತಿಯಾರನಿಗೆ ಇನ್ನೊಂದು ವಿಪತ್ತು ಎದುರಾಯಿತು. ಅವನು ಸೇತುವೆಯ ರಕ್ಷಣೆಗಾಗಿ ನಿಯಮಿಸಿದ ಇಬ್ಬರು ಸರದಾರರು ಅಲ್ಲಿ ಉಪಸ್ಥಿತರಿರಲಿಲ್ಲ. ತನಿಖೆಯ ನಂತರ ಗೊತ್ತಾಯಿತು. ಈರ್ವರು ಪರಸ್ಪರ ಜಗಳವಾಡಿ ಅಲ್ಲಿಂದ ಹೋಗಿ ಬಿಟ್ಟರು. ಅಲ್ಲಿಯ ನಗರ ನಿವಾಸಿಗಳಿಗೆ ಇವರೀರ್ವರು ಕೀಟಲೆ ಕೊಟ್ಟಿದ್ದರು. ಇದರಿಂದಾಗಿ ಕೋಪಗೊಂಡು ಸೇತುವೆಯ ಎರಡು ಖಾನೆ ನಷ್ಟಗೊಳಿಸಿದ್ದರು. ಈ ಸ್ಥಿತಿಯಲ್ಲಿ ನದಿಯನ್ನು ದಾಟುವುದು ದುಸ್ತರವಾಯಿತು. ಮೊಹ್ಮದ್ ಭಕ್ತಿಯಾರನು ತೊಂದರೆಗೀಡಾಗಿ ಚಿಂತಾಕ್ರಾಂತನಾದನು. ಕೊನೆಗೆ ಈ ನಿರ್ಣಯವಾಯಿತು. ಕಟ್ಟಿಗೆ ಹಾಗೂ ಹಗ್ಗವನ್ನು ತಯಾರಿಸಿದರು. ಅದರ ಸಹಾಯದಿಂದ ನದಿಯನ್ನು ದಾಟುವುದು. ಈ ವಸ್ತುಗಳನ್ನು ದೊರಕಿಸಿಕೊಳ್ಳಲು ವ್ಯಕ್ತಿಗಳನ್ನು ಓಡಿಸಿದರು. ಈ ಮಧ್ಯದಲ್ಲಿ ಸಂಪೂರ್ಣ ಸೈನ್ಯವು ಸಮೀಪದ ಎತ್ತರವಾದ ಮಂದಿರದಲ್ಲಿ ನೆಲೆಗೊಂಡಿತು.

ರಾಜ ಕಾಮರೂಪನ ಸಂಕಲ್ಪ :

ಮುಸಲ್ಮಾನರ ಸೈನ್ಯದ ಕೆಟ್ಟ ಪರಿಸ್ಥಿತಿ ಹಾಗೂ ಭಕ್ತಿಯಾರನ ವಿಪ್ಲವ (ದುಗುಡ) ಸುದ್ದಿ ಕಾಮರೂಪ ರಾಜನಿಗೆ ಮುಟ್ಟಿತು. ಅವನು ಈ ಅವಸರದ ಲಾಭ ಪಡೆಯಬೇಕೆಂಬ ಸಂಕಲ್ಪ ಮಾಡಿಕೊಂಡನು. ತನ್ನ ಸೈನ್ಯಕ್ಕೆ ಹಾಗೂ ಪ್ರಜರಿಗೆ ಆಜ್ಞೆ ನೀಡಿದನು. ಮುಸಲ್ಮಾನ ಜೊತೆಗೆ ಯುದ್ಧಭೂಮಿಯಲ್ಲಿ ಯುದ್ಧ ಮಾಡುವುದು ಆಪತ್ತು ಅವರನ್ನು ಗೆಲ್ಲುವುದು ಅಸಾಧ್ಯ ಕಾರಣ ಒಮ್ಮೆ ಮಂದಿರದ ಮೇಲೆ ದಾಳಿ ಮಾಡೋಣ, ಈ ಮಂದಿರದ ಬಾಗಿಲುಗಳನ್ನು ಮುಚ್ಚಿಬಿಡುವುದು. ಯಾರಿಗೂ ಹೊರಗಡೆ ಬಿಡಬಾರದು. ಹೀಗಾಗಿ ಎಲ್ಲಾ ಮುಸಲ್ಮಾನರು ಮಂದಿರದೊಳಗೆ ಹಸಿವು ನೀರಡಿಕೆಯಿಂದ ಒದ್ದಾಡಿ ಅಲ್ಲಿಯೇ ಮರಣ ಹೊಂದುವರು.

ನದಿ ದಾಟುವ ಯತ್ನ :

ಭಕ್ತಿಯಾರನಿಗೆ ರಾಜನ ಸ್ವಾರ್ಥ ಸಂಕಲ್ಪದ ಸುದ್ದಿ ತಲುಪಿತು. ಅವನು ತ್ವರೆಯಾಗಿ ತನ್ನ ಸೈನ್ಯದೊಂದಿಗೆ ಮಂದಿರದಿಂದ ಹೊರಗೆ ಬಂದನು. ನದಿಯ ದಡದಲ್ಲಿಯೆ ತಂಗಿದನು. ನದಿಯನ್ನು ದಾಟಲು ಉಪಾಯಗಳನ್ನು ಯೋಚಿಸತೊಡಗಿದನು. ಈ ಮಧ್ಯದಲ್ಲಿ ಓರ್ವ ಸೈನಿಕನು ನದಿಯಲ್ಲಿ ಹಾರಿದನು. ಮತ್ತು ಈಜುತ್ತ ನದಿಯನ್ನು

ದಾಟಿದನು. ಎರಡನೆಯ ದಂಡೆಗೆ ತಲುಪಿದನು. ಇದನ್ನು ಕಂಡ ಮುಸಲ್ಮಾನರು ಅಂದಾಜು ಮಾಡಿದರು. ನದಿಯು ಆಳವಿಲ್ಲ. ಕಾಲು ನಡಿಗೆಯಿಂದ ನದಿಯನ್ನು ದಾಟಬಹುದಾದಷ್ಟು ನೀರು ಇದೆ. ಸೇತುವೆ ಇಲ್ಲದೆ ನದಿಯನ್ನು ದಾಟಬಹುದು.

ಸೈನ್ಯವು ನದಿಯಲ್ಲಿ ಮುಳುಗುವಿಕೆ :

ಮುಸಲ್ಮಾನರು ಈ ಸಮಯದಲ್ಲಿ ವಿಚಿತ್ರ ಆಪತ್ತಿನ ಸ್ಥಿತಿಯಲ್ಲಿದ್ದರು. ವೈರಿಯು ಇವರನ್ನು ಬೆನ್ನಟ್ಟುವನೆಂಬ ಭಯವಿತ್ತು. ಕಾರಣ ಇದನ್ನು ಯೋಚಿಸಿ ಸಂಪೂರ್ಣ ಸೈನ್ಯವು ನದಿಯಲ್ಲಿ ಹಾರಿತು. ಮಹಮ್ಮದ್ ಭಕ್ತಿಯಾರನ್ನೊಳಗೊಂಡು ನೂರು ಜನ ಸೈನಿಕರು ಸುರಕ್ಷಿತವಾಗಿ ಎರಡನೆಯ ದಂಡೆಗೆ ತಲುಪಿದರು. ಆದರೆ ಉಳಿದ ಎಲ್ಲಾ ಸೈನಿಕರು ನದಿಯ ನಿರ್ದಯಿ ಅಲೆಗಳು ಮರಣದ ಅಪ್ಪುಗೆಯನ್ನುಗೈದವು. ಈ ಮರಣ ಎಂದೆಂದೂ ಮರೆಯದ ದುಃಖ ತುಂಬಿದ ಘಟನೆಯಾಗಿತ್ತು. ಈ ಘಟನೆಯ ಮೇಲೆ ಎಷ್ಟೊಂದು ವ್ಯಥೆಗೊಂಡರೂ ಕಡಿಮೆ ಇದೆ.

ಮಹಮ್ಮದ ಭಕ್ತಿಯಾರನ ರೋಗ :

ಭಕ್ತಿಯಾರ ಖಿಲ್ಜಿ ತನ್ನ ಸಂಗಾತಿಗಳೊಡನೆ ದೇವಕೋಟೆ ತಲುಪಿದ ಅವನಿಗೆ ತನ್ನ ಯುದ್ಧದ ಸೋಲು ಹಾಗೂ ತನ್ನ ಸೈನ್ಯದ ನಾಶದ ಬಗ್ಗೆ ಆಳವಾದ ದುಃಖ ಇತ್ತು. ಈ ದುಃಖದಲ್ಲಿಯೇ ನವಿದು ನವಿದು ರೋಗಕ್ಕೊಳಗಾದನು. ಇದೇ ಸಮಯದಲ್ಲಿಯೇ ಸುಲ್ತಾನ ಮೋಯಿಜೊದ್ದೀನ್ ಸಾಮನ ಕೊಲೆ ಘಟನೆ ಸಂಭವಿಸಿತು. ಮೊಹ್ಮದ ಭಕ್ತಿಯಾರನು ತನ್ನ ರುಗ್ಣಾವಸ್ಥೆಯಲ್ಲಿ ಪದೆ ಪದೆ ಇದು ಹೇಳುತ್ತಿದ್ದನು. ಸೋಲಿನ ಮೋಯಿಜೊದ್ದೀನನ ಕೊಲೆಯ ಕಾರಣಗಳಿಂದ ಕಾಲವು ನನ್ನಿಂದ ಅವಿಶ್ವಾಸ ಪ್ರಕಟಿಸುತ್ತದೆ.

ಮೊಹಮ್ಮದ್ ಭಕ್ತಿಯಾರನ ಮರಣ :

ಮೊಹ್ಮದ್ ಭಕ್ತಿಯಾರನ ಸೈನ್ಯದ ನಾಶದ ಸುದ್ದಿಯು ಇಡಿ ದೇಶದಲ್ಲಿಯೆ ಹಬ್ಬಿತು. ನದಿಯಲ್ಲಿ ಮುಳುಗಿ ಮರಣ ಹೊಂದಿದವರ ಬಂಧು ಬಳಗದವರು ದೇವಕೋಟೆಗೆ ಬಂದು ಭಕ್ತಿಯಾರನಿಗೆ ಮನಬಂದಂತೆ ಬೈದರು. ಇದನ್ನು ಕೇಳಿದ ಭಕ್ತಿಯಾರನು ಖಿನ್ನ ಮನಸ್ಕನಾಗಿ ದುಃಖಕ್ಕೊಳಗಾದನು. ಇದರಿಂದ ರೋಗ ಉಲ್ಬಣಗೊಂಡಿತು. ೬೦೭ ಹಿಜರಿಯಲ್ಲಿ ಮರಣ ಹೊಂದಿದನು.

ನಿಸರ್ಗ ಮರಣವೆ ಅಥವಾ ಕೊಲೆಯೆ? :

"ತಖ್ವಾತೆನಾಶಿರಿಯಲ್ಲಿ ಉಲ್ಲೇಖವಾಗಿದೆ. ಭಕ್ತಿಯಾರನು ನಿಸರ್ಗದ ಮರಣಕ್ಕೊಳಗಾಗಲಿಲ್ಲ. ಆದರೆ ಅವನಿಗೆ ಕೊಲೆ ಮಾಡಿದರು" ಅಲಿ ಮರ್ದಾನನಿಗೆ ಈ ಸುದ್ದಿ ಮುಟ್ಟಿದಾಗಲೇ ದೇವಕೋಟೆಯನ್ನು ತಲುಪಿ ಬಕ್ತಿಯಾರನ ಮನೆಯೊಳಗೆ

ಹೋಗಿ ಮಲಗಿದ್ದ ಭಕ್ತಿಯಾರನನ್ನು ಕಂಡು ಅವನ ಮೈಮೇಲಿನ ಚಾದರ ಸರಿಸಿ ಕಠಾರಿಯಿಂದ ಹೊಟ್ಟೆಯಲ್ಲಿ ಇರಿದನು. ಒಟ್ಟಾರೆ ಘಟನೆಯು ಏನೆ ಇರಲಿ ಮೊಹಮ್ಮದ್ ಭಕ್ತಿಯಾರನ ಮರಣದ ನಂತರ ಅವನ ಪಾರ್ಥೀವ ಶರೀರವನ್ನು ಬಿಹಾರ ರಾಜ್ಯಕ್ಕೆ ತಂದು ಅಲ್ಲಿಯೇ ದಫನ್ ಮಾಡಿದರು.

ಮೊಹ್ಮದ್ ಭಕ್ತಿಯಾರನ ನಂತರ ಈ ರಾಜ್ಯದ ಮೇಲೆ ದೆಹಲಿಯ ಬಾದಶಹರು ಆಡಳಿತವನ್ನು ಕೈಕೊಂಡರು. ಅವರ ಚರಿತ್ರೆಯು ದಿಲ್ಲಿಯ ಬಾದಶಹರ ಚರಿತ್ರೆಯಲ್ಲಿ ಉಲ್ಲೇಖಗೊಂಡಿದೆ.

■

*

೨. ಸುಲ್ತಾನ ಫಕ್ರುದ್ದೀನ್

ಮಲಿ ಫಕ್ರುದ್ದೀನ್ ಬಾಂಗ್ಲಾದ ಬಾದಶಹ ಬದರಖಾನನ ಶಸ್ತ್ರಧಾರಿಯಾಗಿದ್ದನು. ಅವನ ಖಡ್ಗವು ಇವನ ಕೈಯಲಿರುತ್ತಿತ್ತು. ಬದರಖಾನನು ಸುನಾರಗಾಂವುನಲ್ಲಿಯೇ ಮೃತಪಟ್ಟನು. ೭೩೯ ಹಿಜರಿಯಲ್ಲಿ ಫಕ್ರುದ್ದೀನನು ಖದರಖಾನನ ಸರ್ವ ಸಂಪತ್ತು ಹಾಗೂ ಆಡಳಿತವನ್ನು ಸ್ವಾಧೀನಪಡಿಸಿಕೊಂಡ ಸುಲ್ತಾನ ಫಕ್ರುದ್ದೀನನೆಂಬ ಹೆಸರಿನಿಂದ ಖ್ಯಾತಗೊಂಡನು. ಹಾಗೂ ರಾಜ್ಯದಲ್ಲಿ ತನ್ನದೆ ಆದ ಪ್ರಶಂಶನೀಯ ಪ್ರವಚನ ಹಾಗೂ ತನ್ನ ಹೆಸರಿದ್ದ ನಾಣ್ಯವನ್ನು ಜಾರಿಗೆ ತಂದನು.

ಖನ್ನೂತಿಯ ಒಡೆಯನಾದ ಖದರಖಾನನ ದಾಳಿ ಹಾಗೂ ಫಕ್ರೋದ್ದೀನನ ಪಲಾಯನ:

ಸುಲ್ತಾನ ಮೊಹ್ಮದ್ ತಘಲಕ್‌ನಿಗೆ ಈ ಸುದ್ದಿ ತಲುಪಿತು. ಅವನು ಖನ್ನೂತಿಯ ಅಧಿಕಾರಿ ಖದರ್‌ಖಾನನಿಗೆ ಏಜಾಜೊದ್ದೀನನನ್ನು ಬಕ್ಕಿ ಅಮೀರ್ ಕೋಹ್ ಹಾಗೂ ಇತರ ಪ್ರಸಿದ್ಧ ಸರದಾರರೊಡನೆ ಪಕ್ರುದ್ದೀನನನ್ನು ಸದೆಬಡೆಯಲು ಕಳುಹಿಸಿಕೊಟ್ಟನು. ಇತ್ತಂಡಗಳಲ್ಲಿ ಯುದ್ಧ ನಡೆಯಿತು. ಫಕ್ರುದ್ದೀನನು ಸೋತು ಯುದ್ಧ ಭೂಮಿಯಿಂದ ಓಡಿ ಹೋಗಿ ಬಹುದೂರದ ಅಡವಿಯಲ್ಲಿ ತಲೆ ಮರಿಸಿಕೊಂಡನು. ಫಕ್ರುದ್ದೀನನ ಸರ್ವ ಸಂಪತ್ತು, ಆನೆ ಕುದುರೆಗಳೆಲ್ಲವು ಖದರಖಾನನ ಸ್ವಾಧೀನವಾದವು. ಇವನು ಇಲ್ಲಿಯೇ ಉಳಿದುಕೊಂಡನು. ಉಳಿದ ಎಲ್ಲಾ ಮಾಂಡಲೀಕರು ತಮ್ಮ ತಮ್ಮ ಜಾಗಿ‍ರುಗಳಿಗೆ ಮರಳಿದರು.

ಪುನಃ ಪಟ್ಟಾಭಿಷೇಕ :

ಖದರಖಾನನು ತಕ್ಕಮಟ್ಟಿಗೆ ಹಣವನ್ನು ಸಂಗ್ರಹಿಸತೊಡಗಿದನು. ಯಾಕೆಂದರೆ ಅವನು ದೆಹಲಿಯನ್ನು ತಲುಪಿದರೆ ಬಾದಶಹನ ಮುಂದೆ ಹಣದ ರಾಶಿಯನ್ನೆ ಹಾಸಬಲ್ಲೆ, ಇದರಿಂದ ತನ್ನ ಕಾರ್ಯ ಚತುರತೆಯನ್ನು ಪ್ರಕಟಿಸುವೆ. ಮಲಿಕ್ ಫಕ್ರುದ್ದೀನನಿಗೆ ಈ ಸುದ್ದಿ ಮುಟ್ಟಿತು. ಇವನು ರಹಸ್ಯವಾಗಿ ತನ್ನ ಸಂದೇಶವಾಹಕರನ್ನು

ಸ್ವಾಧೀನಪಡಿಸಿಕೊಂಡನು. ಕೆಲ ದಿನಗಳು ಕಳೆದ ನಂತರ ಮಳೆಗಾಲ ಪ್ರಾರಂಭವಾಯಿತು. ಫಿರೋಜ್‌ಶಾಹನು ದಿಲ್ಲಿಗೆ ಮರಳಿದನು.

ಫಿರೋಜಶಾಹನ ಸೇವೆಯಲ್ಲಿ ಕಾಣಿಕೆ :

೭೫೫ ಹಿಜರಿಯಲ್ಲಿ ಸುಲ್ತಾನ ಶಮ್ಸುದ್ದೀನನು ರಸಭರಿತ ನುಡಿಯುಳ್ಳ ತನ್ನ ಸಂದೇಶವಾಹಕರ ಕೈ ಫಿರೋಜಶಾಹನ ಸೇವೆಯಲ್ಲಿ ಕಾಣಿಕೆಯನ್ನು ರವಾನಿಸಿದನು. ಆ ಸಂದೇಶವಾಹಕರನ್ನು ಫಿರೋಜಶಾಹನು ಉತ್ತಮ ರೀತಿಯಿಂದ ನಡೆದುಕೊಂಡನು. ಅಲ್ಲದೆ ಅವರಿಗೆ ಬಹುಮಾನ ಹಾಗೂ ಉಡುಗೊರೆಗಳನ್ನು ಕೊಟ್ಟು ಮರುಳುವಂತೆ ಅಪ್ಪಣೆ ನೀಡಿದನು.

ಮರಣ :

೭೫೯ ಹಿಜರಿಯಲ್ಲಿ ಸುಲ್ತಾನ ಶಮ್ಸುದ್ದೀನನು ಎರಡನೆಯ ಸಲ ಮಲಿಕ ತಾಜುದ್ದೀನ್‌ನಿಂದ ಬಹಳಷ್ಟು ಬೆಲೆಯುಳ್ಳ ಉಡುಗೊರೆಗಳನ್ನು ಫಿರೋಜಶಾಹನಿಗೆ ಕೊಡ ಮಾಡಲು ದಿಲ್ಲಿಗೆ ರವಾನಿಸಿದನು. ಈ ಸಲವು ಕ್ಷಮಿಯ ಸಂದೇಶವಾಹಕರ ಜೊತೆಗೆ ಒಳ್ಳೆಯ ವ್ಯವಹಾರದಿಂದ ವರ್ತಿಸಿದನು. ಕೆಲ ದಿನಗಳ ನಂತರ ಮಲಿಕ ಸೈಫುದ್ದೀನಶಾಹನ ಕೈಯಲ್ಲಿ ತಾಜಿ ಹಾಗೂ ತುರ್ಕಿ ಕುದುರೆ ಹಾಗೂ ಬೆಲೆಯುಳ್ಳ ಉಡುಗೊರೆ ಕೊಟ್ಟು ಸುಲ್ತಾನ ಶಮ್ಸುದ್ದೀನನಿಗೆ ಸಲ್ಲಿಸುವಂತೆ ಕಳುಹಿಸಿದನು. ಆದರೆ ಮಲಿಕ ಸೈಫುದ್ದೀನ ಹಾಗೂ ಮಲಿಕ ತಾಜುದ್ದೀನ್‌ನರು ಇನ್ನು ಹಾದಿಯಲ್ಲಿರುವಾಗಲೇ ಸುಲ್ತಾನ ಶಮ್ಸುದ್ದೀನನು ಮೃತಪಟ್ಟನು.

ಸುಲ್ತಾನ ಶಮ್ಸುದ್ದೀನನ ಆಡಳಿತಾವಧಿಯು ೧೬ ವರ್ಷ ಹಾಗೂ ಕೆಲವು ತಿಂಗಳದಾಗಿತ್ತು.

■

*

೫. ಸಿಕಂದರಶಾಹ ತಂದೆ ಶಮ್ಸುದ್ದೀನ

ಸುಲ್ತಾನ ಶಮ್ಸುದ್ದೀನನ ಮರಣದ ನಂತರ ಮೂರನೆಯ ದಿನ ಮಂತ್ರಿಗಳ ಹಾಗೂ ದರ್ಬಾರಿನ ಸರದಾರರ ಸಲಹೆ ಸೂಚನೆಗಳ ಮೇರೆ ಮೃತನ ಹಿರಿಯ ಮಗನಾದ ಸಿಕಂದರಶಾಹನು ಪಟ್ಟವನ್ನೇರಿದನು. ಸಿಕಂದರಶಾಹನು ಸತ್ಯವಾದಿ ಹಾಗೂ ನ್ಯಾಯಮೂರ್ತಿ ಬಾದಶಹನಾಗಿದ್ದನು. ಪ್ರತಿ ವ್ಯವಹಾರದಲ್ಲಿಯೂ ಪಿರೋಜಶಾಹನ ಅನುಮತಿಯನ್ನೇ ಪಡೆದುಕೊಳ್ಳುತ್ತಿದ್ದನು. ಪಟ್ಟಾಭಿಷೇಕವಾದ ನಂತರ ೫೦ ಆನೆಗಳು ಹಾಗೂ ಅಮೂಲ್ಯವಾದ ಉಡುಗೊರೆಗಳನ್ನು ಶ್ರದ್ಧೆಯಿಂದ ರವಾನಿಸಿದನು.

ಫಿರೋಜಶಾಹನ ದಂಡಯಾತ್ರೆ :

೭೬೦ ಹಿಜರಿಯಲ್ಲಿ ಸುಲ್ತಾನ ಫಿರೋಜಶಾಹನು ಬಂಗ್ಲಾವನ್ನು ವಶಪಡಿಸಿಕೊಳ್ಳುವ ಸಂಕಲ್ಪ ಮಾಡಿದನು. ಈ ಉದ್ದೇಶವನ್ನು ನೆರವೇರಿಸಲು ಒಂದು ಮಹಾಸೈನ್ಯಪಡೆಯನ್ನು ತೆಗೆದುಕೊಂಡು ಖನ್ನೂತಿಯ ಕಡೆಗೆ ಪ್ರಯಾಣ ಬೆಳೆಸಿದನು. ಸುಲ್ತಾನ ಸಿಕಂದರನಿಗೆ ಈ ಸುದ್ದಿಯು ತಲುಪಿತು. ತಕ್ಷಣವೇ ಅವನು ಕೋಟೆಯನ್ನು ಭದ್ರಗೊಳಿಸಿಕೊಂಡನು. ಫಿರೋಜಶಾಹನು ಮುಝುರಾಬಾದ ತಲುಪಿದಾಗ ಸಿಕಂದರ ಶಾಹನಲ್ಲಿ ಇಷ್ಟು ಧೈರ್ಯವಿರಲಿಲ್ಲ. ಫಿರೋಜಶಾಹನ ಮುಖಾಮುಖಿಯಾಗಿ ಹೋರಾಡಲು ಪ್ರಯುಕ್ತ ಪ್ರತಿವರ್ಷ ಕಾಣಿಕೆಯನ್ನು ಸಲ್ಲಿಸುವ ವಾಗ್ದಾನ ಗೈದು ಫಿರೋಜಶಾಹನ ಕೈದಿಯಾಗುವ ಆಪತ್ತಿನಿಂದ ಉಳಿದುಕೊಂಡನು. ಅವನನ್ನು ತನ್ನ ರಾಜಧಾನಿಯಿಂದ ಬೀಳ್ಕೊಟ್ಟನು. ಫಿರೋಜಶಾಹನು ಇನ್ನೂ ಹಾದಿಯಲ್ಲಿರುವಾಗಲೇ ಸುಲ್ತಾನ ಸಿಕಂದರನು ೩೭ ಆನೆಗಳು ಹಾಗೂ ಅಮೂಲ್ಯವಾದ ಉಡುಗೊರೆಗಳನ್ನು ಬಾದಶಹನ ಸೇವೆಯಲ್ಲಿ ಕಳುಹಿಸಿದನು. ಹಾಗೂ ಕ್ಷಮೆಯನ್ನು ಯಾಚಿಸಿದನು. ಇದರ ತರುವಾಯ ಸಿಕಂದರ ಶಾಹನು ತನ್ನ ತಂದೆಯ ಹಾಗೆ ರೀತಿನೀತಿಗಳೊಳಗಾಗಿ ಭೋಗವಿಲಾಸದಲ್ಲಿ ಜೀವನವನ್ನು ಕಳೆದನು. ಸಿಕಂದರಶಾಹನ ಆಡಳಿತವು ೯ ವರ್ಷ ಹಾಗೂ ಕೆಲ ತಿಂಗಳುಗಳಾಗಿದ್ದವು.

■

*

೬. ಗಿಯಾಸುದ್ದೀನ ತಂದೆ ಸಿಕಂದರಶಾಹ

ಸಿಕಂದರಶಾಹನ ಮರಣದ ನಂತರ ಅವನ ಪುತ್ರ ಗಿಯಾಸುದ್ದೀನನು ತಂದೆಯ ಸಿಂಹಾಸನವನ್ನೇರಿದನು. ಅವನು ಕೂಡ ತಂದೆ ಹಾಗೂ ತಾತನಂತೆ ಜೀವನದ ರೀತಿ ನೀತಿಗಳನ್ನೇ ಅವಲಂಬಿಸಿ ಭೋಗವಿಲಾಸದಲ್ಲಿ ಕಳೆದನು. ಇವನು ೭೭೫ ಹಿಜರಿಯಲ್ಲಿ ನಿಧನವಾದನು. ಗಿಯಾಸುದ್ದೀನನ ಆಡಳಿತಾವಧಿಯು ೭ ವರ್ಷ ಕೆಲ ತಿಂಗಳವಾಗಿತ್ತು.

■

*

೭. ಸುಲ್ತಾನುಸ್ಸಲಾತೀನ ತಂದೆ ಗಿಯಾಸುದ್ದೀನ

ಸುಲ್ತಾನ ಗಿಯಾಸುದ್ದೀನನ ಮರಣದ ನಂತರ ಸರದಾರರು ಹಾಗೂ ದರ್ಬಾರಿನ ಸದಸ್ಯರು ಈತ ಮಗನಿಗೆ ಸುಲ್ತಾನುಸ್ಸಲಾತೀನನೆಂಬ ಬಿರುದು ಕೊಟ್ಟು ಪಟ್ಟಾಭಿಷೇಕ ಮಾಡಿದರು. ಈ ಬಾದಶಹನು ಅತಿ ಸತ್ಯವಂತ, ಶೂರ ಹಾಗೂ ಪ್ರಜಾ ಪಾಲಕನಾಗಿದ್ದನು ಇವನ ಆಡಳಿತಾಧಿಕಾರಿ (ಸರದಾರರು) ಹಾಗೂ ಮಂತ್ರಿವರ್ಯರು ಈತನ ಕಾರ್ಯ ಚತುರತೆ ಹಾಗೂ ಬುದ್ಧಿವಂತಿಕೆಯಿಂದಾಗಿ ಸದಾ ಸಾವಧಾನವಾಗಿಯೇ ಇರುತ್ತಿದ್ದರು. ಎಂದೂ ಅನುಚಿತವಾದ ಕಾರ್ಯವನ್ನು ಮಾಡುತ್ತಿರಲಿಲ್ಲ. ಸುಲ್ತಾನುಸ್ಸಲಾತೀನನ ಸ್ವಭಾವ ಹಾಗೂ ಗುಣಲಕ್ಷಣಗಳಿಂದ ತನ್ನ ವ್ಯಕ್ತಿತ್ವವನ್ನು ಸರ್ವರು ಮೆಚ್ಚುವಂತೆ ರೂಪಿಸಿಕೊಂಡಿದ್ದನು. ಅವನು ಇಡೀ ಜೀವನದಲ್ಲಿ ಎಂದೂ ನಡೆತೆಗೆ ಅಥವ ಸದ್ಗುಣಕ್ಕೆ ವಿರೋಧವಾದ ಕಾರ್ಯವನ್ನು ಗೈದು ಆಕ್ಷೆಪಣೆಗೊಳಗಾಗಲಿಲ್ಲ. ಅಕ್ಕ ಪಕ್ಕದ ರಾಜರು ಈ ಬಾದಶಹನ ಆಜ್ಞಾಪಾಲಕರಾಗಿದ್ದರು. ಸರಿಯಾದ ಸಮಯಕ್ಕೆ ಭೂಕಂದಾಯವನ್ನು ಸಲ್ಲಿಸುತ್ತಿದ್ದರು. ಇದರ ಅಂಗವಾಗಿ ಎಂದೂ ವಿಳಂಬಗೈಯಲಿಲ್ಲ. ಸುಲ್ತಾನುಸ್ಸಲಾತೀನನು ೭೮೫ ಹಿಜರಿಯಲ್ಲಿ ಮೃತಪಟ್ಟನು. ಈತನ ಆಡಳಿತಾವಧಿಯು ಹತ್ತು ವರ್ಷವಾಗಿತ್ತು.

■

ಸೈನಿಕರಲ್ಲಿಗೆ ಕಳುಹಿಸಿಕೊಟ್ಟನು. ಅವರ ಜೊತೆ ಒಳಸಂಚು ನಡೆಸಿದನು. ಫಕ್ರುದ್ದೀನನು ಸೈನಿಕರೊಂದಿಗೆ ಈ ಕರಾರು ಮಾಡಿಕೊಂಡನು. "ಬಂದವಸರ ನಾನು ಖದರಖಾನನಿಗೆ ಯುದ್ಧದಲ್ಲಿ ಬಂದಿ ಮಾಡಿಕೊಂಡರೆ ಅವನು ಶೇಖರಿಸಿದ ಹಣವನ್ನೆಲ್ಲ ಸೈನಿಕರಲ್ಲಿ ಹಂಚಿಬಿಡುವೆ" ಆ ನಂತರ ಫಕ್ರುದ್ದೀನನು ತನ್ನ ಸೈನಿಕರೊಂದಿಗೆ ಅಡವಿಯಿಂದ ಹೊರಗೆ ಬಂದು ಸುನಾರಗಾಂವುದತ್ತ ಪ್ರಯಾಣ ಬೆಳಸಿದ. ಅತ್ತ ಕಡೆ ದ್ರೋಹಿ ಸರದಾರರು ಖದರಖಾನನ ಕೊಲೆಗೈದರು ಹಾಗೂ ಸಂಪೂರ್ಣ ಹಣವನ್ನು ತೆಗೆದುಕೊಂಡು ಫಕ್ರುದ್ದೀನನ ಹತ್ತಿರ ಬಂದರು. ಹೀಗಾಗಿ ಬಂಗ್ಲಾ ರಾಜ್ಯವು ಫಕ್ರುದ್ದೀನನ ಕೈಸೇರಿತು.

ಸುನಾರ್‌ಗಾಂವು ರಾಜಧಾನಿ :

ಫಕ್ರುದ್ದೀನನು ಸೈನಿಕರೊಂದಿಗೆ ಮಾಡಿದ ಕರಾರಿನಂತೆ ಕೂಡಿಸಿದ ಹಣವನ್ನು ಸೈನಿಕರಲ್ಲಿ ಹಂಚಿದನು. ಫಕ್ರುದ್ದೀನನು ಸುನಾರ್‌ಗಾಂವುವನ್ನೆ ತನ್ನ ರಾಜಧಾನಿಯಾಗಿ ಮಾಡಿಕೊಂಡನು. ರಾಜ್ಯ ಕಾರಭಾರದಲ್ಲಿ ತೊಡಗಿದನು.

ಲಖ್ನೂತಿಯನ್ನು ಸ್ವಾಧೀನಪಡಿಸಿಕೊಳ್ಳುವ ಅಸಫಲ ಪ್ರಯತ್ನ :

ಫಕ್ರುದ್ದೀನನು ಮುಖಲಿಸ್ ಹೆಸರಿನ ತನ್ನ ಗುಲಾಮನಿಗೆ ಲಖ್ನೂತಿಯನ್ನು ಸ್ವಾಧೀನಪಡಿಸಿಕೊಳ್ಳಲು ನಿಯಮಿಸಿದನು. ಮುಖಲಿಸನು ದೊಡ್ಡ ಶೂರ ಸೈನಿಕರ ಪಡೆಯೊಂದಿಗೆ ಪ್ರಯಾಣ ಬೆಳೆಸಿದನು. ಅತ್ತ ಕಡೆ ಖದರಖಾನನ ಮಹಾದಂಡನಾಯಕ ಅಲಿ ಮುಬಾರಕನು ಹೋರಾಟಕ್ಕೆ ಎದುರಾಗಿ ಬಂದನು. ಇವನು ಅನೇಕ ಜನರನ್ನು ತನ್ನ ಜೊತೆ ಸೇರಿಸಿಕೊಂಡು ಮುಖಲಿಸನ ಜೊತೆಗೆ ಯುದ್ಧಗೈದನು. ಅಲಿಮುಬಾರಕನಿಗೆ ಜಯ ದೊರೆಯಿತು. ಇವನು ಸುಲ್ತಾನ ಮೊಹ್ಮದ ತಗಲಖನಿಗೆ ಜಯಪತ್ರಿಕೆ ಹಾಗೂ ಇದರ ಜೊತೆಗೆ ಕೋರಿಕೆಯ ಅರ್ಜಿಯನ್ನು ರವಾನಿಸಿದನು. "ತಮ್ಮ ಅಪ್ಪಣೆಯಾದರೆ ನಾನು ಲಖ್ನೂತಿಯ ಹೊಣೆಯನ್ನು ಎತ್ತಿ ಹಿಡಿಯುವೆನು" ಮೊಹ್ಮದ್ ತುಘಲಕನಿಗೆ ಅಲಿ ಮುಬಾರಕನ ಬಗ್ಗೆ ಹೆಚ್ಚಿನ ಮಾಹಿತಿ ಇರಲಿಲ್ಲ. ಪ್ರಯುಕ್ತ ಅಲಿಮುಬಾರಕನ ಯಾಚಿಕೆಯನ್ನು ಅಲಕ್ಷ್ಯಗೈದು ಉತ್ತರಿಸಲಿಲ್ಲ. ದಿಲ್ಲಿಯ ಆರಕ್ಷಕ ಯೂಸುಫನಿಗೆ ಲಖ್ನೂತಿಯ ಆಡಳಿತಗಾರನೆಂದು ನೇಮಿಸಿ ರವಾನಿಸಿದನು.

ಲಖ್ನೂತಿಯಲ್ಲಿ ಕ್ರಾಂತಿ :

ಯುಸುಫನು ಲಖ್ನೂತಿ ತಲುಪಿದಾಕ್ಷಣವೇ ಮೃತಗೊಂಡನು. ಹೀಗಾಗಿ ಲಖ್ನೂತಿಯ ರಾಜ್ಯಭಾರವು ತನ್ನಿಂದ ತಾನೆ ಅಲಿ ಮುಬಾರಕನ ಸ್ವಾಧೀನವಾಯಿತು. ಅವನು ತನ್ನಷ್ಟಕ್ಕೆ ತಾನೆ "ಸುಲ್ತಾನ್ ಅಲ್ಲಾವುದ್ದೀನ್" ಎಂಬ ಹೆಸರಿನಿಂದ ಪ್ರಚುರಪಡಿಸಿದನು. ಈ ಸಂದರ್ಭದಲ್ಲಿಯೇ ಲಖ್ನೂತಿಯ ಅಕ್ಕಪಕ್ಕದ ಸರದಾರ ಮಲಿಕ ಇಲಿಯಾಸನು ಅನುಭವವುಳ್ಳ ಸೈನಿಕರೊಂದಿಗೆ ಲಖ್ನೂತಿಯ ಮೇಲೆ ದಾಳಿ

ಮಾಡಿದನು. ಇವನು ಸುಲ್ತಾನ ಅಲಾವುದ್ದೀನನನ್ನು ಕೊಲೆ ಮಾಡಿ ರಾಜ್ಯವನ್ನು ಸ್ವಾಧೀನಪಡಿಸಿಕೊಂಡು ಸುಲ್ತಾನ್ ಶಮ್ಸುದ್ದೀನನ ಹೆಸರಿನಿಂದ ಆಡಳಿತ ಮಾಡತೊಡಗಿದನು.

ಫಕ್ರುದ್ದೀನನ ಕೊಲೆ :

ಸನ್ ೭೪೧ ಹಿಜರಿಯಲ್ಲಿ ಸುಲ್ತಾನ ಶಮ್ಸುದ್ದೀನನು ಸುನಾರಗಾಂವು ಮೇಲೆ ದಾಳಿಗೈದನು. ಸುಲ್ತಾನ್ ಫಕ್ರುದ್ದೀನನಿಗೆ ಜೀವ ಸಹಿತ ಬಂಧಿಸಿ ಲಖ್ನೌತಿಗೆ ತೆಗೆದುಕೊಂಡು ಹೋಗಿ ಅಲ್ಲಿ ಸುಲ್ತಾನ ಫಕ್ರುದ್ದೀನನಿಗೆ ಖಡ್ಗದಿಂದ ಕೊಲೆ ಮಾಡಿದನು.

ನಿಜಾಮುದ್ದೀನ್ ಅಹ್ಮದ್‌ಬಕ್ಷಿಯ ಹೇಳಿಕೆ :

ನಿಜಾಮುದ್ದೀನ್ ಅಹಮ್ಮದ ಬಕ್ಷಿಯು ತನ್ನ ಇತಿಹಾಸದಲ್ಲಿ ಇದು ಉಲ್ಲೇಖಿಸಿದ್ದಾನೆ. ಮಲಿಕ ಫಕ್ರುದ್ದೀನನ ಶಸ್ತ್ರಧಾರಿ ಇದ್ದನು. ಲಖ್ನೌತಿಯಲ್ಲಿ ಅವನು ತನ್ನ ಒಡೆಯನನ್ನೇ ಕೊಲೆ ಮಾಡಿ ಸ್ವತಃ ತಾನೆ ಬಾದಶಹನಾದನು. ಫಕ್ರುದ್ದೀನನು ಮುಖ್ಲಿಸ್‌ನೆಂಬ ಗುಲಾಮನನ್ನು ಲಖ್ನೌತಿಯನ್ನು ಗೆಲ್ಲಲು ಹೆಸರಿಸಿದನು. ಖದರಖಾನನ ದಂಡನಾಯಕ ಅಲಿಮುಬಾರಕನು ಮುಖ್ಲಿಸನ ಜೊತೆಗೆ ಸೆಣಸಿ ಸೋಲಿಸಿದನು. ಅವನ ಎಲ್ಲಾ ಸಾಮಾನು ಸರಂಜಾಮುಗಳನ್ನು ಸ್ವಾಧೀನಪಡಿಸಿಕೊಂಡನು. ಫಕ್ರುದ್ದೀನನಿಗೆ ಹೊಸತಾಗಿ ಆಡಳಿತವು ದೊರೆತುದರಿಂದ ನಗರವಾಸಿಗಳ ಮೇಲೆ ವಿಶ್ವಾಸವಿರಲಿಲ್ಲ. ಆದುದರಿಂದ ಅಲಿ ಮುಬಾರಕನ ಮೇಲೆ ಹಲ್ಲೆ ಹೂಡಿದರೂ ಅವನ ಕಿಡಿಗೇಡಿತನ ಅಳಿಸಲಿಲ್ಲ. ೭೪೯ ಹಿಜರಿಯಲ್ಲಿ ಫಕ್ರುದ್ದೀನನು ಲಖ್ನೌತಿಯ ಮೇಲೆ ದಾಳಿ ಮಾಡಿದನು. ಆದರೆ ಅಲಿ ಮುಬಾರಕನು ಇವನ ಜೊತೆ ಯುದ್ಧ ಮಾಡಿ ಸಹಜೀವ ಬಂಧಿಸಿ ತದನಂತರ ಕೊಲೆಗೈದನು. ಫಕ್ರುದ್ದೀನನ ಆಡಳಿತಾವಧಿಯು (೨) ವರ್ಷ ಕೆಲವು ತಿಂಗಳವಾಗಿತ್ತು.

■

*

೩. ಅಲಿ ಮುಬಾರಕನು ಸುಲ್ತಾನ ಅಲ್ಲಾವುದ್ದೀನನೆಂದು ಖ್ಯಾತಿಗೊಂಡನು

ಸುಲ್ತಾನ ಫಕ್ರುದ್ದೀನನನ್ನು ಕೊಲೆ ಮಾಡಿದ ನಂತರ ಅಲಿ ಮುಬಾರಕನು ಲಖ್ನೌತಿಯಲ್ಲಿ ಠಾಣೆಯನ್ನು ಕೂಡ್ರಿಸಿ ತಾನು ಬಂಗ್ಲಾದತ್ತ ಸಾಗಿದನು. ಕೆಲ ದಿನಗಳ ನಂತರ ಮಲಿಕ ಹಾಜಿ ಇಲಿಯಾಸನು ನೆಲೆಗೊಳಿಸಿದ ಹಾಜಿಪುರವು ಇಂದಿಗೂ ಅಸ್ತಿತ್ವದಲ್ಲಿದೆ. ಸೈನಿಕರೊಂದಿಗೆ ಒಡಗೂಡಿ ಲಖ್ನೌತಿ ಹಾಗೂ ಬಂಗ್ಲಾ ರಾಜ್ಯಗಳನ್ನು ಸ್ವಾಧೀನಪಡಿಸಿಕೊಂಡನು. ಅಲಿ ಮುಬಾರಕನನ್ನು ಕೊಲೆಗೈದನು. ಆತನ ಸ್ಥಳದಲ್ಲಿ ಸುಲ್ತಾನ ಶಮ್ಸುದ್ದೀನನೆಂಬ ನಾಮದಿಂದ ಸ್ವಂತ ಪಟ್ಟವನ್ನೇರಿದ ಅಲಿ ಮುಬಾರಕನ ಆಡಳಿತಾವಧಿ ೫ ವರ್ಷ ೫ ತಿಂಗಳು ಇದೆ.

■

*

೪. ಹಾಜಿ ಇಲಿಯಾಸ ಖ್ಯಾತ ಸುಲ್ತಾನ ಶಮ್ಸುದ್ದೀನ

ಸುಲ್ತಾನ ಅಲ್ಲಾವುದ್ದೀನನ ಕೊಲೆ ನಂತರ ಲಖ್ನೋತಿ ಹಾಗೂ ಬಂಗ್ಲಾದ ಮೇಲೆ ಹಾಜಿ ಇಲಿಯಾಸನು ತನ್ನ ಸರದಾರರ ಸಲಹೆಯಂತೆ ತನ್ನ ಹೆಸರನ್ನು ಶಮ್ಸುದ್ದೀನ ಭಂಗ್ರಾ ಎಂದು ಇಟ್ಟುಕೊಂಡನು. ಭಂಗ್ರಾ ಶಬ್ದದ ಬಳಕೆಯು ಹೇಗಾಯಿತ್ತೆನ್ನುವುದು ಗೊತ್ತಾಗುತ್ತಿಲ್ಲವೆಂಬುದನ್ನು ಇತಿಹಾಸಕಾರ ಫರಿಶ್ತಾನು ಉಲ್ಲೇಖಿಸುತ್ತಾನೆ. ಪಟ್ಟಾಭಿಷೇಕದ ಕೆಲ ದಿನಗಳ ನಂತರ ಶಮ್ಸುದ್ದೀನನು ಜಾಜ ನಗರದತ್ತ ತನ್ನ ಗಮನವನ್ನು ಹರಿಸಿದನು. ಈ ರಾಜ್ಯವು ಬಕ್ತಿಯಾರನ ನಂತರ ಮುಸಲ್ಮಾನರ ಹತೋಟಿಯಲ್ಲಿರಲಿಲ್ಲ. ಶಮ್ಸುದ್ದೀನನು ಜಾಜ ನಗರದಿಂದ ದೊಡ್ಡ ಆನೆಗಳನ್ನು ಪಡೆದುಕೊಂಡು ಮರಳಿದನು.

ಫಿರೋಜಶಾಹನ ದಾಳಿ :

೧೩ ವರ್ಷ ೩ ತಿಂಗಳವರೆಗೆ ಸುಲ್ತಾನ ಶಮ್ಸುದ್ದೀನನು ನಿಶ್ಚಿಂತನಾಗಿ ಆಡಳಿತವನ್ನು ನಡೆಸಿದನು. ದಿಲ್ಲಿಯ ಬಾದಶಹರು ಇವನ ಕಡೆಗೆ ಗಮನವೇ ಕೊಡಲಿಲ್ಲ. ಹಾಗೂ ಯಾವುದೇ ಬಗೆಯ ಟೀಕೆ ಟಿಪ್ಪಣೆಗಳನ್ನು ಮಾಡಲಿಲ್ಲ. ಅಲ್ಲದೆ ಈ ರಾಜ್ಯದ ಮೇಲೆ ಹಲ್ಲೆ ನಡೆಸುವ ಪ್ರಯತ್ನವನ್ನು ಮಾಡಲಿಲ್ಲ. ಫಿರೋಜಶಾಹನು ಹತ್ತನೆಯ ಶವ್ವಾಲ್ ೭೫೪ ಹಿಜರಿಯಲ್ಲಿ ದಿಲ್ಲಿಯಿಂದ ದೊಡ್ಡ ಸೈನ್ಯ ತೆಗೆದುಕೊಂಡು ಲಖ್ನೋತಿಯ ಮೇಲೆ ದಾಳಿ ಮಾಡಿದನು. ಈ ಸುದ್ದಿ ಶಮ್ಸುದ್ದೀನನಿಗೆ ಮುಟ್ಟಿದ ಕೂಡಲೇ ಅಕ್ನಾಲಾ ಕೋಟೆಯಲ್ಲಿ ಆಶ್ರಯ ಪಡೆದನು. ಫಿರೋಜಶಾಹನು ಅಕ್ನಾಲಾ ಕೋಟೆಯ ಕಡೆಗೆ ಪ್ರಯಾಣ ಬೆಳೆಸಿದನು. ಕೋಟೆಯ ಸಮೀಪ ಬಂದಾಗ ಶಮ್ಸುದ್ದೀನನು ಕೋಟೆಯಿಂದ ಹೊರಗೆ ಬಂದು ಫಿರೋಜಶಾಹನ ಜೊತೆಗೆ ಯುದ್ಧ ಮಾಡಿದನು. ಇತ್ತಂಡದವರು ಭೀಕರ ಹೋರಾಡಿದರು. ಇತ್ತಂಡದ ಅನೇಕ ಸೈನಿಕರು ಮೃತಪಟ್ಟರು. ಕೊನೆಗೆ ಶಮ್ಸುದ್ದೀನನಿಂದ ಹೋರಾಡುವ ಶಕ್ತಿ ಸಾಹಸವಿರಲಿಲ್ಲ. ಪ್ರಯುಕ್ತ ಯುದ್ಧಭೂಮಿಯಿಂದ ಪಲಾಯನ ಬೆಳೆಸಿ ಕೋಟೆಯಲ್ಲಿ ಆಶ್ರಯ ಪಡೆದನು. ಫಿರೋಜಶಾಹನು ಶಮ್ಸುದ್ದೀನನಿಂದ ಜಾಜನಗರದ ದೊಡ್ಡ ದೊಡ್ಡ ಆನೆಗಳು ತರಲ್ಪಟ್ಟಿದ್ದವು. ಅವುಗಳನ್ನು

*

೮. ದ್ವಿತೀಯ ಶಮ್ಸುದ್ದೀನ ತಂದೆ ಸುಲ್ತಾನುಸ್ಸಲಾತೀನ

ದ್ವಿತೀಯ ಶಮ್ಸುದ್ದೀನ ಮರಣದ ನಂತರ ರಾಜ್ಯದ ಸರದಾರರು ಹಾಗೂ ದರ್ಬಾರಿನ ಸದಸ್ಯರು ಅವನ ಪುತ್ರನಿಗೆ ದ್ವಿತೀಯ ಕ್ಷಮ್ನೊದ್ದೀನನೆಂಬ ಬಿರುದು ನೀಡಿ ತಮ್ಮ ಬಾದಶಹನೆಂದು ಒಪ್ಪಿಕೊಂಡರು. ದ್ವಿತೀಯ ಕ್ಷಮ್ನೊದ್ದೀನನು ಚಿಕ್ಕ ವಯಸ್ಸಿನ ಹಾಗೂ ರಾಜಕೀಯ ಅನುಭವ ಇಲ್ಲದ ಪ್ರಯುಕ್ತ ಆಡಳಿತದ ಕಾರ್ಯವನ್ನು ನಿರ್ವಹಿಸುವ ಯೋಗ್ಯತೆ ಇರಲಿಲ್ಲ. ಹೀಗಾಗಿ ಅವನ ಆಡಳಿತದಲ್ಲಿ ಆಸಕ್ತಿವಹಿಸಿದ ಹಿಂದು ಸರದಾರ ಕಾಂಸನೆಂಬಾತನು ಹೆಚ್ಚಿನ ಪ್ರಭುತ್ವವನ್ನು ಪಡೆದುಕೊಂಡನು. ಹಾಗೂ ರಾಜ್ಯದ ಎಲ್ಲಾ ರಾಜಕೀಯ ವ್ಯವಸ್ಥೆಯನ್ನು ತನ್ನ ಕೈಯಲ್ಲಿ ತೆಗೆದುಕೊಂಡನು. ಕ್ಷಮ್ನೊದ್ದೀನನು ೭೮೭ರಲ್ಲಿ ಮರಣಹೊಂದಿದ ನಂತರ ಅವನ ಸ್ಥಳವನ್ನು ಸ್ವಾಧೀನಪಡೆದುಕೊಂಡು ಬಂಗ್ಲಾ ಹಾಗೂ ಖನ್ನೂತಿಯ ಒಡೆಯನಾದನು.

■

*

೯. ರಾಜಾ ಕಾಂಸ

ರಾಜಾ ಕಾಂಸನು ಮುಸಲ್ಮಾನನಲ್ಲ. ಆದರೆ ಅವನು ಮುಸಲ್ಮಾನರನ್ನು ಹೆಚ್ಚಾಗಿ ಪ್ರೀತಿಸುತ್ತಿದ್ದನು. ಇದರಿಂದಾಗಿ ಅನೇಕ ಸರದಾರರು ಇವನು ಮುಸಲ್ಮಾನನಾಗಿದ್ದಾನೆಂದು ಸಾಕ್ಷಿ ನೀಡಿದರು. ಅವನ ಮರಣದ ನಂತರ ಇವನ ಪಾರ್ಥಿವ ಶರೀರವನ್ನು ಮುಸಲ್ಮಾನರ ಪದ್ಧತಿಯ ಪ್ರಕಾರ ದಫನ ಮಾಡಬೇಕೆಂದು ಸರದಾರರು ನಿರ್ಣಯಿಸಿದರು. ರಾಜಾ ಕಾಂಸನು ೭ ವರ್ಷದವರೆಗೆ ಒಳ್ಳೆಯ ವೈಭವದಿಂದ ಆಡಳಿತವನ್ನು ನಡೆಸಿದನು. ಇವನ ಪುತ್ರನು ಮುಸಲ್ಮಾನನಾಗಿ ಪಟ್ಟವನ್ನೇರಿದನು.

■

*

೧೦. ಸುಲ್ತಾನ ಜಲಾಲುದ್ದೀನ ಚನಮಲ ತಂದೆ ರಾಜಾ ಕಾಂಸ

ರಾಜಾ ಕಾಂಸನ ಮರಣದ ನಂತರ ಅವನ ಪುತ್ರ ಚನಮಲನು ಸರ್ವರಾಜ್ಯದ ಸರದಾರರು ಹಾಗೂ ದರ್ಬಾರಿನ ಸದಸ್ಯರನ್ನು ಒಟ್ಟುಗೂಡಿಸಿ ಅವರಿಗೆ ಹೀಗೆಂದು ಹೇಳಿದನು.

"ನನಗೆ ಚನ್ನಾಗಿ ವಿದಿತವಾಗಿದೆ. ನಾನು ಪ್ರಭಾವಿತನಾಗಿದ್ದೇನೆ, ಎಲ್ಲಕ್ಕೂ ಒಳ್ಳೆಯದು ಹಾಗೂ ಉತ್ತಮ ಧರ್ಮವು ಇಸ್ಲಾಮ್ ಇದೆ. ಪ್ರಯುಕ್ತ ಬಹಿರಂಗವಾಗಿ ನಾನು ಮುಸಲ್ಮಾನನೆಂದು ಘೋಷಿಸಿ ಒಪ್ಪಿಕೊಳ್ಳುತ್ತೇನೆ. ಒಂದು ವೇಳೆ ನಿಮಗೆ ಇದು ಒಪ್ಪಿಗೆಯಾದರೆ ತಾವು ನನ್ನನ್ನು ತಮ್ಮ ಬಾದಶಹನೆಂದು ನಿಯಮಿಸಿಕೊಳ್ಳಿ ಇಲ್ಲವಾದರೆ ನನ್ನ ಕಿರಿಯ ತಮ್ಮನನ್ನು ಪಟ್ಟಕ್ಕೆ ಕೂಡ್ರಿಸಿ ಆಡಳಿತದ ಸರದಾರರು ಇದಕ್ಕೆ ಉತ್ತರವಿತ್ತರು. ಪ್ರಭು ನಾವು ತಮ್ಮ ಸೇವಕರು ಹಾಗೂ ಹಿತಚಿಂತಕರು ಇದ್ದೇವೆ. ತಮಗೆ ಉಚಿತವೆನಿಸುವುದನ್ನೆ ಮಾಡಿಕೊಳ್ಳಿ. ಧರ್ಮ ಬದಲಾವಣೆ ತಮಗೆ ಸಂಬಧಪಟ್ಟ ವಿಷಯವಾಗಿದೆ. ಯಾಕೆಂದರೆ ಧರ್ಮಕ್ಕೆ ತಾಕಿಕ ವ್ಯವಹಾರಗಳಿಂದ ಯಾವುದೆ ಸಂಬಂಧ ಇರಲಾರದು. ಇದಾದ ನಂತರ ಚನಮಲನು ಲಖ್ನೋತಿಯ ಸರ್ವ ವಿದ್ವಾಂಸರನ್ನು ಹಾಗೂ ತಜ್ಞರನ್ನು ಬರವಾಡಿಕೊಂಡು ಅವರೆದುರಿಗೆ ಕಲೆಮಾಷಾಹಾದತ್ ಪಠಿಸುತ್ತ ಇಸ್ಲಾಮ ಧರ್ಮವನ್ನು ಸ್ವಿಕರಿಸಿದನು.

ನ್ಯಾಯ ಹಾಗೂ ನಿಷ್ಪಕ್ಷಪಾತ :

ಚನಮಲನು ತನ್ನ ಹೆಸರನ್ನು ಬದಲಾಯಿಸಿ ಸುಲ್ತಾನ ಜಲಾಲುದ್ದೀನನೆಂದು ಹೆಸರಿಟ್ಟುಕೊಂಡು ಪಟ್ಟಾಭಿಷೇಕದ ನಂತರ ಆಡಳಿತವನ್ನು ನಡೆಸಿದನು. ಇದರಿಂದ ಪ್ರಜೆಗಳು ಅವನಿಗೆ ಮನಃಪೂರ್ವ ಪ್ರೀತಿಸುತ್ತಿದ್ದರು. ಅವನು ಅತ್ಯಂತ ನ್ಯಾಯಾಧೀಶ ಹಾಗೂ ನ್ಯಾಯ ಪ್ರಕೃತಿವುಳ್ಳವನಾಗಿದ್ದನು. ಒಂದು ವೇಳೆ ಇವನಿಗೆ "ನಾ ಶೇರ್ವಾನ್" ಎಂದು ಕರೆದರೆ ತಪ್ಪಾಗಲಾರದು.

*

೧೧. ಸುಲ್ತಾನ ಅಹ್ಮದ್ ತಂದೆ ಸುಲ್ತಾನ ಜಲಾಲುದ್ದೀನ

ಸುಲ್ತಾನ ಜಲಾಲುದ್ದೀನನ ಮರಣದ ನಂತರ ಅವನ ಪುತ್ರ ಅಹ್ಮದ್‌ಶಾಹನು ಪಟ್ಟವನ್ನೇರಿದನು. ಅಹ್ಮದಶಾಹನು ಕೂಡ ತನ್ನ ತಂದೆಯಂತೆ ಪ್ರಜರ ಪೋಷಣೆ ಹಾಗೂ ರಕ್ಷಣೆಯೇ ತನ್ನ ಪರಮ ಉದ್ದೇಶವೆಂದು ನಂಬಿ ಉತ್ತಮ ರೀತಿಯಿಂದ ೧೬ ವರ್ಷಗಳವರೆಗೆ ಆಡಳಿತವನ್ನು ನಡೆಸುತ್ತ ೮೩೦ ಹಿಜರಿಯಲ್ಲಿ ಮೃತಪಟ್ಟನು.

■

*

೧೨. ನಾಸಿರುದ್ದೀನ ಗುಲಾಮ್

ಸುಲ್ತಾನ ಅಹ್ಮದನ ಮರಣದ ನಂತರ ನಾಸಿರುದ್ದೀನ ಹೆಸರಿನ ಗುಲಾಮನೊಬ್ಬನು ಆಡಳಿತವನ್ನು ಸ್ವಾಧೀನಪಡಿಸಿಕೊಂಡು ಪಟ್ಟವನ್ನೇರಿದನು. ಸಿಂಹಾಸನವನ್ನೇರಿದ ಕೂಡಲೆ ಸ್ವಭಾವಕ್ಕೆ ಒಗ್ಗುವ ಕೃತಜ್ಞತೆಗೊಳಗಾಗಿ ರಾಜ್ಯದ ವಾರಸುದಾರರನ್ನು ನಾಶಪಡಿಸಲು ಯತ್ನಿಸಿದನು. ಇದರಿಂದಾಗಿ ಧಾರ್ಮಿಕ ಹಾಗೂ ಲೌಕಿಕ ಎರಡರಲ್ಲಿಯು ಮುಖ ಕಪ್ಪಾಯಿತು.

ಇವನ ಆಡಳಿತವು ಏಳು ದಿನ ನಡೆಯಿತೆಂದು ಒಂದೆಡೆ ಹೇಳಿದರೆ ಇನ್ನೊಂದೆಡೆ ಕೇವಲ ಅರ್ಧದಿನವೆಂದು ಹೇಳಲಾಗಿದೆ. ಏನೆ ಇರಲಿ, **ಭಂಕುರ?** ಸರದಾರ ಇವನನ್ನು ಬಂದಿಸಿ ಕೊಲೆಗೈದರು. ನಾಶಿರುದ್ದೀನ ನಂತರ ನಾಸಿರಶಾಹನು ಸುಲ್ತಾನ ಶಮ್ಸುದ್ದೀನ ಭಂಕರ ವಂಶಸ್ಥನಾಗಿದ್ದನು. ಈತನು ಮೌರುಸಿ ಪಟ್ಟವನ್ನೆ ಪಡೆದುಕೊಂಡನು.

■

*

೧೩. ನಾಸಿರಶಾಹ ತಂದೆ ಶಾಹ ಭಂಕರ

ವಿಚಿತ್ರ ದೈವ :

ವಿಶ್ವ ಇತಿಹಾಸದ ಘಟನೆಯು ಚಿತ್ರವಿಚಿತ್ರವಾಗಿದೆ. ಸಾಮ್ರಾಜ್ಯದ ಭಂಕರದ ಸಲಾತೀನರ ಅಂತ್ಯಗೊಂಡ ದೀರ್ಘಾವಧಿಯ ನಂತರ ಪುನಃ ಆಡಳಿತವು ಈ ಪರಿವಾರದಲ್ಲಿ ವರ್ಗಾವಣೆಯಾಯಿತು. ಮೊದಲ ವೈಭವವು ಕಾಲ ಚಕ್ರಕ್ಕೆ ಸಿಲುಕಿ ಕಟ್ಟು ಕಥೆಯಾಗಿತ್ತು. ಮೊದಲಿನಂತೆ ಚೇತನಗೊಂಡಿತು. ನಾಸಿರಶಾಹನು ಒಬ್ಬ ಒಕ್ಕಲಿಗರ ಮನೆಯಲ್ಲಿರುತ್ತಿದ್ದನು. ಒಕ್ಕಲುತನವೇ ಅವನ ಉದ್ಯೋಗವಾಗಿತ್ತು. ಆಡಳಿತಗೈಯುವ ವಿಚಾರವು ಎಂದೂ ಇವನ ಮನದಲ್ಲಿಯೇ ಬರಲಿಲ್ಲ. ಆದರೆ ಭಾಗ್ಯವು ಬೆಂಬಲ ನೀಡಿತು. ಕೊನೆಗೆ ಅವನು ಪಟ್ಟ ಹಾಗೂ ಕಿರೀಟದ ಒಡೆಯನಾಗಿ ಬಂಗ್ಲಾ ಹಾಗೂ ಖನ್ನೂತಿಯ ಬಾದಶಹನೆಂದು ಒಪ್ಪಿತನಾದ.

ಉತ್ಕೃಷ್ಟ ಚರಿತ್ರೆ :

ನಾಸಿರಶಾಹನು ತನ್ನ ಸ್ವಾಭಾವಿಕ ಹಾಗೂ ಗುಣಲಕ್ಷಣಗಳಿಂದ ಅತ್ಯಂತ ಉಚ್ಛ ಅಂತಸ್ತಿನ ಮನಾವನಾಗಿದ್ದನು. ರಾಜ ಕಾಂಸ ಹಾಗೂ ಸುಲ್ತಾನ ಜಲಾಲುದ್ದೀನರ ಕಾಲದಲ್ಲಿ ಭಂಕರ ಪರಿವಾರದ ಸಂಬಂಧಿಕರು ಹಾಗೂ ಸೇವಕರು ಅತ್ತ ಇತ್ತ ಹೋಗಿದ್ದರು. ಇವರಿಗೆ ನಾಸಿರಶಾಹನ ಪಟ್ಟಾಭಿಷೇಕದ ಸುದ್ದಿ ತಲುಪಿದಾಕ್ಷಣವೇ ಅವರು ಶಾಹಿ ದರ್ಬಾರಿನಲ್ಲಿ ಹಾಜರಾದರು. ಕೆಲ ಕಾಲದಲ್ಲಿಯೇ ನಾಸಿರಶಾಹನ ಸುತ್ತಮುತ್ತಲು ಒಂದು ಮಹಾಪಡೆಯೆ ಕೂಡಿಕೊಂಡಿತು. ಹಾಗೂ ಇವನ ಒಳ್ಳೆಯ ಸ್ವಭಾವಗಳಿಂದ ಪ್ರಜರು ಆಕರ್ಷಿತರಾದರು.

ಮರಣ :

ಬಂಗ್ಲಾ ರಾಜ ಹಾಗೂ ದಿಲ್ಲಿಯ ರಾಜ್ಯಗಳ ಮಧ್ಯ ಪೌರ್ವಾತಿತ್ಯ ಸುಲ್ತಾನರ

ಸಾಮ್ರಾಜ್ಯವಿತ್ತು. ಇದರಿಂದಾಗಿ ನಾಸಿರಶಾಹನಿಗೆ ದಿಲ್ಲಿಯ ಕಡೆಯಿಂದ ಯಾವ ಬಗೆಯ ಆಪತ್ತು ಇರಲಿಲ್ಲ. ಪ್ರಯುಕ್ತ ಇವನು ೩೨ ವರ್ಷಗಳವರೆಗೆ ನಿಶ್ಚಿಂತನಾಗಿ ಆಡಳಿತಗೈದು ೮೩೨ ಹಿಜರಿಯಲ್ಲಿ ಮರಣ ಹೊಂದಿದನು.

■

*

೧೪. ಬಾರಬಕಶಾಹ ತಂದೆ ನಾಸಿರಶಾಹ

ನಾಸಿರಶಾಹ ತಂದೆ ಭಂಕರ ಮರಣದ ನಂತರ ಆತನ ಮಗ ಬಾರಬಕನು ಪಟ್ಟವೇರಿದನು. ಈ ಬಾದಶಹನ ಆಡಳಿತಾವಧಿಯಲ್ಲಿ ಪ್ರಜರ ಹಾಗೂ ಸೈನಿಕರು ಸುಖ ಸಮೃದ್ಧಿಯಲ್ಲಿದ್ದರು. ಬಾರಬಕನು ಹಿಂದುಸ್ತಾನದ ಬಾದಶಾಹರಲ್ಲಿ ಮೊದಲನೆಯವನು. ಇವನು ಹಬಶಿಯರ ಮೇಲೆ ಕೃಪಾದೃಷ್ಟಿಯನ್ನಿಟ್ಟು, ಅವರಿಗೆ ಉಚ್ಚ ಹುದ್ದೆಯನ್ನು ಕೊಟ್ಟು, ಗೌರವಿಸಿದನು. ಅವನು ತನ್ನ ದರ್ಬಾರಿನಲ್ಲಿ (೮೦೦೦) ಹಬಶಿಯರನ್ನು ಕೂಡಿಸಿದನು. ಹಾಗೂ ಅವರಿಗೆ ಆಡಳಿತದಲ್ಲಿ ಉಚ್ಚ ಹುದ್ದೆಗಳು (ವಕಾಲತ, ಸರದಾರಿ, ಮಂತ್ರಿ ಪದವಿ) ಅನುಗ್ರಹಿಸಿದನು. ಗುಜರಾತಿನ ಹಾಗೂ ದಕ್ಷಿಣದ ಬಾದಶಹರು ಕೂಡ ಬಾರಬಕನ ಅನುಕರಣೆಯನ್ನೇ ಮಾಡಿದರು. ಹಾಗೂ ಹಬ್ಷಿಯವರ ಪೋಷಣೆಗೈದರು.

ಬಾರಬಕನು ೧೭ ವರ್ಷಗಳವರೆಗೆ ಶಾಂತಿ ಸಮೃದ್ಧಿ ಹಾಗೂ ಭೋಗವಿಲಾಸದಲ್ಲಿ ಆಡಳಿತ ನಡೆಯಿಸಿ ೭೭೯ ಹಿಜರಿಯಲ್ಲಿ ಮೃತಪಟ್ಟನು.

■

೧೫. ಯೂಸುಫಶಾಹ ತಂದೆ ಬಾರಬಕಶಾಹ

ಬಾರಬಕನ ನಿಧನದ ನಂತರ ಇವರ ಪುತ್ರ ಯೂಸುಫಶಾಹ ಪಟ್ಟವನ್ನೇರಿದನು. ಅವನು ಕೂಡ ನ್ಯಾಯವೇ ತನ್ನ ಪದ್ಧತಿಯನ್ನಾಗಿಸಿಕೊಂಡನು. ವಿದ್ಯೆ ಮತ್ತು ಆಡಳಿತದ ಸುವ್ಯವಸ್ಥೆಯು ತನ್ನ ಮಾದರಿಯೆ ತಾನಾಗಿತ್ತು. ಇವನ ಆಡಳಿತಾವಧಿಯಲ್ಲಿ ಧಾರ್ಮಿಕ ಆದೇಶಗಳು ಕಡ್ಡಾಯವಾಗಿ ಜಾರಿಗೊಳ್ಳುತ್ತಿದ್ದವು. ಯಾರಿಗೂ ಮದಿರಾ (ಶರೆ) ಕುಡಿಯುವ ಧೈರ್ಯವಿರಲಿಲ್ಲ. ಅಲ್ಲದೆ ಯಾರೊಬ್ಬರು ಬಾದಶಹನ ಆಜ್ಞೆಯನ್ನು ತಡವಾಗಿ ಪಾಲಿಸುವಂತಿರಲಿಲ್ಲ. ಯೂಸುಫನು ಒಂದು ದಿನ ವಿದ್ಯಾವಂತರನ್ನು ಬರಮಾಡಿಕೊಂಡು ಅವರಿಗೆ ಹೀಗೆಂದು ಹೇಳಿದ. “ಮುಕದ್ದಮೆಗಳನ್ನು ತೀರ್ಮಾನಿಸುವಲ್ಲಿ ಎಂದೂ ಸವುಲತ್ತಾಗಲಿ ಅಥವಾ ಕರುಣೆಯಾಗಲಿ ತೋರಿಸಬಾರದು. ಹಾಗಲ್ಲದಿದ್ದರೆ (ಅಲ್ಲವಾದರೆ) ನನ್ನ ಹಾಗೂ ನಿಮ್ಮೊಂದಿಗೆ ಸಂಬಂಧ ಬೆಳೆಸಲಾಗದು.” ಯೂಸುಫಶಾಹನು ಧಾರ್ಮಿಕ ಜ್ಞಾನದಲ್ಲಿ ಏಕೈಕನಾಗಿದ್ದ. ಒಳ್ಳೆಯ ಸಮಸ್ಯೆಗಳು ಖಾಜಯವರಿಂದ ಪರಿಹಾರವಾಗದಿರುವಾಗ ಸ್ವತಃ ತಾನೆ ಅವುಗಳನ್ನು ನಿವಾರಿಸುತ್ತಿದ್ದನು.

ಇವನು ೭ ವರ್ಷದವರೆಗೆ ಆಡಳಿತ ನಡೆಯಿಸಿ ೭೮೭ ಹಿಜರಿಯಲ್ಲಿ ನಿಧನಗೊಂಡನು.

■

*

೧೬. ಸಿಕಂದರಶಾಹ

ಯುಸುಫಶಾಹನ ಮರಣದ ನಂತರ ಆಡಳಿತದ ಸರದಾರ ಹಾಗೂ ರಾಜ್ಯದ ಸದಸ್ಯರ ಪರಸ್ಪರ ಒಪ್ಪಿಗೆಯಂತೆ ಸಿಕಂದರಶಾಹನಿಗೆ ಪಟ್ಟಾಭಿಷೇಕ ಮಾಡಲಾಯಿತು. ಸಿಕಂದರಶಾಹನಲ್ಲಿ ಆಡಳಿತದ ಯೋಗ್ಯತೆ ಇರಲಿಲ್ಲ. ಹೀಗಾಗಿ ಅವನಿಗೆ ಪಟ್ಟದಿಂದಿಳಿಸಿ ಫತ್ತೆಶಾಹನಿಗೆ ಪಟ್ಟಾಭಿಷೇಕ ಮಾಡಿದರು.

■

*

೧೭. ಫತ್ತೇಶಾಹ

ವಿದ್ಯೆಯಿಂದ ಸ್ನೇಹ :

ಹೇಳಲ್ಪಡುತ್ತಿದೆ? ಫತ್ತೆಶಾಹನು ವಿದ್ಯಾವಂತನಾಗಿದ್ದ ಬಾದಶಹನಿದ್ದಾನೆ. ಅವನು ಇತರ ಬಾದಶಹರಂತೆ ಆಡಳಿತದ ಸರದಾರ ಹಾಗೂ ಸದಸ್ಯರ ಅಂತಸ್ತಿನಂತೆ ಅವರಿಗೆ ಅನುಗ್ರಹಿಸಿದನು. ಆ ಹಬಶಿಯ ಗುಲಾಮರು ಬಾರಬಕಶಾಹ ಹಾಗೂ ಯೂಸುಫಶಾಹರ ಅವಧಿಯಲ್ಲಿ ಹೆಚ್ಚಿನ ಅಧಿಕಾರವನ್ನು ಪಡೆದಿದ್ದರು. ಅವರು ತಮ್ಮ ಅಂತಸ್ಥಿಗಿಂತ ಮುಂದಾಗಿ ಮಿತಿಗೆಟ್ಟು ದಾಟಿ ವರ್ತಿಸತೊಡಗಿದ್ದಾರೆ. ಫತ್ತೆಶಾಹನು ಈ ತಂಟೆಯನ್ನು ಬಗೆಹರಿಸಿದನು.

ಫತ್ತೇಶಾಹನ ವಿರುದ್ಧ ಒಳಸಂಚು (ಕುಯುಕ್ತಿ) :

ಆ ಕಾಲದಲ್ಲಿ ಈ ರಿವಾಜು ಇತ್ತು. ರಾತ್ರಿಯ ಸಮಯದಲ್ಲಿ ಬಾದಶಹನ ಅಂತಃಪುರದ ಮೇಲೆ ೫ ಸಾವಿರ ಸೈನಿಕರು ಪಹರೆ ಕೊಡುತ್ತಿದ್ದರು. ಯಾವಾಗ ಶಾಹನು ನಿದ್ದೆಗೈದು ಎಚ್ಚರಗೊಳ್ಳುತ್ತಿದ್ದನೋ ಆಗ ಸೈನಿಕರು ಸಲಾಮು ಮಾಡಿ (ವಂದಿಸಿ) ಬಿಡುಗಡೆಯಾಗುತ್ತಿದ್ದರು. ಇವರ ಸ್ಥಳದಲ್ಲಿ ಬೇರೆ ಸೈನಿಕರು ಬರುತ್ತಿದ್ದರು. ಈ ಸೈನಿಕರ ಒಂದು ಗುಂಪು ಬಹುದಿನಗಳಿಂದ ವಿದ್ರೋಹವನ್ನೆಸಗಲುದ್ಯಕ್ತನಾಗಿತ್ತು. ಈ ಜನರು ತಮ್ಮ ಸಹ ಗೋತ್ರದ ಸರದಾರ ಸುಲ್ತಾನ ಶಹಜಾದನ ಹತ್ತಿರ ಹೋಗಿ ಮನವಿ ಮಾಡಿದರು. ಇವನೊಬ್ಬ ನೌಬತ್ತಿನವರ ಸರದಾರ, ಹಾಗೂ ಅಂತಃಪುರದ ಮುಖ್ಯಸ್ಥನಾಗಿದ್ದ. ವಿದ್ರೋಹಿ ಸೈನಿಕರು ಸುಲ್ತಾನ ಶಹಜಾದನಲ್ಲಿ ಯಾಚಿಸಿದರು. "ನೀವು ಆಡಳಿತದ ಚುಕ್ಕಾಣಿಯನ್ನು ನಿಮ್ಮ ಕೈಯಲ್ಲಿ ತೆಗೆದುಕೊಂಡು ಫತ್ತೇಶಾಹನಿಗೆ ತಳ್ಳಿರಿ" ಎಂದರು. ಸುಲ್ತಾನ ಶಹಜಾದನು ಕೂಡ ಮನಃಪೂರ್ವ ಇದನ್ನೆ ಬಯಸುತ್ತಿದ್ದನು. ಇವನು ಸೈನಿಕರ ಮನವಿಯನ್ನು ಸ್ವಿಕರಿಸಿದನು. ಆಕಸ್ಮಿಕವಾಗಿ ಅಂದಿನ ದಿನಗಳಲ್ಲಿ ಖಾನೆಜಾಹ ಮಲಿಕುಲುಮ್ರಾ ಮಲಿಕ ಇಂದೀಲ ಸೈನ್ಯದ

ಉತ್ತಮ ತುಕಡಿಯನ್ನು ತೆಗೆದುಕೊಂಡು ಸುತ್ತಮುತ್ತಲಿನ ರಾಜರುಗಳನ್ನು ಹತೋಟಿಗಿಟ್ಟುಕೊಳ್ಳಲು ನಡೆದಿದ್ದನು. ಸುಲ್ತಾನ ಶಹಜಾದನು ಇಂತಹ ಅವಸರದ ಲಾಭ ಪಡೆದನು. ಅವನು ಬಾರಬಕನ ಹಾಗೂ ಖ್ವಾಜಾಸರಾ ಇವರ ಸಹಾಯದಿಂದ ೭೮೬ ಹಿಜರಿಯಲ್ಲಿ ಫತ್ತೇಶಾಹನಿಗೆ ಕೊಂದು ಮಾರನೆಯ ದಿನ ಬಂಗ್ಲಾದ ಪಟ್ಟವೇರಿದನು.

ಫತ್ತೇಶಾಹನ ಆಡಳಿತಾವಧಿಯು ೭ ವರ್ಷ ಐದು ತಿಂಗಳವಾಗಿತ್ತು.

■

*

೧೮. ಸುಲ್ತಾನ ಬಾರಬಕ

ನೀಚ ಪ್ರವೃತ್ತಿಯವರ ಹೆಚ್ಚಳ :

ಸುಲ್ತಾನ ಶಹಜಾದನು ತನ್ನ ಒಡೆಯನಾದ ಫತ್ತೇಶಾಹನ ಕೊಲೆ ಮಾಡಿ ಆಡಳಿತದ ಚುಕ್ಕಾಣಿಯನ್ನು ತನ್ನ ಕೈಯಲ್ಲಿ ತೆಗೆದುಕೊಂಡು ಸುಲ್ತಾನ ಬಾರಬಕನೆಂಬ ಹೆಸರಿನಿಂದ ಪಟ್ಟವನ್ನೇರಿದನು. ಬಾರಬಕನು ಪಟ್ಟವೇರಿದ ಕೂಡಲೇ ಖ್ವಾಜಾಸರಾ ಇವರು ಅತ್ತ ಇತ್ತ ಅಲೆದಾಡುತ್ತಿದ್ದರು. ಇವನ ಸುತ್ತಲೂ ಕೂಡಿಕೊಂಡರು. ಹಾಗೂ ಇವನ ದುರ್ನಡತೆಗಳಿಂದ ತನ್ನ ಸ್ವಭಾವಕ್ಕೆ ತಕ್ಕಂತೆ ಇಂತಹ ನೀಚಗುಣವುಳ್ಳ ಜನರನ್ನು ತನ್ನ ಸುತ್ತಮುತ್ತಲು ಕೂಡಿಸಿಕೊಂಡನು.

ಸರದಾರರ ದಬ್ಬಾಳಿಕೆಯ ದಮನ :

ಕ್ರಮೇಣ ಬಾರಬಕನ ವೈಭವವು ಹೆಚ್ಚಾಗತೊಡಗಿತು. ಆಗ ಅವನು ನವಾಬರ ದಬ್ಬಾಳಿಕೆ ದಮನಗೈಯುವ ಸಂಕಲ್ಪ ಮಾಡಿದನು. ಯಾರು ಪಡೆಯ ಸಮೂಹದ ಒಡೆಯರಾಗಿದ್ದರು. ರಾಜ್ಯದ ಸರದಾರರ ಸರದಾರನಾದ ಮಲಿಕ ಇಂದೇಲ ಹಬಶಿ ಅಂದು ಗಡಿ ಪ್ರದೇಶದಲ್ಲಿದ್ದನು. ಅವನಿಗೆ ಬಾರಬಕನ ಅಪಾಯಕಾರಿ ಸಂಕಲ್ಪಗಳ ತಿಳಿವಳಿಕೆಯಾಯಿತು. ಪ್ರಯುಕ್ತ ಅವನು ರಾಜಧಾನಿಗೆ ತಲುಪಿ ಖ್ವಾಜಾ ಸರದಾರನಿಗೆ ದಂಡಿಸುವೆನೆಂದು ನಿಶ್ಚಯಿಸಿದನು. ಆಕಸ್ಮಿಕ ಇಂದಿನ ದಿನದಂದೆ ಯಾವನ ತಲೆಯ ಮೇಲೆ ಮೃತ್ಯು ಅಲೆದಾಡುತ್ತಿತ್ತು. ಆಗ ಮಲಿಕ ಇಂದೇಲನನ್ನು ರಾಜಧಾನಿಗೆ ಬರಮಾಡಿಕೊಂಡು ಬಂಧಿಸಬೇಕೆಂಬ ಉದ್ದೇಶಿಸಿದನು. ಮಲಿಕ ಇಂದೇಲನು ಅನಿರೀಕ್ಷಿತ ಬರಮಾಡುವಿಕೆಯಿಂದ ಸಂತುಷ್ಟನಾಗಿ ಉತ್ತಮರ ಸೈನಿಕರನ್ನು ಕರೆದುಕೊಂಡು ಬಾರಬಕನಲ್ಲಿಗೆ ಬಂದನು.

ಮಲಿಕ ಇಂದೇಲನ ಮತ್ತು ಬಾರಬಕನ ಭೇಟಿ :

ಮಲಿಕ ಇಂದೇಲನು ಮುನ್ನೆಚ್ಚರಿಕೆಯಿಂದ ಬಾರಬಕನ ದರ್ಬಾರಿನಲ್ಲಿ ಬಂದನು.

ಹೀಗಾಗಿ ಬಾರಬಕನು ಇಂದೇಲನ ಮೇಲೆ ಕೈಹಾಕುವ ಧೈರ್ಯವಾಗಲಿಲ್ಲ. ಒಂದು ದಿನ ಬಾರಬಕನು ರಾಜಕೀಯ ಸಭೆಯನ್ನೇರ್ಪಡಿಸಿ ಈ ಸಭೆಯಲ್ಲಿ ೧೦, ೧೨ ಸರದಾರರನ್ನು ಬರಮಾಡಿಕೊಂಡು ಇವರೆದುರಿಗೆ ಮಲಿಕ ಇಂದೇಲನನ್ನು ಕರೆದು ಹೀಗೆಂದನು. "ನಾನು ಸರದಾರರ ಗುಂಪೊಂದಿನ ಒಪ್ಪಿಗೆಯಿಂದ ಫತ್ತೆಶಾಹನ ಕೊಲೆ ಮಾಡಿ ಆಡಳಿತದ ಚುಕ್ಕಾಣಿಯನ್ನು ನನ್ನ ಕೈಯಲ್ಲಿ ತೆಗೆದುಕೊಂಡೆನು. ನನ್ನ ಈ ಕೃತ್ಯದ ಬಗ್ಗೆ ನಿಮ್ಮ ಅಭಿಪ್ರಾಯ ಏನಿದೆ?"

ಮಲಿಕ ಇಂದೇಲನು ಇದರ ಉತ್ತರಕ್ಕೆ ಫಾರ್ಸಿಯ ಪಂಕ್ತಿಯನ್ನು ಓದಿದನು.

"ಹರ್ ಚೆ ಆನ್ ಖುಸ್ರೊ ಕುನದ್ ಷೀರಿಕಬುವದ್"(ರಾಜರು ಏನು ಮಾಡಿದರೂ ಅದು ಉತ್ತಮವಾಗಿರುತ್ತದೆ) : ಬಾರಬಕನು ಈ ಉತ್ತರವನ್ನು ಪಡೆದು ಬಹಳ ಸಂತೋಷಪಟ್ಟನು. ಅಂದೆ ಇಂದೇಲನಿಗೆ ಶಾಹಿ ಉಡುಗೊರೆ, ಟೊಂಕಪಟ್ಟಿ, ರತ್ನಖಚಿತ ಕಠಾರಿ ಹಾಗೂ ಹಲವು ಆನೆ, ಕುದುರೆಗಳನ್ನು ಅನುಗ್ರಹಿಸಿದನು. ಇದರ ತರುವಾಯ ಇಂದೇಲನಿಗೆ "ಖುರಾನಿನ ಆಣೆಯಿಟ್ಟು" ವಚನ ತೆಗೆದುಕೊಂಡನು. "ಎಲ್ಲಿಯವರೆಗೆ ಅವನು (ಬಾರಬಕನು) ಬಾದಶಹನಿರುವನೋ ಅಲ್ಲಿಯವರೆಗೆ ಇಂದೇಲನು ಯಾವ ಪ್ರಕಾರ ನಷ್ಟ ಮಾಡಲಾರನು."

ಬಾರಬಕನ ಕೊಲೆಯ ಯೋಜನೆ :

ಖ್ವಾಜಾಸರಾರ ಒಂದು ಗುಂಪು ಬಾರಬಕನ ವಿರುದ್ಧವಿತ್ತು. ಮಲಿಕ ಇಂದೇಲನು ಇವರ ಜೊತೆಗೂಡಿ ಒಳಸಂಚುಗೈದು ಬಾರಬಕನ ಕೊಲೆಯ ಯೋಜನೆಯನ್ನು ತಯಾರಿಸಿದನು. ಮತ್ತು ಅವನು ಆ ಸಂದರ್ಭದ ನಿರೀಕ್ಷಣೆಯನ್ನು ಮಾಡುತ್ತಿದ್ದನು. ಒಂದು ದಿನ ಬಾರಬಕನು ಶೆರೆ ಕುಡಿದು ಸಿಂಹಾಸನದಲ್ಲಿ ಮಲಗಿಕೊಂಡನು. ಮಲಿಕ ಇಂದೇಲನಿಗೆ ಗೊತ್ತಾದಾಗ ದರ್ಬಾರಿ ಹಬಶಿಗಳ ಜೊತೆಗೂಡಿ ಬಾರಬಕನನ್ನು ಕೊಲೆ ಮಾಡಲು ಶಾಹಿ ಅಂತಃಪುರದಲ್ಲಿ ಪ್ರವೇಶ ಮಾಡಿದನು. ಮಲಿಕ ಇಂದೇಲನು ಇದನ್ನು ನೋಡಿ ಸುಲ್ತಾನನು ಶಾಹಿ ಸಿಂಹಾಸನದ ಮೇಲೆ ಮಲಗಿರುವನು. ಅವನಿಗೆ ತನ್ನ ಪ್ರತಿಜ್ಞೆ ನೆನಪಾಯಿತು. ಮತ್ತು ಅವನು ಯೋಚಿಸಿದನು. ಏನು ಮಾಡಬೇಕು. ಈ ಸಂದರ್ಭದಲ್ಲಿ ಬಾರಬಕನು ಮಗ್ಗಲು ಬದಲಾಯಿಸಿದಾಗ ಸಿಂಹಾಸನದಿಂದ ಕೆಳಗೆ ಬಿದ್ದನು.

ಮಲಿಕ ಇಂದೇಲ ಹಾಗೂ ಬಾರಬಕರಲ್ಲಿ ಬಡದಾಟ :

ಮಲಿಕ ಇಂದೇಲನು ಈ ಘಟನೆಯು ತನ್ನ ಸೌಭಾಗ್ಯವೆಂದು ತಿಳಿದು ಬಾರಬಕನ ಮೇಲೆ ಖಡ್ಗದಿಂದ ಪ್ರಹಾರಗೈದನು. ಆದರೆ ಈ ಪ್ರಹಾರವು ಅಸಫಲವಾಯಿತು. ಬಾರಬಕನು ಎಚ್ಚರಗೊಂಡನು. ಬಿಚ್ಚುಗತ್ತಿಯನ್ನು ತನ್ನೆದುರಿಗೆ ಕಂಡ ಬಾರಬಕನು

ಮಲಿಕ ಇಂದೇಲನನ್ನು ಸುರಳಿ ಸುತ್ತಿದನು. ಮತ್ತು ಅವನಿಗೆ ಕೆಳಗೆ ಬೀಳಿಸಿ ಇಂದೇಲನ ಮೇಲೆ ಹತ್ತಿ ಕುಳಿತುಕೊಂಡನು. ಬಾರಬಕನು ಇಂದೇಲನಿಗಿಂತ ಶಕ್ತಿಶಾಲಿಯೂ ಹಾಗೂ ದೃಢಕಾಯವುಳ್ಳವನಾಗಿದ್ದನು. ಕೆಳಗೆ ಬಿದ್ದ ಇಂದೇಲನು ಕೆಳಗಿನಿಂದಲೇ ಕೈಮುಂದು ಮಾಡಿ ಬಾರಬಕನ ತಲೆಗೂದಲನ್ನು ಗಟ್ಟಿಯಾಗಿ ಹಿಡಿದುಕೊಂಡನು ಹಾಗೂ ಬಿಡಲಿಲ್ಲ. ಹೊರಗಡೆ ನಿಂತ ತುರುಕ್ ಯರ್ಗಿಷ್ ಖಾನನಿಗೆ ಮಲಿಕ ಇಂದೇಲನು ಕೂಗಿದನು. ಯರ್ಗಿಷ್‌ಖಾನ ಹಬಶಿಯರ ಒಂದು ಗುಂಪಿನೊಡನೆ ಒಳಗೆ ಬಂದು ಮಲಿಕ ಇಂದೇಲನನ್ನು ಬಾರಬಕನ ಕೆಳಗೆ ಬಿದ್ದಿರುವುದನ್ನು ಕಂಡು ಅವನು ಖಡ್ಗವನ್ನು ಚಲಾಯಿಸಲಿಲ್ಲ. ಇದನ್ನು ಕಂಡ ಇಂದೇಲನು ಹೀಗೆಂದನು. "ಶಾಂತವಾದುದರಿಂದ ನಾವೀರ್ವರು ತಮಗೆ ಕಾಣಿಸುತ್ತಿಲ್ಲ. ಆದರೆ ತಾವು ನಿರ್ಭೀತರಾಗಿ ಬಾರಬಕನ ಮೇಲೆ ಖಡ್ಗದ ಪ್ರಹಾರ ಮಾಡಿರಿ. ನಾನು ಅವನ ತಲೆಗೂದಲನ್ನು ಗಟ್ಟಿಯಾಗಿ ಹಿಡಿದಿರುವೆ. ಅವನ ಶರೀರವು ಬಹಳಷ್ಟು ಅಗಲವಾಗಿದೆ. ನಾನು ಇವನ ಕೆಳಗೆ ಅವಿತುಕೊಂಡಿದ್ದೇನೆ ಹೀಗಾಗಿ ಇವನು ನನಗೆ ಢಾಲ್ ಆಗಿರುವನು. ಪ್ರಯುಕ್ತ ನೀವು ಇವನ ಮೇಲೆ ಖಡ್ಗ ಚಲಾಯಿಸಿರಿ. ಖಡ್ಗವು ಇವನ ಶರೀರದಿಂದ ಹಾಯ್ದು ನನ್ನವರೆಗೆ ಮುಟ್ಟುವುದಿಲ್ಲ. ಒಂದವಸರ ಹೀಗಾಗಿ ನನಗೆ ನಷ್ಟವಾದರೆ ಏನು ಭಯವಿಲ್ಲ. ಯಾಕೆಂದರೆ ಸುಲ್ತಾನ ಫತ್ಹೇಶಾಹನ ಕೊಲೆಯ ಸೇಡು ತೀರಿಸುವಲ್ಲಿ ಸಾವಿರಾರು ಜೀವಗಳು ಹೋದರೂ ಪರವಾಗಿಲ್ಲ."

ಸುಳ್ಳು ಸೊಗಡಿನ ಸಾವು :

ಯರ್ಗಿಷ್‌ಖಾನನು ಬಾರಬಕನ ಮೇಲೆ ನಿಧಾನವಾಗಿ ಖಡ್ಗದ ಪ್ರಹಾರ ಮಾಡಿದ. ಬಾರಬಕನು ಸುಳ್ಳು ಮುಳ್ಳು ತನ್ನನ್ನು ಹೆಣವಾಗಿಸಿಕೊಂಡನು. ಒಂದು ಕಡೆ ಬಿದ್ದು ಬಿಟ್ಟನು. ಮಲಿಕ ಇಂದೇಲ ಹಾಗೂ ಯುರ್ಗಿಷ್‌ರು ಕೂಡ ಬಾರಬಕನು ಸತ್ತಿರುವನೆಂದು ತಿಳಿದು ಈರ್ವರು ಹೊರಗಡೆ ಹೋದರು. ತವಾಚಿಖಾನ ಹಬ್ಶಿ ಹೊರಗಡೆ ನಿಂತಿದ್ದನು. ಅವನು ಇವರಿಗೆ ಕೇಳಿದನು. ನೀವು ಏನು ಕೆಲಸ ಮಾಡಿ ಬಂದಿರಿ. ಅವರು ಉತ್ತರ ಕೊಟ್ಟರು. ನಾವು ಕೃತಘ್ನ ಬಾದಶಹನಿಗೆ ಎಂದಿಗೂ ಎಚ್ಚರವಾಗದಂತೆ ಮಲಗಿಸಿದ್ದೇವೆ.

ತವಾಚಿ ಹಬಶಿಯು ಬಾರಬಕನ ಶಯನ ಗೃಹದಲ್ಲಿ ಹೋದನು. ಅವನು ಅಲ್ಲಿ ಸಮೆ ಬೆಳಗಿಸಿದನು. ಬಾರಬಕನು ತಿಳಿದುಕೊಂಡ ಇಂದೇಲನೆ ಬಂದಿರುವನೆಂದು. ಪ್ರಯುಕ್ತ ಅವನು ತಕ್ಷಣವೇ ಗೋದಾಮಿನಲ್ಲಿ ಅಡಗಿಕೊಂಡನು. ತಲಾಚಿಯು ಗೋದಾಮಿನೊಳಗೆ ಹೋದನು. ಬಾರಬಕನು ಪುನಃ ಹೆಣಗಳೋಪಾದಿಯಲ್ಲಿ ಬಿದ್ದನು. ತವಾಚಿಯ ಬಾಯಿಂದ ತನ್ನಷ್ಟಕ್ಕೆ ತಾನೇ ಈ ನುಡಿಗಳು ಹೊರಟವು. "ವಿಷಾದ, ವಿದ್ರೋಹಿಗಳು ನಮ್ಮ ಬಾದಶಹನನ್ನು ಕೊನೆಗಾಣಿಸಿದರು." ಬಾರಬಕನು ಶಬ್ದ ಕೇಳಿದನು. ಹಾಗೂ ತಿಳಿದುಕೊಂಡನು. ಯಾರೋ ನನ್ನ ಹಿತೈಷಿ ಇದ್ದಾನೆ. ಪ್ರಯುಕ್ತ

ತಕ್ಷಣವೇ ಹಬಶಿಗೆ ಹೇಳಿದನು. ಮೌನವಾಗಿರಿ, ಈಗ ಹೇಳಿ ಇಂದೇಲನು ಎಲ್ಲಿದ್ದಾನೆ. ನಾನು ಬದುಕಿದ್ದೇನೆ ಸತ್ತಿಲ್ಲ.

ಬಾರಬಕ್ಕನ ಆಜ್ಞೆ:

ತವಾಚಿ ಹಬಶಿಯು ಬಾರಬಕನಿಗೆ ಹೇಳಿದ. ಮಲಿಕ ಇಂದೇಲನು ನನಗೆ ಹೆಣವೆಂದು ತಿಳಿದು ಮನೆಗೆ ಹೋದನು. ಬಾರಬಕನು ಹಬಶಿಗೆ ಹೇಳಿದನು. ನೀವು ಹೊರಗಡೆ ಹೋಗಿ ಆಯಾ ಸರದಾರರನ್ನು ಕೂಡಿಸಿರಿ. ಹಾಗೂ ಅವರಿಗೆ ಮಲಿಕ ಇಂದೇಲನ ಜೊತೆಗೆ ಸೆಣಸಲು ಕಳುಹಿಸಿ. ಆ ದುಷ್ಟನ ರುಂಡ ಚಂಡಾಡಲಿ ಅಲ್ಲದೆ ಅಂತಃಪುರದ ಎಲ್ಲ ದ್ವಾರಗಳಲ್ಲಿ ಶೂರ ಸಿಪಾಯಿಗಳನ್ನು ನಿಲ್ಲಿಸಿಬಿಡಿ. ಅವರಿಗೆ ಹೇಳಿ ಶಸ್ತ್ರ ಧರಿಸಿ ಜಾಗರೂಕರಾಗಿರಲಿ. ತವಾಚಿಯು ಈ ಉತ್ತರ ಕೊಟ್ಟ ನಾನು ಈಗಲೇ ಹೊರಗೆ ಹೋಗುತ್ತೇನೆ ಮತ್ತು ತಮ್ಮ ಇಚ್ಛೆಯಂತೆ ಎಲ್ಲಾ ವ್ಯವಹಾರಗಳನ್ನು ನಿರ್ವಹಿಸುವೆನು.

ಬಾರಬಕ್ಕನ ಕೊಲೆ :

ತವಾಚಿ ಹಬಶಿಯು ಹೊರಗೆ ಬಂದ. ಅವನು ಮೆಲ್ಲನೆ ಮಲಿಕ ಇಂದೇಲನಿಗೆ ಎಲ್ಲಾ ಸಮಾಚಾರವನ್ನು ತಿಳಿಪಡಿಸಿದನು. ಮಲಿಕ ಇಂದೇಲನು ತಕ್ಷಣವೇ ತವಾಚಿಯೊಂದಿಗೆ ಬಾರಬಕ್ಕನ ಶಯನ ಗೃಹದಲ್ಲಿ ಬಂದು (ಹೋದನು) ತನ್ನ ಕಠಾರಿಯಿಂದ ಇರಿದು ಕೊಂದನು. ತದನಂತರ ಇಂದೇಲನು ಬಾಗಿಲ ಮುಚ್ಚಿ ಬೀಗ ಹಾಕಿದ. ಹೊರಗೆ ಬಂದ ಖಾನಜಹಾನ ಮಂತ್ರಿಯನ್ನು ಒಳಮಾಡಿಕೊಂಡನು.

ಹೊಸ ಬಾದಶಹನ ಆಯ್ಕೆ :

ಖಾನಜಹಾನ ಆಗಮನದಿಂದ ಎಲ್ಲಾ ಸರದಾರರಲ್ಲಿ ಈ ಸಲಹೆ ನಡೆಯತೊಡಗಿತು. ಯಾರನ್ನು ಬಾದಶಹನ್ನನ್ನಾಗಿಸಬೇಕು. ಫತ್ತೇಶಾಹನ ಮಕ್ಕಳಲ್ಲಿ ಕೇವಲ ಒಬ್ಬನೆ ಮಗನಿದ್ದಾನೆ. ಅವನ ವಯಸ್ಸು ಎರಡು ವರ್ಷವಿದೆ. ಈ ಮಗುವು ಆಡಳಿತವನ್ನು ನಡೆಸಲಾರ. ಸರದಾರರು ಸುಲ್ತಾನ ಫತ್ತೇಶಾಹನ ವಿಧವೆಯ ಹತ್ತಿರ ಬಂದರು. ಮತ್ತು ಅವಳಿಗೆ ಈ ರೀತಿಯಿಂದ ಹೇಳಿದರು. "ನಿಮ್ಮ ಮಗುವು ಕೇವಲ ಎರಡು ವರ್ಷದ್ದಾಗಿದೆ. ಇಷ್ಟು ಕಡಿಮೆ ವಯದಲ್ಲಿ ಇವನನ್ನು ಪಟ್ಟಕ್ಕೆ ಕೂಡಿಸಲಾಗದು. ಇದರಿಂದಾಗಿ ನೀವೇ ಹೇಳಿ, ಈ ಆಡಳಿತವು ಯಾರಿಗೊಪ್ಪಿಸಬೇಕು. ಮಗುವಿನ ಯೌವನಾವಸ್ಥೆಯವರೆಗೂ ಆಡಳಿತದ ಎಲ್ಲಾ ವ್ಯವಹಾರಗಳು ನೋಡಿಕೊಳ್ಳಲು ರಾಣಿಯು ಹೀಗೆಂದಳು. ನಾನು ಅಲ್ಲಾನಲ್ಲಿ ಈ ರೀತಿಯಿಂದ ಪ್ರಮಾಣ ಮಾಡಿದ್ದೆ. ನನ್ನ ಪತಿಯು ಕೊಲೆಗಡುಕನನ್ನು ಕೊಲೆ ಮಾಡಿದವನಿಗೆ ಈ ರಾಜ್ಯದ ಒಡೆಯನ್ನಾಗಿಸುವೆ".

ಮಲಿಕ ಇಂದೇಲನ ಪಟ್ಟಾಭಿಷೇಕ :

ಈ ಉತ್ತರವನ್ನು ಪಡೆದು ಎಲ್ಲರೂ ಮಲಿಕ ಇಂದೇಲನನ್ನು ಕೇಳಿಕೊಂಡರು. ನೀವೇ ಈ ಆಡಳಿತವನ್ನು ನಿರ್ವಹಿಸಿಕೊಳ್ಳಿ. ಆದರೆ ಅವನು ನಿರಾಕರಿಸಿದನು. ಕೊನೆಗೆ ಸರದಾರರ ಒತ್ತಾಯದ ಮೇರೆಗೆ ಒಪ್ಪಿಕೊಂಡನು. ಹಾಗೂ ಫಿರೋಜಶಾಹನೆಂಬ ಬಿರುದನ್ನೆ ಧರಿಸಿ ಪಟ್ಟವನ್ನೇರಿದನು.

ಬಾರಬಕನ ಅತ್ಯಂತ ಕೆಟ್ಟ ಆಡಳಿತಾವಧಿ ಕೇವಲ ೮ ತಿಂಗಳೆಂದು ಒಂದೆಡೆ ಹೇಳಿದ್ದಾದರೆ ಇನ್ನೊಂದೆಡೆ ಕೇವಲ ೨,೧/೨ ತಿಂಗಳದಾಗಿತ್ತು ಎಂದು ಹೇಳಲಾಗಿದೆ. ಬಾರಬಕನ ಕೊಲೆಯ ನಂತರ ಬಂಗ್ಲಾದಲ್ಲಿ ಇದುವೆ ರೂಢಿಯಾಯಿತು. ಯಾವಾಗ ತನ್ನೊಡೆಯನನ್ನು ಕೊಂದು ತಾನೆ ಬಾದಶಹನೆಂದು ಘೋಷಿಸಿದವನೆ ತಮ್ಮ ಬಾದಶಹನೆಂದು ಸರದಾರರು ಹಾಗೂ ಪ್ರಜೆಗಳು ಒಪ್ಪಿಕೊಳ್ಳುತ್ತಿದ್ದರು.

■

*

೧೯. ಮಲಿಕ ಇಂದೇಲ ಫಿರೋಜಶಾಹ

ಪಟ್ಟವನ್ನೇರಿದ ಮೇಲೆ ಫಿರೋಜಶಾಹನು ಡೋರ ನಗರದಲ್ಲಿ ಸಿಂಹಾಸನವನ್ನು ಸ್ಥಿರಗೊಳಿಸಿದನು. ನ್ಯಾಯ ಹಾಗೂ ಉತ್ತಮ ಶೈಲಿಯಲ್ಲಿ ಆಡಳಿತವನ್ನು ನಡೆಸಿದನು. ಫಿರೋಜಶಾಹನು ತನ್ನ ಅಧಿಕಾರಾವಧಿಯಲ್ಲಿ ದೊಡ್ಡ ದೊಡ್ಡ ಕಾರ್ಯಗಳನ್ನೆ ಪೂರ್ಣಗೊಳಿಸಿದ್ದನು. ಇದರಿಂದಾಗಿ ಸೈನ್ಯ ಹಾಗೂ ಪ್ರಜರು ಆದರಿಸುತ್ತಿದ್ದರು. ಹಾಗೂ ಮನಃಪೂರ್ವಕವಾಗಿ ಪ್ರೀತಿಸುತ್ತಿದ್ದರು. ಪಿರೋಜಶಾಹನು ಒಳ್ಳೆಯ ವೈಭವದಿಂದ ಮೂರು ವರ್ಷದವರೆಗೆ ಆಡಳಿತವನ್ನು ಮಾಡಿ ೮೫೫ ಹಿಜರಿಯಲ್ಲಿ ಮೃತಪಟ್ಟನು.

■

*

೨೦. ಮಹ್ಮದ ತಂದೆ ಫಿರೋಜಶಾಹ

ಫಿರೋಜಶಾಹನ ಮರಣದ ನಂತರ ಸರದಾರರು ಹಾಗೂ ರಾಜ್ಯದ ಸದಸ್ಯರು ಪರಸ್ಪರ ಒಮ್ಮತದಿಂದ ಇವನ ಪುತ್ರ ಮಹ್ಮದ್‌ಶಾಹನನ್ನು ತಮ್ಮ ಬಾದಶಹನೆಂದು ಒಪ್ಪಿಕೊಂಡರು. ಈ ಬಾದಶಹನ ಆಡಳಿತಾವಧಿಯಲ್ಲಿ ಹಬಶಿಖಾನನೆಂಬ ಒರ್ವ ಹಬಶಿ ಗುಲಾಮನು ಮಹಾಶಕ್ತಿಯನ್ನು ಪಡೆದುಕೊಂಡನು. ಆಡಳಿತದ ಚುಕ್ಕಾಣಿಯನ್ನು ತನ್ನ ಕೈಯಲ್ಲಿ ತೆಗೆದುಕೊಂಡು ಬಾದಶಹನಿಗೆ ನಾಮ ಮಾತ್ರ ಬಾದಶಾಹನೆನ್ನುವಂತೆ ಮಾಡಿದ. ಇನ್ನೀರ್ವ ಹಬ್ಷಿ ಸರದಾರರು ಮುಸಮ್ಮಿ ಸೈಯ್ಯದ ಬದರು ದಿವಾನನು ಹಬ್ಷಿಖಾನನಿಗೆ ಒಳ್ಳೆಯ ದೃಷ್ಟಿಯಿಂದ ನೋಡುತ್ತಿರಲಿಲ್ಲ. ಪ್ರಯುಕ್ತ ಹಬಶಿ ಖಾನನಿಗೆ ಕೊಲೆ ಮಾಡಿ, ರಾಜ್ಯದ ಸಂಪೂರ್ಣ ಆಡಳಿತವನ್ನು ಕೈಯಲ್ಲಿ ತೆಗೆದುಕೊಂಡು ಕೆಲ ದಿನಗಳ ನಂತರ ಮಹಮ್ಮದ್‌ಶಾಹನನ್ನು ಕೂಡ ಕೊಲೆ ಮಾಡಿ ಮುಜಾಫರ್‌ಶಾಹನೆಂಬ ಬಿರುದು ಪಡೆದು ಬಂಗ್ಲಾದ ಸ್ವತಂತ್ರ ಒಡೆಯನಾದ.

ಸುಲ್ತಾನ ಮಹಮ್ಮದನ ಆಡಳಿತವು ಕೇವಲ ಒಂದು ವರ್ಷವಾಗಿತ್ತು.

ಹಾಜಿಮೊಹ್ಮದ ಬಂಧಾರಿಯು ತನ್ನ ಇತಿಹಾಸದಲ್ಲಿ ಹೀಗೆ ಉಲ್ಲೇಖಿಸಿದ್ದಾನೆ. ಸುಲ್ತಾನ ಮಹ್ಮದ್‌ನು ಫತ್ತೆಶಾಹನ ಮಗನಿದ್ದ. ಬಾರಬಕಶಾಹ ಗುಲಾಮ ಮುಸಮ್ಮಿ ಹಬಶಿಖಾನನು ಫಿರೋಜಶಾಹನ ಅಪ್ಪಣೆಯಂತೆ ಮಹ್ಮದಶಾಹನ ಪಾಲನೆ ಪೋಷಣೆ ಹಾಗೂ ತರಬೇತಿಯನ್ನು ಕೊಡುವ ಹೊಣೆಯನ್ನು ನಿರ್ವಹಿಸಿದನು. ಫಿರೋಜಶಾಹನ ಮರಣದ ನಂತರ ಮಹಮ್ಮದಶಾಹನು ಪಟ್ಟವನ್ನೇರಿ ಆರು ವರ್ಷದವರೆಗೆ ಆಡಳಿತ ನಡೆಸಿದ್ದನು. ಹಬಶಿಖಾನನು ರಾಜ್ಯ ಒಡೆತನದ ಸ್ವಪ್ನ ನೋಡತೊಡಗಿದ. ಕೊನೆಗೆ ಸೈಯ್ಯದಿ ಬದ್ರು ದಿವಾನನು ಹಬಶಿಖಾನನನ್ನು ಕೊಂದ.

■

*

೨೧. ಸೈಯ್ಯದಿ ಬದ್ರು ದಿವಾನಾ ಬಿರುದು (ಸಂಬೋಧನೆ) ಮಜಫರಶಾಹ

ಹಿಂಸಾಚಾರ :

ಮುಜ್ಫರ್‌ಶಾಹನು ಅತಿ ಕ್ರೂರ ಹಾಗೂ ನಿರ್ಭೀತ ಬಾದಶಹನಿದ್ದ. ಪಂಡಿತರನ್ನು, ಧಾರ್ಮಿಕ ಹಿರಿಯರನ್ನು ಯಾರೂ ಇವನ ಆಡಳಿತವನ್ನು ಮೆಚ್ಚುಗೆಯ ದೃಷ್ಟಿಯಿಂದ ನೋಡುತ್ತಿರಲಿಲ್ಲ. ಅವರನ್ನು ಮುಜ್ಫರ್‌ಶಾಹನ ಕೊಲೆ ಮಾಡಿಸಿದನು. ಇದಲ್ಲದೆ. ಮುಜ್ಫರ್‌ಶಾಹನು ಮುಸ್ಲಿಮರಲ್ಲದ ರಾಜ ಯಾರು ಬಂಗ್ಲಾದ ಬಾದಶಹನ ವಿರೋಧ ಮಾಡುತ್ತಿದ್ದರು. ಆ ವಿರೋಧಿ ರಾಜರನ್ನು ಮುಜ್ಫರ್‌ಶಾಹನು ಅತಿಶಯವಾಗಿ ನಾಶಪಡಿಸಿದನು.

ಸೈಯದ್ ಶರೀಫ್ ಮಕ್ಕಯ ನೇಮಕಾತಿ :

ಸೈಯದ್ ಶರೀಫ್ ಮಕ್ಕಯನವರಿಗೆ ಮಂತ್ರಿಯ ಹುದ್ದೆಯನ್ನು ಕರುಣಿಸಿ ಕೊಟ್ಟು ದೇಶದ ಎಲ್ಲಾ ಸಂಪತ್ತಿನ ವ್ಯವಹಾರಗಳಿಗೆ ಸಂರಕ್ಷಕನೆಂದು ನೇಮಿಸಿದ. ಶರೀಫ್ ಮಕ್ಕಯು ಬಾದಶಹನಿಗೆ ಸಲಹೆ ನೀಡಿದ ಸವಾರರ ಹಾಗೂ ಪಾದಚಾರಿಗಳ ವೇತನದಲ್ಲಿ ಕಡಿಮೆ ಮಾಡುವುದು. ಬಾದಶಹನು ಈ ಸಲಹೆಯನ್ನು ಕಾರ್ಯರೂಪಕ್ಕೆ ತಂದನು. ಹೀಗಾಗಿ ಶಾಹಿ ಬೊಕ್ಕಸದಲ್ಲಿ ಅಗಣಿತ ಧನವು ಕೂಡಿಕೊಂಡಿತು.

ಬಂಡಾಯ :

ಲೆಕ್ಕವಿಲ್ಲದ ಜನರು ಮುಜ್ಫರ್‌ಶಾಹನ ಅಸಭ್ಯ ವರ್ತನೆಯಿಂದ ನಿರಾಶೆಗೊಂಡರು. ದೇಶದ ಲೆಕ್ಕವಿಲ್ಲದ ಜನರು ವಿದ್ರೋಹವನ್ನು ಪ್ರಕಟಿಸತೊಡಗಿದರು. ಅನೇಕ ಹೆಸರುವಾಸಿಯಾದ ಸರದಾರರು ಕೂಡ ವಿದ್ರೋಹಿಗಳಾದರು. ಸ್ಥಿತಿಯು ಇಲ್ಲಿಯವರೆಗೆ ತಲುಪಿತು. ಮುಜಫರಶಾಹನು ಐದು ಸಾವಿರ ಹಬಶಿಯರನ್ನು, ಮೂರು ಸಾವಿರ

ಬಂಗಾಲಿಗಳನ್ನು ಹಾಗೂ ಅಫಘಾನಿ ಸವಾರರನ್ನೊಡಗೂಡಿ ಕೋಟೆಯಲ್ಲಿ ಆಶ್ರಯ ಪಡೆದನು. ನಾಲ್ಕು ದಿನ ಅಥವಾ ನಾಲ್ಕು ತಿಂಗಳಗಳವರೆಗೆ ಬಾದಶಹ ಹಾಗೂ ವಿದ್ರೋಹಿಗಳೊಡನೆ ಯುದ್ಧ ನಡೆಯುತ್ತಲೇ ಇತ್ತು.

ಜೀವಗಳ ಕ್ಷತಿ :

ಈ ಯುದ್ಧದಲ್ಲಿ ತೊಡಗಿದುದರಿಂದ ದಿನಾಲು ಲೆಕ್ಕವಿಲ್ಲದ ಜನರ ಜೀವಗಳು ಕ್ಷತಿಗೊಳ್ಳುತ್ತಿದ್ದವು. ಬಂದವಸರ ವಿದ್ರೋಹಿಗಳ ವ್ಯಕ್ತಿಯು ಬಂದಿಯಾದ ಮೇಲೆ ಬಾದಶಹನ ಎದುರಿಗೆ ತರಲ್ಪಟ್ಟರೆ ಮುಜಫರಶಾಹನು ಅವನಿಗೆ ನೋಡಿ ಕುಪಿತನಾಗಿ, ಅವನನ್ನು ತನ್ನ ಕೈಯಿಂದಲೆ ಕೊಲ್ಲುತ್ತಿದ್ದನು. ಒಟ್ಟಾರೆ ಇಷ್ಟು ಜನರು ಕೊಲ್ಲಲ್ಪಟ್ಟರು. ಬಾದಶಹನ ಬೆಂಬಲಿಗರಲ್ಲಿ ನಾಲ್ಕು ಸಾವಿರ ಜೀವಗಳು ಹತವಾದವು.

ಮಜಫರಶಾಹನ ಕೊಲೆ :

ಕೊನೆಯಲ್ಲಿ ಈ ಸ್ಥಿತಿಯಿಂದ ಬೇಸರಪಟ್ಟು ಕೊನೆಗೆ ಮುಜಫರಶಾಹನು ತನ್ನ ಸೈನ್ಯದೊಂದಿಗೆ ಕೋಟೆಯಿಂದ ಹೊರಗೆ ಬಂದು, ಸರದಾರರು ಅವರಲ್ಲಿ ಶರೀಫ್ ಮಕ್ಕೆಯು ಇದ್ದ. ಯುದ್ಧ ಪ್ರಾರಂಭವಾಯಿತು. ಇತ್ತಂಡಗಳಲ್ಲಿ ಭಯಂಕರ ಯುದ್ಧ ನಡೆಯಿತು. ಇಂತಿಷ್ಟು ರಕ್ತಪಾತವಾಯಿತು. ಇತ್ತಂಡದ ಕಡೆಯಿಂದ ಸುಮಾರು ೨೦೦೦೦ ಸಾವಿರ ಸೈನಿಕರು ಯುದ್ಧಭೂಮಿಯಲ್ಲಿ ಸತ್ತರು. ಈ ಯುದ್ಧದಲ್ಲಿ ಮುಜಫರಶಾಹನಿಗೆ ಸೋಲುಂಟಾಯಿತು. ಅವನಿಗೆ ಅವರೇ ಸಾಮಿಪ್ಯದ ದರ್ಬಾರಿಯವರ ಜೊತೆಗೆ ಕೊಲ್ಲಲ್ಪಟ್ಟ. ಅಲ್ಲಾನೆ ಆಶ್ರಯ ನೀಡಲಿ. ಹಾಜಿ ಮೊಹ್ಮದ್ ಖಂದ್ಹಾರಿಯು ತನ್ನ ಇತಿಹಾಸದಲ್ಲಿ ಉಲ್ಲೇಖಿಸಿದ್ದಾನೆ. ಈ ಯುದ್ಧದಲ್ಲಿಯೇ ಪ್ರಾರಂಭದಿಂದ ಕೊನೆಯವರೆಗೆ ಒಂದು ಲಕ್ಷ ಇಪ್ಪತ್ತು ಸಾವಿರ ಜನ ಸತ್ತರು. ಸತ್ತವರಲ್ಲಿ ಹಿಂದು, ಮುಸಲ್ಮಾನರು ಈರ್ವರು ಇದ್ದರು. ಮುಜಫರನ ಕೊಲೆಯ ನಂತರ ಸೈಯದ್ ಶರೀಫ್ ಮಕ್ಕಿಯು ಆಡಳಿತವನ್ನು ತನ್ನ ಕೈಯಲ್ಲಿ ತೆಗೆದುಕೊಂಡನು. ಆದರೆ ನಿಜಾಮ ಇತಿಹಾಸದಲ್ಲಿಯ ಹೇಳಿಕೆ ಬೇರೆ ಬೇರೆ ಇದೆ. ಇದರಲ್ಲಿ ಉಲ್ಲೇಖವಿದೆ. ಸೈಯ್ಯದ್ ಮಕ್ಕಾಗೆ ಇದು ತಿಳಿಯಿತು. ಪ್ರಜರು ಮುಜ್ಫರ್‌ಶಾಹನ ಜೀವ ಶತ್ರುಗಳಾಗಿದ್ದಾರೆ. ಕಾರಣ ಅವನು ಬಾರಬಕರೊಂದಿಗೆ ಅಂತಃಪುರದೊಳಗೆ ಹೋಗಿ ಮುಜಫರಶಾಹನಿಗೆ ಕೊಂದನು. ಹಾಗೂ ಸುಲ್ತಾನ ಅಲ್ಲಾವುದ್ದೀನನ ಬಿರುದನ್ನೇ ಧಾರಣ ಮಾಡಿ ಪಟ್ಟವನ್ನೇರುವ ಘೋಷಣೆ ಮಾಡಿದನು. ಮುಜ್ಫರ್‌ಶಾಹನ ಆಳ್ವಿಕೆ ಮೂರು ವರ್ಷ ಐದು ತಿಂಗಳವಾಗಿತ್ತು.

■

*

೨೨. ಶರೀಫ್ ಮಕ್ಕಿ ಪ್ರಖ್ಯಾತ ಸುಲ್ತಾನ ಅಲ್ಲಾವುದ್ದೀನ

ಪ್ರತಿಯೊಬ್ಬರ ಪ್ರೀತಿಗೆ ಪಾತ್ರ :

ಯಾವ ಕಾಲದಲ್ಲಿ ಶರೀಫ್ ಮಕ್ಕಿಯು ಮುಜಫರ್‌ಶಾಹನ ಮಂತ್ರಿಯಾಗಿದ್ದ, ಅಂದಿನ ದಿನಗಳಂದು ಅವನು ಪ್ರಜರ ಒಳ್ಳೆಯ ನಡತೆಯಿಂದ ನಡೆದುಕೊಳ್ಳುತ್ತಿದ್ದ. ಹಾಗೂ ಜನರಿಗೆ ಅನೇಕ ಬಾರಿ ಹೇಳುತ್ತಿದ್ದ ಸುಲ್ತಾನ ಮುಜಫರಶಾಹನು ಬಾದಶಹನಾಗಲು ಯೋಗ್ಯನಿಲ್ಲ. ನಾನು ಅವನಿಗೆ ಅನೇಕ ಸಲ ತಿಳಿಸುತ್ತೇನೆ. "ಅವನು ತನ್ನ ಸರದಾರರ ಹಾಗೂ ಸೈನಿಕರ ಜೊತೆ ಒಳ್ಳೆಯ ರೀತಿಯಿಂದ ನಡೆದುಕೊಳ್ಳಿ ಆದರೆ ಅವನು ಇತ್ತಕಡೆ ಗಮನವೇ ಕೊಡುತ್ತಿಲ್ಲ. ತನ್ನ ಸಂಪೂರ್ಣ ಸಮಯವನ್ನು ಧನವನ್ನು ಕೂಡಿಸುವುದರಲ್ಲಿಯೇ ಕಳೆಯುತ್ತಾನೆ." ಇದರಿಂದಾಗಿ ಎಲ್ಲಾ ಸರದಾರರು ಹಾಗೂ ಸೈನಿಕರು ಶರೀಫ್ ಮಕ್ಕಿಗೆ ಹೆಚ್ಚು ಪ್ರೀತಿಸುತ್ತಿದ್ದರು. ಹಾಗೂ ಮನದಾಳದಿಂದ ಹಿತೈಷಿಗಳಾಗಿದ್ದರು.

ಪಟ್ಟಾಭಿಷೇಕ :

ಮುಜಫರಶಾಹನಿಗೆ ಕೊಲೆಗೈದ ದಿನದಂದು ಎಲ್ಲಾ ಸರದಾರರು ಒಮ್ಮತದಿಂದ ಶರೀಫ್ ಮಕ್ಕಿಗೆ ತಮ್ಮ ಬಾದಶಹನೆಂದು ನಿಯಮಿಸಿದರು. ಅವಸರಗಂದು ಸರದಾರರು ಮಕ್ಕೆ ಶರೀಫರಿಗೆ ಕೇಳಿದರು. "ಬಂದವಸರ ನಾವು ತಮಗೆ ನಮ್ಮ ಬಾದಶಹನೆಂದು ಒಪ್ಪಿಕೊಂಡರೆ ತಾವು ನಮ್ಮ ಜೊತೆ ಹೇಗೆ ವರ್ತಿಸುವಿರಿ" ಶರೀಫ್ ಮಕ್ಕಿಯು ಇದಕ್ಕೆ ಈ ರೀತಿ ಉತ್ತರಿಸಿದನು. "ತಾವು ಹೇಳಿದ ಹಾಗೆ ನಾನು ಆಡಳಿತವನ್ನು ನಡೆಸುವೆ. ಹಾಗೂ ಎಂದಿಗೂ ನಿಮ್ಮ ಸಲಹೆಯ ವಿರುದ್ಧ ನಡೆದುಕೊಳ್ಳುವುದಿಲ್ಲ. ಪಟ್ಟವನ್ನೇರಿದ ನಂತರ ನಾನು ತಮ್ಮ ಸಲುವಾಗಿ ಆತುರತೆಯಿಂದ ಏನನ್ನು ಮಾಡಬೇಕಾಗಿದೆ. ಅದು ಇದು ಇದೆ. ನಗರದ ಭೂಮಿಯ ಮೇಲಿನದೆಲ್ಲ ನಿಮಗೆ ಕೊಡುವೆ. ಮತ್ತು ಭೂಮಿಯ ಒಳಗಡೆ ಇರುವುದೆಲ್ಲ ಅದು ನಾನೆ ಸ್ವತಃ ತೆಗೆದುಕೊಳ್ಳುವೆ."

ಕೋರ ನಗರದಲ್ಲಿ ಸುಲಿಗೆ\ದರೋಡೆ :

ಎಲ್ಲಾ ಜನರು ಧನ ಸಂಪತ್ತನ್ನು ಗಳಿಸುವ ಇಚ್ಛೆಯ ಮೇರೆ ಈ ಒಪ್ಪಂದವನ್ನು ಒಪ್ಪಿಕೊಂಡರು. ಹಾಗೂ ಕೋರ ನಗರದ ಓಣಿಯ ಜನ ಸಂದಣಿಯಿಂದ ಕೂಡಿತ್ತು. ದರೋಡೆ ಪ್ರಾರಂಭವಾಯಿತು. ಶರೀಪ್ ಮಕ್ಕಿಯು ಅತಿ ಸರಳತೆಯಿಂದ ಕಿರೀಟ ಶಿರದ ಮೇಲಿಟ್ಟು ರಾಜ್ಯದಲ್ಲಿ ತನ್ನ ಹೆಸರಿನ ನಾಣ್ಯ ಹಾಗೂ ಪ್ರವಚನ ಜಾರಿಗೊಳಿಸಿದ. ಕೆಲ ದಿನಗಳ ನಂತರ ಅವನು ನಗರವಾಸಿಳಿಗೆ ಆದೇಶ ನೀಡಿದ. ಈಗ ನಗರದ ದರೋಡೆಯನ್ನು ನಿಲ್ಲಿಸಿರಿ. ಆದರೆ ದರೋಡೆಕೋರರು ಬಾದಶಹನ ಆಜ್ಞೆಗೆ ಲಕ್ಷವನ್ನು ಕೊಡದೆ ತಮ್ಮ ಕಾರ್ಯದಲ್ಲಿ ತೊಡಗಿಯೇ ಇದ್ದರು. ಇದನ್ನು ಕಂಡ ಶರೀಫ್ ಮಕ್ಕಿಯು ಈ ಜನರಿಗೆ ಕೊಲ್ಲುವ ಆದೇಶವನ್ನು ಕೊಟ್ಟ. ಆದೇಶ ಪಾಲಿಸಲಾಯಿತು. ಕೇವಲ ಒಂದೇ ದಿನದಲ್ಲಿ ೧೨೦೦೦ ಜನರು ಕೊಲ್ಲಲ್ಪಟ್ಟರು.

ಲೂಟಿ ಮಾಡಿದ ಸಾಮಾನು ಖರೀದಿಸುವಿಕೆ :

ಶರೀಫ್ ಮಕ್ಕಿ ಅಂದರೆ ಸುಲ್ತಾನ ಅಲ್ಲಾವುದ್ದೀನನು ಅಲಿ ಶೋಧ ಹಾಗೂ ಹುಡುಕಾಟದ ನಂತರ ಸಾಕಷ್ಟು ದರೋಡೆ ಮಾಡಿದ ಸಾಮಾನು ಬರಸಿಕೊಂಡನು. ಇದರಿಂದ ಅವನಿಗೆ ಬಹಳಷ್ಟು ಸಂಪತ್ತು ಕೈ ಸೇರಿತು. ಈ ಸಾಮಾನುಗಳಲ್ಲಿ ಒಂದು ಸಾವಿರ ಚಿನ್ನದ ತಬಕಗಳಿದ್ದವು. ಬಂಗ್ಲಾದಲ್ಲಿಯೂ ಈ ರೂಢಿ ಇತ್ತು. ಸರದಾರರು ಚಿನ್ನದ ತಬಕದಲ್ಲಿಯೇ ಭೋಜನ ಮಾಡುತ್ತಿದ್ದರು. ವಿವಾಹ ಹಾಗೂ ಇತರ ಸಮಾರಂಭಗಳಲ್ಲಿ ತಮ್ಮ ಬಂಧು ಬಳಗದವರೆದುರಿಗೆ ಅತಿ ಹೆಚ್ಚೆಚ್ಚು ಚಿನ್ನದ ತಬಕಗಳು ಹಾಜರ ಪಡಿಸುತ್ತಿದ್ದರು. ಅವನು ಅಷ್ಟೇ ಮಹಾನ್ ಸರದಾರರೆನಿಸುತ್ತಿದ್ದನು. ಬಂಗ್ಲಾದಲ್ಲಿ ಇಂದಿಗೂ ಈ ರೂಢಿಯು ಪ್ರಚಲಿತವಿದೆ.

ಹಬಶಿಯರ ದೇಶ ಭ್ರಷ್ಟತೆ :

ಸುಲ್ತಾನ ಅಲ್ಲಾವುದ್ದೀನನು ಅತಿ ಬುದ್ಧಿವಂತ ಹಾಗೂ ಕಾರ್ಯ ಚತುರ ಬಾದಶಹನಾಗಿದ್ದ. ಅವನು ಸಜ್ಜನ ಹಾಗೂ ಉಚ್ಚ ವಂಶದ ಸರದಾರರಿಗೆ ಉತ್ತಮ ಹುದ್ದೆಗಳನ್ನು ಕೊಟ್ಟು ಗೌರವಿಸುತ್ತಿದ್ದನು. ಅವನು ಬಾರಬಕರಿಗೆ **ಚಾಕಿಯಿಂದ** ತಳ್ಳಿ ತನ್ನ ರಾಜ್ಯದಿಂದ ಹೊರಗೆ ಹಾಕಿದನು. ಯಾಕೆಂದರೆ ಕಿಡಿಗೇಡಿತನ ಮತ್ತು ಗುಲ್ಲು ಗಲಾಟೆಯಲ್ಲಿ ವಿಶ್ವಪ್ರಖ್ಯಾತಿಯಾಗಿದ್ದರು. ಇದರಿಂದ ಅವರಿಗೆ ಜೋನಪುರ, ಹಾಗೂ ಹಿಂದುಸ್ತಾನ (ದೆಹಲಿ)ಯ ರಾಜ್ಯಗಳಲ್ಲಿ ಪ್ರವೇಶ ಪಡೆಯಲು ಅನುಮತಿ ದೊರೆಯಲಿಲ್ಲ. ಕೊನೆಗೆ ಅವರು ದಕ್ಷಿಣ ಮತ್ತು ಗುಜರಾತಿನತ್ತ ಪ್ರಯಾಣ ಬೆಳೆಸಿದರು.

ಶಾಂತಿ ಮತ್ತು ಅಭಯ :

ಸುಲ್ತಾನ ಅಲ್ಲಾವುದ್ದೀನನು ಮೊಗಲರಿಗೆ ಹಾಗೂ ಅಪಘಾನರಿಗೆ ವಿಶೇಷ

ರೀತಿಯಿಂದ ತನ್ನ ಗಮನವನ್ನು ಕೇಂದ್ರೀಕರಿಸಿದನು. ಮತ್ತು ಅವರನ್ನು ವಿವಿಧ ಸೇವೆಗಳಲ್ಲಿ ತೊಡಗಿಸಿದ. ಈ ವ್ಯವಸ್ಥೆಯಿಂದ ರಾಜ್ಯದಲ್ಲಿ ಶಾಂತಿ ನೆಲೆಸಿತು. ಹಾಗೂ ಅಧೋಗತಿಯ ಪರಿಸ್ಥಿತಿಗಳು ಸಹ ಬಾದಶಹರ ಆಡಳಿತಾವಧಿಯಲ್ಲಿ ಹುಟ್ಟಿಕೊಂಡಿದ್ದವು. ಈಗ ಸಂಪೂರ್ಣ ಕೊನೆಗೊಂಡಿವೆ. ದೇಶದ ಎಲ್ಲಾ ತಲೆ ತಿರುಕರು ಹಾಗೂ ವಿದ್ರೋಹಿಗಳು ಬಾದಶಹನ ಅಧೀನರಾದರು. ಸುತ್ತಮುತ್ತಲಿನ ರಾಜರುಗಳು ಕೂಡ ವಿಧೇಯತೆ ಹಾಗೂ ವಿಶ್ವಾಸವನ್ನೆ ತಮ್ಮ ಶೀಲವಾಗಿಸಿಕೊಂಡರು.

ಹಜರತ್ ಖುತುಬ್-ಎ-ಆಲಮ್‌ರಿಗೆ ಮನಃಪೂರ್ವಕ ಪ್ರೀತಿ :

ಅಲ್ಲಾವುದ್ದೀನನು ಅನೇಕ ಹಳ್ಳಿಗಳನ್ನು ಹಜರತ್ ಶೇಖ ನೂರ ಖುತ್ಬೆ ಆಲಂರವರ ದಾಸೋಹಗಳ (ಲಂಗರ್) ಖರ್ಚಿಗಾಗಿ ದತ್ತಿ ನೀಡಿದ್ದ. ಇವನಿಗೆ ಹಜರತ ಶೇಖರಿಂದ ಒಳ್ಳೆಯ ಶ್ರದ್ಧೆ ಇತ್ತು. ಅವನು ತನ್ನ ರಾಜಧಾನಿ ಅಕದ್‌ವಾಲಾದಿಂದ ಕಸ್ಬಾ ಖುಂದುವ ಅವರ ಗೋರಿಯ ಜಿಯಾರತೆಗಾಗಿ ಪದೆ ಪದೆ\ಅನೇಕ ಬಾರಿ ಹೋಗುತ್ತಿದ್ದನು.

ಮರಣ :

ಅಲಾವುದ್ದೀನನು ೪೭ ವರ್ಷಗಳವರೆಗೆ ಅತ್ಯಂತ ಶಾಂತಿ, ಸಮೃದ್ಧಿ ಹಾಗೂ ಉತ್ತಮ ರೀತಿಯಿಂದ ಆಡಳಿತ ಗೈದು ೯೨೭ ಹಿಜರಿಯಲ್ಲಿ ಭೌತಿಕ ಮರಣವನ್ನು ಹೊಂದಿದನು.

■

*

೨೩. ನಶೀಬ್‌ಶಾಹ ತಂದೆ ಅಲಾವುದ್ದೀನ ಶಾಹ

ಭ್ರಾತೃಗಳಲ್ಲಿ ಪ್ರೇಮ :

ಸುಲ್ತಾನ ಅಲ್ಲಾವುದ್ದೀನನ ಮರಣದ ನಂತರ ಹದಿನೆಂಟು (೧೮) ಪುತ್ರರನ್ನು ಸ್ಮಣಾರ್ಥ ಬಿಟ್ಟಿದ್ದರು. ಇವರಲ್ಲಿ ನಶೀಬ್‌ಶಾಹ ಜ್ಯೇಷ್ಠಪುತ್ರನಾಗಿದ್ದ. ಸರದಾರರು ಹಾಗೂ ರಾಜ್ಯದ ಸದಸ್ಯರು ಇವನನ್ನು ತಮ್ಮ ಬಾದಶಹನೆಂದು ಒಪ್ಪಿಕೊಂಡರು. ನಶೀಬ್‌ಶಾಹನು ಇಂತಹದೆಂದು ಕೆಲಸ ಮಾಡಿದ ತನ್ನದೆ ಆದ ಉದಾಹರಣೆ ಇದೆ. ಇವನು ತನ್ನ ತಮ್ಮಂದಿರಲ್ಲಿ ಯಾರಿಗೂ ಹಾನಿಗೈಯಲಿಲ್ಲ. ಮತ್ತು ಯಾರಿಗೂ ಬಂಧಿಸಲಿಲ್ಲ. ಇದಲ್ಲದೆ ಅವರಿಗೆ ಎಲ್ಲಾ ರೀತಿಯಿಂದ ಮೊದಲಿಗಿಂತಲೂ ಹೆಚ್ಚಿನ ಸೌಲಭ್ಯಗಳನ್ನು ಕೊಟ್ಟನು. ಅಲಾವುದ್ದೀನನು ತನ್ನ ಮಕ್ಕಳಿಗೆ ಕೊಡುವುದರಲ್ಲಿ ಹೆಚ್ಚಿಸಿದ.

ಅಫಘಾನಿ ಸರದಾರರ ಆಗಮನ :

ನಶೀಬಶಾಹನ ಆಡಳಿತಾವಧಿಯಲ್ಲಿಯೆ ಜಹೀರುದ್ದೀನ ಬಾಬರನು ಇಬ್ರಾಹಿಂ ಲೋಧಿಯನ್ನು ಕೊಲೆಗೈದು ಹಿಂದುಸ್ತಾನವನ್ನು ಸ್ವಾಧೀನಪಡಿಸಿಕೊಂಡ. ಇದರಿಂದಾಗಿ ಅನೇಕ ಅಫಘಾನ ಸರದಾರರು ದಿಲ್ಲಿಯಿಂದ ಓಡಿ ನಶೀಬಶಾಹನಲ್ಲಿ ಆಶ್ರಯ ಪಡೆದರು. ಇಬ್ರಾಹಿಂ ಲೋಧಿಯ ತಮ್ಮ ಸುಲ್ತಾನ ಮಹಮ್ಮದನು ಬಂಗ್ಲಾಕ್ಕೆ ಆಗಮಿಸಿದನು. ನಶೀಬಶಾಹನು ಈ ಎಲ್ಲ ಆಶ್ರಯದಾತರ ಜೊತೆಗೆ ಒಳ್ಳೆಯ ರೀತಿಯಿಂದ ವರ್ತಿಸಿದ. ಇವರಲ್ಲಿ ಪ್ರತಿಯೊಬ್ಬರಿಗೆ ಇವರ ಸ್ಥಿತಿಗನುಗುಣವಾಗಿ ಜಾಗೀರ ಕೊಟ್ಟನು. ಸುಲ್ತಾನ ಇಬ್ರಾಹಿಂ ಲೋಧಿಯ ಮಗಳೂ ಬಂಗಾಲದಲ್ಲಿ ಆಶ್ರಯವನ್ನು ಪಡೆದಿದ್ದಳು. ನಶೀಬಶಾಹನು ಇವಳೊಂದಿಗೆ ಮದುವೆಯಾದನು.

ಬಂಗಾಲ ಮುತ್ತಿಗೆಯ ಬಾಬರನ ಸಂಕಲ್ಪ :

ಜಹಿರುದ್ದೀನ ಬಾಬರನು ೯೩೫ ಹಿಜರಿಯಲ್ಲಿ ಜೋನಪುರ ಸ್ವಾಧೀನಪಡಿಸಿಕೊಂಡ. ಮತ್ತು ತದನಂತರ ಬಂಗಾಲವನ್ನು ಗೆಲ್ಲುವ ಉದ್ದೇಶದಿಂದ ಮುಂದೆ ಸಾಗಿದ.

ನಶೀಬಶಾಹನಿಗೆ ಈ ಸುದ್ದಿ ತಲುಪಿದಾಕ್ಷಣವೇ ಅವನು ಚಿಂತಾಕ್ರಾಂತನಾದ. ಅವನು ಅನೇಕ ಹೆಚ್ಚಿನ ಬೆಲೆಯುಳ್ಳ ಕಾಣಿಕೆಗಳನ್ನು ಬಾಬರನ ಸೇವೆಯಲ್ಲಿ ರವಾನಿಸಿದ. ಹಾಗೂ ತನ್ನ ವಿಧೇಯತೆಯನ್ನು ಖಾತರಿಗೊಳಿಸಿದ. ಬಾಬರನು ತನ್ನ ಧೋರಣೆಯನ್ನವಲಂಬಿಸಿ ಒಪ್ಪಂದ ಮಾಡಿಕೊಂಡು ಬಂಗಾಲ ಗೆಲ್ಲುವ ಉದ್ದೇಶವನ್ನು ತ್ಯಜಿಸಿದ.

ಬಹದೂರ ಗುಜರಾತಿಯ ಜೊತೆ ಮೈತ್ರಿಯ ಸಂಬಂಧ :

ಬಾಬರನ ನಂತರ ಹುಮಾಯುನನು ಬಂಗಲಾ ಗೆಲ್ಲುವ ಸಂಕಲ್ಪ ಮಾಡಿದ. ನಶೀಬಶಾಹನಿಗೆ ಈ ಸುದ್ದಿ ತಲುಪಿದಾಗ ಅವನು ೯೩೬ ಹಿಜರಿಯಲ್ಲಿ ಸುಲ್ತಾನ ಬಹದೂರ್ ಗುಜರಾತಿಯವರ ಜೊತೆ ಮೈತ್ರಿಯ ಸಂಬಂಧವನ್ನು ಬೆಳೆಸಲೆತ್ನಿಸಿದ. ಹಾಗೂ ಮಲಿಕ ಮುರ್ಜಾನ ಖ್ವಾಜಾಸರಾನ ವತಿಯಿಂದ ಅತಿ ಬೆಲೆಯುಳ್ಳ ಕಾಣಿಕೆಗಳನ್ನು ಬಹದೂರಶಾಹನ ಸೇವೆಯಲ್ಲಿ ರವಾನಿಸಿದನು. ಮಲಿಕ ಮುರ್ಜಾನನು ಮಂದು ಕೋಟೆಯಲ್ಲಿ ಗುಜರಾತಿನ ಬಾದಶಹನ ಭೇಟಿ ಮಾಡಿದನು. ಬಾದಶಹನು ಮಲಿಕ ಮುರ್ಜಾನನಿಗೆ ಶಾಹಿ ಗೌರವವಸ್ತ್ರ ಹಾಗೂ ಕಾಣಿಕೆಗಳನ್ನು ಕರುಣಿಸಿದನು.

ನಶೀಬಶಾಹನ ಮರಣ :

ಅದೆ ಕಾಲದಲ್ಲಿ ನಶೀಬಶಾಹನು ಸೈಯದ್ ಎಂದು ದಾವೆ ಮಾಡುತ್ತಿದ್ದ. ಅತ್ಯಾಚಾರ ಹಾಗೂ ಹಿಂಸೆಯನ್ನೆ ತನ್ನ ಪ್ರವೃತ್ತಿಯನ್ನಾಗಿಸಿಕೊಂಡ. ಹಾಗೂ ಪ್ರಜರಿಗೆ ಬಗೆಬಗೆಯ ತೊಂದರೆ ಹಾಗೂ ತಾಪತ್ರೆಯನ್ನು ಕೊಡಹತ್ತಿದನು. ಇದರಿಂದಾಗಿ ಪ್ರಜರು ಇವನ ವಿರುದ್ಧವಾದರು. ಪ್ರಜರು ಅಪಹರಕೆಗಳು ಪರಿಣಾಮಕಾರಿಯಾದವು. ೯೪೨ ಹಿಜರಿಯಲ್ಲಿ ನಶೀಬಶಾಹನು ತನ್ನ ಸ್ವಾಭಾವಿಕ ಅಥವಾ ಕೊಲೆಯಿಂದ ಸಾವನ್ನಪ್ಪಿದನು.

ನಶೀಬಶಾಹನ ನಂತರ :

ನಶೀಬಶಾಹನ ನಂತರ ಓರ್ವ ಬೆಂಗಾಲಿ ಸರದಾರ ಸುಲ್ತಾನ ಮಹ್ಮೂದನು ಬಂಗಾಲದಲ್ಲಿ ತನ್ನ ಆಡಳಿತವನ್ನು ಸ್ಥಾಪಿಸಿದನು. ಶೇರಶಾಹ ಸೂರಿಯು ನಂತರ ಹಿಂದುಸ್ತಾನದ ಬಾದಶಹನಾದನು. ಸುಲ್ತಾನ ಮಹಮ್ಮದನ ಮೇಲೆ ದಾಳಿ ಮಾಡಿದನು. ಸುಲ್ತಾನ ಮಹಮ್ಮದನು ಹುಮಾಯುನನಲ್ಲಿ ಆಶ್ರಯ ಪಡೆದನು. ೯೬೫ ಹಿಜರಿಯಲ್ಲಿ ಹುಮಾಯುನನು ಬಂಗಾಲವನ್ನು ಶೇರಶಾಹ ಸೂರಿಯ ಸ್ವಾಧೀನತೆಯಿಂದ ತೆಗೆದುಕೊಂಡನು. ಕೋರ ನಗರದಲ್ಲಿ ತನ್ನ ಹೆಸರಿನ ನಾಣ್ಯ ಹಾಗೂ ಪ್ರವಚನವನ್ನು ಜಾರಿಗೊಳಿಸಿದನು. ಈ ನಗರಕ್ಕೆ "ಜನ್ನತಾಬಾದ" ಎಂಬ ಹೆಸರನ್ನು ಕೊಟ್ಟನು. ದೀರ್ಘಾವಧಿಯವರೆಗೂ ಬಂಗಾಲ ರಾಜ್ಯವನ್ನು ತನ್ನ ಸ್ವಾಧೀನದಲ್ಲಿರಿಸಿಕೊಳ್ಳಲಿಲ್ಲ. ಶೇರಶಾಹನು ಪುನಃ ಇಲ್ಲಿ ತನ್ನ ಆಡಳಿತವನ್ನು ನೆಲೆಗೊಳಿಸಿದನು. ಸಲೀಮಶಾಹ

ಸೂರಿಯು ತನ್ನ ಆಡಳಿತದಲ್ಲಿ ಮೊಹಮ್ಮದಶಾಹ ಹೆಸರಿನ ಓರ್ವ ಸರದಾರನಿಗೆ ಬಂಗಾಲದ ಒಡೆಯನೆಂದು ನಿಯಮಿಸಿದನು. ಮೊಹ್ಮದಖಾನನ ಮರಣದ ನಂತರ ಅವನ ಮಗನು ಸಲಿಂಶಾಹನ ವಿರೋಧಿಯಾದನು. ಅವನು ಸುಲ್ತಾನ ಬಾಹದೂರಶಾಹನೆಂದು ಬಿರುದು ಧರಿಸಿ ಬಂಗಾಲದಲ್ಲಿ ತನ್ನ ಹೆಸರಿನ ನಾಣ್ಯ ಹಾಗೂ ಪ್ರವಚನ(ಖುತ್ಬಾ)ವನ್ನು ಜಾರಿಗೆ ತಂದನು.

■

*

೨೪. ಸುಲ್ತಾನ ಬಹಾದೂರಶಾಹ

ಬಹಾದೂರಶಾಹನು ಸಲೀಂ ಸೂರಿಯ ವಿರುದ್ಧ ದಂಗೆಯ ಧ್ವಜವನ್ನು ಎತ್ತರಗೊಳಿಸಿ ಬಂಗಾಲದಲ್ಲಿ ತನ್ನ ಸ್ವತಂತ್ರ ರಾಜ್ಯವನ್ನು ಸ್ಥಾಪಿಸಿಕೊಂಡನು. ಸಲೀಂಶಾಹನ ಬೇರೊಬ್ಬ ಸರದಾರ ಸುಲೇಮಾನ ಕರಾನಿ ಅಫಘಾನನು ಸುಲ್ತಾನ ಬಹದ್ದೂರಶಾಹನ ಜೊತೆ ಯುದ್ಧಗೈದು ಅವನಿಗೆ ಸೋಲಿಸಿದನು.

■

*

೨೫. ಸುಲೇಮಾನ ಕರಾನಿ ಅಫಘಾನಿ

ಸಲೀಂಶಾಹನ ಮರಣದ ನಂತರ ಸುಲೇಮಾನ ಕರಾನಿ ಅಫಘಾನಿಯು ಬಂಗಾಲದ ಶಾಶ್ವತ ಬಾದಶಹನಾದ. ಅವನು ಹಜರತ ಬಿರುದನ್ನು ಧರಿಸಿ ತನ್ನನ್ನು ಪ್ರಚುರಗೊಳಿಸಿಕೊಂಡನು. ಸುಲೇಮಾನ ಕರಾನಿಯು ತೋರಿಕೆಯಲ್ಲಿ ಜಲಾಲುದ್ದೀನ ಅಕ್ಬರನ ವಿಧೇಯತೆಯ ಡಂಬಾಚಾರದ ಸ್ನೇಹದಿಂದ ವ್ಯವಹರಿಸುತ್ತಿದ್ದನು. ಒಮ್ಮೊಮ್ಮೆ ಅಕ್ಬರನ ಸೇವೆಯಲ್ಲಿ ಕಾಣಿಕೆಗಳನ್ನು ಕಳುಹಿಸುತ್ತಿದ್ದನು. ಈ ಬಾದಶಹನು ೨೫ ವರ್ಷಗಳವರೆಗೆ ಆಡಳಿತಗೈದ ನಂತರ ೯೮೧ ಹಿಜರಿಯಲ್ಲಿ ಮೃತಪಟ್ಟನು.

■

*

೨೬. ಬಾಯಜೀದ ತಂದೆ ಸುಲೇಮಾನ

ಸುಲೇಮಾನ ಕರಾನಿಯ ನಿಧನದ ನಂತರ ಇವನ ಪುತ್ರ ಬಾಯಜೀದನು ಬಂಗಾಲದ ಒಡೆಯನಾದನು. ಬಾಯಜೀದನ ಆಡಳಿತವು ಕೇವಲ ಒಂದೇ ತಿಂಗಳು ಕಳೆದಿತ್ತು. ಅವನ ಚಿಕ್ಕಪ್ಪನ ಮಗ ಹಾಂಸು ಅಫಘಾನಿಯು ದಿವಾನ ಖಾನೆಯಲ್ಲಿಯೇ ಬಾಯಜೀದನನ್ನು ಕೊಂದನು. ಅದೇ ಸ್ಥಳದಲ್ಲಿಯೇ ಜನರು ಹಾಂಸುನನ್ನು ಕೂಡ ಕೊಂದರು. ಬಾಯಜೀದ ನಂತರ ಈತ ಚಿಕ್ಕ ತಮ್ಮನಾದ ದಾವುದ್‌ಖಾನನು ಆಡಳಿತದ ಚುಕ್ಕಾಣಿಯನ್ನು ತನ್ನ ಕೈಯಲ್ಲಿ ತೆಗೆದುಕೊಂಡನು.

■

*

೨೭. ದಾವುದ್‌ಖಾನ ತಂದೆ ಸುಲೇಮಾನಖಾನ

ಬಾಯಜೀದನ ಕೊಲೆ ನಂತರ ಬಂಗಾಲದ ಆಡಳಿತವು ದಾವುದ್‌ಖಾನನ ಕೈ ಸೇರಿತು. ಅವನು ವಿದ್ರೋಹಿ ಹಾಗೂ ಜಗಳಗಂಟರನ್ನು ಧ್ವಂಸಪಡಿಸಿ, ರಾಜ್ಯದಲ್ಲಿ ತನ್ನ ಹೆಸರಿನ ನಾಣ್ಯ ಹಾಗೂ ಪ್ರವಚನವನ್ನು ಜಾರಿಗೊಳಿಸಿದನು. ದಾವುದ್‌ಖಾನನಿಗೆ ಶೆರೆಯಿಂದ ಅತಿಯಾಗಿ ಪ್ರೀತಿಸುತ್ತಿದ್ದ ಈತನ ಸಭೆಯಲ್ಲಿ ಶೀಲಹೀನರು ಹಾಗೂ ಲಫಂಗರು ತುಂಬಿರುತ್ತಿದ್ದರು.

ಮುನಮಖಾನನು ಬಂಗಾಲದ ಮೇಲೆ ದಾಳಿ :

ಅಕ್ಬರ ಬಾದಶಹನಿಗೆ ದಾವುದ್‌ಖಾನನಿಗೂ ಅಪ್ರಿಯನು. ಯಾಕೆಂದರೆ ಅಕ್ಬರ ರಾಜ್ಯಕ್ಕೆ (ದಾವುದ್) ಈತನಿಂದ ಹಾನಿಯುಂಟಾಗಿತ್ತು. ಅಕ್ಬರನು ಜೋನಪುರದ ಆಡಳಿತಗಾರನಾದ ಮುನಮ್‌ನನ್ನು ದಾವುದ್‌ಖಾನನನ್ನು ಹತೋಟಿಗೆ ತರಲು ನಿಯಮಿಸಿದನು. ದಾವುದ್‌ಖಾನನು ತನ್ನೊಬ್ಬ ಅಫಘಾನಿ ಸರದಾರನು ಅವನ ಹೆಸರು ಲೂಧಿಖಾನವಿತ್ತು. ಮುನಮ್‌ಖಾನನ ಜೊತೆ ಹೋರಾಡಲು ಕಳುಹಿಸಿಕೊಟ್ಟ. ಇತ್ತಂಡದವರು ಎದುರಾಗಿ ಬಂದರು. ಯುದ್ಧ ಪ್ರಾರಂಭವಾಯಿತು. ಕೆಲವು ದಿನಗಳವರೆಗೆ ನಡೆಯಿತು. ಕೊನೆಗೆ ಮುನಮ್‌ಖಾನ ಹಾಗೂ ಲೂಧಿಖಾನ ಇವರೀರ್ವರೂ ಸಂಧಾನ ಮಾಡಿಕೊಂಡರು. ಮತ್ತು ಈರ್ವರು ತಮ್ಮ ತಮ್ಮ ರಾಜ್ಯಕ್ಕೆ ಮರಳಿದರು.

ದಾವುದ್‌ನು ಅಕ್ಬರ ಸೈನ್ಯದೊಡನೆ ಹೋರಾಟ.

ಅಕ್ಬರನು ಮತ್ತೊಮ್ಮೆ ಮುನಖಾನ ಹಾಗೂ ಖಾನಖಾನಾನರಿಗೆ ಬಂಗಾಲಾವನ್ನು ಸ್ವಾಧೀನಪಡಿಸಿಕೊಳ್ಳಲು ನೇಮಿಸಿದ. ಅಂದಿನ ದಿನದಂದು ದಾವುದ್‌ಖಾನ ಹಾಗೂ ಲೂಧಿಖಾನನಲ್ಲಿ ಇವನು ಹೆಸರುವಾಸಿ ಅಫಘಾನಿ ಸರದಾರನಿದ್ದ. ಯಾವುದೊಂದು ಸಂಗತಿಯಲ್ಲಿ ಜಗಳವಾಯಿತು. ಈ ಸುದ್ದಿ ದಾವುದ್‌ಖಾನನಿಗೆ ಗೊತ್ತಾಯಿತು. ಖಾನಖಾನಾ ಬಂಗಾಲಾವನ್ನು ಸ್ವಾಧೀನಪಡಿಸಿಕೊಳ್ಳಲು ಬರುವನು. ಇದರಿಂದಾಗಿ

ಅವನು ಪರೇಶಾನ ಆದನು. ಹೀಗಾಗಿ ಅವನು ಲೂಧಿಖಾನನಿಗೆ ಒಂದು ಪತ್ರ ಬರೆದು ಅವನಿಗೆ ತನ್ನ ನಿಸ್ಸಹಾಯಕತೆ ಹಾಗೂ ದುರ್ಬಲತೆಯ ಕಾರಣ ತೋರಿಸಿ ಒಪ್ಪಂದ ಮಾಡಿಕೊಂಡ ತದನಂತರ ಲೂಧಿಖಾನ ಬಹದ್ದುರ ಸರದಾರನನ್ನು ಕೊಂದು, ಸಂವನ ಹಾಗೂ ಗಂಗಾ ನದಿಯ ಸಂಗಮದಲ್ಲಿ ಅಕ್ಬರನ ಸೈನ್ಯದೊಂದಿಗೆ ಯುದ್ಧ ಮಾಡಿದ.

ದಾವುದ್‌ನ ಸೋಲು ಹಾಗೂ ಪಲಾಯನ :

ಇತ್ತಂಡಗಳಲ್ಲಿ ಭೀಕರ ಯುದ್ಧ ನಡೆಯಿತು. ಇದರ ಪರಿಣಾಮವಾಗಿ ಅಫಘಾನಿಯು ಸೋಲನಪ್ಪಿ ಪಲಾಯನಗೈದರು. ಮೊಗಲರು ಅಫಘಾನರ ಹಲವು ನಾವೆಗಳನ್ನು ತಮ್ಮ ಸ್ವಾಧೀನಪಡಿಸಿಕೊಂಡರು. ಇವುಗಳ ಮುಖಾಂತರ ನದಿಯನ್ನು ದಾಟಿ ಎರಡನೆಯ ದಡಕ್ಕೆ ತಲುಪಿದರು. ಮುನಂಖಾನನು ಈ ಕೋಟೆಯನ್ನು ಮುತ್ತಿದನು. ಇದರಲ್ಲಿ ದಾವುದ್‌ಖಾನನು ಆಶ್ರಯ ಪಡೆದಿದ್ದನು. ಕೋವಿಯ ನಿವಾಸಿಗರ ಹಾಗೂ ಮೊಗಲ ಸೈನಿಕರ ಜೊತೆ ಯುದ್ಧ ನಡೆಯಿತು. ಈ ಮಧ್ಯದಲ್ಲಿ ಅಕ್ಬರನು ಆಗಮಿಸಿದನು. ಹಾಗೂ ದಾವುದ್‌ನು ಪಲಾಯನ ಬೆಳೆಸಿದನು. ಮೊಗಲರು ಪಟನಾ, ಹಾಜಿಪುರ ಕೋಟೆಗಳನ್ನು ಗೆದ್ದು ದಾವುದ್‌ನ ೪೦೦ ಆನೆಗಳನ್ನು ತಮ್ಮ ಸ್ವಾಧೀನಪಡಿಸಿಕೊಂಡನು.

ದಾವುದ್‌ನು ಉಡೇಸಾದಲ್ಲಿ :

ದಾವುದ್‌ನು ಬಂಗಾಲದ ಕಡೆಗೆ ಪ್ರಯಾಣ ಬೆಳೆಸಿದ. ಹಾಗೂ ಗಡಿಯನ್ನು ತಲುಪಿದ. ಅಲ್ಲಿಂದ ಅವನು ಉಡೇಸದ ಕಡೆಗೆ ಪ್ರಯಾಣ ಬೆಳೆಸಿದ. ಕೆಲವು ಮೊಗಲ ಸರದಾರರು ಉಡೇಸಾದಲ್ಲಿದ್ದರು. ದಾವುದ್‌ಖಾನನ ಮಗ ಜುನೇದನ ಜೊತೆ ಯುದ್ಧ ಮಾಡಿದರು. ಆದರೆ ಅವರು ಅವನ ಜೊತೆ ಯುದ್ಧ ಮಾಡುವ ಸಾಹಸಗೈಯಲಿಲ್ಲ. ಕುಸಿದುಹೋದರು. ಈ ಸುದ್ದಿ ಮುನಂಖಾನನಿಗೆ ತಿಳಿಯಿತು. ಅವನು ಉಡೇಸಾದ ಕಡೆಗೆ ಪ್ರಯಾಣ ಬೆಳೆಸಿದನು.

ದಾವುದ್ ಮತ್ತು ಮನಂರಲ್ಲಿ ಒಪ್ಪಂದ :

ದಾವುದ್ ಮತ್ತು ಮುನಿಂಖಾನರಲ್ಲಿ ಭಯಂಕರ ಯುದ್ಧವಾಯಿತು. ಈ ಯುದ್ಧದಲ್ಲಿ ಮತ್ತೆ ದಾವುದ್‌ನಿಗೆ ಸೋಲಾಯಿತು. ಗಂಗಾನದಿಯ ದಡದಲ್ಲಿದ್ದ ಕೋಟೆಯಲ್ಲಿ ದಾವುದನು ಆಶ್ರಯ ಪಡೆದನು. ದಾವುದನು ಈ ಕೋಟೆಯಲ್ಲಿ ತನ್ನ ಮಕ್ಕಳನ್ನು ಇಲ್ಲಿಯೇ ಬಿಟ್ಟು ಮತ್ತೊಮ್ಮೆ ಯುದ್ಧ ಮಾಡಲು ವೈರಿಯ ಎದುರಿಗೆ ಬಂದನು. ದಾವುದಖಾನ ಹಾಗೂ ಮುನಂ ಈರ್ವರಲ್ಲಿ ಒಪ್ಪಂದವಾಯಿತು. ಮುನಂನು ಉಡೇಸಾ ಹಾಗೂ ಬನಾಸರಗಳನ್ನು ದಾವುದ ಸ್ವಾಧೀನ ಕೊಟ್ಟು ಉಳಿದ ರಾಜ್ಯವನ್ನು ತನ್ನ ಸ್ವಂತದ ಸ್ವಾಧೀನಪಡಿಸಿಕೊಂಡನು.

ದಾವುದನ ಕೊಲೆ ಹಾಗೂ ಸಲಾತೀನ ಪೂರ್ವಬಿಯ ಅಂತ್ಯ :

ಕೆಲ ಕಾಲದ ನಂತರ ಮುನಂಖಾನನು ಮರಣ ಹೊಂದಿದನು. ಅಕ್ಬರನು ಖಾನಜಾನ ತುರಕ್ಮಾನನಿಗೆ ಅಲ್ಲಿಯ ಒಡೆಯನಾಗಿಸಿದ. ಮುನಂಖಾನನ ಮರಣದ ನಂತರ ದಾವುದಖಾನನು ಮತ್ತೊಮ್ಮೆ ಬಂಗಾಲವನ್ನು ಸ್ವಾಧೀನಪಡಿಸಿಕೊಂಡನು. ಖಾನಜಹಾನ ತುರಕ್ಮಾನನು ೯೮೩ ಹಿಜರಿಯಲ್ಲಿ ಗಢ ಹಾಗೂ ಟಾಂಡರ ಮಧ್ಯದಲ್ಲಿ ದಾವುದಖಾನನು ಯುದ್ಧ ಮಾಡಿದನು. ದಾವುದಖಾನನು ಈ ಯುದ್ಧದಲ್ಲಿ ಮಡಿದನು. ಅವನ ಮಗ ಅತಿಯಾಗಿ ಗಾಯಗೊಂಡನು. ಆದರೆ ಎರಡು ಮೂರು ದಿನಗಳವರೆಗೆ ಬದುಕಿದ್ದು ಕೊನೆಗೆ ಮರಣ ಹೊಂದಿದನು. ಈ ಘಟನೆಯಿಂದ ಉಡೇಸಾ, ಬಂಗಾಲಾ ಹಾಗೂ ಬನಾರಸ ಇತ್ಯಾದಿ ರಾಜ್ಯಗಳು ಖಾನಜಹಾನನ ಪ್ರಯತ್ನದಿಂದ ಮೊಗಲ ಸಾಮ್ರಾಜ್ಯದ ಸೊತ್ತಾದವು. ಹೀಗಾಗಿ ಸಲಾತೀನ ಫಾರೂಖಿಯ ಆಡಳಿತದ ಅಂತ್ಯವಾಯಿತು.

ಉಸ್ಮಾನ ಅಫಘಾನಿಯ ದಂಗೆ :

ಅಫಘಾನಿ ಸರದಾರ ಹಾಗೂ ಮತ್ತಿತರರು ಹುಸೇನಖಾನನ ಅತ್ತಿತ್ತ ಆಶ್ರಯ ಪಡೆದಿದ್ದರು. ಮೊಗಲರ ಅಧೀನತೆಯಿಂದ ಬೇಸರಗೊಂಡು ಬಂಗಾಲದ ಗಡಿಯಲ್ಲಿಯ ಸ್ಥಳಗಳಲ್ಲಿ ವಾಸವಾದರು. ಅಕ್ಬರನ ಮರಣದ ನಂತರ ಉಸ್ಮಾನ ಹೆಸರಿನ ಅಫಘಾನನು ೩೦೦೦೦ ಸಾವಿರ ಅಫಘಾನ ಸೈನಿಕರನ್ನು ಕೂಡಿಸಿ ದಂಗೆಯನ್ನು ಮಾಡಿ ನೂರುದ್ದೀನನ ಆಡಳಿತಕ್ಕೆ ಹಾನಿಯುಂಟು ಮಾಡಲು ಪ್ರಯತ್ನಿಸಿದನು. ಬಂಗಾಲದ ಒಡೆಯ ಇಸ್ಲಾಮ್‌ಖಾನ ಹಾಗೂ ಶೇಖ ಬದ್ರುದ್ದೀನ ಫತ್ತೇಪುರಿಯವರನ್ನು ಇವನನ್ನು ಸ್ವಾಧೀನಪಡಿಸಿಕೊಳ್ಳಲು ನಿಯಮಿಸಿದನು. ಆದರೆ ೧೦೧೮ ಹಿಜರಿಯವರೆಗೂ ಯಾವ ಬಗೆಯ ನಿರ್ಣಯವಾಗಲಿಲ್ಲ.

■

VII. ಸಲಾತೀನ ಷರ್ಖಿಯಾ

*

ಪಿಠೀಕೆ

ಮೇಲೆ ನಮೂದಿಸಲಾದ ವಾಕ್ಯಗಳಲ್ಲಿ ಉಲ್ಲೇಖಗೊಂಡಿದೆ. ಯಾವ ಬಾದಶಹರು ಜೋನಪುರ ಹಾಗೂ ತರದವ್ ರಾಜ್ಯಗಳಲ್ಲಿ ಆಡಳಿತಗೈದರು, ಇತಿಹಾಸಕಾರರ ಪಾರಿಭಾಷೆಯಲ್ಲಿ ಸಲಾತೀನ ಷರ್ಖಿಯ ಎನ್ನುವರು.

*

೧. ಸುಲ್ತಾನುಲ್‌ಷರ್ಖಿ ಖ್ವಾಜಾಜಹಾನ

ಜಮಾದಿಲ್ ಅವ್ವಲ್ ೭೯೬ ಹಿಜರಿಯಲ್ಲಿ ನಾಸಿರುದ್ದೀನ ಮಹ್ಮೂದಶಾಹನೆ ಖ್ವಾಜಾಜಾಹಾನ್‌ನಿಗೆ ಮಲಿಕುಶ್ಷಬ್ ಎಂಬ ಬಿರುದನ್ನು ಕರುಣಿಸಿ ಹಾಗೂ ಅವನಿಗೆ ಜೋನಪುರ, ತರಹತ್ ಹಾಗೂ ಬಿಹಾರದ ಒಡೆಯನೆಂದು ನೇಮಿಸಿದನು. ಖ್ವಾಜಾಜಾಹಾನನು ಈ ಪ್ರದೇಶದ ವ್ಯವಸ್ಥೆಯನ್ನು ಚನ್ನಾಗಿಗೈದನು. ಹಾಗೂ ತನ್ನ ಉತ್ತಮ ಶೈಲಿಯಿಂದ ಸುತ್ತಮುತ್ತಲಿನ ರಾಜರುಗಳನ್ನು ತನ್ನ ಅಧೀನಪಡಿಸಿಕೊಂಡನು. ಆ ಕೋಟೆಗಳು ಮುಸ್ಲಿಮೇತರ ಸ್ವಾಧೀನದಲ್ಲಿದ್ದವು. ಅವುಗಳನ್ನು ತನ್ನ ಸ್ವಾಧೀನಪಡಿಸಿಕೊಂಡು ನಾಶಗೊಳಿಸಿದನು. ಮತ್ತೆ ಅವುಗಳನ್ನು ನಿರ್ಮಾಣಗೊಳಿಸಿ ಅನುಭವಿ ಸೈನಿಕರಿಗೊಪ್ಪಿಸಿದನು.

ಕ್ರಮೇಣ ಖ್ವಾಜಾಜಾಹಾನನ ಶಕ್ತಿಯು ಹೆಚ್ಚಳವಾಯಿತು. ಮತ್ತು ಅವನು ನಾಸೀರುದ್ದೀನ ಮಹ್ಮೂದನ ಪ್ರಭಾವವನ್ನು ಕಡಿಮೆ ಮಾಡಿ ಸುಲ್ತಾನುಶ್ಷರ್ಖಿನ ಬಿರುದು ಧರಿಸಿಕೊಂಡನು. ಅವನು ದಿಲ್ಲಿಯ ಕಡೆಯಿಂದ ಪರಗನ ಕೋಲದಿಂದ ಅಬ್ಬಿಯವರೆಗೆ, ಮತ್ತೊಂದೆಡೆ ಬಿಹಾರದಿಂದ ತರಹತನವರೆಗೆ ಎಲ್ಲಾ ವಿದ್ರೋಹಿ ಹಾಗೂ ತಲೆತಿರುಕರನ್ನು ತನ್ನಾಧೀನ ಪಡಿಸಿಕೊಂಡ ಹಾಗೂ ಒಳ್ಳೆಯ ವೈಭವದಿಂದ ಆಡಳಿತ ನಡೆಯಿಸಿದನು. ಅವನು ತನ್ನ ಭಯ ಭೀತಿ ಇಂತಿಷ್ಟು ಕೂಡಿಸಿದ. ಇದರಿಂದ ಬಂಗಾಲದ ಹಾಗೂ ಲಖ್ನೂತಿಯ ಬಾದಶಾಹರು ಕೂಡ ಉತ್ತಮ ರೀತಿಯಿಂದ ನಡೆದುಕೊಳ್ಳುತ್ತಿದ್ದರು. ಹಾಗೂ ಅವನ ಸೇವೆಯಲ್ಲಿ ಕಾಣಿಕೆಗಳನ್ನು ಕಳುಹಿಸುತ್ತಿದ್ದರು. ಸುಲ್ತಾನುಶ್ಷರ್ಖಿನು ಆರು ವರ್ಷದವರೆಗೆ ಆಡಳಿತ ನಡೆಯಿಸಿ ೮೦೩ ಹಿಜರಿಯಲ್ಲಿ ಮೃತಪಟ್ಟನು.

■

*

೨. ಮುಬಾರಕ ಶಾಹ ಷರ್ಖಿ

ಸುಲ್ತಾನುಷರ್ಖಿಯ ಮರಣದ ನಂತರ ಅವನ ದತ್ತಕ ಪುತ್ರನಾದ ಕರ್ನಾಫಲನು ಆಡಳಿತ ಚುಕ್ಕಾಣಿಯನ್ನು ತನ್ನ ಕೈಯಲ್ಲಿ ತೆಗೆದುಕೊಂಡನು. ಅವನು ಜೋನಪುರ ಹಾಗೂ ಇತರ ನಗರಗಳಲ್ಲಿ ಸತ್ತೆಯನ್ನು ಹೂಡಿ ತನ್ನ ಶಕ್ತಿಯನ್ನು ಅತಿಶಯವಾಗಿ ಹೆಚ್ಚಿಸಿಕೊಂಡನು. ಅಂದು ದಿಲ್ಲಿಯ ಆಡಳಿತವು ಅರ್ಧ ಪತನದಲ್ಲಿತ್ತು. ಮಲಿಕ ಕರ್ನಾಫಲನು ಸಮಯ ಸಾಧಿಸಿಕೊಂಡು ಲಾಭ ಪಡೆದನು. ಹಾಗೂ ತನ್ನ ಸೈನ್ಯದ ಸರದಾರರ ಸಲಹೆ ಪಡೆದು ಮುಬಾರಕಶಾಹನೆಂಬ ಬಿರುದು ಧರಿಸಿ ತನ್ನ ಸ್ವತಂತ್ರವಾದ ರಾಜ್ಯವನ್ನು ಸ್ಥಾಪಿಸಿಕೊಂಡನು. ಸುಲ್ತಾನ ಮಹ್ಮೂದನ ವಕೀಲ ಎಮುತ್ತಲಬ್ ಇಕ್ಬಾಲಖಾನನಿಗೆ ಈ ಸುದ್ದಿ ಮುಟ್ಟಿದಾಗ ಅತಿ ಕುಪಿತನಾಗಿ ೮೦೪ ಹಿಜರಿಯಲ್ಲಿ ಮುಬಾರಕಶಾಹನ ಮೇಲೆ ದಾಳಿ ಮಾಡಿದನು. ಇಕ್ಬಾಲಖಾನನು ಕನ್ನೋಜ ತಲುಪಿದಾಗ ಮುಬಾರಕಶಾಹನು ಅಫಘಾನರ, ಮೊಗಲರ, ರಾಜಪೂತರ ಹಾಗೂ ತಾಜೇಕ ಜನಾಂಗದವರ ದೊಡ್ಡ ಗುಂಪಿನೊಂದಿಗೆ ಅವನ ಜೊತೆ ಯುದ್ಧ ಮಾಡಲು ಎದುರಾಗಿ ಬಂದನು. ಗಂಗಾ ನದಿಯ ಒಂದು ದಡದಲ್ಲಿ ಇಕ್ಬಾಲಖಾನನು ತಂಗಿದನು. ಹಾಗೂ ಎರಡನೆಯ ದಡದಲ್ಲಿ ಮುಬಾರಕಶಾಹನು ತನ್ನ ಸೈನ್ಯದೊಂದಿಗೆ ತಂಗಿದನು. ಮಧ್ಯ ನದಿಯು ಅಡ್ಡಾಗಿತ್ತು. ಇದರಿಂದಾಗಿ ಈರ್ವರಲ್ಲಿ ಯಾರೊಬ್ಬರು ನದಿಯನ್ನು ದಾಟಿ ವೈರಿಯವರೆಗೆ ಮುಟ್ಟುವ ಪ್ರಯತ್ನ ಮಾಡಲಿಲ್ಲ. ಇದೆ ಸ್ಥಿತಿಯಲ್ಲಿ ಎರಡು ತಿಂಗಳು ಕಳೆದವು. ಕೊನೆಗೆ ಯುದ್ಧ ಮಾಡದೆ ಇತ್ತಂಡದವರು ಮರಳಿ ಪ್ರಯಾಣ ಬೆಳೆಸಿದರು.

ಮುಬಾರಕಶಾಹನು ಜೋನಪುರ ತಲುಪಿದಾಗ ಅವನಿಗೆ ಗೊತ್ತಾಯಿತು. ಸುಲ್ತಾನ ಮಹ್ಮೂದನು ಮಾಳ್ವಾದಿಂದ ಮರಳಿದ್ದಾನೆ. ಹಾಗೂ ಅವನು ಇಕ್ಬಾಲಖಾನನ ಜೊತೆಗೂಡಿ ಜೋನಪುರವನ್ನು ಗೆಲ್ಲುವ ಸಂಕಲ್ಪ ಮಾಡಿ ಪ್ರಯಾಣ ಕೈಗೊಂಡಿದ್ದಾನೆ.

ಮುಬಾರಕಶಾಹನು ಸುಲ್ತಾನ ಮಹ್ಮೂದನೊಡನೆ ಯುದ್ಧದ ತಯಾರಿಗಳನ್ನು ಮಾಡಲಾರಂಭಿಸಿ ಆದರೆ ಮರಣವು ಇವನಿಗೆ ಅವಕಾಶ ನೀಡಲಿಲ್ಲ.

ಮುಬಾರಕಶಾಹನು ೮೦೪ ಹಿಜರಿಯಲ್ಲಿ ಮೃತಪಟ್ಟನು. ಇವನ ಆಡಳಿತಾವಧಿಯು ಒಂದು ವರ್ಷ ಹಾಗೂ ಕೆಲವು ತಿಂಗಳವಾಗಿತ್ತು.

■

*

೩. ಇಬ್ರಾಹೀಮಶಾಹ ಷರ್ಖಿ

ವಿದ್ಯಾವಂತರ ಪೋಷಣೆ :

ಮುಬಾರಕಶಾಹನ ಮರಣದ ನಂತರ ಅವನ ಚಿಕ್ಕ ತಮ್ಮನು ಇಬ್ರಾಹಿಮಶಾಹನು ಬಿರುದು ಧರಿಸಿ, ಪಟ್ಟವನ್ನೇರಿದನು. ಈ ಬಾದಶಾಹನು ಬುದ್ಧಿ, ವಿದ್ಯೆ ಹಾಗೂ ಮಾನ್ಯತೆಯಿಂದಾಗಿ ತನ್ನನ್ನು ತಾನೆ ಉದಾರಣೆಯಾಗಿದ್ದ. ಇವನ ಆಡಳಿತಾವಧಿಯಲ್ಲಿ ಹಿಂದುಸ್ತಾನ ಪಂಡಿತರು, ವಿದ್ಯಾವಂತರು ಅಲ್ಲದೆ ಇರಾನ ಹಾಗೂ ತುರಾನಿನ ವಿದ್ಯಾವಂತರು ಜೋನಪುರದಲ್ಲಿ ಬಂದರು. ಇಬ್ರಾಹಿಮ್‌ಶಾಹನು ಅವರಿಗೆ ಎಲ್ಲಾ ಬಗೆಯ ನೆಮ್ಮದಿ ಹಾಗೂ ಸುಖ ಶಾಂತಿಯಿಂದ ಜೀವನವನ್ನು ಕಳೆಯಲು ಅವಶ್ಯಕ ಸಾವಮಾನುಗಳನ್ನೊದಗಿಸಿದನು. ವಿದ್ಯಾವಂತರು ಅನೇಕ ಹೊತ್ತಿಗೆಗಳನ್ನು ಇಬ್ರಾಹಿಮಶಾಹನ ಹೆಸರಿನಲ್ಲಿ ಸಮರ್ಪಿಸಿದರು. ಬಾದಶಹನ ದರ್ಬಾರಿನಲ್ಲಿ ಓದು ಬರಹದವರ ಒಂದು ಗುಂಪು ಕೂಡಿಕೊಂಡಿತು. ಇದರಿಂದಾಗಿ ಜೋನಪುರವು ಒಂದು ಮುಖ್ಯ ವಿದ್ಯಾಕೇಂದ್ರವಾಯಿತು.

ಇಕ್ಬಾಲಖಾನನು ಜೋನಪುರದ ಮೇಲೆ ದಾಳಿ ಮಾಡುವ ಸಂಕಲ್ಪ :

ಇಬ್ರಾಹಿಮಶಾಹನ ಆಡಳಿತಾವಧಿಯ ಪ್ರಾರಂಭದ ದಿನಗಳಲ್ಲಿ ಸುಲ್ತಾನ ಮಹಮ್ಮದ ಹಾಗೂ ಇಕ್ಬಾಲಖಾನರು ಜೋನಪುರ ಗೆಲ್ಲುವ ಉದ್ದೇಶದಿಂದ ಬಂದರು. ಇಬ್ರಾಹಿಮ ಶಾಹನು ಕೂಡ ಒಂದು ಪ್ರಬಲವಾದ ಸೈನ್ಯವನ್ನು ಕೂಡಿಸಿದರು. ಹಾಗೂ ವೈರಿಯ ಜೊತೆ ಯುದ್ಧ ಮಾಡುವಾಗ ಗಂಗಾನದಿಯ ದಡದ ಮೇಲೆ ತಂಗಿದರು. ಉಭಯ ತಂಡದವರು ದೀರ್ಘಕಾಲದವರೆಗೆ ಪ್ರತಿಯೊಬ್ಬರೆದುರಿಗೆ ಅಚಲವಾಗಿ ನಿಂತರು. ಆದರೆ ಯುದ್ಧ ಮಾಡುವ ಪ್ರಸಂಗವೇ ಬರಲಿಲ್ಲ. ಇದರ ಮಧ್ಯದಲ್ಲಿ ಇಕ್ಬಾಲಖಾನ ಹಾಗೂ ಸುಲ್ತಾನ ಮಹಮ್ಮದರ ಮಧ್ಯ ವಿರಸ ಹುಟ್ಟಿತು. ಸುಲ್ತಾನ ಮಹ್ಮೂದನು ಬೇಟೆಯ ನೆಪಹೂಡಿ ಇಬ್ರಾಹಿಮ ಷರ್ಖಿಯ ಬಳಿಗೆ ಬಂದನು.

ಸುಲ್ತಾನ ಮಹ್ಮೂದನು ಇಬ್ರಾಹಿಮಷರ್ಖಿಯ ಬಳಿಗೆ ಬರುವಿಕೆ ಹಾಗೂ ಮರಳುವಿಕೆ:

ಸುಲ್ತಾನ ಮಹ್ಮೂದನ ವಿಚಾರವಿತ್ತು. ಇಬ್ರಾಹಿಮ ಷರ್ಕಿಯು ಒಡೆಯ ಹಾಗೂ ಸೇವಕನ ಸಂಬಂಧದನ್ವಯ ತನಗೆ ಬಾದಶಹನಾಗಿಸುವನು ಇದು ಇಲ್ಲದಿದ್ದರೆ, ಅವನು ಸುಲ್ತಾನ ಮಹ್ಮೂದನಿಗೆ ಇಕ್ಬಾಲನ ವಿರುದ್ಧ ಯುದ್ಧ ಮಾಡುವಲ್ಲಿ ಖಂಡಿತವಾಗಿ ಸಹಾಯ ಮಾಡುವನು. ಆದರೆ ವಿಷಾದ ಸುಲ್ತಾನ ಮಹ್ಮೂದನ ಈ ಆಶೆಗಳು ಪೂರ್ಣಗೊಳ್ಳಲಿಲ್ಲ. ಇಬ್ರಾಹಿಮ ಷರ್ಖಿಯು ಅವನಿಗೆ ಬಾದಶಾಹತ ಕೊಡಮಾಡಲಿಲ್ಲ. ಅಲ್ಲದೆ ಅವನಿಗೆ ಇಕ್ಬಾಲಖಾನನ ವಿರುದ್ಧ ಸಹಾಯ ಮಾಡುವ ಇಚ್ಛೆಯನ್ನು ಪ್ರಕಟಿಸಲಿಲ್ಲ. ಇದಕ್ಕೆ ಕಾರಣವೆಂದರೆ, ಮೊದಲನೆಯದಾಗಿ ತನ್ನ ಆಡಳಿತವನ್ನು ಯಾವುದೇ ರೀತಿಯಲ್ಲಿ ಅಂತ್ಯಗೊಳಿಸಲು ಬಯಸುತ್ತಿರಲಿಲ್ಲ. ಎರಡನೆಯದೆಂದರೆ, ಇನ್ನೂ ಇವನ ಶಕ್ತಿಯು ಇಷ್ಟೊಂದು ಹೆಚ್ಚಿರಲಿಲ್ಲ. ಕಾರಣ ಸುಲ್ತಾನ ಮಹ್ಮೂದನಿಗೆ ನೆರವು ನೀಡಲು ಸಿದ್ಧನಿರಲಿಲ್ಲ. ಸುಲ್ತಾನ ಷರ್ಖಿಯು ಸುಲ್ತಾನ ಮಹ್ಮೂದನ ಆದರಾತಿಥ್ಯ ತುಸು ಕಡಿಮೆಯೇ ಮಾಡಿದನು. ಇದರಿಂದಾಗಿ ಅವನು ಖಿನ್ನಮನಸ್ಕನಾಗಿ ಖನ್ನೋಜಿಗೆ ಮರಳಿದನು.

ಖನ್ನೋಜಿ ಸುಲ್ತಾನ ಮಹ್ಮೂದನ ಸ್ವಾಧೀನ :

ಸುಲ್ತಾನ ಮಹ್ಮೂದನು ಖನ್ನೋಜ ತಲುಪಿ, ಇಬ್ರಾಹಿಮ ಷರ್ಕಿಯ ಹಿತೈಷಿ ಅಮೀರ ಜಾದಾಮೆಹುಹಿಯು ಖನ್ನೋಜಿನ ಒಡೆಯನಾಗಿದ್ದ. ಅವನಿಗೆ ಗಡಿಪಾರುಮಾಡಿ ಖನ್ನೋಜನ್ನು ತನ್ನ ಸ್ವಾಧೀನಪಡಿಸಿಕೊಂಡನು. ಇಬ್ರಾಹಿಮ್‌ಷರ್ಖಿ ಮತ್ತು ಇಕ್ಬಾಲಖಾನರಿಗೆ ಗೊತ್ತಾಯಿತು. ಸುಲ್ತಾನ ಮಹ್ಮೂದನು ಖನ್ನೋಜನ್ನು ಅಧೀನಪಡಿಸಿಕೊಂಡಿರುವನು. ಇವರೀರ್ವರು ಯುದ್ಧವನ್ನು ತ್ಯಜಿಸಿದರು. ತಮ್ಮ ತಮ್ಮ ನಿವಾಸಿ ಸ್ಥಳಕ್ಕೆ ಮರಳಿದರು. ಕೆಲ ಇತಿಹಾಸಗಳಲ್ಲಿ ಇದು ಕೂಡ ಉಲ್ಲೇಖಿಸಲಾಗಿದೆ. ಸುಲ್ತಾನ ಮಹ್ಮೂದ ಮುಬಾರಕಶಾಹ ಷರ್ಖಿಯ ಆಡಳಿತಾವಧಿಯಲ್ಲಿ ಜೋನಪುರಕ್ಕೆ ಬಂದಿದ್ದನು. ಆವಾಗಲೇ ಮುಬಾರಕಶಾಹನು ಸಾವನ್ನಪ್ಪಿದನು. ಹಾಗೂ ಇಬ್ರಾಹಿಮ ಷರ್ಖಿಯು ಪಟ್ಟವೇರಿದನು. ಖನ್ನೋಜನ ಮೇಲೆ ಸುಲ್ತಾನ ಮಹ್ಮೂದನು ಇಬ್ರಾಹಿಮ ಷರ್ಖಿಯ ಆಡಳಿತಾವಧಿಯಲ್ಲಿಯೇ ಸ್ವಾಧೀನಪಡಿಸಿಕೊಂಡನು.

ಇಬ್ರಾಹಿಮನ ಖನ್ನೋಜಿನ ಮೇಲೆ ದಾಳಿ :

ದಿಲ್ಲಿಯ ಸಲಾತೀನರ ಚರಿತ್ರೆಯಲ್ಲಿ ಉಲ್ಲೇಖಿಸಲಾಗಿದೆ. ೮೦೮ ಹಿಜರಿಯಲ್ಲಿ ಇಕ್ಬಾಲಖಾನನ ಕೊಲೆಯಾಯಿತು. ಮತ್ತು ಸುಲ್ತಾನನ ಮಹಮ್ಮದನು ದಿಲ್ಲಿಯ ಕಡೆಗೆ ಪ್ರಯಾಣ ಬೆಳೆಸಿದನು. ಇಬ್ರಾಹಿಮ ಷರ್ಕಿಯು ಈ ಸಂದರ್ಭದ ಲಾಭ ಪಡೆದು ೮೦೯ ಹಿಜರಿಯಲ್ಲಿ ಖನ್ನೋಜಿನ ಮೇಲೆ ದಾಳಿ ಮಾಡಿದನು. ಮಹ್ಮೂದಶಾಹನು ಸೈನ್ಯ ತೆಗೆದುಕೊಂಡು ದಿಲ್ಲಿಯ ಕಡೆಗೆ ಪ್ರಯಾಣ ಬೆಳೆಸಿದ. ಇಬ್ರಾಹಿಮಶಾಹ

ಷರ್ಕಿಯ ಜೊತೆ ಯುದ್ಧ ಮಾಡಲು ನಡೆದ ಇತ್ತಂಡದವರು ಮೊದಲಿನಂತೆ ಗಂಗಾನದಿಯ ದಡದ ಮೇಲೆ ಈರ್ವರು ಎದುರುಬದುರು ಬಂದರು. ಹಲವು ದಿನಗಳವರೆಗೆ ಈರ್ವರು ಯುದ್ಧಗೈಯುವ ಸಂಕಲ್ಪ ಮಾಡುತ್ತಿದ್ದರು. ಆದರೆ ಯುದ್ಧದ ಪ್ರಸಂಗವೆ ಬರಲಿಲ್ಲ. ಈರ್ವರ ಸೈನಿಕರು ಮರಳಿದರು.

ಖನ್ನೊಜ ಇಬ್ರಾಹಿಮನ ಸ್ವಾಧೀನ :

ಸುಲ್ತಾನ ಮಹ್ಮೂದನು ದಿಲ್ಲಿ ತಲುಪಿದಾಗ, ಅವನ ಎಲ್ಲಾ ಸರದಾರರು ಬಾದಶಹನ ಅಪ್ಪಣೆಯನ್ನು ಪಡೆದು ತಮ್ಮ ತಮ್ಮ ಜಾಗೀರಿಗಳಿಗೆ ಹೋದರು. ಮತ್ತು ಇಬ್ರಾಹಿಮ ಷರ್ಕಿಯು ಎರಡನೆಯ ಸಲ ಖನ್ನೊಜನ ಮೇಲೆ ದಾಳಿ ಮಾಡಿದನು. ಹಾಗೂ ನಗರವನ್ನು ಮುತ್ತಿದನು. ಖನ್ನೊಜದ ಒಡೆಯ ಮಲಿಕ ಮಹ್ಮೂದ ತರ್ಮನಿಯು ಹಲವು ತಿಂಗಳವರೆಗೆ ದಿಲ್ಲಿಯ ನೆರವಿಗಾಗಿ ಕಾದನು. ಆಶೆ ನೆರವೇರಲಿಲ್ಲ ಕಾರಣ ಖನ್ನೊಜನ ಕೋಟೆಯನ್ನು ಇಬ್ರಾಹಿಮ ಷರ್ಕಿಗೊಪ್ಪಿಸಿದನು.

ದಿಲ್ಲಿಯನ್ನು ಸ್ವಾಧೀನ ಪಡಿಸಿಕೊಳ್ಳುವ ದೃಢ ನಿಶ್ಚಯ :

ಇಬ್ರಾಹಿಮ ಷರ್ಕಿಯು ಮಳೆಗಾಲವನ್ನು ಕಳೆದ ನಂತರ ಜಮಾದಿಲ್ ಅವ್ವಾಲ್ ೮೧೧ ಹಿಜರಿಯಲ್ಲಿ ದಿಲ್ಲಿಯನ್ನು ಗೆಲ್ಲುವ ಸಂಕಲ್ಪವನ್ನು ಮಾಡಿಕೊಳ್ಳುವ ಉದ್ದೇಶದಿಂದ ಪ್ರಯಾಣ ಬೆಳೆಸಿದನು. ಇಬ್ರಾಹಿಮ ಷರ್ಕಿಯು ಅತಿ ಬುದ್ಧಿವಂತ ಹಾಗೂ ಕಾರ್ಯಚತುರ ಮಾನವನಿದ್ದನು. ಅವನ ಸೂಕ್ತವಾದ/ಯೋಗ್ಯವಾದ ಪ್ರಯತ್ನಗಳಿಂದ ದಿಲ್ಲಿಯ ಅನೇಕ ಸರದಾರರು ಸಾರಂಗಖಾನನ ಮಗ ತಾತಾರಖಾನ ಹಾಗೂ ಇಕ್ಬಾಲಖಾನನ ಗುಲಾಮ ಮಲಿಕಖಾನ ಮುಂತಾದವರು. ಇವನಲ್ಲಿಗೆ ಬಂದು ಕೂಡಿದರು. ಹೀಗಾಗಿ ಇಬ್ರಾಹೀಮ ಷರ್ಕಿಯ ಶಕ್ತಿಯು ಅತಿ ಹೆಚ್ಚಾಯಿತು. ಹಾಗೂ ಅವನು ಸುಂಭಲದ ಕಡೆಗೆ ನಡೆದನು. ಸಂಭಲದ ಒಡೆಯ ಅಸದಖಾನ ಲೂಧಿಯು ಪಲಾಯನ ಬೆಳೆಸಿದ. ಇಬ್ರಾಹಿಮ ಷರ್ಕಿಯು ಖಾನನಿಗೆ ಸಂಭಲ ರಾಜ್ಯವನ್ನು ಒಪ್ಪಿಸಿ ತಾನು ಮುಂದೆ ನಡೆದನು.

ಮರಳುವಿಕೆ :

ಪ್ರಯಾಣದ ಘಟ್ಟಗಳನ್ನು ದಾಟುತ್ತ ನದಿಯ ದಡಕ್ಕೆ ತಲುಪಿದ. ಇಲ್ಲಿ ಅವನಿಗೆ ವಿದಿತವಾಯಿತು. ಸುಲ್ತಾನ ಮುಜ್ಫಾರ ಗುಜರಾತಿಯು ಸುಲ್ತಾನ ಹೋಷಂಗನಿಗೆ ಬಂಧಿಸಿ ಮಾಲವಾವನ್ನು ಸ್ವಾಧೀನಪಡಿಸಿಕೊಂಡನು. ಈಗ ಅವನು ಸುಲ್ತಾನ ಮಹ್ಮೂದನ ಸಹಾಯಕ್ಕಾಗಿ ಬರುತ್ತಲಿದ್ದಾನೆ. ಇದು ಕೂಡ ಗೊತ್ತಾಯಿತು. ಮುಜ್ಫಾರ ಗುಜರಾತಿಯು ಜೋನಪುರವನ್ನು ಸ್ವಾಧೀನಪಡಿಸಿಕೊಳ್ಳುವ ಇಚ್ಛೆ ಇದೆ. ಇಬ್ರಾಹೀಮನು ಈ ತಿಳಿವಳಿಕೆಗಳನ್ನು ಪಡೆದು ನಂತರ ದಿಲ್ಲಿಯ ದಾಳಿಯನ್ನು ತ್ಯಜಿಸಿದನು. ಮತ್ತು

ಜೋನಪುರಕ್ಕೆ ಮರಳಿದನು. ಮಹ್ಮೂದಶಾಹನು ದಿಲ್ಲಿಯಿಂದ ಸಂಭಲವನ್ನು ತಲುಪಿ ಈ ನಗರವನ್ನು ಸ್ವಾಧೀನಪಡಿಸಿಕೊಂಡನು. ತಾತಾರಖಾನನು ಪಲಾಯನ ಬೆಳೆಸಿದನು. ಇಬ್ರಾಹೀಮ ಷರ್ಕಿಯ ಹತ್ತಿರ ಜೋನಪುರಕ್ಕೆ ಹೋದನು. ಇಬ್ರಾಹೀಮನು ಒಂದು ಮಹಾ ಸೈನ್ಯವನ್ನು ಕೂಡಿಸಿ ೮೧೬ ಹಿಜರಿಯಲ್ಲಿ ಮತ್ತೊಮ್ಮೆ ದಿಲ್ಲಿಯನ್ನು ಗೆಲ್ಲುವ ಉದ್ದೇಶದಿಂದ ಪ್ರಯಾಣವನ್ನು ಕೈಕೊಂಡ ಆದರೆ ಹಾದಿಯಿಂದಲೆ ಮರಳಿ ಬಂದನು.

ಸೌಖ್ಯ ಸಮೃದ್ಧಿ (ಸ್ಥಿತಿ) :

ಇದರ ತರುವಾಯ ಇಬ್ರಾಹೀಮ ಷರ್ಕಿಯು ಸ್ವಂತ ಸಂಪಾದನೆ, ರಾಜ್ಯದ ಏಳಿಗೆ, ಹಾಗೂ ಸೌಖ್ಯ ಸಮೃದ್ಧಿಯ ಕುರಿತು ವಿದ್ಯಾವಂತರಿಂದ ಹಾಗೂ ಉಚ್ಚಮಟ್ಟದವರಿಂದ ಸಲಹೆ ಪಡೆದು ಕಾರ್ಯಾಚರಣೆಯನ್ನು ಮಾಡುವಲ್ಲಿ ಅನೇಕ ಪ್ರಯತ್ನ ಕೈಕೊಂಡನು. ಈ ಕಾಲದಲ್ಲಿ ಪೂರ್ಣ ಹಿಂದುಸ್ತಾನವು ಗುಲ್ಲು ಗಲಾಟೆ ಹಾಗೂ ತಂಟೆ ತಗಾದೆಯ ಕೇಂದ್ರವಾಗಿತ್ತು. ಇದರಿಂದಾಗಿ ಪ್ರತಿಯೊಂದು ಸ್ಥಳದಿಂದ ವಿದ್ವಾಂಸರು ಹಾಗೂ ಉಚ್ಚಮಟ್ಟದವರು ಜೋನಪುರಕ್ಕೆ ಆಗಮಿಸಿದರು. ಈ ನಗರವು ದಿಲ್ಲಿಯ ಉತ್ತರವಾಯಿತು. ಬಾದಶಹನು ವಿದ್ವಾಂಸರ, ಕಲಾವಂತರ ಪೋಷಣೆಯನ್ನು ಮನದುಂಬಿ ಮಾಡಿದನು. ಪ್ರತಿಯೊಬ್ಬರಿಗೂ ಅವರವರ ಅಂತಸ್ತಿಗೆ ತಕ್ಕಂತೆ ಕಾಣಿಕೆ ಹಾಗೂ ಬಹುಮಾನಗಳನ್ನು ಕೊಟ್ಟು ಶ್ರೀಮಂತರನ್ನಾಗಿಸಿದ. ಜೋನಪುರದ ಎಲ್ಲಾ ಪ್ರಜರು ಇಬ್ರಾಹೀಮ ಷರ್ಕಿಯಿಂದ ಅತಿ ಸಂತುಷ್ಟರಾಗಿದ್ದರು. ಪ್ರತಿಯೊಬ್ಬರು ಬಾದಶಹನ ಅಲ್ಲಾನ ಅನುಗ್ರಹವೆನ್ನುತ್ತಿದ್ದರು. ರಾಜ್ಯದ ನಾಲ್ಕು ದಿಕ್ಕುಗಳಲ್ಲಿ ಶಾಂತಿ ಸಂಯಮ ಹಾಗೂ ಸೌಖ್ಯ ಸಮೃದ್ಧಿಯು ಹಬ್ಬಿಕೊಂಡಿತ್ತು.

ಥಾನಾದ ಮೇಲೆ ದಂಡಯಾತ್ರೆ :

೮೩೧ ಹಿಜರಿಯಲ್ಲಿ ಮೇವಾಡದ ಒಡೆಯ ಮೊಹ್ಮದಖಾನನು ಇಬ್ರಾಹೀಮ ಷರ್ಕಿಯ ಹತ್ತಿರ ಬಂದನು. ಹಾಗೂ ಅವನಿಗೆ ಥಾನೆಯನ್ನು ಗೆಲ್ಲುವ ಪ್ರೇರಣೆ ಕೊಟ್ಟನು. ಇಬ್ರಾಹೀಮನು ಮೊಹ್ಮೂದಖಾನನ ಮಾತನ್ನು ಒಪ್ಪಿಕೊಂಡನು. ಸೈನ್ಯವನ್ನು ಸಿದ್ಧಗೊಳಿಸಿ ಈ ಉದ್ದೇಶಕ್ಕಾಗಿ ಪ್ರಯಾಣವನ್ನು ಬೆಳೆಸಿದನು. ಮತ್ತೊಂದು ಕಡೆಯಿಂದ ದೆಹಲಿಯ ಬಾದಶಹ ಸುಲ್ತಾನ ಮುಬಾರಕಶಾಹನು ದೊಡ್ಡ ಸೈನ್ಯವನ್ನು ತೆಗೆದುಕೊಂಡು ಇಬ್ರಾಹೀಮ ಷರ್ಕಿಯೊಂದಿಗೆ ಯುದ್ಧಗೈಯಲು ಹೊರಟ. ಥಾನೆಯಿಂದ ನಾಲ್ಕು ಹರದಾರಿಯ ಅಂತರದಲ್ಲಿ ಇತ್ತಂಡದವರು ಕಂದಕವನ್ನು ತೋಡಿ ತಮ್ಮನ್ನು ಸುರಕ್ಷಿತಗೊಳಿಸಿಕೊಂಡರು. ಇತ್ತಂಡದ ಕೆಲವು ಸೈನಿಕರು ಪರಸ್ಪರ ಕಾದಾಡತೊಡಗಿದರು. ಕೊನೆಯಲ್ಲಿ ಇತ್ತಂಡದಲ್ಲಿ ಸುವ್ಯವಸ್ಥಿತವಾಗಿ ಯುದ್ಧ ನಡೆಯಿತು. ಸೋಲು ಗೆಲುವಿಲ್ಲದೆ ನಿರ್ಣಯಿಸದೆ ಯುದ್ಧ ಮುಕ್ತಾಯವಾಯಿತು. ಇಬ್ರಾಹೀಮನು ಜೋನಪುರದ ಕಡೆ ಹಾಗೂ ಮುಬಾರಕಶಾಹನು ದಿಲ್ಲಿಯ ಕಡೆ ಪ್ರಯಾಣ ಬೆಳೆಸಿದ.

ಕಾಲ್ಪಿಯನ್ನು ಗೆಲ್ಲುವ ಉದ್ದೇಶ :

೮೩೭ ಹಿಜರಿಯಲ್ಲಿ ಇಬ್ರಾಹೀಮ ಷರ್ಕಿಯು ಕಾಲ್ಪಿಯನ್ನು ಗೆಲ್ಲುವ ಸಂಕಲ್ಪ ಮಾಡಿದನು. ಮಹಾಸೈನ್ಯ ಪಡೆಯನ್ನು ತೆಗೆದುಕೊಂಡು ನಡೆದನು. ಹಾದಿಯಲ್ಲಿ ಈ ಸುದ್ದಿಯು ಬಂದಿತು. ಸುಲ್ತಾನ ಹೋಷಂಗನು ಕೂಡ ಕಾಲ್ಪಿಯನ್ನು ಗೆಲ್ಲುವ ಉದ್ದೇಶವನ್ನಿಟ್ಟಿರುವನು. ಇತ್ತಕಡೆಯೇ ಬರುವನು. ಈ ಇಬ್ಬರು ಬಾದಶಹರು ಎದುರು ಬಂದು ಯುದ್ಧದ ಸಿದ್ಧತೆಯನ್ನು ಮಾಡತೊಡಗಿದರು. ಇನ್ನು ಯುದ್ಧದ ಪ್ರಸಂಗವೇ ಬರಲಿಲ್ಲ. ಇಬ್ರಾಹೀಮ ಷರ್ಕಿಗೆ ಸುದ್ದಿಯೊಂದು ಬಂದಿತು. ದಿಲ್ಲಿಯ ಬಾದಶಹನಾದ ಮುಬಾರಕಶಾಹನು ಶೂರ ಸೈನಿಕರೊಂದಿಗೆ ಜೋನಪುರದ ಕಡೆಗೆ ನಡೆದಿರುವನು. ಇಬ್ರಾಹೀಮ ಷರ್ಕಿಯು ಈ ಸುದ್ದಿಯನ್ನು ಕೇಳಿ ಅತಿ ಚಿಂತಾಕ್ರಾಂತನಾದ. ತ್ವರೆಯಾಗಿ ಜೋನಪುರದ ಕಡೆಗೆ ಪ್ರಯಾಣ ಬೆಳೆಸಿದನು. ಸುಲ್ತಾನ ಹೋಷಂಗ ಗೌರಿಯು ಮುಬಾರಕಶಾಹನಿಂದ ನೆಮಿಸಲ್ಪಟ್ಟ ಕಾಲ್ಪಿಯನೊಡೆಯ ಅಬ್ದುಲಖಾದರ ಪ್ರಚಲಿತ ಬಾದಶಹನನ್ನು ತಳ್ಳಿ ಯುದ್ಧ ಮಾಡದೆ ಕಾಲ್ಪಿಯನ್ನು ಸ್ವಾಧೀನಪಡಿಸಿಕೊಂಡನು.

ಮರಣ :

೮೪೪ ಹಿಜರಿಯಲ್ಲಿ ಇಬ್ರಾಹೀಮ ಷರ್ಕಿಯು ರೋಗ ಪೀಡಿತನಾದ. ಕೆಲವೆ ಸಮಯದಲ್ಲಿ ರೋಗವು ಉಲ್ಬಣಗೊಂಡಿತು. ಬಾದಶಹನ ಜೀವನವು ಸಂಕುಚಿತಗೊಂಡಿತು. ಮರಣ ಹೊಂದಿದನು. ಇಬ್ರಾಹೀಮನ ಮರಣವು ಜೋನಪುರದವರೆಗೆ ಅತೀವ ದುಃಖವುಂಟಾಯಿತು. ನಗರವಾಸಿಗಳು ಅಳುತ್ತ ಅಳುತ್ತ ಫಿರ್ಯಾದಿಸುತ್ತ ಅತಿಶಯವಾಗಿ ರೋಧಿಸಿ ದುಃಖವನ್ನು ವ್ಯಕ್ತಪಡಿಸಿದರು. ಇಬ್ರಾಹೀಮ ಷರ್ಕಿಯು ೪೦ ವರ್ಷಗಳವರೆಗೂ ಆಡಳಿತ ನಡೆಸಿದನು. ಹಾಜ ಮೊಹ್ಮದ ಖಂದಾರಿಯ ಹೇಳಿಕೆ ಇದೆ. ಇಬ್ರಾಹೀಮ ಷರ್ಕಿಯ ಮರಣವು ೮೪೦ ಹಿಜರಿಯಲ್ಲಾಯಿತು. ಒಂದು ವೇಳೆ ಈ ಹೇಳಿಕೆಯು ಸತ್ಯವೆಂದು ಒಪ್ಪಿಕೊಂಡರೆ ಇವನ ಆಡಳಿತಾವಧಿಯು ೩೬ ವರ್ಷವೆಂದಾಗುವುದು.

ಖಾಜಿ ಷಾಹಬುದ್ದೀನ ಜೋನಪುರಿ :

ಇಬ್ರಾಹೀಮ ಷರ್ಖಿಯ ಆಡಳಿತಾವಧಿಯ ವಿದ್ಯಾವಂತರು ಉಚ್ಚಮಟ್ಟದ ಪಂಡಿತರಲ್ಲಿ ಖಾಜ ಷಾಹಜುದ್ದೀನರು ಅತಿ ಪ್ರಾಮುಖ್ಯತೆಯನ್ನು ಪಡೆದಿದ್ದರು. ಖಾಜಿಯವರ ಪೂರ್ವಜರ ಭೂಮಿ ಗಜ್ನಿ ಇತ್ತು. ಆದರೆ ಇವರ ಪರಿಪೋಷಣೆ ದೌಲತಾಬಾದ ದಕ್ಷಿಣದಲ್ಲಿಯಾಯಿತು. ಇಬ್ರಾಹೀಮ ಷರ್ಕಿ ಖಾಜಿಯವರ ವಿದ್ಯಾ ಹಾಗೂ ಉಚ್ಚಮಟ್ಟದ ಯೋಗ್ಯತೆಯ ಬಗ್ಗೆ ಹೆಚ್ಚಾಗಿ ಗೌರವಿಸುತ್ತಿದ್ದರು. ಇವರ ಬಗ್ಗೆ ಹೆಚ್ಚಿನ ಕಾಳಜಿಯನ್ನು ವಹಿಸುತ್ತಿದ್ದನು. ಖಾಜಿ ಸಾಹೇಬರ ಆದರ ಹಾಗೂ ಗೌರವದ ಇಂತಿಷ್ಟು ವರ್ಚಸಿತ್ತು. ಪವಿತ್ರ ದಿನಗಳಲ್ಲಿ ಹಾಗೂ ಶಾಹಿ ಸಭೆಗಳಲ್ಲಿ ಇವರು

ಬೆಳ್ಳಿಯ ಕುರ್ಚಿಯ ಮೇಲೆ ಕೂಡುತ್ತಿದ್ದರು. ಈ ವಿಷಯ ಜನಜನಿತವಾಗಿದೆ. ಒಮ್ಮೆ ಖಾಜಿ ಸಾಹೇಬರು ರೋಗಪೀಡಿತರಾಗಿ ಹಾಸಿಗೆಯನ್ನು ಹಿಡಿದಾಗ ಬಾದಶಹನು ಕ್ಷೇಮವನ್ನರಿಯಲು ಆಗಮಿಸಿ, ಮಾತಿನ ಮಧ್ಯ ಬಾದಶಹನು ನೀರಿನ ಗ್ಲಾಸನ್ನು ತರಲು ಹೇಳಿದ. ನೀರು ಬಂದಾಗ ಬಾದಶಹನು ಈ ನೀರಿನ ಗ್ಲಾಸನ್ನು ಖಾಜಿ ಸಾಹೇಬರ ತಲೆಯ ಮೇಲೆ ಸುತ್ತುವರೆಸಿ ತಾನೆ ಕುಡಿದು ಈ ರೀತಿ ಹೇಳಿದ. ಅಯ್ ಖುದಾ! ಯಾವ ಕಷ್ಟ ಖಾಜಿ ಸಾಹೇಬರ ತಲೆಯ ಮೇಲೆ ಬಿದ್ದಿದೆ. ಇದನ್ನು ಮುಕ್ತಿಗೊಳಿಸು. ಹಾಗೂ ಈ ಕಷ್ಟ ನನಗೆ ಬರಲಿ ಇದರಿಂದ ಖಾಜಿ ಸಾಹೇಬರು ಆರೋಗ್ಯವಂತರಾಗಲಿ.

(ತಸಾನೀಫ್) ರಚನೆಗಳು–ಕೃತಿಗಳು :

ಈ ಘಟನೆಯಿಂದ ಇಬ್ರಾಹೀಮ ಷರ್ಕಿಯವರ ವ್ಯಕ್ತಿತ್ವದ ಅಂದಾಜುವಾಗುತ್ತದೆ. ಅವನಿಗೆ ಧಾರ್ಮಿಕ ವಿದ್ಯಾವಂತರಿಗೆ ತೋರಿದ ಭಕ್ತಿಯು ಅಗಾಧವಾಗಿತ್ತು. ಖಾಜಿ ಸಾಹೇಬರಿಗೆ ದೊರೆತ ಖ್ಯಾತಿಯು ಇಲ್ಲಿ ಉಲ್ಲೇಖಿಸುವುದರ ಅಸದಳವಾಗಿದೆ. ಇವರ ಖ್ಯಾತ ಕೃತಿಗಳು ಇವು ಇವೆ. ಹಾಷಿಯ ಹಿಂದಿ, ಮುತ್ಬಾಹ ಮತನ್ ಇರ್ಷಾದ, ಖದಿಯುಲ್ ಖಯಾನ, ಫತಾಪಾ ಇಬ್ರಾಹೀಮಶಾಹಿ, ತಫ್ಸೀರ್–ಉ–ಫಾರ್ಸಿ, ಆಲ್‌ಮಾರೂಫ್‌ಖ, ಬಹರೆ ಅಮ್ವಾಜ, ರಿಸಾಲ–ಎ–ಮನಾಖಿಬ್ ಸಾದಾತ, ರಿಸಾಲಾ–ಎ–ಷಾಹಖಿಯಾ ಹಾಗೂ ಮುಂತಾದವು. ಖಾಜಿ ಸಾಹೇಬರ ಕೂಡ ಇಬ್ರಾಹೀಮ ಷರ್ಕಿಯ ಬಗ್ಗೆ ಅತ್ಯಂತ ಆತ್ಮೀಯತೆ ಇತ್ತು. ಅವನ ಮರಣದಿಂದ ಇಂತಿಷ್ಟು ದುಃಖಿತರಾದರು. ಅದೇ ವರ್ಷ ೮೪೦ ಹಿಜರಿಯಲ್ಲಿ ಮೃತಪಟ್ಟರು. ಒಂದು ಹೇಳಿಕೆಯು ಇದೆ. ಖಾಜಿ ಸಾಹೇಬರ ಮರಣವು ಇಬ್ರಾಹೀಮರ ಮೃತ್ಯುವಿನ ಎರಡು ವರ್ಷದ ನಂತರ ಅಂದರೆ ೮೪೨ ಹಿಜರಿಯಲ್ಲಾಯಿತು.

■

*

೪. ಸುಲ್ತಾನ ಮಹಮ್ಮದ ತಂದೆ ಇಬ್ರಾಹೀಮ ಷರ್ಖಿ

ಇಬ್ರಾಹೀಮ ಷರ್ಖಿ ಮರಣದ ನಂತರ ಇವನ ಪುತ್ರನು ಪಟ್ಟವನ್ನೇರಿದನು. ಮುನ್ನೆಚ್ಚರಿಕೆಯಿಂದ ಆಡಳಿತದ ವ್ಯವಹಾರಗಳನ್ನು ನಿರ್ವಹಿಸಿಕೊಂಡನು. ಮಹ್ಮೂದನು ತನ್ನ ತಂದೆಯನ್ನು ಅನುಕರಿಸುತ್ತ ಪ್ರಜೆಗಳನ್ನು ಸಾಧ್ಯವಾದ ರೀತಿಯಲ್ಲಿ ಸೌಖ್ಯದಲ್ಲಿರುವಂತೆ ಪ್ರಯತ್ನಿಸಿದ. ಹೀಗಾಗಿ ರಾಜ್ಯದ ಎಲ್ಲಾ ಜನರು ಕೂಡ ಇವನನ್ನು ಅತಿಯಾಗಿ ಪ್ರೀತಿಸತೊಡಗಿದರು.

ಮಾಲ್ವಾದ ಒಡೆಯನಿಗೆ ಕಾಲ್ಪಿ ಒಡೆಯನ ಬಗ್ಗೆ ದೂರು :

೮೪೭ ಹಿಜರಿಯಲ್ಲಿ ಮಹಮ್ಮದ ಷರ್ಕಿಯು ಸುಲ್ತಾನ ಮಹ್ಮೂದ ಖಿಲ್ಜಿಯ ಸೇವೆಯಲ್ಲಿ ಬಹಳಷ್ಟು ಬೆಲೆಬಾಳುವ ಕಾಣಿಕೆಗಳನ್ನು ಕಳುಹಿಸಿದನು. ಹಾಗೂ ಅವನಿಗೆ ಈ ಸಂದೇಶವಿತ್ತ ಕಾಲ್ಪಿಯ ಒಡೆಯ ನಾಸಿರುದ್ದೀನ ತಂದೆ ಖಾದರಖಾನನು ಶರಿಯತ್ತಿನ ಎಲ್ಲೆಯನ್ನು ದಾಟಿ ವ್ಯವಹರಿಸುತ್ತಿರುವನು. ಹಾಗೂ ಕಾಫಿರನಾಗಿ ಧರ್ಮಬಾಹಿರನಾಗುತ್ತಿದ್ದಾನೆ. ಹೀಗಾಗಿ ಭಸ್ನಾ ಶಾಹಪುರವನ್ನು ಹಾಳು ಮಾಡುತ್ತಿದ್ದಾನೆ. ಹಾಗೂ ಇಲ್ಲಿಯ ಮುಸಲ್ಮಾನರನ್ನು ದೇಶ ಭ್ರಷ್ಟರನ್ನಾಗಿಯೂ ಮಾಡುತ್ತಿರುವನು. ಒಟ್ಟಾರೆ ಇವನು ಅಲ್ಲಾ ಹಾಗೂ ರಸೂಲರ ವಿಧೇಯತೆಯಿಂದ ದೂರವಾಗುತ್ತಿದ್ದಾನೆ. ಸುಲ್ತಾನ ಹೋಷಂಗನ ಕಾಲದಿಂದ ನಿಮ್ಮ ಹಾಗೂ ನಮ್ಮ ಮಧ್ಯ ಹಿತಕರ ಸಂಬಂಧಗಳು ನೆಲೆಗೊಂಡಿವೆ. ಇವುಗಳ ಬೇಡಿಕೆಗಳೇನೆಂದರೆ ನಿಮ್ಮ ತಿಳಿವಳಿಕೆಯ ವಿನಃ ಹೆಜ್ಜೆಯನ್ನಿಡಲಾಗದು. ಬಂದಸರ ನೀವು ನನ್ನ ಸಮರ್ಥನೆ ಗೈದರೆ ನಾನು ನಸೀರಖಾನನಿಗೆ ಕುಫರ ಸ್ನೇಹದ ರುಚಿಯನ್ನಿಡುವೆ. ಹಾಗೂ ಕಾಲ್ಪಿಯಲ್ಲಿ ಮಗದೊಮ್ಮೆ ಷರಿಯತ್ತಿನ ಇಸ್ಲಾಮ ಧರ್ಮವನ್ನು ಜಾರಿಗೊಳಿಸುವೆ.

ಮಾಲ್ವಾ ಒಡೆಯನ ಉತ್ತರ :

ಸುಲ್ತಾನ ಮಹ್ಮೂದ ಖಿಲ್ಜಿಯ ಈ ಸಂದೇಶಕ್ಕೆ ಈ ಉತ್ತರ ಕೊಟ್ಟ. ಈ

ಮೊದಲು ನನ್ನವರೆಗೆ ನಸೀರಖಾನನ ದೂರಗಳು ತಲುಪುತ್ತಿದ್ದವು. ಅವು ಅವಿಶ್ವಾಸವುಳ್ಳವುಗಳಾಗಿದ್ದವು. ಪ್ರಯುಕ್ತ ಅವುಗಳ ಕಡೆಗೆ ಗಮನ ಕೊಡಲಿಲ್ಲ. ಈಗ ನೀವು ಸತ್ಯ ಸ್ಥಿತಿಯನ್ನು ತಿಳಿಪಡಿಸಿರಿ. ಕಾರಣ ಈ ಸುದ್ದಿಗಳ ದೃಢೀಕರಣವಾಗಿದೆ. ನಸೀರಖಾನರಂತ ದುರ್ಗುಣಿಗಳನ್ನು ಒಳ್ಳೆಯ ಮಾರ್ಗದಲ್ಲಿ ನಡೆಯುವಂತೆ ಮಾಡುವುದು ಪ್ರತಿಯೊಬ್ಬ ಮುಸಲ್ಮಾನ ಬಾದಶಹನ ಕರ್ತವ್ಯವಾಗಿದೆ. ಬಂದವಸರ ನೀವು ಇತ್ತ ಕಡೆ ಗಮನ ಕೊಡದಿದ್ದರೆ ನಾನೇ ಸ್ವತಃ ಈ ಮಹಾಪಾಪಿಯ ಮೇಲೆ ದಾಳಿ ಮಾಡುತ್ತಿದ್ದೆ. ತಾವು ಈ ಸಂಕಲ್ಪ ಮಾಡಿರುವಿರಿ. ಅದು ಅತಿ ಶುಭವಾಗಿದೆ. ಹಾಗೂ ನಾನು ನಿಮ್ಮ ಗೆಲುವಿಗೆ ಪ್ರಾರ್ಥನೆಗೈಯುವೆ.

ಕಾಲ್ಪಿಯ ಮೇಲೆ ದಂಡಯಾತ್ರೆ :

ಸುಲ್ತಾನ ಮಹ್ಮೂದ ಖಿಲ್ಜಿಯು ಈ ಉತ್ತರವನ್ನು ಪಡೆದು ಬಹಳ ಸಂತೋಷಪಟ್ಟನು. ಅವನು ೨೯ ಆನೆಗಳನ್ನು ಕಾಣಿಕೆಯ ರೂಪದಲ್ಲಿ ಮಾಲ್ವಾದ ಸೇವೆಯಲ್ಲಿ ಕಳುಹಿಸಿದನು. ಹಾಗೂ ಸ್ವತಃ ಸೈನ್ಯವನ್ನು ಸಜ್ಜುಗೊಳಿಸಿ ಕಾಲ್ಪಿಯ ಕಡೆಗೆ ಪ್ರಯಾಣ ಬೆಳೆಸಿದನು. ನಸೀರಖಾನನಿಗೆ ಸುದ್ದಿ ತಲುಪಿದ ಕೂಡಲೆ ಅವನು ಸುಲ್ತಾನ ಮಹ್ಮೂದ ಖಿಲ್ಜಿಯ ಸೇವೆಯಲ್ಲಿ ಒಂದು ಅರ್ಜಿಯನ್ನು ಕಳುಹಿಸಿದನು. ಇದರ ವಿಷಯ ಹೀಗಿತ್ತು. "ಕಾಲ್ಪಿಯ ಪ್ರದೇಶ ಸುಲ್ತಾನ ಹೋಷಂಗನು ನನಗೆ ದಯಪಾಲಿಸಿದ್ದಾನೆ. ಇಂದಿನಂದು ಸುಲ್ತಾನ ಮಹಮ್ಮದ ಷರ್ಕಿಯು ನನ್ನ ಮೇಲೆ ದಾಳಿಗೈದು ಕಾಲ್ಪಿಯನ್ನು ತನ್ನ ಸ್ವಾಧೀನಪಡಿಸಿಕೊಳ್ಳಲು ಬಯಸುತ್ತಾನೆ. ಹೀಗಾಗಿ ಅರ್ಜಿಯು ಇದೆ. ತಾವು ನನಗೆ ಸಹಕಾರ ನೀಡಿ, ಮಹ್ಮೂದ ಷರ್ಖಿಯ ತಂಟೆಯಿಂದ ನನ್ನನುಳಿಸಿರಿ.

ಮಾಲ್ವಾ ಒಡೆಯನ ಪತ್ರ :

ಸುಲ್ತಾನ ಮಹ್ಮೂದ ಖಿಲ್ಜಿಯು ನಸೀರಖಾನನ ಅರ್ಜಿಯನ್ನೋದಿ, ಷರ್ಕಿಯ ಹೆಸರಿಗೆ ಒಂದು ಪತ್ರವನ್ನು ಬರೆದನು. "ಕಾಲ್ಪಿಯ ಒಡೆಯ ನಸೀರಖಾನನು, ಅಲ್ಲಾನ ಭಯ ಹಾಗೂ ತಮ್ಮ ಸೂಕ್ತ ಸಮಯದ ಛೀಮಾರಿಯ ಸಂದೇಶದಿಂದ ಒಳ್ಳೆಯ ಮಾರ್ಗಕ್ಕೆ ಬರುವನು. ಅವನು ತನ್ನ ಪಾಪಗಳಿಂದ ಪಶ್ಚಾತಪಗೊಂಡಿದ್ದಾನೆ. ಹಾಗೂ ಪ್ರತಿಜ್ಞೆಗೈದಿದ್ದಾನೆ. ಭವಿಷ್ಯದಲ್ಲಿ ಧಾರ್ಮಿಕ ಆಜ್ಞೆಗಳನ್ನು ಕಡ್ಡಾಯವಾಗಿ ಪಾಲಿಸುವೆನು. ಎಂದೂ ಧಾರ್ಮಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡಲಾರೆ. ತಮಗೆ ವಿಧಿತವಾಗಿದೆ. ಈ ರಾಜ್ಯವು ಮಲಿಕ ಸುಲ್ತಾನ ಹೋಷಂಗನು ನಶೀರಖಾನನ ತಂದೆ ಖಾದರಖಾನನಿಗೆ ಅನುಗ್ರಹಿಸಿದ್ದನು. ಈ ಕುಟುಂಬವು ಮಾಲವಾ ರಾಜ್ಯದ ವಿಧೇಯತೆಯು ಆಗಿದೆ. ಆದುದರಿಂದ ತಾವು ಯಾವ ಬಗೆಯ ಹಾನಿಗೈಯದಿರಿ."

ಮಹ್ಮೂದ ಷರ್ಖಿಯ ಕಬ್ಜಾ ಕಾಲ್ಪಿಯ ಮೇಲೆ :

ನಸೀರಖಾನನ ಮೊದಲ ಅರ್ಜಿಯ ಉತ್ತರ ಇನ್ನೂ ರವಾನಿಸಿರಲಿಲ್ಲ. ಆದಾಗ್ಯೂ

ಎರಡನೆಯ ಅರ್ಜಿಯು ಬಂದು ಮುಟ್ಟಿತು. ಇದರಲ್ಲಿ ಹೀಗೆ ಬರೆದಿತ್ತು. ಈ ಕನಿಷ್ಟ ಸೇವಕ, ಸುಲ್ತಾನ ಹೋಷಂಗನ ಕಾಲದಿಂದ ಮಾಲವಾ ರಾಜ್ಯದ ವಿಧೇಯತೆಯ ಆಜ್ಞಾಧಾರಕನಾಗಿದ್ದೇನೆ. ಇಂದಿನದಂದು ಮಹ್ಮೂದ ಷರ್ಕಿಯು ಹಳೆ ವೈರತ್ವದಿಂದ ಕಾಲ್ಪಿಯ ಮೇಲೆ ದಾಳಿಗೈದು ಸ್ವಾಧೀನಪಡಿಸಿಕೊಂಡಿದ್ದಾನೆ. ಇವನು ಮುಸಲ್ಮಾನ ಸ್ತ್ರೀಯರನ್ನು ಸೆರೆಹಿಡಿದು ದೇಶಭ್ರಷ್ಟರನ್ನಾಗಿ ಮಾಡಿ ತಾನು ಚಂದೇರಿ ಕಡೆಗೆ ನಡೆದಿರುವನು.

ಸುಲ್ತಾನ ಮಾಲವಾನ ದೃಢಸಂಕಲ್ಪ, ಕಾಲ್ಪಿ ಹಾಗೂ ಚಂದೇರಿ :

ಸುಲ್ತಾನ ಮಹ್ಮೂದ ಖಿಲ್ಜಿಯು ಸ್ವತಃ ಸುಲ್ತಾನ ಮಹ್ಮೂದ ಷರ್ಕಿಗೆ ನಸೀರಖಾನನ ಮೇಲೆ ದಾಳಿಗೈಯಲು ಅಪ್ಪಣೆಯನ್ನು ಕೊಟ್ಟಿದ್ದನು. ಆದರೆ ನಸೀರಖಾನನು ಶ್ರದ್ಧಾಪೂರ್ವಯಾಚನೆಯ ಮೇರೆಗೆ ಸುಲ್ತಾನ ಖಿಲ್ಜಿಯು ಅವನ ಪಕ್ಷವನ್ನು ವಹಿಸಿದ. ಹಾಗೂ ಅವನ ಸಹಾಯಕ್ಕೆ ೨ನೆಯ ಶಾಹಖಾನ ೮೪೮ ಹಿಜರಿಯಲ್ಲಿ ಉಜ್ಜೈನಿಯಿಂದ ಕಾಲ್ಪಿ ಹಾಗೂ ಚಂದೇರಿಯ ಕಡೆಗೆ ಪ್ರಯಾಣ ಬೆಳೆಸಿದನು. ಚಂದೇರಿಯಲ್ಲಿ ನಸೀರಖಾನನಗೆ ಭೆಟ್ಟಿಯಾದನು. ಸುಲ್ತಾನ ಖಿಲ್ಜಿಯು ಅಖ್ರಾನದ ಕಡೆಗೆ ನಡೆದನು.

ಮಹ್ಮೂದ ಷರ್ಕಿ ಹಾಗೂ ಮಹ್ಮೂದ ಖಿಲ್ಜಿಯರಲ್ಲಿ ಯುದ್ಧ :

ಸುಲ್ತಾನ ಮಹ್ಮೂದ ಷರ್ಕಿಗೆ ಈ ಸ್ಥಿತಿಗಳ ತಿಳುವಳಿಕೆಯಾದಾಗ ಅವನು ಸುಲ್ತಾನ ಮಾಲವನ ಜೊತೆ ಯುದ್ಧ ಮಾಡಲು ಪ್ರಯಾಣ ಬೆಳೆಸಿದನು. ಸುಲ್ತಾನ ಮಹ್ಮೂದ ಖಿಲ್ಜಿಯು ತನ್ನ ಸೈನ್ಯದ ಒಂದು ಭಾಗವನ್ನು ಮಹ್ಮೂದ ಷರ್ಕಿಯ ಜೊತೆ ಹೋರಾಟಕ್ಕೆ ನಿಯಮಿಸಿದ. ಮತ್ತು ಎರಡನೆಯ ಭಾಗವನ್ನು ಜೋನಪುರದ ಮೇಲೆ ದಾಳಿ ಮಾಡಲು ಆಜ್ಞೆ ಮಾಡಿದ. ಸೈನ್ಯದ ಈ ಭಾಗವು ಜೋನಪುರದ ಮೇಲೆ ದಾಳಿ ಮಾಡಿ ಧ್ವಂಸಗೊಳಿಸಿತು. ಉಳಿದ ಸೈನ್ಯದ ಭಾಗವು ಮಹ್ಮೂದ ಷರ್ಕಿಯ ಜೊತೆ ಯುದ್ಧ ಮಾಡಲು ನಿಯುಕ್ತವಾಗಿತ್ತು. ಇತ್ತಂಡದಲ್ಲಿ ಭೀಕರ ಯುದ್ಧ ನಡೆಯಿತು. ಈ ಯುದ್ಧದಲ್ಲಿ ಇತ್ತಂಡದ ಶೂರ ಸೈನಿಕರು ಯುದ್ಧ ಭೂಮಿಯಲ್ಲಿ ಮಡಿದರು. ಈ ತರುವಾಯ ಇತ್ತಂಡದ ಸೈನಿಕರು ತಮ್ಮ ತಮ್ಮ ನಿವಾಸ ಸ್ಥಾನಕ್ಕೆ ಮರಳಿದವು.

ಯುದ್ಧ ಒಪ್ಪಂದ ಮತ್ತು ಯುದ್ಧ :

ಎರಡನೆಯ ದಿನ ಮುಂಜಾನೆಯ ಸಮಯದಲ್ಲಿ ಸುಲ್ತಾನ ಮಹ್ಮೂದ ಖಿಲ್ಜಿಯು ಒಬ್ಬ ಸರದಾರ ಇಮಾದುಲ್ ಮುಲ್ಕನಿಗೆ ಈ ಉದ್ದೇಶದಿಂದ ಕಳುಹಿಸಿದನು. ಅವನು ದಾರಿಯಲ್ಲಿ ವಾಸವಾಗಿ ವೈರಿಯ ಹಾದಿಯನ್ನು ತಡೆಗಟ್ಟು, ಮಹ್ಮೂದ ಷರ್ಕಿಗೆ ಈ ಸುದ್ದಿಯು ತಿಳಿಯಿತು. ಅವನು ಈ ಸ್ಥಳದಲ್ಲಿಯೇ ನಿಂತುಕೊಂಡನು. ಇದು ಗೊತ್ತಾದಾಗ ಮಹ್ಮೂದ ಖಿಲ್ಜಿಯು ಅಕ್ಕಪಕ್ಕದಲ್ಲಿಯೇ ಲೂಟಿ ಮಾಡಲು ಆಜ್ಞೆ ನೀಡಿದನು. ಈ

ಸೈನ್ಯವು ಬಹಳಷ್ಟು ಸಾಮಾನುಗಳನ್ನು ಹಾಗೂ ಶತ್ರು ಸಂಪತ್ತನ್ನು ತಮ್ಮ ಸ್ವಾಧೀನಪಡಿಸಿಕೊಂಡರು. ಈ ಮಧ್ಯದಲ್ಲಿಯೇ ಮಳೆಗಾಲ ಪ್ರಾರಂಭವಾಯಿತು. ಹೀಗಾಗಿ ಈರ್ವರು ಒಪ್ಪಂದ ಮಾಡಿಕೊಂಡರು ಮತ್ತು ಮರಳಿದರು. ಮಹ್ಮೂದ ಖಿಲ್ಜಿಯು ಚಂದೇರಿಯ ಕಡೆಗೆ ಪ್ರಯಾಣ ಬೆಳೆಸಿದನು. ಮಹ್ಮೂದ ಷರ್ಖಿಯ ಸಮಯ ಸಾಧಿಸಿ ಬರ್ಹಾರನ ಮೇಲೆ ಹಲ್ಲೆ ಹೂಡಿದನು. ಅಲ್ಲಿಯೇ ಪ್ರಜೆಗಳು ಮಹ್ಮೂದ ಖಿಲ್ಜಿಯ ವಿಧೇಯತೆಯುಳ್ಳ ಆಜ್ಞಾಧಾರಕರಾಗಿದ್ದರು. ಮಹ್ಮೂದ ಖಿಲ್ಜಿಗೆ ಈ ಸುದ್ದಿ ಮುಟ್ಟಿದಾಗಲೆ ಅವನು ತನ್ನ ಸೈನಿಕರ ಒಂದು ಭಾಗವನ್ನು ಬರಹಾದ ಒಡೆಯನ ಸಹಾಯಕ್ಕಾಗಿ ಕಳುಹಿಸಿದನು. ಮಹ್ಮೂದ ಷರ್ಕಿಯು ಹೊಸತಾಗಿ ಬಂದ ಸೈನಿಕ ಜೊತೆಗೆ ಯುದ್ಧ ಮಾಡಲಿಲ್ಲ. ಮರಳಿದನು.

ಮತ್ತೆ ಒಪ್ಪಂದ :

ಹಜರತ ಶೇಬುಲ್-ಇಸ್ಲಾಮ ಚಾಹೀನ್ ಲಡ್ಡಾ, ತನ್ನ ಸಮಯದ ಹೆಸರು ವಾಸಿ ವಯೋವೃದ್ಧರಾಗಿದ್ದರು/ ಮಹಾನ ಪುರುಷರಾಗಿದ್ದರು. ಇದರ ವತಿಯಿಂದ ಮಹ್ಮೂದ್ ಖಿಲ್ಜಿ ಹಾಗೂ ಮಹ್ಮದ ಷರ್ಕಿಯವರಲ್ಲಿ ಒಪ್ಪಂದವಾಯಿತು. ಹಾಗೂ ಈ ರೀತಿಯಿಂದ ಕರಾರು ಮಾಡಲ್ಪಟ್ಟಿತು. ಮಹ್ಮೂದ ಷರ್ಕಿಯು ಖಾದರಖಾನನ ಪುತ್ರರು ವಿಶೇಷವಾಗಿ ನಸೀರಖಾನನಿಗೆ ಯಾವ ಬಗೆಯ ಹಾನಿಯನ್ನು ಪಡಿಸಬಾರದು ಹಾಗೂ ನಾಲ್ಕು ತಿಂಗಳ ನಂತರ ಅಕ್ಬರ ಹಾಗೂ ಕಾಲ್ಪಿಯನ್ನು ಮರಳಿಸತಕ್ಕದ್ದು. ಈ ಒಪ್ಪಂದದ ನಂತರ ಮಹ್ಮೂದ ಖಿಲ್ಜಿಯು ಶಾದಿಯಾಬಾದರ ಮಂದಿರ ಕಡೆಗೆ ಪ್ರಯಾಣ ಬೆಳೆಸಿದ ಹಾಗೂ ಸುಲ್ತಾನ ಮಹ್ಮೂದ ಷರ್ಕಿಯು ಜೋನಪುರದ ಕಡೆಗೆ ನಡೆದನು.

ಹಿಸಾವನನ ಮೇಲೆ ದಂಡಯಾತ್ರೆ :

ಮಹ್ಮೂದ ಷರ್ಕಿಯು ತನ್ನ ದಿವಂಗತ ತಂದೆಯ ಅನುಸರಣೆಗೈದು, ವಿದ್ಯಾವಂತರ, ಪಂಡಿತರ ಹಾಗೂ ಸಾರ್ವಜನಿಕರ ಮೇಲೆ ಅತ್ಯಂತ ಕೃಪೆಗಳನ್ನು ದಯಪಾಲಿಸಿ ಧನವಂತರಾಗಿಸಿದನು. ಹಲವು ಸಮಯದ ನಂತರ ಸೈನ್ಯದ ದಣಿವು ದೂರಾದಾಗ, ಅವನು ಹಸಾವನದ ಮೇಲೆ ದಂಡಯಾತ್ರೆಗೈದನು. ಹಾಗೂ ಅಲ್ಲಿ ದ್ರೋಹಿಗಳನ್ನು ಮತ್ತು ದಂಗೆಕೋರರನ್ನು ಸದೆಬಡೆದು ಮಹ್ಮೂದ ಷರ್ಕಿಯು ಹಸಾವನದ ಮಹಾಮಂದಿರವನ್ನು ಧ್ವಂಸಗೊಳಿಸಿ ಅತಿಶಯ ಧನವನ್ನು ಪಡೆದು ಜೋನಪುರಕ್ಕೆ ಮರಳಿದನು.

ದಿಲ್ಲಿಯ ಮೇಲೆ ಅಸಫಲ ದಾಳಿ :

ಮಹ್ಮೂದ ಷರ್ಕಿಯು ೮೫೬ ಹಿಜರಿಯಲ್ಲಿ ದಿಲ್ಲಿಯ ಮೇಲೆ ದಾಳಿ ಮಾಡಿದನು. ಹಾಗೂ ಕೆಲಕಾಲದವರೆಗೆ ಮುತ್ತಿಗೆ ಹಾಕಿ ನಗರವಾಸಿಗಳಿಂದ ಯುದ್ಧ ಮಾಡುತ್ತಿದ್ದನು.

ಸುಲ್ತಾನ ಬಹ್ಲುಲ್ ದೀಪಾಲಪುರನಿಂದ ಒಂದು ಮಹಾಸೈನ್ಯವನ್ನೇ ತೆಗೆದುಕೊಂಡು ಬಂದನು. ಮತ್ತು ಮಹ್ಮೂದ ಷರ್ಕಿಯ ಜೊತೆ ಯುದ್ಧ ಮಾಡುವ ತಯಾರಿ ನಡೆಸಿದನು. ದರಿಯಾಖಾನ ಅಫಘಾನ ಬಾದಶಾಹ ದಿಲ್ಲಿಯಿಂದ ದುಃಖಿತನಾಗಿ ಮಹ್ಮೂದ ಷರ್ಕಿಯಲ್ಲಿಗೆ ಬಂದು ಕೂಡಿಕೊಂಡನು. ಮತ್ತು ಅವನ ಸೇವೆಯಲ್ಲಿ ತೊಡಗಿದನು. ಅಷ್ಟರೊಳಗೆ ದ್ರೋಹ ಬಗೆದು ಪಲಾಯನ ಬೆಳೆಸಿದನು. ದರಿಯಾಖಾನನ ಫರಾರಿಯಾದ ಮೇಲೆ ಮಹ್ಮೂದ ಷರ್ಕಿಯು ವಿಳಂಬಗೈಯದೆ ಅಲ್ಲಿಂದ ಮರಳಿದನು. ದಿಲ್ಲಿಯ ನಿವಾಸಿಗಳು ಮಹ್ಮೂದ ಷರ್ಕಿಯ ಬೆನ್ನಟ್ಟಿದರು. ಈ ಗಲೆಭೆಯಲ್ಲಿ ಹೆಸರುವಾಸಿಯಾದ ಷರ್ಕಿಯ ಸರದಾರ ಮುಸಮ್ಮಿ ಫತ್ತೇಖಾನನು ಕೊಲ್ಲಲಪಟ್ಟನು. ಹಾಗೂ ಏಳು ಆನೆಗಳನ್ನು ವೈರಿಯು ತನ್ನ ಸ್ವಾಧೀನಪಡಿಸಿಕೊಂಡರು.

ದಿಲ್ಲಿಯ ಮೇಲೆ ಮತ್ತೊಮ್ಮೆ ದಾಳಿ :

೮೬೧ ಹಿಜರಿಯಲ್ಲಿ ಬಹ್ಲುಲ ಲೋಧಿಯು ಅವಾವೆಯ ಚೌಧರಿಯ ಮೇಲೆ ದಂಡಯಾತ್ರೆಯನ್ನು ಕೈಕೊಂಡನು. ಆಗ ಮಹ್ಮೂದ ಷರ್ಕಿಯು ಸಮಯ ಸಾಧಿಸಿ ಎರಡನೆಯ ಸಲ ದಿಲ್ಲಿಯ ಮೇಲೆ ದಾಳಿ ಮಾಡಿದ. ಹಿಂದೆ ವಿವರವಾಗಿ ಉಲ್ಲೇಖಿಸಿದ ಸೂಕ್ತ ಸ್ಥಳದಲ್ಲಿ ಇತ್ತಂಡದವರು ನೀರ್ವಿಗಾವಧಿಯವರೆಗೆ ಮುಖಾಮುಖಿಯಾಗಿ ಒಬ್ಬರು ಇನ್ನೊಬ್ಬರ ಎದುರಿಗೆ ಅಚಲವಾಗಿ ನಿಂತರು. ಸುಲ್ತಾನ ಬಹ್ಲೂಲ ಲೋಧಿಯ ಕಕ್ಕನ ಮಗ ಖುತುಬಖಾನನು ಷರ್ಕಿ ಸೈನ್ಯದ ಮೇಲೆ ಆಕ್ರಮಣ ಮಾಡಿದನು. ಆದರೆ ಅವನಿಗೆ ಜಯ ದೊರೆಯಲಿಲ್ಲ. ಅವನು ವೈರಿಯ ಸೆರೆಯಾಳಾದನು.

ಮರಣ :

ಬಹ್ಲೂಲ ಲೋಧಿಯು ಪಾಲ್ಗೊಳ್ಳಲಿಲ್ಲ. ಮಹ್ಮೂದ ಷರ್ಕಿಯು ರೋಗ ಪೀಡಿತನಾದ, ಕೆಲದಿನಗಳಲ್ಲಿ ಮೃತಪಟ್ಟನು. ಮಹ್ಮೂದ ಷರ್ಕಿಯ ಆಡಳಿತಾವಧಿಯು ೨೦ ವರ್ಷ ಹಾಗೂ ಕೆಲವು ತಿಂಗಳದಾಗಿತ್ತು.

■

VIII. ಸಿಂಧು ಸುಲ್ತಾನರು ಮತ್ತು ಠಠ್ಠ ಸುಲ್ತಾನರು

*

೧. ಹಿಂದುಸ್ತಾನದಲ್ಲಿ ಇಸ್ಲಾಮ್ ಧರ್ಮದ ಸಂಪ್ರದಾಯ ಹಾಗೂ ಪ್ರಚಾರ

ಹಜ್ಜಾಜಿನ ಸಂಕಲ್ಪ ಹಿಂದುಸ್ತಾನವನ್ನು ಹತೋಟಿಗೆ ತರುವುದು :

ಸಿಂಧ ಮತ್ತು ಠಟ್ಟಾಹದಲ್ಲಿ ಇಸ್ಲಾಮ ಧರ್ಮದ ಸಾಂಪ್ರದಾಯಿಕ ಪ್ರಚಾರದ ಕುರಿತು "ಖುಲಾಸ್ತುಲ್‌ಹಿಕಾಯತ" "ಹುಜ್ಜಾಜನಾಮಾ" ಹಾಜಿ ಖಂಧಾರಿಯವರ ಇತಿಹಾಸ ಹಾಗೂ ಇತರ ಇತಿಹಾಸ ಪುಸ್ತಕಗಳಲ್ಲಿ ಈ ಹೇಳಿಕೆಯಾಗಿದೆ. ಹುಜ್ಜಾಜ ತಂದೆ ಬಿನ ಯುಸೂಫನು, ವಲೀದ (ಬಿನ) ತಂದೆ ಅಬ್ದುಲ ಮಲಿಕನ ಕಡೆಯಿಂದ ಇರಾಕ, ಅರಬ ಅಲ್ಲದೆ ಇರಾನ ಹಾಗೂ ತೂರಾನಿನ ಒಡೆಯನಾಗಿದ್ದನು. ಹಿಂದುಸ್ತಾನ ಗೆಲ್ಲುವ ಸಂಕಲ್ಪ ಮಾಡಿದನು.

ಮಕ್ರಾನಿನ ಗೆಲುವು :

ಹುಜ್ಜಾಜನು ಮೊಟ್ಟಮೊದಲು ೮೬ ಹಿಜರಿಯಲ್ಲಿ ಆರಂಭದಲ್ಲಿ ಮಹ್ಮೂದ ಹಾರೂನನಿಗೆ ಒಂದು ಪ್ರಬಲ ಸೈನ್ಯದೊಂದಿಗೆ ಮಕ್ರಾನಿನ ಕಡೆಗೆ ರವಾನಿಸಿದನು. ಮೊಹ್ಮದ ಹಾರೂನನು ಮಕ್ರಾನ ತಲುಪಿ ಆ ನಗರವನ್ನು ಗೆದ್ದುಕೊಂಡನು. ಹಾಗೂ ಅಲ್ಲಿಯ ಪ್ರಜೆಗಳು ಅವರಲ್ಲಿ ಬಲೋಖಿಯವರ ಒಂದು ಬುಡಕಟ್ಟು ಜನಾಂಗವು ಇವರಲ್ಲಿ ಕೂಡಿಕೊಂಡಿತ್ತು. ಅವರು ಇಸ್ಲಾಮ ಧರ್ಮವನ್ನು ಸ್ವೀಕರಿಸಿದರು. ಆ ಕಾಲದಿಂದಲೇ ಸಿಂಧನಲ್ಲಿ ಇಸ್ಲಾಮ ಧರ್ಮದ ಪ್ರಚಾರ ಪ್ರಾರಂಭವಾಯಿತು. ಅಂದಿನದಂದು ಮಕ್ರಾನಿನಲ್ಲಿ ಮಸೂದೆಗಳನ್ನು ನಿರ್ಮಾಣಗೊಳಿಸಿ ಷರಿಯತ್‌ನ ಆದೇಶಗಳು ಜಾರಿಯಲ್ಲಿ ಬಂದವು.

ಅರಬ ಮತ್ತು ಹಿಂದುಸ್ತಾನದ ಸಂಬಂಧಗಳು ಇಸ್ಲಾಮ ಪ್ರಕಟಗೊಳ್ಳುವ ಮುನ್ನ (ಮೊದಲು):

ಸರನ್ದೀಪ ದ್ವೀಪದ ಜನರ ಅಭಿಪ್ರಾಯವಿದೆ. ಹಿಂದುಸ್ತಾನದ ಜನರು ಹಜರತ ಆದಮರ ಕಾಲದಿಂದ ನಾವೆಗಳಿಂದ ಮೆಕ್ಕಾ ಮೊಜಮ ಹಾಗೂ ಅರಬ್ಬದ ಇತರ

ನಗರಳಲ್ಲಿ ಹೋಗುತ್ತಿದ್ದರು. ಇಸ್ಲಾಮ ಜನ್ಮತಾಳುವ ಮೊದಲು ಹಿಂದುಸ್ತಾನ ಬ್ರಾಹ್ಮಣರು ಖಾನೆಕಾಬಾದ ತೀರ್ಥಯಾತ್ರೆ ಹಾಗೂ ಮೂರ್ತಿ ಪೂಜೆಯನ್ನು ಮಾಡಲು ಮಕ್ಕಾ ಮೊಜಮಕ್ಕೆ ಹೋಗುತ್ತಿದ್ದರು. ಮತ್ತು ಕಾಬಾಕ್ಕೆ ಉತ್ತಮ ಆರಾಧ್ಯಗೃಹವೆಂದು ತಿಳಿದುಕೊಂಡಿದ್ದರು.

ರಾಜಾ ಸರಂದೀಪನ ಇಸ್ಲಾಮದಿಂದ ಸ್ನೇಹ :

ಈ ಸಂಬಂಧಗಳಿಂದ ಸರಾನ್ದೀಪದ ರಾಜನು ಹಿಂದುಸ್ತಾನದ ಇತರ ರಾಜರುಗಳಿಗಿಂತ ಇಸ್ಲಾಮದ ಸತ್ಯತೆಯನ್ನು ತ್ವರೆಯಾಗಿ ತಿಳಿದುಕೊಂಡನು. ಅವನು ಸಾಹಾಬಾ ಇಕ್ರಾಮರ ಕಾಲದಲ್ಲಿಯೇ ಇಸ್ಲಾಮ ಧರ್ಮವನ್ನು ಸ್ವೀಕರಿಸಿ ಮುಸಲ್ಮಾನನಾಗಿದ್ದ. ಈ ರಾಜನು ಮುಸಲ್ಮಾನ ಬಾದಶಾಹರ ಮೇಲೆ ಶ್ರದ್ಧೆಯನ್ನು ಇಟ್ಟಿದ್ದನು. ಒಮ್ಮೆ ಅವನು ಅನೇಕ ಕಾಣಿಕೆಗಳು ಹಾಗೂ ಹೆಚ್ಚು ಬೆಲೆಯುಳ್ಳ ವಸ್ತುಗಳನ್ನು ಗುಲಾಮರ ಹಾಗೂ ದಾಸಿಯರ ಜೊತೆಗೆ ಸಮುದ್ರದ ಹಾದಿಯಿಂದ ವಲೀಸರ ರಾಜಧಾನಿಗೆ ಕಳುಹಿಸಿದನು. ಈ ನಾವೆಗಳು ಅಜಮದ ಅಕ್ಕಪಕ್ಕ ತಲುಪಿದಾಗ ಲೋಮಕ ಜನರು, ವೇಖಲ ಒಡೆಯನ ಅಪ್ಪಣೆಯಿಂದ ಸಮುದ್ರದಲ್ಲಿ (ಗತ್ತುಸುತ್ತು) ಗಸ್ತು ಮಾಡುತ್ತಿದ್ದರು. ಈ ನಾವೆಗಳನ್ನು ತಮ್ಮ ವಶದಲ್ಲಿಟ್ಟುಕೊಂಡರು.

ಮುಸಲ್ಮಾನ ಸ್ತ್ರೀಯರ ಬಂಧನ :

ಈ ನಾವೆಗಳಲ್ಲಿ ತುಂಬಿರುವ ಸಾಮಾನುಗಳನ್ನು ದರೋಡೆ ಮಾಡಿಕೊಂಡರು. ಮತ್ತು ಹಲವು ಮುಸಲ್ಮಾನ ಸ್ತ್ರೀಯರು ಯಾರು ಹಜ್ ಮಾಡುವ ಉದ್ದೇಶದಿಂದ ಈ ನಾವೆಯಲ್ಲಿ ಕುಳಿತಿದ್ದರು. ಅವರನ್ನು ಬಂಧಿಸಿ ತಮ್ಮ ಜೊತೆಗೆ ಕರೆದುಕೊಂಡು ಹೋದರು. ಯಾರು ಬಂಧನಕ್ಕೊಳಗಾದವರು ದುರಾವಸ್ಥೆಯಲ್ಲಿ ಹಜ್ಜಾನನ ಹತ್ತಿರ ಬಂದು ಸಂಪೂರ್ಣ ಘಟನೆಯ ವಿಷಯವನ್ನು ತಿಳಿಸಿ ನ್ಯಾಯವನ್ನು ಯಾಚಿಸಿದರು.

ರಾಜಾದಾಹರನಿಗೆ ಹುಜ್ಜಾನ ಪತ್ರ ಹಾಗೂ ಅದರ ಉತ್ತರ :

ಈ ಘಟನೆಯ ವರದಿಯನ್ನು ಕೇಳಿ ಹುಜ್ಜಾಜನು ಕೋಪಗೊಂಡು ತಕ್ಷಣವೆ ಸಿಂಧ ಒಡೆಯ ರಾಜ ದಾಹರನಿಗೆ ಒಂದು ಪತ್ರ ಬರೆದ ಹಾಗೂ ಮೊಹ್ಮದ ಹಾರೂನನಿಗೆ ಕಳುಹಿಸಿದ. ಅವನು ತನ್ನ ಸಂದೇಶವಾಹಕರ ವತಿಯಿಂದ ರಾಜಾ ದಾಹರನಿಗೆ ತಲುಪಲಿ ಮೊಹ್ಮದ ಹಾರೂನನು ಈ ಪತ್ರವನ್ನು ದಾಹರನಿಗೆ ಕಳುಹಿಸಿಕೊಟ್ಟ ಅವನು ಈ ಪತ್ರ ಓದಿ ಉತ್ತರ ಬರೆದ. ಯಾರು ಈ ಅಪರಾಧವನ್ನು ಮಾಡಿರುವರು. ಅವರ ಶಕ್ತಿಯು ಅತಿ ಹೆಚ್ಚಿದೆ. ಕಾರಣ ನಾನು ಅವರಿಗೆ ವಿವಶಗೊಳಿಸಲಾರದೆ ಅದೆಲ್ಲವು ಲೂಟಿ ಮಾಡಿದ ಸಂಪತ್ತು ಮರಳಿಸು ಹಾಗೂ ಬಂಧಿಸಿದ ಮುಸಲ್ಮಾನ ಸ್ತ್ರೀಯರಿಗೆ ಬಿಡುಗಡೆ ಮಾಡಿಸಲಾರೆ.

ದೆಬಲ ನಿವಾಸಿಗಳ ಜೊತೆ ಯುದ್ಧ-ಪದ್ಮನನ ಮರಣ :

ಹುಜ್ಜಾ ತಂದೆ ಯುಸೂಫನು ಈ ಉತ್ತರವನ್ನು ಪಡೆದುಕೊಂಡು ವಲೀದ ತಂದೆ ಅಬ್ದುಲ್‌ಮಲಿಕನಿಂದ ಹಿಂದುಗಳ ಜೊತೆ ಜೌಹಾದಗೈಯಲು ಅಪ್ಪಣೆ ಪಡೆದ. ಪದ್ಮನ ಹೆಸರಿನವನಿಗೆ ಮೂರು ಸಾವಿರ ಸವಾರರನ್ನೊಳಗೊಂಡು ಹಾರೂನನಲ್ಲಿಗೆ ಕಳುಹಿಸಿದನು. ಮೊಹ್ಮದ ಹಾರೂನನಿಗೆ ಈ ಆಜ್ಞೆ ನೀಡಿದನು. ಒಂದು ಸಾವಿರ ಅನುಭವವುಳ್ಳ ಸೈನಿಕರನ್ನು ಪದ್ಮದನ ಜೊತೆಗೂಡಿ ದೆಬಲರೊಂದಿಗೆ ಯುದ್ಧ ಮಾಡಲು ಕಳುಹಿಸಿಕೊಡಿ. ಪದ್ಮನು ಈ ಸೈನಿಕರನ್ನು ತೆಗೆದುಕೊಂಡು ವೆಬಲ ತಲುಪಿ ದೆಬಲರೊಂದಿಗೆ ಯುದ್ಧ ಮಾಡಿದನು. ಈ ಯುದ್ಧದಲ್ಲಿ ಅವನು ಷಹೀದ್ ಆದನು.

ಮೊಹ್ಮದಬಿನ ಖಾಸಿಮ ಹಾಗೂ ವೆಬಲದ ಮುತ್ತಿಗೆ :

ಪದ್ಮನನ ಮರಣದ ಸುದ್ದಿ ಹುಜ್ಜಾನಿಗೆ ಮುಟ್ಟಿತು. ಅವನು ಬಹಳ ಕಳವಳಗೊಂಡನು. ಅವನು ಈ ಅಸಫಲ ಪರಿಹಾರದ ಸಲುವಾಗಿ ತನ್ನ ತಮ್ಮನ ಮಗ ಹಾಗೂ ತನ್ನ ಅಳಿಯನಾದ ಇಮಾದುದ್ದೀನ ಮೊಹ್ಮದ ಬಿನ ಖಾಸೀಮನಿಗೆ ಅವನ ವಯಸ್ಸು ಕೇವಲ ಹದಿನೇಳು ವರ್ಷವಿತ್ತು. ೯೩ ಹಿಜರಿಯಲ್ಲಿ ಸಿಂಧ್ ಕಡೆ ರವಾನಿಸಿದನು. ಮೊಹ್ಮದ ಬಿನ ಖಾಸೀಮನು ಆರು ಸಾವಿರ ಅನುಭವವುಳ್ಳ ಷಾಮಿ ಸೈನಿಕರನ್ನೊಡಗೂಡಿ ಷೀರಾಜ ಮಾರ್ಗವಾಗಿ ವೆಬಲಗಡಿ, ನಗರಗಳ ದೇವನ ಹಾಗೂ ದರಸನ ತಲುಪಿದನು. ಇಲ್ಲಿಂದ ಅವನು ಪ್ರಯಾಣ ಬೆಳೆಸಿದನು. ದೆಬಲ ನಗರದಲ್ಲಿ ಅದು ಅಮಾನ ನದಿಯ ದಡದಲ್ಲಿದೆ. ಇಂದು ನಾಳೆ ಠಟ್ಟಾ ಹೆಸರಿನಿಂದ ಮೊಹ್ಮದ ಬಿನ್ ಖಾಸಿಮನು ಮುತ್ತಿಗೆ ಹಾಕಿದನು.

ದೆಬಲದ ವೈಭವ ಮಂದಿರ :

ದೆಬಲದಲ್ಲಿ ಒಂದು ದೊಡ್ಡ ಮಂದಿರವಿತ್ತು. ಅದು ತನ್ನ ಸಬಲತೆ ಹಾಗೂ ರಚನೆಯಿಂದಾಗಿ ಇದೊಂದು ಕೋಟೆಗೆ ಸಮಾನವಾಗಿತ್ತು. ಮುತ್ತಿಗೆಯು ಬಹುದಿನಗಳಿಂದ ನಡೆದಿತ್ತು. ಓರ್ವ ಬ್ರಾಹ್ಮಣನು ತನ್ನ ಜೀವದಾನ ಬೇಡಲು ಮೊಹ್ಮದಬಿನ್ ಖಾಸಿಮನ ಹತ್ತಿರ ಬಂದನು. ಮೊಹ್ಮದ್ ಬಿನ ಖಾಸಿಮನು ಈ ಬ್ರಾಹ್ಮಣನಿಂದ ದೆಬಲ ನಗರ ಹಾಗೂ ಆ ದೊಡ್ಡ ಮಂದಿರದ ವಸ್ತುಸ್ಥಿತಿಯ ಬಗ್ಗೆ ಕೇಳಿದನು. ಈ ಬ್ರಾಹ್ಮಣನು ತೋರಿಸಿದನು. ಈ ಮಂದಿರದಲ್ಲಿ ನಾಲ್ಕು ಸಾವಿರ ರಜಪೂತ ಸೈನಿಕರು ಹಾಗೂ ಎರಡು ಮೂರು ಸಾವಿರ ಬ್ರಾಹ್ಮಣ ಪೂಜಾರಿಯವರು ಸದಾಕಾಲ ಇರುತ್ತಾರೆ. ಬ್ರಾಹ್ಮಣ ಪೂಜಾರಿಗಳು ಒಂದು ಬಗೆಯ ಇಂತಹ ಜಾದು ಮಾಡಿದ್ದಾರೆ. ಇದರಿಂದಾಗಿ ಮಂದಿರವನ್ನು ಗೆಲ್ಲುವುದು ಅಸಾಧ್ಯವಾಗಿದೆ. ಈ ಜಾದುವಿನ ಪ್ರಭಾವವು ನಷ್ಟವಾಗುವವರೆಗೆ ಈ ಮಂದಿರವನ್ನು ಗೆಲ್ಲಲಾಗುವುದಿಲ್ಲ. ಈ ಕಾರಣಕ್ಕಾಗಿ ಇಂದಿನವರೆಗೂ ಈ ಮಂದಿರವನ್ನು ಯಾವ ಜಯಶಾಲಿಯು ಸ್ವಾಧೀನಪಡಿಸಿಕೊಂಡಿಲ್ಲ.

ಜಾದುವಿನ ಪ್ರಭಾವ :

ಮೊಹ್ಮದಬಿನ ಖಾಸಿಮನು ಈ ಬ್ರಾಹ್ಮಣನಿಗೆ ಕೇಳಿದ. ಈ ಜಾದುವಿನ ಪ್ರಭಾವವನ್ನು ಹೇಗೆ ನಷ್ಟಗೊಳಿಸತಕ್ಕದ್ದು, ಬ್ರಾಹ್ಮಣನು ಉತ್ತರಿಸಿದನು. ಒಂದು ಧ್ವಜದ ಬುನಾದಿಯಲ್ಲಿ ಪೂಜಾರಿಗಳು ಇಂದ್ರಜಾಲವನ್ನು ಕಟ್ಟಿದ್ದಾರೆ. ಈ ಬುನಾದಿಯನ್ನು ನಷ್ಟಗೊಳಿಸಿದರೆ ಜಾದುವಿನ ಪ್ರಭಾವವು ನಷ್ಟಗೊಳ್ಳುವುದು. ಮೊಹ್ಮದಬಿನ್ ಖಾಸಿಮನು ಓರ್ವ ಜಘುಖಿಯ ಎಂಬ ಕಲ್ಲಿನ ಗುರಿಗಾರನಿಗೆ ಆಜ್ಞೆ ಮಾಡಿದನು. ಈ ಧ್ವಜದ ಬುನಾದಿಯನ್ನು ತುಂಡು ತುಂಡು ಮಾಡಿ ಬಿಡಿ. ಜಘುಖಿಯಾನು ಮೂರು ಸಲ ಈ ಧ್ವಜದ ಮೇಲೆ ಕಲ್ಲುಗಳನ್ನು ಎಸೆದನು. ಈ ಬುನಾದಿಯನ್ನು ಪೂರ್ಣವಾಗಿ ನಾಶಮಾಡಿದನು. ಹೀಗಾಗಿ ಜಾಧುವಿನ ಪ್ರಭಾವ ಕೊನೆಗೊಂಡಿತು.

ಮಂದಿರ ಗೆಲ್ಲುವಿಕೆ :

ಈ ಸಂಗತಿಯ ಕೆಲಕಾಲದ ನಂತರ ಮಂದಿರವು ಗೆಲ್ಲಲ್ಪಟ್ಟಿತು. ಮೊಹ್ಮದ ಬಿನಖಾಸಿಮನು ಅದರ ಪೌಳಿಯನ್ನು ಬೀಳಿಸಿ ಭೂಮಿಸಮಗೈಸಿದನು. ಬ್ರಾಹ್ಮಣರಿಗೆ ಇಸ್ಲಾಮ ತರಲು ನಿಮಂತ್ರಣ ಕೊಟ್ಟನು. ಬ್ರಾಹ್ಮಣರು ಇದನ್ನು ನಿರಾಕರಿಸಿದರು. ಇದನ್ನನುಸರಿಸಿ ಮೊಹ್ಮದಬಿನ ಖಾಸಿಮನು ಹುಡುಗರನ್ನು, ಹುಡುಗಿಯರನ್ನು ಹಾಗೂ ಯುವತಿಯರಿಗೆ ದಾಸಿ ಹಾಗೂ ಗುಲಾಮರನ್ನಾಗಿಸಿ ಬಂಧಿಸಿದನು. ಹಾಗೂ ೧೭ ವರ್ಷ ಮೀರಿದ ಗಂಡಸರಿಗೆ ಕೊಲೆ ಮಾಡಿದನು. ದಾಸಿ ಹಾಗೂ ಗುಲಾಮರಲ್ಲದೆ ಮೊಹ್ಮದ ಬಿನ್ ಖಾಸಿಮನಿಗೆ ಬಹಳಷ್ಟು ಶತ್ರು ಸಂಪತ್ತು ದೊರಕಿತು. ಇದಕ್ಕೆ ಅವನು ಐದು ಭಾಗಗಳಲ್ಲಿ ವಿಂಗಡಿಸಿದನು. ಒಂದು ಭಾಗ ಜೊತೆಗೆ ೭೫ ದಾಸಿಯರನ್ನು ಹುಜ್ಜಾಜನಿಗೆ ಕಳುಹಿಸಿದನು. ಉಳಿದ ಭಾಗಗಳನ್ನು ಸೈನಿಕರಲ್ಲಿ ಹಂಚಿದನು.

ಹರವಾ ನಗರ ಗೆಲ್ಲುವಿಕೆ :

ಇದರ ತರುವಾಯ ಮೊಹ್ಮದ ಬಿನ್ ಖಾಸಿಮ ಹರವಾನ ನಗರದ ಕಡೆಗೆ ನಡೆದನು. ಯಾವಾಗ ನಗರದ ಆಡಳಿತಾಧಿಕಾರಿಗೆ ಈ ಸುದ್ದಿ ತಲುಪಿತು. ಅವನು ಹಳೆಯ ಬ್ರಾಹ್ಮಣಬಾದಿನ ಕಡೆಗೆ ನಡೆದನು. ಇವನ ದರ್ಬಾರಿಗಳು ಹಾಗೂ ಇತರ ವಿಶ್ವಾಸವನ್ನುಳ್ಳ ಜನರು ಜೀವದಾನ ಕೇಳಿ ಕೋಟೆಯನ್ನು ಮೊಹ್ಮದ ಬಿನ್ ಖಾಸಿಮನಿಗೊಪ್ಪಿಸಿದರು. ಮೊಹ್ಮದ ಬಿನ್ ಖಾಸಿಮನು ಈ ನಗರದ ರಾಜಭಾರವನ್ನು ಓರ್ವ ಮುಸಲ್ಮಾನ ಸರದಾರನಿಗೆ ಒಪ್ಪಿಸಿ ಸೈನಿಕರಿಗೆ ಅವಶ್ಯವಾದ ಧಾನ್ಯ ಹಾಗೂ ಇತರ ವಸ್ತುಗಳನ್ನು ಒದಗಿಸಿ ಸೀವಾನದ ಕಡೆಗೆ ಪ್ರಯಾಣ ಬೆಳೆಸಿದನು.

ಶೀವಾನದ ಬ್ರಾಹ್ಮಣರು :

ಶೀವಾನ ವಾಸಿಗಳು ಎಲ್ಲರು ಬ್ರಾಹ್ಮಣ ಜನಾಂಗದವರಾಗಿದ್ದರು. ಯಾವಾಗ

ಮಹ್ಮದ ಬಿನ್ ಖಾಸಿಮನ ಆಗಮನದ ಸುದ್ದಿ ಮುಟ್ಟಿದಾಗ ಅವರು ತಮ್ಮ ಒಡೆಯನಾದ ಬಕ್ಕಾಯೆನ ಬಳಿಗೆ ಬಂದರು. ಅವರು ಅವನಿಗೆ ಹೇಳಿದರು. ನಮ್ಮಧರ್ಮಾನುಸಾರ ರಕ್ತಪಾತವು ಧರ್ಮನಿಷೇಧವಾಗಿದೆ. ಪ್ರಯುಕ್ತ ನಾವು ಮುಸಲ್ಮಾನರ ಜೊತೆ ಯುದ್ದ ಮಾಡಲಾರೆವು. ಕಾರಣ ನಮ್ಮ ಸಲಹೆಯಲ್ಲಿ ಯೋಗ್ಯವಾದ ಮಾರ್ಗವೆಂದರೆ ಮೊಹ್ಮದ ಬಿನ್ ಖಾಸೀಮನಲ್ಲಿ ಜೀವದಾನ ಬೇಡುವುದು. ಈತನ ವಿಧೇಯತೆಯನ್ನು ನಮ್ಮ ಪದ್ಧತಿಯನ್ನಾಗಿಸಿಕೊಳ್ಳಿರಿ.

ಶೀವಾನಿನ ಗೆಲ್ಲುವಿಕೆ :

ಖಜ್ಜಾಪಾಯೆನು ಬ್ರಾಹ್ಮಣರ ನುಡಿಗಳನ್ನು ಕೇಳಿ ಅತಿ ಕುಪಿತನಾದನು. ಹಾಗೂ ಅವರಿಗೆ ಬಿರು ನುಡಿಗಳಾಡಿದನು. ಮುಸಲ್ಮಾನರು ನಗರವನ್ನು ಮುತ್ತಿದರು. ಯಾವಾಗ ಮುತ್ತಿಗೆಯು ಒಂದು ವಾರದವರೆಗೆ ನಡೆಯಿತು. ರಾಜಾ ಖಜ್ವಾಯನು ರಾತ್ರಿಯ ಸಮಯದಲ್ಲಿ ತನ್ನ ರಾಜಪೂತ ಸೈನಿಕರ ಒಂದು ಗುಂಪಿನ ಜೊತೆಗೂಡಿ ಫರಾರಿಯಾಗಿ ಸಲೀಮ ಕೋಟೆಯ ರಾಜನ ಹತ್ತಿರ ಹೋದನು. ಮತ್ತು ಅವನಿಂದ ಸಹಾಯ ಕೋರಿದನು. ಬೆಳಗಾಯಿತು. ಬ್ರಾಹ್ಮಣರು ಮಹ್ಮದಬಿನ್ ಖಾಸೀಮನಿಗೆ ಜೀವದಾನ ಕೇಳಿ ನಗರವು ಮೊಹ್ಮದಬಿನ್ ಖಾಸೀಮನಿಗೆ ಒಪ್ಪಿಸಿದರು.

ಸಲೀಮ ಕೋಟೆಯನ್ನು ಗೆಲ್ಲುವಿಕೆ :

ಮೊಹ್ಮದ ಬಿನ ಖಾಸೀಮನ ಕೈಗೆ ಹೇರಳ ಶತ್ರು ಸಂಪತ್ತು ಸೇರಿತು. ಅವನು ಇದರಲ್ಲಿ ಐದನೆಯ ಭಾಗ ಬೇರೆಗೈದು ಉಳಿದುದನ್ನು ಸೈನಿಕರಲ್ಲಿ ಹಂಚಿದನು. ಇಲ್ಲಿಂದ ಸೇವಾನ ಗೆದ್ದ ನಂತರ ಮಹ್ಮದ ಬಿನ್ ಖಾಸೀಮನು ಸಲೀಮ ಕೋಟೆಯ ಕಡೆಗೆ ನಡೆದನು. ಹಾಗೂ ಅಲ್ಲಿ ತಲುಪಿದ ಮೇಲೆ ಆ ನಗರವನ್ನು ಗೆದ್ದುಕೊಂಡನು. ಇಲ್ಲಿಯು ಶತ್ರು ಸಂಪತ್ತು ಕೈಸೇರಿತು. ಅದನ್ನು ಕೂಡ ಮುಂಚಿನ ಮಾಮೂಲಿನಂತೆ ಹಂಚಿದನು. ಮುಸಲ್ಮಾನರು ಈ ನಗರದಲ್ಲಿ ಹಲವು ದಿನಗಳವರೆಗೆ ತಂಗಿದರು.

ಹೀಲಿಸಾ ಹಾಗೂ ಮೊಹ್ಮದ ಬಿನ್ ಖಾಸೀಮನ ಯುದ್ಧ :

ಈ ಮಧ್ಯದಲ್ಲಿ ರಾಜಾ ದಾಹರನ ಮಗ ಅವನ ಹೆಸರು ಹೀಲಸಾ ಇತ್ತು. ಒಂದು ಮಹಾನ್ ಸೈನ್ಯವನ್ನು ತೆಗೆದುಕೊಂಡು ಮೊಹ್ಮದ ಬಿನ್ ಖಾಸೀಮನ ಜೊತೆಗೆ ಸೆಣೆಸಲು ಬಂದ, ಈ ದಿನಗಳಲ್ಲಿಯೇ ಇನ್ನೊಂದು ಆಪತ್ತು ಎದುರಾಯಿತು. ಅದು ಯಾವುದೆಂದರೆ ಮುಸಲ್ಮಾನರ ಅನೇಕ ಕುದುರೆಗಳು ರೋಗದಿಂದ ಮೃತಪಟ್ಟವು. ಇದೊಂದು ಅತ್ಯಂತ ಕಳವಳಗೊಳ್ಳುವ ಘಟನೆಯಾಗಿತ್ತು. ಮೊಹ್ಮದ ಬಿನ್ ಖಾಸೀಮನು ತಕ್ಷಣವೆ ಹುಜ್ಜಾಜ ಬಿನ್ ಯೂಸುಫನಿಗೆ ಈ ಮಾಹಿತಿಯನ್ನು ತಿಳಿಸಿದನು. ಹುಜ್ಜಾಜನು ವಿಳಂಬಗೈಯದೆ. ೨೦೦೦ ಕುದುರೆಗಳನ್ನು ಕಳುಹಿಸಿದನು. ಇದರ ತರುವಾಯ

ಮುಸಲ್ಮಾನರು ಹೀಲಿಸಾನ ಸೈನ್ಯಕ್ಕೆ ಮುತ್ತಿದರು. ಇತ್ತಂಡದಲ್ಲಿ ಭೀಕರ ಯುದ್ಧ ಪ್ರಾರಂಭವಾಯಿತು. ಎರಡು ಮೂರು ಸಲ ಯುದ್ಧ ನಡೆಯಿತು. ಆದರೆ ಇದರ ಪರಿಣಾಮವು ದೊರೆಯಲಿಲ್ಲ.

ಜೋಯಿಸರ ಸತ್ಯನುಡಿ :

ರಾಜಾ ದಾಹರನು ತನ್ನ ರಾಜ್ಯದ ಎಲ್ಲಾ ಜೋಯಿಸರನ್ನು ಒಟ್ಟುಗೂಡಿಸಿ ಅವರಿಗೆ ಕೇಳಿದ, ಮುಸಲ್ಮಾನ ಸೈನ್ಯದ ಪರಿಣಾಮ ಏನಾಗುವುದು? ಜೋಯಿಸರು ಉತ್ತರಿಸಿದರು. ನಾವು ನಮ್ಮ ಪ್ರಾಚೀನ ಗ್ರಂಥಗಳಲ್ಲಿ ಓದಿದ್ದೇವೆ. ಒಂದು ಕಾಲದಲ್ಲಿ ಅರಬ್ಬ ದೇಶದಲ್ಲಿ ಇಂಥ ವ್ಯಕ್ತಿ (ಸೋಲ್ಲಿಲ್ಲ ಅಲೈಹೆವಾಲೆಹಿಸ್ಲಲಂ) ಜನ್ಮ ತಾಳುವರು. ಅವರು ಪ್ರವಾದಿತ್ವದ ದಾವೆ ಮಾಡಿ ಹಾಗೂ ಇಡಿ ಜಗತ್ತನ್ನು ತನ್ನ ಕಡೆಗೆ ಸೆಳೆಯುವವರು. ಈ ಪವಿತ್ರ ವ್ಯಕ್ತಿಯ ನಿಧನದ ನಂತರ ೮೬ ಹಿಜರಿಯಲ್ಲಿ ಈ ನಗರದಲ್ಲಿ ಪ್ರವೇಶವಾಗಿ ಇಡಿ ರಾಜ್ಯವನ್ನೇ ಸ್ವಾಧೀನ ಪಡಿಸಿಕೊಳ್ಳುವುದು. ರಾಜಾ ದಾಹರನು ಜೋಯಿಸರ ಮಾತು ಕೇಳಿಯೂ ಕೇಳದ ಹಾಗಿದ್ದನು. ಆದಾಗ್ಯೂ ಅವನು ಈ ಮೊದಲು ಈ ಜೋಯಿಸರನ್ನು ಪರೀಕ್ಷಿಸಿದ್ದನು. ಇವರ ಮೇಲೆ ಪೂರ್ಣ ವಿಶ್ವಾಸವನ್ನಿಟ್ಟಿದ್ದನು. ಆದರೆ ಈ ಸಲ ಅವನ ಅಂತ್ಯಕಾಲ ಸಮೀಪ ಬಂದಿತ್ತು. ಪ್ರಯುಕ್ತ ಅವನು ಈ ರೀತಿನೀತಿಗಳನ್ನು ಅಳವಡಿಸಿಕೊಂಡನು.

ರಾಜಾ ದಾಹರನ ಜೊತೆ ಯುದ್ಧ :

ರಾಜಾ ದಾಹರನು ಯುದ್ಧದ ಸಂಕಲ್ಪವನ್ನು ಮಾಡಿದನು. ಅವನು ೫೦ ಸಾವಿರ ರಜಪೂತ, ಸಿಂಧಿ ಹಾಗೂ ಮುಲ್ತಾನಿ ಸರದಾರರ ಸಾಹಸಿ ಶಕ್ತಿಯುಳ್ಳ ಸೈನ್ಯವನ್ನು ಸಿದ್ಧಗೊಳಿಸಿಕೊಂಡನು. ೧೦ನೇ ರಮಾಝುನುಲ್ಮುಬಾರಕ ಗುರುವಾರ ೯೨ ಹಿಜರಿಯಲ್ಲಿ ಹೋರಾಟಕ್ಕೆ ಬಂದನು. ಮೊಹ್ಮದ ಬಿನ್ ಕಾಸೀಮನು ಆರು ಸಾವಿರ ಅರಬ್ಬ ಶೂರ ಸೈನಿಕರೊಡಗೂಡಿ ರಾಜಾ ದಾಹರನ ಎದುರಾದ. ಇತ್ತಂಡದಲ್ಲಿ ಯುದ್ಧ ಪ್ರಾರಂಭವಾಯಿತು. ಕೆಲವು ದಿನಗಳವರೆಗೆ ಯುದ್ಧ ನಡೆಯಿತು. ರಾಜಾದಾಹರನ ಸೈನಿಕರು ಪರಾಕ್ರಮವನ್ನು ಪ್ರಕಟಿಸಿದರು. ಹಾಗೂ ಮುಸಲ್ಮಾನರನ್ನು ಸೋಲಿಸಲು ಪ್ರಯತ್ನಿಸಿದರು.

ಸೋಲಪ್ಪಿದ ಯುದ್ಧ

ಒಂದು ದಿನ ರಾಜಾ ದಾಹರನು ಬಿಳಿಯ ಆನೆಯ ಮೇಲೆ ಕುಳಿತು ಒಳ್ಳೆಯ ವೈಭವದಿಂದ ಯುದ್ಧಭೂಮಿಗೆ ಬಂದನು. ಮಹಮ್ಮದ ಬಿನ್ ಕಾಸೀಮನು ತನ್ನ ಸೈನ್ಯದೊಡನೆ ವೈರಿಯ ಕಡೆಗೆ ನಡೆದನು. ಮೊದಲಂತು ಇತ್ತಂಡದವರು ವೈಯಕ್ತಿಕವಾಗಿ ಒಬ್ಬೊಬ್ಬರಾಗಿ ಕಾದಾಡುತ್ತಿದ್ದರು. ಹಾಗೂ ಈ ಯುದ್ಧದಲ್ಲಿ ಮುಸಲ್ಮಾನರ ಸಾಹಸ ಮೇಲಾಯಿತು. ಇದರಿಂದಾಗಿ ರಾಜಾ ದಾಹರನು ಸೋಲಪ್ಪಿನ ಯುದ್ಧವನ್ನು

ಪ್ರಾರಂಭಿಸಿದನು. ಇದರಲ್ಲಿ ಅವನು ಸ್ವತಃ ಪಾಲ್ಗೊಂಡನು. ಮತ್ತು ಅತಿ ಸಾಹಸದಿಂದ ಖಡ್ಗವನ್ನು ಚಲಾಯಿಸುತ್ತಿದ್ದನು. ರಾಜಾ ದಾಹರ ಹಾಗೂ ಅವನ ಸೈನಿಕರು ವೈಭವಪೂರಿತ ಶೂರತನವನ್ನು ಪ್ರಕಟಿಸಿದರು. ಇದೇ ಸಮಯದಲ್ಲಿ ಓರ್ವ ಗುರಿಗಾರನು ಉರಿಯುತ್ತಿರುವ ಗೋಲಾ ಒಂದನ್ನು ದಾಹರನ ಆನೆಯ ಮೇಲೆ ಎಸೆದನು. ಅಗ್ನಿ ಕಂಡ ಆನೆಯು ಹತೋಟಿ ತಪ್ಪಿಸಿಕೊಂಡು ಯುದ್ಧಭೂಮಿಯಿಂದ ಓಡತೊಡಗಿತು. ಮಾವುತನು ಆನೆಯನ್ನು ಹತೋಟಿಗೆ ತರಲು ಪ್ರಯತ್ನಿಸಿದ ಆದರೆ ಯಾವ ಪರಿಣಾಮವು ಆಗಲಿಲ್ಲ.

ರಾಜಾ ದಾಹರನ ಮರಣ :

ಆನೆಯು ಓಡುತ್ತ ನದಿಯ ದಡಕ್ಕೆ ತಲುಪಿ ನೀರಿನಲ್ಲಿ ಇಳಿಯಿತು. ಮಹಮ್ಮದ ಬಿನ್ ಖಾಸೀಮನು ರಾಜಾ ದಾಹರನ ಬೆನ್ನಟ್ಟಿದ. ಅವನ ಹಿಂದೆ ನದಿಯ ದಡಕ್ಕೆ ಬಂದ. ಇಲ್ಲಿಯೂ ಯುದ್ಧ ಪ್ರಾರಂಭವಾಯಿತು. ರಾಜನು ತನ್ನ ಆನೆಯನ್ನು ಮುಸಲ್ಮಾನರ ಮೇಲೆ ದೌಡಾಯಿಸಿದ. ಭಲ್ಲೆ ಮತ್ತು ಖಡ್ಗಗಳಿಂದ ಹೊಡೆ ಹೊಡೆದು ಅನೇಕ ಮುಸಲ್ಮಾನರನ್ನು ಷಹೀದಗೊಳಿಸಿದರು. ಇದೇ ಸಂದರ್ಭದಲ್ಲಿ ರಾಜಾದಾಹರನಿಗೆ ಒಂದು ಬಾಣ ತಾಕಿತು. ಆಗ ಆನೆಯಿಂದ ಕೆಳಗೆ ಉರುಳಿದ. ಈ ಸಮಯದಲ್ಲಿ ರಾಜನು ಮತ್ತೊಮ್ಮೆ ಶೂರತನವನ್ನು ಪ್ರಕಟಿಸುತ್ತ ಅತಿ ಶೀಘ್ರತೆಯಿಂದ ಕುದುರೆಯೊಂದರ ಮೇಲೆ ಕುಳಿತುಕೊಂಡನು. ಓರ್ವ ಅರಬ್ಬಿ ಸವಾರನು ರಾಜನ ಮೇಲೆ ಖಡ್ಗ ಪ್ರಹಾರ ಮಾಡಿದನು. ಒಂದೇ ಒಂದು ಪ್ರಹಾರದಿಂದ ರಾಜನನ್ನು ಕೊಂದುಬಿಟ್ಟನು.

ಅಜ್ಜರು ಕೋಟೆಯ ಮೇಲೆ ದಾಳಿ :

ರಾಜನ ಸೈನಿಕರು ಯಾವಾಗ ತಮ್ಮೊಡೆಯನ ಈ ಸ್ಥಿತಿಯನ್ನು ಕಂಡು ಭಯಗ್ರಸ್ತರಾಗಿ ಯುದ್ಧಭೂಮಿಯಿಂದ ಓಡತೊಡಗಿದರು. ಹಾಗೂ ಅಜ್ಜರು ಕೋಟೆಯಲ್ಲಿ ಆಶ್ರಯ ಪಡೆದುಕೊಂಡರು. ಮುಸಲ್ಮಾನರಿಗೆ ಜಯ ಲಭಿಸಿತು. ಬಹಳಷ್ಟು ಶತ್ರು ಸಂಪತ್ತು ಇವರ ಕೈ ಸೇರಿತು. ಇದರ ನಂತರ ಮಹಮ್ಮದ ಬಿನ್ ಖಾಸೀಮನು ಕೋಟೆಯನ್ನು ಗೆಲ್ಲುವ ಪ್ರಯತ್ನಗೈದನು. ರಾಜ ದಾಹರನ ಮಗನು ಹೀಲ್ಯೆಸಾ ಈ ಸಂಕಲ್ಪ ಮಾಡಿದ. ಈ ಕೋಟೆಯನ್ನು ಶೂರ ಸೈನಿಕರ ವಶಕ್ಕೆ ಕೊಡತಕ್ಕದ್ದು, ಮತ್ತು ತಾನೇ ಸ್ವತಃ ಕೋಟೆಯಿಂದ ಹೊರಗೆ ಬಂದು ಮಹಮ್ಮದಬಿನ್ ಖಾಸೀಮನೊಂದಿಗೆ ಯುದ್ಧ ಮಾಡುವೆ ಎಂದ. ಆದರೆ ಅವನ ಸಮೀಪದವರು ಇದಾಗದಂತೆ ತಡೆಹಿಡಿದರು, ಅವನನ್ನು ತಮ್ಮ ಜೊತೆಗೆ ತೆಗೆದುಕೊಂಡು ಬ್ರಹ್ಮನಾಬಾದಿಗೆ ನಡೆದರು.

ದಾಹರನ ಪತ್ನಿಯ ಶೂರತನ :

ರಾಜಾ ದಾಹರನ ಪತ್ನಿಯು ಅತಿ ಶೂರಳು ಹಾಗೂ ಧೈರ್ಯವಂತೆ ಇದ್ದಳು. ಅವಳು ತನ್ನ ಮಗ ಹೀಲಿಸಿಯಾನ ಜೊತೆಗೆ ಬ್ರಹ್ಮಾಣಾಬಾದಿಗೆ ಹೋಗಲು

ನಿರಾಕರಿಸಿದಳು. ೧೫ ಸಾವಿರ ರಾಜಪೂತ ಸವಾರರ ಪ್ರಬಲ ಸೈನಿಕರನ್ನು ತೆಗೆದುಕೊಂಡು ಕೋಟೆಯ ಹೋರಗೆ ಬಂದು, ಮುಸಲ್ಮಾನರ ಜೊತೆ ಹೋರಾಡಲು ಸಿದ್ಧಳಾದಳು. ಇದನ್ನು ಕಂಡ ಮಹಮ್ಮದ ಬಿನ್ ಖಾಸೀಮನು ಓರ್ವ ಮಹಿಳೆಯ ಜೊತೆಗೆ ಹೋರಾಡುವುದು ಯೋಗ್ಯವಲ್ಲ. ಇದರ ಮೇಲೆ ರಾಣಿಯು ಕೋಟೆಯೊಳಗೆ ಉಳಿದಳು. ತನ್ನನ್ನು ರಕ್ಷಿಸಿಕೊಳ್ಳುವ ಯೋಚನೆಗಳನ್ನು ಯೋಚಿಸತೊಡಗಿದಳು.

ಮುಸಲ್ಮಾನರು ಕೋಟೆಯನ್ನು ಮುತ್ತಿದರು. ಅದು ದೀರ್ಘ ಕಾಲದವರೆಗೆ ನಡೆಯಿತು. ಕೋಟೆಯ ನಿವಾಸಿಗಳು ಮುತ್ತಿಗೆಯ ಅವಧಿಯು ದೀರ್ಘವಾದುದರಿಂದ ವ್ಯಾಕುಲಗೊಂಡರು. ಈ ಆಪತ್ತಿನಿಂದ ಮುಕ್ತಿಯನ್ನು ಪಡೆಯುವ ದಾರಿಯನ್ನೆ ಕಾಣದಾಗ ಅವರು ಅಗ್ನಿಯ ದೊಡ್ಡ ಕುಂಡವನ್ನು ಬೆಳಗಿಸಿ, ತಮ್ಮ ಪತ್ನಿಯರನ್ನು ಹಾಗೂ ಮಕ್ಕಳನ್ನು ಈ ಅಗ್ನಿಕುಂಡಕ್ಕೆ ಅರ್ಪಿಸಿದರು. ಹಾಗೂ ಕೋಟೆಯ ಬಾಗಿಲುಗಳನ್ನು ತೆರೆದುಬಿಟ್ಟರು. ರಾಜಪೂತ ರಾಜ ದಾಹರನ ಪತ್ನಿಯ ನಿರೀಕ್ಷಣೆಯಲ್ಲಿ ಕೋಟೆಯಿಂದ ಹೊರಗೆ ಬಂದರು. ಹಾಗೂ ಮುಸಲ್ಮಾನರ ಜೊತೆ ಯುದ್ಧ ಮಾಡತೊಡಗಿದರು. ಈ ಎಲ್ಲಾ ರಾಜಪೂತರ ಇಂತಿಷ್ಟು ಯುದ್ಧಗೈದು ರಾಣಿಯ ಸಮೇತ ಎಲ್ಲರೂ ಸಾವನ್ನಪ್ಪಿದರು. ಇದರ ನಂತರ ಮುಸಲ್ಮಾನ ಸೈನಿಕರು ಕೋಟೆಯೊಳಗೆ ಪ್ರವೇಶಗೊಂಡರು. ಇವರು ಆರು ಸಾವಿರ ರಾಜಪೂತರನ್ನು ಕೊಂದರು. ಮತ್ತು ಇಪ್ಪತ್ತು ಸಾವಿರ ಸೈನಿಕರನ್ನು ಬಂಧಿಸಿದರು. ಈ ಬಂಧಿಗಳಲ್ಲಿ ರಾಜಾ ದಾಹರನ ಇಬ್ಬರು ಸುಪುತ್ರಿಯರು ಕೂಡ ಇದ್ದರು. ಅವರಿಗೆ ಮೊಹ್ಮದ ಬಿನ ಖಾಸೀಮನು ಖಲೀಫಾನ ಹತ್ತಿರ ಕಾಣಿಕೆಯ ರೂಪದಲ್ಲಿ ಕಳುಹಿಸಿಕೊಟ್ಟನು.

ಮುಲ್ತಾನಿನ ಗೆಲ್ಲುವಿಕೆ :

ಮಹ್ಮದ್ ಬಿನ್ ಖಾಸೀಮನು ದೆಬಲನ ಎಲ್ಲಾ ರಾಜ್ಯವನ್ನು ಅರಬ್ಬಿ ಸರದಾರರಲ್ಲಿ ಹಂಚಿ ಕೊಟ್ಟನು. ಯಾವಾಗ ಇದು ಇವನಿಗೆ ಗೊತ್ತಾಯಿತು. ಮುಲ್ತಾನ ಕೂಡ ರಾಜಾ ದಾಹರನ ಸ್ವಾಧೀನವಿತ್ತು. ಅವನು ಈ ನಗರವನ್ನು ಗೆದ್ದುಕೊಂಡನು. ಮೊಹ್ಮದ್‌ಬಿನ್ ಖಾಸೀಮನು ಇದನ್ನು ರಾಜಧಾನಿಯನ್ನಾಗಿ ಮಾಡಿದನು. ಹಾಗೂ ಇಲ್ಲಿಯ ಎಲ್ಲಾ ಮಂದಿರಗಳನ್ನು ಧ್ವಂಸಗೊಳಿಸಿ ಈ ಸ್ಥಳಗಳಲ್ಲಿ ಮಸೀದಿಗಳನ್ನು ನಿರ್ಮಾಣಗೊಳಿಸಿದನು.

ದಾಹರನ ಸುಪುತ್ರಿಯರು ಹಾಗೂ ವಲೀದನು :

ಹುಜ್ಜಾಜ ಬಿನ್ ಯೂಸುಫನು ರಾಜಾದಾಹರನ ಇಬ್ಬರು ಪುತ್ರಿಯರನ್ನು ಖಲೀಫಾನ ಹತ್ತಿರ ದಮಷ್ಕರಿಗೆ ರವಾನಿಸಿದನು. ಈ ಹುಡುಗಿಯರು ಖಲೀಫಾನ ಅಂತಃಪುರದಲ್ಲಿ ಇರತೊಡಗಿದರು. ಕೆಲವು ಕಾಲದ ನಂತರ ಖಲೀಫಾ ವಲೀದನಿಗೆ ಹುಡುಗಿಯರ ವಿಚಾರ ಬಂತು ಮತ್ತು ಅವನು ಅವರಿಗೆ ತನ್ನ ಹತ್ತಿರ ಕರೆಯಿಸಿಕೊಂಡನು.

ಖಲೀಫಾನು ಕೇಳಿದ ಮೇಲೆ ಆ ಹುಡುಗಿಯರು ತಮ್ಮ ಹೆಸರನ್ನು ಹೇಳಿದರು. ಹಿರಿಯಳ ಹೆಸರು ಸರಳಾದೇವಿ ಇತ್ತು. ಮತ್ತು ಕಿರಿಯವಳ ಹೆಸರು ಪರಮಲದೇವಿ. ಸರಳಾದೇವಿ ವಲೀದನಿಗೆ ಮೆಚ್ಚುಗೆಯಾದಳು. ಮತ್ತು ಅವಳನ್ನು ತನ್ನ ಅಂತಃಪುರದಲ್ಲಿಡುವ ಇಚ್ಛೆಯಾಯಿತು. ಸರಳಾಗೆ ಇದು ಗೊತ್ತಾದಾಗ ಅವಳೆಂದಳು ನಾನು ನಿಮ್ಮ ಅಂತಃಪುರದಲ್ಲಿ ಪ್ರವೇಶ ಪಡೆಯಲು ಯೋಗ್ಯಳಲ್ಲ. ಯಾಕೆಂದರೆ ಮಹ್ಮದ್ ಬಿನ್ ಖಾಸೀಮನು ಮೂರು ರಾತ್ರಿಗಳನ್ನು ನನ್ನ ಜೊತೆಗೆ ಕಳೆದಿದ್ದಾನೆ. ಏನು ಮುಸಲ್ಮಾನರಲ್ಲಿ ಇದೇ ವಾಡಿಕೆಯು ಇದೆ? ಮೊದಲು ಗುಲಾಮನು ಸ್ತ್ರೀಯರ ಪಾತಿವ್ರತ್ಯಹರಣಗೊಳಿಸಿ ತದನಂತರ ಖಲೀಫಾ ಬಳಿ ಕಾಣಿಕೆಯ ರೂಪದಲ್ಲಿ ಕಳುಹಿಸಿಕೊಡುವುದು.

ಮೊಹ್ಮದ ಬಿನ್ ಖಾಸೀಮನ ಅಂತ್ಯ ಪರಿಣಾಮವು ಪಾಠಕಲಿಯುವಿಕೆ :

ಇದನ್ನು ಕೇಳಿದ ಖಲೀಫ್ ವಲೀದನು ಕ್ರೋಧಗೊಂಡು. ಅವನು ತನ್ನ ಕೈಯಿಂದಲೇ ಈ ರಾಜಾಜ್ಞೆ ಬರೆದ. "ಮೊಹ್ಮದ ಬಿನ್ ಖಾಸೀಮನು ಎಲ್ಲಿಯೇ ಇರಲಿ, ತಕ್ಷಣವೆ ತನ್ನನ್ನು ತಾನೆ ಗೋವಿನ ಚರ್ಮದಲ್ಲಿ ಸುತ್ತಿಕೊಂಡು ರಾಜಧಾನಿಗೆ ತಲುಪಲಿ". ಮೊಹ್ಮದ್ ಬಿನ್ ಖಾಸೀಮನಿಗೆ ಈ ರಾಜಾಜ್ಞೆಯು ಮುಟ್ಟಿದ ಮೇಲೆ ಬಡಪಾಯಿಯು ವಿವಶನಾಗಿ ಆಜ್ಞೆಯನ್ನು ಪಾಲಿಸಿದನು. ಅವನು ತನ್ನಷ್ಟಕ್ಕೆ ತಾನೆ ಗೋವಿನ ಚರ್ಮದಲ್ಲಿ ಸುತ್ತಿಕೊಂಡನು. ತನ್ನ ಜನರಿಗೆ ಹೇಳಿದ 'ನನಗೆ ಒಂದು ಪೆಟ್ಟಿಗೆಯಲ್ಲಿ ಮುಚ್ಚಿ ಖಲೀಫನ ಹತ್ತಿರ ಕಳುಹಿಸಿಕೊಡಿ' ಹಾಗೆಯೇ ಮಾಡಲಾಯಿತು. ವಿವಶ ಹಾಗೂ ಬಡಪಾಯಿ ಮೊಹ್ಮದ್ ಬಿನ್ ಖಾಸೀಮನನ್ನು ದಮಿಷ್ಕಗೆ ತಲುಪಿಸಿದರು. ಮುಚ್ಚಿದ ಪೆಟ್ಟಿಗೆಯಲ್ಲಿದ್ದ (ಸತ್ತ) ಮೊಹ್ಮದ ಬಿನ್ ಖಾಸೀಮನಿಗೆ ಖಲೀಫನ ಎದುರು ಮುಟ್ಟಿಸಿದಾಗ ವಲೀದನು ಸರಳಾದೇವಿಗೆ ಕರೆದು ಹೇಳಿದ. "ನೋಡಿರಿ ನಾನು ಅಪರಾಧಿಗಳಿಗೆ ಇಂತಹ ಭಯಭೀತಿ ಮೂಡಿಸುವ ಶಿಕ್ಷೆ ಕೊಡುತ್ತೇನೆ". ಇದಕ್ಕೆ ಸರಳಾ ವಲೀದನಿಗೆ ಹೇಳಿದಳು. "ತಮಗೆ ಇದು ಔಚಿತ್ಯವಲ್ಲ. ತಾವು ಸತ್ಯಶೋಧನೆಗೈಯದೇ ಯಾರೊಬ್ಬರ ಮಾತನ್ನು ನಂಬುವದು ತರವಲ್ಲ. ಪ್ರತಿ ಮಾತನ್ನು ತಾವು ಬುದ್ಧಿಯ ತಕ್ಕಡಿಯಲ್ಲಿ ತೂಗಿರಿ. ಆ ನಂತರ ನಿರ್ಣಯಿಸಿರಿ. ತಾವು ಮೊಹ್ಮದ ಬಿನ್ ಖಾಸೀಮನ ಜೊತೆ ವ್ಯವಹರಿಸಿದ ವರ್ತನೆಯಿಂದ ಗೊತ್ತಾಗುತ್ತದೆ. ತಾವು ಬುದ್ಧಿಯಿಂದ ವಂಚಿತರಾಗಿದ್ದೀರಿ. ಮತ್ತು ಕೇವಲ ಸೃಷ್ಟಿಕರ್ತನ ನೆರವಿನಿಂದ ಆಡಳಿತಗೈಯುತ್ತಿದ್ದೀರಿ". ಮೊಹ್ಮದ್‌ಬಿನ್ ಖಾಸೀಮನು ನನ್ನ ಕಡೆ ಎಂದೂ ಸ್ವಾಧೀನತೆಗಾಗಿ ಕೈ ಚಾಚಲಿಲ್ಲ. ಮತ್ತು ಯಾವಾಗಲೂ ನನ್ನನ್ನು ತನ್ನ ತಂಗಿಯಂತೆ ತನ್ನ ಜೊತೆಯಲ್ಲಿ ಇರಿಸಿಕೊಂಡ. ಯಾಕೆಂದರೆ ಇವನು ನಮ್ಮ ಜನಾಂಗವನ್ನು ನಾಶಗೊಳಿಸಿದ್ದನು. ನಾನು ಸೇಡಿನ ಆವೇಶದಿಂದ ಇವನ ಮೇಲೆ ಆರೋಪಗೈದೆ. ನನಗೆ ಸಂತೋಷವಿದೆ. ನಾನು ಮೊಹ್ಮದ ಬಿನ್ ಖಾಸೀಮನಲ್ಲಿ ಸೇಡು ತೀರಿಸಿಕೊಳ್ಳುವುದರಲ್ಲಿ ಯಶಸ್ವಿಯಾದೆ. ವಲೀದನು ಸರಳಾದೇವಿಯ ಈ

ನುಡಿಗಳನ್ನು ಕೇಳಿ ಲಜ್ಜಿತನಾದ. ಆದರೆ ಈಗ ಏನಾಗುತ್ತದೆ. ಏನಾಗಬೇಕಿತ್ತು. ಅದು ಆಗಿಯೇ ಹೋಯಿತು.

ಮೊಹ್ಮದ ಬಿನ್ ಖಾಸೀಮನ ನಂತರ :

ಮೊಹ್ಮದ ಬಿನ್ ಖಾಸೀಮನ ಮರಣದ ನಂತರ ಸಿಂಧ ಆಡಳಿತದ ಸವಿಸ್ತಾರವಾದ ಪ್ರಸ್ತಾಪ ಯಾವ ಪ್ರಖ್ಯಾತ ಇತಿಹಾಸದಲ್ಲಿ ದೊರೆಯುತ್ತಿಲ್ಲ. 'ಇತಿಹಾಸ' 'ಬಾಹದುರಶಾಹಿ'ಯಲ್ಲಿ ಪ್ರಸ್ತಾವನೆ ಇದೆ. ಆದರೆ ವಿಸ್ತಾರವಾಗಿಲ್ಲ. ಸಂಗ್ರಹಕಾರನು ಕೇವಲ ಸಿಂಧ ರಾಜ್ಯದ ಒಡೆಯರ ಹೆಸರುಗಳನ್ನೇ ಬರೆದಿದ್ದಾನೆ. ಮೊಹ್ಮದ ಬಿನ್ ಖಾಸೀಮನ ನಂತರ ಸಿಂಧ ರಾಜ್ಯದ ಮೇಲೆ ಇಂತಹದೊಂದು ಗುಂಪು (ಸಂಘಟನೆ) ಆಡಳಿತ ನಡೆಸಿತು. ಅದು ತಮ್ಮಷ್ಟಕ್ಕೆ ತಾವೇ ನಶೀಮ್ ಅನ್ಸಾರಿಯ ಸಂತತಿಯೆಂದು ತೋರಿಸುತ್ತಾರೆ. ಆದರೆ ಈ ಕುಟುಂಬದ ಅರಸರುಗಳ ಹೆಸರು ಇತಿಹಾಸಕಾರನಾದ ಫರಿಶ್ತಾನ ದೃಷ್ಟಿಯಲ್ಲಿ ಯಾವ ಪುಸ್ತಕದಲ್ಲಿಯೂ ಲಭ್ಯವಿಲ್ಲ.

■

IX. ಜಾಮವಂಶದ ಶಾಹರು

*

ಪೀಠಿಕೆ

ಈ ಕುಟುಂಬದ ನಂತರ ಸುಮರಖಾನ ಬುಡಕಟ್ಟಿನವರು ಆಡಳಿತವನ್ನು ತಮ್ಮ ಕೈಯಲ್ಲಿ ತೆಗೆದುಕೊಂಡರು. ತದನಂತರ ಸಿಂಧ ರಾಜ್ಯದ ಭೂ ಒಡೆಯರು ಒಂದು ಕುಟುಂಬ "ಸತಮ್ಮಾಗ" ದಲ್ಲಿ ಆಡಳಿತವು ವರ್ಗಾವಣೆಯಾಯಿತು. ಈ ಕುಟುಂಬದ ಶಾಹರುಗಳಿಗೆ ಶಾಹಾನೆ ಜಾಮ ಎನ್ನುತ್ತಾರೆ.

ಈ ಎರಡು ಕುಟುಂಬಗಳ ಆಡಳಿತದಲ್ಲಿ ಒಮ್ಮೊಮ್ಮೆ ಗಜ್ನೈನ, ಗೌರ ಹಾಗೂ ದಿಲ್ಲಿಯ ಮುಸಲ್ಮಾನರ ಬಾದಶಹರು ಸಿಂಧನ ಮೇಲೆ ದಾಳಿ ಮಾಡುತ್ತಿದ್ದರು. ಮತ್ತು ಈ ರಾಜ್ಯದ ಕೆಲವು ನಗರಗಳನ್ನು ಗೆದ್ದು ತಮ್ಮ ತಮ್ಮ ರಾಜಧಾನಿಗೆ ಮರಳಿ ಹೋಗುತ್ತಿದ್ದರು. ಆದರೆ ನಾಸೀರುದ್ದೀನ ಖಬಾಚಾನು ಹೀಗೆ ಮಾಡಲಿಲ್ಲ. ಅವನು ಸಿಂಧ ಗೆದ್ದುಕೊಂಡು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡ.

ಮುಂದಿನ ಪುಟಗಳಲ್ಲಿ ಸಿಂಧ ರಾಜ್ಯದ ಘೋರಿ, ಘಜ್ನಿ ಹಾಗೂ ದಿಲ್ಲಿಯ ದಾಳಿಕೋರರ ಚರಿತ್ರೆಯನ್ನು ಹೇಳಲ್ಪಡುತ್ತದೆ. ಯಾಕೆಂದರೆ ಬರಹಗಾರನು ತನ್ನ ಈ ಹೊತ್ತಿಗೆಯಲ್ಲಿ (ಸಂಕಲನ) ಆ ಆಡಳಿತಗಾರರ ಚರಿತ್ರೆಯನ್ನು ಸೂಕ್ತವಾದ ಸ್ಥಳಗಳಲ್ಲಿ ಉಲ್ಲೇಖಿಸಲಾಗುವುದು. ಕೆಳಗೆ ನಮೂದಿಸಲಾದ ಬರಹದಲ್ಲಿ ಪ್ರಥಮವಾಗಿ ನಾಸೀರುದ್ದೀನ ಖಬಾಚಾನ ಸ್ಥಿತಿಗತಿಗಳು ಉಲ್ಲೇಖಗೊಳ್ಳುವವು. ಮತ್ತು ಶಾಹನೆ ಜಾಮ ಅಂದರೆ ಸತಮ್ಮಾಗ ಬಾದಶಹರ ಉಲ್ಲೇಖಿಸಲಾಗುವುದು.

■

*

೧. ನಾಸೀರುದ್ದೀನ ಖಬಾಚಾ

ಹಿಂದುಸ್ತಾನ ಎಲ್ಲಾ ಇತಿಹಾಸಕಾರರು ನಾಸೀರುದ್ದೀನ ಖಬಾಚಾನ ಸ್ಥಿತಿಗತಿಗಳನ್ನು ದೆಹಲಿಯ ಸುಲ್ತಾನರ ಜೀವನ ಚರಿತ್ರೆಯಲ್ಲಿಯೆ ಹೇಳಲಾಗಿದೆ. ಆದರೆ ಇತಿಹಾಸಕಾರ ಫರಿಶ್ತಾನು ಈ ಸಾಮಾನ್ಯ ರೀತಿ ನೀತಿಯನ್ನು ಅನುಸರಿಸಲಿಲ್ಲ. ಇದರಿಂದಾಗಿ ಈ ಬಾದಶಹನ ಸ್ಥಿತಿಗತಿಗಳನ್ನು ಸಿಂಧನ ಬಾದಶಹರ ವಿಭಾಗದಲ್ಲಿ ಉಲ್ಲೇಖಿಸುತ್ತೇನೆ.

ನಾಸೀರುದ್ದೀನ ಖಬಾಚಾರ ಮೇಲೆ ಸುಲ್ತಾನ ಮೋಯಿಜುದ್ದೀನ ಸತ್ ಪ್ರಭಾವ :

ನಾಸೀರುದ್ದೀನ ಖಬಾಚಾ; ಸುಲ್ತಾನ ಮೋಯಿಜುದ್ದೀನ ಬಿನ ಸಾಮಾನ್ಯ ತುರ್ಕಿ ಗುಲಾಮನಾಗಿದ್ದ. ಇವನು ಬುದ್ಧಿವಂತಿಕೆ, ಕಾರ್ಯಚತುರತೆ ಹಾಗೂ ಶೌರ್ಯದಲ್ಲಿ ತನ್ನನ್ನು ತಾನೆ ಉದಾಹರಣೆಯಾಗಿದ್ದನು. ಸುಲ್ತಾನ ಬಿನ ಸಾಮಾನ್ಯ ಸೇವೆಯಲ್ಲಿದ್ದ ಕಾರಣ ನಾಸೀರುದ್ದೀನ ಖಬಾಚಾನ ಅನುಭವಗಳಲ್ಲಿ ಹೆಚ್ಚಳವಾಯಿತು. ಈ ಸುಲ್ತಾನನ ಸಹವಾಸದ ಲಾಭದಿಂದ ಇವನು ಜೀವನದ ನಿಯಮ ನಡಾವಳಿಗಳಲ್ಲಿ ಹಾಗೂ ದೇಶಗೆಲ್ಲುವ ತಂತ್ರಗಳಲ್ಲಿ ಪ್ರಾವೀಣ್ಯ ಪಡೆದಿದ್ದನು. ಮೊಯಿಜುದ್ದೀನನು ರಾಜ್ಯ ಖತಾನ ಮೇಲೆ ದಾಳಿ ಮಾಡಿದ ಖತಾ ನಿವಾಸಿಗಳೊಡನೆ ಪ್ರಬಲವಾದ ಯುದ್ಧ ಮಾಡಿದನು. ಈ ಯುದ್ಧದಲ್ಲಿ ಅವಳಾದ ಜಾಗೀರದಾರ ತಯ್ಮರನು ಸತ್ತನು. ಸುಲ್ತಾನ ಮೊಯಿಜುದ್ದೀನನು ನಾಸೀರುದ್ದೀನ ಖಬಾಚಾನಿಗೆ ಅವಲಾದ ಒಡೆಯನನ್ನಾಗಿ ಮಾಡಿದ.

ಕುತುಬುದ್ದೀನ ಐಬಕ್‌ನ ವಿಧೇಯತೆ :

ನಾಸೀರುದ್ದೀನ ಖಬಾಚಾ ಸುಲ್ತಾನ ಕುತುಬುದ್ದೀನ ಐಬಕನ ಅಳಿಯನಾಗಿದ್ದ. ಅವನ ಇಬ್ಬರು ಪುತ್ರಿಯರು ಓರ್ವಳ ನಂತರ ಮತ್ತೊಬ್ಬಳ ವಿವಾಹವನ್ನು ಆಯೋಜಿಸಲ್ಪಟ್ಟಿತು. ನಾಸೀರುದ್ದೀನನು ತನ್ನ ಒಡೆಯನಾದ ಸುಲ್ತಾನ ಮೊಯಿಜುದ್ದೀನ ಆಜ್ಞೆಯ ಮೇರೆಗೆ ಸುಲ್ತಾನ ಕುತುಬುದ್ದೀನ ಐಬಕನನ್ನು ಒಳ್ಳೆಯ ಗೌರವವನ್ನು ಕೊಡುತ್ತಿದ್ದನು. ಹಾಗೂ ಯಾವಾಗಲೂ ವಿಧೇಯತೆ ಹಾಗೂ ಆಜ್ಞೆಯನ್ನು

ಪಾಲಿಸುವುದು ತನ್ನ ಕರ್ತವ್ಯವೆಂದು ತಿಳಿದುಕೊಳ್ಳುತ್ತಿದ್ದನು. ಹಾಗೂ ಕುತುಬುದ್ದೀನನನ್ನು ಭೇಟಿಮಾಡಲು ಆಗಾಗ್ಗೆ ಅವಭಾಆದಿಂದ ದೆಹಲಿಗೆ ಹೋಗುತ್ತಿದ್ದನು.

ರಾಜ್ಯದ ವಿಸ್ತರಣೆ :

ಸುಲ್ತಾನ ಕುತುಬುದ್ದೀನನ ಮರಣದ ನಂತರ ನಾಸೀರುದ್ದೀನ ಖಬಾಚಾನು ಸಿಂಧದ ಅನೇಕ ಕೋಟೆಗಳನ್ನು ಹಾಗೂ ನಗರಗಳನ್ನು ತನ್ನ ಸ್ವಾಧೀನ ಮಾಡಿಕೊಂಡನು. ಈ ಬುಡಕಟ್ಟಿನ ಸುಮರಕಾನ ಇಂತಿಷ್ಟು ಧ್ವಂಸ ಮಾಡಿದನು. ಅವರ ಸ್ವಾಧೀನದಲ್ಲಿ ತಟ ಹಾಗೂ ಅರಣ್ಯ ಪ್ರದೇಶ ಹೊರತು ಮತ್ತೇನು ಇರಲಿಲ್ಲ. ಇದು ಸ್ಪಷ್ಟವಿರಲಿ ಸುಮರಕಾನನಲ್ಲಿ ಹಿಂದು ಮುಸಲ್ಮಾನ ಈರ್ವ ಧರ್ಮದವರು ಇರುತ್ತಿದ್ದರು. ಈ ಬುಡಕಟ್ಟಿನ ಜನರು ವಿವಶರಾಗಿ ಒಕ್ಕಲುತನವನ್ನು ತಮ್ಮ ಉದ್ಯೋಗವಾಗಿಸಿಕೊಂಡರು. ಹಾಗೂ ಮೂಲೆಗುಂಪಾದರು. ನಾಸೀರುದ್ದೀನ ಖಬಾಚಾನ ನಂತರ ಈ ಬುಡಕಟ್ಟಿನವರು ಮತ್ತೊಮ್ಮೆ ದಂಗೆ ಎಬ್ಬಿಸಿದರು. ಮತ್ತು ಕ್ರಮೇಣ ಸಿಂಧವನ್ನು ದಿಲ್ಲಿ ಬಾದಶಹರಿಂದ ಕಸಿದುಕೊಂಡರು.

ಸ್ವತಂತ್ರ ಸರಕಾರ :

ನಾಸೀರುದ್ದೀನನು ತನ್ನದೆಯಾದ ಸ್ವತಂತ್ರ ಸರಕಾರವನ್ನು ಸ್ಥಾಪಿಸಿದ. ಮತ್ತು ಸರಸ್ವತಿ ನದಿಯ ದಡದವರೆಗೂ ಸರಹಿಂದ ಕೋಹ್ರಾಮ ಹಾಗೂ ಮುಲ್ತಾನ ಮುಂತಾದ ಸ್ಥಳಗಳನ್ನು ತನ್ನ ಸ್ವಾಧೀನ ಪಡಿಸಿಕೊಂಡನು. ಸುಲ್ತಾನ ತಾಜುದ್ದೀನ ಯಲೋಜಿನು ನಾಸೀರುದ್ದೀನ ಖಬಾಚಾನ ರಾಜ್ಯವನ್ನು ಗೆಲ್ಲುವ ಸಂಕಲ್ಪವನ್ನು ಮಾಡಿದನು. ಹಾಗೂ ಈ ಉದ್ದೇಶದಿಂದ ಹಲವು ವೇಳೆ ಗಜ್ನಿಯಿಂದ ತನ್ನ ಸೈನ್ಯವನ್ನು ಕಳುಹಿಸಿಕೊಟ್ಟ. ಆದರೆ ಪ್ರತಿಸಲವೂ ಅಸಫಲವಾದನು. ಅವನ ಸ್ವಪ್ನವು ಸಾಕಾರವಾಗಲಿಲ್ಲ.

ಖವಾರ್ಜಿಮಿ ಸೈನ್ಯದೊಂದಿಗೆ ಯುದ್ಧ :

(೬೧೧) ಹಿಜರಿಯಲ್ಲಿ ಶಾವಾರ್ಜಿಮಿ ಸೈನ್ಯ, ಅದು ಜಲಾಲುದ್ದೀನ ವತಿಯಿಂದ ಘಜ್ನಿಯಲ್ಲಿ ವಾಸವಾಗಿತ್ತು. ಹಿಂದುಸ್ಥಾನದ ಗಡಿ ಪ್ರದೇಶವನ್ನು ಸ್ವಾಧೀನವಾಗಿತ್ತು. ನಾಸೀರುದ್ದೀನನು ಈ ಸೈನ್ಯದೊಂದಿಗೆ ಸೆಣೆಸಿದನು. ಉಭಯ ಪಕ್ಷಗಳಲ್ಲಿ ಪ್ರಬಲವಾದ ಯುದ್ಧವಾಯಿತು. ಈ ಯುದ್ಧದಲ್ಲಿ ಖಲೀಜಿ ಸರದಾರನು ಮೃತಪಟ್ಟನು. ಆದರೆ ಗಜ್ನಿಯ ಮಂತ್ರಿಯು ಸೋತು ಪರಾರಿಯಾದನು.

ಲಾಹೋರಿನ ಮೇಲೆ ದಾಳಿ :

೬೦೪ ಹಿಜರಿಯಲ್ಲಿ ನಾಸೀರುದ್ದೀನನು ಲಾಹೋರನ ಮೇಲೆ ದಾಳಿ ಮಾಡಿದನು. ಹಾಗೂ ಸರಹಿಂದನವರೆಗಿನ ಪ್ರದೇಶವನ್ನು ತನ್ನ ಈ ಮಧ್ಯ ಅವನಿಗೆ ತಿಳಿಯಿತು. ಸುಲ್ತಾನ ಷಮ್ಸುದ್ದೀನನು ಇವನ ಜೊತೆ ಸೆಣಸಾಡಲು ಬರುವವನ ಧೃಡತೆ ಹಾಗೂ

ಸಾಹಸವನ್ನು ಅಂದಾಜು ಮಾಡಬಹುದು. ಬೇಗನೇ ವೈರಿಯನ್ನು ತಲುಪಲು ಸಂಕೋಚವಿಲ್ಲದೆ ನದಿಯಲ್ಲಿ ತನ್ನ ಕುದುರೆಯನ್ನು ಹಾಕಿದನು. ಎಲ್ಲಾ ಸರದಾರರು ಹಾಗೂ ಸೈನಿಕರು ಕೂಡ ತಮ್ಮ ಬಾದಶಹನನ್ನೆ ಅನುಸರಿಸಿದರು. ಹೀಗಾಗಿ ಷಮ್ಸುದ್ದೀನ ಸೈನ್ಯದ ದೊಡ್ಡ ಭಾಗವು ನದಿಯಲ್ಲಿ ಮುಳುಗಿತು. ನಾಸೀರುದ್ದೀನ ಖಬಾಚಾನಿಗೆ ಷಮ್ಸುದ್ದೀನ ಬರುವಿಕೆಯ ಸುದ್ದಿಯು ಮುಟ್ಟಿತು. ಅವನು ಮುಲ್ತಾನದ ಕಡೆಗೆ ಓಡಿಹೋದನು. ಈ ಗೊಂದಲದಲ್ಲಿ ಷಮ್ಸುದ್ದೀನನು ನಾಸೀರುದ್ದೀನನ ಧ್ವಜ ಹಾಗೂ ನಗಾರಿಯನ್ನು ಸ್ವಾಧೀನಪಡಿಸಿಕೊಂಡನು.

ಆಶ್ರಿತರಾದ ಮುಸಲ್ಮಾನರ ತೃಪ್ತಿ (ನೆಮ್ಮದಿ) :

ಯಾವಾಗ ಚಂಗೇಜಖಾನನ ಅಮಾನುಷ ಅತ್ಯಾಚಾರಗಳಿಂದ ಮುಸಲ್ಮಾನರು ತಲ್ಲಣಗೊಂಡು ಘಜ್ನಿ, ಖುರಾಸಾನ ಹಾಗೂ ಘೋರಿ ದೇಶದ ಅಗಣಿತ ಮುಸಲ್ಮಾನರು ನಾಸೀರುದ್ದೀನ ಖಬಾಚಾನ ಹತ್ತಿರ ಬಂದರು. ನಾಶಿರನು ಇವರೆಲ್ಲರಿಗೂ ನೆಮ್ಮದಿ ನೀಡಿ ಇವರಲ್ಲಿ ಅವರವರ ಅಂತಸ್ತಿಗೆ ತಕ್ಕಂತೆ ಬಹುಮಾನಗಳನ್ನು ನೀಡಿದನು.

ಸುಲ್ತಾನ ಜಲಾಲುದ್ದೀನ ಹಿಂದುಸ್ತಾನದಲ್ಲಿ ಆಗಮನ :

ಚಂಗೇಜಖಾನನ ರಕ್ತಭರಿತ ಖಡ್ಗವು ಸುಲ್ತಾನ ಜಲಾಲುದ್ದೀನ ತಂದೆ ಸುಲ್ತಾನ ಮೊಹ್ಮದ ಖ್ವಾರಭಮಿನಿಗೆ ಹಿಂದುಸ್ತಾನಕ್ಕೆ ಬರುವಂತೆ ಮಾಡಿತು. ಈ ಬಾದಶಹನು ಹಿಂದುಸ್ತಾನದ ವಿವಿಧ ಭಾಗಗಳಲ್ಲಿ ತನ್ನ ಶೌರ್ಯ ಹಾಗೂ ಕಾರ್ಯಕುಶಲತೆಯಿಂದ ವೈಯಕ್ತಿಕವಾಗಿ ಯುದ್ಧಮಾಡಿ ತನ್ನ ಶಕ್ತಿಯನ್ನು ಹೆಚ್ಚಿಸುತ್ತಿದ್ದನು. ಸ್ಥಿತಿಯು ಇಲ್ಲಿಗೆ ಬಂತು. ಅವನು ಹತ್ತು ಸಾವಿರ ಸೈನಿಕರನ್ನು ಕೂಡಿಸಿಕೊಂಡನು. ಜಲಾಲುದ್ದೀನನಲ್ಲಿ ತನ್ನ ಸಂದೇಶವಾಹಕನನ್ನು ಖಕ್ರುವಿನ ರಾಜಾ ಕೋಕಾರಸಂಕರನಲ್ಲಿಗೆ ಕಳುಹಿಸಿದನು. ಆಗ ರಾಜನ ಪುತ್ರಿಯನ್ನು ತನ್ನ ಜೊತೆ ಸಂಬಂಧ ಬೆಳೆಸಲು ಕೋರಿದ ಕೋಕಾರ ಸಂಕರನು ತನ್ನ ಪುತ್ರಿಯನ್ನು ಜಲಾಲುದ್ದೀನ ಸೇವೆಯಲ್ಲಿ ಕಳುಹಿಸಿಕೊಟ್ಟನು. ಹಾಗೂ ಈ ಕೋರಿಕೆಯನ್ನು ಮಂಡಿಸಿದ. "ನಾಸೀರುದ್ದೀನ ಖಬಾಜನು ನಮ್ಮ ಬಕರರ ವೈರಿಯಾಗಿದ್ದಾನೆ. ತಾವು ದಯೆಗೈ ಇವನಿಗೆ ಒಳ್ಳೆಯ ಮಾರ್ಗಕ್ಕೆ ಹಚ್ಚಿರಿ. ಈ ಉಪಕಾರವು ಆಜೀವ ಪರಿಯಂತ ನಮ್ಮ ಜನಾಂಗವು ಚಿರಋಣಿಯಾಗುವುದು.

ನಾಸೀರುದ್ದೀನ ಮೇಲೆ ಜಲಾಲುದ್ದೀನನ ದಾಳಿ :

ನಾಸೀರುದ್ದೀನನು ರಾಜಾ ಕೋಕರ ಸಂಕರನ ಮಗನಿಗೆ (ಇವನ ಸೇವೆಯಲ್ಲಿದ್ದ) ಖಲೀಜಖಾನನೆಂಬ ಬಿರುದನ್ನು ಕರುಣಿಸಿದ. ಮತ್ತು ತನ್ನೊಬ್ಬ ಸರದಾರ (ಇವನೊಬ್ಬ ಪಹಲ್ವಾನ (ಉಜ್ಬೆಕ್) ಹಾಗೂ (೭೦೦೦) ಏಳು ಸಾವಿರ ಸೈನಿಕರನ್ನು ನಾಸೀರುದ್ದೀನ ಖಬಚಾನನ ಹೋರಾಟಕ್ಕೆ (ಮುಖಾಮುಖಿ) ಕಳುಹಿಸಿದನು. ನಾಸೀರುದ್ದೀನನಿಗೆ ಈ ಸುದ್ದಿ ತಲುಪಿದಾಗ (೨೦೦೦೦) ಇಪ್ಪತ್ತು ಸಾವಿರ ಸೈನಿಕರನ್ನು ತಯಾರಿಸಿ

ವೈರಿಯನ್ನು ಮುಖಾಮುಖಿಯಾಗಲು ಓಬ್ಭದ ಸಮೀಪ ಸಿಂಧು ನದಿಯ ದಡದಲ್ಲಿ ತಂಗಿಸು. ಜ್ವರ ವಾಸಿಯಾದ ಸಮಯ ಸಾಧಿಸಿ ಖಬಾಚನ ಸೈನ್ಯದ ಮೇಲೆ ರಾತ್ರಿಯ ಹೊತ್ತು ದಂಡೆತ್ತಿ ಬಂದನು. ಇದರಿಂದ ಖಬಾಚಾನು ಜೀವವನ್ನುಳಿಸಿಕೊಂಡು ನಾವೆಯೊಂದರಲ್ಲಿ ಕುಳಿತು ಕಾಣೆಯಾದನು. ಓಜಬಕ ವಾಸಿಯು ತನ್ನ ಗೆಲುವಿನ ಸಮಾಚಾರ ಸುಲ್ತಾನ ಜಮಾಲುದ್ದೀನನಿಗೆ ತಿಳಿಸಿದನು.

ಜಲಾಲುದ್ದೀನನು ಓವಘನಲ್ಲಿ:

ಈ ಮಧ್ಯದಲ್ಲಿ ಈ ಸುದ್ದಿ ತಲುಪಿತು. ದಿಲ್ಲಿಯ ಸೈನ್ಯವು ಇತ್ತ ಕಡೆ ಬರುತ್ತಲಿದೆ. ಸುಲ್ತಾನ ಜಲಾಲೊದ್ದೀನನು ಅಲ್ಲಿ ತಂಗುವುದು ಸೂಕ್ತವಲ್ಲವೆಂದು ತಿಳಿದು ಓವಘಗೆ ಬಂದನು. ಓವಘನಲ್ಲಿ ನಾಸೀರುದ್ದೀನ ಖಬಾಚಾನ ದರ್ಬಾರಿನಲ್ಲಿ ತಂಗಿದ. ಹಾಗೂ ಖಬಾಚಾನಲ್ಲಿ ಸಂದೇಶವಾಹಕನನ್ನು ಕಳುಹಿಸಿ, ಈ ಸಂದೇಶವನ್ನು ಕೊಟ್ಟ. "ಅಮೀರಖಾನನ ಪುತ್ರ ಹಾಗೂ ಪುತ್ರಿಯು ಗಂಗಾ ನದಿಯ ದಡದಿಂದ ಫರಾರಿಯಾಗಿದ್ದಾರೆ. ಹಾಗೂ ಇಲ್ಲಿಯ ಪರಿಸರದಲ್ಲಿದ್ದಾರೆ. ಅವರನ್ನು ನನ್ನ ಹತ್ತಿರ ಕಳುಹಿಸಿ ಕೊಡಿ. ನಾಸೀರುದ್ದೀನನು ಆದೇಶವನ್ನು ಪಾಲಿಸಿದ ಹಾಗೂ ಈರ್ವರನ್ನು ಜೊತೆ ಬಹಳಷ್ಟು ಕಾಣಿಕೆಗಳನ್ನು ಜಲಾಲುದ್ದೀನ ಸೇವೆಯಲ್ಲಿ ಕಳುಹಿಸಿದರು.

ಶಹಜಾದಾ ಚುಗ್ತಾಯಿಖಾನನ ಆಗಮನ :

ಸುಲ್ತಾನ ಜಲಾಲುದ್ದೀನನು ಓವಘದಲ್ಲಿ ಯಾವುದೆ ಕೋಲಾಹಲವಾಗಲಿ ಅಥವಾ ದಂಗೆಯಾಗಲಿ ಎಬ್ಬಿಸಲಿಲ್ಲ. ಈ ಸಂದರ್ಭದಲ್ಲಿಯೇ ಬೇಸಿಗೆಯಕಾಲ ಪ್ರಾರಂಭವಾಯಿತು. ಅವನು ಬೇಟೆಗೆ ಸಜ್ಜಾದ ಬಂಗಾಲದ ಛಾವಣಿ ಕಡೆಗೆ ಪ್ರಯಾಣ ಬೆಳೆಸಿದನು. ಹಾದಿಯಲ್ಲಿ ಒಂದು ಕೋಟೆ ಕಂಡಿತು. ಸುಲ್ತಾನ ಜಲಾಲುದ್ದೀನನು ಇದನ್ನು ಮುತ್ತಿದನು. ಹಾಗೂ ಗೆದ್ದುಕೊಂಡನು. ಕೋಟೆಯಲ್ಲಿ ವಾಸಿಯಾದವನಿಗೆ ಕೊಂದನು. ಈ ಮಧ್ಯದಲ್ಲಿ ಈ ಸುದ್ದಿ ತಲುಪಿತು. ಚಂಗೇಜಖಾನನ ಅಪ್ಪಣೆಯಿಂದ ಸುಲ್ತಾನ ಜಲಾಲುದ್ದೀನನಿಗೆ ಬಂಧಿಸಲು ಷಹ್ಜಾದ ಚುಗ್ತಾಯಿಖಾನನು ಬರಲಿದ್ದಾನೆ. ಸುಲ್ತಾನ ಜಲಾಲುದ್ದೀನನಿಗೆ ಸಂಶಯ ಬಂತು. ನಾಸೀರುದ್ದೀನ ಖಬಾಚಾ ಷಹ್ಜಾದ ಚುಗ್ತಾಯಿಖಾನನು ಸಹಾಯ ಮಾಡುವನು. ಈ ಉದ್ದೇಶದಿಂದ ಓವಘನ ಕಡೆಗೆ ರವಾನೆಯಾದನು.

ಒಘನಲ್ಲಿ ಅಗ್ನಿ :

ಮುಲ್ತಾನ ತಲುಪಿದಾಗ ಸುಲ್ತಾನ ಜಲಾಲುದ್ದೀನನು ಸುಲ್ತಾನ ನಾಶಿರೊದ್ದೀನ ಖಬಾಚಾನ ಮೇಲೆ ಒತ್ತಡ ತರಲು ಪ್ರಯತ್ನಿಸಿದ. ಆದರೆ ನಾಶಿರೊದ್ದೀನನು ಇವನ ಹತೋಟಿಗೆ ಬರಲಿಲ್ಲ. ಮತ್ತು ಸೆಣಸಾಡಲು ತಯಾರಿಯನ್ನು ಮಾಡತೊಡಗಿದ. ಇದನ್ನು ನೋಡಿ ಓವಚ್ಛನ ಕಡೆ ರವಾನೆಯಾದ. ಅವನು ಓವಚ್ಛ ವಾಸಿಗಳನ್ನು ತನ್ನ

ವಿಧೇಯತೆಯನ್ನು ಒಪ್ಪಿಕೊಳ್ಳಲು ಕೇಳಿಕೊಂಡಾಗ ಜನರು ಒಪ್ಪಿಕೊಳ್ಳಲಿಲ್ಲ. ತದನಂತರ ಜಲಾಲುದ್ದೀನನು ನಗರಕ್ಕೆ ಬೆಂಕಿಯನ್ನು ಹಚ್ಚಿದ. ಹಾಗೂ ದರೋಡೆಗೈಯಲು ಆಜ್ಞೆ ನೀಡಿದ. ಹಾಗೂ ದೆಬಲದ ಕಡೆಗೆ ನಡೆದ, ಇಂದು ಠಠ್ಠಾ ಹೆಸರಿನಿಂದ ಖ್ಯಾತಗೊಂಡಿದೆ.

ಖಬಾಚಾ ಹಳ್ಳಿಗಳು ಹಾಗೂ ನಗರಗಳ ಹಾಳು :

ಹಾದಿಯಲ್ಲಿ ಯಾವುದಾದರೊಂದು ನಗರ ಅಥವಾ ಹಳ್ಳಿ ಖಬಾಚಾದ ಆಡಳಿತಕೊಳ್ಳಪಟ್ಟಿದೆಯೆಂದು ತಿಳಿದು ಬಂದಾಗ ಜಲಾಲುದ್ದೀನನು ತಕ್ಷಣವೇ ಅದನ್ನು ನಾಶಗೊಳಿಸುತ್ತಿದ್ದನು. ಮತ್ತು ಮುಂದೆ ಸಾಗುತ್ತಿದ್ದನು. ಒಟ್ಟಾರೆ ಈ ರೀತಿಯಿಂದ ಪ್ರಯಾಣದ ಘಟ್ಟಗಳನ್ನು ಕ್ರಮಿಸುತ್ತಾ ಅವನು ಠಟ್ಟಾಕ್ಕೆ ತಲುಪಿದ. ಠಟ್ಠಾದ ರಾಜಾ ಇವನು ಹಬಶಿ ಬುಡಕಟ್ಟಿನ ಸೋಮರಕಾನ ಯಾವಾಗ ಜಲಾಲುದ್ದೀನನ ಬರುವಿಕೆಯ ಸಮಾಚಾರ ತಿಳಿಯಿತು. ಅವನು ಸರ್ವ ಸಂಪತ್ತು ಹಾಗೂ ಪತ್ನಿ ಮತ್ತು ಮಕ್ಕಳೊಂದಿಗೆ ನಾವೆಯೊಂದರಲ್ಲಿ ಕುಳಿತು ದ್ವೀಪಕ್ಕೆ ಹೋದನು.

ಜಲಾಲುದ್ದೀನನು ಇರಾಕಗೆ ಪ್ರಯಾಣ :

ಜಲಾಲುದ್ದೀನನು ಠಟ್ಠಾದಲ್ಲಿ ತಂಗಿ, ಇಲ್ಲಿಯ ಭವ್ಯ ಮಂದಿರವನ್ನು ಧ್ವಂಸಗೊಳಿಸಿ, ಇದರ ಸ್ಥಳದಲ್ಲಿ ಒಂದು ಭವ್ಯ ಮಸೀದಿಯನ್ನು ನಿರ್ಮಾಣ ಮಾಡಿದನು. ಜಲಾಲೊದ್ದೀನನು ಮೊದಲು ಸಿಂಧ ಹಾಗೂ ಗುಜರಾತನ್ನು ಗೆಲ್ಲುವ ಸಂಕಲ್ಪ ಮಾಡಿದ್ದನು. ಆದರೆ ಕಚ್ ಹಾಗೂ ಮಕ್ರಾ ಮಾರ್ಗ ಮುಖಾಂತರ ೬೨೦ರಲ್ಲಿ ಹಿಜರಿಯಲ್ಲಿ ಇರಾಕಿನತ್ತ ಪ್ರಯಾಣ ಬೆಳೆಸಿದನು. ಇದರ ವಿವರವು ಅಜಮ ಇತಿಹಾಸದಲ್ಲಿ ಉಲ್ಲೇಖವಾಗಿದೆ.

ಚುಗ್ತಾಯಿಖಾನನ ಗುಲ್ಲು ಗಲಾಟೆ :

ಯಾವಾಗ ಚುಗ್ತಾಯಿಖಾನನು ಮೊಘಲ ಸೈನ್ಯವನ್ನು ತೆಗೆದುಕೊಂಡು ಜಲಾಲುದ್ದೀನನನ್ನು ಬೆನ್ನಟ್ಟಿ ಮುಲ್ತಾನ ತಲುಪಿದಾಗ ನಾಸೀರದ್ದೀನ ಖಬಾಚನು ಶೌರ್ಯ ಹಾಗೂ ಸಾಹಸದ ದೃಶ್ಯ ಪ್ರಕಟಗೊಳಿಸಿದ. ೪೦ ದಿನಗಳ ನಂತರ ಮುಲ್ತಾವಾಸಿಗಳು ಮೊಘಲರ ಸೈನ್ಯದ ಮುತ್ತಿಗೆಯಿಂದ ಮುಕ್ತಿಪಟ್ಟರು. ಇದರ ನಂತರ ಚುಗ್ತಾಯಿಖಾನನು ಮಕ್ರಾನಿನ ಕಡೆ ಪ್ರಯಾಣ ಬೆಳೆಸಿದನು. ಅವನು ಈ ಪ್ರದೇಶಗಳನ್ನು ಮನದುಂಬಿ ಲೂಟಿ ಮಾಡಿದನು. ಚಳಿಗಾಲವನ್ನು ಕಳೆಯಲು ಕಾಲಂಜರ ಪ್ರದೇಶದಲ್ಲಿ ಅದು ಸಿಂಧು ನದಿಯ ದಡದ ಮೇಲಿದೆ ಅಲ್ಲಿ ತಂಗಿದನು. ಚುಗ್ತಾಯಿಖಾನನು ವಿವಿಧ ಯುದ್ಧಗಳಲ್ಲಿ ಮೂವತ್ತು ನಲ್ವತ್ತು ಸಾವಿರ ಹಿಂದುಸ್ತಾನಿಯರನ್ನು ಬಂಧಿಸಿಟ್ಟನು. ಈ ಪೀಡಿತ ಹಿಂದುಸ್ತಾನಿಯರನ್ನು ಈ ನೆಪದಿಂದ ಕೊಂದನು. ಇವರ ಇರುವಿಕೆಯಿಂದ ಮೊಘಲರ ಸೈನ್ಯದಲ್ಲಿ ದುರ್ವಾಸನೆ ಹುಟ್ಟಿಕೊಳ್ಳುವುದು. ಇದರ ತರುವಾಯ ಚುಗ್ತಾಯಿಖಾನನು ತೂರಾನಿನ ಕಡೆಗೆ ನಡೆದನು. ಕಾಲಂಜರ ಒಡೆಯ ಸಾಲಾರ

ಅಹ್ಮದನು ನಾಸೀರುದ್ದೀನ ಖಬಾಚಾನಿಗೆ ಚುಗ್ತಾಯಿಖಾನನ ಕಿಡಿಗೇಡಿತನ ಹಾಗೂ ಧ್ವಂಸಕೃತ್ಯದ ಸುದ್ದಿಯನ್ನು ತಿಳಿಸಿದ. ಇದರಿಂದ ಅವನು ದುಃಖಿತನಾದ.

ಸುಲ್ತಾನ ಅಲ್ತಮುಶಾಹ ದಾಳಿ ಹಾಗೂ ಖಬಾಚಾನ ಮುಳುಗುವಿಕೆ:

೬೨೨ ಹಿಜರಿಯಲ್ಲಿ ಸುಲ್ತಾನ ಷಮ್ಸುದ್ದೀನ ಮಷನು ನಾಸೀರುದ್ದೀನ ಖಬಾಚಾನನ್ನು ನಾಶಗೊಳಿಸುವ ಪ್ರಯತ್ನಗೈದನು. ಈ ಉದ್ದೇಶದಿಂದ ಹಲವು ಸಲ ಸಿಂಧ ಮೇಲೆ ದಾಳಿ ಮಾಡಿದ. ಅಲ್ತಮಷನು ಯಾವಾಗ ತನ್ನ ಸೈನ್ಯವನ್ನು ತೆಗೆದುಕೊಂಡು ಒವಚ್ಚಾದವರೆಗೆ ಬಂದಾಗ ನಗರವನ್ನು ಸ್ಥಿರ(ಭದ್ರ)ಗೊಳಿಸಿ ಬಕರದ ಕಡೆಗೆ ನಡೆದನು. ಅಲ್ತಮಷನು ಒವಚನನ್ನು ಮುತ್ತಿದ ಹಾಗೂ ನಿಜಾಮುಲ್ ಮುಲ್ಕ ತಂದೆ ಅಬುಸಯೀದ ಜುನೇದಿಗೆ (ಇವನು ಪುಸ್ತಕ ಜಾಮೆವುಲ್ಹಿಕಾಯಾತ ಅಲ್ತಮಷನ ಹೆಸರಿನಿಂದ ಅರ್ಪಿಸಿದ) ಬಕರ ಕೋಟೆಯನ್ನು ಗೆಲ್ಲಲು ರವಾನಿಸಿದ. ನಾಸೀರುದ್ದೀನ ಖಬಾಚಾ ನಾವೆಗಳಿಂದ ಒಂದು ಪಕ್ಕದ ದ್ವೀಪದ ಕಡೆಗೆ ನಡೆದನು. ಆದರೆ ಅವನಿಗೆ ಉದ್ದೇಶಿತ ತಾಣಕ್ಕೆ ಮುಟ್ಟುವ ಭಾಗ್ಯವಿರಲಿಲ್ಲ. ಹಾಗೂ ನಾವೆಯು ನದಿಯಲ್ಲಿ ಮುಳುಗಿತು ಮತ್ತು ಖಬಾಚಾ ಮೃತಪಟ್ಟನು.

ಖಬಾಚಾನು ಮುಳುಗುವ ಬಗ್ಗೆ ಸತ್ಯ ಹೇಳಿಕೆ :

ನಾಸೀರುದ್ದೀನ ಖಬಾಚನು ಮುಳುಗಿದ ಸತ್ಯ ಹೇಳಿಕೆ ಇದು ಇದೆ. ಅಲ್ತಮಷನ ಭಯದಿಂದ ಒವಛದಿಂದ ಬಕರದ ಕಡೆಗೆ ನಡೆದಾಗ ಅಲ್ತಮಷನು ಈ ಯುದ್ಧವನ್ನು ತನ್ನ ಮಂತ್ರಿಯಾದ ನಿಜಾಮುಲ್ ಮುಲ್ಕನಿಗೊಪ್ಪಿಸಿ ತಾನು ದಿಲ್ಲಿಗೆ ಮರಳಿದನು. ನಿಜಾಮುಲ್ ಮುಲ್ಕನು ಎರಡು ತಿಂಗಳವರೆಗೆ ಎಡಬಿಡದ ಪ್ರಯತ್ನದ ನಂತರ ಒವಚವನ್ನು ಗೆದ್ದನು ಹಾಗೂ ಭವ್ಯ ಗೌರವದಿಂದ ಬಕರದ ಕಡೆಗೆ ನಡೆದನು. ನಾಸೀರುದ್ದೀನ ಖಬಾಚಾಗೆ ಈ ಸುದ್ದಿ ತಿಳಿದಾಗ ಅವನು ತನ್ನ ಬಂಧು ಬಳಗದವರನ್ನೊಳಗೂಡಿ ಸಕಲ ಸಂಪತ್ತು, ವಜ್ರವೈಡೂರ್ಯಗಳನ್ನು ತೆಗೆದುಕೊಂಡು ಪಕ್ಕದ ದ್ವೀಪದ ಕಡೆಗೆ ರವಾನಿಸಿದ. ಆಕಸ್ಮಿಕ ನದಿಯಲ್ಲಿ ಅಲೆಗಳು ಅಬ್ಬರಗೊಂಡು ಬಾದಶಾಹನ ನಾವೆಯನ್ನು ತಮ್ಮ ತೆಕ್ಕೆಯಲ್ಲಿ ತೆಗೆದುಕೊಂಡು ಮುಳುಗಿಸಿಬಿಟ್ಟವು. ಹೀಗಾಗಿ ಬಾದಶಹನು ಪರಿವಾರದ ಜೊತೆಗೆ ಮುಳುಗಿ ಹೋದನು. ಉಳಿದ ನಾವೆಗಳು ಸುರಕ್ಷಿತವಾಗಿ ದಡವನ್ನು ಸೇರಿದವು. ಬಾದಶಹನ ಪತ್ತೆ ದೊರೆಯಲಿಲ್ಲ. ಖಬಾಚಾನು ಮುಲ್ತಾನ ಹಾಗೂ ಸಿಂಧ ಮೇಲೆ ೨೨ ವರ್ಷಗಳವರೆಗೆ ಆಡಳಿತ ನಡೆಸಿದನು.

■

X. ಸಿಂಧದ ಬುಡಕಟ್ಟಿನ ಅರಸರು

*

ಪಿರೀಕೆ

ಸಿಂಧನಲ್ಲಿ ಎರಡು ಬಗೆಯ ಭೂ ಒಡೆಯರಿದ್ದರು. ಇವರಲ್ಲಿ ಒಂದು ಬುಡಕಟ್ಟಿಗೆ "ಸೋಮರಖಾನ ಮತ್ತು ಎರಡನೆಯದು ಸ್ಮತ್ಗಾನ ಎನ್ನಲಾಗುತ್ತಿತ್ತು. ಮೊಹ್ಮದಶಾಹ ತುಘಲಕನ ಆಡಳಿತಾವಧಿಯ ಕೊನೆಯಲ್ಲಿ ಸಿಂಧ ಆಡಳಿತ ಸೋಮರಖಾನ ಬುಡಕಟ್ಟಿನವರ ಕೈಯಿಂದ ಜಾರಿ ಹೋಯಿತು. ಮತ್ತು ಸ್ಮತ್ಗಾನ ಬುಡಕಟ್ಟಿನವರು ಸ್ವಾಧೀನಪಡಿಸಿಕೊಂಡರು. ಈ ಬುಡಕಟ್ಟಿನ ಅನೇಕ ಅರಸರು ದಿಲ್ಲಿಯ ಬಾದಶಹರ ವಿಧೇಯರಾಗಿ ಕಪ್ಪ ಕಾಣಿಕೆಗಳನ್ನು ಕೊಡುತ್ತಿದ್ದರು. ಆದರೆ ಒಮ್ಮೊಮ್ಮೆ ಯಾವನೊಬ್ಬನು ಈ ಸಂಬಂಧವನ್ನು ಮುರಿದು ತನ್ನ ಸ್ವಾತಂತ್ರ್ಯದ ಘೋಷಣೆ ಮಾಡುತ್ತಿದ್ದನು. ಸ್ಮತ್ಗಾನರ ದಾವೆ ಇದಾಗಿತ್ತು. ಅವನು ಜಮಶೀದ ವಂಶಸ್ಥನಿದ್ದಾನೆ. ಆದ್ದರಿಂದ ಇವರ ಬಾದಶಾಹನು 'ಜಾಮ' ಎಂಬ ಬಿರುದನ್ನು ಧಾರಣ ಮಾಡುತ್ತಿದ್ದನು.

■

*

೧. ಜಾಮ ಅಫ್ಜಾ

ಹಿಂದುಸ್ತಾನದಲ್ಲಿ ಮುಸಲ್ಮಾನರ ಆಡಳಿತಾವಧಿಯಲ್ಲಿ ಪ್ರಪ್ರಥಮವಾಗಿ ಸ್ಮತ್ಗಾನರ ಬಾದಶಾಹರಲ್ಲಿ ಅಂತಸ್ತಿಕೆ ಮುಟ್ಟಿದವನು ಜಾಮ ಅಫ್ಜಾ. ಈ ಬಾದಶಾಹನು ಬಹಳಷ್ಟು ದೂರದರ್ಶಿ ಹಾಗೂ ಕಾರ್ಯಚತುರ ಮಾನವನಾಗಿದ್ದ. ಇವನು ಮೂರುವರ್ಷ ಆರು ತಿಂಗಳವರೆಗೆ ಆಡಳಿತಗೈದು ಮೃತಪಟ್ಟನು.

೨. ಜಾಮ ಜೂನಾ

ಜಾಮ ಅಫ್ಜಾನ ಮರಣದ ನಂತರ ಇವನ ಊಯಿಲಿನಂತೆ (ಮರಣದ ಮುನ್ನ ನೀಡುವ ಉಪದೇಶ) ಇವನ ತಮ್ಮ ಜಾಮ ಜೂನಾ ಆಡಳಿತದ ವಾರಸನಾದ. ಇವನು ಅತಿ ವಿದ್ಯಾಸ್ನೇಹಿ ಮಾನವ ಹಾಗೂ ನ್ಯಾಯಮೂರ್ತಿ. ಇವನು ಸಿಂಧನಲ್ಲಿ ೧೪ ವರ್ಷದವರೆಗೆ ಆಡಳಿತ ನಡೆಯಿಸಿ ಮೃತಪಟ್ಟನು.

೩. ಜಾಮಮಾನಿ ತಂದೆ ಜಾಮಜೂನಾ

ಫಿರೋಜಶಾಹನ ಮೊದಲನೆಯ ದಾಳಿ:

ಜಾಮ ಜೂನಾದ ಮರಣದ ನಂತರ ಜಾಮ ಮಾನಿಯು ಆಡಳಿತದ ಚುಕ್ಕಾಣಿಯನ್ನು ತನ್ನ ಕೈಯಲ್ಲಿ ತೆಗೆದುಕೊಂಡನು. ಹಾಗೂ ಎಲ್ಲಾ ಸರದಾರರನ್ನು ಹಾಗೂ ರಾಜ್ಯದ ಅಧಿಕಾರಿಗಳನ್ನು ತನ್ನ ಹಿತೈಷಿಗಳನ್ನಾಗಿಸಿಕೊಂಡ. ಜಾಮಮಾನಿಯು ದಿಲ್ಲಿಯ ರಾಜ್ಯದ ವಿಧೇಯನಾಗಿರಲು ಉಚಿತವಲ್ಲವೆಂದು ತಿಳಿದು ಕಪ್ಪಕಾಣಿಕೆಗಳನ್ನು ಕೊಡಲು ನಿರಾಕರಿಸಿದನು. ಇದರಿಂದಾಗಿ ೭೬೨ ಹಿಜರಿಯಲ್ಲಿ ಸುಲ್ತಾನ ಫಿರೋಜಶಾಹನು ಸಿಂಧ ಮೇಲೆ ದಾಳಿ ಮಾಡಿದನು. ಜಾಮಮಾನಿಯ ಒಂದು ಸುರಕ್ಷಿತವಾದ ಸ್ಥಳದಲ್ಲಿ ತಲೆಮರಿಸಿಕೊಂಡು ತನಗೆ ಬೇಕಾದ ಧಾನ್ಯ ಹಾಗೂ ಮೇವನ್ನು ಒಟ್ಟುಗೂಡಿಸಿ ಉಳಿದ ಎಲ್ಲಾ ಧಾನ್ಯ ಹಾಗೂ ಮೇವನ್ನು ಸುಟ್ಟುಬಿಟ್ಟನು. ಏಕೆಂದರೆ ಅದನ್ನು ಸ್ವಾಧೀನಗೊಳಿಸಿಕೊಂಡು ಲಾಭ ಪಡೆಯುವರು. ಸುಲ್ತಾನ ಫಿರೋಜಶಾಹನ

ಈ ಆಚರಣೆಯಿಂದಾಗಿ ಹೆಚ್ಚಿನ ಕಷ್ಟವನ್ನು ಅನುಭವಿಸಲಾಯಿತು. ಧಾನ್ಯ ಹಾಗೂ ಮೇವಿನ ಕೊರತೆಯಿಂದಾಗಿ ಇವನಿಗೆ ಸಿಂಧನಲ್ಲಿ ನಿಲ್ಲುವುದು (ಕಷ್ಟ) ಜಟಿಲವಾಯಿತು. ಅವನು ಗುಜರಾತಿನ ಕಡೆ ನಡೆದ.

ಫಿರೋಜಶಾಹನ ಎರಡನೆಯ ದಾಳಿ :

ಮಳೆಗಾಲವನ್ನು ಗುಜರಾತಿನಲ್ಲಿಯೇ ಕಳೆದನು. ಚಳಿಗಾಲದ ಪ್ರಾರಂಭದಲ್ಲಿ ಎರಡನೆಯ ಸಲ ಸಿಂಧನ ಮೇಲೆ ದಾಳಿ ಮಾಡಿದನು. ಈ ಸಲ ಜಾಮ ಮಾನಿಯು ಧಾನ್ಯವನ್ನು ಅಗ್ನಿಗೆ ಆಹುತಿ ಕೊಡಲಿಲ್ಲ. ಇದರಿಂದಾಗಿ ಫಿರೋಜಶಾಹನು ಯಾವ ಬಗೆಯ ಕಷ್ಟವನ್ನು ಅನುಭವಿಸಲಿಲ್ಲ. ಈ ಪರಿಸ್ಥಿತಿಯನ್ನು ನೋಡಿ ಜಾಮ ಮಾನಿಯು ಬಹಳ ಕಳವಳಗೊಂಡನು. ಹಾಗೂ ಅವನು ಫಿರೋಜಶಾಹನಿಗೆ ಜೀವದಾನವನ್ನು ಯಾಚಿಸಿದನು. ಫಿರೋಜಶಾಹನು ಸಿಂಧವನ್ನು ಸ್ವಾಧೀನಪಡಿಸಿಕೊಂಡು ರಾಜ್ಯವನ್ನು ಓರ್ವ ಸರದಾರನಿಗೊಪ್ಪಿಸಿ ತಾನು ಸ್ವತಃ ಜಾಮ ಮಾನಿ ಹಾಗೂ ಇತರ ಸಿಂಧ ಸರದಾರರನ್ನೊಡಗೂಡಿ ದಿಲ್ಲಿಗೆ ಪ್ರಯಾಣ ಬೆಳೆಸಿದನು.

ಜಾಮಮಾನಿಯ ಮರಣ :

ಕೆಲಕಾಲದವರೆಗೆ ಸಂತಸ ಹಾಗೂ ವಿಧೇಯತೆಯಿಂದ ಫಿರೋಜಶಾಹನ ಸೇವೆಯನ್ನು ಮಾಡುತ್ತಿದ್ದನು. ಇದರಿಂದಾಗಿ ಫಿರೋಜಶಾಹನು ಇವನಿಂದ ಬಹಳ ಸಂತಸಪಟ್ಟನು. ಹಾಗೂ ಎರಡನೆಯ ಸಲ ಸಿಂಧ ರಾಜ್ಯ ಬಾದಶಾಹನಾಗಿಸಿದ. ಜಾಮಮಾನಿಯು ತನ್ನ ಸ್ವದೇಶಕ್ಕೆ ಬಂದು ಸುಖಶಾಂತಿಯಿಂದ ಆಡಳಿತವನ್ನು ಹದಿನೈದು ವರ್ಷಗಳವರೆಗೆ ಮಾಡಿ ನಂತರ ಮರಣ ಹೊಂದಿದನು.

೪. ಜಾಮ ತಿಮಾಜಿ ತಂದೆ ಜಾಮಮಾನಿ

ಜಾಮಮಾನಿಯ ಮರಣದ ನಂತರ ಸಿಂಧ ರಾಜ್ಯದ ಆಡಳಿತವನ್ನು ಇವನ ಮಗ ಜಾಮ ತಿಮ್ಮಾಜಿಯ ಕೈ ಸೇರಿತು. ಇವನು ೧೩ ವರ್ಷ ಹಾಗೂ ಕೆಲವು ತಿಂಗಳವರೆಗೆ ಆಡಳಿತ ಮಾಡಿ ತದನಂತರ ಮರಣಹೊಂದಿದನು.

೫. ಜಾಮ ಸಲಾಉದ್ದೀನ

ಜಾಮ ತಿಮ್ಮಾಜಿಯ ನಂತರ ಜಾಮ ಸಲಾಉದ್ದೀನನು ಸಿಂಧ ರಾಜ್ಯದ ಬಾದಶಾಹನಾದ. ಇವನು ಸಂತುಷ್ಟ ಹಾಗೂ ನಿಶ್ಚಿಂತೆಯಿಂದ ಆಡಳಿತ ನಡೆಯಿಸಿದ. ಇವನ ಆಡಳಿತಾವಧಿ ೧೧ ವರ್ಷವಾಗಿತ್ತು.

೬. ಜಾಮ ನಿಜಾಮುದ್ದೀನ :

ಸಲಾಉದ್ದೀನ ನಂತರ ಇವನ ಮಗ ಜಾಮ ನಿಜಾಮುದ್ದೀನನು ಪಟ್ಟವನ್ನೇರಿದನು. ಅವನ ಆಡಳಿತಾವಧಿಯು ಎರಡು ವರ್ಷ ಕೆಲವು ತಿಂಗಳವಾಗಿತ್ತು.

೭. ಜಾಮ ಅಲಿಷೇರ :

ನಿಜಾಮುದ್ದೀನನ ಮರಣದ ನಂತರ ಅವನ ಮಗ ಜಾಮ ಅಲಿಷೇರನು ಪಟ್ಟವೇರಿದನು. ಅವನು ಅತಿ ಸಂತಸ ರೀತಿಯಲ್ಲಿ ಆಡಳಿತದ ವ್ಯವಹಾರಗಳನ್ನು ಅತ್ಯಂತ ನ್ಯಾಯ ಹಾಗೂ ನಿಷ್ಪಕ್ಷಪಾತದಿಂದ ಆಡಳಿತಗೈದು ಪ್ರಜರಿಗೆ ಸಂತುಷ್ಟ ಹಾಗೂ ಹರ್ಷಭರಿತರಾಗಿಸಿದ. ಇವನ ಆಡಳಿತಾವಧಿಯಲ್ಲಿ ಕಳ್ಳಕಾಕರನ್ನು ಹಾಗೂ ದರೋಡೆಕೋರರರನ್ನು ನಿರ್ನಾಮಗೊಳಿಸಿದನು. ಇದರಿಂದಾಗಿ ರಾಜ್ಯದಲ್ಲಿ ಶಾಂತಿ ಸಮೃದ್ಧಿ ನೆಲೆಗೊಂಡಿತು. ಅವನು ಆರು ವರ್ಷ ಕೆಲವು ತಿಂಗಳಗಳವರೆಗೆ ಆಡಳಿತಗೈದು ಮರಣ ಹೊಂದಿದನು. ಇವನ ಮರಣದ ನಂತರ ಪ್ರಜೆಗಳು ದುಃಖಪಟ್ಟರು.

೮. ಜಾಮಕರಾನ ತಂದೆ ಜಾಮ ತಿಮಾಜಿ :

ಜಾಮ ಷೇರಲಿಯ ನಂತರ ಜಾಮ ಕರಾನನು ರಾಜ್ಯದ ಮೇಲೆ ದಾವೆ ಮಾಡಿದನು. ಹಾಗೂ ಕಾರಣಗಳನ್ನು ಕೊಟ್ಟನು. ನನ್ನ ತಂದೆ ಜಾಮ ತಿಮ್ಮಾಜಿ ಸಿಂಧ ರಾಜ್ಯದ ಬಾದಶಹನಿದ್ದನು. ಆದುದ್ದರಿಂದ ತಂದೆಯ ಸರಕಾರ ನನ್ನ ವಿರಾಸತ್ತು ಇದೆ. ನನಗೆ ದಕ್ಕತಕ್ಕದ್ದು. ಈ ವಿಚಾರದಿಂದಾಗಿ ಸರದಾರರರನ್ನು ತನ್ನ ವಿಧೇಯರನ್ನಾಗಿಸಿಕೊಂಡ ಹಾಗೂ ರಾಜ್ಯದ ಚುಕ್ಕಾಣಿಯನ್ನು ತನ್ನ ಕೈಯಲ್ಲಿ ತೆಗೆದುಕೊಂಡ. ಅಲ್ಲಾಹನ ಒಪ್ಪಿಗೆಯು ಇದೇ ಆಗಿತ್ತು. ಅವನು ಆಡಳಿತ ನಡೆಯಿಸಕೂಡದು. ಕೇವಲ ೧ ೧/೨ ದಿನ ಮಾತ್ರ ಇದ್ದು ಮೃತಪಟ್ಟನು. ಇದರ ನಂತರ ಸ್ಮತ್ತಾನನವರು ಪರಸ್ಪರ ಸಲಹೆ ಮಾಡಿ ಫತ್ತೇಖಾನ ತಂದೆ ಅಸ್ಕಂದರ ಖಾನನಿಗೆ ತಮ್ಮ ಆಡಳಿತಗಾರನೆಂದು ಚುನಾಯಿಸಿದರು. ಜಾಮ ಸಿಕಂದರನ ಆಡಳಿತವು ೧೫ ವರ್ಷದವರೆಗೆ ನಡೆಯಿತು.

೯. ಜಾಮ ತುಘಲಕ ತಂದೆ ಜಾಮ ಸಿಕಂದರ :

ಜಾಮ ಸಿಕಂದರನ ತಮ್ಮ ಜಾಮ ತುಗಲಕನು ಪಟ್ಟವೇರಿದನು. ಇವನು ರಾಜ್ಯದ ಕಾರ್ಯಗಳನ್ನು ಒಳ್ಳೆ ರೀತಿಯಿಂದ ನಿರ್ವಹಿಸಿದ. ಹಾಗೂ ಇದೆ ರೀತಿಯಿಂದ ಎಲ್ಲಾ ಪ್ರಜರಿಗೆ ಹಿತಚಿಂತಕರನ್ನಾಗಿಸಿಕೊಂಡ. ಜಾಮ ತುಗಲಕನ ಆಡಳಿತದಲ್ಲಿ ಮೊದಲಿನಂತೆ ದರ್ಪ ಹಾಗೂ ವೈಭವ ಉಳಿದಿರಲಿಲ್ಲ. ಹೀಗಾಗಿ ಜಾಮ ತುಗಲಕನು ಗುಜರಾತ ಬಾದಶಹರ ಜೊತೆ ಮಿತ್ರತ್ವದ ರೂಢಿಯನ್ನು ಬೆಳೆಸಿಕೊಂಡ. ಜಾಮ ತುಗಲಕನ ನಂತರ ಸಿಂಧ ರಾಜ್ಯದ ಬಾದಶಹರು ಈ ರೂಢಿಯನ್ನೆ ಅನುಸರಿಸಿದರು. ಅವರು ಸದಾ ಗುಜರಾತಿನ ಬಾದಶಹರನ್ನೆ ಗೆಳೆಯರಾಗಿಸಿಕೊಳ್ಳುತ್ತಿದ್ದರು. ಹಾಗೂ ಅವಶ್ಯಬಿದ್ದರೆ ಅವರ ಸಹಾಯವನ್ನೇ ಪಡೆಯುತ್ತಿದ್ದರು. ಜಾಮ ತುಘಲಕನು ೨೮ ವರ್ಷಗಳವರೆಗೆ ಆಡಳಿತಗೈದನು.

೧೦. ಜಾಮ ಮುಬಾರಕ :

ಜಾಮ ಮುಬಾರಕನು ಜಾಮ ತುಘಲಕನ ಸಂಬಂಧಿಕನಾಗಿದ್ದ. ಕೊನೆಯ ಪ್ರಸ್ತಾಪಿತನ ಮರಣದ ನಂತರ ಅವನು ಆಡಳಿತ ಚುಕ್ಕಾಣಿ ತನ್ನ ಕೈಯಲ್ಲಿ ತೆಗೆದುಕೊಂಡ. ಆದರೆ ಇವನಿಗೆ ದೀರ್ಘಾವಧಿಯವರೆಗೆ ಆಡಳಿತಗೈಯುವ ಭಾಗ್ಯವಿರಲಿಲ್ಲ. ಪಟ್ಟವನ್ನೇರಿದ ಮೂರನೆಯ ದಿನವೆ ಮೃತಪಟ್ಟನು.

೧೧. ಜಾಮ ಸಿಕಂದರ ತಂದೆ ಜಾಮಪತ್ಥೆ ತಂದೆ ಸಿಕಂದರ :

ಜಾಮ ಮುಬಾರಕನ ನಂತರ ಎಲ್ಲಾ ಸರದಾರರು ಒಮ್ಮತದಿಂದ ಜಾಮ ಅಸ್ಕಂದರನಿಗೆ ತಮ್ಮ ಬಾದಶಹನೆಂದು ಒಪ್ಪಿಕೊಂಡರು. ಈ ಬಾದಶಹನು ಒಂದು ವರುಷ ಆರು ತಿಂಗಳವರೆಗೆ ರಾಜ್ಯಗೈದನು.

೧೨. ಜಾಮ ಸಂಜರ :

ಜಾಮ ಅಸ್ಕಂದರನ ಮರಣದ ನಂತರ ಸರದಾರರು ಹಾಗೂ ಮಂತ್ರಿ ಇರ್ವರೂ ಜಾಮ ಸಂಜರನಿಗೆ ಸಿಂಧರಾಜ್ಯದ ಬಾದಶಾಹನಾಗಿ ಮಾಡಿದರು. ಇವನ ಸಂಬಂಧ ಆಧಿಪತ್ಯ ಕುಟುಂಬದಿಂದಿತ್ತು. ಅಲ್ಲದೆ ಹಿಂದಿನ ಬಾದಶಹರ ಆಡಳಿತದಲ್ಲಿ ದೇಶದ ಹಾಗೂ ಹಣಕಾಸಿನ ವ್ಯವಹಾರಗಳಲ್ಲಿ ಸೇವೆ ನೀಡಿದ್ದನು. ಹೀಗಾಗಿ ಸಿಂಧರಾಜ್ಯದ ಬಾದಶಹನಾಗಿ ಇವನನ್ನು ಚುನಾಯಿಸಿದರು. ಜಾಮ ಸಂಜರನು ೮ ವರ್ಷ ಹಾಗೂ ಕೆಲವು ತಿಂಗಳವರೆಗೆ ರಾಜ್ಯಗೈದನು.

೧೩. ಜಾಮ ನಿಜಾಮುದ್ದೀನ ಖ್ಯಾತ ಜಾಮ ನಂದಾಶಾಹಬೇಗ ಅರ್ಗ್ವಾನನ ದಾಳಿ

ಜಾಮ ಸಂಜರನ ಮರಣದ ನಂತರ ಜಾಮ ನಂದಾ ಪಟ್ಟವನ್ನೇರಿದ. ಇವನ ಆಡಳಿತಾವಧಿಯಲ್ಲಿ ಸಿಂಧ ರಾಜ್ಯವು ಹೆಚ್ಚು ಉನ್ನತಿಯನ್ನು ಪಡೆಯಿತು. ಹಾಗೂ ಇದರ ಜನಸಂಖ್ಯೆಯ ಸಂದಣಿಯು ಹೆಚ್ಚಳಗೊಂಡಿತು. ಜಾಮನಂದಾನು ಸುಲ್ತಾನ ಹುಸೇನ ಲಂಕಾನ ಸಮಕಾಲೀನನಿದ್ದನು. ಇವನ ಆಡಳಿತಾವಧಿಯಲ್ಲಿ ಶಾಹಬೇಗ ಅರ್ಗ್ವಾನನು ಕಂದಹಾರದಿಂದ ಬಂದು ಸೂಲಿ ಕೋಟೆಯನ್ನು ಸ್ವಾಧೀನಪಡಿಸಿಕೊಂಡನು. ಈ ಕೋಟೆಯ ಒಡೆಯ ಬಹದ್ದುರಖಾನ ಹೆಸರಿನ ಸಿಂಧ ಸರದಾರನಿದ್ದ. ಶಾಹ ಬೇಗನು ಅವನಿಗೆ ತಳ್ಳಿ ತನ್ನ ತಮ್ಮನಾದ ಸುಲ್ತಾನ ಮೊಹ್ಮದಖಾನನನ್ನು ಈ ಕೋಟೆಯ ಒಡೆಯನಾಗಿ ಮಾಡಿದನು. ಹಾಗೂ ತಾನು ಕಂದಹಾರರಿಗೆ ಮರಳಿದನು.

ಸೂಲಿ ಕೋಟೆಯನ್ನು ಪುನಃ ನಂದಾನು ಸ್ವಾಧೀನ ಪಡೆದುಕೊಳ್ಳುವಿಕೆ :

ಶಾಹ ಬೇಗನ ಮರಳುವಿಕೆಯ ನಂತರ ನಂದಾನ–ಮುಬಾರಕ ಹೆಸರಿನವನ ಜೊತೆ ಸೆಣಿಸಲು ತನ್ನೊರ್ವ ಶೂರ ಹಾಗೂ ಅನುಭವವುಳ್ಳ ಸರದಾರನನ್ನು ಕಳುಹಿಸಿಕೊಟ್ಟನು. ಇತ್ತಂಡದಲ್ಲಿ ಅನೇಕ ಸಲ ಯುದ್ಧವಾಯಿತು. ಕೊನೆಗೆ ಸುಲ್ತಾನ

ಮೊಹ್ಮದನು ಕೊಲ್ಲಲ್ಪಟ್ಟನು. ಹೀಗಾಗಿ ಸೂಲಿ ಕೋಟೆಯು ಪುನಃ ಜಾಮ ನಂದಾನ ಸ್ವಾಧೀನವಾಯಿತು.

ಮಿರ್ಜಾ ಈಸಾಖಾನನ ದಾಳಿ :

ಶಾಹ ಬೇಗನಿಗೆ ತನ್ನ ತಮ್ಮನ ಕೊಲೆಯ ಸುದ್ದಿ ತಲುಪಿದಾಗ ಅವನು ಮಿರ್ಜಾ ಈಸಾನಿಗೆ ಒಂದು ಪ್ರಬಲ ಸೈನ್ಯದೊಂದಿಗೆ ಜಾಮನಂದಾನ ಮೇಲೆ ದಾಳಿ ಮಾಡಲು ಕಳುಹಿಸಿಕೊಟ್ಟ. ಜಾಮನಂದಾನು ಕೂಡ ಶೂರ ಸೈನಿಕರ ದಂಡನ್ನು ತಯಾರಿಸಿ ಗಡಿಯ ಬಳಿ ಮಿರ್ಜಾ ಇಸಾನ ಜೊತೆ ಯುದ್ಧಕ್ಕೆ ಸಿದ್ದನಾದನು. ಈ ಯುದ್ಧದಲ್ಲಿ ಜಾಮ ನಂದಾನ ಅನೇಕ ಅನುಭವಿ ಸರದಾರರು ಮೃತಪಟ್ಟರು. ಮುಬಾರಕಖಾನನು ಗಾಯಗೊಂಡು ಯುದ್ಧಭೂಮಿಯಿಂದ ಪಲಾಯನಗೈದ ಖಸಬಾ ಭಕ್ಕರದಲ್ಲಿ ಆಶ್ರಿತನಾದ.

ಭಕರನು ಮೇಲೆ ಶಾಹ ಬೇಗನ ಕೈವಶ:

ಮಿರ್ಜಾನ ಈಸಾನ ಸುದ್ದಿ ಶಾಹ ಬೇಗನಿಗೆ ತಲುಪಿದಾಗ ಅವನು ಪೂರ್ಣಸಿಂಧ ರಾಜ್ಯವನ್ನೇ ಗೆಲ್ಲುವ ಸಂಕಲ್ಪ ಮಾಡಿದ. ಈ ಉದ್ದೇಶದಿಂದ ಅವನು ಒಂದು ನಿರ್ಭೀತ ಸೈನಿಕರ ದಂಡನ್ನು ತೆಗೆದುಕೊಂಡು ಕಂದಹಾರನಿಂದ ಪ್ರಯಾಣ ಬೆಳೆಸಿದನು. ಹಾಗೂ ಭಕ್ಕರ ತಲುಪಿ ನಾಶ, ಧ್ವಂಸ ಹಾಗೂ ಸುಲಿಗೆಯನ್ನು ಮಾಡಲಾರಂಭಿಸಿದ. ಖಾಜಿಖಾವನು ಭಕ್ಕರದ ಒಡೆಯನಾಗಿದ್ದ. ಇವನಿಗೆ ಜಾಮನಂದಾನು ನೇಮಿಸಿದ್ದನು. ಖಾಜಿಖಾವನನು ಸಾಕಷ್ಟು ಎದುರಿಸಲು ಪ್ರಯತ್ನಿಸಿದನು. ಆದರೆ ಅವನಿಗೆ ಜಯ ದೊರೆಯಲಿಲ್ಲ. ಇದಕ್ಕೆ ಎರಡು ಕಾರಣಗಳಿದ್ದವು. ಒಂದು ಭಕ್ಕರ ಕೋಟೆಯು ಅಂದು ಸುಭದ್ರವಾಗಿರಲಿಲ್ಲ. ಎರಡನೆಯದು ಭಕ್ಕರ ನಿವಾಸಿಗೆ ಜಾಮ ನಂದಾನ ಕಡೆಯಿಂದ ನೆರವು ದೊರೆಯಲಿಲ್ಲ. ಪ್ರಯುಕ್ತ ಖಾಜಿಖಾವನನು ವಿವಶನಾಗಿ ಜೀವದಾನವನ್ನು ಯಾಚಿಸಿ ಕೋಟೆಯನ್ನು ವೈರಿಯ ವಶಕ್ಕೆ ಕೊಟ್ಟುಬಿಟ್ಟನು.

ಸೈವಾನನ ಮೇಲೆ ಶಾಹ ಬೇಗನ ಕಬ್ಜಾ :

ಶಾಹ ಬೇಗನು ಭಾಕ್ಕರ ಕೋಟೆಯನ್ನು ತನ್ನ ಹೆಸರು ವಾಸಿ ಸರದಾರ ಫಾಖಲಬೇಗ ಕೋಕಾತಾಷನಿಗೊಪ್ಪಿಸಿ ಸ್ವತಃ ತಾನೇ ಸೈವಾನದ ಕಡೆಗೆ ನಡೆದನು. ಶಾಹ ಬೇಗನು ಸೈವವನ್ನು ಕೂಡ ಗೆದ್ದುಕೊಂಡನು. ಈ ನಗರದ ಒಡೆಯನನ್ನು ಖ್ವಾಜಾ ಬೇಗನಿಗೆ ನೇಮಿಸಿದನು. ಈ ವರ್ಷ ಶಾಹಬೇಗನು ಈ ಜಯಗಳಿಂದ ತೃಪ್ತಿಪಟ್ಟು ಖಂದ್ಹಾರಕ್ಕೆ ಮರಳಿದನು.

ಸಿಂಧಿಯರ ಹೇಡಿತನ :

ಜಾಮ ನಂದಾನು ಅಗಣಿತ ಧನವನ್ನು ಖರ್ಚುಮಾಡಿ ಒಂದು ಪ್ರಬಲವಾದ

ಸೈನ್ಯವನ್ನು ತಯಾರಿಸಿದ್ದ. ಹಾಗೂ ಸೂಲಿ ಕೋಟೆಯನ್ನು ಪುನಃ ತನ್ನ ಸ್ವಾಧೀನ ಪಡಿಸಿಕೊಳ್ಳಲು ಪ್ರಯತ್ನಗೈದನು. ಆದರೆ ಇವನಿಗೆ ಈ ಆಶೆ ಇಡೆರಲಿಲ್ಲ. ಇದರ ಕಾರಣ–ಸಿಂಧಿ ಸೈನಿಕರು ಈಸಾಖಾನನ ತುರಕಿ ಸೈನಿಕರ ಶೌರ್ಯ ಹಾಗೂ ಸಾಹಸವನ್ನು ನೋಡಿ ಭಯುಗ್ರಸ್ಥರಾಗಿದ್ದರು. ಹಾಗೂ ಇವರ ಜೊತೆ ಹೋರಾಡಲು ಹಿಂಜರಿಯುತ್ತಿದ್ದರು. ಒಂದು ದಿನದ ಸಂಗತಿ ಹೀಗಿದೆ. ತುರಕಿ ಸೈನಿಕರು ತನ್ನ ಕುದುರೆಯ ಥಡಿಯನ್ನು ಸರಿಗೊಳಿಸಲು ಕುದುರೆಯಿಂದ ಕೆಳಗಿಳಿದನು. ಅದೇ ಸಮಯದಲ್ಲಿ ೪೦ ಸಿಂಧಿ ಸೈನಿಕರು ಕೂಡ ಅವನ ಸಮೀಪ ಬಂದರು. ಈ ಸಿಂಧಿ ಸೈನಿಕರು ಒಬ್ಬ ತುರ್ಕಿಯ ಮೇಲೆ ಹಲ್ಲೆ ಮಾಡುವ ಇಚ್ಛೆ ಮಾಡಿದರು. ತುರ್ಕಿ ಸೈನಿಕನು ತಕ್ಷಣವೇ ಕುದುರೆಯನ್ನೇರಿ ಓಡಿ ಹೋದನು. ಸಿಂಧಿಯರು ಅರ್ಥ ಮಾಡಿಕೊಂಡರು. ನಮ್ಮ ಮೇಲೆ ಹಲ್ಲೆ ಹೂಡುವನೆಂದುಕೊಂಡು ಸಿಂಧಿ ಸೈನಿಕರು ಓಡಲಾರಂಭಿಸಿದರು.

ಜಾಮ ನಂದಾನ ಮರಣ :

ಜಾಮ ನಂದಾನು ತನ್ನ ರಾಜ್ಯವು ಪಥನದ ಕಡೆ ಸಾಗಿದುದ್ದನ್ನು ಕಂಡು ಚಿಂತೆಗೊಳಗಾಗಿ, ರೋಗಪೀಡಿತನಾಗಿ ಕೊನೆಗೆ ಮೃತಪಟ್ಟನು. ಇವನು ೬೦ ವರ್ಷಗಳವರೆಗೆ ಆಡಳಿತವನ್ನು ನಡೆಸಿದನು.

ಜಾಮ ಫೀರೋಜ :

ಜಾಮ ನಂದಾನ ಮರಣದ ನಂತರ ಇವನ ಪುತ್ರ ಜಾಮ ಫಿರೋಜನು ಸಿಂಥ ರಾಜ್ಯದ ವಾರಸುದಾರನಾದ. ಅವನು ತನ್ನೋರ್ವ ಸಂಬಂಧಿಕ ರಸೀದಖಾನನನ್ನು ಸರ್ವಾಧಿಕಾರಿ ಹಾಗೂ ರಾಜ್ಯದ ಸಂರಕ್ಷಕನೆಂದು ನಿಯಮಿಸಿದನು. ಇವನ ಇನ್ನೊಬ್ಬ ಸಂಬಂಧಿಕ ಜಾಮ ಸಲಾವೊದ್ದೀನನು ರಾಜ್ಯದ ದಾವೆ ಮಾಡಿದನು. ಹಾಗೂ ರಾಜ್ಯವನ್ನು ಸ್ವಾಧೀನಪಡಿಸಿಕೊಳ್ಳಲು ಅನೇಕ ಸಲ ಜಾಮ ಫಿರೋಜನ ಜೊತೆಗೆ ಯುದ್ಧ ಮಾಡಿದನು. ಆದರೆ ಪ್ರತಿ ಸಲ ಸೋಲನ್ನೆ ಕಂಡ.

ಜಾಮ ಸಲಾವುದ್ದೀನ ಆಕ್ರಮಣ :

ಜಾಮ ಸಲಾವುದ್ದೀನ ನಿರಾಶಗೊಂಡು ಗುಜರಾತಿಗೆ ಹೋದನು. ಅವನ ಕಕ್ಕನ ಮಗಳು ಮುಜಫ್ಫರಶಾಹ ಗುಜರಾತಿಯ ಪುತ್ರಿ ಇದ್ದಳು. ಈ ಸಂಬಂಧದಿಂದ ಸುಲ್ತಾನ ಮುಜಫ್ಫರನು ಜಾಮ ಸಲಾವೊದ್ದೀನನಿಗೆ ಸಹಾಯ ಮಾಡಿದನು. ಅವನಿಗೆ ಒಂದು ದೊಡ್ಡ ಸೈನ್ಯವನ್ನು ಕೊಟ್ಟು ಠಟ್ಟಾದ ಮೇಲೆ ದಾಳಿ ಮಾಡಲು ಪ್ರೊತ್ಸಾಹಿಸಿದನು. ಜಾಮ ಸಲಾವುದ್ದೀನನು ಈ ಸೈನ್ಯವನ್ನು ತೆಗೆದುಕೊಂಡು ಸಿಂಥ ರಾಜ್ಯದ ಗಡಿಗೆ ತಲುಪಿದನು. ಅವನು ಜಾಮ ಫಿರೋಜನ ಸರ್ವ ಸಂರಕ್ಷಕ ದರಿಯಾಖಾನನ ಜೊತೆಗೆ ಒಳಸಂಚುಗೈದು ಸಿಂಥ ರಾಜ್ಯವನ್ನು ಸ್ವಾಧೀನಪಡಿಸಿಕೊಂಡನು.

ದರಿಯಾಖಾನನ ಪ್ರಭುತ್ವ :

ದರಿಯಾಖಾನನು ಓರ್ವ ಪ್ರಬಲ ಸರದಾರನಾಗಿದ್ದ. ಆಡಳಿತದ ಎಲ್ಲಾ ವ್ಯವಹಾರಗಳು ಇವನಿಂದಲೇ ನಿರ್ವಹಿಸುತ್ತಿದ್ದವು. ಮೊದಲು ಇವನು ಜಾಮ ಸಲಾಮೊದ್ದೀನನಿಗೆ ನೆರವು ನೀಡಿದ. ಆದರೆ ನಂತರ ಇವನು ತನ್ನ ಹಳೆಯ ಒಡೆಯನಾದ ಫಿರೋಜನ ಉಪ್ಪನ್ನು ತೀರಿಸಿದ. ಅವನಿಗೆ ಪುನಃ ಸಿಂಧ ರಾಜ್ಯದ ಬಾದಶಹನನ್ನಾಗಿ ಮಾಡಿದ. ಜಾಮ ಸಲಾವೊದ್ದೀನನು ಕಳವಳಗೊಂಡು ಗುಜರಾತಿಗೆ ನಡೆದನು.

ಜಾಮ ಸಲಾವುದ್ದೀನನು ಸಿಂಧ ರಾಜ್ಯವನ್ನು ಸ್ವಾಧೀನಪಡಿಸಿಕೊಂಡನು :

ಜಾಮ ಸಲಾವುದ್ದೀನನು ಪುನಃ ಸೈನ್ಯವನ್ನು ಕೂಡಿಸಿದ ಮತ್ತು ೯೨೬ ಹಿಜರಿಯಲ್ಲಿ ಸಿಂಧ ರಾಜ್ಯದ ಮೇಲೆ ದಾಳಿ ಮಾಡಿದನು. ಈ ಸಲ ಅವನು ಜಾಮ ಫಿರೋಜನಿಗೆ ಸೋಲಿಸಿ ಸಂಪೂರ್ಣ ರಾಜ್ಯವನ್ನು ತನ್ನ ಸ್ವಾಧೀನಪಡಿಸಿಕೊಂಡನು. ಜಾಮ ಫಿರೋಜನು ವಿಫ್ವಲಗೊಂಡು ಶಾಹ ಅರಗ್ವಾನನ ಸಹಾಯವನ್ನು ಕೋರಿದನು. ಶಾಹಬೇಗನು ಒಪ್ಪಿಕೊಂಡನು ಹಾಗೂ ತನ್ನೋರ್ವ ಸೊಹೀಲ ಎಂಬ ಗುಲಾಮನನ್ನು ಪ್ರಬಲವಾದ ಸೈನ್ಯದೊಂದಿಗೆ ಜಾಮ ಫಿರೋಜನಿಗೆ ಸಹಾಯ ನೀಡಲು ಕಳುಹಿಸಿದನು.

ಸಿಂಧನ ಮೇಲೆ ಪುನಃ ಜಾಮ ಫಿರೋಜನ ಕಬ್ಜಾ :

ಜಾಮ ಫಿರೋಜನು ಸೊಹೀಲನೊಂದಿಗೆ ಸೆಹೀವಾನದ ಸಮೀಪ ತಲುಪಿದ. ಜಾಮ ಸಲಾವುದ್ದೀನನ ಜೊತೆ ಯುದ್ಧ ಮಾಡಿದ. ವಾದಿ ಪ್ರತಿವಾದಿಗಳಲ್ಲಿ ಪ್ರಬಲ ಯುದ್ಧವಾಯಿತು. ಇತ್ತಂಡದ ಶೂರರು ಮನಬಿಚ್ಚಿ ಶೌರ್ಯ ಪ್ರಕಟಿಸಿದರು. ಆದರೆ ಜಯವು ಜಾಮ ಫಿರೋಜನ ಕೈ ಸೇರಿತು. ಜಾಮ ಸಲಾವುದ್ದೀನ ಆತನ ಪುತ್ರ ಯುದ್ಧ ಭೂಮಿಯಲ್ಲಿ ಮಡಿದರು. ಹಾಗೂ ಸಿಂಧ ರಾಜ್ಯದ ಮೇಲೆ ಜಾಮ ಫಿರೋಜನು ಪುನಃ ಖಬ್ಜಾ ಪಡೆದುಕೊಂಡ.

ಸಿಂಧರಾಜ್ಯದ ಶಾಹಬೇಗನ ಕೈವಶ :

ಶಾಹಬೇಗನು ಅರ್ಗ್ವಾನನು ಬಹುಕಾಲದಿಂದ ಸಿಂಧರಾಜ್ಯವನ್ನು ಸ್ವಾಧೀನಪಡಿಸಿಕೊಳ್ಳುವ ಸಂಕಲ್ಪ ಮಾಡಿಕೊಂಡಿದ್ದನು. ಅವನು ಈ ಅವಸರವನ್ನು ವರಪ್ರದಾನವೆಂದು ಭಾವಿಸಿ, ಕಂದಹಾರದಿಂದ ಸೈನ್ಯವನ್ನು ತೆಗೆದುಕೊಂಡು ಸಿಂಧ ರಾಜ್ಯಕ್ಕೆ ಬಂದ. ಅವನು ೯೩೭ ಹಿಜರಿಯಲ್ಲಿ ಸಿಂಧ ರಾಜ್ಯದ ಮೇಲೆ ಖಬ್ಜಾ ಸ್ಥಾಪಿಸಿದನು. ಸಿಂಧ ರಾಜ್ಯದ ಕೇಡು ಈ ಘಟನೆಯ ಇತಿಹಾಸವಾಗಿದೆ.

ಜಾಮ ಫೇರೋಜನು ಗುಜರಾತಿನಲ್ಲಿ :

ಜಾಮ ಫಿರೋಜನ ಸರ್ವರಕ್ಷಕ ದರಿಯಾಖಾನನಿಗೆ ಶಾಹಬೇಗನ ಸೈನಿಕರು

ಕೊಲೆ ಮಾಡಿದರು. ಮತ್ತು ಫೇರೋಜನು ಎರಡು ಮೂರು ವರ್ಷದವರೆಗೂ ಸಿಂಧ ಅಕ್ಕಪಕ್ಕದಲ್ಲಿಯೇ ಜೀವನ ಸಾಗಿಸುತ್ತಿದ್ದನು. ಅವನು ಸಿಂಧ ರಾಜ್ಯವನ್ನು ತನ್ನ ಸ್ವಾಧೀನಪಡಿಸಿಕೊಳ್ಳುವ ಪ್ರಯತ್ನವನ್ನು ಬಹಳಷ್ಟು ಮಾಡಿದ. ಆದರೆ ಇವನಿಗೆ ಜಯವು ದೊರೆಯಲಿಲ್ಲ. ಕೊನೆಗೆ ಹತಾಶನಾಗಿ ಗುಜರಾತಿಗೆ ನಡೆದನು.

ಜಾಮ ಫೇರೋಜನು ಗುಜರಾತಿನ ಸರದಾರರ ಪಂಕ್ತಿಯಲ್ಲಿ :

ಜಾಮ ಫೇರೋಜನು ಯಾವಾಗ ಗುಜರಾತನ್ನು ತಲುಪಿದನು. ಆ ಕಾಲದಲ್ಲಿ ಸುಲ್ತಾನ ಮುಜಾಫ್ಫರ ಶಾಹ ಗುಜರಾತಿಯ ನಿಧನವಾಗಿತ್ತು. ಹೀಗಾಗಿ ಗುಜರಾತಿನ ಸರದಾರರಿಂದ ಸಹಾಯ ದೊರೆಯುವ ಆಶೆಯು ಕೂಡ ದೂರಾಯಿತು. ಗುಜರಾತಿನಿಂದ ಮತ್ತೆ ಸಿಂಧ ರಾಜ್ಯಕ್ಕೆ ಮರಳಿದನು. ಇಲ್ಲಿ ತಲುಪಿದ ನಂತರ ಅವನಿಗೆ ಅಂದಾಜು ಆಯಿತು. ಅರ್ಗಾನಿಯವರು ತಮ್ಮ ಪಾದಗಳನ್ನು ಈ ರೀತಿಯಾಗಿ ಜಮಾಯಿಸಿದ್ದಾರೆ. ಈಗ ಅವರಿಗೆ ಇಲ್ಲಿಂದ ಹೊರಗೆ ಹಾಕುವುದು ಬಹಳಷ್ಟು ಕಠಿಣವಾಗಿದೆ. ಈ ಪರಿಸ್ಥಿತಿಯನ್ನು ಕಂಡು ಅವನು ಸಿಂಧ ರಾಜ್ಯದ ಮೇಲೆ ಆಡಳಿತವನ್ನು ನಡೆಸುವ ವಿಚಾರವನ್ನೆ ಮನದಿಂದ ತೆಗೆದುಹಾಕಿದ. ಮತ್ತು ತನ್ನ ಮಕ್ಕಳೊಂದಿಗೆ ಪುನಃ ಗುಜರಾತಿಗೆ ಬಂದನು. ಹಾಗೂ ಸುಲ್ತಾನ ಬಹದ್ದೂರ ಗುಜರಾತಿಯು ಸರದಾರ ಪಂಕ್ತಿಯಲ್ಲಿ ಸೇರಿದನು.

ಸ್ಮತ್ತಾಗ ಕುಟುಂಬದ ಆಡಳಿತದ ಅಂತ್ಯ :

ಜಾಮ ಫೇರೋಜ ಗುಜರಾತಿಗೆ ಹೋಗುವುದರಿಂದ ಸಿಂಧನಲ್ಲಿ ಸ್ಮತ್ತಾಗ ಕುಟುಂಬದ ಅಂತ್ಯವಾಯಿತು. ಈ ರಾಜ್ಯವು ಅರ್ಗ್ವಾನಿಯರ ಖಬ್ಜಾದಲ್ಲಾಯಿತು. ಕೆಲಕಾಲದವರೆಗೆ ಅರ್ಗ್ವಾನಿ ಸುಲ್ತಾನರು ಸಿಂಧ ರಾಜ್ಯದ ಮೇಲೆ ಆಡಳಿತವನ್ನು ನಡೆಸುತ್ತಿದ್ದರು ಎಂದು ಹೇಳಲಾಗಿದೆ. ಬದಿಯು ಜಮಾ ಮಿರ್ಜಾ ಬಿನ ಸುಲ್ತಾನ ಹುಸೇನನು ೯೨೦ ಹಿಜರಿಯಲ್ಲಿ ಶಾಹ ಇಸ್ಮಾಯಿಲ್ ಸಫ್ವಿಯಿಂದ ಅಸಂತುಷ್ಟನಾಗಿ ಸಿಂಧ ರಾಜ್ಯಕ್ಕೆ ಬಂದ ಜಾಮ ಫೇರೋಜನು ಇವನಿಗೆ ಒಳ್ಳೆಯ ರೀತಿಯಿಂದ ಸ್ವಾಗತಗೈದು ಬರಮಾಡಿಕೊಂಡ. ಆದರೆ ಒಂದು ವರ್ಷದ ನಂತರ ಬದಿಯುಜ್ಜಮಾ ಇಸ್ಮಾಯಿಲ್‌ನ ಸೇವೆಯಲ್ಲಿ ಮರಳಿದನು.

■

XI. ಅರ್ಗನೂ ಸುಲ್ತಾನರು

*

೧. ಶಾಹಬೇಗ ಅರ್ಗಮಾನ

ಶಾಹಬೇಗ ಅರ್ಗವಾನನ್ನು ಅಮೀರಜುನ್ನೂನ ಪುತ್ರನಿದ್ದನು. ಅಮೀರಜುನ್ನೂನನು ಹಿರಾತನ ಬಾದಶಹ ಹುಸೇನ ಮಿರ್ಜಾನ ದಂಡನಾಯಕ ಹಾಗೂ ಅವನ ಪುತ್ರ ಬಂದಿಯುಜ್ಜಮಾನ ಬೋಧಕನಾಗಿದ್ದನು. ಶಾಹಬೇಗ ಪೂರ್ವಜರು ಚಂಗೇಜಖಾನನ ಕಾಲದಲ್ಲಿ ಅಧಿಕಾರಿ ಹಾಗೂ ಸರದಾರ ಗುಂಪಿಗೆ ಸೇರಿದ್ದರು. ೭೮೪ ಹಿಜರಿಯಲ್ಲಿ ದಾವರ, ಸಾಗರ, ತೂಬಕ ಹಾಗೂ ಬರಾಹಗಳ ಆಡಳಿತವು ಖನ್ನೂನನಿಗೆ ಅರ್ಪಿಸಲಾಯಿತು. ಈ ಮಧ್ಯದಲ್ಲಿಯೆ ಅನೇಕ ರಾಜಕುಮಾರನು ಒಬ್ಬನ ನಂತರ ಇನ್ನೊಬ್ಬನಿಗೆ ಕಂದಹಾರ ಒಡೆಯನಾಗಿ ನಿಯಮಿಸಿದ. ಕೊನೆಗೆ ಖುನ್ನೂನನೇ ಈ ಪ್ರದೇಶದ ಸದೃಢ ಒಡೆಯನಾದ ಹಾಗೂ ಅವನು ತನ್ನ ಸ್ವತಂತ್ರ ಆಡಳಿತವನ್ನು ಸ್ಥಾಪಿಸಿಕೊಂಡ.

ಅಮೀರ ಜುನ್ನೂನನು ತನ್ನ ಪುತ್ರ ಷುಜಾಬೇಗ ಖ್ಯಾತ ಶಾಹಬೇಗನಿಗೆ ಕಂದಹಾರ ರಾಜ್ಯವನ್ನೊಪ್ಪಿಸಿದ. ತುಬಕ ಮತ್ತು ಸಾಗರದ ರಕ್ಷಕ ಅಬ್ದುಲ ಖರ್ಬಾನನಿಗೆ ನಿಯಮಿಸಿದ. ಗೌರವದೊಡೆಯ ಅಮಿರ ಫಕ್ರುದ್ದೀನನನ್ನು ನಿಯಮಿಸಿದ. ಮತ್ತು ತಾನು ಸ್ವತಃ ದಾವರದಲ್ಲಿ ವಾಸವಾದನು.

ಶಾಹಬೇಗನ ಸಿಂಧರಾಜ್ಯದ ಮೇಲೆ ದಾಳಿ :

ಮೇಲಿನ ಹೇಳಿಕೆಯ ಪ್ರಕಾರ ಶಾಹಬೇಗ ಅರ್ಗನೂನನು ತನ್ನ ತಂದೆಯ ಜೀವನದಲ್ಲಿ ಸಿಂಧ ರಾಜ್ಯದ ಅನೇಕ ನಗರಗಳನ್ನು ಗೆದ್ದನು. ಹಾಗೂ ಜುನ್ನೂನನ ಮರಣದ ನಂತರ ಸಿಂಧ ರಾಜ್ಯದ ಸಂಪೂರ್ಣ ಭಾಗವನ್ನು ಕೂಡ ಗೆಲ್ಲುವ ಪ್ರಯತ್ನ ಮಾಡಿದ. ಆಕಸ್ಮಿಕವಾಗಿ ಅದೇ ಕಾಲದಲ್ಲಿ ಜಹೀರುದ್ದೀನ ಬಾಬರನು ಕಂದಹಾರದ ಮೇಲೆ ದಾಳಿ ಮಾಡಿದನು.ಶಾಹ ಬೇಗನು ಬಾಬರನ ಚರಿತ್ರೆಯಲ್ಲಿ ಹೇಳಿದಂತೆ ನಿರೂಪಿಸಲಾಗಿದೆ. ಸಾಕಷ್ಟು ತನ್ನನ್ನು ರಕ್ಷಿಸಿಕೊಳ್ಳಲು ಪ್ರಯತ್ನ ಹಾಗೂ ಕೋಟೆಯ ಭದ್ರತೆಯ ಕಡೆಗೆ ತನ್ನ ಗಮನವನ್ನು ಕೊಟ್ಟನು.

ಶಾಹ ಬೇಗನ ಆಡಳಿತವು ಸಿಂಧರಾಜ್ಯದಲ್ಲಿ :

ಆಕಸ್ಮಿಕವಾಗಿ ಈ ಮಧ್ಯದಲ್ಲಿಯೇ ಸಿಂಧ ರಾಜ್ಯದಲ್ಲಿ ಜಾಮ ಸಲಾವುದ್ದೀನ ಹಾಗೂ ಜಾಮ ಫೇರೋಜರೊಳಗೆ ಯುದ್ಧ ನಡೆಯಿತು. ಶಾಹಬೇಗನು ಈ ಅವಸರದ ಲಾಭ ಪಡೆಯುವ ಸಂಕಲ್ಪ ಮಾಡಿದ. ಹಾಗೂ ಕಂದಹಾರ ಕೋಟೆಯನ್ನು ಭದ್ರಗೊಳಿಸುವ ಪ್ರಯತ್ನಗಳನ್ನು ಬದಿಗೊತ್ತಿ ಭಕ್ಕರ ತಲುಪಿದ. ಭಕ್ಕರದಲ್ಲಿ ಶಾಹಬೇಗನು ಯುದ್ಧದ ಸಾಮಗ್ರಿಗಳನ್ನೊದಗಿಸಿಕೊಂಡ ಹಾಗೂ ಇದೆ ವರ್ಷ ಠಟ್ಟಾ ತಲುಪಿ ತನ್ನ ಹೆಸರಿನ ನಾಣ್ಯ ಹಾಗೂ ಪ್ರವಚನ ಜಾರಿಗೊಳಿಸಿದ.

ಸ್ವಭಾವ ಹಾಗೂ ಪಾತ್ರ :

ಶಾಹಬೇಗನು ಹೆಚ್ಚಾಗಿ ಓದುಬರಹದ ಮಾನವನಾಗಿದ್ದ. ಇವನು ಶರಾಹ, ಅಬಾಯಸೆ, ಹನ್ಫಿ ಶರಾಹ, ಕಾಫಿಯ ಶರಾಹ ಮುಂತಾದ ಶರಾಹ ರಚನೆ ಮಾಡಿದನು. ಅವನು ಶೌರ್ಯ ಹಾಗೂ ಸಾಹಸದಲ್ಲಿ ತನ್ನನ್ನು ತಾನೇ ಉದಾಹರಣೆಯಾಗಿದ್ದ. ಅವನಿಗೆ ರೂಢಿಯಿತ್ತು. ಯುದ್ಧ ಭೂಮಿಯಲ್ಲಿ ವೈರಿಯನ್ನು ಸೆಣಸುವಲ್ಲಿ ಅವನು ಸ್ವತಃ ತಾನೇ ಮುಂದಾಗುತ್ತಿದ್ದನು. ಇಂತಹ ಸಮಯದಲ್ಲಿ ಅವನ ಹಿತೈಷಿಗಳು ಅವನನ್ನು ತಡೆಗಟ್ಟುತ್ತಿದ್ದರು. ಹಾಗೂ ತಿಳಿಪಡಿಸುತ್ತಿದ್ದರು. ಸರದಾರರಿಗೆ ಈ ರೀತಿಯು ತರವಲ್ಲಿ ಶಾಹಬೇಗನು ಉತ್ತರದಲ್ಲಿ ಹೀಗೆ ಹೇಳಿದ. ನಾನು ನನ್ನ ಸ್ವಭಾವದಿಂದ ವಿವಶನಾಗಿದ್ದೇನೆ. ರಣಭೂಮಿಯಲ್ಲಿ ಬಂದು ನಾನು ಈ ಬಗೆಯಾಗಿ ತಿಳಿದುಕೊಳ್ಳುತ್ತೇನೆ. ಇಲ್ಲಿ ನನ್ನ ಜೊತೆ ಸೆಣಸಾಡುವವರು ಯಾರೂ ಇಲ್ಲವೆಂದು. ಶಾಹಬೇಗನ ಮರಣವು ೯೪೦ ಹಿಜರಿಯಲ್ಲಾಯಿತು.

■

*

೨. ಶಾಹ ಹುಸೇನ

ಶಾಹಬೇಗ ಅರ್ಗಾನನ ನಂತರ ಅವನ ಪುತ್ರ ಶಾಹ ಹುಸೇನನು ಸಿಂಧ ರಾಜ್ಯದ ಬಾದಶಾಹನಾದನು. ಸಿಂಧ ರಾಜ್ಯದ ಕೆಲವು ಇಂತಹ ಭಾಗಗಳು ಅವುಗಳ ಮೇಲೆ ಶಾಹಬೇಗನು ಖಬ್ಜಾ ಮಾಡಲಿಲ್ಲ. ಶಾಹ ಹುಸೇನನು ಅವುಗಳನ್ನು ಕೂಡ ಗೆದ್ದನು. ಅವನು ಸೇಕ್ರಿಯನ್ನು ಮೊದಲಿನಿಂದ ಹೊಸದಾಗಿ ನಿರ್ಮಿಸಿದ. ಜಹೀರುದ್ದೀನ ಬಾಬರನ ಉಪದೇಶದಂತೆ ಮುಲ್ತಾನವನ್ನು ಗೆಲ್ಲುವ ಸಿದ್ಧತೆಯಲ್ಲಿ ತೊಡಗಿದ.

ಮುಲ್ತಾನಿನ ಮೇಲೆ ಖಬ್ಜಾ :

೯೨೨ ಹಿಜರಿಯಲ್ಲಿ ಮುಲ್ತಾನಿನ ಮೇಲೆ ದಾಳಿ ಮಾಡಿದನು. ಸುಲ್ತಾನ ಮಹ್ಮೂದನಿಗೆ ಈ ಸುದ್ದಿ ತಲುಪಿದಾಗ, ಒಂದು ಸೈನ್ಯವನ್ನು ರವಾನಿಸಿ ಸುಲ್ತಾನ ಹುಸೇನನಿಗೆ ಮುಲ್ತಾನವನ್ನು ಸ್ವಾಧೀನಪಡಿಸಿಕೊಳ್ಳದಂತೆ ತಡೆಹಿಡಿದನು. ಈ ಮಧ್ಯ ಸುಲ್ತಾನ ಮಹ್ಮೂದನು ಆಕಸ್ಮಾತಾಗಿ ಮೃತಪಟ್ಟನು. ಅವನ ಸ್ಥಳದಲ್ಲಿ ಇವನ ಪುತ್ರ ಸುಲ್ತಾನ ಹುಸೇನನು ಬಾದಶಾಹನಾದನು. ಶಾಹ ಹುಸೇನನು ಈ ಅವಸರದ ಲಾಭ ಪಡೆದನು. ಮತ್ತು ತ್ವರೆಯಾಗಿ ಮುಲ್ತಾನ ತಲುಪಿ ನಗರವನ್ನು ಮುತ್ತಿದನು. ಒಂದು ವರ್ಷ ಕೆಲವು ತಿಂಗಳಗಳ ನಂತರ ಶಾಹ ಹುಸೇನನು ಗೆದ್ದುಕೊಂಡನು. ೯೩೨ ಹಿಜರಿಯಲ್ಲಿ ಮುಲ್ತಾನವನ್ನು ಸ್ವಾಧೀನಪಡಿಸಿಕೊಂಡನು.

ಮುಲ್ತಾನ ನಿವಾಸಿಗಳ ಜೊತೆ ವರ್ತನೆ :

ಶಾಹ ಹುಸೇನನು ಮುಲ್ತಾನಿಯವರಲ್ಲಿ ಅನೇಕರ ಕೊಲೆ ಮಾಡಿದ ಹಾಗೂ ಬಂಧಿಸಿದ. ಸುಲ್ತಾನ ಹುಸೇನನಿಗೂ ಬಂಧಿಸಿದ. ಮುಲ್ತಾನದ ಹೆಸರುವಾಸಿ ಅಮೀರ ಶುಜಾವುಲ್ಮುಲುಕನಿಗೆ ಷಿಕಂಜಾದಲ್ಲಿ ದಬಾಯಿಸಿಕೊಂದನು. ಮುಲ್ತಾನದ ಆಡಳಿತವನ್ನು ಶಾಹ ಹುಸೇನನು ಖ್ವಾಜಾ ಶಮ್ಶುದ್ದೀನನಿಗೊಪ್ಪಿಸಿ ತಾನು ಠಟ್ಟಾಕ್ಕೆ ಮರಳಿದನು.

ಹುಮಾಯುನನು ಸಿಂಧ ರಾಜ್ಯದಲ್ಲಿ :

೯೪೭ ಹಿಜರಿಯಲ್ಲಿ ಯಾವಾಗ ಶೇರಶಾಹನು ಹಿಂದುಸ್ತಾನವನ್ನು ಸ್ವಾಧೀನಪಡಿಸಿಕೊಂಡ ಮೇಲೆ ನಾಸೀರುದ್ದೀನ ಹುಮಾಯುನನು ಸಹಾಯವನ್ನು ಪಡೆಯವಸಲುವಾಗಿ ಸಿಂಧ ರಾಜ್ಯಕ್ಕೆ ಬಂದನು. ಭಕ್ಕರ ಪಕ್ಕದಲ್ಲಿ ತಲುಪಿ ಹುಮಾಯುನಶಾಹ ಹುಸೇನನಿಗೆ ಬರಮಾಡಿಕೊಂಡ ಶಾಹ ಹುಸೇನನು ಕೆಲವು ತಿಂಗಳವರೆಗೆ ವಿಳಂಬಗೈದು ಕೊನೆಗೆ, ಅಸಂಬದ್ದ ಉತ್ತರವನ್ನು ಕೊಟ್ಟ. ಇದನ್ನರಿತ ಹುಮಾಯುನನು ಶಾಹ ಹುಸೇನನಿಗೆ ಪಾಠ ಕಲಿಸಲು ಭಕ್ಕರ ಸರಕಾರವನ್ನು ತನ್ನ ಕಾಕ ನಾಶಿರ ಮಿರ್ಜಾನಿಗೊಪ್ಪಿಸಿ ಸ್ವತಃ ಠಟ್ಟಾದ ಕಡೆಗೆ ನಡೆದ.

ಶಾಹ ಹುಸೇನ ಚತುರತೆ :

ಶಾಹ ಹುಸೇನನು ಬಹಳ ಚತುರ ಹಾಗೂ ಶೌರ್ಯ ನಿಪುಣನಾದ ಮಾನವನಾಗಿದ್ದ. ಅವನು ಈ ಸಂದರ್ಭದಲ್ಲಿ ಒಂದು ಉಪಾಯ ಮಾಡಿದನು. ಮೊದಲು ನಾಶಿ ಮಿರ್ಜಾನಿಗೆ ಈ ವಾಯಿದ ಮಾಡಿದ ಮತ್ತು ತನ್ನ ಪುತ್ರಿಯನ್ನು ಕೊಟ್ಟು ವಿವಾಹ ಮಾಡುವನು ಮತ್ತು ಭಕ್ರಾದಲ್ಲಿ ಅವನ ಹೆಸರಿನ ಪ್ರವಚನ ಮತ್ತು ನಾಣ್ಯವನ್ನು ಜಾರಿಗೊಳಿಸುವದು ನಂತರ ಶಾಹಹುಸೇನನು ಹುಮಾಯುನನ ಸೈನ್ಯದಲ್ಲಿ ಧಾನ್ಯ ಹಾಗೂ ಇತರ ಸಾಮಾನುಗಳನ್ನು ಬಂದ ಮಾಡಿದನು.

ಹುಮಾಯೂನ ಮತ್ತು ಶಾಹಹುಸೇನರಲ್ಲಿ ಒಪ್ಪಂದ :

ಹುಮಾಯೂನನು ಈ ಸ್ಥಿತಿಗತಿಗಳಿಂದ ಅತಿ ಕಳವಳಗೊಂಡನು. ಕೊನೆಗೆ ಬಹರಮಖಾನ ಸಲಹೆಯಂತೆ ಒಪ್ಪಂದ ಮಾಡಿಕೊಂಡ. ಹುಮಾಯೂನನು ಶಾಹ ಹುಸೇನನಿಂದ ನಾವೆಗಳನ್ನು ಹಾಗೂ ಒಂಟೆಗಳನ್ನು ಪಡೆದುಕೊಂಡನು. ಮತ್ತು ೨ ೧/೨ ವರ್ಷದವರೆಗೆ ಸಿಂಧ ರಾಜ್ಯದ ಅಕ್ಕಪಕ್ಕ ಇದ್ದು ನಂತರ ನದಿಯ ಮಾರ್ಗದಿಂದ ಕಂದಹಾರ ಕಡೆಗೆ ನಡೆದನು. ಶಾಹ ಹುಸೇನನು ತನ್ನ ಚತುರತೆಯಿಂದ ತನ್ನ ಉದ್ದೇಶವನ್ನು ಸಾಧಿಸಿಕೊಂಡನು. ಇದರ ನಂತರ ಅವನು ನಾಶಿರ ಮಿರ್ಜಾನಿಗೆ ಕೊಟ್ಟ ವಚನವನ್ನು ಮುರಿದ ಮತ್ತು ಅವನ ಜೊತೆಗೆ ಅವ್ಯವಹಾರಗೈದ. ಇದರಿಂದಾಗಿ ನಾಸೀರ ಮಿರ್ಜಾನು ಖಿನ್ನಮನಸ್ಕನಾಗಿ ಕಾಬುಲಿಗೆ ಹೋದನು.

ಕಾಮ್ರಾ ಮಿರ್ಜಾನ ಆಗಮನ :

ಕಾಮ್ರಾನ ಮಿರ್ಜಾನು ಹುಮಾಯೂನನ ಭಯದಿಂದ ೯೫೨ ಹಿಜರಿಯಲ್ಲಿ ಸಿಂಧ ರಾಜ್ಯಕ್ಕೆ ಹೋದ. ಹಾಗೂ ಶಾಹ ಹುಸೇನನ ಹತ್ತಿರ ಆಶ್ರಯ ಪಡೆದ. ಶಾಹ ಹುಸೇನನೆ ಕಾಮ್ರಾನ ಮಿರ್ಜಾನ ಭವ್ಯ ಸ್ವಾಗತವನ್ನು ಮಾಡಿದನು. ತನ್ನ ಮಗಳ

ಮದುವೆಯನ್ನು ಅವನ ಜೊತೆ ಮಾಡಿದನು. ಇದರ ನಂತರ ಶಾಹ ಹುಸೇನನು ಒಂದು ಸೈನ್ಯವನ್ನು ಕೊಟ್ಟು ಕಾಬುಲ ಜಯಗೊಳಿಸಲು ಕಳುಹಿಸಿಕೊಟ್ಟನು.

ಶಾಹಹುಸೇನನ ಮರಣ :

ಇದರ ಮಧ್ಯದಲ್ಲಿಯೇ ಶಾಹ ಹುಸೇನನ ಕೊನೆಗಾಲ ಬಂತು. ಅವನು ೩೨ ವರ್ಷ ಆಡಳಿತ ಮಾಡಿ ೯೬೪ ಹಿಜರಿಯಲ್ಲಿ ಮೃತಪಟ್ಟನು.

■

*

೩. ಮಿರ್ಜಾ ಈಸಾ ತುರ್ಖಾನ

ಶಾಹ ಹುಸೇನನ ಮರಣದ ನಂತರ ಭಕ್ಕರದಲ್ಲಿ ಸುಲ್ತಾನ ಮಹಮ್ಮದನು ಮತ್ತು ಠಟ್ಟಾದಲ್ಲಿ ಮಿರ್ಜಾ ಈಸಾಖಾನ ತುರ್ಖಾನರು ಬೇರೆ ಬೇರೆ ಆಡಳಿತವನ್ನು ಸ್ಥಾಪಿಸಿಕೊಂಡರು. ತನ್ನ ಹೆಸರಿನ ನಾಣ್ಯ ಹಾಗೂ ಪ್ರವಚನಗಳನ್ನು ಜಾರಿಗೊಳಿಸಿದರು. ಮಿರ್ಜಾ ಈಸಾತುರ್ಖಾನ ಮತ್ತು ಸುಲ್ತಾನ ಮಹ್ಮೂದ ಸಂಬಂಧಗಳು ಹೀಗಿದ್ದವು. ಒಮ್ಮೆ ಯುದ್ಧವಾದರೆ ಮತ್ತೊಮ್ಮೆ ಒಪ್ಪಂದ. ಮಿರ್ಜಾ ಈಸಾ ತುರ್ಖಾನನು ೧೩ ವರ್ಷ ಆಡಳಿತಗೈದನು. ಇತಿಹಾಸಕಾರ ಫರಿಷ್ತಾನಿಗೆ ಈ ಸಂದರ್ಭದಲ್ಲಿ ಯಾವ ತಿಳುವಳಿಕೆ ಇಲ್ಲ. ಅರ್ಗನೂನ ಕುಟುಂಬದ ಹಾಗೂ ತುರ್ಖಾನಿಯ ಕುಟುಂಬಗಳಲ್ಲಿ ಆಡಳಿತವು ಹೇಗೆ ಪ್ರವೇಶ ಪಡೆಯಿತು. ಇದರಿಂದಾಗಿ ಈ ವಿಷಯದಲ್ಲಿ ಉಲ್ಲೇಖಿಸುವಲ್ಲಿ ಅಸಮರ್ಥನಿದ್ದೇನೆ. ಕೇವಲ ಇಷ್ಟು ಗೊತ್ತಿದೆ. ಮಿರ್ಜಾ ಈಸಾ ತುರ್ಖಾನ ತಕ್ಮಾನ ಇದ್ದನು. ಮತ್ತು ಶಾಹಬೇಗನು ದಂಡನಾಯಕನಿದ್ದನು.

■

*

೪. ಮಿರ್ಜಾ ಬಾಕಿ

ಮಿರ್ಜಾ ಈಸಾಖಾನ ತುರಾಖಾನನ ಮರಣದ ನಂತರ ಅವನ ಇಬ್ಬರು ಮಕ್ಕಳು ಮಿರ್ಜಾ ಮೊಹ್ಮದ ಬಾಕಿ ಮತ್ತು ಮಿರ್ಜಾ ಜಾನಬಾಬಾ ಈರ್ವರಲ್ಲಿ ರಾಜ್ಯಕ್ಕಾಗಿ ಜಗಳವಾಯಿತು. ಕೊನೆಗೆ ದೊಡ್ಡಮಗನಾದ ಮಿರ್ಜಾ ಇಸಾಖಾನನು ತನ್ನ ಬುದ್ಧಿವಂತಿಕೆಯಿಂದ ತನ್ನ ತಮ್ಮನಾದ ಮಿರ್ಜಾ ಜಾನಬಾಬಾನನ್ನು ಜಯಿಸಿ, ಠಟ್ಟಾದ ಆಡಳಿತವನ್ನು ಸ್ವಾಧೀನಪಡಿಸಿಕೊಂಡನು. ಮಿರ್ಜಾ ಬಾಕಿಯು ಜಲಾಲುದ್ದೀನ ಅಕ್ಬರ ಬಾದಶಹನ ಸಂಗಡ ಉತ್ತಮ ಸಂಬಂಧವನ್ನಿಟ್ಟುಕೊಂಡಿದ್ದನು. ಮತ್ತು ಯಾವಾಗಲೂ ಅವರ ಸೇವೆಯಲ್ಲಿ ಕಾಣಿಕೆಗಳನ್ನು ಕಳುಹಿಸುತ್ತಿದ್ದನು. ತನ್ನ ತಂದೆಯಂತೆ ಸುಲ್ತಾನ ಮಹ್ಮೂದ ಭಕರಿಯ ಜೊತೆ ಒಮ್ಮೆ ಯುದ್ಧವಾದರೆ ಮತ್ತೊಮ್ಮೆ ಒಪ್ಪಂದ. ಮಿರ್ಜಾ ಬಾಕಿಯು ೧೮ ವರ್ಷ ಒಳ್ಳೆಯ ಸುಖಶಾಂತಿ ಹಾಗೂ ವೈಭವದಿಂದ ಆಡಳಿತಗೈದು ೯೪೩ ಹಿಜರಿಯಲ್ಲಿ ಮೃತಪಟ್ಟನು.

■

*

೫. ಮಿರ್ಜಾ ಜಾನಿ

ಮಿರ್ಜಾ ಮೊಹ್ಮದ ಬಾಕಿಯ ಮರಣದ ನಂತರ ಠಟ್ಟಾದ ಆಡಳಿತವು ಮಿರ್ಜಾಜಾನಿಯ ಕೈಸೇರಿತು.ಮಿರ್ಜಾ ಮೊಹ್ಮದ ಜಾನಿಯ ಪಟ್ಟಾಭಿಷೇಕದ ಕಾಲದಲ್ಲಿ ಜಲಾಲುದ್ದೀನ ಅಕ್ಬರನು ಲಾಹೋರಿನಲ್ಲಿದ್ದನು. ಮಿರ್ಜಾ ಜಾನಿಯು ಆತ್ಮೀಯತೆಯನ್ನು ಪ್ರಕಟಗೊಳಿಸಲೋಸುಗ ಅವನ ಸೇವೆಯಲ್ಲಿ ಹಾಜರಾಗಬೇಕಿತ್ತು. ಆದರೆ ಹಾಗೆ ಆಗಲಿಲ್ಲ. ಇದರಿಂದಾಗಿ ಅಕ್ಬರನು ಕೋಪೋದ್ರಿಕ್ತನಾಗಿ ಠಟ್ಟಾವನ್ನು ಗೆಲ್ಲುವ ಸಂಕಲ್ಪ ಮಾಡಿದನು.

ಅಬ್ದುರ್ರಹೀಮ ಖಾನಖಾನಾನ ಆಗಮನ :

ಅಕ್ಬರನು ೯೫೫ ಹಿಜರಿಯಲ್ಲಿ ತನ್ನ ದಂಡನಾಯಕನಾದ ಅಬ್ದುರ್ರಹೀಮ ಖಾನಖಾನಾನಿಗೆ ಮುಲ್ತಾನ ಹಾಗೂ ಬಕ್ಕರದ ಜಾಗೀರದಾರನೆಂದು ನೇಮಿಸಿ ಆಕಡೆಗೆ ರವಾನಿಸಿದನು. ಖಾನಖಾನಾನು ಮೊಟ್ಟಮೊದಲು ಕೋಟೆ ಸಹ್ವಾನಕ್ಕೆ ಮುತ್ತಿದನು. ಮಿರ್ಜಾ ಜಾನಿಗೆ ಇದು ಗೊತ್ತಾದಾಗ ಅವನು ಪ್ರಬಲವಾದ ಸೈನ್ಯವನ್ನು ಕೂಡಿಸಿದ ಹಾಗೂ ಎಲ್ಲಾ ಭೂ ಒಡೆಯರನ್ನು ಜೊತೆಗೂಡಿಸಿ ಹಾಗೂ ಒಂದು ದೊಡ್ಡ ತೋಪುಖಾನೆಯನ್ನು ತೆಗೆದುಕೊಂಡು ಸಹ್ವಾನನದ ಕಡೆಗೆ ನಡೆದನು. ಖಾನಖಾನಾನು ಕೋಟೆಯ ಮುತ್ತಿಗೆಯನ್ನು ತ್ಯಜಿಸಿ, ಮಿರ್ಜಾ ಜಾನಿಯನ್ನು ಸೆಣೆಸುವ ಸಂಕಲ್ಪ ಮಾಡಿದ. ಈ ಉದ್ದೇಶಕ್ಕಾಗಿ ನಸೀರಪುರನ್ನು ತಲುಪಿದನು. ಈ ಎರಡು ತಂಡಗಳ ಸೈನ್ಯದ ಮಧ್ಯ ಕೇವಲ ಏಳು ಹರದಾರಿ ಅಂತರವಿದ್ದಾಗ ಮಿರ್ಜಾಜಾನಿಯು ತನ್ನಲ್ಲಿದ್ದ ಅರಾಬೆ (ಮದ್ದು ಗುಂಡುಗಳ ಗಾಡಿಗಳು) ಒಟ್ಟು ಸಂಖ್ಯೆಯಲ್ಲಿ ೧೦೦ ಹಾಗೂ ೨೦೦ ನಾವೆಗಳು ಅವುಗಳಲ್ಲಿ ತೋಪುಖಾನೆಗಳಿದ್ದವು. ವೈರಿಗಳ ಕಡೆಗೆ ರವಾನಿಸಿದನು. ಅಬ್ದುರ್ರಹೀಮ ಖಾನಖಾನಾನ ಹತ್ತಿರ ಕೇವಲ ೨೫ ಅರಾಬೆ (ಮದ್ದು ಗುಂಡಿನ ಗಾಡಿಗಳು) ಇದ್ದವು. ಆದರೂ ತನ್ನ ಸೈನ್ಯವನ್ನು ವೈರಿಯ ಜೊತೆ ಹೋರಾಡಲು ಕಳುಹಿಸಿದ.

ಖಾನಖಾನಾ ಹಾಗೂ ಮಿರ್ಜಾಜಾನಿಯ ಜೊತೆ ಯುದ್ಧ :

ಇತ್ತಂಡಗಳಲ್ಲಿ ಪ್ರಬಲವಾಗಿ ಯುದ್ಧ ಪ್ರಾರಂಭವಾಯಿತು. ಒಂದು ಹಗಲು, ಒಂದು ರಾತ್ರಿ ಜಾರಿಯಲ್ಲಿತ್ತು. ಕೊನೆಗೆ ಮಿರ್ಜಾ ಜಾನಿಯ ಸೈನ್ಯಕ್ಕೆ ಸೋಲುಂಟಾಯಿತು. ಖಾನಖಾನಾನು ಜಯಶಾಲಿಯಾದನು. ಈ ಘಟನೆಯು ೨೬ನೇ ಮೋಹ್ರಮ ೧೦೦೦-ನೇ-ಹಿಜರಿ ಇದೆ. ಮಿರ್ಜಾ ಜಾನಿಯು ಸಿಂಧ ನದಿಯ ದಂಡೆಯ ಸ್ಥಳದಲ್ಲಿ ತಂಗಿದನು. ಇದರ ನಾಲ್ಕು ದಿಕ್ಕಿನಲ್ಲಿ ಹುದಲೇ ಹುದಲಿತ್ತು. ಎರಡು ತಿಂಗಳವರೆಗೆ ಇತ್ತಂಡದಲ್ಲಿ ಯುದ್ಧವು ನಡೆಯುತ್ತಲೆ ಇತ್ತು. ಎರಡು ಕಡೆಯಿಂದ ಸೈನಿಕರು ಯುದ್ಧಭೂಮಿಗೆ ಬರುತ್ತಿದ್ದರು. ಕೊಲೆಗೊಳ್ಳುತ್ತಿದ್ದರು.

ಖಾನಖಾನಾನ ಸೈನಿಕರಲ್ಲಿ ಕ್ಷಾಮ :

ಸಿಂಧಿಯರು ಈ ಸಂಗತಿಯಲ್ಲಿ ಉಪಾಯಗಳನ್ನು ಮಾಡಿದರು. ನಾಲ್ಕು ದಿಕ್ಕಿನ ಹಾದಿಗಳನ್ನು ಮುಚ್ಚಿಬಿಟ್ಟರು. ಹೀಗಾಗಿ ಖಾನಖಾನಾನ ಸೈನಿಕರಲ್ಲಿ ಧಾನ್ಯ ಹಾಗೂ ಇತರ ಅವಶ್ಯಕ ಸಾಮಾನುಗಳ ಕೊರತೆಯುಂಟಾಗಿ ಸೈನ್ಯದಲ್ಲಿ ಕ್ಷಾಮವುಂಟಾಯಿತು.ಈ ಸ್ಥಿತಿಯನ್ನು ಕಂಡು ಖಾನಖಾನಾನು ವಿವಶನಾಗಿ ಅಲ್ಲಿಂದ ಪ್ರಯಾಣ ಬೆಳೆಸಿದನು. ಹಾಗೂ ಠಟ್ಟಾದ ಸಮೀಪ ಪರಗಣಾದಲ್ಲಿ ತಂಗಿದನು.

ಖಾನಖಾನಾನು ತನ್ನ ಸೈನ್ಯದ ಒಂದು ಭಾಗವನ್ನು ಸಹ್ವಾನ ಗೆಲ್ಲಲು ನಿಯುಕ್ತಗೊಳಿಸಿದನು. ಮಿರ್ಜಾ ಜಾನಿಯ ಈ ಸೈನ್ಯವು ದುರ್ಬಲವೆಂದು ಸಹ್ವಾನ ಮೇಲೆ ದಾಳಿ ಮಾಡಿದನು. ಖಾನಖಾನಾನು ತಕ್ಷಣವೆ ತನ್ನ ದಂಡನಾಯಕನಾದ ದೌಲತ ಖಾನ ಲೂಧಿಯನ್ನು ತನ್ನ ಸೈನ್ಯದ ಸಹಾಯಕ್ಕಾಗಿ ರವಾನಿಸಿದನು. ಇತ್ತಂಡದವರಲ್ಲಿ ಭೀಕರ ಯುದ್ಧ ನಡೆಯಿತು. ಇದರ ಪರಿಣಾಮ ಮಿರ್ಜಾ ಜಾನಿಗೆ ಸೋಲಾಯಿತು. ಇದರ ನಂತರ ಮಿರ್ಜಾಜಾನಿಯು ಮೌಜಾ ಓಸ್ತೂಲದಲ್ಲಿ ತಂಗಿದನು. ಹಾಗೂ ತನ್ನ ಸೈನ್ಯದ ಸುತ್ತಲು ಕೋಟೆಯನ್ನು ಕಟ್ಟಿದನು. ಖಾನಖಾನಾನು ಮಿರ್ಜಾಜಾನಿಯನ್ನು ಮುತ್ತಿದನು. ಹಾಗೂ ಇತ್ತಂಡದವರಲ್ಲಿ ದಿನಾಲು ಯುದ್ಧ ನಡೆಯಲಾರಂಭಿಸಿತು. ಸಿಂಧಿಯವರ ಸೈನ್ಯದಲ್ಲಿ ಧಾನ್ಯ ಹಾಗೂ ಮೇವಿನ ಕೊರತೆಯುಂಟಾಯಿತು. ಸ್ಥಿತಿಯು ಇಲ್ಲಿಯವರೆಗೆ ಮುಟ್ಟಿತು. ತಮ್ಮಲ್ಲಿಯ ಒಂಟೆ ಹಾಗೂ ಕುದುರೆಗಳನ್ನು ಜುಬಾ ಮಾಡಿ ಅವುಗಳ ಮಾಂಸವನ್ನು ತಿನ್ನತೊಡಗಿದರು. ಇದರಿಂದಾಗಿ ಮಿರ್ಜಾಜಾನಿಯು ವಿವಶನಾಗಿ ಖಾನಖಾನಾನಿಗೆ ಸಂದೇಶ ತಲುಪಿಸಿದನು. ನಾನು ಅಕ್ಬರನ ಚಾಕರಿಯನ್ನು ಮಾಡುವೆನು. ನನಗೆ ಕೆಲದಿನಗಳ ಅವಧಿಯನ್ನು ಕೊಡಿ, ನಾನು ಮೂರು ತಿಂಗಳ ನಂತರ ಅಕ್ಬರ ಸೇವೆಯಲ್ಲಿ ಹಾಜರಾಗುವೆ.

ಮಿರ್ಜಾಜಾನಿಯು ಅಕ್ಬರನ ಸರದಾರರ ಸಾಲಿನಲ್ಲಿ :

ಖಾನಖಾನಾನು ಮೀರ್ಜಾ ಜಾನಿಯ ಅರ್ಜಿಯನ್ನು ಮಂಜೂರು ಮಾಡಿದನು. ಮತ್ತು ತನ್ನ ಮಗ ಮಿರ್ಜಾ ಈರಜನ ವಿವಾಹವು ಮೀರ್ಜಾ ಜಾನಿಯ ಸುಪುತ್ರಿಯೊಂದಿಗೆ ನಡೆಸಿದನು. ಮಳೆಗಾಲದ ನಂತರ ಖಾನಖಾನಾನು ಸಹ್ವಾನ ಠಟ್ಟಾ ಹಾಗೂ ಸಿಂಧ ರಾಜ್ಯದ ಇತರ ನಗರಗಳನ್ನು ಸ್ವಾಧೀನಪಡಿಸಿಕೊಂಡು ಮತ್ತು ಮಿರ್ಜಾ ಜಾನಿಯ ಜೊತೆಗೆ ೧೦೦೧ ಹಿಜರಿಯಲ್ಲಿ ಅಕ್ಬರನ ಹತ್ತಿರ ಹೋದನು. ಮಿರ್ಜಾ ಜಾನಿಯನ್ನು ಅಕ್ಬರನ ಸರದಾರಲ್ಲಿ ಸೇರ್ಪಡಿಸಿ ಹಾಗೂ ಸಿಂಧ ರಾಜ್ಯವನ್ನು ದಿಲ್ಲಿಯ ಆಡಳಿತಕ್ಕೆ ಸೇರ್ಪಡಿಸಲಾಯಿತು.

■

*

೬. ಸುಲ್ತಾನ ಮಹ್ಮೂದ ಭಕರಿ

ಸುಲ್ತಾನ ಮಹ್ಮೂದನು ಅತಿ ಶೂರ ಹಾಗೂ ಮರಳು ಬುದ್ಧಿಯುಳ್ಳ ಮಾನವನಾಗಿದ್ದನು. ತುಸು ಮಾತಿನಲ್ಲಿಯೇ ಕೊಲೆ ಮಾಡುತ್ತಿದ್ದನು. ಅಕ್ಬರನು ಮೀರ ಖಲೀಫಾನ ಮಗ ಮೊಹಖ್ಬಲಿಯನ್ನು ಭಕ್ಕರ ಗೆಲ್ಲುವ ಆಜ್ಞೆಯನ್ನು ಕೊಟ್ಟ ಮೊಹಖ್ಬಲಿಯು ಈ ಪ್ರದೇಶವನ್ನು ತಲುಪಿ ಸುಲ್ತಾನ ಮಹ್ಮೂದನಿಗೆ ವಿವಶಗೊಳಿಸಿ ಬಹಳಷ್ಟು ಪ್ರದೇಶವನ್ನು ತನ್ನ ಖಬ್ಜೆಯಲ್ಲಿ ತೆಗೆದುಕೊಂಡನು. ಮಹ್ಮೂದನು ವಿಹ್ವಲಗೊಂಡ ಅಕ್ಬರನಿಗೆ ಬರೆದನು. ತಾವು ಮೊಹಖ್ಬಲಿಯ ಹೊರತಾಗಿ ಬೇರೊಬ್ಬರಿಗೆ ಕಳುಹಿಸಿಕೊಟ್ಟಲ್ಲಿ ಈ ಕೋಟೆಯನ್ನು ಅವರಿಗೊಪ್ಪಿಸುವೆ. ಅಕ್ಬರನು ಗೇಸುಖಾನನಿಗೆ ಕಳುಹಿಸಿಕೊಟ್ಟನು. ಆದರೆ ಗೇಸುಖಾನನು ಅಲ್ಲಿಗೆ ತಲುಪುವ ಮೊದಲೇ ಸುಲ್ತಾನ ಮಹ್ಮೂದನು ತನ್ನ ಸ್ವಾಭಾವಿಕ ಮೃತ್ಯುವಿಗ ತುತ್ತಾದನು. ಗೇಸುಖಾನನು ಶ್ರಮವಿಲ್ಲದೆ ಭಕರ ಕೋಟೆಯನ್ನು ಗೆದ್ದುಕೊಂಡನು. ಮಹ್ಮೂದನ ಆಡಳಿತಾವಧಿಯು ಇಪ್ಪತ್ತು ವರ್ಷದಾಗಿತ್ತು.

ಮುಲ್ತಾನಿನಲ್ಲಿ ಇಸ್ಲಾಮ ಪ್ರಾರಂಭ ಮೊಹ್ಮದ ಬಿನ ಖಾಸೀಮನ ಕಾಲದಿಂದಾಯಿತು. ಮೊಹ್ಮದ ಬಿನ ಖಾಸೀಮನ ನಂತರ ಸುಲ್ತಾನ ಮಹ್ಮೂದ ಗಜ್ನವಿಯ ಕಾಲದವರೆಗೆ ಮುಲ್ತಾನಿನ ಇತಿಹಾಸವು ಯಾವ ಪುಸ್ತಕದಲ್ಲಿಯೂ ಲಭ್ಯವಲ್ಲ. ಹಾಗೂ (ಯಾವುದರ ಮೂಲಕ ಈ ರಾಜ್ಯದ ಬಗ್ಗೆ ಯಾವ ಪೂರ್ವಚರಿತ್ರೆ ಅಥವಾ ಇಲ್ಲಿಯ ಜನರಿಗೆ ಸಂಬಂಧಪಟ್ಟ ಯಾವ ಘಟನೆಯು ತಿಳಿಯುತ್ತದೆ?) ಯಮಿನಿ ಇತಿಹಾಸದ ಅನುವಾದದಲ್ಲಿ ಕೇವಲ ಇಷ್ಟರಮಟ್ಟಿಗೆ ಉಲ್ಲೇಖವಿದೆ. ಸುಲ್ತಾನ ಮಹ್ಮೂದ ಗಜ್ನವಿಯು ಮಲ್ಹದವರಿಗೆ (ನಾಸ್ತಿಕರಿಗೆ) ಸೋಲಿಸಿ ಮುಲ್ತಾನಿನ ಮೇಲೆ ಖಬ್ಜಾ ಪಡೆದ ಹಾಗೂ ಈ ನಗರವು ಒಂದು ಕಾಲದವರೆಗೂ ಗಜ್ನವಿ ಆಡಳಿತದಲ್ಲಿ ಕೂಡಿತ್ತು. ಯಾವಾಗ ಗಜನಿಯ ರಾಜ್ಯವು ಅರ್ಧ ಪತನದತ್ತ ಸಾಗಿತ್ತು ಆಗ ಮುಲ್ತಾನವು ಬರಾಮತನಿಗೆ ಎರಡನೆಯ ಸಲ ಆಡಳಿತ ಲಭ್ಯವಾಯಿತು. ಇದರ ನಂತರ ಸುಲ್ತಾನ ಮೊಯಿಜೊದ್ದೀನ

ಮೊಹ್ಮದ ಸಾಮನು ಮುಲ್ತಾನವನ್ನು ಸ್ವಾಧೀನಪಡಿಸಿಕೊಂಡನು. ಹಾಗೂ ೮೪೭ ಹಿಜರಿಯವರೆಗೆ ಈ ನಗರವು ದಿಲ್ಲಿಯ ಸುಲ್ತಾನರ ಸ್ವಾಧೀನವಿತ್ತು. ಹಿಂದುಸ್ತಾನದ ಆಡಳಿತವು ಅಸ್ತವ್ಯಸ್ತಗೊಂಡಾಗ, ಮುಲ್ತಾನಿನ ಬಾದಶಾಹನು ದಿಲ್ಲಿಯಿಂದ ಸಂಬಂಧ ಕಡೆದುಕೊಂಡು ಸ್ವತಂತ್ರ ಆಡಳಿತವನ್ನು ಸ್ಥಾಪಿಸಿಕೊಂಡನು. ಇದರ ತರುವಾಯ ಕೆಲ ಬಾದಶಾಹರು ಒಬ್ಬರ ನಂತರ ಇನ್ನೊಬ್ಬರ ಮುಲ್ತಾನಿನಲ್ಲಿ ಆಡಳಿತ ಮಾಡಿದರು.

■

XII. ಮುಲ್ತಾನದ ಸುಲ್ತಾನರು

ಪೀಠಿಕೆ

ಮುಹಮ್ಮದ ಬಿನ್ ಕಾಸೀಮನ ಕಾಲದಿಂದ ಮುಲ್ತಾನದಲ್ಲಿ ಇಸ್ಲಾಂ ಪ್ರಾರಂಭವಾಯಿತು. ಅವನ ನಂತರ ಮೆಹಮೂದ ಗಜ್ನವಿ ಕಾಲದವರೆಗೆ ಮುಲ್ತಾನದ ಚರಿತ್ರೆಯು ಯಾವುದೇ ಪುಸ್ತಕದಲ್ಲಿ ದೊರೆಯುವುದಿಲ್ಲ. ಇದರ ಬಗ್ಗೆ ಬೇರೆ ಉಲ್ಲೇಖಗಳೂ ಇಲ್ಲ. 'ತಾರೀಖೆ ಯಮನಿ' ಪುಸ್ತಕದಲ್ಲಿ 'ಸುಲ್ತಾನ ಮೆಹಮೂದ ಗಜ್ನವಿಯು ಇಸ್ಲಾಮೇತರರನ್ನು ಸೋಲಿಸಿ ಮುಲ್ತಾನವನ್ನು ಕೈವಶ ಮಾಡಿಕೊಂಡನು'. ಎಂದಷ್ಟೇ ಬರೆದಿದೆ. ಅನಂತರ ಮುಲ್ತಾನವು ಗಜ್ನವಿ ರಾಜ್ಯದ ಒಂದು ಭಾಗವಾಗಿ ಉಳಿದಿತ್ತು. ಗಜ್ನವಿ ಮನೆತನದ ನಾಶವಾದ ನಂತರ 'ಕರಾಮೀತಾ' ವಂಶದವರು ರಾಜ್ಯಮಾಡಿದರು. ಅನಂತರ ಸುಲ್ತಾನ ಮೊಯಿಜುದ್ದೀನ ಮುಹಮ್ಮದ ಸಾಮನು ಮುಲ್ತಾನವನ್ನು ಕೈವಶ ಮಾಡಿಕೊಂಡನು. ಆ ನಂತರ ಹಿಜರಿ ಶಕೆ ೮೪೭ರವರೆಗೆ ಇದು ದೆಹಲಿಯ ಶಾಹನ ಅಧೀನದಲ್ಲಿತ್ತು. ನಂತರ ಹಿಂದುಸ್ತಾನದಲ್ಲಿ ಅರಾಜಕತೆಯಾದಾಗ ಮುಲ್ತಾನದ ಮುಖ್ಯಸ್ಥರು ತಾನೆ ಸ್ವಾತಂತ್ರ್ಯ ಸಾರಿಕೊಂಡನು.

■

ಅನೇಕ ಬಗೆಯ ದಯ ಹಾಗೂ ದಾಕ್ಷಿಣ್ಯಗಳನ್ನು ಕರುಣಿಸಿ ಅವರಿಗೆ ಎಲ್ಲಾ ಬಗೆಯಿಂದ ಸಂತುಷ್ಠಗೊಳಿಸಿದರು. ಹಾಗೂ ಮುಲ್ತಾನದ ಸಕಲ ಭೂಒಡೆಯರನ್ನು ತನ್ನ ಹಿತೈಷಿಗಳನ್ನಾಗಿಸಿದರು.

ಲಂಕಾ ಬುಡಕಟ್ಟು ಸರದಾರನ ಸಂದೇಶ :

ಕಸಬಾ ಸೂಲಿ ಹಾಗೂ ಅದರ ಅಕ್ಕಪಕ್ಕದ ಜಾಗೀರದಾರ ಹಾಗೂ ಅಫಗಾನ ಬುಡಕಟ್ಟಿನ ಲಂಕಾದ ಸರದಾರ ರಾಯೆ ಸಹ್ರಾಸು ಯೂಸುಫ ಚಿಷ್ತಿಗೆ ಸಂದೇಶಕೊಟ್ಟನು. ನಾನು ಉಚ್ಚ ವಂಶವಾದ ಬಾಹಿಯದ ನಿಷ್ಠಾವಂತನಿದ್ದೇನೆ. ಆದುದರಿಂದ ಇದು ಸೂಕ್ತವಿದೆ. ತಾವು ನನ್ನ ಸ್ಥಿತಿಯ ಮೇಲೆ ದಯೆ ತೋರಿಸಿರಿ. ಹಾಗೂ ನನ್ನನ್ನು ತಮ್ಮ ಓರ್ವ ಕನಿಷ್ಟ ಸೇವಕನೆಂದು ತಿಳಿದುಕೊಳ್ಳಿ. ಯಾಕೆಂದರೆ ಇಂದಿನ ದಿನಗಳಲ್ಲಿ ದಿಲ್ಲಿಯ ಆಡಳಿತವು ಗೊಂದಲ ಹಾಗೂ ವ್ಯಾಕುಲತೆಗೆ ತುತ್ತಾಗಿದೆ. ಹಾಗೂ ಸುಲ್ತಾನ ಲೋಧಿಯು ದಿಲ್ಲಿಯಲ್ಲಿ ತನ್ನ ನಾಣ್ಯ ಹಾಗೂ ಪ್ರವಚನವನ್ನು ಜಾರಿಗೊಳಿಸಿದ್ದಾನೆ. ಆದುದರಿಂದ ತಮ್ಮಲ್ಲಿ ಹಾಗೂ ಲಂಕಾದ ಜನಾಂಗದಲ್ಲಿ ಹಿತಕರ ಸಂಬಂಧವಿರಲಿ. ಈ ಸಂಬಂಧಗಳನ್ನು ನಾನು ಈ ರೀತಿಯಿಂದ ಪ್ರಾರಂಭಿಸುವೆನು. ನನ್ನ ಪುತ್ರಿಯನ್ನು ನಿಮಗೆ ಕೊಟ್ಟು ವಿವಾಹವನ್ನು ಮಾಡುವೆನು.

ರಾಯೆ ಸಹ್ರಾನ ಆಗಮನ ಹಾಗೂ ನಿರ್ಗಮನ ಮುಲ್ತಾನಿನಲ್ಲಿ :

ಈ ಸಂದೇಶವನ್ನು ಪಡೆದು ಶೇಖ ಯೂಸುಫ ಚಿಷ್ತಿಯು ಬಹಳ ಸಂತೋಷಪಟ್ಟನು. ಅವರು ರಾಯೆ ಸಹ್ರಾನ ಮಗಳೊಂದಿಗೆ ವಿವಾಹ ಮಾಡಿಕೊಂಡನು. ರಾಯ ಸಹ್ರಾನು ಇದರ ನಂತರ ಆಗಾಗ್ಗೆ ತನ್ನ ಮಗಳನ್ನು ಭೇಟಿ ಮಾಡಲು ಸೂಲಿನಿಂದ ಮುಲ್ತಾನ ರಾಜ್ಯಕ್ಕೆ ಬರುತ್ತಿದ್ದನು. ಹಾಗೂ ಶೇಖ ಯೂಸುಫ ಚಿಷ್ತಿಯ ಸಲುವಾಗಿ ಅತ್ಯುತ್ತಮ ಕಾಣಿಕೆಗಳನ್ನು ಹಾಗೂ ಬೆಲೆಬಾಳುವ ಬಹುಮಾನಗಳನ್ನು ತನ್ನ ಜೊತೆಗೆ ತರುತ್ತಿದ್ದನು. ಯೂಸುಫ್ ಚಿಷ್ತಿಯು ಮುನ್ನೆಚ್ಚರಿಕೆಯಿಂದ ಆ ಕಾಣಿಕೆಗಳನ್ನು ಸ್ವೀಕರಿಸುತ್ತಿರಲಿಲ್ಲ. ಅವರಿಗೆ ಸಂದೇಹವಿತ್ತು. ರಾಯೆ ಸಹ್ರಾನು ಭವಿಷ್ಯದಲ್ಲಿ ಸ್ಥಿರವಾಗಿ ಇಲ್ಲಿಯೆ ವಾಸಿಸುವನು. ರಾಯೆ ಸಹ್ರಾನು ಯಾವಾಗಲಾದರೂ ಮುಲ್ತಾನಿಗೆ ಬಂದಾಗ ಅವನು ನಗರದ ಹೊರಗಡೆ ತಂಗುತ್ತಿದ್ದನು. ಮತ್ತು ತನ್ನ ಮಗಳನ್ನು ಕಾಣಲು ಒಬ್ಬನೇ ಶೇಖ ಸಾಹೇಬರ ಮನೆಗೆ ಬರುತ್ತಿದ್ದನು.

ರಾಯೆ ಸಹ್ರಾನ ಕೆಟ್ಟ ಇಚ್ಚೆ (ದುರ್ನಿಯತೆ) :

ರಾಯೆ ಸಹ್ರಾನ ಕೆಟ್ಟ ಇಚ್ಛೆಯಾಗಿತ್ತು. ಅವನು ಬಯಸುತ್ತಿದ್ದ. ಯಾವುದೆ ರೀತಿಯಿಂದಲೂ ಶೇಖ ಯೂಸುಫನನ್ನು ತಳ್ಳಿ ಮುಲ್ತಾನಿನ ಆಡಳಿತವು ತನ್ನ ಕೈಯಲ್ಲಿ ತೆಗೆದುಕೊಳ್ಳುವುದು. ಒಮ್ಮೆ ಅವನು ಸೂಲಿಯಿಂದ ಪ್ರಬಲವಾದ ಸೈನ್ಯವನ್ನು ತೆಗೆದುಕೊಂಡು ಮುಲ್ತಾನಿನ ಕಡೆಗೆ ಪ್ರಯಾಣ ಬೆಳೆಸಿದನು. ಮತ್ತು ಶೇಖ ಯೂಸುಫ

ಚಿಷ್ತಿಗೆ ಸಂದೇಶವನ್ನು ಕಳುಹಿಸಿದನು. "ಈ ಸಲ ನಾನು ನನ್ನ ಸಂಪೂರ್ಣ ರಾಷ್ಟ್ರವನ್ನೆ ಜೊತೆಗೆ ತಂದಿರುವೆನು. ಏಕೆಂದರೆ ಈ ಜನರು ತಮ್ಮ ಭೇಟಿಯ ಸುಯೋಗ ಪಡೆಯಲಿ. ತಾವು ನಮಗೆ ಯಾವುದಾದರೊಂದು ಸೇವೆಯನ್ನು ಮಾಡಲು ಅವಕಾಶ ನೀಡಿದರೆ ನಾವು ನಗುನಗುತ್ತ ಅದನ್ನು ಒಪ್ಪಿಕೊಳ್ಳುವೆವು. ಶೇಖ ಯುಸುಫ್ ಚಿಷ್ತಿಗೆ ಅವನ ದುರ್ನಿಯತ್ತಿನ ತಿಳಿವಳಿಕೆ ಇರಲಿಲ್ಲ. ಆದುದರಿಂದ ಅವರು ಸಂತುಷ್ಟರಾಗಿ ಇವನ ಮನವಿಯನ್ನು ಒಪ್ಪಿಕೊಂಡರು.

ಚಾತುರ್ಯ ಸ್ವಭಾವ :

ರಾಯೆ ಸಹ್ರಾನು ತನ್ನ ಸೈನ್ಯವನ್ನು ನಗರದ ಹೊರಗಡೆ ನಿಲ್ಲಿಸಿದ. ಮತ್ತು ಸ್ವತಃ ತಾನು ಓರ್ವ ಸೇವಕನೊಂದಿಗೆ ತನ್ನ ಮಗಳನ್ನು ಭೇಟಿಯಾಗಲು ನಗರಕ್ಕೆ ಬಂದ. ಅವನು ತನ್ನ ಸೇವಕನಿಗೆ ಆದೇಶವಿತ್ತ. ಮೌನವಾಗಿ ಯಾವುದೊಂದು ಮೂಲೆಯಲ್ಲಿ ಆಡೊಂದನ್ನು ಹಲಾಲಮಾಡಿ ಅದರ ರಕ್ತವನ್ನು ಒಂದು ಬಟ್ಟಲದಲ್ಲಿ ತಂದುಕೊಡು. ಸೇವಕನು ಆದೇಶ ಪಾಲಿಸಿದ. ರಾಯೆ ಸಹ್ರಾನು ಆಡಿನ ರಕ್ತವನ್ನು ಕುಡಿದ. ಇದರ ನಂತರ ಅವನು ಠಕ್ಕತನದಿಂದ ಚೀರಾಡಲು ಪ್ರಾರಂಭಿಸಿದ. ಅವನ ಹೊಟ್ಟೆಯಲ್ಲಿ ನೋವಿದೆ. ಹಾಗೂ ಕೃತಕವಾಗಿ ಈ ತನ್ನ ಹದಗೆಟ್ಟ ಪ್ರಕೃತಿಯ ವಿಷಯವನ್ನು ತಿಳಿಪಡಿಸಿ, ಅರ್ಧ ರಾತ್ರಿಯಲ್ಲಿ ರಾಯೆ ಸಹ್ರಾನು ಶೇಖ ಯೂಸುಫ ಚಿಷ್ತಿಯ ಫಕೀರರನ್ನು ಉಯಿಲು ಬರೆಯಿಸುವ ನೆವದಿಂದ ತನ್ನ ಬಳಿಗೆ ಕರೆಯಿಸಿದ. ಇವರ ಎದುರಿಗೆ ರಕ್ತದ ವಾಂತಿ ಮಾಡಿದ.

ಶೇಖ ಯೂಸುಫನ ವಕೀಲರು ರಾಯ ಸಹ್ರಾನ ಈ ಸ್ಥಿತಿಯನ್ನು ನೋಡಿ. ಇವನು ಸಾವಿನ ಸಮೀಪದಲ್ಲಿದ್ದಾನೆ. ಇವರು ಇವನ ಬಗ್ಗೆ ಅನುಕಂಪ ವ್ಯಕ್ತಗೊಳಿಸಿದರು. ಈ ಮಧ್ಯದಲ್ಲಿಯ ರಾಯ ಸಹ್ರಾನು ತನ್ನ ಜನಾಂಗದ ಜನರನ್ನು ಯಾರು ನಗರದ ಹೊರಗಡೆ ತಂಗಿದ್ದರು. ತನ್ನ ಅಂತ್ಯದ ಭೇಟಿಗಾಗಿ ಎಲ್ಲರನ್ನು ಕರೆಯಿಸಿಕೊಂಡ. ಶೇಖ ಯೂಸುಫನ ವಕೀಲರು ಯಾವ ಪ್ರಕಾರದ ಆಕ್ಷೇಪ ಮಾಡಲಿಲ್ಲ. ಅನುಕಂಪದಾಧಾರದಿಂದ ಪರಜನಾಂಗದವರನ್ನು ನಗರದ ಪ್ರವೇಶಕ್ಕೆ ತಡೆಯಲಿಲ್ಲ. ಕೊನೆಗೆ ಲಂಕಾದ ಜನರು ರಾಯ ಸಹ್ರಾನ ಸುತ್ತಲೂ ಕೂಡಿಕೊಂಡರು. ಇದರ ತರುವಾಯ ರಾಯ ಸಹ್ರಾನು ಆಡಳಿತವನ್ನು ತನ್ನ ಕೈಯಲ್ಲಿ ತೆಗೆದುಕೊಳ್ಳುವ ಉದ್ದೇಶದಿಂದ ಹಾಸಿಗೆಯಿಂದ ಎದ್ದ ಮತ್ತು ತನ್ನ ಸೇವಕರನ್ನು ಕೋಟೆಯ ಬಾಗಿಲದಲ್ಲಿ ನಿಲ್ಲಿಸಿದ. ಅವರಿಗೆ ಆದೇಶ ನೀಡಿದ. ಯೂಸುಫ್ ಚಿಷ್ತಿಯ ನೌಕರರನ್ನು ಹಾಗೂ ವಕೀಲರನ್ನು ಕೋಟೆಯ ಹೊರಗಡೆ ಹೋಗದಂತೆ ಮಾಡಿ, ಈ ವ್ಯವಸ್ಥೆಯ ನಂತರ ರಾಯ ಸಹ್ರಾನು ಶೇಖ ಯೂಸುಫನ ಶಯನಗ್ರಹಕ್ಕೆ ಬಂದ ಮತ್ತು ಅವರನ್ನು ಬಂಧಿಸಿದನು.

■

*

೨. ಖುತುಬ್ಬುದ್ದೀನನ ಲಂಕಾಹ

ಖುತುಬ್ಬುದ್ದೀನನ ಲಂಕಾಹ ಪಟ್ಟಾಭಿಷೇಕ :

ಶೇಖ ಯೂಸುಫ ಚಿಷ್ತಿಗೆ ಬಂಧಿಸಿದ ನಂತರ ರಾಯೆ ಸಹ್ರಾನು ಆಡಳಿತದ ಚುಕ್ಕಾಣಿಯನ್ನು ತನ್ನ ಕೈಯಲ್ಲಿ ತೆಗೆದುಕೊಂಡು, ಸುಲ್ತಾನ ಖುತುಬ್ಬುದ್ದೀನ ಲಂಕಾನ ಹೆಸರಿನಿಂದ ಮುಲ್ತಾನಿನ ಬಾದಶಹನಾದ. ಇವನು ರಾಜ್ಯದಲ್ಲಿ ತನ್ನ ಹೆಸರಿನ ನಾಣ್ಯ ಹಾಗೂ ಪ್ರವಚನವನ್ನು ಜಾರಿಗೊಳಿಸಿದನು. ಅನೇಕ ಯೋಚನೆಗಳಿಂದ ಮುಲ್ತಾನದ ಜನರನ್ನು ತನ್ನ ಹಿತೈಷಿಗಳಾಗಿಸಿಕೊಂಡ.

ಶೇಖ ಯೂಸುಫ ಚಿಷ್ತಿಯ ಗಡಿಪಾರು :

ಸುಲ್ತಾನ ಖುತುಬ್ಬುದ್ದೀನನು ಶೇಖ ಯೂಸುಫ ಚಿಷ್ತಿಯನ್ನು ನಗರದ ದ್ವಾರದಿಂದ (ಯಾವುದು ಹಜರತ ಶೇಖ ಬಾಹಾವೊದ್ದೀನ ಜಿಕ್ರಿಯಾ ಮುಲ್ತಾನಿಯ ಗೋರಿಯ ಉತ್ತರ ದಿಕ್ಕಿನಲ್ಲಿದೆ.) ನಗರದಿಂದ ಹೊರಗೆಡುವಿದ ಮತ್ತು ಆಜ್ಞೆಯನ್ನಿತ್ತ. ಈ ದ್ವಾರವನ್ನು ಭದ್ರವಾದ ಇಟ್ಟಿಗೆಗಳಿಂದ ಬಂದ ಮಾಡಿಸಿದ ಎಂದು ಹೇಳಲಾಗುತ್ತದೆ. ಈ ದ್ವಾರವು ೧೦೧೮ರ ವರೆಗೆ ಮುಚ್ಚಲ್ಪಟ್ಟಿದೆ.

ಶೇಖ ಯುಸುಫ ದಿಲ್ಲಿಯಲ್ಲಿ :

ಶೇಖ ಯೂಸುಫ ಚಿಷ್ತಿ ಪ್ರಯಾಣದ ಘಟ್ಟಗಳನ್ನು ದಾಟುತ್ತ ದಿಲ್ಲಿಯನ್ನು ತಲುಪಿದ. ಸುಲ್ತಾನ ಬಹ್ಲೂಲ ಲೋಧಿಯು (ಬಾದಶಹ) ಇವರನ್ನು ಒಳ್ಳೆಯ ರೀತಿಯಿಂದ ಸ್ವಾಗತಿಸಿದನು. ತನ್ನ ಮಗಳನ್ನು ಶೇಖ ಸಾಹೇಬರ ಶೇಖ ಅಬ್ದುಲ್ಲಾ ಮಗನಿಗೆ ಕೊಟ್ಟು ವಿವಾಹ ಮಾಡಿದ. ಬಹ್ಲೂಲ ಲೋಧಿಯು ಯಾವಾಗಲೂ ಈ ವಾಯಿದೆಯಿಂದ ಸಂತೋಷಗೊಳಿಸುತ್ತಿದ್ದ. ಅವನು ನಿಮಗೆ ಸಹಾಯ ಮಾಡುವೆ.

ಮುಲ್ತಾನ ಆಡಳಿತವು ತಮಗೆ ಪುನಃ ದೊರಕುವಂತೆ ಮಾಡುವೆ. ಎಂದು ಭರವಸೆ ನೀಡಿದ.

ಖುತುಬ್ಬುದ್ದೀನ ಲಂಕಾನು ಅತಿ ನೆಮ್ಮದಿಯಿಂದ ಮುಲ್ತಾನಿನ ಮೇಲೆ ೧೬ ವರುಷದವರೆಗೆ ಆಡಳಿತಗೈದನು. ಇವನು ೮೪೭ ಹಿಜರಿಯಲ್ಲಿ ಮೃತಪಟ್ಟನು.

■

*

೩. ಹುಸೇನ ಲಂಕಾ ತಂದೆ ಕುತುಬ್ಬುದ್ದೀನ

ಕುತುಬ್ಬುದ್ದೀನ ಲಂಕಾನ ಮರಣದ ನಂತರ ಆಡಳಿತದ ಸದಸ್ಯರು ಹಾಗೂ ಸರದಾರರು ಅವನ ಹಿರಿಯ ಮಗನು ಹುಸೇನ ಶಾಹ ಲಂಕಾದ ಬಿರುದನ್ನು ಕೊಟ್ಟು ಮುಲ್ತಾನಿನ ಬಾದಶಹನೆಂದು ಒಪ್ಪಿಕೊಂಡರು. ಹುಸೇನ ಲಂಕಾನು ಅತ್ಯಂತ ಯೋಗ್ಯ ಹಾಗೂ ಧೈರ್ಯಶಾಲಿ ಬಾದಶಹನಿದ್ದ. ಈತನ ಸಜ್ಜನಿಕೆಯ ಗುಣಗಳು ಅವನ ನಡಾವಳಿಯಿಂದ ಗೊತ್ತಾಗುತ್ತವೆ. ಇವನ ಆಡಳಿತಾವಧಿಯಲ್ಲಿ ವಿದ್ಯೆ ಹಾಗೂ ಕೌಶಲ್ಯಗಳು ಉನ್ನತಿ ಮತ್ತು ಮಾನ್ಯತೆ ಪಡೆದವು.

ಶೋರ ಕೋಟೆಯ ಮೇಲೆ ದಾಳಿ :

ಹುಸೇನ ಲಂಕಾನು ತನ್ನ ಆಡಳಿತಾವಧಿಯ ಪ್ರಾರಂಭದಲ್ಲಿ ಶೂರಕೋಟೆಯ ಮೇಲೆ ದಾಳಿ ಮಾಡಿದ ಅಂದು ಶೂರ ಕೋಟೆಯ ಗಾಜಿಖಾನನ ಕೈಯಲ್ಲಿತ್ತು. ಇವನಿಗೆ ಸುದ್ದಿ ತಲುಪಿತು. ಹುಸೇನ ಲಂಕಾನು ದಾಳಿ ಮಾಡುವನು. ಇವನು ಕೂಡ ಯುದ್ಧದ ತಯಾರಿ ಮಾಡಿದನು. ಕೋಟೆಯಿಂದ ಹೊರಗೆ ಬಂದು ಹುಸೇನ ಲಂಕಾನ ಜೊತೆ ಯುದ್ಧ ಮಾಡಿದ. ಗಾಜಿಖಾನನು ಈ ಯುದ್ಧದಲ್ಲಿ ಅತ್ಯುತ್ತಮ ಸಾಹಸದ ಪರಿಚಯ ಕೊಟ್ಟ. ಈ ಯುದ್ಧದಲ್ಲಿ ಸೋತ ಗಾಜಿಖಾನನು ಯುದ್ಧಭೂಮಿಯಿಂದ ಪಲಾಯನ ಬೆಳೆಸಿ, ಭಹೀರಾ ಕೋಟೆಯಲ್ಲಿ ಆಶ್ರಯಪಡೆದ.

ಶೋರ ಕೋಟೆ ಕೈವಶ ಹುಸೇನ ಲಂಕಾನ ಕೈವಶ :

ಗಾಜಿಖಾನನ ಪತ್ನಿ ಹಾಗೂ ಮಕ್ಕಳು ಮತ್ತು ಇತರ ಸಂಬಂಧಿಗಳು ಶೋರ ಕೋಟೆಯಲ್ಲಿ ಇದ್ದರು. ಈ ಜನರು ಕೋಟೆಯನ್ನು ಭದ್ರಗೊಳಿಸಿದರು. ಮತ್ತು ವೈರಿಯನ್ನು ತಡೆಗಟ್ಟುವಲ್ಲಿ ತೊಡಗಿದರು. ಕೋಟೆಯ ವಾಸಿಗಳಿಗೆ ಈ ಆಶೆಯಿತ್ತು. ಗಾಜಿಖಾನನ ಸರದಾರರು ಬೊಹೀರಾ, ಖುಶಾಬ ಮತ್ತು ಚೆನಿಯೂಬ ರಾಜ್ಯಗಳಲ್ಲಿ ಆಡಳಿತಗೈಯುತ್ತಿದ್ದರು. ಅವರು ಖಂಡಿತವಾಗಿ ಸಹಾಯಕ್ಕೆ ಬರುವರು. ಆದರೆ ಆಶೆ

ಪೂರೈಸಲಿಲ್ಲ. ಯಾವಾಗ ಮುತ್ತಿಗೆಯು ದೀರ್ಘಕಾಲದವರೆಗೆ ನಡೆದುದನ್ನು ಕಂಡು ಕೋಟೆಯಲ್ಲಿರುವವರು ಹತಾಶಗೊಂಡರೋ ಆಗ ಕೋಟೆಯನ್ನು ಹುಸೇನ ಲಂಕಾನಿಗೆ ಒಪ್ಪಿಸಿದರು. ಮತ್ತು ಅವರು ಬೊಹೀರಾಕಡೆಗೆ ನಡೆದರು.

ಕೋಟೆ ಚಿನಿಯೂಖಿಯದ ವಿಜಯ :

ಹುಸೇನ ಲಂಕಾನು ಕೆಲದಿನಗಳವರೆಗೆ ಶೋರ ಕೋಟೆಯಲ್ಲಿ ತಂಗಿ, ಅಕ್ಕ ಪಕ್ಕದ ವ್ಯವಸ್ಥೆಯ ಬಗ್ಗೆ ಗಮನಕೊಟ್ಟು, ಆ ನಂತರ ಚಿನೀಯುಖಿನ ಕಡೆ ನಡೆದ. ಈ ಕೋಟೆ ರಕ್ಷಕ ಬಾಝಿ ಬಹಬರರನು ಮೊದಲಂತು ಹುಸೇನ ಲಂಕಾನ ಜೊತೆ ಸೆಣಸಿದ. ಆದರೆ ಅವನಿಗೆ ಗೆಲುವಿನ ಯಾವ ಸೂಚನೆಗಳು ಕಾಣಲಿಲ್ಲದ ಕಾರಣ, ಜೀವದಾನ ಯಾಚಿಸಿ ಈ ಕೋಟೆಯನ್ನು ಹುಸೇನ ಲಂಕಾನಿಗೆ ಒಪ್ಪಿಸಿದ. ಮಲಿಕ ಬಾಝಿ ಖಬ್ಬರನು ಕೂಡ ಕೋಟಿ ನಿವಾಸಿಗಳಂತೆ ಭೀರಾರದ ಕಡೆಗೆ ನಡೆದನು. ಹುಸೇನ ಲಂಕಾನು ಗಡಿಯ ವ್ಯವಸ್ಥೆಯ ನಂತರ ಮುಲ್ತಾನಕ್ಕೆ ಮರಳಿದ. ಮತ್ತು ಇಲ್ಲಿ ಕೆಲ ದಿನಗಳವರೆಗೆ ಆರಾಮಗೈದು ಕೋತ್ಕರದ ಕಡೆಗೆ ನಡೆದನು. ಇವನು ಧನಕೋಟ ಕೋಟೆಯವರೆಗಿನ ಪ್ರದೇಶವನ್ನು ತನ್ನ ಸ್ವಾಧೀನ ಪಡೆಸಿಕೊಂಡನು.

ಬಹ್ಲೂಲ ಲೋಧಿಯು ಮುಲ್ತಾನದ ಸ್ವಾಧೀನ ಪಡೆಯುವ ದೃಢ ಸಂಕಲ್ಪ :

ಶೇಖ ಯೂಸುಫ ಚಿಷ್ತಿಯು ದಿಲ್ಲಿಯಲ್ಲಿರುತ್ತಿದ್ದರು. ಅವರು ಪದೆ ಪದೆ ಸುಲ್ತಾನ ಬಹ್ಲೂಲ ಲೋಧಿಯವರಿಗೆ ಮುಲ್ತಾನಿನ ಮೇಲೆ ದಾಳಿ ಮಾಡಲು ಹೇಳುತ್ತಲೇ ಇದ್ದರು. ಯಾಕೆಂದರೆ ಅವರ ರಾಜ್ಯವು ಅವರಿಗೆ ಮರಳಿ ದೊರೆಯಲಿ. ಹುಸೇನ ಲಂಕಾನು ಧನಜೋಟಿನ ಕಡೆ ನಡೆದಾಗ ಅಂದು ಸಮಯ ವರಪ್ರಸಾದಿತವೆಂದು ತಿಳಿದು, ತನ್ನ ಮಗನಾದ ಬಾರಬಕಶಾಹನಿಗೆ (ಇವನ ಚರಿತ್ರೆಯು ದಿಲ್ಲಿಯ ಸುಲ್ತಾನರ ಹಾಗೂ ಜೋನಪುರದ ವಿಭಾಗದಲ್ಲಿ ಹೇಳಲಾಗಿದೆ) ಮುಲ್ತಾನವನ್ನು ಗೆದ್ದುಕೊಳ್ಳಲು ಆದೇಶ ಕೊಟ್ಟ, ತಾತಾರಖಾನ ಲೋಧಿಗೆ ಇದು ಸೂಚನೆ ಕೊಟ್ಟ. ಅವನು ಪಂಜಾಬಿನ ಸೈನ್ಯವನ್ನು ತೆಗೆದುಕೊಂಡು ಬಾರಬಕಶಾಹನ ಜೊತೆ ಮುಲ್ತಾನಿಗೆ ಹೋಗತಕ್ಕದ್ದು. ಬಾರಬಕಶಾಹ ಮತ್ತು ತಾತಾರಖಾನ ಲೂಧಿ ಬಾದಶಾಹನ ಆಜ್ಞೆಯನುಸಾರ ಮುಲ್ತಾನ ಗೆಲ್ಲಲು ರವಾನವಾದರು.

ಷಾಹಬುದ್ದೀನನ ಬಂಡಾಯ :

ಅದೇ ಕಾಲದಲ್ಲಿ ಹುಸೇನ ಲಂಕಾನ ಸ್ವಂತ ತಮ್ಮನು, ಕೋಟೆ ಕರೂರದ ಒಡೆಯನಿದ್ದನು. ತನ್ನ ಅಣ್ಣನ ವಿರುದ್ಧ ಬಂಡಾಯಗೈದನು ಮತ್ತು ತನ್ನನ್ನು ಶಾಹಬುದ್ದೀನ ಲಂಕವೆಂದು ಬಿರುದು ತಾಳಿ ಸ್ವತಂತ್ರ ಬಾದಶಹನಾಗಿ ಬಿಟ್ಟ. ಹುಸೇನ ಲಂಕಾನು ಷಾಹಬುದ್ದೀನನ ಕಡೆಗೆ ಗಮನವಿತ್ತು. ಕೋಟೆ ಕರವರಕ್ಕೆ ತಲುಪಿ ಅವನಿಗೆ ಬಂಧಿಸಿದ.

ದಿಲ್ಲಿಯ ಸೈನ್ಯದ ಆಗಮನ, ಹುಸೇನ ಲಂಕಾನು ತನ್ನ ಸೈನಿಕರ ಜೊತೆ ಸಂಬೋಧನೆ:

ಈ ಮಧ್ಯ ಇದು ಸುದ್ದಿ ತಲುಪಿತು. ಬಾರಬಕಶಾಹ ಹಾಗೂ ತಾತಾರಖಾನ ಲೂಧಿಯು ಮುಲ್ತಾನ ಅಕ್ಕಪಕ್ಕಕ್ಕೆ ಬಂದಿದ್ದಾರೆ ಹಾಗೂ ನಗರದಲ್ಲಿ ಕಬ್ಜಾ ಮಾಡಲು ಸಿದ್ಧತೆ ನಡೆಸುತ್ತಿದ್ದಾರೆ. ಹುಸೇನ ಲಂಕಾ ಈಗ ಗಂಗಾ ನದಿಯ ದಡದಲ್ಲಿ ತಂಗಿದ್ದನು. ಈ ಸುದ್ದಿ ತಲುಪಿದಾಗ ತಕ್ಷಣವೆ ಮುಲ್ತಾನ ತಲುಪಿದ ಹಾಗೂ ತನ್ನ ಎಲ್ಲಾ ಸೈನಿಕರನ್ನು ಕೂಡಿಸಿ ಅವರಿಗೆ ಹೇಳಿದ "ಪ್ರತಿಯೊಬ್ಬ ಸೈನಿಕನು ಯುದ್ಧ ಭೂಮಿಯಲ್ಲಿ ಜೀವ ಕ್ಷತಿಗೊಳ್ಳುವುದೆಂಬ ಭಯ ಮುಕ್ತರಾಗಿ ಯುದ್ಧ ಮಾಡುವುದೆಂದು ತಿಳಿದುಕೊಳ್ಳುವುದು ಸೂಕ್ತವಲ್ಲ. ಏಕೆಂದರೆ ಅನೇಕ ಸೈನಿಕರು ಯಾರಿಗೆ ತನ್ನ ಮಕ್ಕಳಲ್ಲಿ ಪ್ರೀತಿ ಇರುತ್ತದೆ. ಅವರು ಹೀಗೆ ಮಾಡಲು ಬದಿಗಿರಿಸುತ್ತದೆ. ಇಂತಹ ಸೈನಿಕರು ಕೇವಲ ಸೈನಿಕರ ಸಂಖ್ಯೆಯನ್ನು ಹೆಚ್ಚಿಸುವರು ಅಥವಾ ಕೋಟೆಯ ರಕ್ಷಣೆಗೈಯುವರು. ಈ ಸತ್ಯತೆಯ ದೃಷ್ಟಿಯಲ್ಲಿ ನಾನು ಇಚ್ಛಿಸುತ್ತೇನೆ. ನಿಮ್ಮ ಸೈನಿಕರಲ್ಲಿ ಯಾರು ಯುದ್ಧಭೂಮಿಯಲ್ಲಿ ಯುದ್ಧ ಮಾಡಲು ಸಿದ್ಧರಿದ್ದಾರೆ ಅವರು ಮುಂಜಾನೆ ನಗರದ ಹೊರಗಡೆ ನಡೆಯಿರಿ. ಹಾಗೂ ಉಳಿದ ಸೈನಿಕರು ಕೋಟೆಯನ್ನು ರಕ್ಷಿಸಿರಿ".

ದಿಲ್ಲಿಯ ಸೈನಿಕರ ಮೇಲೆ ದಾಳಿ :

ಹುಸೇನ ಲಂಕಾನು ಈ ಭಾಷಣದಿಂದ ಸುಮಾರು ಹತ್ತು ಹನ್ನೆರಡು ಸಾವಿರ ಸವಾರರು ಹಾಗೂ ಪಾದಚಾರಿ ಸೈನಿಕರು ವೈರಿಯ ಜೊತೆ ಹೋರಾಡಲು ಸಿದ್ಧರಾದರು. ಮುಂಜಾನೆ ಈ ಸೈನಿಕರನ್ನು ತೆಗೆದುಕೊಂಡು ನಗರದಿಂದ ಹೊರಗೆ ನಡೆದು, ಹಾಗೂ ದಿಲ್ಲಿಯ ಸೈನಿಕರಿಗೆ ಎದುರಾಗಿ ಬಂದರು. ಹುಸೇನ ಲಂಕಾನು ಎಲ್ಲಾ ಸೈನಿಕರಿಗೆ ನಿಮ್ಮ ನಿಮ್ಮ ಕುದುರೆಗಳಿಂದ ಇಳಿಯಿರಿ ಎಂದು ಆದೇಶ ನೀಡಿದ. ಎಲ್ಲಕ್ಕೂ ಮೊದಲು ಹುಸೇನ ಲಂಕಾನು ಸ್ವತಃ ಕುದುರೆಯಿಂದ ಇಳಿದ ಹಾಗೂ ತರುವಾಯ ಇತರ ಸವಾರರು ಅವನನ್ನೆ ಅನುಸರಿಸಿದರು. ಇದರ ನಂತರ ಹುಸೇನ ಲಂಕಾನು ತಿಳಿ ಹೇಳಿದನು. ಎಲ್ಲಾ ಸೈನಿಕರು ಮೊದಲು ಒಟ್ಟಾಗಿ ಮೂರು ಮೂರು ಬಾಣಗಳನ್ನು ಬಿಡಿರಿ, ಪ್ರಥಮವಾಗಿ ಬಾಣಗಳು ಬಿಡಲಾದವು. ೧೨ ಸಾವಿರ ಬಾಣಗಳು ದಿಲ್ಲಿಯ ಸೈನಿಕರ ಮೇಲೆ ಬಿದ್ದಾಗ ಈ ತರ ಅರಿವಾಯಿತು. ಸಿಡಿಲು ಬಿದ್ದಿತು. ಎರಡನೆಯ ಸಲ ಬಾಣಗಳು ಬಿಡಲಾದವು ಆಗ ದಿಲ್ಲಿ ಸೈನಿಕರು ಪ್ರಜ್ಞಾಹೀನರಾದರು. ಮತ್ತೆ ಮೂರನೆಯ ಸಲ ಬಾಣಗಳನ್ನು ಬಿಡಲಾದವು ಆಗ ಅವರು ಯುದ್ಧಭೂಮಿಯನ್ನು ಬಿಟ್ಟು ಓಡಿಹೋದರು.

ಹುಸೇನ ಲಂಕಾನ ಗೆಲುವು :

ದಿಲ್ಲಿಯ ಸೈನಿಕರ ಮೇಲೆ ಮುಲ್ತಾನಿಯವರ ಭಯವು ಮೂಡಿತು. ಓಡುತ್ತಾ ಓಡುತ್ತಾ ಶೂರ ಕೋಟೆಯನ್ನು ತಲುಪಿದರು. ಈ ಕೋಟೆಯ ಕಡೆಗೆ ಗಮನವೇ

ಇರಲಿಲ್ಲ. ತಮ್ಮ ಪ್ರಯಾಣವನ್ನು ಮುಂದುವರಸಿದರು ಮತ್ತು ಜಿನೀಯುವುಬ ಕೋಟೆ ಕಡೆಗೆ ನಡೆದರು. ಮುಲ್ತಾನಿಯವರು ವೈರಿಯ ಮೇಲೆ ವಿಜಯ ಸಾಧಿಸಿದರು. ಅಗಣಿತ ಶತ್ರು ಸಂಪತ್ತನ್ನು ತಮ್ಮ ಸ್ವಾಧೀನಪಡಿಸಿಕೊಂಡರು. ಬಾರಬಕಶಾಹ ಹಾಗು ತಾತರಖಾನರು ಕೋಟೆ ಜಿನಿಯುವುಬ ತಲುಪಿ ಹುಸೇನ ಲಂಕಾನ ಕೋಟೆ ರಕ್ಷಕನನ್ನು ತಮ್ಮ ಬಳಿ ಕರೆಯಿಸಿಕೊಂಡರು. ಹುಸೇನ ಲಂಕಾನು ಇತ್ತ ಕಡೆ ಗಮನವೇ ಕೊಡಲಿಲ್ಲ. ಅವನು ತನ್ನ ಈ ಗೆಲುವು ದೇವನ ಕೃಪೆಯೆಂದು ತಿಳಿದು ಹೆಚ್ಚು ಶ್ರಮಪಡುವುದು ಸಮಂಜಸವಲ್ಲವೆಂದು ಸುಮ್ಮನಾದನು.

ಮಲಿಕ ಸೊಹ್ರಾಬ ಬ್ಲೋಚನ ಆಗಮನ :

ಇಂದಿನ ದಿನಗಳಲ್ಲಿಯೇ ಮಲಿಕ ಸೊಹ್ರಾಬ ಬ್ಲೋಚನು ಇಸ್ಮಾಯಿಲ್‌ಖಾನ ಹಾಗೂ ಫತ್ಹೆಖಾನನ ತಂದೆ ಇದ್ದನು. ತನ್ನ ರೋಹಿಲಾ ಜನಾಂಗದೊಡನೆ ಕಚ್ ಮತ್ತು ಮಕ್ರಾನನ ಸುತ್ತಮುತ್ತಲಿಂದ ಹುಸೇನ ಶಾಹ ಲಂಕಾನಲ್ಲಿಗೆ ಬಂದನು. ಹುಸೇನ ಲಂಕಾನು ಇವನಿಗೆ ಭವ್ಯ ಸ್ವಾಗತಗೈದನು. ಅವನಿಗೆ ಕೋಟೆ ಕರೂರನಿಂದ ಧನಕೋಟೆಯವರೆಗೂ ಜಾಗೀರಿನಲ್ಲಿ ಕೊಟ್ಟ. ಇದರ ನಂತರ ಅನೇಕ ಬುಲೋಚಿಯವರು ಮುಲ್ತಾನಿಗೆ ಬಂದರು. ಇದರಿಂದಾಗಿ ಹುಸೇನ ಲಂಕಾನ ಸೈನ್ಯದಲ್ಲಿ ಹೆಚ್ಚಳವಾಯಿತು. ಅವನು ಸಿಂಧ ನದಿಯ ದಡದ ಉಳಿದ ಭಾಗವನ್ನು ಜಾಗೀರಿನಲ್ಲಿ ಬುಲೋಚಿಯವರಿಗೆ ಕೊಟ್ಟನು. ಈ ರೀತಿಯಿಂದಾಗಿ ಕ್ರಮೇಣ ಸುನೀತಪುರದಿಂದ ಧನಕೋಟೆಯವರೆಗಿನ ಪ್ರದೇಶವು ಬುಲೋಚಿಯವರ ಸ್ವಾಧೀನವಾಯಿತು.

ಜಾಮಬಾಯಜೀದ ಹಾಗೂ ಜಾಮ ಇಬ್ರಾಹೀಮರ ಆಗಮನ :

ಈ ದಿನಗಳಲ್ಲಿಯೇ ಸೋಹಿಲಿಯಾ ಬುಡಕಟ್ಟಿನ ಸರದಾರ ಜಾಮಬಾಯಜೀದ ಹಾಗೂ ಜಾಮ ಇಬ್ರಾಹೀಮರು ಸಿಂಧ ಪ್ರದೇಶದ ಒಡೆಯನಾದ ಜಾಮನಂದಾನಿಂದ ದುಃಖಿತರಾಗಿ ಹುಸೇನ ಲಂಕಾನ ಹತ್ತಿರ ಮುಲ್ತಾನಿಗೆ ಬಂದರು. ಹುಸೇನ ಲಂಕಾನು ಇವರಿಗೆ ತುಂಬುಹೃದಯದಿಂದ ಸ್ವಾಗತಿಸಿದನು. ಕಾಣಿಕೆ ಹಾಗೂ ಉಡುಗೊರೆಯಿಂದ ದಯಪಾಲಿಸಿದನು. ಜಾಮ ಬಾಯಜೀದ ಹಾಗೂ ಜಾಮ ಇಬ್ರಾಹೀಮರಿಗೆ ಕ್ರಮಾನುಸಾರ ಶೂರ ಹಾಗೂ ಬವಭಾದ ನಗರಗಳನ್ನು ಜಾಗೀರಿನಲ್ಲಿ ಕೊಟ್ಟನು.

ಜಾಮ ಬಾಯಜೀದನು ಜ್ಞಾನದಾಸ :

ಜಾಮ ಬಾಯಜೀದನು ಅತಿ ಜ್ಞಾನದಾಸನಾದ ಮಾನವನಿದ್ದನು. ಅವನು ಯಾವಾಗಲೂ ವಿದ್ಯಾವಂತರ, ಉಚ್ಚಮಟ್ಟದವರ ಸಹವಾಸದಲ್ಲಿಯೇ ಕಾಲ ಕಳೆಯುತ್ತಿದ್ದನು. ಇವನ ಪ್ರದೇಶದಲ್ಲಿ ಒಬ್ಬ ವಿದ್ಯಾವಂತ ಹಾಗೂ ಉಚ್ಚಮಟ್ಟದ ವ್ಯಕ್ತಿ ಇದ್ದನು. ಜಾಮಬಾಯಜೀದನು ಹೆಚ್ಚು ಆದರವಿತ್ತು ಗೌರವಿಸುತ್ತಿದ್ದನು. ಹಾಗೂ ಅವನಿಗೆ ಧನ್ಯವಾದಗಳನ್ನಿತ್ತು ತೃಪ್ತಿಪಡುತ್ತಿದ್ದನು. ಈ ರೀತಿಯ ವ್ಯವಹಾರದ

ಪರಿಣಾಮವು ಆ ವಿದ್ಯಾವಂತನು ಇವನ ದರಬಾರದೊಂದಿಗೆ ಗಾಢವಾದ ಸಂಬಂಧವನ್ನಿಟ್ಟುಕೊಂಡಿದ್ದನು. ಶೇಖ ಜಮಾಲುದ್ದೀನ ಖುರೈಷಿ ಶೇಖ ಅಲಿಮ ಖುರೈಷಿಯವರ ಸಂತತಿಯವನಾಗಿದ್ದನು. ಅವನು ತನ್ನ ಕಾಲದ ಪ್ರಬಲವಾದ ವಿದ್ಯಾವಂತನಿದ್ದ. ಅವರು ಖುರಾಸಾನದಲ್ಲಿ ವಾಸವಾಗಿದ್ದು, ವಿವಿಧ ಶಾಸ್ತ್ರಗಳನ್ನು ಪೂರ್ಣಗೊಳಿಸಿದ್ದರು. ಹಾಗೂ ವಿದ್ಯೆಯಲ್ಲಿ ತಲ್ಲೀನರಾಗಿದ್ದರು. ಜಾಮ ಬಾಯಜೀದನು ಕೇವಲ ತನ್ನ ಜ್ಞಾನದಾಸತ್ವದಿಂದಾಗಿ ಇವರಿಗೆ ತನ್ನ ಆಡಳಿತದಲ್ಲಿ ಮಂತ್ರಿಯನ್ನಾಗಿಸಿಕೊಂಡ ಹಾಗೂ ಎಲ್ಲಾ ರಾಜ್ಯ ಸುರಕ್ಷತೆ ಹಾಗೂ ಹನಕಾಸಿನ ಮಹತ್ವದ ಕಾರ್ಯಗಳನ್ನು ಇವರಿಗೊಪ್ಪಿಸಿದನು.

ಪ್ರಾಮಾಣಿಕತೆ :

ಜಾಮಬಾಯಜೀದನು ಅತಿ ಪ್ರಾಮಾಣಿಕ ಹಾಗೂ ಧಾರ್ಮಿಕ ಆದೇಶಗಳನ್ನು ಪಾಲಿಸತಕ್ಕವನಾಗಿದ್ದನು. ಇವನ ಪ್ರಾಮಾಣಿಕತೆಯ ಉದಾಹರಣೆ ಒಂದು ಹೀಗಿದೆ. ಒಮ್ಮೆ ಪೂರ ಪ್ರದೇಶದಲ್ಲಿ ಒಂದು ಹೊಸ ಕಟ್ಟಡವನ್ನು ನಿರ್ಮಾಣಗೊಳಿಸುವಾಗ ಭೂಮಿಯೊಳಗಿಂದ ಒಂದು ಖಜಾನೆ ಹೊರಡಿತು. ಜಾಮಬಾಯಜೀದನು ಬಯಸಿದರೆ ಆ ಖಜಾನೆಯನ್ನು ತನ್ನ ಸ್ವಾಧೀನಪಡಿಸಿಕೊಳ್ಳುತ್ತಿದ್ದನು. ಆದರೆ ಅವನು ಹಾಗೆ ಮಾಡಲಿಲ್ಲ. ಆ ಖಜಾನೆಯನ್ನು ಹುಸೇನ ಲಂಕಾನಿಗೆ ಕಳುಹಿಸಿಕೊಟ್ಟನು. ಜಾಮಬಾಯಜೀದನ ಈ ಪ್ರಾಮಾಣಿಕತೆಯಿಂದ ಹೆಚ್ಚು ಪ್ರಭಾವಿತನಾಗಿ ಮೊದಲಿಗಿಂತಲೂ ಹೆಚ್ಚಾಗಿ ಆದರಿಸತೊಡಗಿದನು.

ದಿಲ್ಲಿಯ ಬಾದಶಹನ ಜೊತೆ ಒಪ್ಪಂದ :

ಸುಲ್ತಾನ ಬಹ್ಲೂಲ ಲೋಧಿಯ ಮರಣದ ನಂತರ ದಿಲ್ಲಿಯ ಅರಸೊತ್ತಿಗೆ ಸುಲ್ತಾನ ಸಿಕಂದರ ಶಾಹನ ಸ್ವಾಧೀನವಾಯಿತು. ಈ ಸಂದರ್ಭದಲ್ಲಿ ಹುಸೇನ ಲಂಕಾನು ಒಂದು ಸಂತಾಪ ಪತ್ರ ಹಾಗೂ ಒಂದು ಅಭಿನಂದನಾ ಪತ್ರವನ್ನು ಬರೆದು ಜೊತೆಗೆ ಬೆಲೆಯುಳ್ಳ ಕಾಣಿಕೆಗಳನ್ನು ಸುಲ್ತಾನ ಸಿಕಂದರನ ಸೇವೆಯಲ್ಲಿ ಕಳುಹಿಸಿದನು. ಹಾಗೂ ಒಪ್ಪಂದ ಸಂದೇಶವನ್ನು ಕೊಟ್ಟನು. ಸುಲ್ತಾನ ಸಿಕಂದರನು ಸದೇಶವನ್ನು ಸ್ವೀಕರಿಸಿದ. ಈ ರೀತಿಯಿಂದ ಇತ್ತಂಡದಲ್ಲಿ ಒಪ್ಪಂದವಾಯಿತು. ಇಬ್ಬರು ಬಾದಶಹರು ಇದನ್ನು ನಿರ್ಣಯಿಸಿದರು. ಅವರು ಯಾವಾಗಲೂ ಪರಸ್ಪರ ಒಪ್ಪಂದ ಹಾಗೂ ಸೌಜನ್ಯದಿಂದ ನಡೆದುಕೊಳ್ಳುವುದು ಮತ್ತು ಎಂದೂ ಯುದ್ಧ ಮಾಡುವುದಿಲ್ಲ. ತಂಡದಲ್ಲಿ ಯಾರಾದರೂ ಸಂಕಷ್ಟಕ್ಕೊಳಗಾದಾಗ ಒಬ್ಬರನ್ನೊಬ್ಬರು ಸಹಾಯ ಮಾಡುವುದು. ಈ ಷರತ್ತುಗಳನ್ನೊಳಗೊಂಡ ಒಂದು ಪ್ರತಿಜ್ಞಾಪತ್ರ ಬರೆಯಿಸಲಾಯಿತು. ಇದರ ಮೇಲೆ ಆಡಳಿತ ಸದಸ್ಯರು ಹಾಗೂ ಸರದಾರರು ತಮ್ಮ ತಮ್ಮ ಹಸ್ತಾಕ್ಷರಗಳನ್ನು ಮಾಡಿದರು. ಸುಲ್ತಾನ ಸಿಕಂದರನು ಮುಲ್ತಾನಿ ಸಂದೇಶವಾಹಕನ ಕಾಣಿಕೆ ಹಾಗೂ ಕೊಡುಗೆಗಳನ್ನು ಕೊಟ್ಟು ಮರಳುವ ಅಪ್ಪಣೆಯನ್ನು ಕೊಟ್ಟನು.

ಮುಜಫ್ಫರ ಗುಜರಾತಿಯ ಸ್ನೇಹ ಸಂಬಂಧ :

ಹಲವು ಜನರು ಹೀಗೂ ಹೇಳಿದ್ದಾರೆ. ಹುಸೇನ ಲಂಕಾನು ಸುಲ್ತಾನ ಮುಜಫ್ಫರ ಗುಜರಾತಿಯವರ ಜೊತೆ ಮಿತ್ರುತ್ವದ ಸಂಬಂಧವನ್ನು ಬೆಳೆಸಿದನು. ಮತ್ತು ಓರ್ವ ಪಂಡಿತ ಹಾಗೂ ವಿದ್ಯಾವಂತ ವ್ಯಕ್ತಿಯನ್ನು ಖಾಜಿ ಮೊಹ್ಮದನಿಗೆ ತನ್ನ ಸಂದೇಶವಾಹಕನನ್ನಾಗಿಸಿ ಅವನ ಜೊತೆಗೆ ಬೆಲೆಬಾಳುವ ಉಡುಗೊರೆಕೊಟ್ಟು ಸುಲ್ತಾನ ಮುಜಾಫ್ಫರ ಗುಜರಾತಿಯ ಸೇವೆಯಲ್ಲಿ ಕಳುಹಿಸಿದನು. ಹುಸೇನ ಲಂಕಾನು ಖಾಜಿ ಮೊಹ್ಮದನಿಗೆ ವಿಶೇಷವಾಗಿ ತಾಕೀತು ಮಾಡಿದನು. ನೀವು ಸುಲ್ತಾನ ಮುಜಫ್ಫರ ಗುಜರಾತಿಯವರಿಂದ ಯಾಚಿಸಿರಿ. ಅವನು ನಿಮಗೆ ಗುಜರಾತಿಯ ಕಟ್ಟಡಗಳನ್ನು ತೋರಿಸಲು ಹೇಳಿರಿ. ಇದರಿಂದ ಹುಸೇನ ಲಂಕಾನ ಉದ್ದೇಶ ಇದು ಇತ್ತು ಅವನು ಗುಜರಾತಿಯ ಕಟ್ಟಡದಂತೆ ಮುಲ್ತಾನಿನಲ್ಲಿಯು ನಿರ್ಮಾಣಗೊಳಿಸಬೇಕಾಗಿತ್ತು.

ಗುಜರಾತಿಯ ಕಟ್ಟಡಗಳು :

ಖಾಜಿ ಮೊಹ್ಮದನು ಗುಜರಾತನ್ನು ತಲುಪಿ ಸುಲ್ತಾನ ಮುಜಫ್ಫರ ಗುಜರಾತಿಯ ಸೇವೆಯಲ್ಲಿ ಹಾಜರಾದನು. ಮತ್ತು ತಾನು ತಂದ ಆ ಕೊಡುಗೆಗಳನ್ನು ಗುಜರಾತಿಯ ಬಾದಶಾಹನ ಸೇವೆಯಲ್ಲಿ ಅರ್ಪಿಸಿದ. ಹಾಗೂ ಬೀಳ್ಕೊಳ್ಳುವ ಸಮಯದಲ್ಲಿ ಖಾಜಿ ಮೊಹ್ಮದನು ಸುಲ್ತಾನ ಮುಜಫ್ಫರ ಗುಜರಾತಿಯಲ್ಲಿ ಬೇಡಿಕೊಂಡ. ನಾನು ಗುಜರಾತಿಯ ಕಟ್ಟಡಗಳನ್ನು ನೋಡ ಬಯಸುತ್ತೇನೆ. ಶಾಹ ಗುಜರಾತನು ಈ ಯಾಚನೆಯನ್ನು ಒಪ್ಪಿಕೊಂಡು ಖಾಜಿ ಮೊಹ್ಮದನಿಗೆ ತನ್ನ ನೌಕರರೊಂದಿಗೆ ಶಾಹಿ ಕಟ್ಟಡಗಳನ್ನು ನೋಡುವಂತೆ ವಿಹಾರ ಮಾಡಿಸಿದರು. ಮುಲ್ತಾನಕ್ಕೆ ತಲುಪಿದ ಖಾಜಿ ಮೊಹ್ಮದನು ಹುಸೇನ ಲಂಕಾನಿಗೆ ಗುಜರಾತಿನ ಶಾಹಿ ಕಟ್ಟಡದ ವಿವರವನ್ನು ಕೊಡುತ್ತ ಈ ರೀತಿ ಹೇಳಿದನು. “ಅಲ್ಲಿಯ ಕಟ್ಟಡಗಳು ಇಷ್ಟು ಸುಂದರ ಹಾಗೂ ಮನಮೋಹಕವಾಗಿವೆ. ಅವುಗಳ ವರ್ಣನೆಯನ್ನು ಮಾಡಲು ನನ್ನ ಹತ್ತಿರ ಶಬ್ದಗಳೇ ಇಲ್ಲ. ನನಗೆ ಭರವಸೆ ಇಲ್ಲ ತಾವು ಮುಲ್ತಾನಿನಲ್ಲಿ ಇಂತಹ ಕಟ್ಟಡಗಳನ್ನು ನಿರ್ಮಾಣಗೊಳಿಸುವಿರಿ ಎಂದು. ನನ್ನ ಈ ಅಲ್ಪ ಬುದ್ಧಿಯ ಅಭಿಪ್ರಾಯವಿದೆ. ಒಂದವಸರ ನೀವು ಮುಲ್ತಾನಿನ ಒಂದು ವರ್ಷದ ಆದಾಯವನ್ನು ಹೆಚ್ಚಿ ಕಟ್ಟಡವನ್ನು ನಿರ್ಮಾಣಗೊಳಿಸಲು ಪ್ರಯತ್ನಿಸಿದರೆ ಒಂದು ಕಟ್ಟಡವು ಕೂಡ ನಿರ್ಮಾಣಗೊಳಿಸಲಾಗುವುದಿಲ್ಲ.

ಹುಸೇನ ಲಂಕಾನ ದುಃಖ :

ಖಾಜಿ ಮೊಹ್ಮದನ ಮಾತು ಕೇಳಿ ಹುಸೇನ ಲಂಕಾನು ಬಹಳ ದುಃಖಿತನಾದನು. ಯಾಕೆಂದರೆ ಗುಜರಾತಿ ನಮೂನಿಯ ಕಟ್ಟಡವನ್ನು ನಿರ್ಮಾಣಗೊಳಿಸುವ ಇಚ್ಛೆಯುಳ್ಳವನಾಗಿದ್ದ. ಆದರೆ ಅವನ ಹತ್ತಿರ ಅಷ್ಟು ಧನರಾಶಿ ಇರಲಿಲ್ಲ. ಹುಸೇನ ಲಂಕಾನ ಮಂತ್ರಿ ಇಮಾದುಲ್ಮುಲ್ಕ ತೂಬಕನು ಬಾದಶಹನು ಈ ರೀತಿಯಾಗಿ

ದುಃಖಿತನಾಗಿರುವುದನ್ನು ಕಂಡು ದುಃಖದ ಕಾರಣ ಕೇಳಿದ, ಅದಕ್ಕೆ ಹುಸೇನ ಲಂಕಾನು ಉತ್ತರ ಕೊಟ್ಟನು. ನಾನು ಯೋಚಿಸುತ್ತೇನೆ. ದೈವವು ನನ್ನನ್ನು ಬಾದಶಾಹನಾಗಿ ಮಾಡಿತು. ಆದರೆ ಶಾಹಿ ಸಾಮಾನು ಸರಂಜಾಮುಗಳು ನನ್ನ ಹತ್ತಿರ ಇಲ್ಲ. ಅಷ್ಟು ಧನವೂಯಿಲ್ಲ. ಪ್ರಯುಕ್ತ ನಾನು ಬಾದಶಹರಂತಹ ವೈಭವದ ದರ್ಪ ಪ್ರಕಟಗೊಳಿಸುವೆ.

ಮುಲ್ತಾನಿನ ವಿಶೇಷತೆ :

ಇಮಾದುಲ್ ಮುಲ್ಕನು ಉತ್ತರಿಸಿದ. ಇದೇನು ಅಂತಹ ದೊಡ್ಡದಲ್ಲ. ತಾವು ದುಃಖಿತರಾಗದಿರಿ. ಪ್ರತಿ ದೇಶದಲ್ಲಿ ಯಾವುದಾದರೊಂದು ಸೌಂದರ್ಯವಿರುತ್ತದೆ. ಅಲ್ಲಾನು ದಕ್ಷಿಣ ಮಾಳ್ವಾ ಮತ್ತು ಬಂಗಾಳ ಮುಂತಾದ ರಾಜ್ಯಗಳಿಗೆ ಫಲವತ್ತಾಗಿಸಿ ಅಲ್ಲಿಯ ಜನರಿಗೆ ಸುಖ ಸಮೃದ್ಧಿಯ ಜೀವನವನ್ನು ಗೈಯಲು ಅವಕಾಶವನ್ನೊದಗಿಸಿದರೆ ಮುಲ್ತಾನಿಗೂ ಅಂತಹ ಉಚ್ಚ ಕೋಟೆಯ ಅಂತಸ್ತನ್ನು ಕರುಣಿಸಲಾಗಿದೆ. ಇಲ್ಲಿ ಇಂತಹ ಮಾನವರ ಜನ್ಮವಾಯಿತು. ಇವರು ಪ್ರತಿ ಸ್ಥಳದಲ್ಲಿ ಗೌರವಾನ್ವಿತ ಪುರುಷರಾಗಿ ಬೆಳೆದರು. ಹಜರತ ಬಾಜಾದ್ದೀನ ಜಿಕ್ರಿಯಾ ಮುಲ್ತಾನಿಯವರ ವಂಶಸ್ಥರು ಇಂದು ಇಲ್ಲಿ ಅನೇಕ ಮಹಾ ಪುರುಷರು ಇದ್ದಾರೆ. ಮತ್ತು ಅವರು ಸುಲ್ತಾನ ಬಹ್ಲೋಲ ಬಾದಶಾಹನ ಬೀಗಶೇಖ ಯೂಸುಫ ಚಿಷ್ತಿಯಿಂದ ಯೋಗ್ಯರಿದ್ದಾರೆ. ಇದೇ ರೀತಿಯಿಂದ ಬೇರೆ ಕುಟುಂಬಗಳಲ್ಲಿ ಬೆಳಗುವ ಸುಪುತ್ರರು ಮುಲ್ತಾನಿನಲ್ಲಿದ್ದಾರೆ. ಉದಾಹರಣೆ ತಖ್ಬಾ ಬುಖಾರಿಯು ಅನೇಕ ಸುಶೀಲ ಹಾಗೂ ಪವಿತ್ರತೆಯುಳ್ಳ ಮಹಾನ ಹಿರಿಯರು ಮುಲ್ತಾನಿನಲ್ಲಿದ್ದಾರೆ. ಅವರು ತಮ್ಮ ಆಂತರೀಯ ಸಿದ್ಧಿಗಳಲ್ಲಿ ಹಾಜಿ ಅಬ್ದುಲವಾಹಾಬರಿಂದ ಬಹಳಷ್ಟು ಮುಂದಿದ್ದಾರೆ. ಮೌಲಾನಾ ಫತ್ತೇವುಲ್ಲಾ ಹಾಗೂ ಅವರ ಶಿಷ್ಯರು ಮೌಲಾನಾ ಅಜೀಜುಲ್ಲಾಹರು ಕೂಡ ಮುಲ್ತಾನಿಂದಲೇ ಇದ್ದಾರೆ. ಅವರ ಜ್ಞಾನ ಹಾಗೂ ವಿದ್ಯಾವಂತಿಕೆಯಿಂದ ಇಡಿ ಹಿಂದುಸ್ತಾನದಲ್ಲಿ ಖ್ಯಾತಿಗೊಂಡಿದ್ದಾರೆ. ಇದು ಮುಲ್ತಾನಿನ ಅಗ್ಗಳಿಕೆಯ ಸಾಕ್ಷ್ಯವಾಗಿದೆಯಲ್ಲವೆ. ಇಮಾದುಲ್ ಮುಲ್ಕ್ ಮಾತನ್ನು ಕೇಳಿ ಹುಸೇನ ಲಂಕಾನು ಬಹಳ ಸಂತುಷ್ಟನಾದನು.

ಹುಸೇನ ಲಂಕಾನ ಏಕಾಂತ ವಾಸ :

ಹುಸೇನ ಲಂಕಾನು ಆಡಳಿತ ಮಾಡುತ್ತ ಮುದುಕನಾದ. ಕೊನೆಯಲ್ಲಿ ಅವನು ತನ್ನ ಮಗನಾದ ಫಿರೋಜಶಾಹನಿಗೆ ಪಟ್ಟಾಭಿಷೇಕ ಗೈದು ರಾಜ್ಯದಲ್ಲಿ ಅವನ ಹೆಸರಿನ ನಾಣ್ಯ ಹಾಗೂ ಪ್ರವಚನವನ್ನು ಜಾರಿಗೊಳಿಸಿ, ಮತ್ತು ತಾನು ಸ್ವತಃ ಏಕಾಂತವಾಸಿಯಾಗಿ ಸಂಪೂರ್ಣ ಸಮಯವನ್ನು ಅಲ್ಲಾನ ಧ್ಯಾನದಲ್ಲಿ ಕಾಲ ಕಳೆಯಲಾರಂಭಿಸಿದನು.

ಇಮಾದುಲ ಮುಲ್ಕ್ ತೋಬಕನು ಯಾವ ಸ್ಥಿತಿಯಲ್ಲಿ ತನ್ನ ಮಂತ್ರಿಯ ಹುದ್ದೆಯಲ್ಲಿಯೆ ಇದ್ದ ಅದು ಮುಂದುವರೆಯಿತು.

■

*

೪. ಫೆರೋಜಶಾಹ ಲಂಕಾ

ಅನುಭವ ದೂರ ದೃಷ್ಟಿ ಕೊರತೆ :

ಫೆರೋಜಶಾಹನು ಅನುಭವ ರಹಿತ, ಕಡಿಮೆ ಬುದ್ಧಿಯುಳ್ಳ ಬಾದಶಹನಿದ್ದನು. ಅವನು ಬಹಳಷ್ಟು ಸಂಶಯ ಪ್ರವೃತ್ತಿ ಹಾಗೂ ಕೋಪೋದ್ರಿಕ ಪ್ರವೃತ್ತಿಯುಳ್ಳವನಾಗಿದ್ದನು. ಅವನು ಇಮಾದುಲ್‌ಮುಲ್ಕನ ಮಗ ಬಿಲಾಲ ಇವನು ಕುಶಾಗ್ರಮತಿ ಹಾಗೂ ಯೋಗ್ಯತೆಯುಳ್ಳವನಾಗಿದ್ದನು. ಅತಿಯಾಗಿ ಮತ್ಸರ ಹಾಗೂ ದ್ವೇಷವನ್ನಿಟ್ಟುಕೊಂಡಿದ್ದನು. ಈ ಮತ್ಸರದ ಅಗ್ನಿಯಲ್ಲಿ ಸುಡುತ್ತಿರುವನು. ಸಮಯ ಸಾಧಿಸಿ ತನ್ನೋರ್ವ ಗುಲಾಮನನ್ನು ಕರೆದು ಕೊಲ್ಲಿಸಿದನು. ಇಮಾದುಲ್‌ಮುಲ್ಕನು ತನ್ನ ಮಗನ ಈ ಗಲಭೆ ಸ್ಥಿತಿಯನ್ನು ನೋಡಿ ತಾನು ಕೂಡ ಇದರ ಪ್ರತಿಕಾರ ತೆಗೆದುಕೊಳ್ಳಲು ಸಂಕಲ್ಪ ಮಾಡಿದನು.

ಫೆರೋಜನ ಕೊಲೆ :

ಇಮಾದುಲ್‌ಮುಲ್ಕನು ಒಂದು ದಿನ ಸಮಯ ಸಾಧಿಸಿ ಫೆರೋಜನಿಗೆ ವಿಷಕೊಟ್ಟು ಕೊಲ್ಲಿಸಿದನು. ಹುಸೇನ ಲಂಕಾನಿಗೆ ತನ್ನ ಯುವಪುತ್ರನ ಮರಣದಿಂದ ಅತೀವ ದುಃಖವಾಯಿತು. ಅವನು ಪುನಃ ಆಡಳಿತ ಚುಕ್ಕಾಣಿಯನ್ನು ತನ್ನ ಕೈಯಲ್ಲಿ ತೆಗೆದುಕೊಂಡನು. ಹಾಗೂ ರಾಜ್ಯದಲ್ಲಿ ತನ್ನ ಹೆಸರಿನ ನಾಣ್ಯ ಹಾಗೂ ಪ್ರವಚನವನ್ನು ಜಾರಿಗೊಳಿಸಿದನು. ಇವನು ಫೆರೋಜಶಾಹನ ಮಗನಾದ ಮೊಹ್ಮದನಿಗೆ ತನ್ನ ಉತ್ತರಾಧಿಕಾರಿಯನ್ನಾಗಿ ಮಾಡಿಕೊಂಡ. ಇಮಾದುಲ್‌ಮುಲ್ಕ ತನ್ನ ಮಂತ್ರಿಪದವಿಯಲ್ಲಿದಾಗ್ಯೂ ಹುಸೇನ ಲಂಕಾನು ಇವನಿಗೆ ಎಳಷ್ಟು ಮೆಚ್ಚುತ್ತಿರಲಿಲ್ಲ. ಮತ್ತು ತನ್ನ ಮಗನ ಕೊಲೆಯ ಸೇಡನ್ನು ತೀರಿಸಿಕೊಳ್ಳುವ ಸಂಕಲ್ಪ ಮಾಡಿದ್ದನು.

ಇಮಾದುಲ್‌ಮುಲ್ಕ ಗಲಭೆ (ಗೊಂದಲ) :

ಹುಸೇನ ಲಂಕಾನು ತೋರಿಕೆಯ ರೀತಿಯಲ್ಲಿ ಇಮಾದುಲ್‌ಮುಲ್ಕನ ಜೊತೆ

ಒಳ್ಳೆಯತನದಿಂದ ಭೇಟಿಯಾಗುತ್ತಿದ್ದನು. ಹೀಗಾಗಿ ತನ್ನ ಮನದಲ್ಲಿ ಮೂಡಿದ ಮತ್ಸರವನ್ನು ಎಂದೂ ಇವನ ಮೇಲೆ ಪ್ರಕಟಗೊಳಿಸಲಿಲ್ಲ. ಒಂದು ದಿನ ಬಾದಶಹನು ಜಾಮ ಬಾಯಜೀದನಿಗೆ ಏಕಾಂತದಲ್ಲಿ ತನ್ನ ಬಳಿ ಕರೆದು ಅವನಿಗೆ ಹೇಳಿದ. ನೀವು ಎಲ್ಲಾ ವಿಷಯಗಳಿಂದ ವಿದಿತರಾಗಿದ್ದೀರಿ. ನಿಮಗೆ ಗೊತ್ತಿದೆ. ಈ ಉಪಕಾರಗೇಡಿ ಇಮಾದುಲ್‌ಮುಲ್ಕನು ನನ್ನ ಮಗ ಫೆರೋಜಶಾಹನನ್ನು ಕೊಲ್ಲಿಸಿದನು. ಹೀಗಾಗಿ ನೀವು ಇಂತಹದೊಂದು ಉಪಾಯ ಮಾಡಿರಿ. ಇಮಾದುಲ್‌ಮುಲ್ಕನ ಅಂತ್ಯವಾಗಲಿ. ನಾನು ನನ್ನ ಸೇಡಿನ ಜ್ವಾಲೆಯನ್ನು ಶಾಂತಗೊಳಿಸಿಕೊಳ್ಳುವೆನು. ಜಾಮ ಬಾಯಜೀದನು ಈ ಕಾರ್ಯವನ್ನು ಪೂರ್ಣಗೊಳಿಸುವನೆಂದು ವಾಗ್ದಾನ ಮಾಡಿದ ಹಾಗೂ ಎರಡನೆಯ ದಿನ ಸೈನ್ಯವನ್ನು ತೆಗೆದುಕೊಂಡು ಸೈನ್ಯದ ಸಹಾಯದಿಂದ ಇಮಾದುಲ್‌ಮುಲ್ಕನನ್ನು ಬಂಧಿಸಿದನು.

ಹುಸೇನ ಲಂಕಾನ ಮರಣ :

ಹುಸೇನ ಲಂಕಾನು ಇಮಾದುಲ್‌ಮುಲ್ಕನ ಸ್ಥಳದಲ್ಲಿ ಜಾಮ ಬಾಯಜೀದನನ್ನು ತನ್ನ ಮಂತ್ರಿಯೆಂದು ನಿಯಮಿಸಿದನು. ಅಲ್ಲದೆ ಮೊಹ್ಮದಖಾನ ತಂದೆ ಫಿರೋಜನನ್ನು ಬೋಧಕ ಗುರುವೆಂದು ಮಾಡಿದನು. ಈ ಘಟನೆಯ ಕೆಲವು ದಿನಗಳ ನಂತರ ೨೬/ಸಫರ, ಸೋಮವಾರ ದಿನ ೯೦೮ ಅಥವಾ ೯೦೪ ಹಿಜರಿಯಲ್ಲಿ ಹುಸೇನ ಲಂಕಾನು ಮೃತಪಟ್ಟನು. ಇವನ ಆಡಳಿತಾವಧಿ ೩೪ ವರ್ಷವಿದೆ.

ತಖ್ವಾತೆ ಬಾಹ್ದುರ ಶಾಹಿಯ ಸಂಗ್ರಹಕಾರನಿಂದ ಕೆಲವು ದೋಷಗಳು ಮೂಡಿಬಂದವು. ಒಂದೆಂದರೆ ಅವನು ಮಹ್ಮದಖಾನನನ್ನು ಹುಸೇನ ಲಂಕಾನ ಮಗನೆಂದು ತೋರಿಸುತ್ತಾನೆ. ಮತ್ತು ಎರಡನೆಯದು ಅವನು ಫೆರೋಜಶಾಹನ ಚರಿತ್ರೆಯು ಮಹ್ಮೂದನ ನಂತರ ಉಲ್ಲೇಖಿಸಲಾಗಿದೆ. ಈ ಸಂಗ್ರಹಕಾರನು ಇದನ್ನು ಕೂಡ ಉಲ್ಲೇಖಿಸಿದ್ದಾನೆ. ಮಹ್ಮೂದ ಹಾಗೂ ಫಿರೋಜ ಇವರೀರ್ವರು ನಿಜವಾದ ಭಾತೃಗಳಿದ್ದರು. ಇದು ಸುಳ್ಳೆಂದು ಪ್ರಕಟವಾಗುತ್ತದೆ. ಮಹ್ಮೂದನು ಫಿರೋಜಶಾಹನ ಮಗನಿದ್ದ ಮತ್ತು ಅವನು ತಂದೆಯ ಮರಣದ ನಂತರ ಮುಲ್ತಾನದ ಸಿಂಹಾಸನವನ್ನೇರಿದ.

■

*

೫. ಮಹ್ಮೂದಶಾಹ ಲಂಕಾ

ಪುಂಡರ ಸಹವಾಸ :

ಹುಸೇನ ಲಂಕಾನ ಮರಣದ ನಂತರ ಇವನ ಮೊಮ್ಮಗ ಮಹ್ಮೂದ ತಂದೆ ಫಿರೋಜ ಪಟ್ಟವನ್ನೇರಿದ. ಚಿಕ್ಕವಯಸ್ಸು ಹಾಗೂ ಅನಾನುಭವ ಕಾರಣದಿಂದಾಗಿ ಮಹ್ಮೂದನು ಇಂತಹ ಜನರನ್ನು ತನ್ನ ಸುತ್ತಲೂ ಕೂಡಿಸಿಕೊಂಡನು. ಅವರು ಪುಂಡತನ ಹಾಗೂ ಅಸಭ್ಯ ಪ್ರವೃತ್ತಿಯುಳ್ಳ ಮಾನವರಾಗಿದ್ದರು. ಮಹ್ಮೂದನ ಸಂಪೂರ್ಣ ಸಮಯವು ಇಂತಹ ನೀಚ ಸ್ವಭಾವವುಳ್ಳ ಜಾಮ ಬಾಯಜೀದನು ಕೆಲವು ಗ್ರಾಮಗಳ ಕೆಲ ಅವಿಧೇಯ ಜನರಿಗೆ ಭೂಕಂದಾಯವನ್ನು ವಸೂಲಿ ಮಾಡಿಸುವದಕ್ಕಾಗಿ ತನ್ನ ಹತ್ತಿರ ಕರೆಯಿಸಿದ. ಇವರಲ್ಲಿ ಕೆಲವರು ಭೂಕಂದಾಯವನ್ನು ಕೊಡಲು ನಿರಾಕರಿಸಿದರು. ಜಾಮಬಾಯಜೀದನು ಆ ಜನರ ತಲೆಯನ್ನು ಬೋಳಿಸಿ ಅವರನ್ನು ಇಡೀ ನಗರದಲ್ಲಿ ಸುತ್ತಾಡಿಸಿದನು. ಚಾಡಿಖೋರರು ಈ ಅವಕಾಶದ ಲಾಭ ಪಡೆದರು. ಮತ್ತು ಮಹ್ಮೂದ ಲಂಕಾನಿಗೆ ಹೇಳಿದರು. ಜಾಮ ಬಾಯಜೀದನ "ಅಪಾರ ಬುದ್ಧಿವಂತಿಕೆ ಉರ್ಜಿತಾವಸ್ಥೆಯಲ್ಲಿದೆ. ಈಗ ಅವನು ವಿಶಿಷ್ಟ ಸೇವಕರಲ್ಲಿಯೂ ಕ್ರೂರತನದಿಂದ ವರ್ತಿಸುತ್ತಿದ್ದಾನೆ. ಅವನು ಬಾದಶಹನ ದರ್ಬಾರಿನಲ್ಲಿಯೂ ಹಾಜರಾಗುವುದಿಲ್ಲ. ಹಾಗೂ ತನ್ನ ಸ್ಥಳದಲ್ಲಿ ತನ್ನ ಮಗ ಆಲಮಖಾನನನ್ನು ಕಳುಹಿಸಿದ್ದಾನೆ. ಆದುದರಿಂದ ಇದು ಸೂಕ್ತವೆನಿಸುವುದಿಲ್ಲ ಆಲಮಖಾನನಿಗೆ ಅಗೌರವ ಮಾಡತಕ್ಕದ್ದು".

ಆಲಮಖಾನನಿಗೆ ಅವಹೇಳನ :

ಆಲಮಖಾನನು ಬಹಳ ಬುದ್ಧಿವಂತ ಹಾಗೂ ಸಜ್ಜನ ಪ್ರವೃತ್ತಿಯುಳ್ಳ ಮಾನವನಾಗಿದ್ದ. ಗುಣದ ಜೊತೆ ಜೊತೆ ಅಲ್ಲಾನು ಅವನಿಗೆ ಸೌಂದರ್ಯವು ಕರುಣಿಸಿದ್ದನು. ಒಂದು ದಿನ ಆಲಮಖಾನನು ಬಾದಶಹನಿಗೆ ವಂದಿಸಲು ಹಾಜರಾದ.

ಓರ್ವ ಪುಂಡನು ದರ್ಬಾರಿಯು ಆಲಮಖಾನನಿಗೆ ಹೇಳಿದ. ವ್ಯಕ್ತಿಯೋರ್ವನು ಯಾವ ಪಾಪ ಮಾಡಿದ್ದನು? ನಿಮ್ಮ ತಂದೆ ಅವನ ತಲೆಯನ್ನು ಬೋಳಿಸಿ ಇಡಿ ನಗರದಲ್ಲಿ ಸುತ್ತುವರಿಸಿದ. ಅದೇ ಪ್ರಕಾರ ನಿಮಗೂ ಕೂಡ ನಗರದಲ್ಲಿ ಸುತ್ತುವರಸುವದು.

ಆಲಮಖಾನನ ಶೌರ್ಯ :

ಆಲಮಖಾನನು ಈ ನುಡಿಗಳನ್ನು ಕೇಳಿದಾಗ ಆ ದರ್ಬಾರಿಗೆ ಹೇಳಿದ. ಹೇ ದುರ್ದೈವಿ, ಶಾಹಿ ದರ್ಬಾರಿನಲ್ಲಿ ಈ ಪ್ರಕಾರದ ಅಸಭ್ಯ ನುಡಿಗಳನ್ನಾಡುವುದು ಸೂಕ್ತವಲ್ಲ. ಆಲಮಖಾನನು ಅದೆ ತಾನೆ ಇಷ್ಟನ್ನು ಹೇಳಿದ್ದನು. ಹತ್ತನ್ನೆರಡು ಜನರು ಅವನನ್ನು ಮುತ್ತಿ ಭೂಮಿ ಮೇಲೆ ಬೀಳಿಸಿದರು. ಅವನ ತಲೆಯಿಂದ ಪಗಡಿಯನ್ನು ಇಳಿಸಿದರು. ಆಲಮಖಾನನು ಅತಿ ಕಷ್ಟದಿಂದ ತನ್ನ ಕಠಾರಿಯನ್ನು ತೆಗೆದು ಪುಂಡರಿಗೆ ಹೊಡೆಯಲು ಕೈ ಎತ್ತಿದನು. ಬಾದಶಹನು ಸಮೀಪದಲ್ಲಿಯೇ ನಿಂತಿದ್ದನು. ಆಕಸ್ಮಿಕ ಕಠಾರಿಯ ತುದಿಯು ಬಾದಶಹನ ಹಣೆಗೆ ತಾಕಿತು. ಆಗ ಅವನು ಚೀರುತ್ತ ಭೂಮಿಯ ಮೇಲೆ ಬಿದ್ದನು. ಗಾಯದಿಂದ ಮಹ್ಮೂದನ ಬಹಳಷ್ಟು ರಕ್ತ ಹರಿಯತೊಡಗಿತು. ಯಾರೋ ಆಲಮಖಾನನನ್ನು ಒತ್ತಿ ಹಿಡಿದಿದ್ದರು. ಅವರು ತಕ್ಷಣವೇ ಬಾದಶಹನ ಕಡೆಗೆ ಗಮನ ಕೊಟ್ಟರು. ಆಲಮಖಾನನು ಅವಸರದ ಲಾಭ ಪಡೆದು ಹೊರಗಡೆ ಓಡಿ ಹೋದನು. ಬಾಗಿಲ ಕಡೆಗೆ ತಲುಪಿದಾಗ ಗೊತ್ತಾಯಿತು. ಬಾಗಿಲಕ್ಕೆ ಬೀಗ ಹಾಕಿದೆ. ಆಲಮಖಾನನು ಬಹಳ ಶೂರತನದಿಂದ ಬಾಗಿಲವನ್ನು ಮುರಿದು ತನ್ನೋರ್ವನ ಸೇವಕನಿಂದ ಪಗಡಿಯನ್ನು ತರಿಸಿಕೊಂಡು ತಲೆಯಮೇಲೆ ಕಟ್ಟಿಕೊಂಡು ಮನೆಯ ಕಡೆಗೆ ನಡೆದನು.

ಜಾಮ ಬಾಯಜೀದನ ಕೋಟೆ ಶೂರಗೆ ಪ್ರಮಾಣ :

ಮನೆಯನ್ನು ತಲುಪಿ ಆಲಮಖಾನನು ಈ ಎಲ್ಲಾ ಸುದ್ದಿಯನ್ನು ತನ್ನ ತಂದೆಗೆ ತಿಳಿಸಿದನು. ಜಾಮ ಬಾಯಜೀದನು ತನ್ನ ಮಗನಿಗೆ ಹೇಳಿದ. ವಿಷದಿಂದ ಕೂಡಿದ ನಿನ್ನ ಈ ವ್ಯವಹಾರವು ನನ್ನನ್ನು ಎಲ್ಲಿಯೂ ಇರದಂತೆ ಮಾಡಿದೆ. ಈಗ ಒಳ್ಳೆಯದಿದೆ ನಾವೆಲ್ಲರೂ ಇಲ್ಲಿಂದ ರವಾನೆಗೊಳ್ಳೋಣ ಹಾಗೂ ಶೂರ ಕೋಟೆಯ ಹಾದಿಯನ್ನು ಹಿಡಿಯೋಣ. ಜಾಮ ಬಾಯಜೀದನು ತನ್ನ ಸೈನ್ಯ ತಯಾರಿಸಿದ ಮತ್ತು ಕೋಟೆಯ ಶೂರದ ಕಡೆಗೆ ನಡೆದರು. ಸಂಗಡಿಗರ ಸಹವಾಸದಲ್ಲಿ ಕಳೆಯುತ್ತಿದ್ದನು. ಸಜ್ಜನರು ಬಾದಶಹನ ಈ ಸ್ಥಿತಿಯನ್ನು ಕಂಡು ಒಬ್ಬೊಬ್ಬರಾಗಿ ಶಾಹಿ ಸಭೆಯಿಂದ ದೂರಾಗತೊಡಗಿದರು. ಪುಂಡರು ಇದನ್ನು ಕಂಡು ಅವರು ಜಾಮ ಬಾಯಜೀದನನ್ನು ಮಂತ್ರಿ ಪದವಿಯಿಂದ ಬೇರ್ಪಡಿಸುವ ಯತ್ನವನ್ನು ಮಾಡತೊಡಗಿದರು.

ಜಾಮ ಬಾಯಜೀದನ ವಿರುದ್ಧ ಕುತಂತ್ರ :

ಈ ಜನರು ಮಹ್ಮೂದಶಾಹನಿಗೆ ಜಾಮ ಬಾಯಜೀದನ ವಿರುದ್ಧ

ಉದ್ರೇಕಗೊಳಿಸಲು ಪ್ರಾರಂಭಿಸಿದರು. ಜಾಮ ಬಾಯಜೀದನಿಗೆ ಈ ಸುದ್ದಿ ತಲುಪಿದಾಗ ಅವನು ತನ್ನ ಮನೆಯಲ್ಲಿಯೇ ಇದ್ದನು ಅದು ಚಿನಾಬ ನದಿಯ ದಡದ ಮೇಲೆ ಮುಲ್ತಾನಿನಿಂದ ಒಂದು ಹರದಾರಿ ದೂರದಲ್ಲಿತ್ತು. ಅಲ್ಲಿಂದಲೇ ಆಡಳಿತದ ಎಲ್ಲಾ ವ್ಯವಹಾರಗಳನ್ನು ನೆರವೇರಿಸುತ್ತಿದ್ದನು. ಅವನು ನಗರದಲ್ಲಿ ಬರು ಹೋಗುವುದುನ್ನು ನಿಲ್ಲಿಸಿ ಬಿಟ್ಟನು.

ಬೆನ್ನಟ್ಟುವ ಅಸಫಲ ಪ್ರಯತ್ನ :

ಮಹ್ಮೂದ ಲಂಕಾನಿಗೆ ಜಾಮ ಬಾಯಜೀದನ ಪ್ರಯಾಣದ ವಿಷಯ ತಿಳಿಯಿತು. ಅವನು ತನ್ನ ಕೆಲ ಸರದಾರರನ್ನು ಅವನಿಗೆ ಬೆನ್ನಟ್ಟಲು ರವಾನಿಸಿದನು. ಮಹ್ಮೂದನ ಸರದಾರರು ಜಾಮ ಬಾಯಜೀದನ ಸೈನ್ಯದ ಸಮೀಪ ತಲುಪಿದಾಗ ಇತ್ತಂಡದಲ್ಲಿ ಪ್ರಬಲವಾದ ಯುದ್ಧವಾಯಿತು. ಇದರ ಪರಿಣಾಮ ಜಾಮ ಬಾಯಜೀದನಿಗೆ ಜಯ ಲಭಿಸಿತು. ಇವನು ತನ್ನ ಪ್ರಯಾಣವನ್ನು ಮುಂದುವರಿಸಿ ಶೂರ ಕೋಟೆಯನ್ನು ತಲುಪಿದ.

ಜಾಮ ಬಾಯಜೀದ ಹಾಗೂ ಸಿಕಂದರ ಲೋಧಿಯಲ್ಲಿ ಹಿತಕರ ವ್ಯವಹಾರ :

ಜಾಮಬಾಯಜೀದನು ಶೂರ ಕೋಟೆಯಲ್ಲಿ ಸುಲ್ತಾನ ಸಿಕಂದರ ಲೋಧಿಯ ಹೆಸರಿನ ಪ್ರವಚನ ಓದಿಸಿದ. ಹಾಗೂ ಅವನಿಗೆ ಒಂದು ಪತ್ರವನ್ನು ಬರೆದು ಎಲ್ಲಾ ಅಲ್ಲಿಯ ಸ್ಥಿತಿಯಿಂದ ಅವಘಡಗೊಳಿಸಿದ. ಸಿಕಂದರ ಲೋಧಿಯು ಜಾಮ ಬಾಯಜೀದನ ಈ ಆಚರಣೆಯಿಂದ ಅತಿ ಸಂತುಷ್ಟನಾದ ಹಾಗೂ ಪಂಜಾಬದ ಒಡೆಯ ದವಲತ್‌ಖಾನ ಲೋಧಿಯ ಹೆಸರಿನಲ್ಲಿ ಒಂದು ಆಜ್ಞೆಯನ್ನು ಈ ಸಂಬಂಧ ಕುರಿತು ಕಳುಹಿಸಿದನು. ಜಾಮ ಬಾಯಜೀದನು ನನ್ನ ಹಿತೈಷಿಯೆಂದು ಭರವಸೆ ನೀಡಿದ್ದಾನೆ. ಹಾಗೂ ಶೂರ ಕೋಟೆಯಲ್ಲಿ ನನ್ನ ಹೆಸರಿನ ಪ್ರವಚನ ಜಾರಿಗೊಳಿಸಿದ್ದಾನೆ. ಪ್ರಯುಕ್ತ ನೀವು ಈ ಸಂಗತಿಯಿಂದ ಜಾಗರೂಕರಾಗಿರಿ ಹಾಗೂ ಅವಶ್ಯ ಬಿದ್ದಾಗ ಇವನಿಗೆ ಸಹಕರಿಸಿರಿ.

ಮಹ್ಮೂದ ಲಂಕಾನ ಶೂರ ಕೋಟೆಯ ಮೇಲೆ ದಾಳಿ :

ದಾಳಿಯ ಕೆಲ ದಿನಗಳ ನಂತರ ಮಹ್ಮೂದ ಲಂಕಾನು ಸೈನ್ಯವನ್ನು ಕೂಡಿಸಿ ಶೂರ ಕೋಟೆಯ ಮೇಲೆ ದಾಳಿ ಮಾಡಿದನು. ಜಾಮ ಬಾಯಜೀದನು ತನ್ನ ಸೈನ್ಯವನ್ನು ಸಿದ್ಧಗೊಳಿಸಿ ಮತ್ತು ತನ್ನ ಮಗ ಆಲಂನೊಂದಿಗೆ ಕೋಟೆಯಿಂದ ಹೊರಗಡೆ ಬಂದ. ಅವನು ದವಲತ್‌ಖಾನನಿಗೆ ಒಂದು ಪತ್ರ ಬರೆದ. ಅವನಿಗೆ ಸಂಪೂರ್ಣ ಸ್ಥಿತಿಗತಿಗಳ ಅವಗತ ಮಾಡಿದನು. ಜಾಮ ಬಾಯಜೀದ ಹಾಗೂ ಲಂಕಾ ಸೈನಿಕರೊಂದಿಗೆ ಯುದ್ಧ ನಡೆಯಿತು. ಆದರೆ ಯಾವ ಪರಿಣಾಮವು ದೊರೆಯಲಿಲ್ಲ. ಈ ಮಧ್ಯದಲ್ಲಿ

ದವಲತ್‌ಖಾನ ಲೋಧಿಯ ಸೈನ್ಯವು ಜಾಮ ಬಾಯಜೀದಿಯ ಸಹಾಯಕ್ಕಾಗಿ ಬಂದಿತು. ದವಲತ್‌ಖಾನ ಮಹ್ಮೂದ ಲಂಕಾನೊಂದಿಗೆ ಒಪ್ಪಂದದ ಮಾತುಗಳು ಪ್ರಾರಂಭವಾದವು. ಅವು ಯಶಸ್ವಿಯಾದವು. ಇತ್ತಂಡದಲ್ಲಿ ಈ ಕರಾರಿನ ಮೇಲೆ ಒಪ್ಪಂದವಾಯಿತು. ಜಾಮ ಬಾಯಜೀದ ಹಾಗೂ ಮಹ್ಮೂದ ಲಂಕಾ ಇವರ ಮಧ್ಯ ರಾವಿ ನದಿಯು ಸೀಮಾರೇಖೆಯಾಗುವುದು.

ಮೀರ ಇಮಾದ ಕರವೇಜ :

ಮಹ್ಮೂದ ಲಂಕಾ ಮುಲ್ತಾನದ ಒಡೆಯನಿದ್ದಾನೆ. ಹಾಗೂ ಜಾಮ ಬಾಯಜೀದನ ಹತ್ತಿರ ಕೋಟೆ ಶೂರ ಇರುವುದು. ಈ ಒಪ್ಪಂದವು ಬಹಳ ದಿನಗಳವರೆಗೆ ಇರಲಿಲ್ಲ. ಈ ಮಧ್ಯದಲ್ಲಿಯೇ ಇಮಾದ ಕರವೇಜ ತನ್ನ ಇಬ್ಬರು ಮಕ್ಕಳು ಮಿರ್ಜಾ ಷಹೀದ ಹಾಗೂ ಮಿರ್ಜಾ ಶಾಹರೊಡಗೂಡಿ ಸೂಲಿಯಿಂದ ಮುಲ್ತಾನಿಗೆ ಬಂದನು. ನಿಜಾಮೊದ್ದೀನ ಅಹ್ಮದ ಬದಬಷಿಯು ತನ್ನ ಇತಿಹಾಸದಲ್ಲಿ ಉಲ್ಲೇಖಿಸಿದ್ದಾನೆ. ಮುಲ್ತಾನಿನಲ್ಲಿ ಪ್ರಥಮವಾಗಿ ಷಿಯಾ ಧರ್ಮವನ್ನು ಮಿರ್ಜಾ ಷಹಿದ ತಂದೆ ಮೀರ ಇಮಾದ ಕರವೇಜಿಯು ರೂಢಿಯಲ್ಲಿ ತಂದ. ಆದರೆ ಇದು ಬರೆಯಲಿಲ್ಲ. ಮೀರ ಇಮಾದ ಯಾರಿದ್ದ ಮತ್ತು ಇವನ ಸಂಬಂಧ ಯಾವ ಕುಟುಂಬವಿತ್ತು. ಹಾಗೂ ಇದು ಕೂಡ ತಿಳಿಸಲಿಲ್ಲ. ಈ ಕಾಲದಲ್ಲಿ ಮೀರಶಾಹನಿಗೆ ಮುಲ್ತಾನಿನಲ್ಲಿ ಷಿಯಾ ಧರ್ಮಕ್ಕೆ ಆಚರಣೆ ಹಾಗೂ ಪ್ರಚಾರದ ಅವಕಾಶ ಹೇಗೆ ಹಾಗೂ ಯಾಕೆ ದೊರೆಯಿತು. ಅಂದಿನಂದು ಮಲಿಕ ಸೊಹ್ರಾಬ ಬಲೋಚ ಲಂಕಾದ ಸುಲ್ತಾನರ ಜೊತೆ ಬಹಳಷ್ಟು ಸ್ನೇಹ ಸಂಬಂಧವನ್ನಿಟ್ಟುಕೊಂಡಿದ್ದ. ಇದರಿಂದಾಗಿ ಮೀರ ಇಮಾದ ಕರವೇಜಿಯು ಮುಲ್ತಾನಿನಲ್ಲಿ ಹೆಚ್ಚು ದಿನಗಳವರೆಗೆ ನಿಲ್ಲಲಿಲ್ಲ. ಇದರಿಂದಾಗಿ ಜಾಮ ಯಜೀದನಲ್ಲಿಗೆ ಹೋದನು.

ಮೀರ ಇಮಾದ ಜಾಮ ಬಾಯಜೀದನ ಹತ್ತಿರ :

ಜಾಮ ಯಜೀದನು ಇಮಾದ ಕರವೀಜಿಯ ಜೊತೆ ಒಳ್ಳೆಯ ರೀತಿಯಿಂದ ವ್ಯವಹರಿಸಿದ. ಅವನಿಗೆ ಅತಿ ಗೌರವದಿಂದ ಕಂಡ. ಜಾಮ ಬಾಯಜೀದನು ತನ್ನ ರಾಜ್ಯದ ಒಂದು ಭಾಗವನ್ನು ತನ್ನ ಸ್ವಂತ ಖರ್ಚಿಗಾಗಿ ನಿಯುಕ್ತಗೊಳಿಸಲಾಗಿತ್ತು. ಅದನ್ನು ಇಮಾದ ಕರವೇಜಿ ಹಾಗೂ ಅವನ ಮಕ್ಕಳಿಗೆ ಜಾಗೀರ ರೂಪದಲ್ಲಿ ಕೊಟ್ಟನು. ಜಾಮ ಬಾಯಜೀದನು ಒಳ್ಳೆ ದಯಾಳು, ದಾನಿ ಹಾಗೂ ಸಜ್ಜನನಾಗಿದ್ದನು. ಅವನು ವಿದ್ಯಾವಂತರ ಹಾಗೂ ಕಲೆಯುಳ್ಳವರನ್ನು ಅತಿ ಗೌರವಿಸುತ್ತಿದ್ದನು. ಅವರ ಸುಖ ಜೀವನಕ್ಕೆ ಸಾಧ್ಯವಾದಷ್ಟು ಸೌಲಭ್ಯವನ್ನೊದಗಿಸುತ್ತಿದ್ದನು. ಇವರು ಇಹದ ಬಗ್ಗೆ ಯಾವ ಚಿಂತೆಗೈಯದೆ ಸುಖ ಶಾಂತಿಯಿಂದಿದ್ದು, ವಿದ್ಯೆಯನ್ನು ಬೆಳೆಸಲು ಸೇವೆಯನ್ನು ಗೈದರು.

ಜಾಮ ಬಾಯಜೀದನ ವಿದ್ಯಾಸ್ನೇಹ ಸಂಬಂಧ :

ಕೆಲ ಇತಿಹಾಸಕಾರರು ಉಲ್ಲೇಖಿಸಿದ್ದಾರೆ. ಜಾಮ ಬಾಯಜೀದನು ಯುದ್ಧ ಕಾಲದಲ್ಲಿ ಮುಲ್ತಾನಿನ ವಿದ್ಯಾವಂತರ ಹಾಗೂ ಕಲಾವಂತರಾಗಿ ಶೂರ ಕೋಟೆಯಿಂದ ಜೀವನಕ್ಕೆ ಅವಶ್ಯವಾದ ಎಲ್ಲಾ ಸಾಮಾನುಗಳನ್ನು ನಾವೆಗಳ ಮುಖಾಂತರ ಮುಲ್ತಾನಿಗೆ ಕಳುಹಿಸಿಕೊಟ್ಟಿದ್ದ. ಮುಲ್ತಾನ ವಾಸಿಗಳ ಮೇಲೆ ಅವನ ಕೆಲವು ಉಪಕಾರಗಳಿದ್ದವು. ಇದರಿಂದಾಗಿ ಎಲ್ಲಾ ಮುಲ್ತಾನಿಯರು ಮನಃಪೂರ್ವಕವಾಗಿ ಅವನ ಹಿತೈಷಿಗಳಾಗಿದ್ದರು. ಈ ಬಗೆಯ ಕಾರ್ಯನಿರ್ವಹಣೆಯಿಂದ ಸರ್ವ ಮುಲ್ತಾನಿಯರು ಮುಲ್ತಾನ ಬಿಟ್ಟು ಶೂರ ಕೋಟೆಗೆ ಬಂದು ನಲೆಸಿಕೊಂಡರು. ಈ ಜನರಲ್ಲಿ ಕೆಲವರು ಇಂತವರಿದ್ದರು. ಜಾಮ ಬಾಯಜೀದನು ಸ್ವತಃ ಅವರನ್ನು ತನ್ನ ಬಳಿ ಕರೆಯಿಸಿಕೊಂಡಿದ್ದನು. ಅವರಲ್ಲಿ ಮೌಲಾನಾ ಅಜೀಜುಲ್ಲಾ ಇವರು ಮೌಲಾನಾ ಫತ್ತೇಲ್ಲಾರ ಶಿಷ್ಯರಿದ್ದರು. ಜಾಮ ಬಾಯಜೀದನು ಈ ಮಹಾನೀಯರಿಗೆ ಶೂರ ಕೋಟೆಯಲ್ಲಿ ಬರಮಾಡಿಕೊಂಡನು. ಅವರು ಬಂದಾಗ ಬಹು ವಿಜೃಂಭಣೆಯಿಂದ ಅವರನ್ನು ಸ್ವಾಗತಿಸಿದ. ತನ್ನ ಅಂತಃಪುರದಲ್ಲಿ ಇರುವ ವ್ಯವಸ್ಥೆಯನ್ನು ಮಾಡಿದನು. ಅವರನ್ನು ಜಾಮ ಬಾಯಜೀದ ಅತಿ ಶ್ರದ್ಧೆಯಿಂದ ಕಾಣುತ್ತಿದ್ದನು. ಬಂದ ಮೇಲೆ ಜಾಮ ಬಾಯಜೀದನು ತನ್ನ ಸೇವಕರಿಗೆ ತನ್ನ ಕೈಗಳನ್ನು ತೊಳೆಯಲು ಆಜ್ಞೆಯಿತ್ತನು. ಹಾಗೂ ಕೈಗಳನ್ನು ತೊಳೆದು ನೀರು ಅಂತಃಪುರದ ನಾಲ್ಕು ದಿಕ್ಕುಗಳಲ್ಲಿ ಪ್ರೋಷಣ ಮಾಡಿಸಿದನು. ತನ್ನ ಅಂತಃಪುರದಲ್ಲಿ ಹೇರಳ ಸಮೃದ್ಧಿ ಪ್ರಾಪ್ತವಾಗಲೆಂದು.

ಮಿರ್ಜಾ ಶಾಹ ಹುಸೇನ ಅರ್ಗಾನನ ಗಲಭೆ :

೯೦೩ ಹಿಜರಿಯಲ್ಲಿ ಬಾಬರನು ಪಂಜಾಬನ್ನು ಸ್ವಾಧೀನ ಪಡಿಸಿಕೊಂಡ ನಂತರ ದಿಲ್ಲಿಗೆ ಪ್ರಯಾಣ ಬೆಳೆಸಿದನು. ಬಾಬರನು ಠಟ್ಟಾದ ಒಡೆಯನಿಗೆ ಮಿರ್ಜಾ ಶಾಹ ಹುಸೇನ ಅರ್ಗಾನನ ಹೆಸರಿನ ಮೇಲೆ ಒಂದು ಆಜ್ಞಾ ಪತ್ರವನ್ನು ಜಾರಿಗೊಳಿಸಿದನು. ಅವನಿಗೆ ಮುಲ್ತಾನ ಹಾಗೂ ಅಕ್ಕಪಕ್ಕದಲ್ಲಿ ಖಬ್ಜಾ ಮಾಡುವಂತೆ ಆಜ್ಞೆ ಕೊಟ್ಟ. ಮಿರ್ಜಾ ಅರ್ಗಾನನು ಬಂದು ಯುದ್ಧ ಪ್ರವೀಣರಾದ ಸೈನಿಕರೊಂದಿಗೆ ಭಾಕರ ಕೋಟೆಯಿಂದ ಪ್ರಯಾಣ ಬೆಳೆಸಿದ ಹಾಗೂ ಹಾದಿಯಲ್ಲಿಯೇ ಮುಲ್ತಾನಿನ ಅಕ್ಕಪಕ್ಕ ಧ್ವಂಸಗೊಳಿಸತೊಡಗಿದ. ಮಹ್ಮೂದ ಲಂಕಾನಿಗೆ ಈ ಸಮಾಚಾರ ತಿಳಿದಾಗ ಕಳವಳಗೊಂಡನು.

ಶೇಖಬಾಹುದ್ದೀನ ಖುರೆಷಿ ಹಾಗೂ ಮೌಲಾನಾ ಬಹ್ಲೂಲ ಮಿರ್ಜಾಹುಸೇನ ಅರ್ಗಾನೂನ ಸೇವೆಯಲ್ಲಿ :

ಮಹ್ಮೂದ ಲಂಕಾನು ಸೈನ್ಯವನ್ನು ಕೂಡಿಸಿ ನಗರದ ಹೊರಗಡೆ ತಂಗಿದನು. ಅವನು ಶೇಖ ಬಾಹುದ್ದೀನ ಜಿಕ್ರಿಯಾ ಮುಲ್ತಾನಿಯ ಸಜ್ಜಾದ ನಷೀನ ಶೇಖ

ಬಾಹುದ್ದೀನ ಖುರೇಷಿಯವರೆಗೆ ತನ್ನ ಸಂದೇಶವಾಹಕರನ್ನಾಗಿಸಿ, ಶಾಹ ಹುಸೇನ ಅರ್ಗಾನೂನ ಹತ್ತಿರ ಕಳುಹಿಸಿದನು. ಹಾಗೂ ಮೌಲಾನಾ ಬಹ್ಲೂಲರನ್ನು ಕೂಡ ಅವರು ತನ್ನ ಕಾಲದ ಖ್ಯಾತವಾಗ್ಮಿ ಹಾಗೂ ಅಹ್ಲಾದಕರ ಪ್ರವಚನಕಾರರಾಗಿದ್ದರು. ಶೇಖ ಬಾಹುದ್ದೀನ ಖುರೇಷಿಯವರ ಜೊತೆಗೂಡಿಸಿ ರವಾನಿಸಿದ. ಈರ್ವರ ಸಂದೇಶ ವಾಹಕರು ಅರ್ಗಾನೂನರ ದರಬಾರದಲ್ಲಿ ಬಂದರು. ತಮ್ಮ ಆಗಮನದ ಉದ್ದೇಶ ತಿಳಿಸಿದರು. ಮಿರ್ಜಾ ಅರ್ಗಾನನನು ಉತ್ತರವಿತ್ತನು. ನಾನು ಇಲ್ಲಿ ಇದಕ್ಕಾಗಿ ಬಂದಿದ್ದೇನೆ. ಮಹ್ಮೂದ ಲಂಕಾನಿಗೆ ಪವಿತ್ರ ಶಿಕ್ಷಣಗೈಯಲು ಹಾಗೂ ಹಜರತ ಬಾಹುದ್ದೀನ ಜಿಕ್ರಿಯಾ ಮುಲ್ತಾನಿಯ ಪವಿತ್ರ ಗೋರಿಯ ತೀರ್ಥಯಾತ್ರೆಯನ್ನು ಗೈಯಲು ಹಜರತ್ ಮೌಲಾನಾ ಬಹ್ಲೂಲರು ಹೀಗೆಂದರು. ಎಷ್ಟೊಂದು ಒಳಿತಾಗುತ್ತಿತ್ತು. ತಾವು ಅಧ್ಯಾತ್ಮದಿಂದ ಮಹ್ಮೂದ ಲಂಕಾನಿಗೆ ಪ್ರಶಿಕ್ಷಣ ಕೊಟ್ಟರೆ. ಹೀಗೆ ಹಜರತ ಮೊಹ್ಮದ ಸಾಸಲ್ಲಮರು ಹಜರತ ಅವೇಸಬರನಿಗೆ ಶಿಕ್ಷಣ ವಿತ್ತರು. ತಮ್ಮ ಎರಡನೆಯ ಉದ್ದೇಶವು ಪೂರ್ಣಗೊಂಡಿತು. ಹಜರತ್ ಬಾಹುದ್ದಿನರ ಏಕನಾಮಿ ಹಾಗೂ ಅವರ ಪುತ್ರ ತಮ್ಮೆದುರಿಗೆ ಹಾಜರಿದ್ದಾರೆ. ನನ್ನ ಅಭಿಪ್ರಾಯ ಶೇಖ ಬಾಹುದ್ದೀನ ಖುರೇಷಿಯವರು ಮೌಲಾನಾ ಬಹ್ಲೂಲರವರ ಆಧರಪೂರ್ವಕ ಭಾಷಣವನ್ನು ಕೇಳಿ ಮಿರ್ಜಾ ಹುಸೇನ ಅರ್ಗಾನಿನ ಮೇಲೆ ಯಾವ ಪ್ರಭಾವ ಬೀಳಲಿಲ್ಲ. ಈರ್ವ ಸಂದೇಶವಾಹಕರು ಅಸಫಲರಾಗಿ ಮರಳಿದರು.

ಮಹ್ಮೂದ ಲಂಕಾನ ಮರಣ :

ಈ ದಿನಗಳಲ್ಲಿ ರಾತ್ರಿಯ ಸಮಯದಲ್ಲಿ ಮಹ್ಮೂದ ಲಂಕಾನ ನಿಧನವಾಯಿತು. ಕೆಲವು ಇತಿಹಾಸಕಾರರ ಹೇಳಿಕೆ ಇದು ಇದೆ. ಶಾಹಿ ಕುಟುಂಬದ ಗುಲಾಮ ಲಂಗರಖಾನನು ೯೩೧ ಹಿಜರಿಯಲ್ಲಿ ಮಹ್ಮೂದ ಲಂಕಾನಿಗೆ ವಿಷಕೊಟ್ಟು ಕೊಂದನೆಂದು ಈತನ ಆಡಳಿತಾವಧಿ (೨೭) ವರ್ಷವಾಗಿತ್ತು.

■

*

೬. ಹುಸೇನಶಾಹ ಸಾನಿ ತಂದೆ ಮಹ್ಮೂದಶಾಹ ಲಂಕಾ ಶುಜಾವುಲ್‌ಮುಲ್ಕ ಬುಖಾರಿಯ ಸತ್ತೆ

ಮಹ್ಮೂದಶಾಹ ಲಂಕಾನ ಮರಣದ ನಂತರ ಈ ಜನಾಂಗದ ಅನೇಕ ಜನರು ಬಂಡಾಯಗೈದು ಮೀರ್ಜಾ ಶಾಹ ಹುಸೇನ ಅರ್ಗಾನನನ್ನು ಕೂಡಿಕೊಂಡರು. ಇವರು ಶಕ್ತಿಯನ್ನು ಪ್ರಾಪ್ತಿಸಿ, ಮುಲ್ತಾನ ರಾಜ್ಯದ ಅನೇಕ ಕಸ್ಬಾಗಳನ್ನು ಸ್ವಾಧೀನ ಪಡಿಸಿಕೊಂಡರು. ಉಳಿದ ಸರದಾರರು ಮುಲ್ತಾನಿನಲ್ಲಿ ಮಹ್ಮೂದಶಾಹನ ಅಲ್ಪ ವಯಸ್ಸಿನ ಹುಡುಗನನ್ನು ಹುಸೇನಶಾಹನೆಂಬ ಬಿರುದು ಕೊಟ್ಟು ಪಟ್ಟಕ್ಕೆ ಕೂಡಿಸಿದರು. ಮತ್ತು ಇವನ ಹೆಸರಿನ ನಾಣ್ಯ ಹಾಗೂ ಪ್ರವಚನವನ್ನು ಜಾರಿಗೊಳಿಸಿದರು. ಹುಸೇನ ಶಾಹನ ಆಡಳಿತವು ಕೇವಲ ನಾಮಮಾತ್ರವಾಗಿತ್ತು. ಅಪ್ಪಟ ಪ್ರಭುತ್ವ ಶೇಖ ಶುಜಾವುಲ್‌ಮುಲ್ಕ ಬುಖಾರಿಯ ಕೈಯಲ್ಲಿತ್ತು. ಅವನು ಮಹ್ಮೂದಶಾಹನ ಅಳಿಯನಾಗಿದ್ದನು. ಇವನು ರಾಜ್ಯದ ಮಂತ್ರಿಯಾಗಿ ಆಡಳಿತದ ವ್ಯವಹಾರಗಳನ್ನು ನಿರ್ವಹಿಸತೊಡಗಿದನು.

ಮುಲ್ತಾನಿನ ಮೇಲೆ ಹುಸೇನ ಅರ್ಗಾನನ ಖಬ್ಜಾ :

ಶುಜಾವುಲ್‌ಮುಲ್ಕ ಬುಖಾರಿಯು ಅನುಭವ ರಹಿತ ಬುದ್ಧಿಗೇಡಿ ವ್ಯಕ್ತಿಯಾಗಿದ್ದನು. ಇವನು ಪರಿಣಾಮವನ್ನರಿಯದ ಸಂದೇಹಗ್ರಸ್ಥನಾಗಿದ್ದ. ಹೀಗಾಗಿ ಮುಲ್ತಾನಿಗೆ ಬಹಳಷ್ಟು ತೊಂದರೆಗಳನ್ನೆದುರಿಸ ಬೇಕಾಯಿತು. ಮೀರ್ಜಾ ಹುಸೇನ ಅರ್ಗಾನನನು ಕೋಟೆಯನ್ನು ಮುತ್ತಿದನು. ಈ ಕೋಟೆ ನಿವಾಸಿಗಳಿಗೆ ಅವಶ್ಯಕವಾದ ಧಾನ್ಯಗಳು ಹಾಗೂ ಇತರ ಸಾಮಾನುಗಳು ಇರಲಿಲ್ಲ. ಇದಲ್ಲದೆ ಶುಜಾವುಲ್‌ಮುಲ್ಕನು ಹಿಸಾರ ಮುಂದುವರಿಸಲು ಹಟವಿಡಿದನು. ಕೋಟೆಯ ನಿವಾಸಿಗಳು ಹಸಿವಿನಿಂದ ಮೃತ್ಯುವಿಗೆ ತುತ್ತಾಗುತ್ತಿದ್ದರು. ಕೆಲವು ತಿಂಗಳವರೆಗೆ ಇದೆ ಸ್ಥಿತಿಯಲ್ಲಿಯೇ ಕಳೆದವು. ಆಗ ಹುಸೇನ ಅರ್ಗಾನನನು ಮುಲ್ತಾನವನ್ನು ಗೆದ್ದುಕೊಂಡನು.

ಹುಸೇನ ಲಂಕಾನ ಬಂಧನ :

ಮುಲ್ತಾನ ಕೋಟೆಯನ್ನು ಗೆದ್ದುಕೊಂಡ ನಂತರ ಹುಸೇನ ಅರ್ಗಾನನನು ಹುಸೇನ ಲಂಕಾನನ್ನು ಬಂಧಿಸಿ ತನ್ನ ವಕೀಲರಿಗೊಪ್ಪಿಸಿದನು. ಶುಜಾವುಲ್‌ಮುಲ್ಕ ಬುಖಾರಿಯು ಕೂಡ ಬಂಧಿಸಲ್ಪಟ್ಟ ಹಾಗೂ ಅವನಿಂದ ಪುಷ್ಕಳ ಹಣವನ್ನು ವಸೂಲ ಮಾಡಿದರು. ಈ ಕಾಲದಲ್ಲಿ ಮುಲ್ತಾನವು ಅತಿಶಯವಾಗಿ ನಾಶಕ್ಕೊಳಗಾಯಿತು. ಮತ್ತು ಈ ಬಗೆಯ ಅಭಿಪ್ರಾಯವಾಗುತ್ತದೆ. ಈಗ ಅದನ್ನು ಪುನಃ ನೆಲೆಗೊಳಿಸುವುದು ಕಷ್ಟಕರವಾಗುವುದು. ಹುಸೇನ ಅರ್ಗನೂನನು ಖ್ವಾಜಾ ಷಮ್ಸೊದ್ದೀನನನ್ನು ಮುಲ್ತಾನದ ಹಾಶಿಮ ಹಾಗೂ ಲಂಗರಖಾನನನ್ನು (ದಸ್ತೆಪೇಷ)ಯನ್ನಾಗಿ ನಿಯಮಿಸಿ ತಾನು ಠಟ್ಟಾಕ್ಕೆ ಮರಳಿದನು. ಲಂಗರಖಾನನು ಮುಲ್ತಾನ ನಿವಾಸಿಗಳಿಗೆ ಭರವಸೆಯನ್ನು ನೀಡುತ್ತ, ಅವರ ಮನವನ್ನು ಒಲಿಸುತ್ತ, ಈ ನಗರವು ಪುನಃ ನೆಲೆಗೊಳಿಸಲಾಗುವುದು. ಇವನು ನಗರವಾಸಿಗಳನ್ನು ತನ್ನ ಜೊತೆಗೂಡಿಸಿ ಖ್ವಾಜಾ ಷಮ್ಸುದ್ದೀನನನ್ನು ಗಡಿಪಾರು ಮಾಡಿ ತಾನು ಮುಲ್ತಾನಿನ ಮೇಲೆ ಖಬ್ಜಾ ಪಡೆದನು.

ಬಾಬರನ ಮರಣದ ನಂತರ ಹುಮಾಯುನನು ಮಿರ್ಜಾ ಕಾಮ್ರಾನನಿಗೆ ಪಂಜಾಬದ ಒಡೆಯನೆಂದು ನಿಯಮಿಸಿದನು. ಮಿರ್ಜಾ ಕಾಮ್ರಾನನು ಲಂಗರಖಾನನಿಗೆ ತನ್ನ ಬಳಿ ಕರೆಯಿಸಿ ಅವನಿಗೆ ಮುಲ್ತಾನಿನ ಬದಲಾಗಿ ಕಾಬುಲದ ರಾಜ್ಯವನ್ನು ಕರುಣಿಸಿದ. ಲಂಗರಖಾನನು ಮಿರ್ಜಾ ಕಾವರ್ರಾನನನ್ನು ಲಾಹೊರನಲ್ಲಿ ಭೇಟಿಯಾಗಿದ್ದನು. ಅಂದಿನ ದಿನಗಳಲ್ಲಿ ನಗರದ ಹೊರಗಡೆ ಒಂದು ಸ್ಥಳದಲ್ಲಿ ತಂಗಿದ್ದನು. ಈ ಸ್ಥಳವು ಈಗ "ದಾಯರ ಲಂಗರಖಾನ" ಎಂದು ಖ್ಯಾತಗೊಂಡಿದೆ. ಹಾಗೂ ಲಾಹೊರಿನ ಒಂದು ಓಣಿಯಾಗಿದೆ. ಲಂಗರಖಾನಿನ ನಂತರ ಮುಲ್ತಾನಿನ ಬಾದಶಾಹರು ದಿಲ್ಲಿಯ ಆಡಳಿತಕ್ಕೊಳಗಾದರು. ಹುಮಾಯುನನ ನಂತರ ಒಬ್ಬರಂತೆ ಮತ್ತೊಬ್ಬರು ಇದರ ಮೇಲೆ ಷೇರಶಾಹ ಸೂರಿ, ಸಲೀಮಶಾಹ, ಅಕ್ಬರ ಹಾಗೂ ಜಾಹಂಗೀರ ಆಡಳಿತ ಮಾಡಿದರು.

■

XIII. ಕಾಶ್ಮೀರದ ಸುಲ್ತಾನರು

*

ಕಾಶ್ಮೀರ ಪ್ರದೇಶ

ಕಾಶ್ಮೀರವು ವಿಶ್ವದ ಶ್ರೇಷ್ಠ ಪ್ರದೇಶಗಳಲ್ಲಿ ಒಂದಾಗಿದೆ. ಈ ಭೂ ಭಾಗವು ತನ್ನ ಅರ್ಥಪೂರ್ಣ ವೈಶಿಷ್ಟತೆಯಿಂದ ತನ್ನನ್ನು ತಾನೆ ಉದಾಹರಣೆಯಾಗಿದೆ. ಮಿರ್ಜಾ ಹೈದರ ದೊಗ್ಲಾತನು ಒಂದು ಪುಸ್ತಕವನ್ನು ಬರೆದಿದ್ದಾನೆ. ಇದರಲ್ಲಿ ಕಾಶ್ಮೀರದ ನಿಜವಾದ ಸ್ಥಿತಿಗತಿಗಳನ್ನು ಉಲ್ಲೇಖಿಸಿದ್ದಾನೆ. (ಇತಿಹಾಸಕಾರನಾದ) ಫರಿಶ್ತಾನ ಬಳಿಯಲ್ಲಿ ಮಿರ್ಜಾ ಹೈದರ ದೊಗ್ಲಾತನ ಹೇಳಿಕೆಗಳು ಸಂಪೂರ್ಣ ಸತ್ಯವಾಗಿವೆ. ಪ್ರಯುಕ್ತ ಅವುಗಳನ್ನೆ ಸಂಕ್ಷಿಪ್ತಗೊಳಿಸಿ ತನ್ನ ಇತಿಹಾಸ ರಚಿಸುತ್ತಾನೆ.

ಭೌಗೋಳಿಕ ಸ್ಥಿತಿಗತಿಗಳು :

ಕಾಶ್ಮೀರ ಪ್ರಾಂತವು ಪಂಜಾಬದ ಒಂದು ಸ್ಥಳ ಪಗ್ಲಿಯ ದಕ್ಷಿಣ ಪೂರ್ವದಲ್ಲಿದೆ. ಈ ದೇಶವು ಎರಡು ಬೆಟ್ಟಗಳ ನಡುವೆ ಸುತ್ತುವರಿದಿದೆ. ಈ ಕಣಿವೆಯ ಉದ್ದ ೧೦೦ ಹರದಾರಿಯು ಹಾಗೂ ಅಗಲ ಹತ್ತರಿಂದ ಇಪ್ಪತ್ತು ಹರದಾರಿಯ ಅಳತೆಯುಳ್ಳದ್ದಾಗಿದೆ. ಈ ಎಲ್ಲಾ ಭೂವಲಯವು ಫಲವತ್ತಾದ ಹಾಗೂ ಜಲಭರಿತ(ಹಚ್ಚಹಸಿರಾದ)ವಾಗಿದೆ. ಇಲ್ಲಿಯ ಭೂಮಿಯು ನಾಲ್ಕು ಪ್ರಕಾರದ್ದಾಗಿದೆ. ಒಂದು ಭಾಗಕ್ಕೆ ಜಲಭರಿತ ಒಕ್ಕಲುತನವೆನ್ನುವರು. ಮತ್ತು ಇದರಲ್ಲಿ ಅತ್ಯುತ್ತಮ ಕೇಸರ ಬೆಳೆಯುತ್ತದೆ. ಎರಡನೆಯ ಭಾಗಕ್ಕೆ ಶಾಸ್ತ್ರೀ ಎನ್ನುವರು. ಮೂರನೆಯ ಭಾಗ ತೋಟಗಳಿಂದ ಕೂಡಿದೆ ಹಾಗೂ ನಾಲ್ಕನೆಯ ಭಾಗವು ಮೈದಾನಗಳಿಂದ ಕೂಡಿದೆ. ಕಾಶ್ಮೀರದ (ಬಯಲು) ಮೈದಾನಗಳು, ನದಿಗಳ ದಡದ ಮೇಲೆ ಇವೆ. ಇವುಗಳಲ್ಲಿ ಬಗೆಬಗೆಯ ಹೂಗಳು, ಸೋಸನ, ಬನಫ್ಶಾ, ಸೇವಂತಿಗೆ, ನಸ್ನೀನ, ನಸ್ತರೀನ ಬಿಳಿ ಗುಲಾಬಿ ಸೂಕಲ (ಒಂದು ವಿಧದ ಸುಂಗಧ ಹುಲ್ಲು) ನರ್ಗಿಸ (ಕಣ್ಣಿನಾಕಾರದ ಹೂ) ಹಾಗೂ ಯಾಸ್ಮೀನ ಮುಂತಾದವು ಹೆಚ್ಚಾಗಿ ದೊರೆಯುತ್ತವೆ.

ಕಾಲ :

ಈ ಭೂಮಿಯಲ್ಲಿ ತೇವು ಹೆಚ್ಚಾಗಿರುವುದರಿಂದ ಇಲ್ಲಿ ಒಕ್ಕಲುತನ ನಡೆಯುವುದಿಲ್ಲ. ಹೀಗಾಗಿ ಇದು ಬಂಜರವಾಗಿದೆ. ಆದರೆ ಇದರ ಹಾಳು ಸ್ಥಿತಿಯು ಕೂಡ ಸೌಂದರ್ಯಯುಕ್ತವಾಗಿದೆ. ಇದರ ಮೇಲೆ ಅನೇಕ ಜನವಸತಿಗಳು ನಿವಾಳಿಸಬಹುದು. ಇರಾನಿನ ಹಾಗೆ ಇಲ್ಲಿಯೂ ನಾಲ್ಕು ಬೆಳೆ (ಫಸಲ)ಗಳು ಬೆಳೆಯುತ್ತವೆ. ಬೇಸಿಗೆಯ ಕಾಲದಲ್ಲಿ ಉಷ್ಣತೆ ಕಡಿಮೆ ಇರುತ್ತದೆ. ಕಾಲವು ಅತಿ ಹಿತಕರವಾಗಿರುತ್ತದೆ. ಮತ್ತು ಬಿಸಿಯಂತೂ ಗೊತ್ತಾಗುವುದಿಲ್ಲ. ಚಳಿಗಾಲದಲ್ಲಿಯೂ ಹಿಮಪಾತವಾಗುತ್ತದೆ. ಮತ್ತು ಚಳಿಯು ಅತಿಯಾಗಿ ಆಗುತ್ತದೆ. ಆದಾಗ್ಯೂ ಪ್ರಕೃತಿಯ ಮೇಲೆ ಯಾವ ಬಗೆಯ ಕೆಟ್ಟ ಪರಿಣಾಮ ಬೀರುವುದಿಲ್ಲ. ಆದರೂ ಸೂರ್ಯನು ಮೋಡಗಳಲ್ಲಿ ಮರೆಯಾದಾಗ ಆ ಸಮಯದಲ್ಲಿ ಸೆರೆಯ ಅವಶ್ಯಕತೆ ಬೀಳುತ್ತದೆ. ಇದರಿಂದ ದೇಹದ ಉಷ್ಣತೆಯನ್ನು ನಿಯಂತ್ರಣದಲ್ಲಿಡಬಹುದು.

ಮನೆಗಳು ಹಾಗೂ ಪೇಟೆಗಳು :

ಕಾಶ್ಮೀರದಲ್ಲಿ ಮನೆಗಳು ಸಾಜ ಕಟ್ಟಿಗೆಯಿಂದ ಮಾಡಲಾಗುತ್ತದೆ. ಮತ್ತು ಅನೇಕ ಮನೆಗಳು ಐದು ಭಾಗಗಳಲ್ಲಿ ಸಮಾವೇಶಗೊಳ್ಳುತ್ತವೆ. ಪ್ರತಿ ಭಾಗದಲ್ಲಿ ಬರಾಮ್ದೆ (ಹೊರಬರುವ), ಕೋಟೆಗಳು, ಕಿಟಕಿಗಳು ಹಾಗೂ ಬಾಗಿಲುಗಳು ಇರುತ್ತವೆ. ಮತ್ತು ಈ ಮನೆಗಳು ಬಗೆಬಗೆಯ ಅಲಂಕಾರಗಳಿಂದ ಸಜ್ಜೀಕರಿಸುತ್ತಾರೆ. ಇದರಿಂದಾಗಿ ಅವು ಬಹು ಸುಂದರವಾಗಿ ಕಾಣುತ್ತವೆ. ಪೇಟೆಗಳಲ್ಲಿ, ನಗರಗಳಲ್ಲಿ ಹಾಗೂ ಗಲ್ಲಿಗಳಲ್ಲಿ ಕಲ್ಲಿನ ಹಾಸಿಗೆ ಇರುತ್ತದೆ. ಪೇಟೆಗಳು ಸಾಮಾನ್ಯವಾಗಿ ಒಂದಾಗಿರುತ್ತವೆ. ಬಟ್ಟೆಯ ವ್ಯಾಪಾರಿ ಹಾಗೂ ಸಣ್ಣ ಪುಟ್ಟ ವಸ್ತು ಮಾರಾಟಗಾರರ ಹೊರತಾಗಿ ಯಾರೂ ಇರುವುದಿಲ್ಲ. ಬಣಜಿಗ, ಅತ್ತಾರ(ಸುವಾಸನೆ ತೈಲ), ಹಾಗೂ ಹಣ್ಣು ಹಂಪಲುಗಳ ವ್ಯಾಪಾರಿ ಮುಂತಾದವರು ಈ ಪೇಟೆಯಲ್ಲಿ ಕೂಡುವುದಿಲ್ಲ. ಚಿನಿವಾಲರು ತಮ್ಮ ಮನೆಯಲ್ಲಿಯೆ ಕೆಲಸ ಮಾಡುತ್ತಾರೆ.

ಹಣ್ಣುಗಳು :

ಮೊಗಲ ಸರದಾರರ ಬರುಹೋಗುವುದು ಪ್ರಾರಂಭವಾಯಿತು. ಪೇಟೆಗಳ ಸೌಂದರ್ಯ ಹೆಚ್ಚಾಯಿತು. ಮತ್ತು ಪ್ರತಿ ಉದ್ಯೋಗದವರು ಅಂಗಡಿಗಳಲ್ಲಿ ಕೂಡತೊಡಗಿದರು. ಫಲಗಳಲ್ಲಿ ಷಹೂತ, ಕೈಲಾಸ, ಅಂಗೂರ, ಅನಾಬ, ಸೇಬ, ನಾಷಾತಿ, ಷಪ್ತಾಲು, ಪಿಸ್ತಾ ಹಾಗೂ ಅಂಜೀರ ಮುಂತಾದ (ಉಪ್ಪ ನೀರಳೆ, ದ್ರಾಕ್ಷಿ) ಫಲಗಳು ಹೆಚ್ಚಾಗಿ ಬೆಳೆಯುತ್ತವೆ. ಕಾಶ್ಮೀರದಲ್ಲಿ ಸಾಮಾನ್ಯವಾಗಿ ತಿನ್ನುವುದಿಲ್ಲ. ಆದರೆ ರೇಷ್ಮೆಯ ಹುಳವನ್ನು ಸಾಕಲು ಬೆಳೆಸುತ್ತಾರೆ. ಇಲ್ಲಿ ಫಲಗಳನ್ನು ಹೆಚ್ಚಾಗಿ ಬೆಳೆಯುತ್ತಾರೆ. ಪ್ರಯುಕ್ತ ಇವುಗಳ ಮಾರಾಟ ಹಾಗೂ ಖರೀದಿಸುವ ವಾಡಿಕೆ ಇಲ್ಲ.

ಉದ್ಯಾನ-ತೋಟಗಳು :

ಇಲ್ಲಿಯ ತೋಟಗಳು (ಉದ್ಯಾನಗಳು) ನಾಲ್ಕು ಗೋಡೆಗಳಿಂದ ಆವರಿಸುವುದಿಲ್ಲ. ತೆರೆದಾಗಿರುತ್ತದೆ. ಯಾವನಾದರೂ ಉದ್ಯಾನದಲ್ಲಿ ಹೋಗಿ ತಾನು ಬಯಸಿದ ಫಲವನ್ನು ತಿನ್ನಬಹುದು. ಒಂದವಸರ ಯಾರಾದರು ತಡೆದರೆ ಒಳ್ಳೆಯದಲ್ಲವೆಂದು ಭಾವಿಸುತ್ತಾರೆ.

ಕಾಶ್ಮೀರದ ಸೌಂದರ್ಯದ ಬಣ್ಣನೆ :

ಯಾವ ದಿನಗಳಲ್ಲಿ ಕಾಶ್ಮೀರ ದಿಲ್ಲಿ ಹಾಗೂ ಲಾಹೋರ ಬಾದಶಾಹರ ಖಬ್ಜಾದಲ್ಲಿದ್ದವು. ಅಂದು ಹಿಂದುಸ್ತಾನದ ಜನರು ಈ ಕಣಿವೆಯಲ್ಲಿ ಬಹಳಷ್ಟು ಸಂಖ್ಯೆಯಲ್ಲಿ ಬರುಹೋಗುತ್ತಿದ್ದರು. ೯೯೫ ಹಿಜರಿಯಲ್ಲಿ ಅಕ್ಬರನು ಕಾಶ್ಮೀರವನ್ನು ಗೆದ್ದುಕೊಂಡನು. ಆ ತರುವಾಯ ರಸಿಕರು, ವಿದ್ಯಾಸಕ್ತಿಯುಳ್ಳ ಜನರು ಈ ರಾಜ್ಯದಲ್ಲಿ ಆಗಮನ, ನಿರ್ಗಮನ ಪ್ರಾರಂಭವಾಯಿತು. ಕವಿಗಳು ಈ ದೇಶದ ವರ್ಣನೆಯಲ್ಲಿ ಅನೇಕ ಪದ್ಯಗಳನ್ನು ಹಾಡಿದ್ದಾರೆ. ಫೈಜಿ ಉರಫಿ ಹಾಗೂ ಇತರ ಹೆಸರು ಪಡೆದ ಕವಿಗಳು ಕಾಶ್ಮೀರ ಕುರಿತು ಏನೆಲ್ಲವನ್ನು ರಚಿಸಿದ್ದಾರೆ. ಅದು ವಿಶೇಷ ಹಾಗೂ ಸಾಮಾನ್ಯರಲ್ಲಿ ಖ್ಯಾತಿಗೊಂಡಿದೆ.

ಮಂದಿರಗಳ ನಿರ್ಮಾಣ :

ಕಾಶ್ಮೀರದಲ್ಲಿ ಆಶ್ಚರ್ಯಕರವಾದ ವಸ್ತುಗಳು ಹೇರಳವಾಗಿವೆ. ಈ ರಾಜ್ಯದಲ್ಲಿ ಸುಮಾರು ೧೫೦ ಮಂದಿರಗಳು ಇವೆ. ಈ ಮಂದಿರದ ನಿರ್ಮಾಣದಲ್ಲಿ ಕಲ್ಲು ಬಳಿಸಲ್ಪಟ್ಟಿದೆ. ಈ ಕಲ್ಲಿನ ತುಂಡುಗಳಿಗೆ ಯಾವ ಬಗೆಯ ಮಸಾಲೆ ಇಲ್ಲದೆ ಒಂದರ ಮೇಲೊಂದು ಇಡಲಾಗಿದೆ. ಈ ತುಂಡುಗಳನ್ನು ಈ ರೀತಿಯಾಗಿ ಜೋಡಿಸಿ ಇಟ್ಟಿದ್ದಾರೆ. ಇವುಗಳಲ್ಲಿ ಯಾವುದೆ ಬಗೆಯ ಬಿರುಕು ಇಲ್ಲ. ಈ ಬಿರುಕಿನಲ್ಲಿ ಅತಿ ಸಣ್ಣದಾದ ವಸ್ತುಕೂಡ ಹೊಗಲಾರದು. ಇದರಿಂದ ನಾವು ಅಂದಾಜು ಮಾಡಬಹುದು. ಕಲ್ಲನ್ನು ಕಟಿಯುವಾಗ ಎಷ್ಟೊಂದು ಪರಿಶ್ರಮ ಹಾಗೂ ಉತ್ಕೃಷ್ಟವಾಗಿ ಕೆಲಸ ಮಾಡಿಸಲಾಗಿದೆ. ಇವುಗಳನ್ನು ಪರಸ್ಪರ ಹೇಗೆ ಅಂಟಿಕೊಂಡಿವೆ. ಹಾಗೂ ಹೇಗೆ ಎತ್ತಿ ಇಟ್ಟಿದ್ದಾರೆ. ಏಕೆಂದರೆ ಒಂದು ಕಲ್ಲು ಮೂರು ಗಜದಿಂದ ೮ ಗಜ ಉದ್ದ ಹಾಗೂ ೧ ಗಜದಿಂದ ೫ ಗಜದವರೆಗೆ ಅಗಲವಿದೆ. ಇಂತಹ ಕಲ್ಲುಗಳನ್ನು ಒಂದರ ಮೇಲೆ ಇನ್ನೊಂದ ಬಿರುಕು ಕಾಣದ ಹಾಗೆ ಹೇಗೆ ಇಟ್ಟಿದ್ದಾರೆಂಬ ಪ್ರಶ್ನೆಗಳಿಗೆ ಉತ್ತರ ದೊರೆಯುವುದಿಲ್ಲ. ಈ ಕಲ್ಲುಗಳಲ್ಲಿ ಅನೇಕ ಕಲ್ಲುಗಳು ಒಂದೆ ಪ್ರಕಾರದ್ದಾಗಿವೆ. ಮಂದಿರದ ಸುತ್ತಮುತ್ತ ಪೌಳಿ ಇದೆ. ಅದರ ನಾಲ್ಕು ಭಾಗಗಳು (೩೦೦) ಗಜ ಉದ್ದವಿದೆ. ಗೋಡೆಯ ಎತ್ತರ ೩೦ ಗಜ ಹಾಗೂ ಕೆಲವೆಡೆ ಇದಕ್ಕಿಂತಲೂ ಕಡಿಮೆ ಇದೆ. ಪೌಳಿಯ ಒಳಗಡೆ ಎಲ್ಲಾ ಕಟ್ಟಡವು ಕಲ್ಲಿನದಾಗಿದೆ. ಎಲ್ಲವೂ ಕಲ್ಲಿನ ಕಂಬಗಳ ಮೇಲೆ ನಿಂತಿವೆ. ಈ ಕಂಬಗಳಿರುವ ಮಾಡಗಳು ೩ -೪ ಗಜದವರೆಗೆ ಅಗಲ ಇವೆ. ಕೆಲವು ಮಾಡಗಳಲ್ಲಿ ಚಿತ್ರಕಾರಿ

ಹಾಗೂ ಚಿತ್ರಗಳು ಕೂಡ ಮಾಡಲ್ಪಟ್ಟಿವೆ. ಯಾವುದೊಂದು ಚಿತ್ರದಲ್ಲಿ ಅಳುವ ಮುಖ ಕಾಣುತ್ತಿದ್ದರೆ, ಇನ್ನೊಂದರಲ್ಲಿ ನಗುತ್ತಿರುವ ಮುಖ ಕಾಣುತ್ತದೆ. ಈ ಚಿತ್ರಗಳನ್ನು ನೋಡಿ ಸೋಜಿಗವಾಗುತ್ತದೆ. ನಿರ್ಮಿಸುವವರು ಎಷ್ಟು ಶ್ರಮಪಟ್ಟು ಕೆಲಸ ಮಾಡಿದ್ದಾರೆ. ವಠಾರದ ಮಧ್ಯದಲ್ಲಿ ಕಲ್ಲಿನಿಂದ ನಿರ್ಮಿಸಿದ ಎತ್ತರವಾದ ಖುರ್ಚಿ ಇದೆ. ಕುರ್ಚಿಯ ಮೇಲೆ ಗುಮ್ಮಟವಿದೆ. ಸಂಕ್ಷಿಪ್ತವಾಗಿ ಹೇಳಬೇಕಾದರೆ ಈ ಮಂದಿರಗಳ ಸೌಂದರ್ಯ ಹಾಗೂ ಮನಮೋಹಕವು ತಮಗೆ ತಾವೆ ಉದಾಹರಣೆಯಾಗಿವೆ. ನಿರ್ಭೀತರಾಗಿ ಇದು ಹೇಳಬಹುದು. ಈ ಮಂದಿರಗಳ ಸಮಾನ ವಿಶ್ವದಲ್ಲಿ ಮತ್ತೆಲ್ಲಿಯೂ ಇಲ್ಲ.

ಚಿತ್ರವಿಚಿತ್ರ ಹೌಜ :

ಕಾಶ್ಮೀರದಲ್ಲಿ ಎರಡನೆಯ ಚಿತ್ರವಿಚಿತ್ರ ವಸ್ತು ಇದೆ. ಇಲ್ಲಿಯ ಒಂದು ಜಿಲ್ಲಾ "ಬ್ರೇಕ"ನಲ್ಲಿ ಒಂದು ಬೆಟ್ಟವಿದೆ. ಬೆಟ್ಟದ ಕೆಳಗೆ ಒಂದು ಗುಹೆ ಇದೆ. ಅದರ ಆಕಾರ ಹೌಜನಂತಿದೆ. ಈ ಹೌಜಿನ ತಳದಲ್ಲಿ ಒಂದು ಛೇದವಿದೆ. ಈ ಹೌಜ ಇಡೀ ವರ್ಷ ಬರಿದಾಗಿರುತ್ತದೆ. ಆದರೆ ಯಾವಾಗ ಸೂರ್ಯನು ನಕ್ಷತ್ರ ಪುಂಜಗಳೊಳ ಪ್ರವೇಶಗೊಂಡಾಗ ತಳದಲ್ಲಿದ್ದ ಛೇದದಿಂದ ನೀರು ಬರತೊಡಗುತ್ತದೆ. ಮತ್ತು ಹೌಜ ತುಂಬುತ್ತದೆ. ರಂಧ್ರದಿಂದ ನೀರು ರಭಸವಾಗಿ ಉಕ್ಕುತ್ತ ಹೊರಗೆ ಚಲ್ಲುತ್ತದೆ. ಅಲ್ಲದೆ ಭೂಮಿಯ ಎರಡು ಮೂರು ಮೈಲಿ ದೂರದವರೆಗೆ ಕಂಪನಗೊಳ್ಳುತ್ತದೆ. ಹಲವು ದಿನಗಳವರೆಗೆ ಇದ್ದು ಕ್ರಮೇಣ ಈ ಉಕ್ಕುವ ಪ್ರಕ್ರಿಯೆ ಕಡಿಮೆಯಾಗುತ್ತ ಹೋಗುತ್ತದೆ. ಹಾಗೂ ಹೌಜ ಯಥಾ ಪ್ರಕಾರ ಒಣಗಿ ಹೋಗುತ್ತದೆ. ಇಡೀ ವರ್ಷ ಹೀಗೆಯೇ ಇರುತ್ತದೆ. ಈ ಹೌಜಿನ ರಂಧ್ರವನ್ನು ಗಟ್ಟಿಯಾಗಿ ಬಂದು ಮಾಡಿದರೂ ಹೊತ್ತಿಗನುಗುಣವಾಗಿ ಯಥಾ ಪ್ರಕಾರ ಉಕ್ಕಿ ಈ ರಂದ್ರವನ್ನು ಬಿಚ್ಚುತ್ತದೆ. ಮತ್ತು ಹೌಜ ತುಂಬಿ ನೀರು ಹೊರಗೆ ಬರುತ್ತದೆ.

ಚಿತ್ರವಿಚಿತ್ರವಾದ ವೃಕ್ಷ :

ಕಾಶ್ಮೀರದ ೩ನೇ ಚಿತ್ರವಿಚಿತ್ರ ವಸ್ತು ಬಿದುರಿನ ಗಿಡವಾಗಿದೆ. ಇದು ಕಾಶ್ಮೀರದ "ನಾಕಾಮ" ಹೆಸರಿನ ಗ್ರಾಮದಲ್ಲಿದೆ. ಈ ಗಿಡದ ಎತ್ತರವು ತನ್ನನ್ನು ತಾನೆ ಉದಾಹರಣೆಯಾಗಿದೆ. ಮಹಾಮಹಾದ ಬಿಲ್ಲುಗಾರರು ಒಂದಸರ ಇಚ್ಛಿಸಿದರೆ ತಮ್ಮ ಬಾಣವನ್ನು ಗಿಡದ ಕೊನೆಯ ಟೊಂಗೆಗೆ ಮುಟ್ಟಿಸಲಾರ. ಯಾವನೊಬ್ಬನು ಈ ಗಿಡದ ಒಂದು ಟೊಂಗೆಯನ್ನು ಹಿಡಿದು ಅಲ್ಲಾಡಿಸಿದಾಗ ಪೂರ್ಣ ಗಿಡವೇ ಕಂಪನಗೊಳ್ಳುತ್ತದೆ.

ಶಕುನ ಬುಗ್ಗೆ :

ಕಾಶ್ಮಿರದ "ದೇವಸರಾ" ಹೆಸರಿನ ಸ್ಥಳದಲ್ಲಿ ಒಂದು ಬುಗ್ಗೆ ಇದೆ. ಈ ಬುಗ್ಗೆಯು ಹೌಜಿನಂತಿದೆ. ಸುತ್ತಮುತ್ತಲೂ ನೆರಳು ನೀಡುವ ವೃಕ್ಷಗಳಿವೆ. ಮತ್ತು ಇವುಗಳಿಂದಲೇ

ಪರಿಸರದಲ್ಲಿ ಸೌಂದರ್ಯ ಹೆಚ್ಚಳಗೊಂಡಿದೆ. ನಗರವಾಸಿಗಳು ಈ ಬುಗ್ಗೆಯಿಂದಲೇ ಶಕುನವನ್ನು ನೋಡಿಕೊಳ್ಳುತ್ತಾರೆ. ಶಕುನ ನೋಡುವ ರೀತಿ ಹೀಗಿದೆ. ಅಕ್ಕಿಯನ್ನು ಬೇಯಿಸಿ ಒಂದು ಬಟ್ಟಲಲ್ಲಿ ಹಾಕಿ ಅದರ ಬಾಯಿಯನ್ನು ಮಣ್ಣಿನಿಂದ ಮುಚ್ಚುತ್ತಾರೆ. ಈ ಬುಗ್ಗೆಯಲ್ಲಿ ಬಿಸಾಡಿ ಬಿಡುತ್ತಾರೆ. ಇದರಲ್ಲಿ ಶಕುನ ಕೇಳುವವನ ಹೆಸರು ಬರೆದಿರುತ್ತದೆ. ಈ ಬಟ್ಟಲು ಐದು ವರ್ಷ, ಐದು ತಿಂಗಳ, ಅಥವಾ ಐದು ದಿನಗಳ ನಂತರ ಬುಗ್ಗೆಯ ತಳದಿಂದ ಮೇಲೆ ಬರುತ್ತದೆ. ಜನರು ಇದನ್ನು ಬಿಚ್ಚಿ ನೋಡುತ್ತಾರೆ. ಒಂದವಸರ ಬೇಯಿಸಿದ ಅಕ್ಕಿ ತನ್ನ ಅಸಲಿ ಸ್ಥಿತಿಯಲ್ಲಿದ್ದರೆ ಅದಕ್ಕೆ ಒಳ್ಳೆಯ ಶಕುನವೆಂದು ತಿಳಿದುಕೊಳ್ಳುತ್ತಾರೆ. ಒಂದವಸರ ಅವು ಕೊಳೆತು ಹೋದರೆ ಅದು ಅಪಶಕುನವೆಂದು ನಂಬಲಾಗುತ್ತದೆ.

ಮನಸೆಳೆಯುವ ಕಟ್ಟಡ :

ಕಾಶ್ಮೀರದಲ್ಲಿ ಒಂದು ಸರೋವರ ಇದೆ. ಅದರ ಹೆಸರು “ಖವಸರ”. ಇದರ ಉದ್ದಗಲದ ಅಳತೆಯು ೭ ಹರದಾರಿ ಇದೆ. ಇದರ ಮಧ್ಯ ಕಾಶ್ಮೀರದ ಸುಲ್ತಾನ ಜೈನುಲಾಬೀದಿನನು ಒಂದು ಕಟ್ಟಡವನ್ನು ನಿರ್ಮಾಣಗೊಳಿಸಿದನು. ಇದು ಸೌಂದರ್ಯ ಹಾಗೂ ಮನಮೋಹಕದಲ್ಲಿ ತನ್ನನ್ನು ತಾನೆ ಉದಾಹರಣೆಯಾಗಿದೆ. ಈ ಕಟ್ಟಡವು ಈ ರೀತಿಯಿಂದ ನಿರ್ಮಾಣಗೊಂಡಿದೆ. ಮೊದಲಂತು ಕೆರೆಯಲ್ಲಿ ಕಲ್ಲುಗಳನ್ನು ಹಾಸಿದರು. ಯಾವಾಗ ಈ ಕಲ್ಲಿನ ಮೇಲ್ಮಟ್ಟ ನೀರಿನ ಮೇಲೆ ಬಂದಾಗ ಇದರ ಮೇಲೆ ೪೦೦ ಚದರ ಗಜದ ಒಂದು ಕಟ್ಟೆಯನ್ನು ಕಟ್ಟಲಾಯಿತು. ಈ ಕಟ್ಟೆಯು ನೀರಿನ ಮಟ್ಟಕ್ಕಿಂತ ೧೦ ಗಜ ಎತ್ತರವಿದೆ. ಈ ಕಟ್ಟೆಯ ಮೇಲೆ ಅಸಲು ಕಟ್ಟಡವನ್ನು ನಿರ್ಮಾಣಗೊಳಿಸಲಾಗಿದೆ. ಈ ಕಟ್ಟಡದ ಸುತ್ತಲು ನೆರಳು ನೀಡುವ ವೃಕ್ಷಗಳನ್ನು ಬೆಳೆಯಿಸಿ ಇದರ ಸೌಂದರ್ಯವನ್ನು ಹೆಚ್ಚಿಸಿದ್ದಾರೆ, ಯಾರು ಈ ಕಟ್ಟಡವನ್ನು ನೋಡಿದವರೆಲ್ಲ ಇಂತಹ ಸುಂದರವಾದ ಕಟ್ಟಡವು ವಿಶ್ವದಲ್ಲಿ ಇನ್ನೊಂದಿಲ್ಲವೆನ್ನುವರು.

ಇದು ೨ನೆಯ ಸುಂದರವಾದ ಕಟ್ಟಡ. ಇದನ್ನು ಸುಲ್ತಾನ ಜೈನುಲಾಬಿದ್ದೀನನು ಶ್ರೀನಗರದಲ್ಲಿ ನಿರ್ಮಾಣಗೊಳಿಸಿದನು. ಕಾಶ್ಮೀರವಾಸಿಗಳು ಈ ಕಟ್ಟಡದ ಹೆಸರು “ರಾಜಧಾನಿ” ಎಂದು ಇಟ್ಟರು. ಈ ಕಟ್ಟಡವು ೨೦ ದರ್ಜೆಗಳಲ್ಲಿ ಆವರಿಸಿದೆ. ಕೆಲವು ದರ್ಜೆಗಳಲ್ಲಿ ಕೋಠಡಿಗಳು, ಒಳಂಗಳ ಹಾಗೂ ಕಿಟಕಿಗಳು ಇತ್ಯಾದಿಗಳ ಸಂಖ್ಯೆ ಐವತ್ತರವರೆಗೂ ಇದೆ. ಈ ಚಿತ್ರವಿಚಿತ್ರವಾದ ಕಟ್ಟಡವು ಸರ್ವಸ್ವವವು ಕಟ್ಟಿಗೆಯಿಂದ ಮಾಡಲಾಗಿದೆ ವಿಶ್ವದ ಉತ್ತಮ ಹಾಗೂ ಪ್ರಖ್ಯಾತಗೊಂಡ ಕಟ್ಟಡಗಳು ನಿರ್ಮಾಣದ ರೀತಿ ಹಾಗೂ ಸೌಂದರ್ಯದಲ್ಲಿ ಇದಕ್ಕಿಂತಲೂ ಚೆನ್ನಾಗಿರಬಹುದು ಆದರೆ ದಂಗು ಬಡಿಸುವ ಕುಶಲ ವೃತ್ತಿ ಈ ಕಟ್ಟಡದಲ್ಲಿ ದೊರೆಯುತ್ತದೆ. ಇಂತಹ ಕುಶಲತೆ ಇದು ಇನ್ನೊಂದು ಸ್ಥಳದಲ್ಲಿ ದೊರೆಯುವುದಿಲ್ಲ.

"ಜಾಫರನಾಮಾ"ದ ಸಂಗ್ರಹಕಾರನ ಹೇಳಿಕೆ :

ಜಾಫರನಾಮಾದ ಸಂಗ್ರಹಕಾರನು ಕಾಶ್ಮೀರದ ಪ್ರಸ್ತಾಪವನ್ನು ಈ ರೀತಿಯಿಂದ ಮಾಡಿದ್ದಾನೆ.ಈ ನಗರವು ವಿಶ್ವದ ಖ್ಯಾತಿಗೊಂಡ ತಂಗುದಾಣಗಳಲ್ಲಿ ಒಂದಾಗಿದೆ. ತನ್ನ ಭೌಗೋಳಿಕ ದೃಷ್ಟಿಯಿಂದ ಚಿತ್ರವಿಚಿತ್ರವಿದೆ. ಇದು ನಾಲ್ಕು ದೇಶಗಳ ಮಧ್ಯವಿದೆ. ಇದೊಂದು ಸುಂದರವಾದ ಕಣಿವೆಯಾಗಿದೆ. ಇದರ ದಕ್ಷಿಣದಲ್ಲಿ ಹಿಂದುಸ್ಥಾನ, ಪೂರ್ವದಲ್ಲಿ ತಬತ,ಉತ್ತರದಲ್ಲಿ ಕಾಶ್ಮೀರ ಹಾಗೂ ದಕ್ಷಿಣ ಪಶ್ಚಿಮದಲ್ಲಿ ಅಫಘಾನಿಸ್ತಾನವಿದೆ. ಈ ನಗರದ ವಿಸ್ತೀರ್ಣ ನನ್ನ ತಿಳುವಳಿಕೆಗನುಗುಣವಾಗಿ ಪೂರ್ವ-ಪಶ್ಚಿಮ ೧ ಹರದಾರಿ, ಉತ್ತರ-ದಕ್ಷಿಣ ೨೫ ಹರದಾರಿ ಇದೆ. ಇದು ೧೦೦೦೦ ಗ್ರಾಮಗಳನ್ನೊಳಗೊಂಡಿದೆ. ಹಾಗೂ ಇಲ್ಲಿ ಹೆಚ್ಚಳವಾಗಿ ಬುಗ್ಗೆಗಳಿವೆ. ಹಚ್ಚು ಹಸಿರಿನ ಮೃದುತ್ವ ವಿಚಿತ್ರವಾದ ಸೌಂದರ್ಯ ತಾಳುತ್ತದೆ. ವಾತಾವರಣಕ್ಕನುಗುಣವಾಗಿ ಈ ನಗರಕ್ಕೆ ಸಾಟಿಯಿಲ್ಲ. ಸೌಂದರ್ಯವು ಇಲ್ಲಿ ಇರುವಷ್ಟು ಇಡಿ ವಿಶ್ವದಲ್ಲಿ ಎಲ್ಲಿಯೂ ಇಲ್ಲ. ಇಲ್ಲಿಯ ಬೆಟ್ಟಗಳಲ್ಲಿ ಹಾಗೂ ಅಡವಿಯಲ್ಲಿ ಸುಸ್ವಾದ ಹಾಗೂ ಮೃದುವಾದ ಫಲಗಳು ಹೇರಳವಾಗಿವೆ. ಇವು ಆರೋಗ್ಯಕ್ಕೆ ಹೆಚ್ಚು ಅನುಕೂಲವಾಗಿವೆ. ಇಲ್ಲಿಯ ವಾತಾವರಣವು ತಂಪಾಗಿರುವುದರಿಂದ ಉಷ್ಣ ಪ್ರದೇಶದ ಫಲಗಳು ಉದಾ: ಉತ್ತತ್ತಿ, ನಾರಂಗಿ ಹಾಗೂ ಲಿಂಬೆ ಇತ್ಯಾದಿ ಇಲ್ಲಿ ಬೆಳೆಯಲಾಗುವುದಿಲ್ಲ. ಈ ಫಲಗಳು ಸುತ್ತಮುತ್ತಲಿನ ಉಷ್ಣ ಪ್ರದೇಶದಿಂದ ತರಿಸಿಕೊಳ್ಳುತ್ತಾರೆ.

ಶ್ರೀನಗರ :

ಶ್ರೀನಗರವು ಕಾಶ್ಮೀರದ ರಾಜಧಾನಿಯಾಗಿದೆ. ಈ ನಗರ ಬಗ್ದಾದಗೆ ಹೋಲುತ್ತದೆ. ನಗರದ ಮಧ್ಯದಲ್ಲಿ ಒಂದು ನದಿಯು ಹರಿಯುತ್ತದೆ. ಅದು ದಜ್ಲಾ ನದಿಗಿಂತಲೂ ದೊಡ್ಡದಾಗಿದೆ. ನದಿಯ ನೀರು ಹೆಚ್ಚಾಗಿದೆ. ಇದಕ್ಕೆ ಅಂತ್ಯವೇ ಇಲ್ಲ. ಒಂದೇ ಬುಗ್ಗೆಯಿಂದ ಹೊರಡುತ್ತದೆ. ಈ ಬುಗ್ಗೆಯು ಇದೆ. ನಗರದಲ್ಲಿ ನಗರವಾಸಿಗಳು ಅಗಣಿತ ನಾವೆಗಳನ್ನು ನದಿಯ ದಂಡೆಯಲ್ಲಿ ಕಟ್ಟಿರುತ್ತಾರೆ. ಅವಶ್ಯವಾದ ಸಮಯದಲ್ಲಿ ಅವುಗಳ ಮುಖಾಂತರ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹೋಗಿ ಬರುತ್ತಾರೆ. ಈ ನದಿಯು ಕಾಶ್ಮೀರದಿಂದ ಹೊರಟು ಮುಲ್ತಾನಿನ ಎತ್ತರ ಪ್ರದೇಶದಿಂದ ಹರಿಯುತ್ತ ಚನ್ನಾಬ ನದಿಗೆ ಕೂಡುತ್ತದೆ. ಶ್ರೀ ನಗರವನ್ನು ಅಲ್ಲಾನು ಇಂತಹ ಸ್ಥಳದಲ್ಲಿ ನಿವಾಸಗೊಳಿಸಿದ್ದಾನೆ. ಅಲ್ಲಿ ನಾಲ್ಕು ದಿಕ್ಕುಗಳಲ್ಲಿ ಬೆಟ್ಟಗಳಿವೆ. ಹೀಗಾಗಿ ಇಲ್ಲಿಯ ಜನರು ದಾಳಿಕೋರರಿಂದ ನಿರ್ಭೀತರಾಗಿ ಜೀವನ ಮಾಡುತ್ತಾರೆ.

ಕಾಶ್ಮೀರದ ಮಾರ್ಗಗಳು :

ಕಾಶ್ಮೀರದಿಂದ ಬೇರೆ ದೇಶಗಳಿಗೆ ಮೂರು ಮಾರ್ಗಗಳು ಹೋಗುತ್ತವೆ. ಒಂದು ಬುರಾಸಾನ ಕಡೆ, ಎರಡನೆಯದು ಹಿಂದುಸ್ತಾನಕ್ಕೆ ಮತ್ತು ಮೂರನೆಯದು ತಿಬ್ಬತನದ

ಕಡೆ. ಬುರಾಸಾನಿನ ಮಾರ್ಗವು ಸಾಗಲು ಕಷ್ಟಕರವಾಗಿದೆ. ಈ ಹಾದಿಯಿಂದ ಸಾಮಾನುಗಳನ್ನು ಜಾನುವಾರುಗಳ ಮೇಲೆ ಹೇರಿಕೊಂಡೊಯ್ಯುವುದು ಅತಿ ಕಷ್ಟಕರವಾಗುವುದು. ಇದರಿಂದಾಗಿ ಸಾಮಾನುಗಳನ್ನು ಎತ್ತುವ ಕೆಲಸ ಜನರಿಂದ ತೆಗೆದುಕೊಳ್ಳುತ್ತಾರೆ. ಇಲ್ಲಿ ಕೂಲಿಕಾರರು ಹೆಚ್ಚಾಗಿ ದೊರೆಯುತ್ತಾರೆ. ಸಾಮಾನು ಎತ್ತಿಕೊಂಡು ಬೇರೆ ಸ್ಥಳಗಳಲ್ಲಿ ತಲುಪಿಸುತ್ತಾರೆ. ಅಲ್ಲಿಂದ ಪಶುಗಳ ಮುಖಾಂತರ ಸಾಮಾನು ತೆಗೆದುಕೊಳ್ಳುತ್ತಾರೆ. ಹಿಂದುಸ್ತಾನದ ಮಾರ್ಗವು ಕೂಡ ಸಾಗಲು ಕಷ್ಟದಾಯಕವಾಗಿದೆ. ಆದರೆ ತಿಬತ್ತಿನ ಮಾರ್ಗ ಅವುಗಳಿಗಿಂತ ಸರಳವಿದೆ. ಆದರೆ ಈ ಮಾರ್ಗದಲ್ಲಿ ಪಶುಗಳಿಗೆ ಮೇವು ದೊರೆಯುವುದಿಲ್ಲ. ಕೇವಲ ವಿಷಪೂರಿತ ಹುಲ್ಲು ದೊರೆಯುತ್ತದೆ. ಪಶುಗಳು ಅದನ್ನು ತಿಂದು ಸಾಯುತ್ತವೆ. ಇದರಿಂದಾಗಿ ಜನರು ಪಶುಗಳ ಮೃತ್ಯುವಿನ ಭಯದಿಂದ ಈ ಮಾರ್ಗದಿಂದ ಪ್ರಯಾಣ ಮಾಡಲು ಭಯಭೀತರಾಗುತ್ತಾರೆ.

ಕಾಶ್ಮೀರಿಯವರ ಧರ್ಮ :

ಮಿರ್ಜಾ ಹೈದರ ದೊಗ್ಲಾತಿಯ "ಕಿತಾಬೆ ರಷೀದಿ"ಯಲ್ಲಿ ಉಲ್ಲೇಖವಾಗಿದೆ. ಕಾಶ್ಮೀರಿ ಜನರು ಧಾರ್ಮಿಕವಾಗಿ ಹನಫಿ ಮುಸಲ್ಮಾನರಾಗಿದ್ದರು. ಫತ್ಹೇಶಾಹನ ಕಾಲದಲ್ಲಿ ಇರಾಕಿನಿಂದ ಶಮ್ಸೂದ್ದೀನ ಹೆಸರಿನ ಓರ್ವ ವ್ಯಕ್ತಿ ಬಂದನು. ಮತ್ತು ಅವನು ತನ್ನನ್ನು ನೂರ ಬಕ್ಷನಿಗೆ ಸಂಬಂಧ ತೋರಿಸಿ ಪ್ರಚಲಿತವಲ್ಲದ ಧರ್ಮದ ಪ್ರಚಾರ ಮಾಡಲು ಪ್ರಾರಂಭಿಸಿದನು. ಶಮ್ಸೊದ್ದೀನನು ಈ ಹೊಸ ಧರ್ಮದ ಹೆಸರು "ನೂರಭಕ್ಷ"ವೆಂದು ಇಟ್ಟನು. ಈ ಧರ್ಮವು ಷಿಯಾ ಮತ್ತು ಸುನ್ನಿ ಈ ಎರಡು ಧರ್ಮಗಳ ಶ್ರದ್ಧೆಗೆ ವಿರುದ್ಧವಿದೆ. ಈ ಧರ್ಮವನ್ನು ಒಪ್ಪಿಕೊಳ್ಳುವವರು ಹಜರತ ಆಯೆಷಾ ಹಾಗೂ ಮೂರ ಖಲೀಫಾ ಇವರಿಗೆ ಅಗೌರವದಿಂದ ಕಾಣುವರು. ಅಲ್ಲದೆ ಮಿರನೂರ ಬಕ್ಷನಿಗೆ ಮಹದಿಯೆಮವುದ ಎನ್ನುತ್ತಾರೆ. ಇದು ಸುನ್ನಿ ಧರ್ಮ ಹಾಗೂ ಷಿಯಾ ಧರ್ಮಗಳ ವಿರುದ್ಧ ಇದೆ.

ನೂರ ಬಕ್ಷ ಪಂಗಡ :

ಈ ಪಂಗಡವನ್ನು ಒಪ್ಪಿಕೊಂಡವರು ಷಿಯಾಧರ್ಮದ ವಿರುದ್ಧ ಎಲ್ಲಾ ಸೂಫಿ ಶರಣರನ್ನು (ಅವಲಿಯಾ ಅಲ್ಲಾನ) ಅರಿತುಕೊಳ್ಳುತ್ತಾರೆ. ಈ ಜನರ ಉಲ್ಲೇಖ ಹಾಗೂ ಧಾರ್ಮಿಕ ಆದೇಶಗಳನ್ನು ಸಾಮಾನ್ಯ ಮುಸಲ್ಮಾನರ ಪ್ರತ್ಯೇಕವಾಗಿ ಅಳವಡಿಸಿಕೊಂಡರು. ಈ ಬರಹಗಾರನು ಈ ಧರ್ಮವನ್ನು ಪಾಲಿಸುವವರನ್ನು ಬದಬಶಾರನಲ್ಲಿ ನೋಡಿದ್ದಾನೆ. ಈ ಜನರು ನನ್ನ ಸಹಪಾಠಿಗಳಾಗಿದ್ದರು. ಮೀರ ಸೈಯದ ನೂರ ಬಕ್ಷನ ಓರ್ವ ಮಗ ನನಗೆ ಅವರ ತಂದೆಯ ಒಂದು ಪತ್ರಿಕೆಯನ್ನು ಕೊಟ್ಟನು. ಈ ಪತ್ರಿಕೆಯಲ್ಲಿ ಇದರ ತಾತ್ಪರ್ಯವೂ ಅತ್ಯಂತ ಚನ್ನಾಗಿದೆ. ಈ

ಅಭಿಪ್ರಾಯ ತಪ್ಪಾಗಿದೆ. ಆಡಳಿತದ ಬಾಹ್ಯ ಹಾಗೂ ಧರ್ಮನಿಷ್ಠೆಗಳು ಓರ್ವ ವ್ಯಕ್ತಿಯಲ್ಲಿಯೇ ಕೂಡಿರುವುದು ಅಸಾಧ್ಯವಿದೆ. ಎಲ್ಲಕ್ಕೂ ದೊಡ್ಡ ಸಾಕ್ಷಿ ಎಂದರೆ ಪೈಗಂಬರರಲ್ಲಿ ಹಜರತ ಯೂಸುಫ, ಹಜರತ ಸುಲೇಮಾನ, ಹಜರತ ದಾವೂದ ಹಾಗೂ ಹಜರತ ಮೊಹ್ಮದ ಸ್ಪಲಮುರಾದರು, ನಖಿಗಳಾಗಿದ್ದರು. ಒಳ್ಳೆಯ ಆಡಳಿತಗಾರರಿದ್ದರು ಎಂಬುದು ಪ್ರಕಟವಿದೆ. ಈ ದೇವನಿಷ್ಠೆಯು ಸುನ್ನತ ಪರಿಪಾಲಕರಂತಿದೆ. ಹಾಗೂ ನೂರ ಬಕ್ಷಿಯ ಧರ್ಮದ ಉಪದೇಶಕ್ಕೆ ವಿರುದ್ಧವಾಗಿದೆ.

ಪಿಖಾಯೆ ಅಖ್ಲೂತಾ :

ಒಂದು ಪುಸ್ತಕ "ಫಿಖಾಯೆ ಅಖ್ಲೂತಾ" ಕಾಶ್ಮೀರದಲ್ಲಿ ಬಹು ಪ್ರಸಿದ್ಧ ಹಾಗೂ ಮೆಚ್ಚುಗೆಯದಾಗಿತ್ತು. ನಾನು ಈ ಪುಸ್ತಕವನ್ನು ಕುರಿತು ಹಿಂದುಸ್ತಾನದ ಧಾರ್ಮಿಕ ಪಂಡಿತರಿಂದ ಧರ್ಮಶಾಸ್ತ್ರದ ವಿಧಿಯನ್ನು ಬೇಡಿದೆ. ಎಲ್ಲಾ ಪಂಡಿತರು ಈ ಪುಸ್ತಕದ ಬಗ್ಗೆ ದೊಡ್ಡ ದೊಡ್ಡ ಅಭಿಪ್ರಾಯ ಕೊಟ್ಟರು. ಹಾಗೂ ಬರೆದರು. ಈ ಪುಸ್ತಕವು ಅತಿ ಹಾನಿಕರವಿದೆ. ಹಾಗೂ ಇದರ ಗ್ರಂಥ ಕರ್ತನು ಪರಾತ್ಪರತ್ವವನ್ನು ನಂಬಿದವನಾಗಿದ್ದಾನೆ. ಅವನು ಇಸ್ಲಾಂದಿಂದ ವಿಸರ್ಜಿತನಾಗಿದ್ದಾನೆ. ಪ್ರತಿಯೊಬ್ಬ ಮುಸಲ್ಮಾನನ ಕರ್ತವ್ಯವಿದೆ. ಈ ಪುಸ್ತಕವನ್ನು ಎಲ್ಲಿಯಾದರೂ ನೋಡಿದರೆ ಇದನ್ನು ನಷ್ಟಗೊಳಿಸುವುದು. ಈ ಧರ್ಮವನ್ನು ಪಾಲಿಸುವವರಿಗೆ ಬುದ್ಧಿ ಹೇಳತಕ್ಕದ್ದು, ಆದರೆ ಅವರು ನಿರರ್ಥಕ ದೇವ ಭಕ್ತಿಯಿಂದ ಪಶ್ಚಾತಾಪಪಟ್ಟು ಇಮಾದು ಅಬು ಹನೀಫರ ಅನುಯಾಯಿಯಾದರೆ ಒಳ್ಳೆಯದು ಇಲ್ಲವಾದರೆ ಕೊಲ್ಲಬಹುದು.

ನೂರ ಬಕ್ಷಿಯವರ ನಂಬಿಕೆಗಳು :

ನನ್ನ ಹತ್ತಿರ ಈ ಉಲ್ಲೇಖ ಬಂದಿತು. ಆಗ ನಾನು ಈ ಕಾಶ್ಮೀರ ವಾಸಿಗಳಲ್ಲಿ ಈ ನಿರರ್ಥಕ ನಂಬಿಕೆಗಳನ್ನು ಪಾಲಿಸುವವರನ್ನು ಗದರಿಸಿದೆ. ಇವರಲ್ಲಿ ಅನೇಕರನ್ನು ಸನ್ಮಾರ್ಗಕ್ಕೆ ತಂದೆನು. ಹಾಗೂ ಅನೇಕರನ್ನು ಕೊಂದು ಹಾಕಿದೆ. ಇವರುಗಳಲ್ಲಿ ಕೆಲವರು ತಮ್ಮನ್ನು ಸೂಫಿಯರೆಂದು ಖ್ಯಾತಗೊಳಿಸಿ ತಮ್ಮ ಜೀವವನ್ನುಳಿಸಿಕೊಂಡರು. ಆದಾಗ್ಯೂ ಈ ಕೆಟ್ಟ ನಂಬಿಕೆ ಸೂಫಿ ಆಗಲು ಯೋಗ್ಯವಲ್ಲ. ಆದರೂ ದೇವ ನಾಸ್ತಿಕ ಹಾಗೂ ಧರ್ಮ ಬಾಹಿರರಾಗಿದ್ದಾರೆ. ಇವರು ಮುಸಲ್ಮಾನರಿಗೆ ಪಥ ಬ್ರಷ್ಟರಾಗಿಸಲು ಟೊಂಟಕಟ್ಟಿದ್ದಾರೆ. ಈ ಜನರಿಗೆ ಇದು ಖಂಡಿತವಾಗಿ ತಿಳಿದಿಲ್ಲ. ಹರಾಮ ಹಾಗೂ ಹಲಾಲಿನಲ್ಲಿ ಏನೋ ವ್ಯತ್ಯಾಸವಿದೆ. ನಿತ್ಯ ತೃಪ್ತಿ ಹಾಗೂ ಕರ್ಮ ಶುದ್ಧಿಗಳ ಅರ್ಥವನ್ನು ಇವರು ತೆಗೆದುಕೊಂಡಿದ್ದಾರೆ. ರಾತ್ರಿಯಲ್ಲಿ ಎಚ್ಚೆತ್ತು ಕಡಿಮೆ ತಿನ್ನುವುದು. ಈ ಜನರು ಅತಿಯಾಗಿ ಆಶೆಬುರುಕರಾಗಿರುತ್ತಾರೆ. ಏನಾದರೂ ದೃಷ್ಟಿಗೆ ಬಿದ್ದರೆ ಅದನ್ನು ಪಡೆಯಲು ಆಕಾಂಕ್ಷೆಯನ್ನು ಇಡುತ್ತಾರೆ. ಊಟ ಮಾಡುವಲ್ಲಿಯೂ ಕೂಡ ಅತಿ ಕೆಟ್ಟವರಾಗಿದ್ದಾರೆ. ಏನಾದರೂ ಲಭ್ಯವಾದರೆ ಹೊಟ್ಟೆಯಲ್ಲಿ ಹಾಕಿಕೊಳ್ಳುತ್ತಾರೆ.

ಕಾರ್ಯವೈಖರಿ ನೂರಬಕ್ಷಿಯ ಪಂಗಡದ ನಿರರ್ಥಕ ನಂಬಿಕೆಗಳು :

ಇದು ನೂರಬಕ್ಷಿಯವರ ಪದ್ಧತಿ. ಅವರು ವಿಹವಲ ಜನರಿಂದ ಅವರ ಸ್ವಪ್ನಗಳನ್ನು ಕೇಳಿ ಭವಿಷ್ಯದಲ್ಲಿ ಬರುವ ಸಮಯದ ಬಗ್ಗೆ ಭವಿಷ್ಯವಾಣಿಯನ್ನು ಹೇಳುತ್ತಿದ್ದರು. ಇದರಿಂದ ಅವರ ಉದ್ದೇಶ ಇದು ಇರುತ್ತದೆ. ಜನರ ಮೇಲೆ ಇದು ಪ್ರಕಟಗೊಳಿಸುತ್ತಾರೆ. ನಾವು ಆಧ್ಯಾತ್ಮದ ಒಡೆಯರಾಗಿದ್ದೇವೆ ಎನ್ನುತ್ತಾರೆ. ಇವರು ಪರಸ್ಪರ ಕಾಲ್ಬೀಳಿಸಿಕೊಳ್ಳುತ್ತಿದ್ದರು. ಇಂತಿಷ್ಟು ಧರ್ಮಬಾಹಿರ ಕಾರ್ಯವೈಖರಿಗಳಲ್ಲದೆ ಇವರು ೪೦ ದಿನಗಳಲ್ಲಿ ಎಲ್ಲಾ ಮಾಡುತ್ತಾರೆ. ಈ ಜನರು ವಿದ್ವಾಂಸರ, ಶಾಸ್ತ್ರಜ್ಞರ ವಿದ್ಯೆಯನ್ನು ಒಳ್ಳೆಯದೆಂದು ತಿಳಿಯುತ್ತಿರಲಿಲ್ಲ. ತಮ್ಮ ಸ್ವಂತಕ್ಕೆ ತಾವೇ ಸೂಫಿ ಪಂಗಡದ ರೀತಿ ನೀತಿಗಳನ್ನು ತಿಳಿಸುವವರು ಆದರೆ ಷರಿಯತ್ತಿನ ಆದೇಶ ಪಾಲಿಸುತ್ತಿರಲಿಲ್ಲ. ಇವರ ನಂಬಿಕೆ ಇದೆ. ಷರಿಯತ ಹಾಗೂ ತರೀಖತಿಗೆ ಯಾವ ಸಂಬಂಧವಿಲ್ಲ. ಇಂತಹ ಕುಚೇಷ್ಟೆಯಲ್ಲಿ ನಂಬಿಕೆಯುಳ್ಳವರು ಕಾಶ್ಮೀರದ ಹೊರತಾಗಿ ಎಲ್ಲಿಯೂ ದೊರೆಯಲಾರರು.

ಸೂರ್ಯೋಪಾಸಕರು :

ನೂರಬಕ್ಷಿಯವರು ಮೊದಲು ಕಾಶ್ಮೀರದಲ್ಲಿ ಸೂರ್ಯನನ್ನು ಪೂಜಿಸುವುದು ಹೆಚ್ಚಿತ್ತು. ಈ ಪಂಗಡಕ್ಕೆ "ಕ್ಷಮಾಶೀನೆ" ಎನ್ನುವರು. ಈ ಜನರ ನಂಬಿಕೆ ಇತ್ತು. ಸೂರ್ಯ ಅಡಿಯಿಂದ ಮುಡಿಯವರೆಗೆ ಜ್ಯೋತಿ ಇದೆ. ಇದರ ಕಾರಣ ನಮ್ಮ ನಂಬಿಕೆಯ ಸ್ವಚ್ಛತೆ ಹಾಗೂ ನಮ್ಮ ಅಸ್ತಿತ್ವದಲ್ಲಿ ಸೂರ್ಯನ ಪ್ರತಿಛಾಯೆ ಇದೆ. ಒಂದವಸರ ನಾವು ಅಪನಂಬಿಕೆಯುಳ್ಳವರಾದರೆ, ಸೂರ್ಯ ಅಸ್ತಿತ್ವದಿಂದ ಸಂಬಂಧ ಇರಲಾರದು. ಒಂದು ವೇಳೆ ಸೂರ್ಯನು ನಮಗೆ ಫಲ ನೀಡದಿದ್ದರೆ ನಮ್ಮ ಅಸ್ತಿತ್ವವೇ ಸ್ಥಿರಗೊಳ್ಳಲಾರದು. ತಾತ್ಪರ್ಯವೇನೆಂದರೆ, ಸೂರ್ಯನಿಂದಲೇ ನಮ್ಮ ಅಸ್ತಿತ್ವ ಇದೆ. ಹಾಗೂ ನಮ್ಮಿಂದಲೇ ಸೂರ್ಯನಿಗೆ ಅಸ್ತಿತ್ವ ಇದೆ. ಆದುದರಿಂದ ನಮ್ಮ ಕರ್ತವ್ಯ ಇದೆ. ನಮ್ಮ ಸಮಯವು ಒಳ್ಳೆಯ ರೀತಿಯಿಂದ ಉಪಯೋಗಿಸಕೊಳ್ಳತಕ್ಕದ್ದು, ಏಕೆಂದರೆ ಇದರ ಮೇಲೆ ನಮ್ಮ ಸ್ಥಿತಿಗತಿಗಳು ಪ್ರಕಟಗೊಳ್ಳುತ್ತವೆ. ಆಗ ನಮ್ಮ ನಡಾವಳಿಕೆಗಳನ್ನು ವಿಚಾರಿಸುವವರು ಯಾರೂ ಇರುವುದಿಲ್ಲ. ಆಗ ನಾವು ನಮ್ಮ ಇಚ್ಛೆಯ ಒಡೆಯರಾಗುತ್ತೇವೆ. ಸೂರ್ಯನಿಗೆ ಸಂಬಂಧ ಈ ಜನರು ತಮ್ಮ ಧರ್ಮ ಮೂಲ ಪುರುಷನ ಬಿರುದು "ಶಮ್ಸುದ್ದೀನ"ನೆಂದು ತೋರಿಸುತ್ತಾರೆ. ಈ ಬಿರುದಿಗೆ ಸಂಕ್ಷಿಪ್ತಗೊಳಿಸಿ "ಷಮಿ" ಮಾಡಿಕೊಂಡರು.

ಕಾಶ್ಮೀರಿಯರ ಸದ್ಯದ ಧರ್ಮ :

ಇತಿಹಾಸಕಾರನಾದ ಫರಿಶ್ತಾ ಬರಹಗಾರನು ಇಂತಹ ಜನರಿಗೆ ಯಾರು ಕಾಶ್ಮೀರ ಪ್ರಯಾಣ ಕೈಗೊಂಡಿದ್ದಾರೆ. ಅವರನ್ನು ಕಾಶ್ಮೀರಿಯರ ಧರ್ಮದ ಬಗ್ಗೆ ವಿಚಾರಿಸದೆ ಅವರು

ತೋರಿಸಿದರು. ಇಂದು ನಾಳೆ ಎಲ್ಲಾ ಕಾಶ್ಮೀರಿಯರು ಹನಫಿ ಧರ್ಮದ ಸುನ್ನಿ ಇದ್ದಾರೆ. ಈ ರಾಜ್ಯದ ಸೈನಿಕರು ಹೆಚ್ಚಾಗಿ ಇಮಾಮಿಂಯಾ ಧರ್ಮದ ಅನುಂಯಾಯಿಂಯಾಗಿದ್ದಾರೆ. ಆದರೆ ವಿದ್ಯಾವಂತರು ಈ ಧರ್ಮವನ್ನು ತಿಳಿದುಕೊಂಡವರು ಅತಿ ವಿರಳವಾಗಿದ್ದಾರೆ. ತಿಬ್ಬತ್, ಕೋಚಕನ ಆಡಳಿತಗಾರ ದೊಡ್ಡ ಹಾಲಿ ಷಿಯಾ ಆಗಿದ್ದಾನೆ. ಯಾರು ಅಸ್ಹಾಬ್ ಕಬ್ಜಾದ ಸಮ್ಮುಖದಲ್ಲಿ ಅಸ್ಥಿಮರ ಎದುರಿನಲ್ಲಿ ಅಗೌರವ ಮಾಡುತ್ತಿಲ್ಲ ಅವರು ನಗರದಲ್ಲಿ ಪ್ರವೇಶಿಸಬಾರದು ಎಂದು ಇವನ ಆಜ್ಞೆ ಇದೆ ಬುಡಕಟ್ಟು ಚನಕ? ಇವರ ಹೇಳಿಕೆ ಮೀರ ಷಮ್ಮುದ್ದೀನ ಇರಾಕ ಷಯಾ ಧರ್ಮವನ್ನು ಪಾಲಿಸುತ್ತಿದ್ದ. ಅನೇಕರು ಈ ಕಾಲದ ಸುಲ್ತಾನರ ಅನುಯಾಯಿಗಳಾಗಿದ್ದರು. ಹಾಗೂ ರಾಜ್ಯದಲ್ಲಿ ಇಮಾಮಿಯ ಪ್ರವಚನವನ್ನು ಜಾರಿಗೊಳಿಸಿದರು. ಆದರೆ ಮಸ್ತಕ ಫಿಬ್ಹಾ ಅಖ್ಹಾತ್ಹದ ಸಂಗ್ರಹಕಾರನು ಈ ಷಮ್ಮುದ್ದೀನನಿಗೆ ಯಾವ ಸಂಬಂಧವಿಲ್ಲ. ಈ ಪುಸ್ತಕದ ಸಂಗ್ರಹಕಾರ ಇನ್ನೊಬ್ಬ ವ್ಯಕ್ತಿ ಇದ್ದಾನೆ. ಅವನು ಧರ್ಮ ಬಾಹಿರನಾಗಿದ್ದ.

■

*

೧. ಸುಲ್ತಾನ ಶಮ್ಸುದ್ದೀನ

ಈ ಇತಿಹಾಸಕಾರನಾದ ನಾನು ಫರಿಶ್ತಾ, ಈ ಗ್ರಂಥವನ್ನು ಬರೆಯುವಾಗ ಒಂದು ನಿಯಮವನ್ನು ಮಾಡಿ ಕೊಂಡಿದ್ದೇನೆ. ಕೇವಲ ಮುಸಲ್ಮಾನ ರಾಜರ ಬಗ್ಗೆ ಮಾತ್ರ ಬರೆಯುತ್ತೇನೆ ಮತ್ತು ಯಾವ ದೇಶದ ಆಡಳಿತ ಪ್ರಸ್ತಾಪವನ್ನು ಮಾಡುತ್ತ ಅಲ್ಲಿಯ ಹಿಂದು ಆಡಳಿತಗಾರರ ಪ್ರಸ್ತಾಪವನ್ನು ಕೈಬಿಟ್ಟಿರುವೆ. ಈ ನಿಯಮಕ್ಕನುಸಾರವಾಗಿ ಕಾಶ್ಮೀರದ ಸುಲ್ತಾನರ ಪ್ರಸ್ತಾಪವನ್ನು ಮಾಡುವಾಗ ಅಲ್ಲಿಯ ಮುಸಲ್ಮಾನ ಬಾದಶಾಹರ ಸ್ಥಿತಿಗತಿಗಳನ್ನು ಪ್ರಾರಂಭಿಸಲಾಗುತ್ತದೆ.

ಕಾಶ್ಮೀರದಲ್ಲಿ ಶಾಹಮಿರ್ಜಾನ ಆಗಮನ :

ಕಾಶ್ಮೀರಿಯರು ಇಸ್ಲಾಮ ಧರ್ಮವನ್ನು ಸ್ವಿಕರಿಸಿ ಸ್ವಲ್ಪ ಅವಧಿಯೆ ಆಯಿತು. ಈ ರಾಜ್ಯದ ಪುರಾತನ ಆಡಳಿತಗಾರರು ಹಿಂದುಗಳಾಗಿದ್ದರು. ಮತ್ತು ಅವರು ಬ್ರಹ್ಮನ ಪೂಜೆ ಮಾಡುತ್ತಿದ್ದರು. ೭೮೫ ಹಿಜರಿಯಲ್ಲಿ ಆಗ ಕಾಶ್ಮೀರಿಯರ ಆಡಳಿತವು ಸಹದೇವನೆಂಬ ರಾಜನ ಕೈಯಲ್ಲಿತ್ತು. ಕಾಶ್ಮೀರದಲ್ಲಿ ಓರ್ವ ವ್ಯಕ್ತಿಯ ಹೆಸರು ಶಾಹಮಿರ್ಜಾನು ಫಕೀರರ ಉಡುಪಿನಲ್ಲಿ ಬಂದನು. ಮತ್ತು ರಾಜನ ಸೇವಕರೊಂದಿಗೆ ಕೂಡಿಕೊಂಡನು. ಶಾಹಮಿರ್ಜಾನು ತಾನು ಅರ್ಜುನ ವಂಶಕ್ಕೆ ಸಂಬಂಧಪಟ್ಟವನಿದ್ದೇನೆ ಎಂದು ತನ್ನ ವಂಶಾವಳಿಯನ್ನು ಈ ರೀತಿಯಾಗಿ ಹೇಳಿದ್ದಾನೆ. ಶಾಹಾಮಿರ್ಜಾ ತಂದೆ ಮೊಹ್ಮದ ತಂದೆ ಅಲಿ ತಂದೆ ಗರಿ ಷಾಶಫ ತಂದೆ ನಕುದರ, ತಂದೆ ನಿಕುದರ ಇವರ ಕುರಿತು ಶಾಹಮಿರ್ಜಾನ ಹೇಳಿಕೆ ಇತ್ತು. ಈ ವ್ಯಕ್ತಿ ಅರ್ಜುನ ವಂಶದವನಾಗಿದ್ದ. ಪ್ರಸಿದ್ಧರಾದ ಪಾಂಡವರಿದ್ದಾರೆ. ವಿದಿತವಾದ ಪಾಂಡವರ ಚರಿತ್ರೆಯು “ಮಹಾಭಾರತ”ದಲ್ಲಿ ಸವಿಸ್ತಾರವಾಗಿ ಉಲ್ಲೇಖಿಸಲ್ಪಟ್ಟಿದೆ.

ರಾಜಾ ಅರ್ಜುನನ ಸೇವೆ :

ಶಾಹಮಿರ್ಜಾನು ಸಹದೇವನ ಸೇವೆಯನ್ನು ಕೆಲ ಕಾಲದವರೆಗೆ ಗೈದು. ಅರಸನ

ಮನದಲ್ಲಿ ಮನೆ ಮಾಡಿಕೊಂಡನು. ರಾಜಾ ಸಹದೇವನ ಮರಣದ ನಂತರ ಇವನ ಮಗ ರಾಜಾ ಅರ್ಜುನನು ತನ್ನ ತಂದೆಯ ಸಿಂಹಾಸನದ ಮೇಲೆ ಕುಳಿತುಕೊಂಡನು. ಅರ್ಜುನನು ಕೂಡ ಶಾಹಮಿರ್ಜಾನನ್ನು ತನ್ನ ಮಂತ್ರಿಯನ್ನಾಗಿಸಿದ. ಅವನಿಗೆ ಆಡಳಿತದ ಎಲ್ಲಾ ಕಾರ್ಯಗಳನ್ನೊಪ್ಪಿಸಿದ. ಶಾಹಮಿರ್ಜಾನಿಗೆ ತನ್ನ ಮಗನ ಗುರುವೆಂದು ನಿಯಮಿಸಿದ. ರಾಜಾ ಅರ್ಜುನನ ಮರಣದ ನಂತರ ಇವನ ಆತ್ಮೀಯನು ಖಂದಹಾರದಿಂದ ಕಾಶ್ಮೀರದ ಮೇಲೆ ದಾಳಿ ಮಾಡಿದನು. ಹಾಗೂ ಈ ರಾಜ್ಯವನ್ನು ಸ್ವಾಧೀನಪಡಿಸಿಕೊಂಡನು.

ಶಾಹಮಿರ್ಜಾನ ಮಕ್ಕಳು :

ರಾಜಾ ಅದ್ವನನು ಕೂಡ ಶಾಹಮಿರ್ಜಾನಿಗೆ ತನ್ನ ಮಂತ್ರಿಯನ್ನಾಗಿಸಿಕೊಂಡ. ಮತ್ತು ಅವನ ಇಬ್ಬರು ಮಕ್ಕಳು ಜಮೀದ ಮತ್ತು ಅಲಿ ಶೇಖ ಮೇಲೆ ವಿಶ್ವಾಸವನ್ನಿಟ್ಟ ಅವರಿಗೂ ಅಧಿಕಾರದೊಡೆಯರನ್ನಾಗಿ ಮಾಡಿದ. ಶಾಹಮಿರ್ಜಾನ ಇನ್ನಿಬ್ಬರು ಪುತ್ರರು ಸುರಾತಮಕ ಮತ್ತು ಹಿಂಡಾಲರು ಕೂಡ ಇದ್ದರು. ಈ ನಾಲ್ವರು ಕಾಶ್ಮೀರದಲ್ಲಿ ಹೆಚ್ಚಿನ ಶಕ್ತಿಯನ್ನು ಪಡೆದರು. ಮತ್ತು ರಾಜಾ ಅದ್ವನನು ಈ ನಾಲ್ವರನ್ನು ತನ್ನ ಮನೆಯಲ್ಲಿ ಪ್ರವೇಶ ನಿಷೇಧಗೊಳಿಸಿದ.

ರಾಜಾ ಅರ್ಜುನನ ಮರಣ :

ಶಾಹಮಿರ್ಜಾ ಹಾಗೂ ಇವನ ಪುತ್ರರು ಕ್ರಮೇಣ ಕಾಶ್ಮೀರದ ಎಲ್ಲಾ ಪರಗಣಗಳನ್ನು ಸ್ವಾಧೀನ ಪಡಿಸಿಕೊಂಡರು. ಮತ್ತು ರಾಜಾ ಅವನ ಅನೇಕ ಸೇವಕರನ್ನು ತನ್ನ ಬೆಂಬಲಿಗರಾಗಿಸಿಕೊಂಡ. ಅವನು ಯಾವ ವೇಗದಿಂದ ಖಬ್ಜಾ ಮಾಡುತ್ತ ನಡೆದನೋ ಅಷ್ಟೇ ವೇಗದಿಂದ ರಾಜಾ ಅದ್ವಾನ ಸ್ಥಿತಿಯು ಹದಗೆಡುತ್ತ ಹೋಗುತ್ತಲಿತ್ತು. ಕೊನೆಗೆ ರಾಜಾನು ೮೪೭ ಹಿಜರಿಯಲ್ಲಿ ಮರಣಹೊಂದಿದನು.

ರಾಣಿ ಕೋಲಾದೇವಿ :

ರಾಜನ ಮರಣದ ನಂತರ ಆತನ ಪತ್ನಿ ಕೋಲಾದೇವಿ ತನ್ನ ಪತಿಯ ಸ್ಥಾನದ ಹೊಣೆಯನ್ನು ಹೊತ್ತಳು ಮತ್ತು ಇವಳು ಶಾಹಮಿರ್ಜಾನಿಗೆ ಕೊನೆಗೊಳಿಸಿ ಶಾಂತಿ ಹಾಗೂ ನಿಶ್ಚಿಂತೆಯಿಂದ ಆಡಳಿತಗೈಯುವ ಸಂಕಲ್ಪ ಮಾಡಿದಳು. ರಾಣಿಯು ಶಾಹಮಿರ್ಜಾನಿಗೆ ಸಂದೇಶ ಕಳುಹಿಸಿದಳು. ನೀವು ಬಹುಕಾಲದವರೆಗೆ ಅರ್ಜುನನ ಮಗ ಚಂದ್ರನ ಗುರುಗಳಾಗಿದ್ದೀರಿ. ಹೀಗಾಗಿ ನಿಮ್ಮ ಕರ್ತವ್ಯವಾಗುತ್ತದೆ. ನೀವು ಚಂದ್ರನಿಗೆ ಪಟ್ಟಕ್ಕೆ ಕೂಡಿಸಿ ನೀವು ಯಥಾ ಪ್ರಕಾರ ರಾಜ್ಯದ ಕಾರ್ಯಗಳಲ್ಲಿ ತೊಡಗಿರಿ. ಶಾಹಮಿರ್ಜಾನು ರಾಣಿಯ ಈ ಸಂದೇಶವನ್ನು ಗಮನಕ್ಕೆ ತರಲಿಲ್ಲ. ಇದರಿಂದ ರಾಣಿಯು ಶಾಹಮಿರ್ಜಾನ ಮೇಲೆ ಆಕ್ರಮಣಗೈದಳು. ಇತ್ತಂಡದವರಲ್ಲಿ ಯುದ್ಧ ನಡೆಯಿತು. ರಾಣಿ ಸೋತಳು. ಹಾಗೂ ಬಂಧಿತಳಾದಳು. ಮಿರ್ಜಾನು

ರಾಣಿಗೆ ಮುಸ್ಲಿಮಳಾಗಿಸಿ ತನ್ನ ಪತ್ನಿಯಾಗಿಸಿಕೊಂಡ. ಒಂದು ರಾತ್ರಿ ಒಂದು ಹಗಲು ತನ್ನ ಮನೆಯಲ್ಲಿಟ್ಟುಕೊಂಡು ತದನಂತರ ಬಂಧಿಸಿದನು.

ಶಾಹಮಿರ್ಜಾನ ಸ್ವ ಆಡಳಿತ :

ಇದರ ನಂತರ ಶಾಹಮಿರ್ಜಾನು ಸುಲ್ತಾನ ಷಮ್ಸುದ್ದೀನನೆಂದು ಬಿರುದು ಧರಿಸಿ, ಕಾಶ್ಮೀರದಲ್ಲಿ ತನ್ನ ಸ್ವತಂತ್ರವಾದ ಆಡಳಿತವನ್ನು ಸ್ಥಾಪಿಸಿದನು. ಮತ್ತು ರಾಜ್ಯದಲ್ಲಿ ತನ್ನ ಹೆಸರಿನ ನಾಣ್ಯ ಹಾಗೂ ಪ್ರವಚನವನ್ನು ಜಾರಿಗೊಳಿಸಿದನು. ಸುಲ್ತಾನ ಷಮ್ಸುದ್ದೀನನು ಕಾಶ್ಮೀರದಲ್ಲಿ ಹನಫಿ ಧರ್ಮವನ್ನು ಜಾರಿಗೊಳಿಸಿದನು. ಮತ್ತು ಸಂಪೂರ್ಣ ರಾಜ್ಯವು ಮೀರಬಕ್ಷಿಯ ಧ್ವಂಸ ಕೃತ್ಯದಿಂದ ನಾಶಗೊಂಡಿತು.

ದೇಜು ಮೀರಬಕ್ಷಿ :

ದೇಜು ಮೀರಬಕ್ಷಿ ಕೆಲ ಸಮಯದ ಮುನ್ನ ಖಂದಹಾರದಿಂದ ಕಾಶ್ಮೀರದ ಮೇಲೆ ದಾಳಿ ಮಾಡಿದ. ಅವನು ಇಡಿ ರಾಜ್ಯವನ್ನೇ ಧ್ವಂಸಗೊಳಿಸಿದ. ರಾಜಾ ಸಹದೇವನು ಅಂದು ಕಾಶ್ಮೀರದ ಒಡೆಯನಾಗಿದ್ದನು. ಇವನು ಪ್ರಜೆಗಳಿಂದ ಸಾಕಷ್ಟು ಸಂಪತ್ತು ಹಾಗೂ ಮಾಲನ್ನು ದೇಜು ಮೀರಬಕ್ಷಿಗೆ ಒಪ್ಪಿಸಿದ. ಆದರೆ ಮೀರಬಕ್ಷಿಯು ಸನ್ಮಾರ್ಗದತ್ತ ಬರಲಿಲ್ಲ. ಈ ಸ್ಥಿತಿಯನ್ನು ಕಂಡ ರಾಜಾ ಸಹದೇವನು ಏಕಾಂತವಾಸಗೈದನು. ಹೀಗಾಗಿ ದೇಜು ಮೀರಬಕ್ಷಿಗೆ ಆಟ ಆಡುವ ಅವಕಾಶ ದೊರೆಯಿತು. ದೇಜನು ಮನದುಂಬಿ ಲೂಟಿ ಮಾಡಿದ ಹಾಗೂ ನಾಶಗೊಳಿಸಿದ. ಶೀತವು ಹೆಚ್ಚಾದುದ್ದರಿಂದ ಖಂದಹಾರಕ್ಕೆ ಮರಳಿದನು.

ಶಮ್ಸುದ್ದೀನನ ಆಡಳಿತಾಧಿಕಾರ :

ಶಮ್ಸುದ್ದೀನನು ಆಡಳಿತದ ಚುಕ್ಕಾಣಿಯನ್ನು ತನ್ನ ಕೈಯಲ್ಲಿ ತೆಗೆದುಕೊಂಡು ಅತಿ ಖ್ಯಾತಿ ಹಾಗೂ ಜನಪ್ರೀಯತೆಯನ್ನು ಸಂಪಾದಿಸಿದನು. ಅವನು ಅನೇಕ ಜನರನ್ನು ಕೊಲ್ಲಿಸಿದ. ಏಕೆಂದರೆ ಇವರು ಇವನ ವಿರೋಧಿಗಳಾಗಿದ್ದರು. ಶಮ್ಸುದ್ದೀನನು ಕಾಶ್ಮೀರದ ಎರಡು ಬುಡಕಟ್ಟು "ಚಕ" ಮತ್ತು "ಮಕರಿ" ಇವರಿಗೆ ಹೆಚ್ಚು ಪ್ರೋತ್ಸಾಹ ನೀಡಿ ಆಡಳಿತದಲ್ಲಿ ಪದವಿಗಳನ್ನು ಕೊಟ್ಟು ಪೋಷಿಸಿದನು.

ಏಕಾಂತವಾಸ ಹಾಗೂ ಮರಣ :

ಸುಲ್ತಾನ ಶಮ್ಸುದ್ದೀನನು ವೃದ್ಧನಾದಾಗ ಅವನು ತನ್ನಲ್ಲಿ ಆಡಳಿತ ನಡೆಸುವ ಸಾಮರ್ಥ್ಯ ಇಲ್ಲದನ್ನು ಕಂಡು ಅವನು ತನ್ನ ಎರಡು ಮಕ್ಕಳಲ್ಲಿ ಜಮೀದ ಹಾಗೂ ಅಲಿಶೇಖರಿಗೆ ಯುವರಾಜರನ್ನಾಗಿ ಮಾಡಿದ. ತಾನು ಸ್ವತಃ ಆಡಳಿತದಿಂದ ಮುಕ್ತನಾಗಿ ಏಕಾಂತವಾಸದ ಜೀವನವನ್ನು ಕೈಕೊಂಡ. ಕೆಲ ಕಾಲದ ಮೇಲೆ ಮರಣ ಹೊಂದಿದನು.

ಈ ಬಾದಶಾಹನ ಆಡಳಿತಾವಧಿ ಮೂರು ವರ್ಷ.

*

೨. ಜಮ್ಷೀದ ತಂದೆ ಶಮ್ಸುದ್ದೀನ

ಅಲಿಶೇರನ ಬಂಡಾಯ :

ಸುಲ್ತಾನ ಶಮ್ಸುದ್ದೀನನ ಮರಣದ ನಂತರ ಕೆಲ ಸರದಾರರು ಹಾಗೂ ಆಡಳಿತದ ಸದಸ್ಯರ ಸಲಹೆಯ ಮೇರೆಗೆ ಮೃತನ ಹಿರಿಯ ಮಗ ಜಮ್ಷೀದಶಾಹನು ಪಟ್ಟವೇರಿದನು. ಜಮ್ಷೀದನ ತಮ್ಮನು (ಸುಲ್ತಾನ ಜಮಷದ್ದೀನ ಆಡಳಿತಾವಧಿಯಲ್ಲಿ ಇವನಿಗೆ ಆಡಳಿತದಲ್ಲಿ ಸಹಕಾರಿಯಾಗಿದ್ದ) ಪ್ರಜೆಗಳು ಹಾಗೂ ಸೈನಿಕರುಗಳಲ್ಲಿ ಪ್ರಿಯಕರನಾಗಿದ್ದ. ಅವನು ತನ್ನ ತಂದೆಯ ಮರಣದ ನಂತರ ತನ್ನ ಅಣ್ಣನ ವಿರುದ್ಧ ಬಂಡಾಯ ಹೂಡಿದ. ಸೈನ್ಯದ ಕೆಲ ಹಾಗೂ ದರ್ಬಾರಿಯ ಇವನ ಬೆಂಬಲಿಗರು, ಸರದಾರರು, ಇವನಿಗೆ ಮದನಪುರಕ್ಕೆ ತೆಗೆದುಕೊಂಡು ಹೋಗಿ ಅಲ್ಲಿ ಅವನನ್ನು ತಮ್ಮ ಬಾದಶಾಹನೆಂದು ಒಪ್ಪಿಕೊಂಡರು.

ಜಮಷೀದ ನಿಷ್ಕರ್ಷಿ ಹಾಗೂ ಮರಣ :

ಜಮಷೀದನು ಅಲಿಶೇರನ ಮೇಲೆ ದಾಳಿ ಮಾಡಿದನು. ಜಮಷೀದನು ಮೊದಲಂತು ಮೃದುವಾಗಿ ಅವನ ಮನಸ್ಸನ್ನೊಲಿಸಲು ಪ್ರಯತ್ನಿಸಿದ. ಆಗ ಅಲಿ ಶೇರನು ಹಾದಿಗೆ ಬರಲಿಲ್ಲ. ಅವನು ಜಮಷೀದ ಸೈನ್ಯದ ಮೇಲೆ ರಾತ್ರಿ ಹೊತ್ತಿನಲ್ಲಿ ಮರೆಯಾಗಿ ಹಲ್ಲೆಮಾಡಿ ಅವನಿಗೆ ಸೋಲಿಸಿದ. ಜಮಷೀದ ಮದನಪುರಕ್ಕೆ ತಲುಪಿ ನೋಡಿದಾಗ ಮದನಪೂರಾ ಖಾಲಿಯಾಗಿತ್ತು. ಅವನು ಆ ಕಡೆ ನಡೆದ ಅಲಿ ಶೇರನ ಅನೇಕ ಬೆಂಬಲಿಗರು ಆತನನ್ನು ತಡೆದರು. ಆದರೆ ಅವರಲ್ಲಿ ಅನೇಕರು ಮೃತಪಟ್ಟರು. ಅಲಿಶೇರನು ತನ್ನ ಅಣ್ಣನ ಬೆನ್ನಟ್ಟಿದ. ಹೋರಾಡುವ ಧೈರ್ಯ ಜಮಷೀದನಲ್ಲಿರಲಿಲ್ಲ. ಇದರಿಂದಾಗಿ ಅವನು ಗುಜರಾತಿನ ಕಡೆಗೆ ಓಡಿ ಹೋದನು. ಶ್ರೀನಗರದ ರಕ್ಷಕ ಸಿರಾಜ ನಾಮಿಯು ಅಲಿಶೇರನಿಗೆ ಸಿಂಹಾಸನವನ್ನೊಪ್ಪಿಸಿದ. ಈ ಘಟನೆಗಳ ನಂತರ ಜಮಷೀದನು ಆಡಳಿತದಿಂದ ದೂರಾದ. ಕೆಲಕಾಲದ ನಂತರ ಮರಣ ಹೊಂದಿದ. ಈತನ ಆಡಳಿತ ಒಂದು ವರುಷ ಎರಡು ತಿಂಗಳು.

ಸುಲ್ತಾನ ಅಲ್ಲಾವುದ್ದೀನ ತಂದೆ ಶಮ್ಮುದ್ದೀನ :

ಜಮಷೀದನ ನಂತರ ಇವನ ತಮ್ಮ ಅಲಿಶೇರನು ಸುಲ್ತಾನ ಅಲಾಉದ್ದೀನನೆಂಬ ಬಿರುದನ್ನು ಧರಿಸಿ ಕಾಶ್ಮೀರದ ಸುಲ್ತಾನನಾದ. ಅವನು ತನ್ನ ತಮ್ಮನಾದ ಶೇರ ಷಾಮಕನನ್ನು ತನ್ನ ಆಡಳಿತದ ವಕೀಲನೆಂದು ನಿಯಮಿಸಿಕೊಂಡ. ಅಲ್ಲಾಉದ್ದೀನ ಆಡಳಿತಾವಧಿಯಲ್ಲಿ ಪ್ರಪ್ರಥಮದಲ್ಲಿ ಅತಿ ಸಮೃದ್ಧಿಯಾಗಿತ್ತು. ಆದರೆ ಕೊನೆಯಲ್ಲಿ ಒಂದು ಪ್ರಬಲವಾದ ಕ್ಷಾಮ ಬಿತ್ತು. ಅದರಿಂದ ಅಗಣಿತ ಜನರು ಸಾವನ್ನಪ್ಪಿದರು. ಕೆಲ ಜನರು ಅಲ್ಲಾಉದ್ದೀನರ ವಿರುದ್ಧವಾದರು. ಈ ವೈರತ್ವದಿಂದ ಅವರು ದೇಶಭ್ರಷ್ಟರಾಗಿ ಕಾಶ್ಮೀರಿಗೆ ಹೋದರು. ಅಲಾಉದ್ದೀನನು ಅವರನ್ನು ಅನೇಕ ಪ್ರಕಾರ ಉಪಾಯಗಳಿಂದ ಬರಮಾಡಿಕೊಂಡು ಬಂಧಿಸಿದನು.

ಅಲ್ಲಾಉದ್ದೀನನು ಬಕಷಿಪುರದ ಸಮೀಪ ತನ್ನ ಹೆಸರಿಗೆ ತಕ್ಕಂತೆ ಒಂದು ನಗರವನ್ನು "ಅಲ್ಲಾಪುರ" ಸ್ಥಾಪಿಸಿದ. ಈ ನಿವಾಸದ ಈ ಬಾದಶಾಹನು ಒಂದು ಹೊಸ ಕಾನೂನನ್ನು ಜಾರಿ ಮಾಡಿದನು. "ಏನು! ಯಾರು ವ್ಯಭಿಚಾರದ ಹೆಂಗಸು ತನ್ನ ಪತಿಯ ವಾರಸುದಾರಳು ಆಗುವುದಿಲ್ಲ" ಈ ಕಾನೂನಿನ ಕಾರಣದಿಂದ ಅನೇಕ ಹೆಂಗಸರು ಇಂತಹ ಮಹಾಪಾಪದಿಂದ ಪಶ್ಚಾತಾಪಗೊಂಡು ಒಳ್ಳೆಯ ಸತ್ಯಜೀವನವನ್ನು ಮಾಡತೊಡಗಿದರು.

ಅಲಾಉದ್ದೀನನು ೧೨ ವರುಷ ೮ ತಿಂಗಳು ಹಾಗೂ ೧೩ ದಿನ ಆಡಳಿತ ಮಾಡಿ ಮೃತಪಟ್ಟನು.

ಸುಲ್ತಾನ ಶಾಹಬೊದ್ದೀನ ತಂದೆ ಸುಲ್ತಾನ ಶಮ್ಮುದ್ದೀನ :

ಸುಲ್ತಾನ ಅಲಾಉದ್ದೀನನ ಮರಣದ ನಂತರ ಇವನ ತಮ್ಮನು ಶಾಹಾಬುದ್ದೀನನ ಬಿರುದು ಧರಿಸಿ, ಕಾಶ್ಮೀರದ ಆಡಳಿತವನ್ನು ತನ್ನ ಕೈಯಲ್ಲಿ ತೆಗೆದುಕೊಂಡನು. ಈ ಬಾದಶಾಹನು ಅತಿ ಶೂರ ಹಾಗೂ ಧೈರ್ಯಶಾಲಿಯಾಗಿದ್ದ. ನೈತಿಕ ದೃಷ್ಟಿಯಿಂದ ಅವನ ಶೀಲಸ್ಥರವು ಬಹು ಎತ್ತರವಾಗಿತ್ತು. ಯಾವುದೊಂದು ದಿನದಂದು ಹೊಸ ಸುದ್ದಿ ದೊರೆಯುತ್ತಿರಲಿಲ್ಲ, ಆ ದಿನದಂದು ತನ್ನ ಜೀವನದಲ್ಲಿ ಗಣಿಸುತ್ತಿರಲಿಲ್ಲ. ಈ ಸಂಗತಿಯ ಮೇಲೆ ಅತಿ ಖಿನ್ನನಾಗಿ ಈ ರೀತಿ ಪ್ರಕಟಗೊಳಿಸುತ್ತಿದ್ದ. ನನ್ನ ಈ ವಯಸ್ಸಿನ ಅವಧಿಯಲ್ಲಿ ಒಂದು ದಿನವು ಸಾರ್ಥಕವಾಗಿ ಕಳೆದುಹೋಯಿತು. ಅಲ್ಲಾಉದ್ದೀನನು ತನ್ನ ಆಡಳಿತದಲ್ಲಿ ಗೆದ್ದ ಎಲ್ಲಾ ರಾಜ್ಯಗಳನ್ನು ಹಳೆಯ ಒಡೆಯರ ಸ್ವಾಧೀನಕ್ಕೆ ಕೊಟ್ಟನು.

ಪಂಜಾಬಿನ ಮೇಲೆ ದಾಳಿ :

ಸುಲ್ತಾನ ಶಾಹಾಬುದ್ದೀನನು ಪಂಜಾಬಿನ ಮೇಲೆ ದಾಳಿ ಮಾಡಿದನು. ಹಾಗೂ ಸಿಂಧೂ ನದಿಯ ದಂಡೆಯ ಮೇಲೆ ತಂಗಿದ. ಸಿಂಧ ರಾಜ್ಯದ ಒಡೆಯನು

ಅಲಾವೊದ್ದೀನನನ್ನು ಎದುರಿಸಿದ. ಆದರೆ ಸೋತ. ಶಾಹಬುದ್ದೀನನ್ನ ದರ್ಪ ಹಾಗೂ ಪ್ರಭಾವವು ಇಷ್ಟು ಇತ್ತು. ಬಂದ್ಹಾರ ಗಜನಿಯ ಜನರು ಇವನ ಹೆಸರಿನಿಂದಲೇ ಭಯಗ್ರಸ್ತರಾಗುತ್ತಿದ್ದರು. ಇವನು ಅಸ್ತಗರನಿಂದ ಮುಂದೆ ಸಾಗುತ್ತ ಪೇಷಾವರ ಮೇಲೆ ದಾಳಿ ಮಾಡಿ ಯುದ್ಧಗೈದ. ಅಲ್ಲಿ ಅಗಣಿತ ಜನರನ್ನು ಕೊಂದು ಹಿಂದು ಕಷ ತಲುಪಿದ.

ರಾಜಾ ನಗರ ಕೋಟಿನ ವಿಧೇಯತೆ :

ಪ್ರಯಾಣದ ದಣಿವಿನಿಂದ ಶಾಹಾಬುದ್ದೀನನು ಮರಳಿದನು. ಅವನು ಶೀತಲ ನದಿಯ ದಡದಲ್ಲಿ ತಂಗಿದ. ಈ ಮಧ್ಯದಲ್ಲಿಯೇ ರಾಜಾ ನಗರಕೋಟೆಯ ಭೇಟಿಯಾಯಿತು. ರಾಜಾನು ದಿಲ್ಲಿಯ ಕೆಲವು ಪರಗಣಗಳನ್ನು ಲೂಟಿ ಮಾಡಿ ಅಗಣಿತ ಸಂಪತ್ತನ್ನು ತೆಗೆದುಕೊಂಡು ಬರುತ್ತಿದ್ದನು. ಅವನು ಈ ಎಲ್ಲಾ ಸಂಪತ್ತನ್ನು ಶಾಹಬುದ್ದೀನನಿಗೆ ಅರ್ಪಿಸಿದನು. ಮತ್ತು ಅವನ ವಿಧೇತರಲ್ಲಿ ಪಾಲ್ಗೊಂಡನು. ತಬ್ಬತ ಕೋಚಕಗಳ ಒಡೆಯ ಕೂಡ ಬಾದಶಾಹನ ಸೇವೆಯಲ್ಲಿ ಹಾಜರಾಗಿ ಅವನಲ್ಲಿ ತಾವುಬ ತಬ್ಬತ ಕೋಚಕಗಳನ್ನು ನಾಶಗೊಳಿಸಬೇಡಿ ಎಂದು ಯಾಚಿಸಿದನು. ಇದರ ನಂತರ ಸುಲ್ತಾನ ಶಾಹಬುದ್ದೀನನು ಕಾಶ್ಮೀರಕ್ಕೆ ಮರಳಿದನು.

ಷಹಜಾದರ ದೇಶಭ್ರಷ್ಟತೆ :

ಶಾಹಾಬುದ್ದೀನನು ಶ್ರೀನಗರದಲ್ಲಿ ತಂಗಿದನು. ಹಾಗೂ ತನ್ನ ತಮ್ಮನಾದ ಹಿಂದಾಲನಿಗೆ ತನ್ನ ಉತ್ತರಾಧಿಕಾರಿಯೆಂದು ನಿಯಮಿಸಿದನು. ಬಾದಶಾಹನು ತನ್ನ ಇಬ್ಬರು ಪುತ್ರರು ಹಸನಖಾನ ಮತ್ತು ಅಲಿಖಾನ ಶಹಜಾದರನ್ನು ಕಾಶ್ಮೀರದಿಂದ ಹೊರಗೆ ಹಾಕಿದನು. ಇದರ ಕಾರಣ ಹೀಗಿತ್ತು. ಶಾಹಾಬುದ್ದೀನ ಓರ್ವ ಪತ್ನಿಯು ಈ ಇಬ್ಬರು ಷಹಜಾದರ ತಾಯಿಯಿಂದ ಅಸಂತುಷ್ಟಳಾಗಿದ್ದಳು. ಇವಳು ಬಾದಶಾಹನಿಗೆ ಷಹಜಾದರ ವಿರುದ್ಧ ಮಾಡಿದ್ದಳು. ಲಕ್ಷ್ಮಿನಗರ "ಲಚ್ಮನಗರ" ಮತ್ತು "ಶಹಾಬಪೂರ"ಗಳನು ಈ ಬಾದಶಾಹನು ಕಟ್ಟಿದನು.

ಮರಣ :

ಶಾಹಾಬುದ್ದೀನನಿಗೆ ತನ್ನ ಆಡಳಿತಾವಧಿಯ ಕೊನೆಯಲ್ಲಿ (ರಾಜಕುಮಾರ) ಷಹಜಾದ ಹಸನಖಾನನನ್ನು ದೇಶಭ್ರಷ್ಟಗೊಳಿಸಿದ. ಅದರ ಬಗ್ಗೆ ಅತಿ ಪಶ್ಚಾತಾಪವುಂಟಾಯಿತು. ಹಸನಖಾನನು ದಿಲ್ಲಿಗೆ ಹೋದನು. ಶಾಹಾಬುದ್ದೀನನು ಅವನಿಗೆ ಕರೆಮಾಡಿದ. ಷಹಜಾದನು ತಂದೆಯನ್ನು ಭೇಟಿಯಾಗಲು ದಿಲ್ಲಿಯಿಂದ ಪ್ರಯಾಣ ಬೆಳೆಸಿದನು. ಆದರೆ ಅವನು ಕೀ.ಮೀ ಕೂಡ ತಲುಪಿರಲಿಲ್ಲ. ಶಾಹಾಬೊದ್ದೀನನು ಮೃತಪಟ್ಟನು. ಶಾಹಾಬುದ್ದೀನನ ಆಡಳಿತಾವಧಿಯು ೨೦ ವರುಷವಾಗಿತ್ತು.

■ ■

ಆದಿಲಶಾಹಿ ಅರಸು ಮನೆತನ ವಿಜಾಪುರದವರಾದ ನಮಗೆಲ್ಲ ಒಂದು ಹೆಮ್ಮೆ. ರಾಜಕೀಯ ಇತ್ಯಾದಿಗಳನ್ನು ಬಿಟ್ಟರೂ ಶಿಲ್ಪ-ಸಾಹಿತ್ಯಕ್ಷೇತ್ರಗಳಿಗೆ ಅದು ನೀಡಿದ ಕೊಡುಗೆ ಲೋಕಮಾನ್ಯವಾದುದು. ಈ ಕೊಡುಗೆಗಳಲ್ಲಿ ಶಿಲ್ಪದ ಬಗ್ಗೆ ಆಗಾಗ ಆಸಕ್ತಿ ವಹಿಸಿದ ನಾವು, ಸಾಹಿತ್ಯವನ್ನು ಅಲಕ್ಷಿಸುತ್ತ ಬಂದಿದ್ದೇವೆ. ಇದಕ್ಕೆ ಕಾರಣ, ಈ ಸಾಹಿತ್ಯ ದಖಣಿ ಉರ್ದು, ಪರ್ಶಿಯನ್‌ಗಳೆಂಬ ಅಪರಿಚಿತ ಭಾಷೆಗಳಲ್ಲಿರುವುದು ಮತ್ತು ಬಹಳಷ್ಟು ಕೃತಿಗಳು ಅಪ್ರಕಟಿತವಾಗಿರುವುದು. ಹೀಗಿದ್ದೂ ನಮ್ಮ ಸಾಂಸ್ಕೃತಿಕ ಆಸ್ತಿಯಾಗಿರುವ ಈ ಸಾಹಿತ್ಯದ ರಕ್ಷಣೆ, ಅನುವಾದ, ಪ್ರಸಾರ ನಮ್ಮ ಕರ್ತವ್ಯವಾಗಿದೆ.

ಇಂತಹ ಕಾರ್ಯಗಳನ್ನು ಪೂರೈಸುತ್ತ ಬಂದ ನಮ್ಮ 'ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ'ಯ ಮೂಲಕ ಈ ಕರ್ತವ್ಯವನ್ನು ಈಡೇರಿಸಲು ಯೋಚಿಸಿದ ಫಲ 'ಆದಿಲಶಾಹಿ ಸಾಹಿತ್ಯ ಪ್ರಕಟನ ಯೋಜನೆ'. ಈ ಕಾರ್ಯ ಭಾವಿಸಿದಷ್ಟು ಸುಲಭವಲ್ಲ. ಅಲ್ಲಲ್ಲಿ ಚದರಿ ಹೋಗಿರುವ ಪ್ರಕಟಿತ-ಅಪ್ರಕಟಿತ ಕೃತಿಗಳನ್ನು ಶೋಧಿಸುವ, ಸಂಗ್ರಹಿಸುವ, ಅನುವಾದಿಸುವ, ಪರಿಷ್ಕರಿಸಿ ಪ್ರಕಟಿಸುವ ಹಂತಗಳಲ್ಲಿ ವಿದ್ವಾಂಸರು ಶ್ರಮಿಸಬೇಕಾಗುತ್ತದೆ. ನಮ್ಮ ಸುದೈವಕ್ಕೆ ಸಮರ್ಥ ಯೋಜಕರಾದ ಡಾ.ಎಂ.ಎಂ.ಕಲಬುರ್ಗಿಯವರು, ಆದಿಲಶಾಹಿ ಅಭ್ಯಾಸಿಗಳಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿಯವರು ಈ ಯೋಜನೆಯ ಹೊಣೆಹೊತ್ತಿದ್ದಾರೆ. ಸಲಹಾಸಮಿತಿಯ ಸದಸ್ಯರು-ಅನುವಾದಕರು ಈ ಕಾರ್ಯದಲ್ಲಿ ಆಸ್ಥೆವಹಿಸಿದ್ದಾರೆ. ಇವರೆಲ್ಲರ ಸಹಯೋಗದಲ್ಲಿ ಕನ್ನಡಕ್ಕೆ ಹೊಸದೊಂದು ಆಕರ ಸಂಪತ್ತು ಹೊರಬರುತ್ತಲಿರುವುದು ಸಂತೋಷದ ಸಂಗತಿಯಾಗಿದೆ.

ಎಂ. ಬಿ. ಪಾಟೀಲ

ಅಧ್ಯಕ್ಷರು, ಬಿ.ಎಲ್.ಡಿ.ಇ ಸಂಸ್ಥೆ, ಬಿಜಾಪುರ

ಜಲಸಂಪನ್ಮೂಲ ಸಚಿವರು, ಕರ್ನಾಟಕ ಸರಕಾರ

ಮುದ್ರಣ : ಪ್ರಿಂಟ್ ಪಾಯಿಂಟ್, ಮೊ : 97390 67359